ಹೊಸಗನ್ನಡ ಸಾಹಿತ್ಯದ ಉದಯಕಾಲ

(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ)

ರಾ. ಯ. ಧಾರವಾಡಕರ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯೭೫

ವಿಷಯ ಪ್ರವೇಶ

ವಿಷಯ ಪ್ರವೇಶ

- ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗ ಮತ್ತು ಇಪ್ಪತ್ತನೆಯ ಶತಮಾನದ ಪ್ರಾರಂಭದ ಕಾಲವನ್ನು ಸಾಮಾನ್ಯವಾಗಿ ಅಜ್ಞಾತ ಕಾಲಖಂಡವೆಂದೂ, ಅನುಕರಣಯುಗ ವೆಂದೂ ಹೇಳಲಾಗುತ್ತದೆ. ಹಳಗನ್ನಡ ಸಾಹಿತ್ಯ ಚರಿತ್ರೆ ಸುಮಾರಾಗಿ ೧೮೯೦ ನೆಯ ಇಸವಿಗೆ ಬಂದು ನಿಲ್ಲುವುದುಂಟು. ಅನೇಕ ಕಾರಣಗಳ ಮೂಲಕವಾಗಿ ಈ ಕಾಲದ ಪರಿಚಯು ಕನ್ನಡ ಸಾರಸ್ವತ ಪ್ರಪಂಚಕ್ಕೆ ಆಗಲಿಲ್ಲ. ದಿವಂಗತ ಆರ್. ನರಸಿಂಹಾಚಾರ್ಯರು " ಕರ್ನಾಟಕ ಕವಿಚರಿತೆ "ಯ ಮಹಾಸಂಪುಟಗಳನ್ನು ಸಮರ್ಪಿಸಿದರೂ ಈ ಕಾಲದ ಬಗೆಗೆ ಹೀಗೆ ಹೇಳಿದರು :

  " ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಇನ್ನೂ ಅನೇಕರು ಗ್ರಂಥ ರಚನೆ ಯನ್ನು ಮಾಡಿದ್ದಾರೆ. ಆದರೆ ಇವರ ಚರಿತವನ್ನೆಲ್ಲ ಇದುವರೆಗೂ ಬರೆದಂತೆ ವಿವರವಾಗಿ ಬರೆಯಲು ಸಾಧ್ಯವಿಲ್ಲ........ ಸ್ವಲ್ಪ ಕಾಲಕ್ಕೆ ಹಿಂದೆ ಗತಿಸಿದವರ ಚರಿತ್ರೆಯನ್ನು ಲಂಬಿಸಿ ಬರೆವುದು ನಮ್ಮ ಉದ್ದೇಶವಲ್ಲವಾದುದರಿಂದ ಅಂಥವರ ವಿಷಯವನ್ನೂ ಗ್ರಂಥಗಳನ್ನೂ ನಮಗೆ ತಿಳಿದಮಟ್ಟಿಗೆ ಬಹಳ ಸಂಕ್ಷೇಪವಾಗಿ ತಿಳಿಸುತ್ತೇವೆ. "

  (ಕರ್ನಾಟಕ ಕವಿಚರಿತೆ : ಪು. ೨೧೭)

- ಆದರೆ ಇಂದು ಕಾಲ ಸಾಕಷ್ಟು ಉರುಳಿ ಹೋಗಿದೆ. ಇಂದಿನ ಕನ್ನಡದ ಉದಯಕ್ಕೆ ಕಾರಣ ರಾದ ಮಹನೀಯರು ಯಾರು ? ಕನ್ನಡವನ್ನು ಉದ್ಧರಿಸಿದ ಪುಣ್ಯಪುರುಷರು ಯಾರು ? ಅವರ ಜೀವನ ವೃತ್ತಾಂತವೇನು ? ಸುಖ–ದುಃಖಗಳೇನು ? ಅವರ ಕೃತಿಗಳು ಯಾವುವು ?– ಈಯೆಲ್ಲ ವಿಷಯಗಳ ಪರಿಶೀಲನೆ ಅಗತ್ಯವೆನಿಸಿತು. ಆರ್. ನರಸಿಂಹಾಚಾರ್ಯರು ಈ ಕವಿ ಪರಿಚಯವನ್ನು ಒಂದೊಂದು ವಾಕ್ಯದಲ್ಲಿ ಮುಗಿಸಿಬಿಟ್ಟರು : ವೆಂಕಟ ರಂಗೋ ಕಟ್ಟಿ ಈತನು ಬ್ರಾಹ್ಮಣನು; ಧಾರವಾಡದ ಶಿಕ್ಷಕ ಶಿಕ್ಷಣಾಲಯದಲ್ಲಿ ಅಧ್ಯಕ್ಷನಾಗಿದ್ದನು. ಶಿವರುದ್ರಪ್ಪ ಸೋಮಪ್ಪ ಕುಲಕರಣಿ ಈತನು ವೀರಶೈವನು; ಧಾರವಾಡ ಪ್ರಾಂತದವನು; ಕನ್ನಡ ಶಾಲಾ ಪ್ರಾಧ್ಯಾಪಕನಾಗಿದ್ದನು. ಶೇಷಗಿರಿರಾವ ಚುರಮರಿ ಈತನು ಬ್ರಾಹ್ಮಣಕವಿ; ಧಾರವಾಡ ಪ್ರಾಂತ ದವನು. ಧೋಂಡೋ ನರಸಿಂಹ ಮುಳಬಾಗಿಲು ಇವನು ಬ್ರಾಹ್ಮಣಕವಿ; ಧಾರವಾಡದ ಶಿಕ್ಷಕ ಶಿಕ್ಷಣಾಲಯದಲ್ಲಿ ಬಹುಕಾಲ ಉಪಾಧ್ಯಾಯನಾಗಿದ್ದನು; ಈತನ ಸ್ಥಳ ಕೋಲಾರದ ಜಿಲ್ಲಾ ಮುಳಬಾಗಿಲು. ಈ ಕವಿಗಳ ಜೀವನ ವೃತ್ತಾಂತದ ಬಗೆಗೆ ಕವಿಚರಿತೆಯಲ್ಲಿ ನಮಗೆ ದೊರಕುವ ವಿವರ ಇಷ್ಟೇ. ಈ ಪ್ರಬಂಧಭಾಗವನ್ನು ನೋಡಿದರೆ ಈ ಎಲ್ಲ ಲೇಖಕರ ಜೀವನದ ಬಗೆಗೆ ಎಷ್ಟರಮಟ್ಟಿನ ವಿವರಗಳು ದೊರಕುತ್ತವೆ ಎಂಬುದನ್ನು ಗಮನಿಸಬಹುದು.

- ಈ ಕಾಲದ ಲೇಖಕರ ಜೀವನವೃತ್ತಾಂತಗಳ ಬಗೆಗೆ ಐತಿಹ್ಯ, ಸಮಕಾಲೀನರ ಹೇಳಿಕೆ, ಅವರಿಟ್ಟ ದಿನಚರಿ, ಆ ಕಾಲದ ನಿಯತಕಾಲಿಕೆಗಳಲ್ಲಿ ಬಂದ ಉಲ್ಲೇಖ, ಇತರ ಲೇಖಕರು ಅವರ ಬಗೆಗೆ ಹೇಳಿದ ಅಂಶಗಳು ಮತ್ತು ಸ್ವಂತ ಕೃತಿಗಳಲ್ಲಿ ಅವರವರ ಬಗೆಗೆ ಬರುವ ಚಾರಿತ್ರಿಕಾಂಶಗಳು– ಇವೆಲ್ಲವುಗಳಲ್ಲಿ ದೊರಕುತ್ತವೆ. ಸ್ವಲ್ಪೇ ಕಾಲದಲ್ಲಿ ಇಂಥ ಎಷ್ಟೋ ಸಾಕ್ಷ್ಯಗಳು ನಷ್ಟವೂ ಆಗಹತ್ತಿವೆ. ಈ ವಿವರಗಳನ್ನು ಹೇಳುವ ಸಮಕಾಲೀನರೂ ಮಾಗಿಯ ಎಲೆ ಉದುರಿದ ಹಾಗೆ ಒಬ್ಬೊಬ್ಬರೇ ಹೋಗಹತ್ತಿದ್ದಾರೆ. ಆದುದರಿಂದ ಈ ಲೇಖಕರು ಬರೆದ ಕೃತಿಗಳಿಗೆ ಕೊಟ್ಟಷ್ಟೇ ಗಮನವನ್ನು ಅವರ ಚಾರಿತ್ರಿಕಾಂಶಗಳ ಬಗೆಗೂ ಪ್ರಸ್ತುತ ಪ್ರಬಂಧದಲ್ಲಿ ಕೊಡಲಾಗಿದೆ. ಈ ಪ್ರಬಂಧದ ಮೂಲಕವಾಗಿ ಇಂಥ ಹಿರಿಯರ ಜೀವನದ, ಸಾಹಸದ ಕಲ್ಪನೆಯನ್ನು ನಾವು ಮಾಡಿಕೊಳ್ಳಬಹುದಾಗಿದೆ. ಈ ವರೆಗೆ ಗೊತ್ತಿರದ ಅನೇಕ ಕವಿಗಳ ಬಗೆಗೂ, ಹಲವಾರು ಕವಿಗಳು ಬರೆದ ಈ ವರೆಗೆ ಗೊತ್ತಿರದ ಕೃತಿಗಳ ಬಗೆಗೂ ಇಲ್ಲಿ ಮೊದಲಬಾರಿಗೆ ಪರಿಚಯ ಮಾಡಿಕೊಡಲಾಗಿದೆ.

  ಈ ಕಾಲಕ್ಕೆ ಸಂಬಂಧಿಸಿರಬಹುದಾದರೂ ಸದ್ಯ ಜೀವಂತವಿರುವ ವ್ಯಕ್ತಿಗಳ ಬಗೆಗೆ ಇಲ್ಲಿ ವಿವೇಚನೆ ಮಾಡಿಲ್ಲ. ಅವರ ಸಾಹಿತ್ಯ ಇನ್ನೂ ನಿರ್ಮಾಣ ಹೊಂದುತ್ತಲಿದೆ.

- ಇದೂ ಅಲ್ಲದೆ, ಈ ಮಹನೀಯರೆಲ್ಲರ ಭಾವಚಿತ್ರಗಳನ್ನೂ ಅವರ ದಾಖಲೆಗಳನ್ನೂ ಸಂಗ್ರಹಿಸ ಲಿಕ್ಕೆ ಬಹು ವಿಧವಾಗಿ ಪ್ರಯತ್ನ ಮಾಡಲಾಗಿದೆ. ಇದರ ಮೇಲಿಂದ ತೂರಮರಿಯವರು ಬಾಣ ಕಾದಂಬರಿಯನ್ನು ಕನ್ನಡಿಸುವಲ್ಲಿ ಪಟ್ಟ ಪರಿಶ್ರಮದ ಕಲ್ಪನೆ ಬರುವಂತಿದೆ. ಅವರ ಮರಣಾನಂತರ ಅವರ ಹೆಂಡತಿಗೆ ಸಂದಾಯವಾದ ಪಗಾರದ ಹಣದ ಕಲ್ಪನೆ ಬರು ವಂತಿದೆ. ಈ ದಾಖಲೆಯ ಮೇಲೆ ಡೆಪ್ಯುಟಿ ಚನಬಸಪ್ಪ, ಶಾಂತವೀರ ಕಿತ್ತೂರ ಮತ್ತು ವೆಂಕಟ ರಂಗೋ ಕಟ್ಟಿಯವರ ಹಸ್ತಾಕ್ಷರಗಳಿದ್ದುದನ್ನೂ ಗಮನಿಸುತ್ತೇವೆ. ಪದ್ಯವಿವರಣೆಗಾಗಿ ಫ್ಲೀಟರು ಕಿತ್ತೂರ ಅವರಿಗೆ ಬರೆದ ಪತ್ರ ದೊರಕುತ್ತದೆ. ತಾಳಿಕೋಟೆಯ ಪದ್ಮನಾಭ ಮಹಾರಾಜರು 'ನಿಗಮಸಾರಾಮೃತ', 'ದಾಸಬೋಧೆ'– ಎಂಬ ಗ್ರಂಥರಚನೆ ಮಾಡಿದ ಬಗೆಗೆ ಆರ್. ನರಸಿಂಹಾಚಾರ್ಯರು ಹೇಳುತ್ತಾರೆ. ಪದ್ಮನಾಭರ ಭಾವಚಿತ್ರವನ್ನೂ ಇಲ್ಲಿ ದೊರಕಿಸಿಕೊಡಲಾಗಿದೆ.

- ಈ ಪ್ರಬಂಧ ಭಾಗದಲ್ಲಿ ಹಲವಾರು ಮಹತ್ವದ ಲೇಖಕರ ಕೃತಿಗಳ ಮೌಲ್ಯಮಾಪನವನ್ನೂ ಮಾಡಲಾಗಿದೆ. ಉಳಿದವರ ಬಗೆಗೂ ಈ ಪ್ರಯತ್ನ ಆಗುವ ಆವಶ್ಯಕತೆಯಿದೆ. ಇಂಥ ಮೌಲ್ಯಮಾಪನದಲ್ಲಿ ಕೆರೂರ ವಾಸುದೇವಾಚಾರ್ಯರಂಥವರ ಬಗೆಗೆ ಪ್ರಚಲಿತವಾಗಿದ್ದ ಕಲ್ಪನೆ ಯಲ್ಲಿ ವ್ಯತ್ಯಾಸವಾಗುವುದನ್ನೂ ಕಾಣುತ್ತೇವೆ.

- ಹಲವು ಲೇಖಕರ ಕೃತಿಭಾಗಗಳನ್ನೂ ಕವನಗಳನ್ನೂ ಸ್ವಲ್ಪ ವಿವರಪೂರ್ಣವಾಗಿ ಇಲ್ಲಿ ಕೊಡ ಲಾಗಿದೆ. ಇಂಥ ಸಾಹಿತ್ಯಭಾಗಗಳು ತೀರ ತ್ರುಟಿತವಾದ ಮೂಲಗಳಲ್ಲಿ ದೊರಕುವುದ ರಿಂದಲೂ ಅವುಗಳು ಕೂಡ ಶೀಘ್ರವೇ ದುರ್ಮಿಳವಾಗಬಹುದಾದುದರಿಂದಲೂ ಅವನ್ನು ಸ್ವಲ್ಪ ಲಂಬಿಸಿ ಕೊಡಲಾಗಿದೆ.

- ಈ ಕಾಲವನ್ನು ಅನುಕರಣಯುಗವೆಂದು ಕರೆಯಲಾಗುತ್ತಿದೆಯೆಂದು ಹೇಳಿತಷ್ಟೇ. ಈ ಕಾಲದ ಪ್ರಾರಂಭದ ಬರೆಹಗಾರರಾದ 'ಶಾಂತಕವಿ', 'ಕಾವ್ಯಾನಂದ ಪುಣೇಕರ', ಕೆರೂರ

ವಾಸುದೇವಾಚಾರ್ಯ ಮೊದಲಾದವರ ಕೃತಿಗಳನ್ನು ನೋಡಿದರೆ, ಈ ಹಲವರು ಸ್ವೋಪಜ್ಞ ವಾದ ಕೃತಿರಚನೆ ಮಾಡಿರುವುದನ್ನೂ ಕಾಣುತ್ತೇವೆ.

- ಒಂದು ಕಾಲಖಂಡದ ಸಾಹಿತ್ಯರಚನೆಯ ನಿರೂಪಣೆಯನ್ನು ಮಾಡುವಲ್ಲಿ ಸ್ವಾಭಾವಿಕವಾಗಿ ಪ್ರಮುಖರಾದ ಲೇಖಕರ ಜತೆಗೆ ಅ-ಪ್ರಮುಖರಾದವರ ಬಗೆಗೂ, ಮಹತ್ವದ ಗ್ರಂಥಗಳ ಕೂಡ, ಹಲವು ಮಹತ್ವವಲ್ಲದ ಗ್ರಂಥಗಳ ಬಗೆಗೂ ಉಲ್ಲೇಖವು ಅನಿವಾರ್ಯ.

- ಈಯೆಲ್ಲ ಲೇಖಕರ ಪರಿಚಯವಾದಾಗ ಹೊಸಗನ್ನಡ ಉದಯಕಾಲಕ್ಕೆ ಅವರು ಸಲ್ಲಿಸಿದ ಅಮೋಘವಾದ ಸೇವೆಯು ಕಲ್ಪನೆ ಬಾರದಿರದು. ಅಗೆದಷ್ಟೂ ಒರತೆಯ ನೀರು ಪುಟಿದು ಬರುವ ಹಾಗೆ, ಇವರ ಬಗೆಗೆ ತಿಳಿದುಕೊಂಡಷ್ಟೂ ನಮ್ಮ ಆದರ ಹೆಚ್ಚುವಂತಿದೆ. ಇದನ್ನು ಗಮನಿಸಿದಾಗ ಸನ್ ೧೮೭೪ ರಲ್ಲಿ ರೆವರೆಂಡ್ ಕಿಟೆಲ್‌ರವರು ಹೇಳಿದ ಮಾತುಗಳು ಎಷ್ಟು ಅರ್ಥವತ್ತಾಗಿದ್ದುವೆಂಬುದನ್ನು ನಾವು ಕಂಡುಕೊಳ್ಳುತ್ತೇವೆ :

"I have given what I happened to have at hand. May the present volume form a small contribution towards a History of Canarese Literature!...... My own impression is that the more Canarese vernacular literature becomes known, the more evident it becomes that it will fully bear comparison with any other vernacular literature of the South."

(ನಾಗವರ್ಮ ಛಂದಸ್ಸು : ಪು. : 1874, LXXXI)

ಕೊನೆಯದಾಗಿ,

ಅಯುಕ್ತಂ ಯದಿಹ ಪ್ರೋಕ್ತಂ
ಪ್ರಮಾದೇನ ಭ್ರಮೇಣ ವಾ
ವಾಚಾ ಮಯಾ ದಯಾವನ್ತಃ
ಸಂತಃ ಸಂಶೋಧಯನ್ತು ತತ್ ॥

-ಎಂದು ಮಾತ್ರ ಹೇಳಿ ಮುಗಿಸುತ್ತೇನೆ.

—

ಹೊಸಗನ್ನಡ ಉದಯಕಾಲದ ಮೊದಲು

೧. ಹೊಸಗನ್ನಡ ಉದಯಕಾಲದ ಮೊದಲು

ಅನೂನವಾಗಿ ಹರಿದು ಬಂದ ಕನ್ನಡ ಸಾಹಿತ್ಯ ಗಾತ್ರದಲ್ಲಿ ವಿಶಾಲವಿದ್ದಂತೆ, ಸತ್ವದಲ್ಲಿ ಗಭೀರವೂ ಹಿತಾವಹವೂ ಆಗಿದೆ. ಎಲ್ಲದಕ್ಕೂ ಹೆಚ್ಚಾಗಿ, ಕನ್ನಡದ ಪ್ರತಿಭೆ, ಬೀಸಿದ ಹೊಸ ಗಾಳಿಗೆ ಪರಿವರ್ತನ ಹೊಂದುವ ಮಣಿಬಲ್ಲತನವನ್ನು ಪಡೆದಿದೆ. ಕನ್ನಡ ಸಾಹಿತ್ಯ ಕಬ್ಬಿಣದ ಕವಚವಲ್ಲ; ಕೇವಲ ಒಂದೇ ರೀತಿಯಲ್ಲಿ ಮಾತ್ರ ಸಾಗುವಂತಹುದಲ್ಲ. ಹೊಸ ಹೊಸ ಸಾಮಾಜಿಕ, ರಾಜಕೀಯ ಕಲ್ಪನೆಗಳು ಮೂಡಿ ಬಂದಂತೆ, ಕನ್ನಡದ ಕವಿವಾಣಿ ಅದಕ್ಕೆ ಒಗೊಟ್ಟಿದೆ.

ಕನ್ನಡದ ಸಾಹಿತ್ಯಶಕ್ತಿ ಮಣಿಬಲ್ಲವಾದುದು:

ಪಂಪನ ಕಾಲದ ಸಾಹಿತ್ಯ ಓಜಸ್ಸು, ಗಾಂಭೀರ್ಯ, ಕ್ಷಾತ್ರವೃತ್ತಿಗಳನ್ನೊಳಗೊಂಡು, ಸಂಸ್ಕೃತ ಪ್ರಪೂರ್ಣವಾಗಿದ್ದರೆ, ಹನ್ನೆರಡನೆಯ ಶತಮಾನದ ವೀರಶೈವಕ್ರಾಂತಿ, ಹೊಸ ಸಾಮಾಜಿಕ, ನೈತಿಕ ಮೌಲ್ಯಗಳನ್ನು ಜನರ ಕಣ್ಣೆದುರಿಗಿಟ್ಟಿತು. ವೀರಶೈವಕ್ರಾಂತಿ, ಸಾಮಾಜಿಕ ಐಕ್ಯತೆಯನ್ನೂ, ಸಮಾನತ್ವವನ್ನೂ ಸ್ಥಾಪಿಸಿತು. ಈ ಕ್ರಾಂತಿಯ ಮೂಲಕ ಬಸವಣ್ಣ, ಅಲ್ಲಮಪ್ರಭು ಮೊದಲಾದವರು – ಪರಂಪರಾಗತವಾಗಿ ಸಮಾಜದ ಎತ್ತರವಾದ ಸ್ಥಾನದಲ್ಲಿದ್ದವರು – ಕಟ್ಟಿಗೆಯ ಕಾಯಕದವರ ಕೂಡ, ಅಕ್ಕಿ ಆಯುವ ಕಾಯಕದವರ ಕೂಡ, ಡೋಹರರ ಕೂಡ, ಅಂಬಿಗರ ಕೂಡ ಹೆಗಲಿಗೆ ಹೆಗಲು ಹಚ್ಚಿ ಕೆಲಸ ಮಾಡುವ ಔದಾರ್ಯವನ್ನು ತೋರಿದರು. ಈ ಸಾಮಾಜಿಕ ವಿಪ್ಲವದ ಪರಿಣಾಮ ಸಾಹಿತ್ಯದ ಮೇಲೆಯೂ ಆಗದೆ ಹೋಗಲಿಲ್ಲ. ಜ್ಞಾನದ ಮಹಾಮನೆಗೆ ಹೊಸದಾಗಿ ಸೇರಿದ ಜನತೆಗೆ, ಅವರಿಗೆ ತಿಳಿಯುವ ಬಂಧದಲ್ಲಿ, ತಿಳಿಯುವ ರೀತಿಯಲ್ಲಿ, ತಿಳಿಯುವ ಭಾಷೆಯಲ್ಲಿಯೇ ಕವಿಗಳು ಹೇಳಬೇಕಾಯಿತು. ತತ್ಪರಿಣಾಮವಾಗಿ ಸಾಹಿತ್ಯ ಅರಮನೆಯನ್ನು ಬಿಟ್ಟು, ಗುರುಮನೆಯನ್ನೂ, ಸಾಮಾನ್ಯ ಜನತೆಯ ಮನೆಯನ್ನೂ ಸೇರಬೇಕಾಯಿತು. ಜನ ತಮ್ಮ ತಮ್ಮಲ್ಲಿಯೇ ತತ್ವಜ್ಞಾನದ ಎತ್ತರದ ಮಾತುಗಳನ್ನು ಚರ್ಚಿಸಹತ್ತಿದರು. ಅದು ಹಲವೇ ವರ್ಗದ ಜನರ ಸೊತ್ತಾಗಿ ಈ ಮುಂದು ಉಳಿಯಲಿಲ್ಲ. ಷೇಕ್ಸಪಿಯರ ಮಹಾಕವಿ ಇಂಗ್ಲಂಡದ ಉತ್ಕ್ರಾಂತಿಯ ಬಗೆಗೆ ಹೇಳಿದ ಹಾಗೆ: 'Thought was free'. ಈ ವರೆಗೆ ಮಡಿವಂತರ ಮನೆಯಲ್ಲಿ ಮಾತ್ರ ಬಂದಿಯಾಗಿದ್ದ ತತ್ವವಿಚಾರ ಎಲ್ಲರ ನಾಲಗೆಯ ನಾಟ್ಯವೇದೀಕಲ್ಪದ ಮೇಲೆ ನರ್ತಿಸುವಂತಾಯಿತು. ಆದ್ದರಿಂದ, ಬಸವಣ್ಣನವರಂಥ ಹಿರಿಯರ ಪ್ರಭಾವದ ಮೂಲಕ, ಪದ್ಯಕ್ಕಿಂತ ಹೆಚ್ಚಾಗಿ ಗದ್ಯರೂಪ ಪ್ರಾಧಾನ್ಯವನ್ನು ಪಡೆಯಿತು. ಜನತೆಯ ತೀವ್ರವಾದ ವೈಯಕ್ತಿಕ ಆರ್ತಭಾವ ಸಾಹಿತ್ಯದಲ್ಲಿ ಅಭಿವ್ಯಕ್ತಿಯನ್ನು ಪಡೆಯಿತು. ಈ ವರೆಗೆ

ಉಪಮಾನ ವಸ್ತುಗಳಾಗಿ ಉಪಯುಕ್ತವಾಗುತ್ತಿದ್ದ ಕಮಲ, ಕೋಗಿಲೆ, ಇಂದ್ರ–ಚಂದ್ರಾದಿಗಳು, ಓತಿಕಾಟ, (ಓತಿ ಬೇಲಿವರಿದಂತಾಯಿತ್ತೆನ್ನ ಭಕ್ತಿ), ಇಕ್ಕುಳ (ಇಕ್ಕುಳ ಕೈ ಮುಗಿದಂತೆ), ಗೋಸುಂಬೆ, ಮಂಗ, ಹುಲ್ಲುಗಿಚ್ಚು – ಮೊದಲಾದವುಗಳಿಗೆ ಸ್ಥಾನ ಮಾಡಿಕೊಡಬೇಕಾಯಿತು. ಸಾರಾಂಶ, ಸಾಹಿತ್ಯವಸ್ತುವಿನಲ್ಲಿ ವಸ್ತುನಿಷ್ಠವಾದ ಪ್ರತಿಪಾದನೆ, ವ್ಯಕ್ತಿನಿಷ್ಠ ಅಭಿವ್ಯಕ್ತಿಗೂ, ಭಾಷೆಯಲ್ಲಿ ಪಾಂಡಿತ್ಯಪೂರ್ಣವಾದ ಸಂಸ್ಕೃತ, ದಿನನಿತ್ಯದ ಮಾತುಗಾರಿಕೆಗೂ, ರೀತಿಯಲ್ಲಿ ಹಳೆಯ ಕಮಲ–ಕೋಕಿಲೆಗಳ ಉಪಮಾದಿಗಳು ನಿತ್ಯಜೀವನದಲ್ಲಿ ಕಾಣುವ ವಸ್ತು ವಿಷಯಗಳ ಹೋಲಿಕೆಗೂ ಸ್ಥಳ ಒದಗಿಸಿಕೊಟ್ಟವು. ಇದು ಕನ್ನಡದ ಸತ್ವ. ಕನ್ನಡ ಸಾಹಿತ್ಯ ಸೂರ್ಯಪಾನದ ಹೂ ಇದ್ದ ಹಾಗೆ. ಜೀವನ ತೇಜಸ್ಸನ್ನು ಕೊಡುವ ಸೂರ್ಯನ ರಶ್ಮಿ ಬಿದ್ದಕಡೆಗೆಲ್ಲ ಅದು ತನ್ನ ಮುಖವನ್ನು ತಿರುವಿದೆ.

ಬಸವಣ್ಣನವರ ಈ ಕಾಲ ಸಂದ ಒಂದು ಶತಮಾನದೊಳಗೇ ಹರಿಹರನಂಥ ವೀರಕವಿ, ಭಕ್ತಕವಿ, ತನ್ನ ಕ್ರಾಂತಿಯನ್ನು ಘಂಟಾಘೋಷವಾಗಿ ಸಾರಿದನು. ಕಾವ್ಯದ ವಸ್ತು, ಬಂಧ, ವರ್ಣನೆಗಳು – ಇವುಗಳಲ್ಲೆಲ್ಲ ಅವನು ಪ್ರಯತ್ನಪುರಸ್ಸರವಾದ ಪ್ರತಿಭಟನೆಯನ್ನು ಸಾರಿದನು. ಇಂಗ್ಲಿಷ್ ಪ್ರಬಂಧ ಸಾಹಿತ್ಯದ ಬಗೆಗೆ ಒಂದು ಮಾತು ಹೇಳುವುದುಂಟು : 'It is not what you write, but how you write'. ಆದರೆ, ಕನ್ನಡದಲ್ಲಿ ಹಾಗಾಗಿರಲಿಲ್ಲ. ಬರೆಯುವ ರೀತಿಯಕಿಂತ ಬರವಣಿಗೆಯ ವಸ್ತುವಿಗೆ ಅನೇಕ ಸಲ ಪ್ರಾಧಾನ್ಯ ದೊರಕುತ್ತಿತ್ತು. ನಾಗಚಂದ್ರನಂತೂ :

ನಾಯಕನನ್ಯನಾಗೆ ಕೃತಿ ವಿಶ್ರುತಮಾಗದುದಾತ್ತ ರಾಘವಂ
ನಾಯಕನಾಗೆ ಕೃತಿವಿಶ್ರುತಮಾಗುವುದು ವಿಸ್ಮಯಕಾರಿಯಲ್ತು ಕಾ
ಲಾಯಸದಿಂ ವಿನಿರ್ಮಿಸಿದ ಕಂಠಿಕೆ ಕಾಂಚನಮಾಲೆಯಂತೆ ಉಪಾ
ದೇಯಮಕ್ಕುಮೆ ವಿಷಯಮ್ ಒಪ್ಪಿದೊಡೆ ಆವುದುಂ ಒಪ್ಪಲಾರ್ಕುಮೇ ?

– ಎಂದು ಹೇಳಿದನು. ವಿಷಯ ಒಪ್ಪಿದರೆ, ಯಾವುದೂ ಒಪ್ಪಬಹುದು. ಆದರೆ, ಹರಿಹರ ಈ ವರೆಗೆ ಕಾವ್ಯವಸ್ತುವಾಗಿ ಮಕ್ತೆಯಾಗಿದ್ದ ವಿಷಯಗಳಾದ ರಾಮಾಯಣ, ಮಹಾಭಾರತಗಳನ್ನು ಖಂಡಿಸಿ, ಹೊಸ ವಿಷಯಗಳ ಬಗ್ಗೆ, ಶಿವನ ಲೀಲೆಗಳ ಬಗ್ಗೆ, ಶಿವಶರಣರ ಜೀವನದ ಬಗ್ಗೆ ಗ್ರಂಥಗಳನ್ನು ರಚಿಸಿದನು :

ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆಯಕ್ಕಟಾ
ತನತನಗಿಂದ್ರಚಂದ್ರ ರವಿಕರ್ಣದಧೀಚಿ ಬಲೀಂದ್ರನೆಂದು ಮೇಣ್
ಅನವರತಂ ಪೊಗಟ್ದು ಕೆಡಬೇಡೆಲೆ ಮಾನವ ನೀನಹರ್ನಿಶಂ
ನೆನೆ ಪೊಗಟರ್ಚಿಸೆಮ್ಮ ಕಡು ಸೊಂಪಿನ ಹಂಪೆಯಾಳ್ದನಂ ॥

ಪೊಗಟಿಂ ಮಿಕ್ಕಿನ ಚಕ್ರಪಾಣಿ ಸರಸೀಜೋದ್ಭೂತ ಸಂಕ್ರಂದನಾ
ದಿಗಳಂ ತಾನೆನೆ ಮತ್ತೆ ಕೀಟಕರ ಮಾತಂತಿರ್ಕೆ ಮತ್ತಾವನಂ
ಬಗೆದಾರಂ ಬಿಡದಾ ಹರಂಗೆ ಶಶಿಭೂಷಂಗೀಶ್ವರಂಗೆಯ್ದೆ ನಾ–
ಲಗೆಯಂ ಮಾಜಿನೆನೊಲ್ದು ಹಂಪೆಯ ವಿರೂಪಾಕ್ಷಂಗದೇನೆಂದಪೆಂ ॥

(– ಪಂಪಾಶತಕ ಪದ್ಯ ೮೧–೮೨)

ಬಂಧದಲ್ಲಿಯೂ ಹರಿಹರನು ಈ ವರೆಗೆ ರೂಢವಾಗಿದ್ದ ಖ್ಯಾತ ವೃತ್ತಗಳ ಬದಲು, ರಘಟಾ ಬಂಧಕ್ಕೆ ಪ್ರಾಧಾನ್ಯವನ್ನು ಕೊಟ್ಟನು. ಕನ್ನಡ ವರ್ಣಮಾಲೆಯಲ್ಲಿ ಉಳಿದು ಬಂದ ಱಟ ಕುಳ ಗಳನ್ನು ತನ್ನ ಪ್ರಾಸದಲ್ಲಿ ಸೇರಿಸದೆ ಹೋದನು.

ನೋಡುವೊಡೊಂದಕ್ಕರಮದು
ಮಾಡುವೊಡುಚ್ಚರಣೆಗರಿದು ಮೂಱುಂ ತೆಱನಂ
ಕೂಡೆ ಕವಿತತಿ ವಿಚಾರಿಸ
ಬೇಡದಱಿಂ ಱಳಕುಳಕ್ಷಳಂಗಳನಿದಱೊಳ್ ॥

ಹರಿಹರನ ಕಾಲವಾದ ಮೇಲೆ ಕುಮಾರವ್ಯಾಸಾದಿಗಳು ಕಾವ್ಯದ ಗೇಯತೆಗೆ ಪ್ರಾಧಾನ್ಯವನ್ನು ಕೊಟ್ಟರೆ, ಸರ್ವಜ್ಞಮೂರ್ತಿ ವಾಮನಾವತಾರಿ ವಿಷ್ಣುವು ಸ್ವರ್ಗಮರ್ತ್ಯ ಪಾತಾಳಗಳನ್ನು ಮೆಟ್ಟಿ ನಿಂತ ಹಾಗೆ, ತನ್ನ ಚಿಕ್ಕ ತ್ರಿಪದಿಗಳ ಮೂಲಕ ಇಡೀ ಸಮಾಜದ ಲೋಪದೋಷಗಳನ್ನು ಎತ್ತಿ ತೋರಿದನು. ಸರ್ವಜ್ಞನ ಮೂಲಕವಾಗಿ ನಿಶಿತವಾದ ಸಾಮಾಜಿಕ ವಿಮರ್ಶೆ ಸಾಹಿತ್ಯದಲ್ಲಿ ಮೂಡಿ ಬರುವಂತಾಯಿತು. ಗುಣಿಗೋದು ಗುಟುಕು ನೀರು ಕುಡಿದು, ತುಂಡುಗಂಬಳಿ ಹೊದೆದು, ಹಿಂಡನಗಲಿದ ಗಜದಂತೆ ನಾಡಿನ ತುಂಬೆಲ್ಲ ಸುತ್ತಾಡಿದ ಈ ಕೋಲ್ಮಿಂಚು ಇಡೀ ಸಮಾಜವನ್ನೇ ಹೊಡೆದೆಬ್ಬಿಸಿತು.

ಅನಂತರ ಬಂದ ಮುದ್ದಣನೂ ಸಹ ಸಾಹಿತ್ಯ ರಚನೆಯಲ್ಲಿ ಅನೇಕ ಬದಲಾವಣೆಗಳನ್ನು ಮಾಡಿದನು. ಕನ್ನಡದ ಪ್ರಭಾತ ಸಮಯದಲ್ಲಿ ಎಕ್ಕೆಕ್ಕಿ ಕೂಗಿದ ಹುಂಜ ಅವನು. ಈ ಬಗ್ಗೆ ಕನ್ನಡದ ವರಕವಿಗಳಾದ ಅಂಬಿಕಾತನಯದತ್ತರು ಹೇಳಿದ ಮಾತುಗಳು ಮನನೀಯವಾಗಿವೆ: "ಕನ್ನಡ ಸಾಹಿತ್ಯವನ್ನು ಓದುತ್ತಿರುವಾಗ 'ಹಾಡಿದ್ದೇ ಹಾಡು' ಎಂದು ಮನಸು ಬೇಸಗೊಂಡ ಹೊತ್ತಿನಲ್ಲಿ, ಹುರುಳುಳ್ಳ ಮಾತಿನ ರಾಮಾಶ್ವಮೇಧವನ್ನೋದಿ ಮನಸು ಸೈಪುಗೊಂಡಿತು. 'ನಿರ್ಮಲ ಪೆರ್ಮೆ' ಯನ್ನು ಬಯಸಿದ ಮುದ್ದಣನಿಗೆ ಈ ಮೆಚ್ಚಿನ ಮುಡುಪು ಮುಟ್ಟಲಿ." ಮುದ್ದಣನು ಕನ್ನಡಕ್ಕೆ ಗೈದ ಸೇವೆಯನ್ನು ಅಂಬಿಕಾತನಯದತ್ತರು ಕಾವ್ಯಮಯವಾಗಿ ಹೀಗೆ ವರ್ಣಿಸಿದ್ದಾರೆ:

ಸಂಜೆ ಸೇರಿತು ಬಂದು ಕನ್ನಡದ ನಾಡಿನೊಳು
ಮಂಜುಮುಸುಕಿದ ಮುಗಿಲು ಕತ್ತಲೆಯಗೂಡಿಸಿತೊ?
ನಂಜೇರಿ ನಿದ್ದೆಗೈದಿತೋ? ಸತ್ತಿತೋ ಜೀವ? ಮಿಡುಗಿಲ್ಲದಾಯಿತಾಗಲೇ
ಮುಂಜಾವಿನಮಲ ತಂಬೆಲರೊಡನೆ ಮುದ್ದಣನ
ಹುಂಜವೆಕ್ಕೆಕ್ಕಿ ಕೂಗಿದ ಮೇಲೆ ಆ ದನಿಯ
ಸಂಜೀವನೆಬ್ಬಿಸಿತು ಸಾಸಿಗರ ಹಿಂಜರಿಯದಂಥ ಚೈತನ್ಯವನ್ನು ॥೧॥

ಬಿರಸು ಮಾತುಗಳಿಂದ ಇಂಪು ಮಾತಿನ ತಂಪು
ಮರೆಸಿ, ಮನಸಿನ ಸೊಗಸು ಕಳೆದು – ಹಿಂಗಿಸಿ – ಹೀರಿ
ಕೊರತೆಯಿಲ್ಲದ ಕನ್ನಡವನೊಡಕು ನುಡಿಗಳಿಂದ ಕೆಟ್ಟಕಟ್ಟಡಕ ಮಾಡೆ
ಹರಿಸುತ್ತ ಕಲ್ಲಾದ ಕನ್ನಡವ, ಜೀವಕಳೆ
ಬರಿಸುತ್ತ ಮಾತಿನೊಳು ಬಂದೆಯಾ ಮುದ್ದಣನ
ಸರಸತಿಯೆ, ಸತಿಯೆ ಸುರಿಸುತ ಸರಸನುಡಿಗಳನು ನಿನ್ನ ರಸಗಂಗೆಯೊಡನೇ ॥೨॥

ಆದ್ಯಋಷಿಗಳು ಸೋಮರಸಪಾನದಿಂದಮರ
ವಾದ್ಯಗಳ ಸಂಗೀತಮಾಂಕರಿಸಿ ಸಾಮಗಳ
ಸಾಧ್ಯಮಾಡಿದ ಹಾಗೆ, ನೀನಾಗ್ಯೆ ಹೊರಟೆಯೋ ಝೇಂಕರಿಸಿ ಕಾವ್ಯಭ್ರಮರಾ
ಹೃದ್ಯಗದ್ಯದ ಮದ್ಯ ಕುಡಿದು

ಇನ್ನೊಬ್ಬ ಕವಿ ಮುದ್ದಣನ ರಾಮಾಶ್ವಮೇಧದ ಬಗೆಗೆ ಹೀಗೆ ಹೇಳಿದ್ದಾರೆ. ಮುದ್ದಣನ ರಾಮಾಶ್ವಮೇಧವೆಂದರೆ :

ನಿನ್ನ ಹಾಗೂ ನಿನ್ನ ಧರ್ಮಪತ್ನಿಯ ವಾದಸಂವಾದಗಳ ಗೋದಾ
ಚಾಲಾಕಿ ನಾಲಗೆಯ ಪಟ್ಟುಗಳು
ಸವಾಲೆತ್ತಿ ಸೋಲಿಸಲು ಹಾಸ್ಯದಲಿ ಇಬ್ಬರೂ ಬಡಿದ ತೊಡೆ ತಟ್ಟುಗಳು,
ತಿಳಿವ್ಯಂಗದಾಳದಲಿ ತತ್ತ್ವಗಳ ಹುಟ್ಟುಗಳು, ಏನೇನೋ ಗುಟ್ಟುಗಳು.

– ಅಲ್ಲದೆ ಸ್ವತಃ ಮುದ್ದಣನ ಬಗೆಗೆ ಕವಿಗಳು ಪಡುವ ಅಭಿಪ್ರಾಯವು ಹೀಗೆ :

ಸಪ್ತಾಕ್ಷರೀ ಮಂತ್ರ ಜಪಿಸುತ್ತಲೇ
ಕೊನೆವರೆಗು ನೆಮ್ಮದಿಗೆ ತಪಿಸುತ್ತಲೇ ನಡೆದಾತ –
ಗ್ರಾಸಕ್ಕೆ ಬದಲಾಗಿ ಹಾಸ
ಸಿರಿವಂತಿಕೆಯ ಬದಲು ರಸಿಕತೆಯ ಪಡೆದಾತ....

ನೀನಿಲ್ಲವೀಗ ದೇಹವ ಹೊತ್ತು,
ಬಂದನೇಪಥ್ಯಕ್ಕೆ ಸಂದು ಆಗಿದೆ ಬಹಳ ಹೊತ್ತು
ತಮವನೋಡಿಸಲೆಂದು ಹಚ್ಚಿದ ಕಂದೀಲು
ಉರಿಯುತಿದೆ ಹಗಲಲ್ಲು

ನೀ ನೆಟ್ಟು ಫಲವುಣವೆ ನಡೆದ ಮರಮರದಲ್ಲಿ ನೂರು ಸಿಹಿ ಎಳನೀರು
ದಾರಿಹೋಕರ ತೃಪ್ತಿ, ತಣ್ಣೆಳಲ ಸೂರು
ಕೇಳು, ಒಳಗೊಳಗೆ ಸಕ್ಕು,
ಕೊನೆಯ ವಾಕ್ಕು :

ಕಪ್ಪೆಗೆ ಹೊಂಡವೇ ಬ್ರಹ್ಮಾಂಡ
ಅರಬ್ಬೀ ಸಮುದ್ರ ಬಯಸುವುದು ತಿಮಿಂಗಿಲ, ಷಾರ್ಕು
ಹೆಂಬೇಡಿಯಲ್ಲ, ಬಹದ್ದೂರ್ ಗಂಡ,
ಅಮರತೆ ನಿನ್ನ ಟ್ರೇಡ್ ಮಾರ್ಕು.[೧]

ಮುದ್ದಣನ ಈ ಹೊಸ ದೃಷ್ಟಿಯನ್ನು ಅವನ 'ಶ್ರೀರಾಮಾಶ್ವಮೇಧ'ದಲ್ಲಿ ಸುಸ್ಪಷ್ಟವಾಗಿ ಕಾಣುತ್ತೇವೆ.

---

೧ ಸುಮುಹೂರ್ತ – ೧೯೬೭, ಪು. ೬

ಮುದ್ದಣನ ವರೆಗೆ ಗದ್ಯಕ್ಕಿಂತ ಪದ್ಯಕ್ಕೇ ಹೆಚ್ಚಿನ ಪ್ರಾಧಾನ್ಯ ಇದ್ದಿತು. ನೃಪತುಂಗನಿಂದ ಮೊದಲುಗೊಂಡು "ಪದ್ಯಂ ಸಮಸ್ತ ಜನತಾ ಹೃದ್ಯಂ...." ಆಗಿದ್ದಿತು. "ಚಂಪುವಿನ ಶ್ರೀಮದ್ಗಾಂಭೀರ್ಯದಲ್ಲಿ ತಲೆಬಾಗಿ ನಿಂತ ಗದ್ಯವು ಪ್ರೌಢ ಆಚಾರ್ಯರ 'ಸಂಸ್ಕೃತ' ಮನೆಯ ಬಾಗಿಲ ಬಳಿ ಲೌಕಿಕ ನಿಂತ ಹಾಗೆ" ಆಗಿದ್ದಿತು.[೧] ಶ್ರೀಮಂತರ ಮನೆಯೆದುರು ಬಂದು ನಿಂತ ಬಡ ಜ್ಞಾತಿಗಳ ಹಾಗೆ. ಅದಕ್ಕಾಗಿ, ಮುದ್ದಣ ಪ್ರಥಮತಃ ಈ ಗದ್ಯದ ಸಾರ್ವಭೌಮತ್ವವನ್ನು ಸಾರಿದನು.

> "ಆವ ದಾಟಿಯೊಳ್ ಪೇಳ್ವೆಂ ?.... ಪದ್ಯದೊಳ್
> ಪೇಳ್ವೆನೊ ? ಗದ್ಯದೊಳ್ ಪೇಳ್ವೆನೋ ?"
>
> "ಪದ್ಯಂ ವಧ್ಯಂ; ಗದ್ಯಂ ಹೃದ್ಯಂ; ಹೃದ್ಯಮಪ್ಪ
> ಗದ್ಯದೊಳ್ ಪೇಳ್ವುದು."

– ಪದ್ಯವು ವಧ್ಯವಾಗಿರಲಿ, ಬಿಡಲಿ; ಗದ್ಯ ಮಾತ್ರ ಮುದ್ದಣನ ಮೂಲಕ ಹೃದ್ಯವಾಯಿತು.

ಎರಡನೆಯದಾಗಿ, ಮುದ್ದಣನ ಕಾಲದವರೆಗೂ ಸಾಹಿತ್ಯ ದೇವರ ಗುಡಿಯೇ ಆಗಿತ್ತು. ಎಂಥ ಪುಂಡಪೋಕರ ವರ್ಣನೆ ಮಾಡಿದರೂ, ಅದು ಭಗವದಾರಾಧನೆ ಎಂಬ ಕಲ್ಪನೆಯೇ ಇದ್ದಿತು. ಚೌಂಡರಸ ಭಾಷಾಂತರಿಸಿದ್ದು ದಂಡಿ ಬರೆದ ಸಾಮಾನ್ಯವಾದ ದಶಕುಮಾರರ ಚರಿತೆಯನ್ನು. ಅವರೇನೂ ಅಂತಹ ನೀತಿವಂತರಲ್ಲ. ಆದರೂ ಅಂತಹ ನಾಸ್ತಿಕರಿಗೂ ಗಂಧಾಕ್ಷತೆಗಳನ್ನು ಹಚ್ಚುವ ಕೆಲಸವನ್ನು ಚೌಂಡರಸ ಮಾಡದೆ ಬಿಡಲಿಲ್ಲ.

"ಸಕಲಾಂತರ್ಯಾಮಿ ಜೀವಪ್ರಕರ ವಿವಿಧ ಚೈತನ್ಯರೂಪಂ ಜಗದ್ವ್ಯಾಪಕ ಭಾವಂ ವಿಷ್ಣುವೆಂದು ಆಗಮತತಿ ಸತತಂ ಸಾರ್ವಸಂಬಂಧದಿಂ ಕೌತುಕದಿಂದೆ ಆವುದಂ ಬಣ್ಣಿಸಿದೊಡೆ ಅದು ಹರಿಸ್ತೋತ್ರಮ್....". ಹೀಗಾಗಿ, ದಶಕುಮಾರ ಚರಿತೆಯ ಜಾರ ಚೋರರ ಕತೆಯು ಹರಿಸ್ತೋತ್ರ ವಾಗುವ ಭಾಗ್ಯವನ್ನು ಪಡೆಯಬೇಕಾಯಿತು. ಮುದ್ದಣನಲ್ಲಿ ಹಾಗಿಲ್ಲ. ಅವನು ಕಾವ್ಯ ಹೇಳುವುದು ಈ ಹರಿಸ್ತೋತ್ರಕ್ಕಲ್ಲ.

"ಪಸಿವುಂ ಬಳಲ್ಕೆಯುಂ ಮುಡಿಯೆ, ಕೆಳದಿ ನರದಂಬುಲಮಂ ಸವಿಯಲ್ಕೆ ಈಯುತಿರೆ" ಕೈಕೊಂಡ ಸುಖಸಲ್ಲಾಪ.

ನಮ್ಮ ಹಳಗನ್ನಡ ಮಹಾಕಾವ್ಯದ ಕಲ್ಪನೆಯಲ್ಲಿ ಅನಾವಶ್ಯಕವಾದ 'ಗಿರಿ, ಪುರ' ಮೊದಲಾದ ಅಷ್ಟಾದಶ ವರ್ಣನೆಗಳು ಬರಲೇಬೇಕು. ಮುದ್ದಣ ಈ ಅಸ್ವಾಭಾವಿಕತೆಗೂ ತಡೆ ಹಾಕಿದ. ಕವಿ "ಶ್ರೀಮತ್ ಸುರಾಸುರೇಂದ್ರ ನರೇಂದ್ರ...." ಎಂದು ಪ್ರಾರಂಭಿಸಿದೊಡನೆ, ಮನೋರಮೆ –

"ಓ........, ಓ........ ತಡೆ ತಡೆ; ವಸುಧೆಗೊಡೆಯನಪ್ಪ ರಾಮಚಂದ್ರನ ಕಥೆಯಂ ಪೇಳ್ ಎನೆ ಬಸದಿಗೊಡೆಯರಪ್ಪ ಸುರೇಂದ್ರರ ಚರಿತ್ರೆಯಂ ಪೇಳ್ವುದೇಂ ?" ಎಂದು ಹೇಳುತ್ತಾಳೆ. ಇನ್ನೊಂದೆಡೆಗೆ "ಧರಣಿಮಂಡಲ ತರಣಿ ಮಂಡಲಗಳೇಕೆ ? ತಿರುಳನೆ ಕೂಡಿ ಪೇಳಯ್" ಎಂದು ಹೇಳುತ್ತಾಳೆ.

---

೧ ಸಾಹಿತ್ಯ ಸಮೀಕ್ಷೆ – ೧೯೬೭, ಪು. ೯೦

ಶೈಲಿಯ ಸಂಸ್ಕೃತ – ಕನ್ನಡದ ಹೊಂದಿಕೆಯ ಬಗೆಗೆಯೂ "ತಿರುಳ್ಗನ್ನಡದ ಬೆಳ್ನುಡಿಯೊಳ್ ಪುರುಳೊಂದೆ ಪೇಳ್ವುದು. ಕನ್ನಡಂ ಕತ್ತುರಿಯಲ್ತೆ ?" ಎಂದೂ, "ಕರ್ಮಣಿ ಸರದೊಳ್ ಜೆಂಬವಳಂ ಕೋದಂತಿರೆ.... ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆರೆಯೆ ತಿರುಳ್ಗನ್ನಡದಲ್ಲಿ" ಹೇಳಬೇಕೆಂದೂ ಕವಿಯು ಅಭಿಪ್ರಾಯಪಡುತ್ತಾನೆ.

ಸಾಹಿತ್ಯ ರಚನೆಯಲ್ಲಿ ಮುದ್ದಣನದು ಬುದ್ಧಿಪ್ರಧಾನವಾದ ತರ್ಕದೃಷ್ಟಿ. ಕವಿ ಶ್ರೀರಾಮ ಚಂದ್ರನ ಯಜ್ಞದಕುದುರೆ ಕಾಡು ಕಾಡುಗಳನ್ನು ಸುತ್ತಿದ್ದನ್ನು ವರ್ಣಿಸಿದಾಗ, ಮನೋರಮೆ :

"ಎನ್ನರಸ ನೀನೋರ್ವಂ ಅಪೂರ್ವ ಬಣ್ಣಗಬ್ಬಿಗರ ಬಲ್ಲಹಂ ಗಡ. ಪೋಪೋಪ ಬಟ್ಟೆಯೊಳ್ ಅಡವಿ ಬೆಟ್ಟುಗಳನೆ ಬಣ್ಣಿಪಯ್.... ಅಶ್ವಂ ಎತ್ತಾನುಂ ನಾಡಂ ಪುಗದೆ ? ಏಂ ಬಲ್ಪುಳ್ಳ ರಾಯಂ ಕಟ್ಟಿ ಕಾದನೆ ?" ಎಂದು ಈ ಅದ್ಭುತರಮ್ಯವಾದ ವರ್ಣನೆಗೆ ತರ್ಕಬದ್ಧತೆಯ ತಿರುವನ್ನು ಕೊಡಲು ಯತ್ನಿಸುತ್ತಾಳೆ.

ಎಲ್ಲದಕ್ಕೂ ಹೆಚ್ಚು, ಸಾಹಿತ್ಯ ಮನಸ್ಸು ಹಿಡಿಯುವಂತಿರಬೇಕು. 'Tediousness is a fatal fault in art.' – ಎಂದು ಡಾ. ಜಾನ್ಸನ್ ಹೇಳಿದರು. ನೀರಸ ಕಥೆ ಬಜಬರಗಳೆಯ ನಿಡುಗತೆ. ಕಾವ್ಯ ಹೃದಯಸಂವಾದಿಯಾಗಬೇಕು; ಹೃದಯಾಕರ್ಷಕವಾಗಬೇಕು. ದಮನ ಮತ್ತು ಶತ್ರುಹರ ಸೈನ್ಯದ ಹೋರಟೆಯನ್ನೇ ಬಿಟ್ಟೂ ಬಿಡದೆ ಬೇಸರ ಬರುವಂತೆ ಮುದ್ದಣ ವರ್ಣಿಸಹತ್ತಿದಾಗ, ಮನೋರಮೆ ತೂಕಡಿಸಹತ್ತುತ್ತಾಳೆ. ಆಗ ಮುದ್ದಣ :

"ಸ....ಕ....ಲ ಗುಣ ಸಂಪನ್ನೆ, ಏಕ....ಗುಣ....ಹೀನೆ" ಎಂದು ಅವಳನ್ನು ಸಂಬೋಧಿಸು ತ್ತಾನೆ. ಆಗ ತೂಕಡಿಸುತ್ತಿದ್ದ ಈ ಪಕ್ಷಿ ಒಮ್ಮೆಲೆ ಕಣ್ದೆರೆದು ಕೇಳುತ್ತದೆ :

"ಅಬ್ಬಾ ಎನ್ನ ಗುಣದೊಳ್ ಆವುದೊ ಹೀನು ?"

ಮುದ್ದಣ ಹೇಳುತ್ತಾನೆ : "ನಲ್ಗತೆಯಂ ಪೇಳ್ವರ ಕಣ್ಗೆ ಕಟ್ಟಿದಿರೊಳ್ ಪುರುಳನರಿಯದ ಗುಂಪಿನ ಗಾಡಬನಂತೆ ನಿದ್ರೆಯ ಬಿಣ್ಪಂ ತೂಕಡಿಪ ನಿನತೊಂದು ಗುಣಂ...."

ಅದಕ್ಕೆ ಮನೋರಮೆಯ ಉತ್ತರ –

"ತೂಂಕಡಿಸದೇವೆನೊ ? ಕಿವಿಗಳ್ಗೆ ಪುರುಳಂ ಅರದ ಗುರ್ದಿನಾಟದ ಬಜಿ ರಗಳೆಯ ನಿಡುಗತೆಗೆ ?"

ಅವಳಿಗೆ "ಎರ್ದೆವುಗುವ ಪೊಚ್ಚ ಪೊಸ ನಲ್ಗತೆಗಳು" ಬೇಕು.

ಹೀಗಾಗಿ, ಮುದ್ದಣ ಕನ್ನಡ ಸಾಹಿತ್ಯದಲ್ಲಿ ಗದ್ಯಕ್ಕೆ ಪ್ರಾಧಾನ್ಯ, ಸಾಹಿತ್ಯ ಸುಖ ಸಂಕಥಾ ವಿನೋದವೆಂಬ ಕಲ್ಪನೆ, ಅಷ್ಟಾದಶ ವರ್ಣನೆಗಳನ್ನುಳಿದ ನೈಜ ಕಥನ, ಹಿತವಾದ ಕನ್ನಡ ಸಂಸ್ಕೃತಗಳ ಬೆರಕೆ, ಕಥನದ ತರ್ಕಬದ್ಧತೆ, ಸಾಹಿತ್ಯದ ಹೃದಯಾಕರ್ಷತೆ – ಮೊದಲಾದ ಹೊಸ ವಿಚಾರಗಳನ್ನು ತಂದುಕೊಟ್ಟನು. ಹೀಗೆ ಪಂಪನಿಂದ ಮೊದಲುಗೊಂಡು ಮುದ್ದಣನ ವರೆಗೆ ಕನ್ನಡ ಸಾಹಿತ್ಯದ ಸೂರ್ಯಪಾನ, ಸೂರ್ಯ ತಿರುಗಿದತ್ತೆಲ್ಲ ತನ್ನ ಮುಖವನ್ನು ಸಹ ಹೊರಳಿಸಿ ಶೋಭಾಯಮಾನವಾಗಿ ಪ್ರಕಾಶಿಸಿದೆ.

೧೯ನೆಯ ಶತಮಾನ ಅಜ್ಞಾತ ಕಾಲಖಂಡ

ಅನುಕರಣ ಯುಗ :

ಅಂದಿನ ಉತ್ತರ ಕರ್ನಾಟಕದ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಸ್ಥಿತಿ :

೧೯ನೆಯ ಶತಮಾನದ ಮಧ್ಯಭಾಗ ಮತ್ತು ೨೦ನೆಯ ಶತಮಾನದ ಪ್ರಾರಂಭವನ್ನು ಸಾಮಾನ್ಯವಾಗಿ ಅಜ್ಞಾತ ಕಾಲಖಂಡವೆಂದೂ, ಅನುಕರಣ ಯುಗವೆಂದೂ ಹೇಳಲಾಗುತ್ತಿದೆ. ಈ ಮಾತು ಉತ್ತರ ಕರ್ನಾಟಕಕ್ಕಂತೂ ಎಲ್ಲಕ್ಕೂ ಹೆಚ್ಚಾಗಿ ಅನ್ವಯಿಸುತ್ತದೆ. ಈ ಕಾಲದಲ್ಲಿ ಕನ್ನಡ ಕೃಷಿಗೆ ಸಂಜೆಗತ್ತಲು ಬಂದು ಸೇರಿತು. ಇದಕ್ಕೆ ಕಾರಣಗಳೂ ಇಲ್ಲದಿಲ್ಲ. ಡಾ. ರಂ. ಶ್ರೀ. ಮುಗಳಿಯವರು ಹೇಳಿದ ಹಾಗೆ :

"ವಿಜಯನಗರದ ತರುವಾಯ ಕನ್ನಡ ಸಂಸ್ಕೃತಿಯ ದೋಷಗಳು ಪ್ರಧಾನವಾಗಿ, ನಾಡಿಗೆ ಒಂದು ಬಗೆಯ ಸಾಂಸ್ಕೃತಿಕ ಅನಾರೋಗ್ಯವು ಉಂಟಾಯಿತು. ಮೈಸೂರೊಂದರಲ್ಲಿ ದೃಷ್ಟಿ ಸಂಕುಚಿತವಾದರೂ, ಕನ್ನಡಿಗರ ಶಕ್ತಿ ಕುಂಠಿತವಾಗಲಿಲ್ಲ. ಸಾಹಿತ್ಯ ಕಲೆಗಳು ರಾಜಾಶ್ರಯದಲ್ಲಿ ಬೆಳೆಯುತ್ತ ಬಂದುವು. ಕೆಳದಿ ಮುಂತಾದ ಸಣ್ಣ ರಾಜ್ಯಗಳಲ್ಲಿಯೂ ಕನ್ನಡ ಪ್ರತಿಭೆ ಬೆಳಗಿತು. ಉತ್ತರ ಕರ್ನಾಟಕದ ಬಹು ಭಾಗದಲ್ಲಿ ಮಾತ್ರ ಕವಿದ ಕತ್ತಲೆ ಇನ್ನೂ ಸಂಪೂರ್ಣವಾಗಿ ನಷ್ಟವಾಗಿಲ್ಲ. ೧೮-೧೯ನೆಯ ಶತಮಾನಗಳಲ್ಲಿ ಉಜ್ವಲವಾದ ಸಾಹಿತ್ಯ ನಿರ್ಮಾಣದ ಅಭಾವ ಮತ್ತು ೨೦ನೆಯ ಶತಮಾನದಲ್ಲಿಯೂ ತಡವಾಗಿ ತಡವರಿಸಿ ಕಾಲಿಟ್ಟ ಹೊಸ ಸಾಹಿತ್ಯದ ಮಂದಗತಿ ಇವಕ್ಕೆ, ಇನ್ನೂರು ವರ್ಷಗಳ ಮೇಲಿನ ಕಾಲದಲ್ಲಿ ಕನ್ನಡ ಜನಜೀವನವು ದಿಙ್ಮೂಢವೂ ಅಗತಿಕವೂ ಆತ್ಮ ಪ್ರಜ್ಞೆಯಿಲ್ಲದುದೂ ಆಗಿ ಬಾಳಿದ್ದೇ ಮುಖ್ಯ ಕಾರಣವಾಗಿದೆ."[೧]

ಸನ್ ೧೮೧೮ರಲ್ಲಿ ಪೇಶವೆಯರ ಆಳಿಕೆ ಮುಗಿದು ಹೋಗಿದ್ದರೂ, ಉತ್ತರ ಕರ್ನಾಟಕವನ್ನು ಪಟವರ್ಧನ ಮನೆತನದವರು, ಭಾವೆ ಮನೆತನದವರು, ಘೋರ್ಪಡೆ ಮನೆತನದವರು ಕಾಯಿಪಲ್ಯೆ ಹಂಚಿಕೊಂಡ ಹಾಗೆ ಹಂಚಿಕೊಂಡರು. ಅದು ಎಷ್ಟರಮಟ್ಟಿಗಾಯಿತೆಂದರೆ, ಕೇವಲ ೧೨ ಮೈಲು ಅಂತರದಲ್ಲಿದ್ದ ಲಕ್ಷ್ಮೇಶ್ವರ ಮಿರಜ ಸಂಸ್ಥಾನದ ಆಧಿಪತ್ಯಕ್ಕೆ ಒಳಗಾದರೆ, ಶಿರಹಟ್ಟಿ ಸಾಂಗ್ಲಿ ಆಧಿಪತ್ಯಕ್ಕೊಳಪಟ್ಟಿತು. ಇದೇ ರೀತಿ ಗುಡಗೇರಿ-ಕುಂದಗೋಳಗಳ ನಡುವಿನ ಅಂತರ ಕೇವಲ ೮ ಮೈಲು. ಗುಡಗೇರಿ ಮಿರಜ ಸಂಸ್ಥಾನಕ್ಕೆ ಸೇರಿದರೆ, ಕುಂದಗೋಳ ಜಮಖಂಡಿ ಸಂಸ್ಥಾನಕ್ಕೊಳಪಟ್ಟಿತ್ತು. ಜಮಖಂಡಿ ಪಟವರ್ಧನ ಮನೆತನಕ್ಕೆ ಸೇರಿದರೆ, ಹತ್ತಿರದ ಮುಧೋಳ ಘೋರ್ಪಡೆ ಮನೆತನಕ್ಕೆ ಸೇರಿತು. ಅಷ್ಟೇ ಏಕೆ ಹುಬ್ಬಳ್ಳಿಯ ಗಣೇಶಪೇಟೆಯ ಭಾಗ ಸಾಂಗಲಿ ಸಂಸ್ಥಾನಕ್ಕೆ ಸೇರಿತ್ತೆಂದು ಹೇಳುತ್ತಾರೆ. ಕನ್ನಡಿಗರಂತೂ ವಿಜಯನಗರ ಕಾಲಕ್ಕೇ ತಮ್ಮ ರಾಜವೈಭವವನ್ನು ಕಳೆದುಕೊಂಡಿದ್ದರು. ಅನಂತರ, ಅವರು ಕಳೆದ ಜೀವನ ಹೊರಮನೆಯ ಬಾಣಸಿಗರಾಗಿಯೇ. ಮರಾಠಿಗರಾದರೋ ೧೮೧೮ರ ವರೆಗೆ ರಾಜ್ಯವಾಳಿದವರು. ಹೀಗಾಗಿ, ತಾವು ಆಳರಸರೆಂಬ ಪ್ರಜ್ಞೆ, ಅಹಂಕಾರ ಅವರಲ್ಲಿ ಇನ್ನೂ ಜಾಗ್ರತವಾಗಿದ್ದವು. ತಾವು ಆಳಲಿಕ್ಕೆ ಬಂದವರೆಂಬ ಭಾವನೆ ಅವರಲ್ಲಿ ರೂಢಮೂಲವಾಗಿತ್ತು. ಅದೂ ಅಲ್ಲದೆ, ಮುಂಬಯಿ ಭಾರತದ ಹೆಬ್ಬಾಗಿಲಾದ್ದರಿಂದ ಬ್ರಿಟಿಷರು ಮೊದಲು ಇಲ್ಲಿಯೇ ತಳವೂರಿದರು. ತನ್ಮೂಲಕ ವಿದ್ಯೆಯ ಅವಕಾಶವೂ ಅಲ್ಲಿಯ ಜನತೆಗೇ ಮೊದಲು ಲಭಿಸಿತು. ಪುಣೆಯೂ ಸರಕಾರದ ಪೀಠಸ್ಥಾನವಾಯಿತು. ಉತ್ತರ ಕರ್ನಾಟಕದ ಜನ ತಮ್ಮ ವಿದ್ಯೆಗಾಗಿ

---

೧ ಕನ್ನಡ ಸಾಹಿತ್ಯ ಚರಿತ್ರೆ : ರಂ. ಶ್ರೀ. ಮುಗಳಿ – ಪು. ೨೪೩.

[illegible]

[illegible]

"The Deputy Inspectors and English Masters in this Division are none of them Kanarese and there are very few Kanarese men even among the vernacular school masters in the Districts. The Kanarese language has never been taught or cultivated in this division as the Gujarati or Marathi in their's. ...... The indifference of the Kanarese people in general to schools in which the books and teachers are mostly Marathi can hardly be wondered at".

[illegible]

"Before Mr. Russel's appointment, the Division possessed no Kanarese books of its own except the first three reading books of

questionable utility . . . . A translation Exhibitionership was transferred from Poona to this division at the time of Major Waddington and it was held at the time of Mr. Russel's arrival by a Marathi man, who was to prepare Kanarese books for Government Schools".[1]

"ಇಷ್ಟು ಕನ್ನಡ ಪುಸ್ತಕಗಳು ಹದಿನೆಂಟು-ಮುಂದೆ ಕನ್ನಡದಲ್ಲಿದ್ದವು. ಹೊಸದಾಗಿ ಕನ್ನಡದಲ್ಲಿ ಪುಸ್ತಕಗಳು ಭಾಷಾಂತರವಾಗಬೇಕಿದ್ದರೂ ಒಬ್ಬ ಕನ್ನಡ ತಿಳಿಯದ ಮನುಷ್ಯನಿಗೆ ನಿಯಮಿಸಲಾಯಿತು. ಆದರೂ ದೇಶೀಯ ಪ್ರಯತ್ನದಿಂದ ಕನ್ನಡ ಜನರೂ ಸಿದ್ಧರು. ಕನ್ನಡದಲ್ಲಿ ಪುಸ್ತಕಗಳನ್ನು ಬರೆಯಲಾಯಿತು. ಆದರೆ, ಅವುಗಳನ್ನು ಮುದ್ರಿಸುವುದು ಹೇಗೆ? 'ಮುದ್ರಿಸಲು ಮುಂಬಯಿಗೆ ಬಿಟ್ಟು ಬೇರಾವ ದಿಂದ ಸಿದ್ಧತೆ ನಡೆಯಬೇಕು' ಎಂಬುದೇ ಕನ್ನಡದ ಗತಿಯಾಗಿತ್ತು. ಆ ಕಾಲಕ್ಕೆ ದೇಶದ ಭಾರದ ಪ್ರಯತ್ನದಿಂದ ಕ್ರಿ. ಶ. ೧೮೬೮ರಲ್ಲಿ ಕನ್ನಡ ಮುದ್ರಣಾಲಯವೊಂದು ಸ್ಥಾಪಿತವಾಯಿತು. ಈ ಮುದ್ರಣಾಲಯದ ಸ್ಥಾಪನೆಯಲ್ಲಿ ಮೇಟಿ ರಂಗೋ ಕಟ್ಟಿ ರಾವರು ಕಾಗಾ ಕ್ರಮ ವಹಿಸಬೇಕಾಯಿತು. ಅವರೇ ಅಕ್ಷರದ ಅಚ್ಚುಗಳನ್ನು ಸಿದ್ಧಪಡಿಸಿದರು."[2]

ಕನ್ನಡದ ಈ ಪರಿಸ್ಥಿತಿಯ ಬಗೆಗೆ ಕನ್ನಡ ಕೇಂದ್ರದ ದಿವಂಗತ ಮುದವೀಡು ಕೃಷ್ಣ ರಾಯರು ಹೀಗೆ ಹೇಳಿದ್ದಾರೆ:

"ಈ ಪ್ರದೇಶವು ಕನ್ನಡ ನಾಡಿನ ಭಾಗವೇ. ಒಂದು ಕಾಲ ಇಲ್ಲಿಯ ಸಾಮಾನ್ಯ ಜನತೆಯಲ್ಲಿ ಸಾಗುವಂಥ ಪರಿಸ್ಥಿತಿಯು ಇತ್ತಕಡೆಗೆಲ್ಲ ಹಬ್ಬಿ 'ದಕ್ಷಿಣ ಮಹಾರಾಷ್ಟ್ರ'ವೆಂಬ ಅಭಿದಾನ ಹೊಂದಿದ ಹಳೆಯಬಳುವು ಇದರ ಪಾಲಿಗೆ ಬಂದ ಹಿನ್ನೆಲೆಯೂ (ಮಾದರಿಯಾಗಿತ್ತು.)....... ಸಾಧಾರಣವಾಗಿ ೧೮೦೦ರಿಂದ ೧೯೦೦ರ ವರೆಗಿನ ಕಾಲಾವಧಿಯಲ್ಲಿ ಇಲ್ಲಿಯ ಪರಿಸ್ಥಿತಿಯು ಬಹಳವಾಗಿ ಕೆಡುವದಕ್ಕೆ ಅವಕಾಶವುಂಟಾಯಿತು. ಇಂಗ್ಲಿಷರು ಪ್ರಾಂತದ ಅನುಕೂಲತೆಗೋಸ್ಕರ ಮೂಲಕ ಮುಂಬಯಿ ನಗರವೇ ಅಧಿಕಾರದ ಕೇಂದ್ರವಾಗಿದ್ದ ಮಹಾರಾಷ್ಟ್ರದ ಕಡೆಯಿಂದ ಮರಾಠೀ ಭಾಷೆಯ ಅಧಿಕಾರಿಗಳೇ ಹೆಚ್ಚಾಗಿ ಬರುತ್ತಿದ್ದರು. ಶಿಕ್ಷಣವಿಭಾಗವಂತೂ ಒಂದು ಬಗೆಯಾಗಿ ಅವರ ಪಾಲಿಗೆ ಗುತ್ತಿಗೆಯಾಗಿ ಹೋಯಿತು. ಪಶ್ಚಿಮಿಯ ಹೊರಳಾದ ಹೊಸ ವರ್ತನ್ನದ ಧರೋಹಬ್ಬದ ವೃತ್ತಿಮಾಡುಗಳಿಗೆ ಇತ್ತ ಕಡೆಯ ಹೊಸ ಪ್ರದೇಶವು ಮರಾಠಿಗರಿಗೆ ತೆರೆದಿಟ್ಟಂತಾಯಿತು. ರೆಲ್ವೆಯ ಪೋಸ್ಟ್ ಆಫೀಸುಗಳು ಇಲ್ಲಿಯೇ ತೆರೆಗೊಂಡವು. ವ್ಯಾಪಾರೋದ್ಯೋಗದ ಬೆನ್ನು ಹತ್ತಿದ ಅನೇಕ ಜನ ಮರಾಠರು ಇಲ್ಲಿ ಬಂದು ನೆಲೆಸಿದರು. ಮಹಾರಾಷ್ಟ್ರದಲ್ಲಿ ಒಳ್ಳೇ ಹೆಸರು ಹೊಂದಿದ ನಾಟಕ ಕಂಪನಿಗಳಿಗೆ ಇದೊಂದು ಹೊಸ ಕ್ಷೇತ್ರವೇ ಲಭ್ಯವಾಗಿ ಅವುಗಳ ಪ್ರಯೋಗಗಳು ತಡವಿಲ್ಲದೇ ಜರಗುತ್ತಿದ್ದವು. ಮಹಾರಾಷ್ಟ್ರದ ವ್ಯಾಖ್ಯಾನಕಾರರು, ಪುರಾಣಿಕರು, ಕೀರ್ತನಕಾರರು, ಗಾಯಕರು, ನರ್ತಕಿಯರು ಇವರೇ ಮೊದಲಾದ 'ಕಲಾವಂತರು' ಇಲ್ಲಿ ಬಂದು ಮೆರೆಯುತ್ತಿದ್ದರು. ಇವರೆಲ್ಲರಿಗೆ ಇಲ್ಲಿದ್ದ ಮರಾಠೀ ಅಧಿಕಾರಿಗಳಿಂದಲೂ, ಇಲ್ಲಿಯೇ ನೆಲೆಗೊಂಡಿದ್ದ ಮರಾಠಿಗರಿಂದಲೂ ಬಹಳ ಆಶ್ರಯ ದೊರೆತು ಮತ್ತು ಹೊರಬರಿಗೆ ಇತ್ತ ಕಡೆಗೆ ಮುನ್ನುಗ್ಗಿ ಬರುವದಕ್ಕೆ ಪ್ರೋತ್ಸಾಹನ ದೊರೆಯುತ್ತಿತ್ತು. ಇವೆಲ್ಲ ಕಾರಣಗಳ ಮೂಲಕ ಪಂಡಿತ, ದಕ್ಷ, ಕುಮಾರವ್ಯಾಸ, ಪಾರ್ತಿಸುಬ್ಬ ಹಿರಿಯರ ನಾಡಾದ ಈ ಸೀಮೆಯಲ್ಲಿ ಕನ್ನಡ ನುಡಿಯು ಹಿಂದೆ ಬಿದ್ದು ಮರಾಠೀ ಭಾಷೆಯು ಬೆಳೆಯುತ್ತಿತ್ತು. ಸ್ವಾಭಿ

೧ ಸಾಹಿತ್ಯ ಸಂಶೋಧನ : ದ. ರಾ. ಬೇಂದ್ರೆ, ೧೯೫೦ – ಪು. ೧೮೧–೧೮೨

೨ ಅದೇ ಪು. ೧೮೨.

ಮಾನದಲ್ಲಿ ಅತ್ಯಂತ ಮುಂದರಿದ ಮರಾಠಿಗರು ಇಲ್ಲಿಗೆ ಬಂದ ಮರಾಠೀ ಅಧಿಕಾರಿಗಳ ವರ್ಚಸ್ವದ ಉಪಯೋಗ ಮಾಡಿಕೊಂಡು ತಮ್ಮ ಮಕ್ಕಳು ಮರಿಗಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಮುನಿಸಿಪಾಲಿಟಿಗಳ ಮುಖಾಂತರ ಮರಾಠೀ ಶಾಲೆಗಳನ್ನು ಸ್ಥಾಪಿಸಿಕೊಂಡರು. ಮೇಲ್ತರಗತಿಯ ಶಿಕ್ಷಣಕ್ಕೆ ಪುಣೆ, ಮುಂಬಯಿ ಕಡೆಗೆ ಹೋದಾಗ್ಗೆ ತಮ್ಮ ಮಕ್ಕಳಿಗೆ ಸಾಮಾನ್ಯ ವ್ಯವಹಾರಕ್ಕೆ ಅಡಚಣೆಯಾಗ ಬಾರದೆಂಬ ವಿಚಾರದಿಂದ, ಅತ್ತಕಡೆಯ ಹೆಣ್ಣು ಗಂಡಿನ ಸಂಬಂಧ ಬಂದಾಗ 'ಆರೇ' ಅರಿಯದವರೆಂಬ ಅಪಮಾನಕ್ಕೆ ತಾವು ಗುರಿಯಾಗಬಾರದೆಂಬ ವಿವೇಕಶೂನ್ಯ ಹಂಬಲದಿಂದ ತಮ್ಮ ಮಕ್ಕಳನ್ನು ಎಷ್ಟೋ ಜನ ಸುಸಂಸ್ಕೃತ ಕನ್ನಡಿಗರು ಮರಾಠೀ ಶಾಲೆಗಳಿಗೇ ಕಳಿಸಹತ್ತಿದರು. ಹೀಗೆ ಪುಣೆ, ಮುಂಬಯಿ ಕಡೆಗೆ ಹೋಗಿ ಬಂದ 'ಸುಶಿಕ್ಷಿತ' ಕನ್ನಡಿಗರು ತಮ್ಮ ತಾಯಿ ನುಡಿಯಾದ ಕನ್ನಡವನ್ನೇ ಮರೆತು ಮರಾಠಿಯನ್ನೇ ಮನೆಯ ಮಾತಾಗಿ ಮಾಡುವ ಮಹತ್ವಾಕಾಂಕ್ಷೆಯನ್ನು ಮುಂದೂಡಹತ್ತಿದರು. ಮೈಸೂರಿನತ್ತ ಕಡೆಯಿಂದ ಮನೆಗೆ ಬಂದ ಅಚ್ಚಗನ್ನಡ ಗೃಹಿಣಿಯರನ್ನು ಬಲುಮೆಯಿಂದ 'ಮರಾಠೀ' ಕಲಿಯಹಚ್ಚಿ ಅವರ ಅಬದ್ಧ ಸುಬದ್ಧ 'ಆರೇ'ದಿಂದಲಾದರೂ ಮನೆತನವನ್ನೇ ಮರಾಠೀಮಯ ಮಾಡುವ ಮೋಹಕ್ಕೊಳಗಾದ ಮಹಾಮಹಿಮರನೇಕರು ಅಹಮಹಮಿಕೆಯಿಂದ ಮುಂದೆ ಬಂದರು. ಹೀಗೆ ಒಂದೆರಡಲ್ಲದ ಅನೇಕ ಬಗೆಯ ಕಾರಣ ಪರಂಪರೆಗಳಿಂದ ಇತ್ತ ಕಡೆಯ ಕನ್ನಡಿಗರ ಸ್ವಾಭಿಮಾನ ಸ್ವಭಾಷಾಭಿಮಾನವು ಕುಗ್ಗುತ್ತ ನಡೆದು, ಕನ್ನಡವು ಮುಗ್ಗರಿಸಿ ಬಿದ್ದು ಮರಾಠಿಯ ಪ್ರಾಬಲ್ಯವೇ ಹೆಚ್ಚಾಗಿ ಹೆಚ್ಚಿ ಅದರ ವರ್ಚಸ್ವವೇ ಬೆಳೆಯಲಾರಂಭಿಸಿತು. 'ಓದಿದರೆ ಮರಾಠೀ ಪುಸ್ತಕಗಳನ್ನೇ ಓದಬೇಕು; ತರಿಸಿದರೆ ಮರಾಠೀ ವರ್ತಮಾನಪತ್ರ ಮಾಸಪತ್ರಿಕೆಗಳನ್ನೇ ತರಿಸಬೇಕು; ನೋಡಿದರೆ ಮರಾಠೀ ನಾಟಕಗಳನ್ನೇ ನೋಡಬೇಕು; ಕೇಳಿದರೆ ಮರಾಠೀ ಹಿಂದುಸ್ಥಾನೀ ಸಂಗೀತವನ್ನೇ ಕೇಳಬೇಕು' – ಎಂಬ ಸೊಲ್ಲೇ ಎಲ್ಲೆಲ್ಲಿಯೂ ಹರಡಿಕೊಂಡ ವಿಪರೀತ ಪರಿಸ್ಥಿತಿಯಿಂದ ಈ ಕನ್ನಡ ನಾಡು ಜರ್ಜರಿತವಾಗಿ ಹೋಯಿತು."೧

ಅಂದಿನ ಕನ್ನಡಿಗರ ಈ ಆಲಸ್ಯ, ನಿರಭಿಮಾನ ಮತ್ತು ಮನೆಮುರುಕತನಗಳನ್ನು ಶ್ರೀ ದ. ರಾ. ಬೇಂದ್ರೆಯವರು ಹೀಗೆ ವರ್ಣಿಸಿದ್ದಾರೆ :

"ಆ ಕಾಲಕ್ಕೆ ಹಳ್ಳಿ ನಾಡಿನ ಜನರೆಲ್ಲರೂ, ಮಗನ ಮೇಲೆ ಮನೆತನದ ಭಾರವನ್ನು ಹಾಕಿ ನಿರಂಬಳ ಆದ ಮುದುಕರಂತೆ ಕಾಲ ಕಳೆಯುತ್ತಿದ್ದರು. ಹೊಲ ಮನೆಯನ್ನಷ್ಟು ನೋಡಿಕೊಂಡು ಯಕ್ಷಗಾನಗಳನ್ನು ಮಾಡುವದೂ, ಭಾಗವತರಾಟಗಳನ್ನು ಮಾಡಿಸುವದೂ, ಹರಿದಾಸಿ ನಾಗೇಶಿಯವರ ಹಾಡು ಕೇಳುವದೂ, ಲಾವಣಿಗಳನ್ನು ಹೇಳುವದೂ, ಇವೇ ಮೊದಲಾದ ಕಾರ್ಯಗಳಲ್ಲಿ ಅವರು ತೊಡಗಿದ್ದರು. ಕಾಲ್ಪನಿಕ ರಾಮರಾಜ್ಯದ ಭ್ರಮೆಯೂ ಅವರಲ್ಲಿ ಸೇರಿತ್ತು. ಇತ್ತ ಪಟ್ಟಣಗಳು ಶೃಂಗಾರಕ್ಕೆ ಅರಸುಪಟ್ಟವನ್ನೂ, ಭೀಭತ್ಸಕ್ಕೆ ಪ್ರಧಾನಿ ಪಟ್ಟವನ್ನೂ ಕಟ್ಟಿದ್ದವು. ಕಾಲವೇ ರೌದ್ರಾಕಾರವನ್ನು ತಳೆದಿದ್ದರಿಂದ ರಸಗಳು ಕಲಿಗಳನ್ನೂ ಕಾವ್ಯಗಳನ್ನೂ ಭೀತಿಯಿಂದ ಬಿಟ್ಟು ದಿಕಾಪಾಲಾಗಿ ಸಿಕ್ಕಲ್ಲಿ ಸೇರಿಕೊಂಡಿದ್ದವು. ಶೃಂಗಾರವು ವಕೀಲರ ರಂಗಮಹಲನ್ನು ಸೇರಿತ್ತು. ಭೀಭತ್ಸವು ಗ್ರಾಮ್ಯ ನಾಗರಿಕರ ಪಾಲಿಗೆ ಬಂತು. ಕರುಣವು ಸೆರೆಬಡಕರ ಹೆಂಡರು ಮಕ್ಕಳ ಕಣ್ಣಿನೊಳಗಡಗಿಕೊಂಡಿತ್ತು. ವೀರರಸವು ಗತಪ್ರಾಣವಾಗಿ ಬಿದ್ದುಕೊಂಡಿತ್ತು. ಈ ಪ್ರಕಾರ ಎಲ್ಲ ಕಡೆಗೂ ಅದ್ಭುತವೇ ಅದ್ಭುತವಾಗಿದ್ದುಕೊಂಡು, ಕರ್ನಾಟಕವನ್ನು ಉದ್ಧರಿಸಲು ಬದ್ಧನಿದ್ದ ಶಾಂತಾಂತಃಕರಣದ ದೇವರ ಮುಖದ ಮೇಲೆ ಹಾಸ್ಯವು ಮಿಂಚಿರಬಹುದು."೨

೧ ಚುರಮುರಿ ಕೃತ ಶಕುಂತಲ ನಾಟಕವು – ೧೯೩೪ – ಪು. ೧೪–೧೫.

೨ ಸಾಹಿತ್ಯ ಸಂಶೋಧನೆ – ಪು. ೧೭೬

ಇದಕ್ಕೆ ಕಾರಣಗಳನ್ನು ಶ್ರೀ ದ. ರಾ. ಬೇಂದ್ರೆಯವರು ಹೀಗೆ ಕೊಡುತ್ತಾರೆ:

"ಎಷ್ಟೋ ದಿವಸಗಳಿಂದ ರಾಜಾಶ್ರಯವನ್ನು ಕಳೆದುಕೊಂಡು ತೊಳಲುತ್ತಿರುವ ಕರ್ನಾಟಕವು ಇಂಗ್ಲೀಷರ ಆಳಿಕೆಯಲ್ಲಿ ಛಿನ್ನಭಿನ್ನವಾಗಿದ್ದುದು ಮೊದಲನೆಯ ಕಾರಣವು; ಪೇಶ್ವೆಯರ ಆಳಿಕೆ ತೀರಿದ ಮೇಲೆ ಆರೇ ಅಮಲದಾರರ ಆಳಿಕೆಯು ಎರಡನೆಯ ಕಾರಣವು; ರಾಜಾಶ್ರಯ ದೊರೆತ ಮೈಸೂರ ಕನ್ನಡವು ಯಾವುದೋ ಕಾರಣದಿಂದ ನಮ್ಮ ಕೂಡ ಬಳಕೆ ಮಾಡದೇ ಇದ್ದದ್ದು ಮೂರನೆಯ ಕಾರಣ; ಕಾಲಪ್ರತಿಕೂಲತೆಯು ನಾಲ್ಕನೆಯ ಕಾರಣ; ಮೊದಲನೆಯ ತರಗತಿಯ ಕರ್ತೃತ್ವಶಾಲಿಗಳು ಹುಟ್ಟದಿದ್ದದ್ದು ಐದನೆಯ ಕಾರಣ."[೧]

ಅಂತೂ, "ಎಂಥ ನಾಡಿದು ಎಂಥ ಕಾಡಾಯಿತೋ." ಹಗೆಯ ಹೆಸರನು ಕೇಳಿ ಹುಲಿಯಂತೆ ಹಸುಗೂಸು ನೆಗೆದು ತೊಟ್ಟಿಲ ತುಳಿದು ನುಗ್ಗುತಿಹ ನಾಡಿನಲ್ಲಿ ಹಗೆಯ ಊಳಿಗದವರಾಗಿ ಬಾಳುವಂತಾಯಿತು. ಗಂಗೆಯಲ್ಲಿ ಆತ್ಮ ತುರಂಗವನ್ನು ಮಿಸಿಸಿದವರು, ಮಿಥಿಲೆಯಲ್ಲಿ ರಾಜ್ಯಭಾರವನ್ನು ಮಾಡಿದವರು, ಗುಜರಾಥಕ್ಕೆ ರಾಜ್ಯಭಾರ ಪದ್ಧತಿಯ ಹೊಸ ಅಂಶಗಳನ್ನು ಕಾಣಿಕೆಯಾಗಿ ಕೊಟ್ಟವರು, ಪ್ರಪಂಚಕ್ಕೆ ವೀರಶೈವ, ದ್ವೈತ ತತ್ವಪ್ರಣಾಲಿಯನ್ನು ನೀಡಿದವರು, ತಮ್ಮ ನೆರಳನ್ನೇ ಕಂಡು ತಾವೇ ಹೆದರುವಂತಾಯಿತು. ಪ್ರೈ ಸೋತ ದಳದಂತೆ ಕಾಲ್ದೆಗೆಯುವಂತಾಯಿತು.

ಒಂದು ಕಾಲಕ್ಕೆ ಕನ್ನಡದ ಅನೇಕ ಪುಸ್ತಕಗಳು ಅನ್ಯಭಾಷೆಯಲ್ಲಿ ಭಾಷಾಂತರ ಹೊಂದುವಷ್ಟು ಮಾನ್ಯತೆ ಪಡೆದಿದ್ದವು. ಕನ್ನಡದ ಪಾಂಡಿತ್ಯ-ಪ್ರತಿಭೆಗಳು ಅಷ್ಟು ಖ್ಯಾತಿಯನ್ನು ಪಡೆದಿದ್ದವು. ಕ್ರಿ. ಶ. ೧೩೦೦ರಲ್ಲಿ ಆಗಿ ಹೋದ ಅರ್ಹದ್ದಾಸನ 'ರಟ್ಟಸೂತ್ರ'ವೆಂಬ ಪುಸ್ತಕವನ್ನು ಹದಿನಾಲ್ಕನೆಯ ಶತಮಾನದ ಭಾಸ್ಕರನೆಂಬ ಆಂಧ್ರ ಕವಿಯು ತೆಲುಗಿನಲ್ಲಿ ಭಾಷಾಂತರ ಮಾಡಿದನು. ಕ್ರಿ. ಶ. ೧೪೩೦ರ ಚಾಮರಸನ 'ಪ್ರಭುಲಿಂಗ ಲೀಲೆ'ಯನ್ನು ತಿರುವಣ್ಣಾಮಲೈಯ ಶಿವಪ್ರಕಾಶ ಸ್ವಾಮಿಗಳು ತಮಿಳಿನಲ್ಲಿ ಭಾಷಾಂತರಿಸಿದರು. ತೆಲುಗಿನಲ್ಲಿಯಂತೂ ಎರಡು ಪ್ರಭುಲಿಂಗಲೀಲೆಗಳಿವೆ. ಒಂದನ್ನು ಪಿಡುಪರ್ತಿ ಸೋಮನಾಥನು ದ್ವಿಪದಿಯಲ್ಲಿ ಬರೆದಿದ್ದಾನೆ. ಇನ್ನೊಂದನ್ನು ಪಾಲನಾರ್ಯ ಪುತ್ರನಾದ ಪಿಡುಪರ್ತಿ ಬಸವಕವಿ ಚಂಪೂಕಾವ್ಯವಾಗಿ ಬರೆದಿದ್ದಾನೆ. ಚೆನ್ನಬಸವ ಪುರಾಣದ ಕರ್ತೃವಾದ ವಿರೂಪಾಕ್ಷ ಪಂಡಿತನೋ ಇಲ್ಲವೆ ಪಿಡುಪರ್ತಿ ಸೋಮನಾಥನೋ ಪ್ರಭುಲಿಂಗಲೀಲೆಯನ್ನು ಸಂಸ್ಕೃತದಲ್ಲಿಯೂ ಬರೆದಿದ್ದಾರೆ. ಇದೇ ಸುಮಾರಿಗೇ ಇದ್ದ ಕುಮಾರವ್ಯಾಸನ ಭಾರತವನ್ನು ೧೭ನೆಯ ಶತಮಾನದ ಚಂದ್ರಾತ್ಮಜನೆಂಬ ಕವಿಯು ಮರಾಠಿ ಭಾಷೆಗೆ ತರ್ಜುಮೆ ಮಾಡಿದನು. ಅವನು ತನ್ನ ಗ್ರಂಥದ ಪೀಠಿಕೆಯಲ್ಲಿ ಹೀಗೆ ಹೇಳಿದ್ದಾನೆ:

ಮಝು ಸಂಸ್ಕೃತೀ ನಾಹೀ ಅಭ್ಯಾಸ
ಕರ್ನಾಟಕ ಕವಿ ಕುಮಾರವ್ಯಾಸ
ತ್ಯಾಚೇನೀ ಆಧಾರೇ ಗ್ರಂಥವಿಲಾಸ
ಪ್ರಾರಂಭಿಲಾ ಯಾ ಹೊತು ॥

(ಚಂದ್ರಾತ್ಮಜ ಕೃತ – ಭಾರತ)[೨]

---

೧ ಸಾಹಿತ್ಯ ಸಂಶೋಧನೆ- ಪು. ೧೭೩
೨ ಕನ್ನಡ ಗ್ರಂಥಗಳು ಪರಭಾಷೆಗೆ ಪರಿವರ್ತಿಸಲ್ಪಟ್ಟಿರುವವೋ? – ವಾಗ್ಭೂಷಣ: ಜುಲೈ-ಆಗಸ್ಟ, ೧೯೨೦ – ಪು. ೫೬.

ಹದಿನೇಳನೆಯ ಶತಮಾನದಲ್ಲಿ ಆಗಿ ಹೋದ ಜಗನ್ನಾಥ ದಾಸರ 'ಶ್ರೀ ಹರಿಕಥಾಮೃತ ಸಾರ'ವನ್ನು ಪುರುಷೋತ್ತಮ ಗೋಪಾಳ ಲಾತೂರಕರ ಎಂಬವರು ಮರಾಠಿಗೆ ಅನುವಾದ ಮಾಡಿದ್ದಾರೆ. ಸುಪ್ರಸಿದ್ಧ ವಿನೋದಿ ಲೇಖಕರಾಗಿದ್ದ ಅಣ್ಣಾರಾವ ಸವದಿ ಅವರು ಧಾರವಾಡದ ಟ್ರೇನಿಂಗ್ ಕಾಲೇಜಿನ ವಿದ್ಯಾರ್ಥಿಗಳೆದುರು ಮಾಡಿದ ಒಂದು ಭಾಷಣವನ್ನು ಗೋವಿಂದ ದಾಮೋದರ ದೀಕ್ಷಿತ ಎನ್ನುವವರು 'ವಿದ್ಯಾಶಾಲಾ ಗುರುಮಿತ್ರ'ವೆಂಬ ಹೆಸರಿನಿಂದ ಮರಾಠಿಗೆ ಅನುವಾದ ಮಾಡಿದರು. ಇತ್ತೀಚೆಗೆಂದರೆ, ಶ್ರೀ ಆಲೂರ ವೆಂಕಟರಾಯರ 'ಶ್ರೀ ವಿದ್ಯಾರಣ್ಯ ಸ್ವಾಮಿಗಳ ಚರಿತ್ರ'ವು ಶ್ರೀ ರಾಮಚಂದ್ರ ಹಯಗ್ರೀವ ಮಣೂರಕರ ಅವರಿಂದ ಸನ್ ೧೯೧೬ರಲ್ಲಿ ಮರಾಠಿ ಭಾಷೆಯಲ್ಲಿ ಅನುವಾದಿತವಾಯಿತು. ಕನ್ನಡಿಗರ ಅಚ್ಚುಮೆಚ್ಚಿನ ಕೃತಿಯಾದ ಲಕ್ಷ್ಮೀಶನ ಜೈಮಿನಿ ಭಾರತದ ಮೊದಲನೆಯ ಸಂಧಿಯನ್ನು ಕ್ರಿ. ಶ. ೧೮೪೬ರಲ್ಲಿ ಶ್ರೀ ಶೇಷೋ ರಾಮಚಂದ್ರ ಚುರಮರಿಯವರು ಮರಾಠಿ ಭಾಷೆಗೆ ಪದ್ಯರೂಪವಾಗಿ ಪರಿವರ್ತಿಸಿದರು. ಅದರಂತೆಯೇ 'ಪ್ರಭಾತ' ಮಾಸಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಯಶವಂತರಾವ ಜಠಾರ ಅವರು ಜೈಮಿನಿ ಭಾರತದ ಮೊದಲನೆಯ ಸಂಧಿಯನ್ನು ಸನ್ ೧೯೧೯ರಲ್ಲಿ ವಾರ್ಧಿಕ ಷಟ್ಪದಿಯಲ್ಲಿಯೇ ಭಾಷಾಂತರಿಸಿದರು.

ಕರ್ನಾಟಕದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ದತ್ತಾತ್ರಯ ದೇವರ ಉಪಾಸಕರು 'ಗುರುಚರಿತ್ರೆ' ಎಂಬ ಮರಾಠಿ ಗ್ರಂಥವನ್ನು ಪಾರಾಯಣ ಮಾಡುತ್ತಾರಷ್ಟೆ. ಅದರಲ್ಲಿ, ಹಲವು ಕನ್ನಡ ಪದ್ಯಗಳು ಸೇರಿಕೊಂಡಿವೆ. ಅವು ಯಾವ ಕಾಲದಲ್ಲಿ ಸೇರಿವೆಯೆಂಬುದು ತಿಳಿಯುವಂತಿಲ್ಲ. ಅಂಥ ಒಂದು ಪದ್ಯವನ್ನು ಇಲ್ಲಿ ಕೊಡಬಹುದು. ಇವನ್ನು ಕನ್ನಡ ಗೊತ್ತಿಲ್ಲದ ಮಹಾರಾಷ್ಟ್ರದ ಮರಾಠೀ ಜನರೂ ಪಠಿಸುತ್ತಿರುತ್ತಾರೆ :

ರಾಗ – ಶ್ರೀರಾಗ

ಕಂಡೆನಿಂದು ಭಕ್ತಜನರಾ ಭಾಗ್ಯನಿಧಿಯ ಭೂಮಂಡಲ
ದೊಳಗೆ ನಾರಸಿಂಹ ಸರಸ್ವತೀಯಾ
ಕಂಡೆನಿಂದು ಉಂಡೆನಿಂದು ವಾರಿಜಾದೊಳಪಾದವಾ
ರಾಜಕಮಳಾದೊಳಾದಂತ ಧ್ಯಾನಿಸಿ ॥೭೩॥

ಸುಖಿಸುವಾ ಜನಾರೂಗಳಾ
ಭೋರಗೇಲಾನ್ನೇ ಕಾಮಿಫಳಫಳಾ
ನಿತ್ಯಸಕಳಾ ಹೂವಾ
ಧೀನಾರಸಿಂಹ ಸರಸ್ವತೀವರನನಾ ॥೭೪॥

ವಾಕ್ಯಕರುಣಾನೆನಸುವಾ
ಜಗದೊಳಗ ದಂಡ ಕಮಂಡಲು ಧರಾಶೀ
ಸಗುಣಾನೆನೀಸೀ ಸುಜನರಿಗೆ
ವಗಾದುನೀವಾಸ ಶ್ರೀ ಗುರುಯತಿವರಾಂಸ ॥೭೫॥

ಧಾರಗೆ ಗಾಣಗಾಪುರದೊಲಕೆಲಾ ಶ್ರೀ ಹರೀ
ದಾಸಿಸೊನುನಾ ದಯಾ ಕರುಣಾದಲ್ಲಿ

ವರಾವೀ ತುಂಗ ಮುನಾ ಹೋರಾನನು ಅನುಬ(ದಿ)ನಾ
ನಾರಸಿಂಹ ಸರಸ್ವತೀ ಗುರುಚರಣವನ್ನ ॥೭೬॥

ರಾಜಗ ಖಂಡೀ ಕಂಡೀನೇ ನಮಾ
ಇಂದು ಕಂಡೆನೇನಮಾ
ಮಂಡಲಾದೊಳಗೆ ಯತಿಕುಲರಾಯೇ
ಚಂದ್ರಮನ್ನಾ ॥೭೭॥

ತತ್ವಬೋಧಾರಾಯಾ ಉಪನಿಷದ ತತ್ವಚರಿತ
ನಾವ್ಯಕ್ತವಾದ ಪರಬ್ರಹ್ಮಮೂರ್ತೀಯನಾಯನಾ
ಶೇಷಶಯನಾ ಪರವೇಶಕಾಯನಾ
ಲೇಷಕೃಪಯ ನೀವನೇವ ಭವನೌಪಾಲಕನಾ ॥೭೮॥

ಗಂಧಪರಿಮಳಾದಿ ಶೋಭಿತಾನಂದಾ
ಸರನ್ನಾ ಛಂದಾಲ ಯೋಗೇಂದ್ರೇ
ಗೋಪೀ ವೃಂದವಲ್ಲಭನಾ ॥೭೯॥

ಕರೀಯನೀಯಾನಾಂ ಪಾಪಗುರು
ನವರಸ ಗುಸಾಯನ್ನೀ
ನರಸಿಂಹ ಸರಸ್ವತ್ಯನಾನುದ ಪುರುಷಾವಾದನಂ ॥೮೦॥[೧]

ಮರಾಠಿ 'ಅಮೃತಾನುಭವ'ದಲ್ಲಿ ಕನ್ನಡ ಪದ್ಯ ಬರುತ್ತದೆಂದು ನಾ. ಶ್ರೀ. ರಾಜಪುರೋಹಿತರು ಹೇಳುತ್ತಾರೆ. ಆ ಪದ್ಯ ಹೀಗೆ:

ಅಕ್ಕ ನೀ ಕೇಳೆ ಚಿಕ್ಕನ ಮಾತು
ಕಾರಲೇ ದಾಸೀಗೆ ಮರುಳಾದನೆ ॥
ಚೆಲುವಾನೆ ಚೆಲುವಾನೆ ಪಂಢರಿರಾಯಾ
ಚೆಲುವಾನೆ ಎಲ್ಲಿ ದೊರಕುವನೆ ॥
ಪುಂಡಲೀಕನ ಭಕ್ತಿಗೆ ಬಂದಾ
ರಖುಮಾದೇವಿ ವರವಿಠ್ಠಲನೆ ॥

ಇದೂ ಅಲ್ಲದೆ, ಆಶ್ಚರ್ಯದ ಮಾತೆಂದರೆ, ಇಂದಿನ ಕನ್ನಡದ ಗಂಡುಮೆಟ್ಟಿನ ಸ್ಥಳವಾದ ಹುಬ್ಬಳ್ಳಿ–ಧಾರವಾಡದಲ್ಲಿ ಮೊಟ್ಟಮೊದಲು ಪ್ರಾರಂಭವಾದ ಶಾಲೆ ಮರಾಠಿ ಭಾಷೆಯದು.

"As early as 1826, two Marathi schools were opened one at Dharwar and the other at Hubli."

---

೧ ಜಯಕರ್ನಾಟಕ: ೩–೧–೧೯೨೩ ಪು. ೧೭೫ – ಕವಿತೆ ಮರಾಠಿಯರ ಬಾಯಲ್ಲಿ ಸೇರಿ ವಿಕೃತವಾಗಿದೆ. ಮೂಲ ತಿಳಿಯುವಂತಿಲ್ಲ.

ಇದಾದ ೯ ವರುಷಗಳ ನಂತರ ಧಾರವಾಡ – ಹುಬ್ಬಳ್ಳಿಗಳಲ್ಲಿ ಕನ್ನಡ ಶಾಲೆಗಳನ್ನು ತೆರೆಯ ಲಾಯಿತು :

"In 1835 two Kanarese schools were opened in the same towns: a third Kanarese school at Ranebennur in 1836."

ಈ ಸುಮಾರಿಗಿದ್ದ ಧಾರವಾಡದ ವಾಚನಾಲಯದ ಬಗ್ಗೆಯೂ ಹೀಗೆ ಹೇಳಲಾಗಿದೆ :

"The Native General Library at Dharwar is the largest and oldest. The Native General Library was established in 1854 by Mr. Lakshman Shripad Nagpurkar, a pandit, or Vernacular teacher. For some years after its establishment, the library prospered, it then declined, but since 1872 through the efforts of some of the principal educational officers, the pleaders and a few others it again is fairly successful. The library was once fairly stocked with books, which during the time of depression were stolen. At present, it has 451 books, 414 are English, thirty Marathi and seven Kanarese."

೧೮೮೪ರ ಸುಮಾರಿಗೆ ಧಾರವಾಡದಲ್ಲಿ ಮೂರು ಪತ್ರಿಕೆಗಳು ಹೊರಡುತ್ತಿದ್ದವು :

"The town of Dharwar has three Vernacular papers, the Dharwar Vritta or Dharwar News printed in Marathi and published on Thursday; the Chandrodaya or Moon Rise printed in Kanarese and published on Saturday; and the Chava or Elephant Calf published on Sunday. The Dharwar News is said to be fairly ably managed paper with about 450 subscribers; the Moon Rise has only lately appeared and has about 150 subscribers; the Elephant Calf, which is said not to be well conducted, seldom goes beyond the limits of Dharwar town."

ಇನ್ನು ಈ ಪತ್ರಿಕೆಗಳ ಓದುಗರ ವಿಷಯವೆಂದರೆ :

"Except Brahmans who read Marathi prints, no class of the Kanarese population has shown any taste for news paper reading."[1]

ಉತ್ತರ ಕರ್ನಾಟಕದ ಶಾಲೆಗಳಲ್ಲಿ ಕನ್ನಡ ಮತ್ತು ಮರಾಠಿಗಳನ್ನು ಕಡ್ಡಾಯವಾಗಿ ಕಲಿಸ ಲಾಗುತ್ತಿತ್ತು. ೧೮೬೯ನೆಯ ಇಸವಿ ಸರ್ಕ್ಯುಲರ ನಂಬರ ೧೧೧೭ರ ಮೇರೆಗೆ ಮಹಾರಾಷ್ಟ್ರ ಶಾಲೆಗಳಲ್ಲಿ ಮರಾಠಿ, ಕನ್ನಡ ಶಾಲೆಗಳಲ್ಲಿ ಕನ್ನಡವೇ ದೇಶ್ಯ ಭಾಷೆಯೆಂದು ಸಾರಲ್ಪಟ್ಟಿದ್ದರೂ, ಈ ಭಾಗದ ಜನತೆ ಎರಡೂ ಭಾಷೆಗಳನ್ನು ಕಲಿಯಬೇಕಾಗುತ್ತಿತ್ತು :

"ದಕ್ಷಿಣ ಭಾಗದೊಳಗಿನ ಯಾವತ್ತೂ ಡೆಪ್ಯುಟಿ ಇನಸ್ಪೆಕ್ಟರರಿಗೆ ಶಾಲೆಗಳಲ್ಲಿ ನಡೆಯತಕ್ಕ ದೇಶ ಭಾಷೆಗಳ ಬಗ್ಗೆ ಈ ಪೂರ್ವದಲ್ಲಿ ಕೊಟ್ಟ ಹುಕುಮುಗಳಿಗೆ ಸಂಬಂಧವಾಗಿ, ಇದರಿಂದ ತಿಳಿಯಪಡಿಸು

[1] Gazetteer of the Bombay Presidency Vol. XXII, Dharwar (1884), p. 613 - 21

ವದೇನಂದರೆ, ಅವಶ್ಯಕವಿದ್ದಲ್ಲಿ ಕನ್ನಡ ಶಾಲೆಗಳಲ್ಲಿಯೂ ಮಹಾರಾಷ್ಟ್ರ ಭಾಷೆಯನ್ನು, ಮಹಾರಾಷ್ಟ್ರ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು, ಯೆರಡನೇ ಭಾಷೆಯೆಂದು ತಿಳಿದು ಕಲಿಸಬಹುದು. ಇನ್ನು ಮುಂದೆ ಯಾವ ಶಾಲೆಯಲ್ಯಾದರೂ ಈ ಯೆರಡು ಭಾಷೆಗಳ ಪೈಕಿ ಇಂಥದೊಂದು ಗೊತ್ತಿಲ್ಲೆಂಬ ಹಾಗೆ ಆಗಬಾರದು. ಆದರೆ ಹಿಂದೆ ಹುಕುಮು ಮಾಡಿದ ಮೇರಿಗೆ, ಸ್ಟ್ಯಾಂಡರ್ಡಗಳ ಪ್ರಕಾರ ಶಾಲೆಗಳನ್ನು ಪರೀಕ್ಷಿಸುವಾಗ ಮಹಾರಾಷ್ಟ್ರ ಶಾಲೆಯಲ್ಲಿ ಮಹಾರಾಷ್ಟ್ರ ಭಾಷೆಯೇ, ಕನ್ನಡು ಶಾಲೆಯಲ್ಲಿ ಕನ್ನಡು ಭಾಷೆಯೇ ದೇಶಭಾಷೆಯೆಂದು ತಿಳಿಯಲಾದೀತು. ಎರಡನೇದು ಅನ್ಯಭಾಷೆಯೆಂದು ತಿಳಿದು, ಅದರಲ್ಲಿ ಸ್ಟಾಂಡರ್ಡಗಳಂತೆ ಪರೀಕ್ಷೆಯು ತೆಗೆದುಕೊಳ್ಳಲ್ಪಡಲಿಕ್ಕಿಲ್ಲ.

ಈ ಹುಕುಮು ಪ್ರಸಿದ್ಧವಾದ ನಂತರ ಈ ದಕ್ಷಿಣ ಭಾಗದ ಯೆರಡು ದೇಶಭಾಷೆಗಳಲ್ಲಿ ಒಂದನ್ನು ಕುರಿತು ದುರ್ಲಕ್ಷ್ಯವಾಯಿತೆಂಬುದಾಗಿ ಯೆಲ್ಲಿಯೂ ಬೊಬ್ಬಾಟ ವುಳಿಯಲಿಕ್ಕಿಲ್ಲವೆಂದು ನಾವು ಕೋರುತ್ತೇವೆ.

೧ನೇ ಜನವರಿ ೧೮೬೯ನೇ ಇಸವೀ
(ಸಹಿ) ಡಬ್ಲ್ಯು. ಎ. ರಸೆಲ್
ಇ.ಇ., ದಕ್ಷಿಣ ಭಾಗ."

ಈ ಕಡೆಯ ಬ್ರಾಹ್ಮಣರು ಮರಾಠಿ ಪತ್ರಿಕೆಗಳನ್ನೇ ಓದುತ್ತಿದ್ದರೆಂದು ಹೇಳಿದೆಯಷ್ಟೆ. ಪ್ರಾಯಶ: ಕನ್ನಡವನ್ನು ಆ ಕಾಲದಲ್ಲಿ ಉಳಿಸಿದವರು ವೀರಶೈವರು. ಅವರು ನಡೆಸುತ್ತಿದ್ದ ಪ್ರತಿಯೊಂದು ಮಠವೂ ಒಂದು ಕನ್ನಡ ಶಾಲೆಯೇ ಆಗಿತ್ತು. ೧೮೮೦ರ ವರೆಗೆ ಪ್ರತಿಯೊಂದು ಹಳ್ಳಿಯಲ್ಲಿಯೂ ವೀರಶೈವರದೊಂದು ಶಾಲೆಯು ಕಣ್ಣಿಗೆ ಬೀಳುತ್ತಿತ್ತೆಂದು ಸರ್ ನಾರಾಯಣ ಚಂದಾವರಕರರು ಬರೆದಿರುವರು. ಅದಕ್ಕೂ ಮೊದಲು ಅಂದರೆ ೧೮೩೦ರ ವರೆಗೆ ಪ್ರತಿಯೊಂದು ವೀರಶೈವ ಮಠವೂ ಶಾಲೆಯೇ ಆಗಿರುತ್ತಿತ್ತು.[೧]

ವಿಜಾಪುರ ಜಿಲ್ಲೆಯಿಂದ (ಅಂದಿನ ಕಲಾದಗಿ ಜಿಲ್ಲೆ) ಹೊರಟ ಮೊಟ್ಟ ಮೊದಲಿನ ಪತ್ರಿಕೆ 'ಓತೇಚ್ಛು' ಕನ್ನಡ ಭಾಷೆಯದಲ್ಲ; ಮರಾಠಿ ಭಾಷೆಯದು. ಈ ಪರಿಸ್ಥಿತಿ ಸುಮಾರು ೧೯೨೦ರ ವರೆಗೂ ಹಾಗೆಯೇ ಸಾಗಿತು. ವಿಜಾಪುರದ ಸಾರ್ವಜನಿಕ ವಾಚನಾಲಯದಲ್ಲಿ ೧೯೧೭ನೆಯ ಇಸವಿಯಲ್ಲಿ ೩೦೦೦ ಪುಸ್ತಕಗಳಿದ್ದು, ಅವುಗಳಲ್ಲಿ ಕೇವಲ ೩೦೦ ಮಾತ್ರ ಕನ್ನಡ ಪುಸ್ತಕಗಳಾಗಿದ್ದವು. ಕನ್ನಡ ಪುಸ್ತಕಗಳನ್ನು ಕೊಳ್ಳದಿರಲು ಮರಾಠಿ ಆಡಳಿತಗಾರರು ಕೊಟ್ಟ ಉತ್ತರವೆಂದರೆ, ಕನ್ನಡ ಪುಸ್ತಕಗಳನ್ನು ಓದಲು ವಿಜಾಪುರದವರಿಗೆ ಆಸ್ಥೆ ಇಲ್ಲವೆಂದು. ೧೯೧೭ರ ವರೆಗೆ ವಿಜಾಪುರದ ಗಂಡು ಮಕ್ಕಳೆಲ್ಲ ಕನ್ನಡ ಶಾಲೆಗೆ ಹೋಗುತ್ತಿದ್ದರು; ಹೆಣ್ಣು ಮಕ್ಕಳೆಲ್ಲ ಮರಾಠಿ ಶಾಲೆಗೆ ಹೋಗುತ್ತಿದ್ದರು. ಅವರಿಗೆ ಕನ್ನಡ ಕಲಿಸುವ ಏರ್ಪಾಡೂ ಇರಲಿಲ್ಲ. ಈ ಮರಾಠಿ ಶಾಲಾ ಕಟ್ಟಡವು ಸುಂದರವೂ ಆಕರ್ಷಕವೂ ಆಗಿದ್ದು, ಅದರ ಹೆಡ್‌ಮಿಸ್ಟ್ರೆಸ್‌ಗೆ ಆ ಕಾಲದಲ್ಲಿ ಪ್ರತಿ ತಿಂಗಳು ರೂಪಾಯಿ ೪೦ ಪಗಾರವಿದ್ದಿತು. ೧೦೦ಕ್ಕೆ ೯೦ರಷ್ಟು ಶುದ್ಧ ಕನ್ನಡ ಜನರಿದ್ದ ಊರಿನವರು ತುಂಬಾ ಶಕ್ತಿಯುತವಾಗಿ ಪ್ರತಿಭಟಿಸಿದಾಗ, ಮರಾಠಿ ಶಾಲೆಯಲ್ಲಿ ಒಂದು ಕನ್ನಡ ವರ್ಗವನ್ನು ಪ್ರಾಯೋಗಿಕವಾಗಿ ೧೯೧೭ನೆಯ ಇಸವಿಯಲ್ಲಿ ತೆರೆದು, ಸಾಕಷ್ಟು ಸಂಖ್ಯೆ ಇಲ್ಲವೆಂದು ಮರುವರುಷವೇ ಅದನ್ನು ಬಂದು ಮಾಡಲಾಯಿತು. ವಿಜಾಪುರ

೧ ಜಯ ಕರ್ನಾಟಕ : ೧೯-೪-೧೯೨೪ – ಪು. ೪೭೨.

ಸಾರ್ವಜನಿಕ ಸಭೆಯಲ್ಲಿ ಶ್ರೀ ಜೆ. ಎಂ. ದೇಶಪಾಂಡೆಯವರು ೧೯೧೭ರಲ್ಲಿ ಪ್ರಥಮತಃ ಕನ್ನಡದಲ್ಲಿ ಮಾತಾಡಿದಂತೆ ಕಂಡುಬರುತ್ತದೆ. ಕನ್ನಡದ ಈ ವಿಪನ್ನಾವಸ್ಥೆ ಮತ್ತು ಮರಾಠಿಯ ವಿರಾಟಿಕೆಯನ್ನು ಕುರಿತು ೪-೯-೧೯೧೭ರ 'ಕರ್ನಾಟಕ ವೈಭವ' ತನ್ನ ಸಂಪಾದಕೀಯದಲ್ಲಿ ಹೀಗೆ ಬರೆದಿದೆ :

" . . . . from the existing condition of the library one thing is quite certain that the literary taste of Bijapur has taken a direction, which is injurious to the growth of Bijapurians as a Kanarese speaking people. If the state of things that is prevalent now continues for some time more, Bijapur will lose its claim to be called a Kanarese district . . . ."

ವಿಜಾಪುರ ಸಾರ್ವಜನಿಕ ವಾಚನಾಲಯದ ಅವಸ್ಥೆ ಇದು. ಕನ್ನಡ ಪುಸ್ತಕಗಳ ಹತ್ತು ಪಟ್ಟು ಮರಾಠಿ ಪುಸ್ತಕಗಳ ಬಗೆಗೆ ವೆಚ್ಚ ಮಾಡಲಾಗುತ್ತಿತ್ತು. ಇಂಥ ವೈಪರೀತ್ಯದ ಬಗೆಗೆ ಮೊದಲಿಗೆ ಸ್ಪಷ್ಟವಾಗಿ ಕೆಡೆನುಡಿದವರು ಮಿಸ್ಟರ ಆರ್. ಸಿ. ಬ್ರೌನ ಎಂಬ ಜಿಲ್ಲಾ ಕಲೆಕ್ಟರರು.

"One of the standing grievances of the Kanarese people in this city is the necessity of a Kanarese Girls' School in its centre. The absurdity of teaching Marathi to the Kanarese girls attending the Victoria Memorial Girls' School and the disproportionate expenditure incurred by the Municipality over this item was for the first time pointed out to the Municipality by Mr. R. C. Brown, when he was Collector of this place."

ಈ ಪರಿಸ್ಥಿತಿಗೆ ಕಾರಣ : ಈ ಭಾಗವೆಲ್ಲ ಪೇಶ್ವೆ ಆಳ್ವಿಕೆಗೆ ಕೊನೆ ಕೊನೆಗೆ ಸೇರಿದುದು ಹಾಗೂ ಕನ್ನಡಿಗರ ಅಭಿಮಾನಶೂನ್ಯತೆ. ಅಲ್ಲದೆ, ೬-೧೧-೧೭ರ 'ವೈಭವ' ಹೇಳಿದ ಹಾಗೆ : "ಮ್ಯುನಿಸಿಪಾಲ್ಟಿಯವರೂ ಇಲ್ಲಿಯ ಮುಖಂಡರೆನ್ನಿಸಿಕೊಳ್ಳುವವರೂ ಅಧಿಕಾರಸ್ಥರೂ ಮರಾಠಿಗರೇ ಆದುದರಿಂದ ಇದು ಹಿಂದು ಬೀಳಲಿಕ್ಕೆ ಒಂದು ಕಾರಣವಾಯಿತೆಂದು ಹೇಳಲು ಅಡ್ಡಿಯಿಲ್ಲ. ಅಲ್ಲದೆ ಈ ವರೆಗಿನ ಎಜ್ಯುಕೇಶನಲ್ ಇನ್ಸಪೆಕ್ಟರರು ಕೊಂಕಣಸ್ಥರೇ ಇದ್ದದರಿಂದ ನಮ್ಮ ಕರ್ನಾಟಕಕ್ಕೆ ಹಾನಿ ತಟ್ಟಿತು. ಕರ್ನಾಟಕದಲ್ಲಿ ಕನ್ನಡ ಶಾಲೆಗಳನ್ನಿಡಬೇಕೆಂದು ಕನ್ನಡಿಗರು ಬಡಿದಾಡಬೇಕಾಯಿತು. ಒಮ್ಮೆ ವೆಂಕಟರಂಗೋ ಕಟ್ಟಿಯವರು ಮನೆಯ ದೀಪವೆಂದು ಮುದ್ದಿಡಲಿಕ್ಕೆ ಬರುವದಿಲ್ಲ ಎಂದು ಅಗ್ರಲೇಖವನ್ನು ಬರೆದದ್ದು ಹಲವರು ಓದಿರಬಹುದು . . . ."

ಈ ಶಾಲೆಯಲ್ಲಿ ಮರಾಠಿಯ ಕೋಲಾಹಲದ ಬಗೆಗೆ ಶ್ರೀ ಕೆ. ವಾಸುದೇವಾಚಾರ್ಯರು ತಮ್ಮ 'ಶುಭೋದಯ'ದಲ್ಲಿ ತಮ್ಮದೇ ಆದ ಶೈಲಿಯಲ್ಲಿ ಬರೆದರು :

"ವಿಜಾಪುರ ಜಿಲ್ಲೆಯೆಂಬದೊಂದು ಪ್ರಾಂತವು ಕರ್ನಾಟಕದ ಮಧ್ಯದಲ್ಲಿರುವದು. ಆ ಪ್ರಾಂತದ ಮಧ್ಯದಲ್ಲಿರುವ ವಿಜಾಪುರವೆಂಬ ಊರಾದರೂ ಕರ್ನಾಟಕವಲ್ಲಿಯೇ ಇರುವದೆಂಬದನ್ನು ವ್ಯಾಪವ್ಯಾಪಕ ವಿಚಾರದಿಂದ ನೋಡಿದರೆ ನಿರ್ವಿವಾದವಾಗಿ ಸಿದ್ಧವಾಗುವದು. ಆ ಊರಲ್ಲಿಯ ಒಕ್ಕಲಿಗರೆಲ್ಲರೂ ಕನ್ನಡಿಗರು. ಅಲ್ಲಿರುವ ವ್ಯಾಪಾರ ಉದ್ದಿಮೆಯವರೆಲ್ಲರೂ ಆಡುವ ಮಾತು ಕನ್ನಡವಲ್ಲದೆ ಮತ್ತೊಂದಿಲ್ಲ. ಅಲ್ಲಿಯ ದೇಸಾಯಿ, ದೇಶಪಾಂಡೆಯರು, ಗೌಡ ಕುಲಕರ್ಣಿಯರು, ಆಯಗಾರ ಕೂಲಿಗಾರರೂ, ಭಟ್ಟ ಭಿಕ್ಷುಕರೂ, ಇನ್ನುಳಿದ ಸುಖವಸ್ತಿಯರೂ ಎಲ್ಲರೂ ಕನ್ನಡಿಗರೇ . . . . .

ಹೀಗಿದ್ದರೂ ಹಿಮಾಲಯದಲ್ಲಿಯೇ ಜ್ವಾಲಾಮುಖಿಯೆಂಬಂತೆ ಕನ್ನಡ ನುಡಿಯ ನಡುಮನೆಯಲ್ಲಿ ಮರಾಠಿ ಭಾಷೆಯು ಹೊಕ್ಕುಕೊಂಡು ಕನ್ನಡ ನುಡಿಗೆ ಎದ್ದಲಗಾಟ ಕೊಟ್ಟಿರುವದೆಂಬ ವಿಪರೀತವಾದ ಮಾತು ಕೇಳಿ ಯಾರಿಗೆ ಸಖೇದವಾದ ಆಶ್ಚರ್ಯವಾಗಲಿಕ್ಕಿಲ್ಲ? . . . ಎಲ್ಲವ್ವನ ಜಾತ್ರೆಯಲ್ಲಿ ಮುಲ್ಲಾನ ಅಧಿಷ್ಠಾನವೆಂಬಂತೆ ಅಲ್ಲಿಯ ಕಸ್ಬಾಶಾಲೆಯಲ್ಲಿ ಮರಾಠೀ 'ಮಾಲೀ' ಜನರು ಸೇರಿಕೊಂಡು ಬಿಟ್ಟಿರುವರು. ಇಷ್ಟೆಲ್ಲ ಅನಾವಸ್ಥೆಗೆ ಕಾರಣವೇನೆಂದು ಯಾರಾದರೂ ಕುತೂಹಲದಿಂದ ಪ್ರಶ್ನೆ ಮಾಡಬಹುದು. ಪ್ರಸ್ತ ಮಾಡಿಸುವ ಯಜಮಾನನು ಒಕ್ಕಲಿಗನು. ಅಡಿಗೆ ಮಾಡುವವರೂ ಉಣ್ಣುವವರೂ ಬ್ರಾಹ್ಮಣರಾಗಿದ್ದ ಪಕ್ಷದಲ್ಲಿ ಹಾಳಾಗುತ್ತಿರುವದಕ್ಕೆ ಮಿತಿಯೇ? ತಂಗಳ ರೊಟ್ಟಿಯನ್ನು ಸೋಟೆ ಹರಿಯುವಂತೆ ಕಟೆದು ಬಂದು ಆ ಮತಿಮಂದನಾದ ಒಕ್ಕಲಿಗನು ತುಪ್ಪ, ಸಕ್ಕರೆ, ಬದಾಮ, ಕೇಶರಗಳ ಕೊಲೆ ಮಾಡುತ್ತಿರುವ ಬ್ರಾಹ್ಮಣರಿಗೆ ಕೈಜೋಡಿಸಿ 'ಸಂತೋಸರೇ!' ಎಂದು ಕೇಳುತ್ತಿರುವದನ್ನು ಎಲ್ಲರೂ ಬಲ್ಲರು. ಹಾಗೆಯೇ ನಾವು ಮತಿಮಂದರಾದ ಕರ್ನಾಟಕಸ್ಥರ ಗತಿಯಾಗಿದೆ. ಕೆಲಕಾಲದ ಹಿಂದೆ ವಿಜಾಪುರದಲ್ಲಿಯ ಸರಕಾರೀ ಕಾಮಗಾರರೆಲ್ಲ ಮರಾಠಿಮಾತಾಡುವ ಜನರೇ ಆಗಿದ್ದರು. ಆ ಕಾಲದಲ್ಲಿ ಅಧಿಕಾರೀ ಜನರಿಗೆ ಜನರೆಲ್ಲರೂ ಅಂಜಿ ಗದಗದನೆ ನಡುಗುವರು. ಅದಕ್ಕಾಗಿ ಬಾಪೂಸಾಹೇಬ, ನಾನಾಸಾಹೇಬ ಪೇಠೆ, ಬಾಜಾರೆ, ಕಾಳೇ, ಗೋರೇ, ಖರೆ, ಖೋಟೆ ಮುಂತಾದ ಜನರೇ ಅಧಿಕಾರದ ಬಲದಿಂದ ನಮ್ಮನ್ನು ಆಳಿಕೊಂಡರು. ನಮ್ಮಲ್ಲಿ ಪ್ರಮುಖರೆಂಬವರು ಅಭಿಮಾನ ಶೂನ್ಯರಾಗಿ ಸ್ವಭಾಷೆ, ಸ್ವಾಚಾರಗಳನ್ನು ನಿಂದಿಸಿ ಮರಾಠೀ ಜನರ ಆಚರಣಗಳನ್ನೂ ಅವರ ಭಾಷೆಯನ್ನೂ ಡುಬ್ಬದ ಮೇಲೆ ಹೊತ್ತುಕೊಂಡು ಡೊಗ್ಗಿ ನಿಂತುಕೊಂಡರು. 'ಜಹಾ ಝಾಲಾ ಕಾಯ್? ಥೋಡೇಸೆ ಇಕಡೆ ಯಾ! ಫಾರ್ ಉತ್ತಮ್' ಎಂಬ ಮರಾಠಿ ವಾಕ್ಯಗಳನ್ನಾಡಿ ಸಂಜ್ಞಾ ಮಾತ್ರದಿಂದ ಅಭಿಪ್ರಾಯಗಳನ್ನರಿತುಕೊಂಡವರಾದ ಹೆಂಡರನ್ನು ವಿನೋದಗೊಳಿಸಿ ಸಂತೋಷದಿಂದ ನಕ್ಕರು.''

ಐತಿಹಾಸಿಕ ಕಾರಣಗಳ ಮೂಲಕ ಪೇಶ್ವೆಯರು ಬ್ರಿಟಿಶರ ಕೂಡ ಕೊನೆಯವರೆಗೆ ಹೋರಾಡಿದ್ದರಿಂದ ರಾಜಕೀಯ ಸತ್ತೆಯ ಅರಿವು ಮರಾಠಿಗರಲ್ಲಿ ಜಾಗೃತವಾಗಿ ಉಳಿಯಿತು. ಮುಂಬಯಿ ಮೊದಲಾದ ಪ್ರಮುಖ ಬಂದರುಸ್ಥಳಗಳ ಸಮೀಪವೇ ಮರಾಠಿ ರಾಜ್ಯವಿದ್ದುದರಿಂದಲೂ, ಮರಾಠಿಗರು ಬ್ರಿಟಿಶ ಸಂಪರ್ಕದ ಲಾಭವನ್ನು ಯಥೇಚ್ಛವಾಗಿ ಪಡೆದರು. ಬ್ರಿಟಿಶ ಸತ್ತೆ ಭಾರತದಲ್ಲಿ ನೆಲೆಸುವುದರಲ್ಲಿಯೇ ಮರಾಠಿಗರು ಇಂಗ್ಲಿಷ ಭಾಷೆಯ ಅಧ್ಯಯನವನ್ನು ಸ್ವೀಕರಿಸಿ ಇಂಗ್ಲಿಷ ಮತ್ತು ಇತರ ಪಾಶ್ಚಿಮಾತ್ಯ ಶಿಕ್ಷಣದಲ್ಲಿ ಮುಂದಾದರು. ಬಂಗಾಲಿಗಳದೂ ಹೀಗೇ ಆಯಿತು. ಆದರೆ, ದುರ್ದೈವದಿಂದ ಕರ್ನಾಟಕಕ್ಕೆ ಈ ಲಾಭ ಸಿಗಲಿಲ್ಲ. ಆದ್ದರಿಂದ ಕನ್ನಡಿಗರು ಬಿ.ಎ.,ಎಲ್‌ಎಲ್.ಬಿ. ಯಂಥ ಸಾಮಾನ್ಯ ಡಿಗ್ರಿಗಳನ್ನು ಪಡೆಯಬೇಕಾದರೂ ಪುಣೆಗೋ, ಮುಂಬಯಿಗೋ ಅಥವಾ ಮದ್ರಾಸಕ್ಕೋ ಹೋಗಬೇಕಾಗುತ್ತಿತ್ತು. ಧಾರವಾಡದಲ್ಲಿ ಕರ್ನಾಟಕದ ಹೆಸರನ್ನು ಹೇಳಿ ಕರ್ನಾಟಕ ಕಾಲೇಜು ಪ್ರಾರಂಭವಾದದ್ದು ೧೯೧೭ರಲ್ಲಿ, ಈ ಕಾಲೇಜಿನ ಮೊದಲಿನ ಪ್ರಾಧ್ಯಾಪಕರೆಲ್ಲರೂ ಹೆಚ್ಚಾಗಿ ಮರಾಠಿಯರೋ, ಪರಪ್ರಾಂತದವರೋ ಆಗಿದ್ದರು. ಅಲ್ಲಿಯವರೆಗೆಲ್ಲ ಆರೇ ಅರಸ, ಕನ್ನಡ ಕೊರಸ ಎಂಬ ಹೀನಗಂಡ ಭಾವನೆ ಕನ್ನಡಿಗರಲ್ಲೆಲ್ಲ ವ್ಯಾಪಿಸಿತ್ತು. ಕನ್ನಡರ ಈ ದುಸ್ಥಿತಿಯನ್ನು ಮನದಟ್ಟಾಗಿ ವರ್ಣಿಸುವ ಉಲ್ಲೇಖ ೧೮೬೧ನೆಯ ಇಸವಿಯ 'ಕನ್ನಡ ಜ್ಞಾನಬೋಧಕ'ದಲ್ಲಿ ಪ್ರಕಟವಾಗಿದೆ. 'ಕನ್ನಡ ಜ್ಞಾನಬೋಧಕ'ದ ಮೊದಲನೆಯ ಸಂಚಿಕೆ ೧೮೬೧ನೆಯ ವರ್ಷದ ನವೆಂಬರ ತಿಂಗಳಲ್ಲಿ ಪ್ರಕಟವಾಯಿತು. ಇದು ಬೆಳಗಾವಿಯಲ್ಲಿ ಸ್ಥಾಪಿತವಾದ 'ಕನ್ನಡ ಭಾಷೆಯಲ್ಲಿ ಪುಸ್ತಕ ಪ್ರಸಿದ್ಧ ಮಾಡುವ ಮಂಡಲಿ'ಯ ಆಶ್ರಯದಲ್ಲಿ ಅದರ ಅಪ್ಪಣೆಯ ಪ್ರಕಾರ ಪ್ರಕಟಿಸಲ್ಪಟ್ಟಿತು. ಈ ಪತ್ರಿಕೆಯನ್ನು ಧಾರವಾಡದ ಗೋವಿಂದ ಪ್ರಭಾಕರ ಜೋಶಿಯವರ ಸನ್ಮಾರ್ಗದರ್ಶಕ ಛಾಪಖಾನೆಯಲ್ಲಿ ಕಲ್ಲಚ್ಚಿನ ಮೇಲೆ ಮುದ್ರಿಸಲಾಯಿತು. ೧೮೬೧ರ ಸುಮಾರಿನ ಕನ್ನಡಿಗರ ಶಿಕ್ಷಣದ ದುರ್ದೆಶೆಯನ್ನು

ವಿವರಿಸುವ ಈ ಅಂಶ ಪತ್ರಿಕೆಯ ಎರಡನೆಯ ಸಂಚಿಕೆಯಲ್ಲಿ ಪ್ರಕಟವಾಗಿದೆ. ಅದರ ವಿವರ ಹೀಗೆ. ಇದರಿಂದ ಆ ಕಾಲದ ಬರವಣಿಗೆಯ ಕನ್ನಡದ ರೀತಿಯನ್ನೂ ಕಾಣಬಹುದಾಗಿದೆ :

"ಮುಂಬಯಿ ಜಿಲ್ಹಾಖೆಯೊಳಗೆ ಇರುವ ಕನ್ನಡ ಮಾತಾಡುವ ಜನರೊಳಗೆ ಇಂಗ್ರಜಿ ಭಾಷೆಯನ್ನು ಕಲಿತವರು ಅನೇಕರು ಇಲ್ಲ. ಆದರೆ ಮಹಾರಾಷ್ಟ್ರ ಮತ್ತು ಗುಜರಾಥಿ ಮಾತಾಡುವವರೊಳಗೆ ನೋಡಲಿಕ್ಕೆ ಕೂತರೆ ಯಷ್ಟೋ ಜನರು ಇಂಗ್ರಜಿ ಭಾಷೆಯ ಅಭ್ಯಾಸ ಚನ್ನಾಗಿ ಮಾಡಿ ತಮ ಸ್ವಭಾಷೆಯೊಳಗೆ ಉಪಯುಕ್ತವಾದ ವಿಷಯಗಳ ಮೇಲೆ ಅನೇಕ ಗ್ರಂಥಗಳನ್ನು ಬರಿದವರು ಇದ್ದಾರೆ. ಆದರೆ ಇನ್ನುವರೆಗೂ ಕನ್ನಡ ಮಾತನಾಡುವ ಜನರೊಳಗೆ ಹೇಳಿಸಿಕೊಂಬುವಷ್ಟು ಶ್ಯಾಹಣೆರು ಯಾರು ಆಗಿಲ್ಲ. ಮತ್ತು ಇದೇ ಕಾರಣದಿಂದಲೆ ಇನ್ನೂ ತನಕ ಕನ್ನಡ ಭಾಷೆಯೊಳಗೆ ಬಹಳ ಗ್ರಂಥಗಳು ಆಗಿಲ್ಲ. ಆದರ ದೆಸೆಯಿಂದ ಇತ್ತ ಕಡಿಯಿಂದ ೧೦ ಮಂದಿಯನ್ನು ಪುಣೆ ಪಾಠಶಾಲೆಯೊಳಗೆ ಕಳುಹಿಸಿ ತಿಂಗಳು ತಿಂಗಳಿಗೆ ಪಗಾರು ಕೊಟ್ಟು ಇಂಗ್ರಜ ವಿದ್ಯವನ್ನು ಚನ್ನಾಗಿ ಕಲಿಸಿ ಅವರಿಗೆ ದೊಡ್ಡ ದೊಡ್ಡ ಕೆಲಸಗಳನ್ನು ಕೊಡಬೇಕೆಂದು ಸರಕಾರದವರ ಮನಸ್ಸಿನಲ್ಲಿ ಅದೆ. ಅದರ ದೆಸೆಯಿಂದ ಕನ್ನಡ ಮಾತಾನಾಡುವ ಜನರೊಳಗೆ ೧೬ ರಿಂದ ೧೯ ವರ್ಷದ ತನಕ ವಯಸಿನವರು ಧೊಳ್ಳೆ ಪ್ರಕೃತಿಯವರಿದ್ದು ಪುಣೆಕ್ಕೆ ಹೋಗಿ ಅಭ್ಯಾಸ ಮಾಡಬೇಕೆಂದು ಮನಸ್ಸುಳ್ಳವರು ತಂಮ ತಂಮ ಹೆಸರು, ವಯ, ಜಾತಿ ಇವೆಲ್ಲ ಬರಿದು ಬೆಳಗಾವಿಯ ಡೆಪ್ಯುಟಿ ಯೆಜ್ಯುಕೇಶನಲ ಇನಸ್ಪೆಕ್ಟರರಾದ ಮಹದೇವ ವಾಸುದೇವರ ಕಡಿಗೆ ಇಲ್ಲವೆ ದಕ್ಷಿಣ ಭಾಗದ ಇನಸ್ಪೆಕ್ಟರರಾದ ಕ್ಯಾಪಟನ ಲೆಸ್ಟರ್ ಸಾಹೇಬರ ಕಡಿಗೆ ಕಳುಹಿಸಿಕೊಡತಕ್ಕದ್ದು ಬೇಕು. ಮತ್ತು ತಂಮ ಅರ್ಜಿಯ ಸಂಗಡ ತಾವು ಕಲಿತ ಸಾಲಿ ಪಂತೋಜಿಯವರ ಕಡಿಯಿಂದ ಚಲುನಡತಿಯ ವಿಷಯಕ್ಕೆ ಸರಟಿಫಿಕೇಟ ಸಹ ಕಳುಹಿಸಬೇಕು. ಅಂದರೆ ಅದರೊಳಗೆ ಬುದ್ಧಿವಂತರಾಗಿರು ೧೦ ಮಂದಿಯನ್ನು ನೇಮಿಸಿ ಪಗಾರು ಠರಾವು ಮಾಡಿ ಪುಣೆಕ್ಕೆ ಕಳುಹಿಸಿಕೊಡುವರು. ಅಲ್ಲಿ ಅವರು ಹೋಗಿ ಪಾಠಶಾಲೆಯೊಳಗೆ ಅಭ್ಯಾಸ ಚಲು ಮಾಡಲಿಕ್ಕೆ ಹತ್ತಿದರೆ ಮುಂದೆ ಅವರಿಗೆ ಇಡಲ್ಪಡುವದು. ಇದರ ವಿಷಯಕ್ಕೆ ಹೆಚ್ಚಿಗೆ ಮಜಕೂರು ತಿಳಿದುಕೊಳ್ಳುವದಕ್ಕೆ ಮನಸ್ಸುಳ್ಳವರು ಸದರ ಗೃಹಸ್ಥರಿಗೆ ಅರ್ಜಿ ಮಾಡಬೇಕು.

ತಾ. ೭ ಡಿಸೆಂಬರ ೧೮೬೧ (ಸಹಿ) ಕ್ಯಾಪಟನ ಲೆಸ್ಟರ
ಸ್ವಾರಿ ಮುಕ್ಕಾಮ ಸೊಲ್ಲಾಪೂರ ಯೆಜ್ಯುಕೇಶನಲ್ ಇನಸ್ಪೆಕ್ಟರ
ದಕ್ಷಿಣ ಭಾಗ.[೧]

ಹೀಗೆ ಪುಣೆಕ್ಕೆ ಹೋಗಿ ಬಂದವರು ತಮ್ಮ ಜತೆಗೆ ಮರಾಠಿ ಗಾಳಿ ಮತ್ತು ಸಂಸ್ಕೃತಿಗಳ ಪ್ರಭಾವವನ್ನೂ ಹೊತ್ತುಕೊಂಡು ಬಂದು ಆದೇರಿ ಆಗುತ್ತಿದ್ದರೆಂದು ಬೇರೆ ಹೇಳುವ ಕಾರಣವಿಲ್ಲ. ಇಂಗ್ಲಂಡಕ್ಕೆ ಹೆಚ್ಚಿನ ಅಭ್ಯಾಸಕ್ಕಾಗಿ ಹೋದವರು ಥೇಮ್ಸ ನದಿಯ ದಂಡೆಯ ಮೇಲೆಯೇ ತಮ್ಮ ಆತ್ಮವನ್ನು ಮರೆತು ಬಿಟ್ಟು ಬಂದ ಹಾಗೆ, ಪುಣೆಗೆ ಹೋದವರ ಆತ್ಮ ಮುಳಾಮುಠಾ ಸಂಗಮವನ್ನು ಬಿಟ್ಟು ತಿರುಗಿ ಬರುತ್ತಿರಲೇ ಇಲ್ಲ. ಪುಣೆಯಲ್ಲಿ ಅಗಸರೊಗೆದ ವಸ್ತ್ರಗಳು ಸ್ವಚ್ಛವಾಗುತ್ತಿದ್ದವೆಂದು ಬಗೆದ ಧಾರವಾಡದ ಶ್ರೀಮಂತ ಜಹಾಗೀರದಾರರು ತಮ್ಮ ವಸ್ತ್ರಗಳನ್ನೊಗೆಯಲಿಕ್ಕೆ ಪುಣೆಯಿಂದಲೇ ಒಬ್ಬ ಅಗಸನನ್ನು ಕರೆಸಿದ್ದರಂತೆ. ವಸ್ತ್ರದ ಸ್ವಚ್ಛತೆ ನೀರಿನ ಗುಣವನ್ನೂ ಅವಲಂಬಿಸಿರುತ್ತದೆಂಬ ಕಲ್ಪನೆ ಇನ್ನೂ ಬಹಳ ದೂರದ ಮಾತಾಗಿತ್ತು.

೧ ಟಿ. ಟಿ. ಶರ್ಮ – ಕನ್ನಡ ನುಡಿ, ಸಪ್ಟೆಂಬರ ೧೯೩೮.

ಮಹಾರಾಷ್ಟ್ರರ ಸ್ವಭಾವ ಸಹಜವಾದ ಏರಾಳಿಯ ಮನೋಧರ್ಮವೂ ಈ ಮರಾಠಿ ಹೆಚ್ಚಳಕ್ಕೆ ಕಾರಣವಾಯಿತು. ಮರಾಠಿಯ ಸಂತಶ್ರೇಷ್ಠರಾದ ಸಮರ್ಥ ರಾಮದಾಸರು ತಮ್ಮ ಪದ್ಯವೊಂದರಲ್ಲಿ ಹೀಗೆ ಹೇಳಿದ್ದಾರೆ :

"ಮರಾಠಿ ತಿತುಕಾ ಮೇಳವಾವಾ – ಮಹಾರಾಷ್ಟ್ರ ಧರ್ಮವಾಢವಾವಾ"

"ಮಹಾರಾಷ್ಟ್ರದವರೆಲ್ಲರೂ ಒಂದಾಗಬೇಕು;
ಮಹಾರಾಷ್ಟ್ರ ಧರ್ಮವನ್ನು ಅಭಿವೃದ್ಧಿಗೊಳಿಸಬೇಕು."

– ತಾತ್ವಿಕವಾಗಿ ಈ ಮಾತು ಏನೇ ಇರಲಿ; ಉತ್ತರ ಕರ್ನಾಟಕದಲ್ಲಿ ನೆಲೆಸಿದ್ದ ಮರಾಠಿ ಅಧಿಕಾರಿಗಳು ಮಾತ್ರ ಈ "ಮಹಾರಾಷ್ಟ್ರ ಧರ್ಮವಾಢವಾವಾ" ಎಂಬ ಸಂದೇಶವನ್ನು ಅಕ್ಷರಶಃ ಪಾಲಿಸಿದರು.

ಅಭ್ಯಾಸ ಕ್ರಮದಲ್ಲಿಯೂ ಸಹ ಕರ್ನಾಟಕ ಇತಿಹಾಸ, ಸಾಹಿತ್ಯಗಳ ಅಭ್ಯಾಸಕ್ಕೆ ಅನುಕೂಲವೇ ಇರಲಿಲ್ಲ. ಉದಾಹರಣೆಗೆ ೧೮೬೭ರಲ್ಲಿ ಪ್ರಕಟವಾದ ಪಠ್ಯಕ್ರಮದಲ್ಲಿ ಈ ರೀತಿ ಇದೆ :

ಃನೇ ಪ್ರತಿ

ಆಂಗ್ಲೋ ಕನ್ನಡ ಸಾಲೆಗಳಲ್ಲಿ ಇಂಗ್ಲಿಷ ಕಲಿಯುವದಕ್ಕೆ ಆರಂಭ ಮಾಡುವ ಹುಡುಗರು ಕೊಡತಕ್ಕ ಪರೀಕ್ಷಾ :

೧ನೇ ಹೆಡ್ಡು – ಪೂರ್ಣಾಂಕ ತ್ರೈರಾಶಿತನಕ ೧೦೦

೨ನೇ ಹೆಡ್ಡು – ಕಥಾಸಂಗ್ರಹದ ಮೊದಲನೇ ಭಾಗವನ್ನು ಓದಿ ಅರ್ಥವನ್ನು ಹೇಳೋಣ ಮತ್ತು ಸಣ ಸಣ ಸುಲಭ ವಾಕ್ಯಗಳ ವ್ಯಾಕರಣ. ೧೦೦

೩ನೇ ಹೆಡ್ಡು – ಮೂರನೇ ಪುಸ್ತಕದೊಳಗಿನ ೫ ಪಂಕ್ತಿಗಳನ್ನು ಶುದ್ಧವಾಗಿ ಬರಿಯೋಣ ಮತ್ತು ಪತ್ರಗಳ ಮೇಲಿನ ಪತ್ತೆ ಬರಿಯೋಣ. ೧೦೦

೪ನೇ ಹೆಡ್ಡು – (ಅ) ಮಹಾರಾಷ್ಟ್ರದೇಶದ ವರ್ಣನೆ . . . ೫೦

(ಬ) ಏಶಿಯಾ ಖಂಡದ ನಕಾಶದ ಸಾಧಾರಣ ಮಾಹಿತಿ ೧೦೦

– ಇತ್ಯಾದಿ.

ಶುದ್ಧ ಕನ್ನಡ ವಿಭಾಗವಾದ ಧಾರವಾಡದಲ್ಲಿಯ ಕನ್ನಡ ಶಾಲಾ ನೇಮಕಗಳ ಪ್ರಕಟಣೆಗಳೂ ೧೮೭೭ರ ಸುಮಾರಿಗೆ ಮರಾಠಿಯಲ್ಲಿಯೇ ಹೊರಡುತ್ತಿದ್ದವು. ಅವರಿಗೆ ತಿಳಿಸಬೇಕಾದ ಮಾಹಿತಿಗಳೂ ಮರಾಠಿ ಭಾಷೆಯಲ್ಲಿಯೇ ಇರುತ್ತಿದ್ದವು. ಉದಾಹರಣೆಗೆ :

"ಧಾರವಾಡ ಜಿಲ್ಹ್ಯಾಂತೀಲ ಸರ್ವ ಸ್ಕೂಲ ಮಾಸ್ತರಾಂಸ್ ದಹಾಹೂನ ಜಾಸ್ತೀ ಮುಲೇಂ ದರ ಏಕ ವರ್ಗಾಂತ ಅಸಲೀಂ ಪಾಹಿಜೇತ. ಕಿತ್ಯೇಕ ಶಾಳೇಂತ ದೋನ ಅಗರ ತೀನ ಮುಲಾಂಚಾ ವರ್ಗ ಅಸಲ್ಯಾಚೇಂ ಆಮಚ್ಯಾ ನಜರೇಸ ಆಲೇ ಆಹೇ. ತರಹೀ ಗೈರಶಿಸ್ತ ವಹಿವಾಟ ಏಕದಮ್ ಬಂದ ಕರಾವೀ. ಪ್ರತ್ಯೇಕ ವರ್ಗ ನಿರನಿರಾಳಾ ನ ಬಸವಿತಾಂ ಏಕಾ ಓಳೀಂತಚ ಸರ್ವಮುಲಾಸ ಬಸವಿಣ್ಯಾಚೀ ವಹಿವಾಟ ಕಿತ್ಯೇಕ ಶಾಳೇಂತ ಆಹೇ. ಅಶಾನೇಂ ಅಭ್ಯಾಸ ಕರವಿಣ್ಯಾಸ ಗಡಬಡ

ಹೋವೂನ, ಕೋಣಾಚೇ ವರ್ಗಾಂತ ಕಿತೀ ಮುಲೆಂ ಆಹೇತ ಹೇ ಏಕದಮ್ ಸಮಜತ ನಾಹೀಂ....." ಇತ್ಯಾದಿ. ಇದರ ಲಿಪಿ ಬಾಳಬೋಧ.

ಅಷ್ಟೇ ಅಲ್ಲ ಬುಕ್ ಡಿಪೋಕ್ಕೆ ಬಂದ ಕನ್ನಡ ಪುಸ್ತಕಗಳ ಜಾಹೀರಾತೂ ಸಹ ಮರಾಠಿ ಭಾಷೆಯಲ್ಲಿಯೇ ಇರುತ್ತಿತ್ತು.

ಖಾಲೀ ಲಿಹಿಲೇಲೀಂ ಕಾನಡೀ ಬುಕೇಂ ಬೆಳಗಾಂವ ಬ್ರ್ಯಾಂಚ ಬುಕ್ ಡಿಪೋಂತ ನವೀನ ಆಲೀ ಆಹೇತ ತೀ . . .

ಪುಸ್ತಕಾಂಚೀ ನಾವೇಂ

ವೀರಭದ್ರಯ್ಯಾ ಪಂಡಿತ ಕೃತ ಪಹಿಲೇಂ ಪುಸ್ತಕ . . . ಇಂಗ್ಲಂಡಚಾ ವೃತ್ತಾಂತ.

ಮಹಾರಾಷ್ಟ್ರ ದೇಶಾಂಚೇಂ ವರ್ಣನ

ಕಥಾಸಂಗ್ರಹ ಭಾಗ ೨

ಕಥಾಸಂಗ್ರಹ ಭಾಗ ೩

– ಇತ್ಯಾದಿ.

ಉತ್ತರ ಕರ್ನಾಟಕದಲ್ಲಿಯ ಈ ಮರಾಠಿ ಪ್ರಾಬಲ್ಯವನ್ನು ಕಡಿಮೆ ಮಾಡಿ ಕನ್ನಡಕ್ಕೆ ಯುಕ್ತವಾದ ಸ್ಥಾನವು ದೊರಕಬೇಕೆಂಬ ಆಸ್ಥೆಯಿಂದ ಅನೇಕ ಸಂಘ ಸಂಸ್ಥೆಗಳು, ಕವಿಗಳು, ಲೇಖಕರು, ಪ್ರಯತ್ನಿಸಿದರು. ''ಅರಸನನ್ನು ನೋಡಿ ಪುರುಷನನ್ನು ಮರೆತ'' ಕನ್ನಡ ಜನತೆಯನ್ನು ಎಚ್ಚರಿಸಲು ಪ್ರಯಾಸಪಟ್ಟರು.

ಇವುಗಳಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ಮಾಡಿದ ಸೇವೆಯನ್ನು ಕೃತಜ್ಞತೆಯಿಂದ ನೆನೆಯಬೇಕು. ಇದರ ಸ್ಥಾಪನೆಯಲ್ಲಿ ಶ್ರೀ ರಾಮಚಂದ್ರ ಹಣಮಂತ ದೇಶಪಾಂಡೆಯವರ ಪರಿಶ್ರಮ ತುಂಬಾ ಶ್ಲಾಘನೀಯವಾಗಿದೆ. ಇವರು ಈ ಭಾಗದಲ್ಲಿ ಮೊದಲನೆಯ ಎಂ.ಎ. ಪದವೀಧರರಾದ್ದರಿಂದ ಎಂ. ಎ. ದೇಶಪಾಂಡೆ ಎಂದೇ ಕರೆಯಲ್ಪಡುತ್ತಿದ್ದರು. ಇವರ ಕನ್ನಡದ ಅಭಿಮಾನವನ್ನು ಚೇಷ್ಟೆ ಮಾಡುವ ಅನೇಕ ಕಾಲ್ಪನಿಕ ಕಥೆಗಳೂ ಆ ಕಾಲಕ್ಕೆ ಹುಟ್ಟಿಕೊಂಡಿದ್ದವು. ಇವರು ತಮ್ಮ ಹೆಸರನ್ನು ಸಹ ರಾಮಚಂದ್ರ ಹಣಮಂತ ದೇಶಪಾಂಡೆ ಎಂದು ಹೇಳಿದರೆ, ಅದರಲ್ಲಿ ಸಂಸ್ಕೃತ ಅಂಶವಿರುವದರಿಂದ ಮಂಗನೊಡೆಯ ಮಂಗಪ್ಪ ನಾಡಪಾಕಿ ಎಂದು ಹೇಳುತ್ತಿದ್ದರೆಂದೂ ಆನೆಯನ್ನು ಮುಂಬಾಲದ ದೊಡ್ಡಮ್ಮ ಎಂದು ಕರೆಯುತ್ತಿದ್ದರೆಂದೂ ಹೇಳುತ್ತಾರೆ. ಇದರಲ್ಲಿ ಸತ್ಯಾಂಶಕ್ಕಿಂತ ವಿನೋದವೇ ಹೆಚ್ಚಿರಬಹುದಾದರೂ, ಈ ಘಟನೆ ಶ್ರೀ ದೇಶಪಾಂಡೆಯವರ ಕನ್ನಡ ಅಭಿಮಾನದ ದ್ಯೋತಕವಾಗಿದೆ. ಇದಕ್ಕಾಗಿ ಅವರು ತುಂಬಾ ಕೈಯನ್ನೂ ಸುಟ್ಟುಕೊಂಡರು.

ವಿದ್ಯಾವರ್ಧಕ ಸಂಘದ ಸ್ಥಾಪನೆಗಾಗಿ ಒಂದು ಸಭೆ ಧಾರವಾಡದಲ್ಲಿ ೧೮೯೦ನೆಯ ಇಸ್ವಿ ಜುಲೈ ೨೦ರಂದು ಸಂಜೆ ೫ ಗಂಟೆಗೆ ಕೂಡಿತ್ತು. ಈ ಸಭೆಗೆ 'ಊರ ಬಹುತರ ಎಲ್ಲ ಸಭ್ಯಗೃಹಸ್ಥರು' ಸೇರಿದ್ದರು. 'ಪರವೂರ ಗೃಹಸ್ಥರ ಕಡೆಯಿಂದ ಬಂದ ೧೦ – ೧೨ ಪತ್ರಗಳ ಸಾರಾಂಶವನ್ನು' ಶ್ರೀ ದೇಶಪಾಂಡೆಯವರು ತಿಳಿಸಿ, ಕನ್ನಡದ ಬಗ್ಗೆ ಒಂದು ತಾಸಿನವರೆಗೆ ಮಾತಾಡಿದರು.

''ಕನ್ನಡ ಭಾಷೆಯ ದೀನ ಸ್ಥಿತಿಯನ್ನು ದೂರ ಮಾಡುವದಕ್ಕಾಗಿ ಕನ್ನಡ ಜನರ ಸಹಾಯದಿಂದ ಒಂದು ಸಂಘವನ್ನು ಸ್ಥಾಪಿಸಬೇಕೆಂಬ ವಿಚಾರವು ನನ್ನ ಮನಸ್ಸಿನಲ್ಲಿ ಸನ್ನ ೧೮೮೭ನೇ ಇಸವಿಯಲ್ಲಿ




ಶಾಮರಾವ ಬಿಟ್ಠಲ ಕೈಕಿಣಿ




ರಾ. ಮ. [illegible]





'[illegible]


SHACOONTALA,

THE CELEBRATED SANSCRIT DRAMA,

BY CALIDAS

TRANSLATED INTO CANAREESE,

BY


SHESHO RAMCHANDRA CHOORMUREY.

Bombay:


PRINTED AT THE

EDUCATION SOCIETY'S PRESS, BYCULLA


ಚುರಮುರಿಯವರ ಶಾಕುಂತಲದ ಮುಖಪುಟ


"ಸುಬುದ್ಧಿ ಪ್ರಕಾಶ"

'ಸುಬುದ್ಧಿ ಪ್ರಕಾಶ'


ಹವ್ಯಕ ಸುಬೋಧ

'ಹವ್ಯಕ ಸುಬೋಧ'


ನಾಗವರ್ಮಕೃತ ವಿಸ್ತಾರವಾದ,

ಕನ್ನಡಛಂದಸ್ಸು.

ಧಾರವಾಡದಲ್ಲಿ

ಜ್ಞಾನಬೋಧಕ ಛಾಪಖಾನೆಯ ಮುದ್ರಣದ ಮಾದರಿ

ಹುಟ್ಟಿತು. ಅಂದಿನಿಂದ ಈ ಹೊತ್ತಿನ ತನಕ ಅದೇ ಪ್ರಯತ್ನದಲ್ಲಿ ತೊಡಗಿರುತ್ತೇನೆ. ಇವೊತ್ತಿಗೆ ೩೭೦೦ ರೂಪಾಯಿಗಳ ಅಂಕಿಗಳೂ ರೋಖು ೨೮೭ ರೂಪಾಯಿ ಕೂಡಿರುತ್ತವೆ.'' ಎಂದು ಮೊದಲಾಗಿ ಹೇಳಿ ಸಂಘದ ಸ್ಥಾಪನೆಯ ಅವಶ್ಯಕತೆಯನ್ನು ಅವರು ಬಿಂಬಿಸಿದರು. ಇದಾದ ಮೇಲೆ–

''ಕನ್ನಡ ಭಾಷೆಯನ್ನು ಬೆಳೆಸುವದಕ್ಕೋಸ್ಕರ 'ಕರ್ನಾಟಕ ವಿದ್ಯಾವರ್ಧಕ ಸಂಘ' ಎಂಬ ಒಂದು ಸಭೆಯನ್ನು ಧಾರವಾಡದಲ್ಲಿ ಸ್ಥಾಪಿಸತಕ್ಕದ್ದು, ಮತ್ತು ಅದರ ಆಡಳಿತೆಯ ಬಗ್ಗೆ ರಾ.ಸಾ. ರಾಮಚಂದ್ರ ಹಣಮಂತ ದೇಶಪಾಂಡೆ ಇವರು ಮಾಡಿದ ನಿಯಮಗಳನ್ನು ಸ್ವೀಕರಿಸತಕ್ಕದ್ದು'' ಎಂದೂ –

''ಧಾರವಾಡದಲ್ಲಿ ಒಂದು ಪುಸ್ತಕಾಲಯವನ್ನು ಸ್ಥಾಪಿಸತಕ್ಕದ್ದು. ಮತ್ತು ಸಂಘದ ಮೊಬಲಗು ಸಾವಿರ ರೂಪಾಯಿಗಳಾದ ಮೇಲೆ ಈ ಪುಸ್ತಕಾಲಯದ ಬಗ್ಗೆ ಮುನ್ನೂರು ರೂಪಾಯಿವರೆಗೆ ವ್ಯವಸ್ಥಾಪಕರು ಖರ್ಚು ಮಾಡಬಹುದು'' ಎಂದೂ ನಿರ್ಣಯಗಳು ಮಾಡಲ್ಪಟ್ಟವು. ಸಂಘದ ಆಡಳಿತ ವರ್ಗದಲ್ಲಿ – ಶಾಮರಾವ ವಿಠ್ಠಲ ಹಾಯಕೋರ್ಟ ವಕೀಲ ಮುಂಬೈ ಇವರು ಅಧ್ಯಕ್ಷರು. ವೆಂಕಟ ರಂಗೋ ಕಟ್ಟಿ – ಉಪಾಧ್ಯಕ್ಷರು; ರಾವಬಹದೂರ ಗುರುಸಿದ್ಧಪ್ಪ ಗಿಲಗಂಜಿ, ಶ್ರೀನಿವಾಸರಾವ ರೊದ್ದ, ರಾಮರಾವ ದೇಸಾಯಿ, ಶಾಂತವೀರಪ್ಪ ಮೆಣಸಿನಕಾಯಿ, ಶೇಷಗಿರಿರಾವ ಕರಗುಪ್ಪಿಕರ, ಗುರುಚಾರ್ಯ ಮೊರಬ, ಧೋಂಡೋ ನರಸಿಂಹ ಮುಳಬಾಗಲ ಇವರು ವ್ಯವಸ್ಥಾಪಕರು ಮತ್ತು ರಾಮಚಂದ್ರ ಹಣಮಂತ ದೇಶಪಾಂಡೆ ಅವರು ಸನ್ಮಾನಿತ ಕಾರ್ಯದರ್ಶಿಯಾಗಿ ಕೆಲಸವನ್ನು ಪ್ರಾರಂಭಿಸಿದರು.[೧]

ಈ ರೀತಿ ಮೊದಲಿನ ವ್ಯವಸ್ಥಾಪಕ ವರ್ಗವು ಹೆಚ್ಚಾಗಿ ಸರಕಾರೀ ಅಧಿಕಾರಿಗಳಿಂದಲೇ ಕೂಡಿದ್ದರೂ, ಅವರೆಲ್ಲ ಕನ್ನಡದ ಏಳ್ಗೆಗಾಗಿ ನಿಸ್ವಾರ್ಥತೆಯಿಂದ, ಕಳಕಳಿಯಿಂದ ದುಡಿಯುವವರಾಗಿದ್ದರು. ಕನ್ನಡದ ಏಳ್ಗೆಗಾಗಿ ಅವರು ಏನನ್ನು ಮಾಡಲೂ ಸಿದ್ಧರಿದ್ದರು. ಅಂತಲೇ, ಸಂಘ ಸ್ಥಾಪನೆಯಾದ ೪ ತಿಂಗಳುಗಳಲ್ಲಿಯೇ ಸಂಘದ ವ್ಯವಸ್ಥಾಪಕರು ತಮ್ಮ ೧೩–೧೧–೧೮೯೦ ರ ಸಭೆಯಲ್ಲಿ ಧೋಂಡೋಪಂತ ಮುಳಬಾಗಲರವರ ಉತ್ತರರಾಮಚರಿತ್ರೆಯನ್ನು ಅಚ್ಚು ಹಾಕಿಸಿ, ಅಚ್ಚಿನ ವೆಚ್ಚವನ್ನು ಕಳೆದು, ಉಳಿದುದರಲ್ಲಿ ೧೦೦ ಕ್ಕೆ ೬೦ ರಷ್ಟು ಹಣವನ್ನು ಸಂಘದ ಲೆಕ್ಕಕ್ಕೆ ಜಮೆ ಮಾಡಬೇಕೆಂದು ನಿರ್ಣಯಿಸಿದರು. ಗ್ರಂಥಕರ್ತರು ಈ ಕರಾರುಪತ್ರಕ್ಕೆ ಮೋಡಿ ಲಿಪಿಯಲ್ಲಿ ಸಹಿ ಹಾಕಿದ್ದಾರೆ. ಇದೇ ಸಭೆಯಲ್ಲಿಯೇ ಮೆ. ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್‌ಶನ್ ಅವರು ಕನ್ನಡ ಜಿಲ್ಲೆಗಳಲ್ಲಿ ಕನ್ನಡ ಭಾಷೆಯಲ್ಲಿಯೇ ಪರೀಕ್ಷೆಗಳನ್ನು ನಡೆಸುವ ಏರ್ಪಾಡು ಮಾಡಿದ್ದಕ್ಕಾಗಿ ಅವರನ್ನೂ ಅಭಿನಂದಿಸಲಾಯಿತು.

ಈ ಕಾರ್ಯಕರ್ತರ ಕಳಕಳಿ ಎಷ್ಟಿತ್ತೆಂದರೆ, ಮೊದಲಿನ ಹತ್ತು ವರ್ಷಗಳ ಕಾಲಾವಧಿಯಲ್ಲಿ ಕೇವಲ ಒಂದೇ ಸಲ ಕೋರಂ (Quorum) ಇಲ್ಲದ್ದಕ್ಕೆ ಸಭೆ ಮುಂದು ಹಾಕಲ್ಪಟ್ಟಿದೆ. ಮತ್ತೊಂದು ಸಲ ಅಂದರೆ ೨೧–೯–೧೮೯೨ ರ ಸಭೆಗೆ ''ಮ. ರಾ. ಕಟ್ಟಿ ವೆಂಕಟರಾಯರು ಏಕಾದಶಿಯ ಉಪವಾಸದ ಮೂಲಕ ಬಂದಿದ್ದಿಲ್ಲ''.

ಸಂಘದ ವ್ಯವಸ್ಥಾಪಕರು ಯಾವ ವಿಷಯವೇ ಇರಲಿ, ಅದರ ಬಗ್ಗೆ ವಿಚಾರ ಮಾಡದೇ ಬಿಡುತ್ತಿರಲಿಲ್ಲ. ಸಂಘದ ವರದಿಗಳನ್ನು ಮುದ್ರಿಸಬೇಕೆಂದು ಕಾರ್ಯದರ್ಶಿಗಳು ೯–೬–೧೮೯೮ರಂದು ಸದಸ್ಯರ ಅಭಿಪ್ರಾಯವನ್ನು ಕೇಳಿದಾಗ, ಅದಕ್ಕೆ ಸದಸ್ಯರು 'ಸ್ವಲ್ಪ ಕಿಂಮತ್ತಿನಲ್ಲಿ ಆಗುವಂತೆ ಛಾಪಿಸಿ

---

೧ ವಾಗ್ಭೂಷಣ– ನವೆಂಬರ ೧೮೯೬.

ದರೆ ಅಡ್ಡಿ ಕಾಣುವದಿಲ್ಲ' 'ಅವುಗಳ ಸಾರಾಂಶ ತೆಗೆದು ಮುದ್ರಿಸಬೇಕು' 'ಇದ್ದಕ್ಕಿದ್ದಂತೆ ಮುದ್ರಿಸುವದೆ ಅತ್ಯಾವಶ್ಯಕ' 'ಬಹಳ ಖರ್ಚು ಮಾಡಿ ಮುದ್ರಿಸುವಷ್ಟು ಗೌರವದ ದಾಖಲೆಗಳು ಸದರೀ ರಿಪೋರ್ಟುಗಳಲ್ಲ', 'ಈ ಸಂಘದ ಸಮಂಧಿ ಕೆಲ್ಸಾ ಕಾಳಜಿ ಪೂರ್ವಕವಾಗಿ ಮಾಡುವಂಥಾ ಜನರು ೪ ಅಥವಾ ೫ರಕಿಂತ ಹೆಚ್ಚಾಗಿ ಇರಲಾರರು ಅಂತಾ ನಂನ ತಿಳುವಳಿಕೆ ಇರತದ. ಕಾರಣಾ ಸಾರಾಂಶ ಛಾಪಿಸಿದರೆ ಸಾಕು ಹಿಂಗ ನಂದ ಅಭಿಪ್ರಾಯವದೆ.' ಎಂದೂ ಅಭಿಪ್ರಾಯ ವ್ಯಕ್ತ ಮಾಡಿದರು.

ಸಂಘದ ವ್ಯವಸ್ಥಾಪಕರ ನಿಸ್ವಾರ್ಥ ಮತ್ತು ನಿಸ್ಪೃಹ ಬುದ್ಧಿಯನ್ನು ತೋರಿಸುವ ಒಂದು ಘಟನೆ ಉಲ್ಲೇಖನೀಯವಾಗಿದೆ. ಸಂಘದ ಸ್ಥಾಪನೆಗೆ ಮೂಲಭೂತವಾಗಿ ಕಾರಣರಾದವರೂ ಅದರ ಬಗ್ಗೆ ಪ್ರಥಮ ಭಾಷಣ ಮಾಡಿದವರೂ, ಸಂಘದ ಪ್ರಥಮ ಕಾರ್ಯದರ್ಶಿಗಳೂ ಶ್ರೀ ರಾ. ಹ. ದೇಶಪಾಂಡೆಯವರಾಗಿದ್ದರೆಂದು ಈ ಮೊದಲೇ ಹೇಳಿತಷ್ಟೇ! ಶ್ರೀ ದೇಶಪಾಂಡೆಯವರದು ದೊಡ್ಡ ಹೆಸರು. ಒಂದು ಸಲ ಹೀಗೆ ನಡೆಯಿತು. ಸಂಘದವರು ತಮ್ಮ ಪ್ರಕಟನೆಗಾಗಿ ಕೆಲವು ಕಾಗದವನ್ನು ಕೊಂಡಿದ್ದರು. ಆದರೆ, ಆ ಪ್ರಕಟನೆ ಹೊರಡಲಿಲ್ಲ. ಕಾಗದಗಳು ಹಾಗೆಯೇ ಹಾಳಾಗುತ್ತವೆಯೆಂದು ತಿಳಿದು ವ್ಯವಸ್ಥಾಪಕರಲ್ಲೊಬ್ಬರಾದ ಶ್ರೀ ದೇಶಪಾಂಡೆಯವರು ತಮ್ಮ ಸ್ವಂತದ ಒಂದು ಪ್ರಕಟನೆಗೆ ಆ ಕಾಗದವನ್ನು ಉಪಯೋಗಿಸಿ, ಅದರ ಬೆಲೆಯ ಹಣವನ್ನು ಸಂಘಕ್ಕೆ ಮುಟ್ಟಿಸಿದರು. ಆಗ ಕಾರ್ಯದರ್ಶಿಗಳು "ಸಂದ ಮೂಲ ರಕಮಿನ ಮೇಲೆ ಮ. ರಾ. ದೇಶಪಾಂಡೆಯವರಿಂದ ಖರೀದೀ ತಾರೀಖಿನಿಂದ ಈವರೆಗೆ ಆಗುವ ವ್ಯಾಜ ಸಹ ವಸೂಲ ಮಾಡಬೇಕಂತ ಅಡಿಟರ– ಇವರ ಅಭಿಪ್ರಾಯವದೆ. ಕಾರಣ ಸಂಘದ ವಿಷಯವಾಗಿ ಇಷ್ಟು ಹಗಲಿರುಳು ಪ್ರಯತ್ನ ಮಾಡಿ ಈ ಸ್ಥಿತಿಗೆ ತಂದಂಥ ದೇಶಪಾಂಡೆಯವರಂತಹರೂ ಅಹಿತ ಬಗೆಯಲಿಕ್ಕಿಲ್ಲ. ನಮ್ಮ ಇಡಿ ಈ ಕರ್ನಾಟಕದ ಮೇಲೆ ಮಹದುಪಕಾರ ಮಾಡಿದವರ ಕಡಿಂದ ಈ ಕ್ಷುಲ್ಲಕ ರಕಮಿನ ವ್ಯಾಜ ಬೇಡುವುದು ಯೋಗ್ಯವಾಗಲಿಕ್ಕಿಲ್ಲ" ಎಂದು ಸೂಚಿಸಿದರು, ಆದರೆ, "ದೇಶಪಾಂಡೆ ಇವರು ಬಡ್ಡಿ ಕೊಟ್ಟರೆ ಅಥವಾ ಕೊಡೋದಕ್ಕೆ ಕಬೂಲ ಇದ್ದರೆ ಬಡ್ಡಿ ತಗೊಬೇಕು ಇಲ್ಲದಿದ್ದರೆ ಬಡ್ಡಿ ವಸೂಲ ಮಾಡಬಾರದು" ಎಂದು ವ್ಯವಸ್ಥಾಪಕರಲ್ಲೊಬ್ಬರು ಅಭಿಪ್ರಾಯಪಟ್ಟರು. ಇದು ವ್ಯವಸ್ಥಾಪಕರ ಕಾರ್ಯಪ್ರಜ್ಞೆ, ನಿಸ್ವಾರ್ಥದೃಷ್ಟಿ, ನಿಸ್ಪೃಹತೆಗಳ ದ್ಯೋತಕ.

೧೮೯೬ ನೆಯ ಇಸವಿ ನವಂಬರ ೨೨ ಕ್ಕೆ ಕೂಡಿದ ಸಂಘದ ಸಭೆಯಲ್ಲಿ ಅದೇ ಆಗ ಪುಣೆಯಲ್ಲಿ ಕೂಡಲಿರುವ ಎಜುಕೇಶನ್ ಇನಸ್ಪೆಕ್ಟರರ ಸಮ್ಮೇಳನದ ಮುಂದಿಡಲು "ಕನ್ನಡ ಶಾಲೆಗಳಲ್ಲಿ ಬಾಳಬೋಧೆ (ದೇವನಾಗರಿ) ಅಕ್ಷರಗಳನ್ನೂ, ಮರಾಠಿ ಭಾಷೆಯನ್ನೂ ಕಲಿಸುವ ಅವಶ್ಯವಿಲ್ಲವೆಂದು" ಠರಾವು ಪಾಸು ಮಾಡಲ್ಪಟ್ಟಿತು. ನಾಲ್ಕು ವರ್ಷವಾದರೂ ಇದರ ಬಗ್ಗೆ ಯಾವ ನಿರ್ಣಯವೂ ಆದಂತೆ ಕಂಡುಬರುವದಿಲ್ಲ. ಆದ್ದರಿಂದ ಸಂಘವು ಪುನಃ ೨೯–೧–೧೯೦೦ ರ ವ್ಯವಸ್ಥಾಪಕರ ಸಭೆಯಲ್ಲಿ ಡೈರೆಕ್ಟರ ಆಫ್ ಪಬ್ಲಿಕ ಇನಸ್ಟ್ರಕ್ಷನ ಇವರ ಅವಗಾಹನೆಗೆ ತರಲು ಈ ಕೆಳಗಿನ ನಿರ್ಣಯವನ್ನು ಕೈಕೊಂಡಿತು. :

"ಕನ್ನಡ ಸ್ಟ್ಯಾಂಡರ್ಡಗಳಲ್ಲಿ ಈ ಕಮಿಟಿಗೆ ಯೋಗ್ಯ ತೋರಿದ ದುರಸ್ತಿ (ಸುಧಾರಣೆ) ಗಳನ್ನು ಮೆ. ಡಾಯರೆಕ್ಟರ ಸಾಹೇಬರ ಕಡೆಗೆ ವಿಚಾರಕ್ಕೋಸ್ಕರ ಕಳಿಸಬೇಕು. ಈ ನಮ್ಮ ಕನ್ನಡ ಸೀಮೆಯ ಶಾಲೆಗಳಲ್ಲಿ ಮರಾಠೀ ಭಾಷೆಯ ಅಭ್ಯಾಸವು ಅಪ್ರಯೋಜಕವೆಂಬ ಬಗ್ಗೆ ಪೂರ್ವದಲ್ಲಿ ಬರೆದ ಪತ್ರ ೨೩ ನೇ ನವಂಬರು ಸನ್ ೧೮೯೬ ಇದರ ನಕಲು ಸಾಹೇಬರ ಕಡೆಗೆ ಇನ್ನೊಮ್ಮೆ ಕಳಿಸಬೇಕು."

ಇದೇ ವರ್ಷದ (ಕ್ರಿ. ಶ. ೧೯೦೦) ಅಕ್ಟೋಬರ ತಿಂಗಳಲ್ಲಿ ಧಾರವಾಡದಲ್ಲಿ ಕೂಡಿದ ವಿದ್ಯಾ ಪರಿಷತ್ತಿನಲ್ಲಿ ಸಂಘದ ಪ್ರತಿನಿಧಿಗಳು 'ಕನ್ನಡ ಶಾಲೆಗಳಲ್ಲಿ ಮರಾಠಿ ಕಲಿಸಬಾರದು' ಎಂಬ ವಿಷಯದ

ಬಗ್ಗೆ ಒಂದು ಪ್ರಬಂಧವನ್ನು ಓದಿದರು. ಆದ್ದರಿಂದ, ಕನ್ನಡವೇ ಈ ವೀರಯೋಧರ ನಿತ್ಯಮಂತ್ರವಾಗಿತ್ತೆಂಬುದನ್ನು ಸ್ಪಷ್ಟವಾಗಿ ಕಾಣುತ್ತೇವೆ. ಕನ್ನಡದ ನೆಲದ ಪುಲ್ಲೆನಗೆ ಪಾವನ ತುಲಸಿ; ಕನ್ನಡದ ನೆಲದ ನೀರ್ವೊನಲೆನಗೆ ದೇವಗಂಗಾನದಿ, ಕನ್ನಡದ ಶಿಲೆ ಎನಗೆ ಶಾಲಗ್ರಾಮಶಿಲೆ ಎಂಬ ಪವಿತ್ರಭಾವ ಅವರಲ್ಲಿ ಮೂಡಿದ್ದಿತು.

ಇವರ ಈ ಶುದ್ಧವಾದ ವೀರ ಪ್ರತಿಜ್ಞೆಯನ್ನು ತೋರಿಸುವ ಒಂದು ಘಟನೆ ಬೋಧಕವಾಗಿದೆ. ದಿವಂಗತ ವೆಂಕಟ ರಂಗೋ ಕಟ್ಟಿಯವರು ಕನ್ನಡಕ್ಕಾಗಿ ದುಡಿದ ಪುರೋಗಾಮಿಗಳಲ್ಲಿ ಒಬ್ಬರು. ನಾರ್ಮಲ್ ಶಾಲೆಯ ಹೆಡ್‌ಮಾಸ್ತರರಾಗಿ, ಶಿಕ್ಷಣ ತಜ್ಞರಾಗಿ, ಕನ್ನಡ ಭಾಷಾಂತರಕಾರರಾಗಿ, ಕನ್ನಡದಲ್ಲಿ ಲೇಖಕರಾಗಿ ಸಂಘದ ಅಧ್ಯಕ್ಷರಾಗಿ ಅವರು ಮಹತ್ವಪೂರ್ಣವಾದ ಸೇವೆಯನ್ನು ಸಲ್ಲಿಸಿದರು. ಇದೇ ಕಟ್ಟಿಯವರೇ ಸಂಘದ ೨೧–೯–೧೮೯೨ ರ ಸಭೆಗೆ 'ಮ. ರಾ. ಕಟ್ಟಿ ವೆಂಕಟರಾಯರು ಏಕಾದಶಿಯ ಉಪವಾಸದ ಮೂಲಕ ಬಂದಿದ್ದಿಲ್ಲ.' ಇಂಥ ಕರ್ಮಠರೂ, ಯೋಗ್ಯತಾವಾನರೂ ಆದ ಕಟ್ಟಿಯವರು ಮೇಲೆ ವಿವರಿಸಿದ್ದ 'ಕನ್ನಡ ಶಾಲೆಗಳಲ್ಲಿ ಮರಾಠಿ ಕಲಿಸಬಾರದು' ಎಂಬ ಪ್ರಬಂಧವನ್ನು ಸಂಘವು ಮುದ್ರಿಸಿ ಹಂಚಬೇಕೆಂದಾಗ, ಸಂಘದ ಅಧ್ಯಕ್ಷರೆಂಬ ನಾತೆಯಿಂದ ಅದರ ಜೊತೆಗೊಂದು ಪುರವಣಿಯನ್ನು ಅಚ್ಚು ಹಾಕಿಸಿ, ಅದರಲ್ಲಿ ಮರಾಠಿಯನ್ನು ಕಲಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಮಾಡಿದ್ದರು. ಸಂಘದ ವ್ಯವಸ್ಥಾಪಕರಿಗೆ ಇದು ಘಾತಕ ಕೃತಿ ಎನ್ನಿಸಿತು. ಅವರು ಇದನ್ನು ಸಹಿಸಲಪೇಕ್ಷಿಸಲಿಲ್ಲ. ಅವರು ಮೂರ್ತಿಪೂಜಕರಾಗಿರಲಿಲ್ಲ. ಆದ್ದರಿಂದ, ೨೦–೧–೧೯೦೧ ರ ವ್ಯವಸ್ಥಾಪಕ ಸಮಿತಿಯ ಸಭೆಯಲ್ಲಿ ಈ ಕೆಳಗಿನ ನಿರ್ಣಯವನ್ನು ಕೈಕೊಂಡರು.

"(ಕಟ್ಟಿ) ಅವರು ಸಂಘದ ಅಧ್ಯಕ್ಷರಿದ್ದರೂ ಅವು ಸಂಘದ ಅಭಿಪ್ರಾಯಗಳು ಇರುವುದಿಲ್ಲ. ಸಂಘದವರ ಅಭಿಪ್ರಾಯಗಳು ಅವರ ಅಭಿಪ್ರಾಯಗಳಿಂದ ಭಿನವಿರುತ್ತವೆ. ಈ ಪ್ರಕಾರ ಬರಿಯಬೇಕು.... (ಈ ಮಾತುಗಳನ್ನು) ಅಧ್ಯಕ್ಷರ ಮಾನಹಾನಿಯಾಗಬೇಕೆಂಬ ಹೇತುವಿನಿಂದ ಬರೆದಂಥವು ಅಲ್ಲ. ಕೇವಲ ಸಂಘದ ಮತ್ತು ಕರ್ನಾಟಕ ವಿದ್ಯೆಯ ಹಿತದ ಸಲುವಾಗಿ ಬರೆದಂಥವು ಇರುತ್ತವೆಂದು ಸಹ ಅವರಿಗೆ ತಿಳಿಸಬೇಕು."

ಈ ವಾದದ ಫಲವಾಗಿ, ಕನ್ನಡಕ್ಕಾಗಿ ದುಡಿದವರಾಗಿದ್ದರೂ ಸಹ, ವೆಂಕಟ ರಂಗೋ ಕಟ್ಟಿ ಅವರು ತಮ್ಮ ಅಧ್ಯಕ್ಷಪದಕ್ಕೆ ರಾಜೀನಾಮೆಯನ್ನು ಕೊಡಬೇಕಾಯಿತು. ಇದು ಅಂದಿನವರ ಆದರ್ಶ ದೃಷ್ಟಿ; ಕನ್ನಡ ನೆಲದಲ್ಲಿ ಕನ್ನಡವನ್ನು ಪುನಃ ಪ್ರತಿಷ್ಠಾಪಿಸಬೇಕೆಂಬುದರ ಬಗ್ಗೆ ನಡೆಸಿದ ಅವಿರತ ಹೋರಾಟ. ಇದೂ ಅಲ್ಲದೆ, ಈ ಕೆಳಗಿನ ನಿರ್ಣಯವೂ ತೆಗೆದುಕೊಳ್ಳಲ್ಪಟ್ಟಿತು :

"ಮುಂಬಯಿ ವಿಶ್ವವಿದ್ಯಾಲಯದ ಸಿಂಡಿಕೇಟದವರಿಂದ ನೇಮಿಸಿದ ಕಮಿಟಿಯವರು ಎಂ. ಎ. ಪರೀಕ್ಷೆಗೆ ಮರಾಠಿ ಮತ್ತು ಗುಜರಾಥಿ ಭಾಷೆಗಳನ್ನು ಎರಡನೆಯ ಭಾಷೆಯನ್ನಾಗಿ ಸೇರಿಸಬೇಕೆಂತ ರಿಪೋರ್ಟ ಮಾಡಿರುತ್ತಾರೆ. ಅದರಲ್ಲಿ ಕನ್ನಡ ಸಂಬಂಧವಾಗಿ ಏನೂ ಉಲ್ಲೇಖವಿಲ್ಲ. ಆದ್ದರಿಂದ ಕನ್ನಡ ಭಾಷೆಯನ್ನೂ ಸೇರಿಸುವ ಬಗ್ಗೆ ಸಂಘದಿಂದ ಇದರ ಲಗತು ಕಳುಹಿಸಿರುವ ರಿಪ್ರಸೆಂಟೇಶನ್ನವನ್ನು ಕಳುಹಬೇಕೆಂತ ನನ್ನ ಅಭಿಪ್ರಾಯವದೆ." ೧

೧ ಕನ್ನಡದ ನ್ಯಾಯಬದ್ಧವಾದ ಸ್ಥಾನದ ಬಗ್ಗೆ ಸಂಘವು ನಡೆಸಿದ ಹೋರಾಟವನ್ನು ಕುರಿತು ದಕ್ಷಿಣ ಭಾಗದ ಕಮಿಶನರರಾಗಿದ್ದ ಜೆ. ಎಫ್. ಫ್ಲೀಟ ಅವರು "ದಕ್ಷಿಣ ಮಹಾರಾಷ್ಟ್ರವೆಂದು ಕರೆಯಲ್ಪಡುವ ದೇಶದಲ್ಲಿಯ ಸಂಸ್ಥಾನಗಳೊಳಗಿನ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಕಲಿಸಬೇಕೆಂದು ಸಂಘದವರು ಮಾಡಿದ ಪ್ರಯತ್ನವು ಕೆಲವ:ಟ್ಟಿಗೆ ಸಫಲವಾದದ್ದನ್ನು ಕೇಳಿ ಸಂತೋಷವಾಗುತ್ತದೆ" ಎಂದು ೧೯–೩–೧೮೯೫ರಂದು ಹೇಳಿದ್ದಾರೆ.

ಕನ್ನಡ ಭಾಷೆಯನ್ನು ಆಡುವವರೆಲ್ಲ ಕನ್ನಡಿಗರು. ಇದರಲ್ಲಿ ಪರಸ್ಪರ ಸಂಪರ್ಕ ಸಾಮರಸ್ಯ ಗಳಿರಬೇಕು. ಕನ್ನಡದ ಮಾತಿನ ಮತ್ತು ಬರೆಹದ ಭಾಷೆಯಲ್ಲಿ ಏಕರೂಪತೆ ಇರಬೇಕು. ಸಾಹಿತ್ಯ, ಸಂಸ್ಕೃತಿ, ಸಮಾಜ, ಸಂಪದಭಿವೃದ್ಧಿ– ಈ ಯೆಲ್ಲ ದೃಷ್ಟಿಗಳಿಂದಲೂ ಕರ್ನಾಟಕ ಮುಂದುವರೆಯ ಬೇಕು– ಎಂಬ ಈ ದೃಷ್ಟಿಯಿಂದ ಪ್ರೇರಿತವಾದ ಸಂಘವು ಬರಿಯ ಇಚ್ಛಾ ಸಾಮ್ರಾಜ್ಯದಲ್ಲಿ ಮಾತ್ರ ನಿಲ್ಲದೆ, ಸಕ್ರಿಯವಾಗಿ ಕಾರ್ಯಪ್ರವೃತ್ತವಾಯಿತು. ಕನ್ನಡ ರಾಜ್ಯರಮಾರಮಣರೂ, ಕನ್ನಡ ರತ್ನ ಸಿಂಹಾಸನದ ಒಡೆಯರೂ ಆದ ಮೈಸೂರು ಮಹಾರಾಜರನ್ನೂ, ವಂಟಮುರಿ, ಶಿರಸಂಗಿ ದೇಸಾಯ ರನ್ನೂ ಸಂಘಕ್ಕೆ ಆಶ್ರಯ ಕೊಡಬೇಕೆಂದು ಬಿನ್ನವಿಸಲಾಯಿತು. "ಮೈಸೂರ ಡೈರೆಕ್ಟರರು ಬಂದಾಗ ಅವರನ್ನು ಕರೆದು ವೀಳೆಕೊಟ್ಟು ಕಳುಹಿಸತಕ್ಕದ್ದು" ಎಂದು ೧೫–೧೧–೧೮೯೧ ರ ಸಭೆಯಲ್ಲಿ ನಿರ್ಣಯಿಸಲಾಯಿತು. ಮಹಾರಾಜರ ಪಟ್ಟಾಭಿಷೇಕ ಸಮಾರಂಭಕ್ಕೆ ಸಂತೋಷ ಪ್ರದರ್ಶಕ ಪತ್ರ ದೊಡನೆ, ಸಂಘದ ಪ್ರತಿನಿಧಿಗಳು ಸಮಾರಂಭಕ್ಕೆ ಹೋಗಬೇಕೆಂದು ೨೧–೧–೧೮೯೫ ರಂದು ನಿರ್ಣ ಯಿಸಲಾಯಿತು. ೧೫–೨–೧೯೦೦ ರ ಸಂಘದ ವಾರ್ಷಿಕ ಸಭೆಗೆ ಮೈಸೂರು ಪ್ರತಿನಿಧಿಗಳನ್ನು ಆಮಂತ್ರಿಸಲಾಯಿತು.

ಸಂಘದ ಹೃದಯವೈಶಾಲ್ಯದ ದ್ಯೋತಕವಾಗಿ ಜಸ್ಟಿಸ್ ಜಾನ್ ಜಾರ್ಡಿನ್, ಡಾ.ರಾಮಕೃಷ್ಣ ಭಂಡಾರಕರ ಅವರನ್ನು ಸಂಘದ ಬಹುಮಾನಿತ ಸದಸ್ಯರಾಗಲಿಕ್ಕೆ ಬಿನ್ನವಿಸಲಾಯಿತು. ಸಂಘದ ಪ್ರಥಮ ಅಧ್ಯಕ್ಷರಾಗಿ ಶಾಮರಾವ ವಿಠ್ಠಲ ಕೈಕಿಣಿ ಅವರು ೧೮೯೧–೨ ರಲ್ಲಿ ಕೆಲಸ ಮಾಡಿದರೆ, ಎರಡನೆಯ ಅಧ್ಯಕ್ಷರಾಗಿ, ಡಾ. ಝಿಗ್ಲರ್ ಅವರು ೧೮೯೩–೯೪ ರಲ್ಲೂ, ಮೂರನೆಯ ಅಧ್ಯಕ್ಷರಾಗಿ ಮ್ಯೂರ್ ಸಾಹೇಬರು ೧೮೯೫ರ ಲ್ಲೂ, ನಾಲ್ಕನೆಯವರಾಗಿ ಆ್ಯಂಡರ್ಸನ್ ಅವರು ೧೮೯೬–೯೭ ರಲ್ಲೂ ಕೆಲಸ ಮಾಡಿದರು. ಈ ಐರೋಪ್ಯರೆಲ್ಲ ಬರಿಯ ಹೆಸರಿಗೆ ಮಾತ್ರ ಅಧ್ಯಕ್ಷರಾಗಿರದೆ ಸಂಘದ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಪ್ರಾಯಶಃ ಇವರ ಸೌಕರ್ಯಕ್ಕಾಗಿಯೇ, "ಸಂಘದ ಎಲ್ಲ ಸಭೆಗಳಲ್ಲಿ ಕನ್ನಡ ಮಾತಾಡಲಿಕ್ಕೆ ಅಡ್ಡಿ ಇಲ್ಲ. ಉಳಿದ ಭಾಷೆಯಲ್ಲಿ ಮಾತಾಡು ವವರು ಅಧ್ಯಕ್ಷರ ಅಪ್ಪಣೆ ತೆಗೆದುಕೊಂಡು ಮಾತಾಡಬಹುದು" ಎಂದು ೨೨–೧೧–೧೮೯೫ ರ ವ್ಯವಸ್ಥಾಪಕರ ಸಭೆಯಲ್ಲಿ ನಿರ್ಣಯಿಸಲಾಯಿತು. (೧) ಕನ್ನಡವನ್ನು ಸಾರ್ವಜನಿಕ ಸಭೆಗಳಲ್ಲಿ ಮಾತನಾಡುವದಕ್ಕೆ ಉತ್ತೇಜನವನ್ನು ಕೊಡುವದು. (೨) ಕನ್ನಡದಲ್ಲಿ ಗ್ರಂಥಗಳನ್ನು ಹೊಸದಾಗಿ ಬರೆದು, ಬೇರೆ ಭಾಷೆಯಿಂದ ಪರಿವರ್ತಿಸಿ, ಪ್ರಾಚೀನ ಗ್ರಂಥಗಳನ್ನು ಪರಿಶೋಧಿಸಿ ಪ್ರಕಟಿಸುವದು. (೩) ಈ ಕೆಲಸವನ್ನು ಮಾಡುವಂಥ ವಿದ್ವಾಂಸರಿಗೆ ಸಹಾಯ ಮಾಡುವದು. (೪) ಇವೆಲ್ಲ ಕಾರ್ಯಗಳಿಗೆ ಸಹಾಯಕವಾಗುವಂತೆ ಸಂಘದಿಂದ ಒಂದು ನಿಯತಕಾಲಿಕವನ್ನು ಪ್ರಕಟಿಸುವದು– ಇವು ಸಂಘದ ಧ್ಯೇಯಗಳಾಗಿದ್ದವು.

ಇದಕ್ಕೆ ಅನುಗುಣವಾಗಿ ಸಂಘದ ಪ್ರಥಮ ವಾರ್ಷಿಕ ಸಭೆ ೨೭–೯–೧೮೯೧ ರಂದು ಕೂಡಿದಾಗ "ಉದ್ಯೋಗಿನಂ" ಇತ್ಯಾದಿ ಶ್ಲೋಕವನ್ನು ಕುರಿತು ಕನ್ನಡದಲ್ಲಿ ಅರ್ಧ ಗಂಟೆ ಅಥವಾ ಹೆಚ್ಚು ವೇಳೆ ಮಾತಾಡುವವರಿಗೆ ೧೦ ರೂಪಾಯಿ ಬಹುಮಾನ ಕೊಡುವುದಾಗಿ ಶ್ರೀನಿವಾಸರಾವ ಜೀಡಿ ಎಂಬುವರು ಮುಂದೆ ಬಂದರು. ಹೀಗೆ ನಿಬಂಧ ಮತ್ತು ಭಾಷಣಗಳಿಗಾಗಿ ಇದ್ದ ಹಲವು ವಿಷಯಗಳನ್ನು ಗಮನಿಸಿದರೆ, ಆ ಕಾಲದಲ್ಲಿ ಜನತೆಯ ಎದುರಿಗೆ ಇದ್ದ ಸಮಸ್ಯೆಗಳ ಕಲ್ಪನೆಯೂ ಕೆಲಮಟ್ಟಿಗೆ ಬರ ಬಹುದು. 'ದೇಶಸಂಚಾರದ ಆವಶ್ಯಕತೆಯೂ ಅದರಿಂದಾಗುವ ಲಾಭಗಳೂ,' 'ವಾಚನಾಭಿ ರುಚಿಯ ಅವಶ್ಯಕತೆಯೂ ಅದರಿಂದಾಗುವ ಲಾಭಗಳೂ,' 'ಮೈನೆರೆದ ಬಳಿಕ ಹೆಣ್ಣು ಹುಡುಗರ ಲಗ್ನ ಮಾಡಲಿಕ್ಕೆ ಅಡ್ಡಿ ಇಲ್ಲ; ಮತ್ತು ಹಾಗೆ ಮಾಡುವದರಿಂದ ಏನೇನು ಲಾಭಗಳು ಅವೆ' ಎಂಬ ವಿಷಯದ ಮೇಲೆ ವೈದ್ಯಶಾಸ್ತ್ರದ, ಸಾಮಾಜಿಕ ರೀತಿಯ, ಹಿಂದೂ ಧರ್ಮಶಾಸ್ತ್ರದ ಆಧಾರಗಳಿಂದ

ಒಂದು ನಿಬಂಧ ಬರೆಯುವದೂ ಮತ್ತು ಮಾತಾಡುವದೂ, 'ಅವಿಭಕ್ತ ಕುಟುಂಬ ಪದ್ಧತಿಯ ಲಾಭಗಳು' ಇತ್ಯಾದಿ.

ಗ್ರಂಥಕರ್ತರಿಗೆ ಪ್ರೋತ್ಸಾಹ :

ಸಂಘವು ಸ್ಥಾಪನೆಯಾದ ನಾಲ್ಕೇ ತಿಂಗಳುಗಳಲ್ಲಿ ಧೋಂಡೋಪಂತ ಮುಳಬಾಗಲ ವಿರಚಿತ 'ಉತ್ತರ ರಾಮಚರಿತ್ರೆ' ಮತ್ತು 'ವೇಣೀಸಂಹಾರ'ಗಳನ್ನು ಪ್ರಕಟನೆಗಾಗಿ ತೆಗೆದುಕೊಂಡಿತು. ಈ ರೀತಿ ಸಂಘವು ತನ್ನ ವತಿಯಿಂದ ವಾಗ್ಭೂಷಣದ ಮೂಲಕ ೮೫ ಪುಸ್ತಕಗಳನ್ನೂ, ಸ್ವತಂತ್ರವಾಗಿ ೧೧ ಪುಸ್ತಕಗಳನ್ನೂ ಪ್ರಕಟಿಸಿತು.

ಸಂಘದ ನಿಯತಕಾಲಿಕ :

ಸಂಘವು ೧೮೯೫ ರ ಸುಮಾರಿಗೆ ವಾಗ್ಭೂಷಣ ನಿಯತಕಾಲಿಕವನ್ನು ಪ್ರಾರಂಭಿಸಿ ಅನೇಕ ಲೇಖಕರನ್ನು ಮುಂದು ತಂದು, ಕನ್ನಡ ಸಾರಸ್ವತ ಪ್ರಪಂಚಕ್ಕೆ ಅಮೋಘವಾದ ಸೇವೆಯನ್ನು ಸಲ್ಲಿಸಿತು.

ಗ್ರಂಥಕರ್ತರ ಸಮ್ಮೇಲನ :

ಕ್ರಿ. ಶ. ೧೯೦೭ ರ ಜೂನ ೨ ಮತ್ತು ೩ ರಂದು ಅಖಿಲ ಕರ್ನಾಟಕ ಗ್ರಂಥಕರ್ತರ ಸಮ್ಮೇಲನವನ್ನು ಸಂಘವು ಏರ್ಪಡಿಸಿ, ಎಲ್ಲ ವಿದ್ವಾಂಸರಲ್ಲಿ ಪರಸ್ಪರ ಸಂಪರ್ಕ ಉಂಟಾಗುವಂತೆ ಮಾಡಿತು. ಈ ಸಮ್ಮೇಲನದಲ್ಲಿ 'ಕರ್ನಾಟಕ ಗ್ರಂಥಗಳಲ್ಲಿ ಉಪಯೋಗಿಸುವ ಭಾಷೆಯಲ್ಲಿ ಏಕರೂಪತೆಯನ್ನುಂಟು ಮಾಡುವದು ಸಾಧ್ಯವಾದುದರಿಂದ, ಕೂಡಿದ ಮಟ್ಟಿಗೆ ಆ ಪ್ರಕಾರ ಮಾಡುವದು ಉಚಿತವಾಗಿದೆ' ಎಂದು ನಿರ್ಣಯಿಸಿ ಅದಕ್ಕಾಗಿ ಎಸ್. ಜಿ. ನರಸಿಂಹಾಚಾರ್ಯ, ರಾ. ಹ. ದೇಶಪಾಂಡೆ, ಗ. ಹು. ಹೊನ್ನಾಪುರಮಠ ಮೊದಲಾದವರ ಸಮಿತಿಯನ್ನು ನಿಯಮಿಸಲಾಯಿತು. ಇದೇ ಸಮ್ಮೇಲನದಲ್ಲಿಯೇ ಕನ್ನಡ ಪಾರಿಭಾಷಿಕ ಪದಗಳ ಬಗ್ಗೆಯೂ ನಿರ್ಣಯಿಸಲಾಯಿತು. ಮುಂದಿನ ಸಮ್ಮೇಲನವನ್ನು ಬೆಂಗಳೂರಲ್ಲಿ ಕೂಡಿಸಬೇಕೆಂಬುದಾಗಿಯೂ ನಿಶ್ಚಯಿಸಲಾಯಿತು. ಇದೇ ಕನ್ನಡ ಸಾಹಿತ್ಯಪರಿಷತ್ತಿನ ಬೀಜಾಂಕುರವೆಂದು ಹೇಳಬೇಕು.

ಕರ್ನಾಟಕ ಏಕೀಕರಣ :

೭-೧೦-೧೯೧೭ ರ ವ್ಯವಸ್ಥಾಪಕ ಸಮಿತಿಯ ಸಭೆಯಲ್ಲಿ, ಈ ನಿರ್ಣಯವನ್ನು ಸರ್ವಾನುಮತದಿಂದ ಪಾಸು ಮಾಡಲಾಯಿತು : "ಬ್ರಿಟಿಶ ಅಧಿಕಾರಕ್ಕೆ ಒಳಗಾದ ಎಲ್ಲ ಕನ್ನಡ ಊರು, ತಾಲೂಕು, ಜಿಲ್ಲೆಗಳನ್ನು ಒಟ್ಟುಗೂಡಿಸಿ ಒಂದು ರಾಜಕೀಯ ವಿಭಾಗವನ್ನು ಮಾಡಿ ಅದಕ್ಕೆ ಕರ್ನಾಟಕ ಪ್ರಾಂತವೆಂದು ಕರೆಯುವ ಬಗ್ಗೆ ಸರಕಾರಕ್ಕೆ ಬಿನ್ನಹ ಮಾಡಬೇಕು. ಉದಾಹರಣಾರ್ಥ ಸೊಲ್ಲಾಪುರ ಜಿಲ್ಲೆಯ ಕೆಲವು ಭಾಗ ಕನ್ನಡವಿರುತ್ತದೆ. ಮದ್ರಾಸ ಇಲಾಖೆಯಲ್ಲಿ ಬಳ್ಳಾರಿ, ದಕ್ಷಿಣ ಕನ್ನಡ ಈ ಜಿಲ್ಲೆಗಳು ಪೂರ್ಣ ಕನ್ನಡವಿದ್ದು, ಕಡಪಾ, ಕರ್ನೂಲ, ಅನಂತಪುರ ಮುಂತಾದ ಜಿಲ್ಲೆಗಳಲ್ಲಿ ಎಷ್ಟೋ ಹಳ್ಳಿಗಳೂ ತಾಲೂಕಗಳೂ ಕನ್ನಡ ಇರುತ್ತವೆ. ಇವುಗಳನ್ನೆಲ್ಲ ಒಟ್ಟುಗೂಡಿಸಿ ಒಂದು ಕರ್ನಾಟಕ ಇಲಾಖೆ ಅಥವಾ ಪ್ರಾಂತವೆಂಬ ರಾಜಕೀಯ ವಿಭಾಗವನ್ನು ಮಾಡಿದರೆ ಕನ್ನಡಿಗರ ಐಕ್ಯಕ್ಕೂ ಹಿತಕ್ಕೂ ಬೆಳವಣಿಗೆಗೂ ಅನುಕೂಲವಾಗುವದು." ಈ ದಿಸೆಯಲ್ಲಿ ಸಂಘ ಅಹರ್ನಿಶವಾಗಿ ಹೋರಾಡಿತು.

ಕನ್ನಡ ಉದ್ಧಾರಕರಲ್ಲಿ ರಸೆಲ್ ಸಾಹೇಬರಿಗೆ ಬಹಳ ಮಹತ್ವದ ಮತ್ತು ಉನ್ನತವಾದ ಸ್ಥಾನ ಇದೆ. ಈ ಭಾಗದ ಭಾಷೆ ಕನ್ನಡವೆಂದು ಕಂಡುಹಿಡಿದ ಪ್ರಥಮ ಅಧಿಕಾರಿ ಎಂಬ ಶ್ರೇಯಸ್ಸು ಅವರಿಗಿದೆ. ಅವರು ಕನ್ನಡದ ಪ್ರಾಣಪ್ರತಿಷ್ಠಾಪನೆಗಾಗಿ ಬಹು ವಿಧವಾಗಿ ಪ್ರಯತ್ನಪಟ್ಟರು. ಅವರಂಥವರೇ ಆ ಮುಂದು ಅಧಿಕಾರಿಗಳಾಗಿ ಬಂದಿದ್ದರೆ, ಕನ್ನಡದ ದೈವ ಇನ್ನೂ ಹತ್ತು ವರುಷ ಮುಂದೆ ಸಾಗುತ್ತಿತ್ತು. 'ಇಂಡಿಯನ್ ಎಜುಕೇಶನ್' ಎಂಬ ನಿಯತಕಾಲಿಕದಲ್ಲಿ ಅದರ ಸಂಪಾದಕರಾಗಿದ್ದ, ಬಿ. ನೆಲ್ಸನ ಫ್ರೇಜರ್ ಎಂಬುವರು ಅಕ್ಟೋಬರ ೧೯೧೭ ರಲ್ಲಿ ಬರೆದ ಮಾತುಗಳು ಮನನೀಯವಾಗಿವೆ :

"In one way Government are responsible for the prevailing state of things in Karnatak. The first two Educational Inspectors in the Southern Division, since the organisation of vernacalar education by Mr. E. I. Howard in 1858, were military officers ... At the time Mr. Russell took charge of the Division, a veritable chaos prevailed in it. The langaage of the people was Kanaresc, but Marathi was taught in Schools in preference to the mother tongue...... Mr. Russell put his foot down and said that the language of the people must be taught to the people...... If he had been succeeded by a fair-minded and upright Englishman, ... the Karnataka College would have been established more than 30 years ago and His Excellency would have had to think of establishing a University at Dharwar today."

ರಸೆಲ್‌ರವರು ಶಿಕ್ಷಣಾಧಿಕಾರಿಗಳೆಂದು ಅಧಿಕಾರ ವಹಿಸಿದಂದಿನಿಂದ ಕನ್ನಡದ ಏಳ್ಗೆಗಾಗಿ ಬಹುಮುಖಿ ಕಾರ್ಯಕ್ರಮವನ್ನು ಕೈಕೊಂಡರು. ರಸೆಲ್‌ರವರು ೧೮೬೬ ರ ಮೇ ತಿಂಗಳಲ್ಲಿ ಜಿಲ್ಲಾ ಪ್ರಥಮ ಅಸಿಸ್ಟಂಟ ಕಲೆಕ್ಟರರಾದ ಲಿಟ್ಲ್ ಅವರಿಂದ ಅಧಿಕಾರ ವಹಿಸಿದರು. ಆಗ ದಕ್ಷಿಣ ವಿಭಾಗದಲ್ಲಿ ಬೆಳಗಾವಿ, ಧಾರವಾಡ, ಕಲಾದಗಿ, ಕಾನಡಾ ಎಂದು ನಾಲ್ಕು ಜಿಲ್ಲೆಗಳಿದ್ದುವು. ಸುಮಾರು ೩೦೦ ಶಾಲೆಗಳು ಇವರ ಅಧಿಕಾರಕ್ಕೆ ಒಳಗಾಗಿದ್ದುವು. ಆಗ ಬೆಳಗಾವಿಯಲ್ಲಿ ಒಂದು ಹೈಸ್ಕೂಲು ಧಾರವಾಡ, ಕಾರವಾರ ಹೊನ್ನಾವರಗಳಲ್ಲಿ ಸುಪೀರಿಯರ ಆ್ಯಂಗ್ಲೋ ವರ್ನಾಕುಲರ ಶಾಲೆಗಳು ಇದ್ದುವು. ಕಲಾದಗಿಯಲ್ಲಿ ಒಂದು ಇಂಗ್ಲೀಷ ಶಾಲೆ ಆಗುವದರಲ್ಲಿತ್ತು. ಅದಕ್ಕಾಗಿ, ಅಲ್ಲಿಯ ನ್ಯಾಯಾಧೀಶ, ಕಲೆಕ್ಟರರುಗಳು ಸುಮಾರು ೫೦೦೦ ಕ್ಕಿಂತ ಹೆಚ್ಚು ಹಣ ಕೂಡಿಸಿದ್ದರು. ಕರ್ನಾಟಕದಲ್ಲಿ ಕನ್ನಡಕ್ಕೆ ಪ್ರಥಮ ಸ್ಥಾನದೊರೆಯಬೇಕೆಂದು ಪ್ರಥಮತಃ ಕಂಡುಕೊಂಡವರು ರಸೆಲ್‌ರವರು. ಅವರು ಅದಕ್ಕಾಗಿ ತುಂಬಾ ಪ್ರಯತ್ನ ಮಾಡಿದರು. ಅವರ ಈ ಪ್ರಯತ್ನವನ್ನು ಮೇ ೧೮೬೭ ರ 'ಮಠಪತ್ರಿಕೆ'ಯು ಮನೋಜ್ಞವಾಗಿ ವಿವರಿಸಿದೆ :

"ರಸೆಲ್ ದೊರೆಗಳವರು ಬಂದಂದಿನಿಂದ ಮಹಾರಾಷ್ಟ್ರ, ಗುಜರಾಥ ಪ್ರಾಂತ್ಯಗಳಲ್ಲಿಯೂ ದೇಶಭಾಷೆಗಳು ಹ್ಯಾಗೆ ಅಭಿವೃದ್ಧಿ ಹೊಂದುತ್ತವೆಯೋ, ಅದೇ ಮೇರೆಗೆ ಈ ಭಾಗದಲ್ಲಿ ಕರ್ನಾಟಕ ಭಾಷೆಯಾಗಬೇಕೆಂಬುದಾಗಿ ಅವರು ಬಹು ಯತ್ನ ಮಾಡುತ್ತಿದ್ದಾರೆ. ಈ ಉದ್ದೇಶವನ್ನು ಕೈಗೂಡಿಸಬೇಕಾಗಿ ಅವರು ಮಾಡಿದ ಉಪಾಯಗಳು ಏನಂದರೆ– ರಾವಸಾಹೇಬ ಮಹಾದೇವ ವಾಸುದೇವ ಬರ್ವೆ ಇವರು ಭಾಷಾಂತರಯೋಗ್ಯರಾಗಿ ಈ ಜಿಲ್ಲೆಯ ಡೆಪ್ಯುಟಿ ಕಲೆಕ್ಟರರ ಕೆಲಸಕ್ಕೆ ನೇಮಿಸಲ್ಪಟ್ಟದ್ದರಿಂದ ಅವರ ಸ್ಥಳದಲ್ಲಿ ಈ ಜಿಲ್ಲೆಯ ಡೆಪ್ಯುಟಿ ಇನ್ಸ್ಪೆಕ್ಟರರ ಕೆಲಸಕ್ಕೆ ಚನಬಸಪ್ಪನವರ ಯೋಜನೆಯಾಯಿತು.

ಇವರು ಮೂಲತಃ ಧಾರವಾಡದವರಾಗಿ ಜಾತಿಯಿಂದ ಲಿಂಗವಂತರಾದದ್ದರಿಂದ ಇವರು ಕನ್ನಡ ಭಾಷೆಯ ಪೂರ್ಣ ಅಭಿಮಾನಿಗಳಾಗಿರುತ್ತಾರೆಂದು ನಾವು ಹೇಳುವ ಪ್ರಯೋಜನವಿಲ್ಲ. ಇವರ ಕೈಕೆಳಗೆ ಕಾನಡಾ ಜಿಲ್ಲೆಯ ಕೆಲಸಕ್ಕೆ ನೇಮಿಸಿದ ಅಸಿಸ್ಟಂಟರಾದರೂ ಕನ್ನಡ ಭಾಷೆಯನ್ನು ಚನ್ನಾಗಿ ಬಲ್ಲವರು. ಧಾರವಾಡ ಕಲಾದಗಿ ಜಿಲ್ಲೆಗಳ ಡಿಪ್ಯುಟಿ ಇನ್ಸ್ಪೆಕ್ಟರರು ಮಹಾರಾಷ್ಟ್ರ ದೇಶದವ ರಾದಾಗ್ಯೂ ತಮ್ಮ ಶಾಲೆಗಳನ್ನು ಪರೀಕ್ಷಿಸತಕ್ಕಷ್ಟು ಕನ್ನಡ ಭಾಷೆಯನ್ನು ಕಲಿತುಕೊಳ್ಳುವ ಬಗ್ಗೆ ರಸೆಲ್ ದೊರೆಗಳು ಅವರಿಗೆ ಮಾಡಿದ ಹುಕುಮಿನ ಪ್ರಕಾರ ಅವರು ಕಲಿತುಕೊಂಡಿದ್ದಾರೆ. ಇದಲ್ಲದೆ ಕನ್ನಡ ಭಾಷೆಯ ಪರೀಕ್ಷೆ ಕೊಡಬೇಕೆಂಬುದಾಗಿ ಎಲ್ಲಾ ಶಾಲೆಗಳ ಮಾಸ್ತರರಿಗೆ ಹುಕುಂ ಫರ್ಮಾಯಿಸಿ, ಬಹಳ್ಳೋ ಜನರನ್ನೂ ಪರೀಕ್ಷಿಸಿದರು. ಶಾಲೆಗಳ ಪುಸ್ತಕಪತ್ರಿಕೆಗಳನ್ನೂ ತಿದ್ದಿ ಕನ್ನಡ ಭಾಷೆಯ ಅಭ್ಯಾಸಕ್ಕೆ ತಕ್ಕಷ್ಟು ಮಾಡಿ ಕೊಟ್ಟರು. ನಾರ್ಮಲ್ ಶಾಲೆಯ ಹೆಡ್‌ಮಾಸ್ತರ ಕೆಲಸಕ್ಕೂ ಫಸ್ಟ ಅಸಿಸ್ಟಂಟ ಕೆಲಸಕ್ಕೂ ಇಂಗ್ಲಿಷ ಭಾಷೆಯನ್ನೂ ಕನ್ನಡ ಭಾಷೆಯನ್ನೂ ಚನ್ನಾಗಿ ಬಲ್ಲವರನ್ನು ನೇಮಿಸಿ ದರು. ಕನ್ನಡ ಕಾವ್ಯಗ್ರಂಥಗಳನ್ನು ಚನ್ನಾಗಿ ಬಲ್ಲವರೂ, ಬಹು ದಿವಸ ಶಿಕ್ಷಣೆಯ ಕೆಲಸದಲ್ಲಿ ಪರಿಶ್ರಮ ಮಾಡಿದವರೂ ಆದ ಇನ್ನೊಬ್ಬ ಶಿಕ್ಷಕರನ್ನು ಅದೇ ಶಾಲೆಯಲ್ಲಿ ನೇಮಿಸಿದರು. ಈ ವರುಷ ಮಹಾರಾಷ್ಟ್ರ ೫ ನೇ ಪುಸ್ತಕವು ಕನ್ನಡದಲ್ಲಿ ಭಾಷಾಂತರಿಸಲ್ಪಟ್ಟಿತು. ೬ ನೇ ಪುಸ್ತಕವು ಪೂರ್ವ ದಲ್ಲಿಯೇ ಭಾಷಾಂತರವಾಗಿರುತ್ತದೆ. ಅದನ್ನು ಛಾಪಿಸುವ ತಜವೀಜು ನಡೆದಿದೆ."

ಅಲ್ಲದೆ, ಚನಬಸಪ್ಪನವರು ದಪ್ತರದಾರರಾಗಿ ಬಂದ ಮೇಲೆ ಕನ್ನಡದ ಅಭಿವೃದ್ಧಿಗೆ ಬಹಳ ಪರಿಶ್ರಮಿಸಿದರು. ಹಿಂದುಳಿದ ಲಿಂಗವಂತ ವಿದ್ಯಾರ್ಥಿಗಳು ಪಾಶ್ಚಿಮಾತ್ಯ ಶಿಕ್ಷಣವನ್ನು ಸ್ವೀಕರಿಸು ವಂತೆ ಪ್ರೋತ್ಸಾಹಿಸಿದರು. ಈ ಕಾಲಕ್ಕೆ ಮಿ. ರಸೆಲ್‌ಸಾಹೇಬರು ಹೊರಡಿಸಿದ ಈ ಪರಿಪತ್ರವನ್ನು ನೋಡಬಹುದು. :

ನೋಟೀಸು

ದಕ್ಷಿಣ ಭಾಗದೊಳಗಿನ ಯಾವತ್ತೂ ಸ್ಕೂಲ ಮಾಸ್ತರರಿಗೆ ತಿಳಿಸುವದೇನಂದರೆ— ೫೦ ಲಿಂಗಾ ಯತರ ಹುಡುಗರಿಂದು ಬೆಳಗಾವಿಯಲ್ಲಿ ಇಂಗ್ರೇಜಿ ಕಲಿಯುವದರ ದೆಸೆಯಿಂದ ಬರುವ ವಿದ್ಯೆಯು ಶ್ರೀ ದುರ್ಗದ ಮಹಾಸ್ವಾಮಿಗಳು ಮಾಡಿದ ವಿಷಯವಾಗಿ ಸರಕ್ಯೂಲರಗಳು ಇವತ್ತಾಗಲಿ ಅಥವಾ ನಾಳೆಯಾಗಲಿ, ನಿಮ್ಮ ಕಡೆಗೆ ಕಳುಹಿಸುವೆವು. ಆ ಸರಕ್ಯೂಲರಗಳ ಮೇಲೆ ನಮ್ಮ ಮತ್ತು ಡಿಪ್ಯುಟಿ ಇ. ಇನ್ಸ್ಪೆಕ್ಟರ ಚನಬಸಪ್ಪ ಇವರ ಸಹಿಗಳಿವೆ. ಅದರ ಈ ಸರಕ್ಯೂಲರಗಳು, ನಿಮ್ಮ ಕಡೆಗೆ ಮುಟ್ಟಿದಾಕ್ಷಣವೇ, ಅವುಗಳೊಳಗಿನ ಮಜಕೂರು ಹುಡುಗರಿಗೆ ತಿಳಿಸಿ ನಿಮ್ಮ ಊರಿನ ಶೆಟ್ಟಿ ಸಾವಕಾರರಿಗೆ ಸಹ ತಿಳಿಸಬೇಕು. ತಿಳಿಯುವದು. ತಾರೀಖು ೨೯ ಮಾಹೆ ಸಪ್ಟಂಬರ ಸನ ೧೮೬೮ ಇಸವಿ ಮುಕ್ಕಾಂ ಬೆಳಗಾವಿ.

ಎಜ್ಯುಕೇಶನಲ್ ಇನ್ಸ್ಪೆಕ್ಟರ ದಕ್ಷಿಣಭಾಗ [೧]

ಇದರಂತೆಯೇ ೧೮೬೮ ರ ಶಾಲಾಪತ್ರಿಕೆಯಲ್ಲಿ ಮಹಾಸ್ವಾಮಿಗಳ ಹೆಸರಿನಲ್ಲಿ ಹೊರಟ ನೋಟೀಸೂ ಈ ರೀತಿ ಪ್ರಸಿದ್ಧವಾಗಿದೆ :

" ಯಾವತ್ತೂ ಲಿಂಗಾಯತ ಜನರಿಗೆ ತಿಳಿಯುವವರ ದೆಸೆಯಿಂದ ಪ್ರಕಟ ಮಾಡುವದೇನಂದರೆ– ಲಿಂಗಾಯತರ ಹುಡುಗರು ಇಂಗ್ರೇಜಿ ಕಲಿತು ಶ್ಯಾಣೆರಾಗಿ ಸರಕಾರಿ ಕೆಲಸಗಳಲ್ಲಿ ಸೇರಬೇಕೆಂಬುವ

---

೧ ಶಾಲಾಪತ್ರಿಕೆ ೧೮೬೮ – ಪು. ೧೭೮.

ಉದ್ದೇಶದಿಂದ ಬೆಳಗಾಂವಿಯಲ್ಲಿ ೫೦ ಲಿಂಗಾಯತರ ಹುಡುಗರಂನು ಇಟ್ಟು ಆ ಹುಡುಗರಿಗೆ ಅಂನ ವಸ್ತ್ರ ಮೊದಲಾದವುಗಳನ್ನು ತಾಂವು ತಮ್ಮ ಸ್ವಂತ ಖರ್ಚಿನಿಂದ ಪೂರೈಸುವ ನಿಶ್ಚಯ ಶ್ರೀ॥ ಮಾಡಿದ್ದಾರೆ.

೨. ಈ ಹುಡುಗರ ಊಟ ಉಪಹಾರ ದಶಿಯಿಂದ ಒಂದು ದೊಡ್ಡ ಮನಿಯನ್ನು ಬಾಡಗೀಲೇ ತೆಗೆದುಕೊಂಡಿದೆ. ಈ ಹುಡುಗರೆಲ್ಲಾ ಆ ಮನಿಯಲ್ಲಿ ಇರಬೇಕಾಗುವದು. ಊಟ ಉಪಹಾರಗಳು ನೆಟ್ಟಗೆ ಆಗುವದರ ದಶಿಯಿಂದ ಒಬ್ಬ ಸಂಭಾವಿತ ಲಿಂಗಾಯತನಂನು ಇದರ ಮೇಲೆ ನೇಮಿಸಿದೆ. ಇವರು ಹುಡುಗರ ಮೇಲೆ ಯೆಲ್ಲಾ ಬಂದೋಬಸ್ತ ಇಡುವರು. ಹೈಸ್ಕೂಲಿಗೆ ಹೋಗಲಿಕ್ಕೆ ಯೋಗ್ಯ ರಿದ್ದವರಂನ ಹೈಸ್ಕೂಲಿಗೆ ಕಳುಹಿಸುವೆವು. ಮತ್ತು ಸಂಣ ಸಾಲಿಗೆ ಹೋಗಲಿಕ್ಕೆ ತಕ್ಕವರಿದ್ದರೆ ಅವರಂನ ಮೊದಲು ಅಲ್ಲಿಗೆ ಕಳುಹಿಸಿ ಬಳಿಕ ಹೈಸ್ಕೂಲಿಗೆ ಕಳುಹಿಸುವೆವು. ಈ ಹುಡುಗರಿಗೆ ಕಲಿಯುವದರ ಹೊರ್ತು ಮತ್ತಿನ್ನೇನೂ ಯೆರಡನೇ ಕೆಲಸಾ ಮಾಡುವದು ಬೀಳಲಿಕ್ಕಿಲ್ಲಾ. ಅಡಗಿ ಮಾಡುವದರ ದಶಿಯಿಂದ ಮತ್ತು ನೀರು ತರುವದರ ದಶಿಯಿಂದ ಬೇರೆ ಮನುಷ್ಯರಂನ ಯಿಡುವೆವು.

೩. ಯಾವ ಹುಡುಗರ ಮನಸ್ಸಿನಲ್ಲಿ ಇಂಗ್ರೇಜಿ ಕಲಿತು ಸರಕಾರದ ಕೆಲಸಗಳಲ್ಲಿ ಸೇರಬೇಕೆಂಬು ವದದೆ ಅವರು ತಾರೀಖು ೨ ನವಂಬರ ೧೮೬೮ ದಿವಸಾ ೧೦ ಘಂಟೆಕ್ಕೆ ಕೆಳಗೆ ಸಹಿ ಮಾಡಿದವರ ಕಡಿಗೆ ಬೆಳಗಾಂವಿಯಲ್ಲಿ ಹಾಜರಾಗಬೇಕು.

೪. ಹಂನೆರಡು ವರ್ಷದೊಳಗಿನವರು ಮತ್ತು ಹದಿನೆಂಟು ವರುಷ ಮೀರಿದವರು ಬರಬಾರದು. ಮತ್ತು ತಂಮ ನಡತಿ ನೆಟ್ಟಗಿರುವ ಬಗ್ಗೆ ಸಂಭಾವಿತ ಜನರ ಕಡಿಯಿಂದ ಸರಟೀಫಿಕಿಟು ತರಬೇಕು. ಸರಕಾರದ ಸಾಲಿಗಳಲ್ಲಿ ಕಲಿಯುತ್ತಿರುವ ಹುಡುಗರು ತಮ್ಮ ತಮ್ಮ ಪಂತೋಜಿಗಳ ಕಡೆಯಿಂದ ಸರಟೀಫಿಕೆಟು ತರಬೇಕು. ಆ ಸರಟೀಫಿಕೆಟುಗಳಲ್ಲಿ ಈ ಹುಡುಗನಿಗೆ ಪರೀಕ್ಷೆದಲ್ಲಿ ಪಾಸಾಗುವಷ್ಟು ಬರುತ್ತದೆಂದು ಬರೆದಿರಬೇಕೂ. ಕೆಳಗೆ ಬರೆದ ವಿಷಯಗಳಲ್ಲಿ ಪರೀಕ್ಷಾ ಆಗುವದು. ಪರೀಕ್ಷೆ ದಲ್ಲಿ ಇಳಿದವರ ಹೊರ್ತು ಯೆರಡನೇಯವರಂನ ತೆಗೆದುಕೊಳ್ಳಲಿಕ್ಕಿಲ್ಲಾ. ಇಂಗ್ರಜಿ ಕಲಿತವರಿದ್ದರೆ ಮುಂಚೆ ಅವರನ್ನು ತೆಗೆದುಕೊಂಡ ಬಳಿಕ ಇಂಗ್ರಜಿ ಬಾರದವರಂನ ತೆಗೆದುಕೊಳ್ಳುವೆವು. ತಮ್ಮ ಹತ್ರ ಈಗಿರುವ ಅಭ್ಯಾಸದ ಪುಸ್ತಕಗಳನ್ನು ಮತ್ತು ಸ್ಲೇಟ ಪಾಟಿಯನ್ನು ತೆಗೆದುಕೊಂಡು ಬರಬೇಕು........

ತಾ. ೨೬–೯–೬೮

ಡಿ. ಇ. ಇ. ಜಿಲ್ಲಾ ಬೆಳಗಾಂವಿ

ದಕ್ಷಿಣ ಭಾಗದ ಇಜುಕೇಶನಲ್ ಇನಸ್ಪೆಕ್ಟರ

ಕಾಲಕ್ರಮದಲ್ಲಿ ಕನ್ನಡದ ಅಭ್ಯಾಸಕ್ಕೆ ಅನುಕೂಲವಾಗುವಂತೆ ಸಂಸ್ಕೃತದ ತರಬೇತಿಯ ಯೋಜನೆಯನ್ನೂ ಮಾಡಲಾಯಿತು. ಈ ಬಗ್ಗೆ ೨೭–೧೧–೧೮೭೯ ರಂದು ಹೊರಟ ಪರಿಪತ್ರ ನಂ.೧೧೧೨ ರಲ್ಲಿ ಹೀಗೆ ಹೇಳಲಾಗಿದೆ :

"ದಕ್ಷಿಣ ಭಾಗದೊಳಗಿನ ಡಿಪುಟಿ ಇಜ್ಯುಕೇಶನಲ್ ಇನಸ್ಪೆಕ್ಟರರಿಗೆ ತಿಳಿಯಪಡಿಸುವದೇನಂದರೆ– ಫರ್ಸ್ಟಗ್ರೇಡ ಅಂಗ್ಲೋ ವೆರ್ನಾಕ್ಯುಲರ ಶಾಲೆಗಳಲ್ಲಿ ಸಂಸ್ಕೃತ ಶಿಕ್ಷಕರನ್ನು ನೇಮಿಸಬೇಕಾಗಿದೆ. ಅವರಿಗೆ ತಿಂಗಳಿಗೆ ೩೦ ರೂಪಾಯಿಗಳಂತೆ ಕಾಯಂ ಪಗಾರವು ಫಿಫಂಡಿನೊಳಗಿಂದ ಅಥವಾ ಬೇರೆ ಯಾವದೊಂದು ಅನುಕೂಲವಿದ್ದ ಉತ್ಪನ್ನದೊಳಗಿಂದ ಸಿಕ್ಕುವದು. ಈ ಶಿಕ್ಷಕರನ್ನು ಕೆಲಸದ ಮೇಲೆ ನೇಮಿಸುವದಕ್ಕೆ ಮುಂಚೆ, ಇವರು ಒಂದು ವರ್ಷ ಟ್ರೇನಿಂಗ ಕಾಲೇಜದಲ್ಲಿ ಶಿಕ್ಷಣ ಪದ್ಧತಿಯನ್ನು

ಕಲಿಯಬೇಕಾಗುವದಲ್ಲದೆ, ತಮ್ಮ ಸಂಸ್ಕೃತ ಅಭ್ಯಾಸದ ಬಗ್ಗೆ ಪರೀಕ್ಷೆಯ ಕೊಡಬೇಕಾಗುವದು. ಇವರು ಶಾಲೆಗಳಲ್ಲಿ ಕನ್ನಡು ಭಾಷೆಯಿಂದ ಸಂಸ್ಕೃತವನ್ನು ಕಲಿಸಬೇಕಾಗುವದು. ಲಿಂಗವಂತರಲ್ಲಿ ಅಯ್ಯಗಳೂ, ಬ್ರಾಹ್ಮಣರಲ್ಲಿ ಆಚಾರ್ಯರೂ ಈ ಕೆಲಸಕ್ಕೆ ಯೋಗ್ಯರಾಗಿರುವ ಕಾರಣ ಅವರಲ್ಲಿ ಯೋಗ್ಯರಾಗಿರುವವರನ್ನೂ ಕುರಿತು ಶಿಫಾರಸಿಯನ್ನು ಮಾಡಬಹುದು........

ಡಬ್ಲು ಎ. ರಸೆಲ್

೧೮೬೯ ರಿಂದ ಹೆಣ್ಣುಮಕ್ಕಳ ಹೆಚ್ಚಿನ ಶಿಕ್ಷಣದ ಬಗ್ಗೆಯೂ ಜಾಗ್ರತೆ ವಹಿಸಲಾಯಿತು. ಆ ಕಾಲದಲ್ಲಿ ಮುಂಬಯಿಯಲ್ಲಿದ್ದ ಹೆಂಗಸರ ನಾರ್ಮಲ್ ಸ್ಕೂಲಿನಲ್ಲಿ ಅನೇಕ ವಿದ್ಯಾರ್ಥಿನಿಯರಿಗೆ ಸ್ಥಳ ದೊರಕಿಸಿ ಅವರಿಗೆ ಶಿಷ್ಯವೃತ್ತಿಯನ್ನು ಕೊಡುವ ಪರಿಪಾಠವನ್ನು ಪ್ರಾರಂಭಿಸಲಾಯಿತು. ಈ ಬಗ್ಗೆ ಜೆ. ಬಿ. ಪೀಲ್ ಡಾಯರೆಕ್ಟರರು ೨೫–೬–೧೮೬೯ ರಂದು ಹೊರಡಿಸಿದ ಪರಿಪತ್ರ ಹೀಗಿದೆ :

'' ಮುಂಬಯಿ ಹೆಂಗಸರ ನಾರಮಲ್ ಸ್ಕೂಲಿನಲ್ಲಿ ಇರತಕ್ಕ ಪಗಾರದ ವಿದ್ಯಾರ್ಥಿಗಳು.

ಸರಕಾರದವರು ಹೆಂಗಸರಂನು ಪಂತೋಜಿಯ ಕೆಲಸಕ್ಕೆ ತಯಾರ ಮಾಡಿಸಿ ಮುಂಬಯಿ ಯಲ್ಲಿಯೂ ಹೊರಗಿನ ಪ್ರಾಂತದಲ್ಲಿಯೂ ಯಿರುವ ಹೆಣಹುಡುಗರ ಸಾಲಿಯಲ್ಲಿ ಪಂತೋಜಿ ಕೆಲಸಕ್ಕೆ ಕಳಿಸಬೇಕೆಂಬದಾಗಿ ಮುಂಬಯಿಯಲ್ಲಿ ಹೆಂಗಸರ ನಾರಮಲ್ ಸ್ಕೂಲ ಸ್ಥಾಪನೆಯ ಮಾಡಿದ್ದಾರೆ.

ಈ ನಾರ್ಮಲ್ ಸ್ಕೂಲದ ಮುಖ್ಯ ಮಾಸ್ತರ ಕೆಲಸದ ಮೇಲೆ ಯುರೋಪಿಯನ್ ದೊರೆಸಾನಿ ಯನ್ನು ನೇಮಿಸಲಾಧೀತು. ಎರಡನೇ ಶಿಕ್ಷಕರು ಇಂಗ್ರಜೀ ಭಾಷೆಯನ್ನು, ದೇಶಭಾಷೆಯನ್ನು ಬಲ್ಲವ ರಿರುವರು. ಈ ಸಾಲೆಯಲ್ಲಿ ಧರ್ಮಸಂಬಂಧದ ಹೊರ್ತು ಬೇರೆ ವ್ಯವಹಾರಿಕ ವಿದ್ಯವನ್ನೇ ಕಲಿಸ ಲಾದೀತು.

ಈ ಸಾಲೆಯಲ್ಲಿ ಬಹಳ ಮಾಡಿ ಹತ್ತು ಮಂದಿಯಕಿಂತಲು ಹೆಚ್ಚು ವಿದ್ಯಾರ್ಥಿಗಳನ್ನು ಇಟ್ಟು ಅವರಿಗೆ ತಿಂಗಳೊಂದಕ್ಕೆ ಒಬ್ಬೊಬ್ಬರಿಗೆ ಹತ್ತು ರೂಪಾಯಿಗಳಿಂದ ಇಪ್ಪತ್ತೈದು ರೂಪಾಯಿಗಳ ವರೆಗೆ ಸಂಬಳ ಮಾಡಲಾದೀತು. ಈ ಸಾಲಿಗೆ ಬರುವದಕ್ಕೆ ಸಿದ್ಧ ಇದ್ದೇವೆಂದು ತಮ್ಮ ಹೆಸರುಗಳನ್ನೂ ಬರೆದು ಕಳಿಸಿದಂಥ ತರುಣ ಸ್ತ್ರೀಯರೊಳಗೆ ಯೋಗ್ಯರಿದ್ದು ಈ ಸಾಲೆಯೊಳಗಿನ ಕಟ್ಟಳೆಗಳನ್ನು ಒಪ್ಪಿಕೊಳ್ಳುವವರನ್ನು ಆರಿಸಿಕೊಂಡು ನೇಮಿಸಲಾದೀತು.

ಈ ಸಂಬಳ ವಿದ್ಯಾರ್ಥಿಗಳಿಗೆ ೩ ವರ್ಷಗಳಿಗಿಂತ ಕಡಿಮೆ ನಡಿಯಲಿಕ್ಕಿಲ್ಲ. ಯಾವತ್ತು ಜಾತಿಯ ಸ್ತ್ರೀಯರನ್ನು ಕೆಲವು ನಿಯಮಿತ ಪ್ರಮಾಣಗಳಿಂದ ತೆಗೆದುಕೊಳ್ಳಲಾದೀತು.

ಸಂಬಳಕ್ಕೆ ಯೋಗ್ಯರೆಂದು ಆರಿಸಲ್ಪಟ್ಟ ಸ್ತ್ರೀಯರು ಮುಂಬಯಿಯೊಳಗೆ ತಮ್ಮ ತಾಯಿ–ತಂದೆ ಗಳ ಬಳಿಯಲ್ಲಾಗಲಿ, ಸಂರಕ್ಷಣ ಮಾಡುವವರಲ್ಲ್ಯಾಗಲಿ, ಸ್ನೇಹಿತರಲ್ಲ್ಯಾಗಲಿ ನಿಂತುಕೊಳ್ಳಬೇಕು. ಅವರು ಸಾಲಿಯೊಳಗೆ ಕಲಿಯುವತನಕ ಅವರ ಉದರನಿರ್ವಾಹಕ್ಕೆ ಮೇಲೆ ಹೇಳಿದ ಸ್ಕಾಲರಶೀಪ (ಸಂಬಳವನ್ನು) ಕೊಡಲಾದೀತು.

೧೨ ವರ್ಷದ ಒಳಗಿನ ವಯಸ್ಸುಳ್ಳ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವದಿಲ್ಲ. ಹೆಚ್ಚು ವಯಸ್ಸುಳ್ಳವರನ್ನು ಪಸಂದ ಮಾಡಲಾದೀತು. ಮರಾಠಿ ಭಾಷೆಯನ್ನಾಗಲಿ, ಗುಜರಾಥಿ ಭಾಷೆ

ಯನ್ನಾಗಲಿ, ಕನ್ನಡ ಭಾಷೆಯನ್ನಾಗಲಿ ಚನ್ನಾಗಿ ಬಲ್ಲಂಥ ವಿಧ್ಯಾರ್ಥಿಗಳನ್ನೇ ಪಸಂದ ಮಾಡಲಾದೀತು........" —ಇತ್ಯಾದಿ.

ಈ ನಾರ್ಮಲ್ ಸ್ಕೂಲ ಕಮಿಟಿಯ ಸದಸ್ಯರಾಗಿ ಡಾಕ್ಟರ ಭಾವುದಾಜೀ. ಡಾಕ್ಟರ ಆತ್ಮಾರಾಮ ಪಾಂಡುರಂಗ, ಮಹದೇವ ಗೋವಿಂದ ರಾನಡೆ ಮೊದಲಾದವರಿದ್ದರು.

ರಸೆಲ್‌ರವರ ಈ ಕನ್ನಡೀಕರಣದ ಯೋಜನೆಗೆ ಆಕ್ಷೇಪ ವ್ಯಕ್ತವಾದಂತೆಯೂ ಕಂಡುಬರುತ್ತದೆ. ಈ ಭಾಗದ ದಫ್ತರುಗಳನ್ನೆಲ್ಲ ಕನ್ನಡ ಭಾಷೆಯಲ್ಲಿಯೇ ಇಡಬೇಕೆಂದು ದಿನಾಂಕ ೨೮ ಮಾರ್ಚ ೧೮೬೬ ರಂದು ಮಿ. ರಸೆಲ್‌ರವರು ಆಜ್ಞೆ ಇತ್ತಂತೆ ಕಂಡುಬರುತ್ತದೆ. ಅದಕ್ಕೆ ಹಲವು ಆಕ್ಷೇಪಗಳು ವ್ಯಕ್ತವಾದದ್ದರ ಮೂಲಕ ರಸೆಲ್‌ರವರು ಅದನ್ನು ಸ್ವಲ್ಪ ಬದಲಿಸಿ ಮರಾಠಿಯಲ್ಲಿ ಈ ರೀತಿ ಪುನಃ ಜಾಹೀರಾತನ್ನು ಕೊಟ್ಟಿದ್ದಾರೆ :

"........ಯಾ ಭಾಗಾಂತೀಲ ದಫ್ತರ ಕಾನಡೀಂತ ಠೇವಣ್ಯಾ ಬದ್ದಲೀ ಜಾಹೀರಾತ ತಾ. ೨೮ ಮಾರ್ಚ ೧೮೬೬ ಇಸವೀಸ ದಿಲೀ ಹೋತೀ. ತ್ಯಾಸ ದೇಸಾಚೀ ಸ್ಥಿತಿ ಪಾಹೂನ ವ ಆಪಲ್ಯಾ ಪೈಕೀಂ ಕಿತೀ ಏಕ ಅಧಿಕಾರ್ಯಾಂಚಾ ಅಭಿಪ್ರಾಯ ಐಕೂನ ತೀ ನೋಟೀಸ ರದ್ದ ಕರೂನ, ಹೀ ನೋಟೀಸ ದಿಲೀ ಆಹೇ. ತರ ೧ ಜಾನೇವಾರೀ ೧೮೬೭ ಇಸವೀ ಪರ್ಯಂತ ಏಕಂದರ ಕಾಮ ಜ್ಯಾ ಭಾಷೇಂತ ಚಾಲವೀಣ್ಯಾರೇ ಸೋಇ ಪಡೇಲ ತ್ಯಾ ಭಾಷೇಂತ ಚಾಲವೂನ ೧ ಜಾನೇವಾರಿ ೧೮೬೭ ಇಸವೀ ಪಾಸೂನ್ ಪತ್ರವ್ಯವಹಾರ ಕಾನಡೀಂತ ಠೇವೂನ ಹಿಶೋಬೀ ವಗೈರೆ ಕಾಮ ಸೋಇ ಪಡೇಲ ತ್ಯಾ ಭಾಷೇಂತ ಚಾಲವಾವೇ ಕಳಾವೇ"

ಡಿಪುಟಿ ಚನಬಸಪ್ಪನವರು ಈ ಪಂತೋಜಿಗಳು ಕನ್ನಡ ಶಾಲಾ ಶಿಕ್ಷಕರಾಗುವಂತೆಯೂ ಬಹುವಿಧವಾಗಿ ಪ್ರಯತ್ನಿಸಿದರು. ಯಾವ ಸಣ್ಣ ವಿಷಯವೂ ಅವರ ಸೂಕ್ಷ್ಮದೃಷ್ಟಿಯಿಂದ ಮರೆಯಾಗಲಿಲ್ಲ. ಶಾಲಾ ಮಾಸ್ತರರು ಸಹಿ ಮಾಡುವುದು, ಪತ್ರ ಬರೆಯುವುದು— ಮೊದಲಾದ ಎಲ್ಲ ಅಂಶಗಳನ್ನೂ ಅವರು ಗಮನಿಸಿ ಪರಿಪತ್ರಗಳ ಮೂಲಕ, ಎಚ್ಚರಿಕೆಗಳ ಮೂಲಕ ಅವರಿಗೆ ಶಿಕ್ಷಣವನ್ನಿತ್ತರು.

ಆ ಕಾಲಕ್ಕೆ, ಶಾಲಾ ಮಾಸ್ತರರು ವರಿಷ್ಠಾಧಿಕಾರಿಗಳ ಕೂಡ ಪತ್ರವ್ಯವಹಾರವನ್ನು ಮಾಡುವಾಗ್ಗೆ ಸಮಗ್ರ ಪತ್ರವನ್ನೆಲ್ಲ ಕನ್ನಡದಲ್ಲಿ ಬರೆದು ಕೊನೆಗೆ ಮೋಡಿಯಲ್ಲಿ ಬರೆಯುತ್ತಿದ್ದ ಪರಿಪಾಠವಿದ್ದಿತು. ಚನಬಸಪ್ಪನವರು ಒಂದು ಪರಿಪತ್ರವನ್ನು ಹೊರಡಿಸಿ, ಹೀಗೆ ಬರೆಯಬಾರದೆಂದು ಆದೇಶವಿತ್ತರು.

"ಬೆಳಗಾವಿ ಜಿಲ್ಲೆದೊಳಗಿನ ಯಾವತ್ತೂ ಸ್ಕೂಲ ಮಾಸ್ತರರಿಗೆ ತಿಳುಹಿಸುವದೇನಂದರೆ— ಕೆಲವು ಮಾಸ್ತರರು ಕನ್ನಡ ಪತ್ರಗಳನ್ನು ನಮ್ಮ ಕಡಿಗೆ ಬರದು, ಅವುಗಳಲ್ಲಿ ಕಡಿಗೆ 'ಶಶ್ಯೆ ಶ್ರುತ ದ್ಯೇಯಯೇ ವಿನಂತಿ (?)' ಅಥವಾ ಹೀಗೆ ಮತ್ತೇನಾದರೂ ಬರೆಯುತ್ತಿರುತ್ತಾರೆ. ಆದರೆ ಈ ವಹಿವಾಟು ಬಂದ ಮಾಡಬೇಕು. ಕನ್ನಡ ಪತ್ರಗಳಲ್ಲಿ ಯಾವತ್ತೂ ಕನ್ನಡ ಬರಿಯಬೇಕು. ಅದೇ ಆರೇ ಪತ್ರಗಳಲ್ಲಿ ಯಾವತ್ತೂ ಆರೇ ಬರಿಯಬೇಕು. ತಾ॥ ೧೨ ನೇ ಸಪಟಂಬರ ಸನ ೧೮೬೮ ಯಿ॥ ಮುಕ್ಕಾಂ ಬೆಳಗಾಂವಿ.

ಡಿ. ಇ. ಇ. ಜಿಲ್ಲಾ ಬೆಳಗಾಂವಿ

೧೮೬೮ ನೆಯ ಇಸವಿಯಲ್ಲಿ ಭುಜಂಗರಾವ ಹುಯಿಲಗೋಳ ಅವರು ಬೆಳಗಾವಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾಗಿದ್ದಾಗ ರಂಗೋ ಗೋಪಾಲ ಎಂಬ ಕಾಲೇಜ ವಿದ್ಯಾರ್ಥಿಯು ಪಹ್ಯೆಟ

ಇನಸ್ಪೆಕ್ಟರರ ಹುಕುಮಿನ ಮೇರೆಗೆ ತನ್ನ ಶಾಲೆಗೆ ಹಾಜರಾಗಿ ಆ ಬಗೆಗೆ ಪ್ರಿನ್ಸಿಪಾಲರ ಮುಖಾಂತರ ಡೆಪ್ಯೂಟಿ ಇನಸ್ಪೆಕ್ಟರರಿಗೆ ಮಾಡಿಕೊಂಡ ವರದಿಯಲ್ಲಿ ಆತನು ತನ್ನ ಸಹಿಯನ್ನು ಮರಾಠಿಯಲ್ಲಿ ಮಾಡಿದ್ದನು. ಈ ರಿಪೋರ್ಟು ತಮ್ಮ ಕೈಗೆ ಬಂದೊಡನೆಯೇ ಮರಾಠಿ ಸಹಿಯನ್ನು ನೋಡಿ ಡೆಪ್ಯೂಟಿ ಇನಸ್ಪೆಕ್ಟರರಾದ ಚನ್ನಬಸಪ್ಪನವರು ಹೀಗೆ ಬರೆಯುತ್ತಾರೆ :

ನಂ. ೭೩೩–೧೮೬೮–೬೯

ಪ್ರಿಯ ಭುಜಂಗರಾವ,

ಮರಾಠಿಯಲ್ಲಿ ಸಹಿ ಮಾಡುವದು ಅವಶ್ಯವಿಲ್ಲವೆಂದು ನಿಮ್ಮ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಅವರ ಅಂಕಿತವು ಕನ್ನಡದಲ್ಲಿಯೇ ಇರುವುದು ಅತ್ಯವಶ್ಯವಿದೆ.

ನಿಮ್ಮ

ಬೆಳಗಾಂವ
೨೨–೮–೬೮

ಚನಬಸಪ್ಪ ಧಾರವಾಡ
ಡೆ. ಎ. ಇ. ಬೆಳಗಾಂವ

ಈ ಹುಕುಮಿನ ಮಜಕೂರನ್ನು ಪ್ರಿನ್ಸಿಪಾಲ ಭುಜಂಗರಾಯರು ಸರಕ್ಯೂಲರ ಮೂಲಕ ಎಲ್ಲ ವಿದ್ಯಾರ್ಥಿಗಳಿಗೆ ತಿಳಿಸಿದರು.

ಈ ಕಾಲದಲ್ಲಿ ವಿದ್ಯಾರ್ಥಿಗಳ ಗಮನ ಮರಾಠಿಯ ಕಡೆಗೇ ಇನ್ನೂ ಹೆಚ್ಚಾಗಿ ಇದ್ದದ್ದನ್ನು ಕಂಡು ಕ್ರಿ. ಶ. ೧೮೭೦ ರಲ್ಲಿ ಡೆಪ್ಯೂಟಿ ಚನ್ನಬಸಪ್ಪನವರು ಭುಜಂಗರಾಯರಿಗೆ ಬರೆದ ಒಂದು ಪತ್ರದಲ್ಲಿ ಹೀಗಿದೆ :

೨–೩–೭೦
ನರಗುಂದ

ಪ್ರಿಯ ಭುಜಂಗರಾವ,

ಈಗ ನಮ್ಮ ಶಾಲೆಗಳಲ್ಲಿ ಮರಾಠಿಯನ್ನು ಕಲಿಸುವುದು ಅವಶ್ಯವಿಲ್ಲ. ಶಿಕ್ಷಕರ ಯಶಸ್ಸು ಕೇವಲ ಅವರು ಕನ್ನಡವನ್ನು ಹೇಗೆ ಕಲಿಸುವರೆಂಬುದರ ಮೇಲೆಯೇ ಅವಲಂಬಿಸಿರುತ್ತದೆ. ಇದನ್ನು ನಿಮ್ಮ ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ಸ್ಪಷ್ಟವಾಗಿ ತಂದುಕೊಡಬೇಕು.

ನಿಮ್ಮ,
(ಸಹಿ)
ಚನ್ನಬಸಪ್ಪ ಧಾರವಾಡ
ಡೆ. ಎ. ಇ. ಧಾರವಾಡ

ಉತ್ತರ ಕರ್ನಾಟಕದಲ್ಲಿಯ ಜಾಗೃತಿ :

ಇಂಥ ವಿಷಮ ಪರಿಸ್ಥಿತಿಯಲ್ಲಿ ಉತ್ತರ ಕರ್ನಾಟಕದ ಹಲವು ಉದಾತ್ತ ಜೀವಿಗಳಿಗೆ ಈ ತಮಂಧಕಾರವನ್ನು ಬಿಟ್ಟು ಹೊರಬರುವ ಪ್ರಜ್ಞೆ ಕುದುರಿತು. ಈ ದಿಸೆಯಲ್ಲಿ ಸಮಗ್ರ ಕನ್ನಡ ನಾಡಿನ ದೃಷ್ಟಿಯಿಂದ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ಮಾಡಿದ ಪ್ರಯತ್ನವನ್ನು ಈ ಮೊದಲೇ ವರ್ಣಿಸಿದೆ. ಈ ಬಗ್ಗೆ ಸನ್ ೧೯೨೧ ರಲ್ಲಿ ಬರೆಯುವಾಗ, ಶ್ರೀ ದ. ರಾ. ಬೇಂದ್ರೆಯವರು ಹೀಗೆ ಹೇಳಿದ್ದಾರೆ :

"ಈ ಅಸ್ವತಂತ್ರ ಕಾಲದಲ್ಲಿಯೂ ನಮ್ಮ ಪೂರ್ವ ಕವಿಯ ಕಾಲದ ಪ್ರಭಾವದಿಂದಲೂ ಹೊಸದು ಹಳೆದ ತಿರುಳ್ಗನ್ನಡದ ನಾಡಿನ ನಡುಮನೆಯಾದ ಧಾರವಾಡದ ಪ್ರಾಂತದಲ್ಲಿರುವ ಕೆಲವು ಜೀವಿಗಳಿಗೆ ಅಸಹ್ಯವಾಗಿತ್ತು. ಬೆಳಗಾಂವಿಗೆ ಹತ್ತಿರದ ಮರಾಠಿಯು ಗ್ರಸಿಸುವುದು ಈಗೀಗ ಬಿಡಹತ್ತಿದೆ. ಮೈಸೂರಿನವರಲ್ಲಿ ಈಗೀಗ ಏಕ ಕರ್ನಾಟಕ ಭಾವನೆಯು ಬಲಿಯಹತ್ತಿದೆ. ಬಳ್ಳಾರಿಯವರು ಇದೇ ಎಲ್ಲಿಯೋ ಕನ್ನಡ ತಿಳಿಯುತ್ತಿರುವರು. ಮಂಗಳೂರಿನಲ್ಲಿ ಇದೇ ಎಲ್ಲಿಯೋ ರಾಷ್ಟ್ರೀಯ ವಾಗ್ಯುದ್ಧ ಮಾಡುತ್ತಿರುವರು. ಹೈದರಾಬಾದಿನ ಕನ್ನಡಿಗರು ಮಿಸುಕಾಡುತ್ತಿದ್ದರೂ, ಇನ್ನೂ ಅವರಿಗೆ ಕನ್ನಡ ಮಂತ್ರದ ಅರ್ಥವೇ ಹೊಳೆದಿಲ್ಲ. ಕಾರವಾರದ ಕನ್ನಡಿಗರು ಚೈತನ್ಯದ ಚಿಹ್ನವನ್ನು ತೋರಿಸಹತ್ತಿದ್ದರೂ, ಇನ್ನೂ ಅವರಿಗೆ ಕನ್ನಡ ದೇವಿಯ ಇಡೀ ಮೂರ್ತಿಯು ಕಂಡೇ ಇಲ್ಲ. ಆದರೆ ಧಾರವಾಡದವರಿಗೆ ಮಾತ್ರ ಅಸ್ಪಷ್ಟವಾಗಿಯೇ ಇರಲೊಲ್ಲದೇಕೆ.. ಮೊದಲಿನಿಂದ ಕನ್ನಡದ ಮಂತ್ರವೂ, ಕರ್ನಾಟಕ ದೇವಿಯ ಮೂರ್ತಿಯೂ ಕಂಡಿತ್ತು." ೧

ಕನ್ನಡದ ಈ ನವೋದಯ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ಸ್ವಾಭಾವಿಕವಾಗಿಯೇ ಧಾರವಾಡವು ಧುರೀಣತ್ವವನ್ನು ವಹಿಸಿತು. ಕನ್ನಡದ ದಾಸಯ್ಯರಾಗಿ ಇಲ್ಲಿಯ ಲೇಖಕರು ನಾಡಿನ ತುಂಬೆಲ್ಲ ಕನ್ನಡದ ಪ್ರಜ್ಞೆ ಪ್ರವಹಿಸುವಂತೆ ಪ್ರಯತ್ನ ಮಾಡಿದರು.

ಈ ಹೊಸ ಪ್ರಜ್ಞೆಯ ಮೂಲ ಸ್ಫೂರ್ತಿ ಇಂಗ್ಲಿಷ ಸಾಹಿತ್ಯದ ಸಂಪರ್ಕವೆಂದೇ ಹೇಳಬೇಕು. ಇಂಗ್ಲಿಷ ಬಾರದ ಲೇಖಕರು ಬಂಗಾಲಿ ಇಲ್ಲವೆ ಮರಾಠಿಯಿಂದ ಈ ನವಚೈತನ್ಯವನ್ನು ಪಡೆಯಲೆತ್ನಿಸಿದರು. ಕ್ರಿ. ಶ. ೧೮೮೦ ರಿಂದ ಕ್ರಿ. ಶ. ೧೯೩೫ ರ ವರೆಗಿನ ಈ ಕಾಲವಿಂದ ಕನ್ನಡ ಸಾಹಿತ್ಯದ ನವೋದಯ ಕಾಲವೆಂದು ಹೇಳಬೇಕು. ಹಳೆಯ ಪರಂಪರೆಯ ಜತೆಗೆ ಹೊಸ ಉತ್ಸಾಹ, ಗಾಳಿಯಲ್ಲಿ ತೇಲಿ ಬಂತು. ಈ ನವೀನ ಪ್ರಜ್ಞೆಯ ಬಗ್ಗೆ ಇ. ಪಿ. ರೈಸರವರು ಹೀಗೆ ಹೇಳುತ್ತಾರೆ :

"With the nineteenth century begins an entirely new period of Kanarese literature, brought about by the influence of English rule in India, the impact of European civilisation, the introduction of Western scientific methods of research and ideals of scholarship. The reorganisation of the education of the country on western lines has largely increased the reading public, and extended the knowledge of and desire for literature, which now takes the form almost entirely of prose." ೨

ಈ ಹೊಸ ಸಂಪರ್ಕಗಳ ಮೂಲಕ ಉತ್ತರ ಕರ್ನಾಟಕದಲ್ಲಿಯೂ ಮತ್ತು ಸಮಗ್ರ ಕನ್ನಡ ನಾಡಿನಲ್ಲಿಯೂ ಅನೇಕ ವಿಧವಾದ ಕನ್ನಡ ಕೆಲಸ ನಡೆಯಿತು. ಈ ಬಗ್ಗೆ ಶ್ರೀ ದ. ರಾ. ಬೇಂದ್ರೆಯವರು ಹೀಗೆ ಹೇಳಿದ್ದಾರೆ :

"ಸುಮಾರು ೧೮೮೦ ರಲ್ಲಿ ಇಲ್ಲಿ ಅನ್ಯಮನಸ್ಕತೆ ಅಸ್ತವಾಗಿ ಆತ್ಮೀಯಮನಸ್ಕತರ ಉದಯವಾಯಿತು. ಈ ಹೊತ್ತಿಗೆ ೩-೪ ಕನ್ನಡ ಪತ್ರಿಕೆಗಳು ಹೊರಡಹತ್ತಿದ್ದವು. ಅವರೆ, 'ಧಾರವಾಡ ವೃತ್ತ' (ಧಾರವಾಡ), 'ಬೆಳಗಾಂವ ಸಮಾಚಾರ' (ಬೆಳಗಾಂವ), 'ಹಿತೇಚ್ಛು' (ಕಲಾದಗಿ, ಈಗಿನ ವಿಜಾಪುರ ಜಿಲ್ಲಾ) ಮುಂತಾದ ಮರಾಠಿಯಷ್ಟು ಪತ್ರಿಕೆಗಳಿದ್ದ ಮಾನವು ನಮ್ಮ ಪತ್ರಿಕೆಗ

೧ ಸಾಹಿತ್ಯ ಸಂಶೋಧನ : ದ. ರಾ. ಬೇಂದ್ರೆ ೧೯೪೦– ಪು. ೧೬೩.

೨ Kanarese Literature, E. P. Rice, 1921, P. 99.

ಗದ್ದಿಲ್ಲ. ಅನುಕರಣದ ಲಕ್ಷಣವೇ ಇದು. 'ಸುದ್ದಿಯ ಸೊಬಗು', 'ಶಾಲಾ ಪತ್ರ', 'ಮಂಗಳೂರ ಪುರ ಸಮಾಚಾರ', ಮತ್ತು 'ಚಂದ್ರೋದಯ', 'ಹಿಂದೂಪತಾಕೆ'– ಇವೇ ಮೊದಲಾದ ಪತ್ರಿಕೆಗಳ ಕಾಲ ಇದೇ. ಕನ್ನಡ 'ಸಾರ್ವಜನಿಕ ಸಭಾ' ಎಂದು ಕರೆಸಿಕೊಂಡ ಗೋವಿಂದರಾವ ಪಳಂಬರ ಉದಯದ ಕಾಲವು, ಶಾಂತಕವಿಗಳಿಗೆ ಸಾರ್ವಜನಿಕ ರೀತಿಯಿಂದ ಮನ್ನಣೆ ದೊರೆತ ಕಾಲವೂ ಇದೇ. ನಗರದ ನಾಟಕ ಮಂಡಳಿಗಳ ಕಾಲವು, ಮಹಾರಾಷ್ಟ್ರದವರಂತೆ ಕಾವ್ಯ ಸಾರ್ವಜನಿಕ ಕಾರ್ಯಗಳನ್ನೇನಾದರೂ ಮಾಡಬೇಕೆಂಬ ಅನುಕರಣಶಕ್ತಿ ಸ್ಫುರಣ ಹೊಂದಿದ ಕಾಲವೂ ಇದೇ. ೧೮೯೦ ರ ಸುಮಾರಕ್ಕೆ ಅನುಕರಣಕ್ಕೆ ಸ್ವತಂತ್ರತೆಯ ಸ್ವರೂಪವು ಬರುವ ಚಿಹ್ನಗಳು ಕಾಣ ಹತ್ತಿದವು. ಮಿತ್ರ ಸಮಾಜದಿಂದ ಹೊರಟಿದ್ದ 'ಲೋಕ ಶಿಕ್ಷಕ' ಮಾಸಪತ್ರಿಕೆಯು ಕಾಲವೂ, ವಿದ್ಯಾವರ್ಧಕ ಸಂಘವು ಸ್ಥಾಪಿತವಾದ ಕಾಲವೂ, ಕರ್ನಾಟಕ ವೃತ್ತ, ಲೋಕಬಂಧು, ರಾಜಹಂಸ, ಕರ್ನಾಟಕ ಪತ್ರಿಕೆಗಳ ಕಾಲವೂ, ಸಾಮಾಜಿಕ ಸುಧಾರಣೆಯ ಕಹಿ ಪೇರಿನ ಹಲ್ಲಾಟದ ಕಾಲವೂ ಇದೇ. ಆದರೂ ಅನುಕರಣವೇ. ಪ್ರತಿಭೆ ಇಲ್ಲ: ಕೇವಲ ಪ್ರಯತ್ನ." [೧]

'ಅನುಕರಣ'ವೆಂಬ ಸಾರ್ವತ್ರಿಕ ಮುದ್ರೆ ಸರಿ ಎನಿಸಿದ್ದರೂ, ಕನ್ನಡದ ಚಳುವಳಿಕೆ ೧೮೯೦ರ ಸುಮಾರಿನಿಂದ ಹೇಗೆ ಪ್ರಾರಂಭವಾಯಿತೆಂಬುದನ್ನು ಕಾಣುತ್ತೇವೆ. ಈಗಿನ ಕಾಲದ ಅನೇಕ ಲೇಖಕರು ಇಂಗ್ಲಿಷಿನಿಂದ, ಮರಾಠಿಯಿಂದ, ಬಂಗಾಲಿಯಿಂದ, ಸಂಸ್ಕೃತದಿಂದ– ಯಾವುದೇ ಭಾಷೆಯಿಂದ ಅನುವಾದ ಇಲ್ಲವೆ ಅನುಕರಣ ಮಾಡಿರುವುದಾದರೂ, ಶಾಂತಕವಿ, ವೆಂಕಟ ರಂಗೋ ಕಟ್ಟಿ, ಕಾವ್ಯಾನಂದ ಪುಣೇಕರರಂಥ ಮೇಧಾವಿ ಲೇಖಕರು ಅನೇಕ ಸ್ವೋಪಜ್ಞವಾದ ಕೃತಿ ರಚನೆಗಳನ್ನೂ ಮಾಡಿದರು. ಈ ಕಾಲದಲ್ಲಿ ಪ್ರಾರಂಭವಾದ ಶಿವಾಜಿ ಉತ್ಸವ, ಗಣೇಶೋತ್ಸವ, ಗೋರಕ್ಷಣ ಮುಂತಾದ ಚಳುವಳಿಗಳು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬಂದಿದ್ದರೂ, "ಕನ್ನಡ ಭಾಷೆಯ ಅಭಿಮಾನವು ಇದೇ ಕಾಲಕ್ಕೆ ನೆಲೆಯೂರಿತು" ಎಂದೂ ಬೇಂದ್ರೆ ಅವರು ಅನ್ಯತ್ರ ಅಭಿಪ್ರಾಯಪಟ್ಟಿದ್ದಾರೆ. [೨]

ಕನ್ನಡ ಕೆಲಸ ಭರದಿಂದ ಸಾಗಿತು :

ಒಮ್ಮೆ ಪ್ರಾರಂಭವಾದ ಕನ್ನಡದ ಕೆಲಸ ರಭಸದಿಂದ ಮುಂದುವರಿಯಿತು. ಅದು ಅನೇಕ ಮುಖವಾಗಿದ್ದಿತು.

"ಇಷ್ಟರಲ್ಲಿ (ಅಂದರೆ ಕ್ರಿ.ಶ. ೧೮೬೪) ಶಿಕ್ಷಣ ಇಲಾಖೆಯ ಸಹಾಯದಿಂದ 'ಕನ್ನಡ ಶಾಲಾ ಪತ್ರಿಕೆ'ಯು ಪ್ರಾರಂಭವಾಗಿತ್ತು. ಮೈಸೂರಲ್ಲಿ ಕ್ರಿ. ಶ. ೧೮೬೫ ರಲ್ಲಿ ಹುಟ್ಟಿದ 'ಕನ್ನಡ ಪ್ರಕಾಶಿಕಾ' ಎಂಬ ಪತ್ರಿಕೆಯು ಕ್ರಿ. ಶ. ೧೮೯೮ ರ ವರೆಗೆ ಕೆಲಸ ಮಾಡಿತು. ಮಂಗಳೂರ ಪ್ರಾಂತದಲ್ಲಿ ಕ್ರಿ. ಶ. ೧೮೩೪ ರಲ್ಲಿಯೇ ಬಾಸೆಲ್ ಮಿಶನ್ನಿನ ಮಿಶನರಿಗಳು ಬಂದರು. ಕ್ರಿ. ಶ. ೧೮೩೬ ರಲ್ಲಿಯೇ ತಮ್ಮ ಕ್ರೈಸ್ತ ಮತೀಯರಿಗೆ ಕನ್ನಡದಲ್ಲಿಯೇ ಮತಬೋಧನೆಯನ್ನು ಮಾಡುವದಲ್ಲದೆ, ಅಕ್ಷರಮಾಲೆ, ಗಾದೆಗಳು, ಬಾಲಶಿಕ್ಷೆ, ನೀತಿಪಾಠಗಳು, ಭೂಗೋಲಗಳನ್ನು ಶಿಲಾಯಂತ್ರದಲ್ಲಿ ಅಚ್ಚು ಮಾಡಿಸಿದ್ದರು. ಕ್ರಿ. ಶ. ೧೮೫೭ ರಲ್ಲಿ ಮುದ್ರಣಾಲಯವೊಂದು ಸ್ಥಾಪಿತವಾಗಿ 'ಕನ್ನಡ ವಾರ್ತಿಕ' ಎಂಬ ಪಕ್ಷಪತ್ರಿಕೆಯೊಂದು ಕ್ರಿ. ಶ. ೧೮೫೭ ರಲ್ಲಿ ಪ್ರಾರಂಭವಾಗಿತ್ತು. ಮರುವರ್ಷವೇ ಅದು ಸಚಿತ್ರವಾಗಿ ಪ್ರಕಟವಾಗುತ್ತಿತ್ತು. ಈ ಪೂರ್ವದಲ್ಲಿಯೇ ಅಂದರೆ ಕ್ರಿ.ಶ. ೧೮೪೩ ರಲ್ಲಿಯೇ ಶಿಲಾಯಂತ್ರದಲ್ಲಿ 'ಕನ್ನಡ ಸಮಾಚಾರ'ವೆಂಬ ಪತ್ರಿಕೆಯು ಬಳ್ಳಾರಿಯಲ್ಲಿಯೂ, 'ಮಂಗಳೂರ ಸಮಾಚಾರ' ಎಂಬುವದು ಮಂಗಳೂರಿನಲ್ಲಿಯೂ

---

೧ ಸಾಹಿತ್ಯ ಸಂಶೋಧನ ಪು. ೧೭೬.

೨ ಅದೇ ಪು. ೧೭೭.

ಪ್ರಕಟವಾಗುತ್ತಿದ್ದವು.[೧] ಮುಂಬಯಿ ಪ್ರಾಂತದಲ್ಲಿ ಕನ್ನಡ ಕ್ರಮಿಕ ನಾಲ್ಕನೆಯ ಪುಸ್ತಕವಾಗುವ ಹೊತ್ತಿಗೆ ಮೈಸೂರಿನಲ್ಲಿ ಇನ್ನೂ ಮೂರೇ ಪುಸ್ತಕಗಳಾಗಿದ್ದುವೆಂದು ರಸೆಲ್‌ರವರು ಹೇಳುತ್ತಾರೆ. "ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿಯೇ ಹೊಸಗನ್ನಡ ಗಾಳಿಯು ಅಲ್ಲಿ (ಮೈಸೂರಿನಲ್ಲಿ) ಬೀಸಲಾರಂಭಿಸಿತ್ತು. ಪ್ರಾಸರಹಿತ ಸರಳರಗಳೆಯಲ್ಲಿ 'ಕಲಾವತಿ ಪರಿಣಯ' ವನ್ನು ಬರೆದ ಯಾದವ ಕವಿಯು ಅವರ ಆಸ್ಥಾನದಲ್ಲಿದ್ದನು."[೨]

ಮುದ್ರಣಯಂತ್ರಗಳ ಪ್ರಸಾರ :

ಕನ್ನಡದಲ್ಲಿ ಬರೆಯಬೇಕೆಂಬ ಲವಲವಿಕೆ ಪ್ರಾರಂಭವಾದಕೂಡಲೇ ಸ್ವಾಭಾವಿಕವಾಗಿಯೇ ಅದಕ್ಕೆ ಅಚ್ಚುಕೂಟ ಬೇಕಾಯಿತು. ಈ ದಿಶೆಯಲ್ಲಿ ಅದ್ಭುತವಾದ ಕೆಲಸವನ್ನು ಮಾಡಿದವರು– ವಿದೇಶೀಯರು, ಮಿಶನರಿಗಳು. ಈ ಬಗ್ಗೆ ಇ. ಪಿ. ರೈಸ್ ಅವರು ಹೇಳಿದ ಮಾತು ಮನನೀಯವಾಗಿದೆ :

"Christianity has entered the field with versions of the Bible, Biblical Commentaries, books for the instruction of the Indian christian community in the history and teaching of christianity, translations of such christian classics as Bunyan's Pilgrim's Progress (Desantriya Prayana or Yatrika Sanchara), Augustine's Confessions, etc, and lyrics for use in Christian worship.

It deserves to be added that Kanarese is indebted to the missionaries probably for the introduction of printing and certainly for the improvement of its typography by the preparation of fresh founts of beautiful type for the printing of successive editions of the Bible."

ಕನ್ನಡದಲ್ಲಿ ಪ್ರಥಮತಃ ಮುದ್ರಿತವಾದ ಪುಸ್ತಕವೆಂದರೆ, ವಿಲಿಯಮ್ ಕ್ಯಾರೆಯವರ 'ಗ್ರಾಮರ್ ಆಫ್ ದಿ ಕರ್ನಾಟಕ ಲ್ಯಾಂಗ್ವೇಜ್'. ಇದು ಸನ್ ೧೮೧೭ರಲ್ಲಿ ಅಂದರೆ ಸುಮಾರು ೧೫೫ ವರುಷಗಳ ಹಿಂದೆ– ದೂರದ ಕಲಕತ್ತೆಯ ಬಳಿ ಇರುವ ಶ್ರೀ ರಾಮಪುರ ಪ್ರೆಸ್ಸಿನಲ್ಲಿ ಮುದ್ರಿತವಾಯಿತು. ನಂತರದ ಪುಸ್ತಕವೂ ಸಹ, ಹೆಚ್ಚು ಕಡಿಮೆ ಅಷ್ಟೇ ದೂರದ ಮದ್ರಾಸಿನ ಫೋರ್ಟ ಸೆಂಟ ಜಾರ್ಜ ಕಾಲೇಜಿನ ಪ್ರೆಸ್ಸಿನಲ್ಲಿ ಮುದ್ರಿತವಾಯಿತು. ಇದೂ 'ಎ ಗ್ರಾಮರ್ ಆಫ್ ದಿ ಕರ್ನಾಟಕ ಲ್ಯಾಂಗ್ವೇಜ್' ಎಂಬ ವ್ಯಾಕರಣ ಗ್ರಂಥವೇ. ಇದು ಮುದ್ರಿತವಾದದ್ದು ಸನ್ ೧೮೨೦ ರಲ್ಲಿ. ಮುಂದೆ ಎರಡು ಬೃಹತ್ ಗಾತ್ರದ ಶಬ್ದಕೋಶಗಳೂ ಮದ್ರಾಸಿನಲ್ಲಿಯೇ ಮುದ್ರಿತವಾದವು. "ಇವುಗಳಲ್ಲಿ ಉಪಯೋಗಿಸಲಾದ ಮೊಳೆಗಳ ದೊಡ್ಡ ಆಕಾರವೇ ಈ ಗಾತ್ರಕ್ಕೆ ಕಾರಣವಾಯ್ತು."[೩]

ದೂರವಾದ ಈ ಮದ್ರಾಸ ಮತ್ತು ಕಲಕತ್ತೆಗಳ ಓಡಾಟ ದುಸ್ಸಾಧ್ಯವಾದುದರಿಂದ ಬಳ್ಳಾರಿಯಲ್ಲಿ ಬಂದು ನೆಲಸಿದ್ದ ಮಿಶನರಿ ರೆ. ಹ್ಯಾಂಡ್ಸ ಅವರು ಲಂಡನ್‌ದಲ್ಲಿರುವ ತಮ್ಮ ಕೇಂದ್ರ ಕಚೇರಿಗೆ ಬರೆದು, ಅವರ ಸಹಾಯದಿಂದ ಸನ್ ೧೮೨೭ ರಲ್ಲಿ ಬಳ್ಳಾರಿಯಲ್ಲಿ ಸುವ್ಯವಸ್ಥಿತವಾದ ಮುದ್ರಣ

೧ ಪಂಚಕಜ್ಜಾಯದಲ್ಲಿ ಶ್ರೀ ಕಾಮತರ ಲೇಖನ.

೨ ಸಾಹಿತ್ಯ ಸಂಶೋಧನ ಪು. ೧೮೨–೧೮೩.

೩ ಪುಸ್ತಕ ಭಾಗ್ಯ : ೧೯೭೨ : ಕರ್ನಾಟಕದಲ್ಲಿ ಮುದ್ರಣಕಾರ್ಯ– ಡಾ. ಶ್ರೀನಿವಾಸ ಹಾವನೂರ– ಪು. ೨೧೭.

ಯಂತ್ರ ಸ್ಥಾಪಿತವಾಗುವ ಹಾಗೆ ಮಾಡಿದರು. ಕನ್ನಡ ನಾಡಿನಲ್ಲಿ ಪ್ರಪ್ರಥಮವಾಗಿ ಸ್ಥಾಪಿತವಾದ ಮುದ್ರಣ ಯಂತ್ರವೆಂದರೆ ಈ ಬಳ್ಳಾರಿಯದೆ. "೧೮೩೨ ರಲ್ಲಿ ಹ್ಯಾಂಡ್ಸ ಲಂಡನ್ನಿನಿಂದ ಕನ್ನಡ ಮೊಳೆಗಳನ್ನು ಮಾಡಿಸಿ ತಂದನು. ಜೊತೆಗೆ ಪೇಸ ಎಂಬ ಮುದ್ರಕನೂ ಬಂದನು. ಹ್ಯಾಂಡ್ಸನ ಉತ್ತರಾಧಿಕಾರಿಯಾದ ಜಾನ್ ರೀಡ ಮತ್ತು ಪೇಸ ಇವರ ನೇತೃತ್ವದಲ್ಲಿ ಮುದ್ರಣ ಕಾರ್ಯವು ಭರದಿಂದ ನಡೆಯಿತು........ ಪೇಸ ಕಾಲರಾದಿಂದ ಮಡಿದ ಮೇಲೆ (೧೮೪೨) ಅದರ ಪ್ರಗತಿಯು ಕ್ರಮೇಣ ಕುಂಠಿತಗೊಂಡು ೧೮೫೪ ರ ಸುಮಾರಿಗೆ ನಿಂತುಹೋಯಿತು." ೧

ಬೆಂಗಳೂರಿನಲ್ಲಿ ವೆಸ್ಲಿಯನ್ ಮುದ್ರಣಾಲಯ ಸ್ಥಾಪಿತವಾದದ್ದು ಸನ್ ೧೮೪೦ ರ ನವೆಂಬರ ತಿಂಗಳಲ್ಲಿ. ಪ್ರಥಮವಾಗಿ ಮುದ್ರಿತವಾದ ಪುಸ್ತಕ 'ಪ್ರಶ್ನೋತ್ತರ ಶಾಲಾ ಪುಸ್ತಕ'. ಥಾಮಸ್ ಹಾಡ್ಸನ್, ವ್ಯಾಟ್ಸ್, ಗ್ಯಾರೆಟ್, ರೆ. ರೀವ ಇವರ ಪುಸ್ತಕಗಳು ಈ ಮುದ್ರಣಾಲಯದಲ್ಲಿಯೇ ಮುದ್ರಿತವಾದುವು.

ಮುದ್ರಣ ಕಲೆಯಲ್ಲಿ ಮಂಗಳೂರಿಗೆ ವಿಶಿಷ್ಟವಾದ ಸ್ಥಾನವಿದೆ. ಇಲ್ಲಿಯಷ್ಟು ಸುಂದರವಾದ ಮುದ್ರಣ ಎಲ್ಲಿಯೂ ಆಗಿರಲಿಲ್ಲ. ಇದರ ಮೂಲ ಪ್ರವರ್ತಕನು ರೆ. ಜಿ. ಎಚ್. ವೀಗಲ್. ಇವನು "ಒಂದು ಇಂಗ್ಲಿಶ ಪುಸ್ತಿಕೆಯನ್ನು ಮುದ್ರಿಸಿಕೊಂಡು ಬರಲೆಂದು ಮುಂಬಯಿಗೆ ಹೋಗಿದ್ದನು. ಮರಳಿ ಬರುವಾಗ ಆ ಮುದ್ರಾಯಂತ್ರವನ್ನೇ ದಾನವಾಗಿ ತಂದನು. (ಫೆಬ್ರುವರಿ ೧೮೪೧)." ಜರ್ಮನ್ ಇವ್ಯಾಂಜೆಲಿಕಲ್ ಪ್ರೆಸ್ ಎಂಬ ಈ ಹೆಸರಿನ ಮುದ್ರಾಲಯದಲ್ಲಿ ಪ್ರಥಮತಃ ಮುದ್ರಿತವಾದುದೆಂದರೆ 'ತುಳು ಕೀರ್ತನೆಗಳು' ಎಂಬ ಪುಸ್ತಕ. ಅಲ್ಲದೆ, ಕಲ್ಲಚ್ಚಿನಲ್ಲಿ ಕುಮಾರವ್ಯಾಸ ಭಾರತ, ಬಸವಪುರಾಣ, ಚೆನ್ನಬಸವ ಪುರಾಣ, ಜೈಮಿನಿ ಭಾರತಗಳಂಥ ದೊಡ್ಡ ಗಾತ್ರದ ಪುಸ್ತಕಗಳೂ ಮುದ್ರಿತವಾಗಿದ್ದವು. ಮಂಗಳೂರಿನ ಇನ್ನೊಂದು ಪ್ರಸಿದ್ಧ ಕ್ರೈಸ್ತ ಮುದ್ರಣಾಲಯವೆಂದರೆ ಕೋಡಿಯಾಲ ಬೈಲ್ ಪ್ರೆಸ್. ಇದು ರೋಮನ್ ಕ್ಯಾಥೋಲಿಕ್‌ರದು. ಇವರು "೧೮೮೨ ರಲ್ಲಿ ಪ್ಯಾರೀಸಿನಿಂದ ಒಂದು ಕೈಯಚ್ಚಿನ ಯಂತ್ರವನ್ನೂ ರೋಮನ್ ಲಿಪಿಗಳನ್ನೂ ತರಿಸಿದರು. ಮರುವರ್ಷ ಬೆಂಗಳೂರಿನಿಂದ ಕನ್ನಡ ಮೊಳೆಗಳು ಬಂದವು. ಅಲೋಸಿಸ್ ಕಾಲೇಜಿನ ಮುನ್ನಿನ ಕಟ್ಟಡದಲ್ಲಿ ನಾಲ್ಕು ಜನ ಕೆಲಸಗಾರರೊಂದಿಗೆ ಮುದ್ರಣ ಕಾರ್ಯವು ಆರಂಭವಾಯಿತು." ೨

ಸರಕಾರೀ ಮುದ್ರಣಾಲಯುಗಳು :

ಮದ್ರಾಸಿನ ಮುದ್ರಾಲಯದ ಬಗ್ಗೆ ಈಗಾಗಲೇ ಹೇಳಿದೆ. ಮುಂಬಯಿ ಸರಕಾರವು ಸನ್ ೧೮೨೪ ರಷ್ಟು ಹಿಂದೆಯೇ ಒಂದು ಕಲ್ಲಚ್ಚಿನ ಮುದ್ರಾಯಂತ್ರವನ್ನು ಪ್ರಾರಂಭಿಸಿತ್ತು. "ಅದಕ್ಕೆ ಬೇಕಾಗುವ ಕಲ್ಲಿನ ಹಲಿಗೆಗಳನ್ನು ಕರ್ನೂಲಿನಿಂದ ತರಿಸುತ್ತಿದ್ದರು."– ಇಲ್ಲಿ ಅಚ್ಚಾಗಿ ದೊರೆತ ಮೊದಲನೆಯ ಪುಸ್ತಕವೆಂದರೆ ಸನ್ ೧೮೩೬ ರಲ್ಲಿ ಮುದ್ರಿತವಾದ 'ಸಣ ಹಿತೋಪದೇಶ' ಎಂಬುದು. ಸರಕಾರದ ಅಂಗಸಂಸ್ಥೆಯಾದ 'ಬಾಂಬೆ ಎಜ್ಯುಕೇಶನ್ ಸೊಸೈಟಿ' ಯವರು ಬಾಯಖಳಾ ಉಪನಗರದಲ್ಲಿ ಒಂದು ಮುದ್ರಾಲಯವನ್ನು ನಡೆಸುತ್ತಿದ್ದರು. ಸನ್ ೧೮೬೩ ರಲ್ಲಿ ಪ್ರಕಟವಾದ ವೆಂಕಟ ರಂಗೋ ಕಟ್ಟಿಯವರ 'ಅರೇಬಿಯನ್ ನೈಟ್ಸ' ಎಂಬ ಗ್ರಂಥವೂ ಸನ್ ೧೮೭೦ ರಲ್ಲಿ ಮುದ್ರಿತವಾದ ಚುರಮರಿ ಶೇಷಗಿರಿರಾಯರ ಕನ್ನಡ ಶಾಕುಂತಲ ನಾಟಕವೂ ಈ ಮುದ್ರಾಲಯದಲ್ಲಿಯೇ ಅಚ್ಚಾದುವು. (ಈ ಮುದ್ರಣದ ಮಾದರಿಯ ಭಾವಚಿತ್ರವನ್ನು ಅನ್ಯತ್ರ

೧ ಅದೇ ಪು. ೨೧೮.

೨ ಅದೇ ಪು. ೨೨೧.

ಕೊಡಲಾಗಿದೆ.) ಹೀಗೆಯೇ ಬೆಂಗಳೂರು ಮೈಸೂರುಗಳಲ್ಲಿಯೂ ಈ ಕಾಲಕ್ಕೆ ಸರಕಾರೀ ಮುದ್ರಾಲಯಗಳು ಸ್ಥಾಪಿತವಾದವು.

ವೈಯಕ್ತಿಕ ಪ್ರಯತ್ನಗಳು :

ಇದೆಲ್ಲ ಮಿಶನರಿಗಳು ಮತ್ತು ಸರಕಾರ ಮುದ್ರಣ ವ್ಯವಸ್ಥೆಗಾಗಿ ಮಾಡಿದ ಕೆಲಸವಾಯಿತು. ಆದರೆ ಮುದ್ರಣ ಉದ್ಯಮವನ್ನು ಒಂದು ಲಾಭದಾಯಕ ವೃತ್ತಿ ಎಂದು ಮೊದಲು ಗ್ರಹಿಸಿದವರು ಉತ್ತರ ಕರ್ನಾಟಕದವರು. "ಇಂಥ ಮನೋಧರ್ಮವು ವ್ಯಕ್ತವಾದುದು ಮುಂಬಯಿ ಕರ್ನಾಟಕದಲ್ಲಿ" ೧

ಈ ರೀತಿ ಉತ್ತರ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಖಾಸಗಿ ವ್ಯಕ್ತಿಯಿಂದ ಮುದ್ರಿತವಾದ ಪತ್ರಿಕೆಯೆಂದರೆ ಸನ್ ೧೮೪೮ ರಲ್ಲಿ ಬೆಳಗಾವಿಯಲ್ಲಿ ಪ್ರಾರಂಭವಾದ 'ಸುಬುದ್ಧಿ ಪ್ರಕಾಶ' ಎಂಬುದು. ಇದು ಕಲ್ಲಚ್ಚಿನ ಮುದ್ರಣ.

ಮುಂದೆ ಕೆಲವೇ ವರ್ಷಗಳಲ್ಲಿ ಧಾರವಾಡ ಜಿಲ್ಲೆಯ ಸವಣೂರ ಗ್ರಾಮದಲ್ಲಿ 'ಸವಣೂರ ಪ್ರೆಸ್' ಮತ್ತು 'ಜ್ಞಾನಬೋಧಕ ಪ್ರೆಸ್' ಎಂಬುವು ಸನ್ ೧೮೬೦ ರ ಸುಮಾರಿಗೆ ಸ್ಥಾಪಿತವಾದುವು. ೧೮೬೦-೬೫ರ ಅವಧಿಯಲ್ಲಿ ಹೊರಬಂದ 'ಕೃಷ್ಣಪಾರಿಜಾತ' ದುಂದುಮೆ ಹಾಡಿನ ಪುಸ್ತಕಗಳು ಮೊದಲಾದವು ಇಲ್ಲಿಯೇ ಮುದ್ರಿತವಾದವು. ಸನ್ ೧೮೬೫ ರಲ್ಲಿ ಪ್ರಕಟವಾದ ಕಿಟೆಲ್‌ರವರ ನಾಗವರ್ಮನ ಛಂದೋಂಬುಧಿಯಕಿಂತ ಮೊದಲಿಗೇ ಸವಣೂರಲ್ಲಿ ಸನ್ ೧೮೬೭ ರಂದು ಛಂದೋಂಬುಧಿ ಗ್ರಂಥ ಪ್ರಕಟವಾಗಿದೆ. ಇಲ್ಲಿ ಮುದ್ರಣಗೊಂಡ ಅನೇಕ ಪುಸ್ತಕಗಳ ಗ್ರಂಥಕರ್ತೃ ಬಸವಲಿಂಗಯ್ಯ ಮಡಿವಾಳಯ್ಯ ಕುಂದಗೋಳ ಎಂಬವನು. ಮುಂದೆ ಸನ್ ೧೮೬೫ ರ ಸುಮಾರಿಗೆ 'ಜ್ಞಾನಬೋಧಕ' ಮುದ್ರಣಾಲಯವು ಧಾರವಾಡಕ್ಕೆ ಸ್ಥಳಾಂತರಗೊಂಡಿತು. ಆಗ ದುರ್ಗಾಪ್ರಸಾದ ಮಿಸರ್ ಎಂಬವನ ಹೆಸರು ಮುದ್ರಕ ಪ್ರಕಾಶಕನೆಂದು ದೊರಕುತ್ತದೆ. ಈ ಕಾಲದಲ್ಲಿ ಅಂದರೆ ಸನ್ ೧೮೬೦-೬೭ ರ ಕಾಲಾವಧಿಯಲ್ಲಿ ಧಾರವಾಡದಲ್ಲಿ 'ಸನ್ಮಾರ್ಗದರ್ಶಕ', 'ಜ್ಞಾನಸಾಗರ' ಮತ್ತು 'ಜ್ಞಾನವರ್ಧಕ' ಎಂಬ ಹೆಸರಿನ ಮುದ್ರಾಲಯಗಳಿದ್ದವು. ಗೋವಿಂದ ಪ್ರಭಾಕರ ಜೋಶಿ ಎಂಬವರು 'ಸನ್ಮಾರ್ಗದರ್ಶಕ'ದ ಒಡೆಯರು. ಮುಂಬಯಿ ಕರ್ನಾಟಕದ ದ್ವಿತೀಯ ಕನ್ನಡ ಪತ್ರಿಕೆಯೆನಿಸಿದ 'ಕನ್ನಡ ಜ್ಞಾನಬೋಧಕ'ವು ೧೮೬೧ ರ ಸುರುವಿಗೆ ಇಲ್ಲಿಯೇ ಮುದ್ರಣಗೊಂಡಿತು. ೨ (ಇದರ ಛಾಯಾಚಿತ್ರವನ್ನು ಅನ್ಯತ್ರ ಕೊಡಲಾಗಿದೆ.) 'ಜ್ಞಾನಸಾಗರ ಪ್ರೆಸ್' ಸುಜಾನಸಿಂಗ ಎಂಬವನದಾಗಿತ್ತು. 'ಜ್ಞಾನವರ್ಧಕ ಪ್ರೆಸ್' ಎಂಬುದು ದೆಪ್ಯುಟಿ ಚನಬಸಪ್ಪನವರ ಸಹಾಯ, ಪ್ರೋತ್ಸಾಹಗಳ ಮೂಲಕ ಕಲ್ಯಾಣಪ್ಪ ಮಾದನಶೆಟ್ಟಿ ಎಂಬವರಿಂದ ಸ್ಥಾಪಿತವಾಗಿತ್ತು. ಆದರೆ, ಉತ್ತರ ಕರ್ನಾಟಕದಲ್ಲಿ ಮುದ್ರಣ ಕಲೆಗೆ ಹೆಚ್ಚಿನ ವೇಗ ದೊರಕಿದ್ದು ಸನ್ ೧೮೬೭ ರ ಸುಮಾರಿಗೆ ಅಂದಿನ ಶಿಕ್ಷಣಾಧಿಕಾರಿಗಳಾಗಿದ್ದ ಅಲೆನ್ ರಸೆಲ್‌ರವರ ಪ್ರೋತ್ಸಾಹದ ಮೂಲಕ. ಇವರಿಗೆ ಸಹಾಯಕರಾಗಿ ನಿಂತವರು ದಿವಂಗತ ವೆಂಕಟ ರಂಗೋ ಕಟ್ಟಿಯವರು. ಆದರೆ, ನಿಜವಾಗಿ ಈ ಹೊಳೆಗಳನ್ನೆಲ್ಲ ಸಿದ್ಧಮಾಡಿಸಿದ ಶ್ರೇಯಸ್ಸು ಕಟ್ಟಿ ಅವರಿಗೇ ಸಲ್ಲಬೇಕು; ರಸೆಲ್ ನಿಮಿತ್ತ ಮಾತ್ರ. ವೆಂಕಟ ರಂಗೊ ಕಟ್ಟಿಯವರು ಸ್ವತಃ ಪಂಡಿತರಾಗಿದ್ದರಲ್ಲದೆ, ಬಹುಮುಖ ಪ್ರತಿಭೆಯುಳ್ಳವರಾಗಿದ್ದರು. ಅವರು ಮುದ್ರಣಪ್ರಯತ್ನದ ಬಗೆಗೆ ತಮ್ಮ ದಿನಚರಿಯಲ್ಲಿ ಹೀಗೆ ಬರೆದಿದ್ದಾರೆ :

---

೧ ಅದೇ ಪು. ೨೫೧.

೨ ಅದೇ ಪು. ೨೨೪.

"6th December, 1870

....

3. The setting up of the C typographic foundry is entirely owing to my own ideas assisted by Govind Shet. I cut 2 or 3 punches with my own hand and got a kind of mould prepared by G, who borrowed the idea from me and cut excellent punches though he could not make (no X) improvement in the mould. This was however suffiecient to encourage me and my partners. We sent G. to Bombay to learn the art there. He returned at the end of May last after remaining there with Keshava for about 2 months. The foundry was thus regularly opened on 1st June last (1869). Upto this time the pica set could have been finished had G. not fallen sick for 2½ months. He returned to work 4 days ago and we hope to finish the pica set within 2 weeks or so.

My share in the foundry is 4¾ annas in the Rupee and I had to spend about 178 Rs. up to this time." ೧

ಸುಮಾರು ಇದೇ ಸಮಯಕ್ಕೇ ಸ್ಥಾಪಿತವಾದ ಇನ್ನೆರಡು ಮುದ್ರಾಲಯಗಳ ಬಗೆಗೂ ಇಲ್ಲಿ ಹೇಳಬೇಕು. ಅವೂ ಉತ್ತರ ಕರ್ನಾಟಕದ ಸಾಹಿತ್ಯನಿರ್ಮಿತಿಗೇ ಸಂಬಂಧಪಟ್ಟವು, ಅವೆಂದರೆ ಸನ್ ೧೮೮೩ ರ ಸುಮಾರಿಗೆ ಶಾಮರಾವ ವಿಠ್ಠಲ ಕೈಕಿಣಿಯವರ ಪ್ರೋತ್ಸಾಹದಿಂದ ಮತ್ತು ಕರ್ಕಿಯ ಸೂರಿ ವೆಂಕಟರಮಣ ಶಾಸ್ತ್ರಿಗಳ ಪರಿಶ್ರಮದಿಂದ ಮುಂಬಯಿಯಲ್ಲಿ ಸ್ಥಾಪಿತವಾದ 'ಕರ್ನಾಟಕ ಪ್ರೆಸ್' ಮತ್ತು 'ಭಾರತೀ ಪ್ರೆಸ್'. ವೆಂಕಟಾಧ್ವರಿಯ ಕಾವ್ಯ, ತುರಂಗ ಭಾರತ, ಮನುಸ್ಮೃತಿಯ ಅನುವಾದ,- ಮೊದಲಾದವು ಈ ಮುದ್ರಣಾಲಯದಲ್ಲಿಯೇ ಮುದ್ರಿತವಾದುವು. 'ಕನ್ನಡ ಸುವಾರ್ತೆ' ಮತ್ತು 'ಹವ್ಯಕ ಸುಬೋಧ' ಎಂಬ ಸಾಪ್ತಾಹಿಕಗಳೂ ಈ ಮುದ್ರಣಾಲಯದಲ್ಲಿಯೇ ಮುದ್ರಿತವಾಗುತ್ತಿದ್ದವು. (ಹವ್ಯಕ ಸುಬೋಧದ ಛಾಯಾಚಿತ್ರವನ್ನು ಅನ್ಯತ್ರ ಕೊಡಲಾಗಿದೆ.)

ಸಂಗೀತ ವಿಷಯಕವಾಗಿ ಕನ್ನಡತನದ ಅರಿವು :

ಕರ್ನಾಟಕ ಸಂಗೀತಪದ್ಧತಿಯ ಪುನಶ್ಚೇತನದ ಪ್ರಯತ್ನ :

ಈಗ ಸುಮಾರು ಒಂದು ನೂರು ವರುಷಗಳ ಹಿಂದೆ ಉತ್ತರ ಕರ್ನಾಟಕದ ಬಹುಭಾಗದಲ್ಲೆಲ್ಲ ಕರ್ನಾಟಕ ಸಂಗೀತ ಪದ್ಧತಿಯೇ ಪ್ರಚಲಿತವಾಗಿದ್ದಿತು. ಸನ್ ೧೮೭೦ ರಲ್ಲಿ ಮುದ್ರಿತವಾದ ಚುರಮುರಿ ಶೇಷಗಿರಿರಾಯರ ಶಾಕುಂತಲ ನಾಟಕದಲ್ಲಿ ಶುದ್ಧ ಕರ್ನಾಟಕ ಗಾಯನ ಪದ್ಧತಿಯ ಪದಗಳೇ ತುಂಬಿಕೊಂಡಿವೆ. ಈ ಪದಗಳೇ ಮರಾಠಿಯ ಅಣ್ಣಾ ಕಿರ್ಲೋಸ್ಕರರ 'ಸಂಗೀತ ಸೌಭದ್ರ' ನಾಟಕದ ಮೇಲೆ ಪ್ರಭಾವವನ್ನು ಮಾಡಿ ಮಹಾರಾಷ್ಟ್ರದ ತುಂಬೆಲ್ಲ ಜನಪ್ರಿಯವಾದುವು. ಆದರೆ, ಚುರಮುರೀ ಶಾಕುಂತಲ ನಾಟಕ ಪ್ರಕಟವಾದ ಕೆಲವೇ ವರ್ಷಗಳಲ್ಲಿಯೇ ಕರ್ನಾಟಕ ಗಾಯನ ಪದ್ಧತಿ ಗತಪ್ರಾಯವಾದುದರಿಂದ, ಈ ಶಾಕುಂತಲದ ಪ್ರಯೋಗವೇ ಉತ್ತರ ಕರ್ನಾಟಕದಲ್ಲಿ ನಿಂತುಹೋಯಿತು. ಈ ಬಗೆಗೆ ದಿವಂಗತ ಮುದವೀಡು ಅವರು ಹೀಗೆ ಹೇಳಿದ್ದಾರೆ :

೧ ಪಂಡಿತ ವೆಂಕಟ ರಂಗೋ ಕಟ್ಟಿಯವರ ಅಪ್ರಕಟಿತ ದಿನಚರಿ.

ಆದರೆ, ಈ ಸಂದರ್ಭದಲ್ಲಿ ನಮ್ಮೀ ಉತ್ತರ ಕರ್ನಾಟಕವನ್ನು ಹಬ್ಬಿ ಮೆರೆಯುವ ಪೇಟೆ ಯಾಗಿದೆ. ಇದರಲ್ಲಿ ಹೊಸ್ತಿಗಳ ಮರಾಠಿಕ್ಕೆ ಅವಕಾಶವೆಲ್ಲಿಂದ ಬರಬೇಕು ? ಈ ಶತಮಾನದ ಬಹಳ ಶುದ್ಧ ಕರ್ನಾಟಕ ಗಾಯನ ಪದ್ಧತಿಯು ಪರಿಗಳಿಂದಲೇ ತುಂಬಿರುವದರಿಂದ ಇದನ್ನು ಪ್ರಯೋಗಿಸುವದು ಬಹಳ ಕಠಿಣವಾಗಿರುವದು. ನಮ್ಮಿತ್ತ ಕಡೆಯ ಸಾಮಾನ್ಯ ಸುಶಿಕ್ಷಿತ ಜನವರ್ಗ ದಲ್ಲೆಲ್ಲ ನಮ್ಮ ಮೊದಲಿನ ಕರ್ನಾಟಕ ಗಾಯನ ಪದ್ಧತಿಯು ಪೂರಾ ಕೊಳ್ಳ ಸ್ಥಾನಕ್ಕೆ ಬಿದ್ದು ಹೋಗಿದೆ. ೧೮೯೫ ರ ವರೆಗೆ ಇಲ್ಲಿ ಕರ್ನಾಟಕ ಸಂಗೀತ ಪದ್ಧತಿಯ ಹಾಡುಗಾರಿಕೆಯು ಕೇಳಲು ದೊರೆಯುತ್ತಿತ್ತು. ೧೮೯೦ ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯಾಗಿ ಕರ್ನಾಟಕ ಸಂಸ್ಕೃತಿಯ ಸಂರಕ್ಷಣೆಯು ಉಪಕ್ರಮವಾದ ಹದಿನಾರು ತಿಂಗಳುಗಳಲ್ಲಿ ಇಲ್ಲಿಯ ಆಗಿನ ಕಾಲದ ಪ್ರಮುಖ ವಕೀಲರಲ್ಲೊಬ್ಬ ರಾದ ಸ್ವ. ಘಾಟಕ ಗುರುನಾಥರಾಯರು ಕರ್ನಾಟಕ ಸಂಗೀತ ಶಾಲೆಯೊಂದನ್ನು ಇಲ್ಲಿ ಸ್ಥಾಪಿಸಿದ್ದರು. ತಂಜಾವರದ ಸುಪ್ರಸಿದ್ಧ ನಾರಾಯಣಸ್ವಾಮಿಯವರ ಶಿಷ್ಯರಾಗಿದ್ದ ಚಿಮ್ಮಲಗೀ ವೆಂಕಣ್ಣನವರೆಂಬ ಕರ್ನಾಟಕ ಸಂಗೀತ ವಿದ್ಯಾವಿಶಾರದರೊಬ್ಬರು ಈ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಕೆಲವು ಜನ ತರುಣರು ಇಲ್ಲಿ ಶಿಕ್ಷಣವನ್ನೂ ಹೊಂದುತ್ತಿದ್ದರು. ೧೮೯೩ ರ ಸುಮಾರಕ್ಕೆ ಚಿಮ್ಮಲಗೀ ವೆಂಕಣ್ಣನವರು ಘಾಟಕ ಗುರುನಾಥರಾಯರ ಮನೆಯಲ್ಲೇ ಆಕಸ್ಮಾತ್ತಾಗಿ ಸಿಡಿಲು ಬಡಿದು ತೀರಿಕೊಂಡರು. ಇದು ಒಂದು ರೀತಿಯಿಂದ ಇತ್ತ ಕಡೆಯ ಕರ್ನಾಟಕ ಸಂಗೀತ ಪದ್ಧತಿಗೇ ಸಿಡಿಲು ಬಡಿದಂತಾಯಿತು. ಈ ಮೊದಲೇ ಹೇಳಿರುವಂತೆ ಇತ್ತ ಕಡೆಗೆ ಒಂದೇ ಸಮನೇ ನುಗ್ಗುತ್ತಿದ್ದ ಮರಾಠಿ ಸಂಗೀತ ನಾಟಕ ಕಂಪನಿ ಗಳ ಹಾಡುಗಾರಿಕೆಯನ್ನು ಕೇಳಿ ಕೇಳಿ ನಮ್ಮ ಕಿವಿಗಳಿಗೆಲ್ಲ ಹಿಂದುಸ್ಥಾನೀ ಗಾಯನವನ್ನೇ ಕೇಳುವ ಚಟ ಬಿದ್ದು ಹೋಗಿದೆ. ಮೇಲಾಗಿ ಇತ್ತ ಕಡೆಗೆ ಬಂದಿದ್ದ ಮರಾಠೀ ಅಧಿಕಾರಸ್ಥರಲ್ಲಿ ಕೆಲವರಿಗೆ ಹಿಂದುಸ್ಥಾನೀ ಗಾಯನದಲ್ಲಿ ವಿಶೇಷ ಅಭಿರುಚಿಯೂ ಪ್ರೇಮವೂ ಇದ್ದುದರಿಂದ ಅವರೆಲ್ಲ ಇಲ್ಲಿ ಅದರ ಪ್ರಸಾರಕ್ಕಾಗಿ ಹೆಣಗಿದ್ದೂ ಉಂಟು. ಚಿಮ್ಮಲಗೀ ವೆಂಕಣ್ಣನವರ ಅಪಮೃತ್ಯುವಿನಿಂದ ಘಾಟಕ ಗುರುನಾಥರಾಯರು ಸ್ಥಾಪಿಸಿದ ಸಂಗೀತ ಶಾಲೆಯು ಕುಗ್ಗುವ ಸುಮಾರಕ್ಕೇ ಸ್ವ. ಬಳವಂತರಾವ ಸಹಸ್ರಬುದ್ಧೆ ಎಂಬ ಮರಾಠೀ ಗೃಹಸ್ಥರು ಇಲ್ಲಿಗೆ ಎಜ್ಯುಕೇಶನಲ್ ಇನ್ಸಪೆಕ್ಟರರಾಗಿ ಬಂದರು. ಇವರಿಗೆ ಹಿಂದುಸ್ಥಾನೀ ಗಾಯನದಲ್ಲಿ ಅತ್ಯಂತ ಆದರ, ಅಭಿಮಾನ. ಸ್ವತಃ ಅದೇ ಪದ್ಧತಿಯ ಗಾಯನಕಲಿತ ನುರಿತ ಗಾಯಕರು. ಇವರ ಪ್ರೇರಣೆಯಿಂದ ಮತ್ತೊಂದು ಗಾಯನ ಶಾಲೆಯು ಇಲ್ಲಿ ಸ್ಥಾಪಿತವಾಯಿತು. ಆದರೆ ಇದರಲ್ಲಿ ಹಿಂದುಸ್ಥಾನೀ ಗಾಯನ ಪದ್ಧತಿಯ ಶಿಕ್ಷಣಕ್ಕೇ ಉಪ ಕ್ರಮವಾಯಿತು. ಇಲ್ಲಿಯ ಸರಕಾರೀ ಹಾಯಸ್ಕೂಲಿನಲ್ಲಿ ಡ್ರಾಯಿಂಗ ಮಾಸ್ತರರಾಗಿದ್ದ ಸ್ವ. ಮಣೇರಿಕರರೆಂಬ ಹಿಂದುಸ್ಥಾನೀ ಗಾಯನ ಬಲ್ಲವರೇ ಈ ಸಂಗೀತ ಶಾಲೆಗೆ ಮೊದಲು ಶಿಕ್ಷಕ ರಾಗಿದ್ದರು. ಇಲ್ಲಿಯ ಕನ್ನಡ ಟ್ರೇನಿಂಗ ಕಾಲೇಜಿನಲ್ಲಿ ಗಾಯನ ಶಿಕ್ಷಣವನ್ನಾರಂಭಿಸುವ ಉಪಕ್ರಮಕ್ಕೆ ಸರಕಾರದ ಒಪ್ಪಿಗೆ ದೊರೆತು ಸುಪ್ರಸಿದ್ಧ ಹಿಂದುಸ್ಥಾನೀ ಗಾಯನ ಕಲಾ ಪಟುಗಳಾದ ಸ್ವ. ಭಾಸ್ಕರ ಬುವಾ ಬಖಲೆ ಎಂಬ ಗವಾಯಿಗಳು ಕಾಲೇಜಿನಲ್ಲಿ ಗಾಯನ ಶಿಕ್ಷಕರಾಗಿ ನೇಮಿಸಲ್ಪಟ್ಟರು. ವಿರಾಮ ಕಾಲದಲ್ಲಿ ಭಾಸ್ಕರ ಬುವಾನವರು ಸಂಗೀತ ಶಾಲೆಯಲ್ಲಿಯೂ ಶಿಕ್ಷಣ ಕೆಲಸ ಮಾಡುತ್ತಿದ್ದರು. ಟ್ರೇನಿಂಗ ಕಾಲೇಜಿನಲ್ಲಿ ಶಿಕ್ಷಣ ಪಡೆದ ಶಿಕ್ಷಕರು ಭಾಸ್ಕರ ಬುವಾನವರಿಂದ ಸಂಗೀತವನ್ನು ಕಲಿತು ಹೋದಬಳಿಕ ಹಳ್ಳಿಗಳಲ್ಲಿ ಕೂಡ ಇದರ ಮುಖಾಂತರ ಹಿಂದುಸ್ಥಾನೀ ಗಾಯನ ಪದ್ಧತಿಯೇ ಹರಡುವದಕ್ಕೆ ಅನುಕೂಲವಾಯಿತು. ಕೇವಲ ಹಣ ಗಳಿಸುವದಕ್ಕೆ ಹುಟ್ಟಿ ಬೆಳೆದು ಹೆಸರಿಗೆ ಕನ್ನಡ

* ಆಗಿನ ಕಾಲದ ಮದ್ರಾಸು ಪ್ರಾಂತೀಯ ವಿಭಾಗದಲ್ಲಿ ಕನ್ನಡ ಪರೀಕ್ಷೆಯಾಗಿದ್ದ ನಿಮಿತ್ತ ಸಮಾಜದ ಪಾಟೀಲ ಭೋಜರಾಯರು ಕನ್ನಡ ಶಾಲೆಯಲ್ಲಿ ಮರಾಠಿಯನ್ನು ಕಲಿಸಬೇಕೆಂದು ಸೂಚಿಸಿದಾಗ ಮತ್ತು ಅವ್ವ ದೇಶಪಾಂಡೆಯವರು ಅಭಿಮಾನದಿಂದ ಒಪ್ಪಿಗೆಯನ್ನು ಕೊಟ್ಟಾಗ ಕನ್ನಡ ಶಾಲೆಗಳಲ್ಲಿ ಮರಾಠಿ ಬೇಡವೆಂದು ಹೇಳಿದವರು ಈ ಘಾಟಕ ಗುರುನಾಥರಾಯರು.

ನಾಟಕವನ್ನು ಮಾಡುತ್ತಿರುವ ನಮ್ಮ ಇತ್ತ ಕಡೆಯ ನಾಟಕ ಕಂಪನಿಗಳೂ ಹಿಂದುಸ್ಥಾನೀ ಗಾಯನವನ್ನೇ ತಮ್ಮ ಗುರುಮಂತ್ರವನ್ನಾಗಿಟ್ಟುಕೊಂಡು ಅದನ್ನೇ ಪ್ರಚಾರ ಮಾಡುತ್ತ, ನಮ್ಮ ಕಡೆಯ ಲೋಕಾಭಿರುಚಿಯನ್ನು ಅದೇ ಹಳ್ಳದಲ್ಲಿ ಹರಿಸಹೊರಟಿವೆ. ಗ್ರಾಮೊಫೋನ ಪ್ಲೇಟುಗಳೂ ಇತ್ತ ಇದೇ ಮಾರ್ಗವನ್ನು ಹಿಡಿದಿರುತ್ತವೆ. ಹೀಗಾಗಿ ಕಳೆದ ಸುಮಾರು ೪೦ ವರ್ಷಗಳಿಂದ ಈ ಭಾಗದಲ್ಲಿ ಕರ್ನಾಟಕ ಸಂಗೀತ ಪದ್ಧತಿಯ ಗಾಯನವೆಂಬುದು ಹೇಳ ಹೆಸರಿಲ್ಲದಾಗಿದೆ. ರಾಗ ತಾಳಗಳ ಕರ್ನಾಟಕ ಹೆಸರುಗಳು ಕೂಡ ನಮ್ಮ ಜನರಿಗೆ ಮರೆತುಹೋಗಿವೆ. ಹೀಗೆ ಕರ್ನಾಟಕ ಸಂಸ್ಕೃತಿಯ ಒಂದು ಶ್ರೇಷ್ಠವಾದ ಮುಖ್ಯಾಂಗವೇ ಈ ಭಾಗದಲ್ಲಿ ನಿರ್ನಾಮವಾಗಿದೆ." ೧

ಕನ್ನಡ ಸಾಹಿತಿಗಳು ಎಲ್ಲ ಭಾಷೆಗಳಿಂದಲೂ ವಿಶೇಷತಃ ಇಂಗ್ಲಿಷಿನಿಂದ ಭಾಷಾಂತರಿಸಿ ಕನ್ನಡ ಕಣಜವನ್ನು ಐಶ್ವರ್ಯಗಳಿಂದ ತುಂಬಿದರು :

ಕನ್ನಡ ಲೇಖಕ ಅನೇಕ ಸಲ ಸ್ವೋಪಜ್ಞವಾದ ಕೃತಿ ರಚನೆ ಮಾಡಿದರೂ, ಎಲ್ಲೆಲ್ಲಿ ಸುಂದರವಾದ ಸಾಹಿತ್ಯಕೃತಿಯೊಂದು ಅವನಿಗೆ ಕಂಡುಬಂದಿತೋ ಅದನ್ನೆಲ್ಲ ಕನ್ನಡದ ಮನೆಗೆ ಬರಮಾಡಿಕೊಳ್ಳಲು ಯತ್ನಿಸಿದನು. ಆನೋ ಭದ್ರಾಃ ಕ್ರತವೋ ಯಂತು ವಿಶ್ವತಃ– ಎಂಬಂತೆ ಈ ಹೊಸ ಗಾಳಿ ಎಲ್ಲ ದಿಕ್ಕಿನಿಂದಲೂ ಬೀಸಿತು.

ಕನ್ನಡದ ಗದ್ದೆಗಳಿಗೆ ಮೊದಲಿನಿಂದಲೂ ನೀರು ಹಾಯಿಸಿದುದು ಸಂಸ್ಕೃತ ಸಾಹಿತ್ಯವಷ್ಟೇ. ಸಂಸ್ಕೃತದ ಅನೇಕ ಕೃತಿಗಳು ಈ ಕಾಲದಲ್ಲಿಯೂ ಕನ್ನಡದಲ್ಲಿ ಭಾಷಾಂತರಿತವಾದವು. ಅವು ಉತ್ತರ ಕರ್ನಾಟಕದಲ್ಲಿಯಂತೆ, ಹಳೆಯ ಮೈಸೂರು ಸೀಮೆಯಲ್ಲಿಯೂ ಭಾಷಾಂತರ ಹೊಂದಿದುವು. ಅವುಗಳಲ್ಲಿ ಸಂಸ್ಕೃತದಿಂದ ಬಂದ ಈ ಕೆಳಗಿನವುಗಳನ್ನು ಹೇಳಬಹುದು :

ಗ್ಯಾರೆಟರ್ ಭಗವದ್ಗೀತೆಯ ಅನುವಾದ ೧೮೪೬
ರಾಮಕೃಷ್ಣ ಸೂರಿಗಳ ಭಗವದ್ಗೀತೆಯ ಅನುವಾದ ೧೮೬೮
ಚುರಮುರಿ ಶೇಷಗಿರಿರಾಯರ ಶಾಕುಂತಲ ೧೮೭೦
ತುರಮುರಿಯವರ ಕಾದಂಬರಿ ೧೮೭೬–೭೭
ರಾಮಚಂದ್ರ ಶ್ರೀನಿವಾಸ ನರಗುಂದರವರ ರಘುವಂಶ ೨ನೇ ಸರ್ಗದ ಅನುವಾದ ೧೮೭೩
ಬಿ. ಪುಟ್ಟಸ್ವಾಮಯ್ಯನವರ ಲೋಲಂಬರಾಜನ ವೈದ್ಯಜೀವನದ ಅನುವಾದ ೧೮೭೮
ಶ್ರೀನಿವಾಸಪುರದ ಸುಬ್ಬರಾಯಪ್ಪನವರ ದಶಕುಮಾರ ಚರಿತೆ ೧೮೮೬
ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳ ವಿರಾಟಪರ್ವ ೧೮೮೮
ಜಿ. ವಿ. ಕೃಷ್ಣಾಚಾರ್ಯರ ನಾಗಾನಂದ ನಾಟಕ ೧೮೮೮
ಮುಮ್ಮಡಿ ಕೃಷ್ಣರಾಜ ಒಡೆಯರರ ' ಶ್ರೀಕೃಷ್ಣರಾಜ ವಾಣೀವಿಲಾಸ ' ೧೮೮೯
ಪಟ್ಟಾಭಿರಾಮ ಶಾಸ್ತ್ರಿಗಳ ಋಷ್ಯಶೃಂಗೋಪಾಖ್ಯಾನ ೧೮೯೦
ಧೋಂಡೋ ನರಸಿಂಹ ಮುಳಬಾಗಲ ಅವರ ಮೃಚ್ಛಕಟಿಕ ೧೮೮೯
ಉತ್ತರರಾಮ ಚರಿತೆ ೧೮೯೨
ಮಾಲವಿಕಾಗ್ನಿಮಿತ್ರ ೧೮೯೭
ವೇಣೀ ಸಂಹಾರ ೧೮೯೭

೧ ಚುರಮುರಿ ಶಾಕುಂತಲ ನಾಟಕ ಮುನ್ನುಡಿ– ಪು. ೩೨–೩೪.

ಶಾಂತಕವಿಗಳ ಮೇಘದೂತ, ಋತುಸಂಹಾರ ೧೮೯೨
ಜಿ. ವಿ. ಕೃಷ್ಣಾಚಾರ್ಯರ ಕಾದಂಬರೀ ಕಥೆ ೧೮೯೩
ಕುಂಡಲಗಿರಿಯಾಚಾರ್ಯರ ಹರ್ಷಚರಿತೆ ೧೮೯೩
ಸಿಂಗರಾರ್ಯನ ಮಿತ್ರವಿಂದ ಗೋವಿಂದ ೧೮೯೩
ನಂಜನಗೂಡು ಅನಂತ ನಾರಾಯಣಶಾಸ್ತ್ರಿಗಳ ನಾಗಾನಂದ ನಾಟಕ ೧೮೯೪
ಬಸವಪ್ಪಶಾಸ್ತ್ರಿಗಳ ಶಾಕುಂತಲ, ಚಂಡಕೌಶಿಕ ೧೮೯೭
ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳ ರತ್ನಾವಳಿ ೧೮೯೯
ಶ್ರೀನಿವಾಸ ಕಟ್ಟಿಯವರ ಸಂಗೀತಪ್ರಿಯದರ್ಶಿಕೆ ೧೯೦೫
ಶ್ರೀಕಂಠಶರ್ಮರ ಮಾಲತೀಮಾಧವ ೧೯೦೬
ವೇಂಕಟ ಸುಬ್ಬಯ್ಯನವರ ಕರ್ನಾಟಕೋನ್ಮತ್ತ ರಾಘವಮ್ ೧೯೦೮
ನರಹರಿರಾವ ಕನಮಡಿಯಂವರ ಪಾರ್ವತೀ ಪರಿಣಯ, ರಘುವಂಶ ೧೯೨೧

—ಇತ್ಯಾದಿ ಇತ್ಯಾದಿ.

ಸಂಸ್ಕೃತದಂತೆಯೇ, ಭಾರತದ ಸೋದರ ಭಾಷೆಗಳಾದ ಮರಾಠಿ, ಬಂಗಾಲಿ, ತೆಲುಗು ಮತ್ತು ತಮಿಳುಗಳಿಂದಲೂ ಕನ್ನಡ ಲೇಖಕರು ಭಾಷಾಂತರಿಸಿದರು. ದಿವಂಗತ ಗಳಗನಾಥರು ಮರಾಠಿಯ ಹರಿನಾರಾಯಣ ಆಪ್ಟೆಯವರಿಂದ ಭಾಷಾಂತರಿಸಿದರೆ, ಬಿ. ವೇಂಕಟಾಚಾರ್ಯರು ಬಂಕಿಮ್‌ಚಂದ್ರರ 'ಸೀತಾವನವಾಸ' ೧೮೮೪; 'ದುರ್ಗೇಶನಂದಿನಿ' ೧೮೮೫; 'ಇಂದಿರಾ' ೧೮೯೭; 'ಆನಂದಮಠ' ೧೮೯೯; 'ದೇವೀ ಚೌಧರಾಣಿ' ೧೮೯೯; ವಿಷವೃಕ್ಷ ೧೯೦೦– ಮೊದಲಾದವುಗಳನ್ನು ಭಾಷಾಂತರಿಸಿದರು.

ತೆಲುಗಿನಿಂದ ಬೆಳ್ಳಾವೆ ಸೋಮನಾಥಯ್ಯನವರು ವೀರೇಶಲಿಂಗಮ್ ಅವರ 'ವಿವೇಕ ಚಂದ್ರಿಕೆ'ಯನ್ನು ಸನ್ ೧೮೯೫ ರಲ್ಲೂ, ಅನಂತನಾರಾಯಣ ಎಂಬವರು ವೀರೇಶಲಿಂಗಮ್ ಅವರ 'ಸತ್ಯವತಿ ಚರಿತ್ರೆ' ಎಂಬುದನ್ನು ಸನ್ ೧೮೯೭ ರಲ್ಲೂ, ಧೂರ್ಜಟಿ ಲಕ್ಷ್ಮೀಪತಿಯವರ 'ಹಂಸ ವಿಂಶತಿ ಕಥೆ'ಗಳನ್ನು ಎಂ. ಎಸ್. ಕೃಷ್ಣಯ್ಯನವರೂ, ಕೋಮಂಡೂರು ಅನಂತಾಚಾರ್ಲುರವರ 'ಉತ್ತರ ಹರಿಶ್ಚಂದ್ರ ಚರಿತೆ'ಯನ್ನು ಎ. ಕೃಷ್ಣಾಚಾರ್ಯರು ಸನ್ ೧೯೦೨ ರಲ್ಲೂ ಭಾಷಾಂತರಿಸಿದರು.

ತಮಿಳಿನಿಂದ ಮೈಸೂರು ಘಾಟಿ ಗೋಪಾಲಾಚಾರ್ಯರು ವಿಲ್ಲಿಪಾಕ್ಕಮ್ ತಾಂಡವ ಮುದಲಿಯಾರರ 'ಕಥಾಮಂಜರಿ' ಯನ್ನು ೧೮೬೨ ರಲ್ಲೂ, ಬಿ. ರೈಸ್‌ರವರು ಕನ್ನಡದ ೩ನೆಯ ಮತ್ತು ೨ನೆಯ ಪುಸ್ತಕಗಳನ್ನು ಅನುಕ್ರಮವಾಗಿ ಸನ್ ೧೮೬೦ ಮತ್ತು ೧೮೬೧ ರಲ್ಲೂ, ಚಾರಬೋ ಎಂಬವರು 'ದಿವ್ಯಮಾತೃಕೆ' ಎಂಬುದನ್ನು ಸನ್ ೧೮೬೨ ರಲ್ಲೂ, ಬೆಶ್ಚಿಯವರು 'ಜ್ಞಾನಬೋಧಕ' ಮತ್ತು 'ಪರಮಾರ್ಥ ಗುರುವಿನ ಕಥೆ' ಯನ್ನು ಅನುಕ್ರಮವಾಗಿ ೧೮೬೪ ಮತ್ತು ೧೮೭೭ ರಲ್ಲೂ, ನರಸಿಂಹ ಪಂಡಿತರೆಂಬುವರು ಜಗನ್ನಾಥ ನಾಯುಡು ಅವರ 'ಜ್ವರ ವಿವರಣವು' ಎಂಬುದನ್ನು ಸನ್ ೧೮೭೭ ರಲ್ಲೂ ಭಾಷಾಂತರಿಸಿದರು. ಆರ್. ನರಸಿಂಹಾಚಾರ್ಯರ ನೀತಿಮಂಜರಿಗೆ ತಮಿಳಿನ ಕುರಳ್, ಮೂದರೈ, ನಾರಾಡಿಯರ್ ಮೂಲ.

ಸಂಸ್ಕೃತದ ಗಂಗಾನದಿ ಕನ್ನಡದ ಬೆಳೆ ಕಳಕಳಿಸುವಂತೆ ಮಾಡಿದರೆ, ಇಂಗ್ಲೆಂಡದ ಥೇಮ್ಸ ಕೂಡ ಅದು ಪ್ರವರ್ಧಮಾನವಾಗುವಂತೆ ಮಾಡಿತು. ಹೊಸದಾಗಿ ಇಂಗ್ಲಿಷನ್ನು ಕಲಿತ ಪಂಡಿತರು ಇಂಗ್ಲಿಷಿನಲ್ಲಿ ತಮ್ಮ ಕೈಗೆ ಸಿಕ್ಕ ಕೃತಿಗಳನ್ನು– ಅವು ಪ್ರಮುಖವಿರಲಿ, ಅಪ್ರಮುಖವಿರಲಿ– ಕನ್ನಡ ಪ್ರಪಂಚಕ್ಕೆ ಬರಮಾಡಿಕೊಂಡರು. ಈ ಬಗ್ಗೆ ಇ. ಪಿ. ರೈಸ್‌ರವರು ಸನ್ ೧೯೨೧ ರಲ್ಲಿ ಹೀಗೆ ಹೇಳಿವರು :

"A modern period is now in its early stages, which has been brought into being by the impact of Western thought and the influence of English literature.

The whole course of the history may be compared to a river receiving tributaries. During the first millennium of its course it is an unmingled stream of Jaina thought. In the twelfth century this is joined by the stream of Virasaivism; and the two streams, like the Rhone and Saone at Lyons, flow side by side without mingling. In the beginning of the sixteenth century these two are joined by a Vaishnava affluent; and the united stream flows on until in the nineteenth century it is broadened and much modified by a great inrush of western thought." [೧]

ಅನ್ಯತ್ರ, ಅವರು ಹೀಗೆ ಹೇಳಿದರು :

"With the nineteenth century begins an entirely new period of Kanarese literature brought about by the influence of English rule in India, the impact of European civilisation, and the introduction of Western scientific methods of research and ideals of scholarship." [೨]

ಕವಿಸಾರ್ವಭೌಮನಾದ ಷೇಕ್ಸಪಿಯರರನ ಕೃತಿಗಳಂತೆಯೇ ಉಳಿದ ಅನೇಕ ಲೇಖಕರ ಕೃತಿಗಳೂ ಕನ್ನಡದಲ್ಲಿ ಭಾಷಾಂತರಗೊಂಡವು. ಅವುಗಳಲ್ಲಿ ಈ ಕೆಳಗಿನವುಗಳನ್ನು ಹೇಳಬಹುದು :

ದೊರೆಸಾನಿಯನ್ನೂ ದಾದಿಯನ್ನೂ ಕುರಿತಂಥ ಕಥೆ	: ಮೇರಿ ಶರ್ವುಡ್ ಅವರು ಬರೆದ 'ದಿ ಆಯಾ ಆ್ಯಂಡ ಲೇಡಿ' ಎಂಬುದರ ಅನುವಾದ. ಅನುವಾದಕರು : ಸಿ. ಕ್ಯಾಂಪಬೆಲ್ ೧೮೪೪, ಇದರ ಮೂರನೆಯ ಆವೃತ್ತಿ 'ಕಥಾಮಾಲೆ' ಎಂಬ ಹೆಸರಿನಿಂದ ಸನ್ ೧೮೬೩ರಲ್ಲಿ ಪ್ರಕಟಿತವಾಯಿತು.
ರಾಬಿನ್‌ಸನ್ ಕ್ರುಸೊ ವೃತ್ತಾಂತ	: ಕೃಷ್ಣಸ್ವಾಮಿ ಅಯ್ಯಂಗಾರ ೧೮೫೪
ಅರಬ ಭಾಷೆಯಲ್ಲಿದ್ದ ಸುರಸ ಕಥೆಗಳ ಸಂಗ್ರಹವು	: ವೆಂಕಟ ರಂಗೋ ಕಟ್ಟಿ ೧೮೬೩
ಯಾತ್ರಸ್ಥನ ಸಂಚಾರವು	: ಜಾನ್ ಬನಿಯನ್‌ನ 'ಪಿಲ್ಗ್ರಿಮ್ಸ್ ಪ್ರೊಗ್ರೆಸ್' ಜಿ. ವೀಗಲ್ ಅವರ ಅನುವಾದ ೧೮೪೭
	: ನಂತರ ಇದರ ಮೊದಲಭಾಗವನ್ನು 'ದೇಶಾಂತ್ರಿಯ ಪ್ರಯಾಣ' ಎಂಬ ಹೆಸರಿನಲ್ಲಿ ರೆ. ಬಿ. ರೈಸ್ ಅವರು ಸನ್ ೧೮೬೧ ರಲ್ಲೂ,
	: ಕ್ರಿಸ್ತಾನುಜವತ್ಸರು ಎರಡನೆಯ ಭಾಗವನ್ನು 'ಯಾತ್ರಿಕನ ಸಂಚಾರವು' ಎಂಬ ಹೆಸರಿನಲ್ಲಿ ೧೯೦೮ ರಲ್ಲೂ ಪ್ರಕಟಿಸಿದರು.

೧ History of Kanarese literature, 1972, P. 16.
೨ ಅದೇ ಪುಟ ೨೨.

ಚಿಕ್ಕವನಾದ ಹೆನ್ರಿಯೂ ಅವನ ಬೋಯಿಯೂ : 'ಲಿಟ್ಲ ಹೆನ್ರಿ ಆ್ಯಂಡ ಹಿಜ್ ಬಾಯ್' ಎಚ್. ಮೋಗ್ಲಿಂಗ ೧೮೬೭

ಮನೋಹರವಾದ ನಾಲ್ಕು ಮಂದಿ ಫಕೀರರ ಕಥೆಗಳು : 'ಅಡ್ವೆಂಚರ್ಸ್ ಆಫ್ ಫೋರ ಫಕೀರ್ಸ' ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳು ೧೮೮೩

ಅಲಾದಿಯ ಅದ್ಭುತ ದೀಪಸ್ತಂಭದ ಕಥೆ : ಯು. ದಕ್ಷಿಣಾಮೂರ್ತಿ ೧೮೯೦

ಸುಮತಿಮದನ ಕುಮಾರರ ಚರಿತ್ರೆ : 'ಸ್ಯಾಂಡಫೋರ್ಡ ಆ್ಯಂಡ ಮರ್ಟನ್' ಎಂ. ಎಸ್. ಪುಟ್ಟಣ್ಣ ೧೮೯೩

ಕನ್ಯಾವಿತಂತು : ಹೆನ್ರಿ ಟೈಲರ್– ಎಂ. ಎಲ್. ಶ್ರೀಕಂಠೇಗೌಡ ೧೮೯೫

ಚಿಕ್ಕ ಬಣಜಿಗರು : 'ದಿ ಲಿಟ್ಲ ಮರ್ಚಂಟ್ಸ'– ಎಂ. ಎಲ್. ಶ್ರೀಕಂಠೇಗೌಡ

ನೀತಿಮಂಜರಿ : ಗ. ಹು. ಹೊನ್ನಾಪುರಮಠ ೧೮೯೮

ಸಿಂದಬಾದ ನಾವಿಕ : ಬಾಪು ಸುಬ್ಬರಾವ್ ೧೯೦೧

ಉಲ್ಲಾಸಿನಿ : ಲಿಟ್ಟನರ 'ಹ್ಯಾರೋಲ್ಡ'– ಅಣ್ಣಾಜಿರಾವ ಮಲ್ಲೇಶ್ವರ ೧೯೦೨

ರಾಸೆಲಾಸ್ : ಡಾ. ಜಾನ್ಸನ್– ಜೀವಾಜಿ ವಿಷ್ಣು ಗೋಠೆ ೧೯೦೨

ಯವನಯಾಮಿನೀ ಕಥೆಗಳು : ಪಿ. ವೇದಮಿತ್ರ ೧೯೦೫

ಶರಣಾಗತ : ಫೀಲ್ಡಿಂಗನ 'ಟಾಮ್ ಜೋನ್ಸ' ಎಂ. ಆರ್. ಅಣ್ಣಾಜಿರಾವ ೧೯೦೫

ಸ್ವಪ್ರಯಾಸ ಸಫಲದೀಪಿಕೆ : ಪಿ. ವೇದಮಿತ್ರ ೧೯೦೯

ನಿಂದಾಪ್ರಭಾವ ನಾಟಕ : ಷೆರಿಡನ್‌ನ 'ದಿ ಸ್ಕೂಲ್ ಫಾರ್ ಸ್ಕಾಂಡಲ್' ಗ. ಹು. ಹೊನ್ನಾಪುರಮಠ ೧೯೧೧

ಪ್ರಿಮ್ರೋಜ್ ವಿಜಯಂ : ಗೋಲ್ಡಸ್ಮಿಥ್‌ನ 'ವಿಕಾರ್ ಆಫ್ ವೇಕ್‌ಫೀಲ್ಡ' ಗೋವಿಂದರಾಜ ಅಯ್ಯಂಗಾರ ೧೯೧೫

ಸಂಸಾರಸುಖ : ಎಚ್. ಜಿ. ದೇಶಪಾಂಡೆ ೧೯೧೫

ಪತಿವಶೀಕರಣ : ಗೋಲ್ಡ ಸ್ಮಿಥ್‌ನ 'ಷೀ ಸ್ಟೂಪ್ಸ್ ಟು ಕಾಂಕರ್' ಕೆರೂರ ವಾಸುದೇವಾಚಾರ್ಯ ೧೯೨೧

ಷೇಕ್ಸಪಿಯರ್ ಮಹಾಕವಿಯ ಕೃತಿಗಳಂತೂ ವಿಪುಲವಾಗಿ ಕನ್ನಡದಲ್ಲಿ ಬಂದುವು. ಈ ಕಾಲದಲ್ಲಿ ಸಮಗ್ರ ಕರ್ನಾಟಕದಲ್ಲಿ ರಚಿತವಾದ ಹಲವು ಕೃತಿಗಳ ಹೆಸರುಗಳನ್ನು ಹೇಳಬಹುದು :

ಅಥೆಲೊ	: ರಾಘವೇಂದ್ರರಾವ ನಾಟಕ	: ಗುಂಡೋ ಕೃಷ್ಣ ಚುರಮುರಿ ೧೮೮೫
	: ಶೂರಸೇನ ಚರಿತ್ರೆ	: ಬಸವಪ್ಪ ಶಾಸ್ತ್ರಿ, ಮಹದೇವ ಶಾಸ್ತ್ರಿ ಮತ್ತು ಸುಬ್ಬರಾವ ೧೮೯೫
ಆ್ಯಜ್ ಯು ಲಾಯಕ್ ಇಟ್	: ಕಮಲಾವತಿ ಪರಿಣಯ	: ಶಾಮರಾಯ ವೆಂಕಟಾದ್ರಿ
ಆಲ್ಸ್ ವೆಲ್ ದ್ಯಾಟ್ ಎಂಡ್ಸ ವೆಲ್	: ಸತೀಮಣಿ ವಿಜಯ	: ಬೆಳ್ಳಾವೆ ಸೋಮನಾಥಯ್ಯ. ವೀರೇಶಲಿಂಗಂ ಪಂತಲು ಅವರ ತೆಲುಗು ಕೃತಿಯಿಂದ ಭಾಷಾಂತರಿತ ೧೮೯೭
ಆ್ಯಂಟನಿ ಆ್ಯಂಡ್ ಕ್ಲಿಯೋಪಾತ್ರ	ಆ್ಯಂಟೋನಿ ಮತ್ತು ಕ್ಲಿಯೋ : ಪಾತ್ರ	: ಕೆ. ಮಲ್ಲರಾಜೇ ಅರಸ್(ಅಪ್ರಕಟಿತ)
ದಿ ಕಾಮೆಡಿ ಆಫ್ ಎರರ್ಸ	: ಭ್ರಾಂತಿವಿಲಾಸ	: ಬಿ. ವೆಂಕಟಾಚಾರ್ಯ (ಗದ್ಯ ರೂಪಾಂತರ) ೧೮೭೬
ಕಾಮೆಡಿ ಆಫ್ ಎರರ್ಸ	: ನಗದವರನ್ನು ನಗಿಸುವ ಕಥೆ	: ಡೆಪ್ಯುಟಿ ಚನಬಸಪ್ಪ
ಕಿಂಗ ಲಿಯರ್	: ಹೇಮಚಂದ್ರ ರಾಜವಿಲಾಸ	: ಎಂ. ಎನ್. ಪುಟ್ಟಣ್ಣ ೧೮೯೯
ದಿ ಟು ಜಂಟ್ಲಮೆನ್ ಆಫ್ ವೆರೋನಾ	: ಕುಸುಮಾಕರ	: ಆರ್. ಅಣ್ಣಾರಾವ್ (ಗದ್ಯ ರೂಪಾಂತರ) ೧೮೯೭
ದಿ ಟೆಂಪೆಸ್ಟ	: ಚಂಡಮಾರುತ	: ಕರ್ನಾಟಕ ಗ್ರಂಥಮಾಲಾ ಮೈಸೂರು ೧೮೯೩
ದಿ ಟೇಮಿಂಗ ಆಫ್ ದಿ ಶ್ರ್ಯೂ	: ಗಯ್ಯಾಳಿಯನ್ನು ಸಾಧು ಮಾಡುವಿಕೆ	: ಎಸ್. ಜಿ. ನರಸಿಂಹಾಚಾರ
	: ಗಯ್ಯಾಳಿಯನ್ನು ಸಾಧು ಮಾಡುವಿಕೆ	: ಬೆಳ್ಳಾವೆ ಸೋಮನಾಥಯ್ಯ ೧೮೯೭ (ವೀರೇಶಲಿಂಗಂ ಪಂತಲು ಅವರ ತೆಲುಗು ಕೃತಿ ಭಾಷಾಂತರ)
	: ಚಂಡೀಮದಮರ್ದನ	: ಕೆ. ಲಕ್ಷ್ಮಣರಾವ ೧೯೧೦
	: ತ್ರಾಟಿಕಾ ನಾಟಕ ಅಥವಾ ಮೊಂಡ ಗಂಡ ತುಂಟ ಹೆಂಡತಿ	: ಗ. ಹು. ಹೊನ್ನಾಪುರಮಠ ೧೯೨೦ (ವಾಸುದೇವ ಬಾಲಕೃಷ್ಣ ಕೇಳ್ಕರರ ಮರಾಠಿ ಕೃತಿಯ ಭಾಷಾಂತರ)

ದಿ ಮರ್ಚಂಟ್ ಆಫ್ ವೆನಿಸ್	: ಪಾಂಚಾಲೀ ಪರಿಣಯಂ	: ಎ. ಆನಂದರಾವ್ ೧೮೯೦
	: ಮರ್ಚಂಟ್ ಆಫ್ ವೆನಿಸ್	: ಜಯರಾಮಾಚಾರ್ಯ
	: ವೆನಿಸು ನಗರದ ವಣಿಕ	: ಬಿ. ವೆಂಕಟಾಚಾರ್ ೧೯೦೬
	: ವೇಣು ಪುರಿಯ ವರ್ತಕ	: ಹನುಮಂತಗೌಡ ೧೯೨೮
	: ಸುರತ ನಗರದ ಶ್ರೇಷ್ಠಿ	: ಕೆ. ವಾಸುದೇವಾಚಾರ್ಯ ೧೯೨೯
ಎ ಮಿಡ್ ಸಮರ್ ನೈಟ್ಸ ಡ್ರೀಮ್	: ಪ್ರಮಿಳಾರ್ಜುನೀಯ	: ಎಂ. ಎಲ್. ಶ್ರೀಕಂಠೇಗೌಡ
	: ಯುವನಯಾಮಿನಿ ವಿನೋದ	: ಬಾಪು ಸುಬ್ಬರಾವ್ ೧೯೦೧
	: ಯುವನಯಾಮಿನಿ ಕಥೆಗಳು	: ಪಿ. ವೇದಮಿತ್ರ ೧೯೦೫
	: ವಸಂತ ಯಾಮಿನೀ ಸ್ವಪ್ನ ಚಮತ್ಕಾರ	: ಕೆರೂರ ವಾಸುದೇವಾಚಾರ್ಯ ೧೯೧೬
ಮ್ಯಾಕಬೆತ್	: ಮ್ಯಾಕಬೆತ್	: ಧಾರವಾಡ ಚನಬಸಪ್ಪ ಸು. ೧೮೭೦–೮೦
	: ಪ್ರತಾಪ ರುದ್ರದೇವ	: ಎಂ. ಎಲ್. ಶ್ರೀಕಂಠೇಶಗೌಡ ೧೮೯೫
ರೋಮಿಯೋ ಆ್ಯಂಡ ಜೂಲಿಯಟ್	: ಕಮಲಾಕ್ಷ ಪದ್ಮಗಂಧಿಯರ ಕಥೆ	: ವೆಂಕಟೇಶ ಭೀಮರಾವ ಭಂಡಿವಾಡ ೧೮೮೧
	: ರಾಮವರ್ಮ ಲೀಲಾವತಿ	: ಎ. ವಿ. ವರದಾಚಾರ
	: ರಾಮವರ್ಮ ಲೀಲಾವತಿ ಚರಿತ್ರೆ	: ಎ. ಆನಂದರಾವ ೧೮೮೯
	: ರಾಮವರ್ಮ ಲೀಲಾವತಿ ಚರಿತ್ರೆ	: ಜಯರಾಯಾಚಾರ್ಯ ನರಹರಿ
	: ರೋಮಿಯೋ ಆ್ಯಂಡ ಜೂಲಿಯಟ್	: ಬಸವಪ್ಪಶಾಸ್ತ್ರಿ
	: ರೋಮಿಯೋ ಆ್ಯಂಡ ಜ್ಯೂಲಿಯಟ್	: ಕೆ. ಎಲ್. ಶ್ರೀಕಂಠೇಶಗೌಡ
	: ರಮೇಶ ಲಲಿತಾ	: ಕೆ. ವಾಸುದೇವಾಚಾರ್ಯ ೧೯೧೭
ದಿ ವಿಂಟರ್ಸ ಟೇಲ್	: ಮಂಜುಘೋಷ	: ರಂಗಾಚಾರ ಮುದ್ಗಲ್
	: ಮಂಜುವಾಣಿ	: ಶ್ರೀಕಂಠಶಾಸ್ತ್ರಿ ೧೯೧೪ (ವೀರೇಶಲಿಂಗಂ ಪಂತಲು ಅವರ ತೆಲುಗು ಕೃತಿ ಭಾಷಾಂತರ)

ಸಿಂಬೆಲಿನ್	: ಜಯಸಿಂಹರಾಜ ಚರಿತ್ರೆ	: ಎಂ. ಎಸ್. ಪುಟ್ಟಣ್ಣ ಮತ್ತು ಶ್ರೀನಿವಾಸ ಅಯ್ಯಂಗಾರ ೧೮೮೧
	: ಜಯಸಿಂಹರಾಜ ಚರಿತ್ರೆ	: ಸಿ. ಎನ್. ಮಲ್ಲಪ್ಪ ೧೯೦೭
ಹ್ಯಾಮ್ಲೆಟ್	: ಹ್ಯಾಮ್ಲೆಟ್	: ಎ. ಆನಂದರಾವ್
	: ಹ್ಯಾಮ್ಲೆಟ್	: ಜಯರಾಯಾಚಾರ್ಯ ನರಹರಿ
	: ಹ್ಯಾಮ್ಲೆಟ್	: ಜೀವಾಜಿ ವಿಷ್ಣು ಗೋರೆ
	: ಹ್ಯಾಮ್ಲೆಟ್	: ಶಿವಲಿಂಗಸ್ವಾಮಿ ಸಾವಳಗಿಮಠ

ಷೇಕ್ಸಪಿಯರ ಕವಿತೆಗಳು

ಆಂಗ್ಲ ಕವಿತಾವಳಿ : ಹಟ್ಟಿಯಂಗಡಿ ನಾರಾಯಣರಾವ್ ೧೯೧೯

ಕಥಾಸಂಗ್ರಹಗಳು

ಮನೋರಂಜಕ ಕಥೆಗಳು : ಬಿ. ಎಂ. ಸಿಂಗಿತ, ಹಿಂದೂ ಪ್ರೆಸ್, ಧಾರವಾಡ ೧೮೯೧ [೧]

ಮೇಲಿನ ವಿವರಗಳನ್ನು ನೋಡಿದರೆ, ಕ್ರಿ. ಶ. ೧೮೭೬ ರಲ್ಲಿಯೇ ಷೇಕ್ಸಪಿಯರ್ ಕೃತಿಗಳ ಭಾಷಾಂತರ ಕನ್ನಡದಲ್ಲಿ ಪ್ರಾರಂಭವಾಗಿತ್ತೆಂಬುದನ್ನೂ, ಅನೇಕ ಸಲ ಅವನ ಮಹತ್ವದ ದುರಂತ ನಾಟಕಗಳಾದ ಹ್ಯಾಮ್ಲೆಟ್, ಮ್ಯಾಕಬೆತ್ ಇಲ್ಲವೆ ಜೂಲಿಯಸ್ ಸೀಝರದಂತ ಸುಖಾಂತ ನಾಟಕಗಳಾದ ರೋಮಿಯೊ ಆ್ಯಂಡ ಜೂಲಿಯಟ್, ಮಿಡ್ ಸಮರ್ ನಾಯಿಟ್ಸ್ ಡ್ರೀಮ್‌ದಂಥ ಕೃತಿಗಳು ಹೆಚ್ಚಾಗಿ ಭಾಷಾಂತರಿತವಾದುವೆಂಬುದನ್ನೂ ತೀರ ಅಪರಿಚಿತವೆನ್ನಬಹುದಾದ ಸಿಂಬೆಲಿನ್, ಟು ಜಂಟ್ಲಮೆನ್ ಆಫ್ ವೆರೊನಾದಂಥ ಕೃತಿಗಳೂ ಭಾಷಾಂತರಿತವಾದುವೆಂಬುದನ್ನೂ ಕಾಣಬಹುದು.

ಈ ರೀತಿ ಕನ್ನಡದ ಕೈಂಕರ್ಯ ದಿನದಿನಕ್ಕೆ ಅಭಿವೃದ್ಧಿ ಹೊಂದಿ, ಕನ್ನಡ ಭುವನೇಶ್ವರಿ ತನ್ನ ಯುಕ್ತವಾದ ಸ್ಥಾನವನ್ನು ಪಡೆದಳು. ಪರಮತಪಸ್ವಿಗಳೂ, ವೈದಿಕಶಾಸ್ತ್ರಸಂಪನ್ನರೂ, ಪ್ರಕಾಂಡ ಸಂಸ್ಕೃತ ಪಂಡಿತರೂ ಆಗಿದ್ದ ಗಲಗಲಿ ಕೂರ್ಮಾಚಾರ್ಯರಂಥವರು ಸಹ (ಉತ್ತರ ಕರ್ನಾಟಕದಲ್ಲಿ ಕೂರ್ಮಾಚಾರ್ಯರ ಸ್ನಾನ ಪ್ರಸಿದ್ಧ) ' ಪ್ರಾಕೃತ ' ವೆನಿಸಿಕೊಂಡ ಕನ್ನಡ ಭಾಷೆಯ ಬಗೆಗೆ ಅಭಿಮಾನವನ್ನು ತಾಳಿದರು. ೧೬–೭–೧೯೧೮ ರಂದು ' ಕರ್ನಾಟಕ ವೃತ್ತ ' ಕ್ಕೆ ಬರೆದ ತಮ್ಮದೊಂದು ಲೇಖನದಲ್ಲಿ ಸ್ಮೃತಿವಾಕ್ಯವನ್ನು ಸ್ವಲ್ಪ ಬದಲಾಯಿಸಿ " ಸ್ವಭಾಷೈವ ಹತಾ ಹಂತಿ, ರಕ್ಷಿತಾ ಯದಿ ರಕ್ಷತಿ " ಎಂದು ಸಾರಿದ್ದಾರೆ. ಅಲ್ಲದೆ, ಶ್ರೀಮದಾನಂದತೀರ್ಥರು ' ಕೃಷ್ಣಾಮೃತಮಹಾರ್ಣವ ' ವೆಂಬ ತಮ್ಮ ಗ್ರಂಥದಲ್ಲಿ ಹೇಳಿದ ಒಂದು ಉಕ್ತಿಯನ್ನು ಸ್ವಲ್ಪ ಬದಲಿಸಿ, ಹೀಗೆ ಹೇಳಿದ್ದಾರೆ :

ವರಂ ಸ್ವಮಾತೃಗಮನಂ, ವರಂ ಗೋಮಾಂಸಭಕ್ಷಣಂ
ವರಂ ಹತ್ಯಾ, ಸುರಾಪಾನಂ, ನಿಜಭಾಷಾವಿನಿಂದನಾತ್ ॥

–ಕೊನೆಗೆ ಮಾತೃಭಾಷಾ ಭಕ್ತನಾದ ಕೂರ್ಮಾಚಾರ್ಯ ಗಲಗಲಿ ಎಂದು ರುಜು ಹಾಕಿದ್ದಾರೆ.

ಇಂಥ ಉತ್ಸಾಹಿ ವಾತಾವರಣದಲ್ಲಿ ಧಾರವಾಡದಲ್ಲಿ ೪ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನವು ವಿಜೃಂಭಣೆಯಿಂದ ನೆರವೇರಿತು. ಕನ್ನಡದ ಊಳಿಗವೆಲ್ಲ ಒಂದಾಯಿತು. ಮೆರವಣಿಗೆ ಮಿಗಿಲಾಯ್ತು,

---

೧ ಮೇಲಿನ ಪಟ್ಟಿಯನ್ನು ' ಷೇಕ್ಸಪಿಯರಿಗೆ ನಮಸ್ಕಾರ ' ಎಂಬ ಗ್ರಂಥದ ಆಧಾರದಿಂದ ಸಿದ್ಧಪಡಿಸಲಾಗಿದೆ : ೧೯೬೭. ಪು. ೩೯೦–೩೯೩.

ಸಾಹಸವು ಹಿರಿದಾಯ್ತು. ಧಾರವಾಡದಲ್ಲಿ ನೆರವೇರಿದ ಈ ೪ ನೆಯ ಸಮ್ಮೇಲನವನ್ನು 'ಶುಭೋದಯ' ಕಾರರು ಹೀಗೆ ಬಣ್ಣಿಸಿದ್ದಾರೆ :

"ಅಂತರ್ಜ್ಯೋತಿಯಿಂದ ಪ್ರಕಾಶಮಾನರಾದ ಘನಪಂಡಿತರೂ, ಸ್ವದೇಶೋತ್ಕರ್ಷೇಚ್ಛುಗಳಾದ ಕಾರ್ಯಧುರಂಧರರೂ, ನವರಸವರ್ಷಣರಾದ ಕವಿವರ್ಯರೂ, ಸಂದೇಹತಿಮಿರವನ್ನು ಶಕಲಶಕಲವಾಗಿ ಭಂಗಿಸಬಲ್ಲ ವಾಗ್ಮಿಗಳೂ, ಏಕತ್ರ ಕುಳಿತಿರುವ ಶಾಲಾಗೃಹವೇ ದೇವಸಭೆಯಾದ ಸುಧರ್ಮೆಗೆ ಸಮಾನವಾಗಿ ತೋರಿತು.... ಸಮ್ಮೇಲನದ ಮೂರು ನಾಲ್ಕು ದಿವಸಗಳಲ್ಲಿ ಧಾರವಾಡದಲ್ಲೆಲ್ಲ ಉತ್ಸಾಹ ಉತ್ಸವಗಳೇ ಮೆರೆಯುತ್ತಿದ್ದವು. ಉಪನ್ಯಾಸ ವ್ಯಾಖ್ಯಾನಗಳೂ, ಕೀರ್ತನ ಕಥೆಗಳೂ, ನಾಟಕ ಪ್ರದರ್ಶನಗಳೂ, ಗಾಯನ ವಾದನಗಳೂ, ಹಾಸ್ಯ ವಿನೋದಗಳೂ, ಮೆರವಣಿಗೆ ದೀಪೋತ್ಸವಗಳೂ, ಉಪಹಾರ ಭೋಜನಗಳೂ, ಸಮ್ಮೇಲನದ ಮಹಾತ್ಕಾರ್ಯಕ್ಕೆ ವಿಲಕ್ಷಣವಾದ ಶೋಭಾ ಸೌಕರ್ಯಗಳನ್ನು ಬೀರುತ್ತಿದ್ದವು" ೧

ಹೊಸಗನ್ನಡ ಉದಯಕಾಲದ ಸಾಹಿತ್ಯದ ಸ್ಥೂಲ ಲಕ್ಷಣಗಳಾವುವು ?

ಪಾಶ್ಚಿಮಾತ್ಯ ಮತ್ತು ಅನ್ಯಪ್ರಾಂತೀಯ ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರಭಾವದ ಮೂಲಕವಾಗಿಯೂ ಸ್ವಭಾಷಾ ಮತ್ತು ಸ್ವಸಂಸ್ಕೃತಿಗಳ ಪ್ರಜ್ಞೆಯ ಮೂಲಕವಾಗಿಯೂ ಹೊಸಗನ್ನಡ ಸಾಹಿತ್ಯದ ನವೋದಯವಾಯಿತು. ಆದರೆ, ಈ ನವೋದಯದ ಸ್ಥೂಲ ಲಕ್ಷಣಗಳು ಯಾವುವು ? ಅವನ್ನು ಈ ಕೆಳಗಿನಂತೆ ಕ್ರೋಢೀಕರಿಸಬಹುದು :

ಗದ್ಯಪ್ರಾಶಸ್ತ್ಯ :

ಮುದ್ದಣ 'ಪದ್ಯಂ ವಧ್ಯಂ; ಗದ್ಯಂ ಹೃದ್ಯಂ'– ಎಂದು ಹೇಳಿದ್ದರೂ, ಇನ್ನೂ ಬಹುಮಟ್ಟಿಗೆ ಪದ್ಯವೇ ಸಮಸ್ತ ಜನತಾ ಹೃದ್ಯವಾಗಿದ್ದಿತು. ರಸವಿರಲಿ, ಬಿಡಲಿ; ಭಾವವಿರಲಿ, ಬಿಡಲಿ; ಒಟ್ಟು ಯಾವುದನ್ನೂ ಪದ್ಯದ ಬಂಧದಲ್ಲಿಯೇ ಹಾಕಬೇಕೆಂಬ ಹಟ ಇನ್ನೂ ಮುಂದುವರಿದಿತ್ತು. ಆದರೆ, ೧೯ ನೆಯ ಶತಮಾನದ ಅಂತ್ಯಭಾಗದಲ್ಲಿ ಮತ್ತು ೨೦ ನೆಯ ಶತಮಾನದ ಪ್ರಾರಂಭ ಕಾಲದಲ್ಲಿ ಪದ್ಯದ ಈ ಪ್ರಾಧಾನ್ಯ ಕಡಿಮೆಯಾಗಿ ಗದ್ಯ ಪ್ರಾಮುಖ್ಯತೆಯನ್ನು ಪಡೆಯಿತು. ಈ ಬಗ್ಗೆ ಇ. ಪಿ. ರೈಸ್ ಅವರು ಹೀಗೆ ಹೇಳುತ್ತಾರೆ :

" It is evident that the bulk of the literature will henceforth be in prose instead of in verse, and that a vocabulary and style intelligible to all readers of ordinary education will more and more take the place of archaic words and forms. " ೨

ಪದ್ಯದಲ್ಲಿ ಪ್ರಾಸ ಕೈಬಿಟ್ಟಿತು :

ಕನ್ನಡ ಸಾಹಿತ್ಯ ಎಷ್ಟೋ ಮಟ್ಟಿಗೆ ಮೊದಲಿನಿಂದಲೂ ಸಂಸ್ಕೃತದಿಂದ ಸ್ಫೂರ್ತಿ ಪಡೆದಿದೆ. ಸಂಸ್ಕೃತದಲ್ಲಿ ಸಾಮಾನ್ಯವಾಗಿ ಪ್ರಾಸವಿರಲಿಲ್ಲ. ಅನೇಕ ರೀತಿಯಲ್ಲಿ ಸಂಸ್ಕೃತವನ್ನು ಅನುಸರಿಸಿದ

೧ 'ಶುಭೋದಯ'– ೨೪–೫–೧೯೧೮.

೨ History of Kanarese Literature : E. P. Rice, 1921, P. 103.

ಕನ್ನಡವು ಪ್ರಾಸವನ್ನು ಏಕೆ ಇಟ್ಟುಕೊಂಡು ಬಂದಿತೋ ತಿಳಿಯಲಿಲ್ಲ. "ತೆಲುಗಿನಲ್ಲಿ ಪ್ರಾಸವುಂಟು; ತಮಿಳಿನಲ್ಲಿಯೂ ಉಂಟು. ತೆಲುಗಿನ ಸಂಪರ್ಕಕ್ಕಿಂತ ಮುಂಚೆಯೆ ಕನ್ನಡದಲ್ಲಿ ಪ್ರಾಸವು ರೂಢ ವಾಗಿದೆ."[೧] ಪ್ರಾಸ ಎಷ್ಟರಮಟ್ಟಿಗೆ ಕನ್ನಡದಲ್ಲಿ ಅನಿವಾರ್ಯವಾಗಿದೆಯೆಂದರೆ– ಪ್ರಾಸವಿಲ್ಲದ ಹಾಡು ತಾಸು ಹೇಳಿದರೇನು ?– ಎನ್ನುವಂತಾಗಿದೆ.

ಪ್ರಾಸವೆಂದರೆ ಪ್ರ–ಪ್ರಕೃಷ್ಟವಾದ ಅಸ–ನ್ಯಾಸವಾಗಿರುವದು. ಪ್ರಕೃಷ್ಟವಾದ ಸ್ಥಾನದಲ್ಲಿ ಒಂದು ವಿಶಿಷ್ಟಾಕ್ಷರ ನ್ಯಾಸವಾಗಿರುವದೇ ಪ್ರಾಸವು.

ಆದರೆ, ಈ ಪ್ರಾಸ ಮತ್ತು ಯತಿಗಳ ಬಗೆಗೆ ಕನ್ನಡದಲ್ಲಿ ಮೊದಲಿನಿಂದಲೂ ಚರ್ಚೆ ಇದ್ದ ಹಾಗೆ ಕಾಣುತ್ತದೆ. ೯ ನೆಯ ಶತಮಾನದ ನೃಪತುಂಗ, ಕಾವ್ಯಕ್ಕೆ ಪ್ರಾಸ ಅಗತ್ಯವೆಂದು ಹೇಳಿದನು :

ನುತ ಶಬ್ದಾಲಂಕಾರದೊ
ಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ
ಕೃತಕೃತ್ಯಮಲ್ಲವಲ್ಲಭ
ಮತದಿಂದೆ........

–ಇದೇ ರೀತಿ, ನಾಗವರ್ಮನೂ ಸಹ "ಅದು (ಪ್ರಾಸ) ತಪ್ಪೆ ಕಾವ್ಯಮೇಂ ಶೋಭಿಪುದೇ ?"– ಎಂದು ಹೇಳಿದನು. ಆದರೂ, ನೃಪತುಂಗನು ಪ್ರಾಸವನ್ನು ಶಬ್ದಾಲಂಕಾರದಲ್ಲಿ ಸೇರಿಸಿದುದನ್ನು ಗಮನಿಸಬೇಕು. ಇದು ಸಂಸ್ಕೃತದ ಅನುಪ್ರಾಸದ ಅಲಂಕಾರದ ರೀತಿಯಲ್ಲಿ ಬಂದಂತೆ ಕಾಣುತ್ತದೆ. ಕೇಶಿರಾಜನು ಕನ್ನಡದ ಅಸಾಧಾರಣ ಲಕ್ಷಣಗಳನ್ನು ಹೇಳುವಾಗ : "ಯತಿವಿಲಂಘನದಿಂದೆ ಅರಿದಲ್ತೆ ಕನ್ನಡಂ"– ಎಂದು ಹೇಳಿದನು. ಯತಿವಿಲಂಘನ ಕನ್ನಡದ ಅಸಾಧಾರಣ ಲಕ್ಷಣ. ಕನ್ನಡಿಗರು ಯತಿವಿಲಂಘನವನ್ನು ಒಪ್ಪಿಕೊಂಡದ್ದರ ಮೂಲಕವಾಗಿ ಪ್ರಾಸವನ್ನು ಪರಿಹಾರವಾಗಿ ಇಟ್ಟುಕೊಂಡರೇ ಹೇಗೆ ಎಂಬುದನ್ನು ಪರೀಕ್ಷಿಸಬೇಕು.

ದೋಸಮನೆ ಗುಣದವೋಲು
ದ್ಭಾಸಿಸಿ ಕನ್ನಡದೊಳೊಲ್ದು ಪೂರ್ವಾಚಾರ್ಯರ್
ದೇಸಿಯೆನೆ ನಿರಿಸಿ ಖಂಡ
ಪ್ರಾಸಮನತಿಶಯಮಿದೆಂದು ಯತಿಯುಂ ಮಿಕ್ಕರ್ ॥

–ಎಂದು ನೃಪತುಂಗನು ಹೇಳಿದನು.

"ದೋಷ(ವೆನಿಸಿದ ಯತಿಭಂಗ)ವನ್ನೇ ಕನ್ನಡದಲ್ಲಿ ಗುಣದಂತೆ ತೋರ್ಪಡಿಸಿ ಖಂಡಪ್ರಾಸ (ಪ್ರಾಸ ?) ವನ್ನು ಮುಖ್ಯವಾಗಿ ಇಟ್ಟುಕೊಂಡು ಯತಿಯನ್ನು ಮಿಕ್ಕರು. ಅಂದರೆ ಯತಿಭಂಗವನ್ನು ಮಾಡಿದುದಕ್ಕಾಗಿ ಪ್ರಾಸವನ್ನು ಪಾಲಿಸುವರೆಂದು ಹೇಳಿದಂತಾಗಿದೆ. ಯತಿಯನ್ನು ಬಿಟ್ಟದ್ದರಿಂದ ಕವಿತೆಗೆ ಬಂದ ಕುಂದನ್ನು ಪ್ರಾಸದಿಂದ ನೀಗಲಾಡಿದಂತಾಯಿತೆಂದು ತೋರುವದು."[೨] ಅದೇನೇ ಇದ್ದರೂ, ಹಳಗನ್ನಡದಲ್ಲಿ ಪ್ರಾಸ ಗಟ್ಟಿಮುಟ್ಟಿಯಾಗಿ ಕುಳಿತಿತು. ಪ್ರಾಸದ ಕೋಟಲೆಗಾಗಿ, ಎಂತೆಂತಹ ಪದಗಳನ್ನೂ ಸೇರಿಸಬೇಕಾದ ಅನಿವಾರ್ಯತೆ ಒದಗಿತು. ಈ ಪ್ರಾಸದ ದಂದುಗಕ್ಕಾಗಿ

---

೧ ಮ. ಪ್ರ. ಪೂಜಾರ : ಪ್ರಾಸವಿಚಾರವು : ವಾಗ್ಭೂಷಣ– ೧೯೧೯, ಪು. ೩೩೮.

೨ ಮ. ಪ್ರ. ಪೂಜಾರ : ಅದೇ ಪು. ೩೩೮.

"ಕನ್ನಡದಲ್ಲಿ ಚರಣದ ಎರಡನೆಯ ಅಕ್ಷರವು ಪ್ರಾಸಕ್ಕೆ ಯುಕ್ತವೆಂದು ಪ್ರಾಚೀನ ಕವಿಗಳು ನಿರ್ಧರಿಸಿದ್ದು ತಪ್ಪೆಂದು ನಾನು ಸರ್ವಥಾ ಉಸುರಲಾರೆ. ಆದರೆ, ಆ ಪ್ರಾಸಕ್ಕೆ ಬದಲಾಗಿ ಅಂತ್ಯಪ್ರಾಸವನ್ನು ಆಚರಿಸಿದರೆ ಇಂಪಾಗಲಾರದೆಂದೂ ವಾದಿಸಲಾರೆ. ಕೊಡಗರ ಹಾಡುಗಳಲ್ಲಿ ಅಂತ್ಯಪ್ರಾಸವೇ ಪ್ರಧಾನ. ಪ್ರಾಚೀನ ದ್ರಾವಿಡರ ಪದ್ಧತಿ ಹೀಗಿರಬಹುದಿತ್ತು. ನಾನೊಂದು ಸಾವಿರ ಚರಣಗಳನ್ನು ರಚಿಸಿರಬಹುದು. ಇದುವರೆಗೆ ಪ್ರಾಸ ಮುಂಡನಕ್ಕೆ ನನ್ನ ಕಿವಿ ಒಗ್ಗಲಿಲ್ಲ." ೧

ಸನ್ ೧೯೧೮ ರ ಮೊದಲು ಕಾವ್ಯಾನಂದ ಪುಣೇಕರರೂ ಪ್ರಾಸ ತ್ಯಾಗ ಮಾಡಿ ಅನೇಕ ಕವನಗಳನ್ನು ರಚಿಸಿದರು. ಉದಾಹರಣೆಗೆ ಈ ಕೆಳಗಿನ ಪದ್ಯವನ್ನು ಉದ್ಧರಿಸಬಹುದು :

ಅಪ್ಪಾ ಜಾತರಿ, ಧೋತರೋ ? ಮಗನೆ ಈ ಊರಲ್ಲಿಯೇ ಇಲ್ಲವು
ಎಲ್ಲಾ ಗೊತ್ತಿದೆ ಬಿಲ್ಲೆ, ಪೇಟೆಗೆ ನಡೀ, ಮಲ್ಲಪ್ಪನಲ್ಲಿಲ್ಲವೇ ?
ಅಪ್ಪಾ ಸಕ್ಕರಿಕಡ್ಡಿಯೇ ? ಮಗಳೇ ಜಂತಾದಾವು ನಮ್ಮಪ್ಪಗೆ,
ತಾಸೇ ಸಪ್ಪಳವಾಗೆ, ಪೋಗೆ ಹುಡುಗರ್, ಹಾ ನಿಟ್ಟುಸಿರ್ ಬಿಟ್ಟರು

ಅಂತಲೇ, ವಲ್ಲಭ ತಟ್ಟಿಯವರು ಆಗಸ್ಟ ೧೯೧೮ ರಲ್ಲಿ ಕಾವ್ಯಾನಂದರ ಬಗೆಗೆ ಹೀಗೆ ಬರೆದರು :

ಪ್ರಾಸತ್ರಾಸಕೆ ತೊಡಕದೆ
ದೇಶದೊಳೀಗಿರ್ದ ಕನ್ನಡದ ನುಡಿಬಿಡದೆ
ಮೋಸದಿ ಕವಿಯದೆ ಪರಪದ
ಮೀಸಲ ಕಲ್ಪನೆಯನೀವ ಕಾವ್ಯಾನಂದಂ ॥ ೨

ಪ್ರಾಸ ವಿಚಾರವಾಗಿ ದಿವಂಗತ ಗೋವಿಂದ ಪೈಯವರು ಈ ಮೊದಲೇ ತಮ್ಮ ನಿಶ್ಚಿತಾಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ೧೮೯೯–೧೯೦೦ರಷ್ಟರ ಪೂರ್ವದಲ್ಲಿಯೇ ಅವರು ಆದಿಪ್ರಾಸವನ್ನು ಬಿಡುವ ವಿಚಾರವನ್ನು ಮಾಡಿದ್ದರು. ಗೋವಿಂದ ಪೈಯವರು ಪಂಜೆ ಮಂಗೇಶರಾಯರ ಶಿಷ್ಯರಾಗಿದ್ದರು. ಆದ್ದರಿಂದ ಅವರು ಈ ಪ್ರಾಸಾರಾಸದ ಬಗ್ಗೆ ಒಂದು ಸಲ ಪಂಜೆಯವರನ್ನು ಕೇಳಿದರು :

"ಆ ಸಮಯ ಪ್ರಾಸವನ್ನು ಬಿಟ್ಟು ಬರೆಯಬೇಕೆಂದು ನನಗೆ ಪದೇ ಪದೇ ಸ್ಫುರಿಸುತ್ತಿತ್ತು. ಆದರೆ, ಚೇಳಿನ ಮಂತ್ರ ಬಾರದೆ ಹಾವಿನ ಗುದ್ದಿನಲ್ಲಿ ಕೈ ಹಾಕಲಾಗದೆ, ಆ ಬಗ್ಗೆ ಬಲ್ಲವರು ಬೆನ್ನು ತಟ್ಟದಲ್ಲದೆ, ಹಾಗೆ ಬರೆಯಲಿಕ್ಕೆ ಮನಸ್ಸು ಅಳುಕುತ್ತಿತ್ತು. ಆ ಕಾರಣ, ಒಮ್ಮೆ ಪಂಜೆಯವರನ್ನೇ ಕೇಳಿದೆ, ಪ್ರಾಸವನ್ನು ಬಿಟ್ಟರೆ ಹೇಗೆ ಎಂದು. ಅವರು ಅಷ್ಟರಲ್ಲಿಯೇ ಏನೋ ಕೊಕ್ಕೆ ಮಾತಾಡಿ ನನ್ನ ಪ್ರಶ್ನೆಯನ್ನು ತೇಲಿಸಿಬಿಟ್ಟರು." ೩

ಆದರೂ ಸನ್ ೧೯೦೭ ರಲ್ಲಿ ಪ್ರಕಟವಾದ ಪೈಯವರ 'ಕಾಲಿಯ ಮರ್ದನ' ಕವನದಲ್ಲಿ ಇನ್ನೂ ಪ್ರಾಸವಿದ್ದೇ ಇದೆ. ಆದರೆ, ಸನ್ ೧೯೧೧ ರ ಸುಮಾರಿಗೆ ತಾವು ಪ್ರಾಸತ್ಯಾಗದ ಬಗ್ಗೆ ಕೊನೆಯದಾಗಿ ನಿಶ್ಚಯಿಸಿದ್ದನ್ನು ಗೋವಿಂದ ಪೈಯವರು ಹೀಗೆ ಹೇಳುತ್ತಾರೆ :

---

೧ ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ : ೧೯೬೨– ಪು. ೩೭.
೨ ಪ್ರಭಾತ : ೧೯೧೮– ಪು. ೩೨.
೩ ಕನ್ನಡ ಸಾಹಿತ್ಯಕಾರರ ಆತ್ಮಕಥನ– ೧೯೬೬– ಪು. ೪.

"೧೯೧೧ ನೆಯ ಏಪ್ರಿಲ್ ತಿಂಗಳಲ್ಲಿ ನಾನು ಸುಮಾರು ಒಂದು ತಿಂಗಳು ಬರೋಡಾ ರಾಜ್ಯದ ನವಸಾರಿ ಎಂಬಲ್ಲಿದ್ದೆ. ಅಲ್ಲಿ ಒಂದು ಮುಂಜಾನೆ ಮಾಳಿಗೆಯಲ್ಲಿ ಶತಪಥಗೆಯ್ಯುತ್ತಿದ್ದಾಗ ಹಠಾತ್ತಾಗಿ, ಆಗೊಂದು ಹೋಗೊಂದು ಬೇವರ ಇಟ್ಟಿ, ಮಾವೊಂದು ಬಿಟ್ಟೊಂದು ತನ್ನ ಇಟ್ಟಿ, ಇಮ್ಮ ಹಿಂದ ಮುಂದ ನೋಡದೆ 'ಪ್ರಾಸವನೀಗಲೇ ತೊರೆದುಬಿಡುವದೇ ನಿಶ್ಚಯಂ' ಎಂದಾಯಿತು. ಮರದ ಹಣ್ಣು ಮರದ ಬುಡದಾಗೆ ಬಂತು." ೧

ಇದರ ಪರಿಣಾಮವಾಗಿ ಪೈಯವರು ಪ್ರಾಸರಹಿತವಾಗಿ ಬರೆದ 'ಹೋಲೆಯನು ಯಾರು?' ಎಂಬ ಕವಿತೆ 'ಸ್ವದೇಶಾಭಿಮಾನಿ'ಯಲ್ಲಿ ಪ್ರಕಟವಾಯಿತು. ಆಗ, ಪ್ರಾಸಪ್ರಾತಿಗಳ ಕೋಲಾಹಲವೇ ಎದ್ದಿತು. ಕೊನೆಗೆ, ಗೋವಿಂದ ಪೈಗಳು ಈ ಬಗೆಗೆ ತಮ್ಮ ಕೊನೆಯ ಮಾತನ್ನು ಹೇಳಿದರು :

"ಕನ್ನಡ ಕಾವ್ಯಮಾರ್ಗದಲ್ಲಿ 'ಹುಲಿ ಹುಲಿ' ಎಂದು ನನ್ನ ಪ್ರಾಸತ್ಯಾಗವನ್ನು ಬಿರುಸಾಗಿ ಖಂಡಿಸಿ, ಆ ಪತ್ರಿಕೆಯಲ್ಲಿ ಪತ್ರವ್ಯವಹಾರದ ಹೋಲಿ ಎದ್ದಿತು. ಅದಕ್ಕೆ ಪ್ರತ್ಯುತ್ತರವಾಗಿ........ ಕನ್ನಡಕ್ಕೆ ಪ್ರಾಸವೇನೂ ವೇದವಾಕ್ಯವೂ ಅಲ್ಲ; ಶಾಶ್ವತವೂ ಅಲ್ಲ; ಅದನ್ನು ಬೇಕಾದಾಗ ಬೇಕಾದಂತೆ ಬಿಟ್ಟುಬಿಡಬಹುದು. ಅವಸರ ಕಾಲಕ್ಕೆ ತಕ್ಕಂತೆ ರಚನೆಯನ್ನೇ ಅಲ್ಲ, ಛಂದಸ್ಸನ್ನೂ ವ್ಯಾಕರಣವನ್ನೂ ಕೂಡ ತನಗೆ ಬೇಕಾದಂತೆ ಮಾರ್ಪಡಿಸಿಯೂ ನೇರ್ಪಡಿಸಿಯೂಕೊಳ್ಳಲಿಕ್ಕೆ ಕವಿಗೆ ಅಧಿಕಾರವಿದೆ. ಬೇಕಾದವರು ಈ ಹೊಸ ಹಾದಿಯನ್ನು ಹಿಡಿಯಲಿ, ಬೇಡದವರು ಹಳೆಯ ಹಾದಿಯಲ್ಲೇ ನಡೆಯಲಿ, ಮತ್ತೆ ಇಂದು ಒಬ್ಬನೇ ನಡೆವ ಮೋಕೆದಾರಿಯೇ ಮುಂದು ತೇರು ಎಳೆವ ಹೆದ್ದಾರಿ." ೨

ಇದರ ಬಗೆಗೆ ತೀವ್ರವಾದ ಪ್ರತಿಕ್ರಿಯೆಯೂ ಆಯಿತು. "ಈ ಪ್ರಾಸತ್ಯಾಗದಿಂದ ಕನ್ನಡ ನಾಡಿಗಾಗುವ ಪ್ರಯೋಜನವೇನೂ ತಿಳಿಯಬರುವದಿಲ್ಲ. ಕರ್ನಾಟಕ ಮಧುಸೂದನದತ್ತರೆಂಬ ಬಿರುದು ಅವರಿಗಾದರೂ ಬೇಕಿದ್ದರೆ, ಅವರು ಅದನ್ನು ಪ್ರಾಸತ್ಯಾಗದಿಂದ ಸಂಪಾದಿಸಬೇಕಾಗಿಲ್ಲ:.... ಇಷ್ಟರ ಮೇಲೆ ಕರ್ನಾಟಕ ಮಧುಸೂದನರ ಇಷ್ಟ. ಉಪ್ಪಿಲ್ಲದ ಸಾರನ್ನೇ ಬಡಿಸಬೇಕೆಂದಿದ್ದರೆ ಬಡಿಸಲಿ. ಕರ್ನಾಟಕ ದೇಶದಲ್ಲಿ, ಪ್ರಾಸವಿಲ್ಲದ ಪದ್ಯಗಳು, ತ್ರಾಸಿಲ್ಲದೆ ಪಾರಾಗುವವಾದರೆ,– ತ್ರಾಸು ಹಾಕಿ, ಪದ್ಯಗಳನ್ನೇಕೆ ನಿರ್ಮಿಸಬಾರದೆಂದು ಇದೂ ಒಂದು ಪ್ರಶ್ನೆ" ಎಂದು ಕೆಲವರು ಹೇಳಿದರೆ, ಇನ್ನೊಬ್ಬರು ಕವಿತಾರೂಪವಾಗಿ ಹೀಗೆ ಬರೆದರು :

ಪ್ರಾಸಮನಿದುವೊಡೆ ನಿನಗಾ
ಯಾಸಮದಪ್ಪೊಡೆ ಬಿಡುವುದು ಪದ್ಯರಚನೆಯಂ
ಸಾಸಮಿದಲ್ಲವೆ ಲೋಕದೊ
ಳಾಶಿಸುವುದು ಮದುವೆಯಂ ನಪುಂಸಕನುಂ ಪೇಳ್ ? ॥

—ಹೀಗೆ ಪ್ರಾಸ ತ್ಯಾಗ ಮಾಡಿದವನು ನಪುಂಸಕನಾದನು. ೩ ಅದೇನೇ ಇದ್ದರೂ, ಗೋವಿಂದ ಪೈಗಳಂಥ ಧೀರರು ಹಾಕಿದ ಮೋಕೆದಾರಿಯೇ ಮುಂದೆ ತೇರು ಎಳೆವ ಹೆದ್ದಾರಿಯಾಯಿತು.

ವರಕವಿ ದ. ರಾ. ಬೇಂದ್ರೆಯವರಿಗೂ ಸನ್ ೧೯೪೦ ರ ವರೆಗೆ ಪ್ರಾಸಪಾಲಕವಾಗಿ ತಮ್ಮದೇ

೧ ಕಂನಾಡ ಸಾಹಿತ್ಯಶ್ರೀ ರ ಆತ್ಮಕಥೆ– ೧೯೪೬ : ಪು. ೫.
೨ ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ ೧೯೬೩– ಪು. ೪೦.
೩ ಗದಾಧರ 'ಪ್ರಾಸತ್ಯಾಗಕರನ ಕಟುವಾತೆ'– ಮಧುರವಾಣಿ– ಫೆಬ್ರುವರಿ, ೧೯೧೯

ಆದ ಅಭಿಪ್ರಾಯವಿತ್ತು. 'ಶ್ರೀ'ಯವರ ಇಂಗ್ಲಿಷ ಗೀತಗಳು ಎಂಬ ಪುಸ್ತಕದ ವಿಮರ್ಶೆಯನ್ನು ಬರೆಯುವಾಗ, ಬೇಂದ್ರೆಯವರು ಹೀಗೆ ಹೇಳಿದ್ದಾರೆ :

"ಸಂಸ್ಕೃತ ವೃತ್ತಗಳು ಪ್ರಾಸವನ್ನರಿಯವು. ಆದರೂ ಸಂಸ್ಕೃತ ಕವಿಗಳು ಗೀತಗಳನ್ನು ಬರೆಯುವಾಗ ಪ್ರಾಸಕ್ಕೆ ಶರಣುಹೋಗಿದ್ದಾರೆ. ಪ್ರಾಸವನ್ನು ಬಿಟ್ಟು ಬರೆಯುವ ಒಂದು ಅಂದ ಆಂಗ್ಲ ಸಾಹಿತ್ಯದಲ್ಲಿದ್ದರೂ ಇಂಗ್ಲಿಷ ಗೀತಗಳಲ್ಲಿ ಮೂಲದಲ್ಲಿ ಪ್ರಾಸ ಸಹಿತವಾಗಿ ಇರುವ ಪದ್ಯಗಳು ಇಲ್ಲಿ ಪ್ರಾಸರಹಿತವಾಗಿ ಏಕೆ ಮಾರ್ಪಟ್ಟಿವೆಯೋ ತಿಳಿಯದು........ ಪ್ರಾಸವಿಲ್ಲದ ಪದ್ಯವು ಕಾವ್ಯಗುಣವಿದ್ದರೆ ಕಾವ್ಯವೇ ಅಹುದು. ಆದರೂ, ಭಾವದ ಬಿಸಿಗೆ ಹೊರಬಿದ್ದು ಎದ್ದ ವಾಣಿಯ ಉದ್ಗಾರವು ಬರಿಯ ಆವಿಯಲ್ಲ. ಅದು ಮಿಂಚಿ ಮಿಡಿಯುವ ಮೋಡ. ಗದ್ಯವು ಅತಿವೃತ್ತಗಂಧಿಯಾಗುವುದು ಹೇಗೆ ಅದಕ್ಕೆ ಕೊರತೆಯೋ ಹಾಗೆಯೇ ಭಾವೋದ್ರೇಕದ ಪದ್ಯಗಳಲ್ಲಿ ಉಚಿತ ಪ್ರಾಸವಿಲ್ಲದಿರುವುದು ಒಂದು ಕುಂದು." ೧

ಪ್ರಾಸವಿಚಾರವನ್ನು ಕೂಲಂಕಷವಾಗಿ ಈ ಮೊದಲೇ ವಿಚಾರ ಮಾಡಿದ್ದ ಪಂಡಿತ ಮ. ಪ್ರ. ಪೂಜಾರ ಅವರು ಸ್ವತಃ ಸಂಸ್ಕೃತದ ಪಾಂಡಿತ್ಯಪರಂಪರೆಯವರಾದರೂ, ತಮ್ಮ ಖಚಿತಾಭಿಪ್ರಾಯವನ್ನು ಸನ್ ೧೯೧೯ ರಷ್ಟು ಪೂರ್ವದಲ್ಲಿಯೇ ಅಧಿಕಾರಯುತ ವಾಣಿಯಿಂದ ಹೇಳಿದ್ದರು:

"ಕಾವ್ಯಪುರುಷನಿಗೆ ರಸವು ಆತ್ಮವು. ಶಬ್ದ-ಅರ್ಥಗಳು ಶರೀರವು; ಕಾವ್ಯಗುಣಗಳು ಶೌರ್ಯಾದಿ ಗುಣಗಳು; ಅಲಂಕಾರಗಳು ಕಟಕಕುಂಡಲಾದಿ ಅಲಂಕಾರಗಳು. ನೀರಸ ಕಾವ್ಯವು ಆತ್ಮವಿಲ್ಲದ ಶರೀರದಂತೆಯೆ, ಅಲಂಕಾರಗಳು ಶರೀರಕ್ಕೆ ಶೋಭೆಯನ್ನುಂಟುಮಾಡುವಂತೆ ಕಾವ್ಯಕ್ಕೆ ಶೋಭೆಯನ್ನುಂಟುಮಾಡುವವೇ ಹೊರತು, ಕಾವ್ಯತ್ವವನ್ನುಂಟುಮಾಡಲಾರವು. ಅಲಂಕಾರಗಳಲ್ಲಿಯೂ ಕೂಡ ಶಬ್ದಾಲಂಕಾರಗಳು ಅರ್ಥಾಲಂಕಾರಗಳಿಗಿಂತ ಕಡಿಮೆ ತರದವು. ಕನ್ನಡದ ಪ್ರಾಸವು ಅನುಪ್ರಾಸದ ಆಭಾಸರೂಪವಾಗಿರುವದೆಂದು ಇಟ್ಟುಕೊಂಡರೂ ಕಾವ್ಯಮಾರ್ಗದಲ್ಲಿ ಅದಕ್ಕೆ ಮಹತ್ವವೇನೂ ಇಲ್ಲ. ಇದೊಂದು ಶಬ್ದಾಲಂಕಾರವೆಂದರೂ ಇದಕ್ಕೆ ಎಷ್ಟು ಕೊನೆಯ ಸ್ಥಾನವಿರುವದೆಂಬುದನ್ನು ಹೇಳಬೇಕಾಗಿಲ್ಲ.... ಕಾವ್ಯದೃಷ್ಟಿಯಿಂದ ಛಂದೋಬದ್ಧತೆಗೆ ಅಷ್ಟೊಂದು ಪ್ರಾಮುಖ್ಯವಿಲ್ಲ. ಛಂದಸ್ಸಂಬಂಧವಿಲ್ಲದ ಗದ್ಯಭಾಗವೂ ಕಾವ್ಯವೇ. ಕವಿಯ ಮುಖದಿಂದ ಹೊರಟ ರಸಲಹರಿಯು ಇಲ್ಲವೆ ಭಾವಲಹರಿಯು ಕಾವ್ಯವು. ಅದಕ್ಕೆ ಛಂದಸ್ಸಂಬಂಧವು ಕೃತ್ರಿಮವಾದುದು; ಸಹಜವಾದುದಲ್ಲ. ಕವಿಯ ಹೃದಯಾಬ್ಧಿಯಲ್ಲಿದ್ದ ರಸಲಹರಿಗಳು ಸ್ವಾಭಾವಿಕವಾಗಿ ಹೊರಬೀಳುವುದು ಆತನಾಡುವ ವಾಕ್ಯಗಳ ರೂಪದಿಂದಲೇ. ಅವು ಅಕ್ಷರಗಳ ಇಲ್ಲವೆ ಮಾತ್ರೆಗಳ ಲೆಕ್ಕವನ್ನು ನೋಡಲಾರವು."

ಇದಾದ ಎಷ್ಟೋ ವರ್ಷಗಳ ನಂತರ ಕವಿ ವಿನಾಯಕರು "ಶರಧಿಗೆ ಕೊಡದಿರು ಪಟ್ಟದಿಯ ದೀಕ್ಷೆಯನು" ಎಂದು ಹೇಳಿದರು.

ಆದ್ದರಿಂದ, ಕೊನೆಯದಾಗಿ, ಪಂಡಿತ ಪೂಜಾರರ ಮೇರೆಗೆ ಕಾವ್ಯದಲ್ಲಿ ಪ್ರಾಸದ ಸ್ಥಾನ ಹೀಗೆ :

"ರಸಪ್ರಧಾನವಾದ ಕಾವ್ಯವನ್ನು ಮಾಡುವ ಕವಿಗಳು ತಮಗೆ ಪ್ರಾಸದ ತೊಂದರೆಯಾದರೆ ಅದನ್ನು ಮೀರಬಹುದು. ಕೆಲವು ಜನ ಪ್ರಾಚೀನ ಮಹಾಕವಿಗಳಿಗೆ ಪ್ರಾಸವು ತೊಂದರೆಯೆನಿಸಲಿಲ್ಲ

೧ 'ಸಂಭಾವನೆ'- ೧೯೪೦- ಪು. ೭೧.

ವೆಂದು ಎಲ್ಲ ಕವಿಗಳೂ ಹಾಗೆಯೇ ಆಗಬೇಕೆಂಬ ನಿಯಮವಿಲ್ಲ. ಇವರ ರಸವತ್ಕಾವ್ಯಗಳು ಮುಂದಿನ ಕಾಲದಲ್ಲಿ ಪ್ರಾಸಾತಿಕ್ರಮಣಕ್ಕೆ ಉದಾಹರಣಗಳಾಗುವವು.... ಲಕ್ಷಣಶಾಸ್ತ್ರವು ಭಾಷೆಯನ್ನು ಅನುಸರಿಸು ವುದೇ ಹೊರತು ಭಾಷೆಯು ಲಕ್ಷಣಶಾಸ್ತ್ರವನ್ನು ಅನುಸರಿಸಲಾರದು.... ಇನ್ನು ಮುಂದೆ ಎಲ್ಲರೂ ಪ್ರಾಸವನ್ನು ಮೀರಲೇಬೇಕೆಂದು ನಾವು ಹೇಳುವದಿಲ್ಲ. ಪ್ರಾಸವು ಕಾವ್ಯದ ಬೇರೆ ಶಬ್ದಗುಣಗಳಂತೆ ತಾನೂ ಒಂದು ಶಬ್ದಗುಣವಾಗಿ ನಿಲ್ಲಬಹುದು. ಪುರಾಣಾಭಿಮಾನಿಗಳು ಪ್ರಾಸವನ್ನು ಪಾಲಿಸಲಿ, ಕ್ರಾಂತಿಶೀಲರು ಮೀರಲಿ, ಎರಡೂ ಮಾರ್ಗಗಳು ಮಾನ್ಯವಾಗಿರಲಿ ಕಾವ್ಯದಲ್ಲಿ ಶಬ್ದರಚನಾ ಪ್ರಕಾರದ (ಪ್ರಾಸದ) ಮುಖ್ಯತೆಯು ದೋಷವಾಗಿ ಪರಿಣಮಿಸಲಿ. ಕವಿತಾ ಕಮಲಿನಿಯು ಓರಿಹಿರಿ ಹಿಗ್ಗು ವಂತೆ ಆಕೆಯ ವಿಕಸನಗೊಳಿಸುವ ಪ್ರತಿಭಾಶಾಲಿ ಕವಿ ರವೀಂದ್ರರು ಉದಯಿಸಲು ಒಡನೆಯೆ ಅವರ ಕಾವ್ಯಗಳನ್ನು ಲಕ್ಷ್ಯವಾಗಿಟ್ಟುಕೊಂಡು ಲಕ್ಷಣವನ್ನು ಬರೆಯುವದಕ್ಕೆ ಹೊಸ ನೃಪತುಂಗನೂ, ಹೊಸ ನಾಗವರ್ಮನೂ, ಹೊಸ ಕೇಶಿರಾಜನೂ ಉದಯ ಹೊಂದುವರು.... ಪ್ರತಿಭಾಶಾಲಿ ಕವಿಗಳಿಗೆ ಪ್ರಾಸವು ಶೃಂಖಲೆಯಾಗಿ ತೋರುತ್ತಿದ್ದರೆ ಅದನ್ನು ಕಡಿದು, ಕವಿತಾ ರಮಣಿಯ ಸ್ವಚ್ಛಂದ ವಿಹಾರಕ್ಕೆ ಆಸ್ಪದವನ್ನುಂಟುಮಾಡುತ್ತಿದ್ದರೆ ನಾವು ಅದನ್ನು ನಿರೀಕ್ಷಿಸುತ್ತ ಕುಳಿತಿರೋಣ....ಪ್ರಾಸಾತಿಕ್ರಮಣದಿಂದ ಕನ್ನಡ ಭಾಷೆಯ ಕನ್ನಡತನಕ್ಕೂ ಕನ್ನಡಿಗರ ಕನ್ನಡಿಗತನಕ್ಕೂ ಕೇಡು ಒದಗೀತೆಂದು ನನ್ನ ಮಂದ ಬುದ್ಧಿಗೆ ತೋರುವುದಿಲ್ಲ. ಪುರಾಣಪ್ರಿಯತೆಯು ನಮ್ಮ ಜನರ ಗುಣವಾಗಿರುವುದರಿಂದ ಹೊಸದು ಬಂದ ಕಾಲದಲ್ಲೆಲ್ಲ ನಮ್ಮವರು ಕೋಲಾಹಲವನ್ನೆಬ್ಬಿಸುವುದು ಸಹಜವು. ಲೋಕಪ್ರಿಯವಾಗುವಂಥ ರಸವತ್ತಾದ ಕಾವ್ಯವನ್ನು ಬರೆಯುವವನು ಪ್ರಾಸಾತಿಕ್ರಮಣದ ಮಾರ್ಗವನ್ನು ಮಾಡಿಕೊಡಬೇಕು."[೧]

ಹೀಗಾಗಿ, ಪ್ರತಿಭಾವಂತ ಕವಿಗಳಾದ ಕಾವ್ಯಾನಂದ ಪುಣೇಕರ, ಕನ್ನಡ ವಾಮನ, ಗೋವಿಂದ ಪೈ ಮೊದಲಾದಂಥ ಕವಿಗಳಿಗೆ ಪಂಡಿತ ಪೂಜಾರರಂಥ ಶಾಸ್ತ್ರಜ್ಞರ ನೆರವೂ ದೊರಕಿ, ಕನ್ನಡದಲ್ಲಿ ಪ್ರಾಸ ಕೈಬಿಟ್ಟಿತು.

ಖ್ಯಾತವೃತ್ತ, ಕಂದಾದಿಗಳು ನಿಧಾನವಾಗಿ ಹೊಸಗನ್ನಡದ ರೀತಿಯ ಶರಷಟ್ಪದಿಗೆ ಮಾರ್ಗ ಮಾಡಿಕೊಟ್ಟವು :

ಅನೇಕ ಸಲ ಭಾವ ಹೊಸದಾದರೂ, ಖ್ಯಾತವೃತ್ತಗಳು ಮತ್ತು ಷಟ್ಪದಿಗಳ ಬಂಧವೇ ಈ ಕಾಲದಲ್ಲಿಯೂ ಕಂಡುಬಂದಿತು. ಆದರೂ ಶಾಂತಕವಿಗಳಂಥ ಮೇಧಾವಿಗಳ ಕೈಯಲ್ಲಿ ಶರಷಟ್ಪದಿ, ಹೊಸಗನ್ನಡ ಛಂದೋರೀತಿಯ ಲಯವನ್ನೇ ಪಡೆಯಿತು. ಚಾಪದಿ, ಗೀತಿಕೆಗಳೂ ಈ ಹೊಸ ಮಾರ್ಗದ ದಾರಿಯನ್ನೇ ತೋರಿಸಿದವು. ಆದರೂ, ಖ್ಯಾತವೃತ್ತ, ಷಟ್ಪದಿಗಳು ಮಾಯವಾಗು ವುದಕ್ಕೆ ಬಹು ಕಾಲ ಹಿಡಿಯಿತೆಂದೇ ಹೇಳಬೇಕು. ಬೇಂದ್ರೆಯವರಂಥ ಕವಿಗಳ ಪ್ರಾರಂಭದ ಕವನ ಗಳೂ ಸಹ ಷಟ್ಪದಿರೂಪದಲ್ಲಿಯೇ ಇವೆ.

ಕಾವ್ಯದಲ್ಲಿ ವ್ಯಕ್ತಿತ್ವದ ಅಭಿವ್ಯಕ್ತಿ, ಕಾವ್ಯದ ವ್ಯಕ್ತಿನಿಷ್ಠತೆ :

ಹೊಸಗನ್ನಡ ಉದಯಕಾಲದ ಇನ್ನೊಂದು ಮಹತ್ವದ ವೈಶಿಷ್ಟ್ಯವೆಂದರೆ, ಕವಿಯ ವ್ಯಕ್ತಿತ್ವದ ಅಭಿವ್ಯಕ್ತಿ. ಹಳಗನ್ನಡ ಕಾವ್ಯ ಸಾಮಾನ್ಯವಾಗಿ ವಸ್ತುನಿಷ್ಠವಾಗಿತ್ತೇ ವಿನಾ, ವ್ಯಕ್ತಿನಿಷ್ಠ ಭಾವನೆಗಳ ಅಭಿವ್ಯಕ್ತಿಗೆ ಅಲ್ಲಿ ಆಸ್ಪದವಿರಲಿಲ್ಲ. ಪ್ರಾರಂಭದ ಪದ್ಯಗಳಲ್ಲಿ ಮಾತ್ರ ಕವಿಗಳು ಸ್ವ–ವಿಷಯಕವಾಗಿ,

---

೧ ವಾಗ್ಭೂಷಣ : ಮಾರ್ಚ ೧೯೧೯– ಪು. ೩೪೪–೩೪೬.

ಅದೂ ಒಂದೇ ಪಡಿಯಚ್ಚಿನಲ್ಲಿ ಹಲವು ಮಾತುಗಳನ್ನು ಹೇಳುತ್ತಿದ್ದರು. ಕವಿ ಸ್ವತಃ ತನ್ನ ಹೆಂಡತಿಯನ್ನೇ ಕಳೆದುಕೊಂಡಿದ್ದರೂ, ಆ ದುಃಖ, ಸೀತೆಯನ್ನು ಕಳೆದುಕೊಂಡ ಶ್ರೀರಾಮನ ಬಾಯಿಂದಲೇ ಬರಬೇಕು, ಆದರೆ, ಹೊಸಗನ್ನಡದಲ್ಲಿ ಹಾಗಾಗಲಿಲ್ಲ. ಕವಿಯ ವ್ಯಕ್ತಿತ್ವ ಮತ್ತು ಸಮಕಾಲೀನ ಪ್ರಜ್ಞೆಗಳು ಈ ಉದಯಕಾಲದ ಕವಿಗಳ ಕೃತಿಗಳಲ್ಲಿ ಒಡಮೂಡಿ ನಿಂತವು. ಈವರೆಗೆ ಕಾವ್ಯವಸ್ತುಗಳಾಗಿದ್ದ, ಕಮಲ, ಕೋಕಿಲೆ, ಮಂದಾನಿಲಗಳು ಹೊಸ ಹೊಸ ವಿಷಯಗಳಿಗೆ ದಾರಿ ಮಾಡಿಕೊಟ್ಟವು. 'ಕಾಲುಗಾಡಿ', 'ರೊಕ್ಕದ ಮಹಿಮೆ', 'ಭಜನೆಯು ರಾಮನದೊ', 'ಬಡ ಶಿಕ್ಷಕನ ಬಡಬಡಿಕೆ', 'ಗತಪತ್ನೀ ವಿಲಾಸ', 'ವಿಷಮ ವಿವಾಹ'– ಮೊದಲಾದುವು ಕಾವ್ಯವಸ್ತುಗಳಾದವು. ಇವುಗಳಲ್ಲಿ ಕವಿಯ ವೈಯಕ್ತಿಕ ಎನಿಸಿಕೆಗಳೂ ಅಭಿವ್ಯಕ್ತಿ ಹೊಂದಿದವು. ಉದಾಹರಣೆಗೆ, ಸಿದ್ಧೇಶ್ವರ ಮಳೀಮಠ ಎಂಬವರು ಅತ್ಯಧಿಕ ಸಂತಸದಿಂದ ಇಪ್ಪತ್ತು ರೌಪ್ಯವ ಕೊಟ್ಟು ಕೊಂಡ 'ಕಾಲುಗಾಡಿ'ಯ ಸವಾರಿಯ ಬಗೆಗೆ ತಮ್ಮ ಅನುಭವವನ್ನು ಹೀಗೆ ಹೇಳುತ್ತಾರೆ :

ಬಲು ಭಯದಿ ಸತ್ತಿರುವ ನರಗಳ
ಸೆಳೆದು ಬಿಗಿದನು ಕಚ್ಚಿದವಡೆಯ
ಉಲುಕದುಸುರನು ಬಿಡದಲೆದೆಯನು ಗಟ್ಟಿ ಹಿಡಿದಿಹನು
ನಿಲದೆ ಗಣಗಣ ಗಂಟೆ ಹೊಡೆಯುತ
ಹಲವು ಕುತ್ತನು ದಾಂಟಿ ಗುಡ್ಡದ
ಪೊಳಲ ಹೊರಗಿರ್ಪಿಳುಕಲಿನ ಮಾರ್ಗದಲಿ ನಡೆತಂದ ॥ ೧

ಹಾಗೆಯೇ, ಕೆ. ಎನ್. ಕೂಸನೂರ ಎನ್ನುವವರು 'ರೊಕ್ಕದ ಮಹಿಮೆ' ಎಂಬ ತಮ್ಮ ಕವಿತೆಯಲ್ಲಿ ಕುರುಡು ಕಾಂಚಾಣದ ಪ್ರಭಾವವನ್ನು ಹೀಗೆ ವರ್ಣಿಸಿದ್ದಾರೆ :

ಕುಂಟರನು ಕುಣಿಸುವುದು ರೊಕ್ಕವು
ಬಂಟರನ್ನೊಲಿಸುವುದು ರೊಕ್ಕವು
ತುಂಟರನು ಮಾಡಿಡುವದೈ ಬಲು ಸತತ ರೊಕ್ಕವಿದು
ನೆಂಟರನು ಗಳಿಸುವದು ರೊಕ್ಕವು
ಕಂಟಲಿಯ ಬಲಿಸುವದು ರೊಕ್ಕವು
ತುಂಟ ಕಪಿಯಂದದಲಿ ನಾನಾ ಚೇಷ್ಟೆ ಮಾಡುವದು ॥ ೨

'ರಾಮಟೆಂಕಿಯ ನಿಸ್ಸೀಮ ಭಕ್ತ' ಎಂಬ ಕಾವ್ಯನಾಮದ ಕವಿಗಳೊಬ್ಬರು ೧೯೨೦ ರ ಫೆಬ್ರುವರಿ ತಿಂಗಳದ ಪ್ರಭಾತ ಪತ್ರಿಕೆಯಲ್ಲಿ 'ಭಜನೆಯು ರಾಮನದೊ, ದುಡ್ಡಿನದೊ ?' ಎಂಬ ಕವಿತೆಯನ್ನು ಬರೆದರು :

ರಾಮ ರಘುಪತಿರಾಮ, ರಾಮ ಸೀತಾರಾಮ,
ರಾಮ ದುಡ್ಡೆನಗೀಯೋ ಪೂರ್ಣ ಕಾಮ ॥ ಪ ॥
ದುಡ್ಡಿನಿಂದಲೆ ಮಾನ ದುಡ್ಡಿನಿಂದಲೆ ಪ್ರಾಣ
ದುಡ್ಡಿನಿಂದಲೆ ಸೌಖ್ಯ ದುಡ್ಡೆ ಮುಖ್ಯ
ದುಡ್ಡಿನಿಂದಲೆ ಕೀರ್ತಿ ದುಡ್ಡಿನಿಂದಲೆ ಸ್ಫೂರ್ತಿ
ದುಡ್ಡೆ ದೇವರು ಯೆನಗೆ ದುಡ್ಡು ಬೇಕಯ್ಯಾ ॥

೧ ಪ್ರಭಾತ : ಸಪ್ಟಂಬರ– ೧೯೧೮– ಪು. ೧೧–೧೨.
೨ ಅದೇ : ಮೇ ೧೯೧೯– ಪು. ೪೭.

ಸಾಧುವೇಷವ ಧರಿಸಿ ಸ್ವಾರ್ಥವೆಲ್ಲವನೊಲಿದು
ಸಾಧಿಸುವೆ ಜಾಣ್ಮೆಯಿಂದಲಿ ರಾಮರಾಯಾ
ಈ ಧರೆಯೊಳಗೆ ನಿನ್ನ ನಾಮದ ಮಹಿಮೆಯನು
ಬೋಧಿಸುವ ನೆವಮಾಡಿ ಹಣ ಗಳಿಸುವೆ ॥

ಜೇಷ್ಠಾದೇವಿ ಕವಿಗಳ ಕುಲದೇವತೆ; ಸಪ್ತಾಕ್ಷರೀ ಮಂತ್ರ ಅವರ ನಿತ್ಯ ಜಪಮಂತ್ರ. ಫಕೀರಯ್ಯ ಬ. ಇಂಡಿ ಎಂಬವರು ' ಬಡ ಶಿಕ್ಷಕನ ಬಡಬಡಿಕೆ '– ಎಂಬ ತಮ್ಮ ಕವನದಲ್ಲಿ ಹೀಗೆ ಹೇಳಿದರು :

ನಿಲಯದಲಿ ನಾವೈವರಿರುವೆವು– ತಲಬು ದೊರೆವುದು ಮೂರು ವರಹವು
ಬಳಲುತಿರ್ಪೆನು ಕರುಣಿಸೈ ದೇವೇಶ ಜಗದೀಶಾ
ಮಳೆಯು ಪೋದುದು ದಯವ ತೋರದೆ ಹೊಲಗಳೆಲ್ಲವು ಬೀಳುಬಿದ್ದವು
ಬೆಲೆಯು ಹೆಚ್ಚಿತು ಕಾಳು ಕಡಿಗಳನೆಂತು ಕೊಳ್ಳುವದು ?........

ಹರಕಬಟ್ಟೆಯ ಹೊದೆಯಲಾರೆನು– ಧರಿಸಲಾರೆನು ಮಲಿನ ವಸ್ತ್ರವ
ಮರಗುತಿಹೆ ನಾನಿದರದೆಶೆಯಿಂ ದಿವಸದಿವಸಕ್ಕೆ
ಭರದಿನೊಡವೆಯ ಬೆಲೆಯು ಬೆಳೆವುದು– ತರಲಿ ನಾನಿನ್ನೆಲ್ಲಿ ದುಡ್ಡ
ನ್ನರಿವೆಗಳ ಕೊಳ್ಳಲ್ಕೆ ತಿಳಿಯದದೆನಗೆ ಜಗದೀಶಾ

ಭರದೆ ನಡೆದಿಹ ಯುದ್ಧ ಮುಗಿಸೈ– ಮರುಳವೈರಿಗೆ ಮರಣವೀಯೈ
ಬರದ ಬಾಧೆಯನೀಗಿಸೈ– ನುತಿಸುವೆನು ದೇವೇಶಾ
ಕರುಣಭರಿತನೆ ಪರಮಚರಿತನೆ– ಇರದೆಯಧ್ಯಾಪಕರ ತಲಬನು
ತ್ವರೆಯೊಳಿಮ್ಮಡಿ ಮಾಳ್ಪಮನವನ್ನೀವುದೊಡೆಯರ್ಗೆ

ಯುದ್ಧ ನಿಲ್ಲಲಿ, ಬಿಡಲಿ, ಅಕಸ್ಮಾತ್ ದಾರಿ ತಪ್ಪಿ, ದೇವರೇನಾದರೂ ತಾನು ಸೃಷ್ಟಿಸಿದ ಲೋಕವನ್ನು ನೋಡಲಿಕ್ಕೆ ಭೂಮಿಗೆ ಬಂದರೆ, ಬಾಗಿಲಲ್ಲಿಯೇ ನಿಂತಿದ್ದ ಹರಕುರುಮಾಲದ ಮಾಸ್ತರ–

ಕರುಣಭರಿತನೆ ಪರಮಚರಿತನೆ
ಇರದೆಯಧ್ಯಾಪಕರ ತಲಬನು
ತ್ವರೆಯೊಳಿಮ್ಮಡಿ ಮಾಳ್ಪ
ಮನವನ್ನೀವುದೊಡೆಯರ್ಗೆ

–ಎಂದು ಕೂಗಿಕೊಳ್ಳದೆ ಬಿಡನು.

" ವ್ಯಕ್ತಿತ್ವವು ಇಂದಿನ ಯುಗದ ಲಕ್ಷಣವು. ಯಾವದಾದರು ಸಂಪ್ರದಾಯದವರ ಮುದ್ರೆಯಲ್ಲಿ ಬೆಳೆಯುವದು ಈಗ ಸೊಗಸಾಗುವದಿಲ್ಲ. ತಮ್ಮ ಮತಧರ್ಮವನ್ನು ಸಾರಲು ಸದ್ಯಕ್ಕೆ ಯಾರೂ ಪದ್ಯ ಬರೆಯುವದಿಲ್ಲ. ಆದರೂ ಅವರವರ ಇಚ್ಛೆಯಲ್ಲಿಯೂ ಒಂದು ಹೊಸ ಮತವಿದೆ. ಹೊಸ ಕಾಲದ ಸಾಮಾನ್ಯ ಲಕ್ಷಣಗಳು ಎಲ್ಲರಲ್ಲಿಯೂ ಸಮಾನವಾಗಿ ಕಂಡುಬರುವವು. ಆದರೆ, ವ್ಯಕ್ತಿತ್ವದ ಯುಗವು ಒಮ್ಮೆಲೆ ಬಂದಿಲ್ಲ. ಅದಕ್ಕೆ ಅನೇಕ ಕವಿಗಳು ಕೃಷಿ ಮಾಡಬೇಕಾಯಿತು.

ಉತ್ತರ ಕರ್ನಾಟಕದಲ್ಲಿ ಕನ್ನಡ ವಾಮನರು ಮಾಡಿದ ಕೃತಿಗಳಲ್ಲಿ ಆವೇಶಕ್ಕೆ ತಕ್ಕ ಉನ್ನತಿ, ಸೌಕರ್ಯಗಳು ಮೂಡಲಿಲ್ಲ. ಆದರೆ, ಅವರು ಅಕಾಲಮೃತ್ಯುವಿಗೆ ತುತ್ತಾದರು. ವಲ್ಲಭ ಮಹಲಿಂಗ ತಟ್ಟಿ, ಕಾವ್ಯಾನಂದ, ಶಾಂತಕವಿಗಳು ಹೊಸಕನ್ನಡಕ್ಕೆ ಹೊಂದಿಸಿಕೊಳ್ಳಲು ತವಕಪಟ್ಟರು. ಮುಳಬಾಗಲರವರ ಕೃತಿಗಳ ದೋಷಗಳೇನೇ ಇರಲಿ, ಅವರು ಶಾಸ್ತ್ರಿಗಳ ಸಾಲಿಗೆ ಸೇರತಕ್ಕ ವರು. ಕಾವ್ಯಾನಂದರ ವ್ಯಂಗ್ಯ ಪದ್ಯಗಳು ಸಾಕಷ್ಟಾಗಿದ್ದರೆ, ಅವರಿಗೆ ಪ್ರತ್ಯೇಕ ಸ್ಥಾನವನ್ನು ಕಲ್ಪಿಸು ವಷ್ಟು ವ್ಯಕ್ತಿತ್ವವು ಅವರ ಕೃತಿಗಳಲ್ಲಿದೆ ಎಂದು ಹೇಳಬಹುದು. " ೧

ಉಜ್ವಲವಾದ ಕನ್ನಡ ಸೇವಾ ಕಲ್ಪನೆ :

ಈ ಕಾಲದ ಲೇಖಕರೆಲ್ಲರಲ್ಲಿಯೂ ಕನ್ನಡ ಮುಂದುವರಿಯಬೇಕು, ಕನ್ನಡದಲ್ಲಿ ಸಮೃದ್ಧವಾದ ಗ್ರಂಥರಚನೆಯಾಗಬೇಕು, ಇತರ ಸೋದರ ಭಾಷೆಗಳ ಕೂಡ ತುಲನೆ ಮಾಡಿ ನೋಡಿದಾಗ ಕನ್ನಡ ಮುಖ ಕೆಳಗೆ ಹಾಕುವಂತಾಗಬಾರದು ಎಂಬ– ಕರಳು ಹರಕುತನ ಎನ್ನುವಷ್ಟರಮಟ್ಟಿನ ಉಗ್ರವಾದ– ಕನ್ನಡ ಭಕ್ತಿ ಕಂಡುಬರುತ್ತದೆ. ಅದರಲ್ಲಿಯೂ ಕಲಿತವರೆನ್ನುವವರು ಕನ್ನಡದ ಅವಜ್ಞೆಗೈದಾಗ– ಅರಸನನ್ನು ಕಂಡು ಪುರುಷನನ್ನು ಮರೆತಾಗ– ಈ ಕನ್ನಡ ಕೈಂಕರ್ಯದ ಕರಣಭಾರತ್ವವನ್ನು ವಹಿಸಿ ದವರು ಅನೇಕ ಸಲ ತಮ್ಮ ಕನ್ನಡ ಭಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಉದಾಹರಣೆಗೆ, ಶಾಂತಕವಿ ಗಳಂತೂ ಈ ಮಾತನ್ನು ಅನೇಕ ಸಲ ಹೇಳಿಕೊಂಡಿದ್ದಾರೆ. ತಮ್ಮ 'ಕೀಚಕವಧ' ನಾಟಕದ ಪ್ರಸ್ತಾ ವನೆಯಲ್ಲಿ ಸನ್ ೧೮೯೧ ರ ಮೊದಲೇ ಅವರು ಹೇಳಿದುದು ಹೀಗೆ :

" ಮಹಾಮುನಿ ಪ್ರಣೀತವಾದದ್ದೂ ಇಷ್ಟೊಂದು ಪುರಾತನ ಕಾಲದಿಂದ ಬಂದದ್ದೂ ಮಾನಿತ ಜನರಿಂದ ಅಂಗೀಕರಿಸಲ್ಪಟ್ಟದ್ದೂ ಆಗಿರುವ ನಾಟಕ ವಿಷಯದ ಗ್ರಂಥಗಳು ಕನಡ ಭಾಷೆಯಲ್ಲಿ ಇಲ್ಲದಿರುವದು ನಮ್ಮೆಲ್ಲರಿಗೆ ಬಹು ಲಾಂಛನದಾಯಕವಾಗಿರುತ್ತದೆ. ಈ ಮಾತು ನಂಮಂಥ ಅಲ್ಪಜ್ಞರ ಮನಸ್ಸಿಗೆ ಹತ್ತಿದಂತೆ ಕಂನಡ ಪಂಡಿತರ ಮನಕ್ಕೆ ಹತ್ತಿದರೆ ಈ ಲಾಂಛನವು ಹಾರಿ ಹೋಗ ಲಿಕ್ಕೆ ಬಹುಕಾಲ ಹಿಡಿಯಲಿಕ್ಕಿಲ್ಲ. ಈ ಸಂಗತಿಯು ಪಂಡಿತರ ಮನಸ್ಸಿಗೆ ಹತ್ತಿದ ಸುಮುಹೂರ್ತವು ಬರುವ ತನಕ ಬಕಧ್ಯಾನ ಮಾಡುತ್ತ ಸುಮ್ಮನಿರುವದಕ್ಕಿಂತ ನನ್ನ ಅಲ್ಪಮತಿಗೆ ತಿಳಿದಷ್ಟಾದರೂ ಈ ವಿಷಯದಲ್ಲಿ ಯತ್ನ ಮಾಡುವದೇ ಉಚಿತವೆಂಬದಾಗಿ ನಮಗೆ ಕಂಡದ್ದರಿಂದ ನಾವು ಕಂನಡ ಭಾಷೆ ಯಲ್ಲಿ ಹಲವು ನಾಟಕಗಳನ್ನು ರಚಿಸಿದೆವು " ೨

ಸನ್ ೧೮೯೧ ರಲ್ಲಿ ಪ್ರಕಟವಾದ 'ಗಜೇಂದ್ರ ಮೋಕ್ಷ' ಕೀರ್ತನೆಯಲ್ಲಿ ಅವರು ಹೀಗೆ ಹೇಳಿದರು :

" ಎಲೈ ಕನ್ನಡ ಭಾಷೆಯ ಅಭಿಮಾನಿಗಳಿರಾ........ ಈ ದಿವ್ಯಮಾರ್ಗದ ವಿಷಯದಲ್ಲಿ ಸ್ವತಂತ್ರ ವಾದ ಗ್ರಂಥಗಳು ದುರ್ದೈವಿಗಳಾದ ನಮ್ಮ ಕನ್ನಡ ಭಾಷೆಯಲ್ಲಿ ಇಲ್ಲದಿರುವದರಿಂದ ನಂಮ ದೇಶದ ಕನ್ನಡ ಹರಿದಾಸರು ಮೋರೋಪಂತರ ಮಹಾರಾಷ್ಟ್ರ ಆರ್ಯಾ, ಅಮೃತರಾಯರ ಮಹಾರಾಷ್ಟ್ರ ಕಟಾವ, ಕಬೀರದಾಸರ ಹಿಂದುಸ್ಥಾನೀ ದೋಹರೇ ಮುಂತಾದವುಗಳನ್ನು ತೆಗೆದುಕೊಂಡು ಅವುಗಳ ಅರ್ಥವನ್ನು ಕನ್ನಡ ಮಾತಿನಿಂದ ಹೇಳುತ್ತ ಕೀರ್ತನ ಮಾಡುತ್ತಾರೆ. ಹೀಗೆ ಛತ್ರಾ ಮೊಸರೂ ಕಲಿಸಿದಂತೆ ಕೀರ್ತನ ಮಾಡುವದರಿಂದ ಕನ್ನಡ ಭಾಷೆಯ ಗೌರವವು ಕಡಿಮೆ ಆಗುತ್ತದೆ. ಅದು

೧ ಸಾಹಿತ್ಯ ಸಂಶೋಧನ– ೧೯೪೦– ಪು. ೧೮೭.

೨ ಕೀಚಕವಧ : ೧೮೯೧– ೨ ನೆಯ ಆವೃತ್ತಿ– ಪು. ೩.

ಆಗಬಾರದೆಂಬ ಅಭಿಮಾನದಿಂದ ನಾವು ಈ ಗ್ರಂಥವನ್ನು ರಚಿಸಿರುತ್ತೇವೆ." ಇದನ್ನು ಬರೆದ ಶಾಂತಕವಿಗಳು ಕನ್ನಡ ಶಾಲಾ ಶಿಕ್ಷಕರು.

ಸನ್ ೧೮೮೯ ರಲ್ಲಿ ಪ್ರಕಟವಾದ 'ತುರಂಗ ಭಾರತ' ಗ್ರಂಥದ ಪ್ರಸ್ತಾವನೆಯಲ್ಲಿ ಹೀಗೆ ಹೇಳಲಾಗಿದೆ :

"ಯಾವ ಭಾಷೆಯು ಜನರಿಗೆ ತಮ್ಮ ಭಾಷೆಯೊಳಗಿರುವ ಗ್ರಂಥಾಭಿವೃದ್ಧಿಯ ಅಭಿಮಾನ ವಿರುವದಿಲ್ಲವೋ ? ಯಾವ ಭಾಷೆಯು ಬಾಕಿ ಭಾಷೆಗಳಿಗಿಂತಲೂ ಕಡಿಮೆ ಸ್ಥಿತಿಯಲ್ಲಿರುವದೋ ? ಆ ಭಾಷೆಯು ಇಂದಿಗೆ ಕನ್ನಡವೇ ಆಗಿರುವದು" ಆದ್ದರಿಂದ ಸಂಪಾದಕರು ಈ ಪುಸ್ತಕದ ಮುದ್ರಣಕ್ಕೆ ಕೈ ಹಾಕಿದರು.

ಸನ್ ೧೮೮೫ರಲ್ಲಿ ಪ್ರಕಟವಾದ 'ರಾಘವೇಂದ್ರರಾವ ನಾಟಕದ' ಸೂಚನೆಯಲ್ಲಿ ಶ್ರೀ ಗುಂಡೋ ಕೃಷ್ಣ ಚುರಮುರಿಯವರು ಹೀಗೆ ಹೇಳಿದರು :

"ಕನ್ನಡ ಭಾಷಾಭಿಮಾನಿಗಳಾದ ಮಿತ್ರರೇ ನಮ್ಮ ಸ್ವಭಾಷೆಯು ಕ್ಷಯರೋಗಿಯಂತೆ ಅತಿ ಸೂಕ್ಷ್ಮ ಅವಸ್ಥೆಯನ್ನು ತಾಳಿರುವದು ನಾವೆಲ್ಲರೂ ದಿನ ಒಂದಕ್ಕೆ ನೋಡುತ್ತಲಿದ್ದೇವೆ. ಹೀಗಿದ್ದು ದೊಡ್ಡ ದೊಡ್ಡ ಕರ್ನಾಟಕ ದೇಶಸ್ಥ ವಿದ್ವಾಂಸರೆಂಬ ವೈದ್ಯರೆಲ್ಲರು ಕರುಣವಿಲ್ಲದೆ ಅದನ್ನು ಸಾಯ ಗೊಡುತ್ತಲಿರುವದನ್ನು ಕಂಡು ಜೀವವು ನಿಲ್ಲದೆ, ಒಟ್ಟಿಗೆ ಮೂರೇ ಔಷಧಿಗಳನ್ನು ಬಲ್ಲ ದಡ್ಡ ವೈದ್ಯ ನಾದ ನಾನು ಅದನ್ನು ಬದುಕಿಸುವುದಕ್ಕೆ ಯತ್ನ ಮಾಡತೊಡಗಿದ್ದೇನೆ. ನನ್ನ ಯೋಗ್ಯತೆಯನ್ನು ಲಕ್ಷಿಸಿ ನೋಡಿದಲ್ಲಿ ನನ್ನ ಉಪಾಯದಿಂದ ನಮ್ಮ ಭಾಷೆಗುಂಟಾದ ಮಹದ್ರೋಗವು ನಿವಾರಣವಾಗ ಲರಿಯದೆಂಬದನ್ನು ಪೂರ್ಣವಾಗಿ ತಿಳಿದುಕೊಂಡಿದ್ದರೂ, ಅದಕ್ಕೆ ಅನುಕೂಲ ಗ್ರಹಗಳು ಬಂದು, ಯಾವನೊಬ್ಬ ಧನ್ವಂತ್ರಿಯು ಮನಸ್ಸಿನ ಮೇಲೆ ತೆಗೆದುಕೊಳ್ಳುವ ವರೆಗೆ ಜೀವವನ್ನಾದರೂ ಹಿಡಿದು ಕೊಂಡು ಇರಲೆಂದು ಈ ಉದ್ಯೋಗವನ್ನು ನಡೆಸಿದ್ದೇನೆ." ೧ ಇದನ್ನು ಬರೆದವರು ಅರಳೆಯ ಜಿನ್ ಫ್ಯಾಕ್ಟರಿ ವಿಭಾಗದಲ್ಲಿ 'ಕ್ಲಾರ್ಕ' ಆಗಿದ್ದರು.

೧೮೯೪ ರಲ್ಲಿ ಗುರುಬಸಪ್ಪ ಫಕೀರಪ್ಪ ಹಳಕಟ್ಟಿಯವರು ಹೀಗೆ ಬರೆದರು :

"ಕನ್ನಡ ಭಾಷೆಯಲ್ಲಿ ಇತಿಹಾಸ ಪ್ರಸಿದ್ಧವಾದ ಪುರುಷರ ಚರಿತ್ರೆಗಳು ತೀರ ತುಸು ಇರುತ್ತವೆ. ಒಂದು ವೇಳೆ ಇಲ್ಲವೆಂದರೂ ಸಲ್ಲುವದು. ಈ ಕೊರತೆಯನ್ನು ನನ್ನಂಥ ಅಲ್ಪಜ್ಞನು ದೂರ ಮಾಡು ವದು ಅಸಾಧ್ಯವಾಗಿದ್ದರೂ, ಕೈಲಾದಮಟ್ಟಿಗೆ ಪ್ರಯತ್ನ ಮಾಡದೆ ಬಿಡುವದು ತಕ್ಕದ್ದಲ್ಲೆಂದು ಗ್ರಹಿಸಿ, ಪ್ರಾಚೀನ ಇತಿಹಾಸದಲ್ಲಿ ಹೆಸರಾದ ಸಿಕಂದರ ಬಾದಶಹನ ಚರಿತ್ರೆಯನ್ನು ಹಲವು ಇಂಗ್ಲೀಷ- ಮರಾಠಿ ಗ್ರಂಥಗಳ ಆಧಾರದಿಂದ ಬರೆದೆನು." ೨ ಇದನ್ನು ಬರೆದವರು ಧಾರವಾಡ ಟ್ರೇನಿಂಗ ಕಾಲೇಜಿನಲ್ಲಿ 'ಕ್ಲಾರ್ಕ' ಆಗಿದ್ದವರು.

ವಲ್ಲಭ ಮಹಲಿಂಗ ತಟ್ಟಿಯವರಂತೂ ಕನ್ನಡದ ಮುಂಬರಿವಿನ ಬಗೆಗೆ ಸನ್ ೧೮೯೯ ರ ಜೂನ್ ತಿಂಗಳಲ್ಲಿ ಒಂದು ಯೋಜನೆಯನ್ನೇ ಜನತೆಯ ಮುಂದಿಟ್ಟರು. ಕನ್ನಡದ ಕೆಲಸ ಹಲವು ವಿಧಗಳಿಂದ, ಹಲವು ಕೈಗಳಿಂದ, ಆಗಬೇಕೆಂದು ಅವರು ಅಪೇಕ್ಷೆ ಪಟ್ಟರು :

---

೧ ರಾಘವೇಂದ್ರರಾವ ನಾಟಕವು : ೧೮೮೫– ಪು. ೧.

೨ ಸಿಕಂದರಬಾದಶಹನ ಚರಿತ್ರೆ– ೧೮೯೪– ಪು. ೧.

"ಕನ್ನಡಿಗರಾದ ಪ್ರತಿಯೊಬ್ಬ ವಕೀಲರು ದಿನಾಲು ೧ ತಾಸನ್ನಾದರೂ ಗ್ರಂಥರಚನೆಯಲ್ಲಿ ಕಳೆಯುತ್ತ ತಮ್ಮ ಆಯುಷ್ಯದಲ್ಲಿ ಕನಿಷ್ಟ ಪಕ್ಷಕ್ಕೆ ೨-೩ ನೂತನ ಗ್ರಂಥಗಳನ್ನು ಪ್ರಕಟಿಸುವ ಬಗ್ಗೆ ಪ್ರತಿಜ್ಞೆ ಮಾಡಲು, ಸಣ್ಣ ದೊಡ್ಡ ಪದವಿಗಳೂ ಅಧಿಕಾರ ಉಳ್ಳ ಪ್ರತಿಯೊಬ್ಬ ರಾಜಸೇವಕರು ತಮ್ಮ ಬೆಲೆಯುಳ್ಳ ಅನುಭವಗಳಿಂದೊಡಗೂಡಿದ ಉಪಯುಕ್ತ ಗ್ರಂಥಗಳನ್ನು ಮೂರು ನಾಲ್ಕು ವರ್ಷಗಳಿಗೊಂದರಂತೆಯಾದರೂ ಪ್ರಕಟಿಸಹತ್ತಲು, ಪ್ರತಿಯೊಬ್ಬ ವಿದ್ಯೆಕಲಿತ ವ್ಯಾಪಾರಸ್ಥನು ತಮ್ಮ ಹೋರೆಯ ಜಾಣ್ಮೆಯನ್ನು ಬೆರಿಸಿ ಗ್ರಂಥ ರಚಿಸುವದರಲ್ಲಿ ತೊಡಗಲು, ತಿಳುವಳಿಕೆಯುಳ್ಳ ಪ್ರತಿಯೊಬ್ಬ ಇನಾಮುದಾರನು ತನಗೆ ಉಂಬಳಿ ದೊರೆತ ಕಾರಣವನ್ನು ನೆನಪಿಟ್ಟು ತಕ್ಕ ಶೋಧ ಮಾಡಿ ತಮ್ಮ ಹಿರಿಯರ ಚರಿತ್ರೆಯನ್ನು ಜನರಲ್ಲಿ ಹಬ್ಬುಗೊಳಿಸಹತ್ತಲು, ಓದು ಬರಹವೇ ಉಪಜೀವನದ ಸಾಧನವೆಂದು ಬಗೆಯುತ್ತಿರುವ ಪಂಡಿತರು ತಮ್ಮ ಸಂಗ್ರಹದಲ್ಲಿಯೂ ಬೇರೆ ಎಡೆಗಳಲ್ಲಿಯೂ ದೊರೆಯುತ್ತಿರುವ ಹಳೆ ಗ್ರಂಥಗಳನ್ನು ಕಷ್ಟಪಟ್ಟು ಪ್ರಸಿದ್ಧ ಮಾಡಹತ್ತಲು, ವಿದ್ಯ ಕಲಿತ ಪ್ರತಿಯೊಬ್ಬರು ಅಜ್ಞರಾದ ಉಳಿದ ಜನರ ಜ್ಞಾನವನ್ನು ಹೆಚ್ಚುಗೊಳಿಸುವದಕ್ಕೆ ದ್ರವ್ಯಹಾನಿಯನ್ನು ಲೆಕ್ಕಿಸದೆ ಎತ್ತುಗಡೆ ಮಾಡಹತ್ತಲು, ಕನ್ನಡ ಭಾಷೆಯ ಒನಪೂ ಸೊಬಗೂ ಬೆಡಗೂ ಅಂದ ಚಂದಗಳೂ ಅಳತೆಮೀರಿ ಕಂಗೊಳಿಸಹತ್ತುವವೆಂಬದರಲ್ಲಿ ಏನೂ ಸಂಶಯವಿಲ್ಲ." ೧

ವಿರಾಟ್ ಸ್ವರೂಪದಲ್ಲಿ ನಡೆಯಬೇಕಾದ ಈ ಕನ್ನಡ ಕೆಲಸ ಈಗ ಸುಮಾರು ೭೩-೭೪ ವರ್ಷಗಳ ಹಿಂದೆ ಈ ಲೇಖಕರು ಅಪೇಕ್ಷಿಸಿದಂತೆ ನಡೆಯದೆ ಹೋಯಿತು. ಹೊಟ್ಟೆಯ ಹೋರೆಗಾಗಿ ವಿದ್ಯಾಕ್ಷೇತ್ರದಲ್ಲಿರುವವರೇ ಹೆಚ್ಚಾಗಿ ಕನ್ನಡದಲ್ಲಿ ಕೃತಿರಚನೆ ಮಾಡಿದರು. ಇದರಿಂದ ಕನ್ನಡದ ಕಣಜಕ್ಕೂ ಆಗಬೇಕಾದಷ್ಟು ಲಾಭವಾಗಲಿಲ್ಲ; ಸಾಹಿತ್ಯದ ಸತ್ವ-ವೈವಿಧ್ಯಗಳಿಗೂ ಅಷ್ಟು ಲಾಭವಾಗಲಿಲ್ಲ. ಕೇವಲ ಶಿಕ್ಷಕವರ್ಗ ಮಾತ್ರ ಕೃತಿರಚನೆ ಮಾಡಿದರೆ, ಸ್ವಾಭಾವಿಕವಾಗಿಯೇ ಕೃತಿಯಲ್ಲಿಯ ಅನುಭವ ಅವರ ಅನುಭವಕ್ಕೆ ಮಾತ್ರ ಸೀಮಿತವಾಗುತ್ತದೆ. ಉಳಿದ ಕ್ಷೇತ್ರಗಳಲ್ಲಿಯ ಹೊಸ ನೀರು ಈ ಗದ್ದೆಗೆ ಹರಿದುಬರುವದಿಲ್ಲ. ಸಾಹಿತ್ಯ ಸತ್ವಯುತವಾಗಬೇಕಾದರೆ, ವೈವಿಧ್ಯಪೂರ್ಣವಾಗಬೇಕಾದರೆ, ವಿಪುಲವಾಗಬೇಕಾದರೆ, ಎಲ್ಲ ಗದ್ದೆಗಳ ನೀರೂ ಕನ್ನಡದ ನೆಲಕ್ಕೆ ಹರಿದುಬರಬೇಕು. ಅದರ ಬಗೆಗೆ ವಲ್ಲಭ ಮಹಲಿಂಗರು ಅಷ್ಟು ವಿಚಾರ ಮಾಡಿ ತಮ್ಮ ಅಭಿಪ್ರಾಯವನ್ನು ಹೇಳಿದ್ದರು. ಅದೇನೇ ಇದ್ದರೂ ಕನ್ನಡದ ಕೆಲಸದ ಬಗೆಗೆ ಅಂದಿನವರ ತೀವ್ರವಾದ ಆಕಾಂಕ್ಷೆ ಯಾವ ಬಗೆಯದಾಗಿತ್ತೆಂಬುದನ್ನು ಮೇಲಿನ ಅವತರಣಿಕೆ ಸ್ಪಷ್ಟಪಡಿಸುತ್ತದೆ.

ಭಾರತೀಯತ್ವ ಮತ್ತು ಸ್ವ-ತ್ವದ ಅರಿವು :

ಸನ್ ೧೮೫೭ ರಲ್ಲಿ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆದುಹೋಯಿತು. ಅದೇ ಕಾಲದಲ್ಲಿಯೂ ಮತ್ತು ಅದಕ್ಕೂ ಮೊದಲು ವೀರರಾಣಿ ಕಿತ್ತೂರ ಚನ್ನಮ್ಮನ ಪ್ರತಿಭಟನೆ, ನರಗುಂದ ಬಾಬಾಸಾಹೇಬನ ಕ್ರಾಂತಿ, ಹಲಗಲಿ ಬೇಡರ ಪ್ರತಿರೋಧ, ಸುರಪುರ ನಾಯಕರ ಕಲಿತನ- ಇವೆಲ್ಲ ಈ ಸ್ವಾತಂತ್ರ್ಯಯುದ್ಧದ ಗೊಂಚಲುಗಳೇ ಆಗಿ ಭಾರತೀಯರ ದೇಶಾಭಿಮಾನವನ್ನು ಬಡಿದೆಬ್ಬಿಸುತ್ತಲೇ ಇದ್ದವು. ಸಂಗೊಳ್ಳಿ ರಾಯಣ್ಣನಂಥ ಶೂರರು ತಮಗಾದ ಅವಮಾನಕ್ಕಾಗಿ ನಾಗರಹಾವಿನಂತೆ ಫೂತ್ಕರಿಸಿ ನಿಂತರು. ಇವರ ಪೌರುಷಗಳೆಲ್ಲ ಹಾಡಿನ ರೂಪದಿಂದ, ಲಾವಣಿಯ ರೂಪದಿಂದ, ಕನ್ನಡ ನಾಡಿನಲ್ಲೆಲ್ಲ ದುಮುದುಮಿಸಿದವು. ಇಂಥ ಲಾವಣಿಗಳನ್ನು ಸ್ವತಃ ಡಾ॥ ಫ್ಲೀಟ್‌ರಂಥವರೇ ಸಂಗ್ರಹಿಸಿದರು :

೧ ಕನ್ನಡಿಗರ ಜನ್ಮಸಾರ್ಥಕತೆ : ೧೯೨– ಮುನ್ನುಡಿ.

ಕುಲಕರ್ಣಿ ಬಾಳಪ್ಪಾ ರಾಯಣ್ಣಾ ಜೆಳಕಾ ಮಾಡು ಹೊತ್ನ್ಯಾಗ
ಧೋತರ ಕಳಿ ತಾ ಅಂತ ಕೊಟ್ಟನವರ ಕೈಗಿ
ಇಷ್ಟು ಮಾತಿಗೆ ಶಿಟ್ಟು ಮಾಡಿ ಧಿಟ್ಟತನಾ ಹಿಡಿದು
ರಾಯಣ್ಣ ಮುಟ್ಟಾಕಿಲ್ಲಂದರವೀಯೆಂದೆಂದಿಗಿ–

–ಇಲ್ಲಿಗೆ ಸ್ವಾಭಿಮಾನದ ಕಿಡಿ ಉರಿದೆದ್ದಿತು. ರಾಯಣ್ಣ ಸುರಪುರ ನಾಯಕರಲ್ಲಿಗೆ ಹೋಗಿ, ೨೦೦ ಜನ ಶೂರರನ್ನು ಕರೆದುಕೊಂಡು ಬಂದು ಸರಕಾರವನ್ನು ಪ್ರತಿಭಟಿಸಿದ. ರಾಯಣ್ಣ 'ಹಾರಿ ಹನ್ನೆರಡಕ್ಕಡಿ ಜಿಗಿ'ಯುವಂಥವ. ಅವನು ಫಿರಂಗಿಯರನ್ನು ಉಗ್ರವಾಗಿ ಪ್ರತಿಭಟಿಸಿದ ವರ್ಣನೆ ಈ ಲಾವಣಿಯಲ್ಲಿ ಬರುತ್ತದೆ :

ಚಕ್ಕರಟೊಪ್ಪಿಗಿ ಪಿರಂಗೆರನಾ
ಲೆಕ್ಕವಿಲ್ಲದ ಕಡದ ದಂಡಿನ
ದಿಕ್ಕ ತೆಪ್ಪಿಸಿ ಬಿಟ್ಟಾರ್ಕೆಲ್ಲಾ– ವೀರರ.

–ಆದರೆ, ಕೊನೆಗೆ ವಂಚನೆಗೆ ಒಳಗಾಗಿ ರಾಯಣ್ಣ ಸಿಕ್ಕುಬೀಳುತ್ತಾನೆ. ಸರಕಾರ ಅವನಿಗೆ ಫಾಶೀ ಶಿಕ್ಷೆ ಕೊಡುತ್ತದೆ. ಫಾಶಿ ಹಾಕಿದವರೂ ಸಹ ಇಂಥ ವೀರನ ಮರಣಕ್ಕಾಗಿ ಮಮ್ಮಲ ಮರಗುತ್ತಾರೆ :

ಫಾಶಿ ಕೊಟ್ಟ ಸರದಾರ ಆಗ ದ್ಯಾಸಾ ಆಗಿ ಮರಗುತ ನಿಂತಾನ
ಹಿಂತಾ ಭಂಟನ ಕೊಲ್ಲಬಾರ್ದಿತ್ತಂತಾ
    ಹತ್ತ ರೂಪಾಯಿ ಖರ್ಚ ಮಾಡಿ
    ಮತ್ತ ಇವರ ಮಣ್ಣ ಕೊಡರೆಂತ
    ವತ್ತರ ಮಾಡಿ ಹೇಳಿದ ಸಾಹೆಬ ನಿಂತಾ

ಈ ಕೃತಿ—

ಮಂಡಲ ಹೆಬ್ಬಳ್ಳಿ ಪುಂಡರು-ಬಸವರು ಮಾಡಿದ ಲಾವಣಿ
ಕಂಡು ಹೇಳಿದ ಕವಿ ಮಾಡಿದ ಸ್ವಥಾ ೧

–ಇವೆಲ್ಲ ಇನ್ನೂ ಜನಮನದಲ್ಲಿ ಕುದಿಯುತ್ತಿದ್ದ ಭಾವನೆಗಳು. ಸ್ವಾತಂತ್ರ್ಯದ ಕಷಾವಿಗೆ ಇನ್ನೂ ಕುದಿಯುತ್ತಲೇ ಇತ್ತು. ಇದೇ ಕಾಲಕ್ಕೇ, ಸರಕಾರ ಆಯುಧ ಕಾಯದೆಯನ್ನೂ ತಂದಿತು. ಯಾವ ಭಾರತೀಯನೂ ಶಸ್ತ್ರಾಸ್ತ್ರಗಳನ್ನು ಧರಿಸುವಂತಿರಲಿಲ್ಲ. ಈ ಹುಕುಮು ಮುಧೋಳ ರಾಜ್ಯದ ಹಲಗಲಿಗೂ ಬಂದಿತು. ಹಲಗಲಿಯ ಬೇಡರು ಬಂಟರು. 'ಹುಲಿಯ ಹಾಲಿನ ಮೇವನು ಮೆದ್ದವರು'. ಅವರಿಗೆ ಈ ನಿಶ್ಶಸ್ತ್ರೀಕರಣ ಕಾಯದೆ ಸರಿ ಬರಲಿಲ್ಲ.

    ಹೊತ್ತು ಬಂದಿತು ಮತ್ತ ನೋಡರಿ ಕತ್ತಿ ಹಿಡುವ ಜನಕ
    ಶಿಟ್ಟಿನ ಮಂದಿ ಭಂಟರ ಹಲಗಲಿ ಮುಟ್ಟಲಿಲ್ಲ ದಡಕ

ವಿಲಾತಿಯಿಂದ ಹುಕುಮು ಕಳವಿದರ ಕುಂಪಣಿಸರಕಾರಾ
ಎಲ್ಲಾ ಜನರನಾ ತರಿಸಿ ಜೋರಿ ಮಾಡಿ ತರಬೇಕ ಹತಾರಾ

    ಕತ್ತಿ ಕಟಾರಿ ಕೈಚೂರಿ ಚಾಕು ಗುರ್ದಿ ಸುರಾಯಿ ಚಕ್ರಾ
    ಬಾಲಿಯ ಬರ್ಚಿ ಬಿಚ್ಚುಗತ್ತಿ ನೋಡ ಬಾಣಬಿಲ್ಲಿನವರಾ

೧ The Insurrection of Rayanna of Sangolli: Indian Antiquary 1885. P. 295.

ಪಟಾಲ ಪಿಸ್ತುಲ ಕರುಲಿ ತೇಗಾ ಚಪಗೊಡ್ಲಿ ಶಸ್ತ್ರಾ
ತೋಪು ತುಬಾಕಿ ಹೊಡವು ಮದ್ದಗುಂಡ ಬಿಡಬ್ಯಾಡರಿ ಚೂರಾ
ಮುಚ್ಚಿ ಇಟ್ಟವರಿಗೆ ಮೂರುವರ್ಷ ಬೇಡಿ ಹಾಕರಿ ಮೂರಾ
ಕೊಡದ ದಿಟಾಯಿ ಮಾಡಿದವರನಾ ಕಡದ ಹಾಕರಿ ಠಾರಾ ॥

ಆದರೆ, ಹಲಗಲಿ ವೀರರು ಇದನ್ನು ಕೇಳಿ ಸುಮ್ಮನೆ ಕುಳಿತಾರೆಯೇ ? ತಮ್ಮ ಹತ್ತಿರವಿದ್ದ ಹತ್ಯಾರಗಳನ್ನು ಎಂದಿಗಾದರೂ ಕೊಡುವುದೇ ? ಛೆ ! ಆಗದ ಮಾತು !! ಅವರು ತಮ್ಮಲ್ಲಿಯೇ ನಿರ್ಧಾರ ಮಾಡುತ್ತಾರೆ :

ಹಲ್ಲ ಕಿತ್ತಿದ ಹಾಂವಿನ ಪರಿಯು ನಮಗೆ ಆದೀತಲ್ಲಾ
ರಂಡಿ ಮುಸುಕ ಹಾಕಿ ತಿರಗಿದರ ನಮ ಮಾನ ಉಳಿಯುವದಿಲ್ಲಾ
ಮಗ್ಗಲದಾಗಿನ ಹೇಣತಿ ಕೊಟ್ಟಾಂಗ ಅತಿ ಹೇಡಿ ಆದೇವಲ್ಲಾ
ಸತ್ತ ಹೆಣಕ ಶೃಂಗಾರ ಮಾಡಿದ ಪರಿ ಆದೀತಲ್ಲಾ [೧]

–ಆದ್ದರಿಂದ ಪ್ರತಿಭಟನೆ ನಡೆಯುತ್ತದೆ.

ಭಾರತ ಸ್ವಾತಂತ್ರ್ಯಯುದ್ಧ ಒಂದೇ ಸಲ ನಡೆದು ಮುಗಿಯಲಿಲ್ಲ. ಅದು ಹೊಗೆಯಾಡುತ್ತ ೧೮೫೭ ರಿಂದ ನಡೆದೇ ಇತ್ತು. ಕಂಪನಿ ಸರಕಾರ ಹಲವು ವಿಧವಾಗಿ ಜನರನ್ನು ದೋಚಹತ್ತಿತು. ಇದೇ ಕಾಲಕ್ಕೇ ಆದಾಯ ತೆರಿಗೆ ಹುಕುಮೂ ಬಂದಿತು. ಸನ್ ೧೮೬೦ ರ ಜುಲೈ ೩೧ ರಂದು ಜಾರಿಗೆ ಬಂದ ೩೨ ನೆಯ ಕಾಯಿದೆ ಪ್ರಕಾರ ಆಸ್ತಿ, ಉದ್ಯೋಗ, ವ್ಯಾಪಾರ ಮತ್ತು ಕಚೇರಿಗಳ ಆದಾಯಗಳ ಮೇಲೆ ಆದಾಯ ತೆರಿಗೆಯನ್ನು ಹಾಕಲಾಯಿತು.

ಏನ ಹೇಳಲಿ ಜನ್ಮದ ಗೋಳಾ
ಇಂಗ್ರಜಿ ಉಪದರ ಆದೀತು ಬಾಳಾ
ಬಡವರ ಅಳತಾರೋ ಗಳಗಳಾ
ಮಾಡತಾರ ಚಿಂತಿ–

ಮದಲಿಂದ ಕೇಳರಿ ಮಜಕೂರಾ
ಬಂದಾನ ಗಾಡಿನ ಸಾಹೇಬ [೨] ಸರದಾರಾ
ಕುಂತಕೊಂಡ ತಗದ ಒಂದ ಹುನ್ನಾರಾ
ದುಡ್ಡ ಎಳಿಯೋ ಈ ಗತಿ

---

[೧] The Bedas of Halgali : Indian Antiqury 1887– P. 356– ಈ ಲಾವಣಿಯನ್ನು ರಚಿಸಿದವನು– 'ಕುರ್ತಕೋಟಿ ಕಲ್ಮೇಶನ ದಯದಿಂದ ಹೇಳುವ– ಕೇಳುವಕ' ಎಂದು ಕೊನೆಗೆ ಹೇಳಿಕೊಂಡಿದ್ದಾನೆ.

[೨] ಇವ ಸ್ಟೀವರ್ಟ ಸೇಂಟ ಜಾನ್ ಗಾರ್ಡನ್ ಎಂಬವನು. ಇವನು ಧಾರವಾಡದ ಜಿಲ್ಲೆಯ ನ್ಯಾಯಾಧೀಶನೂ, ಮೊಟ್ಟಮೊದಲ ಸಹಾಯಕಕಲೆಕ್ಟರನೂ ಆಗಿದ್ದನು. ಇವನು ೧೮೬೦ ರ ಅಕ್ಟೋಬರ ತಿಂಗಳಲ್ಲಿ ಧಾರವಾಡ ಜಿಲ್ಲೆಯ ಆದಾಯ ತೆರಿಗೆಯ ವಿಶೇಷಾಧಿಕಾರಿಯನ್ನಾಗಿ ನಿಯಮಿಸಲ್ಪಟ್ಟನು. ಇವನ ಹೆಸರು ನಲ್ಲಿಯೇ ಹುಬ್ಬಳ್ಳಿಯಲ್ಲಿ 'ಗಾರ್ಡನ್ ಪೇಟೆ' ಎಂಬುದಿದೆ. ಔಷಧಾಲಯ, ಹಳೇ ಮತ್ತು ಹೊಸ ಹುಬ್ಬಳ್ಳಿಗಳ ನಡುವಿನ ಸೇತುವೆ ಮತ್ತು ಗುರುಸಿದ್ದಪ್ಪನ ಹೊಂಡ– ಇವನ ನಿರ್ದೇಶನದಲ್ಲಿಯೇ ಆದುವೆಂದು ಹೇಳುತ್ತಾರೆ.

ಗಾಡಿನ ಸಾಹೇಬ ಹೇಳತಾನ ತೋರಿ
ಹಸನ ಮಾಡಿಸ್ತೇನ ರಾ–ದಾರಿ
ಇದಕ ನೀವ ಏನ ಅಂತೀರಿ
ಕೆಲಸ ನಿಮದ ಅತಿ–

–ಆದರೆ, ದುಡ್ಡು ಕೊಡುವ ಗತಿ ಹೇಗೆ ?

ಊರೆಲ್ಲ ಪಟ್ಟಿ ಯತ್ಯಾರು
ಕಮರಿಪ್ಯಾಟ್ಯಾಗ ಬಂದ ಕುಂತಾರು
ಜೋರಿಯಿಂದ ಬದಕ ತರಸ್ಯಾರು
ಜಪ್ತಿ ಮಾಡಿ

ಪಟಗ್ಯಾರ ಹೇಳ್ಯಾರ ಸುಭೆದಾರಗ
ನೀ ನಮ್ ಹಡದ ತಂದಿ ಹಾಂಗ
ಸೊಲ್ಪ ಕರಣಾ ಬಂದ ಹೊಟ್ಯಾಗ
ಬಿಡೊ ದಯ ಮಾಡಿ

ತುಮ್ ಖಾವಂದ ಥೇ ಮಾಯಬಾಪ್
ಹಮಾರೆ ಪಟ್ಟಿ ಕರೋ ತುಮಿ ಮಾಫ್
ಕಾಟಲಾಯಾ ಜೋಳೆನು ಚಾಪ್
ದಿಲಾ ರಡಿ–ರಡಿ

–ಆದರೂ ಸರಕಾರ ಬಿಡುವದಿಲ್ಲ. ಹಲಗಿ, ಕುಂಟಿ, ರೇಸಮಿಪಟ್ಟಿ, ಬಾಂಡೆ ಸಾಮಾನಾ, ಜಲಮಾನು ತಾಟು ಲಿಲಾವ ಮಾಡಿಸಿ, ಸರಕಾರ ಹಣ ಕಿತ್ತುಕೊಳ್ಳುತ್ತದೆ. ಅದೇ ರೀತಿ, ಕಮರಿಪೇಟೆಯು ಮುಸಲ್ಮಾನರ ಹತ್ತಿರ ಹೋಗುತ್ತಾರೆ.

ಕಮರಿಪ್ಯಾಟಿ ಮುಸಲಾರು– ಒಳೆ ಗಟ್ಟಿ
ಕೊಡೂದಿಲ್ ಹೋಗಂದಾರ ಕರಪಟ್ಟಿ
ಬೇಕಾರ ತಗೊಳ್ರಿ ದಂಡಾ ಕಟ್ಟಿ
ಇದರ ನಿಮ ಹುಕುಮ

ಮುಸಲರ ಎಲ್ಲಾ ಕುಂತಾರ ಕೂಡಿ
ಮಸೂತಿವಳಗ ಮಸಲತಾ ಮಾಡಿ
ಕಾ ಹೈ ಧೂಂಡಕರ್ ಲಕಾವ್– ಅರೆ ಲಕಡಿ
ಹಿಂದಕ ಸರಿದಿರಿ ಅನಮಾನ ಮಾಡಿ.

ಆದರೆ ಕೆಲವರು ಹೇಳುತ್ತಾರೆ :

ಬಡೆ ಕಟ್ಟೆ ನವೆ ರೆ ದಿವಾನಾ
ಸರಕಾರ್ ಕೆ ಸಾತ್ ಮಸ್ತಿ ನಾ ಕರ್ನಾ
ಮಾ ಬಾಪ ಕರಕೋ ಪಾವಾ ಪಡ್ನಾ
ಕಯಿ ತೋ ಮೇರ್ ಆತಿ

–ಅಂತೂ, ಏನೋ ಆಗಿ, ಆದಾಯ ತೆರಿಗೆ ಪ್ರಕರಣ ಮುಗಿಯುತ್ತದೆ.

ಇವೆಲ್ಲ ಜನಮನದಲ್ಲಿ ಇನ್ನೂ ಉಕ್ಕುತ್ತಿದ್ದ ಕಾಲವದು. ಕಲಿಯುಗದ ಈ ಕಾರ್ಯಗಳ ಜತೆ, ಕಲಿತ ಕವಿಗಳು ಸ್ವಚಿಂತನ ಮಾಡಿ ಭಾರತಕ್ಕೆ ಬಂದ ಈ ವಿಪತ್ತು ಯಾವ ಕಾರಣದ ಸಲುವಾಗಿ ಎಂದು ವಿಚಾರ ಮಾಡಿದರು. ಶಾಂತಕವಿಗಳ ಅನೇಕ ಕವಿತೆಗಳಲ್ಲಿ ಈ ಸ್ವ–ತ್ವದ ಅರಿವು ಕಂಡು ಬರುತ್ತದೆ. "ನಮ್ಮದೀ ಭರತಭೂಮಿ. ಸುರವರಂ ನಂಬಿದಲೆ ಜಗದೀಶ್ವರಂ ತಾನೆ, ಧರಿಸಿ ನಾನಾವತಾರಂಗಳನ್ನು, ಕರೆವ ಸರ್ವಸ್ವಮುಂ ಸಂರಕ್ಷಿಸುವ ತೆರವ ಕಲಿಸಿದ ಪೂರ್ವಪಾಠಶಾಲೆ"– ಎಂದು ಭಾರತದ ಬಗೆಗೆ ಅವರು ದೇಶಾಭಿಮಾನವನ್ನು ಹುಟ್ಟಿಸಿದರು.

ಅಳಿಯುತಿದೆ ಪಾತಾಳಖಾತಕೆ
ಬೆಳೆದ ಭಾರತದೇಶವು
ಕಳಚುತಿವೆ ಧರ್ಮಾಲಯದ ಹೊಂ
ಗಳಸ, ಕನ್ನಡಿ, ಧ್ವಜಗಳು

–ಉದ್ಧರಿಸುವ ಮಹಾತ್ಮರಿಲ್ಲವೆ ಎಂದು ಪರಿತಪಿಸಿದರು. ಕಮತವನ್ನು ಮುರಿದು ಬಾಳಬೇಕಾದೆ ಎಂದು ಬೋಧಿಸಿದರು. ಪರಾನುಕರಣೆಯ ಮೂಲಕ :

ಪರತಂತ್ರದೊಳಿರುವರಿಗೆ ಮಹೇಂದ್ರನ
ಪುರವೂ ನರಕವು ಶಾಂತೇಶ
ನೆರೆ ಸ್ವತಂತ್ರತೆಯೊಳಿರುವ ನರಕವೆ
ಸುರೇಂದ್ರಮಂದಿರದಧಿವಾಸಂ

–ಎಂದು ಘೋಷಿಸಿದರು. ಇಂಥ ದೇಶಾಭಿಮಾನ ಈ ಕಾಲದ ಅನೇಕ ಕೃತಿಗಳಲ್ಲಿ ಕಂಡುಬರುತ್ತದೆ.

ಇಂಗ್ಲಿಷ ಸಾಹಿತ್ಯದ ಪ್ರಭಾವದ ಮೂಲಕ ಅನೇಕ ಹೊಸ ಹೊಸ ಸಾಹಿತ್ಯ ರೂಪಗಳು ಕನ್ನಡದಲ್ಲಿ ಪ್ರಾದುರ್ಭವಿಸಿದವು :

ಇಂಗ್ಲಿಷ ಸಾಹಿತ್ಯದ ಪ್ರಭಾವದ ಮೂಲಕ ಗದ್ಯ ಸಾಹಿತ್ಯರೂಪ ಪ್ರಾಧಾನ್ಯವನ್ನು ಪಡೆಯಿತೆಂದು ಹೇಳಿತಷ್ಟೇ! ಗದ್ಯರೂಪದಲ್ಲಿ ಕಾದಂಬರಿ, ಸಣ್ಣಕಥೆ, ನಾಟಕ, ಪತ್ರಿಕಾಸಾಹಿತ್ಯ ಮೊದಲಾದುವು ಕನ್ನಡದಲ್ಲಿ ಪ್ರಪ್ರಥಮವಾಗಿ ಇಂದಿನ ರೂಪದಲ್ಲಿ ಕಾಣಿಸಿಕೊಂಡವು. 'ಹೇಮಲತೆ ಪ್ರಭಾಕರ', 'ಇಂದಿರಾ'– ಮೊದಲಾದಂಥ ಸಾಮಾಜಿಕ ಕಾದಂಬರಿಗಳೂ ಕನ್ನಡದಲ್ಲಿ ಹುಟ್ಟಿಕೊಂಡವು. ಹಲವು ಇಂಗ್ಲಿಷ ನಾಟಕಗಳು ಕೂಡ ಕನ್ನಡದಲ್ಲಿ ಕಾದಂಬರಿ ರೂಪವನ್ನು ತಾಳಿದವು. ಈ ಬಗ್ಗೆ ಇ. ಪಿ. ರೈಸ್ ಅವರು ಸನ್ ೧೯೨೧ ರ ಮೊದಲಿಗೇ ಹೀಗೆ ಹೇಳಿದ್ದಾರೆ :

" Novels are becoming increasingly popular. Most of these hitherto published have been reproductions from English or Bengali. Several of the plays of Shakespeare have been reproduced in this from e. g. Bhranti Vilas (Comedy of Errors). "

ಪೌರಾಣಿಕ ಕಥೆಗಳ ಬಗ್ಗೆ ಅವರು ಹೇಳುವದೆಂದರೆ :

" A class of books very largely in demand consists of stories from the Epics and Puranas in a new literary form which sprang up in the eighteenth century and is called Yaksha Gana. "

ನಾಟಕಗಳ ಬಗೆಗೆ ಅವರ ಅಭಿಪ್ರಾಯ ಹೀಗೆ :

"Dramatic works of a higher order are now being produced- a department of literature in which only a simple specimen has been found in earlier times. During the past thirty years, quite a considerable number has been published. The Epics, Puranas and Kavya literature supply an inexhaustible fund of material. Such stories as Shakuntala, Harischandra, Nala and Prahlada are favourite subjects. The Rajashekhara has been dramatised; and several of Shakespeare's plays have been adapted."

ಪತ್ರಿಕಾ ವ್ಯವಸಾಯದ ಬಗ್ಗೆ ರೈಸರವರು ಹೇಳುವದೆಂದರೆ :

"Periodical literature, in the form of daily or weekly newspapers, and monthly magazines, are characteristic of the period."[೧]

ಕ್ರೈಸ್ತ ಸಾಹಿತ್ಯ :

"ಕನ್ನಡ ಸಾಹಿತ್ಯಕ್ಕೆ ಸಂಸ್ಕೃತ ಸಾಹಿತ್ಯವೇ ಪ್ರೇರಕ, ಪೋಷಕ, ಗುರು"– ಎಂದು ಬಿ. ಎಂ. ಶ್ರೀಯವರು ಹೇಳಿದರು.[೨] ಕನ್ನಡದ ಉದಯಕಾಲದ ಸಾಹಿತ್ಯವೆಲ್ಲ ಹೆಚ್ಚಾಗಿ ಈ ಸಂಸ್ಕೃತದಿಂದಲೇ ಪ್ರೇರಣೆ ಪಡೆದು, ಕನ್ನಡದ ಜೈನ, ವೀರಶೈವ ಮತ್ತು ಬ್ರಾಹ್ಮಣ ಸಾಹಿತ್ಯಗಳ ತ್ರಿವೇಣಿ ಸಂಗಮಕ್ಕೆ ಎಡೆಕೊಟ್ಟಿತು. ಆದರೆ, ಈ ಹೊಸ ಯುಗದಲ್ಲಿ ಪಶ್ಚಿಮದ ಪ್ರತಿಭೆಯು ಮೂಲಕ ಕ್ರೈಸ್ತ ಮತದ ಅಟ್ಲಾಂಟಿಕ್, ಪ್ಯಾಸಿಫಿಕ್ ಸಮುದ್ರಗಳೂ ಕನ್ನಡದ ಸಮೀಪಕ್ಕೆ ಬರುವಂತಾಯಿತು. ಕನ್ನಡದ ನೆಲದ ಮೇಲೆ ಕಾಲಿಟ್ಟ ಕ್ರೈಸ್ತ ಮಿಶನರಿಗಳು ಇಲ್ಲಿಯ ಜನರಿಗೆ ಅನುಕೂಲವಾಗುವಂತೆ, ಬೈಬಲ್ ಸಾಹಿತ್ಯ ಮತ್ತು ಇತರ ಕ್ರೈಸ್ತ ಸಾಹಿತ್ಯದ ನಿರ್ಮಿತಿಗೆ ಕೈ ಹಾಕಿದರು. ಇದರ ಜತೆಗೇ ವ್ಯಾಕರಣ, ಶಾಸನ, ಭಾಷಾಚರಿತ್ರೆ– ಮೊದಲಾದ ಹೊಸ ಹೊಸ 'ಶಾಸ್ತ್ರ'ಕ್ಕೆ ಸಂಬಂಧಪಟ್ಟ ವಿಷಯಗಳ ಬಗೆಗೂ ಗ್ರಂಥರಚನೆಯನ್ನು ಮಾಡಿದರು. ಈ ಸಾಹಿತ್ಯವು ಕೂಡ ಕನ್ನಡದ ಒಂದು ಅಮೌಲ್ಯವಾದ ಸೊತ್ತಾಯಿತು.

"Christianity has entered the field with versions of the Bible, Biblical commentaries, books for the instruction of the Indian Christian community in the history and teachings of Christianity, translations of such Christian classics as Bunyan's Pilgrim's Progress (Desantriya Prayana or Yatrika Sanchara), Augustine's Confessions, etc., and lyrics for use in Christian worship."

ಕ್ರೈಸ್ತ ಪಾದ್ರಿಗಳು ಕರ್ನಾಟಕದ ತುಂಬೆಲ್ಲ ಸಂಚರಿಸಿ ಕೆಲಸ ಮಾಡಿದರು. ಇಗ್ನೇಶಿಯಸ್ ಲೊಯೊಲಾ ಅವರ ಪರಮ ಶಿಷ್ಯನಾದ ಸಂತ ಝೇವಿಯರನು ಸನ್ ೧೫೪೨ ರಲ್ಲಿ ದಕ್ಷಿಣ ಕರ್ನಾಟಕ ಜಿಲ್ಲೆಗಳಲ್ಲಿ ಸಂಚರಿಸಿದನು. "ಇವನ ಅನುಯಾಯಿಗಳು ಗೋವಾ ಮತ್ತು ಬಿಜಾಪುರದಲ್ಲಿ

---

೧ History of Kanarese Literature– ಪು. ೧೧೦–೧೧೧.
೨ ಕನ್ನಡ ಕೈಪಿಡಿ ಸಂ. ೨– ಪು. ೪೭೨.

ನೆಲಸಿದರು. ಅವರು ಕ್ರಿ. ಶ. ೧೫೮೭ ರಲ್ಲಿ ಪೋರ್ಚುಗಲ್ಲಿನ ಜೆಸ್ಯೂಟ್ ಪಂಥದವರೊಡಗೂಡಿ ಕನ್ನಡ ಮಿಶನ್ ಎಂಬುದಾಗಿ ಮತ ಪ್ರಚಾರ ಸಂಸ್ಥೆಯನ್ನು ಸ್ಥಾಪಿಸಿದರು.... ಪ್ರಸಿದ್ಧ ಪ್ರವಾಸಗ್ರಂಥವೊಂದನ್ನು ಬರೆದು ಕ್ರಿ. ಶ. ೧೬೭೨ ರಲ್ಲಿ ಪ್ರಕಟಿಸಿದ ಫ್ರಾಂನ್ಸಿಸ್ ವಿನ್ಸೆಂಟ್ ಎಂಬವನು ೧೬೫೮ ರಲ್ಲಿ ಕರಾವಳೀ ಜಿಲ್ಲೆಗಳಲ್ಲಿ ಸಂಚರಿಸಿದನು. ಆಂಗ್ಲ ನೌಕಾದಳದಲ್ಲಿದ್ದ ಜಾನ್ ಫ್ರಾಯರ್ ಇವನು ಇಕ್ಕೇರಿಯ ಸೋಮಶೇಖರನ ಕೊಲೆಯಾದಾಗ ಕ್ರಿ. ಶ. ೧೬೭೧ ರಲ್ಲಿ ಕಾರವಾರದಲ್ಲಿದ್ದನು. ಇವನ ಪ್ರವಾಸಗ್ರಂಥವು ೧೬೯೮ ರಲ್ಲಿ ಪ್ರಕಟವಾಯಿತು........ ಹೈದರಾಲಿಯು ಸುಮಾರು ಕ್ರಿ. ಶ. ೧೭೭೨ ರಲ್ಲಿ ಮಂಗಳೂರಿನಲ್ಲಿ ೯೦೦೦ ಕೆಥೋಲಿಕ್ ಕ್ರೈಸ್ತರಿಗೆ ಆಶ್ರಯವನ್ನಿತ್ತನು. ಇಷ್ಟರಲ್ಲಿ ಆಂಧ್ರಪ್ರದೇಶದ ಕಡೆಯಿಂದ ಬಂದ ಕ್ರೈಸ್ತರು ಹೊಸಕೋಟೆ, ಆನೇಕಲ್ಲು, ಕೋಲಾರ, ಚಿಕ್ಕಬಳ್ಳಾಪುರ, ಧಾರವಾಡ ಮೊದಲಾದ ಕಡೆಗಳಲ್ಲಿ ನೆಲೆಸಿದರು. ಕಿ. ಶ. ೧೭೭೭ ರ ಕಾಲದಲ್ಲಿ 'ದಿ ಕರ್ನಾಟಕ ಮಿಶನ್' ಇದರ ಪ್ರಚಾರಕೇಂದ್ರವು ಪಾಂಡಿಚೆರಿಯಲ್ಲಿತ್ತು. ಹಾವೇರಿ, ಗದಗ, ಲಕ್ಷ್ಮೇಶ್ವರ, ವಿಜಾಪುರ, ಕಾರವಾರ, ನಿಪ್ಪಾಣಿ, ಬೆಳಗಾವಿ, ಉಡುಪಿ, ಕುಂದಾಪುರ ಇತ್ಯಾದಿ ಸೀಮೆಗಳಲ್ಲೂ ಸಹ ಕ್ರೈಸ್ತರ ಸಂಖ್ಯೆ ಏರಿತು." [೧] ೧೮೩೪ ರಲ್ಲಿ ಮಂಗಳೂರಲ್ಲಿ ರೆ. ಹೆಬಿಶ್ ಇವರು ಮಿಶನ್ನಿನ ಒಂದು ಶಾಖೆಯನ್ನು ಪ್ರಾರಂಭಿಸಿದರು. ಇದೇ ಕಾಲಕ್ಕೇ ಹೊನ್ನಾವರ, ಧಾರವಾಡಗಳಲ್ಲಿಯೂ ಮಿಶನ್ನಿನ ಕೇಂದ್ರಗಳು ಪ್ರಾರಂಭಿಸಲ್ಪಟ್ಟವು.

ಈ ರೀತಿ, ಕ್ರೈಸ್ತ ಮತ ಕರ್ನಾಟಕದಲ್ಲಿ ಪ್ರಸ್ಥಾಪಿತವಾಗಹತ್ತಿದಾಗ, ಇಲ್ಲಿಯ ಜನಕ್ಕೆಲ್ಲ ಬೈಬಲ್‌ದ ಕನ್ನಡ ಭಾಷಾಂತರಗಳು ಬೇಕಾದವು. ಕಲಕತ್ತ ಬೈಬಲ್ ಸೊಸೈಟಿಯ ಸಂಚಾಲಕನಾಗಿದ್ದ ರೆ. ಹೆನ್ರಿ ಮ್ಯಾಸ್ಟಿನ್ ಎಂಬವನು ತನ್ನ ಕಾಲದಲ್ಲಿ ಗೋವೆಯಲ್ಲಿ ೨೦,೦೦೦ ಕನ್ನಡಿಗರಿದ್ದರೆಂದು ಹೇಳಿದ್ದಾನಲ್ಲದೆ, ಬೈಬಲ್‌ದ ಕನ್ನಡ ಭಾಷಾಂತರ ಕಾರ್ಯವನ್ನು ಕ್ರಿ. ಶ. ೧೮೧೦ ರಿಂದ ತ್ವರೆಗೊಳಿಸಿದನು. ಮಂಗಳೂರು, ಕಾರವಾರ, ಬೆಳಗಾಂವಿ, ವಿಜಾಪುರ– ಮೊದಲಾದ ಸ್ಥಳಗಳಲ್ಲಿಯ ಕನ್ನಡಿಗರನ್ನು ಕ್ರೈಸ್ತ ಮತಕ್ಕೆ ಪರಿವರ್ತಿಸುವುದು ಕಠಿಣವಾಗಿದೆಯೆಂದು ರೆ. ಜಾನ್ ಗ್ಯಾರೆಟ್ ಹೇಳಿದ್ದಾನೆ. "The conversion of the Hindus is considerably impracticable." ಎಂದು ದುಬ್ಬಾಯಿ ವರದಿ ಮಾಡುತ್ತಾನೆ. ಉತ್ತರ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಸ್ಥಾಪಿತವಾದ ಕ್ರೈಸ್ತ ಹೈಸ್ಕೂಲೆಂದರೆ ಸನ್ ೧೮೩೨ ರಲ್ಲಿ ಸ್ಥಾಪಿತವಾದ ಬೆನನ್ ಸ್ಮಿಥ್ ಹೈಸ್ಕೂಲು. ಅನಂತರ ೧೮೬೩ ರಲ್ಲಿ ಧಾರವಾಡದಲ್ಲಿ ಪ್ರಾರಂಭವಾದ ಬಾಸೆಲ್ ಮಿಶನ್ ಹೈಸ್ಕೂಲು. ಶಿಕ್ಷಣ, ಮುದ್ರಣಾಲಯ, ಆಸ್ಪತ್ರೆ, ಕೈಗಾರಿಕಾ ಕ್ಷೇತ್ರಗಳಲ್ಲಿ ಮಾತ್ರವಲ್ಲದೆ, ಸಾಹಿತ್ಯದಲ್ಲಿಯೂ ಕ್ರಿಶ್ಚಿಯನ್ನರು ಅಮೋಘವಾದ ಕೆಲಸವನ್ನು ಮಾಡಿದರು. ಬೈಬಲ್‌ಸಾಹಿತ್ಯ ದೃಷ್ಟಿಯಿಂದ ವಿಚಾರ ಮಾಡಿದರೆ, ಅವರು ಕನ್ನಡದಲ್ಲಿ ಬೈಬಲ್ಲಿನ ಅನುವಾದ, ಬೈಬಲ್ಲಿನ ಗೀತ, ಬೈಬಲ್ ಕತೆಗಳು, ಬೈಬಲ್ ಸೂಕ್ತಿಗಳು, ಬೈಬಲ್ ಪ್ರಸಂಗಗಳು– ಎಂದು ಮೊದಲಾಗಿ ವೈವಿಧ್ಯಪೂರ್ಣವಾದ ಸಾಹಿತ್ಯನಿರ್ಮಿತಿ ಮಾಡಿದರು.

ಕನ್ನಡದಲ್ಲಿ ಬೈಬಲ್ ಸಾಹಿತ್ಯವನ್ನು ನಿರ್ಮಿಸಿದವರಲ್ಲಿ ಬಳ್ಳಾರಿ ಮಿಶನ್ ಕೇಂದ್ರದ ರೆ. ಜಾನ್ ಹ್ಯಾಂಡ್ಸ್ ಇವರ ಹೆಸರನ್ನು ಹೇಳಬೇಕು. ಇವರು ಸನ್ ೧೮೦೯ ರಲ್ಲಿ ಮದ್ರಾಸದಲ್ಲ ಬಂದಿಳಿದರು. ಹ್ಯಾಂಡ್ಸ್ ಬಳ್ಳಾರಿಯಲ್ಲಿದ್ದಾಗ, ಲೂಕ್ಸ ಬೈಬಲ್‌ವನ್ನು ಕನ್ನಡಕ್ಕೆ ಭಾಷಾಂತರಿಸಿದರು. ಅದನ್ನು ಮುದ್ರಣಕ್ಕಾಗಿ ಬಂಗಾಲದ ಶ್ರೀರಾಮಪುರ ಮುದ್ರಣಾಲಯಕ್ಕೆ ಕಳಿಸಿದರು. ಆದರೆ ಸನ್ ೧೮೧೨ ರಲ್ಲಿ ಈ ಮುದ್ರಣಾಲಯಕ್ಕೆ ಬೆಂಕಿ ಹತ್ತಿದಾಗ, ಹ್ಯಾಂಡ್ಸರ ಈ ಹಸ್ತಪ್ರತಿಯೂ ಸುಟ್ಟುಹೋಯಿತು. ಅನಂತರ ಪುನಃ ಅದನ್ನು ಬರೆದು ಸನ್ ೧೮೨೦ ರಲ್ಲಿ ಮುದ್ರಿಸಿದರು. ಹ್ಯಾಂಡ್ಸ್‌ರವರ 'ಗಾಸ್ಪೆಲ್ಸ್

೧ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ. ಪು. ೨೫೬–೨೬೧.

ಆ್ಯಂಡ ಆ್ಯಕ್ಟ್ಸ' ಎಂಬುದೇ ಕನ್ನಡದಲ್ಲಿ ಮುದ್ರಿತವಾದ ಪ್ರಥಮ ಬೈಬಲ್ ಕೃತಿ. ಇದು ಡೆಮಿ ಆಕಾರದಲ್ಲಿ ೫೧೧ ಪುಟಗಳಷ್ಟಿದೆ. ಇದಾದ ನಂತರ ಹ್ಯಾಂಡ್ಸ್ ಅವರು 'ಮೋಸೆಯ ಮೊದಲನೇ ಕಾಂಡವು' ಎಂಬುದನ್ನೂ, 'ಹಳೇ ಒಡಂಬಡಿಕೆ' ಎಂಬುದನ್ನೂ ಭಾಷಾಂತರಿಸಿದನು. ಇವೆರಡೂ ಕೂಡಿ ಡೆಮಿ ಆಕಾರದ ೧೬೦೦ ಪುಟಗಳಷ್ಟಿದೆ. ಅನಂತರ, ಹ್ಯಾಂಡ್ ಅವರು ಜಾನ್ ರೀಡ ಅವರ ಕೂಡ ಕೂಡಿಕೊಂಡು 'ಎಫೆಸಿಯನ್ಸ್ ಆ್ಯಂಡ ಫಿಲಿಪಿಯನ್ಸ್' ಎಂಬ ಭಾಗಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಿದರು. ಇವರ ಈ ಕೃತಿಗಳ ಶೈಲಿಯ ನಿದರ್ಶನವಾಗಿ ಈ ಕೆಳಗಿನ ಅವತರಣಿಕೆಯನ್ನು ಕೊಡಬಹುದು.

"........ತರುವಾಯ ಅವರು ಅಲ್ಲಿ ಶಿಷ್ಯರೊಡನೆ ಬಹುಕಾಲವು ವಾಸ ಮಾಡಿದ್ದರು. ಆದರೆ ಕೆಲಬರು ಯೆಹೂದ್ಯೆಯಾ ದೇಶದಿಂದ ಬಂದು ನೀವು ಮೋಶೇನ ನಿಯಮ ಪ್ರಕಾರ ಸುನ್ನತಿಯನ್ನು ಹೊಂದದಿದ್ದರೆ ರಕ್ಷಿಸಲ್ಪಡಲಾರಿರೆಂದು ಸಹೋದರರನ್ನು ಬೋಧಿಸಿದರು. ಆದದರಿಂದ ಪಾಲನಿಗೂ ಬರ್ನಬಾನಿಗೂ ಅವರ ಸಂಗಡ ಬಹಳ ವಿವಾದವೂ ತರ್ಕವೂ ವುಂಟಾದಾಗ ಆ ತರ್ಕದ ವಿಷಯವನ್ನು ಕುರಿತು ಪಾಲನೂ ಬರ್ನಬಾನನೂ ಅವರಲ್ಲಿ ಬೇರೆ ಕೆಲಬರೂ ಯೆರೂಸಲೇಮಿನಲ್ಲಿರುವ ಪ್ರೇಪಿತರ ಬಳಿಗೂ ಹಿರಿಯರ ಬಳಿಗೂ ಹೋಗ ನಿರ್ಣಯಿಸಿಕೊಂಡರು........" ೧

೧೮೨೦ ರಲ್ಲಿ ಹ್ಯಾಂಡ್ಸ್ ಬರೆದ ಬೈಬಲ್ ಭಾಷಾಂತರ ಕೃತಿ ೩೦೦೦ ಡೆಮಿ ಪುಟಗಳಷ್ಟಾಗಿದೆ. ಸುಪ್ರಸಿದ್ಧ ಪಂಡಿತರಾಗಿದ್ದ ವಿಲಿಯಮ್ ಕ್ಯಾರೆಯವರ ಬೈಬಲ್ ಅನುವಾದವು ಅನಂತರ ಸನ್ ೧೮೨೩ ರಲ್ಲಿ ಪ್ರಕಟವಾಯಿತು. ಇದನ್ನು ಕ್ಯಾರೆ, 'ಧರ್ಮ ಪುಸ್ತಕವು' ಎಂದು ಕರೆದರು. ಇದರ ಮುಖಪುಟದಲ್ಲಿ "ಈಶ್ವರನ ಯಲ್ಲ ಮಾತು ವಿಶೆಷವು– ಮನುಷ್ಯರ ಡಧಾರ ಮಾಡುವಣ ಆಚಾರದ ಯಾವುದು ಪ್ರಕಾಶವು ಮಾಡಿದ್ದಾನೆ ಅದೆ ಧರ್ಮ ಪುಸ್ತಕವು" ಎಂದು ಹೇಳಿದೆ. ಇದರ ಶೈಲಿ ಹೀಗಿದೆ :

"ಯೆಹೂದಿಯ್ಯರು ಅವನ್ನ ಗುಡಿಯಲ್ಲಿ ನೋಡಿ ಯೆಲ್ಲರ ನಡುವೆ ಬಹಳ ಅಡಾಹಿಡಿ ಹುಟ್ಟಿಸಿದರು. ಅವರವನನ್ನು ಹಿಡಿದು ಕೂಗಿ ಹೇಳಿದರು ! ಯಲೊ ಯಿಶರ ಎಲ ಜನಗಳಿರಾ ಉಪಕಾರವನ್ನು ಮಾಡಿರಿ, ಯಾವ ಮನುಷ್ಯರು ಪ್ರತಿಸ್ಥಳದಲ್ಲಿ ಜನಗಳನ ವ್ಯವಸ್ಥಿಯ ಈ ಸ್ಥಳಕ್ಕೆ ವಿರೋಧವಾಗಿ ಜನಗಳನೆಲ್ಲರನ್ನು ಶಿಕ್ಷಿಸುತ್ತಾನೊ ಆತನೆ ಇವನು ಗುಡಿಯಲ್ಲಿ ಗ್ರೀಕರನ ತಂದಿದ್ದಾನೆ." ೨

ಅನಂತರ ವಿಲಿಯಮ್ ರೀವ್ ಅವರ 'ಓಲ್ಡ ಟೆಸ್ಟಮೆಂಟ್' ಗ್ರಂಥವೂ, ಸನ್ ೧೮೫೯ ರಲ್ಲಿ ಸಮಗ್ರ ಬೈಬಲ್ ಗ್ರಂಥವೂ ಪ್ರಕಟವಾದುವು. ಈ ಬೈಬಲ್ ಗ್ರಂಥಗಳಲ್ಲದೆ, ರೀಡ್ ಅವರ 'ಸಾಂಗ್ ಆಫ್ ಸೊಲೊಮನ್', 'ಪೂರ್ವನಿರ್ಧಾರ ದ್ವಿಪಂಚಾಶತಿ', 'ನವನಿರ್ಧಾರ ದ್ವಿಪಂಚಾಶತಿ', ವೀಗಲ್ ಮತ್ತು ಮೊಗ್ಲಿಂಗರ 'ಕ್ರೈಸ್ತಗೀತೆಗಳು', ಮೊಗ್ಲಿಂಗರ 'ಹೃದಯ ದರ್ಪಣ', 'ದೇವ ವಿಚಾರಣೆ' (೧೮೫೨), 'ಜಾತಿ ವಿಚಾರಣೆ' (೧೮೫೪), 'ಮತ ವಿಚಾರಣೆ' (೧೮೬೪), 'ಏಸುಕ್ರಿಸ್ತನ ಶ್ರಮೋ ಚರಿತ್ರೆ', 'ವಿಗ್ರಹಾರಾಧನೆ'– ಮೊದಲಾದ ಗ್ರಂಥಗಳನ್ನು ಹೇಳಬಹುದು. ಹೀಗಾಗಿ, ಕನ್ನಡದಲ್ಲಿ ಈ ಕ್ರೈಸ್ತ ಸಾಹಿತ್ಯವೂ ತನ್ನದೇ ಆದ ಸ್ಥಾನವನ್ನು ಪಡೆಯಿತು.

---

೧ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ : ಪು. ೨೬೯.

೨ ಅದೇ ಪು. ೨೬೦–೨೬೧.

ಹೊಸಗನ್ನಡ ಗದ್ಯಶೈಲಿಯು ಹೊಸ ಸೈಲು :

ಕನ್ನಡದ ಮೇಲಾದ ಪಾಶ್ಚಿಮಾತ್ಯ ಪ್ರಭಾವದ ಮೂಲಕವೂ, ಕನ್ನಡದಲ್ಲಿ ಈ ಮಿಶನರಿಗಳು ಕೃಷಿಗೈದದ್ದರ ಫಲವಾಗಿಯೂ, ಹೊಸ ಹೊಸ ವಿಚಾರಗಳ ಆಘಾತದ ಮೂಲಕವೂ, ಒಂದು ಹೊಸ ತೆರನಾದ ಗದ್ಯಶೈಲಿ ಕನ್ನಡದಲ್ಲಿ ಕಣ್ ತೆರೆಯಿತು. ಕನ್ನಡ ಚಂಪೂಕೃತಿಗಳಲ್ಲಿ ಗದ್ಯ ಕಂಡುಬರುತ್ತ ದೇನೋ ನಿಜ. ಆದರೆ, ಅದು ಎರಡು ಪದ್ಯಗಳನ್ನು ಕೂಡಿಸುವ ಕೊಂಡಿ ಮಾತ್ರ. ಅದಕ್ಕೆ ತನ್ನದೇ ಆದ ಮಣಿಬಲ್ಲತನ (Flexibility) ಇಲ್ಲ. 'ವಡ್ಡಾರಾಧನ' ಮತ್ತು ವೀರಶೈವ ವಚನ ಕಾರರಲ್ಲಿ ಕಂಡುಬರುವ ಗದ್ಯಶೈಲಿಗೆ ತನ್ನದೇ ಆದ ಒಂದು ಲಯ, ಒಂದು ಗತ್ತು, ಒಂದು ಠೀವಿ ಇದೆ. ಆದರೆ, ಅದು ಶಾಸ್ತ್ರೀಯ ವಿಷಯ ಮತ್ತು ಸಾಮಾಜಿಕ ಪರಿಜ್ಞಾನಗಳ ಪ್ರತಿಪಾದನೆಗೆ ಎಷ್ಟರ ಮಟ್ಟಿಗೆ ಸಮರ್ಥವಾಗುತ್ತಿತ್ತೆಂಬುದು ವಿಚಾರಾರ್ಹ. ಆದರೆ, ೧೯ ನೆಯ ಶತಮಾನದ ಕೊನೆಯ ಭಾಗದಲ್ಲಿ ಮೂಡಿಬಂದ ಗದ್ಯಶೈಲಿ ಮಾತ್ರ ಎಲ್ಲ ಭಾವಗಳನ್ನೂ ವಿಚಾರಗಳನ್ನೂ ಅಭಿ ವ್ಯಕ್ತಗೊಳಿಸುವಷ್ಟು ಸಾಮರ್ಥ್ಯವನ್ನು ಪಡೆದುಕೊಂಡಿತು.

ಎರಡನೆಯದಾಗಿ, ಹಿಂದಿನ ಕನ್ನಡ ಗದ್ಯದಲ್ಲಿ ಅನೇಕ ಸಲ, ಭಾವ ಕಡಿಮೆಯಾಗಿ ಭಾಷೆ ಅಥವಾ ಮಾತು ಹೆಚ್ಚಾಗಿರುತ್ತಿತ್ತು. ಇದರ ಮೂಲಕ ಅತಿಶಯೋಕ್ತಿ, ಶಬ್ದಚಮತ್ಕೃತಿ, ಅನವಶ್ಯಕವಾದ ಕಾವ್ಯಶೈಲಿಯ ರೀತಿ ಅನೇಕ ಸಲ ಕಂಡುಬರುತ್ತಿದೆ. ಭಾವಕ್ಕೆಷ್ಟೋ ಅಷ್ಟೇ ಭಾಷೆ ಎಂಬ ಕಲ್ಪನೆಯೂ, ನೈಜ ವಿಚಾರಗಳ ಅಭಿವ್ಯಕ್ತಿಗೆ ಬಳಸುದಾರಿ ಹಿಡಿಯದ ನೇರವಾದ ಮಾತಿನ ರೀತಿಯೂ ಈ ಕಾಲ ದಲ್ಲಿಯೇ ಹೊಸದಾಗಿ ಪ್ರಾರಂಭವಾದುವೆಂದು ಹೇಳಬಹುದು. ಕನ್ನಡ ಭಾಷೆ ಅರಮನೆಯ ಭಟ್ಟಂಗಿಗಳ ಪರಾಕು ಭಾಷೆಯಾಗದೆ, ಶಿಕ್ಷಕರ, ತತ್ವಜ್ಞರ ಹದವರಿತ ನೇರ ಭಾಷೆಯಾಯಿತು.

ಅದೂ ಅಲ್ಲದೆ, ಪರಿಚ್ಛೇದ ಕಲ್ಪನೆ, ವಿರಾಮ ಚಿಹ್ನೆಗಳೂ ಈ ಕಾಲದಲ್ಲಿಯೇ ಮೂಡಿಬಂದುವು. ಪದ್ಯ ಸಾಹಿತ್ಯದಲ್ಲೇನೋ, ಯತಿ ಎಂಬುದೊಂದಿತ್ತು. 'ಯತಿ ಯೆಂಬುದುಸಿರ್ತಾಣಂ'. ಗಮಕಿ ಅಲ್ಲಿ ಉಸಿರನ್ನು ತೆಗೆದುಕೊಳ್ಳಬಹುದಿತ್ತು. ಆದರೆ, ಗದ್ಯಕ್ಕೆ ಅಂಥ ವಿರಾಮ ಸ್ಥಾನಗಳಿರಲಿಲ್ಲ. ಆದ್ದರಿಂದ ಗದ್ಯದ ಓಟ ಉಸಿರುಗಟ್ಟಿದಂತಾಗಿ, ಎಂದುಂ, ಮತ್ತುಂ, ಅದುಮಲ್ಲದೆ, ಎಂದು ಬಂದಾಗ ಮಾತ್ರ, ವಾಚಕ ಉಸಿರು ಬಿಡುವಂತಾಗುತ್ತಿತ್ತು. ಆದರೆ ಇಂದಿನ ಹೊಸಗನ್ನಡದಲ್ಲಿ ಮಾತು ಹೇಗೆ ಭಾವವನ್ನು ವ್ಯಕ್ತಪಡಿಸುತ್ತದೋ, ಹಾಗೆಯೇ ಮೌನವೂ ಕೂಡ ಭಾವವನ್ನು ವ್ಯಕ್ತಪಡಿಸುತ್ತದೆ. ಆದ್ದರಿಂದ ವಿರಾಮ ಚಿಹ್ನೆಗಳು ಇಂದು ಸಾಹಿತ್ಯದ, ಬರವಣಿಗೆಯ ಒಂದು ಭಾಗವೇ ಆಗಿವೆ. ಇ. ಪಿ. ರೈಸ್‌ರವರೇನೋ ಈ ವಿರಾಮ ಚಿಹ್ನೆಗಳು ಕನ್ನಡದ ಸೌಂದರ್ಯವನ್ನು ಹಾಳು ಮಾಡುತ್ತವೆ; ಅವು ಕನ್ನಡದಲ್ಲಿ ಇರಕೂಡದೆಂದು ಪ್ರತಿಪಾದಿಸಿದರು :

"One of the beauties of Kanarese is that all the pauses and intonations, which in English are represented by punctuation, are expressed by the vernacular idiom itself, so that no well-constructed Kanarese sentence requires any marks of punctuation whatsoever. Nevertheless, most modern Kanarese books are disfigured with all the cumbrous apparatus of Western commas, semicolons, inverted commas and marks of interrogation and exclamation. The result, is, that there is growing up a slovenly mode of writing, in which the sense is no longer clear without these alien aids" ೧

೧ History of Kanarese Literature : ಪು. ೧೧೪.

ರೈಸ್‌ರು ಹೀಗೆ ಹೇಳಿದರೂ, ಕನ್ನಡದಲ್ಲಿ ಈ ವಿರಾಮ ಚಿಹ್ನಗಳು ನೆಲೆನಿಂತವು. ಅದೂ ಅಲ್ಲದೆ, ಅವರು ಹೆದರಿದ ಯಾವ ವಿಷಯವೂ ಹೊಸಗನ್ನಡದಲ್ಲಿ ನಡೆದಂತೆ ಕಂಡುಬರಲಿಲ್ಲ.

ಶೈಕ್ಷಣಿಕ ಮತ್ತು ವಿಷಯಬೋಧಕ ಪುಸ್ತಕಗಳು :

ಶಿಕ್ಷಣವು ಸಾಂಘೀಕರಣ ಹೊಂದಿದ್ದರ ಮೂಲಕ ವಿದ್ಯಾರ್ಥಿಗಳ ಮಟ್ಟಕ್ಕೆ ಅನುಗುಣವಾಗಿ ಕ್ರಮಿಕ ಪುಸ್ತಕಗಳ ಮತ್ತು ಇತರ ವಿವರಗಳನ್ನು ಕೊಡುವ ಪುಸ್ತಕಗಳ ಪ್ರಕಟನೆ ಆವಶ್ಯಕವಾಯಿತು. ಆ ರೀತಿ, ಮುಂಬಯಿ ಮತ್ತು ಮದ್ರಾಸ ಇಲಾಖೆಗಳ ಕ್ರಮಿಕ ಪುಸ್ತಕಗಳೂ, ಮಂಗಳೂರಿನ 'ಕಾವ್ಯ ಪುಂಜ' (೧೮೮೨), 'ಕಾವ್ಯಮಂಜರಿ', ಬೆಂಗಳೂರಿನಿಂದ ಪ್ರಕಟಿತವಾದ 'ಕಥಾಮಂಜರಿ', 'ಕಥಾ ಸಂಗ್ರಹ'– ಮೊದಲಾದವುಗಳು ಪ್ರಕಟಗೊಂಡವು. ಧಾರವಾಡ ವಿಭಾಗದಲ್ಲಿ ಡೆಪ್ಯುಟಿ ಚೆನಬಸಪ್ಪ, ವೆಂಕಟ ರಂಗೋ ಕಟ್ಟಿ, ಗೌರೀಶ– ಮೊದಲಾದವರು ಅನೇಕ ಕ್ರಮಿಕ ಪುಸ್ತಕಗಳನ್ನು ರಚಿಸಿದರು. ಈ ಬಗ್ಗೆ ಇ. ಪಿ. ರೈಸ್‌ರವರು ಹೀಗೆ ಹೇಳುತ್ತಾರೆ :

"Educational and informational works have been produced in large numbers and of steadily increasing value. These have included works on linguistics, history, biography, mathematics, agriculture, hygiene, medicine, law and other subjects. Thus has been brought about the beginning of a scientific literature....... [೧]

ಪತ್ರಿಕಾ ಸಾಹಿತ್ಯ :

ಈ ಬಗ್ಗೆ ರೈಸ್‌ರವರು ಹೇಳುವುದು ಹೀಗೆ :

"Periodical literature, in the form of daily or weekly newspapers, and monthly magazines, are characteristic of this period."

ಉತ್ತರ ಕರ್ನಾಟಕದಲ್ಲಿ ಹೊರಡುತ್ತಿದ್ದ ಮೊತ್ತ ಮೊದಲನೆಯ ಪತ್ರಿಕೆಯೆಂದರೆ ಬೆಳಗಾವಿಯ 'ಸುಬುದ್ಧಿ ಪ್ರಕಾಶ' ಎಂಬುದು. (ಇದರ ೧೮೫೫ ರ ಸಂಚಿಕೆಯ ಪಡಿಯಚ್ಚನ್ನು ಅನ್ಯತ್ರ ಕೊಡಲಾಗಿದೆ.) 'ಸುಬುದ್ಧಿ ಪ್ರಕಾಶ' ವು ಸನ್ ೧೮೫೦ ರಲ್ಲಿ ಅಂದರೆ ಇಂದಿಗೆ ಸುಮಾರು ೧೨೪ ವರ್ಷಗಳ ಹಿಂದೆ ಪ್ರಕಟಿತವಾಯಿತು. ಇದು ವಾರಪತ್ರಿಕೆ. ಪ್ರತಿ ಸೋಮವಾರ ಹೊರಡುತ್ತಿತ್ತು. ಒಂದು ಸಂಚಿಕೆಯಲ್ಲಿ ನಾಲ್ಕು ಪುಟಗಳು ಇರುತ್ತಿದ್ದವು. ಚಂದಾಹಣ ತಿಂಗಳಿಗೆ ಎಂಟಾಣೆ. ವರ್ಷಕ್ಕೆ ಆರು ರೂಪಾಯಿ. ಬಿಡಿ ಸಂಚಿಕೆಯ ಬೆಲೆ ಎರಡಾಣೆ. ಇದರ ಸಂಪಾದಕರು ಯಾರೆಂಬುದು ತಿಳಿಯುವಂತಿಲ್ಲ. ಇದು ಶಿಲಾಯಂತ್ರದಲ್ಲಿ ಮುದ್ರಿತವಾಗುತ್ತಿತ್ತು. ಈ ಪತ್ರಿಕೆಯ ಸನ್ ೧೮೫೫ ರ ಸಪ್ಟೆಂಬರ ೨೪ ರ ಚಂದ್ರವಾರ ರಾಕ್ಷಸನಾಮ ಸಂವತ್ಸರದ ಅಂದರೆ ಆರನೆಯ ವರ್ಷದ ಒಂದು ಸಂಚಿಕೆ ಬೆಳಗಾವಿಯ ಶ್ರೀ ಭರಮಪ್ಪ ರುದ್ರಪ್ಪ ಪಾಟೀಲ ಎಂಬವರಲ್ಲಿ ಸನ್ ೧೯೩೭ ರಲ್ಲಿ ದೊರಕಿತು. [೨] ಈ ಪತ್ರಿಕೆಗೆ ಧಾರವಾಡದ ಅಂದಿನ ನ್ಯಾಯಾಧೀಶರಾದ ಜೋನ್ಸ್ ಎಂಬವರೂ ಚಂದಾ ಹಣವನ್ನು ಸಲ್ಲಿಸಿದ್ದರು :

---

೧ ಅದೇ ಪು. ೯೯.

೨ ಸಂಯುಕ್ತ ಕರ್ನಾಟಕ : ೧೯–೮–೧೯೩೭.

" ೧೩–೧೦ ಸೆಪ್ಟೆಂಬರ್ನ ಜೊನ್ಸ ಸಾಹೇಬ ಯಿಸ್ಕ್ವಾಯರ ಜಜ್ಜ್ ವ ಸೆಷನ ಜಜ್ಜ್ ಧಾರವಾಡ ಯಿವರ ಕಡಿಯಿಂದ್ದಾ ಯೀ ಪತ್ರದ ಕ್ರಯಾದ ಬಾಬತು ಸಂನ ೧೮೫೩ ನೆ ಯ್ಸಿವಿ ಜೂನ ತಿಂಗಳದಿಂದ್ದಾ ಸಂನ ೧೮೫೫ ನೆ ಯಿಸವಿ ಮಾಹೆ ಆಗಷ್ಟ ತಿಂಗಳ ಕೊನಿವರಿಗೆ ಅಂದ್ರೆ ಯರಡು ವರ್ಷ ಮೂರು ತಿಂಗಳದ್ದು ಬಂದದ್ದು........ "

ಯಥಾಪ್ರಕಾರ, ಚಂದಾ ಕೊಡದೇ ಇದ್ದವರೂ ಇದ್ದರು. ಇಂಥವರ ಮುಖಭಂಗ ಮಾಡುವ ಸಾಮರ್ಥ್ಯ ತನಗಿದೆಯೆಂದು ಪತ್ರಿಕೆ ಆತ್ಮವಿಶ್ವಾಸದಿಂದ ಸಾರುತ್ತಿದೆ :

" ಬೆಳಗಾಂವಿ ಸುಬುದ್ಧಿಪ್ರಕಾಶ ವರ್ತಮಾನಪತ್ರ ತೆಗೆದುಕೊಂಬುವಂಥಾ ಸರ್ವಜನ........ಳ ಸೂಚಿಸುವದೇನಂದರೆ– ಯೀ ಪತ್ರದ ಕಿಂಮತು ಯಿನ್ನೂ ಯಾ........ದ್ದಾ ಬರತಕ್ಕ ಬಾಕಿ ಯಿದ್ದೀತು ಅವರು ತೀವ್ರದಿಂದ.......ಯೋಚನೆಯನ್ನೂ ಮಾಡಬೇಕೂ ಮತ್ತು.......ತ್ವದಿಂದ್ದಾ........ಡದೊಳು ನಮ್ಮ ಪತ್ರ ತೆಗೆದುಕೋಂಬುವಂಥಾ ಜನರ ಪೈಕಿ ಕೆಲವರಿಂದ ಯಿನ್ನು ಬರತಕ್ಕ ಬಾಕಿ ಯಿರುತ್ತದೆ. ಆ ಪ್ರಯುಕ್ತ ಅವರು ಯೀ ಸೂಚನಾದ ಮ್ಯಾಲಿಂದ ಜ್ಯಾಗ್ರತರಾಗಿ ಬಹು ತೀವ್ರದಿಂದ ರುಪಾಯಿಗಳನು ನಂಮ ಕಡಿಗೆ ಕೂಡಲೇ ಕಳಿಸೋ ಯೋಚನೆ ಮಾಡಬೇಕು. ಯಿದರ ಹೊರ್ತು ಧಾರವಾಡದೊಳು ವಬ್ಬ ಭವ್ಯ ಸಂಭಾವೀತಿ ಗ್ರಹಸ್ಥನ ಕಡಿಂದಾ ಯೀ ಪತ್ರದ ಬಾಬ್ತು ಸುಮಾರು ೨೦–೧೦ ರುಪಾಯಿಗಳು ಯೀಗ ಮೂರು ವರ್ಷದಿಂದ್ದಾ ಬರತಕ್ಕ ಬಾಕಿ ಯಿದ್ದು ಯೀ ವಿಷಯಕ್ಕೆ ಅವನಿಗೆ ಪುಷ್ಕಳಾವರ್ತಿ ಪತ್ರಾನು ಬರೆನು ಕಳ್ಸಿದ್ದು ಯಿನ್ನೂವರಿಗು ರೂಪಾಯಿ ಕಳಿಸಿಕೊಡದೆ ವಿನಾಹಾಕಾರಣ ತಕರಾರು ಮಾಡುತ್ತಾನೆಂದ್ದು ಕೇಳತೇವೆ. ಪರಂತು ಸದರೀ ಗ್ರಹಸ್ಥನ ಕುರಿತು ನಮ್ಮ ಸೂಚನಾ ಹಿಂಗದಲ್ಲಾ. ನೀವು ದಯಮಾಡಿ ಸದರೀ ಪ್ರಕಾರ ತೀವ್ರ ರುಪಾಯಿ ಕಳ್ಸಿಕೊಟ್ಟಲ್ಲಿ ವುತ್ತಮಾ. ಯಿಲ್ಲವೆ ತಕ್ಕ ಆಲೋಚನಾ ಮಾಡಿ ನಿಂಮ ಕಡಿಂದಾ ಸದ್ರಿ ಋಣ ತೆಗೆದುಕೋಬೂದಕ್ಕೆ ಲೇಶಮಾತ್ರ ಆಯಾಸ ಹತ್ತದು. ಯೀಗಲೇ ನಿಂಮ ಹೆಸರು ಪ್ರಸಿದ್ಧ ಮಾಡಿಲ್ಲ. ಯಿಷ್ಟರ ಮ್ಯಾಲಿಂದಾನೆ ನೀವು ತಿಳಕೊಂಡು ರುಪಾಯಿಗಳಂನು ಕಳ್ಸಿಕೊಟ್ಟಲ್ಲಿ ಬಹಾಳ ಯೋಗ್ಯವದೆ. ಯಿಲ್ಲದಿದ್ದರೆ, ನಿಂಮ ಕೀರ್ತಿಯ ವರ್ಣನವನ್ನು ಹ್ಯಾಂಗೆ ಮಾಡತಕ್ಕದ್ದೋ ಹಾಂಗೆ ಯೀ ಮುಂಬಯಿ ಇಲಾಖೆದೊಳಗಿನ ಸರ್ವ ಕಡಿಗು ಪ್ರಕಟವಾಗೂ ಹಾಂಗೆ ಛಾಪಿಸೋಣವರಲ್ಲಿ ಬಂದೀತು." ಈ ಹೆದರಿಕೆಗೆ ಹಣ ಬಂದಿತೋ ಇಲ್ಲವೋ ತಿಳಿಯುವಂತಿಲ್ಲ.

ಅನಂತರ ವರ್ತಮಾನ ಭಾಗದಲ್ಲಿ ಅಯೋಧ್ಯೆಯ ಹಿಂದು ಮುಸಲ್ಮಾನರ ವಿಷಯವಾಗಿ ವಿವರ ಬಂದು ಅದರ ಬಗ್ಗೆ ಹೀಗಿದೆ :

" ....ಮಹ್ಮದಿಯನ್ನ ಜನರು ಗುಂಪು ಗುಂಪಾಗಿ ಜಮಾಯ್ಸಿಥವು........ ರೂಪಾದೀನೆ ಹಿಂದೂ ಜನರೂನು ಮಿಳಿತವಾಗತಾ ನಡೆದಿದ್ದಾರೆ. ಈ ಯುದ್ಧದ ಶೇವಟವು ಹ್ಯಾಂಗೆ ಆಧೀತೆಂಬೊದ್ದು ತಿಳಿಯೊದಿಲ್ಲಾ."

ಇನ್ನೊಂದೆಡೆಗೆ ಮುಂಬಯಿಯಲ್ಲಿ ಆಗತಾನೆ ಹಾಕಿದ ರೈಲು ಮಾರ್ಗದ ಬಗ್ಗೆ ಹೀಗೆ ಬಂದಿದೆ :

" ಯಿ ಮುಂಬಯಿ ಯಿಲಾಖೆದೊಳು ಯಾವ ಖಬ್ಬಿಣಮಾರ್ಗನು ಕಟ್ಟಿಸುತ್ತಾರೊ ಅದು ಯಲ್ಲಿತನಕ ಹೋಧೀತು........ ಯಿದು ಇತ್ತಕಡಿಯ ಜನರಿಗೆ ಠಾವಿಕಿಯಿಲ್ಲ" ಇತ್ಯಾದಿ.[1] ಇಲ್ಲಿನ ಮರಾಠಿ ಪದಪ್ರಯೋಗ ಗಮನಾರ್ಹವಾಗಿದೆ.

---

೧ ಪ್ರಬುದ್ಧ ಕರ್ಣಾಟಕ : ೧೯೪೧– ಪು. ೩೯–೪೭.

ಇದೇ ಕಾಲದಲ್ಲಿಯೇ ಅಂದರೆ ಸನ್ ೧೮೫೫ ರ ಸುಮಾರು 'ಜ್ಞಾನಪ್ರಕಾಶ' (ಗ್ನಾನಪ್ರಕಾಶ) ಎಂಬ ಪತ್ರಿಕೆಯೂ ಹೊರಡುತ್ತಿತ್ತು. ಇದರ ಕೆಲವು ಅವತರಣಿಕೆಗಳು ಸುಬುದ್ಧಿಪ್ರಕಾಶದಲ್ಲಿ ಬಂದುದುಂಟು. ಈ ಪತ್ರಿಕೆಯಲ್ಲಿಯೂ ಹಲವು ಸ್ಥಳೀಯ ವರ್ತಮಾನಗಳು ಬರುತ್ತಿದ್ದವು. ಅಲ್ಲದೆ, ಹಲವು ಸ್ವಂತವಾದ ಟೀಕಾಭಿಪ್ರಾಯಗಳೂ ಬರುತ್ತಿದ್ದವು. ಉದಾಹರಣೆಗೆ, ಈ ಪತ್ರಿಕೆ ಮುಲಕಿ ಖಾತೆಯ ಬಗ್ಗೆ ಹೀಗೆ ಬರೆದಿತ್ತು. ಅಂದಿನ ಗದ್ಯಶೈಲಿಯು ಪಾಕ ಯಾವ ರೀತಿ ಕುದಿಗೊಳ್ಳ ಹತ್ತಿತೆಂಬುದನ್ನು ವಿವರಿಸುವ ದೃಷ್ಟಿಯಿಂದಲೂ, ಈ ಪತ್ರಿಕೆಯ ಬುದ್ಧಿಮತ್ತೆಯ ನಿದರ್ಶನವಾಗಿಯೂ, ಅಂದಿನ ಸಾಮಾಜಿಕ ಸ್ಥಿತಿಯ ದೃಷ್ಟಾಂತವಾಗಿಯೂ ಈ ಕೆಳಗಿನ ಅವತರಣಿಕೆಯನ್ನು ಕೊಡಬಹುದು :

"ನಮ್ಮ ಪತ್ರವೋದುವವರ ಧ್ಯಾನದಲ್ಲಿ ಯಿದ್ದೀತೆ ಅಲ್ಲಾ. ನಾವು ಯರಡಾವರ್ತಿ ಕಲೆಕಟರ ಕಚೇರಿ ವಳಗಿನ ಕಾಮದಾರರ ಸಂಬಳವು ಸರ್ವಕಡಿಗೆ ವಂದೆ ಸಮನಾಗಿ ಯಿರಬೇಕು. ಯಂಬೊ ವಿಷಯಕ್ಕೆ ಬರೆಯಲ್ಪಟ್ಟಿತ್ತು. ಆ ಪ್ರಕರ್ಣದಲ್ಲಿ ಯೀಗಾ ದಕ್ಷಣಪ್ರಾಂತದ ರಿವಿನಿಯು ಕಮಿಶನರ ಯವರ ಕಡೆ ಸರಕಾರದ ಹುಕುಂ ಬಂದದೆ. ಅದರೊಳು ಪ್ರತ್ಯೇಕ ಚಿಟ್ನಿಸರಿಗೆ ಸಂಬಳಾ ೬೦ ರುಪಾಯಿ ಹಾಂಗು ಮಾಹಲಕರರಿಗೆ ೪೦–೫೦–೬೦ ಹಿಂಗೆ ಪ್ರತಿ ವಸೂಲಿಯ ಆಕಾರದ ಅನ್ವಯಾ ಠರಾಯಿಶಿದ್ದಾರೆ.........ಯಿಂಥ ಮ್ಯಾಲೆ ಯಿ ಘಾಲಮೇಲಿನೊಳು ದಕ್ಷಣಪ್ರಾಂತದ ಕಲೆಕಟರವರ ಆಖ್ತಿರಿಯಾರಿ ವಳಗೆ ಕೆಲಸ ಕೊಡೋದಕ್ಕೆ ಅಧಿಕಾರ ವುಳಿಯೊದಿಲ್ಲಾ........"

ಅನಂತರ ಪ್ರಕಟವಾದ ಪತ್ರಿಕೆ ಬೆಳಗಾವಿಯಿಂದಲೇ ಹೊರಡುತ್ತಿದ್ದ 'ಕರ್ನಾಟಕ ಜ್ಞಾನ ಮಂಜರೀ'. ಈ ಪತ್ರಿಕೆಯ ಸನ್ ೧೮೭೫ ರ ಮಾರ್ಚ ತಿಂಗಳದ ಸಂಚಿಕೆ ಉಪಲಬ್ಧವಾಯಿತು. ಅದರಲ್ಲಿ ಬರುವ ಅನುಕ್ರಮಣಿಕೆಯ ಮೇಲಿಂದ ಈ ಪತ್ರಿಕೆಯ ವೈವಿಧ್ಯವನ್ನು ಗಮನಿಸಬಹುದಾಗಿದೆ. ಇದರಲ್ಲಿ ಕಾದಂಬರಿ, ನಿದ್ರೆಯು, ಮಾಲವಿಕಾಗ್ನಿಮಿತ್ರ ನಾಟಕವು, ಅಮಲೇರುವ ಪದಾರ್ಥಗಳು, ಪ್ರಸಿದ್ಧ ಸ್ಥಳಗಳ ವರ್ಣನೆ, ಮಹಾಪುರುಷರ ಚರಿತ್ರೆ– ಎಂಬ ವಿಷಯಗಳು ಅಡಕವಾಗಿವೆ. ಇದನ್ನು ಭಿಕಾಜಿ ಹರಿ ಸಾಮಂತ ಅವರು ಮಾಲಕರ ದೆಸೆಯಿಂದ ಬೆಳಗಾಂವ ಸಮಾಚಾರ ಛಾಪಖಾನೆಯಲ್ಲಿ ಛಾಪಿಸಿ ಪ್ರಸಿದ್ಧಿಸುತ್ತಿದ್ದರು. ಈ ಪತ್ರಿಕೆಯ ಧ್ಯೇಯ ಶ್ಲೋಕ ಹೀಗಿದ್ದಿತು :

ಮಾತೇವ ರಕ್ಷತಿ ಪಿತೇವ ಹಿತೇ........
ಭಾರ್ಯೇವ ಚ ಅಭಿರಮಯತ್ಯಪನೀಯ ಖೇದಂ
ಲಕ್ಷ್ಮೀಂ ತನೋತಿ ವಿತನೋತಿ ಚ ದಿಕ್ಷು ಕೀರ್ತಿಂ
ಕಿಂ ಕಿಂ ನ ಕಲ್ಪಯತಿ ಕಲ್ಪಲತೇವ ವಿದ್ಯಾ ॥

'ಸತ್ಯವೃತ್ತ' ಎಂಬ ಪತ್ರಿಕೆ ಗದಗಿನಿಂದ ಹೊರಡುತ್ತಿತ್ತು. ಇದು ಜೂನ್ ೧೮೮೯ ರಲ್ಲಿ ಪ್ರಾರಂಭವಾದಂತೆ ಕಾಣುತ್ತದೆ. ಇದರ ಸಂಪಾದಕರು ಶ್ರೀನಿವಾಸ ಭೀಮಾಜಿ........ ನಮಗೆ ದೊರೆತ ೩ ನೆಯ ಸಪ್ಟಂಬರ ೧೮೯೨ ರ ಸಂಚಿಕೆಯಲ್ಲಿ– ಭಾರತ ಪಂಚಾಂಗ, ಮನುಷ್ಯರನ್ನು ಕುರಿತು ಎಂಬ ಲೇಖ, ಸಂಗರದ ವೃತ್ತಾಂತ, ಮತ್ತು ಸ್ವಾರಕರ್ತರ ಅಜ್ಞಾನಾಂಧಕಾರ ಪ್ರಭೇದ– ಎಂಬ ವಿಷಯಗಳಿವೆ. ಈ ಪತ್ರಿಕೆ ಪ್ರತಿ ಶನಿವಾರ ಪ್ರಕಟವಾಗುತ್ತಿತ್ತು.

'ಹವ್ಯಕ ಸುಬೋಧ' ಎನ್ನುವ ಪತ್ರಿಕೆ ಮುಂಬಯಿಯಿಂದ ಹೊರಡುತ್ತಿತ್ತು. ಇದರ ಸಂಪಾದಕರು ಕರ್ಕಿಯ ಸೂರಿ ವೆಂಕಟರಮಣ ಶಾಸ್ತ್ರಿಗಳು. ಇದು ಅವರೇ ಮುಂಬಯಿಯಲ್ಲಿ ಸ್ಥಾಪಿಸಿದ

'ಭಾರತೀ ಪ್ರೆಸ್' ಠಾಕುರ ದ್ವಾರದಲ್ಲಿ ಮುದ್ರಿತವಾಗುತ್ತಿತ್ತು. ವೆಂಕಟರಮಣಶಾಸ್ತ್ರಿಗಳ ಬಗೆಗೆ ಅನ್ಯತ್ರ ವಿವರಿಸಲಾಗಿದೆ. 'ಹವ್ಯಕ ಸುಬೋಧ' ದ ಪಡಿಯಚ್ಚನ್ನೂ ಅನ್ಯತ್ರ ಕೊಡಲಾಗಿದೆ.

ಅನಂತರ ಸುಮಾರು ೧೯೨೦ ರ ವರೆಗೆ ಹೊರಟ ಉತ್ತರ ಕರ್ನಾಟಕದ ಪತ್ರಿಕೆಗಳಲ್ಲಿ ಈ ಕೆಳಗಿನವುಗಳನ್ನು ಉಲ್ಲೇಖಿಸಬಹುದು.

ಮಠಪತ್ರಿಕೆ (ಸು. ೧೮೬೫) (ಶಾಲಾಪತ್ರಕ ಎಂಬ ಹೆಸರೂ ಇದಕ್ಕೆ ಇದೆ); ಕರ್ನಾಟಕ ಪತ್ರ (ಹೊನ್ನಾಪುರಮಠ); ಲೋಕಶಿಕ್ಷಣ (ವೆಂಕಟ ರಂಗೋ ಕಟ್ಟಿ– ಸು. ೧೮೮೮); ಲೋಕಬಂಧು (ಗುರುರಾವ ಮಮದಾಪುರ– ೧೮೮೯); ಕರ್ನಾಟಕ ವೃತ್ತ (ಚ. ಫಕೀರಪ್ಪ ೧೮೯೧); ಕರ್ನಾಟಕ ವೈಭವ (ಜೆ. ಎಂ. ದೇಶಪಾಂಡೆ ೧೮೯೨); ಧನಂಜಯ (ಕೃಷ್ಣರಾವ ಮುದವೀಡು); ಕರ್ನಾಟಕ ಭಾಷಾ ಸೇವಕ (ವಿಜಾಪುರ ೧೮೯೪); ವಾಗ್ಭೂಷಣ (ವಿದ್ಯಾವರ್ಧಕ ಸಂಘ ೧೮೯೬); ಚಂದ್ರಿಕಾ (ಬಾಗಿಲುಕೋಟೆ ಕೆರೂರ ರಾಘವಭಟ್ಟ ೧೮೯೬); ಶ್ರೀ ಸರಸ್ವತಿ (ಗದಗ ೧೯೦೧); ವಿನೋದಿನಿ (ನಾರಾಯಣ ಶಾಸ್ತ್ರಿ– ಕಾರವಾರ ೧೯೦೩); ಶ್ರೀ ಜಿನವಿಜಯ (ಯಶವಂತರಾವ ಅಂಕಲೆ ಬೆಳಗಾವಿ ೧೯೦೩); ವಾಗ್ದೇವಿ (ಹೊನ್ನಾಪುರಮಠ ೧೯೦೭); ಹಿಂದುಸ್ತಾನ ಸಮಾಚಾರ (೧೯೦೮); ನೀಲಕಂಠ ವಿಜಯ (ವಿ. ಡಿ. ಆರುಬೆರಳಿನ, ಹಿರೇಬಾಗೇವಾಡಿ); ಒಕ್ಕಲಿಗರೂ ಒಕ್ಕಲುತನವೂ (ಮಲ್ಹಾರ ಲಿಂಗೋ ಕುಲಕರ್ಣಿ ೧೯೧೧); ಕ್ಷೇಮಸಮಾಚಾರ (ಕಾವ್ಯಾನಂದ ೧೯೧೨); ಶುಭೋದಯ, ಸಚಿತ್ರ ಭಾರತ (ವಾಸುದೇವಾಚಾರ್ಯ ಕೆರೂರ); ನವೀನ ಭಾರತ (ಯಲಗುರ್ದರಾವ್ ಧಾರವಾಡಕರ) ಇತ್ಯಾದಿ.[೧]

ಆಡಳಿತದ ಗದ್ಯ ಶೈಲಿ :

ಶೈಕ್ಷಣಿಕ ಆಡಳಿತ ಪ್ರಾರಂಭವಾದದ್ದರ ಮೂಲಕ ಪರಿಪತ್ರಗಳೂ, ಆಜ್ಞೆಗಳೂ ಕನ್ನಡದಲ್ಲಿಯೇ ಹೊರಡಬೇಕಾಯಿತು. ಕಾವ್ಯದ ಕನ್ನಡವನ್ನು ಈ ಆಡಳಿತದ ಕನ್ನಡಕ್ಕೆ ಮಣಿಸಿಕೊಳ್ಳಬೇಕಾಯಿತು. ಇಂಥ ಅನೇಕ ಪರಿಪತ್ರಗಳು ಮಠಪತ್ರಿಕೆಯಲ್ಲಿ ಪ್ರಕಟವಾಗಿವೆ. ಅಂದಿನ ಸಾಮಾಜಿಕ ಪರಿಸ್ಥಿತಿಯ ದೃಷ್ಟಿಯಿಂದಲೂ, ಹೊಸದಾಗಿ ರೂಪುಗೊಳ್ಳುತ್ತಿದ್ದ ಈ ಗದ್ಯ ಶೈಲಿಯ ನಿದರ್ಶನವಾಗಿಯೂ ಒಂದೆರಡು ಅವತರಣಿಕೆಗಳನ್ನು ಕೊಡಬಹುದು. ಇದು ಏಪ್ರಿಲ್ ೧೮೬೬ ರ ಪರಿಪತ್ರ :

"ಧಾರವಾಡ ಜಿಲ್ಹೆಯೊಳಗಿನ ಯಾವತ್ತು ಸರಕಾರಿ ಸಾಲೆಯ ಮಾಸ್ತರರಿಗೆ

ಹೆಡಮಾಸ್ತರರಿಗೆ ಹಕ್ಕಿನ ರಜೆ ಒಂದ ತಿಂಗಳಕ್ಕಿಂತ ಹೆಚ್ಚಿಗೆ ಕೊಟ್ಟರೆ ಸಾಲೆಯ ಬಹೀತೆಯಾಗಿ ಊರವರು ಖುಷಿ ಇರುವದಿಲ್ಲಾ ಅದರಿಂದ ಒಂದು ತಿಂಗಳಕ್ಕಿಂತಲೂ ಹೆಚ್ಚಿಗೆ ರಜೆ ಕೊಡಬಾರದೆಂಬ ದಾಗಿ ಮೆಹರಬಾನ ಇಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬಬಹಾದ್ದೂರ ದಕ್ಷಿಣಭಾಗ ಇವರು ಠರಾವು ಮಾಡಿರುತ್ತಾರೆ."

ಇದು ನವೆಂಬರ ೧೮೬೬ ರ ವರ್ತಮಾನ :


"ಕಳದ ತಿಂಗಳ ಅಂಕೆಯಲ್ಲಿ ಸೂಚಿಸಿದ ಹಾಗೆ ಮೆಹರ್ಬಾನ ಡಾಯರೆಕ್ಟರ ದೊರೆಗಳವರು ಈ ಪ್ರಾಂತದಲ್ಲಿ ಬಂದಿದ್ದಾರೆ. ಈಗ ಅವರು ಗೋಕಾವಿಯ ಕಡಿಗೆ ಹೋಗಿದ್ದಾರೆ. ಬರುವ ತಿಂಗಳಿನ

೧ ಕರ್ನಾಟಕದಲ್ಲಿ ವೃತ್ತಪತ್ರಿಕೆಗಳು– ರಾ. ಯ. ಧಾರವಾಡಕರ– ಪು. ೧–೫.




ತ್ಯವೃತ್ತ.

'ಸತ್ಯವೃತ್ತ'



'ಕರ್ನಾಟಕ ಜ್ಞಾನಮಂಜರಿ'




HITOPADESHA

BOMBAY

1889

'ಹಿತೋಪದೇಶ'




The Illustrated Canarese Journal


FOR THE BOMBAY CANARESE VERNACULAR SOCIETY

THE DUKE OF WELLINGTON

'ವಿಚಿತ್ರ ವರ್ತಮಾನ ಸಂಗ್ರಹ'




ಡೆಪ್ಯುಟಿ ಚೆನಬಸಪ್ಪನವರು



ಡೆಪ್ಯುಟಿ ಚೆನಬಸಪ್ಪನವರ ರುಜು





೩ ನೇ ತಾರೀಖಿನ ಸುಮಾರಕ್ಕೆ ಬೆಳಗಾವಿಗೆ ಬರುವರು. ಅವರ ಸಂಗಡ ಜರ್ಮನೀ ದೇಶದವರಾದ ಡಾಕ್ಟರ ಬ್ಯೂಲರ್‌ಯೆಂಬ ಸಂಸ್ಕೃತ ಭಾಷೆಯಲ್ಲಿ ಧುರೀಣರಾದ ವಿದ್ವಾಂಸರು ಬಂದಿರುತ್ತಾರಂತೆ. ಇವರು ಅಸ್ಖಲಿತವಾಗಿ ಸಂಸ್ಕೃತವಾಣಿಯನ್ನು ಮಾತಾಡುತ್ತಾರೆಂದು ಕೇಳುತ್ತೇವೆ. ಪರದೇಶಸ್ಥರು ನಮ್ಮ ದೇಶದ ವಿದ್ಯವನ್ನು ಇಷ್ಟು ಮನಮುಟ್ಟಿ ಅಭ್ಯಾಸ ಮಾಡುತ್ತಿರಲಾಗಿ, ನಮ್ಮ ಸ್ವಂತ ದೇಶದಲ್ಲಿ ಸಂಸ್ಕೃತ ವಿದ್ಯವು ದಿನೇ ದಿನೇ ಕುಂದುತ್ತ ಹೋಗುತ್ತದೆಂಬುದು ನಮಗೆ ಲಜ್ಜಾಸ್ಪದವಲ್ಲವೋ ? ಅಸ್ತು, ಈ ವಿದ್ವಾಂಸರು ಈ ದಕ್ಷಿಣ ಮಹಾರಾಷ್ಟ್ರ ದೇಶವನ್ನು ನೋಡುವ ಉದ್ದೇಶವಾಗಿಯೂ, ಈ ಪ್ರಾಂತದಲ್ಲಿ ಬೆಲೆಯುಳ್ಳ ಸಂಸ್ಕೃತ ಗ್ರಂಥಗಳನ್ನು ಗೊತ್ತು ಹಚ್ಚಿ ಸಂಪಾದಿಸುವದಕ್ಕೋಸ್ಕರವಾಗಿ ಬಂದಿರುತ್ತಾರೆ........ "

ಆಡಳಿತದ ಕನ್ನಡ, ಕಾವ್ಯದ ಜಡತ್ವವನ್ನೂ, ಅತಿಶಯೋಕ್ತಿಯನ್ನೂ, ವಾಗಾಡಂಬರವನ್ನೂ ಬಿಡಬೇಕಾಯಿತು. ತಮ್ಮ ಪತ್ರವೊಂದನ್ನು ಮಠಪತ್ರಿಕೆಯಲ್ಲಿ ಪ್ರಸಿದ್ಧಿಸಬೇಕೆಂದು ಮಾಡಿಕೊಂಡ ವಿನಂತಿಯ ಮಾದರಿಯೊಂದು ಹೀಗಿದೆ :

" ಮಠಪತ್ರಕ ಕರ್ತರುಗಳ ಸಂನಿಧಾನಕ್ಕೆ–

ವಿನಂತಿ ವಿಶೇಷ ಕಿಂಕರನು ಶಂಕೆಯಿಂದ ಅಂಕಿತನಾಗಿ, ಈ ಕೆಳಗೆ ಬರೆದ ಲೆಖ್ಖವನ್ನು, ಕಂಕಣ ಕರಗಳಿಂದ ಉದ್ಭವಿಸುವ, ಮುಂದಿನ ಅಂಕೆಯ ಒಂದು ಮೂಲೆಗೆ, ಅಂಕಣ ದೊರೆದು ಬಡವನ ಮನೋಭಿಲಾಷೆಯನ್ನು, ಕೊನೆಗಾಣಿಸುವಿರೆಂಬುದಾಗಿ ಮಹತ್ವಾಶೆಯನ್ನು ತಾಳಿದ್ದೇನೆ. "

(ಮಠಪತ್ರಿಕೆ; ೧೦ ಮಾರ್ಚ ೧೮೭೪.)

ಹೀಗಾಗಿ, ಕನ್ನಡದ ಶುದ್ಧ ಬರವಣಗೆ ಯಾವುದು ? ಬರೆಯುವ ರೀತಿ ಹೇಗಿರಬೇಕು ? ಎಂಬ ಬಗ್ಗೆಯೂ ಜೂನ್ ೧೮೪೯ ರಲ್ಲಿ ಡೆಪ್ಯುಟಿ ಚೆನಬಸಪ್ಪನವರು ಒಂದು ಪರಿಪತ್ರವನ್ನು ಹೊರ ಡಿಸಿದರು. ಕನ್ನಡದ ಕೈಬರಹ ಸ್ಫುಟವಾಗಿರಬೇಕು, ವ್ಯಾಕರಣ ಪದ್ಧತಿಯನ್ನು ಅನುಸರಿಸಿರಬೇಕು. ಎಲ್ಲಕ್ಕೂ ಹೆಚ್ಚು ಕಾಗುಣಿತ ಶುದ್ಧವಾಗಿರಬೇಕು– ಎಂಬುದರ ಕಡೆಗೆ ಆಡಳಿತ ಭಾಷೆ ಗಮನ ವನ್ನಿತ್ತಿತು.

" ನೋಟಿಸು

ಧಾರವಾಡ ಜಿಲ್ಲೆದೊಳಗಿನ ಯಾವತ್ತು ಸ್ಕೂಲ ಮಾಸ್ತರರು ಮತ್ತು ಅಸಿಸ್ಟಂಟ ಮಾಸ್ತರರು ಈ ಕೆಳಗೆ ಬರೆದಿರುವದಂನೆಲ್ಲಾ ಮನಸುಗೊಟ್ಟು ಓದಿ ನೋಡಿ ತಾವು ಇತ್ತ ಕಡಿಗೆ ಕಳುಹಿಸುವ ಕಾಗದ ಪತ್ರಗಳಂನು ಎಚ್ಚರದಿಂದ ಬರದು ಕಳುಹಿಸುತ್ತ ಹೋಗಬೇಕು.

೧. ಓದಲಿಕ್ಕೆ ಬರುವ ಹಾಗೆ ಅಕ್ಷರಗಳಂನು ಸ್ಪಷ್ಟವಾಗಿ ಬರಿಯಬೇಕು.

೨. ಅಶುದ್ಧ ಬರಿಯಬಾರದು.

೩. ತಂಮ ಕೈಲಾದಮಟ್ಟಿಗೆ ಶ್ರಮಬಟ್ಟು ಛಾಪಿಸಿದ ಅಕ್ಷರಗಳಂತೆ ಅಕ್ಷರಗಳಂನು ಬರಿಯ ಲಿಕ್ಕೆ ಕಲಿಯಬೇಕು. ಕಚೇರಿ ತರದ ಅಕ್ಷರಗಳನು ಅಗದಿ ಬರಿಯಬಾರದು.

೪. ಬರದದ್ದೆಲ್ಲಾ ವ್ಯಾಕರಣದ ನೇಮಕ್ಕೆ ತಪ್ಪದ ಹಾಗೆ ಬರಿಯುವದಕ್ಕೆ ಕಲಿಯಬೇಕು.

ನಮ್ಮ ಕಡಿಗೆ ಕೆಲವು ಕನ್ನಡ ಕಾಗದಗಳು ಬಂದಿದ್ದಾವೆ. ಅವುಗಳನ್ನು ಓದಿ ನೋಡಲಾಗಿ ಅವುಗಳಲ್ಲಿ ಕೆಲವು ತಪ್ಪುಗಳು ನಂಮ ದೃಷ್ಟಿಗೆ ಬಿದ್ದಿಧಾವೆ. ಆ ತಪ್ಪುಗಳಲ್ಲಿ ಕೆಲವಂನು ನಾವು ಕೆಳಗೆ ಬರೆದಿದ್ದೇವೆ :

ಅಶುದ್ಧ	**ಶುದ್ಧ**
ರಾಜಪೂಜೀತ	ರಾಜಪೂಜಿತ
ತಾಲ್ಕು	ತಾಲೂಕು
ಕ್ಸಬಾ	ಕಸಬಾ
ಕೆಲ್ಸ	ಕೆಲಸ
ತ್ತಾಲ್ಕು	ತಾಲೂಕು
ಯನಂದ್ರೆ	ಯೇನಂದರೆ
ಯ್ಸಿವಿಗೆ	ಇಸವಿಗೆ
ಇರುತ್ತೆನೆ	ಇರುತ್ತೇನೆ
ಇತನ	ಈತನ
ತ್ತಾರಿಖ	ತಾರೀಖು
ಅಂತ್ತಾ	ಅಂತಾ
ಬೇಕ್ಕು	ಬೇಕು
ಹೊಗು	ಹೋಗು
ನಿತು	ನಿಂತು

ಡಿ. ಎ. ಇ. ಧಾರವಾಡ [೧]

ಬಂದಿದ್ಧಾವೆ, ಬಿದ್ದಿದ್ದಾವೆ, ಬರಿದಿದ್ಧೇದೆ, ಬರಿ (ಬರೆ)– ಇವುಗಳ ಅಶುದ್ಧ ರೂಪಗಳ ವಿಷಯವೇನೇ ಇರಲಿ, ಈಗಿನ ಕಾಲಕ್ಕೆ ಭಾಷಾಶುದ್ಧಿಯ ಕಡೆಗೆ ಗಮನ ಹರಿಯತೊಡಗಿತೆಂಬುದೂ ಮನನೀಯ. ಆಡಳಿತ ಭಾಷೆಗೆ ಒಂದು ತರಹದ ಬಿಗುವನ್ನೂ, ಬೆಡಗನ್ನೂ, ಶುದ್ಧಿಯನ್ನೂ ತರುವುದರಲ್ಲಿ ಸರಕಾರದ ಭಾಷಾಂತರಕಾರರಾದ ಪಂಡಿತ ವೆಂಕಟ ರಂಗೋ ಕಟ್ಟಿಯವರ ಸೇವೆ ಅಮೋಘವಾದುದು.

ಹೊಸಗನ್ನಡ ಗದ್ಯಶೈಲಿಯ ವಿಕಾಸ :

ಪದ್ಯ ಪಾಕಗೊಂಡಂತೆ, ಗದ್ಯ ತೀವ್ರ ಪಾಕಗೊಳ್ಳಲಿಲ್ಲ :

ಕನ್ನಡದಲ್ಲಿ ಪದ್ಯಕ್ಕೊಂದು ಪ್ರಾಚೀನ ಪರಂಪರೆಯಿತ್ತು. ಗದ್ಯ ಅಷ್ಟು ವಿಪುಲವಾಗಿ ಪ್ರಯುಕ್ತವಾಗಿರಲಿಲ್ಲವೆಂದು ಈ ಮೊದಲೇ ಹೇಳಿತಷ್ಟೇ. ಪದ್ಯ ತನ್ನದೇ ಆದ ಒಂದು ಆಕಾರವನ್ನು ಪಡೆದಿತ್ತು. ಗದ್ಯ ಈ ಆಕಾರವನ್ನು ಹುಡುಕಬೇಕಾಗಿತ್ತು. ಗದ್ಯಕ್ಕೆ ಇಂದಿನ ರೂಪ ಬರಲು ಎಷ್ಟೋ ವೇಳೆ ಹಿಡಿಯಿತು. [೨] ಭಾವದ ಅಭಿವ್ಯಕ್ತಿಗಾಗಿ, ಯುಕ್ತ ಶಬ್ದ ಸಂಯೋಜನೆಗಾಗಿ ಗದ್ಯ ತಡಕಾಡ

---

೧ ಶಾಲಾಪತ್ರಿಕೆ. ೧೮೬೯– ಪು. ೯೩–೯೪.

೨ ಈ ಬಗ್ಗೆ ಡಾ. ದ. ರಾ. ಬೇಂದ್ರೆಯವರು ಹೀಗೆ ಹೇಳುತ್ತಾರೆ :

"ಇಂದಿನ ಗದ್ಯಶೈಲಿಯು ಕೇವಲ ಇಂದಿನದೆಂದೇ ಹೇಳಬಹುದು. ವೊಡ್ಡಾರಾಧನ ಅಥವಾ ಪಂಚತಂತ್ರದೊಳಗಿನ ಕಥೆ ಹೇಳುವ ಶೈಲಿಯು ಅಲ್ಲಲ್ಲಿ ಮಾತಿನ ರೀತಿಗೆ ಸಹಹೋಗುವದುಂಟು. ಚಂಪೂ ಕಾವ್ಯಗಳಲ್ಲಿ 'ವಚನ' ಎಂದು ಹೇಳಿಸಿಕೊಳ್ಳುವ ಶೈಲಿಯು ಕೇವಲ ಕೃತ್ರಿಮವಾಗಿದ್ದು, ಗ್ರಂಥಸ್ಥವಾಗಲಿಕ್ಕೇ ಅದು ಯೋಗ್ಯವೆನ್ನಬಹುದು. ಹರ್ಷಚರಿತ ಕಾದಂಬರಿಗಿಂತಲೂ ನಾವೇನು ಕಡಿಮೆಯವರಲ್ಲ ಎಂಬ ಸ್ಪರ್ಧೆಯೊಳಗೆ ಹುಟ್ಟಿದ ಶೈಲಿಯದು. ಶಿಲಾಶಾಸನದೊಳಗಿನ ಗದ್ಯವು ಇವೆರಡರ ಮರಿ ಆಗದೆ ಇದ್ದಲ್ಲಿ, ಕೇವಲ ರುಕ್ಷವಾಗಿರುವದಾಗಿ ಕಂಡುಬರುವದು. ವೀರಶೈವರ 'ವಚನ'ಗಳ ರೀತಿಯಲ್ಲಿ ಇಂದಿನ ಕಲಾಪೂರ್ಣ ಗದ್ಯದ ಕೆಲವು ಲಕ್ಷಣಗಳಿವೆ... ಅಂದಿನ ಧಾರ್ಮಿಕ ವಾತಾವರಣವನ್ನು ಬಿಟ್ಟು ಸಾಮಾಜಿಕ ವಿವಿಧ ಲೌಕಿಕ ವಿಷಯಗಳಿಗೆ ಅಂದಿನ ಕವಿಗಳು ಗಮನಕೊಟ್ಟಿದ್ದರೆ ಇಂದಿನ ಶೈಲಿಯನ್ನು ಅವರು ಸರಿಗಟ್ಟಬಹುದಾಗಿತ್ತು."

–ಸಾಹಿತ್ಯ ಸಂಶೋಧನೆ– ಪು. ೧೨೪.

ಬೇಕಾಯಿತು. ಹೊಸ ಹೊಸ ವಿಷಯಗಳ ವಿವರಣೆಗಾಗಿ ಗದ್ಯವನ್ನು ಬಳಸಿಕೊಳ್ಳಬೇಕಾಯಿತು. ಅಂತಲೇ, ಗದ್ಯದ ಈ ಗತಿಯಲ್ಲಿ ಅನೇಕ ಏರುಪೇರುಗಳನ್ನು ಕಾಣುತ್ತೇವೆ. ಕನ್ನಡ ಪತ್ರಿಕಾ ಸಾಹಿತ್ಯದ ಗದ್ಯಶೈಲಿಯ ನಿದರ್ಶನಗಳನ್ನು ಈಗಾಗಲೇ ಕೊಡಲಾಗಿದೆ. ಕನ್ನಡ ಗದ್ಯದ ಈ ವೈವಿಧ್ಯ ಮತ್ತು ಉತ್ಕ್ರಾಂತಿಗಳನ್ನು ನಾವು ಈ ಕೆಳಗಿನ ನಿದರ್ಶನಗಳಲ್ಲಿ ಕಾಣಬಹುದು :

ಇದು ಸನ್ ೧೮೫೫ ರ 'ಸುಬುದ್ಧಿ ಪ್ರಕಾಶ'ದ ಶೈಲಿ :

"ಬಂಗಾಲದೊಳಗೆ ನಡದ ಸಾಂಥಲ ಜನರ ಬಂಡು ಯಿಂನು ಪರಿಯಂತ್ರಕ್ಕೆ ಹಾಂಗೆ ನಡದದೆ. ಮತ್ತು ಯೀ ಬಂಡು ವುತ್ಪಂನವಾದ ಯಾವ ಕಾರಣವಂನು ಮೊದಲು ಛಾಪಸೋಣದರಲ್ಲಿ ಬಂದಿತ್ತೊ ಅದು ಮೃಷಾ ಅದೆ ಹಿಂಗೆ ತಿಳಿಬರುತ್ತದೆ. ಕಾರಣವೇನಂದ್ರೆ ಸದರಿ ಬಂಡಿನ ವಿಷಯಕ್ಕೆ ಹಿಂಗೆ ಅಂತಾರಲಾ ಸದರಿ ಬಂಡಖೋರರ ಮುಖ್ಯ ಸರದಾರ ಸಿದ್ದುಮಾಣಜಿ ಇವನಿಗೆ ಒಂದು ಸ್ವಪ್ನ ಬಿದ್ದಿತ್ತು. ಅದು ಯೇನಂದ್ರೆ ಕೆಲವು ಮನುಷ್ಯರು ಆಕಾಶದ ಮ್ಯಾಲಿಂದ ಕೆಳಗೆ ಯಿಳಿದು ಬಂದ್ರು ಮತ್ತು ಅವರು ಈ ಸಿದ್ದು ಮಾಣಜೀಗೆ ಜಾಗ್ರತವಾದ್ದರಿಂದ ಅವನು ವಳ್ಳೇ ವೀರಾವೇಶದಿಂದಾ ಯುದ್ಧು ಈ ಅನರ್ಥಕಾರಕ ಬಂಡು ನಡಶಿದಾ." ೧

ಇನ್ನೊಂದು ಅಲ್ಲಿಯದೇ ಉದಾಹರಣೆ: ಸನ್ ೧೮೫೫ :

"ಹೊಪಲಂಡ ಯಂಬೊ ವಬ್ಬ ವಿದ್ವಾಂಸ ಪುರುಷನು ಹಿಂಗೆ ಬರೆದಿದ್ಧಾನಲ್ಲಾ. ಬಾಹಳ ದಿವಸ ಬದಕೊ ಮನುಷ್ಯರು ಬಾಹಳಮಾಡಿ ಹೊಲಾ ಮಾಡುವವರು, ಹಾಂಗು ಶಿಕಾರಿ ತಿರಗುವವರು ಮತ್ತು ಖಲಾಶಿ ಅಂದ್ರೆ ರೋಜ ನಡಸುವಂಥವರು.....ಜನರುಗಳೆ ಯಿದ್ದಾರೆ.....ಹೆನರಿ ಜಾನಕಿಂ..... ಯೇಂಬೊ ಮನುಷ್ಯನು ೧೬೯ ವರ್ಷದ ಪರಿಯಂತ್ರವಾಗಿ ಬದುಕಿದ್ದ........ಜ್ಯಾರಂಟಂನ ಯಂಬೊ ಮನುಷ್ಯನು ೧೮೫ ವರ್ಷದವನಾಗಿ ಮೃತನಾದಾ. ಅವನು ಇಸವಿ ಸಂನ ೧೫೦೧ ನೆ ವರ್ಷದಲ್ಲಿ ಹುಟ್ಟಿ ಸಂನ ೧೬೭೦ ನೆ ಯಿಸವಿ ಜನವರಿ ತಿಂಗಳ ೫ ನೆ ತಾರೀಖಿಗೆ ಮರಣ ಹೊಂದಿದಾ. ಅವನು ಸಾಯೊದರ ಪೂರ್ವದಲ್ಲಿ ಸ್ವಲ್ಪ ದಿವಸದ ಕೆಳಗೇನೆ ಕೈ ವಳಗೆ ಕೊಲ ಹಿಡಕೊಂಡು ತಿರಕೊಂಬೋದಕ್ಕೆ ಹೋಗಿದ್ದ. ಅವನ ಕಂಣು ಬಾತಿದ್ದವು ಪರಂತು ಸ್ವಲ್ಪ ಸ್ವಲ್ಪ ಕಾಣಸತಿದ್ದವು."

ಇದು ಅಕ್ಟೋಬರ ೧೮೬೭ ರ ಮತಪತ್ರಿಕೆಯಲ್ಲಿಯ ಒಂದು ನಿಬಂಧ :

"ಮಹಾರಾಷ್ಟ್ರ ದೇಶದವರಿಗೂ, ದಕ್ಷಿಣ ಮಹಾರಾಷ್ಟ್ರ ದೇಶದವರಿಗೂ, ಉದ್ಯೋಗ ದಲ್ಲಿಯೂ, ವಿದ್ಯೆಯಲ್ಲಿಯೂ ಇರುವ ಹೆಚ್ಚು ಕಡಿಮೆಗಳು.

ಮೊದಲು ಇವೆರಡೂ ಪ್ರಾಂತಗಳ ಸ್ವಾಭಾವಿಕ ಗುಣಗಳನ್ನು ಕುರಿತು ವಿಚಾರಿಸಿ ನೋಡಿದರೆ, ಈ ದಕ್ಷಿಣ ಮಹಾರಾಷ್ಟ್ರ ದೇಶದ ಭೂಮಿಯೂ, ವಿಶೇಷ ಫಲವುಳ್ಳದ್ದಾಗಿ ಕಾಣುತ್ತದೆ. ಈ ಪ್ರಾಂತದಲ್ಲಿರುವ ಭಂಗಾರ ಬಿತ್ತಿ ಬೆಳೆದುಕೊಳ್ಳಬಹುದಾದ ಕರಿಭೂಮಿಗೆ ಸರಿಯಾದ ಭೂಮಿಯು ಮಹಾರಾಷ್ಟ್ರ ದೇಶದಲ್ಲಿ ಯೆಲ್ಲಿಯೂ ಇಲ್ಲ."

ಇದು ಜನೆವರಿ ೧೮೬೭ ರ ಮತಪತ್ರಿಕೆಯಲ್ಲಿಯ ಒಂದು ನಿಬಂಧ :

"ವೇಶ್ಯೆಯರು–

ಇಲ್ಲಿ ಕೆಲವರು ವೇಶ್ಯೆಯರೆಂಬುವರನ್ನು ದೇವರ್ಶ್ಯಾತಕ್ಕೆ ನಿರ್ಮಿಸಿದನು ಯಲ್ಲರು ಅವರನ್ನು

---

೧ ಜಯಕರ್ನಾಟಕ : ೧೯೩೭– ಪು. ೨೪೭.

ತಿರಸ್ಕಾರಿಸಿಕಿದರೆ ಅವರ ಜೀವನ ಹ್ಯಾಗಾಗುವದುಯೆಂದು ಶಂಕಿಸುತ್ತಾರೆ. ಈ ಶಂಕೆಯು ಯಲ್ಲರಿಗೂ ಹಾಸ್ಯವನುವುಂಟು ಮಾಡುತ್ತದೆ. ಯಾತಕ್ಕೆಂದರೆ ದೇವರಿಂದ ಶ್ರಿಷ್ಟ ಸಲ್ಪಟ್ಟವುಗಳೆಲ್ಲ ನಾವೆ ಪ್ರಯತ್ನ ಪೂರ್ವಕವಾಗಿ ಪ್ರಯೋಜನವನ್ನು ಕಲ್ಪಿಸುವದಾದರೆ ಹುಲಿ, ಹಾವು ಚೇಳು ಮುಂತಾದ ಕ್ರೂರ ಜಂತು ಗಳಿಗೆ ನಾವು ಪೆವರುವದು; ಅವುಗಳ ನಾಶದಲ್ಲಿ ಪ್ರಯತ್ನವನ್ನು ಪಡಿಯುವದು ಸಹ ಅವಿವೇಕ ಕಾರ್ಯವೆಂದು ಹೇಳಬೇಕಲ್ಲವೆ?........ ಮತ್ತೆ ಕೆಲವರು ಗಂಡುಳ್ಳ ಹೆಂಗಳಂನು ಸೇರಿದರೆ ಕೆಟ್ಟದೆ ಹೊರತು ಬೆಲಿಗೆ ಸಿಕ್ಕತಕ್ಕ ಸೂಳೆಯರಂನು ಕೂಡುವದರಿಂದ ಅಷ್ಟು ಅಶ್ಲಾಘ್ಯವಲ್ಲವೆಂತಲೂ ನುಡಿಯುವದು........ ಕೆಲವರು ಗೌರವವೆಂಬುವದು ಸೂಳೆಯರಂನ್ನಿಟ್ಟುಕೋಂಡದ್ದರಿಂದಲೆ ವುಂಟಾ ಗುತದೆಯಲ್ಲದೆ ಅದಿಲ್ಲದವನಿಗೆ ದೊಡ್ಡತನದಲ್ಲೊಂದಂಗ ಕಡಿಮೆಯಂತಲೂ ತಮ್ಮನ್ನು ಅನ್ಯರು ನಪುಂಸಕರೆಂದು ಭಾವಿಸುವರೆಂತಲೂ ಹೆದರಿ ಗುತ್ತಿಗೆ ಮಾಡಿಕೊಂಡು ಸುಳೆಗಳಂನ್ನಿಟ್ಟು ಕೊಂಡಿರುವರು."

ಇದು ಸನ್ ೧೮೮೫ ರಲ್ಲಿ ರಾ. ಹ. ದೇಶಪಾಂಡೆಯವರು ಬರೆದ ಮೋಗಲ್ ಬಾದಶಾಹಿ ಎಂಬುವದರಿಂದ:

"ಬಾಬರನು ಕಡುಗಲಿಯೂ ಆಸಕ್ತಿಯುಳ್ಳವನೂ ಆಗಿದ್ದನು. ಅವನ ಎದೆಗಾರಿಕೆಯಿಂದಲೂ ಆಸಕ್ತಿಯಿಂದಲೂ ಭಯಂಕರವಾದ ದಂಡಯಾತ್ರೆಗಳು ಸುಲಭವಾದ ಪ್ರವಾಸಗಳಾಗುತ್ತಿದ್ದವು. ಅವನು ಎಡರಿನಲ್ಲೆದೆಗುಂದುತ್ತಿದ್ದಿಲ್ಲ, ಸಂಪತ್ಕಾಲದಲ್ಲುಬ್ಬುತ್ತಿದ್ದಿಲ್ಲ. ಅವನು ಬಡತನದಲ್ಲಿ ಕಣ್ಗೆಡದೆಯೂ ಐಶ್ವರ್ಯದಲ್ಲಿ ಸೊಕ್ಕದೆಯೂ ಪ್ರಜೆಗಳನ್ನು ಮೆಚ್ಚಿಸುತ್ತಿದ್ದನು. ಆದರೆ ಅವನಲ್ಲಿ ಒಂದು ದುರ್ಗುಣವಿತ್ತು. ಅದೇನಂದರೆ, ಅವನು ಹೆಣ್ಣು ಹೆಂಡಗಳಿಗೆ ತೀರ ಮರುಳಾಗಿದ್ದನು. ಒಮ್ಮೊಮ್ಮೆ ಅವನು ಒಂದು ದೊಡ್ಡ ಹಂಡೆಯನ್ನು ಹಳೆ ಹೆಂಡದಿಂದ ತುಂಬಿಸಿ, ಅದರ ಮೇಲೆ ಕೆಳಗೆ ಕೊಟ್ಟ ವಾಕ್ಯಗಳನ್ನು ಬರಿಸುತ್ತಿದ್ದನು: ಸಂತೋಷದ ದಿವಸಗಳು! ಉತ್ಸವದ ವಸಂತ ಕಾಲವು! ಹಳೆ ಹೆಂಡವು! ಪ್ರಾಯದ ಹುಡುಗಿಯರು! ಬಾಬರನೇ ಯಥೇಚ್ಛವಾಗಿ ಉಪಭೋ ಗಿಸು; ಏಕೆಂದರೆ ಹೋದ ಪ್ರಾಣವು ತಿರುಗಿ ಬರುವದಿಲ್ಲ." ೧

ಈ ಅವತರಣಿಕೆಯಲ್ಲಿ ಬರವಣಿಗೆಯ ಸುಭಗತೆ, ಪ್ರಾಸಾದಿಕತೆ, ಬಿಗುವು, ಕೇವಲ ಅವಶ್ಯ ವಿದ್ದಷ್ಟು ಮಾತ್ರ ಶಬ್ದಗಳನ್ನು ಪಯೋಗಿಸಬೇಕೆಂಬ ಕಲ್ಪನೆ, ಏರು ಪೇರುಗಳಾಗಲೀ ಗ್ರಾಂಥಿಕ ಮತ್ತು ಗ್ರಾಮ್ಯ ಪ್ರಯೋಗಗಳ ಅಹಿತವಾದ ಮಿಶ್ರಣದ ಶೈಥಿಲ್ಯವಾಗಲೀ ಇಲ್ಲದಿರುವದು- ಮೊದಲಾದವು ಗಳನ್ನೂ, ವಿರಾಮ ಚಿಹ್ನಗಳನ್ನೂ ಅವತರಣಿಕಾ ಚಿಹ್ನಗಳನ್ನೂ ಕಾಣುತ್ತೇವೆ. ಇದರಿಂದ ಇಂದಿನ ಕನ್ನಡದ ಗದ್ಯದ ದಾರಿ ಬಹಳ ದೂರವೇನೂ ಉಳಿಯಲಿಲ್ಲ.

ಹೊಸಗನ್ನಡ ಉದಯಕಾಲದ ಲಕ್ಷಣಗಳೆಂದು 'ಕರ್ನಾಟಕದ ಇತಿಹಾಸ ದರ್ಶನ'ಕಾರರು ಹೇಳಿದ ಅಂಶಗಳು ಸ್ವಲ್ಪ ನಂತರದ ಕಾಲಕ್ಕೆ ಸಂಬಂಧಿಸಿದ್ದರೂ, ಈ ಕಾಲಕ್ಕೂ ಅನ್ವಯಿಸುವಂತಿವೆ:

"ಈ ಕಾಲದಲ್ಲಿ ದೇಶದ ಆದ್ಯಂತವಾಗಿ ಹಬ್ಬಿದ ಸ್ವಾತಂತ್ರ್ಯ ಚಳವಳಿಯೂ ಕನ್ನಡನಾಡಿನಲ್ಲಿ ಪ್ರಭಾವ ಬೀರಿ ತರುಣ ಕವಿಗಳಲ್ಲಿ ದೇಶಾಭಿಮಾನ, ಭಾಷಾಭಿಮಾನಗಳನ್ನು ಕೆರಳಿಸಿತು. ಇಂಗ್ಲಿಷ ವಿದ್ಯಾಭ್ಯಾಸದ ಪ್ರಸಾರದಿಂದ ಇಂಗ್ಲಿಷ ಸಾಹಿತ್ಯದ ಸರ್ವಪ್ರಕಾರಗಳ ಕೃತಿಗಳೂ ಕನ್ನಡದಲ್ಲಿ ಬರತೊಡಗಿದವು. ಪಾಶ್ಚಾತ್ಯ ಸಂಸ್ಕೃತಿ ಪ್ರಭಾವದಿಂದ, ಪ್ರಾಚೀನ ಆಚಾರಪದ್ಧತಿ ಸಂಪ್ರದಾಯಗಳ

---

೧ ಮೋಗಲ್ ಬಾದಶಾಹಿ ೧೮೮೫- ಪು. ೩೪.

ಮೇಲಣ ಅಂಧಶ್ರದ್ಧೆ ಭಗ್ನವಾಯಿತು; 'ಕೇನ ಕೇನ' ಎಂಬ ಪ್ರಶ್ನೆಕ ಪ್ರವೃತ್ತಿ ಕೆರಳತೊಡಗಿತು. ಪೂರ್ವದ ಕವಿಗಳು ವಿಸ್ತರಿಸಿದ ಮತ ವಿಚಾರಗಳಾಗಲಿ ರಾಜಮಹಾರಾಜರ ಶೌರ್ಯ ಸಾಹಸಗಳಾಗಲಿ ಅವರ ಶೃಂಗಾರಪ್ರಸಂಗಗಳಾಗಲಿ ಪೌರಾಣಿಕ ಮಹಾನುಭಾವರ ದಿವ್ಯ ಕಥೆಗಳಾಗಲಿ ಈ ಕಾಲದ ಕವಿವರ್ಗಕ್ಕೆ ರುಚಿಸದಾದುವು. ಪುರಾತನ ಕಾಲದ ಕಾವ್ಯವು ಪ್ರಭುತ್ವದ ಕಾವ್ಯರಾಶಿ. ಸಾಂಪ್ರತ ಕಾಲದ ಕಾವ್ಯವು ಜನತೆಯ ಕಾವ್ಯರಾಶಿ. ವಿಜ್ಞಾನಪ್ರಭಾವದಿಂದ ಆಧುನಿಕ ಸಾಹಿತ್ಯಕ್ಕೆ ಹೊಸ ಸಂಸ್ಕೃತಿ ಲಭಿಸಿತು. ಫಲವಾಗಿ ದಿನದಿನದ ಸಾವು ಹುಟ್ಟುಗಳು, ದಿನದಿನದ ಸಂತೋಷ ವಿಷಾದಗಳು, ದಿನದಿನದ ಸಂಭ್ರಮ ಚಿತ್ತವಿಭ್ರಮಗಳು, ಕೋಪತಾಪ ವಿಸ್ಮಯವಿಲಾಸಗಳು ಆಧುನಿಕ ಸಾಹಿತ್ಯಕ್ಕೆ ವಸ್ತುಗಳಾದುವು." ೧

'ಕಲಿತವರೆ'ನ್ನುವದಕ್ಕಿಂತ ಕೇವಲ ಕನ್ನಡ ಮಾತ್ರ ಕಲಿತವರೇ ಕನ್ನಡದಲ್ಲಿ ಕೆಲಸ ಮಾಡಿದರು :

ಕೊನೆಯದಾಗಿ, ಕನ್ನಡದ ಈ ಉದಯ ಕಾಲದಲ್ಲಿ ಹೆಚ್ಚಾಗಿ ಕೃತಿ ರಚನೆ ಮಾಡಿದವರೆಲ್ಲ ಪದವೀಧರರಲ್ಲದವರೇ. ಶಾಂತವೀರ ಕಿತ್ತೂರ, ತುರಮರಿ, ಶಾಂತಕವಿಗಳು, ಕಾವ್ಯಾನಂದ, ಕನ್ನಡ ವಾಮನ, ಗೌರೀಶ– ಇನ್ನೂ ಹತ್ತಾರು ಹೆಸರುಗಳನ್ನು ಹೇಳಬಹುದು. ಕನ್ನಡದ ಉದಯ ಕಾಲದಲ್ಲಿ ಹೆಚ್ಚಾಗಿ ಗ್ರಂಥರಚನೆ ಮಾಡಿದವರು ಧಾರವಾಡದ ಟ್ರೇನಿಂಗ ಕಾಲೇಜದಲ್ಲಿ ಇದ್ದವರು ಮತ್ತು ಅದರ ಸುತ್ತುಮುತ್ತಲಿದ್ದವರು. ಧಾರವಾಡದ ರೈಟರ ಓಣಿ ನಿಜವಾಗಿಯೂ ರೈಟರರ ಓಣಿಯೇ ಆಗಿತ್ತು. ಪಂಡಿತ ಕಟ್ಟಿ, ಕಿತ್ತೂರ, ಮಾಳವಾಗಲ, ಡೆಪ್ಯುಟಿ ಚೆನಬಸಪ್ಪ, ಅರಳೆಲಿಮಠ, ಹೊನ್ನಾಪುರಮಠ, ಗೌರೀಶ– ಮೊದಲಾದವರೆಲ್ಲ ಹೆಚ್ಚು ಕಡಿಮೆ ರೈಟರ್ ಓಣಿಯಲ್ಲಿ ಇದ್ದವರೇ. ಧಾರವಾಡದ ರೈಟರ್ ಓಣಿ, ಹಾಡುವ ಹಕ್ಕಿಗಳ ಗೂಡಾಗಿತ್ತು. 'ಕಲಿಯದವರೆ'ನ್ನುವವರೇ ಅನಂತರ, ಕಲಿತವರು ಕನ್ನಡಕ್ಕೆ ಬರುವಂತೆ ಮಾಡಿದರು !

—

೧ ಕರ್ನಾಟಕ ಇತಿಹಾಸ ದರ್ಶನ ೧೯೭೦– ಪು. ೧೭೧೮–೧೨೯.

ಯುಕಾಲದ ಕ್ರೈಸ್ತದೇಶ ಆಡಳಿತಗಾರರು

11)

ಡಬ್ಲ್ಯು. ಎ. ರಸೆಲ್

(೧೮೩೦–೧೮೯೨)

ಹೊಸಗನ್ನಡ ಸಾಹಿತ್ಯ ಸಂಸ್ಕೃತಿಗಳ ಉದಯಕಾಲದಲ್ಲಿ ದಕ್ಷ ಆಡಳಿತಗಾರರಾಗಿದ್ದ ವಿಲಿಯಮ್ ಎ. ರಸೆಲ್ ಅವರಿಗೆ ತುಂಬಾ ಮಹತ್ವಪೂರ್ಣವಾದ ಸ್ಥಾನವಿದೆ. ಕನ್ನಡದ ಪುನರುತ್ಥಾನದ ಈ ಸಮಯಕ್ಕೆ ರಸೆಲ್ ಅವರು ರಂಗಸ್ಥಲದ ಮೇಲೆ ಕಂಡುಬರದಿದ್ದರೆ, ಕನ್ನಡದ ಪುನರುಜ್ಜೀವನ ಪ್ರಾಯಶಃ ಇನ್ನೂ ಐವತ್ತು ವರ್ಷ ಮುಂದುಬೀಳುತ್ತಿತ್ತು. ಶೈಕ್ಷಣಿಕವಾಗಿ, ಕನ್ನಡದ ಈ ಪ್ರಾಣ ಪ್ರತಿಷ್ಠಾಪನೆಯನ್ನು ಮಾಡಿದ ಶ್ರೇಯಸ್ಸು ರಸೆಲ್ ಸಾಹೇಬರಿಗಿದೆ.

ಉತ್ತರ ಕರ್ನಾಟಕವೆಲ್ಲ ದಕ್ಷಿಣ ಮಹಾರಾಷ್ಟ್ರವೆಂದು ಕರೆಯಲ್ಪಡುತ್ತಿದ್ದ ಕಾಲದಲ್ಲಿ, ಇಲ್ಲಿಯ ಸುಸಂಸ್ಕೃತರ ಭಾಷೆ, ಸಂಸ್ಕೃತಿಯ ಲಕ್ಷಣ ಮರಾಠಿಯೆಂದೇ ಪರಿಗಣಿತವಾಗಿದ್ದ ಕಾಲದಲ್ಲಿ, ಧಾರವಾಡದಂಥ ಊರಲ್ಲಿಯೂ ಸಹ ಮರಾಠಿ ಶಾಲೆ, ಮರಾಠಿ ಪತ್ರಿಕೆ ಕಂಡುಬರುತ್ತಿದ್ದ ಸಮಯದಲ್ಲಿ, ವ್ಯಾಪಾರಸ್ಥರು ಸಹ ಲೆಖ್ಖ–ಪತ್ರಗಳನ್ನು ಮರಾಠಿಯಲ್ಲಿಯೇ ಬರೆಯುತ್ತಿದ್ದ ಕಾಲದಲ್ಲಿ, ಗುಜರಾಥದಲ್ಲಿ ಗುಜರಾಥಿ ಭಾಷೆಗಿದ್ದಂತೆ, ಮಹಾರಾಷ್ಟ್ರದಲ್ಲಿ ಮರಾಠಿ ಭಾಷೆಗಿದ್ದಂತೆ, ಕರ್ನಾಟಕದಲ್ಲಿ ಪ್ರಾಂತ ಭಾಷೆಯಾದ ಕನ್ನಡಕ್ಕೇ ಮಹತ್ವವಿರಬೇಕಾದದ್ದು ಅವಶ್ಯವೆಂಬ ಸತ್ಯವನ್ನು ಪ್ರಥಮತಃ ಕಂಡುಕೊಂಡವರು ರಸೆಲ್‌ರು. ಶೈಕ್ಷಣಿಕವಾಗಿ ಅಂದು ರಸೆಲ್‌ರವರು ಮಾಡಿದ ಕ್ರಾಂತಿಯ ಮೂಲಕವೇ, ಕನ್ನಡ ಪ್ರಾಥಮಿಕ ಶಿಕ್ಷಣ ಕನ್ನಡದ ನೆಲದ ಮೇಲೆ ಗಟ್ಟಿಯಾಗಿ ಬೇರೂರಿತು. ಕನ್ನಡ ಟ್ರೇನಿಂಗ ಕಾಲೇಜ ಉತ್ಸಾಹಯುತವಾಗಿ ಕೆಲಸ ಮಾಡಿತು. ಸುಶಿಕ್ಷಿತರೆಂಬವರು ಕನ್ನಡವೆಂದರೆ ಮೂಗು ಮುರಿಯುತ್ತಿದ್ದಾಗ, ಕನ್ನಡವನ್ನು ಉಳಿಸಿ, ಬೆಳೆಸಿಕೊಂಡು ಬಂದ ಶ್ರೇಯಸ್ಸು ಧಾರವಾಡದ ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜಿಗಿದೆ. ಆ ಟ್ರೇನಿಂಗ ಕಾಲೇಜಿಗೆ ಅರಳಿದ ಹೂವುಗಳೇ ಶಾಂತಕವಿಗಳು, ತುರಮರಿ, ಗೌರೀಶ, ವಲ್ಲಭಮಹಲಿಂಗ ತಟ್ಟಿ, ಗಳಗನಾಥ, ಬಸವಾರ್ಯ ಕಿತ್ತೂರ, ಮ. ಪ್ರ. ಪೂಜಾರ, ಕೇಶವಶರ್ಮ ಗಲಗಲಿ, ಕನ್ನಡ ವಾಮನ– ಮೊದಲಾದವರು. ಆ ಕಾಲಕ್ಕೆ ರಸೆಲ್‌ರ ಆಶ್ರಯ ಈ ಟ್ರೇನಿಂಗ ಕಾಲೇಜಿಗೆ ಇರದಿದ್ದರೆ ಕನ್ನಡವೇ ಉಳಿಯುತ್ತಿದ್ದಿಲ್ಲ.

ಸುದೈವದಿಂದ, ರಸೆಲ್‌ರವರಿಗೆ ಪಾರ್ಥನಿಗೆ ಕೃಷ್ಣಸಾರಥ್ಯ ದೊರಕಿದ ಹಾಗೆ, ಡೆಪ್ಯುಟಿ ಚೆನಬಸಪ್ಪನವರ ಉತ್ಸಾಹಯುತವಾದ ಸಾರಥ್ಯ ದೊರಕಿತು. ತನ್ಮೂಲಕ, ಎಲ್ಲ ಕಡೆಗೂ ಕನ್ನಡ ಶಾಲೆಗಳು ಹೆಚ್ಚಿದವು. ಕನ್ನಡ ಬಲ್ಲ ಶಿಕ್ಷಣಾಧಿಕಾರಿಗಳು ನೇಮಕಹೊಂದಿದರು. ಕನ್ನಡ ಬಾರದ ಶಿಕ್ಷಣಾಧಿಕಾರಿಗಳು, ಮೇಲ್ವಿಚಾರಣೆಗೆ ಬರುವಷ್ಟಾದರೂ ಕನ್ನಡವನ್ನು ಕಲಿಯಬೇಕಾಯಿತು. ಪರಿಪತ್ರಗಳೆಲ್ಲ ಕನ್ನಡದಲ್ಲಿ ಪ್ರಕಟವಾಗಲು ಪ್ರಾರಂಭವಾದವು. ಕನ್ನಡ ಪಠ್ಯಪುಸ್ತಕಗಳು ನಿರ್ಮಾಣ ಹೊಂದಿ

ದವು. ಎಲ್ಲಕ್ಕೂ ಹೆಚ್ಚು ಕನ್ನಡದ ಬಗೆಗಿನ ಅದಮ್ಯವಾದ ಅಭಿಮಾನ ಪ್ರಬಲ ಪ್ರಭಂಜನದಂತೆ ನಾಡಿನ ತುಂಬೆಲ್ಲ ಬೀಸಿತು. ಈ ಕನ್ನಡದ ಕೆಚ್ಚು ನೆಲಸುವಂತೆ ಮಾಡಿದವರು ರಸೆಲ್‌ರವರು.

ವಿಲಿಯಮ್ ಅಲೆನ್ ರಸೆಲ್ ಅವರು ಹುಟ್ಟಿದ್ದು ೧೮೩೦ ರಲ್ಲಿ. ಆಕ್ಸಫರ್ಡ ವಿಶ್ವವಿದ್ಯಾಲಯದ ಎಂ. ಎ. ಪದವೀಧರರಾದ ಇವರು ಕುಶಾಗ್ರ ಬುದ್ಧಿಯವರು. ಇವರನ್ನು ಸಾರ್ವಭೌಮ ಸರಕಾರದವರು ಭಾರತಕ್ಕೆ ಕಳಿಸಿದ ಮೇಲೆ ಶ್ರೀಯುತರು ಕ್ರಿ. ಶ. ೧೮೬೦ ರಲ್ಲಿ ಪುಣೆಯ ಡೆಕ್ಕನ್ ಕಾಲೇಜಿನ ಪ್ರಿನ್ಸಿಪಾಲರೆಂದು ನೇಮಕ ಹೊಂದಿದರು. ಇವರು ಎರಡು ವರ್ಷ ಪ್ರಿನ್ಸಿಪಾಲರೆಂದು ಕೆಲಸ ಮಾಡಿದ ಮೇಲೆ ಸನ್ ೧೮೬೨ ರಲ್ಲಿ ಇವರನ್ನು ಮಧ್ಯಭಾಗದ ಎಜುಕೇಶನ್ ಇನ್‌ಸ್ಪೆಕ್ಟರ ಎಂದು ನೇಮಿಸಲಾಯಿತು. ಅದಾದ ಎರಡು ವರುಷದ ಮೇಲೆ ಉತ್ತರ ಭಾಗಕ್ಕೆ ನೇಮಕರಾದರು. ಅಲ್ಲಿ ಇವರು ಕೇವಲ ಒಂದು ವರ್ಷ ಕೆಲಸ ಮಾಡುವದರಲ್ಲಿಯೇ ಸನ್ ೧೮೬೫ ರ ಮೇ ತಿಂಗಳಿನಲ್ಲಿ ದಕ್ಷಿಣ ಭಾಗದ ಎಜುಕೇಶನ್ ಇನ್‌ಸ್ಪೆಕ್ಟರ ಎಂದು ನೇಮಕ ಹೊಂದಿದರು. ಇವರು ದಕ್ಷಿಣ ವಿಭಾಗದ ಶಿಕ್ಷಣಾಧಿಕಾರಿಗಳಾಗಿ ನೇಮಕವಾದ ಕೂಡಲೇ ಕನ್ನಡದ ಸ್ಥಾನಮಾನವನ್ನು ಹೆಚ್ಚಿಸಲು ಯತ್ನಿಸಿದರು. ಆವರೆಗೆ ಬೆಳಗಾವಿಯಲ್ಲಿ ನಾರ್ಮಲ್ ಸ್ಕೂಲು ಆಗಿದ್ದ ಶಾಲೆಯು ಇವರ ಆಳ್ವಿಕೆ ಪ್ರಾರಂಭವಾದೊಡನೆಯೇ ಟ್ರೇನಿಂಗ ಕಾಲೇಜದ ರೂಪ ಪಡೆಯಿತು. ಇವರು ೧೮೬೫–೬೬ ರ ಶೈಕ್ಷಣಿಕ ವರದಿಯಲ್ಲಿಯೇ ತಾವು ಟ್ರೇನಿಂಗ ಶಾಲೆಯಲ್ಲಿ ಕನ್ನಡವನ್ನು ಕಲಿಸಲು ಅತ್ಯಂತ ಸಮರ್ಥರಾದವರನ್ನು ನಿಯಮಿಸಿದ್ದಾಗಿಯೂ ಬೆಳಗಾವಿಯ ಶಾಲೆಯನ್ನು ಪುಣೆ, ಅಹಮದಾಬಾದದ ಕಾಲೇಜುಗಳ ಮಟ್ಟಕ್ಕೆ ತರಲು ಹಣವನ್ನು ನಿಗದಿ ಮಾಡಿದ್ದಾಗಿಯೂ ಹೇಳಿದ್ದಾರೆ :

" I have this year budgeted for means to put the Belgaum Training School on the same footing as a Vernacular College as those of Poona and Ahmedabad. "

ಇಲ್ಲಿ ಆವರು ಅವಿರತವಾಗಿ ೨೦ ವರ್ಷ ಕೆಲಸ ಮಾಡಿ, ಸನ್ ೧೮೮೫ ರ ಮಾರ್ಚ ತಿಂಗಳಲ್ಲಿ ಪೆನ್‌ಶನ್ ಪಡೆದುಕೊಂಡು ತಮ್ಮ ದೇಶಕ್ಕೆ ಮರಳಿದರು.

ಸನ್ ೧೮೬೩ ರಲ್ಲಿ ಉತ್ತರ ಕನ್ನಡ ಜಿಲ್ಹೆಯನ್ನು ಮದ್ರಾಸ ಸರಕಾರದಿಂದ ಬೇರ್ಪಡಿಸಿ ಮುಂಬಯಿ ಸರಕಾರವು ದಕ್ಷಿಣ ಭಾಗವನ್ನು ನಿರ್ಮಿಸಿತು. ಈ ದಕ್ಷಿಣ ಭಾಗದ ಮೊದಲನೆಯ ಎಜುಕೇಶನ್ ಇನ್‌ಸ್ಪೆಕ್ಟರರು ಕ್ಯಾಪ್ಟನ್ ವ್ಯಾಡಿಂಗ್ಟನ್ ಎಂಬವರು. ಅವರು ೧೮೬೪ರ ಡಿಸೆಂಬರ ತಿಂಗಳಲ್ಲಿ ವರ್ಗವಾಗಿ ಹೋದ ನಂತರ ಬೆಳಗಾವಿಯ ಅಸಿಸ್ಟಂಟ ಕಲೆಕ್ಟರರಾಗಿದ್ದ ಲಿವರ್ ಎಂಬವರು ಕೆಲಕಾಲ ದಕ್ಷಿಣ ಭಾಗದ ಶಿಕ್ಷಣಾಧಿಕಾರಿಗಳಾಗಿ ಕೆಲಸ ಮಾಡಿದರು. ಅಷ್ಟರಲ್ಲಿಯೇ, ರಸೆಲ್‌ರವರು ಶಿಕ್ಷಣಾಧಿಕಾರಿಗಳಾಗಿ ನೇಮಕ ಹೊಂದಿ ಇಲ್ಲಿಗೆ ಬಂದರು. ಇವರು ಇಲ್ಲಿ ಶಿಕ್ಷಣಾಧಿಕಾರಿಗಳಾಗಿದ್ದಾಗ ಕನ್ನಡಕ್ಕಾಗಿ ಮಾಡಿದ ಕೆಲಸ ಅಮೋಘವಾದುದು. ರಸೆಲ್‌ರು ೧೮೯೨ ರ ಡಿಸೆಂಬರ ತಿಂಗಳಲ್ಲಿ ಜರ್ಮನಿಯಲ್ಲಿ ನಿಧನ ಹೊಂದಿದಾಗ, ಇವರ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ಕುರಿತು ' ಶಾಲಾಪತ್ರಕ 'ದಲ್ಲಿ ಹೀಗೆ ಬರೆದಿದೆ :

" ಮಿ. ರಸೆಲ್ ಸಾಹೇಬರು ಈ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದಾಗ ಸರಕಾರದ ಕಾಗದ ಪತ್ರಗಳು ಕನ್ನಡದಲ್ಲಿರಬೇಕೆಂದು ತರಾವು ಇದ್ದಾಗ್ಯೂ ವಿದ್ಯಾಖಾತೆಯ ಕಾಗದ ಪತ್ರಗಳು ಮೊದಲಿನಂತೆ ಮರಾಠಿಯಲ್ಲಿಯೇ ನಡೆಯುತ್ತಿದ್ದವು. ಡಿಪುಟಿ ಇನಸ್ಪೇಕ್ಟರರೂ ಸಾಲೆಗಳ ಮಾಸ್ತರರೂ ಮರಾಠಿ ಬಲ್ಲವರೇ ಇದ್ದರು. ಕನ್ನಡಿಗರಿಗೆ ಸಾಲೆಗಳಲ್ಲಿ ವಿಶೇಷ ಅಭಿರುಚಿ ಇದ್ದಿಲ್ಲ. ಸರಕಾರದ

ಉದ್ಯೋಗಸ್ಥರ ಹೊರತು ಉಳಿದವರು ತಮ್ಮ ಮಕ್ಕಳನ್ನು ಸಾಲೆಗೆ ಕಳುಹುತ್ತಿದ್ದಿಲ್ಲ. ಆದದ್ದರಿಂದ ಮಿ. ರಸೆಲ್ ಸಾಹೇಬರು ಈ ಭಾಗಕ್ಕೆ ಬಂದಾಗ (ಅಂದರೆ ೧೮೬೫ ರಲ್ಲಿ) ಇಲ್ಲಿ ೧೩೮ ಮಾತ್ರ ಸರಕಾರದ ಸಾಲೆಗಳು ಇದ್ದವು.

ಬಂದ ಹೊಸದಾಗಿ ಮೆಹರ್ಬಾನ ರಸೆಲ್ ಸಾಹೇಬರು ಬಹಳ ಶ್ರಮ ತಕ್ಕೊಂಡು ಹಳ್ಳಿಹಳ್ಳಿಗೆ ಹೋಗಿ ಜನರ ಸ್ಥಿತಿ-ಗತಿಯನ್ನು ತಿಳಕೊಂಡು ಈ ಭಾಗಕ್ಕೆ ದಕ್ಷಿಣ ಮಹಾರಾಷ್ಟ್ರವೆಂಬ ಹೆಸರು ಬಿದ್ದಾಗ್ಯೂ ಇದು ನಿಜವಾಗಿ ಕರ್ನಾಟಕವಿರುತ್ತದೆಂದು ಅರಿತುಕೊಂಡರು.

ಬಳಿಕ ರಾಜ್ಯಕರ್ತರಿಗೆ ಪ್ರಜೆಗಳ ಹಿತವನ್ನು ಮಾಡುವದೇ ಕರ್ತವ್ಯವೆಂಬ ಪಾಶ್ಚಿಮಾತ್ಯ ಇತಿಹಾಸಗಳಿಂದ ಸಿದ್ಧವಾದ ಗೌರವದ ತತ್ವವನ್ನು ಎಡೆಬಿಡದೆ ಲಕ್ಷ್ಯದಲ್ಲಿಟ್ಟು ಕರ್ನಾಟಕದಲ್ಲಿ ಕನ್ನಡವನ್ನೇ ಕಲಿಸಬೇಕೆಂತಲೂ ಈ ಭಾಗದ ದೊಡ್ಡ ದೊಡ್ಡ ಅಧಿಕಾರದ ಕೆಲಸಗಳನ್ನು ಯೋಗ್ಯರಾದ ಕನ್ನಡಿಗರಿಗೆ ಕೊಡಬೇಕೆಂತಲೂ ನಿಶ್ಚಯಿಸಿ ಹಾಗೆ ಮಾಡಲಿಕ್ಕೆ ಉದ್ಯುಕ್ತರಾದರು.

ಮರಾಠಿ ಡಿಪುಟಿ ಇನಸ್ಪೇಕ್ಟರರನ್ನು ಕನ್ನಡದಲ್ಲಿ ಪರೀಕ್ಷೆಯನ್ನು ಕೊಡಲಿಕ್ಕೆ ಹಚ್ಚಿ ಕೆಲವರನ್ನು ಮರಾಠಿ ಭಾಗಕ್ಕೆ ವರ್ಗ ಮಾಡಿಸಿ ಅವರ ಸ್ಥಳದಲ್ಲಿ ಕೈಲಾಸವಾಸಿ ಚನಬಸಪ್ಪಾ ಅಂಣಾ ಮುಂತಾದ ಯೋಗ್ಯರಾದ ಕನ್ನಡಿಗರನ್ನು ನೇಮಿಸಿದರು. ಮಧ್ಯಭಾಗ, ಉತ್ತರಭಾಗಗಳಲ್ಲಿದ್ದಂತೆ ಈ ಭಾಗದಲ್ಲಿಯಾದರೂ ಒಂದು ಕರ್ನಾಟಕ ಶಿಕ್ಷಣಾಲಯವಿರಬೇಕೆಂದು ಸರಕಾರಕ್ಕೆ ಸೂಚಿಸಿ ಮಂಜೂರಿ ಪಡಕೊಂಡು ವಿದ್ವಾಂಸರಾದ ಕನ್ನಡಿಗರನ್ನು ಅದರಲ್ಲಿ ಶಿಕ್ಷಣ ಕೊಡುವ ಕೆಲಸದ ಮೇಲೆ ಇರಿಸಿದರು. ಕನ್ನಡ ಸಾಲೆಗಳ ಬಗ್ಗೆ ಕ್ರಮಿಕ ಪುಸ್ತಕಗಳನ್ನು ಬರೆಯುವುದಕ್ಕೆ ೨೦೦ ರೂಪಾಯಿ ತಲಬುಳ್ಳ ಒಬ್ಬ ತ್ರಾನ್ಸಲೇಟರನನ್ನೂ ೭೫ ರೂಪಾಯಿ ತಲಬುಳ್ಳ ಒಬ್ಬ ಎಗ್ಜಿಬಿಶರನನ್ನೂ ನೇಮಿಸಿ ಕನ್ನಡ ಪುಸ್ತಕಗಳನ್ನು ಸಿದ್ಧ ಮಾಡಿಸಿದರು. ಕನ್ನಡ ಗ್ರಂಥಗಳನ್ನು ಓದಿದ ಗೃಹಸ್ಥರನ್ನು ಆರಿಸಿ ಪರೀಕ್ಷಿಸಿ ಅವರಿಗೆ ದೊಡ್ಡ ದೊಡ್ಡ ಕೆಲಸಗಳನ್ನು ಕೊಟ್ಟರು. ಈ ಪರದೇಶಸ್ಥರು ಈ ದಿಕ್ಕಿಲ್ಲದ ಕನ್ನಡಿಗರಿಗೆ ಮಾಡಿದ ಉಪಕಾರವನ್ನು ಎಷ್ಟು ಕೊಂಡಾಡಿದರೂ ತೀರದು !

ಮಿ. ರಸೆಲ್ ಸಾಹೇಬರು ಕನ್ನಡಿಗರನ್ನು ಮುಂದಕ್ಕೆ ತಂದರು ಇಷ್ಟೇ ಅಲ್ಲ ಕನ್ನಡ ನುಡಿಯ ಗೌರವವನ್ನು ಅರಿತುಕೊಳ್ಳಲಿಕ್ಕೆ ಸ್ವತಃ ಪ್ರಯತ್ನ ಮಾಡಿದರು. ಅವರು ೨೦-೩೦ ರೂಪಾಯಿ ಸಂಬಳ ಕೊಟ್ಟು ಒಬ್ಬ ಪಂಡಿತನನ್ನು ತಮ್ಮ ಹತ್ತರ ಇಟ್ಟುಕೊಂಡು ಸ್ವತಃ ಕನ್ನಡವನ್ನು ಕಲಿತರು. ಕನ್ನಡ ನುಡಿಯಷ್ಟು ವೀರಾವೇಶದ ಭಾಷೆಯು ಎಲ್ಲಿಯೂ ಇಲ್ಲ ಎಂದು ಅವರು ಬಾರಿ ಬಾರಿಗೆ ಅನ್ನುತ್ತಿದ್ದರು. ಕನ್ನಡ ಕವಿತೆಗಳ ಮೇಲೆ ಅವರ ಪ್ರೀತಿಯು ಬಹಳೇ ಇತ್ತು.

ಕರ್ನಾಟಕ ಭಾಗದ ಎಜ್ಯುಕೇಶನಲ್ ಇನಸ್ಪೇಕ್ಟರರಾದಂದಿನಿಂದ ಮಿ. ರಸೆಲ್ ಸಾಹೇಬರು ಕನ್ನಡಿಗರನ್ನು ಮುಂದಕ್ಕೆ ತರುವದರಲ್ಲಿಯೂ, ಕನ್ನಡ ಪಂಡಿತರನ್ನು ಪ್ರೋತ್ಸಾಹಪಡಿಸುವದರಲ್ಲಿಯೂ ತಮ್ಮ ಕರ್ತವ್ಯವನ್ನು ಮಾತ್ರ ಮಾಡಿದರೆಂದು ಕೆಲವರು ಅನ್ನಬಹುದು. ಆದರೆ ಇದು ಸರಿಯಾದ ಮಾತಲ್ಲ. ಕರ್ತವ್ಯವನ್ನು ಮನಮುಟ್ಟಿ ಮಾಡುವದೇ ಮನುಷ್ಯನ ಮುಖ್ಯ ಕೆಲಸವಾದರೂ ಅದನ್ನು ಸರಿಯಾಗಿ ಮಾಡದವರ ಸಂಖ್ಯೆಯು ಈ ಜಗತ್ತಿನಲ್ಲಿ ಹೆಚ್ಚಿರುವದರಿಂದ ಕರ್ತವ್ಯ ಮಾಡುವವರು ಸ್ತುತಿಗೆ ಪಾತ್ರರೇ ಸರಿ.

ಮಿ. ರಸೆಲ್ ಸಾಹೇಬರು ಸರಕಾರದಿಂದ ಆಗುವಷ್ಟೇ ಕನ್ನಡಿಗರಿಗೆ ಉತ್ತೇಜನ ಕೊಟ್ಟರಂತಲ್ಲ. ಅವರು ತಮ್ಮ ಸ್ವಂತ ಹಣದಲ್ಲಿ ಒಂದು ಸಾವಿರ ರೂಪಾಯಿಗಳನ್ನು ಅದರ ಬಡ್ಡಿಯಿಂದ ಪ್ರತಿವರ್ಷ

ಒಂದು ಇನಾಮನ್ನು ಕನ್ನಡದಲ್ಲಿ ಹೆಚ್ಚು ಪರಿಶ್ರಮಪಟ್ಟವರಿಗೆ ಕೊಡಬೇಕೆಂದು ಗೊತ್ತುಮಾಡಿದರು. ಈ ಇನಾಮಿಗೆ ಕನ್ನಡ ಗ್ರಂಥಗಳನ್ನು ಮುದ್ರಿಸಿ ಪ್ರಸಿದ್ಧ ಮಾಡಿದ ತಮ್ಮ ಗೆಳೆಯರಾದ ವರ್ಥಸಾಹೇಬರ ಹೆಸರನ್ನು ಕೊಟ್ಟರು.

ಈ ದೊರೆಗಳು ತಮ್ಮ ಅಧಿಕಾರದಿಂದಲೇ ಜನರಿಗೆ ಪ್ರಿಯರಾದರೆನ್ನಕೂಡದು. ಯಾಕಂದರೆ, ಅವರಿಗಿಂತ ಹೆಚ್ಚಿನ ಅಧಿಕಾರಿಗಳು ಜನರಿಗೆ ಅಪ್ರಿಯರಾಗಿ ಹೋದ ಉದಾಹರಣೆಗಳು ಎಷ್ಟೋ ಇರುತ್ತವೆ. ಒಳ್ಳೇ ಅಧಿಕಾರಿಗಳು ದುಷ್ಟ ಅಧಿಕಾರಿಗಳಿಗಿಂತ ಹೆಚ್ಚು ಕೆಲಸವನ್ನು ಮಾಡುವರಲ್ಲದೆ, ಜನರ ಮನಸ್ಸಿನಲ್ಲಿ ಸರಕಾರದ ಬಗ್ಗೆ ಪೂಜ್ಯ ಬುದ್ಧಿಯನ್ನು ಹುಟ್ಟಿಸುತ್ತಾರೆ. ದುಷ್ಟರಾದ ಅಧಿಕಾರಿಗಳು ಜನರ ಸ್ವಭಾವವನ್ನೂ ಒಲವನ್ನೂ ಲೆಕ್ಕಿಸದೆ ತಮ್ಮಲ್ಲಿ ಅಧಿಕಾರ ಉಂಟೆಂಬುದನ್ನು ತೋರಿಸಲಿಕ್ಕೆ ಹವಣಿಸಿ ಅಡ್ಡ ಮಾರ್ಗವನ್ನು ಹಿಡಿದು ಜನರನ್ನು ನೋಯಿಸಲಿಕ್ಕೆ ಹಾತೊರೆಯುತ್ತಾರೆ. ಇಂತಹರು ಜನರನ್ನು ಮೆಚ್ಚಿಸಲರಿಯರು.

ಮಿ. ರಸೆಲ್ ಸಾಹೇಬರು ದಯೆಯುಳ್ಳವರಾದದ್ದರಿಂದ ಜನರ ಸುಖ-ದುಃಖಗಳನ್ನು ವಿಚಾರಿಸಿ ಸರಕಾರದ ನಿಯಮಗಳನ್ನು ಮುರಿಯದೆ ಜನರ ಅನುಕೂಲತೆಯನ್ನು ನೋಡುತ್ತಿದ್ದರು. ಅವರು ಸ್ವತಃ ಪಂಡಿತರೂ ಕವಿಗಳೂ ಇದ್ದರು. (ಅವರು ಮಾಡಿದ ಫಾಯರ್ ಫ್ಲಾಯಿಸ್ ಇನ್ ಇಂಡಿಯಾ ಎಂಬ ಚಿಕ್ಕ ಕಾವ್ಯವು ಸರಸವಾಗಿರುವದು) ಆ ಕಾರಣ, ಅವರು ಗ್ರಂಥಕರ್ತರನ್ನು ಪ್ರೀತಿಸುತ್ತಿದ್ದರು; ವಿದ್ವಾಂಸರನ್ನು ಮನ್ನಿಸುತ್ತಿದ್ದರು; ಬಡವರಿಗೆ ನೆರವಾಗುತ್ತಿದ್ದರು; ಕರ್ತವ್ಯವನ್ನು ಹುರುಪಿನಿಂದ ಮಾಡುವವರಿಗೆ ಪ್ರೋತ್ಸಾಹಗೊಡುತ್ತಿದ್ದರು. ಸಾರಾಂಶ, ಅವರು ಹಿಂದೆ ಬಿದ್ದ ಕನ್ನಡವನ್ನು ಮುಂದಕ್ಕೆ ತರುವದು ತಮ್ಮ ಕರ್ತವ್ಯವೆಂದು ತಿಳಿದು ಆ ಕೆಲಸಕ್ಕೆ ಬೇಕಾದ ಎಲ್ಲ ತಕ್ಕ ಸಾಧನಗಳನ್ನು ಕಯ್ಕೊಳ್ಳುತ್ತಿದ್ದರು.

ಎಜ್ಯುಕೇಶನಲ್ ಇನಸ್ಪೇಕ್ಟರರ ಕರ್ತವ್ಯಗಳು ನಾಲ್ಕು ಇರುತ್ತವೆ : (೧) ಸರಕಾರದ ಹುಕುಮುಗಳನ್ನು ಅಮಲಿನಲ್ಲಿ ತರುವದು, (೨) ಕಯ್ಕೆಳಗಿನ ಜನರಿಂದ ಕೆಲಸಗಳನ್ನು ತೆಗೆದುಕೊಳ್ಳುವದು, (೩) ಸಾಲೆಗಳನ್ನು ಪರೀಕ್ಷಿಸುವದು, (೪) ಪ್ರಜೆಗಳಲ್ಲಿ ಪೂಜ್ಯ ಬುದ್ಧಿಯನ್ನು ಹುಟ್ಟಿಸಿ ಅವರಿಂದ ತಕ್ಕ ಸಹಾಯವನ್ನು ಪಡೆದುಕೊಳ್ಳುವದು. ಮೊದಲನೆಯ ಕರ್ತವ್ಯವನ್ನು ಅವರು ಚನ್ನಾಗಿ ಮಾಡಿದರೆನ್ನಲಿಕ್ಕೆ ೧೩೦೦ ರೂಪಾಯಿಗಳ ವರೆಗೆ ಸರಕಾರದವರು ಅವರ ಸಂಬಳವನ್ನೇರಿಸಿ ಅವರಿಗೆ ಅನುಕೂಲವಾದ ಸ್ಥಳದಲ್ಲಿ (ಬೆಳಗಾಂವಿಯಲ್ಲಿ) ಇರಲಿಕ್ಕೆ ಅಪ್ಪಣೆಯನ್ನಿತ್ತ ಉದಾಹರಣವೇ ಸಾಕು.[೧] ಎರಡನೆಯ ಕರ್ತವ್ಯದ ಸಂಬಂಧದಿಂದ ಅವರನ್ನು ಹೊಗಳಬಹುದು. ಮನುಷ್ಯನ ಮೋರೆ ನೋಡಿ ಇವನು ಇಂತಹನೆಂದು ಅವರು ಕೂಡಲೇ ತಿಳಿಯುತ್ತಿದ್ದರು. ರಿಪಿರಿಪಿ ಮಾಡಿ ಕಯ್ಕೆಳಗಿನವರ ಮನಸ್ಸನ್ನು ನೋಯಿಸಿ ಅವರನ್ನು ಉದಾಸೀನರನ್ನು ಮಾಡುತ್ತಿದ್ದಿಲ್ಲ. ಕಯ್ಕೆಳಗಿನವರ ಕೆಲಸದಲ್ಲಿ ಅವರು ಎಂದೂ ಕೈಹಾಕುತ್ತಿದ್ದಿಲ್ಲ. ಮತ್ತು ತಪ್ಪು ಮಾಡಿದರೆ ಅವರನ್ನು ಬಿಡುತ್ತಿದ್ದಿಲ್ಲ. ಮುಖ್ಯಗಳ್ಳರಿಗೆ ಸ್ವಾತಂತ್ರ್ಯ ಕೊಡುತ್ತಿದ್ದಿಲ್ಲ; ಗುಣಕ್ಕೆ ಮತ್ಸರ ಮಾಡುತ್ತಿದ್ದಿಲ್ಲ. ಮೂರನೆಯ ಕರ್ತವ್ಯದ ಸಂಬಂಧದಿಂದ ಮಾತ್ರ ಅವರಿಗೆ ಕೆಲವರು ಸೋಮಾರಿಗಳೆಂದು ದೋಷ ಕೊಡುತ್ತಿದ್ದರು. ಈ ಲೋಕಾಪವಾದದಲ್ಲಿ ತುಸು ಸತ್ಯಾಂಶವಾದರೂ ತೋರುತ್ತಿತ್ತು. ರಸೆಲ್ ಸಾಹೇಬರು ಈ ಭಾಗಕ್ಕೆ ಬಂದ ಹೊಸದಾಗಿ ಬಹಳ ಚಪಲತೆಯನ್ನು ತೋರಿಸಿದರು. ಬಳಿಕ ಇತ್ತಿತ್ತಲಾಗಿ- ಮುಪ್ಪಿನಿಂದಾಗಲಿ, ವಿಶೇಷವಾಗಿ ಓದುವ ಲಕ್ಕಿನಿಂದಾಗಲಿ ಅವರು ತಕ್ಕಷ್ಟು ತಿರುಗುತ್ತಿದ್ದಿಲ್ಲ. ಆದರೆ,

---

೧ ರೂಪಾಯಿ ೧೩೦೦ ಅಂದರೆ, ಅವರ ಗ್ರೇಡಿಗೆ ಸಿಗತಕ್ಕ ತಲಬಿಗಿಂತ ೧೦೦ ರೂಪಾಯಿ ತಲಬು ಹೆಚ್ಚಿಗೆ ಸಿಗುತ್ತಿತ್ತು.

ಅವರು ತಮ್ಮ ಘನವಾದ ಅನುಭವದಿಂದಲೂ ಹೆಚ್ಚಿನ ವಿದ್ಯದಿಂದಲೂ ಶಾಲೆಗಳ ನಿಜ ಸ್ಥಿತಿಯನ್ನು, ಶಿಕ್ಷಕರ ಯೋಗ್ಯತೆಯನ್ನು ಒಂದು ನಿಮಿಷದಲ್ಲಿ ಪರೀಕ್ಷಿಸುತ್ತಿದ್ದರು. ನಾಲ್ಕನೆಯ ಕರ್ತವ್ಯದ ಬಗ್ಗೆ ಹೆಚ್ಚಿಗೆ ಬರೆಯುವದು ಅವಶ್ಯವಿಲ್ಲ, ಅವರ ಇಡೀ ಚರಿತ್ರವು ಈ ಕರ್ತವ್ಯದ ಉದಾಹರಣವೆಂದರೂ ಸಲ್ಲುವದು. ಅವರು ಆಂಗ್ಲರೊಡನೆ ನಡೆದಂತೆ ದೇಶೀಯರೊಡನೆಯೂ ನಡೆಯುತ್ತಿದ್ದರು. ಮೂಲೆಗೆ ಬಿದ್ದ ಕನ್ನಡಿಗರನ್ನು ಮುಂದಕ್ಕೆ ತಂದು ಕನ್ನಡ ನುಡಿಯ ವೈಭವವನ್ನು ಬೆಳೆಸಿ, ಕನ್ನಡಿಗರ ಅಜ್ಞಾನಾಂಧಕಾರವನ್ನು ದೂರೋಡಿಸಿ ತಮ್ಮ ಸ್ವಂತ ಹಣ ವೆಚ್ಚ ಮಾಡಿ ಕನ್ನಡ ನುಡಿಯಲ್ಲಿ ಪಾಂಡಿತ್ಯ ಹೊಂದಿದವರಿಗೆ ಪ್ರತಿವರ್ಷ ಇನಾಮು ದೊರೆಯುವಂತೆ ವ್ಯವಸ್ಥೆ ಮಾಡಿ ಈ ದೇಶವನ್ನು ಬಿಟ್ಟು ಮರಳಿ ಸ್ವದೇಶಕ್ಕೆ ಹೋದ ಮಹಾತ್ಮರನ್ನು ನಮ್ಮ ದೇಶದವರು ಮರೆಯಲಾರರು.'' ೧

ರಸೆಲ್‌ರವರು ಬೆಳಗಾವಿಯ ನಾರ್ಮಲ್ ಸ್ಕೂಲನ್ನು ಟ್ರೇನಿಂಗ್ ಕಾಲೇಜದ ಮಟ್ಟಕ್ಕೆ ಏರಿಸಿದರೆಂದು ಹೇಳಿತಷ್ಟೇ. ಅಲ್ಲಿ ಮತ್ತು ಉಳಿದೆಡೆಗೆ ಕನ್ನಡ ಬಲ್ಲ ಶಿಕ್ಷಕರನ್ನು ನೇಮಿಸಿದರು. ಕೈಲಾಸವಾಸಿ ಗಂಗಾಧರ ಮಡಿವಾಳೇಶ್ವರ ತುರಮರಿಯವರಂಥವರನ್ನು ಕಲಿಸಲೂ, ಪಠ್ಯಪುಸ್ತಕಗಳನ್ನು ರಚಿಸಲೂ ನಿಯಮಿಸಿದರು. ಹೊಸದಾಗಿ ಕನ್ನಡದಲ್ಲಿ ಪಠ್ಯಪುಸ್ತಕ ನಿರ್ಮಾಣವಾಗುವ ಬಗ್ಗೆ ಜಾಗರೂಕತೆ ವಹಿಸಿದರು. "ರಸೆಲ್ ಅವರು ಬರುವ ಪೂರ್ವದಲ್ಲಿ ಕನ್ನಡದಲ್ಲಿ ಮೊದಲಿನ ಮೂರು ಪಠ್ಯಪುಸ್ತಕಗಳನ್ನು ಮಾತ್ರ ರಚಿಸಲಾಗಿದ್ದಿತು. ಮರಾಠಿಯೊಡನೆ ಕನ್ನಡವನ್ನು ಕಲಿಸುತ್ತಿದ್ದ ಕೆಲವೇ ಕೆಲವು ಶಾಲೆಗಳಲ್ಲಿ ಮಂಗಳೂರಿನ ಮಿಶನರಿಯವರು ತಯಾರಿಸಿದ ಕನ್ನಡ ಪಠ್ಯಪುಸ್ತಕಗಳನ್ನು ಉಪಯೋಗಿಸುತ್ತಿದ್ದರು. ದಕ್ಷಿಣ ಭಾಗಕ್ಕಾಗಿ ಪುಣೆಯಿಂದ ಸ್ಥಳಾಂತರಿಸಿದ ಒಂದು ಕನ್ನಡ ಟ್ರಾನ್ಸಲೇಟರ ಸ್ಥಳಕ್ಕೆ ಒಬ್ಬ ಮರಾಠಿಯವರನ್ನೇ ನಿಯಮಿಸಲಾಗಿದ್ದಿತು. ರಸೆಲ್‌ರವರು ಈ ಕ್ರಮವಿಪರ್ಯಾಯವನ್ನು ಕಂಡುಹಿಡಿದು ಆದಷ್ಟು ತೀವ್ರವೇ ಆ ಸ್ಥಳಕ್ಕೆ ಒಬ್ಬ ಕನ್ನಡಿಗನನ್ನು ನೇಮಿಸಿದರು." ೨ "ಸನ್ಯಾಸಿಯ ಮದುವೆಗೆ ಜುಟ್ಟ ಜನಿವಾರದಿಂದ ಪ್ರಾರಂಭ ಎಂಬಂತೆ ಆಗ ತಾನೆ ಪ್ರಾರಂಭವಾಗಿದ್ದ ಮರಾಠಿ ಪುಸ್ತಕಗಳ ಕನ್ನಡ ಭಾಷಾಂತರವನ್ನು ಮುಂದುವರಿಸಿ, ಆವರೆಗೆ, ಕೇವಲ ಮೂರು ಪಠ್ಯಪುಸ್ತಕಗಳಿದ್ದುದನ್ನು ಐದನೆಯ ಇಯತ್ತೆಯ ವರೆಗೆ ಹೆಚ್ಚಿಸಿದರು. ಅಲ್ಲದೆ, ತಮ್ಮ ವರದಿಯಲ್ಲಿ ಮೈಸೂರು ಪ್ರಾಂತದಲ್ಲಿ ಕೇವಲ ಮೂರು ಪಠ್ಯಪುಸ್ತಕಗಳಿದ್ದರೆ, ಉತ್ತರ ಕರ್ನಾಟಕದಲ್ಲಿ ಐದಿವೆಯೆಂದೂ, ಅವನ್ನು ಬಹು ಬೇಗನೇ ಗುಜರಾಥಿ, ಮರಾಠಿಗಳ ಸಂಖ್ಯೆಯ ಮೊತ್ತಕ್ಕೆ ಏರಿಸುವದಾಗಿಯೂ ವರದಿ ಮಾಡಿದರು." ೩

ಅಷ್ಟೇ ಅಲ್ಲದೆ, ಶಿಕ್ಷಣ ಪ್ರಸಾರದ ದೃಷ್ಟಿಯಿಂದ ಶಾಲೆಗಳ ಸಂಖ್ಯೆಯನ್ನೂ ಹೆಚ್ಚಿಸಿದರು, ೧೮೬೬-೬೭ ರ ಒಂದು ವರ್ಷದಲ್ಲಿಯೇ ೧೨ ಹೆಣ್ಣುಮಕ್ಕಳ ಶಾಲೆಗಳನ್ನು ಸ್ಥಾಪಿಸಲಾಯಿತು. ಆಗ ೫೯೨ ವಿದ್ಯಾರ್ಥಿನಿಯರು ಶಾಲೆಗೆ ಹೋಗುತ್ತಿದ್ದರು. ಅದೂ ಅಲ್ಲದೆ, ನಿಜವಾದ ಶಿಕ್ಷಣ ಪ್ರಸಾರವಾಗಬೇಕಾದರೆ, ನಾಡಿನ ಮಣ್ಣಿನ ಮಕ್ಕಳಾದ ಒಕ್ಕಲಿಗರು, ವೀರಶೈವರು ಮತ್ತು ವರ್ತಕರಲ್ಲಿ ಶಿಕ್ಷಣ ಹೆಚ್ಚಬೇಕೆಂಬ ವಿಚಾರವನ್ನು ಮೊದಲಿಗೆ ಕಂಡುಹಿಡಿದವರು ರಸೆಲ್‌ರವರು. ಅನುವಂಶಿಕವಾಗಿ ಶಾಲೆಗಳಿಗೆ ಹೋಗುತ್ತ ಬಂದು ನೌಕರಿಯನ್ನು ಮಾಡುತ್ತಿದ್ದ ಬ್ರಾಹ್ಮಣವರ್ಗದಲ್ಲಿ ಮಾತ್ರ ಶಿಕ್ಷಣ ಹೆಚ್ಚಾದರೆ ಶಿಕ್ಷಣ ಪ್ರಸಾರವಾದಂತಲ್ಲ. ಒಕ್ಕಲುಮಕ್ಕಳು ಮತ್ತು ವರ್ತಕ ವರ್ಗದಲ್ಲಿ ಶಿಕ್ಷಣ ಹೆಚ್ಚಾಗಬೇಕು.- ಈ ಮಾತಿನ ಬಗ್ಗೆ ಬರೆಯುತ್ತ ವೆಂಕಟ ರಂಗೋ ಕಟ್ಟಿಯವರು ಹೀಗೆ ಹೇಳುತ್ತಾರೆ :

---

೧ ಶಾಲಾ ಪತ್ರಕ- ಸಂ. ೧೧; ಸಂ. ३, ಪು. ೧३೦.

೨ ಜೀವನ ಶಿಕ್ಷಣ- ಡಾ. ಆರ್. ಸಿ. ಹಿರೇಮಠ- ಪು. ३೦.

೩ ಸಾಹಿತ್ಯಸಂಶೋಧನ : ದ. ರಾ. ಬೇಂದ್ರೆ- ಪು. ೧೮೧.

"The best illustration, however, of Mr. Russel's sound judgement and keen perception is to be seen in his encouragement to people, who were totally ignored by his predecessors, though they formed the greater part of the population of this Division." ೧

೧೮೬೬ ರ ಸುಮಾರಿಗೆ ಕಲಾದಗಿ ಜಿಲ್ಲೆಯಲ್ಲಿ ೪೬ ಶಾಲೆಗಳಿದ್ದವು. ಅವುಗಳಲ್ಲಿ "ಬಾಗಲಕೋಟೆಯ ಶಾಲೆ ಶ್ರೇಷ್ಠವು." "ಇನಸ್ಪೆಕ್ಟರರು ಕೆಲವು ಶಾಲೆಗಳಲ್ಲಿ ಬಹುಶಃ ಯಲ್ಲ ಲಿಂಗವಂತರ ಹುಡುಗರನ್ನೇ ನೋಡಿ, ರೈತ ಜನರಲ್ಲಿ ವಿದ್ಯೆಯ ಅಭಿರುಚಿಯು ಹುಟ್ಟುತ್ತ ನಡೆದಿದೆಂದು ಬಹು ಸಂತೋಷಿತರಾದರು." ೨

ಇದೂ ಅಲ್ಲದೆ, ರಸೆಲ್ ಸಾಹೇಬರು ಬರುವವರೆಗೆ ಕನ್ನಡ ಪುಸ್ತಕಗಳೆಲ್ಲ ಮುಂಬಯಿಯಲ್ಲಿಯೋ, ಮಂಗಳೂರಿನಲ್ಲಿಯೋ ಮುದ್ರಿತವಾಗುತ್ತಿದ್ದವು. ಕನ್ನಡ ಪುಸ್ತಕಗಳಿಗಾಗಿ ಬೇಕಾಗುವ ಅಚ್ಚಿನ ಮೊಳೆಗಳನ್ನು ಲಂಡನದಿಂದ ತರಿಸಲು ರಸೆಲ್‌ರು ಭಗೀರಥ ಪ್ರಯತ್ನ ಮಾಡಿದರು. ಕೊನೆಗೆ ಅವರ ಕೈಕೆಳಗಿನ ದಕ್ಷ ಅಧಿಕಾರಿಗಳಾಗಿದ್ದ ವೆಂಕಟ ರಂಗೋ ಕಟ್ಟಿಯವರು ಈ ಮೊಳೆಗಳನ್ನು ಸಿದ್ಧಪಡಿಸಿದಾಗ ರಸೆಲ್‌ರವರು ತುಂಬಾ ಆನಂದಪಟ್ಟು, ಬೆಳಗಾವಿಯಲ್ಲಿ ಮುದ್ರಣಾಲಯ ಸ್ಥಾಪಿಸಲು ಉತ್ತೇಜನ ಕೊಟ್ಟು, ಅವರಿಗೆ ಸರಕಾರದಿಂದ ೨೧೦೦ ರೂಪಾಯಿಗಳನ್ನು ಕೊಡಿಸಿದರಲ್ಲದೆ, ಸ್ವತಃ ತಮ್ಮ ಕೈಯಿಂದಲೂ ೨೦೦೦ ರೂಪಾಯಿಗಳನ್ನು ಕೊಟ್ಟರು. ತನ್ಮೂಲಕವಾಗಿ, ಕನ್ನಡ ಪುಸ್ತಕಗಳನ್ನು ಅಚ್ಚು ಹಾಕಲು ಅನುಕೂಲವಾಗಿ ಸನ್ ೧೮೪೯ ರಲ್ಲಿ ಒಂದು ಮುದ್ರಣಾಲಯವು ಸ್ಥಾಪಿತವಾಯಿತು.

ರಸೆಲ್‌ರವರು ತಮ್ಮ ಮಿತ್ರರಾದ ವರ್ಥ ಸಾಹೇಬರ ಹೆಸರಿನಲ್ಲಿ ವರ್ಥ ಬಹುಮಾನ ಎಂಬ ಒಂದು ಬಹುಮಾನದ ಏರ್ಪಾಡನ್ನು ಮಾಡಿದರೆಂದು ಹೇಳಲಾಯಿತಷ್ಟೇ. ಇದಕ್ಕೆ ಬೇಕಾದ ೧೦೦೦ ರೂಪಾಯಿ ಹಣವನ್ನು ಸ್ವತಃ ರಸೆಲ್‌ರವರೇ ಕೊಟ್ಟರು. ಈ ಬಗ್ಗೆ ಮುಂಬಯಿ ಸರಕಾರದ ಆಜ್ಞೆ ಹೀಗೆ ಹೊರಟಿದೆ :

"ಮುಂಬಯಿ ಕೋಟೆ

ತಾರೀಖು ೩ನೇ ಜುಲಾಯಿ ೧೮೭೩

ದಕ್ಷಿಣ ಭಾಗದ ಇ. ಇನ್‌ಸ್ಪೆಕ್ಟರರಾದ ರಸ್ಸೆಲ್ ದೊರೆಗಳಿಂದ ಕನ್ನಡ ಭಾಷೆಯಲ್ಲಿ ನಿಪುಣತೆಗಾಗಿ 'ವರ್ಥ ಪ್ರಾಯಿಜ್' ಯೆಂಬ ಹೆಸರಿನದೊಂದು ಇನಾಮಿನ ಸಲುವಾಗಿ ಕೊಡಲ್ಪಟ್ಟ ೧೦೦೦ ರೂಪಾಯಿಯ ಸರಕಾರೀ ಪ್ರಾಮಿಸರೀ ನೋಟಿಗೆ (ಹುಂಡೀ ಚೀಟಿಗೆ) ಪ್ರತಿವರ್ಷಕ್ಕೆ ಶೇಕಡಾ ೪ ರೂಪಾಯಿಯಂತೆ ಬರುವ ಬಡ್ಡಿಯ ಸಂಬಂಧದ ಅಸಲು ಕಾಗದ ಪತ್ರಗಳು ಸಹಿತವಾಗಿ ಕಳುಹಲ್ಪಟ್ಟ ಆಕ್ಟಿಂಗ ಡಾಯರೆಕ್ಟರ ಆಫ್ ಪಬ್ಲಿಕ ಇನಸ್ಟ್ರಕ್ಷನ್ ಇವರ ಪತ್ರ ನಂಬರು ೬೦೩ ತಾರೀಖು ೨೪ನೇ ಮೇ ಸನ್ನ ೧೮೭೩ ನೇ ಇಸವಿಯದು, ಸದರೀ ಹಣವನ್ನು ಸ್ವೀಕರಿಸುವದಕ್ಕೋಸ್ಕರ ಸರಕಾರದವರ ಮಂಜೂರಿಯ ಸಲುವಾಗಿ ಬರೆಯಲ್ಪಟ್ಟದ್ದು.

ಸರಕಾರದವರ ಪತ್ರ ನಂಬರು ೫೮೬ ಸನ್ನ ೧೮೭೩ ಇಸವಿಯದಕ್ಕೆ ಪ್ರತ್ಯುತ್ತರವಾಗಿ

---

೧ ಜೀವನ ಶಿಕ್ಷಣ– ಡಾ. ಆರ್. ಸಿ. ಹಿರೇಮಠ– ಪು. ೩೧.

೨ ಶಾಲಾ ಪತ್ರಕ : ೧೮೬೬.

ಅಫಿಶಿಯೇಟಿಂಗ ಡಿಪುಟೀ ಅಕೌಂಟಂಟ ಜನರಲ್ ಅವರಿಂದ ಕಳುಹಲ್ಪಟ್ಟ ರಿಪೋರ್ಟು ನಂಬರು ಎಲ್. ಎಫ್. ೨೯೪ ತಾರೀಖು ೧೯ ನೇ ಜೂನ ಸನ್ ೧೮೭೩ ನೇ ಇಸವಿಯದು– ರಸ್ಸೆಲ್ ದೊರೆಗಳು 'ವರ್ಥ ಪ್ರಾಯಿಜದ' ಸಲುವಾಗಿ ೧೦೦೦ ರೂಪಾಯಿಯನ್ನು ಸ್ವತಃ ಕೊಟ್ಟದ್ದರಿಂದ, ಆ ಹಣವನ್ನು ಸರಕಾರದವರು ಸ್ವೀಕರಿಸಿದರೆ. ಅದು ಸ್ವತಂತ್ರವಾದ ಲೋಕಲ್ ಫಂಡೆಂದು ದಾಖಲಾಗಲಿಕ್ಕೆ ಅಡ್ಡಿಯಿಲ್ಲೆಂಬ ತಾತ್ಪರ್ಯದ್ದು.

ಠರಾವು (ರಿಝೊಲ್ಯೂಶನ್) ಈ ಹಣವು ಸ್ವೀಕರಿಸಲ್ಪಡತಕ್ಕದ್ದು ಮತ್ತು ರಸ್ಸೆಲ್ ದೊರೆಗಳ ಸಾರ್ವಜನಿಕೋತ್ತೇಜಕ ಉದ್ದೇಶವನ್ನು ಕೊನೆಗಾಣಿಸುವದಕ್ಕೋಸ್ಕರ ಅದು ವೊಂದು ಲೋಕಲ್ ಫಂಡಾಗಿ ಯೆಣಿಸಲ್ಪಡತಕ್ಕದ್ದು." ೧

ಇದೂ ಅಲ್ಲದೆ, ಆಡಳಿತದ ದೃಷ್ಟಿಯಿಂದಲೂ ರಸೆಲ್ ಸಾಹೇಬರು ಆಡಳಿತದಲ್ಲಿ ಹಿಡಿತವನ್ನು ತರಲು ಬಹು ವಿಧವಾಗಿ ಪ್ರಯತ್ನಪಟ್ಟರು. ಆದಿನ 'ಶಾಲಾ ಪತ್ರಕ'ದಲ್ಲಿ ಪ್ರಕಟವಾಗಿದ್ದ ಪರಿಪತ್ರಗಳನ್ನು ನೋಡಿದರೆ, ರಸೆಲ್‌ರು ನಿಧಾನವಾಗಿ ಆಡಳಿತದಲ್ಲಿ ಯಾವ ರೀತಿ ಒಂದು ಪದ್ಧತಿಯನ್ನೂ, ಕ್ರಮವನ್ನೂ, ಬಿಗುವನ್ನೂ ತರಲು ಯತ್ನಿಸಿದರೆಂಬುದರ ಅರಿವುಂಟಾಗುತ್ತದೆ.

೧೮೬೬ ರ ಮೊದಲು ವಿದ್ಯಾರ್ಥಿಗಳು ವರ್ಗಗಳಿಗೆ ಯಾವಾಗ ಬೇಕಾದಾಗ ಹೆಸರು ಹಚ್ಚಬಹುದಾಗಿತ್ತು. ಇದರಿಂದ ಅನೇಕ ಅನಾನುಕೂಲತೆಗಳು ಉಂಟಾಗುತ್ತಿದ್ದವು. ಹಲವು ವಿದ್ಯಾರ್ಥಿಗಳು ಅಭ್ಯಾಸದಲ್ಲಿ ಮುಂದು ಹೋಗಿದ್ದರೆ, ಇನ್ನು ಹಲ ವಿದ್ಯಾರ್ಥಿಗಳು ವರ್ಗಕ್ಕೆ ಹೊಸದಾಗಿ ಸೇರಿದ್ದರಿಂದ ಅಭ್ಯಾಸದಲ್ಲಿ ಹಿಂದು ಬೀಳುತ್ತಿದ್ದರು. ಆದ್ದರಿಂದ ಒಂದೇ ಇಯತ್ತೆಯ ವಿದ್ಯಾರ್ಥಿಗಳಲ್ಲಿ ಬೇರೆ ಬೇರೆ ಗುಂಪುಗಳನ್ನು ಮಾಡಬೇಕಾಗುತ್ತಿತ್ತು. ಅದಕ್ಕಾಗಿ ೧೮೬೬ ರ ಅಗಸ್ಟ ೯ ರಂದು ರಸೆಲ್‌ರು ಈ ಪರಿಪತ್ರವನ್ನು ಹೊರಡಿಸಿದರು :

" ಅಭ್ಯಾಸಕ್ಕಾಗಿ ಸರಕಾರದ ಶಾಲೆಗಳಲ್ಲಿ ಬರುವ ವಿದ್ಯಾರ್ಥಿಗಳನ್ನು ಆಗಾಗ್ಯೆ ಕರಕೋಬವುದು ವಿದ್ಯಮಾನದಲ್ಲಿ ವಾಡಿಕೆಯಾಗಿ ಸಾಗುತ್ತಾ ಇದೆ. ಆದರೆ, ಅದರಿಂದ ಅಪಕ್ರಮ ಉಂಟಾಗಿ, ಎರಡು ವರ್ಗಗಳಿಂದ ಸಾಗುವಲ್ಲಿ ನಾಲ್ಕು ವರ್ಗಗಳನ್ನು ಮಾಡಿ ಪಂತರುಗಳಿಗೆ ನಿರರ್ಥಕವಾಗಿ ಹೊತ್ತುಗಳಿಯ ಬೇಕಾಗುತ್ತದೆ. ಇಷ್ಟೇ ಮಾತ್ರವಲ್ಲ, ವಿದ್ಯಾರ್ಥಿಗಳ ಅಭ್ಯಾಸವು ಸಹ ವರ್ಧಿಸದೆ ಹೋಗುವದು. ಆದ್ದರಿಂದ ಆ ವಾಡಿಕೆ ನಿಲ್ಲಿಸಿಬಿಟ್ಟಿದೆ........ ೨ ನೇ ವರ್ಗದ ಅಂಗ್ಲೊ ವರ್ನಾಕುಲರ ಸಾಲಿಗಳಲ್ಲಿ ಕರಕೊಳ್ಳತಕ್ಕ ವಿದ್ಯಾರ್ಥಿಗಳನ್ನು ಒಂದು ವರುಷಕ್ಕೆ ಎರಡಾವರ್ತಿ, ಅಂದರೆ, ಜ್ಯಾನೆವರೀ ಹಾಗೂ ಜುಲೈ ತಿಂಗಳುಗಳ ಆರಂಭದಲ್ಲಿ ಕರಕೊಳ್ಳಬೇಕು." ೨

ರಸೆಲ್ ಸಾಹೇಬರು ಕಚೇರಿಯ ಶಿಸ್ತನ್ನೂ ಬಿಗಿಗೊಳಿಸಿದರು. ಅಪ್ಪಣೆಯಿಲ್ಲದೆ ಗೈರು ಹಾಜರು ಉಳಿದ ಶಿಕ್ಷಕರಿಗೆ ತಕ್ಕ ದಂಡನೆಯನ್ನು ವಿಧಿಸಿದರು. ಮೇ ೧೮೬೭ರ ಈ ಕೆಳಗಿನ ಪರಿಪತ್ರವನ್ನು ಈ ದೃಷ್ಟಿಯಿಂದಲೂ ಮತ್ತು ಅಂದು ಆಡಳಿತ ಭಾಷೆಯಾಗಿ ರೂಪಗೊಳ್ಳಹತ್ತಿದ್ದ ಕನ್ನಡ ಶೈಲಿಯ ಮಾದರಿಯೆಂಬ ದೃಷ್ಟಿಯಿಂದಲೂ ಉದ್ಧರಿಸಬಹುದು :

---

೧ ಕನ್ನಡ ಶಾಲಾ ಪತ್ರಕವು : ಅಗಸ್ಟ ೧೮೭೩ ಪು. ೩೯೭–೩೯೮.

೨ ಕರ್ಮವೀರ ವಿಶೇಷ ಸಂಚಿಕೆ : ೧೯೭೧. ಉತ್ತರ ಕರ್ನಾಟಕದಲ್ಲಿ ಶತಮಾನದ ಹಿಂದೆ ಕನ್ನಡ ಶಿಕ್ಷಣ– ರಾ. ಯ. ಧಾರವಾಡಕರ– ಪು. ೨೧.

"ಧಾರವಾಡ ಜಿಲ್ಲೆದೊಳಗಿನ ಯಾವತ್ತು ಸರಕಾರಿ ಶಾಲೆಗಳ ಮಾಸ್ತರರಿಗೆ–

ಕಸಬಾ ಹಾನಗಲ ಶಾಲೆಯೊಳಗಿನ ಮೊದಲನೇ ಮುದತನೀಸ ಸಿದ್ದಪ್ಪಾ ಬಿನ ಕರಲಿಂಗಪ್ಪಾ ಯವರು, ಬಿಗರ ಹುಕುಮಿನಿಂದಾ ಕೆಲಸವನ್ನು ಬಿಟ್ಟು ಹೊರಟು ಹೋದ ತಪ್ಪಿನ ದಶಿಯಿಂದಾ, ಅವರಿಗೆ ೨೦ ರೂಪಾಯಿ ದಂಡ ಮಾಡೋದರಲ್ಲಿ ಬಂದಿರುತ್ತದೆ. ಇದನ್ನು ನೆನಪಿನಲ್ಲಿಟ್ಟು, ಜಿಲ್ಹಾ ಮಜಕೂರದೊಳಗಿನ ಯಾವತ್ತು ಪಂತರುಗಳು ಮುದತನೀಸ ಮೊದಲಾದವರು ಇತ್ತಲಾಗಿನ ಅಪ್ಪಣೆಯು ಹೊರ್ತು ಕೆಲಸ ಬಿಟ್ಟು ಹೋಗದ ಹಾಗೆ ತಜವೀಜ ಇಡಬೇಕು." ೧

ನೌಕರಿಯಲ್ಲಿ ಕೆಲಸವನ್ನು ನಿರ್ಲಕ್ಷ ಮಾಡುವದೂ, ಫೀ ಹಣ ಮೊದಲಾದವುಗಳನ್ನು ಸರಕಾರಕ್ಕೆ ಸರಿಯಾಗಿ 'ಭರಣಾ' ಮಾಡದಿರುವುದೂ ಅಪರಾಧ. ಇದು ಶಿಕ್ಷಾರ್ಹ. ೨೬ ನವಂಬರ ೧೮೬೬ ರ ಪರಿಪತ್ರದಲ್ಲಿ ಹೀಗಿದೆ :

"ಕಸಬಾ ನಿಡಗುಂದಿ ತಾಲೂಕ ಮುನಗೋಳಿಯಲ್ಲಿಯ ಹೆಡ್ಡಮಾಸ್ತರನಾದ ಅನಂತ ಗಣೇಶ ಇವನು ಹಾಜರಿ ರಜಿಷ್ಟರ ಮುಂತಾದ್ದರ ಬರಿಯೋಣ ಯಷ್ಟೋ ತಿಂಗಳ ಮಟ್ಟಿಗೆ ಬಿಟ್ಟೇ ಬಿಟ್ಟು ಫೀ ಹಣಾ ಖಜಾನಿಗೆ ಭರಣಾ ಮಾಡದೆ ತನ್ನ ಸ್ವಕಾರ್ಯಕ್ಕೆ ಬಳಸಿಕೊಂಡನು. ಹಾಂಗು ಇತ್ತಕಡೆಗೆ ಬರತಕ್ಕಂಥಾ ಕಾಗದ ಪತ್ರಗಳು ಏನೇನೂ ಕಳುಹಿಸಲಿಲ್ಲ. ಆದಕಾರಣಾ ಮೇಹರಬಾನ ಇ. ಇನಸ್ಪೆಕ್ಟರ ಸಾಹೇಬ ಬಾಹದ್ದೂರ ದಕ್ಷಿಣ ಭಾಗ ಇವರು ಸದರಿ ಇಸಮಿಗೆ ಶಾಲಾ ಖಾತೆಯೊಳಗಿಂದ ಬರತರ್ಫ ಮಾಡಿದರು. ಈ ವೃತ್ತಾಂತವನ್ನು ಸರ್ವರಿಗೆ ತಿಳಿಯೋದಕೋಸ್ಕರ ಪ್ರಸಿದ್ಧ ಮಾಡಲ್ಪಟ್ಟಿದೆ." ೨

ಮೇಲಧಿಕಾರಿಯಾದವನು ದುಷ್ಟನಿಗ್ರಹ ಮಾಡಬೇಕು; ಶಿಷ್ಟಪರಿಪಾಲನೆ ಮಾಡಬೇಕು. ಅಂದರೆ ಶಾಸನಕ್ಕೊಂದು ತೇಜಸ್ಸಿರುತ್ತದೆ. ಇಲ್ಲದಿದ್ದರೆ, ಬಾಲವಿದ್ದುದೆಲ್ಲ ಒಂದೇ ಎಂದು ಎಲ್ಲವನ್ನೂ ಒಂದೇ ಲಾಯದಲ್ಲಿ ಕಟ್ಟುವ ಸರದಿ ಬರುತ್ತದೆ. ಅಷ್ಟೇ ಅಲ್ಲ; ಮನುಷ್ಯನ ಕಾರ್ಯಕ್ಷಮತೆ, ಅವನ ಆಯುಷ್ಯದಂತೆ, ದಿನದಿನಕೆ ಕುಂದುವದಲ್ಲದೆ, ಬೆಳೆಯದು. ಪಾತ್ರೆಯನ್ನು ಪ್ರತಿನಿತ್ಯ ಬೆಳಗಿದಂತೆ, ಕಾರ್ಯಕ್ಷಮತೆಯನ್ನೂ ಪ್ರತಿನಿತ್ಯ ಪರೀಕ್ಷೆಗೆ ಒಳಪಡಿಸಿಕೊಂಡು, ಅದನ್ನು ಚೈತನ್ಯಪೂರ್ಣವಾಗಿ ಇಡಬೇಕಾಗುತ್ತದೆ. ರಸೆಲ್ ಸಾಹೇಬರು ವಿದ್ಯಾಧಿಕಾರಿಗಳಾಗಿದ್ದಾಗ, ಸನ್ ೧೮೬೭ ರಲ್ಲಿ ಇಂಥ ಘಟನೆಯೊಂದು ನಡೆಯಿತು. ಒಬ್ಬ ಶಿಕ್ಷಕ ಒಳ್ಳೆಯ ಕೆಲಸ ಮಾಡಿದನೆಂದು ಅವನಿಗೆ ಬಡತಿ ಕೊಡ ಲಾಯಿತು. ಆದರೆ, ಮುಂದೆ ಕೆಲವೇ ದಿವಸಗಳಲ್ಲಿ ಅವ ನಿರುಪಯುಕ್ತನಾದ. ಆಗ ಅವನಿಗೆ ಹಿಂಬಡತಿ ಮಾಡಬೇಕಾಯಿತು. ದಿನಾಂಕ ೯–೨–೧೮೬೭ ರ ಪರಿಪತ್ರವೊಂದು ಹೀಗೆ ಹೇಳುತ್ತದೆ :

"ಅಜಂ ಹಣಮಂತ ಬಾಳಾಜಿ ತಾಳಿಕೋಟಕರಯಿವರು ನರೆಗಲ್ಲ ಸಾಲಿಯ ಕೆಲಸಾ ವಳ್ಳೆ ರೀತಿ ಯಿಂದಾ ನಡಸಿದ್ದರಿಂದಾ ಅವರನ್ನು ಕಳೆದ ಆಗಸ್ಟ ತಿಂಗಳಲ್ಲಿ ಧುಂಡಶಿಗೆ ಬಡತಿ ಸಂಬಳ ಮ್ಯಾಲೆ ನೇಮಿಸಿತ್ತು. ತಾ॥ ೮ ನೇ ಪೆಬ್ರುವರಿ ದಿವಸಾ ಮೆಹರ್ಬಾನ ಯಿ॥ ಯಿ॥ ಧೊರೆಗಳು ಹಾಂಗು ನಾವು ಶಾಲೆ ಪರೀಕ್ಷೆ ಧುಂಡಶಿಗೆ ಹೊದಾಗ್ಯೆ ಸದರಿ ಮಾಸ್ತರರು ತಮ್ಮ ಕೆಲಸದ ಕಡೆ ಯೇನೇನೂ ಲಕ್ಷವನ್ನು ಕೊಟ್ಟಿಲ್ಲಾ ಹಿಂಗೆ ತೋರಿಬಂತು. ಪಟ್ಟಿ ಸರಕ್ಯೂಲರದಂತೆ ಸಾಲಿಯೊಳಗೆ ವೇಳಾಪತ್ರಿಕೆ ಹಚ್ಚಿ ಅದರಂತೆ ಅಭ್ಯಾಸವನ್ನು ನಡ್ಸರಿಲ್ಲಾ. ಮತ್ತು ನಾಲ್ಕು ದಿವ್ಸದ ಹಜರಿ ತುಂಬಿದ್ದಿಲ್ಲಾ.

೧ ಕರ್ಮವೀರ ವಿಶೇಷ ಸಂಚಿಕೆ ೧೯೭೦– ಉತ್ತರ ಕರ್ನಾಟಕದಲ್ಲಿ ಶತಮಾನದ ಹಿಂದೆ ಕನ್ನಡ ಶಿಕ್ಷಣ– ರಾ. ಯ. ಧಾರವಾಡಕರ– ಪು. ೨೨.

೨ ಅದೇ ಪು. ೨೨.

ಯಿದರ ದಶೀದಾ ಅವರಿಗೆ ೮ ರೂಪಾಯಿ ದಂಡ ಮಾಡಿರತದೆ. ಇದರ ಕಡಿಗೆ ನಮ್ಮ ಶಾಲೆದೊಳಗಿನ ಯಾವತ್ತು ಮಾಸ್ತರರು ಚನ್ನಾಗಿ ಲಕ್ಷಕೊಟ್ಟರು ಓಂಗ ಅಪೆಕ್ಷಿಸುತ್ತೆವೆ. " ೧

ಶಿಕ್ಷಕನಾಗಬಯಸುವವ ಕಲಿಯಲಿಕ್ಕೆ ಹಿಂಜರಿಯಬಾರದು. ಶಿಕ್ಷಕನಾದವ ಆಯುಷ್ಯ ದುದ್ದಕ್ಕೂ ವಿದ್ಯಾರ್ಥಿಯೇ. ಅದೂ ಅಲ್ಲದೆ, ಅವನ ಚಾರಿತ್ರ್ಯವೂ ಸದಾ ಪರಿಶುದ್ಧವಾಗಿರಬೇಕು. ಸನ್ ೧೮೬೮ ರಲ್ಲಿ ಬೆಳಗಾವಿ ಜಿಲ್ಹೆಯಲ್ಲಿ ಒಂದು ಘಟನೆ ನಡೆಯಿತು. ಆಗ ಡೆಪ್ಯುಟಿಗಳಾಗಿದ್ದ ಚೆನಬಸಪ್ಪನವರು ಒಂದು ಶಾಲೆಗೆ ಹೋದಾಗ ಕಂಡ ಘಟನೆಯನ್ನು ರಸೆಲ್‌ರವರಿಗೆ ವರದಿ ಮಾಡಿದರು. ರಸೆಲ್‌ರು ಚೆನಬಸಪ್ಪನವರು ಸೂಚಿಸಿದ ದಂಡನೆಯನ್ನು ಎತ್ತಿ ಹಿಡಿದರು. ಈ ಬಗ್ಗೆ ಚೆನಬಸಪ್ಪನವರು ಸನ್ ೭–೧೨–೧೮೬೮ ರಲ್ಲಿ ಹೊರಡಿಸಿದ ಪರಿಪತ್ರ ಹೀಗಿದೆ :

" ಬೆಳಗಾವಿ ಜಿಲ್ಲೇದೊಳಗಿನ ಯಾವತ್ತೂ ಸ್ಕೂಲ ಮಾಸ್ತರರಿಗೆ ತಿಳುಹಿಸುವದೇನಂದರೆ–ಬೆಳಗಾವೀ ತಾಲೂಕಿನಲ್ಲಿರುವ ಬಾಗೋಡಿ ಸಾಲಿಯ ಹೆಡಮಾಸ್ತರನಾದ ರಾಘವೇಂದ್ರ ಅಪ್ಪಾಜಿ ಈತನು ಪ್ರಸಿದ್ಧ ರೀತಿಯಿಂದ ಹೆಂಗಸನ್ನು ಇಟ್ಟುಕೊಂಡದ್ದು ತಿಳಿಯಬಂದ ಕಾರಣ ನಾವು ಮೆಹರ್ಬಾನ ಇನಸ್ಪೇಕ್ಟರ ಸಾಹೇಬರವರ ಕಡಿಗೆ ಸದರಿ ಮಾಸ್ತರನ ಬಡತರ್ಫ ಮಾಡಬೇಕೆಂದು ಬರಿಯಲಾಗಿ ಸಾಹೇಬರು ನಾವು ಬರದಂತೆ ಮಂಜುರ ಮಾಡಿದ ಕಾರಣಾ ಸದರಿ ರಾಘವೇಂದ್ರ ಅಪ್ಪಾಜಿಯನ್ನು ಬರತರ್ಫ ಮಾಡಿದೆ. ಆದರೆ ಇದರ ಕಡಿಗೆ ಮಾಸ್ತರ ಜನರು ವಿಶೇಷ ಲಕ್ಷ್ಯ ಕೊಡಬೇಕು ತಿಳಿಯುವದು. ತಾರೀಖು ೭ ನೇ ಮಾಹೆ ದಿಶಂಬರ ಸಂನ ೧೮೬೮ ಇಸವಿ ಮುಕಾಮ ಹಂಪಿಹೊಳಿ ತಾಲೂಕ ನವಲಗುಂದ ಜಿಲ್ಲಾ ಧಾರವಾಡ " ೨

ಹೀಗೆ ರಸೆಲ್‌ರವರು ಶೈಕ್ಷಣಿಕವಾಗಿ, ಕನ್ನಡ ಭಾಷೆ, ಸಂಸ್ಕೃತಿಗಳಿಗೆ ಒಂದು ಸ್ಥಾನವನ್ನು ಒದಗಿಸಿಕೊಟ್ಟದ್ದಲ್ಲದೆ, ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ನಿರ್ಮಿಸಲು ಸಹಾಯಕರಾಗಿಯೂ, ಈ ಪವಿತ್ರವಾದ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವವರು ಚಾರಿತ್ರ್ಯಶುದ್ಧಿಯುಳ್ಳವರಾಗಿ ಇರುವ ಹಾಗೆಯೂ ಬಹುವಿಧ ಪ್ರಯತ್ನ ಮಾಡಿದರು. ಇದು ಅವರ ಬುದ್ಧಿಮತ್ತೆ ಮತ್ತು ವ್ಯಕ್ತಿತ್ವಗಳನ್ನು ತೋರಿಸುತ್ತದೆ.

ಧಾರವಾಡ ಭಾಗದವರಿಗಂತೂ ರಸೆಲ್‌ರು ಮನೆ ಮಾತಾಗಿದ್ದರು. ಅವರು ಸುಮಾರು ೧೦೦ ವರುಷಗಳ ಹಿಂದೆ ಪ್ರಾರಂಭಿಸಿದ ವರ್ಷ ಬಹುಮಾನ ಪರೀಕ್ಷೆಗಳು ಮೊನ್ನೆ ಮೊನ್ನೆಯವರೆಗೂ ಧಾರವಾಡದಲ್ಲಿ ನಡೆಯುತ್ತಿದ್ದವು. ಅಂತಲೇ ರಸೆಲ್‌ರು ೧೮೯೨ರ ಡಿಸೆಂಬರ ತಿಂಗಳಲ್ಲಿ ಜರ್ಮನಿಯಲ್ಲಿ ಕ್ರೈಸ್ತವಾಸಿಗಳಾದಾಗ ಈ ವರ್ತಮಾನವನ್ನು ಕೇಳಿದ ಹದಿನೈದು ದಿವಸಗಳಲ್ಲಿಯೇ, ಅಂದರೆ, ೧೮೯೩ರ ಜನೆವರಿ ೧೫ನೆಯ ತಾರೀಖಿನ ದಿವಸ ಧಾರವಾಡದ ಕಿಲ್ಲೆಯ ಬಯಲಲ್ಲಿ ಸಭೆ ಕೂಡಿ "ದೊಡ್ಡ ಮನಸ್ಸಿನವರೂ, ಪ್ರಜಾ ಕಲ್ಯಾಣತತ್ಪರರೂ ಆದ ರಸೆಲ್ ಸಾಹೇಬರಿಗೆ ಜಗದೊಡೆಯನಾದ ಪರಮಾತ್ಮನು ಉತ್ತಮ ಗತಿಯನ್ನು ಕೊಡಲೆಂದೂ, ಅವರ ನಿಧನಕ್ಕಾಗಿ ಅತ್ಯಂತ ದುಃಖವನ್ನು ತೋರಿಸಿ, ಅವರ ಸ್ಮಾರಕವಾಗಿ ಏನಾದರೂ ಮಾಡಬೇಕೆಂದೂ " ಧಾರವಾಡದ ನಾಗರಿಕರು ಹಾರೈಸಿದರು.

ಹೀಗೆ ಹುಟ್ಟು ಕನ್ನಡಿಗರಾಗಿರದಿದ್ದರೂ, ಕನ್ನಡಿಗರಿಗಿಂತ ಕನ್ನಡದ ಭಾಷೆ ಮತ್ತು ಸಂಸ್ಕೃತಿಗಳ ಬಗೆಗೆ ಹೆಚ್ಚಿನ ಅಭಿಮಾನವನ್ನು ತಾಳಿ, ಕನ್ನಡಕ್ಕೆ ಮರ್ಯಾದೆ ತಂದುಕೊಟ್ಟ ಈ ಆಡಳಿತಗಾರನ ಸೇವೆ ಅವಿಸ್ಮರಣೀಯವಾಗಿದೆ.

—

೧ ಶಾಲಾಪತ್ರಕ– ೧೮೬೬.

೨ ಅದೇ ಪು. ೨೩.

ಹುಯಿಲಗೋಳ ಭುಜಂಗರಾಯರು

(೧೮೩೧–೧೮೮೫)

೧೯೨೦ ರಲ್ಲಿ ಜರುಗಿದ ಬಳ್ಳಾರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ದಿವಂಗತ ರೊದ್ದ ಶ್ರೀನಿವಾಸರಾಯರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಹೀಗೆ ಹೇಳಿದರು :

"ಈಗ ಮುಂಬಯಿ ಕರ್ನಾಟಕವೆಂದು ಹೆಸರು ಹೊಂದಿರುವ ಧಾರವಾಡ, ಬೆಳಗಾಂವ, ವಿಜಾಪುರ ಮತ್ತು ಕಾರವಾರ ಜಿಲ್ಲೆಗಳಿಗೆ ದಕ್ಷಿಣ ಮಹಾರಾಷ್ಟ್ರವೆಂಬ ಹೆಸರು ಮೊನ್ನೆ ಮೊನ್ನಿನವರೆಗೂ ಅಸ್ತಿತ್ವದಲ್ಲಿತ್ತು. ಈಗ ನಾಲ್ವತ್ತು ವರ್ಷಗಳ ಕೆಳಗೆ ಅಲ್ಲಿ ಮರಾಠೀ ಭಾಷೆಯ ಶಾಲೆಗಳೇ ಇದ್ದವು. ಆದರೆ ನಮ್ಮ ಕನ್ನಡಿಗರ ಸುದೈವದಿಂದ ಆಗಿನ ಕಾಲಕ್ಕೆ ಉದಯ ಹೊಂದಿದ ಸ್ವ. ವಾ. ಭುಜಂಗರಾವ ಹುಯಿಲಗೋಳ, ಕೈ. ವಾ. ಚೆನಬಸಪ್ಪ ಧಾರವಾಡ, ಕೈ. ವಾ. ಗಂಗಾಧರ ಮಡಿವಾಳೇಶ್ವರ ತುರಮರಿ ಮೊದಲಾದ ಕನ್ನಡ ಭಾಷಾಭಿಮಾನಿಗಳ ವಿಶ್ವಪ್ರಯತ್ನದಿಂದ ಆ ಭಾಗದಲ್ಲಿ ಕನ್ನಡ ಭಾಷೆಯ ಶಾಲೆಗಳು ಉದಯ ಹೊಂದಿದವು. ಆಗಿನ ಕಾಲದ ಆ ಮಹನೀಯರು ಕನ್ನಡ ಭಾಷೆಗಾಗಿ ಟೊಂಕ ಕಟ್ಟಿ ಬಡೆದಾಡಲು ಸಿದ್ಧರಾಗದಿದ್ದರೆ, ಮುಂಬಯಿ ಕರ್ನಾಟಕದ ಈ ನಾಲ್ಕು ಜಿಲ್ಲೆಗಳಲ್ಲಿ ಮರಾಠೀ ಭಾಷೆಯ ವರ್ಚಸ್ಸೇ (ಉಳಿಯುತ್ತಿತ್ತೆಂದು).... ಹೇಳಲು ನನಗಂತೂ ಅಡ್ಡಿ ತೋರುವದಿಲ್ಲ." [1]

ದಿವಂಗತ ಮುದವೀಡು ಅವರು ಕನ್ನಡವನ್ನುದ್ಧರಿಸಿದ ಪುಣ್ಯಪುರುಷರ ವಿಷಯ ಹೇಳುವಾಗ ಹುಯಿಲಗೋಳ ಭುಜಂಗರಾಯರ ಹೆಸರಿನ ಉಲ್ಲೇಖವನ್ನೂ ಮಾಡುತ್ತಾರೆ. ಹೀಗಾಗಿ, ಕನ್ನಡ ಕೋಟೆಯ ರಕ್ಷಣೆಗಾಗಿ ಹೋರಾಡಿದ ವೀರ ಭಟರಲ್ಲಿ ಭುಜಂಗರಾಯರೂ ಒಬ್ಬರಾಗಿದ್ದಾರೆ.

ಭುಜಂಗರಾಯರ ಮನೆತನ ಮದ್ರಾಸ ಪ್ರಾಂತ್ಯದಿಂದ ಬಂದುದೆಂದು ಹೇಳುತ್ತಾರೆ. ಈ ಮನೆತನದವರಿಗೆ ಮದ್ರಾಸದ ಫೋರ್ಟ ಸೆಂಟ ಜಾರ್ಜದ ಹತ್ತಿರ ಭೂಮಿಯೂ ಇದ್ದಿತೆಂದು ಹೇಳುತ್ತಾರೆ. ಧಾರವಾಡ ಕಡೆಗೆ ಬಂದವರೆಂದರೆ, ಭುಜಂಗರಾಯರ ಮುತ್ತಜ್ಜರಾದ ಶ್ರೀನಿವಾಸರಾಯರು. ಇವರು ಕಂಪನಿ ಸರಕಾರದ ಕೂಡ ಮುಲ್ಕಿ ಅಧಿಕಾರಿಗಳಾಗಿ ಬಂದಿರಬೇಕು. ಇವರ ಮಗ ಹಣಮಂತ ರಾಯರು ಸರಕಾರಿ ನೌಕರಿಯಲ್ಲಿ ದಫ್ತರದಾರರಾಗಿ (ಅಂದರೆ ಕಲೆಕ್ಟರರ ಪರ್ಸನಲ್ ಅಸಿಸ್ಟಂಟರಾಗಿ) ಕೆಲಸ ಮಾಡುತ್ತಿದ್ದರು. ಇವರ ಕಾಲಕ್ಕೇ, ಈ ಮನೆತನಕ್ಕೆ ಧಾರವಾಡ ಜಿಲ್ಲೆಯ ಹುಯಿಲಗೋಳ, ಕೇಸಾಪುರ ಮತ್ತು ನಾಗರಾವಿ ಗ್ರಾಮಗಳು ಜಾಗೀರುಗಳಾಗಿ ದೊರೆತವು. ಈ ಹಣಮಂತರಾಯರ ಮಕ್ಕಳಾದ ಕೃಷ್ಣರಾವ ಎನ್ನುವವರು ಪುಣೆಯಲ್ಲಿ ದಫ್ತರದಾರರಾಗಿ ಕೆಲಸ ಮಾಡಿದರು. ಇವರ

---

[1] ಅಧ್ಯಕ್ಷರ ಭಾಷಣಗಳು ಕನ್ನಡ ಸಾಹಿತ್ಯ ಪರಿಷತ್ತು (೧೯೬೦) ಪು. ೮೩.

ಮಕ್ಕಳೇ ಭುಜಂಗರಾಯರು. ಭುಜಂಗರಾಯರ ಪತ್ನಿ ಸಾಂಗಲಿಯ ಧಾರವಾಡಕರ ನಾಯಕರ ಮನೆತನದ ನರಸುಬಾಯಿ ಎಂಬವರು.

ಭುಜಂಗರಾಯರ ಶಿಕ್ಷಣ ಪುಣೆಯ ಡೆಕ್ಕನ್ ಕಾಲೇಜದಲ್ಲಾಯಿತು. ಅವರ ಮನೆಯ ವಾಚನಾಲಯದಲ್ಲಿ ದೊರಕಿದ ಎಬರಕ್ರೋಂಬಿ ಕೃತ 'ಇಂಟೆಲೆಕ್ಚುಯಲ್ ಪಾವರ್ಸ' ಎಂಬ ಪುಸ್ತಕದ ಮೇಲೆ ಶ್ರೀಯುತರು ಸನ್ ೧೮೫೨ ರಲ್ಲಿ ವಾರ್ಷಿಕ ಪರೀಕ್ಷೆ ಪಾಸಾದ ಬಗ್ಗೆ ಕೊಟ್ಟ ಬಹುಮಾನ ಎಂಬ ಉಲ್ಲೇಖವಿದೆ. ಶ್ರೀಯುತರು ಲಿಟಲ್‌ಗೋ ಪರೀಕ್ಷೆ ಪಾಸಾಗಿದ್ದರು.

ತಮ್ಮ ಶಿಕ್ಷಣ ಮುಗಿದ ನಂತರ ಶ್ರೀ ಭುಜಂಗರಾಯರು ೧೪-೭-೧೮೫೬ ರಿಂದ ಮೂರು ತಿಂಗಳು ೭೫ ರೂಪಾಯಿ ಪಗಾರದ ಮೇಲೆ ಮುಂಬಯಿಯಲ್ಲಿ ಶಿರಸ್ತೇದಾರರಾಗಿಯೂ, ೨೫-೧೧-೧೮೫೬ ರಿಂದ ೧೮ ತಿಂಗಳು ಕಾಲ ೧೦೦ ರೂಪಾಯಿ ಪಗಾರದ ಮೇಲೆ ಸುಪರಿಂಟೆಂಡಿಂಗ ಎಂಜನಿಯರ್ ಎಸ್. ಡಿ. ಅವರ ಹೆಡ್ ಕ್ಲಾರ್ಕರೆಂದೂ, ೨೪-೧೧-೧೮೫೮ ರಿಂದ ೨೦ ತಿಂಗಳುಗಳ ವರೆಗೆ ೬೦ ರೂಪಾಯಿ ಪಗಾರದ ಮೇಲೆ ಧಾರವಾಡ ಆಂಗ್ಲೋ ವರ್ನಾಕ್ಯುಲರ ಶಾಲೆಯ ಹೆಡ್ ಮಾಸ್ತರರೆಂದೂ, ಅನಂತರ ಆರು ತಿಂಗಳುಗಳ ವರೆಗೆ ೧೦೦ ರೂಪಾಯಿ ಪಗಾರದ ಮೇಲೆ ಉತ್ತರ ಕನ್ನಡ ಜಿಲ್ಹೆಯಲ್ಲಿ ಪೋಲೀಸ ಇನಸ್ಪೆಕ್ಟರರೆಂದೂ, ಅನಂತರ ಸುಮಾರು ೫ ವರ್ಷ ಹತ್ತಿಯ ವ್ಯಾಪಾರ-ವ್ಯವಹಾರದಲ್ಲೂ ಕೆಲಸ ಮಾಡಿ, ಸನ್ ೧೮೬೬ರ ಮಾರ್ಚ ೨೩ ರಂದು ಬೆಳಗಾವಿಯ ಟ್ರೇನಿಂಗ ಕಾಲೇಜಿನ ಪ್ರಥಮ ಅಸಿಸ್ಟಂಟ ಮಾಸ್ತರರೆಂದು ನೇಮಕವಾದರು. ಶ್ರೀಯುತರು ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾಗಿ ನೇಮಕ ಹೊಂದಿದ್ದು ೧-೭-೧೮೬೭ ರಂದು. ಆಗ ಇವರ ಪಗಾರ ೧೫೦ ರೂಪಾಯಿ ಇದ್ದಿತು.

ಭುಜಂಗರಾಯರು ಪ್ರಿನ್ಸಿಪಾಲರಾಗಿದ್ದಾಗ ಟ್ರೇನಿಂಗ ಕಾಲೇಜು ಬೆಳಗಾವಿಯಲ್ಲಿಯೇ ಇದ್ದಿತು. ಆಗ ಕಾಲೇಜಿನಲ್ಲಿ ೫೬ ವಿದ್ಯಾರ್ಥಿಗಳಿದ್ದರು. ಹೆಚ್ಚಾಗಿ ಮರಾಠಿ ಮಾತನಾಡುವ ವಿದ್ಯಾರ್ಥಿಗಳೇ ಕಾಲೇಜಿಗೆ ಬರುತ್ತಿದ್ದರು. ಈ ಮರಾಠಿ ವಾತಾವರಣ ಬದಲಾಗಲು, ಡೆಪ್ಯುಟಿ ಚೆನಬಸಪ್ಪನವರ ಹಾಗೆ, ಭುಜಂಗರಾಯರೂ ತುಂಬಾ ಪ್ರಯತ್ನಪಟ್ಟರು. ಟ್ರೇನಿಂಗ ಕಾಲೇಜು ಬೆಳಗಾವಿಯಿಂದ ಧಾರವಾಡಕ್ಕೆ ವರ್ಗವಾಗುವಂತೆ ಸೂಚಿಸಿದವರು ರಸೆಲ್ ಮತ್ತು ಭುಜಂಗರಾಯರೇ. ಅವರು ಈ ಬಗೆಗೆ ಸನ್ ೧೮೬೮ ರಲ್ಲಿ ಸರಕಾರಕ್ಕೆ ಅರ್ಪಿಸಿದ ವರದಿಯಲ್ಲಿ ಹೀಗೆ ಹೇಳಿದ್ದಾರೆ :

"ಟ್ರೇನಿಂಗ ಕಾಲೇಜು ಕನ್ನಡ ವಾಙ್ಮಯದ ಮಾತೃಸ್ಥಾನವು........ ರಸೆಲ್ ಸಾಹೇಬರ ಅಭಿಪ್ರಾಯದಂತೆ ಬೆಳಗಾವಿ ಈ ವಿಷಯದಲ್ಲಿ ಯೋಗ್ಯ ಸ್ಥಳವಲ್ಲವೆಂದು ನಾನಾದರೂ ಅಭಿಪ್ರಾಯ ಪಡುತ್ತೇನೆ. ಟ್ರೇನಿಂಗ ಕಾಲೇಜಿನ ಅವಸ್ಥೆ ನೀರ ಹೊರಗಿನ ಮೀನದಂತೆ ಆಗಿದೆ. ಬೆಳಗಾಂವಿ ಮಹಾರಾಷ್ಟ್ರ ದೇಶಕ್ಕೆ ಸಮೀಪವಾಗಿದ್ದ ಕನ್ನಡ ಸೀಮೆಯಲ್ಲಿರುವುದರಿಂದ ಈ ಕಾಲೇಜಿಗೆ ಬರುವ ವಿದ್ಯಾರ್ಥಿಗಳು ಹೆಚ್ಚಾಗಿ ಮರಾಠಿಯನ್ನಾಡುವವರೇ ಇರುತ್ತಾರೆ. ಆದುದರಿಂದ ಈ ಸಂಸ್ಥೆಯನ್ನು ಧಾರವಾಡಕ್ಕೆ ಒಯ್ದರೆ ಅದಕ್ಕೆ ಹೆಚ್ಚಿನ ಸೌಕರ್ಯಗಳುಂಟಾಗುವದಲ್ಲದೆ, ಅದರ ಕಾರ್ಯಕ್ಷೇತ್ರವೂ ಹೆಚ್ಚುವದು." ೧

ಭುಜಂಗರಾಯರ ಈ ಅಭಿಪ್ರಾಯ ಎಷ್ಟು ಜಾಣ್ಮೆಯಿಂದ ಕೂಡಿತ್ತೆಂಬುದನ್ನು ಇಂದಿನ ಇತಿಹಾಸ ತೋರಿಸಿಕೊಟ್ಟಿದೆ. "ಟ್ರೇನಿಂಗ ಕಾಲೇಜು ಕನ್ನಡ ವಾಙ್ಮಯದ ಮಾತೃಸ್ಥಾನ"ವೆಂದು ಮೊದಲಿಗೆ ಕಂಡುಹಿಡಿದವರು ಭುಜಂಗರಾಯರು. ನಿಜವಾಗಿ, ಟ್ರೇನಿಂಗ ಕಾಲೇಜು ಉತ್ತರ

೧ ಜೀವನ ಶಿಕ್ಷಣ : ರಾ. ಯ. ಧಾರವಾಡಕರ ೧೯೫೭, ಪು. ೩೩.

ಕರ್ನಾಟಕದ ಹೊಸಗನ್ನಡ ಸಾಹಿತ್ಯದ ತೊಟ್ಟಿಲವಾಗಿ ಪರಿಣಮಿಸಿತು. ಕನ್ನಡ ಸಾಹಿತ್ಯ ಈ ಟ್ರೇನಿಂಗ ಕಾಲೇಜದ ಪರಿಸರದಲ್ಲಿಯೇ ಬೆಳೆಯಿತು.

ಭುಜಂಗರಾಯರಿಗೆ ವಿದ್ಯಾರ್ಥಿಗಳೆಂದರೆ ಅಚ್ಚುಮೆಚ್ಚು. ಸನ್ ೧೮೬೯ ರಲ್ಲಿ ರೊದ್ದ ಶ್ರೀನಿವಾಸರಾಯರು ಬೆಳಗಾವಿ ಟ್ರೇನಿಂಗ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿ ಸೇರಿದಾಗ, ಅವರ ಪ್ರತಿಭೆಯನ್ನು ಗುರುತಿಸಿದವರು ಭುಜಂಗರಾಯರೇ. ರೊದ್ದರು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ಕೂಡ್ರಲು ಮುಂಬಯಿಗೆ ಹೋಗುವ ಅನುಕೂಲತೆಯನ್ನು ಕಲ್ಪಿಸಿಕೊಟ್ಟವರೂ ಭುಜಂಗರಾಯರೇ. ಪ್ರಥಮ ಸಲ ರೊದ್ದ ರಾಯರು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಅನುತ್ತೀರ್ಣರಾದಾಗ, ಅವರಿಗೆ ತಮ್ಮ ಆಪ್ತೇಷ್ಟರಾದ ಹುಯಿಲಗೋಳ ಮಾಧವರಾಯರ ಮನೆಯಲ್ಲಿ ಪುಣೆಯಲ್ಲಿ ಇರಲು ಅವಕಾಶ ಮಾಡಿಸಿಕೊಟ್ಟವರೂ ಭುಜಂಗರಾಯರೇ. ವಿದ್ಯಾರ್ಥಿಗಳ ಬಗೆಗೆ ಇಷ್ಟು ಆಸ್ಥೆಯನ್ನು ಬಹುಶಃ ಯಾವ ಶಿಕ್ಷಕನೂ ವಹಿಸಲಿಕ್ಕಿಲ್ಲ. ಅಂತಲೇ ರೊದ್ದ ರಾಯರ ತಾಯಿಯವರಾದ ಸುಬ್ಬಮ್ಮನವರು "ನಾವು ಉಣ್ಣುವ ಅನ್ನ ರಸೆಲ್ ಸಾಹೇಬರದು; ಹಚ್ಚುವ ದೀಪ ಭುಜಂಗರಾಯರದು." ಎಂದು ಹೇಳುತ್ತಿದ್ದರು.

ಭುಜಂಗರಾಯರು ದಕ್ಷ ಆಡಳಿತಗಾರರು; ಶಿಸ್ತಿನ ಸೇನಾನಿಗಳು. ಕಲಿಸುವುದರಲ್ಲಿ ತುಂಬಾ ನಿಪುಣರು. ಒಂದು ಸಲ ಅವರ ಕಲಿಸುವಿಕೆಯ ಬಗೆಗೆ ಯಾರೋ ಡಾಯರೆಕ್ಟರ ಚ್ಯಾಟ್‌ಫೀಲ್ಡ ಅವರಿಗೆ ದೂರು ಹೇಳಿದಾಗ, ಸ್ವತಃ ಡಾಯರೆಕ್ಟರರು ಅವರು ಕಲಿಸುವ ಪದ್ಧತಿಯನ್ನೂ, ಪಾಂಡಿತ್ಯವನ್ನೂ ಕಂಡು ಬೆರಗಾದರಂತೆ. ಭುಜಂಗರಾಯರ ಧ್ವನಿ ಕರ್ಕಶ; ಕಲ್ಲಿ ಮೀಸೆಯನ್ನು ಬಿಟ್ಟದ್ದರಿಂದ ನೋಡಲಿಕ್ಕೆ ಮುಖವು ಉಗ್ರವಾಗಿ ತೋರುತ್ತಿತ್ತು ಎಂದು ಅವರನ್ನು ನೋಡಿದವರು ಹೇಳುತ್ತಾರೆ.

ಗ್ರಂಥಗಳು :

ಭುಜಂಗರಾಯರು ಹೆಚ್ಚು ಗ್ರಂಥಗಳನ್ನು ಬರೆದಂತೆ ಕಾಣುವದಿಲ್ಲ. ಸನ್ ೧೮೭೪ ರ ನವೆಂಬರ ತಿಂಗಳದ ಕನ್ನಡ ಶಾಲಾ ಪತ್ರಕದಲ್ಲಿ ಕಂಡುಬರುವ ಒಂದು ಜಾಹೀರಾತಿನ ಮೇರೆಗೆ ಶ್ರೀಯುತರು 'ಪ್ರಾಕೃತಿಕ ಭೂಗೋಲವು' ಎಂಬ ಪುಸ್ತಕವನ್ನು ಬರೆದಂತೆ ಕಾಣುತ್ತದೆ. ಈ ಪುಸ್ತಕದ ಉಲ್ಲೇಖವನ್ನು ದಿವಂಗತ ಹನುಮಂತರಾವ ದೇಶಪಾಂಡೆಯವರೂ ಮಾಡಿದ್ದಾರೆ. ಭುಜಂಗರಾಯರ ಮನೆತನಕ್ಕೇ ಸೇರಿದ್ದ 'ಉದಯವಾಗಲಿ' ಹುಯಿಲಗೋಳ ನಾರಾಯಣರಾಯರು ತಾವು ಧಾರವಾಡದಲ್ಲಿ ಶಾಲೆಯಲ್ಲಿದ್ದಾಗ ಭುಜಂಗರಾವ ರಚಿತವಾದ ಈ ಪ್ರಾಕೃತಿಕ ಭೂಗೋಲವನ್ನು ಓದಿದ್ದಾಗಿ ಹೇಳುತ್ತಿದ್ದರು. ಇದು ಕಲ್ಲಚ್ಚಿನಲ್ಲಿ ಮುದ್ರಿತವಾಗಿತ್ತಂತೆ.

ಕನ್ನಡದ ಮುನ್ನಡೆಗಾಗಿ ಶ್ರಮಿಸಿದ ಈ ಆಡಳಿತಗಾರ ತಮ್ಮ ವಯಸ್ಸಿನ ೫೪ ನೇ ವರುಷದಲ್ಲಿ ಮಧುಮೇಹ ರೋಗದಿಂದ ಸನ್ ೧೮೮೫ರ ಮೇ ತಿಂಗಳಲ್ಲಿ ನಿಧನ ಹೊಂದಿದರು.

—

ಡೆಪ್ಯುಟಿ ಚೆನಬಸಪ್ಪನವರು

(೧೮೩೪–೧೮೮೧)

ಹೊಸಗನ್ನಡ ಉತ್ಕ್ರಾಂತಿಗೆ ಕಾರಣರಾದವರಲ್ಲಿ ಕಾವ್ಯರಂಗದಲ್ಲಿ ಶಾಂತಕವಿಗಳಿಗೆ ದೊರಕಿದಷ್ಟೇ ತೀರ ಹೆಚ್ಚಿನ ಸ್ಥಾನವು ಶಿಕ್ಷಣ ರಂಗದಲ್ಲಿ ಡೆಪ್ಯುಟಿ ಚೆನಬಸಪ್ಪನವರಿಗೆ ದೊರಕಬೇಕು. ರಸೆಲ್‌ರವರಂತೆ ಕರ್ನಾಟಕದ ರಂಗಸ್ಥಲದಲ್ಲಿ ಚೆನಬಸಪ್ಪನವರು ಆ ಕಾಲಕ್ಕೆ ಕಂಡುಬರದಿದ್ದರೆ, ಕನ್ನಡದ ಮುನ್ನಡೆ ಇನ್ನೂ ೫೦ ವರ್ಷ ಕುಂಠಿತವಾಗುತ್ತಿತ್ತೆಂದು ಹೇಳಿದರೆ ಯಾವ ಅತಿಶಯೋಕ್ತಿಯೂ ಇಲ್ಲ.

ಕ್ರಿ. ಶ. ೧೮೩೪ರ ಸುಮಾರು ಕನ್ನಡ ಅಭ್ಯಾಸದ ಪರಿಸ್ಥಿತಿ ಉತ್ತರ ಕರ್ನಾಟಕದಲ್ಲಿ ಯಾವ ರೀತಿಯಾಗಿತ್ತೆಂಬುದನ್ನು ಈ ಮೊದಲೇ ವರ್ಣಿಸಿದೆ. ಇಂಥ ಸಂದರ್ಭದಲ್ಲಿ ಧಾರವಾಡ ಭಾಗದಲ್ಲಿ ಕನ್ನಡಕ್ಕೇ ಪುರಸ್ಕಾರ ದೊರಕಬೇಕೆಂದು ಕಂಡುಕೊಂಡವರು ರಸೆಲ್‌ರವರು. ಅವರ ಈ ಕಾಣ್ಕೆಯನ್ನು ಕೃತಿಯಲ್ಲಿ ಉತ್ಸಾಹಯುತವಾಗಿ ಇಳಿಸುವ ಸಾಮರ್ಥ್ಯವುಳ್ಳ ಸೇನಾನಿಯಾಗಿ ದೊರಕಿದವರು ಡೆಪ್ಯುಟಿ ಚೆನಬಸಪ್ಪನವರು. ರಸೆಲ್‌ರವರ ಸಂಪೂರ್ಣ ವಿಶ್ವಾಸವನ್ನು ದೊರಕಿಸಿದ್ದ ಚೆನಬಸಪ್ಪನವರು ತಮ್ಮ ಅಮೋಘವಾದ ಕರ್ತೃತ್ವ ಶಕ್ತಿಯಿಂದ ದಿನದಿನಕ್ಕೆ ಕನ್ನಡ ಪ್ರಾಥಮಿಕ ಶಾಲೆಗಳ ರೂಪದಲ್ಲಿ ಕನ್ನಡ ಕೋಟೆಗಳನ್ನು ಭದ್ರವಾಗಿ ಕಟ್ಟಿದರು.

ಏರಿ ಬಂದ ಅನ್ಯ ಭಾಷಾ ಪ್ರಭಾವದ ಪ್ರವಾಹವನ್ನು ಹಿಮ್ಮೆಟ್ಟಿಸಬೇಕಾದರೆ, ಹೆಚ್ಚಿನ ಚೈತನ್ಯ ಬೇಕು; ಉತ್ಸಾಹ ಬೇಕು; ಒರಟು ಎಂದು ಕಾಣಿಸುವಷ್ಟು ಎದೆಗಾರಿಕೆ ಬೇಕು. ಈ ಚೈತನ್ಯ, ಈ ನೈಪುಣ್ಯ, ಈ ಎದೆಗಾರಿಕೆ ಮತ್ತು ಉತ್ಸಾಹಗಳು ಚೆನಬಸಪ್ಪನವರಲ್ಲಿ ಅಮಿತವಾಗಿದ್ದವು. ಅಂತಲೇ ಇವರನ್ನು ' ಹುಲಿ ಚೆನಬಸಪ್ಪ ' ಎಂದೂ ಜನರು ಕರೆಯುತ್ತಿದ್ದರು. ಮೋಸಗಾರರಿಗೆ, ವಂಚಕರಿಗೆ, ಅಕ್ಷಮರಿಗೆ ಚೆನಬಸಪ್ಪನವರು ಸಿಂಹಸ್ವಪ್ನದಂತಿದ್ದರು. ಅವರ ಹೆಸರನ್ನೆತ್ತಿದರೂ ಕೂಡ ಜನ ನಡುಗುತ್ತಿದ್ದರು. ಇಷ್ಟಿದ್ದರೂ ಅವರ ಅಂತಃಕರಣ ಮೃದುವಾಗಿಯೇ ಇದ್ದಿತು. ಕರ್ತವ್ಯಕ್ಕಾಗಿ ಅವರು ಕಠೋರರಾಗಿದ್ದರೇ ವಿನಾ, ಅಧಿಕಾರಪ್ರದರ್ಶನ ಅವರಲ್ಲಿ ತಿಲಮಾತ್ರವೂ ಇರಲಿಲ್ಲ. ಅವರಲ್ಲಿ ಶಾಪಾದಪಿ ಶರಾದಪಿ ಶಕ್ತಿ ಇದ್ದಿತು. ಅಂತಲೇ, ಹೋದಹೋದಲ್ಲೆಲ್ಲ ತಾವು ಕಂಡ ಅಯ್ಯನವರ ಮಠಗಳನ್ನು ಶಾಲೆಗಳನ್ನಾಗಿ ಪರಿವರ್ತಿಸಿದರು. ಕೆಲಸವಿಲ್ಲದೆ ಹಾಗೆಯೇ ಕುಳಿತಿರುತ್ತಿದ್ದ ಮಠದ ಅಯ್ಯನವರನ್ನೂ ಆಚಾರ್ಯರನ್ನೂ ಅಧ್ಯಾಪಕ ಕೆಲಸಕ್ಕೆ ಯೋಜಿಸಿದರು. ಅವರು ಮಾತಿನಲ್ಲಿ ಕಠೋರರಿದ್ದ ಮೂಲಕ ಎಷ್ಟೋ ಸಲ ಜನ ಬೇಸರಪಟ್ಟದ್ದೂ ಉಂಟು. ಆದರೆ ಆ ಕಾಠಿಣ್ಯದ ಹಿಂದೆ ಅವಿತಿದ್ದ ಅವರ ವಿಶಾಲಾಂತಃಕರಣವನ್ನರಿತ ಮೇಲೆ ಜನ ಚೆನಬಸಪ್ಪನವರ ಸ್ವಭಾವವನ್ನು ಮೆಚ್ಚಿಕೊಳ್ಳುತ್ತಿದ್ದರು.

ಚೆನಬಸಪ್ಪನವರ ಪೂರ್ಣ ಹೆಸರು– ಚೆನ್ನಬಸಪ್ಪ ಬಸಲಿಂಗಪ್ಪ ಧಾರವಾಡ. ಇವರು ಡೆಪ್ಯುಟಿ ಶಿಕ್ಷಣಾಧಿಕಾರಿಗಳಾಗಿ ಕೆಲಸ ಮಾಡಿದ್ದರ ಮೂಲಕ ಡೆಪ್ಯುಟಿ ಚೆನಬಸಪ್ಪನವರೆಂದೇ ಸಂಬೋಧಿಸಲ್ಪಡುತ್ತಿದ್ದರು. (ಈ ಭಾಗದ ಪ್ರಥಮ ಎಂ. ಎ. ಆದ ರಾ. ಹ. ದೇಶಪಾಂಡೆಯವರು ' ಎಂ. ಎ. ದೇಶಪಾಂಡೆ 'ಯವರಾದ ಹಾಗೆ; ಪ್ರಥಮ ಎಲ್. ಸಿ. ಇ. ಆವರಾದ ರಾಮರಾಯರು ' ಎಲ್. ಸಿ. ರಾಮರಾಯ 'ರಾದ ಹಾಗೆ.)

ಚೆನಬಸಪ್ಪನವರ ತಂದೆಯ ಹೆಸರು ಬಸಲಿಂಗಪ್ಪ. ತಾಯಿಯ ಹೆಸರು ತಿಪ್ಪವ್ವ. ಇವರ ಅಜ್ಜಂದಿರ ಹೆಸರು ಅಪ್ಪಯ್ಯಪ್ಪ. ಈ ಮನೆತನದ ಮೂಲ ಊರು ಬೆಳಗಾವಿ ಜಿಲ್ಲೆಯ ಗೋಕಾವಿ. ಅಪ್ಪಯ್ಯಪ್ಪನವರಿಗೆ ಇಬ್ಬರು ಮಕ್ಕಳು. ಅಪ್ಪಣ್ಣಪ್ಪ ಮತ್ತು ಬಸಲಿಂಗಪ್ಪ. ಬಸಲಿಂಗಪ್ಪನವರಿಗೂ ಇಬ್ಬರು ಮಕ್ಕಳು– ದೊಡ್ಡ ಚೆನಬಸಪ್ಪ ಮತ್ತು ಸಣ್ಣ ಚೆನಬಸಪ್ಪ ಎಂದು. ಈ ದೊಡ್ಡ ಚೆನ್ನಬಸಪ್ಪನವರೇ ಡೆಪ್ಯುಟಿ ಚೆನಬಸಪ್ಪನವರು.

ಅಪ್ಪಯ್ಯಪ್ಪ

- ಅಪ್ಪಣ್ಣಪ್ಪ
- ಬಸಲಿಂಗಪ್ಪ
  - ದೊಡ್ಡ ಚೆನಬಸಪ್ಪ (ಡೆಪ್ಯುಟಿ ಚೆನಬಸಪ್ಪ)
  - ಸಣ್ಣ ಚೆನಬಸಪ್ಪ

ಮನೆತನದ ಹಲವು ಆಂತರಿಕ ಕಾರಣಗಳ ಮೂಲಕ ಡೆಪ್ಯುಟಿಯವರ ತಂದೆಯವರು ಗೋಕಾವಿಯನ್ನು ಬಿಟ್ಟು ಧಾರವಾಡಕ್ಕೆ ಬಂದು, ಇಲ್ಲಿ ವ್ಯಾಪಾರದಿಂದ ಉಪಜೀವನ ಸಾಗಿಸುತ್ತಿದರು. ಇವರ ಮಕ್ಕಳಾಗಿ ದೊಡ್ಡ ಚೆನಬಸಪ್ಪನವರು ಕ್ರಿ. ಶ. ೧೮೩೪ರಲ್ಲಿ ಧಾರವಾಡದಲ್ಲಿ ಜನಿಸಿದರು.

ಚೆನಬಸಪ್ಪನವರು ೬ ವರುಷದವರಿರುವಾಗಲೇ ದುರ್ದೈವದಿಂದ ಅವರ ತಂದೆಯವರು ತೀರಿಕೊಂಡರು. ಹೀಗಾಗಿ ಮನೆತನದ ಭಾರವೆಲ್ಲ ತಾಯಿ ತಿಪ್ಪವ್ವನವರ ಮೇಲೆಯೇ ಬಿದ್ದಿತು. ಓದಿ ತಮ್ಮ ಮಕ್ಕಳು ಮುಂದಾಗಬೇಕೆಂದು ತಾಯಿಯವರು ಬಹು ವಿಧವಾಗಿ ಪರಿಶ್ರಮಿಸಿದರು. ಮಕ್ಕಳ ಹಿತಕ್ಕಾಗಿ ತಮ್ಮ ಯಾವ ಸುಖ–ದುಃಖಗಳನ್ನೂ ಗಮನಿಸದೇ ತಿಪ್ಪವ್ವನವರು ಕಷ್ಟಪಟ್ಟರು.

ಚೆನಬಸಪ್ಪನವರು ಚಿಕ್ಕವರಿದ್ದಾಗ ತುಂಬಾ ತುಂಟು ಸ್ವಭಾವದವರಾಗಿದ್ದರು. ಪುಂಡ ಹುಡುಗರ ಗುಂಪನ್ನು ಕೂಡಿಸಿಕೊಂಡು ಜಗಳ ತೆಗೆಯುವದು, ಸಹಪಾಠಿಗಳ ಗಟ್ಟಿಯಾದ ಪಾಟಿಗಳನ್ನು ಗುದ್ದಿ ಒಡೆಯುವದು, ಸಿಟ್ಟು ಬಂದಾಗ ಮನೆಯೊಳಗಿನ ಸಾಮಾನುಗಳನ್ನು ಹೊರಗೆ ಬಿಸಾಕುವದು– ಇವೇ ಮೊದಲಾದ ತುಂಟುತನ ಅವರಲ್ಲಿ ಯಥೇಚ್ಛವಾಗಿ ಕಂಡುಬರುತ್ತಿತ್ತು. ಆದರೆ, ಈ ಚಿಕ್ಕ ಮಗುವಿನಲ್ಲಿದ್ದ ಕುಶಾಗ್ರ ಬುದ್ಧಿಯನ್ನರಿತ ಅವರ ಶಾಲಾಗುರು ಶಿವರುದ್ರಯ್ಯನವರು ಚೆನಬಸಪ್ಪನವರಿಗೆ ಬಹುವಿಧವಾಗಿ ಬುದ್ಧಿ ಹೇಳಲು ಯತ್ನಿಸಿದರು. ಆದರೆ, ' ಯೋಗ ಒದಗುವ ಮೊದಲು ಯೋಗ್ಯತೆಯು ತಿಳಿಯುವದೆ? ಎಗಳೂ ತಿಳಿಯುವದೆ ಕೋಗಿಲ ಬೆಲೆ? ' ಎಂದ ಹಾಗೆ, ಅಭ್ಯಾಸ ಮಾಡಿ ತಾನೂ ಮುಂದು ಬರಬೇಕೆಂಬ ಹಂಬಲ ಚೆನಬಸಪ್ಪನವರಲ್ಲಿ ಎಂದೋ ಒಂದು ಸಲ

ಒಮ್ಮೆಲೆಯೇ ಕಾಣಿಸಿಕೊಂಡಿತು, 'ಬರುವದೇನುಂಟೊಮ್ಮೆ ಬರುವ ಕಾಲಕೆ ಬಹುದು, ಬರುಕೆ ಬರುವವರ ಕಣ್‌ಸನ್ನೆ ಕಾಣೋ' ಎಂಬಂತೆ, ಒಂದು ದಿವಸ ಚೆನಬಸಪ್ಪನವರು ಸಂಜೆಯ ಹೊತ್ತಿನಲ್ಲಿ ಒತ್ತಲದಲ್ಲಿ ರೊಟ್ಟಿಯನ್ನು ತಿನ್ನುತ್ತ ಕುಳಿತಿದ್ದಾಗ, ತಾವೂ ಪುಣೆಗೆ ಹೋಗಿ ಕಲಿಯಬೇಕೆಂದು ಮಾಡಿರುವದಾಗಿಯೂ, ಅದಕ್ಕಾಗಿ, ತಾಯಿ ಹಣವನ್ನು ಕೊಡಬೇಕೆಂದೂ ಕೇಳಿದರು. ಯಾವ ಪರಿಚಯದವರಾಗಲೀ, ಜ್ಞಾತಿಬಾಂಧವರಾಗಲೀ ಇರದ ಪುಣೆಗೆ ತಮ್ಮ ಸಣ್ಣ ಮಗು ಹೋಗ ಬಯಸುತ್ತೇನೆಂದು ಹೇಳುವುದು ಹುಡುಗಾಟಿಕೆಯೆಂದು ತಾಯಿಯವರು ಭಾವಿಸಿದರು. ಅದೇ ರಾತ್ರಿ ತಾಯಿಯವರು ಮಲಗಿಕೊಂಡಾಗ, ಚೆನ್ನಬಸಪ್ಪನವರು ಎದ್ದು, ತಮ್ಮ ತಾಯಿ ಹಣವನ್ನು ಹುಗಿದಿಡುತ್ತಿದ್ದ ಸ್ಥಳವನ್ನು ಹುಡುಕಿ ಅಲ್ಲಿದ್ದ ಮೂರು ರೂಪಾಯಿ ಹತ್ತು ಆಣೆಗಳನ್ನು ಕಿಸೆಯಲ್ಲಿ ಹಾಕಿಕೊಂಡು, ಪುಣೆಯ ಹಾದಿ ಹಿಡಿದರು. ದಾರಿಯಲ್ಲಿ ಗೋಕಾವಿಯಲ್ಲಿ ತಮ್ಮ ಪರಿಚಯದವರಾದ ನಾಗಪ್ಪ ಗಿರಾಮರ ಎಂಬವರ ಕಡೆಯಿಂದ ೫೦ ರೂಪಾಯಿಗಳನ್ನು ಇಸಿದುಕೊಂಡು ಪುಣೆಯನ್ನು ಮುಟ್ಟಿದರು. ಪುಣೆಯಲ್ಲಿ ಅವರಿಗೆ ಗೋವಿಂದರಾವ ಮೆಹಂದಳೆಕರ್ ಎಂಬವರ ಪರಿಚಯವಾಗಿ ಅವರಿಂದ ಅನೇಕ ವಿಧವಾದ ಸಹಾಯವು ದೊರಕಿತು.

ಪುಣೆಯಲ್ಲಿ ಎಂಜನೀಯರಿಂಗ ಕಾಲೇಜನ್ನು ಸೇರಿ ಶಿಷ್ಯವೇತನದ ಸಹಾಯದಿಂದ ಕಲಿತು ಮುಂದಾದರು ಅಲ್ಲಿಯೇ ಕೆಲಕಾಲ ಪ್ರಾಧ್ಯಾಪಕರೆಂದೂ ಕೆಲಸವನ್ನು ಮಾಡಿದರು. ಇದೇ ಕಾಲಕ್ಕೆ ಇಂಗ್ಲಂಡಿನಲ್ಲಿ ಕೂಪರ್ಸಹಿಲ್ ಎಂಬ ಎಂಜನೀಯರಿಂಗ ಕಾಲೇಜು ಪ್ರಾರಂಭವಾಯಿತು. ಈ ಕಾಲೇಜಿಗೆ ಹಿಂದೀ ವಿದ್ಯಾರ್ಥಿಗಳನ್ನು ಕಳಿಸಬೇಕೆಂದು ದಾದಾಭಾಯಿ ನವರೋಜಿಯವರು ಪ್ರಯತ್ನಿಸುತ್ತಿದ್ದರು. ಈ ಕಾಲೇಜಿಗೆ ಕಳಿಸಿಕೊಡಲು ಐದು ಜನ ಯೋಗ್ಯರಾದ ಭಾರತೀಯ ವಿದ್ಯಾರ್ಥಿಗಳನ್ನು ಆಯ್ದು ದಾದಾಭಾಯಿಯವರು ಅವರನ್ನು ಕಳಿಸಿಕೊಡುವ ಏರ್ಪಾಡಿನ ಬಗೆಗೆ ಭಾರತದ ಸೆಕ್ರೆಟರಿ ಆಫ್ ಸ್ಟೇಟ ಅವರ ಕೂಡ ಪತ್ರವ್ಯವಹಾರ ಮಾಡಿದರು. ಆ ಪ್ರಕಾರ ಆಯ್ಕೆ ಹೊಂದಿದ ಐವರಲ್ಲಿ ಚೆನಬಸಪ್ಪನವರೂ ಒಬ್ಬರಾಗಿದ್ದರು. ಆದರೆ, ದಾದಾಭಾಯಿಯವರ ಪ್ರಯತ್ನ ಸಫಲವಾಗದ್ದರಿಂದ, ಚೆನಬಸಪ್ಪನವರು ಇಂಗ್ಲಂಡಿಗೆ ಹೋಗುವದಾಗಲಿಲ್ಲ.[೧]

ಇದಾದ ಮೇಲೆ, ಧಾರವಾಡಕ್ಕೆ ಬಂದ ಚೆನಬಸಪ್ಪನವರು ಪೋಸ್ಟ ಖಾತೆಯಲ್ಲಿ ನೌಕರಿ ಪ್ರಾರಂಭಿಸಿ ವಿದ್ಯಾಖಾತೆಯನ್ನು ಸೇರಿದರು. ಕ್ರಿ. ಶ. ೧೮೫೬ ರ ಜನವರಿಯಲ್ಲಿ ಬೆಳಗಾವಿಯ ನಾರ್ಮಲ್ ಶಾಲೆಯ ಪ್ರಿನ್ಸಿಪಾಲರಾಗಿ ನೇಮಕ ಹೊಂದಿದರು. ಮುಂದು ಐದು ವರುಷಗಳ ನಂತರ ೧೮೬೧ ರಲ್ಲಿ ೧೯೦ ರೂಪಾಯಿ ಸಂಬಳದ ಮೇಲೆ ಬೆಳಗಾವಿಯ ಡೆಪ್ಯುಟಿ ಎಜ್ಯುಕೇಶನ್ ಇನಸ್ಪೆಕರ ರೆಂದು ನೇಮಕ ಹೊಂದಿದರು. ಅಲ್ಲಿ ಸುಮಾರು ೯ ವರ್ಷ ಕೆಲಸ ಮಾಡಿ, ೧೮೭೦ ರಲ್ಲಿ ೨೦೦ ರೂಪಾಯಿಗಳ ಮೇಲೆ ಧಾರವಾಡದ ಡೆಪ್ಯುಟಿಯಾಗಿ ಬಂದರು.

ಚೆನಬಸಪ್ಪನವರ ಕಾರ್ಯ–ಕನ್ನಡದ ಸೇವೆ :

ಚೆನಬಸಪ್ಪನವರು ಡೆಪ್ಯುಟಿಯಾಗಿ ನೇಮಕವಾದಂದಿನಿಂದ ರಸೆಲ್ ಅವರಿಗೆ ಬಲಗೈ ದೊರಕಿದಂತಾಯಿತು. ಈ ಕೃಷ್ಣಸಾರಥ್ಯದ ಮೂಲಕ ಕನ್ನಡ ಶಿಕ್ಷಣ–ಸಾಹಿತ್ಯಗಳ ಅಭಿವೃದ್ಧಿ ನಾಗಾಲೋಟದಿಂದ ಮುಂದುವರಿಯಿತು. ಚೆನಬಸಪ್ಪನವರು ಸ್ವತಃ ಕನ್ನಡಿಗರಾಗಿದ್ದರಿಂದಲೂ, ಕನ್ನಡದ ಅಭಿಮಾನಿಗಳಾಗಿದ್ದರಿಂದಲೂ ಊರೂರಲ್ಲಿ ಶಾಲೆಗಳು ಸ್ಥಾಪಿತವಾದವು. ೧೮೫೫–೫೬ ರಲ್ಲಿ ಧಾರವಾಡದಲ್ಲಿ ಕೇವಲ ೧೨ ಶಾಲೆಗಳಿದ್ದು, ೧೩೪೧ ವಿದ್ಯಾರ್ಥಿಗಳಿದ್ದರೆ, ೧೮೬೫–೬೬ ರಲ್ಲಿ ಈ ಸಂಖ್ಯೆ

[೧] Poverty and Un-British Rule in India– P. 105.

ಈ ಹುಕುಮಿನ ಮಾತುಗಳನ್ನು ಕೃಷ್ಣರಾವ್ ಭುಜಂಗರಾಯರು ಒಂದು ಪರಿಪತ್ರದ ಮೂಲಕ ಎಲ್ಲ ವಿದ್ಯಾರ್ಥಿಗಳಿಗೂ ತಿಳಿಸಿದರು. ಚೆನ್ನಬಸಪ್ಪನವರು ಇಷ್ಟು ಕಟ್ಟುನಿಟ್ಟಾಗಿ ಪ್ರಯತ್ನಪಟ್ಟರೂ, ಇನ್ನೂ ಕೆಲವು ವಿದ್ಯಾರ್ಥಿಗಳ ಒಲವು ಮರಾಠಿಯ ಕಡೆಗೇ ಇದ್ದುದನ್ನು ಗಮನಿಸಿ ಭುಜಂಗರಾಯರಿಗೆ ಪುನಃ ಹೀಗೆ ಬರೆದರು :

“ ಪ್ರಿಯ ಭುಜಂಗರಾವ

೨-೩-೧೮೭೦
ನರಗುಂದ

ಈಗ ನಮ್ಮ ಶಾಲೆಗಳಲ್ಲಿ ಮರಾಠಿಯನ್ನು ಕಲಿಸುವದು ಅವಶ್ಯವಿಲ್ಲ. ಶಿಕ್ಷಕರ ಯಶಸ್ಸು ಕೇವಲ ಅವರು ಕನ್ನಡವನ್ನು ಹೇಗೆ ಕಲಿಸುವರೆಂಬುದರ ಮೇಲೆಯೇ ಅವಲಂಬಿಸಿರುತ್ತದೆ. ಇದನ್ನು ನಿಮ್ಮ ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ಸ್ಪಷ್ಟವಾಗಿ ತಂದುಕೊಡಬೇಕು.

ನಿಮ್ಮ
ಚೆನ್ನಬಸಪ್ಪ
ಡೆ. ಎ. ಇ. ಧಾರವಾಡ ” ೧

ಚೆನ್ನಬಸಪ್ಪನವರ ಸ್ವಭಾವ :

ಮಹತ್ವಾಕಾಂಕ್ಷೆ, ಸತತ ಪರಿಶ್ರಮ, ಸ್ವಾಭಿಮಾನ, ಆದರ್ಶ ಸಮಾಜದೃಷ್ಟಿ ಮೊದಲಾದುವು ಹೇಗೆ ಚೆನ್ನಬಸಪ್ಪನವರ ಸ್ವಭಾವಾಂಶಗಳಾಗಿದ್ದುವೆಂಬುದನ್ನು ಈ ಮೊದಲೇ ವಿವರಿಸಲಾಗಿದೆ. ಸಮಾಜದ ವಿದ್ಯಾರ್ಥಿಗಳು ಮುಂದು ಬರಬೇಕೆಂಬ ದೃಷ್ಟಿಯಿಂದ ಸ್ವಂತ ಹಣವನ್ನು ಹಾಕಿ, ತಮ್ಮ ಮೇಲೆ ಕೋರ್ಟ ಡಿಕ್ರಿ ಆಗುವವರೆಗೂ ಯಾವ ರೀತಿ ಕಷ್ಟಪಡಬೇಕಾಯಿತೆಂಬುದನ್ನೂ ಹೇಳಿ ಆಯಿತು. ಅವರ ಸಾರ್ವಜನಿಕ ಸೇವೆ ಅಷ್ಟು ಪರಿಶುದ್ಧವೂ ಕಠೋರವೂ ಆಗಿದ್ದಿತು. ಇಂತಹದೇ ಒಂದು ಘಟನೆ ಅವರು ಧಾರವಾಡದ ಡೆಪ್ಯುಟಿಯಾಗಿದ್ದಾಗ ಘಟಿಸಿತು. ಅವರ ಕಾಲಕ್ಕೆ ಧಾರವಾಡದಲ್ಲಿ ಒಂದು ಸರಕಾರಿ ಬುಕ್ ಡಿಪೋ ಇದ್ದಿತು. ಅದರ ಮೇಲ್ವಿಚಾರಣೆ ಧಾರವಾಡದ ಡೆಪ್ಯುಟಿಯವರ ಅಂಕಿತದಲ್ಲಿ ಇರುತ್ತಿತ್ತು. ಆ ಕಾಲದಲ್ಲಿ ಡಿಪೋದಲ್ಲಿ ಮಾರಾಟಕ್ಕಾಗಿ ೮-೧೦ ಸಾವಿರ ರೂಪಾಯಿಯ ಪುಸ್ತಕಗಳಿದ್ದವು. ಆ ಡಿಪೋದ ಕಾರಕೂನನು ೪-೬ ವರ್ಷಗಳಲ್ಲಿ ಸುಮಾರು ೪-೫ ಸಾವಿರ ರೂಪಾಯಿಗಳನ್ನು ಡಿಪೋದಿಂದ ಅಪಹರಿಸಿಬಿಟ್ಟಿದ್ದನು. ಈ ಅಪರಾತಪರಾ ಗೊತ್ತಾದ ಕೂಡಲೇ ಆ ಕಾರಕೂನನು ಫರಾರಿಯಾಗಿಬಿಟ್ಟನು. ಅವನ ಜಾಮೀನುದಾರರಿಂದ ಹಣವನ್ನು ಪಡೆಯಲಾಗಲಿಲ್ಲ. ಈ ವ್ಯವಹಾರದಲ್ಲಿ ಚೆನ್ನಬಸಪ್ಪನವರಿಗೆ ಯಾವ ಪ್ರತ್ಯಕ್ಷ ಸಂಬಂಧವಿರದಿದ್ದರೂ, ಮೇಲಧಿಕಾರಿಯೆಂಬ ಜವಾಬ್ದಾರಿಯಿಂದಲೂ, ಡಿಪೋದ ಲೆಕ್ಕಪತ್ರಗಳಿಗೆಲ್ಲ ಅವರೇ ಸಹಿ ಮಾಡಿದ್ದರಿಂದಲೂ, ಈ ಅವ್ಯವಹಾರದ ನೈತಿಕ ಜವಾಬ್ದಾರಿಯನ್ನು ತಾವೇ ವಹಿಸಿಕೊಂಡು ಸರಕಾರಕ್ಕೆ ಈ ರೀತಿ ಪತ್ರ ಬರೆದರು :

“ ಈ ಡಿಪೋದ ತಪಾಸಣೆಯು ನನ್ನ ಕಡೆಗೆ ಇದ್ದು, ನಾನು ನನ್ನ ಹೆಡ್‌ಕ್ಲಾರ್ಕನನ್ನು ನಂಬಿ ಈ ಜಮಾಖರ್ಚಿನ ಪುಸ್ತಕಗಳ ಮೇಲೆ ಸಹಿ ಮಾಡಿದ್ದು, ನನ್ನ ತಪ್ಪು ಇರುತ್ತದೆ. ನಾನು ಸ್ವತಃ ಈ ಲೆಕ್ಕವನ್ನು ತಪಾಸು ಮಾಡದಿದ್ದರೂ, ಕಳೆದುಹೋದ ಹಣಕ್ಕೆ ನಾನೇ ಜವಾಬ್ದಾರನಾಗಿದ್ದೇನೆ. ಅದ್ದರಿಂದ ನನಗೆ ಸಲ್ಲತಕ್ಕ ಪಗಾರದಲ್ಲಿ ನನ್ನ ಮನೆತನದ ವೆಚ್ಚಕ್ಕೆ ೩೦ ರೂಪಾಯಿ ಮಾತ್ರ ಬಿಟ್ಟುಕೊಟ್ಟು, ಉಳಿದದ್ದೆಲ್ಲ ಕಡಿಮೆ ಬಿದ್ದ ಹಣವನ್ನು ಮುಟ್ಟಿಸಿಕೊಳ್ಳುವದಕ್ಕಾಗಿ ಸರಕಾರದ

೧ ಜೀವನ ಶಿಕ್ಷಣ— ಪು. ೩೦.

ಬೇಕು. " ೧ ಆದರೆ, ಚೆನಬಸಪ್ಪನವರು ವಿದ್ಯಾಖಾತೆಗೆ ಸಲ್ಲಿಸಿದ ಮಹತ್ವಪೂರ್ಣವಾದ ಸೇವೆಯನ್ನು ಮನದಂದು ಅಫರಾತಫರಾ ಆದ ಹಣವನ್ನು ಸರಕಾರದವರು ಮಾಫು ಮಾಡಿದರು.

ಚೆನಬಸಪ್ಪನವರು ಹೃದಯದಲ್ಲಿ ಕೋಮಲರಾಗಿದ್ದರೂ ಮಾತಿನಲ್ಲಿ ಕಠೋರರಾಗಿದ್ದರು. ಸ್ತುತಿ, ಪ್ರಶಂಸೆ, ಲಾಂಗೂಲಚಾಲನ, ಆತ್ಮಸ್ತುತಿ ಅವರಿಗೆ ಎಷ್ಟೂ ಸೇರುತ್ತಿರಲಿಲ್ಲ. ಒಂದು ಸಲ ಒಬ್ಬ ಶಿಕ್ಷಕರು ಚೆನಬಸಪ್ಪನವರ ಬಗ್ಗೆ ಒಂದು ಕವಿತೆಯನ್ನು ರಚಿಸಿ, ಸಂಪಗೆಯಂಥ ನಾಸಿಕ ಎಂದು ಮೊದಲಾಗಿ ವರ್ಣಿಸಿದಾಗ ಚೆನಬಸಪ್ಪನವರು "ನೀವೇ ಈ ಕವಿತೆಯನ್ನು ರಚಿಸಿರುವಿರೋ ?" ಎಂದು ಕೇಳಿದರು. ಆ ಶಿಕ್ಷಕರು ತುಂಬಾ ಅಭಿಮಾನದಿಂದ "ಹೌದು, ನಾನೇ ರಚಿಸಿದ್ದೇನೆ" ಎಂದು ಹೇಳಿದರು. ಆಗ ಚೆನಬಸಪ್ಪನವರು "ನನ್ನ ಮೂಗು ಸಂಪಗೆಯಂತೆ ಎಂದು ವರ್ಣಿಸಿದಿರಿ. ನನ್ನ ಮೂಗು ಸಂಪಗೆಯಂತೆ ಇದೆಯೇ ? ನಾನು ಶಾಂತನೆಂದು ಹೇಳಿದಿರಿ. ನನಗೀಗ ಸಿಟ್ಟು ಬಂದಿದೆ. ಹೀಗೆ ಇಲ್ಲದ ಗುಣಗಳನ್ನು ಆರೋಪಿಸಿ ವರ್ಣಿಸುವದಕ್ಕಿಂತ, ಮನೆಯಲ್ಲಿ ಒಂದು ಪಾವು ಜೋಳ ಬೀಸಲಿಕ್ಕೆ ಹಿಡಿದಿದ್ದರೆ, ನಿಮ್ಮ ಮನೆಯವರು ನಿಮಗೆ ತುಂಬಾ ಸಂತೋಷದಿಂದ ರೊಟ್ಟೀ ಮಾಡಿ ಹಾಕುತ್ತಿದ್ದರು" ಎಂದು ಹೇಳಿದರು. ಅಂದಿನಿಂದ ಆ ಮಾಸ್ತರ ಮುಖಸ್ತುತಿ ಮಾಡಿ ಕಾಲಹರಣ ಮಾಡುವದನ್ನು ಬಿಟ್ಟುಬಿಟ್ಟರು.

ಅದರಂತೆಯೇ, ಧರ್ಮದ ಹೆಸರಿನಲ್ಲಿ ಊಟ–ಉಪಚಾರಕ್ಕಾಗಿ ಮಠಗಳ ಹಣವು ಪೋಲಾಗುತ್ತಿರುವುದು ಚೆನಬಸಪ್ಪನವರಿಗೆ ಸೇರುತ್ತಿರಲಿಲ್ಲ. ಆದ್ದರಿಂದ ಚಿತ್ರದುರ್ಗದ ಅಂದಿನ ಸ್ವಾಮಿಗಳಾದ ಶ್ರೀ ಶ್ರೀ ಮಹಾಲಿಂಗಸ್ವಾಮಿಗಳು ಉಳವಿಯಲ್ಲಿ ದಾಸೋಹ ನಡೆಸಿದಾಗ, ಲಿಂಗವಂತ ಸಮಾಜದ ಎಲ್ಲ ಪ್ರತಿಷ್ಠಿತರೂ ಉಳವಿಗೆ ಹೋಗಿದ್ದರೆ, ಚೆನಬಸಪ್ಪನವರು ಮಾತ್ರ ಹೋಗಿರಲಿಲ್ಲ. ಇದನ್ನು ಮನಗಂಡೇ ಶ್ರೀ ಸ್ವಾಮಿಗಳು ಬೆಳಗಾವಿಯಲ್ಲಿ ಲಿಂಗಾಯತ ವಿದ್ಯಾರ್ಥಿ ನಿಲಯದ ಏರ್ಪಾಡನ್ನು ಮಾಡಿದರು.

ಚೆನಬಸಪ್ಪನವರಲ್ಲಿ ಸ್ವಮತದ ಅಭಿಮಾನವಿದ್ದರೂ, ಪರಧರ್ಮಜಿಗುಪ್ಸೆ ಇರಲಿಲ್ಲ. ಅವರ ಮಿತ್ರವರ್ಗದಲ್ಲಿ ವಿದ್ಯಾಪ್ರಿಯರಾದ ವೆಂಕಟ ರಂಗೋ ಕಟ್ಟಿ, ಭುಜಂಗರಾವ ಹುಯಿಲಗೋಳ, ಡಾ. ಝೀಗ್ಲರ್ ಮೊದಲಾದವರಿದ್ದರು.

ಚೆನಬಸಪ್ಪನವರ ವಾಙ್ಮಯ ಸೇವೆ :

ಚೆನಬಸಪ್ಪನವರು ಸ್ವತಃ ಸಾಹಿತಿಗಳಾಗಿರಲಿಲ್ಲ. ಅವರು ಶಿಕ್ಷಣದಿಂದ ಎಂಜನೀಯರರು; ವೃತ್ತಿಯಿಂದ ಅಡಳಿತಗಾರರು. ಆದರೂ ಕನ್ನಡ ಭಾಷೆ ಮತ್ತು ಸಾಹಿತ್ಯದ ಅಭಿಮಾನ ಅವರಲ್ಲಿ ತುಂಬಿ ತುಳುಕುತ್ತಿತ್ತು. ಅಂತಲೇ, ಶಿಕ್ಷಣ ವ್ಯವಸ್ಥೆಯಲ್ಲಿ ಕನ್ನಡಕ್ಕೆ ಸಿಗಬೇಕಾದ ಯೋಗ್ಯವಾದ ಸ್ಥಾನವನ್ನು ಅವರು ಒದಗಿಸಿಕೊಟ್ಟರು.

ಅವೂ ಅಲ್ಲದೆ, ಸಾಹಿತ್ಯಜ್ಞರನ್ನು ಕಂಡಾಗಲೆಲ್ಲ, ಅವರಿಗೆ ಯೋಗ್ಯ ಪುರಸ್ಕಾರವನ್ನು ಕೊಟ್ಟು ಆರ್ಥಿಕವಾಗಿಯೂ ಅವರಿಗೆ ಸಹಾಯ ಮಾಡುತ್ತಿದ್ದರು. ಬಾಣಕಾದಂಬರಿಯ ಸುಪ್ರಸಿದ್ಧ ಅನುವಾದಕರಾದ ಗಂಗಾಧರ ಮಡಿವಾಳೇಶ್ವರ ತುರಮರಿಯವರು ಒಂದು ಮಠದಲ್ಲಿದ್ದಾಗ ಅವರನ್ನು ಬಿಡಿಸಿಕೊಂಡು ಬಂದು, ಅವರನ್ನು ಕನ್ನಡ ಸೇವೆಗೆ ಅಣಿಗೊಳಿಸಿದರು. ತುರಮರಿಯವರು ಟ್ರೇನಿಂಗ

೧ ಕೈ. ವಾ. ಚೆನಬಸಪ್ಪ ಬಸಲಿಂಗಪ್ಪ ಧಾರವಾಡ ಇವರ ಚರಿತ್ರೆಯು– ಫ. ಗು. ಹಳಕಟ್ಟಿ ೧೯೧೪– ಪು.೩೭.

ಕಾಲೇಜದಲ್ಲಿ ಕನ್ನಡ ಶಿಕ್ಷಕರೆಂದು ಪ್ರಾರಂಭಿಸಿ, ಸರಕಾರಿ ಟ್ರಾನ್ಸಲೇಟರರಾದರು. ಕನ್ನಡದಲ್ಲಿ ಆಗಿದ್ದ ಕ್ರಮಿಕ ಪುಸ್ತಕಗಳ ಅಭಾವವನ್ನು ನಿವಾರಿಸುವದಕ್ಕೋಸ್ಕರ ತುರಮುರಿಯವರ ಕಡೆಯಿಂದ ಅನೇಕ ಕ್ರಮಿಕ ಪುಸ್ತಕಗಳನ್ನು ಬರೆಯಿಸಿದರು. ಕನ್ನಡದಲ್ಲಿ ಈವರೆಗಿದ್ದ ಕ್ರಮಿಕ ಪುಸ್ತಕಗಳು ಕೇವಲ ಮರಾಠಿ ಪುಸ್ತಕಗಳ ಅನುವಾದಗಳಾಗಿದ್ದವು. ಗಂಗಾಧರಯ್ಯನವರು ಸ್ವತಃ ಉದ್ದಾಮ ಕನ್ನಡ ಪಂಡಿತರಾಗಿದ್ದುದರಿಂದ ಪ್ರಾಚೀನ ಕನ್ನಡ ಕವಿಗಳ, ದಾಸರ, ಶಿವಶರಣರ ನೀತಿಪದ್ಯಗಳನ್ನು ಕ್ರಮಿಕ ಪುಸ್ತಕಗಳಲ್ಲಿ ಸೇರಿಸಿದರು. ಇದರಂತೆಯೇ, ಶಾಂತವೀರ ರಾಚಿದೇವ ಕಿತ್ತೂರ ಅವರು ಬೆಳಗಾವಿಯ ಹಾಯ್‌ಸ್ಕೂಲಿನಲ್ಲಿಯೂ ಅನಂತರ, ಟ್ರೇನಿಂಗ ಕಾಲೇಜಿನಲ್ಲಿಯೂ ಕನ್ನಡ ಶಿಕ್ಷಕರಾಗಿದ್ದರು. ಇವರು ರಾಜಶೇಖರ ವಿಳಾಸದ ಆಶ್ವಾಸಗಳಿಗೆ ಉತ್ತಮವಾದ ವ್ಯಾಖ್ಯಾನವನ್ನು ಬರೆದಿದ್ದಾರೆ. ಹೀಗೆಯೇ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಚೆನಬಸಪ್ಪನವರಿಂದ ಕನ್ನಡ ಬರವಣಿಗೆಯಲ್ಲಿ ಪ್ರೋತ್ಸಾಹಿತರಾದ ಇತರರೆಂದರೆ, ವೀರಭದ್ರ ಮಡಿವಾಳೇಶ್ವರ ಪಂಡಿತ, ಶೇಷೋ ರಾಮಚಂದ್ರ ಚುರಮರಿ, ವೆಂಕಟ ರಂಗೋ ಕಟ್ಟಿ, ಭುಜಂಗರಾವ ಹುಯಿಲಗೋಳ ಮತ್ತು ಪಾಂಡುರಂಗ ಚಿಂತಾಮಣಿ ಪೇಟಕರ.

ವೀರಭದ್ರ ಮಡಿವಾಳೇಶ್ವರ ಪಂಡಿತ ಅವರು ಮೊದಲು ಬೆಳಗಾವಿ ಹಾಯ್‌ಸ್ಕೂಲಿನಲ್ಲಿ ಅಸಿಸ್ಟಂಟ ಮಾಸ್ತರರಾಗಿದ್ದು, ಹಿಂದುಗಡೆ ಮುನಸೀಫ್ ಪರೀಕ್ಷೆ ಪಾಸಾಗಿ, ಸಬ್ ಜಜ್‌ರಾಗಿ ಕೆಲಸ ಮಾಡಿದರು. ಇವರು ಚೆನಬಸಪ್ಪನವರಿಂದ ಪ್ರೋತ್ಸಾಹಿತರಾಗಿ, ಕನ್ನಡದಲ್ಲಿ ಎರಡು ಕ್ರಮಿಕ ಪುಸ್ತಕಗಳನ್ನು ರಚಿಸಿದರು. ವೆಂಕಟ ರಂಗೋ ಕಟ್ಟಿಯವರು ಕ್ರಮಿಕ ಪುಸ್ತಕಗಳನ್ನಲ್ಲದೆ, ಪದಾರ್ಥ ವಿಜ್ಞಾನಶಾಸ್ತ್ರ, 'ಅರೇಬಿಯನ್ ನಾಯ್‌ಟ್ಸ' ಮೊದಲಾದ ಪುಸ್ತಕಗಳನ್ನು ರಚಿಸಿದರು. ಭುಜಂಗರಾವ ಹುಯಿಲಗೋಳ ಅವರು ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾಗಿ ಕೆಲಸ ಮಾಡಿದ್ದಲ್ಲದೆ, ಭೂಗೋಲ ಶಾಸ್ತ್ರದ ಬಗ್ಗೆ ಒಂದು ಗ್ರಂಥವನ್ನು ರಚಿಸಿದರು. ಪೇಟಕರ ಅವರೂ ಶಾಲೋಪಯೋಗಿ ಪುಸ್ತಕಗಳನ್ನು ಬರೆದರು. ಡಾ. ಝಿಗ್ಲರ್ ಅವರು ರಚಿಸುತ್ತಿದ್ದ ನಿಘಂಟುವಿಗೆ ಚೆನಬಸಪ್ಪನವರೂ ಸಹಾಯ ಮಾಡಿದರು. ಶೇಷೋ ರಾಮಚಂದ್ರ ಚುರಮರಿಯವರಂತೂ ಕಾಲಿದಾಸನ ಸುಪ್ರಸಿದ್ಧವಾದ ಶಾಕುಂತಲ ನಾಟಕವನ್ನು ಕನ್ನಡಕ್ಕೆ ಅನುವಾದ ಮಾಡಿದರು. ಈ ಲೇಖಕವೃಂದದ ಪ್ರಾತಿನಿಧಿಕ ಕೃತಜ್ಞತೆಯ ಹಾಗೆ ಚುರಮರಿ ಶೇಷಗಿರಿರಾಯರು ಕ್ರಿ. ಶ. ೧೮೭೦ ರಲ್ಲಿ ತಾವು ಭಾಷಾಂತರಿಸಿ ಪ್ರಕಟಿಸಿದ ಶಾಕುಂತಲ ನಾಟಕದ ಸೂಚನೆಯೇ ನಿದರ್ಶನವಾಗಿದೆ. ಈ ಗ್ರಂಥ ಪ್ರಾರಂಭದಲ್ಲಿ ಚುರಮರಿಯವರು ವಿನಯಪೂರ್ಣವಾಗಿ ಗುರುಭಕ್ತಿಯಿಂದ ಚೆನಬಸಪ್ಪನವರನ್ನು ಹೀಗೆ ಸ್ಮರಿಸುತ್ತಾರೆ :

ಕಡುಗುರುಭಕ್ತಿಯಿಂ ಚುರಮರೀತ್ಯುಪನಾಮಕ ರಾಮಚಂದ್ರಜಂ
ಜಡಮತಿ ಕಬ್ಬಿ ಶೇಷಗಿರಿಯೆಂಬವನೀ ಕೃತಿಗೈದು ಮಾಡಿದಂ
ಬಡವರ ವಿದ್ಯೆಕಾಗಿ ತನುವಿಂ ಮನದಿಂ ಧನದಿಂದೆ ಸಾಹಸಂ
ಪಡುತಿಪ ಧೀರ ಚಂನಬಸವೇಶ್ವರ ದಿವ್ಯರ ಪಾದಭೂಷಣಂ ॥

ಇದೇ ಕಾಲಕ್ಕೇ ಕನ್ನಡದಲ್ಲಿ ಅಚ್ಚುಕೂಟಗಳೂ ಪ್ರಾರಂಭವಾದವು. ಧಾರವಾಡದಲ್ಲಿ ಮೊದಲು ಅಚ್ಚುಕೂಟವನ್ನು ಸ್ಥಾಪಿಸಿದವರು ಮಾದನಶೆಟ್ಟಿ ಕಲ್ಯಾಣಪ್ಪನವರು. ಅನಂತರ ಹುಚ್ಚಯ್ಯ ವಿಭೂತಿಯವರು ತಮ್ಮದೇ ಆದ ಅಚ್ಚುಕೂಟವನ್ನು ಸ್ಥಾಪಿಸಿ, 'ಚಂದ್ರೋದಯ' ಎಂಬ ವರ್ತಮಾನಪತ್ರವನ್ನು ಪ್ರಸಿದ್ಧಿಸಹತ್ತಿದರು. ಈ ಕಾಲಕ್ಕೇ, ಪುರಂದರದಾಸ, ಕನಕದಾಸ, ನಿಜಗುಣ ಶಿವಯೋಗಿಗಳು ಮೊದಲಾದ ಕವಿಗಳ ಗ್ರಂಥಗಳು ಪ್ರಕಟವಾದುವಲ್ಲದೆ, ಬತ್ತೀಸ ಪುತ್ಥಳಿ ಕಥೆ, ಶುಕಸಪ್ತವಿಂಶತಿ ಮೊದಲಾದ ಗ್ರಂಥಗಳೂ ಹೊರಬಂದವು,

ಚೆನಬಸಪ್ಪನವರು ಸಾಹಿತ್ಯಪ್ರೇಮಿಗಳಾಗಿದ್ದರಲ್ಲದೆ, ಸ್ವತಃ ಒಂದೆರಡು ಗ್ರಂಥಗಳನ್ನೂ ರಚಿಸಿದರು. ತಮ್ಮ ಪ್ರೀತಿಯ ವಿಷಯವಾದ ಗಣಿತದ ಬಗೆಗೆ ಅವರು ಎರಡು ಕ್ರಮಿಕ ಪುಸ್ತಕಗಳನ್ನು ರಚಿಸಿದರು. ಇವು ಹತ್ತಿಪ್ಪತ್ತು ವರುಷ ಶಾಲೆಗಳಲ್ಲಿ ಪಠ್ಯಪುಸ್ತಕಗಳಾಗಿದ್ದವು. ಡೆಪ್ಯುಟಿ ಚೆನಬಸಪ್ಪನವರು ಗಣಿತ ವಿಷಯದಲ್ಲಿ ತೀರ ಎತ್ತಿದ ಕೈ. ಹೆಚ್ಚು ಕಡಿಮೆ ಸಮಕಾಲಿಕವಾಗಿಯೇ ಅವರ ಈ ಗಣಿತ ಪ್ರತಿಭೆಯ ಉಲ್ಲೇಖ ಕಾವ್ಯ-ನಾಟಕಗಳಲ್ಲಿ ದೊರಕುವಷ್ಟು ಅವರ ಪ್ರತಿಭೆ ಪ್ರಖರವಾಗಿತ್ತು. ದಿವಂಗತ ಕೆರೂರ ವಾಸುದೇವಾಚಾರ್ಯರು ತಮ್ಮಣಗೌಡನ ಗಣಿತಜ್ಞಾನದ ಬಗೆಗೆ ಹೇಳುವಾಗ "ಲೆಖ್ಖದಲ್ಲಿ ಇವನೊಬ್ಬ ಪ್ರತಿ ಚೆನ್ನಬಸಪ್ಪನೇ"- ಎಂದು ಪತಿವಶೀಕರಣದಲ್ಲಿ ಉಲ್ಲೇಖ ಮಾಡಿದ್ದಾರೆ. ಇದೂ ಅಲ್ಲದೆ, ಷೇಕ್ಸಪಿಯರ್ ಮಹಾಕವಿಯ 'ಕಾಮೆಡಿ ಆಫ್ ಎರರ್ಸ' ನಾಟಕವನ್ನು 'ನಗದವರನ್ನು ನಗಿಸುವ ಕಥೆ' ಎಂಬ ಹೆಸರಿನಲ್ಲಿಯೂ ಮತ್ತು 'ಮ್ಯಾಕ್‌ಬೆಥ್' ನಾಟಕವನ್ನೂ ಕನ್ನಡಕ್ಕೆ ಪರಿವರ್ತಿಸಿದರು. 'ಕಾಮೆಡಿ ಆಫ್ ಎರರ್ಸ' ೧೮೭೧ ರಲ್ಲಿ ಧಾರವಾಡದಲ್ಲಿ ಮುದ್ರಿತವಾಯಿತು. ಈ ಭಾಷಾಂತರಗಳ ಸಾಹಿತ್ಯಗುಣ ಹೆಚ್ಚಿನ ಮಟ್ಟದ್ದಿರದಿದ್ದರೂ, ಈ ಪ್ರಯತ್ನ ಚೆನಬಸಪ್ಪನವರಲ್ಲಿದ್ದ ಸಾಹಿತ್ಯಪ್ರೇಮವನ್ನು ವ್ಯಕ್ತಪಡಿಸುತ್ತದೆ.

ಈ ವಿವರಣೆಯನ್ನೆಲ್ಲ ನೋಡಿದಾಗ ಚುರಮರಿ ಶೇಷಗಿರಿರಾಯರು ಮಾಡಿದ ಚೆನಬಸಪ್ಪನವರ ಪ್ರಶಂಸೆ ಯಥಾಯೋಗ್ಯವೇ ಆಗಿದೆಯೆಂದು ಹೇಳಬೇಕು. ಈ ರೀತಿ, ತುಂಬಾ ಸಾರ್ಥಕವೂ ಉತ್ಸಾಹಯುತವೂ ಆದ ಜೀವನವನ್ನು ಸಾಗಿಸಿದ ಚೆನಬಸಪ್ಪನವರು ಚಿಕ್ಕ ವಯಸ್ಸಿನಲ್ಲಿಯೇ ಅಂದರೆ ತಮ್ಮ ವಯಸ್ಸಿನ ೪೭ ನೆಯ ವರ್ಷದಲ್ಲಿ ಬಹುಮೂತ್ರ ರೋಗದಿಂದ ೫-೧-೧೮೮೧ರ ದಿವಸ ಧಾರವಾಡದಲ್ಲಿ ದೇಹವಿಟ್ಟರು.

—

ರೊದ್ದ ಶ್ರೀನಿವಾಸರಾಯರು

(೧೮೫೦–೧೯೩೯)

ಸಾಹಿತ್ಯನಿರ್ಮಿತಿಯ ದೃಷ್ಟಿಯಿಂದ ಶ್ರೀಮಾನ್ ರೊದ್ದರವರ ಸೇವೆಯೇನೂ ಗಣ್ಯವಾದುದಲ್ಲ. ಆದರೆ, ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅವರು ಉತ್ತರ ಕರ್ನಾಟಕದ ಪುನರುದ್ಧಾರಕ್ಕೆ ಕಾರಣರಾದುದನ್ನು ಮರೆಯುವಂತಿಲ್ಲ. ದಿವಂಗತ ರೊದ್ದ ಮತ್ತು ಅರಟಾಳ ರುದ್ರಗೌಡರ ನಿಸ್ವಾರ್ಥ ಸೇವೆಯಿಲ್ಲದೆ ಧಾರವಾಡದಲ್ಲಿ ಕರ್ನಾಟಕ ಕಾಲೇಜು ಆಗುತ್ತಿರಲಿಲ್ಲ; ಕರ್ನಾಟಕ ವಿಶ್ವವಿದ್ಯಾಲಯದ ಕಾಣ್ಕೆ ಕಂಡುಬರುತ್ತಿರಲಿಲ್ಲ; ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣಗಳ ಎತ್ತುಗಡೆ ನಡೆಯುತ್ತಿರಲಿಲ್ಲ. ಈಯೆಲ್ಲ ಕಾರ್ಯಗಳಲ್ಲಿ ರಾಯರು ಕೇವಲ ಒಂದು ವ್ಯಕ್ತಿಯಾಗಿ ದುಡಿಯದೆ, ಸಂಸ್ಥೆಯಾಗಿ ಕೆಲಸ ಮಾಡಿದರು.

ರೊದ್ದರ ಪೂರ್ವಜರು ಇಂದಿನ ಆಂಧ್ರ ಪ್ರದೇಶದ ಅನಂತಪುರ ಜಿಲ್ಹೆಯ ಪೆನುಗೊಂಡೆಯ ಹತ್ತಿರದ ರೊದ್ದಮ್ ಎಂಬ ಗ್ರಾಮದವರು. ಇವರ ಪೂರ್ವಜರ ಹೆಸರು ಭಾಸ್ಕರಪ್ಪ. ಇವರು ಸೋಸಲೆ ವ್ಯಾಸರಾಯರ ಮಠದ ಶಿಷ್ಯರು. ಇವರ ಕುಲದೇವರು ಶ್ರೀರಂಗದಲ್ಲಿದ್ದ ಭಂಡಿ ರಂಗನಾಥದೇವರು. ಅನಂತರ ತಿರುಪತಿಯ ವೆಂಕಟೇಶ್ವರ. ಭಾಸ್ಕರಪ್ಪ ರೊದ್ದಮ್ ಗ್ರಾಮದ ಶಾನುಭೋಗ. ಬ್ರಿಟಿಶ್ ಸತ್ತೆ ಇನ್ನೂ ಭದ್ರವಾಗಿರದ ಆ ಕಾಲದಲ್ಲಿ ಭಾಸ್ಕರಪ್ಪ ತನ್ನ ಕೈಯಲ್ಲಿಯ ೮–೧೦ ತಳವಾರರನ್ನು ಕೂಡಿಹಾಕಿ, ಜನರನ್ನು ಕೊಳ್ಳೆ ಹೊಡೆದು ತನ್ನ ಮನೆಯ ಬೊಕ್ಕಸವನ್ನು ತುಂಬಿಕೊಳ್ಳುತ್ತಿದ್ದ. ಒಂದು ಸಲ, ಆ ಭಾಗದ ಮಾಮಲೇದಾರನಾದ ಶ್ರೀನಿವಾಸರಾಯನೆಂಬವನು ತನ್ನ ಹೆಂಡತಿಯ ಸೀಮಂತ ಸಮಾರಂಭಕ್ಕೆಂದು ಹೊರಟಾಗ, ಅವನಿಗೆ ಸಮೀಚೀನ ಊಟಕ್ಕೆ ಹಾಕಿಸಿದ ಮೇಲೆ, ಇವನ ಜನ ದಾರಿಯಲ್ಲಿ ಆ ಮಾಮಲೇದಾರನನ್ನು ಸುಲಿದರು. ಈ ಹೊಡೆದಾಟದಲ್ಲಿ ಮಾಮಲೇದಾರನು ತೀರಿಕೊಂಡನು. ಈ ಸುದ್ದಿಯನ್ನು ಕೇಳಿದ ಅವನ ಹೆಂಡತಿಯೂ ತನ್ನ ಕೂದಲಿನಿಂದ ಉರುಲು ಹಾಕಿಕೊಂಡಳು. ಈ ಇಬ್ಬರೂ ಜನರ ಹತ್ಯಕ್ಕಾಗಿ ಘಟಿಸಿದ ಪಾಪ ರೊದ್ದ ಮನೆತನವನ್ನು ಕಾಡುತ್ತಿತ್ತೆಂದು ಹೇಳುತ್ತಾರೆ. ರಾಯರ ೧೪ ಜನ ಮಕ್ಕಳಲ್ಲಿ ೧೩ ಜನ ಚಿಕ್ಕವರಿದ್ದಾಗಲೇ ತೀರಿಕೊಂಡರು. ಬಳ್ಳಾರಿ ಜಿಲ್ಹೆಯ ಕಲೆಕ್ಟರನಾದ ಚಾಪ್ಲಿನ್ ಸಾಹೇಬನು ಧಾರವಾಡದ ಕಲೆಕ್ಟರನಾಗಿ ಬಂದಾಗ ಶ್ರೀನಿವಾಸರಾಯರ ಕಕ್ಕನೂ ಧಾರವಾಡಕ್ಕೆ ಬಂದನು. ರಾಯರು ಕೋನೇರರಾಯರೆಂಬವರ ಮಗ. ಇವರ ತಾಯಿಯ ಹೆಸರು ಸುಬ್ಬಮ್ಮ. ೧೮೫೦ ನೆಯ ಇಸ್ವಿ ಸಪ್ಟಂಬರ ೧೭ ರ ದಿವಸ ಧಾರವಾಡದ ಮದಿಹಾಳದಲ್ಲಿ ಜನಿಸಿದ ರಾಯರ ಶಿಕ್ಷಣವೆಲ್ಲ ತುಂಬಾ ಬಡತನದಲ್ಲಿಯೇ ಆಯಿತು. ಈ ಬಗೆಗೆ ಕೆಕ್ಕಾರ ಶಿವಭಟ್ಟರೆಂಬವರು ತಾವು ಬರೆದ ' ರೊದ್ದರಾಜಕೀರ್ತಿಮಂಜರೀ ' ಎಂಬ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ :

ಶ್ರೀಮತ್ತಂತುಪುರೇ ವಸನ್ವಿಜಯತೇ ಕರ್ನಾಟಕೇ ಭಾಗ್ಯವಾನ್
ಸುಬ್ಬಾಂಬಾಪತಿ ಕೋನಭೂಸುರಸುತೋ ವಿದ್ಯಾದಯಾಸಾಗರಃ
ಶಾಂತಃಕಾಂತವಪುರ್ವಶೀಕೃತ ಮಹಾಕಾರ್ಯೋಗ್ರಗಣ್ಯಃ ಸತಾಮ್
ರೊದ್ದೋಪಾಹ್ವಾಂಗ ಆಶ್ರಿತಾಮರತರುಃ ಶ್ರೀ ಶ್ರೀನಿವಾಸೋಬುಧಃ ॥ [೧]

ರಾಯರು ೧೫-೧೬ ವರುಷದವರಿದ್ದಾಗಲೇ ಅವರ ತೀರ್ಥರೂಪರು ತೀರಿಕೊಂಡರು. ಆಗ ರಾಯರು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಸಹ ಪಾಸಾಗಿರಲಿಲ್ಲ. ಇಂಥ ಸಮಯದಲ್ಲಿ ಮನೆತನದ ಭಾರವನ್ನು ಹೊರುವ ಜವಾಬ್ದಾರಿಯುಂಟಾಯಿತು. ಆದುದರಿಂದ, ಅವರು ಮದಿಹಾಳದಲ್ಲಿಯೇ ಒಂದು ಸಣ್ಣ ಗಾವಠಿ ಶಾಲೆಯನ್ನು ಹಾಕಿ, ೮ ಹುಡುಗರನ್ನು ಕೂಡಿಸಿ, ಅವರಿಂದ ಬರುವ ಎಂಟೆಂಟಾಣೆ ಯಂತೆ ೪ ರೂಪಾಯಿಯಲ್ಲಿ ಸಂಸಾರಕ್ರಮವನ್ನು ಸಾಗಿಸಹತ್ತಿದರು. ಪ್ರತಿ ತಿಂಗಳಿಗೆ ೪ ರೂಪಾಯಿ ಸಾಲದಾದಾಗ, ರಾಯರು ಹುಬ್ಬಳ್ಳಿಗೆ ಹೋಗಿ ಅಲ್ಲಿಯ ಬಾಸೆಲ್ ಮಿಶನ್ ಶಾಲೆಯಲ್ಲಿ ನೌಕರಿಯನ್ನು ಕೇಳಿದರು. ಅವರು ತಿಂಗಳಿಗೆ ೧೫ ರೂಪಾಯಿ ಕೊಡಲು ಒಪ್ಪಿದರು. ಆದರೆ, ರಾಯರ ತಾಯಿ ಯವರು ಅದೇ ವರುಷ ವಿಧವೆಯಾದುದರಿಂದ ಮನೆ ಬಿಟ್ಟು ಕದಲಲು ಬರುವಂತಿರಲಿಲ್ಲ. ಆದ್ದರಿಂದ ತಾಯಿಯ ಮೇಲಿನ ತಮ್ಮ ಪ್ರೀತಿಗಾಗಿ ರಾಯರು ಪ್ರತಿದಿನವೂ ಧಾರವಾಡದಿಂದ ಹುಬ್ಬಳ್ಳಿಗೆ, ಹುಬ್ಬಳ್ಳಿಯಿಂದ ಧಾರವಾಡಕ್ಕೆ ೨೪ ಮೈಲು ನಡೆದು ತಮ್ಮ ನೌಕರಿಯನ್ನು ಸಾಗಿಸಿದರು. ಹುಬ್ಬಳ್ಳಿ ಯಲ್ಲಿ ರಾಯರು ಒಳ್ಳೆಯ ಶಿಕ್ಷಕರೆಂದು ಹೆಸರು ಪಡೆದರು. ಆ ಶಾಲೆಯ ಪಾದ್ರಿಯಾದ ಜೆ. ಮ್ಯಾಕ್ ಅವರು ರಾಯರಿಗೆ ಈ ರೀತಿ ಪ್ರಶಸ್ತಿಪತ್ರವನ್ನು ಕೊಟ್ಟಿದ್ದಾರೆ : “ಧಾರವಾಡದ ಮಿ. ಶ್ರೀ ಕೋ. ರೊದ್ದ ಇವರು ಹುಬ್ಬಳ್ಳಿಯ ಜರ್ಮನ್ ಮಿಶನ್ ಆಂಗ್ಲೋ ವರ್ನಾಕ್ಯುಲರ್ ಶಾಲೆಯಲ್ಲಿ ಕೆಲಸ ಮಾಡಿದರು. ಅವರು ವಾಚನ, ಬರಹ, ಗ್ರಂಥದ ಮೇಲಿನ ವ್ಯಾಕರಣ, ಭಾಷಾಂತರ ಮೊದಲಾದ ವಿಷಯಗಳನ್ನು ಕಲಿಸುತ್ತಿದ್ದರು. ಈ ಕೆಲಸವನ್ನು ಅವರು ದಕ್ಷತೆಯಿಂದಲೂ ಬುದ್ಧಿವಂತಿಕೆಯಿಂದಲೂ ಮಾಡುತ್ತಿದ್ದರು. ತಾರೀಖು ೧೦-೧೧-೧೮೬೭ ” [೨]

ಇದಾದ ನಂತರ ರಾಯರು ಬೆಳಗಾವಿಯಲ್ಲಿದ್ದ ಕನ್ನಡ ಶಿಕ್ಷಕರ ಟ್ರೇನಿಂಗ ಕಾಲೇಜದಲ್ಲಿ ಕಲಿಯಲು ಹೋದರು. ಆಗ, ಹುಯಿಲಗೋಳ ಭುಜಂಗರಾಯರು ಅಲ್ಲಿ ಪ್ರಿನ್ಸಿಪಾಲರಾಗಿದ್ದರು. ಅವರು ರಾಯರಲ್ಲಿ ಆಸ್ಥೆವಹಿಸಿ, ಅವರಿಗೆ ಸಹಾಯ ಮಾಡಿದರು. ಅವರು ಪುಣೆಗೆ ಹೋಗಿ ಕಲಿಯುವ ಅವಕಾಶವನ್ನು ಕಲ್ಪಿಸಿಕೊಟ್ಟರು. ಅದಕ್ಕಾಗಿಯೇ ರೊದ್ದ ರಾಯರ ತಾಯಿಯವರಾದ ಸುಬ್ಬಮ್ಮನವರು “ನಾವು ಉಣ್ಣುವ ಅನ್ನ ರಸೆಲ್ ಸಾಹೇಬರದು; ಹಚ್ಚುವ ದೀಪ ಭುಜಂಗ ರಾಯರದು” ಎಂದು ಪದೇ ಪದೇ ಹೇಳುತ್ತಿದ್ದರು.

ರಾಯರು ಧಾರವಾಡದಿಂದ ನಡೆದುಹೋಗಿ ಪುಣೆ ಮುಟ್ಟಿ, ತುಂಬಾ ಕಷ್ಟಪಟ್ಟು ಮ್ಯಾಟ್ರಿ ಕ್ಯುಲೇಶನ್ ಪರೀಕ್ಷೆ ಪಾಸಾದರು. ಪರೀಕ್ಷೆ ಪಾಸಾದ ನಂತರ ಕೆಲಕಾಲ ಮುಲ್ಕಿ ಖಾತೆಯಲ್ಲಿ ಕೆಲಸ ಮಾಡಿ ವಿದ್ಯಾಖಾತೆಯನ್ನು ಸೇರಿದರು. ಧಾರವಾಡದಲ್ಲಿದ್ದಾಗ ವೆಂಕಟ ರಂಗೋ ಕಟ್ಟಿ, ಬಾಬಾಜಿ ಲಕ್ಷ್ಮಣ ಸಾವಂತ ಇವರನ್ನು ಕೂಡಿಕೊಂಡು ಮಿತ್ರ ಸಮಾಜವನ್ನು ಸಂಘಟಿಸಿದರು. ಸ್ವದೇಶೀ ವಸ್ತುಗಳ ಉತ್ತೇಜನಕ್ಕಾಗಿ ೧೮೭೬ ರಲ್ಲಿ ವ್ಯಾಪಾರೋತ್ತೇಜಕ ಕಂಪನಿಯನ್ನು ಪ್ರಾರಂಭಿಸುವುದ ರಲ್ಲಿ ಮುಂದಾದರು. ೧೮೭೬-೭೭ ರಲ್ಲಿ ಕ್ಷಾಮನಿವಾರಕ ಸಂಘವನ್ನು ಕಟ್ಟಿದರು. ೧೮೭೮ ರ ಡಿಸೆಂಬರದಲ್ಲಿ ಡೆಪ್ಯುಟಿ ಜಿನುಬಪ್ಪನವರು ದೇಹಾಲಸ್ಯದ ಮೂಲಕ ರಜೆಯ ಮೇಲೆ ಹೋದುದರಿಂದ

೧ ದಿವಾನಬಹದ್ದೂರ ರೊದ್ದ ಶ್ರೀನಿವಾಸರಾಯರ ಚರಿತ್ರೆ-ಹನುಮಂತರಾವ ದೇಶಪಾಂಡೆ-೧೯೩೦ ಪು. ೨೧.
೨ ಅದೇ ಪು. ೨೧.

ರಾಯರು ಆ್ಯಕ್ಟಿಂಗ್ ಡೆಪ್ಯುಟಿ ಇನಸ್ಪೆಕ್ಟರರಾಗಿ ೧೫೦ ರೂಪಾಯಿ ಸಂಬಳದ ಮೇಲೆ ನೇಮಕ ಹೊಂದಿದರು. ನಂತರ ೧೮೮೫ ರಲ್ಲಿ ರಾಯರು ೩೦೦ ರೂಪಾಯಿ ಸಂಬಳದ ಮೇಲೆ ಟ್ರೇನಿಂಗ ಕಾಲೇಜ ಪ್ರಿನ್ಸಿಪಾಲರಾಗಿ ೧೮೯೮ ರ ವರೆಗೆ ೧೦ ವರ್ಷ ಕಾಲ ಕೆಲಸ ಮಾಡಿದರು. ಕೊನೆಗೆ ೪೦೦ ರೂಪಾಯಿ ಸಂಬಳದ ಮೇಲೆ ದಕ್ಷಿಣ ಭಾಗದ ಆ್ಯಕ್ಟಿಂಗ ಎಜುಕೇಶನ್ ಇನಸ್ಪೆಕ್ಟರರಾಗಿ ಕೆಲಸ ಮಾಡಿ ೧೯೦೮ ರಲ್ಲಿ ೧೭೬ ರೂಪಾಯಿ, ೧೧ ಆಣೆ, ೬ ಪೈ ಪೆನಶನ್ ಮೇಲೆ ನಿವೃತ್ತಿ ಹೊಂದಿದರು.

ರಾಯರು ಡೆಪ್ಯುಟಿ ಇನಸ್ಪೆಕ್ಟರರಾಗಿಯೂ, ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾಗಿಯೂ ಮಾಡಿದ ಕೆಲಸವನ್ನು ಮೆಚ್ಚಿಕೊಂಡು ಸರಕಾರದವರು ಅವರಿಗೆ ರಾವಬಹದೂರ್ ಪದವಿಯನ್ನು ದಯಪಾಲಿಸಿದರು. ನಿವೃತ್ತಿ ಹೊಂದಿದ ನಂತರ ರಾಯರು ಜುಲೈ ೧೯೦೯ ರಲ್ಲಿ ಕಾಯ್ದೆ ಕೌನ್ಸಿಲಿನ ಸದಸ್ಯರಾಗಿ ಚುನಾಯಿತರಾದರು. ಅನಂತರ ಎರಡನೆಯ ಸಲ ದಾಜಿ ಅಬಾಜಿ ಖರೆ ಅವರ ವಿರುದ್ಧ ನಿಂತು ೩೬–೧೮ ಮತಗಳಿಂದ ಪುನಃ ಆರಿಸಿ ಬಂದರು. ಮೂರನೆಯ ಸಲವೂ ಸಹ ೫೪ ರಲ್ಲಿ ೩೦ ಮತಗಳನ್ನು ದೊರಕಿಸಿ ಆರಿಸಿ ಬಂದರು. ಹೀಗೆ ೧೯೧೦ ರಿಂದ ೧೯೧೬ ರ ವರೆಗೆ ೬ ವರುಷ ಕಾಲ ಕೌನ್ಸಿಲಿನ ಸದಸ್ಯರಾಗಿದ್ದು, ಕರ್ನಾಟಕ ಕಾಲೇಜದ ಸ್ಥಾಪನೆಗೆ ತುಂಬಾ ಶ್ರಮವಹಿಸಿ ದುಡಿದರು. ತಮ್ಮ ಈ ಪ್ರಯತ್ನಕ್ಕೆ ಸಹಾಯಕರಾಗಿ ಮುಂಬಯಿಯ ನಗರ ಪಿತಾಮಹರಾದ ಸರ್ ಫಿರೋಜಶಹಾ ಮೆಹತಾ, ಸರ್ ಲಲ್ಲುಭಾಯಿ ಶಾಮಲದಾಸ್, ಸರ್ ಚಿಮಣಲಾಲ್ ಸೆಟಲವಾಡ್ ಮೊದಲಾದವರ ಸಹಾಯವನ್ನು ಪಡೆದರು. ಕರ್ನಾಟಕ ಕಾಲೇಜ ಸ್ಥಾಪನೆಗಾಗಿ ಒಂದು ಲಕ್ಷಕ್ಕಿಂತ ಹೆಚ್ಚು ಹಣವನ್ನು ಕೂಡಿಸಿದರು. ಇದೆಲ್ಲದರ ಪರಿಣಾಮವಾಗಿ ಬುಧವಾರ ೧೯೧೭ ರ ಜೂನ ತಿಂಗಳ ೨೦ ನೆಯ ತಾರೀಖಿನ ದಿವಸ ಧಾರವಾಡದ ಕರ್ನಾಟಕ ಕಾಲೇಜು ಪ್ರಾರಂಭವಾಯಿತು. ಕೌನ್ಸಿಲ್‌ದಲ್ಲಿದ್ದಾಗ ರಾಯರು ದೇಶಭಾಷೆಗಳೇ ಶಿಕ್ಷಣದ ಮಾಧ್ಯಮವಾಗಬೇಕೆಂಬುದರ ಬಗ್ಗೆಯೂ, ಹಾಯ್‌ಸ್ಕೂಲ ಹೆಡ್‌ಮಾಸ್ತರರ ಸಂಬಳ ಹೆಚ್ಚಾಗಬೇಕೆಂಬುದರ ಬಗ್ಗೆಯೂ ಭಾಷಣ ಮಾಡಿದರು. ಪಂಚಮ ಜಾರ್ಜ ಬಾದಶಹರ ಕಿರೀಟಧಾರಣ ಸಮಾರಂಭಕ್ಕಾಗಿ ರಾಯರಿಗೂ ದಿಲ್ಲಿಗೆ ಬರಲು ಆಮಂತ್ರಣವಿದ್ದಿತು. ಅನಂತರ ೧೯೧೨ ರಲ್ಲಿ ಧಾರವಾಡ ನಗರಸಭೆಯ ಮೊದಲನೆಯ ಲೋಕನಿಯುಕ್ತ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ನವೆಂಬರ್ ೧೯೧೭ ರಿಂದ ೮ ವರ್ಷಕಾಲ ಜಿಲ್ಹಾ ಲೋಕಲ್‌ಬೋರ್ಡ ಅಧ್ಯಕ್ಷರಾಗಿ ಕೆಲಸ ಮಾಡಿದರು.

ರಾಯರಿಗೆ ಜಾತಿ–ಮತ–ಪಂಥ ಭೇದವಿರುತ್ತಿರಲಿಲ್ಲ. ಮೊದಲಿನಿಂದಲೂ ಅವರಿಗೆ ಬಡ ಜನರ ಮೇಲೆ ತುಂಬಾ ವಾತ್ಸಲ್ಯ. ರಾಯರಲ್ಲಿ ಇಬ್ಬರು ಮೂವರು ಬಡ ಉಮೇದವಾರರು ಕೆಲಸ ಮಾಡುತ್ತಿದ್ದರು. ಅವರಲ್ಲಿ ಮಲ್ಲಿಕಾರ್ಜುನಪ್ಪ ವನಹಳ್ಳಿ ಎಂಬ ಲಿಂಗಾಯತ ಉಮೇದುವಾರನೂ ಒಬ್ಬನಾಗಿದ್ದನು. ರಾಯರು ಅವನಿಗೆ ಶಿಕ್ಷಕ ಕೆಲಸವನ್ನು ಕೊಟ್ಟು ಅವನನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಈ ಉಪಕಾರದ ಕೃತಜ್ಞತೆಗಾಗಿ ಅವನು ತನ್ನ ಗಂಡು ಮಗುವಿಗೆ 'ಶ್ರೀನಿವಾಸ' ಎಂಬ ಹೆಸರನ್ನಿಟ್ಟಿದ್ದನು. ಅನಂತರ ಈ ಶ್ರೀನಿವಾಸ ವನಹಳ್ಳಿ ಎಂಬ ಹುಡುಗನೂ ೨ ನೆಯ ವರ್ಷ ಟ್ರೇಂಡ ಆಗಿ ಬಂಕಾಪುರದಲ್ಲಿ ಉಪಶಿಕ್ಷಕನಾಗಿ ಕೆಲಸ ಮಾಡಿದನು. ಸುಪ್ರಸಿದ್ಧ ಶಿಕ್ಷಕ–ಲೇಖಕರಾದ ಗೌರೀಶ ಅವರು ತೀರಿಕೊಂಡಾಗ, ಗೌರೀಶರ ಮನೆತನದವರನ್ನು ರಾಯರು ವಾತ್ಸಲ್ಯದಿಂದ ನೋಡಿಕೊಂಡರು.

ಗುತ್ತಲ ವೆಂಕಾಸಾನಿ ಎಂಬ ವೇಶ್ಯೆಯು ತನ್ನಲ್ಲಿದ್ದ ೫೦೦೦ ರೂಪಾಯಿಗಳನ್ನು ೧೮೮೫ ರಲ್ಲಿ ತಾನು ಸಾಯುವ ಕಾಲಕ್ಕೆ ಸರಕಾರಕ್ಕೆ ಕೊಟ್ಟು ಅದರಿಂದ ಬರುವ ಬಡ್ಡಿಯಲ್ಲಿ ಪ್ರತಿವರ್ಷ ಬ್ರಾಹ್ಮಣ ಭೋಜನವನ್ನು ಮಾಡಿಸಬೇಕೆಂದು ಬಯಸಿದ್ದಳು. ರಾಯರು ಅವಳಲ್ಲಿ ಹೋಗಿ ಈ ವಿಚಾರವನ್ನು

ಬದಲಿಸಿ, ಅವರ ಹೆಸರಿನಲ್ಲಿ ಶಿಷ್ಯವೇತನದ ಏರ್ಪಾಡನ್ನು ಮಾಡಿಸಿದರು. 'ವೆಂಕಾಸಾನಿ ಸ್ಕಾಲರಶಿಪ್' ಎಂದು ಇದು ಈಗಲೂ ನಡೆದುಬಂದಿದೆ. ಇದರಂತೆಯೇ ಧಾರವಾಡ ಜಿಲ್ಲೆಯ ಮುಸಲ್ಮಾನ ವಿದ್ಯಾರ್ಥಿಗಳಲ್ಲಿ ವಿದ್ಯೆಯ ಅಭಿರುಚಿ ಹೆಚ್ಚಲೆಂದು ಇಬ್ರಾಹಿಮಖಾನ ಪಠಾಣ ಅವರ ಸಹಾಯದಿಂದ ೫೪೦೦ ರೂಪಾಯಿಗಳನ್ನು ಕೂಡಿಸಿ, ' ಮಹಮಡನ್ ಬರ್ಸರಿ ಫಂಡ ' ಎಂಬುದನ್ನು ಸ್ಥಾಪಿಸಿದರು.

ರಾಯರು ಲೋಕಲ್‌ಬೋರ್ಡಿನ ಅಧ್ಯಕ್ಷರಾಗಿದ್ದಾಗ, ಹಳ್ಳಿಗಳಲ್ಲಿ ಸರಿಯಾಗಿ ನೀರಿನ ವ್ಯವಸ್ಥೆಯನ್ನು ಮಾಡಿದರು. ಡಂಬಳ ಮತ್ತು ಲಕ್ಕುಂಡಿ ಗ್ರಾಮಗಳಲ್ಲಿಯ ಚಳಿಜ್ವರದ ಹಾವಳಿಯನ್ನು ತಪ್ಪಿಸಲು ಅಲ್ಲಿಯ ಗಾವಠಾಣವನ್ನು ಬದಲು ಮಾಡಿದರು. ೧೫,೦೦೦ ರೂಪಾಯಿ ವೆಚ್ಚದಿಂದ ಪಿ. ಡಬ್ಲ್ಯು. ಡಿ. ಯವರು ನೆಗಳೂರಲ್ಲಿ ಕಟ್ಟಿಸಿದ ಶಾಲೆಯ ನ್ಯೂನತೆಗಳನ್ನು ಎತ್ತಿತೋರಿಸಿದರು. ರೋಗಿಗಳಿಗಾಗಿ ಶ್ರೀಮಂತರಿಂದ ಹಣ ಕೂಡಿಸಿ ದವಾಖಾನೆಯನ್ನು ಕಟ್ಟಿಸಿದರು. ಲೋಕಲ್ ಬೋರ್ಡಿಗೆ ಸ್ವತಂತ್ರ ಎಂಜನೀಯರರಿರಬೇಕೆಂದು ಶಿಫಾರಸು ಮಾಡಿದರು. ರಾಯರ ಈಯೆಲ್ಲ ಕೆಲಸವನ್ನು ಮೆಚ್ಚಿದ ಘನ ಸರಕಾರದವರು ಅವರಿಗೆ ೧೯೨೩ ನೆಯ ಇಸ್ವಿಯಲ್ಲಿ ದಿವಾಣ ಬಹದೂರ್ ಪದವಿಯನ್ನಿತ್ತು ಗೌರವಿಸಿದರು. ೧೯೨೪ ರಲ್ಲಿ ಸಿ. ಆಯ್. ಇ. ಎಂಬ ಅತಿ ಹೆಚ್ಚಿನ ಪ್ರಶಸ್ತಿಯನ್ನು ದಯಪಾಲಿಸಿದರು. ಹೀಗೆ ಕಡುಬಡತನದಲ್ಲಿ ಹುಟ್ಟಿ, ಮಾತೃಪ್ರೇಮಕ್ಕಾಗಿ ಪ್ರತಿದಿನ ೨೪ ಮೈಲು ನಡೆದ ಈ ಸಾಹಸೀ ವ್ಯಕ್ತಿ, ತನ್ನ ಜೀವನದ ಅಂತ್ಯಕಾಲಕ್ಕೆ ರಾಜ–ಪ್ರಜೆಗಳೆಲ್ಲರಿಂದ ಮನ್ನಣೆ ಪಡೆದು ದಿವಾಣಬಹದೂರ್, ಸಿ. ಆಯ್. ಇ. ಪದವಿಗಳನ್ನು ಸಂಪಾದಿಸಿ, ೭೯ ವರುಷಗಳ ಸಫಲ ಜೀವನವನ್ನು ಸಾಗಿಸಿ, ೧೯೨೯ ನೆಯ ಇಸವಿ ಅಗಸ್ಟ ತಿಂಗಳ ೪ ನೆಯ ತಾರೀಖಿನ ದಿವಸ ಆದಿತ್ಯವಾರದಂದು ಧಾರವಾಡದಲ್ಲಿ ವೈಕುಂಠವಾಸಿಗಳಾದರು.

ರಾಯರು ಇಂಗ್ಲೀಷ ಮತ್ತು ಕನ್ನಡದಲ್ಲಿ ಕವಿತೆಗಳನ್ನು ಬರೆದರು. ಅವು ಈಗ ಉಪಲಬ್ಧವಿಲ್ಲ. ಮಾರ್ಸಡನ್ ಕೃತ ಇತಿಹಾಸದ ಪುಸ್ತಕಗಳನ್ನು ಕನ್ನಡಕ್ಕೆ ಪರಿವರ್ತಿಸಿದರು. ಇವುಗಳನ್ನು ಐ.ಸಿ.ಎಸ್. ಅಧಿಕಾರಿಗಳೂ ಓದುತ್ತಿದ್ದರಂತೆ. ಹೊಸಪೇಟೆಯಲ್ಲಿ ನೆರವೇರಿದ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗಿಯೂ ರಾಯರು ತಮ್ಮ ಸೇವೆಯನ್ನು ಸಲ್ಲಿಸಿದರು.

—

ಅನುಭಾವಿಗಳು

ಗುರುಲಿಂಗ ಜಂಗಮ ಮಹಾರಾಜರು

(೧೭೮೯–೧೮೮೫)

ಅಲಹಾಬಾದ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದವರೂ, ಸುಪ್ರಸಿದ್ಧ ಅನುಭಾವಿಗಳೂ ಆಗಿದ್ದ ಡಾ. ರಾನಡೆ ಅವರು ಗುರುಲಿಂಗ ಜಂಗಮ ಮಹಾರಾಜರ ಪರಂಪರೆಯವರು. ಗುರುಲಿಂಗ ಜಂಗಮ ಮಹಾರಾಜರ ಶಿಷ್ಯರು ಉಮದಿಯ ಬಾವುಸಾಹೇಬ ಮಹಾರಾಜರು. ಅವರ ಶಿಷ್ಯರು ಅಂಬೂರಾವ್ ಮಹಾರಾಜ. ಅಂಬೂರಾವರ ಶಿಷ್ಯರು ಗುರುದೇವ ಡಾ. ರಾನಡೆ ಅವರು. ಕನ್ನಡಿಗರಾಗಿದ್ದ ಡಾ. ರಾನಡೆ ಅವರು ಕನ್ನಡ ಸಂತರ ಅನುಭಾವಕ್ಕೆ ಮನಸೋತದ್ದು ಗುರುಲಿಂಗ ಜಂಗಮ ಮಹಾರಾಜರ ತತ್ವಪದಗಳನ್ನು ಕೇಳಿ. ಡಾ. ರಾನಡೆಯವರು ಇವರನ್ನು ಮರಾಠಿಯ ಸಂತರಾದ ಜ್ಞಾನೇಶ್ವರರಿಗೆ ಹೋಲಿಸಿದ್ದಾರೆ. ಗುರುಲಿಂಗರ ಪ್ರಭಾವ ತಮ್ಮ ಮೇಲೆ ಆದುದನ್ನು ರಾನಡೆಯವರು ಹೀಗೆ ವರ್ಣಿಸಿದ್ದಾರೆ :

" ಒಮ್ಮೆ ನಾವಿಬ್ಬರೂ (ಡಾ. ರಾನಡೆ ಮತ್ತು ಅವರ ಗುರು ಅಂಬೂರಾವ ಮಹಾರಾಜರು) ವಿಜಾಪುರ ಜಿಲ್ಹೆಯಲ್ಲಿಯ ಹೊರ್ತಿ ಎಂಬ ಗ್ರಾಮದಲ್ಲಿದ್ದೆವು. ಆಗ ಅಲ್ಲಿ ಒಬ್ಬರು ಪದವೊಂದನ್ನು ಹೇಳಿದರು. ನಾನದನ್ನು ಕೇಳುತ್ತಿರುವಾಗ ಸದ್ಗುರುಗಳು ಅದರ ಅರ್ಥವನ್ನು ಅರುಹಲು ನನ್ನನ್ನು ಆಜ್ಞಾಪಿಸಿದರು. ಆಗ ನಾನೆಂದೆ : ' ಈ ಪದದಲ್ಲಿಯ ಗರುಡ, ಉರಗ ಎರಡು ಶಬ್ದಗಳನ್ನುಳಿದು ನನಗೆ ಏನೂ ಅರ್ಥವಾಗಲಿಲ್ಲ. ' ಅದಕ್ಕೆ ಅವರೆಂದರು : ' ಇಂಥ ಅಲ್ಪ ತಿಳುವಳಿಕೆಯಿಂದ ನೀವು ತೃಪ್ತರಾಗಕೂಡದು; ನೀವು ಕನ್ನಡವನ್ನು ಚೆನ್ನಾಗಿ ಕಲಿಯಬೇಕು. ' "[೧] ತತ್ಪರಿಣಾಮವಾಗಿ, ಗುರುದೇವರು ಕನ್ನಡವನ್ನು ಕಲಿಯಲು ಪ್ರಾರಂಭಿಸಿದರು.

ಅವರಿಗೆ ದೊರೆತ ಮೊದಲನೆಯ ಕನ್ನಡ ಪುಸ್ತಕವೆಂದರೆ, ಬಾಲಬೋಧ ಲಿಪಿಯಲ್ಲಿದ್ದ ' ಮಹಾರಾಜರವರ ವಚನ ' ಎಂಬ ಕನ್ನಡ ಪದ್ಯಗಳ ಪುಸ್ತಕ. ಇದನ್ನು ಶ್ರಿ ಬಾಬಾಚಾರ್ಯ ಕಾವ್ಯ ಎಂಬವರು ಸನ್ ೧೯೦೮ ರಲ್ಲಿ ವಿಜಾಪುರದಲ್ಲಿ ಪ್ರಸಿದ್ಧಿಸಿದ್ದರು. ಈ ಗ್ರಂಥದಲ್ಲಿ ನಿಂಬರಗಿಯ ಗುರುಲಿಂಗ ಜಂಗಮ ಮಹಾರಾಜರ ವಚನಗಳೂ ಇದ್ದವು. ಈ ವಚನಗಳನ್ನು ಓದಿ ಗುರುದೇವರು ಮುಗ್ಧರಾದರು. ಅವರು ಈ ಸಂತರನ್ನು " ಆಧುನಿಕ ಕನ್ನಡ ನಾಡಿನ ಶ್ರೇಷ್ಠತಮ ಸಂತರೆಂತಲೂ, ಆಧುನಿಕ ಭಾರತದ ಶ್ರೇಷ್ಠತಮ ಸಂತರಲ್ಲಿ ಓರ್ವರೆಂತಲೂ ಭಾವಿಸಿದ್ದರು. " ಲಚ್ಯಾಣ ಗ್ರಾಮದಲ್ಲಿ ಸೇರಿದ ಒಂದು ಸಮ್ಮೇಲನಕ್ಕೆ ಸಂದೇಶವನ್ನು ಕಳಿಸುವಾಗ ಗುರುದೇವರು ಹೀಗೆ ಬರೆದಿದ್ದರು :

---

೧ ಕನ್ನಡ ಪರಮಾರ್ಥ ಸೋಪಾನ : ರಾ. ದ. ರಾನಡೆ ೧೯೬೯– ಪು. ೪.

"ಶ್ರೀ ನಿಂಬರಗಿ ಮಹಾರಾಜರ ಸಂಪ್ರದಾಯವೇ ಕರ್ನಾಟಕದಲ್ಲಿಯ ಧರ್ಮ ಪಂಥಗಳಲ್ಲಿ ಏಕತೆಯನ್ನು ನಿರ್ಮಿಸಬಲ್ಲ ತಳಹದಿ. ಅವರು ಹಿರಿಯ ವೀರಶೈವರು; ಹಾಗು ಅವರ ಶಿಷ್ಯರು ಹಿರಿಯ ಬ್ರಾಹ್ಮಣರು. ಅವರಿಬ್ಬರು ಕೂಡಿ ಪಾರಮಾರ್ಥಿಕ ಜೀವನಕ್ಕೆಯೆ ಹಿರಿಯ ಭೂಷಣ ಪ್ರಾಯರು........ ನಿಂಬರಗಿ ಗ್ರಾಮವು ವಿಜಾಪುರ ಜಿಲ್ಹೆಯಲ್ಲಿ, ಒಂದು ತೀರ ದೂರದ ಮೂಲೆ ಯಲ್ಲಿದ್ದರೂ ಮತ್ತು ಶ್ರೀ ನಿಂಬರಗಿ ಮಹಾರಾಜರವರು ತೀರ ಅಪ್ರಸಿದ್ಧರಿದ್ದರೂ, ಅವರು ಉದ್ಯಾನದ ಮೂಲೆಯೊಂದರಲ್ಲಿ ನೆಡಲಾದ ಬಕುಲ ವೃಕ್ಷದಂತಿರುವರು. ಅದರ ಹೂಗಳ ಪಾರ್ಥಿವ ಪರಿಮಳವು ಇಡೀ ಉದ್ಯಾನವನ್ನು ತುಂಬಿಬಿಡುವಂತೆ, ಇವರ ಪಾರಮಾರ್ಥಿಕ ಪರಿಮಳವು ಇಡೀ ಕರ್ನಾಟಕದಲ್ಲಿ ಪಸರಿಸದಿರದು." ೧

ಗುರುಲಿಂಗ ಜಂಗಮ ಮಹಾರಾಜರ ಪೂರ್ವಾಶ್ರಮದ ಹೆಸರು ನಾರಾಯಣರಾವ್. ಇವರು ಸನ್ ೧೭೯೦ ರಲ್ಲಿ ಸೊಲ್ಲಾಪುರದಲ್ಲಿಯ ತಮ್ಮ ಸೋದರಮಾವನ ಮನೆಯಲ್ಲಿ ಜನಿಸಿದರು. ಅವರ ವೃತ್ತಿ ನೇಕಾರಿಕೆ. ಅವರು ಸುಮಾರು ೨೫ ವರುಷದವರಿದ್ದಾಗ ಒಂದು ಸಲ ಹೋಳಿ ಹುಣ್ಣಿಮೆಯ ಹಬ್ಬದಲ್ಲಿ ಹುಡುಗಾಟವಾಡಿದ್ದನ್ನು ಸಹಿಸದ ಅವರ ತಂದೆಯವರು ಅವರಿಗೆ ಛೀಮಾರಿ ಹಾಕಿದರು. ಇದರಿಂದ ನೊಂದುಕೊಂಡು ಅವರು ಪಂಢರಪುರಕ್ಕೆ ಹೋದರು. ಅಲ್ಲಿ ಅವರಿಗೆ ಸ್ವಪ್ನದಲ್ಲಿ ನೀನು ಸಿದ್ಧಗಿರಿಗೆ ಹೋಗು ಎಂದು ದೃಷ್ಟಾಂತವಾಯಿತು. ಆ ಪ್ರಕಾರ ಅವರು ಸಿದ್ಧಗಿರಿಗೆ ಹೋಗಿ, ಅಲ್ಲಿ ವಾಸಿಸುತ್ತಿದ್ದ ಮುಪ್ಪಿನ ಮುನಿ ಎಂಬವರಿಂದ ದೀಕ್ಷೆ ಹೊಂದಿದರು. ಆ ಮುಂದು ಇವರ ಜೀವನ ಮಾರ್ಗವೇ ಬದಲಾಯಿತು. ಗುರುಲಿಂಗ ಜಂಗಮ ಮಹಾರಾಜರ ಎತ್ತರವಾದ ನಿಲುವು, ಸುಂದರ ವಾದ ಮುಖ, ಬೊಗರೆಯಂಥ ಗಡ್ಡವನ್ನು ವರ್ಣಿಸುವ ಜಾನಪದ ಗೀತವೊಂದಿದೆ. ಅದರಲ್ಲಿ ಮಹಾರಾಜರ ಸುಂದರವಾದ ವರ್ಣನೆ ಇದೆ. ಮಹಾರಾಜರಿಗೆ ದೀಕ್ಷೆ ತೊರೆತದ್ದು ಮುಪ್ಪಿನ ಮುನಿಗಳಿಂದ. ಈ ಮುಪ್ಪಿನ ಮುನಿಗಳ ಗುರುಪರಂಪರೆ ಪ್ರಾಚೀನವಾದುದು. ನಾಥ ಪಂಥದಲ್ಲಿ ಸುಪ್ರಸಿದ್ಧರಾಗಿದ್ದ ನವ–ನಾಥರಲ್ಲಿ– ಒಂಬತ್ತು ನಾಥ ಗುರುಗಳಲ್ಲಿ– ರೇವಣಸಿದ್ಧರು ಒಬ್ಬರು.

ಗೋರಕ್ಷ–ಜಾಲಂಧರ–ಚರ್ಪಟಶ್ಚ
ಅಡ್ಬಂಗ–ಕಾನೀಪ–ಮಛಿಂದರಾದ್ಯಾಃ
ಚೌರಂಗ–ರೇವಣ–ಚ ಭರ್ತೃಸಂಜ್ಞಾಃ
ಭೂಮ್ಯಾಂ ಬಭೂವುಃ ನವನಾಥ ಸಿದ್ಧಾಃ ॥

–ಈ ಪಂಥದ ಗೋರಕ್ಷನನ್ನೇ ಅಲ್ಲಮಪ್ರಭುಗಳು ಸಂದರ್ಶಿಸಿದುದು. ಆ ಪರಂಪರೆಯಲ್ಲಿಯೇ ರೇವಣಸಿದ್ಧ ಅಥವಾ ರೇವಣನಾಥರು. ಸಿದ್ಧಗಿರಿಯ ಕಾಡಸಿದ್ಧರು ರೇವಣನಾಥರ ಶಿಷ್ಯರಾಗಿರ ಬೇಕು. ಅಥವಾ ರೇವಣನಾಥರೇ ಕಾಡಸಿದ್ಧರಾಗಿರಬೇಕು ಎಂದು ಹೇಳುತ್ತಾರೆ. ಈ ಕಾಡಸಿದ್ಧರ ಜತೆಯವರು ಮರುಳಸಿದ್ಧರು. ಇವರನ್ನೇ ಮಾಯೆ ಮೋಹಿಸಲು ಯತ್ನಿಸಿದಳು. ಅಂಬಿಕಾತನಯ ದತ್ತರು ಹೇಳಿದ ಹಾಗೆ–

ಮರುಳ ಮಾಡಾಕ ಹೋಗಿ
ಮರುಳಸಿದ್ಧನ ನಾರಿ
ಮರುಳಾಗ್ಯಾಳೋ ಜಂಗಮಯ್ಯಾಗ
ಕಿನ್ನರಿ ಆಗ್ಯಾಳೊ ಕೈಯಾಗ
ನುಡಿದಾಳೋ ಬಂಧಾಂಗ ಮೈಯಾಗ ॥

೧ ಅದೇ ಪು. ೫

ನಾಥ ಪಂಥದ ಮುಪ್ಪಿನ ಮುನಿಗಳು ಸನ್ ೧೮೨೫ರ ಸುಮಾರಿಗೆ ಗುರುಲಿಂಗ ಮಹಾರಾಜರಿಗೆ ದೀಕ್ಷೆಯನ್ನು ಕೊಟ್ಟರು. ಮಹಾರಾಜರು ಅನೇಕ ವಚನಗಳನ್ನೂ, ಪದಗಳನ್ನೂ ಹೇಳಿದ್ದಾರೆ. ಡಾ. ರಾನಡೆಯವರ 'ಬೋಧಸುಧೆ'ಯಲ್ಲಿ ಮಹಾರಾಜರ ಅನೇಕ ವಚನಗಳು ಪ್ರಕಟವಾಗಿವೆ. ಮಹಾರಾಜರು ಅನೇಕ ಸಿದ್ಧಿಗಳನ್ನು ಪಡೆದವರಾಗಿದ್ದರೂ, ಇವರ ಅನುಭಾವ ತರ್ಕದ ಒರೆಗಲ್ಲನ್ನು ಆಶ್ರಯಿಸಿತ್ತು. ರಘುನಾಥ ಪ್ರಿಯ ಮಹಾರಾಜ ಇಲ್ಲವೆ ಸಾಧು ಮಹಾರಾಜರವರ ಆಡಂಬರದ ಭಕ್ತಿಯನ್ನು ಗುರುಲಿಂಗರು ಟೀಕಿಸಿದರು. ಇವರು ತಮ್ಮ ಮನೆತನದ ವೃತ್ತಿಯಾದ ನೇಕಾರಿಕೆಯನ್ನು ಬಿಟ್ಟು, ಕುರಿ ಕಾಯುವ ಕೆಲಸವನ್ನು ಪ್ರಾರಂಭಿಸಿದರು. ಕುರಿಗಳನ್ನೆಲ್ಲ ಮೇಯಬಿಟ್ಟು, ಇವರು ಧ್ಯಾನಸ್ಥರಾಗಿ ಭಗವನ್ನಾಮಸ್ಮರಣೆ ಮಾಡುತ್ತ ಕುಳಿತಿರುತ್ತಿದ್ದರು. ಇವರ ಭಕ್ತರಲ್ಲಿ ಎಲ್ಲ ವರ್ಗದವರೂ ಇದ್ದರು. "ಅನಾವೃತ್ತಿಃ ಶಬ್ದಾತ್" ಎಂದು ಬಾದರಾಯಣರು ಹೇಳಿದ ಹಾಗೆ "ಕುರುಹು ಕಂಡರೆ ಮರಳಿ ಭವಕ್ಕೆ ಬರಲಾರಿ"– ಎಂದು ಗುರುಲಿಂಗರು ಹೇಳುತ್ತಿದ್ದರು. ಸಾಧಕನಿಗೆ ಶುದ್ಧ ಚಾರಿತ್ರ್ಯ ಆವಶ್ಯಕ. ಅವನು ಸಂಸಾರವನ್ನು ಬಿಟ್ಟಿರಬೇಕೆಂದೇನೂ ಇಲ್ಲ. ಸಂಸಾರದಲ್ಲಿದ್ದೂ ಶುದ್ಧ ಚಾರಿತ್ರ್ಯವುಳ್ಳ ಮನುಷ್ಯ ಮುಕ್ತನಾಗಿರಬಹುದು. ಪರಮಾತ್ಮ ಪಂಚವದನ ರೂಪವಾಗಿ ಗುರುಲಿಂಗರಿಗೆ ಪ್ರತ್ಯಕ್ಷನಾಗಿದ್ದನು. ಪರಮಾತ್ಮನನ್ನು ಕಂಡ ಮೇಲೆ, ಸಂಸಾರ ಬಾಧೆಯಿಲ್ಲ; ಸಂಶಯದ ಅನಿಶ್ಚಿತತೆಯಿಲ್ಲ; ಕರ್ಮದ ಉಪಾಧಿಯಿಲ್ಲ.

ಮಹಾರಾಜರ ವಚನಗಳಿಗೆ ಗುರುದೇವ ರಾನಡೆಯವರು ವೇದೋಪನಿಷತ್ತಿನಷ್ಟೇ ಮಹತ್ವವನ್ನು ಕೊಡುತ್ತಿದ್ದರು : "Shri Nimbargi Maharaj has givin very helpful suggestion for regulating one's life for realising the spiritual destiny of man and his words are respected by Dr. Ranade as sacred scriptures being utterances of a God-realiser." ೧

ಭಕ್ತ ದೇವರನ್ನು ಬಿಟ್ಟಿಲ್ಲ. ಬಿಟ್ಟಿರಲಾರ. ಈ ಭಾವದಲ್ಲಿಯ ಗುರುಲಿಂಗ ಜಂಗಮರ ಒಂದೆರಡು ಪದಗಳನ್ನು ನಾವು ಇಲ್ಲಿ ಗಮನಿಸಬಹುದು :

ಅಂದಿಲ್ಲ ಸ್ವಾಮಿ ಇಂದಿಲ್ಲ
    ಎಂದಿಗಾದರು ನಿಮ್ಮನಗಲಿ ನಾ ಇಲ್ಲ ॥ ಪ ॥

ನಿರ್ಬೈಲನು ನೀನು– ನಿರ್ವಿಕಾರನು ನಾನು
    ಸಗುಣರೂಪ ನೀನು– ಶರಣ ಮಾಡುವೆ ನಾನು ॥ ಅ ಪ ॥

ಪಂಚವದನ ನೀನು– ಪಾದನಂಬಿದೆ ನಾನು
    ಜಗಭರಿತ ನೀನು– ಜಗದ ಒಳಗೆ ನಾನು
ಪ್ರಣವಸ್ವರೂಪ ನೀನು– ಪಠಿಸಿ ನೋಡುವೆ ನಾನು
    ಗುರುಲಿಂಗ ಜಂಗಮ ನೀನೆ– ನಾನೂ ನೀನೇ ॥ ೧ ॥ ೨

ಕರಚರಣ ಕೃತಂ ಪಾಪಂ– ನಿವಾರಿಸುವವ ಈ ಪರಮಾತ್ಮ. ಇವನೇ ನಮ್ಮ ಮನಸ್ಸಿನ ಮುರಿಗೆಯನ್ನು ತಿದ್ದಿ ಬಿಡಿಸಬೇಕು :

---

೧ Pathway to God– (A Journal of Spiritual life) 1971, P. 13.

೨ ಕನ್ನಡ ಪರಮಾರ್ಥ ಸೋಪಾನ– ೧೯೬೯– ಪು. ೪೯.

ಮನಸಿನ ಮುರಿಗೆಯನು ತಿದ್ದಿಸೋ ದೇವಾ ॥ ಪ ॥

ಪ್ರಾತಃಕಾಲಕೆ ಎದ್ದು ಪರದ್ರವ್ಯ ಅಪಹಾರ
ಸಾಧುರ ನಿಂದೆಯನಾಡುತಲ್ಯಾದ
ಸಾಧಿಸಿ ಯಮನವರು ಎಳೆದೊಯ್ಯುವಾಗ
ಸತ್ತೆ ಸತ್ತೆನೆಂದು ಮರುಗುತಲ್ಯಾದ ॥ ೧ ॥

ಯತಿವೇಷವ ತಾಳಿ ದೇಶಭ್ರಷ್ಟನಾಗಿ
ಕಾಶಿಯ ಕ್ಷೇತ್ರಕ್ಕೆ ಹೊರಟಿತು ಮನಸು
ಕಾಶಿಯ ದಾರಿಯೊಳು ವೇಶ್ಯೆಗೆ ಮೆಚ್ಚಿ
ಕೇಶವ ನಿಮ್ಮನು ಮರೆಯಿತು ಮನಸು ॥ ೨ ॥

ಬಲ್ಲವಗೆ ಅರ್ಜವ ಮಾಡುತಲ್ಯಾದ
ಬಡವರಿಗೆ ನೋಯಿಸಿ ನುಡಿಯುತಲ್ಯಾದ
ಗುರುಲಿಂಗಜಂಗಮ ಚರಣವ ನಂಬದೆ
ಅಡವಿಯಲ್ಲಿ ಚರಿಸ್ಯಾಡುತಲಾದ ॥ ೩ ॥ [೧]

ಇಂಥ ಪರಮಾತ್ಮನ ಸ್ವರೂಪವನ್ನು ಅರುಹಿಕೊಟ್ಟವ ಗುರು. ಗುರುವಿನಿಂದ ಅಧಿಕವುಂಟೆ ಲೋಕದೊಳು ?

ಗುರು ತಾ ತೋರಿದ ಗುರುವಿನ
ಮರೆತು ನಾನಿರಲಿ ಹ್ಯಾಂಗ
ಗುರುವಿನಿಂದ ಅಧಿಕ ಉಂಟೆ ?
ಪರಕೆ ಪರವಾದ ವಸ್ತು ॥ ಪ ॥

ಆಧಾರ ಅಗ್ನಿಯ ಸ್ಥಳದ
ಭೇದ ಅರುಹಿಸಿ ಕೊಟ್ಟಾ
ನಾದ–ಬಿಂದು–ಕಳೆಯ
ಹಾದಿ ತೋರಿಸಿ ಬಿಟ್ಟಾ ॥ ೧ ॥ [೨]

ಇಂಥ ಗುರುವಿನಿಂದ ಭವತೊಲಗಿ ಹೋಯಿತು; ಬಹುಪುಣ್ಯ ದೊರಕಿತು; ಭುವನ ಕಂದರ ವಾಯಿತು; ಗಹ್ವರವೆ ತೋರಿತು.

ನೆಲ್ಲು ಕುಟ್ಟುಣು ಬಾರಮ್ಮಾ– ಇಬ್ಬರು ಕೂಡಿ ॥ ಪ ॥

ನೆಲ್ಲು ಕುಟ್ಟುಣು ಬಾರೆ– ನಿಲ್ಲದೆ ಬೆಸ್ನು ಹತ್ತಿ
ಹನ್ನೆರಡು ಹದಿನಾರು ನಲ್ಲೆಯರು ಕೂಡಿಕೊಂಡು ॥ ಅ ಪ ॥

---

೧ ಕನ್ನಡ ಪರಮಾರ್ಥ ಸೋಪಾನ– ೧೯೬೬– ಪು. ೧೪–೧೫.
೨ ಅದೇ ಪು. ೩೧–೩೨.

ತನುವೆಂಬ ಒಳ್ಳ ಮಾಡಿ– ಪ್ರಾಣವೆಂಬ
ಒನಕಿಲೆ ಹೇರಿ ಹಾಕಿ
ವಿವೇಕವೆಂಬ ಅಕ್ಕಿ ಹಸನ ಮಾಡಿ
ಹಳ್ಳ ತಗಿಯಮ್ಮಾ ಜ್ಞಾನದೃಷ್ಟಿಲೆ ನೋಡಿ ॥ ೧ ॥

ವಾಸನತ್ರಯಗಳೆಂಬ– ಒಲೆಗುಂಡು ಮಾಡಿ
ಪ್ರಾರಬ್ಧ ಗಡಿಗೆ ಹೇರಿ
ಕಾಮಕ್ರೋಧವೆಂಬ ಕಟ್ಟಿಗೆ ಉರಿಮಾಡಿ
ಪ್ರಪಂಚ ಪರಮಾರ್ಥ ಒಳಹೊರಗೆ ನೋಡಿ ॥ ೨ ॥

ಕುದಿಯುವ ಸಮಯದಲ್ಲಿ– ಮದದ ಉಕ್ಕು
ಮೀರಿ ಬರುತಲಮ್ಮಾ
ಸತ್ವಧೀರ ಎಂಬ ಹುಟ್ಟಿಲೆ ಹೊಡೆದು
ನೆಟ್ಟಗೆ ಅಡಿಗಿಯ ಧಿಟ್ಟಾಗಿ ಮಾಡಮ್ಮಾ ॥ ೩ ॥

ಪರಮಾನ್ನ ಪಾಯಸವು– ಪ್ರಾರಬ್ಧದಿ
ಪ್ರಾಪ್ತವಾದೀತು ಏಳಮ್ಮಾ
ಗುರುಲಿಂಗ ಜಂಗಮ ಬೀಗರ ಕೂಡಿಕೊಂಡು
ಸ್ವಾನಂದ ಎಡಿಮಾಡಿ ಸವಿಯ ನೋಡಮ್ಮಾ ॥ ೪ ॥ [೧]

ಮನುಷ್ಯ ಹೀಗೆ ಮನದಲ್ಲಿಯ ಕಲ್ಪವೃಕ್ಷವನ್ನು ಕಾಣಬೇಕು.

ಕಲ್ಲುಮೆತ್ತಗೆ ಮಾಡಿಕೊಳ್ಳಣ್ಣಾ– ಬಲ್ಲವನ ಕೇಳಿ ॥ ಪ ॥

ಕಲ್ಲುಮೆತ್ತಗೆ ಮಾಡಿಕೊಳ್ಳೊ– ಕಲ್ಲುಸಕ್ಕರೆಗಿಂತ ಸವಿಯೊ
ಸಾರ ಅಮೃತ ಸುರಿದು ನೀನು– ಜ್ಞಾನಜ್ಯೋತಿ ತುಂಬಿಕೊಳ್ಳೊ ॥ ಅ ಪ ॥

ಕಲ್ಲಿನೊಳಗೆ ಪರುಷ ಕಾಣಣ್ಣಾ– ಪರಬ್ರಹ್ಮನರಿಯದೆ
ಕೈಯ ಒಳಗೆ ಬಂದೀತು ಹ್ಯಾಂಗಣ್ಣಾ
ಕಲ್ಲುಕುಟ್ಟಿಗ ಅಲ್ಲಮಪ್ರಭು– ಶಿಲೆಯ ಒಡೆದು ಸೆಲೆಯ ತೆಗೆದ
ನೀರು ನೀರು ಕೂಡಿದ ಬಳಿಕ– ಭೇದ ಭಾವಗಳ್ಯಾಕಬೇಕೊ ॥ ೧ ॥ [೨]

ಇಂಥ ಭಕ್ತನಿಗೆ ಪರಮಾತ್ಮನೆಂದರೆ ಸರಸ. ಪರಮಾತ್ಮ ಅವನಿಗೆ ಮಿತ್ರ, ಜೊತೆಗಾರ. ದಾಸರು ಹೇಳಿದ ಹಾಗೆ, ನೀನ್ಯಾಕೊ ನಿನ್ನ ಹಂಗ್ಯಾಕೊ ?– ಭಕ್ತ ಕೆಡಲಿಕ್ಕೆ ಭಗವಂತನೇ ಕಾರಣ. ಮಧುರ ಚೆನ್ನರು ಹೇಳಿದ ಹಾಗೆ–

ಹರೆಯು ಬಾರದ ಮುನ್ನ
ಹಾಗುಹೀಗೂ ಇದ್ದೆ
ಕರುಳು ಪಸಿಯಂದ ಮುನ್ನ ಕೆರಳದಿದ್ದೆ

೧ ಅದೇ ಪು. ೮೦–೮೧.
೨ ಅದೇ ಪು. ೭೯.

ಕರುಣವಿಲ್ಲದ ಬೆಂಕಿ
    ಕರುಳು ಕೆದರಿತು ಮುಂದೆ
ಮಂಜಿನಾ ಮಳೆನೀರಿಗಾಸೆಗೈದೆ

ಗುರುಲಿಂಗ ಜಂಗಮರು ಪರಮಾತ್ಮನ ವಿರುದ್ಧ ಮಾಡಿದ ಆಪಾದನೆಗಳಿವು :

ಏನು ಮಾಡಿದಿ ಕೇಳೆನ್ನ ದೇವಾ
    ಏನು ಮಾಡಿದಿ ಕೇಳೆನ್ನ ॥ ಪ ॥

ಏನು ಮಾಡಿದಿ ಎಂತೆಂತ ಹೇಳಲಿ
    ಹಿತವು ಎಲ್ಲ ನಿನ್ನಲ್ಲಿರಲು
ಘನಘಾತಕತನದಿಂದಲಿ ಎನ್ನ
    ನೀ ಕೆಡಿಸಿದಿ ಸಾಂಬಾ ॥ ೧ ॥

ಎನ್ನೊಳು ನೀನು ಕೂಡಿ ಆಡಿದಿ
    ಆಡುತ ಬಂದು ಘಾಸಿ ಹಾಕಿದಿ
ಘಾಸಿಯು ಜರಿದು ಜಾರಿ ನಿಂತಿದಿ
    ಇದು ಅಲ್ಲಾ ರೀತಿ ಸಾಂಬಾ ॥ ೨ ॥

ಖುಳ್ಳ ದೇಹದೊಳು ಘೂಳ್ಯಾಗಿ ಮೆರೆದಿ
    ದುಃಖಕೆ ಎನ್ನ ಗುರಿ ಮಾಡಿದಿ
ಭಿನ್ನವಿಲ್ಲದಲಿ ಭಿನ್ನ ಮಾಡಿದಿ
    ಭುಲವಿಗೆ ಮರುಳಾದಿ ಸಾಂಬಾ ॥ ೩ ॥

ಘಾಸಿಯೊಳಗೆ ಎನ್ನ ಘಾಸಿ ಮಾಡುವದೆ ?
    ಈಸುಕಾಲ ನಿನ್ನ ದಯದಲ್ಲಿದ್ದೆ
ಹರುಷದಿಂದ ಶಿವ ಸದ್ಗುರು ಎನ್ನಲು
    ಭವದ ಘಾಸಿ ನೀ ಹರಿಸಿದಿ ಸಾಂಬಾ ॥ ೪ ॥

ಜೀವ ಶಿವ ಎಂಬ ಭೇದ ನಿನ್ನಲ್ಲೆ
    ಈ ಸಂಬಂಧವ ನಡಿದು ನೋಡಲೆ
ತಕವಾತಕವೀ ಹಚ್ಚಬ್ಯಾಡಲೇ
    ಹುಚ್ಚಾ ನೀ ಕೇಳೊ ಸಾಂಬಾ ॥ ೫ ॥

ಜೀವದ ಇಚ್ಛೆಲೆ ಆಗುವದಿಲ್ಲ
    ಶಿವನ ಇಚ್ಛೆ ನಡಿಸುವದೆಲ್ಲ
ಗುರುಲಿಂಗ ಜಂಗಮನ ಪಾದಕ ಹೊಂದಿ
    ದೋಷವ ಕಳಕೊಳ್ಳೊ ಸಾಂಬಾ ॥ ೬ ॥

‘ಭುಲವಿ’, ‘ತಕವಾತಕವಿ’ (ಪೋಸ) ಮಹಾರಾಜರ ಮಹಾರಾಷ್ಟ್ರಸಂಬಂಧ ಸೂಚಿಸುತ್ತದೆ. ಹೀಗೆ ೬೫ ವರುಷ ತುಂಬುಪರಮಾರ್ಥದ ಜೀವನವನ್ನು ಸಾಗಿಸಿ ಹಲವಾರು ಜೀವಗಳನ್ನು ಉದ್ಧಾರ ಮಾಡಿ ಗುರುಲಿಂಗ ಜಂಗಮ ಮಹಾರಾಜರು ಸನ್ ೧೮೮೫ರಲ್ಲಿ ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿ ಪರಮಾತ್ಮನ ಪದತಲವನ್ನು ಸೇರಿದರು.

ಅನಂತಾದ್ರೀಶ

(ಸು. ೧೮೦೦ – ಸು. ೧೮೮೦)

ಇವರ ಪೂರ್ಣ ಹೆಸರು ಅನಂತಾಚಾರ್ಯ ಗೋಕಾವಿ. ಒಳ್ಳೆಯ ಸಂಸ್ಕೃತ ವಿದ್ವಾಂಸರೂ, ಸಂಗೀತಜ್ಞರೂ ಆಗಿದ್ದರು. ಇವರಿಗೆ ಪಾರಿಜಾತ ಆಟಗಳಲ್ಲಿ ವಿಶೇಷ ಆಸಕ್ತಿ. 'ಅನಂತಾದ್ರೀಶ' ಎಂಬ ಅಂಕಿತದಲ್ಲಿ ಇವರು ಕಾವ್ಯರಚನೆ ಮಾಡಿದ್ದಾರೆ. ಇವರು ರಚಿಸಿದ ಅನೇಕ ಹಾಡುಗಳು ಗೋಕಾಕ ಭಾಗದಲ್ಲಿ ಇನ್ನೂ ಪ್ರಚಲಿತವಿವೆ.

ಇವರು 'ಭವಿಷ್ಯೋತ್ತರ ಪುರಾಣೋಕ್ತ ಕನ್ನಡ ವೆಂಕಟೇಶ ಮಹಾತ್ಮೆ' (೧೮೮೬); 'ಧ್ರುವ ಚರಿತ್ರೆ' (೧೯೦೩); 'ಪ್ರಹ್ಲಾದ ಚರಿತ್ರೆ' (೧೯೦೩) ಮತ್ತು 'ಶಿವಪಾರಿಜಾತ' ಎಂಬ ಗ್ರಂಥಗಳನ್ನು ಬರೆದಿದ್ದಾರೆ. ಇವರ ಶೈಲಿಯ ದೃಷ್ಟಾಂತವಾಗಿ ಭಕ್ತನ ವಿರಹವೇದನೆಯನ್ನು ಸೂಚಿಸುವ ಈ ಕೆಳಗಿನ ಗೀತವನ್ನು ಕೊಡಬಹುದು.

ಹ್ಯಾಗೆ ಮಾಡಲೆವ್ವ ನಾನು

ರಾಗ : ಸಾರಂಗ

ಹ್ಯಾಗ ಮಾಡಲೆವ್ವ ನಾನು ಏ ದೂತಿ ನಾ ಇ
ನ್ಹ್ಯಾಗೆ ಮಾಡಲೆವ್ವ ನಾನು ॥ ಪ ॥

ಹ್ಯಾಗೆ ಮಾಡಲೆವ್ವ ನಾನು
ಹೋಗಿ ಸವತಿಮನೆಯ ಸೇರಿದ
ಭೋಗಮಂದಿರ ಬೇಸರಾಯಿತು
ಬೇಗ ಈಗಲೆ ಹೋಗಿ ಕರೆಯೆ ॥ ಅ ಪ ॥

ನೀರಿನೊಳಗೆ ಮನೆಯ ಮಾಡಲ್ಯಾ– ಅಲ್ಲ್ಯವನು ಪೊತ್ತ
ಭಾರ ಬೆನ್ನೊಳು ಪೊತ್ತು ತಾಳಲ್ಯಾ ?
ಬೇರು ತಿನಿಸಿ ಮರಳು ಮಾಡಿ
ಕ್ರೂರಬುದ್ಧಿ ಬಿಡಿಸಲೇನ ?
ಯಾರ ಮುಂದ ಹೇಳಲಿನ್ನ
ದಾರ ಮಾತು ಕೇಳಲೊಲ್ಲ ? ಹ್ಯಾಂಗ ಮಾಡಲೆವ್ವ ॥ ೧ ॥

ಜಾತಿಯಿಂದ ತಿರುಕನೆನ್ನಲೆ– ಮತ್ಸರವ ಬಿಟ್ಟು
ಪ್ರೀತಿಯಿಂದ ಅವನ ಕೂಡಲೇ ?
    ಮಾತೃಹತ್ಯ ಮಾಡಿದವಗ
    ಯಾತಕಿನ್ನು ಮಾಯ–ಮಮತಿ
    ಕೋತಿಹಿಂಡ ಕೂಡಿದವಗ
    ನೀತಿ ಹೇಳಿದರೇನು ಫಲ ? ಹ್ಯಾಂಗ ಮಾಡಲೆವ್ವ ॥ ೨ ॥

ಎಂತು ಪೇಳಲವ್ವ ನಾನು– ರುಕ್ಮಿಣಿಗೆ ಒಲಿದು
ಭ್ರಾಂತನಾಗಿ ಕುಳಿತ ತಾನು........
    ಕಂತುಪಿತಾನಂತಾದ್ರೀಶ
    ನಿಂತನಲ್ಲೆ ನಾಚಿಕೆ ಬಿಟ್ಟು
    ಭ್ರಾಂತಳಾಗಿ ಕುಳಿತೆ ಆತಗೆ
    ಎಂಥ ಕುದುರೆ ಕಳುಹಲಮ್ಮ– ಹ್ಯಾಂಗ ಮಾಡಲೆವ್ವ ॥ ೩ ॥ [೧]

—

೧ ಜಯಂತಿ : ನವಂಬರ ೧೯೫೦ ಪೃ. ೩೭.






ಶರೀಫ ಸಾಹೇಬರ ಗದ್ದುಗೆ




ಬಾಲಲೀಲಾ ಮಹಾಂತ ಶಿವಯೋಗಿಗಳು




ಮೈಸೂರ ಮಹಾರಾಜರು ಶಿವಯೋಗಿಗಳಿಗೆ ಕೊಟ್ಟ ಕುಂಬಳ ಬುರುಡೆ




ತುರಮುರಿಯವರ ಕನ್ನಡ ಕವಿತಾ ಪದ್ಧತಿ



ಕರ್ನಾಟಕ [illegible] ನವಮಂಜರಿಯಲ್ಲಿ ಮುದ್ರಿತವಾದ ಬಾಣ ಕಾದಂಬರಿ



ಸ್ವಾಮಿಗಳು ತುರಮುರಿಯವರಿಗೆ ಬರೆದ ಪತ್ರ



ಸಟೀಕ ರಾಜಶೇಖರವಿಲಾಸ

THE SECOND CHAPTER

OF

RAJASHEKHARA

WITH

COMMENTARY IN MODERN CANARESE

BY

SHANTAVIRA BACHIDEVA KITTUR

A Teacher in the [illegible] Training College

ಶಾಂತವೀರ ಕಿತ್ತೂರರ ಸಟೀಕ ರಾಜಶೇಖರವಿಲಾಸ

ಶಿಶುನಾಳ ಶರೀಫ ಸಾಹೇಬರು

(೧೮೧೮ – ೧೮೮೯)

ಶಿಶುನಾಳ ಶರೀಫರದು ಅನೇಕ ವಿಧದಲ್ಲಿ ಬಹು ದೊಡ್ಡ ಹೆಸರು. ಅವರು ತಮ್ಮ ತತ್ವಪದಗಳನ್ನು ಹೇಳಿ ಕನ್ನಡದ ಕಣಜವನ್ನು ತುಂಬಿದರು. ಅವರದು ಸಾಹಿತ್ಯದೃಷ್ಟಿಯಾಗಿರದೆ, ಪ್ರಾಮುಖ್ಯತಃ ಅನುಭಾವದೃಷ್ಟಿ. ಅವರು ಸಾಹಿತ್ಯವಾಹಿನಿಯ ಪ್ರಮುಖ ಪ್ರವಾಹದಲ್ಲಿ ಈಜಿದವರಲ್ಲ; ಸಾಹಿತ್ಯವಾಹಿನಿಯ ಉಪಪ್ರವಾಹವಾಗಿ ಕನ್ನಡದ ಭೂಮಿ ಒಳ್ಳೆಯ ಬೆಳೆಯಿಂದ ಕೂಡಿ ನಲಿಯುವಂತೆ ಮಾಡಿದವರು; ಅನುಭಾವದ ಅಭಿವ್ಯಕ್ತಿಗೆ ಬಾಯಿ ಒದಗಿಸಿಕೊಟ್ಟವರು. ೧೮ ನೆಯ ಶತಮಾನದ ಉತ್ತರಾರ್ಧ ಮತ್ತು ೧೯ನೆಯ ಶತಮಾನದ ಪೂರ್ವಾರ್ಧದಲ್ಲಿ ಆಗಿ ಹೋದ ಮುರಗೋಡದ ಚಿದಂಬರ ದೀಕ್ಷಿತರು, ಗರಗದ ಮಡಿವಾಳಪ್ಪನವರು, ಕಳಸದ ಗೋವಿಂದ ಭಟ್ಟರು, ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳು ಮೊದಲಾದವರೆಲ್ಲ ಈ ವರ್ಗಕ್ಕೆ ಸೇರಿದವರು.

ಈ ಭಕ್ತವೃಂದದಲ್ಲಿ ಕೃತಿಗಳ ವೈಪುಲ್ಯ, ಜನಪ್ರಿಯತೆ, ಅನುಭಾವದ ಅಭಿವ್ಯಕ್ತಿ ಮತ್ತು ಸಾಹಿತ್ಯ ಗುಣಗಳ ಮೂಲಕ ಶಿಶುನಾಳ ಶರೀಫ ಸಾಹೇಬರ ಹೆಸರನ್ನು ಮೊದಲಿಗೇ ಹೇಳಬೇಕು. ಇಂದಿಗೂ ಭಜನಾ ಮಂಡಲಗಳ ಭಕ್ತರ ಬಾಯಲ್ಲಿ, ಅನುಭಾವಿಗಳ ಸತ್ಸಂಗದಲ್ಲಿ, ಧಾರವಾಡ ಜಿಲ್ಹೆಯ ಅನೇಕ ರೈಲು ಡಬ್ಬಿಗಳ ಭಿಕ್ಷುಕರ ಹಾಡುಗಳಲ್ಲಿ, ಶರೀಫ ಸಾಹೇಬರ ಪದಗಳನ್ನು ನಾವು ಕೇಳುತ್ತೇವೆ.

ಶರೀಫ ಸಾಹೇಬರು ಹುಟ್ಟಿದ್ದು ಧಾರವಾಡ ಜಿಲ್ಹಾ ಶಿಗ್ಗಾಂವ ತಾಲೂಕಿನ ಶಿಶುವಿನಹಾಳ ಎಂಬ ಗ್ರಾಮದಲ್ಲಿ. ಇದು ಪುಣೆ–ಬೆಂಗಳೂರು ರೈಲು ರಸ್ತೆಯ ಮೇಲಿರುವ ಗುಡಗೇರಿ ನಿಲ್ದಾಣದಿಂದ ಸುಮಾರು ನಾಲ್ಕು ಮೈಲು ದೂರದಲ್ಲಿದೆ. ಇವರ ತಂದೆಯ ಹೆಸರು ಇಮಾಮ್‌ಸಾಹೇಬ; ತಾಯಿಯ ಹೆಸರು ಹಜ್ಜುಮಾ. ತಂದೆ ಇಮಾಮ್‌ಸಾಹೇಬರು ಹಿಂದುಶಾಸ್ತ್ರ, ಜ್ಯೋತಿಷ್ಯ, ವೈದ್ಯಕ, ಮಂತ್ರ–ತಂತ್ರಗಳನ್ನು ಬಲ್ಲವರಾಗಿದ್ದರು. ತೀರ ಬಡಕುಟುಂಬ. ಇಂಥ ಮಹಮದೀಯ ಬಡ ಕುಟುಂಬದಲ್ಲಿ ಶರೀಫ ಸಾಹೇಬರ ಜನನ ದಿನಾಂಕ ೩–೭–೧೮೧೮ ರಂದು ಸೂರ್ಯೋದಯ ಕಾಲದಲ್ಲಿ ಆಯಿತು. ೧ ಶರೀಫರಿಗೆ ತಂದೆಯವರೇ ಚಿಕ್ಕಂದಿನಲ್ಲಿ ಕನ್ನಡ–ಉರ್ದು ಭಾಷೆಗಳನ್ನು ಕಲಿಸಿದ್ದಲ್ಲದೆ, ಮಹಾಭಾರತ, ರಾಮಾಯಣ, ಶರಣರ ಮತ್ತು ಮಹಮದೀಯ ಸಾಧು ಸಂತರ

---

೧ ಡಾ. ಎಮ್. ಎಸ್. ಸಿಂದಗಿ; ಶಿಶುನಾಳ ಶರೀಫ– ಅವರ ಜೀವನ, ಕೃತಿಗಳು ಮತ್ತು ದರ್ಶನ– ಅಪ್ರಕಟಿತ– ಪು. ೩೧.

ಕಥೆಗಳನ್ನು ಹೇಳಿಕೊಡುತ್ತಿದ್ದರು. ಶರೀಫರ ಶಿಕ್ಷಣ ಮುಲ್ಕಿ ಪರೀಕ್ಷೆಯ ವರೆಗೆ ಆಗಿತ್ತೆಂದು ಹೇಳುತ್ತಾರೆ.

ಶರೀಫ ಸಾಹೇಬರ ಜೀವನ ತುಂಬಾ ವೈಶಿಷ್ಟ್ಯಪೂರ್ಣವಾದುದು; ಅಪೂರ್ವವಾದುದು. ಇಂದು ನಾವು ಹೇಳುತ್ತಿರುವ ಜಾತೀಯ ಸೌಹಾರ್ದದ ಉತ್ತಮ ನಿದರ್ಶನವೆಂದರೆ ಶರೀಫ ಸಾಹೇಬರು. ಶರೀಫರು ಸ್ವತಃ ಜಾತಿಯಿಂದ ಮಹಮದೀಯರು; ಅವರ ಗುರು, ಬ್ರಾಹ್ಮಣರಾಗಿದ್ದ ಕಳಸದ ಗೋವಿಂದ ಭಟ್ಟರು. ಅವರ ಅನುಭಾವ, ತತ್ವ ವಿವರಣೆ ವೈದಿಕ ಮಾತ್ರವಲ್ಲದೆ, ವೀರಶೈವ ಪರಂಪರೆಯುಳ್ಳದು. ಮಹಮದೀಯ, ವೈದಿಕ, ವೀರಶೈವಗಳ ತ್ರಿವೇಣಿ ಸಂಗಮವನ್ನು ನಾವು ಶರೀಫರ ಜೀವನ ಚರಿತೆಯಲ್ಲಿ ಕಾಣುತ್ತೇವೆ. ಶರೀಫರಿಗೆ ಚಾಮರಸ ರಚಿತ ' ಪ್ರಭುಲಿಂಗ ಲೀಲೆ ' ಯೆಂದರೆ ಅಚ್ಚುಮೆಚ್ಚು. " ಆರು ಶಾಸ್ತ್ರ, ಹದಿನೆಂಟು ಪುರಾಣಾ ನನ್ನ ಬಗಲಾಗ, ಪ್ರಭುಲಿಂಗಲೀಲಾ ನನ್ನ ತಲೀಮ್ಯಾಗ " ಎಂದು ಅವರು ಹೇಳುತ್ತಿದ್ದರಂತೆ.

ಶರೀಫರು ಶಿಕ್ಷಕರಾಗಿ ಶಿಶುವಿನಹಾಳ, ಮಂಡಿಗಿಹಾಳ, ಗುಂಜಳ– ಮೊದಲಾದ ಸ್ಥಳಗಳಲ್ಲಿ ಕೆಲಸ ಮಾಡಿದರಂತೆ. ಆದರೆ, ಶರೀಫರಿಗೆ ಕಲಿಸುವದಕ್ಕಿಂತ ಕಲಿಯುವದು ಬೇಕಾಗಿತ್ತು. " ಸಾ ವಿದ್ಯಾ ಯಾ ವಿಮುಕ್ತಯೇ " ಎಂಬುದನ್ನು ಅರಿತುಕೊಂಡ ಈ ಅನುಭಾವಿಗಳು ಈ ವಿದ್ಯೆಯನ್ನು ಹೇಳಿಕೊಡಬಲ್ಲ ಗುರುವನ್ನು ಅರಸುತ್ತ ದಿಕ್ಕು ದಿಕ್ಕಿಗೆ ಅಲೆದರು.

ಹಾದರ ಮಾಡಿದೆನೇ ನಾನೊಂದು
ಹಾದರ ಮಾಡಿದೆನೇ
ಹಾದರ ಮಾಡಿದೆನೇ ಹಗಲಿರುಳೆನ್ನದೆ
ಸಾಧು ಸತ್ಪುರುಷರ ಸದರಿನೊಳಗೆ–

ಎಂದು ಎಲ್ಲ ತರಹದ ಗುರುಗಳನ್ನೂ ಮಾತನಾಡಿಸಿ ನೋಡಿದರು. ಆದರೆ, ಅವರಿಗೆ ಯಾರಿಂದಲೂ ಸಮಾಧಾನ ಸಿಕ್ಕಲಿಲ್ಲ. ಅರಸುವ ಬಳ್ಳಿ ಕಾಲ್ತೊಡಕಿತು ಎಂಬಂತೆ, ಕೊನೆಗೆ ನೆರೆ ಹಳ್ಳಿಯ ಬ್ರಾಹ್ಮಣ ಸತ್ಪುರುಷರಾದ ಕಳಸದ ಗೋವಿಂದ ಭಟ್ಟರು ಅವರಿಗೆ ಗುರುವಾಗಿ ದೊರಕಿದರು. ಇಂಥ ಗುರುವನ್ನು ಪಡೆದ ಶರೀಫರು :

ದೊರಕಿದಾ– ಗುರು– ದೊರಕಿದಾ ॥ ಪ ॥

ಪರಮಾನಂದ ಬೋಧ
ಅರಿವಿನೊಳಗೆ ಬಂದು
ದೊರಕಿದಾ– ಗುರು– ದೊರಕಿದಾ ॥ ಅ ಪ ॥

ಕರಪಾತ್ರೆ ಒಡಿದು ಈ
ನರ ಶರೀರದಿ ತನ್ನ
ಅರುವ ತನಗೆ ತೋರಿ
ಪರಮ ನಂಬಿಗೆಯಲಿ
ದೊರಕಿದಾ– ಗುರು– ದೊರಕಿದಾ ॥ ೧ ॥

ಹಿಂದೆ ಜನ್ಮಾಂತರ
ಒಂದು ಉಳಿಯದಂತೆ
ಒಂದು ವಸ್ತುವಿನೊಳು
ಚಂದದಿಂದಲಿ ಬಂದು
ದೊರಕಿದಾ– ಗುರು– ದೊರಕಿದಾ ॥ ೨ ॥

ಶಿಶುನಾಳಧೀಶ ಪ್ರ
ಕಾಶ ಗೋವಿಂದನ
ಅಸಮ ತೇಜೋರೂಪ
ಕಿರಣದಿಂದಲೆ ಬಂದು
ದೊರಕಿದಾ– ಗುರು– ದೊರಕಿದಾ ॥ ೩ ॥ [೧]

ಎಂದು ಧನ್ಯತಾ ಭಾವದಿಂದ ಹಾಡಿ ನಲಿದಾಡಿದರು.

ಇನ್ನೊಂದು ಪದ್ಯದಲ್ಲಿ ಈ ಗುರು ತನ್ನ ಗಂಡನೆಂದೇ ಭಾವಿಸಿ ಹೀಗೆ ಹೇಳಿದರು :

ಕಾಂತೆ ಕೇಳೇ ಕರುಣಗುಣದಿಂದ
ಎನಗಿಂಥ ಪುರುಷನು
ಬಂದು ದೊರಕಿದ ಪುಣ್ಯಫಲದಿಂದಾ
ಎನ್ನಂತರಂಗದ
ಕಾಂತ ಶ್ರೀಗುರುನಾಥ ಗೋವಿಂದಾ
ಶಿಶುನಾಳದಿಂದ
ಕಾಂತೆ ಬಾರೆಂತೆಂದು ಕರೆದೇ
ಕಾಂತಮಂದಿರದೊಳಗೆ ಒಯ್ದು
ಭ್ರಾಂತಿಭವದುರಿತವನು ಪರಿಹರಿಸಿ
ಚಿಂತೆಯನು ಮರೆಸಿ
(ಎನಗಿಂಥ ಪುರುಷನು ಬಂದು ದೊರಕಿದ) [೨]

ಮತ್ತೊಂದೆಡೆಗೆ–

ನನ್ನೊಳಗೆ ನಾನೇ ತಿಳಕೊಂಡೇ
ಎನಗೆ ಬೇಕಾದ ಗಂಡನ ಮಾಡಿಕೊಂಡೇ
ಗುರೂಪದೇಶ ಪಡಕೊಂಡೇ
ಗುರು ಗೋವಿಂದನ ಪಾದಾ ಹಿಡಕೊಂಡೇ

ಎಂದೂ ಹೇಳಿದರು.

ಇಂಥ ಪರಮ ಗಾರುಡಿಗ ಗುರುವಿನ ಕರಕಮಲ ಸಂಜಾತರಾಗಿ, ನ್ಯಾಯನಿಷ್ಠುರರಾಗಿ, ಲೋಕವಿದೂರರಾಗಿ ಪರಮಾತ್ಮನ ಮದ್ದಾನೆಯ ಹಾಗೆ ಶರೀಫರು ಸಂಚರಿಸಿದರು. ತಮ್ಮ ಒಂದು ಕವಿತೆಯಲ್ಲಿ ಈ ಭಾವವನ್ನು ಶರೀಫರು ಹೀಗೆ ವ್ಯಕ್ತ ಮಾಡಿದ್ದಾರೆ :

---

೧ ಶ್ರೀ ಶರೀಫರ ಜನಪ್ರಿಯ ಪದಗಳು– ೧೯೭೭– ಪು. ೭
೨ ಅದೇ ಪು. ೫೧.

ಸದ್ಗುರು ಸಾಕಿದ ಮುದ್ದಾನೆ

ಸದ್ಗುರು ಸಾಕಿದ ಮದ್ದಾನಿ ಬರುತಿದೆ
ಎದ್ದು ಹೋಗಿರಿ ಇದ್ದ ನಿಂದಕರು ॥ ಪ ॥

ಬಿದ್ದು ಈ ಭವದೊಳು ಹೊರಳಾಡೋ ಜನರನ್ನು
ಉದ್ಧಾರ ಮಾಡುತ ಬರುತಲಿದೆ ॥ ೧ ॥

ಆಕಾಶ ನೋಡುತ ವಾಯುವ ನುಂಗುತ
ಝೇಂಕರಿಸುತಲದು ಬರುತಲಿದೆ ॥ ೨ ॥

ಅಷ್ಟಮದಂಗಳೆಂಬೋ ಕೆಟ್ಟ ನೀಚರನ್ನು
ಸಿಟ್ಟಿಲೆ ಸೀಳುತ ಬರುತಲಿದೆ ॥ ೩ ॥

ಪ್ರಣವಸ್ವರೂಪವ ಅನುದಿನ ನೋಡುತ
ಘನ ಸುಖದಲಿ ಅದು ಬರುತಲಿದೆ ॥ ೪ ॥

ಮನವ ಶಿಶುನಾಳಧೀಶನೊಳು ಮಗ್ನ ಮಾಡಿ
ಚಿನಮಯಾತ್ಮಕವಾಗಿ ಬರುತಲಿದೆ ॥ ೫ ॥

ನಾನಾವರ್ಣದ ಸಂಸಾರ ಹಾವ-ಹಾವಡಿಗನ ಸ್ನೇಹದಂತೆ. ವಿಷಯುವೆಂಬ ಹಸಿರು ಸುತ್ತಲೂ ಪಸರಿಸಿದಾಗ, ನೆಲದ ಕದಡು ನೀರು ಸುತ್ತಲೂ ಹರಿದು ಬಂದು ಕರೆಯುತ್ತಿರುವಾಗ, ಮನುಷ್ಯ ನಾದವನು ಚಾತಕ ಪಕ್ಷಿಯ ಹಾಗೆ ಆಕಾಶದ ನೀರಿಗಾಗಿ ಮಾತ್ರ ಕೈಯೊಡ್ಡಬೇಕಾಗುತ್ತದೆ. ಇಂಥ ವಿಷಪೂರಿತ ಸಂಸಾರದಲ್ಲಿ ಮನುಷ್ಯ, ಮಿಣಿಯಲ್ಲಿ ಮಣಿಯುತಿಹ ಕೊಲ್ಲಟಗಿತ್ತಿಯಂತೆ ಜೋಕೆ-ತೂಕಗಳಿಂದ ಇರಬೇಕಾಗುತ್ತದೆ ಸಂಸಾರವೇನೋ ಹಾವ- ಹಾವಡಿಗನ ಸ್ನೇಹ. ಆದರೆ, ಈ ಹಾವು ಸಾಮಾನ್ಯವಾದುದಲ್ಲ. ಇದು ಅನಾದ್ಯಂತವಾಗಿ ಹರಿದು ಬಂದುದು. ಹರಿಯ ಹಾಸುಗೆ ಯಾಗಿ, ಹರನ ಕೊರಳೇರಿ, ಧರೆಯ ಹೊತ್ತುನಿಂತ ಹಾವು ಇದು. ಈ ಹಾವಿನ ಹಲ್ಲು ಕಳೆದು ಹಾವನಾಡಿಸಬಲ್ಲರೆ, ಹಾವಿನ ಸಂಗವೇ ಲೇಸು.

ಈ ಸಂಸಾರದ ಮಾಯೆಯನ್ನು ಇಂಥ ಹಾವಿಗೆ ಹೋಲಿಸಿ ಶರೀಫರು ಒಂದು ಅದ್ಭುತವಾದ ಪದವನ್ನೇ ಹೇಳಿದ್ದಾರೆ :

ಹಾವು ತುಳಿದೆನೆ

ಹಾವು ತುಳಿದೆನೇ– ಮಾನಿನಿ
ಹಾವು ತುಳಿದೆನೇ ॥ ಪ ॥

ಹಾವು ತುಳಿದು ಹಾರಿನಿಂತೆ
ಜೀವ ಕಳವಳಿಸಿತು ಗೆಳತಿ
ದೇಹತ್ರಯದ ಸ್ಮೃತಿಯು ತಪ್ಪಿ
ದೇವಾ ನೀನೆ ಗತಿಯು ಎಂದು
ಹಾವು ತುಳಿದೆನೇ........ ॥ ೧ ॥

ಹರಿಗೆ ಹಾಸಿಗೆಯಾದ ಹಾವು
ಹರನ ತೋಳಿನೊಳಿರುವ ಹಾವು
ಧರೆಯ ಹೊತ್ತು ಮೆರೆವ ಹಾವಿನ
ಶಿರವ ಮೆಚ್ಚಿ ಶಿವನ ದಯದಿ
ಹಾವು ತುಳಿದೆನೇ........ ॥ ೨ ॥

ಬೋಧಾನಂದವಾಗಿ ಬರಲು
ದಾರಿಯೊಳಗೆ ಮಲಗಿ ಇರಲು
ಪಾದದಿಂದ ಪೊಡವಿಗೊತ್ತಿ
ನಾದಗೊಳಿಸಿತು ನಿಜದಿ ನೋಡಿ
ಹಾವು ತುಳಿದೆನೇ........ ॥ ೩ ॥

ಕಾರಡಗಿ ಊರ ಹೊರಗೆ
ದಾರಿಕಟ್ಟಿ ತರುಬಿದಂಥ
ಘೋರತರದ ಉರಗ ಆದರ
ಕ್ವಾರಿ ಹಲ್ಲು ಮುರಿದ ತೆರದಿ
ಹಾವು ತುಳಿದೆನೇ........ ॥ ೪ ॥

ಸತ್ಯ ಶಿಶುನಾಳಧೀಶನ
ಉತ್ತಮ ಸೇವಕನಿಗೆ
ಕತ್ತಲೊಳು ಬಂದು ಕಾಲಿಗೆ
ಸುತ್ತಿಕೊಂಡಿತು ಸಣ್ಣನಾಗರ
ಹಾವು ತುಳಿದೆನೇ........ ॥ ೫ ॥ ೧

ದೇವರು ಈ ದೇಹವನ್ನು ಮೋಕ್ಷ ಸಂಪಾದನೆಗಾಗಿ ಕೊಟ್ಟಿದ್ದಾನೆ. ಇಂಥ ಜೀವನವನ್ನು ಹಾಳು ಮಾಡಿಕೊಳ್ಳಬಾರದು. ಆದರೆ, ಈ ದೇಹವೆಂಬ ಮನೆ ನೂರಾರು ವಿಷಯ ವಾಸನೆಗಳ ಮೂಲಕ ಛಿದ್ರ ವಿಚ್ಛಿದ್ರವಾಗಿದೆ. ಮನೆ ತುಂಬೆಲ್ಲ ರಜ ತುಂಬಿ ಮನೆಯೊಡೆಯನಿದ್ದಾನೋ ಇಲ್ಲವೋ ಎಂಬಂತಾಗಿದೆ. 'ಸೋರುತಿಹುದು ಮನೆಯ ಮಾಳಿಗಿ' ಎಂಬ ಕವನದಲ್ಲಿ ಶರೀಫರು ಹೀಗೆ ಹೇಳಿದ್ದಾರೆ :

ಸೋರುತಿಹುದು ಮನೆಯ ಮಾಳಿಗಿ– ಅಜ್ಞಾನದಿಂದ
ಸೋರುತಿಹುದು ಮನೆಯ ಮಾಳಿಗಿ ॥ ಪ ॥

ಸೋರುತಿಹುದು ಮನೆಯ ಮಾಳಿಗಿ
ದಾರು ಗಟ್ಟಿ ಮಾಳ್ಪರಿಲ್ಲ
ಕಾಳಕತ್ತಲೆಯೊಳಗೆ ನಾನು
ಮೇಲಕೇರಿ ಮೆಟ್ಟಲಾರೆ ॥ ೧ ॥

---

೧ ಅದೇ ಪು. ೧೭.

ಮುರುಕು ತೊಲೆಯು ಹುಳುಕ ಜಂತಿ
ಕೊರೆದು ಸರಿದು ಕೀಲ ಸಡಲಿ
ಹರಕ ಚಪ್ಪರ ಜೇರುಗಿಂಡಿ
ಮೇಲಕೇರಿ ಮೆಟ್ಟಲಾರೆ ॥ ೨ ॥

ಕರಕಿ ಹುಲ್ಲು, ಕಸವು ಹತ್ತಿ
ದುರಿತ ಭವದಿ ಇರಬಿ ಮುತ್ತಿ
ಜಲದ ಭರದಿ ತಿಳಿಯ ಮಣ್ಣು
ಒಳಗೆ ಹೊರಗೆ ಏಕವಾಗಿ ॥ ೩ ॥

ಕಾಂತೆ ಕೇಳೆ ಕರುಣದಿಂದ
ಬಂತು ಕಾಣೆ ಹುಬ್ಬಿ ಮಳೆಯು
ಈಗ ಶಿಶುವಿನಾಳ ಗ್ರಾಮಕ
ಮೇಘರಾಜ ಒಲಿದು ಬಂದ ॥ ೪ ॥ [೧]

ಈ ಜೀವನದಲ್ಲಿ ಯಾವುದೂ ನಿಶ್ಚಿತವಲ್ಲ. ಆದರೆ ಒಂದು ಮಾತ್ರ ನಿಶ್ಚಿತ. ಸುನಿಶ್ಚಿತ. ಅದೆಂದರೆ ಜೀವನ ಅನಿಶ್ಚಿತವೆಂಬುದು ಮಾತ್ರ ಸುನಿಶ್ಚಿತ. ಹೀಗಿರಲು ಮನುಷ್ಯ ಶಾಶ್ವತವಾದದ್ದನ್ನು ಬಿಟ್ಟು, ಅಶಾಶ್ವತದ ಮಂಜು ನೀರಿಗೆ ಕೈಯೊಡ್ಡುತ್ತಾನೆ. 'ನೇವಾಳಮೊಂದು ಕೆಲಬರ್ ಪಾವಂ ಪಿಡಿವಂತೆ, ದೇವ ನೀನಲ್ಲದರಂ ನಂಬಿ' ಮೋಹಮೂರ್ಛೆಗೆ ಒಳಗಾಗುತ್ತಾನೆ. ವಿಷಯಾಸವಮತ್ತನಾಗುತ್ತಾನೆ ಇಂಥ ಆತ್ಮವನ್ನು ಕುರಿತು ಕವಿ ಹೀಗೆ ಹೇಳಿದರು :

ಅಳಬೇಡ ತಂಗಿ

ಅಳಬೇಡ ತಂಗಿ ಅಳಬೇಡ
ನಿನ್ನ ಕಳುಹ ಬಂದವರಿಲ್ಲಿ ಉಳುಹಿಕೊಂಬುವರಿಲ್ಲ
ಅಳಬೇಡ ತಂಗಿ ಅಳಬೇಡ

ಖಿಡಕೀಲೆ ಉಡಿಯಕ್ಕಿ ಹಾಕಿದರವ್ವಾ ಒಳ್ಳೆ
ದುಡುಕಿಲೆ ಮುಂದಕ್ಕೆ ನೂಕಿದರವ್ವಾ
ಮಿಡಿಕ್ಯಾಡಿ ಮದುವ್ಯಾದಿ ಮೋಜು ಕಾಣವ್ವ– ಮುಂದ
ಹುಡುಕ್ಯಾಡಿ ಮಾಯದ ಮದವೇರಿದೆವ್ವಾ

ಮಿಂಡೇರ ಬಳಗವು ಬೆನ್ನತ್ತಿ ಬಂದು– ನಿನ್ನ
ರಂಡೇರೈವರು ಕೂಡಿ ನಗುತಲಿ ನಿಂತು
ಕಂಡವರ ಕಾಲ್ಬಿದ್ದು ಕೈಮುಗಿದು ನಿಂತರ
ಗಂಡನ ಮನಿ ನಿನಗ ಬಿಡದವ್ವ ತಂಗಿ........

ರಂಗೀಲಿ ಉಟ್ಟದೀ ರೇಸ್ಮೆದಡಿಸೀರಿ– ಮತ್ತ
ಹಂಗನೂಲಿನ ಪರವಿ ಮರೆತೆವ್ವ ನಾರಿ

೧ ಅದೇ ಪು. ೧೯.

ಮಂಗಳ ಮೂರುತಿ ಶಿಶುನಾಳಾಧೀಶನ
ಅಂಗಳಕ ನೀ ಹೊರತಾದೆವ್ವ ಗೌರಿ
ಅಳಬೇಡ ತಂಗಿ ಅಳಬೇಡ ೧

ಹರಿದಾಡುವುದು ಮನಸ್ಸಿನ ಸ್ವಭಾವ. ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ ಅದನ್ನು ನಿಗ್ರಹಿಸಬೇಕು. ಶರೀಫ ಸಾಹೇಬರು "ಹರಿದಾಡುವ ಮನಸಿಗೆ ಮಚ್ಚಿಲೆ ಹೊಡಿದು ನಿಲಿಸುವ ಜಾಣ" ಎಂದು ಹೇಳಿದ್ದಾರೆ.

ದೇಹ ಅನಿತ್ಯ; ಜೀವ ನಿತ್ಯ. ಯುಗ ಯುಗದ ಜನ್ಮಜಾಲಗಳಲ್ಲಿ ಈ ಜೀವ ಮಾತ್ರ ನಿತ್ಯವಾಗಿ ಪರಿಭ್ರಮಿಸುತ್ತಿದೆ. ರಾಟಳದ ಗುಂಡಿಗೆಯ ಹಾಗೆ ಮೇಲೆ ಕೆಳಗು ತಿರುಗುತ್ತಿರುತ್ತದೆ. ವಸ್ತ್ರ ಕಳಚಿ, ವಸ್ತ್ರ ಧರಿಸಿದ ಹಾಗೆ ಜೀವ ದೇಹ–ದೇಹಕ್ಕೆ ಬದಲಿಸುತ್ತಿರುತ್ತದೆ. ದೇಹ ಹೊಸ ಹೆಣ್ಣು; ಜೀವ ಅನಾದಿ ಕಾಲದಿಂದ ಬಂದ ಮುದುಕಿ. ಈ ಮುದುಕಿ, ಮುದಿ ವಯಸ್ಸಿನಲ್ಲಿ ಇರಬೇಕಾದ ಹಾಗೆ ಇರಬೇಕು. ಮುದಿ ವಯಃಸ್ಸಿನಲ್ಲಿ ಹರೆಯದ ಥಳಕು ಸರಿಯಲ್ಲ. ನೋಡಿದವರಿಗೆ ನಗೆಗೇಡು. 'ಬಿದ್ದಿಯಬೇ ಮುದಕಿ' ಎಂಬ ಅತಿ ಸುಂದರವಾದ ಪದ್ಯದಲ್ಲಿ ಶರೀಫ ಸಾಹೇಬರು ಈ ಜೀವನವನ್ನು ಕುರಿತು ಹೀಗೆ ಹೇಳಿದ್ದಾರೆ :

ಬಿದ್ದಿಯಬೇ ಮುದುಕಿ

ಬಿದ್ದಿಯಬೇ ಮುದುಕಿ
ನೀ ದಿನ ಹೋದಾಕಿ, ಬಲು ಜೋಕಿ
ಬಿದ್ದಿಯಬೇ ಮುದುಕಿ ॥ ಪ ॥

ಸದ್ಯಕಿದು ಹುಲಗುರ ಸಂತಿ
ಗದ್ದಲದೊಳಗ ಯಾಕ ನಿಂತಿ
ಬಿದ್ದು ಒದ್ದಾಡಿದರ ಎಬ್ಬಿಸುವರಿಲ್ಲಾ
ಬುದ್ಧಿಗೇಡಿ ಮುದುಕಿ ನೀನು
ಬಿದ್ದಿಯಬೇ ಮುದುಕಿ

ಬುಟ್ಟಿಯೊಳು ಪಟ್ಟೆವನಿಟ್ಟಿ
ಉಟ್ಟರದನ ಚೀಲ ಜೋಕಿ
ಕೆಟ್ಟ ಗಂಟಿಚೌಡೆರ ಬಂದು
ಕತ್ತರಿಸಿಕೊಂಡು ಹೋದಾರ ಮುದುಕೀ
ಬಿದ್ದಿಯಬೇ ಮುದುಕೀ

ಶಿಶುನಾಳಾಧೀಶನ ಮುಂದೆ
ಕೊಸರಿ ಕೊಸರಿ ಹೋಗದಿರು
ಹಸನವಿಲ್ಲ ಹರೆಯವು ಮೀರಿದ
ಪಿಸುರು ಪಿಚ್ಚುಗಣ್ಣಿನ ಮುದುಕೀ
ಬಿದ್ದಿಯಬೇ ಮುದುಕೀ ೨

---

೧ ಅದೇ ಪು. ೨೧.
೨ ಅದೇ ಪು. ೩೩.

[illegible] ಹೆಂಡತಿಯರ [illegible] ಮನೆ[illegible] [illegible] [illegible] [illegible]. [illegible] [illegible]. [illegible] [illegible] ಮಾತೃತ್ವವನ್ನು ಕಂಡಿದ್ದರು.

ನನ್ನ ಹೆಣ್ತೀ— ನೀ
ನನ್ನ ಹೆಣ್ತೀ
ನಿನ್ನ ಹೆಸರನ್ನೇಳಲೆ ಗುಣವಂತೀ
ಮೊದಲಿಗೆ ತಾಯಾದಿ ನನ್ನ ಮತ್ತೆ
ಸಮಕ್ಕೆ ಸೊಸೆಯಾದೆ ನನ್ನ ಹೆಣ್ತೀ ಮತ್ತೆ
ಮುದದಿಂದ ನೋಡಿಕಿ ಮುದುವ್ಯಾದವನಿಗೆ
ಮಗಳಂತೆನಿಸಿದ ನನ್ನ ಹೆಣ್ತೀ ತುತ್ತು ನೀಡಿ
ಎನ್ನೆತ್ತಿ ಆಡಿಸಿದ ಹೆತ್ತವ್ವನೆನಿಸಿದಿ ನನ್ನ ಹೆಣ್ತೀ
ಜನ್ಮಜನ್ಮದ ಸಖಿ ನೀ ನನ್ನ ಹೆಣ್ತೀ ನನಾ
ತಕ್ಕವಳೆನಿಸಿದಿ ನನ್ನ ಹೆಣ್ತೀ [1]

[illegible] [illegible] ಹಂಡತಿಯರ [illegible] [illegible] [illegible] [illegible]. [illegible] [illegible] [illegible]:

ಮೋಹದ ಹೆಂಡತಿ ಸತ್ತ ಬಳಿಕ ಇನ್ನು
ಮಾವನ ಮನೆಯ ಹಂಗೇತಕೆ? ॥ ಪ ॥

ನೇಹವು ಸಾವಿಗೆ ಕಡುವ ಬೀಗನ ಮಾತಿಗೆ
ದೇಹದ ಸುಖವಾಶೆ ಇನ್ನೇತಕೆ? ॥ ೧ ॥

ಮಂಡಲನಾಡಿಗೆ ಹಿಂಡವ ಗೂಡಿಗೆ
ಘಂಡುಕವಾದಿ ಬಯಕೆ ಇನ್ನೇತಕೆ? ॥ ೨ ॥

ಕಂಡ ಕನಸಿಯೊಳು ನಡಿಕೆ ತನ್ನ ಮನದೊಳು ತಾಳಿ
ಬಂದದ್ದು ಹೋದದ್ದೆ ಘಯವೇಕೆ? ॥ ೩ ॥

ಸುಂದರ ಗುರುಗೋವಿಂದನ ಸೇವಕ
ಕೊಂದಗೋಳಕೆ ಬಂದು ನಿಂತನೇಕೆ? ॥ ೪ ॥

[illegible]

[1] [illegible]

ಬಹು ದಿವಸ ಬಡವ ಬಂದಾನೆಂದು
ಮನ್ನಿಸಿ ದಯವಿಟ್ಟು ದೊಣೆ ಬಾಗಿಲಿನಾ ಮುಂದೆ ॥

ಶಿಶುನಾಳಧೀಶನ ಕರುಣೆ ಕಾಣಿಸಿ ಬೇಗ ಕಾಯು
ಮನೆಗೊಯ್ಯೋ ಮತಿಗೇಡಿ ಎನ್ನ ಶಿವಗುರು ॥

ಮನವೇ ಜತನದಲಿ ಮಹಾರಾಯನ ಸರಸ ನೋಡು
ಸನುಮತದಿ ಒಂದಕ್ಕೆ ತಿರುಗಲೋ ಮನವೇ ॥

ಇದರಿಂದ ಶರೀಫರ ಸಾಲ ಬೆಳೆಯಿತು. ಕೊನೆಗೆ ಸಾಲದ ಭಾರ ಹೆಚ್ಚಾಯಿತು. ಶರೀಫರು ತಮ್ಮ ಹೊಲ, ಮನೆ, ಶಿಶುನಾಳ ಗ್ರಾಮದ ರೆವಿನ್ಯೂ ಸರ್ವೆ ನಂಬರ ೨೪೩, ೨೪೩, ೨–೨೦ ಎಕರೆ, ೨೪ ಗುಂಟೆ ಕ್ಷೇತ್ರದ ೧೩ ರೂ. ಆಕಾರದ ಆಸ್ತಿಯನ್ನು ೨೦೦ ರೂಪಾಯಿಗಳಿಗೆ ಕ್ರಿ. ಶ. ೧೮೮೮ ರ ಅಗಸ್ಟ ತಿಂಗಳಲ್ಲಿ ಮಾರಿಬಿಟ್ಟರು.

ಹೀಗೆ ೭೦ ವರುಷಗಳ ಕಾಲ, ಸಫಲವಾದ, ಸುಫಲವಾದ ಬಾಳನ್ನು ನಡೆಸಿ, ಶರೀಫರು ನೀರಿನಲ್ಲಿ ನೀರು ಕೂಡಿದಂತೆ, ಬೆಳಕಿನಲ್ಲಿ ಬೆಳಕು ಒಂದಾದ ಹಾಗೆ, ಪಕ್ವವಾದ ಹಣ್ಣು ತೊಟ್ಟು ಕಳಚಿ ಧರೆಗೆ ಬೀಳುವ ಹಾಗೆ ಸನ್ ೧೮೮೯ ರಲ್ಲಿ ತಮ್ಮ ಇಹಲೋಕ ಯಾತ್ರೆಯನ್ನು ಮುಗಿಸಿದರು. ಶರೀಫರು ಕಣ್ಣು ತುಂಬಿದ ಬಳಿಕ ತಿರುಗಿ ನೋಡಲಿಲ್ಲ; ಕಿವಿ ತುಂಬಿದ ಬಳಿಕ ಕೇಳಲಿಲ್ಲ; ಮನ ತುಂಬಿದ ಬಳಿಕ ನೆನೆಯಲಿಲ್ಲ.

* * *

ಇಂದಿಗೂ, ಶಿಶುನಾಳದ ವಿಶಾಲವಾದ ಬಯಲು ಪ್ರದೇಶದಲ್ಲಿ, ಶರೀಫ ಸಾಹೇಬರ ವಿಸ್ತಾರವಾದ ಗದ್ದುಗೆಯಿದೆ. ಬಾಳಿನಲ್ಲಿ ಒಂದಾಗಿದ್ದ ಗುರು ಶಿಷ್ಯರು ಮರಣದಲ್ಲಿಯೂ ಒಂದಾಗಿಯೇ ಇರುವರೋ ಏನೋ ಎನ್ನುವ ಹಾಗೆ, ಆ ಗದ್ದುಗೆಯ ಮೇಲೆ ಗುರು ಗೋವಿಂದ ಭಟ್ಟರು ಮತ್ತು ಶರೀಫರ ಮುಖಾಕೃತಿ ಮೂರ್ತಿಗಳಿವೆ. ಅವರು ಬಾಳಿನಲ್ಲಿ ಧರಿಸುತ್ತಿದ್ದ ಹಾಗೆಯೇ, ಆ ಪ್ರತಿಮೆಗಳಿಗೆ ಧೋತರ, ಅಂಗಿ, ರುಮಾಲು ಹಾಕಿರುತ್ತಾರೆ. ಇವರ ಮುಖದಲ್ಲಿಯೂ ಈ ಜಗತ್ತಿನ ಅತೀತವಾದ, ಅನಿರ್ವಚನೀಯವಾದ ಒಂದು ವಿಧದ ಆನಂದ, ತನ್ಮಯತೆ ಎದ್ದು ಕಾಣುತ್ತದೆ (ಛಾಯಾಚಿತ್ರವನ್ನು ನೋಡುವುದು). ಎಂಥ ಬಿಸಿಲ ಕಾಲದಲ್ಲಿ ಹೋದರೂ, ಪ್ರವಾಸಿ ಯಾತ್ರಿಕರಿಗಳ ಬಳಿಯಲ್ಲಿ ನೆರಳು ಬಂದವರಿಗೆ ಸಮಾಧಾನ ನೀಡುವ ಹಾಗೆ, ವಿಶಾಲವಾದ ಬೇವಿನಮರ ಗದ್ದುಗೆಯ ಸಮೀಪದಲ್ಲಿಯೇ ಇದೆ. ಒಂದೂ–ಮುಕ್ಕಾಲು ಶತಮಾನದ ಕಥೆಯನ್ನು ಸಾರಿ ಹೇಳುವ ಹಾಗೆ ಈ ವಿಶಾಲವಾದ ಬೇವಿನ ಮರವನ್ನು ಆಶ್ರಯಿಸಿ, ಸುಗಂಧವಾದ ಮಲ್ಲಿಗೆಯ ಬಳ್ಳಿ ಅಂತಃಕರಣ ಪೂರ್ವಕವಾಗಿ ಬೆಳೆದಿದೆ; ಇದು ಇಂದಿಗೂ ಕಣ್ಣಿಗೊಂದು ಹಬ್ಬ.

ಶಿಶುನಾಳ ಶರೀಫ ಸಾಹೇಬರು ಸಾರಿದ ಸಂದೇಶವಾದರೂ ಏನು? ಅವರು ತಮ್ಮ ಜೀವನದಲ್ಲಿ ಸಮನ್ವಯ, ತ್ಯಾಗಶೀಲತೆಯನ್ನು ಬಾಳಿ ತೋರಿಸಿದರು. ಭಗವಂತನ ಮನಸಿಗೆ ಮುಟ್ಟಲೆ ಹೊಡೆದು ನಿಲ್ಲಿಸಬೇಕೆಂದು ಹೇಳಿದರು. "ಏಕಂ ಸದ್ವಿಪ್ರಾ ಬ್ರಹ್ಮ, ಮತ್ತು ಸಂಕೀರ್ತ್ಯತೇ ಹರಿಃ"– ಎಂದು ಹೇಳಿದ ಹಾಗೆ, "ಅಲ್ಲಾನೆಂದರೂ ಸರಿ, ಹರಿ ಎಂದರೂ ಸರಿ. ನಿಜವಾಗಿರಲಿ; ಪರಸ್ಪರ ಗುರುವಿನ ಅಂತಃಕರಣ ನಿಜವಾಗಿರಲಿ; ಬಾಹ್ಯಾಡಂಬರವು ಕಡಿಮೆಯಾಗಲಿ, ಒಡವೆ ವಸ್ತುಗಳು ಹಾಳಾಗಿ ಹೋಗಲಿ" ಎಂದು ಹೇಳಿದರು. "ದೇವನ್ನು ಕಣ್ಣಿನಿಂದ ನೋಡಬೇಕೆಂದ ಮಹಾತ್ಮನೆ ದೊಡ್ಡ ದೊಡ್ಡರಿಗೆ ಅಡ್ಡ ಬೀಳಿಸುವನು. ಪರಿಶುದ್ಧತೆಯನ್ನು ಬಿಡಿಸಿ, ಸತ್ಯವ

ವಿಸ ವರಮಂತ್ರವ ಕೆಡಿಸಿ, ಗುರುಶಿಷ್ಯರ ಭಾವವ್ಬರಿಸಿ, ಲಕ್ಷ್ಮೀದೇವಿ ಕೆರವಿನಟ್ಟಿಯು ಸರಿಯೆನಿಸಿ, ಧರೆಯ ಜೀವನವಾದ ದುಡ್ಡು ಕೆಟ್ಟದ್ದು. ದುಡ್ಡು ಆಶೆಯ ಮನಗೊನಿಯು, ಸಂಸಾರದ ಕನಸಿನ ಘನತೆನಿಯು, ಶಿಶುನಾಳಧೀಶನಿಗೆ ಹೇಸಿಕೆ ಎನಿಸಿ, ಸೂಸಿತು ಮಹಾನರ್ಥವ." ಆದ್ದರಿಂದ, ಮನುಷ್ಯ ಜಗತ್ತಿನಲ್ಲಿ "ಮೂಕನಾಗಿರಬೇಕೋ, ಜಗದೊಳು ಜೋಕ್ಯಾಗಿರಬೇಕೋ; ಕಾಕು ಕುಹಕರ ಸಂಗ ನೂಕಿರಬೇಕೋ, ಲೋಕೇಶನೊಳೇಕಾಗಿರಬೇಕೋ. ಕಚ್ಚೊ ನಾಯಿಯಂತೆ ಬೊಗಳ್ವರು, ಹುಚ್ಚರತೆರದಿವರು, ಎಚ್ಚರಿಲ್ಲದವರು, ಲುಚ್ಚರು, ನಾಚಿಕೆ ತೆರೆದವರು."

ಹೀಗೆ ಪರಿಪೂರ್ಣವಾದ, ಪ್ರಫುಲ್ಲವಾದ ಮನದಿಂದ ಹೊರಬಂದ ವಾಕ್ಯಗಳೆಲ್ಲವೂ ಪದಗಳೇ ಆದವು. ಅವರು ಆಡಿದ್ದೇ ಹಾಡಾಯಿತು. ನುಡಿದದ್ದೇ ತತ್ವಜ್ಞಾನವಾಯಿತು. ಅವರು ಕುಂಬಾರ ಬಸಮ್ಮ ಎಂಬ ಹೆಣ್ಣುಮಗಳನ್ನು ಎದುರಿಗೆ ಕೂಡಿಸಿಕೊಂಡು, ಸೂರೆ ಸೂರೆಯಾಗಿ ಹಾಡುಗಳನ್ನು ಹೇಳಿದರು. ಭಾವ ಓತಪ್ರೋತವಾಗಿ ತುಂಬಿ ಹರಿಯುವಾಗ :

ಬರಕೋ ಪದ ಬರಕೋ ಅದರನ್ವಯ ತಿಳಕೋ

ಸದಮಲಜ್ಞಾನದ ಕುದಿ ಉಕ್ಕಿ ಬರುವಾಗ
ನಜರಿಟ್ಟು ನಿನ್ನೊಳು ಸದಮಲ ತತ್ವವ
ಬರಕೋ ಪದ ಬರಕೋ

ಅಡಿ–ಗಣ ಸೂಸದೆ ಪದ ಬರಕೋ
ನುಡಿ ಶಬ್ದಕ ನಿಲುಕದ ಪದ ಬರಕೋ
ಎಡೆವಿಡದೆ ನೀ ಸುಡವಿನಕ್ಷರದಿ
ಶೂನ್ಯದ ಗುರುತೊಂದು ಹಿಡಕೋ–
–ಎಂದು ಹೇಳಿದರು. [೧]

ಬೋಧ ಒಂದೇ ಬ್ರಹ್ಮ
ನಾದ ಒಂದೇ ॥ ಪಲ್ಲವಿ ॥

ಸಾಧನ ಮಾಡುವ ಹಾದಿ ಒಂದೇ
ಆದಿಪದ ಒಂದೇ
ಬಿಂದು ಒಂದೇ ನಿಜಾ
ನಂದ ಒಂದೇ
ತಂದೆ ಸದ್ಗುರು ಗೋವಿಂದಗ ಒಂದೇ
ಅಂದಿಗಿಂದಿಗೊಂದೇ
ದೋಷ ಒಂದೇ ನಿರ್ದೋಷ ಒಂದೇ
ಶಿಶುನಾಳಧೀಶನ ಭಾಷೆ ಒಂದೇ
ಭವನಾಶ ಒಂದೇ–

ಎನ್ನುವ ಹಾಗೆ ತಮ್ಮ ಬೆಳಕಿನ ದಾರಿಯನ್ನು ಈ ಭೂಮಿಯಲ್ಲಿ ಬಿಟ್ಟು ಹೋದರು.

—

೧ ಶರೀಫರ ಜನಪ್ರಿಯ ಪದಗಳು : ಪು. ೫೧.

ಕಳಸದ ಗೋವಿಂದಭಟ್ಟರು

(ಸು. ೧೮೭೦)

ಇವರು ಶಿಶುನಾಳ ಶರೀಫ ಸಾಹೇಬರ ಗುರುಗಳಾಗಿದ್ದರು. ಇವರು ಶರೀಫರ ತಂದೆಯಾಗಿದ್ದ ಇಮಾಮಭಾಯಿಯವರ ಸ್ನೇಹಿತರೂ ಹೌದು. ಇವರು ಗುಡಗೇರಿಯ ಸಮೀಪದ ಗ್ರಾಮವಾದ ಕಳಸದವರು. " ಸ್ಮಾರ್ತ ಬ್ರಾಹ್ಮಣರು. ಶಾಕ್ತೇಯಪಂಥಕ್ಕೆ ಸೇರಿದವರು. ಮಿಗಿಲಾದ ಶಕ್ತಿಯ ಉಪಾಸಕರು. ಇವರು ಜ್ಯೋತಿಷ್ಯ ಶಾಸ್ತ್ರದಲ್ಲಿ ಜ್ಞಾನಸಂಪನ್ನರಾಗಿದ್ದರು. ಕಳಸ ಗ್ರಾಮದಲ್ಲಿ ಸಂಸ್ಕೃತ ಪಾಠಶಾಲೆಯನ್ನು ನಡೆಯಿಸುತ್ತಿದ್ದರಲ್ಲದೆ, ಜ್ಯೋತಿಷ್ಯ ಶಾಸ್ತ್ರವನ್ನು ಕಲಿಸುತ್ತಿದ್ದರು. ಗುಡಗೇರಿಯ ಕಲ್ಮೇಶ್ವರನ ಪೂಜಾರಿಗಳಾಗಿದ್ದ ಇವರು ಅಲ್ಲಿಯೇ ಕನ್ನಡ ಗಾಂವಠೀ ಶಾಲೆಯನ್ನು ಹಾಕಿದ್ದರು. ಇವರು ತುಂಬಾ ಕೋಮಲ ಪ್ರಕೃತಿಯವರು, ನಯವಿನಯಿಗಳು. ವಾಚಾಳಿಗಳಲ್ಲ.... ಗುಣಗ್ರಾಹಿಗಳಾದ ಇವರು ಕೃತಕಜೀವನದಿಂದ ದೂರವಾಗಿದ್ದರು. ಇವರ ಉಡುಪು ಬಲು ಸರಳವಾಗಿತ್ತು. ಒಂದು ಪಂಚೆಯನ್ನು ಉಡುತ್ತಿದ್ದರು. ನೀರಮಡಿಯನ್ನು ಮೈಮೇಲೆ ಹೊರುತ್ತಿದ್ದರು. ತಲೆಯ ಮೇಲೆ ಒಂದು ರುಮಾಲು ಧರಿಸುತ್ತಿದ್ದರು ಕಳಸ ಗ್ರಾಮದಿಂದ ಗುಡಗೇರಿಗೆ ಬರುವಾಗ ಅವರ ಬಗಲಲ್ಲೇ ಪೂಜಾಸಾಮಗ್ರಿಯ ಒಂದು ಸಣ್ಣ ಗಂಟು, ಕೈಯಲ್ಲಿ ಮಡಿನೀರಿನ ತಂಬಿಗೆ ಇರುತ್ತಿದ್ದವು. ಗುಡಗೇರಿಯ ಹಿರಿಯ ಶಾನಭೋಗರಾಗಿದ್ದ ನೀಲಪ್ಪನವರ ಮನೆಗೆ ಬಂದು ಪೂಜೆ ಮುಗಿಸಿಕೊಂಡು, ಕಲ್ಮೇಶ್ವರನ ಗುಡಿಗೆ ಹೋಗುವದು ರೂಢಿಯಾಗಿತ್ತು. ಅಲ್ಲೇ ಹಾಡುತ್ತ ಕುಳಿತುಕೊಳ್ಳುವದು ಇಲ್ಲವೆ ನೀಲಪ್ಪ, ಪೋಲೀಸ ಪಾಟೀಲ ಬಸನಗೌಡ ಮೊದಲಾದವರೊಡನೆ ವೇದಾಂತ ವಿಷಯವಾಗಿ ಸಮಾಲೋಚಿಸುತ್ತ ಕುಳಿತುಕೊಳ್ಳುತ್ತಿದ್ದರು. ಗೋವಿಂದ ಭಟ್ಟರ ಸಮಗ್ರ ವ್ಯಕ್ತಿತ್ವವೇ ಅವರ :

" ಮೂಕನಾಗಿರಬೇಕೋ ಈ ಲೋಕದೊಳು
ಜೋಕೆಯಿಂದಿರಬೇಕೋ
ಕಾಕು ಕುಹಕರ ಸಂಗ ನೂಕಿರಬೇಕೋ
ಲೋಕೇಶನೊಳು ಏಕಾಗಿರಬೇಕೋ "

ಎಂಬ ತತ್ವಪದದಲ್ಲಿ ಮೂಡಿ ನಿಂತಿದೆ. ಗೋವಿಂದಭಟ್ಟರು ಲೋಕದ ಜಂಜಡದಲ್ಲಿ ಸಿಲುಕಿದವರಾಗಿರಲಿಲ್ಲ. ಆಸೆ-ಆಮಿಷಗಳಿಗೆ ಅವರು ಒಳಗಾಗಿರಲಿಲ್ಲ. ಯೋಗಸಂಪನ್ನರಾದ ಗೋವಿಂದ ಭಟ್ಟರ ಹತ್ತಿರ ಶಿಷ್ಯರು ಯೋಗಾಭ್ಯಾಸಕ್ಕೆಂದು ಬಂದಾಗ " ಹೊಲಾ ಹುಲ್ಲ ಹತ್ತೇದ, ಮೊದಲ ಕಸಾ ತಗೀಬೇಕಪ್ಪ " ಎಂದು ಹೇಳುತ್ತಿದ್ದರು. ೧

---

೧ ಡಾ. ಎಂ. ಎಸ್. ಸಿಂದಗಿ : ಶಿಶುನಾಳ ಶರೀಫ– ೧೯೭೦ ಪು. ೩೨–೩೩ (ಅಪ್ರಕಟಿತ).

ಇಮಾಮ್ ಭಾಯಿಯವರು ಮಗು ಶರೀಫನನ್ನು ಇವರ ಪಾದತಲದಲ್ಲಿ ಶಿಷ್ಯನನ್ನಾಗಿ ಹಾಕಿದಾಗ, ಮಗುವನ್ನು ಆಪಾದಮಸ್ತಕ ನೋಡಿದ ಗೋವಿಂದ ಭಟ್ಟರು "ಇಮಾಮಾ, ಭೂಮಿ ಕಸು ಅದ, ಬೀಜ ನಾಟತದ" ಅಂದರಂತೆ. ಆ ರೀತಿ, ಶರೀಫರಿಗೆ "ನಿಮ್ಮ ಅಪ್ಪ ಯಾರು" ಎಂದು ಪ್ರಶ್ನೆ ಕೇಳಿದರೆ, ಮಗು ಶರೀಫ "ನಿಮ್ಮಪ್ಪನೇ ನಮ್ಮಪ್ಪ" ಎಂದು ಹೇಳಿದನಂತೆ. ಇದನ್ನು ಕೇಳಿ ಮೆಚ್ಚಿದ ಗೋವಿಂದಭಟ್ಟರು ಹುಡುಗನನ್ನು ತಮ್ಮ ಗಾಂವಠಿ ಶಾಲೆಯಲ್ಲಿ ವಿದ್ಯಾರ್ಥಿಯಾಗಿ ಸ್ವೀಕರಿಸಿದರು. ಅನಂತರ ಈ ಸುಪ್ರಸಂಗವನ್ನು ನೆನೆದ ಶರೀಫ ಸಾಹೇಬರು–

ಕಾಂತೆ ಕೇಳಿಲೆ ಕರುಣ
ಗುಣದಿಂದ ಎನಗಿಂಥ
ಪುರುಷನು ಬಂದು ದೊರಕಿದ ಪುಣ್ಯ ಫಲದಿಂದ

ಎಂದು ಮನದುಂಬಿ ಹಾಡಿದರು.

ಶರೀಫರ ಅನೇಕ ಪದಗಳಲ್ಲಿ ಗುರು ಗೋವಿಂದರ ವ್ಯಕ್ತಿತ್ವ ಮೂಡಿ ನಿಂತಿದೆ :

ಕಾಂತೆ ಕೇಳಿ ಕರುಣ ಗುಣದಿಂದ
ಎನಗಿಂಥ ಪುರುಷನು
ಬಂದು ದೊರಕಿದ ಪುಣ್ಯಫಲದಿಂದಾ
ಎನ್ನಂತರಂಗದ
ಕಾಂತ ಶ್ರೀಗುರುನಾಥ ಗೋವಿಂದಾ
ಶಿಶುನಾಳದಿಂದ
ಕಾಂತೆ ಬಾರೆಂತೆಂದು ಕರೆದೇ
ಕಾಂತ ಮಂದಿರದೊಳಗೆ ಒಯ್ದು
ಭ್ರಾಂತಿಭವದುರಿತವನು ಪರಿಹರಿಸಿ
ಚಿಂತೆಯನ್ನು ಮರೆಸಿ........

ಇಂಥ ಮಹಿಮಾಶೀಲರಾದ ಗೋವಿಂದ ಭಟ್ಟರು ಅನೇಕ ಪವಾಡಗಳನ್ನೂ ಮೆರೆದರೆಂದೂ ಹೇಳುತ್ತಾರೆ.

ಆದರೆ, ಅವರು ರಚಿಸಿರಬಹುದಾದ ೧೦–೨೦ ಪದಗಳು ಮಾತ್ರ ಈಗ ನಮಗೆ ದೊರಕುತ್ತವೆ. ಅವನ್ನು ಪರಂಪರಾಗತವಾಗಿ ಹಾಡಿಕೊಂಡು ಬಂದ ಜನರೂ ಇದ್ದಾರೆ. ಅವರ ಹಲವಾರು ಕವನಗಳು ಶರೀಫರ ಕವನಗಳಲ್ಲಿಯೂ ಸೇರಿಕೊಂಡು ಹೋಗಿವೆ. 'ಗುಡಿಪುರ ಕಲ್ಮೇಶ್ವರ', 'ಕಲ್ಮೇಶ್ವರ' ಎಂಬ ಅಂಕಿತಗಳಿರುವ ಹಾಡುಗಳು ಗೋವಿಂದಭಟ್ಟರಿಂದ ರಚಿತವಾದುವೆಂದು ಕಂಡುಬರುತ್ತದೆ. ಗೋವಿಂದ ಭಟ್ಟರ ಬರವಣಿಗೆಯ ನಿದರ್ಶನವಾಗಿ ಈ ಕೆಳಗಿನ ಪದ್ಯವನ್ನು ಕೊಡಬಹುದು. ಇದರಲ್ಲಿ ಮಾನವ ಜನ್ಮದ ಭಾಗ್ಯವನ್ನು ಪಡೆದೂ, ಮನುಷ್ಯ ತನ್ನ ಆಯುಷ್ಯವನ್ನು ಹಾಳು ಮಾಡಿಕೊಳ್ಳುವದನ್ನು ಕುರಿತು ಇದೆ :

ಗುರುಸೇವಾ ಮಾಡೋ ನೀನು :

ಗುರು ಸೇವಾ ಮಾಡೋ ನೀನು
ಪಾಮರ ಮೂಢಾ

ಗುರು ಸೇವಾ ಮಾಡದೆ
ನರ ಸೇವಾ ಮಾಡುವಿ
ತಾರಿಸುವವರ ಕಾಣೆ ತಾಮಸ ನಿನ್ನದು ॥ ೧ ॥

ಬಂದೇನು ಇಲ್ಲಿ ಕಂಡೀ
ಹಿಂದಿನ ಕರ್ಮವೆಲ್ಲ ಇಲ್ಲೇ ಉಂಡಿ
ಮುಂದಿನ ಮಾರ್ಗವ ತಿಳಕೋ ಹುಚ್ಚಮುಂಡೀ ॥ ೨ ॥

ಸಾಧುಗಳ ಸಂಗವ ಬಿಟ್ಟಿ
ವೇದವನೋದಿ ಆದೆಲ್ಲೋ ಮೂರಾಬಟ್ಟಿ
ಬೋಧದ ಮಾರ್ಗವ ಸಾಧಿಸಿ ಸದ್ಗುರು
ಪಾದದೊಳೇಕಾಗಿ ಬೇಗನೇ ॥ ೩ ॥

ಮದ್ಯಪಾನ ಮಾಡಿದೆಲ್ಲೋ
ಮದವೇರಿದ ಆನೆಯಂತಾದೆಯಲ್ಲೋ
ಸದಮಲ ಗುಡಿಪುರ ಕಲ್ಮನ ಕಾಣದೆ
ಕಾಲನ ವಶವಾಗಿ ಕೈಸೆರೆ ಸಿಗುವಿಯಲ್ಲೋ ॥ ೪ ॥

ಶರಣರು ಲೋಕದ ಕಣ್ಣಿಗೆ ಮರುಳಾಗಿ ಕಾಣುತ್ತಾರೆ. ಮಹಮದೀಯ ಶಿಷ್ಯನನ್ನು ಸ್ವೀಕರಿಸಿದ ಗುರು ಗೋವಿಂದರು ಲೋಕದ ವ್ಯವಹಾರದ ಕಣ್ಣಿಗೆ ಹೀಗೆ ಮರುಳಾಗಿಯೇ ಕಂಡರು. "ಸೆರೆ ಕುಡಿತಾನ, ಗಾಂಜೀ ಸೇದತಾನ, ಮುಸಲ್ಮಾನನ್ನ ಶಿಷ್ಯಾ ಮಾಡಿಕೊಂಡಾನ, ಬ್ರಾಹ್ಮಣ ಆಗಿ ಮಡಿ ಯಿಲ್ಲ ಮೈಲಿಗಿಲ್ಲ. ಕುಡಕರನ್ನ ಕಟ್ಟಿಕೊಂಡು ಪಿರಿಪಿರಿ ತಿರಗತಾನ" ಎಂದು ಅನೇಕರು ಗೋವಿಂದ ಭಟ್ಟರನ್ನು ಹೀಗಳೆದರು. ಒಂದು ಸಲ ಈ ಸಾಧಕರ ಗುಂಪು ಎದುರಿಗೆ ಬರುವದನ್ನು ಕಂಡ ಗುಡಗೇರಿ ಮಹಾಲಕರಿಯವರು "ಕುಡುಕರು ಹ್ಯಾಂಗ ಬರತಾರ ನೋಡು" ಎಂದರು. ಶರೀಫರು ಗುರುಗಳಿಗೆ "ಯಪ್ಪಾ ಹೀಂಗ ಅಂತಾರಲಾ" ಎಂದು ಅಂದರು. ಆಗ ಗೋವಿಂದ ಭಟ್ಟರು "ಇರಲಿ ಬಾರೋ ಶರೀಫಾ; ಈಗ ಕುಡುಕರ ಕಡೇನ ಬರತಾರ" ಎಂದು ಹೇಳಿ ಗುಡಗೇರಿಯ ಗ್ರಾಮದೇವತೆ ದ್ಯಾಮವ್ವನ ಗುಡಿಯಲ್ಲಿ ಕುಳಿತು ಈ ಹಾಡನ್ನು ಹಾಡಹತ್ತಿದರಂತೆ :

ಮಾನಾಪಮಾನ ಎರಡೂ ನಿನ್ನವಮ್ಮಾ ಎನಗೇನು !

ಮಾನಾಪಮಾನ ನಿನ್ನವಮ್ಮಾ
ಎನಗೇನಮ್ಮಾ........
ಶ್ವಾನನಂತೆ ಬೊಗಳತಾರ
ಹೀನ ಜನರಿವರೆಲ್ಲಾ........

ಸದಾ ನಿನ್ನ ಧ್ಯಾನದೊಳಿರಲು
ಮುದಾ ಬಂದಿತೆಂಬುವರಿವರು
ಕದನವ ಮಾಡುವರಿವರು
ನಿದಾನವ ತಿಳಿಯದವರು

ನಿನ್ನ ಜತೆಯೊಳಿರಲು
ಖಿನ್ನ ಮಾಡುವರಿವರು
ಸೊನ್ನಿ ಸೂಕ್ಷ್ಮವನರಿಯದವರು
ಸಣ್ಣ ಮಾತನಾಡುವವರು........

ನಿಜಾನಂದ ಬೋಧ ಎನಗೇ
ಕುಜನರ ನಿಂದೆ ಎನಗೇ
ಸುಜನರ ರಕ್ಷೆಯೊಳಗೇ
ಗಜಿಬಿಜಿ ಬರುವದು ನಿನಗೆ
ಭಜಿಸುವೆ ಗುಡಿಪುರ ನಿಜನಾಯಕಿಯ

ಕೊನೆಯದಾಗಿ, ಈ ಕೆಳಗಿನ ಮಂಗಲ ಪದ್ಯದಲ್ಲಿ ಶ್ರೀಯುತರ ಭಾಷಾಪ್ರೌಢಿಮೆ, ಶೈಲಿಯ ಓಜಸ್ಸುಗಳನ್ನೂ ಕಾಣಬಹುದು :

ಮಂಗಲಂ ಜಯ ಜಯತು !

ಮಂಗಲಂ ಜಯಜಯತು ಜಗನ್ಮಾತೆಗೇ
ಅಂಗಜ ಪರರೂಪ ಮಂಗಲಾಂಗಿಗೇ
ಸಂಗವಿದೂರ ದುಷ್ಕೃತಿ ಭಂಗ ತುಂಗ ವಿಕ್ರಮಿಗೇ........

ಹರಿಹರ ಬ್ರಹ್ಮರನು ತಾಯಾಗಿ ರಕ್ಷಿಪಳು
ಸರಿಗಾಣದಿರುವಂಥ ಪರಮೂರ್ತಿಗೇ
ಪರಿಪರಿಯ ವರ್ಣದಲಿ ಪೊಳೆಯುತಲಿ
ಪರಿಪೂರ್ಣ ಸುರಜಾಲಮಯಳಾದ ಸ್ಥಿರಕೀರ್ತಿಗೆ........

ಕೊಬ್ಬಿದ ಮಧುಕೈಟಭಾಸುರರ ಸಂಹರಿಸಿ
ಕೊಬ್ಬಿರಿದು ಉಬ್ಬಿದ ಮಹಾಂಕಾಳಿಗೇ
ಅಬ್ಬರಿಸಿ ಬರುವಂಥ ಕೆಟ್ಟ ದೈತ್ಯರನೆಲ್ಲ
ಇಬ್ಭಾಗ ಸೀಳಿ ಶಾಶ್ವತಳಾದ ರಣಕಾಳಿಗೇ........

ಚಂಡಮುಂಡರ ದೋರ್ದಂಡ ದೈತ್ಯರ ಸಿರವ
ಚಂಡಾಡಿ ಮೆರೆದಂಥ ಚಾಮುಂಡಿಗೇ
ಅಂಡಲೆದು ಒದರುತಲೆ ಬರುವಂಥ ಭಂಡರನು
ತುಂಡಾಗಿ ಖಂಡಿಸಿದ ಪ್ರಚಂಡಿಗೇ........

ಹೀಗೆ, ಅನುಭಾವಿಗಳಾದ ಗುರು ಗೋವಿಂದರು ಜನಮನವನ್ನು ತಿದ್ದಿ ಸುಮಾರ್ಗಕ್ಕೆ ಹಚ್ಚಿದರಲ್ಲದೇ, ಕೆಲಮಟ್ಟಿಗಾದರೂ ಕನ್ನಡದ ಅನುಭಾವಸಾಹಿತ್ಯಕ್ಕೆ ತಮ್ಮ ಕಾಣಿಕೆಯನ್ನು ಸಲ್ಲಿಸಿದರು.

—

ನವಿಲಗುಂದದ ನಾಗಲಿಂಗಪ್ಪನವರು

(೧೮೩೦–೧೮೭೮)

ಅನುಭಾವಿಗಳ ಮಣಿಹ ಸಾಹಿತ್ಯ ಸೇವೆಗಿಂತ, ಜನಜೀವನವನ್ನು ತಿದ್ದಲೆತ್ನಿಸುವುದು; ತಮ್ಮ ಆತ್ಮೋದ್ಧಾರವನ್ನು ಜತೆಗೇ ಇತರರ ಉದ್ಧಾರವನ್ನೂ ಮಾಡಲೆತ್ನಿಸುವುದು. ನವಿಲಗುಂದದ ನಾಗಲಿಂಗಪ್ಪನವರೂ ಈ ವರ್ಗಕ್ಕೇ ಸೇರಿದವರು. ಅನೇಕ ಅನುಭಾವಿಗಳು ಹೇಳಿದ ಎಷ್ಟೋ ವಾಕ್ಯಗಳು ಪದಗಳಂತೆಯೇ ಕಂಡುಬರುತ್ತವೆ. ಇವರು ನೀತಿಬೋಧೆಗಾಗಿ ಭಾಷಣ ಮಾಡಲಿಲ್ಲ. ಚುಟುಕು ವಾಕ್ಯಗಳಲ್ಲಿಯೇ ತಮ್ಮ ಜೀವನದ ಅನುಭವ ಸಾರಸರ್ವಸ್ವವನ್ನು ಅರುಹಿ ತೋರಿಸಿದರು. ಉದಾಹರಣೆಗೆ, ಉಣಕಲ್ಲ ಸಿದ್ದಪ್ಪನೆಂಬ ಅನುಭಾವಿಗಳು ಜನತೆಗೆ ಕರ್ತವ್ಯದ ಮಹತ್ವ ಮತ್ತು ಬಾಳಿನ ಆದರ್ಶಗಳ ಬಗ್ಗೆ ತಿಳಿಸುವದಕ್ಕಾಗಿ ಹೀಗೆ ಹೇಳುತ್ತಿದ್ದರಂತೆ :

‘ ಕೈ ಕಸಿ, ಬಾಯಿ ಬಿಸಿ,
ಆಡಬ್ಯಾಡ ಹುಸಿ ’

ಹಾಗೆಯೇ ನಾಗಲಿಂಗಪ್ಪನವರು ಕೂಡ ಮನದ ನೈರ್ಮಲ್ಯದ ಬಗ್ಗೆ ಹೀಗೆ ಹೇಳುತ್ತಿದ್ದರಂತೆ :

ನಿರ್ಮಲ ಮನಸ್ಸೇ ಮಡಿ
ಉಳಿದುದೆಲ್ಲ ಕಾಲಮಡಿ

ನವಿಲಗುಂದ ನಾಗಲಿಂಗಪ್ಪನವರೂ ‘ ಲೋಕದ ಕಣ್ಣಿಗೆ ಮರುಳರೇ ’ ! ವಿಜಾಪುರ ಜಿಲ್ಹೆಯಲ್ಲಿ ಒಂದು ಪಡೆನುಡಿಯಿದೆ. ಯಾರಾದರೂ ಹುಚ್ಚರ ಹಾಗೆ, ತಿಳಿಯದವರ ಹಾಗೆ, ಮರುಳರ ಹಾಗೆ ವರ್ತಿಸಿದರೆ, “ ಹೀಗ್ಯಾಕ ಮಾಡತಿ ? ನಾಯಿನಿಂಗನ ಹಾಗೆ ” ಎಂದು. ಈ ನಾಯಿನಿಂಗನೇ ನಾಗಲಿಂಗಪ್ಪ. ಅರೆಮರುಳು ವ್ಯಕ್ತಿಯನ್ನು ವಿಜಾಪುರ ಜಿಲ್ಹೆಯಲ್ಲಿ ಇಂದಿಗೂ ನಾಯಿನಿಂಗನೆಂದೇ ಸಂಬೋಧಿಸುವದುಂಟು.

ನಾಗಲಿಂಗಪ್ಪನವರ ತಂದೆ ತಾಯಿಗಳಾರೆಂಬ ಬಗೆಗೆ ತಿಳಿದು ಬರುವದಿಲ್ಲ. ಆದರೆ, ಅವರು ಪಾಂಚಾಳವರ್ಗದವರೆಂಬುದು ಮಾತ್ರ ಗೊತ್ತು. ಅವರು ವಿಜಾಪುರ ಜಿಲ್ಹೆಯ ಬದಾಮಿ ತಾಲೂಕಿನ ಜವಳಗೇರಿ ಎಂಬ ಹಳ್ಳಿಯಲ್ಲಿ ಸನ್ ೧೮೩೦ ರ ಸುಮಾರಿಗೆ ಜನಿಸಿದಂತೆ ಕಾಣುತ್ತದೆ.[೧] ಅವರ ಪ್ರಾಥಮಿಕ ಶಿಕ್ಷಣ ಜವಳಗೇರಿಯ ಗಾವಠಿ ಶಾಲೆಯಲ್ಲಿಯೇ ನಡೆಯಿತು. ಅವರು ಏಳು ವರ್ಷದವರಿದ್ದಾಗಲೇ, ಒಂದು ಸಲ ಶಾಲೆಯನ್ನು ಬಿಟ್ಟು ಬರುವಾಗ, ಈ ಪ್ರಪಂಚದ ಬಗ್ಗೆ ವೈರಾಗ್ಯವುಂಟಾಗಿ, ತಮ್ಮ ಜತೆಗಿದ್ದ ಸಂಗಡಿಗರನ್ನೆಲ್ಲ ಬಿಟ್ಟು ಬಿಟ್ಟು, ನೇರವಾಗಿ ನವಿಲುಗುಂದಕ್ಕೆ ಬಂದು, ಊರ ಉತ್ತರ

೧ ನಾಗಲಿಂಗ ಮಹಾಸ್ವಾಮಿಗಳ ಚರಿತ್ರೆಯು– ಶ್ರೀ. ಗ. ಜೋಶಿ– ೧೯೬೦– ಪು. ೫.

ಗುನ್ನಾಳ ಹತ್ತಿರದ ಮಾನಪ್ಪನ ಮಠದ ಗುಹೆಯಲ್ಲಿ ವಾಸಿಸುತ್ತಿದರು. ಇವರ ನಡೆವಳಿಕೆಯೆಲ್ಲ ವಿಚಿತ್ರವೇ ಆಗಿದ್ದವು. ಯಾರ ಮನೆಗಾದರೂ ಹೋಗಿ ಅವರು ಮಾಡಿಟ್ಟ ಅಡುಗೆಯನ್ನೆಲ್ಲ ಸೂರೆ ಮಾಡುವುದು, ಯಾರ ಅಂಗಡಿಯಲ್ಲಾದರೂ ಹೋಗಿ ಸಾಮಾನುಗಳನ್ನೆಲ್ಲ ಚೆಲ್ಲಿ ಬಿಡುವುದು— ಇಂಥ ಹೊರಗಿನ ಕೃತ್ಯಗಳನ್ನು ಮಾಡುತ್ತಿದ್ದರು. ಇವರ ಬಾಯಿಂದಲೂ ಅಷ್ಟೇ ವಿರಸವಾದ ಮಾತುಗಳು ಬರುತ್ತಿದ್ದವು. ಅದ್ದರಿಂದ ಯಾರೂ ಇವರ ಗೊಡವೆಗೆ ಹೋಗುತ್ತಿರಲಿಲ್ಲ. ಇವರ ಒಡನಾಡಿಗಳೆಂದರೆ, ಸಮಗಾರ ಭೀಮಪ್ಪ, ಹಿಂದಿ ಮಾರುವ ಕಲಾಲ ಹುಸೇನ ಸಾಹೇಬ, ಅವರ ಒಳೆಯ ಹತ್ತಿರವಿರುತ್ತಿದ್ದ ಬೋಯಿಗಳು. ನಾಗಲಿಂಗಪ್ಪ ಆಕಾರದಲ್ಲಿ ಗಿಡ್ಡವಾಗಿಯೂ ಮೈಕಟ್ಟುಳ್ಳವ ರಾಗಿಯೂ ಇದ್ದರಂತೆ. ಅವರು ಉಡುವುದೊಂದು ಧೋತರ, ಹೊದೆಯುವುದೊಂದು ಧೋತರ. ಒಂದೊಂದು ಸಲ ಉಟ್ಟ ಧೋತರವನ್ನೇ ಅರ್ಧ ಬಿಚ್ಚಿ ಹೊತ್ತುಕೊಳ್ಳುವರು. ಹಲಕೆಲವು ಸಲ ಕೌಪೀನ ಮಾತ್ರ ಧರಿಸಿರುವರು. ಹಲಕೆಲವು ಸಲ ದಿಗಂಬರವಾಗಿಯೂ ಇರುವರು. ನಾಗಲಿಂಗಪ್ಪ ನವರಿಗೆ ಶಾಪಾನುಗ್ರಹ ಶಕ್ತಿ ಇತ್ತೆಂದು ಹೇಳುತ್ತಾರೆ. ಒಂದು ಸಲ ಕುರ್ತಕೋಟಿಗೆ ಹೋದಾಗ, ಒಬ್ಬ ಬಳೆಗಾರನಂಗಡಿಗೆ ಹೋಗಿ, ತನ್ನ ಕೈಗೆ ಬಳೆ ಇಡಿಸಲು ಕೈ ಚಾಚಿದರಂತೆ. ವಿನೋದಕ್ಕಾಗಿ ಬಳೆಗಾರ ಮುಂಗೈಯಿಂದ ಮೊಳಕೈವರೆಗೆ ಬಳೆಯನ್ನಿಡಿಸಿದನಂತೆ. ಕೂಡಲೆ ಊರ ಹೊರಗೆ ಹೋಗಿ, ಒಂದು ಬಂಡೆಗಲ್ಲಿಗೆ ಕೈಗಳನ್ನಪ್ಪಳಿಸಿ ಬಳೆಗಳನ್ನೆಲ್ಲ ಒಡೆದುಬಿಟ್ಟರಂತೆ. ಮುಂದೆ ಹದಿನೈದು ದಿವಸ ಗಳಲ್ಲಿಯೇ, ಊರಲ್ಲಿ ಮಾರಕ ಉಪದ್ರವವಾಗಿ, ಊರಲ್ಲಿಯ ನೂರಾರು ಜನರು ಸತ್ತು ಹೋದ ರಂತೆ. ಶಾಪದಂತೆ, ಅವರಿಗೆ ಅನುಗ್ರಹ ಶಕ್ತಿಯೂ ಇದ್ದಿತು. ಒಬ್ಬ ಒಕ್ಕಲಿಗನಿಗೆ ಹುರಕಡಲಿ ಬಿತ್ತಿಸಿ, ಕಾಳು ಬರುವ ಹಾಗೆ ಮಾಡಿದರಂತೆ. ಮುಂದು ಆ ಮನೆತನದವರಿಗೆ ಹುರಕಡ್ಲಿ ಎಂಬ ಹೆಸರೇ ಬಂದಿತಂತೆ. ಈ ವಂಶದಲ್ಲಿಯೇ ಹುರಕಡ್ಲಿ ಮಾಸ್ತರರೆಂಬ ಅನುಭಾವಿಗಳು ಜನ್ಮವೆತ್ತಿ ಇಂದಿಗೂ ತಮ್ಮ ಸಾಧನೆ ಅನುಷ್ಠಾನವನ್ನು ನಡೆಸಿದ್ದಾರೆ. ಒಂದು ಸಲ ಕೋಡಗಿಯಲ್ಲಿ ಅಲ್ಲಿಯ ಕಲೆಕ್ಟರರನ್ನು ಅವಮಾನಗೊಳಿಸಿದ್ದಕ್ಕಾಗಿ, ನಾಗಲಿಂಗಪ್ಪನವರನ್ನು ಸೆರೆಮನೆಯಲ್ಲಿರಿಸಲಾಯಿತಂತೆ. ಇವರು ಅದೃಶ್ಯವಾಗಿ ಸೆರೆಮನೆಯಿಂದ ಪಾರಾಗಿ ಊರ ಪೇಟೆಯಲ್ಲಿ ಕಂಡುಬಂದರಂತೆ.

ನಾಗಲಿಂಗಪ್ಪನವರು ಹೆಚ್ಚಾಗಿ ಧಾರವಾಡ ಮತ್ತು ವಿಜಾಪುರ ಜಿಲ್ಲೆಗಳಲ್ಲಿಯೇ ಸಂಚಾರ ಮಾಡಿದರು. ಈ ಎರಡು ಜಿಲ್ಲೆಗಳನ್ನು ಬಿಟ್ಟು, ಅವರು ಹೆಚ್ಚಾಗಿ ಹೊರಬೀಳಲಿಲ್ಲ. ಅವರ ಸಂಚಾರದ ಕಾಲದಲ್ಲಿ ನವಿಲುಗುಂದದ ಬೋಯಿಗಳು ಅವರ ಪಲ್ಲಕ್ಕಿಯನ್ನು ಹೊರುತ್ತಿದ್ದರು. ಈ ಪಲ್ಲಕ್ಕಿ ವೈಶಿಷ್ಟ್ಯಪೂರ್ಣವಾಗಿದ್ದಿತು. ನಾಗಲಿಂಗಪ್ಪನವರು ಅದಕ್ಕೆ 'ಮುಂಡಕಿ' ಎಂದು ಕರೆಯು ತ್ತಿದ್ದರು. ಪಲ್ಲಕ್ಕಿಯನ್ನಾದರೂ ಹೊರತರಬೇಕಾದರೆ 'ಏ ಸಡಿಯಬೇ ಮುಂಡಕಿ' ಎಂದು ಅನ್ನುತ್ತಿದ್ದರು. ಈ 'ಮುಂಡಕಿ' 'ಪಲ್ಲಕ್ಕಿ' ಯೆಂದರೆ, ಒಬ್ಬ ಪುಣ್ಯವಂತ ಮುದುಕಿಯ ಶವದ ಸಿದಿಗೆ. "ಒಂದು ಸ್ಮಶಾನದಲ್ಲಿ ಬಿದ್ದ ಈ ಸಿದಿಗೆಯನ್ನು ಒಂದು ಕೌದಿಯನ್ನು (ನಾಗಲಿಂಗಪ್ಪ) ತೆಗೆದುಕೊಂಡು ಬಂದಿದ್ದರು. ಇದಕ್ಕೆ ನಾಲ್ಕು ಬದಿಯ ಕೋಲುಗಳನ್ನು ನಡುವೆ ನಾರಿನಿಂದ ಬಿಗಿದುಬಿಟ್ಟಿರು ವರು. ಈ ಮಂಚದ ಚಟ್ಟಿನ ನಡುವಿನಲ್ಲಿ ಒಂದು ಹಳೆ ಅಂಚಿನ ಬಿಟ್ಟು ಒಂದು ಉದ್ದನ್ನ ಬಾಬಾ ಬಿಗಿದುಬಿಟ್ಟಿರುವರು. ಆ ಬದಿಯ ಮೇಲೆ ಚಟ್ಟಿನ ತಲೆಯನ್ನು ಒಂದು ಕಮಾನ ಕಟ್ಟಿಗೆ ಕೂಡ್ರಿಸಲ್ಪಟ್ಟಿದೆ. ಇಂಥ ವಿಚಿತ್ರವಾದ 'ಮುಂಡಕಿ' ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಪ್ರಯಾಣ ಮಾಡುವುದೆಂದರೆ ನಾಗಲಿಂಗಪ್ಪನವರಿಗೆ ಬಲು ಆಸ್ಥೆ. ಅವರ ಪ್ರೀತಿಯ ಈ ಪಾಲಕಿಯು, ಮುಂಡಕಿಯು ಇಂದಿಗೂ ಮಠದಲ್ಲಿ ಕಾಪಿಸಿಕೊಳ್ಳುವದು. ಪ್ರತಿವರುಷ ಪುಣ್ಯತಿಥಿಗೆ ಅದನ್ನೇ ಶೃಂಗರಿಸಿ ಅದರಲ್ಲಿ ಸ್ವಾಮಿಯ ಮೂರ್ತಿಯ ಮೆರವಣಿಗೆಯಾಗುವದು." ೧

೧ ಅದೇ ಪು. ೧೬.

ನಾಗಲಿಂಗಪ್ಪನವರಿಗೆ ಗದಗದ ಜಡಿಯಾಳ ಸ್ವಾಮಿಗಳು, ಸಿದ್ಧಾರೂಢರು, ಶಿಶುನಾಳ ಶರೀಫ ಸಾಹೇಬರು, ಹೊಸಳ್ಳಿ ಬೂದಿಸ್ವಾಮಿಗಳು ಮೊದಲಾದವರ ಭೆಟ್ಟಿಯಾಗಿತ್ತಂತೆ.

ಸಿದ್ಧರ ಜೀವನ ಅದ್ಭುತವಾದದ್ದು. ದೇವರ ಹುಚ್ಚು ಹಿಡಿದ ಈ ವ್ಯಕ್ತಿಗಳು ಈ ಲೋಕದವರಲ್ಲ. ಅವರ ನಡೆವಳಿ "ಬಾಲವತ್, ಉನ್ಮಾದವತ್, ಪಿಶಾಚವತ್." ಬಾಲಲೀಲಾ ಮಹಾಂತಸ್ವಾಮಿಗಳು ಬಾಲವತ್‌ದ ದೃಷ್ಟಾಂತ; ಶರೀಫ ಸಾಹೇಬರು ಉನ್ಮಾದವತ್, ನಾಗಲಿಂಗಪ್ಪನವರು ಪಿಶಾಚವತ್ ಎಂದು ಹೇಳಬಹುದು. ಇಲ್ಲವಾದರೆ, ಸತ್ತು ಹೋದ ಮುದುಕಿಯ ಶವದ ಸಿಡಿಗೆಯನ್ನು ತನ್ನ ಪಲ್ಲಕ್ಕಿಯನ್ನು ಮಾಡಿಕೊಂಡು ಯಾವ ಮನುಷ್ಯ ಅಡ್ಡಾಡಿಯಾನು! ಇವರೆಲ್ಲ ಸಾವಿನ ಕೂಡ ಸರಸವಾಡಿದವರು. ಆ 'ಮುದುಕಿ' ಪಲ್ಲಕ್ಕಿಯನ್ನು ಹತ್ತಿ ಪ್ರತ್ಯಕ್ಷವೇ ಸಾವಿನ ಹೆಗಲ ಮೇಲೆ ಸವಾರಿ ಮಾಡಿದರು.

ಇಂಥದೇ ಇನ್ನೊಂದು ಅದ್ಭುತ ಪ್ರಸಂಗವನ್ನು ಹೇಳುತ್ತಾರೆ. ಒಂದು ಸಲ ನಾಗಲಿಂಗಪ್ಪನವರ ಕಾಲಿಗೆ ನಾರ ಹುಣ್ಣಾಗಿ, ಕಾಲು ಬಾತು ಬಿರಿಯುವಂತಾಗಿತ್ತಂತೆ. ಇಷ್ಟಾದರೂ ಅವರು ತಮ್ಮ ನಿತ್ಯದ ಕೆಲಸ ಕ್ರಿಯೆಗಳನ್ನು ಬಿಟ್ಟಿರಲಿಲ್ಲ. ಬರಬರುತ್ತ ಆ ಹುಣ್ಣು ತುಂಬಾ ತೊಂದರೆ ಕೊಡಹತ್ತಿತಂತೆ. ಅದಕ್ಕೆ ಅವರು ಯಾವ ಔಷಧೋಪಚಾರವನ್ನೂ ಮಾಡಲಿಲ್ಲವಂತೆ. ನೇರವಾಗಿ ಒಬ್ಬ ಕಮ್ಮಾರನ ಮನೆಗೆ ಹೋದರಂತೆ. ಕಮ್ಮಾರ ತಿದಿ ಹೊತ್ತಿಸಿ ತನ್ನ ಕೆಲಸದಲ್ಲಿ ನಿರತನಾಗಿದ್ದ. ಕೆಂಡ ನಿಗಿನಿಗಿ ಉರಿಯುತ್ತಿತ್ತು. ಹೋದವರೇ ಹುಣ್ಣಾದ ಕಾಲನ್ನು ಆ ಕೆಂಡದಲ್ಲಿಟ್ಟು ಕಮ್ಮಾರನಿಗೆ ತಿದಿಯನ್ನು ಹಾಕಲು ಸನ್ನೆ ಮಾಡಿದರಂತೆ. ಕಮ್ಮಾರ ಗಾಬರಿಯಾದ. ಸುತ್ತಲಿದ್ದವರೆಲ್ಲ ಹೆದರಿ ಹಿಂದೆ ಸರಿದರು. ಆಗ, ತಾವೇ ತಿದಿಯ ಸರಪಳಿಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಅದನ್ನು ಎಳೆಯಹತ್ತಿದರಂತೆ. ಕೆಂಡ ಹೆಚ್ಚು ಹೆಚ್ಚು ಜ್ವಾಜ್ವಲ್ಯಮಾನವಾಗಹತ್ತಿತು. ಕಾಲು ಬೇಯಹತ್ತಿ, ನಾರುಗಳು ಛಟಛಟ ಎಂದು ಸಿಡಿಯಹತ್ತಿದವಂತೆ. ಕಾಲು ಹೊರಗೆ ತೆಗೆದಾಗ ಸದಾ ಆರೋಗ್ಯವಂತವಾದ ಕಾಲೇ ಆಗಿತ್ತಂತೆ. ಈ ವಿಷಯವನ್ನು ಆಗ ಅಲ್ಲಿದ್ದ ಶಿರೋಳಕರ ಎಂಬವರು ಹೇಳುತ್ತಿದ್ದರಂತೆ. ನಂಬಲಿಕ್ಕೆ ಬಾರದಷ್ಟು ನಾಗಲಿಂಗಪ್ಪನವರ ಪವಾಡಗಳು ಅದ್ಭುತವಾಗಿವೆ.

ಮಹಾರಾಷ್ಟ್ರದ ಸಂತ ಶ್ರೇಷ್ಠನಾದ ತುಕಾರಾಮನು ಹೀಗೆ ಹೇಳಿದ್ದಾನೆ :

ಜಗಾತ ಪಿಶಾಚ
ಅಂತರಿ ಶಹಾಣಾ
ಸದಾ ಬ್ರಹ್ಮಿ ನಿಮಗ್ನ
ತೋ ಸದಾ ॥

ಬ್ರಹ್ಮಸಾಕ್ಷಾತ್ಕಾರ ಹೊಂದಿದ ವ್ಯಕ್ತಿ ಜಗತ್ತಿಗೇ ಪಿಶಾಚಿಯಾಗಿ ಕಂಡು, ಅಂತರ್ಯದಲ್ಲಿ ಜಾಣನಾಗಿರುತ್ತಾನೆ.

ನಾಗಲಿಂಗಪ್ಪನವರ ಅವಸಾನಕಾಲ ಸಮೀಪಿಸಿದಾಗ ನಡೆದ ಒಂದು ಘಟನೆಯನ್ನು ಹೇಳುತ್ತಾರೆ. ಮಟ್ಟಿಗೇರಿ ಎಂಬ ಹಳ್ಳಿಯಲ್ಲಿ ಕಾಳಪ್ಪ ಬಡಿಗಿ ಎಂಬ ವ್ಯಕ್ತಿಯಿದ್ದ. ಅವನು ಕ್ರಿ. ಶ. ೧೮೬೫ ರಲ್ಲಿ ಮಂಗಳೂರು ಬಾಸೆಲ್ ಮಿಶನ್ ಛಾಪಖಾನೆಯಲ್ಲಿ ಮುದ್ರಿತವಾದ ಬೈಬಲ್‌ದ ಒಂದು ಪ್ರತಿಯನ್ನು ಓದುತ್ತ ಕುಳಿತಿದ್ದನಂತೆ. ಆಗ ನಾಗಲಿಂಗಪ್ಪ ಅವನ ಮನೆಗೆ ಹೋಗಲಾಗಿ, ಗಾಬರಿಗೊಂಡ ಕಾಳಪ್ಪ ಆ ಬೈಬಲ್ ಪುಸ್ತಕವನ್ನು ಮುಚ್ಚಿಡಲು ಹವಣಿಸುತ್ತಿದ್ದನಂತೆ. ಆಗ ನಾಗಲಿಂಗಪ್ಪನವರು ಅವನ ಕೈಯಿಂದ ಆ ಪುಸ್ತಕವನ್ನು ತೆಗೆದುಕೊಂಡು, ಅಲ್ಲಿಯೇ ಸಮೀಪದಲ್ಲಿದ್ದ ಚೂಪಾದ ಹಾರೆಯಂಥ ಒಂದು ದೊಡ್ಡ ಮೊಳೆಯನ್ನು ಆ ಪ್ರತಿಯಲ್ಲಿ ಜಡಿದು, ಹೀಗೆ ಹೇಳಿದರಂತೆ : "ಈ ತೂತು ಯಾವಾಗ ಮುಚ್ಚುವದೋ ಆಗ ನಾನು ತಿರುಗಿ ಹುಟ್ಟಿ ಬರುವೆ" ಎಂದು. ೧೮೬೫ ರಲ್ಲಿ

ಮುದ್ರಿತವಾದ ಈ ಬೈಬಲ್ ಪ್ರತಿ ಇಂದಿಗೂ ಇದೆ. ಅಲ್ಲಿ ಎರಡು ಪ್ರತಿಗಳನ್ನು ಕೂಡಿಸಿಟ್ಟಿರುವ ಪುಸ್ತಕಕ್ಕೆ [illegible] ಆದರ [illegible] ಇಂದು ಇದೆ. ಅಲ್ಲಿ ಹೋದ ಸಂದರ್ಶಕರೆಲ್ಲ ನಾಗಲಿಂಗನ್ನು [illegible] ತುಂಬಾ ನಿಧಾನವಾಗಿ [illegible] ಇಂದಿಗೂ ನೋಡುತ್ತಾರೆ.

ಇದಾದ ನಂತರ ನಾಗಲಿಂಗಸ್ವಾಮಿಯವರು ಒಂದು ದಿವಸ ಬಯಲಿನಲ್ಲಿ ಗದ್ದೆಗೆ ಹೋದಾಗ, ಮಠದವರನ್ನೆಲ್ಲ ಕರೆದು ಬಿಟ್ಟಿದ್ದನ್ನು ಕಂಡು "ನೀವು ಹೋದ ಮೇಲೆ ಇನ್ನೇನಿದೆ? ನಾನೂ ಬರುತ್ತೇನೆ" ಎಂದು ಹೇಳಿ, ಮರಳಿ ಮಠಕ್ಕೆ ಬಂದುಬಿಟ್ಟರು. ಅದರ ಪ್ರಕೃತಿ ಅಸ್ವಸ್ಥವಾಯಿತು. ಶಾ. ಶ. ೧೮೦೮ ರ ಆಷಾಢ ಶುದ್ಧ ಚತುರ್ಥಿಯ ದಿವಸ (ಅಂದರೆ ಸನ್ ೧೮೮೬ ರ ಜುಲೈ ತಿಂಗಳ ೨೫ ನೆಯ ತಾರೀಖಿನ ದಿವಸ) ನಾಗಲಿಂಗಸ್ವಾಮಿಯವರು ಇಹಲೋಕಯಾತ್ರೆಯನ್ನು ಮುಗಿಸಿದರು. ಮರಣಕಾಲಕ್ಕೆ ಅವರಿಗೆ ೫೫ ವರುಷಗಳಾಗಿದ್ದುವು.

ಕನ್ನಡದ ಅನುಭಾವಿಗಳ ತತ್ತ್ವಪದಗಳಲ್ಲಿ ನಾಗಲಿಂಗ, ಗುರುನಾಗಲಿಂಗ ಎಂಬ ಅಂಕಿತದ ಹಲವಾರು ಪದಗಳು ದೊರೆಯುತ್ತವೆ. ಅವನ್ನು ಈ ನಾಗಲಿಂಗಸ್ವಾಮಿಯವರೇ ಹೇಳಿದ್ದರೆಂದೂ, ಅವರ ಸುತ್ತಲಿದ್ದ ಭಕ್ತರು ಅವನ್ನು ಬರೆದುಕೊಂಡಿದ್ದರೆಂದೂ ಹೇಳಲಾಗುತ್ತದೆ. ಇಂಥ ಮುಗ್ಧ ಸ್ವಭಾವದ ವ್ಯಕ್ತಿ ಈ ಪದಗಳನ್ನು ಬರೆದಿರಬಹುದೇ ಎಂದೂ ಕೆಲವರು ಶಂಕಿಸುತ್ತಾರೆ. ಆದರೆ, ಮಠಕ್ಕೆ ಈ ಅಂಕಿತದ ಪದಗಳು ದೊರೆತಾಗ ಬಹುಶಃ ಈ ಶಂಕೆಗೆ ಉತ್ತರ ದೊರೆಯಿತು. ಅವರೂ ಮಠದ ಮಟ್ಟಿಗೆ ಈ ಅಂಕಿತದ ಪದಗಳಲ್ಲಿ ಒಂದನ್ನು ಇಲ್ಲಿ ಉದ್ಧರಿಸುವೆವು :

ಆನಂದವಾದ ಚಿನ್ಮಯನ ವಸ್ತು ನಾ ಕಂಡೆ

ಆನಂದವಾದ ಚಿನ್ಮಯನ ವಸ್ತು ನಾ ಕಂಡೆ
ಭಾನುವಿಲ್ಲದ ಬೆಳಕೇನಮ್ಮಾ ॥ ಪ ॥
ನಾನು ಅಲ್ಲದೆ ತನ್ನ ತವರೂರಮನೆಯೊಳು
ತಾನು ಮಾಡಿದ ಪುಣ್ಯ ತಾನಮ್ಮಾ ॥ ಅ ಪ ॥
ಕುಂಡಲದೊಳಗೊಂದು ನೀಲಗಲ್ಲದಿ ಇಟ್ಟು
ಮಂಡಲದೊಳಗಾಡುವದೇನಮ್ಮಾ
ಸೇರಿ ಉನ್ಮನಿಯೊಳು ಗುರುವಿನ ಪುಣ್ಯದಿ
ಘನವಸ್ತು ದೊರಕಿತು ಎನಗಮ್ಮಾ ॥ ೧ ॥
ನಡುನೀರ ಮಧ್ಯದಿ ಮರವೃಕ್ಷ ನಾ ಕಂಡೆ
[illegible]
[illegible]
[illegible] ॥ ೨ ॥
[illegible]
[illegible]
[illegible] ನಾಗಲಿಂಗ ಗುರುವಿನ [illegible]
[illegible] ॥ ೩ ॥

[illegible]

—

ಬಾಲಲೀಲಾ ಮಹಾಂತ ಶಿವಯೋಗಿಗಳು

(೧೮೩೩–೧೮೫೮)

ಅನುಭಾವಿಗಳ ಬಗ್ಗೆ ಬಾಲವತ್, ಜಡವತ್, ಉನ್ಮತ್ತವತ್ ಇರುತ್ತಾರೆಂದು ಈ ದೇಶದಲ್ಲಿ ಹೇಳಲಾಗಿದೆ. ಮಹಾಂತ ಶಿವಯೋಗಿಗಳ ಜೀವನದಲ್ಲಿ ಈ 'ಬಾಲವತ್' ಭಾವವನ್ನೇ ಕಾಣುತ್ತೇವೆ. ಅಂತಲೇ, ಮಹಾಂತ ಶಿವಯೋಗಿಗಳು ಬಾಲಲೀಲಾ ಮಹಾಂತ ಶಿವಯೋಗಿಗಳೆಂದೇ ಪ್ರಸಿದ್ಧರಾದರು. ಇವರು ದೊಡ್ಡವರಾದಾಗ್ಯೂ, ಅನೇಕ ಸಲ ಇವರ ಲೀಲೆಗಳು ಚಿಕ್ಕ ಬಾಲಕರ ಲೀಲೆಯು ಆಗಿಯೇ ಇರುತ್ತಿದ್ದವಂತೆ. ತೊಟ್ಟಿಲಲ್ಲಿ ಮಲಗುವುದು, ಚಿಕ್ಕ ಮಕ್ಕಳ ಹಾಗೆ ಮಾತನಾಡುವುದು, ಮಣ್ಣು ಮಗುವಿನ ಬೇಡಿಕೆಗಳನ್ನು ಕೊಡುವುದು, ಕಣ್ಣುಗಳಿಂದ ಕೂಡ್ನ ದೃಷ್ಟಿಯಿಂದ ಬಾಹ್ಯ ಜಗತ್ತನ್ನು ನೋಡುವುದು— ಇವೆಲ್ಲ ಮಹಾಂತ ಸ್ವಾಮಿಗಳ ಲೀಲೆಗಳಾಗಿದ್ದವು.

ಶಿವಯೋಗಿಗಳ ತಾಯಿ ಯಾರು ? ತಂದೆ ಯಾರು ?— ಇದು ಸ್ಪಷ್ಟವಾಗಿ ತಿಳಿದು ಬರುವದಿಲ್ಲ. ಶಿವಯೋಗಿಗಳು ಹುಟ್ಟಿದ ಊರು ವಿಜಾಪೂರ ಜಿಲ್ಲೆಯ ಮಹಾಲಿಂಗಪುರ ಎಂಬ ಗ್ರಾಮದ ಹತ್ತಿರ ಇರುವ ಬುದನಾಳ ಎಂಬ ಹಳ್ಳಿ. ಶಿವಯೋಗಿಗಳು ಶೈಶವಾವಸ್ಥೆಯಲ್ಲಿದ್ದಾಗಲೇ ತಾಯಿ—ತಂದೆಗಳು ಶಿವಾಧೀನರಾದರೆಂದು ತಿಳಿಯುತ್ತದೆ. ಅದೇ ಕಾಲಕ್ಕೆ, ಮಹಾಪುರುಷರಾದ ಮುಳಗುಂದ ಕಲ್ಮಠದ ಗುರು ಮಹಾಂತ ದೇಶಿಕರು ಈ ಭಾಗಕ್ಕೆ ಸಂಚಾರಾರ್ಥವಾಗಿ ಬಂದಾಗ, ಅನಾಥನಾಗುಳಿದಿದ್ದ ಈ ಶಿಶುವನ್ನು ಗುರುತಿಸಿ, ತಾವೇ ಮಗುವನ್ನು ಎತ್ತಿಕೊಂಡು ಕೃಷ್ಣಾ ತಟಾಕದ ಆಲಮಟ್ಟಿಗೆ ತೆಗೆದುಕೊಂಡು ಬಂದರು. ಅಲ್ಲಿ ವಾಸವಾಗಿದ್ದ ಬಿರಿಯುಮಠದ ಚೆನ್ನಮಲ್ಲಿಕಾರ್ಜುನನನ್ನು ಮತ್ತು ಅನ್ನಪೂರ್ಣಾಂಬಾ ಎಂಬ ಶಿವಭಕ್ತ ದಂಪತಿಗಳಿಗೆ ಮಕ್ಕಳಿಲ್ಲದ್ದರಿಂದ, ಅವರು ಸಂತಾನಕ್ಕಾಗಿ ಹಂಬಲಿಸುತ್ತಿದ್ದರು. ಆಗ ಮಹಾಂತ ದೇಶಿಕರು ಆ ದಂಪತಿಗಳನ್ನು ಕರೆದು ಬಾಲ ಶಿವಯೋಗಿಯನ್ನು ಅವರ ಉಡಿಯಲ್ಲಿ ಹಾಕಿ 'ಇವನೇ ನಿಮ್ಮ ಮಗು. ಇವನ ಲಾಲನೆ ಪಾಲನೆ ಮಾಡಬೇಕೆಂದು ಹೇಳಿ ಹೋದರು. ಈ ಶಿವಭಕ್ತ ದಂಪತಿಗಳು ಚಿಕ್ಕಂದಿನಿಂದ ಮುತ್ತಿನಂತೆ ಈ ಮಗುವಿನ ಪೋಷಣೆಯನ್ನು ಮಾಡಿದರು. ಮಗು ದೊಡ್ಡದಾದಾಗ, ಅಲ್ಲಿಯೇ ಅಯ್ಯನವರ ಶಾಲೆಯಲ್ಲಿ ಓದು ಬರಹ ಕಲಿತನು. ಆದರೆ, ಅವನಿಗೆ ಈ ಐಹಿಕ ವಿದ್ಯೆಯು ಅಷ್ಟು ರುಚಿಸಲಿಲ್ಲ. ತನ್ನ ನಿಜ ಗುರುವಾದ ಮುಳಗುಂದ ಕಲ್ಮಠದ ಮಹಾಂತ ದೇಶಿಕರನ್ನು ಅರಸುತ್ತ ಹೊರಟನು. ಬಾಗಲಕೋಟೆ, ಬದಾಮಿ, ಕಟಕಿ, ಶ್ರೀಶೈಲ ಮೊದಲಾದ ಸ್ಥಳಗಳನ್ನೆಲ್ಲ ಸುತ್ತಾಡಿ, ಮಹಾಂತ ದೇಶಿಕರು ಧಾರವಾಡ ಜಿಲ್ಲೆಯ ಮುಳಗುಂದದಲ್ಲಿಯೇ ವಾಸವಾಗಿದ್ದರೆಂಬುದನ್ನು ಅರಿತು, ಅಲ್ಲಿಗೆ ಧಾವಿಸುವುದರಲ್ಲಿಯೇ ದೇಶಿಕರು ಪಾರ್ಥಿವ ದೇಹವನ್ನು ತ್ಯಜಿಸಿ, ಶಿವಪದವನ್ನು ಸೇರಿದ್ದರು. ಆದರೆ, ಅವರು ದೇಹವನ್ನು

ಹಾಗೆ, "ಇನ್ನು ಸ್ವಲ್ಪ ದಿವಸಗಳಲ್ಲಿಯೇ ಒಬ್ಬ ಬಾಲ ಶಿವಯೋಗಿ ತಮ್ಮ ಉತ್ತರಾಧಿಕಾರಿಯಾಗಿ ಬರುವನೆಂದು" ತಮ್ಮ ಭಕ್ತರಿಗೆ ತಿಳಿಸಿದ್ದರು.

ಶಿವಯೋಗಿಗಳು ಆ ಮೇರೆಗೆ ಮುಳಗುಂದಕ್ಕೆ ಬಂದಾಗ, ಊರ ಹೊರಗಿರುವ ಹುಲುಗಾದಿನ್ನಲ್ಲಿಯ ಅಜ್ಜನ ಗದ್ದುಗೆಯ ಮೇಲಿನ ಮಠದಲ್ಲಿಯೇ ನೆಲಸಿದರು. ಶಿವಯೋಗಿಗಳ ವೀರ ವೈರಾಗ್ಯವನ್ನು ನೋಡಿದ ಮುಳಗುಂದದ ಮಹಾಜನರು ಅವರಿಗಾಗಿ ಒಂದು ಮಠವನ್ನು ಕಟ್ಟಿಸಿಕೊಟ್ಟರು. ಅನಂತರ ಶ್ರೀಗಳವರು ಚಿತ್ರದುರ್ಗದ ಜಗದ್ಗುರುಗಳ ಆದೇಶದ ಮೇರೆಗೆ ಕಲ್ಮಠದ ಅಧಿಕಾರವನ್ನೂ ವಹಿಸಿಕೊಂಡರು.

ಬೆಳೆದು ದೊಡ್ಡವರಾದಾಗ ಶ್ರೀಗಳು ಅನೇಕ ಪವಾಡಗಳನ್ನು ಮೆರೆದರು. ಚಿಕ್ಕ ಬಾಲಕನಂತೆ ವರ್ತಿಸಿದರು. ಮಠದ ಹತ್ತಿರವೇ ಇರುತ್ತಿದ್ದ ಫಿರಂಗಿಯವರ ಮನೆತನದ ಬಸಮ್ಮನೆಂಬ ಸಾಧ್ವಿಯು ಗಂಡನನ್ನು ಕಳೆದುಕೊಂಡು, ತನ್ನ ಇಬ್ಬರು ಚಿಕ್ಕ ಮಕ್ಕಳೊಂದಿಗೆ ಮುಳಗುಂದದಲ್ಲಿಯೇ ವಾಸಿಸುತ್ತಿದ್ದಳು. ಒಂದು ಸಲ ಈ ಎರಡೂ ಮಕ್ಕಳು ಆಡಲು ಹೋದಾಗ, ಹಾವು ಕಚ್ಚಿ ನಿಧನ ಹೊಂದಿದವು. ಮೊದಲೇ ಗಂಡನನ್ನು ಕಳೆದುಕೊಂಡಿದ್ದ ಬಸಮ್ಮನವರಿಗೆ ಈ ಪುತ್ರವಿಯೋಗ, ಗಾಯದ ಮೇಲಿನ ಬರೆಯಂತಾಯಿತು. ಅವರು ಪುತ್ರವಿಯೋಗಕ್ಕಾಗಿ ಬಹುವಿಧ ಶೋಕಿಸಿದರು. ಆಗ ಶ್ರೀಗಳು ಅವರ ಮನೆಯ ವರೆಗೆ ಹೋಗಿ, ಅವಳನ್ನು ಸಾಂತ್ವನ ಮಾಡಿ ಮಕ್ಕಳ ಅಳಿವಿಗಾಗಿ ರೋಧಿಸಬಾರದೆಂದೂ, ತಮ್ಮನ್ನೇ ತಮ್ಮ ಮಗುವೆಂದು ಭಾವಿಸಬೇಕೆಂದೂ ಹೇಳಿದರು. ಈ ಶಿವಸ್ವರೂಪ ಕಾರಣಿಕ ಪುರುಷನನ್ನೇ ತನ್ನ ಮಗನೆಂದು ಭಾವಿಸಿದ ಸಾಧ್ವಿ ಬಸಮ್ಮನವರು ತಮ್ಮ ಮೊಲೆ ಹಾಲನ್ನು ಕೊಟ್ಟು, ಇವರನ್ನು ಪೋಷಿಸಿದರು. ಶಿವಯೋಗಿಗಳೂ ಕೂಡ ಬಾಲವತ್ ಆ ಸಾಧ್ವಿಯ ಮೊಲೆ ಹಾಲನ್ನು ಈಂಟಿದರು. ಡಾ. ಆರ್. ಸಿ. ಹಿರೇಮಠ ಅವರು ಹೇಳುವಂತೆ ಇದು ಅದ್ಭುತ ದೃಶ್ಯ !

ಮುಗಿಲ ಛತ್ತು, ಓ ಹಗಲ ಬಿತ್ತು, ಅದ
–ರಲ್ಲಿ ಹೆಣೆದ ಮುತ್ತು.
ಜಗದ ತೊಟ್ಟಿಲವ ಕಟ್ಟಿ ಆಡುವನ
ತೂಗು ಏಳು ಸುತ್ತು.

ಹೊಡಿ ಹಣ್ಣ ತಾ ಜಗದ ಕಣ್ಣ ನ
ಮ್ಮನ್ನು ಬಿಗಿದ ತಂದೆ,
ನೋಡು ಸಿಲುಕಿಹನು ಬಾಲಲೀಲೆಯಲಿ
ತೂಗಿ ಹಾಡು ಎಂದೆ. ೧

ಬಾಲಲೀಲಾ ಮಹಾಂತ ಶಿವಯೋಗಿಗಳ ಘನ ವೈರಾಗ್ಯ, ತಪಃಪ್ರಭಾವಗಳನ್ನು ಕೇಳಿದ ಮೈಸೂರು ಒಡೆಯರಾದ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರು ಸನ್ ೧೮೩೩ ರಲ್ಲಿ ಶ್ರೀಗಳವರನ್ನು ತಮ್ಮಲ್ಲಿ ಬರಮಾಡಿಕೊಂಡರು. ಅತ್ಯಾದರಕ್ಕೆ ಸ್ವಾಗತವನ್ನು ಮಾಡಿ, ಅವರಿಗೆ ಧನಕನಕವನ್ನು, ಪಾದುಕಾದಿಗಳನ್ನು ಭಕ್ತಿಪೂರ್ವಕವಾಗಿ ದಾನ ಮಾಡಿದರು. ಆದರೆ, ನಿರವು ವೈರಾಗ್ಯಮೂರ್ತಿಗಳಾದ ಶಿವಯೋಗಿಗಳು ಅದಾವುದನ್ನೂ ಮುಟ್ಟಲಿಲ್ಲ. ಆದರೆ, ಮಹಾರಾಜರ ಮನಸ್ಸು ನೋಯಬಾರದೆಂದು ಅವರು ಕೊಟ್ಟ ಕಂಬಳಿ ಹೊದಿಕೆಯೊಂದನ್ನು ಮಾತ್ರ ಸ್ವೀಕರಿಸಿದರು. ಶಿವಯೋಗಿಗಳಿಗೆ ಅರಮನೆಯ ವಾಸವೈಭವ ಬೇಡವಾಗಿತ್ತು. ಶೀಘ್ರವೇ ಮುಳಗುಂದಕ್ಕೆ ಮರಳಿ ತಮ್ಮ ಲಿಂಗಾ

೧ ವೈರಾಗ್ಯದಲರು ೧೯೫೮ – ಪು. ೧.

ನಂದ ಸಾಮ್ರಾಜ್ಯದಲ್ಲಿ ಲೀನರಾದರು. ಶ್ರೀಮನ್ಮಹಾರಾಜರು ಶಿವಯೋಗಿಗಳ ವೃತ್ತಾಂತವನ್ನು ಕೇಳಿದಾಗ, ಶಿವಯೋಗಿಗಳು ಪದ್ಯರೂಪವಾಗಿ ಅರುಹಿದ ತಮ್ಮ ವೃತ್ತಾಂತ ಅವರ ಪರಮ ವೈರಾಗ್ಯವನ್ನು ಎತ್ತಿ ತೋರಿಸುತ್ತದೆ :

ನೀನೆಲ್ಲಿ ನಿನ್ನ ದೇಶೆಲ್ಲಿ ಕೇಳಜೀ ರಾಜ
ನಾವೆಲ್ಲಿ ವಾಸಿರುವ ಸುಡುಗಾಡ ಠಾವೆಲ್ಲಿ
ಏನಾಸ ಮಾಡದಲಿ ಜಗದೆನ್ನ ಕಟ್ಟಿದೆಯೊ ಕಳ್ಳನು ಕಟ್ಟುವರೂಢಿ ॥

ಬಾಲಬ್ರಹ್ಮಿಯು ನಾನು ಬಳಸಿ ಬ್ರಹ್ಮಿಯು ನೀನು
ಬಹಳ ಹೇಳುವದೇನು ತಿಳಿವಳಿಕೆ ರಾಜನಿಗೆ
ಮೇಲೆ ಚಂದದ ಸುಖವು ಒಳಗೇನು ಸುಖವಿಲ್ಲ ಮೈಸೂರ ಮೈಬೂದನ್ನೋ ॥

ನಮ್ಮ ಸುಖದುಃಖಗಳ ಕೇಳುವರು ಯಾರಿಲ್ಲ
ನಮ್ಮ ಸುಖ ಮೂಕ ಸಕ್ಕರೆ ಮೆದ್ದ ಪರಿಯಂತೆ
ನಮ್ಮ ದುಃಖವು ಕಳ್ಳ ಬೀಗಾರಿದಂತಿಹುದು ಮರುಳಲ್ಲವೆಲೆ ರಾಜನೆ ॥

ಹೊದರದಿ ಬಳ್ಳಿ ಸುವರ್ಣದಿಂದಲಿ ರತ್ನ
ಗಂಧಪರಿಮಳ ಪುಷ್ಪಸುಗಂಧದಿಂದಲಿ ಲಿಂಗ
ಚಂದವಾಗಿಹ ಭಾವ ತ್ಯಾಗೋದಾಗೆ ನೋಡು ಹಿಮ್ಮಿಂದ ನಮ ಚಂದವು
ಚಂದದಿಂ ಕೇಳ್ ರಾಜ ಕರದ ಕೊಂಬೋಬುರುಡೆ
ಗುದದ ಲಂಗುಟವೆರಡು ಪೂರ್ವದಲ್ಲಿರುತಿಹವು
ಇವನಿಷ್ಟು ನಮ್ಮ ಮುದಕವ್ವ ಮಾಡಿದಳು ಸರ್ವಸರ್ವಾಲಂಕಾರಗಳನು ॥

ಊರಿಗೊಂದೂಡಕಗೆ ಒಂದು ನ್ಯಾಯೆಂಬ ಪರಿ
ದೂರ ಚಂದವು ನಮದು ಸರಿಬಾರದಾರಿಗೆಯು
ಪುರಾರಿ ಶಿವ ಮಾಡಿದಾಟವಿದು ತಿಳಿಯದು ಏಂತ ಕರೆಸಿಕೊಂಡೆ
ಯಾರು ಹೇಳಿದರು ನಿನಗೇಕೆ ಕರೆಸಿದಿ ನಮ್ಮ
ಜೇರುಬೂನಾದಿ ಓಂಗ್ಯೆತಿ ನೋಡೆಲೆ ರಾಜ
ಸೋಮಸುಂದರ ಮಗುವು ತಂದೆ ತಾಯಿಗೆ ಹಿತವು ಜಗಕೆ ವ್ಯತ್ಯಾಸಲೀಲಾ ॥

ವಸುಧಿಪನೆ ನಿನ್ನ ಮೈಸೂರೆಂಬ ಬೆಲ್ಲದ
ಮುಸುರಿಗಡಿಗಿಗೆ ಲಕ್ಷಗಟ್ಲೆ ಭಿಕ್ಷುಕರೆಂಬ
ನಸಿನೆ ಮಕ್ಷಿಕದಂತು ಮುಸುಕಿರುವದೇನೆಂಬೆ ಮುಕ್ತಿಗಿದು ಹಾಕಿದಂತೆ
ಶಶಿಧರನವಾಹನಂಶಿಕನಾದ ಕಾರಣಂ
ಬಿಸಜಭವ ಮುಖ್ಯರಿಗೆ ದೊರಕದಿಹ ಭಕ್ತಿಯು ಹಾಸಿರೆಯು
ಪಸರಿಸಿತು ಜಗದಗಲ ನಿನ್ನಯ ಭಕ್ತರ ಬಂಧು ನೀನೆ ॥

ಇರದೆ ಗಂಜಾಮ್ನಿ ವೆಂಕಟರಾಯ ಕೇಳಿದ್ಯ
ಮೂರುವರೆ ಮೊಳ ಗಿಡು ನಾವಿರುವ ಸ್ಥಳ ನೋಡಿ
ದೊರೆ ಕೊಟ್ಟ ರಥ, ಮೇಣೆ, ಛತ್ರ, ಚಾಮರಗಳ ನಾವೆಲ್ಲಿ ಮಡಗಿಕೊಳಲಿ ?

> ತರಬೇಡೆಂದರೆ ತಂದಿರೂರೂರ್ಗೆ ಮೆರೆಸಿದಿರಿ
> ತೀರೋಯ್ತು ಗುರುಕರುಣ ದೊರೆ ಭಕ್ತಿವೈಭವವು
> ತಿರಿಗೊಯಿರಿ ಚಂದಲ್ಲ ದೊಡ್ಡ ಸ್ಥಲ ಸುಸರಿಗಳು, ಸಣ್ಣ ಸ್ಥಲಕೇನು ಚಂದ ॥ ೧

ಮುಳಗುಂದಕ್ಕೆ ಮರಳಿದ ಮೇಲೆ ಶಿವಯೋಗಿಗಳಿಗೂ ತೊಂದರೆ ಕೊಟ್ಟ ಮಹಾತ್ಮರನೇಕರಿದ್ದರು. ಆದರೆ, ಶಿವಯೋಗಿಗಳು ಯಾವುದನ್ನೂ ಗಣನೆಗೆ ತಾರಲಿಲ್ಲ. ಯಥಾಪ್ರಕಾರ, ತಮ್ಮ ಪೂಜೆ ಪುರಸ್ಕಾರಗಳಲ್ಲಿಯೇ ಅನುರಕ್ತರಾಗಿ, ಬಂದ, ಬಾರದ, ಭಕ್ತರನ್ನೆಲ್ಲ ಅನುಗ್ರಹಿಸಿ ತಮ್ಮ ತಪಃ ಸಾಮ್ರಾಜ್ಯದಲ್ಲಿ ಘನಲಿಂಗ ಚಕ್ರವರ್ತಿಗಳಾಗಿ ಮೆರದು, ಶಾಲಿವಾಹನ ಶಕೆ ೧೭೮೦ ರ ಸಿದ್ಧಾರ್ಥಿ ಸಂವತ್ಸರ ಮಾಘ ಶುದ್ಧ ೧೩ ಸೋಮವಾರ (ಅಂದರೆ ಸನ್ ೧೮೫೮ ರಲ್ಲಿ) ಪ್ರಾತಃಕಾಲದಲ್ಲಿ ಲಿಂಗ ಸಮಾಧಿಯೊಳಗಾದರು.

ಹೀಗಾಗಿ, ಶಿವಯೋಗಿಗಳು ಈ ಭೂಮಿಯ ಮೇಲೆ ಚರಿಸಿದುದು ಕೇವಲ ೩೫ ವರುಷ ಮಾತ್ರ. ಆದರೆ, "ಅಷ್ಟೊಂದು ಅಲ್ಪಾವಧಿಯಲ್ಲಿಯೇ ಅವರು ಭಕ್ತಿ, ಜ್ಞಾನ, ವೈರಾಗ್ಯ ಸಂಪನ್ನರಾಗಿ ತಮ್ಮ ಶಿವಯೋಗ ಸಾಮರ್ಥ್ಯದಿಂದ, ಅಸಾಮಾನ್ಯ ವ್ಯಕ್ತಿತ್ವದಿಂದ, ಘನ ಪಾಂಡಿತ್ಯದಿಂದ, ನಿಷ್ಕಾಮ ಕರ್ಮದಿಂದ, ಸತ್ಯನಿಷ್ಠೆಯಿಂದ, ಕಾವ್ಯಶಕ್ತಿಯಿಂದ ಲೋಕ ಕಲ್ಯಾಣವನ್ನೆಸಗಿ ಬಯಲಿನಲ್ಲಿ ಬಯಲಾದರು. ೨

ಬಾಲಲೀಲಾ ಮಹಾಂತ ಶಿವಯೋಗಿಗಳ ಕಾವ್ಯಶಕ್ತಿ ಅದ್ಭುತವಾದದ್ದು; ಶೈಲಿ ಲಲಿತವಾದುದು; ಅನೇಕ ಸಲ ಪಾಂಡಿತ್ಯಪೂರ್ಣವಾದುದು; ಕಲ್ಪಕತೆ ವಿಸ್ಮಯಕರವಾದುದು; ಅನುಭಾವ ಗಂಭೀರವಾದುದು. ಕವಿಯಾಗಿಯೇ ಹುಟ್ಟಿದವನಿಗಿಂತ ಹೆಚ್ಚು ಪ್ರತಿಭಾಪೂರ್ಣವಾದ ಕಾವ್ಯವನ್ನು ಈ ಅನುಭಾವಿ ರಚಿಸಿದರು. "ಆಶುಕವಿಗಳಾದ ಶಿವಯೋಗಿಗಳು ಪ್ರತಿಭಾಯುಕ್ತವಾದ ಅನೇಕ ಹಾಡು-ಪದ್ಯಗಳನ್ನು ವಿಭೂತಿಯ ಉಂಡೆಯಿಂದ ಮಠದ ಗೋಡೆ, ತೊಲೆ, ಕಂಬಗಳ ಮೇಲೆ ಬರೆದಿಡುತ್ತಿದ್ದರು. ಅವುಗಳನ್ನೆಲ್ಲ ಭಕ್ತರು ಸಂಗ್ರಹಿಸಿ, ಭಜನೆಯ ಪದಗಳನ್ನಾಗಿ ಹಾಡುತ್ತ ಬಂದರು." ೩

ಶಿವಯೋಗಿಗಳು ವಿಜಾಪುರ ಜಿಲ್ಹೆಯವರು. ಅಂತಲೇ, ಅವರ ಕವನಗಳಲ್ಲಿ ವಿಜಾಪುರದ ದೇಸಿಯ ಬಿಗುವೂ, ವಿಜಾಪುರದ ಹಲವು ವೈಶಿಷ್ಟ್ಯಪೂರ್ಣ ಪ್ರಯೋಗಗಳೂ ಕಂಡುಬರುವುದುಂಟು.

ಪ್ರಗಲ್ಭ ಕವಿಗಳಾಗಿ ಶಿವಯೋಗಿಗಳು ಜನತೆಗೆ ನೀಡಿದ ಸಂದೇಶವೇನು ?

ಈ ಜೀವನ ಸ್ಥಿರವಲ್ಲ. ಈ ಮಲದೇಹವನ್ನು ನಂಬಿ ಮನುಷ್ಯ ಕೆಡಬಾರದು.

> ನಾರಿ ನಿನ್ನವಳಲ್ಲ ಹೊನ್ನು ನಿನ್ನದು ಅಲ್ಲ
> ಧೀರ ಪುತ್ರಾಪ್ತರುಗಳಾರು ಅಲ್ಲಾ
> ಸಾರಿ ಹೇಳುವೆನೀಗ ತಿಳಿಯುವದು ಮುಂದೇ ನೀ
> ಘೋರ ನರಕಾರ್ಣವದೆ ಬೀಳ್ವಾಗ ತಿಳಿವೆ ॥
>
> ಕದನಕರ್ಕಶದಿಂದೆ ಬರಿದೆ ನೀನನ್ಯರನು
> ಮದಸೊಕ್ಕಿದಾನೆವೊಲ್ ಜರಿಯದಿರು ಮನುಜಾ

---

೧ ಕೈವಲ್ಯ ದರ್ಪಣ– ೧೯೪೩– ಪು. ೧೨೮–೧೩೫.

೨ ವೈರಾಗ್ಯದಲರು– ೧೯೫೯– ಪು. ೩.

೩ ಅದೇ ಪು. ೬.

ಕುದಿದು ನಾ ಹೆಚ್ಚು ತಾ ಹೆಚ್ಚೆಂದು ಒಣ ವಾದ
ಪದವಿಗಿದು ತರವಲ್ಲ ಕುತ್ತಹುದು ಮುಂದೆ ॥

ಗುರುಹಿರಿಯರನು ಕಂಡು ಕೋಣನಂದದಿ ಮರೆತು
ಸಿರಬಾಗದಿರೆ ಮುಂದೆ ಘನ ಬಾಧೆಬಡುವೆ
ಮೊರೆವ ಕಾಲನ ಕೈಗೆ ಸೆರೆಯು ಸಿಕ್ಕುವೆ ನೀನು
ಭರದೊಳು ಮಹಂತೇಶನಡಿವಿಡಿಯೊ ಮರುಳೇ ೧

ಆದುದರಿಂದ ಮನುಷ್ಯ ತನ್ನ ಜೀವನಪಥವೇನೆಂಬುದನ್ನು ಅರಿತುಕೊಂಡಿರಬೇಕು. ಬೇವಂ ಮೆಚ್ಚಿದ ಕಾಗೆಗೆ ಮಾವಿಳಿದಪ್ಪಂತೆ, ವ್ಯಂಜನಪದಾರ್ಥಗಳನ್ನೇ ಮೆಚ್ಚಿದ ನಾಲಗೆಗೆ, ಹಿತವಾದ ಪದಾರ್ಥ ಬೇಡೆನಿಸುವಂತೆ, ಮನುಷ್ಯಜೀವನ ಮೋಹಪಾಶದೆಡೆಗೆ ಸಾಗಿದೆ.

ರಸಯುಕ್ತವಾದ ಪಣ್ಣಿನ ತರುವಿರುತಿರೆ
ಒಸೆದು ಮೆಲ್ಲದೆ ನಿಂಬಫಲವ ಬೆದಕಿ
ಹಸಿದು ಹಾರೈಪ ವಾಯಸದ ಬಳಗದಂತೆ
ಶಶಿಧರಾಮೃತ ಮಹಾಲಿಂಗವಿರೆ
ಸಸಿನೆ ಪೂಜಿಸಿ ಮುಕ್ತಿ ಪಡೆಯದೆ ಮೋಹದಿ
ನುಸಿದು ಹೋಗುವರಯ್ಯ ವಿಷಯಾದಿಗಳ ಬಯಸಿ ೨

ಹೀಗೆ, ಮೋಹಪಾಶಾಬದ್ಧರಾದ ಮಾನವರು ಇಹಜೀವನದ ಚಿಂತೆಯಲ್ಲಿಯೇ ಮುಳು ಮುಳುಗಿ ಏಳುತ್ತಾರೆ :

ಧನಧಾನ್ಯ ವಸ್ತ್ರ ವಾಹನ ಸುಶೀಲಗಳುಳ್ಳ
ವನಿತೆ ಸುಕುಮಾರರತಿ ಕುಶಲರಿರಲು
ಜಿನುಗುತಿಹ ಜೀವಿಗಳಿಗವನದೇನಿವನದೇ
ನೆನಗೆ ಸರಿಯಾರಿಳೆಯೊಳಿಲ್ಲೆಂಬ ಚಿಂತೆ–

–ಯಲ್ಲಿ ಒದ್ದಾಡುತ್ತಾರೆ. ಬಲವಾನ್ ಇಂದ್ರಿಯಗ್ರಾಮಃ ವಿದ್ವಾಂಸಮಪಿಕರ್ಷತಿ. ಈ ಇಂದ್ರಿಯ ಮೋಹಕ್ಕೆ ಎಂತೆಂತಹರೋ ಒಳಗಾಗಿದ್ದಾರೆ. ಮನಸ್ಸು ಹೊಯ್ದಾಡುತ್ತದೆ.

ಕನಕಗರ್ಭಗೆ ಸರಸ್ವತಿ ಸುತೆಯಾದರೆ
ಎನಗವಳ್‌ಸೂಳೆಯೆಂದಜನ ಮತಿಗೆಡಿಸಿ
ತನಯಳಾಲಿಂಗನವ ಮಾಡಲೆಳಸಿದುದೀ
ಮನದ ನಂಬುಗೆ ಸಾಲದೈಸೆ, ಸೈತಿರದು

ಆದ್ದರಿಂದ ಪರಮಾತ್ಮನಲ್ಲಿ ಅಚಲವಾದ ಭಕ್ತಿಯನ್ನಿಟ್ಟು ಅವನನ್ನೇ ಧ್ಯಾನಿಸಬೇಕು. ಶ್ರದ್ಧಾವಾನ್ ಭಜತೇ ಯೋ ಮಾಂ, ಸ ಮೇ ಯುಕ್ತತಮೋ ಮತಃ. ಸಂಶಯಾತ್ಮಾ ವಿನಶ್ಯತಿ. ನಂಬಿ ಕರೆದಡೆ ಓ ಎನ್ನನೇ ಶಿವನು ? ನಂಬರು, ನೆಚ್ಚರು, ಬರಿದೆ ಕರೆವರು.

---

೧. ಕೈವಲ್ಯ ದರ್ಪಣ– ೧೯೪೩– ಪು. ೪.
೨. ಅದೇ ಪು. ೫.

ನಂಬಿಗಿ ಸಾಲದು ಡಾಂಭಿಕ ಭಕ್ತರ
ಸಾಂಬಸದಾಶಿವ ನನಗಿನ್ನು
ಕುಂಭಿನಿಯೊಳು ಶಿವ ನಂಬುಗೆಯಿಲ್ಲದೆ
ಶಂಭು ಭಕ್ತರೆಂದುಸುರುವರು

–ಮುಂದೆ ಸ್ತುತಿಸಿ, ಮೇಣ್ ಹಿಂದೆ ನಿಂದಿಸುವರು ಚೆಂದದಿ ನಿಮ್ಮ ಗುಣಂಗಳನು. ಭಕ್ತರು ಶ್ರೀಮಂತರ ಮನೆಗೆ ಹೋದರೆ, ಕಣ್ಣೆತ್ತಿ ಸಹ ನೋಡುವದಿಲ್ಲ. "ಹಾವು ತಿಂದವರ ನುಡಿಸಬಹುದು; ಗರ ಹೊಡೆದವರ ನುಡಿಸಬಹುದು; ಸಿರಿಗರ ಹೊಡೆದವರ ನುಡಿಸಲು ಬಾರದು. ಬಡತನವೆಂಬ ಮಂತ್ರವಾದಿ ಹೊಗಲು ಪಟ್ಟನೆ ನುಡಿವರಯ್ಯ" ಎಂದು ಬಸವಣ್ಣನವರು ಹೇಳಿದರು. ಹಾಗೆಯೇ ಶಿವಯೋಗಿಗಳು ಸಹ ಹೇಳುತ್ತಾರೆ :

ಧರೆಯೊಳಗಿರುವತಿ ಸಿರಿವಂತರ ಮನೆಗೆ
ಹರಶರಣರು ಬಂದಿರಲವರು
ಗರಹೊಡೆದಂದದಿ ಶಿರಬಾಗದೆ ತಮ್ಮ
ಭರದೊಳಗಿರುವರು ಲಕ್ಷಿಸರು

–ಅವರ ಹೆಂಡಂದಿರೂ ಹಾಗೆಯೇ. ತಮ್ಮ ಪ್ರಸಾಧನದಲ್ಲಿಯೇ ನಿರತರಾಗಿರುತ್ತಾರೆಯೇ ವಿನಾ, ಧರ್ಮದಲ್ಲಿ ನಿರತರಾಗಿರುವದಿಲ್ಲ.

ಹಿರಿ ಹೆಂಡರು ತಮ್ಮ ತುರುಬ ಸಿಂಗರಿಸುವ
ಮರಿಮಕ್ಕಳ ಸಂಭ್ರಮದಿಹರು

–ಇಂಥ ಸಿರಿವಂತರ ಮನೆಗೆ ಹೋಗುವದಕ್ಕಿಂತ, ಬಡವರ ಮನೆಯ ದನ ಕಾಯುವದೇ ಲೇಸು.

ಸಿರಿವಂತರ ಮನೆಯ ಬಿಡಿಸಿ
ಗುರುಭಕ್ತಿಯನುಳ್ಳ ಕಿರುಭಕ್ತರ ಮನೆ
ತುರುವ ಕಾವುದು ಬಹು ಲೇಸು

ಶಿವಯೋಗಿಗಳು ತಮ್ಮ ಪ್ರಯಾಣದಲ್ಲಿ ಶಿವಭಕ್ತಿಯಿಲ್ಲದ, ಆಚಾರ–ನೀತಿಯಿಲ್ಲದ ಹಲವಾರು ಊರುಗಳಿಗೂ ಹೋಗಿರಬಹುದು. ಅಂಥ ಊರುಗಳ ಬಗ್ಗೆ ಹೀಗೆ ಉದ್ಗಾರ ತೆಗೆದಿದ್ದಾರೆ :

ಎಂಥ ಗ್ರಾಮಕೆ ಬಂದೆವೊ– ಹರಹರ
ಕಂತುಮದನಲಿಂಗವೆ ನಾವಿಂದು
ಮಂಗಲಾಕರ ಭಸಿತವ ರುದ್ರಾಕ್ಷಿ
ಲಿಂಗವನು ಧರಿಸಿದವರು ಕಾಣೆಸರು ॥

ಗಂಡರ ಕೊರಳು ಮುಖವು ಹಾಳಯ್ಯ
ಹೆಂಡಿರ ಕೊರಳು ಮುಖವು ಹಾಳೇ
ಗಂಡ ಹೆಂಡಿರ ಮಧ್ಯದಿ ಪುಟ್ಟಿರುವ
ತುಂಡು ಮಕ್ಕಳನು ನೋಡೆ ಅವು ಹಾಳೇ ॥

ಭವಿಭಕ್ತರಾಚರಣೆಯು ಒಂದಾಗಿ
ಭವಿಯಾರೊ ಭಕ್ತರಾರೊ ಕಾಣೆಸರು

ಅವಿರಳಾತ್ಮಕಲಿಂಗವೆ ಜಗಕೆಲ್ಲ
ಕವಿದು ಅಜ್ಞಾನತಮವು ಶಿವಶಿವ ||

ಹೇಳುವವರಾರಿಲ್ಲವು ಆಚಾರ
ಕೇಳುವವರು ಮುನ್ನಿಲ್ಲವು ಜಗದೊಳಗೆ
ಹೇಳಕೇಳುವವರೆಲ್ಲರು ಒಣಡಬ್ಬು
ಜಾಳಯ್ಯ ಭಾಳಾಕ್ಷನೆ ಶೋಧಿಸಲು ॥ ೧

ಪರಮಾತ್ಮ ನಮ್ಮನ್ನು ಯಾವಾಗಲೂ ಸುಖದಲ್ಲಿಡಬಾರದು; ಅದರಿಂದ ನಾವು ಪರಮಾತ್ಮನಿಂದ ದೂರಾಗುತ್ತೇವೆ. ಅವನು ಕಾಲ ಕಾಲಕ್ಕೆ ನಮ್ಮನ್ನು ಹೊಡೆದು, ಬಡೆದು, ತಿದ್ದುತ್ತಿರಬೇಕು. " ವಿಪದಃ ಸಂತುನಃ ಶಶ್ವತ್ ಯತ್ರ ಸಂಕೀರ್ತ್ಯತೇ ಹರಿಃ " ಎಂದು ಹೇಳುವದುಂಟು. ಶಿವ ಕಾಡಿದರೇ ನಮಗೆ ಮೈತುಂಬ ಎಚ್ಚರವಿರುತ್ತದೆ. ಇಲ್ಲವಾದರೆ ' ಸೊಕ್ಕಿದ ಗೂಳಿ ತಾಯನೇರಿತ್ತು ' ಎಂಬಂತಾದೀತು.

ಕಾಡು ಕಾಡೈ ಶಿವನೆ ಕಾಡದಿರ್ದರೆ ನೀನು
ಕೋಡಿಮನ ಕಾಡೆನ್ನ ಬುದ್ಧಿ ಕೆಡಿಸುವದು ॥

ತಂದೆ ಬಡಿದರೆ ಬುದ್ಧಿ ಮಂದಿ ಬಡಿದರೆ ಕೆಡಕು
ಇಂದುಧರ ನಿನ್ನಾಣೆ ಗಿರಿಜೆಯಾಣೆ
ಸಂದ ಪುರಾತನರ ಬಂದು ಕಾಡಿದರೆ
ಹೊಂದಿದರು ಮುಕ್ತಿಯನು, ಹೊಂದುತಿಹರೆ ? ॥

–ಆದ್ದರಿಂದ, ಶಿವಯೋಗಿಗಳು ಪ್ರಾರ್ಥಿಸುವುದೆಂದರೆ–

ಸಿರಿಯ ಕೊಡದಿರು ಬಹಳ ಹರ ನಿನ್ನ ಮರೆದೇವು
ಧರೆ ಭೋಗ ಸ್ಥಿರವಲ್ಲವೆಂದು ಮೊದಲೆ
ಶರಿರ ಶಿಶುವನಿತಾದಿ ಹರಣವನು ಕೊಡುವಂಥ
ಅರಿದ ಹರ ಪಡೆದವರು ಬಂದರಿಳೆಗೆ ॥ ೨

–ಇನ್ನೊಂದು ಕಡೆಗೆ ಹೀಗೆ ಹೇಳಿದ್ದಾರೆ :

ನಾನಾ ರೋಗ ಚಿಂತೆ ಬಡತನ ಇಲ್ಲದಿರೆ,
ಮಾನವರು ದಕ್ಷನೊಲು ಮೆರೆದು ಉರಿದಾರು;
ಜ್ಞಾನವಿಲ್ಲದ ಭಕ್ತಿದರ್ಶನದಿಂದೇನು ಫಲ ? ೩

ಕರ್ಮಚಕ್ರವನ್ನು ಮೀರಬೇಕು. ಕರ್ಮ, ಹಾವು ತತ್ತಿ ಇಟ್ಟಂತೆ. ಆ ತತ್ತಿ ಒಡೆದರೆ, ಮತ್ತೆ ಹಾವೇ ಬರಬೇಕೇ ವಿನಾ ಹೂ ಬರಲಾರದು. ಮರಿಗೆ ಮರಿ, ಮರಿಗೆ ಮರಿ, ಇಂತೆ ಕರ್ಮದ ಪಾಂಗು. " ಪಡಿ ಹೊನ್ನು ಸಾಲವ ಮಾಡಿದ ಬಡವ, ಓಡಿ ನವಣೆಗೇ ಸಾಲ ತೀರಿಸ " ಬೇಕೆಂದಂತೆ, ಪುರಾಕೃತ ಮಾಡಿದ ಪಾಪ, ಸ್ವಲ್ಪ ಪುಣ್ಯದಿಂದ ಮಾತ್ರ ಕ್ಷಯಿಸದು. ಹೀಗಿದ್ದರೂ, ಮನುಷ್ಯ ಹಿಂದೆ

೧ ಕೈವಲ್ಯ ದರ್ಪಣ– ೧೯೪೩– ಪು. ೨೪.
೨ ಅದೇ ಪು. ೨೫.
೩ ಅದೇ ಪು. ೯೩.

ಮಾಡಿದ ಪಾಪಕರ್ಮ ತೀರಲಿಲ್ಲವೋ ಏನೋ ಎಂಬಂತೆ, ಈ ಜನ್ಮದಲ್ಲಿಯೂ ಪುನಃ ಪಾಪಕರ್ಮಕ್ಕೇ ಕೈ ಹಾಕುತ್ತಾನೆ. "ಹಿಂದಕ್ಕೆ ಸಾಲವ ತಂದದ್ದು ತೀರದೆ, ಮುಂದೆ ಸಾಲವ ಮಾಳ್ಪ ಮರುಳನಂತೆ" ಹಿಂದಿನ ಕರ್ಮವಿರುತ್ತಿರುವಾಗ, ಮುಂದು ಮತ್ತೆ ಅದೇ ಕರ್ಮಕ್ಕೆ ಮನಸ್ಸು ಮಾಡುತ್ತಾನೆ. ಹಿಂದೆ ಮಾಡಿದ ಪಾಪಕರ್ಮ ಇಂದು ಮಾಡಿದ ಪುಣ್ಯವನ್ನೂ ಕಿತ್ತುಕೊಂಡು ಹೋಗುತ್ತದೆ.

ಹಿಂದೆ ಮಾಡಿದ ಪಾಪ ಸಾಲದವರು ಬಂದು
ಇಂದು ಮಾಡಿದ ಪುಣ್ಯ ಬಡ್ಡಿ ಕೊಂಬುವರು
ಒಂದಿಷ್ಟಾರ ಪುಣ್ಯಫಲ ಕೂಡಿ ಬೀಳುವದಿಲ್ಲ. ೧

ಈ ಕರ್ಮಜಾಲ ದಾಟಿ, ಪರಮಾತ್ಮನ ಧ್ಯಾನಕ್ಕೆ ಮನಸ್ಸು ಮಾಡಬೇಕು. ನಾಳೆ ಮಾಡಿದ ರಾದೀತೆಂದು ಬಿಡುವ ಹಾಗಿಲ್ಲ. ನಾಳಿನ ಮಾತು ಹೇಗೋ! ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್.

ಹಣವಿರ್ದಾಗಲೆ ಭಕ್ತಿ, ನೆಣವಿರ್ದಾಗಲೆ ಸೇವೆ
ಗುಣವಿರ್ದಾಗಲೆ ಮಾಡಿ, ಮುಕ್ತಿ ಪಡೆಯಾತ್ಮಾ
ಒಣ ಮಾತಾಡಿದರೆಲ್ಲ ಸಣಿ ಹರಿದು ಹೋಗುವದೆ
ತ್ರಿಣಯನೊಲಿಸುವದು ಬಹು ಕರಕಷ್ಟವಾತ್ಮ ॥ ೨

ನಮ್ಮ ಸುಖ-ದುಃಖಗಳನ್ನು ಪರಮಾತ್ಮ ನಮ್ಮ ಪದರೊಳಗೇ ಹಾಕಿದ್ದಾನೆ. ಅವನು ಹಾಗೂ ಹೇಳುವದಿಲ್ಲ; ಹೀಗೂ ಹೇಳುವದಿಲ್ಲ. ಅವನು ಕನ್ನಡಿ ಇದ್ದ ಹಾಗೆ. ನಮ್ಮ ಪಾಪ-ಪುಣ್ಯಗಳ ಸಂಚಯವೆಲ್ಲ ಅವನಲ್ಲಿ ಪ್ರತಿಬಿಂಬಿತ ಮಾತ್ರವಾಗುತ್ತದೆ. ಹಿಂದಣ ಪುಣ್ಯವನ್ನು ಇಂದುಂಡುಡಬೇಕು. ಇಂದಿನ ಪುಣ್ಯವನು ಮುಂದುಂಡುಡಬೇಕು. "ನರ ಪಾಪ-ಪುಣ್ಯವನು ನರರ ಸೆರಗಿಲಿ ಹಾಕಿ, ಗುರುಮಹಂತಲಿಂಗ ತಾ ಮರೆಯಾಗಿರುತಿರುವಾ."

ಮನುಷ್ಯಜೀವನದಲ್ಲಿ ಆಮಿಷಗಳ ವನದ ಗಿಳಿ ವಿನಯದಿಂದ ಬಂದು, ಸುಸಂಸ್ಕೃತವಾದ ಮನದ ಗಿಳಿಗೆ ತನ್ನ ಆಸರೆಯನ್ನು ಬಿಟ್ಟು ಹೊರಬರಲು ಹೇಳುತ್ತದೆ. ಆಗ ಸಂಸ್ಕಾರ ಹೊಂದಿದ ಮನದ ಗಿಳಿ, ಈ ವನದ ಗಿಳಿಯ ಪ್ರಲೋಭನವನ್ನು ನಿಗ್ರಹಿಸಬೇಕು. ತಮ್ಮದೊಂದು ಸುಂದರವಾದ ಪದ್ಯದಲ್ಲಿ ಶಿವಯೋಗಿಗಳು ಹೀಗೆ ಹೇಳಿದ್ದಾರೆ :

ವನಗಿಳಿಯೆ ಬಂದೆನ್ನ ಮನಗಿಳಿಯ ಬುದ್ಧಿಯನು
ವಿನಯದಿಂ ಕೆಡಸಿ ಪೋಗಲು ಬಂದೆಯಾ ॥

ಶಿವಶಿವೆಂಬುದ ಮರಸಿ ಚಿವಚಿವೆಂಬುದ ಕಲಿಸಿ
ಭವಕಾಲಮಾರ್ಜಾಲನುಣಿಸ ಬಂದೆಯಾ
ಪವನವರ್ಣದ ಗಿಳಿಯೆ ಧವಳ ವರ್ಣದ ಗಿಳಿಯೆ
ಭವವೃಕ್ಷಕೆನ್ನ ಹಾರ ಕಲಿಸಬಂದೆಯಾ ॥

ಹರಧ್ಯಾನವೆಂಬ ಮಹಾ ವರಪಂಜರದ ಗಿಳಿಯ
ಮರಪಂಜರದೊಳಗಾಡ ಕಲಿಸ ಬಂದೆಯಾ

೧. ಅದೇ ಪು. ೩೪.
೨. ಅದೇ ಪು. ೯೩.

ಮರಗಿಳಿಯೆ ಹೋಗಿನ್ನು ಅರಗಿಳಿಯು ಬುದ್ಧಿ ಬಲು
ಬಿರುಸಾಯ್ತು ನಿನ್ನ ಕೂಡಾಡಿ ನಮ್ಮ ॥

ಗುರುಮಹಂತಲಿಂಗ ತಾನಿರದೆ ಸಾಕಿದ ಗಿಳಿಯು
ಸರಿಯೆ ನಿನ್ನೊಡನೆ ಕೂಡಾಡಲಿಕ್ಕೆ
ಮರಿದೇವರೆ ಇದನೊಯ್ದು ಮರದೊಳಗೆ ಬಿಟ್ಟು ಬಾ
ತರವಲ್ಲ ಗಿಳಿಬುದ್ಧಿ ಹೋಯ್ತು ನಮ್ಮ

(ಈ ಪದದಲ್ಲಿಯ ಕಾವ್ಯಸಾಮರ್ಥ್ಯ, ಸಲೀಲತೆಗಳನ್ನು ಗಮನಿಸಬಹುದು. "ಮರಿದೇವರೇ ಇದನೊಯ್ದು ಮರದೊಳಗೆ ಬಿಟ್ಟು ಬಾ")

ಶಿವಯೋಗಿಗಳ ಹೃದಯ ವೈಶಾಲ್ಯವೂ ಮೆಚ್ಚುವಂಥದಾಗಿದೆ. ಯಾರೇ ಆಗಲಿ; ತಮ್ಮ ಮತದ ಪ್ರಸ್ತಾಪ ಮಾಡಬೇಕಾದಾಗ, ಅನ್ಯಮತ ವಿಡಂಬನೆಯೆಂಬುದು ಅನಿವಾರ್ಯವಾಗಿ ಬಂದೇ ಬರುತ್ತದೆ. ಪರಮತ ಖಂಡನ, ಮತಪ್ರಸ್ಥಾಪನೆಯಲ್ಲಿ ಮೊದಲ ಪ್ರಕರಣ. ಬಸವಣ್ಣನವರಂಥವರ ವಚನಗಳಲ್ಲಿಯೂ "ನಾರಾಯಣ, ಗೀರಾಯಣ ಎಂಬವರ ಕಾಣೆ. ನಾರಾಯಣ ಗೀರಾಯಣ ಎಂಬವರ ಕೆನ್ನೆವಾರೆ ಸೀಳಿದಲ್ಲದೆ," ಎಂದು ಮೊದಲಾದ ಮಾತುಗಳು ಬರುತ್ತವೆ. ಈ ಮಾತುಗಳನ್ನು ಸಕಲ ಜೀವಾತ್ಮರಿಗೆ ಲೇಸನೇ ಬಯಸಿದ್ದ ಬಸವಣ್ಣನವರು ಬರೆಯದೇ ಇರಲು ಸಾಧ್ಯವಿದೆ; ಇವು ಪ್ರಕ್ಷಿಪ್ತವಾಗಿಯೂ ಇರಬಹುದು. ಆದರೆ, ಇಂಥ ಪರಂಪರೆಯೊಂದು, ತತ್ವಜ್ಞಾನದಲ್ಲಿದ್ದಾಗ, ಪರಮತ ಪುರಸ್ಕಾರ, ಪರಮತ ಮನ್ನಣೆಯ ಹಸಿರುಗಾವಲನ್ನು ನಾವು ಕಾಣುವುದು ಬಾಲಲೀಲಾ ಮಹಾಂತ ಶಿವಯೋಗಿಗಳ ಸಾಹಿತ್ಯದಲ್ಲಿಯೇ ಮಾತ್ರವೆಂದು ಹೇಳಬಹುದು. ಈ ಹೃದಯವೈಶಾಲ್ಯದ ಬಗೆಗೆ ಎಷ್ಟು ಹೇಳಿದರೂ ಕಡಮೆಯೇ. ಮತಭ್ರಾಂತಿಯ ಉರಿದಾರಿಯಲ್ಲಿ ಕನ್ನಡ ಸಾಹಿತ್ಯ ಹಾಯ್ದು ಬರುತ್ತಿರುವಾಗ, ಇಂಥ ತಂಪು ಆಪ್ಯಾಯಮಾನವಾಗಿದೆ. ಹಿಮತುಹಿನದ ಹಾಗೆ ದೇಹಕ್ಕೂ, ಮೆದುಳಿಗೂ, ತಂಪನ್ನೂ ಸಮಾಧಾನವನ್ನೂ ತಂದು ಕೊಡುತ್ತದೆ.

ಶಿವಯೋಗಿಗಳು ಇಂದಿನ ವಿಜಾಪುರ ಜಿಲ್ಲೆಯವರೆಂದು ಹೇಳಿತಷ್ಟೇ. ವಿಜಾಪುರ ಜಿಲ್ಲೆಯಲ್ಲಿ ಇಂದಿಗೂ ವೈಷ್ಣವಮತದ ಜನ ಸಾಕಷ್ಟಿದ್ದಾರೆ. ಗೋಪೀಚಂದನಧಾರಿಗಳಾದ ಇಂಥ ವೈಷ್ಣವರನ್ನು ಶಿವಯೋಗಿಗಳು ಕಂಡಿರಬೇಕು. ಅಂತಲೇ, ಭಸ್ಮೋದ್ಧೂಳನ ಮಾಡುವ ಪದದಲ್ಲಿ ವಿಭೂತಿಯ ಮಹತ್ವವನ್ನು ಹೇಳುವಾಗ ಹೀಗೆ ಹೇಳುತ್ತಾರೆ :

ಗೋಪಿಚಂದನಕೆ ಮಹಾ ಪಾಪಿ ಭಂಡಾರಕಿಂ
ದೀ ಪರಮಭಸಿತವು ಯೋಗ್ಯವಯ್ಯ
ಪಾಪ ಪಲ್ಲಟವಹುದು ಕೋಪ ಸಡಿಲುವುದಯ್ಯ
ತಾಪತ್ರಯಾದಿಗಳು ನಿಲ್ಲವಯ್ಯ.

ಇಲ್ಲಿ ಬೇರೆ ಯಾರಾದರೂ ಕವಿಗಳಾಗಿದ್ದರೆ ಗೋಪೀಚಂದನದ ಮೇಲೆ ಬ್ರಹ್ಮಾಸ್ತ್ರವನ್ನೇ ಬಿಡಬಹುದಾಗಿತ್ತು. ಗೋಪೀಚಂದನವ ಧರಿಸಿದ ಕಾಳರಕ್ಕಸರ ಎನ್ನೆದುರಿಗೆ ತೋರದಿರಾ ತಂದೆ– ಎಂದು ಮೊದಲಾಗಿ. ಆದರೆ, ಶಿವಯೋಗಿಗಳಲ್ಲಿ ಉದ್ರೇಕದ ಬದಲು ಶಾಂತಿಯಿದೆ. ಶಾಂತಿ ಆನಂದಗಳೇ ಜೀವನದ ಎರಡು ಕಣ್ಣುಗಳು. ಉದ್ರೇಕ ಕಳವಳದ ಹಾದಿ. ಕಳವಳ ಕ್ರೋಧದ ತಾಯಿ. ಕ್ರೋಧ ಹುಚ್ಚಿನ ತಮ್ಮ. ವಿರಕ್ತರಲ್ಲಿಯೇ ಈ ಭಾವನೆಗಳು ಬಂದರೆ, ಭಕ್ತರ ಗತಿ ಏನು ? ಮೇಲಿನ ಪದ್ಯದಲ್ಲಿಯ ನಿಗ್ರಹ, ಶಾಂತಿ ಗಮನಾರ್ಹವಾಗಿವೆ.

ಬೊಮ್ಮವನು ಅರಿದಿಪರೆ ಬಿಮ್ಮಗಿದ್ದಿರಬೇಕು ಎಂದು ಸರ್ವಜ್ಞ ಹೇಳಿದನು. ಗಂಧದವರು ಗಂಧದವರ ಕೂಡ ಗುದ್ದಾಡಬೇಕೆ ವಿನಾ ಇದ್ದಲಿನವರ ಕೂಡ ಅಲ್ಲ. ಜ್ಞಾನಿ ಜ್ಞಾನಿಯ ಕೂಡಲೇ ಸರಸವಾಡಬೇಕು. ಅಜ್ಞಾನಿಯನ್ನು ಕಂಡರೆ ಓರೆ ಹಾಯಬೇಕು. ಒಂದನ್ನು ಎರಡೆಂಬ, ಹಂದಿ ಹೆಬ್ಬುಲಿಯೆಂಬ ಮೂರ್ಖನನ್ನು ಕಂಡರೆ, ಹಿಂದೆ ಸರಿಯಬೇಕು. ಇದಕ್ಕೆ ಶಿವಯೋಗಿಗಳು ಕೊಡುವ ಸಾದೃಶ್ಯ ಗಮನಾರ್ಹವಾಗಿದೆ :

ಸ್ನಾನವ ಮಾಡಿ ಬರುವ ಮಾರ್ಗದಿ
ಶ್ವಾನವ ಕಂಡಂಜಿರದೆ ಬ್ರಾಹ್ಮಣ
ತಾನೆ ವೋರಿಗೆ ಹ್ಯಾಂಗೋಗುವನೋ ಅದರ ಪದ್ಧತಿಯಂತೆ
ಜ್ಞಾನಹೀನ ಮಾನವರೆಂಬ
ಶ್ವಾನಗಳಂ ಕಂಡಂಜುತ ತಾವೆ
ಜ್ಞಾನಿಗಳೋರಿಗೆ ಹೋಗುವದಾದರ ಕೊರತೇನಿಲ್ಲದಕೆ ॥ (ಪು ೧೨೦)

ಬ್ರಹ್ಮಜ್ಞಾನಿಗೆ ದೇವನೊಬ್ಬನಾಗಿಯೇ ಕಾಣುತ್ತಾನೆ. ಸರ್ವಂ ಖಲ್ವಿದಂ ಬ್ರಹ್ಮ. ದೇವನೊಬ್ಬ ನಾಮ ಹಲವು. ಆದುದರಿಂದಲೇ, ಮುಪ್ಪಿನ ಷಡಕ್ಷರಿಗಳು ಅವರವರ ದರುಶನಕೆ, ಅವರವರ ಭಾವಕ್ಕೆ ಅವರವರ ತೆರನಾಗಿ ಕಾಣುವನು ಶಿವಯೋಗಿ, ಹೋರಾಟವಿಕ್ಕಿಸಲು ಬೇರಾದನಲ್ಲದೆ, ಜಗದೊಳಗೆ ಬೇರುಂಟೆ ಮರುಳೆ ? ಎಂದು ಹೇಳಿದರು. ಬಾಲಲೀಲಾ ಮಹಂತ ಶಿವಯೋಗಿಗಳು ಅದಕ್ಕೂ ಒಂದು ಹೆಜ್ಜೆ ಮುಂದು ಹೋಗಿ, ಹರನ ಭಕ್ತರು, ಹರಿಯನ್ನು ಬಯ್ದರೆ, ಹರಿಭಕ್ತರು ಮುನಿಯಬಾರದು. ಹಾಗೆಯೇ ಹರಿಯ ಭಕ್ತರು ಹರನನ್ನು ಬಯ್ದರೆ ಹರಭಕ್ತರು ಮುನಿಯಬಾರದು ಇದು ಬಡಿದಾಟದ ದಾರಿ. ಅವರವರ ಪಾರುಪತ್ಯ ಮಾಡಲು ಇಬ್ಬರೂ ದೇವರು ಸಮರ್ಥರಾಗಿದ್ದಾರೆ. ದೇವರ ಹೆಸರಿನಲ್ಲಿ ಬಡಿದಾಡುವುದು ಆತ್ಮಹಾನಿಯ ಮಾರ್ಗ. ಅದಕ್ಕೆಂದೇ ಅವರು ಹೇಳುತ್ತಾರೆ :

ಹರಿಯ ಭಕ್ತರುಗಳು ಜರಿಯೆ
ಹರಿಗೆ ತಾವು ಜರಿದ ಹಾಂಗೆ
ಹರನ ಭಕ್ತರುಗಳು ಜರಿಯೆ ಹರಗೆ ಜರಿದಂತೆ
ಹರಿಯ ಭಕ್ತರ ಹರಿಯೆ ಶಿಕ್ಷಿಪ
ಹರನ ಭಕ್ತರ ಹರನೆ ಶಿಕ್ಷಿಪ
ಪರಮಶಿವಯೋಗಿಗೆ ಹೆಚ್ಚೇನು ಕಡಿಮೇನು ಪರಿಪೂರ್ಣಾನಂದ ॥ (ಪು. ೧೧೯.)

ಬಾಲಲೀಲಾ ಮಹಂತ ಶಿವಯೋಗಿಗಳು ಕಾವ್ಯವನ್ನು ಬರೆಯ ಹೊರಟವರಲ್ಲ. ಅವರು ಮೂಲತಃ ಅನುಭಾವಿಗಳು; ತತ್ವಜ್ಞಾನಿಗಳು. ಕಾವ್ಯರಚನೆ ಅವರ ಮೂಲೋದ್ದೇಶವಲ್ಲ. ಆದರೂ, ಅನುಭಾವದ ಮೂಷೆಯಲ್ಲಿ ಹಾಯ್ದು ಬಂದ ಅವರ ಮಂತ್ರವಾಣಿ ಕಾವ್ಯದ ಕಾವನ್ನು ವಿಪುಲವಾಗಿ ಪಡೆದಿದೆ. ಒಬ್ಬ ಒಳ್ಳೆಯ ಕವಿ ಬರೆದರೆಷ್ಟು ಚೆನ್ನಾಗಿರಬೇಕೋ, ಅಷ್ಟು ಉಪಮೆ, ರೂಪಕಾದಿ ಅಲಂಕಾರಗಳು ಅವರ ಹಾಡುಗಳಲ್ಲಿ ಚೆನ್ನಾಗಿ ಕಂಡುಬರುತ್ತವೆ. ಈಗಾಗಲೇ ಅಲ್ಲಲ್ಲಿ ಈ ಮಾತುಗಳನ್ನು ಎತ್ತಿ ತೋರಿಸಲಾಗಿದೆ. ಆದರೂ, ಇಲ್ಲಿ ಇನ್ನೂ ಹಲವಾರು ಉದಾಹರಣೆಗಳನ್ನು ಕೊಡಬಹುದು :

ಹೊನ್ನೆಂಬ ಕಡಲೆಯನು, ಹೆಣ್ಣೆಂಬ ಬೆಲ್ಲವನು
ಮಣ್ಣೆಂಬ ಕುಂಚಿಗೆಯವೊಳಗೆ ಹಾಕಿ
ತಿನ್ನುವೆನು ಕೊಡುಯೆಂದು ಎನ್ನ ಒಲು ಕಾಡುವನು

ಸಾಯುವ ಕಾಲಕ್ಕೆ ಯಮ ನಮ್ಮ ಕಣ್ಣೆದುರಿಗೆ ತೋರುವದು ಹೀಗೆ :

ಸಿಟ್ಟಿನಿಂದ ಬೆಂಕಿಯಂಥ ಕಣ್ಣ ತೆರೆಯುತ ಇವನ
ಹೊಟ್ಟೆಯೊಡೆಯುವ ಹಾಂಗೆ ಸಿಡಿಲ ಶಬ್ದ ಮಾಡಿದ
ಕಲ್ಲಗಾಣದಂಥ ದವಡಿ ಹಲ್ಲ ತೋರಿದ ನೀನು
ಎಲ್ಲಿ ಬೀಳುತ್ತೀಯೋ ಹೇಳು ಎಂದು ಕೇಳಿದ
ಎಲ್ಲಿ ಒಲ್ಲೆ ಯಮನೆ ನನ್ನ ಕೊಲ್ಲಬೇಡವೊ ಎಂದು
ಪಲ್ಲುಗಿರಿದು ಹಲುಬಿ ಯಮನ ಕಾಲಬೀಳಂವ

ಇನ್ನೊಂದು ಉದಾಹರಣೆ :

ಏನು ಕನಸಿನ ಫಲವೊ
ದಾನಿ ಗುರುಶಾಂತೇಶ್ವರ ನಾನು ಗಳಿಸಿದ ಮಹಾ
ಜ್ಞಾನ ಚಾದರ ಹೊದ್ದು
ತಾನೆ ಲಿಂಗಭೋಗ ಮೋಕ್ಷವ ಕೊಟ್ಟ ॥ (ಪು. ೧೨೫)

ಇನ್ನೂ ಒಂದು ಉದಾಹರಣೆ :

ಮುಸುರಿಗಡಿಗೆಗೆ ಲಕ್ಷಗಟ್ಲೆ ಭಿಕ್ಷುಕರು (ಪು. ೧೩೭)

ಮತ್ತೊಂದು :

ವನಗಿಳಿಯು ಬಂದೆನ್ನ, ಮನಗಿಳಿಯ ಬುದ್ಧಿಯನು ವಿನಯದಿಂ
ಕೆಡಿ (ಸಂವುದು) (ಪು. ೪೩)

ಶಿವಯೋಗಿಗಳು ಶುದ್ಧ ದೇಸಿ ಶೈಲಿಯನ್ನು ಉಪಯೋಗಿಸಿದ ಹಾಗೆ, ಸಂಸ್ಕೃತ ಭೂಯಿಷ್ಠವಾದ ಶೈಲಿಯನ್ನೂ ಬಳಸಬಲ್ಲರು. ಉದಾಹರಣೆಗೆ ಈ ಕೆಳಗಿನಂಥ ಪದಗಳೂ ದೊರಕುತ್ತವೆ :

ಸ್ವಾಮಿನ್ ಶ್ರೀ ಪಶ್ಚಿಮದಳದೇಕ ಸಿಂಹಾಸನ ಸದಾರೂಢಂ
ನಾಮರೂಪಕ್ರಿಯಾತೀತಂ
ಕಾಮಿತ ಫಲದಾಯಕ ಮಹಂತ ಕೃತಕೃತ ಝುಣಕೃತ ಝುಣಝೋಂಕೃತ ಸ್ವಾಮಿನ್ ॥
ಪರಲೋಕಸ್ಥಿತ ಮಹಾದೇವಂ ನರಲೋಕೇ ಮಹಾ ಗುರುರ್ಭವತಿ
ಅವತಾರಂ ಕೃತಂ ಕಿಂ ಕಾರಣಂ
ಸ್ವಯ ಶಿವಮತವೃದ್ಧಿಕರೇಣ ಕರುಣಾರ್ಥಂ ಭಕ್ತಜನೇ
ತೇ ಭೂಪಾವನಕರ ರುದ್ರಂ ತೇ ಹರಿಯಜಸುರಮುನಿವಂದಿತ
ತೇ ಅವಿರಳ ನಿರ್ಲೇಪಂ ಮೃಡ ತೇ ಶಾಶ್ವತ ಶಂಕರ ಪರಶಿವ
ತೇ ನಮೋ ಮಹಂತೇಶ್ವರ ಮಹಾ ಗುರು ಕೃತಕೃತ ಝುಣಕೃತ
ಝುಣಝುಣಝೋಂಕೃತ ಸ್ವಾಮಿನ್ ॥ (ಪು. ೬೯)

ಈ ಕೆಳಗಿನ ಸಾಲುಗಳಲ್ಲಿಯ ಲೋಕಾನುಭವವನ್ನೂ ಗಮನಿಸಬಹುದು :

—ಸಿರಿವಂತರ ಮನೆಯ ಬಿಡಿಸಿ, ಗುರುಭಕ್ತಿಯುಳ್ಳ ಕಿರುಭಕ್ತರ ಮನೆ
ತುರುವ ಕಾವುದು ಲೇಸು (ಪು. ೧೬)

—ತಂದೆ ಬಡಿದರೆ ಬುದ್ಧಿ, ಮಂದಿ ಬಡಿದರೆ ಕೆಡಕು (ಪು. ೨೫)

—ಸಿರಿಯ ಕೊಡದಿರು ಬಹಳ, ಹರ ನಿನ್ನ ಮರೆದೇವು (ಪು. ೨೫)

—ನಿನ್ನವರ ಕಾಡು, ಅನ್ಯರದೇತಕ್ಕೆ, ಬೆನ್ನಕುದುರೆಯ ಬಿಟ್ಟು,
ಕತ್ತೆ ತಿದ್ದುವರೆ ? (ಪು. ೨೬)

—ಹಣವಿರ್ದಾಗಲೆ ಭಕ್ತಿ, ನೆಣವಿರ್ದಾಗಲೆ ಸೇವೆ (ಪು. ೩೪)

—ಹಿಂದಣ ಪುಣ್ಯವನು ಇಂದುಂಡುಡಬೇಕು (ಪು. ೩೪)

—ನರ ಪಾಪಪುಣ್ಯವನು (ನರರ) ಸೆರಗಿಲಿ ಹಾಕುವಾ (ಪು. ೩೪)

—ಅರಸಿಗರಸಿನುದ್ದ ದುಃಖ, ಕೊರಸಾಳಿಗಾಳುದ್ದ ದುಃಖ,
ಅರಸೆಯಾಳು, ಆಳು ಅರಸು ಪುಣ್ಯಪಾಪದಿ (ಪು. ೫೨)

—ಕರಿಗೆ ಹೆದರದ ಪುರುಷ ಕುರಿಗೆ ಹೆದರುವದುಂಟೇ ? (ಪು. ೯೧)

—ಹಿಂದೆ ಮಾಡಿದ ಪಾಪಸಾಲದವರು ಬಂದು
ಇಂದು ಮಾಡಿದ ಪುಣ್ಯಬಡ್ಡಿ ಕೊಂಬುವರು (ಪು. ೩೪)

—ನಮ್ಮ ಸುಖ, ಮೂಕ ಸಕ್ಕರೆ ಮೆದ್ದ ಪರಿಯಂತೆ (ಪು. ೧೩೫)

—ಊರಿಗೊಂದೂಡಕಗೆ ಒಂದು ನ್ಯಾಯ (ಪು. ೧೩೬)

—ಸೋರು ಸುಂಬಳ ಮಗುವು ತಂದೆ–ತಾಯಿಗೆ ಹಿತವು (ಪು. ೧೩೬)

—ಗುರುವು ಗುರುಪುತ್ರೆಂಬ ಬೀಜವೃಕ್ಷನ್ಯಾಯ ಖರೇವು (ಪು. ೧೪೧)

ಬಾಲಲೀಲಾ ಮಹಂತ ಶಿವಯೋಗಿಗಳು ವಿಜಾಪುರ ಜಿಲ್ಹೆಯವರು. ವಿಜಾಪುರ ಜಿಲ್ಹೆ ತನ್ನದೇ ಆದ ಒಂದು ಭಾಷಾ ವೈಚಿತ್ರ್ಯವನ್ನು ಪಡೆದಿದೆ. 'ದಾರು' (ಯಾರು), 'ದಾವ' (ಯಾವ), 'ದಾವುದು' (ಯಾವುದು), 'ಹಾನ' (ಇದ್ದಾನೆ), 'ಹಾರ' (ಇದ್ದಾರೆ), 'ಹಾಳ' (ಇದ್ದಾಳೆ) ಇತ್ಯಾದಿ ಇಂದಿಗೂ ಅಲ್ಲಿ ನೋಡಸಿಗುತ್ತವೆ. ಡಾ. ಗ್ರೀರ್ಸನ್ ಅವರು ಅಪ್ಪಗೋಳು, ಅಣ್ಣಗೋಳು ಮೊದಲಾದ ಪ್ರಯೋಗಗಳನ್ನೂ ಗಮನಿಸಿದರು. ಅವರ ಮೇರೆಗೆ ಮೈಸೂರು ಕನ್ನಡ, ಧಾರವಾಡ ಕನ್ನಡ ಇದ್ದ ಹಾಗೆ ವಿಜಾಪುರೀ ಕನ್ನಡ ಎಂಬ ಕನ್ನಡದ ಪ್ರಭೇದವೇ ಇದೆಯೆಂದು ಹೇಳುತ್ತಾರೆ.[೧] ಇದೂ ಅಲ್ಲದೆ, ಧಾರವಾಡ ಜಿಲ್ಹೆಯಲ್ಲಿ ಸಿಕ್ಕದ ಅನೇಕ ಅನ್ಯ ದೇಶೀಯಗಳೂ ವಿಜಾಪುರ ಭಾಷೆಯಲ್ಲಿ ಇಂದಿಗೂ ಸಿಗುತ್ತವೆ. ಇವು ಹೆಚ್ಚಾಗಿ ಮರಾಠಿ ಇಲ್ಲವೆ ಉರ್ದು ಭಾಷೆಯಿಂದ ಬಂದುವು. ಇಂಥ ಅನೇಕ ಪ್ರಯೋಗಗಳನ್ನು ಶಿವಯೋಗಿಗಳ ಬರವಣಿಗೆಯಲ್ಲಿ ನೋಡುತ್ತೇವೆ :

ಗಲೀಪು– ಇದು ಉರ್ದು ಗಲೀಫ್ ಶಬ್ದದಿಂದ ಬಂದುದು. ಗಳೀಪು, ಗಲೇಪು ಎಂದು ಹೇಳುವದುಂಟು.

ಗುಡಿಯ ಲಿಂಗಕ್ಕೆ ಕಣಿಬಿಟ್ಟು ಗಲೀಪಗಳು
ಬಿಡದೆ ಪೂಮಾಲೆಗಳ ಸಿಂಗರಿಸುವಂತೆ (ಪು. ೬೪)

ಮರ್‍ಯೋ ಒಲ್ಲೆ– ಇದೂ ವಿಜಾಪುರ ಜಿಲ್ಹೆಯ ವಿಶಿಷ್ಟ ಪ್ರಯೋಗ.

---

೧ ಕನ್ನಡ ಭಾಷಾಶಾಸ್ತ್ರ– ರಾ. ಯ. ಧಾರವಾಡಕರ– ೧೯೫೦.

ಪೊಡವಿ ದುಷ್ಟರಸುಗಳು ಸುಮ್ಮನೆ ಸ್ತುತಿನಿಂದೆ
ಕೆಡಕ ಭಾವಿಸುತಿಹರು ಶರಣರಿಗೆ ಸುಖವಿಲ್ಲ
ಒಡೆಯ ಮರ್ತ್ಯೋಬಲ್ಲೆಂದು ಶಿವಗೆ ಬಿನ್ನೈಸಲ್ಕೆ
ಪರಮೇಶನಿಂತೆಂದನು (ಪು. ೧೦೨)

ಕುಂತು– ಚಿಂತಿತಾರ್ಥವ ಕೊಡುವ
ಶಾಂತ ಶ್ರೀಮುರುಘೇಶ್ವರ ಮಹಂತ ಶಿಶುವಿನ ಚಿ
ದಂತರಂಗದೊಳು ತಾ
ಕುಂತು ಸ್ತೋತ್ರವನು ಶರಣು ಕೈಕೊಳ್ಳುವ ॥ (ಪು ೧೨೪)

ತಾಂಬ್ರ– ಕಂಚು ಹಿತ್ತಾಳಿಯ ತಾಂಬ್ರ ಸಮಯಾಗ್ರದಲ್ಲಿ ಸಂಚರಿಪ ದೀಪೊಂದೆ (ಪು. ೧೨೮)

ದೊಡ್ಡಿಸ್ತಾನ–
ನಿಮ್ಮ ಭಕ್ತಿಭಾವದಿಂ ನಮ್ಮ ದೊಡ್ಡಿಸ್ತಾನ ಮನ್ನಿಸುವರಾರು ? (ಪು. ೧೩೫)

ಹೀಂಗೈತಿ–
ನಮ್ಮ ಬೇರು ಬೂನಾದಿ ಹೀಂಗೈತಿ ನೋಡೆಲೆ ರಾಜ (ಪು. ೧೩೬)

ಕುಸಿ (ಖುಶಿ)–
ಇದು ಧರ್ಮಗುಡಿ ಕಳಶವಿಟ್ಟಂತೆಮಗೆ ಬಹು ಕುಸಿಯು ಬಹುಮಾನವು (ಪು. ೧೩೬)

ಗೀಬು– ಮೂರುವರೆ ಮೊಳ ಗೀಬು ನಾವಿರುವ ಸ್ಥಳ ನೋಡಿ (ಪು. ೧೩೭)

ಸುಸರಿ– (ಬೆಲೆಯುಳ್ಳ)
ತರಬೇಡೆಂದರೆ ತಂದಿರೂರರೂರ್ಗೆ ಮೆರೆಸಿದಿರಿ
ತಿರಿಗೊಯಿರಿ ಚೆಂದಲ್ಲ ದೊಡ್ಡಸ್ಥಲ ಸುಸರಿಗಳು (ಪು. ೧೩೮)

ಖರೆ– (ನಿಜ) ಗುರುವು ಗುರುಪುತ್ರೆಂಬ ಬೀಜವೃಕ್ಷನ್ಯಾಯ ಖರೆವು (ಪು. ೧೪೧)

ಗೈರು ಕೆಲಸ–
ಗೈರುಕೆಲಸವನ್ನು ಒಳಹೊಕ್ಕು ಮಾಡಿಸಿದ ಶಿವ (ಪು. ೧೪೨)

ಮುಡಿಚಟ್ಟು–
ತಡೆಯದು ಶಿವಶಿವ ಲಜ್ಜಾಭಿಮಾನವು ಮುಡಿಚಟ್ಟಾಗುವುದು (ಪು. ೧೭೦)

ತಶಿರೀಪು (ತಸ್ರೀಫ್)–
ಆಶೀರ್ವಾದ ತಶಿರೀಪು ಕಳುಹಿ ಕೂಸಿನ ಕೈಯಿಂದ (ಪು. ೧೨೨)

ಚುಲ್ಲಿ– (ಮರಾಠಿ : ಚುಲಿ– ಒಲೆ)
ಧರೆಯೊಳಗೆ ಸುಖವಿಲ್ಲ ಪರಮ ಶಿವಯೋಗಿಗೆ
ಶರೀರವೆಂಬ ಚುಲ್ಲಿ ಬಿಡದೆ ಸುಡುತಿಹುದು (ಪು ೪೨)

ಹಬಸ್ಕಾರು–
ವಿಜಾಪುರ ಜಿಲ್ಹೆಯಲ್ಲಿ ಇದೊಂದು ವಿಶಿಷ್ಟವೂ ಐತಿಹಾಸಿಕವೂ ಆದ ಪದ. ದಪ್ಪನಾಗಿ, ಕಪ್ಪಾಗಿ, ಗಟ್ಟಿಮುಟ್ಟಾಗಿ, ಸ್ವಲ್ಪ ಒಕರಾಳ ವಿಕರಾಳವಾಗಿದ್ದ ವ್ಯಕ್ತಿಗೆ ವಿಜಾಪುರ ಜಿಲ್ಹೆಯಲ್ಲಿ ' ಏನು ಹಬಶ್ಯಾ ಆಗ್ಯಾನ ' ಎಂದು ಹೇಳುವದುಂಟು. ಈ ಪ್ರಯೋಗ ಇತರ ಜಿಲ್ಹೆಗಳಲ್ಲಿ ಅಷ್ಟಾಗಿ ಕಂಡುಬರಲಿಲ್ಲ. ' ಹಬಶ್ಯಾ ' ಪದ ' ಅಬಿಸೀನಿಯನ್ ' ಎಂಬುದ

ರಿಂದ ಬಂದಿತೆಂದು ಹೇಳುತ್ತಾರೆ. ವಿಜಾಪುರ ಆದಿಲ್ ಶಾಹಿಗಳ ಕಾಲಕ್ಕೆ ಈ ಅಬಿಸೀನಿಯದ ಜನ ಕುದುರೆ ಮಾರಾಟಗಾರರಾಗಿಯೂ, ಸೈನ್ಯದಲ್ಲಿ ಸೈನಿಕರಾಗಿಯೂ ಇದ್ದದ್ದು ಅನೇಕ ಸಲ ಉಲ್ಲಿಖಿತವಾಗಿದೆ. ಅಂದಿನಿಂದ ಈ ಗಟ್ಟಿಮುಟ್ಟಾಗಿ ಸ್ವಲ್ಪ ವಿಕಾರವಾದ ವ್ಯಕ್ತಿಗೆ 'ಹಬಶ್ಯಾ' ಎಂದು ಹೇಳುವದುಂಟು. ಶಿವಯೋಗಿಗಳಲ್ಲಿ ಅದು ಅಂಗರಕ್ಷಕರು ಎಂಬರ್ಥದಲ್ಲಿ ಬರುತ್ತಿದೆ. ಇಲ್ಲಿಯ ವಿವರಣೆಯೆಲ್ಲ ಯುದ್ಧದ ಪರಿಭಾಷೆಯನ್ನೇ ಆಧರಿಸಿದ್ದಾಗಿದೆ.

ಬ್ರಹ್ಮಾನಂದ ಕವಚ ಧರಿಸಿ, ಬ್ರಹ್ಮಾನಂದ ರಥವನೇರಿ
ಬ್ರಹ್ಮಾನಂದ ಬಿಲ್ಲು ಬಾಣ ಖಡ್ಗ ತೋಪಿನಲಿ
ಬ್ರಹ್ಮಾನಂದ ಹಬ್ಸ್ಯಾರಿಂದೆ ಬ್ರಹ್ಮಘೋಷ ಮಾಡಿಕೊಳುತೆ
ಬ್ರಹ್ಮವಾಗಿ ಚರಿಪ ಯೋಗಿ, ಶೂರ ಧೀರನು

(ಪು. ೫೯)

ಹೀಗಾಗಿ, ಬಾಲಲೀಲಾ ಮಹಂತ ಶಿವಯೋಗಿಗಳು ಸ್ವತಃ ಅನುಭಾವಿಗಳಾಗಿದ್ದರೂ, ಸತ್ವಪೂರ್ಣವಾದ ಸಾಹಿತ್ಯನಿರ್ಮಿತಿಯನ್ನು ಮಾಡಿ, ಕನ್ನಡ ಸಾರಸ್ವತ ಪ್ರಪಂಚಕ್ಕೂ, ಆಧ್ಯಾತ್ಮಿಕ ಪ್ರಪಂಚಕ್ಕೂ ಅಮೌಲ್ಯವಾದ ಸೇವೆಯನ್ನು ಸಲ್ಲಿಸಿದ್ದಾರೆ.

—

ಭವತಾರಕ

(ಸು. ೧೮೩೨)

ಇವರ ಹೆಸರು ನರಸಪ್ಪ ಕುಲಕರ್ಣಿ. ಇವರು 'ಭವತಾರಕ' ಎಂಬ ಅಂಕಿತದಲ್ಲಿ ಅನೇಕ ಕವನಗಳನ್ನು ರಚಿಸಿದ್ದಾರೆ. ಇವರು ವೃತ್ತಿಯಿಂದ ಕರಣಿಕರು. ಇವರ ಊರು ಕವಿಚಕ್ರವರ್ತಿ ಕುಮಾರ ವ್ಯಾಸನ ಹುಟ್ಟೂರಾದ ಕೋಳಿವಾಡದಿಂದ ಕೇವಲ ಮೂರು ಫರ್ಲಾಂಗು ಮಾತ್ರ ದೂರವಿರುವ ಮಲ್ಲಿಗವಾಡ. ಇವರ ಧರ್ಮಪತ್ನಿ, ಅಕ್ಕಿಗುಂದದ ಗೌಡರ ಮನೆತನದವರು. ಇವರು ತುಂಬಾ ಶ್ರೇಷ್ಠರಾದ ಅನುಭಾವಿಗಳು. ಇವರ ಆತ್ಮೀಯ ಶಿಷ್ಯ ಕಲಿವಾಳದ ನಿಂಗಪ್ಪ ಎಂಬ ಒಕ್ಕಲಿಗ. ಇವರ ಸಮಕಾಲೀನ ಅನುಭಾವಿ ಅದೇ ಮೂರು ಫರ್ಲಾಂಗು ದೂರದಲ್ಲಿದ್ದ ಕೋಳಿವಾಡದ ವಾಲಿಕಾರ ಹುಲಗಪ್ಪ. ಈ ಮೂವರೂ ಕೂಡಿಯೇ ಇರುವವರು. ನರಸಪ್ಪನವರಿಂದ ಈಚೆಗಿನ ೪–೫ ತಲೆಮಾರಿನವರು ಇನ್ನೂ ಮಲ್ಲಿಗವಾಡ, ಹುಬ್ಬಳ್ಳಿ, ಯಮನೂರು ಮುಂತಾದ ಊರು ಗಳಲ್ಲಿದ್ದಾರೆ.

ನರಸಪ್ಪನವರ ಬಗೆಗೆ ಹಲವಾರು ಆಖ್ಯಾಯಿಕೆಗಳು ಕೇಳಿ ಬರುತ್ತವೆ. ಅವುಗಳಲ್ಲಿ ಈ ಕೆಳಗಿನ ಒಂದೆರಡನ್ನು ಹೇಳಬಹುದು :

ಕಲಿವಾಳದ ನಿಂಗಪ್ಪ ನರಸಪ್ಪನವರ ಶಿಷ್ಯನಾಗಿದ್ದನಷ್ಟೇ. ಈ ನಿಂಗಪ್ಪನಿಗೆ ಒಬ್ಬಳೇ ಮಗಳಿದ್ದಳು. ಅವಳನ್ನು ಚಿಕ್ಕ ವಯಸ್ಸಿನಲ್ಲಿಯೇ ಹತ್ತಿರದ ಕುರ್ತಕೋಟಿಯಲ್ಲಿ ಒಬ್ಬರಿಗೆ ಮದುವೆ ಮಾಡಿಕೊಡಲಾಗಿತ್ತು. ಈ ಮನುಷ್ಯ ಬಹಳ ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡ. ಹೀಗಾಗಿ, ಮಗಳ ಹೊಲ ಮನೆಗಳನ್ನೂ, ದನ ಕರುಗಳನ್ನೂ ನಿಂಗಪ್ಪನೇ ಕೆಲವು ದಿವಸ ನೋಡಿಕೊಳ್ಳಬೇಕಾ ಯಿತು. ಆಗ ತಾನು ಕುರ್ತಕೋಟಿಗೆ ಹೋಗಬೇಕಾದ ಸಂದರ್ಭವನ್ನು ನರಸಪ್ಪನವರೆದುರು ಹೇಳಿ ದಾಗ, ಮಗಳ ಸಂಸಾರವಾದರೂ, ಪುನಃ ಸಂಸಾರವ್ಯಾಮೋಹದಲ್ಲಿ ತೊಡಗಬಾರದೆಂದು ನರಸಪ್ಪ ನವರು ಹೇಳಿದರಂತೆ. ತಾವು ಎರಡು ವರ್ಷಗಳಲ್ಲಿ ತಿರುಗಿ ಮಲ್ಲಿಗವಾಡಕ್ಕೆ ಬರುವದಾಗಿ ಹೇಳಿದ ನಿಂಗಪ್ಪ ಅಲ್ಲಿಯ ಅಡಚಣೆಗಳ ಮೂಲಕ ತಿರುಗಿ ಮಲ್ಲಿಗವಾಡಕ್ಕೆ ಬರಲಾಗಲಿಲ್ಲ. ಆಗ, ಸ್ವತಃ ನರಸಪ್ಪನವರೇ ಕುರ್ತಕೋಟಿಗೆ ಹೋಗಿ "ಇದು ಏನೋ ನಿನ್ನ ಗುಡಿಗುಡೀ" ಎನ್ನುವ ಪದ್ಯವನ್ನೂ, "ಇದು ಏನೋ ನಿನ್ನ ಕುಲಾಕುಲಾ" ಎನ್ನುವ ಪದ್ಯವನ್ನೂ ಹೇಳಿ ನಿಂಗಪ್ಪನನ್ನು ಎಚ್ಚರಿಸಲು ಪ್ರಯತ್ನಿಸಿದರಂತೆ. ಆದರೆ, ನಿಂಗಪ್ಪನಿಗೆ ಅದರ ಅರ್ಥವೇ ಆಗಲಿಲ್ಲ. ಆಗ, ಕೊನೆಗೆ ಹೆಚ್ಚು ಸ್ಪಷ್ಟ ವಾದ ವಾಣಿಯಲ್ಲಿ ಈ ಕೆಳಗಿನ ಪದ್ಯ ಹೇಳಿದರಂತೆ :

ಕಲಿಯುಗದೊಳು ಕಂಡೆನು ನಿನ್ನೊಬ್ಬನ
ಕಲಿವಾಳದ ನಿಂಗಪ್ಪ

ಕಲಿತ ಬುದ್ಧಿಯು ಕಡೆಯಲಿ ನಿನ್ನ
ಕೆಲಸಕೆ ಏನೂ ಬಾರದಪ್ಪ ॥

ಎತ್ತು ಎಮ್ಮಿ ಆಕಳ ಹೋರಿ ಜತನ ಮಾಡೀದೆಪ್ಪ
ಮೃತ್ಯುದೇವತೆಗೆ ತುತ್ತು ಇದರೊಳು
ಮುಕ್ತಿ ನಿನಗಿಲ್ಲಪ್ಪ ॥

–ಇದನ್ನು ಕೇಳಿದ ನಿಂಗಪ್ಪ ತನ್ನ ಪೂರ್ವವಚನದ ಜ್ಞಾಪಕವಾಗಿ ಪುನಃ ಬಂದು ನರಸಪ್ಪನವರನ್ನು ಸೇರಿಕೊಂಡನಂತೆ.

ನರಸಪ್ಪನವರು ಹಲವಾರು ಪವಾಡಗಳನ್ನು ಮಾಡಿದುದಾಗಿಯೂ ಹೇಳುತ್ತಾರೆ. ಇವರ ತಮ್ಮನ ಮಗ ಕುಲಕರ್ಣಿ ದಫ್ತರವನ್ನು ಸರಿಯಾಗಿ ಇಡದಾಗ ಮೇಲಿನ ಅಧಿಕಾರಿಗಳು ಅವನ ಮೇಲೆ ಸಿಟ್ಟಾದರಂತೆ. ಆಗ ಅವನು ತಮ್ಮ ದೊಡ್ಡಪ್ಪನವರಾದ ನರಸಪ್ಪನವರನ್ನು ನೆನೆದಾಗ, ಅವರು "ನಿನಗೇನೂ ತೊಂದರೆಯಿಲ್ಲ; ದಫ್ತರಗಳೆಲ್ಲ ಸರಿಯಾಗಿ ಇವೆ" ಎಂದು ಹೇಳಿದರಂತೆ. ತಿರುಗಿ ನೋಡಿದಾಗ, ದಫ್ತರಗಳೆಲ್ಲ ಸರಿಯಾಗಿಯೇ ಇದ್ದುವು.

ಇನ್ನೊಂದು ಸಲ ನರಸಪ್ಪನವರ ಅಣ್ಣತಮ್ಮಂದಿರು ಆಸ್ತಿಯ ಪಾಲಿಗಾಗಿ ಇವರನ್ನು ಕೇಳಿದರಂತೆ. ತತ್‌ಕ್ಷಣವೇ ನರಸಪ್ಪನವರು ಅವರಿಗೆಲ್ಲ ಪಾಲನ್ನು ಹಂಚಿ ನಿರಂಬಳವಾಗಿ ಹೊರಗೆ ಬಂದು ತಮ್ಮ ಮನೆಯ ಕಟ್ಟೆಯ ಮೇಲೆ ಕುಳಿತು ಈ ಪದವನ್ನು ಹಾಡಹತ್ತಿದರಂತೆ :

ಪಾಲು ಪಾಲು ಇದು ಯಾತರ ಪಾಲು
ಪಾಲು ಹಂಚ್ಯಾನೊ ಶಿವ ಮೊದಲೆ ॥ ಪ ॥
ದೇಹ ನೋಡಲು ಮೃತ್ತಿಕೆ ಪಾಲು
ಜೀವ ನೋಡಲು ವಾಯುವಿನ ಪಾಲು ॥
ಪುಣ್ಯ ನೋಡೆಲೊ ಸುಖದ ಪಾಲು
ಪಾಪ ನೋಡೆಲೊ ದುಃಖದ ಪಾಲು ॥
ಭಕ್ತಿ ನೋಡೆಲೊ ಮುಕ್ತಿಯ ಪಾಲು ॥
ಭಕ್ತ ಭವತಾರಕನ ಪಾಲು ॥ [೧]

ಭವತಾರಕರು ರಚಿಸಿದ ೬೯ ಪದ್ಯಗಳು ಈಗ ಪ್ರಕಟವಾಗಿವೆ. ಅವರು ಬರೆದ ಇನ್ನೂ ಅನೇಕ ಪದ್ಯಗಳು ದೊರಕಬಹುದಾಗಿವೆ.

ಸಾಧಕ ಸಾಧನೆಯ ಹುಚ್ಚು ಹಿಡಿಯುವ ಮೊದಲು ಸುಖವಾಗಿ ಎಲ್ಲರ ಹಾಗೆಯೇ ಈ ಲೋಕದಲ್ಲಿರುತ್ತಾನೆ. ಆದರೆ, ಒಮ್ಮೆ ಈ ಆಧ್ಯಾತ್ಮದ ಹುಚ್ಚು ತಾಗಿತೆಂದರೆ ಪರಿತಾಪಕ್ಕೊಳಗಾಗುತ್ತಾನೆ. ಕವಿ ಮಧುರಚೆನ್ನರು ಹೇಳಿದ ಹಾಗೆ :

ಹರೆಯ ಬಾರದ ಮುನ್ನ ಹಾಗು ಹೀಗೂ ಇದ್ದೆ
ಕರುಳು ಹಸಿಯದ ಮುನ್ನ ಕೆರಳದಿದ್ದೆ
ಕರುಣವಿಲ್ಲದ ಬೆಂಕಿ ಕರುಳು ಕೆದರಿತು ಮುಂದೆ
ಮಂಜುಳಿದು ಮಳೆ ನೀರಿಗಾಶೆಗೈದೆ ॥ [೨]

---

೧ ಭವತಾರಕ ಗೀತೆಗಳು : ಪ್ರಕಾಶಕ–ಕೆ. ಜಿ. ತಾಪಸ ೧೯೫೭– ಪು. ೨೨.
೨ ನನ್ನ ನಲ್ಲ : ೧೯೩೩– ಪು. ೩.

ಹಾಗೆಯೇ ಭವತಾರಕರೂ ಅನುಭಾವಪೂರ್ಣವಾಗಿ ಹೀಗೆ ಹೇಳಿದ್ದಾರೆ :

ಗಂಡ ಎನಗೆ ಹಾದರ ಮಾಡೆಂದು ಹೇಳಿದನು
ಭೂಮಂಡಲದೊಳಗೆಂಥ ಪುಣ್ಯಪುರುಷನವ್ವಾ ॥ ಪ ॥

ಹತ್ತು ಮಂದಿಯೊಳಗ ನಾನು–ಗೊತ್ತಿಲಿದ್ದೆನೇ
ಮತ್ತೆ ಎನ್ನ ಕರೆದು ಒಯ್ದು–ಬ್ಯಾರೆ ಇಟ್ಟನೇ
ಅತ್ತ ಇತ್ತ ನೋಡಬೇಡ–ಇನ್ನು ಎಂದನೇ
ಕತ್ತಲೀಯ ತೆಗೆದು ಸುತ್ತ–ಬೆಳಕ ತಂದನೇ ॥ ೧ ॥

ಆರು ಮನಿಯ ಮೇಲಕಿನ್ನು–ಏರು ಅಂದನೇ
ಆರು ಮಂದಿ ನಾದನೇರ–ಮೂಗ ಕೊಯ್ದನೇ
ಮೂರು ಕೋಣಿಯೊಳಗೊಬ್ಬನ–ತೂರಿಕೊಟ್ಟನೇ
ಆರ ಅಂಜಿಕೇನವನೊಳು ಸೇರು ಅಂದನೇ ॥ ೨ ॥

ತಂದೆ ಭವತಾರಕನು ತಾನು–ಅಂದು ಬಂದನೇ
ಒಂದು ಮಾತಿನಿಂದ ಜೀವವನ್ನು ಕೊಂದನೇ
ಹಿಂದೆ ಹತ್ತಿ ಬಾರದಂತೆ ಮುಂದೆ ನಿಂತನೇ
ಕುಂದುಕೊರತೆಯೆಲ್ಲ ತೆಗೆದು ಆನಂದವಿಟ್ಟನೇ ॥ ೩ ॥

ಭವತಾರಕರ ಪದ್ಯಗಳಲ್ಲಿ ಅಲ್ಲಲ್ಲಿ ಸಮಾಜ ವಿಮರ್ಶೆಯೂ ಇದೆ. ಭೌತಿಕವನ್ನೇ ನಂಬಿದ ಶಠನ ಬಗೆಗೆ ಅವರು ಹೀಗೆ ಹೇಳುತ್ತಾರೆ :

ಹೆಡಗುಡಿ ಕಟ್ಟಿ ಹೊಡಿಯಿರಿ ಇವನಾ
ಬಡತನ ಸಂತರಿಗ್ಹೇಳುವನಾ ॥ ಪ ॥

ಸಡಗರದಲಿ ಸಂಸಾರವ ಮಾಡುತ
ಬಿಡದಾಶೆಯಲೀ ಮರುಗುವನಾ ॥ ಅ ಪ ॥

ಅನ್ನವ ಬೇಡುವ ಅತಿಥಿಯು ಬಂದರೆ
ನಿನ್ನೆ ನಾ ಉಪವಾಸೆಂಬುವನಾ
ಅನ್ಯಾಯದಲಿ ಪಾಪವ ಗಳಿಸಿ
ನಾಯ ಕುನ್ನಿಯಂತೆ ಎಲ್ಲರ ಬೊಗಳುವನಾ ॥ ೧ ॥

ವಸ್ತ್ರವ ಕೊಡು ಎಂಬವರಿಗೆ ಹರಕೊಂದೊ
ಸ್ತ್ರವ ತೆರೆದು ತೋರುವನಾ
ವೇಶ್ಯಾಸ್ತ್ರೀಯರ ಕಂಡರೆ ಕರೆದು
ಉತ್ತಮ ವಸ್ತ್ರವನೀಯುವನಾ ॥ ೨ ॥

ಈ ದೇಹ ಅಶಾಶ್ವತ. ಇದನ್ನೇ ನಂಬಿ ಸುಖ ಪಡುವುದೆಂದರೆ, ತನ್ನ ನಾಲಗೆಯ ಲೋಳೆಯ ಸುಖಕ್ಕೆ ನಾಯಿ ಕೆರವ ಮೆಲಿದಂತೆ. ಇಹ ನಂಬಿ ಪರತ್ರವನ್ನು ಮರೆತವನ ಕರೆದು ವೊಚ್ಚೆಯಲಿ ಹೊಡೆಯಬೇಕು :

ಮೊಚ್ಚೆ ಮೊಚ್ಚೆಯುಲಿ ಹೊಡೆಯಿರಿ ಇವನಾ
ನೆಚ್ಚಿದೆ ತನುವಿದನೆಂಬುವನಾ
ಹುಚ್ಚನಾಯಿಯೋಲ್ ಎಚ್ಚರವಿಲ್ಲದೆ
ಅರ್ಚಕ ಜನರನು ಬೊಗಳುವನಾ ॥ ಪ ॥

ದಾನ ಧರ್ಮ ಪರ ಉಪಕಾರಿಲ್ಲದ
ಮಾನುಷನಾಗಿ ಬಾಳುವನಾ
ತಾ ಅಜ್ಞಾನ ಮಾರ್ಗದಿ ನಡೆದು
ಜ್ಞಾನವ ಪರರಿಗೆ ಹೇಳುವನಾ ॥ ೧ ॥

ಸತಿಸುತರತಿಶಯ ಹಿತವರು ಎನುತಲಿ
ಸತತವು ಅವರೊಳು ಮರುಗುವನಾ
ಮಿತಿಯಿಲ್ಲದೆ ಧನಧಾನ್ಯವ ಬೇಡುತ
ಕ್ಷಿತಿಯ ಮೇಲೆ ತಿರುಗುವನಾ ॥ ೨ ॥

ಕರುಣೆಯ ಪಡೆಯದೆ ಭವತಾರಕನ
ನರತನುಗಳ ಸ್ತುತಿಸುವನಾ
ಪರಿಪರಿ ಸಂಸಾರದ ವಿಷಯದಲಿ
ನಿರುತದಿ ಮನವನು ಮಥಿಸುವನಾ ॥ ೩ ॥

"ಕಣ್ಣು ನಾಲಗೆ ಮನವು ತನ್ನದೆಂದೆನಬೇಡ– ಅನ್ಯರು ಕೊಂದರೆನಬೇಡ– ಇವು ಮೂರು ತನ್ನ ಕೊಲ್ಲುವವು" ಎಂದು ಸರ್ವಜ್ಞ ಹೇಳಿದ. ಮನವೆಂಬ ಮರ್ಕಟ ಆಡದಿದ್ದ ಆಟವಿಲ್ಲ. ಅದು ಟಿಂವಕ ಟಿಂಬಕನನಾಡಿಸುತ್ತದೆ. ಮಂಗನ ಹಾಗೆ ಹಲ್ಲು ಕಿರಿದು, ಹುಬ್ಬು ಏರಿಸಿ, ಕೊಂಬೆಯಿಂದ ಕೊಂಬೆಗೆ ಹಾರುತ್ತದೆ. ಸಾಧಕ ಜೀವನದಲ್ಲಿ ಈ ಮನಸ್ಸು ಸ್ವಮಿತಕ್ಕೆ ಬರಬೇಕು. ಬೌದ್ಧ ತತ್ವ ಪರಂಪರೆಯಲ್ಲಿ ಹೇಳಿದ ಹಾಗೆ ಈ ಚಲಿಸುವ ಜ್ಯೋತಿ ರತ್ನಶಿಖೆಯಾಗಬೇಕು. "ಅತ್ತ ದೀಪಾ ವಿಹರಥ". ಆತ್ಮದೀಪವು ಪ್ರಜ್ವಲಿಸಬೇಕು. ಈ ಮನಸ್ಸು ಸಾಯಬೇಕು. ಭವತಾರಕರು ಹೇಳುವ ಹಾಗೆ–

ಸಾಯುವಲ್ಲದೊ ಮನಸು
ಕಾಯದೊಳಗೆ ಕುಳಿತುಕೊಂಡು
ಬಾಯಬಿಡಿಸುತಿಹುದು ಜನಕೆ ॥ ಪ ॥

ಕಾಲಿಲ್ಲದೆ ಅಡರುತಿಹುದು– ನಾಲಿಗಿಲ್ಲದೆ ನುಡಿಯುತಿಹುದು
ಕಣ್ಣಿಲ್ಲದೆ ನೋಡುತಿಹುದು– ಕರ್ಣವಿಲ್ಲದೆ ಕೇಳುತಿಹುದು ॥ ೧ ॥

ಎತ್ತ ಹೋದರೆನ್ನ ಬೆನ್ನ– ಹತ್ತಿ ಬಂದು ಕಾಡುತಿಹುದು
ಕಿತ್ತು ಇದರ ಬೇರನೆನಗೆ– ಮತ್ತೆ ತೋರಿಸುವವರ ಕಾಣೆ ॥ ೨ ॥

ತಂದೆ ಭವತಾರಕನ– ಭಜಕರಿದನು ಕೊಂದರಂತೆ
ಇಂದು ಶರಣು ಹೊಕ್ಕು ಅವರ– ಹಿಂದೆ ಕಳೆಯಬೇಕಿದನಾ ॥ ೩ ॥ [೧]

೧ ಅದೇ ಪು. ೨೧.

ವಿಷಯ ಸುಖ ಇನ್ನೂ ವಿಷವಾಗಲಿಲ್ಲ; ನಿರ್ವಿಷಯ ಬೋಧಾನಂದ ದೊರೆಯಲೆ ಇಲ್ಲ. ತನುವ ಧರಿಸಿ ಬಂದು ತನುವ ಕಳೆಯಲಿಲ್ಲ. ಮನದಿ ವಿಚಾರಿಸಿ ಮನವಳಿಯಲೆ ಇಲ್ಲ. ಪಾಪ ಪುಣ್ಯಗಳ ಕಲಾಪ ಹೋಗಲೆ ಇಲ್ಲ; ವ್ಯಾಪಕ ತಾನೆಂದು ತಿಳಿಯಲಿಲ್ಲ– ಎಂದು ಭವತಾರಕರು ಪರಿತಪಿಸಿದ್ದಾರೆ. ಅವರ ಸುಬೋಧೆಗಾಗಿ ಕಳವಳಿಸಿದ್ದಾರೆ :

ಮಾಡುವದೆಲ್ಲ ವಿವಾದಕೆ ಕಾರಣ
ಸಾಧಿಸುವದೆ ಬ್ರಹ್ಮ ॥ ಪ ॥
ಸಾಧು ಜನರ ಸುಸಮಾಧಿಯ ಬೋಧವು
ಬಾಜಾರವೇನೋ ತಮ್ಮಾ ॥

ಈ ಗುರುಗಳೆಲ್ಲ ಹೊಳೆಯ ದಾಟಿ ಹೋದವರು

ಗುರುಭಜಕರಿಗೆ ದುರಿತ ಬರುವದುಂಟೆ
ಸುರತರುವಿನಲಿ ದಾರಿದ್ರ್ಯವುಂಟೆ ॥ ಪ ॥
ನಾಗನೇರಿದವಗೆ ಅಂಜಿಕೆಯುಂಟೆ
ಯೋಗ ಪುರುಷಗೆ ಪೂರ್ವಕರ್ಮ ಉಂಟೆ
ಆಗಮದಿ ನಡೆವವಗೆ ಅನ್ಯಮಾರ್ಗವುಂಟೆ
ರೋಗವಿಲ್ಲದವನಿಗೆ ಪಥ್ಯವುಂಟೆ ॥ ೧ ॥
ವೇದಾಂತ ತಿಳಿದವಗೆ ಭೇದ ಬುದ್ಧಿಗಳುಂಟೆ
ಸಾಧುಸಂಗದಲಿ ದುರ್ವಾದವುಂಟೆ
ಬೋಧ ನೆಲೆಗೊಂಡವಗೆ ಕ್ರೋಧ ಜನಿಸುವದುಂಟೆ
ನಾದಬಿಂದು ಕಳಾತೀತಗೆಣೆಯುಂಟೆ ॥ ೨ ॥ [೧]

ಗುರು ಕರ್ಮಗಳನ್ನು ಕಾಲಿನಿಂದ ಒದ್ದವ. ಕತ್ತಲೆಯ ದಾಟಿದವ.

ಕಾಲಕರ್ಮವ ಕಾಲಲೊದೆದವ
ಕತ್ತಲಿಗಂಜುವನೇ
ಆಲಿಯ ಮೇಲಕೆ ನಿಲಿಸಿದ ಪುರುಷನು
ಬಾಲೆರ ಬಯಸುವನೇ ॥ ಪ ॥

ಕಾಮನ ಹಬ್ಬದ ಬಗ್ಗೆ ಕವಿ ವಿನಾಯಕರು ಹೀಗೆ ಹೇಳುತ್ತಾರೆ : '' ಕೇರಿ ಕೇರಿಗೆ ಸುಟ್ಟು ಮಸಗಿತಿಂದು ಜನ– ಕಾಮನನು ಸುಟ್ಟೆವೆಂದು– ಕಾಮನವರನು ಬಿಟ್ಟನೇನು ''. ಚಿವುಟಿದ ಬ್ರಹ್ಮಕಪಾಲ ಕೈಗೇ ಅಂಟಿಕೊಂಡ ಹಾಗೆ, ಸುಟ್ಟ ಕಾಮ ಬೂದಿಯಾಗಿಯಾದರೂ ನಮ್ಮ ಅಂತರಂಗವನ್ನು ಪ್ರವೇಶಿಸುವವನೇ. ಕಾಮಕ್ಕೆ ಹತ್ತು ಮುಖ. ಅದು ಮೋಹವಾಗಿ, ಮಮತೆಯಾಗಿ, ವಿಕಾರವಾಗಿ ಅರಳಿ ನಿಲ್ಲುತ್ತದೆ. ಅದರ ನಿವಾರಣೋಪಾಯವೇದರೆ ಬಹಿರಂಗವನ್ನು ಬಿಟ್ಟು, ಅಂತರಂಗ ಶುದ್ಧಿಗಾಗಿ ಪ್ರಯತ್ನಿಸುವುದು :

ಮಾಡುವ ಕರ್ಮಕೆ ಮನವೆ ಸಾಕ್ಷಿ– ಮಾಡುವಿ ಜಪ ನಿನಗ್ಯಾಕೀ ರುದ್ರಾಕ್ಷಿ
ಮಾಡಿದನೆ ಗುರು ಹೀಗೆಂದು ದೀಕ್ಷಾ– ಆಡಲ್ಯಾತಕೊ ನಾಳೆ ಆದೀತು ಶಿಕ್ಷಾ ॥

---

೧ ಅದೇ ಪು. ೨೪.

ಹುಣಶಿಹಣ್ಣು ಹಚ್ಚಿ ಬೆಳಗಿದಿ ಗಿಂಡೀ– ಎಣಿಕಿ ಶರಣ ಮಾಡಿ ಅಲ್ಲೇನು ಕಂಡೀ
ಸಂತರ ನಿಂದಾ ಬಲು ಮಾಡಿ ಉಂಡೀ– ಅಂತರಂಗದಿ ಇರು ಭೇ ಹುಚ್ಚು ಮುಂಡೀ ॥

ಹಗಲೂ ಇರುಳೂ ಎದ್ದುಂಬುವಿ ಕೂಳೂ– ಕೂಳಿಗಿ ಆದೀ ನೀ ಒಬ್ಬರ ಆಳೂ
ಬಲುಮಂದಿ ಮನಿಯುನು ಮಾಡಿದಿ ಹಾಳೂ– ಏನು ಪುಣ್ಯ ಬಂದದನಾರ ಹೇಳೂ ॥

ತಂದೆಗೆ ಬಿಡದಿನ್ನು ಮಗನಲಿ ಮಾಯಾ– ಮಗಗಿನ್ನು ಹತ್ತಿದೆ ಸ್ತ್ರೀಯರ ಮಾಯಾ
ಸ್ತ್ರೀಯರಿಗ್ಹತ್ತಿದೆ ದುಡ್ಡಿನ ಮಾಯಾ– ದುಡ್ಡಿನಂತೆ ಮಾಡೊ ಮನಕೆ ನಿರ್ಮಾಯಾ ॥

ಮೀಶಿಯ ಹುರಿ ಮಾಡಿ ಮೇಲಕೆ ನೋಡಿ– ಕಾಲಾಗ ಸಿಕ್ಕವು ಮೋಹದ ಬೇಡಿ
ಮಾಡಬಾರದಂಥ ಕೆಲ್ಸವ ಮಾಡಿ– ಸಿಕ್ಕಿದಲ್ಲೊ ಗಾಂಡೂ ಇನ್ನೆತ್ತ ಓಡೀ ॥

ಕಾಮನ ಸುಡುವದು ನೋಡು ಹೀಂಗಲ್ಲಾ– ಕಾಮನ ಶಿವ ಸುಟ್ಟರವ ಸಾಯಲಿಲ್ಲಾ
ಕಾಮನು ಸುಡುವ ಮೂರು ಲೋಕವನೆಲ್ಲಾ– ಕಾಮರಹಿತ ಭವತಾರಕ ಬಲ್ಲಾ ॥

–ಇವು ಭವತಾರಕರ ನುಡಿಗಳು. ನೂರು ವರುಷದ ಹಿಂದಿನ ನಮ್ಮ ಗ್ರಾಮೀಣರು (ಅಕ್ಷರಸ್ಥರಿರಲಿ. ಇಲ್ಲದಿರಲಿ) ಗುರು ಭವತಾರಕರಂಥವರ ಪದಗಳನ್ನು ಕೇಳಿ, ಅನುಭಾವವನ್ನು ಗ್ರಹಿಸಿ, ತಮ್ಮ ಮೆದುಳಿಗೂ ಮನಸ್ಸಿಗೂ ಬೆಳಕನ್ನೂ ತಂಪನ್ನೂ ತಂದುಕೊಂಡರು.

—

ಐಹೊಳೆಯ ವೆಂಕಟೇಶ

(೧೮೩೫–೧೯೧೫)

ವಿಜಾಪುರ, ಧಾರವಾಡ ಜಿಲ್ಹೆಗಳಲ್ಲಿ ಐಹೊಳೆಯ ವೆಂಕಟೇಶ ಎಂಬ ಅಂಕಿತವಿದ್ದ ಅನೇಕ ಹಾಡು, ಪ್ರಬಂಧಗಳು ದೊರಕುತ್ತವೆ. ಈ ವಿಷಯವಾಗಿ ಮೊದಲಿಗೆ ಜಿಜ್ಞಾಸೆಯನ್ನು ಪ್ರಾರಂಭ ಮಾಡಿದವರು ಶ್ರೀ ಕೃಷ್ಣಶರ್ಮ ಬೆಟಗೇರಿಯವರು.[೧] ಅನಂತರ ಈ ಕವಿಯ ವಂಶಕ್ಕೇ ಸೇರಿದ ಶ್ರೀ ಕಲಮದಾನಿ ನಾರಾಯಣರಾಯರು ಕವಿಯ ಬಗ್ಗೆ ಅನೇಕ ವಿವರಗಳನ್ನು ಪೂರೈಸಿದರು.[೨]

ಶ್ರೀಯುತರ ಪೂರ್ಣ ಹೆಸರು ಭೀಮರಾವ ಗುಮಾಸ್ತೆ. ಇವರ ತಂದೆಯ ಹೆಸರು ರಾಘವೇಂದ್ರ ರಾವ ಅಥವಾ ರಾಘಪ್ಪ. ಇವರು ಭಾರದ್ವಾಜ ಗೋತ್ರದ ಮಾಧ್ವ ಬ್ರಾಹ್ಮಣರು. ಇವರ ಊರು ವಿಜಾಪುರ ಜಿಲ್ಹೆಯ ಐಹೊಳೆ. ಕಿಸುವೊಳಲು, ವಿದಿತಮಹಾಕೊಪಣನಗರ, ಪುಲಿಗೆರೆ, ಸದಭಿಸ್ತುತ ಮಪ್ಪ ಒಕ್ಕುಂದದ ತಿರುಳ್ಗನ್ನಡ ನಾಡಿಗೆ ಸೇರಿದ ಗ್ರಾಮ ಈ ಐಹೊಳೆ. ಪರಶುರಾಮ ರಕ್ತಮೆತ್ತಿದ ತನ್ನ ಕೊಡಲಿಯನ್ನು ತೊಳೆಯಲು ನೀರನ್ನು ಅರಸಿ ಹೊರಟಾಗ, ಎದುರಿಗೆ ಮಲಾಪಹಾರಿ ನದಿಯನ್ನು ಕಂಡು ಐ ಹೊಳೆ ! ಎಂದು ತೆಗೆದ ಉದ್ಗಾರವೇ ಊರಿನ ಹೆಸರಾಯಿತೆಂದು ಹೇಳುತ್ತಾರೆ. ಒಂದು ಕಾಲಕ್ಕೆ ಸುಪ್ರಸಿದ್ಧವಾಗಿದ್ದ ಈ ಐತಿಹಾಸಿಕ ಸ್ಥಳ ಇಂದು ಚಿಕ್ಕ ಗ್ರಾಮವಾಗಿದೆ. ೧೯ ನೆಯ ಶತಮಾನದಲ್ಲಿ ಈ ಗ್ರಾಮ ಒಂದು ದೇಸಗತಿಯ ಗ್ರಾಮವಾಗಿದ್ದಿತು. ಶ್ರೀ ಭೀಮರಾಯರದು ಅಲ್ಲಿಯ ದೇಸಾಯರ ಗುಮಾಸ್ತೆ ಮನೆತನ. ಅಂದಿನ ಹಳ್ಳಿಯ ಪರಂಪರೆಗನುಗುಣವಾಗಿ, ಶ್ರೀಯುತರು ಅಲ್ಪ ಸ್ವಲ್ಪ ಕನ್ನಡ ಮತ್ತು ಗಣಿತಗಳನ್ನು ಮಾತ್ರ ಕಲಿತಿದ್ದರು. ಸ್ವಂತ ಪ್ರಯತ್ನದಿಂದ ಹಳಗನ್ನಡ ಮತ್ತು ಸಂಸ್ಕೃತ ಭಾಷೆಗಳ ಅಭ್ಯಾಸ ಮಾಡಿದರು. ಒಂದು ಸಲ, ಶ್ರೀ ಜಗನ್ನಾಥರ ಶಿಷ್ಯಪರಂಪರೆಗೆ ಸೇರಿದ ಶ್ರೀಶಪ್ರಾಣೇಶ ವಿಠ್ಠಲದಾಸರು ಐಹೊಳೆಗೆ ಬಂದಾಗ, ಈ ಕವಿಯ ಕವನಗಳನ್ನು ಕೇಳಿ " ಅಪ್ಪಾ, ದೇವರು ನಿನಗೆ ಒಳ್ಳೆಯ ಶಕ್ತಿಯನ್ನು ದಯಪಾಲಿಸಿದ್ದಾನೆ. ಅದರ ಸದುಪಯೋಗ ವಾಗಲಿ ! ಶೃಂಗಾರಪದ, ಜಾವಡಿ ಮೊದಲಾದ ಲೌಕಿಕ ವಿಷಯದ ಕವನಗಳನ್ನು ರಚಿಸುವದನ್ನು ಬಿಟ್ಟು, ಪರಮಾತ್ಮನ ಮಾಹತ್ಮ್ಯ–ಲೀಲಾ ವಿನೋದಗಳನ್ನು ಬಣ್ಣಿಸಿ ಕವನ ಕೀರ್ತನೆಗಳನ್ನು ರಚಿಸು ! " ಎಂದು ಹೇಳಿದರಂತೆ. ಅಂದಿನಿಂದ ಶ್ರೀಯುತರು ' ಐಹೊಳೆ ವೆಂಕಟೇಶ ' ಎಂಬ ಮುದ್ರಿಕೆಯಿಂದ ದೇವರ ನಾಮಗಳನ್ನು ರಚಿಸತೊಡಗಿದರು. ಇವರು ಕೆಲಕಾಲ ಬೆಳಗಾವಿಯ

---

೧ ಜಯಂತಿ : ಜುಲೈ ೧೯೫೬– ಪು. ೭೩. (ನಮ್ಮ ತೀರ್ಥರೂಪರಾದ ವೈ. ವಾ. ಯಲಗುರ್ದರಾವ ಧಾರವಾಡಕರ ಅವರೂ ಈ ಕವಿಯ ಬಗ್ಗೆ ಹೇಳುತ್ತಿದ್ದರು.)

೨ ಜಯಂತಿ : ಡಿಸೆಂಬರ ೧೯೫೬– ಪು. ೨೭೧.

ಸರದಾರ ಹಾಯಸ್ಕೂಲಿನಲ್ಲಿ ಕನ್ನಡದ ಅಧ್ಯಾಪಕರಾಗಿ ಕೆಲಸ ಮಾಡಿದರೆಂದೂ ಹೇಳುತ್ತಾರೆ. ಸ್ವಾತಂತ್ರ್ಯಪ್ರಿಯರಾದ ಇವರಿಗೆ ಸೇವಾಜೀವನವು ಒಗ್ಗದ್ದರಿಂದ ಇವರು ತಮ್ಮ ಊರಿಗೆ ಮರಳಿ 'ಶ್ರೀಕೃಷ್ಣ ಪಾರಿಜಾತ' ಎಂಬ ಪೌರಾಣಿಕ ನಾಟಕವನ್ನು ಬರೆದು ಆಡಹತ್ತಿದರು.

"ಇವರು ಅನೇಕ ದೇವರ ನಾಮ, ಪದ, ಸುಳಾದಿ, ಉಗಾಭೋಗ, ಸುವ್ವಾಲೆಗಳನ್ನೂ, ಪುರಾಣ ಪುರುಷ ಶ್ರೇಷ್ಠರಾದ ರುಕ್ಮಾಂಗದ, ಅಂಬರೀಷ, ನಳರಾಜ ಮೊದಲಾದವರ ಕಥೆಗಳನ್ನೊಳಗೊಂಡ ನಾಟಕಗಳನ್ನೂ, 'ಶ್ರೀರಾಮ ಪಾರಿಜಾತ', 'ಶ್ರೀಕೃಷ್ಣ ಪಾರಿಜಾತ' ಎಂಬ ಕವನ ಪ್ರಬಂಧಗಳನ್ನೂ ಅನೇಕ ಕಥಾಕೀರ್ತನೆಗಳನ್ನೂ ರಚಿಸಿದ್ದಾರೆ. ಅಲ್ಲದೆ, 'ಏಕಾದಶೀ ಮಾಹಾತ್ಮ್ಯ' ಎಂಬ ಕಾವ್ಯವನ್ನೂ, ಸುಭದ್ರಾ, ರುಕ್ಮಿಣಿ, ಸತ್ಯಭಾಮೆಯರ ಮದುವೆಯ ಹಾಡುಗಳನ್ನೂ, ತುಂಬ ಮನೋಹರವಾದ ಶೈಲಿಯಲ್ಲಿ ಬರೆದಿದ್ದಾರೆ. 'ಸುಭದ್ರಾಪರಿಣಯ' ಎಂಬ ಗ್ರಂಥವು ತನ್ನ ರಾಗ ರಸಗುಣಗಳಿಂದ ಎಂಥವರ ಹೃದಯವನ್ನೂ ಆಕರ್ಷಿಸುವಂತಿದೆ."[೧] ಇದೂ ಅಲ್ಲದೆ ವಿರಾಟಪರ್ವದ ಬಗ್ಗೆಯೂ ಬರೆದದ್ದಾಗಿ ಹೇಳುತ್ತಾರೆ.

ಇವರ 'ಗೋಪನಾರಿಯರ ಕರುಣಾಲಾಪ' ಎಂಬ ಗೀತಪ್ರಬಂಧವು ಮಾರ್ಮಿಕವಾಗಿದೆ. ಕಂಸನ ಆಜ್ಞೆಯಂತೆ ಅಕ್ರೂರನು ಕೃಷ್ಣನನ್ನು ಮಥುರೆಗೆ ಕರೆದೊಯ್ಯಲೆಂದು ಗೋಕುಲಕ್ಕೆ ಬರುತ್ತಾನೆ. ಸೆರೆಮನೆಯಲ್ಲಿದ್ದ ತನ್ನ ತಾಯಿ ತಂದೆಯರನ್ನು ಬಿಡುಗಡೆ ಮಾಡಬೇಕಾಗಿದ್ದ ತನ್ನ ಕರ್ತವ್ಯವನ್ನು ನೆನೆದು ಕೃಷ್ಣನು ಅಣ್ಣ ಬಲರಾಮನೊಂದಿಗೆ ಮಥುರೆಗೆ ಹೊರಡಲು ಸಿದ್ಧನಾಗುತ್ತಾನೆ. ಆಗ, ಕೃಷ್ಣನಲ್ಲಿ ಸದಾ ಅನುರಕ್ತರಾಗಿದ್ದ ಗೋಪವಧೂಜನರು ಕೃಷ್ಣನ ಬಳಿಗೆ ಬಂದು ಅವನು ಹೊರಡದಿರಲು ವಿನಂತಿಸುತ್ತಾರೆ. ಇದರ ಕಾವ್ಯರೂಪವೇ ಈ ಗೀತಪ್ರಬಂಧ. ಈ ಪ್ರಬಂಧದಲ್ಲಿ ಪದಗಳೆಲ್ಲ ಕನ್ನಡ ಛಂದಸ್ಸಿಗೆ ಸೇರಿದ ಮಾತ್ರಾಗಣಗಳಲ್ಲಿದ್ದೂ, ಶ್ಲೋಕಗಳು ಸಂಸ್ಕೃತ ಅಕ್ಷರವೃತ್ತಗಳಲ್ಲಿಯೂ ಇವೆ.

ಕರುಣಾಲಾಪ :

ಮಥುರೆಗೆ ಹೋಗಬೇಡೆಲೊ ರಂಗಾ—ಇದು ಏನಂಗಾ ?
ತಿಳಿಯದು ಮೋಹನಾಂಗಾ !
ಮಥುರೆಗೆ ಹೋಗಬೇಡೆಲೊ ರಂಗಾ—ಇದು ಏನಂಗಾ ?

ಶ್ಲೋಕ

ಮದನನ್ನೆಯನೆ ಕೇಳು, ಅಲ್ಲಿರುತಿಪ—ವನಿನಿಯರತಿ ನಿಷ್ಠುರರೋ
ಉದಕೇಜಾಯತನೇತ್ರ ನಿನ್ನ ಮನವ—ಬಗೆವರೊಂದರಕ್ಷಣದೊಳು
ಯದುವಂಶೋದ್ಭವ ಎಮ್ಮಮೇಲೆ ನಿನಗೆ—ಯಾತಕ್ಕೆ ದಯೆಪುಟ್ಟದೋ !
ಮುದದೀ ಪಯಣವ ನಿಲ್ಲಿಸೆಂದು ನಾವು ಮುಕ್ಕುಂದಾ ವಂದಿಸುವೆವೋ !

ಪದ

ಮಾತು ಲಾಲಿಸು ಮಧುಸೂದನಾ—ನಿನ್ನಾರಾಧನಾ
ಮಾಡುವೆವನುದಿನ ನಾ—
ಪ್ರೀತಿಯಿಲ್ಲವೆ ಎಮ್ಮಮೇಲಿಷ್ಟು—ಯಾತಕೆ ಸಿಟ್ಟು ?
ಪೋಗುವರೇ ಕೈ ಬಿಟ್ಟು....
ಸೋತು ಬಂದೆವು ನಿನ್ನ ಕಾಣದೆ—ಪ್ರಾಣ ನಿಲ್ಲದೆ

೧ ಜಯಂತಿ : ಡಿಸೆಂಬರ— ೧೯೫೬— ಪು ೩೭೨.

ಒಬ್ಬರೊಬ್ಬರಗಲದೆ....
ಈ ತನು ಮನ ನಿನಗೊಪ್ಪಿಸಿ–ಇರಲು ವಂಚಿಸಿ
ಪೋಗುವರೇ ನೀ ಕೆಡಿಸಿ....
ಮಥುರೆಗೆ ಹೋಗಬೇಡೆಲೊ ರಂಗಾ–ಇದು ಏನಂಗಾ ? ॥ ೧ ॥

ಶ್ಲೋಕ

ಕರೆಯ ಬಂದವನಾರು ಕೇಳಿ ಜಾಣೇ–ಕಾಠಿಣ್ಯ ಹೃದಯಾತ್ಮನೇ !
ಕರುಣಾ ಉಳ್ಳವನಲ್ಲವೀತ ಕ್ರೂರ–ಅಕ್ರೂರನಾರೆಂಬರೆ ?
ಸ್ಮರನಾ ಕೋಲ್ ಗುರಿಯಾದೆವಮ್ಮ ನಾವು–ಶೃಂಗಾರವಿನ್ಯಾತಕೆ ?
ಮರುಗಿ ಮಾಡುವುದೇನೆ ನಾವು ಮನದಿ–ಮುರಹರಗೆ ಅರಿವಿಲ್ಲವೆ ?

ಪದ

ಮರುಳುಗೊಳಿಸಿ ನಮ್ಮನೆಲ್ಲರ–ಮಂದರೋದ್ಧಾರ
ನಂದಗೋಪಕುಮಾರಾ....
ಪರಿಪರಿಯಲಿ ಮೋಹ ಹೆಚ್ಚಿಸಿ–ಬಲು ಮೆಚ್ಚಿಸಿ
ಅದ ಮರೆತು ವಿಶ್ವಯಿಸಿ....
ತೆರಳುವೆ ನೀನೆಂಥ ಎದೆಗಾರ–ಗೋಪೀಜನಜಾರ !
ನಿನಗಿರದೆ ವಿಚಾರ ?....
ನೆರೆನಂಬಿದ್ದೆವೊ ನಿನ್ನ ಅನುದಿನ–ಕ್ಲೇಶಭಂಜನ !
ಸಂತತ ಸುಪ್ರಸನ್ನಾ....
ಮಥುರೆಗೆ ಹೋಗಬೇಡೆಲೊ ರಂಗಾ–ಇದು ಏನಂಗಾ ?

ಶ್ಲೋಕ

ಗೆಳೆಯರಿಂದೊಡಗೂಡಿ ಗೋವುಗಳನು–ನಲವಿಂದ ನೀ ಕಾಯುತ
ಕೊಳಲಾಧ್ವನಿಯನು ಮಾಡಲಾಗ ವ್ರಜದಾ–ಲಲನೆಯರು ನಾವೆಲ್ಲರು,
ಹೊಲಬುತಪ್ಪಿದರಂದವಾಗಿ ಮನದಿ–ಕಳವಳಿಸಿ ಕಾತರದಲಿ
ಘಳಿಗಿ ಉಳಿಯದೆ ನಿನ್ನ ಬಳಿಗೆ ಬಂದಾ–ತಿಳಿವಳಿಕೆಯು ನಿನಗಿಲ್ಲವೇ !

ಪದ

ಗಂಡರಂಜಿಕೆ ನಮಗಿಲ್ಲದೆ–ಕ್ಷಣ ನಿಲ್ಲದೆ
ಹಿಂದುಮುಂದು ನೋಡದೆ....
ಉಂಡ ಎಂಜಲಗೈಯ ತೊಳೆಯದೆ–ಒಬ್ಬರುಳಿಯದೆ
ಮಗುಗಳನು ಕರೆಯದೆ....
ದುಂಡುಮುತ್ತಿನಹಾರ ಕಾಲಲಿ–ಕಡಗ ಕೊರಳಲಿ
ಮೂಗುತಿಯ ಕಿವಿಯಲಿ....
ಪೆಂಡೆಯ ರುಳಿಗಳ ಕೈಗಿಟ್ಟು–ವಿಸ್ಮೃತಿಪಟ್ಟು
ಬಂದೆವಲ್ಲೋ ಕೇಳಿಷ್ಟು....
ಮಥುರೆಗೆ ಹೋಗಬೇಡೆಲೊ ರಂಗಾ–ಇದು ಏನಂಗಾ !

ಶ್ಲೋಕ

ಆಡ್ವಬಾರದ ಮಾತನಾಡಿತು ಜನಾ–ಅದನೆಲ್ಲ ನೀ ಕೇಳಿದೆ....
ಮಾಡ್ವಬಾರದ ಮಮತೆಯನ್ನು ಮಾಡಿ–ಮನೆವಾರ್ತೆಯನು ಬಿಡಿಸಿದೆ
ರೂಢಿ್ವ ಮೆಚ್ಚದೊ ರುಕ್ಮಮಾನಪಹರಾ–ರುಕ್ಮಾಂಬರಧಾರನೇ....
ನೋಡಿ ರಕ್ಷಿಸೊ ಎಮ್ಮನೀಗ ಕೃಷ್ಣಾ–ನೋಯಿಸುವದೊಳಿತಲ್ಲವೊ !

ಪದ

ಶಿರವೆತ್ತಿ ತಿರುಗಲಾರೆವೊ ಇಲ್ಲಿ–ಗೋಕುಲದಲ್ಲಿ
ಅತ್ತೆ ಮಾವಗಳಲ್ಲಿ....
ಎರವು ಮಾಡಿದೆ ಎಮಗವರನು– ಆಡಿ ಫಲವೇನು ?
ಬ್ರಹ್ಮ ಬರೆದ ಲಿಪಿಯನು....
ಒರಸುವರಾರುಂಟೋ ಧರೆಯೊಳು– ವ್ಯರ್ಥವೆಮ್ಮ ಬಾಳು
ವನಮಾಲೀ ನೀ ಕೇಳು
ಕರುಣಾಸಾಗರನೆಂಬುವರಲ್ಲೋ– ಅದು ಬಲು ಸುಳ್ಳೋ !
ಒಂದೂ ಕೈಗೂಡಲಿಲ್ಲೋ
ಮಥುರೆಗೆ ಹೋಗಬೇಡೆಲೊ ರಂಗಾ– ಏನಂಗಾ ?

ಶ್ಲೋಕ

ಹದಿನಾರೂ ಸಾವಿರದ ಅಂಗನೆಯರ– ಹತಗೈವರೆ ಕೇಶವಾ ?
ಚದುರಾ, ಚೆನ್ನಿಗ, ಕೇಳು ಎಮ್ಮ ಮನದ ಅಭಿಲಾಷೆ ಪೂರಯ್ಸದೆ....
ಸದಮ್ಲಲಾತ್ಮನೆ ಸಾಗಬೇಡ ಕಂಡಾ– ಸಂತೋಷ ಎಮಗಾಗದೊ !
ಉದಕ್ವವಗಲಿದ ಮೀನಿನಂತೆ ಮಾಡಿ– ಕಡೆಗಣಿಸಿ ನೀ ಪೋಗ್ವರೆ ?

ಪದ

ಬೇಸರಾದೆವೆ ಭಕ್ತವತ್ಸಲಾ– ಮುದ್ದು ಗೋಪಾಲಾ
ನಾನಾ ಲೀಲಾವಿಶಾಲಾ !....
ಏಸು ಜನ್ಮದ ಪುಣ್ಯ ಒದಗಿದ– ಕಾರಣದಿಂದ
ನಿನ್ನ ಸಂಗದಾನಂದ....
ಲೇಸಾಗಿ ಬಯಸಿಕೊಂಡಿದ್ದೆವೊ– ಕಷ್ಟವೊದ್ದೆವೊ
ಸುಖದಿಂದ ಬಾಳಿದೆವೊ....
ಈ ಸಮಯವೊಳೆಮ್ಮನಗಲುವಿ– ಘಾಸಿ ಮಾಡುವಿ
ಮುಂದುಗಾಣದಾದೆವಿ
ಮಥುರೆಗೆ ಹೋಗಬೇಡೆಲೊ ರಂಗಾ– ಇದೇನಂಗಾ ?

ಶ್ಲೋಕ

ಬಿಲ್ಲು ಹಬ್ಬದ ನೆವನವನ್ನೇ ಮಾಡಿ– ಬಿಟ್ಟೆಮ್ಮನು ಪೋಗುವಿ
ಕಳ್ಳ ಸುಳ್ಳನು ಕೇಳು ನಿನ್ನ ಗುಣವ– ಕೊಂಡಾಡಿದಲ್ಲೇನಿದೆ ?
ಎಲ್ಲಾ ಪರಿಯುಲಿ ಕೆಟ್ಟೆವಲ್ಲೊ ನಿನಗೆ– ಎಳ್ಳಷ್ಟು ದಯೆ ಬಾರದೆ ?
ಒಳ್ಳೇ ಕೆಲಸ ಮಾಡಿದೆಮ್ಮ ಉಸಿರು– ಉದ್ಗಾಥದಲಿ ಮುಟ್ಟಲಿ !

ಪದ

ಹೆಂಗಳೆಯರ ಜನ್ಮವೇತಕೋ– ವ್ಯಸಾರ್ಥಕೋ !
ಬಂದಿತೆಮ್ಮನು ಭವಕೋ....
ಹಂಗಿಗರಾದೆವೊ ನೆರೆಯಲಿ– ಬಹು ಪರಿಯಲಿ
ಕರಕರೆಯು ಮನೆಯಲಿ....
ಮಂಗಳಾತ್ಮಕ ನಿನ್ನ ಮಾಯವು– ತಿಳಿಯಲಿಲ್ಲವು
ಮೋಸ ಹೋದೆವು ನಾವು....
ಅಂಗಳದೊಳು ನಿನ್ನ ಕಾಂಬೆವು....ಅಪ್ಪಿಕೊಂಬೆವು
ಅಂಘ್ರಿವನಜ ನೋಡುವೆವು....
ಮಥುರೆಗೆ ಹೋಗಬೇಡೆಲೊ ರಂಗಾ– ಇದೇನಂಗಾ ?

ಶ್ಲೋಕ

ಲಲನೇರೆಲ್ಲರು ಲಲ್ಲೆಯಿಂದ ಯಮುನಾ– ಸ್ನಾನಕೆ ನಾವ್ ಪೋಗಲು
ತಿಳಿಸ್ವದಲ್ಲಿಗೆ ಬಂದು ಎಮ್ಮ ಶಾಲಿ– ಸೆಳೆದೊಯ್ದು ಮರವೇರಿದೆ !
ಜಲದ ಮಧ್ಯದಿ ನಿಂತು ಬೇಡಲೆಮಗೆ– ಜಲಶಾಯಿ ನೀನೀಯದೆ
ಉಳಿಸ್ವದೆಮ್ಮಭಿಮಾನವನ್ನು ಕಳೆದಿ– ಉತ್ಸವವು ನಮಗಾಯಿತೋ !

ಪದ

ಸರಿ ಬಂದ ಪರಿಯೆಮ್ಮೊಳಾಡಿದಿ– ಕ್ರೀಡೆ ಮಾಡಿದಿ
ಮಾನವೀಡಾಡಿಸಿದಿ....
ಕೊರಳಕೊಯಿದು ಹೋಗುವಿಯೆಲ್ಲಾ– ಲಕ್ಕುಮಿಯನಲ್ಲಾ
ನಿನಗ್ಹೇಳುವರಿಲ್ಲಾ !....
ಎರವಿನಾಭರಣವನಿಟ್ಟಂತೆ– ಹರುಷಬಟ್ಟಂತೆ
ಎಮಗಾಯಿತೋ ಚಿಂತೆ
ನರಸಿಜಾಂಬಕ ಅಯ್ಯಹೊಳಿಯ– ವೆಂಕಟರಾಯಾ
ಕೇಳಿ ನಿಲ್ಲೊ ಮಹರಾಯಾ....
ಮಥುರೆಗೆ ಹೋಗಬೇಡೆಲೊ ರಂಗಾ– ಇದು ಏನಂಗಾ ?

ಮೇಲಿನ ಗೀತ ಪ್ರಬಂಧದಲ್ಲಿಯ ಶೃಂಗಾರ, ಕಾರುಣ್ಯ, ಆರ್ತತೆ, ಕಲ್ಪಕತೆ, ಲಾಲಿತ್ಯ, ವಾಸ್ತವತೆಗಳು ಮನನೀಯವಾಗಿವೆ. ವನಮಾಲಿಯ ಮುರಲೀನಾದವನ್ನು ಕೇಳಿ ಗೋಪವಧೂಜನ ದುಂಡುಮುತ್ತಿನ ಹಾರ ಕಾಲಲ್ಲಿ ಧರಿಸಿ, ಕಡಗ ಕೊರಳಲ್ಲಿ ಹಾಕಿ, ಮೂಗುತಿ ಕಿವಿಯಲ್ಲಿಟ್ಟು, ಪೆಂಡೆಯರುಳಿಗಳ ಕೈಗಿಟ್ಟು ಹೊರಟ ದೃಶ್ಯ ವಿನೋದಪೂರ್ಣವಾಗಿದೆ. ಎರವಿನ ಶೃಂಗಾರ, ಎರವಿನ ಸುಖ ಅ–ಶಾಶ್ವತ. ಶ್ರೀಕೃಷ್ಣ ತಮಗೆ ದೊರಕಿದನೆಂಬ ಸುಖದಲ್ಲಿದ್ದ ವ್ರಜಕನ್ಯೆಯರು ಎರವಿನಾಭರಣವಿಟ್ಟವರ ಸ್ಥಿತಿಯಲ್ಲಿದ್ದರು.

ಮೇಲಿನ ಗೀತಪ್ರಬಂಧದಲ್ಲಿ ಕವಿಗಳು ಸುಂದರವಾದ ಶುದ್ಧ ಕನ್ನಡ ಪ್ರಾಸಾದಿಕ ಶೈಲಿಯನ್ನೂ ಬಳಸಲು ಸಮರ್ಥರಿದ್ದಂತೆ, ಸಂಸ್ಕೃತ ಪೂರ್ಣವೂ ಮತ್ತು ಹಳಗನ್ನಡ ಮಿಶ್ರಿತವೂ ಆದ ಶೈಲಿಯನ್ನು ಬಳಸಬಲ್ಲವರಾಗಿದ್ದರು. ಅದಕ್ಕೆ 'ವಿಘ್ನೇಶ್ವರ ಸ್ತುತಿ' ಮತ್ತು 'ಶ್ರೀ ಶಿವಸ್ತವನ' ಎಂಬ ಕವನಗಳು ಉದಾಹರಣೆಯಾಗಿವೆ :

ವಿಘ್ನೇಶ್ವರ ಸ್ತುತಿಯ ಭಾಗ

ರಾಗ : ನಾಂಟಿ ತಾಳ . ಝುಂಪೆ

ಮೃದ್ಭವನೆ ನಿನ್ನ ಪದ ಪೊರ್ದಿ ವಂದಿಸುವೆ
ಸದ್ಬುದ್ಧಿಯನು ನೀಡು ಷಣ್ಮುಖಾನುಜನೇ !

ಯಕ್ಷಪತಿಸಖತನಯ ನಕ್ಷತ್ರಪತಿ ಪಗೆಯ
ಈಕ್ಷಿಸೈ ಕರುಣಾಕಟಾಕ್ಷದಿಂದ
ಪಕ್ಷಿವಾಹನ ಐಯಹೊಳೆಯ ವೆಂಕಟನೊಲುಮೆ
ಅಕ್ಷಯದಿ ಪಡಕೊಂಡ ಲಂಬರಾಧೀಶ [೧]

ಶ್ರೀ ಶಿವಸ್ತವನ

ರಾಗ : ರೇಗುಪ್ತಿ

ಶಂಭೋ ಪಾಲಿಸು ಗಂಗಾಧರನೇ– ನಿನ್ನ
ನಂಬಿರುವೆ ಅಂಬಾವರನೇ ‖ ಪ ‖

ಚಳಿಬೆಟ್ಟನಳಿಯ, ಕೆಂಜೆಡೆಯ, ಭೂತಗಳ ಬಳಗಕೆ ನೀನು ಹಿರಿಯ
ಪ್ರಳಯ ಮಾರುತಿ ಗಿರಿನಿಲಯ– ಮುಪ್ಪೊಳಲುರಿಕನೆ ಮುನಿಗೇಯ

ಸಲೆ ಭಾಗವತವನ್ನು ಒಲಿದವನೀಶಗೆ
ಸುಲಭದಿ ಪೇಳಿದನಲಸೋಮ ರವಿ ನೇತ್ರ

ಕಲಿತ ಪಂಚಾನನ ಕಲೇವರ
ಲಲಿತಡಮರುಗಧರ ದಯಾಕರ
ಇಳೆಯೊಳಗೆ ಚಿರಜೀವಿಯೆನಿಸಿದೆ
ಚೆಲುವ ಹರಿದ್ವಿತಯಾಂಗಲಿಂಗ [೨]

ವೈಷ್ಣವ ಕವಿಯೊಬ್ಬ ಮಾಡಿದ ಈ ಶಿವಸ್ತುತಿ ಮನನೀಯವಾಗಿದೆ. ಈ ಕವಿಯ ಕೃತಿಗಳಾವೂ ಗ್ರಂಥರೂಪದಲ್ಲಿ ಸಿಕ್ಕಲಿಲ್ಲ. ಜನರ ಕಂಠಸ್ಥವಾಗಿ, ಇಲ್ಲವೆ ಹಳೆಯ ಪತ್ರಿಕೆಗಳಲ್ಲಿ ಮಾತ್ರ ಇವು ಉಳಿದಿವೆ.

—

೧ ಜಯಂತಿ : ನವೆಂಬರ ೧೯೫೩– ಪು. ೨೮೨.
೨ ಅದೇ ಪು. ೨೮೩.

ಹುಲಗಪ್ಪ

(ಸು. ೧೮೪೦)

ಇವರು ಮಲ್ಲಿಗವಾಡದ ನರಸಪ್ಪನವರ ಸಮಕಾಲೀನರು. ಇವರು ಕುರುಬ ವಂಶದವರು. ವೃತ್ತಿಯಿಂದ ಓಲೆಕಾರರು. ಇವರ ಊರು ಸುಪ್ರಸಿದ್ಧ ಕುಮಾರವ್ಯಾಸನ ಜನ್ಮಸ್ಥಳವಾದ ಕೋಳಿವಾಡ. ಇವರು ಲೋಕದ ರೀತಿಯಲ್ಲಿ ನಿರಕ್ಷರರು. ಆದರೆ, ಮಹಾ ಅನುಭಾವಿಗಳು.

ಇವರು ಯಾವಾಗಲೂ ಪರಮಾತ್ಮ ಚಿಂತನೆಯಲ್ಲಿ ಇರತಕ್ಕವರು. ಒಂದು ಸಲ, ಆ ಭಾಗದ ಮಾಮಲೇದಾರರ ಸವಾರಿ ಕೋಳಿವಾಡ ಚಾವಡಿಗೆ ಬಂದಾಗ, ಹುಲಗುಪ್ಪ ಧ್ಯಾನಲೀನರಾಗಿ ಚಾವಡಿಯಲ್ಲಿ ಕುಳಿತಿದ್ದರು. ಮಾಮಲೇದಾರರು ಬಂದರೂ ನೋಡಲಿಲ್ಲ; ಎದ್ದು ಮುಜುರೆ ಹೊಡೆಯಲಿಲ್ಲ. ಇದರಿಂದ ಮಾಮಲೇದಾರರಿಗೆ ತುಂಬಾ ಸಿಟ್ಟು ಬಂದು, ಹುಲಗಪ್ಪನವರನ್ನು ಗದರಿಸಿದರಂತೆ. ಆಗ, ಹುಲಗಪ್ಪ "ಹರನಲ್ಲ, ಹರಿಯಲ್ಲ ಈ ಧರೆಯನಾಳುವ ಧೊರೆಯಲ್ಲ, ನನ್ನಂತೆ ನರನು ನಿನಗ್ಯಾಕೆ ಶರಣು" ಎಂಬ ಪದ ಹೇಳಿದರಂತೆ. ಆಗ ಇವರ ಆತ್ಮಿಕ ಹಿರಿಮೆಯನ್ನರಿತ ಮಾಮಲೇದಾರ, ಇವರಿಗೆ ಯಾವ ಹೀನವಾದ ಕೆಲಸಗಳನ್ನೂ ವಿಧಿಸಬಾರದೆಂಬ ಏರ್ಪಾಡು ಮಾಡಿದನಂತೆ.

ಕೋಳಿವಾಡದ ಕಲಮೇಶ್ವರ ಹುಲಗಪ್ಪನವರ ಆರಾಧ್ಯ ದೈವತ. ಶ್ರೀಯುತರು ರಚಿಸಿದ ಸುಮಾರು ೨೦ ಪದಗಳು ದೊರಕಿವೆ. ಹಲವು ಪದಗಳಲ್ಲಿ ಶಿವನ ವರ್ಣನೆಯೂ, ಹಲವು ಪದಗಳಲ್ಲಿ ರಾಮ–ಕೃಷ್ಣರ ವರ್ಣನೆಯೂ, ಹಲವು ಪದಗಳಲ್ಲಿ ಸಮಾಜ ವಿಡಂಬನೆಯೂ ಕಂಡುಬರುತ್ತವೆ. ಹಲವು ಬೆಡಗಿನ ರೂಪದಲ್ಲಿ ಇವೆ.

ತನ್ನ ಆರಾಧ್ಯ ದೈವತವಾದ ಕೋಳಿವಾಡದ ಕಲಮೇಶ್ವರನನ್ನು ಕವಿ ಹೀಗೆ ಪ್ರಾರ್ಥಿಸಿದ್ದಾರೆ :

ಕೆದರುತ ಕೆಂಜಡಿ ವನವುತ ಜೋಕೆ
ಸಿದ್ಧರೊಳಗೆ ಸಿದ್ಧ ಶಿವಸಾಕ್ಷಾತ
ಪಂಚಮುಖದ ಪರಮೇಶ್ವರ ರೂಪಾ
ಗಂಗೆ ಗೌರಿಗೆ ತಂದು ಹಾಕಿದ ಜಗಳದ ಕೋಪ
ಕರಿಗೊರಳದ ಭೂಪ ||

ನಿಂದೆಯಂನಾಡುವರ ನಾಲಿಗೆಯ ಕಿತ್ತ
ದುಂಡಮಲ್ಲಿಗೆಯ ಪೂಜೆಯಂಪೆತ್ತ

ಮೇಲ ಕೋಳಿವಾಡದ ಕಲ್ಲಯ್ಯನ
ಭಜನಿ ಮಾಡುವೆನು ಭಾಗ್ಯದ ಶ್ರೇಷ್ಠನ ॥ ೧

ಈ ಕೆಳಗಿನ ಪದ್ಯ ಮುಂಡಿಗೆಯ ರೀತಿಯದು :

ಒಂದು ಪೆಸರಿನ ಸಲ್ಲ ಕೇಳಿರಿ ಜನರೆಲ್ಲ
ಎಂದ ಪುಟ್ಟೈಯ್ತಿ ಎನಗ ಠಾವಿಕಿಲ್ಲ ॥ ಪ ॥

ಸಸಿಯನು ಹಾಕಿಲ್ಲ ನೀರನು ಹನಿಸಿಲ್ಲ
ಎಷ್ಟುದ್ದ ಬೆಳದಯ್ತಿ ನೋಡಾಕ ನೆಲೆಯೆ ಇಲ್ಲ
ಹೂವಾಗದ ಹೂಕಾಯಿ ಲೆಕ್ಕಿಲ್ಲದ ಮತ್ತೈತಿ
ತುಂಬುಚ್ಚಿ ಬೀಳಲಾಕ ಹಣ್ಣು ತಾನಲ್ಲ ॥ ೧ ॥

ಹಾಸಿಲ್ಲ ಹೊದ್ದಿಲ್ಲ ಮಲಗಿಲ್ಲ ಎದ್ದಿಲ್ಲ
ಶುದ್ಧ ದೀವಿಗಿ ಇದಕ ನಿದ್ದಿ ಇಲ್ಲ
ಕೈಯಿಲ್ಲ ಕಾಲಿಲ್ಲ ಕಣ್ಣುಗಳು ಮೊದಲಿಲ್ಲ
ಹೆಣ್ಣು ಗಂಡಂದೀರ ಮುಖವು ಮೊದಲಿಲ್ಲ
ತಂದಿಲ್ಲ ತಾಯಿಲ್ಲ ಮಂದಿಲ್ಲ ಬಳಗಿಲ್ಲ
ಎಂದೆಂದು ಈ ದೇಹಕಳವು ಇಲ್ಲಾ ॥ ೨ ॥

ತತ್ತಿ ಹಾಕದ ಕೋಳಿ– ಕಾವಿಗೆ ಕುಂತದ ಕೇಳಿ
ಒಡೆಯರಿಲ್ಲದ ಮಕ್ಕಳೊಳಗ ತಾ ಬಾಳಿ
ಈ ಕೀಳು ಗೂಡಿನೊಳು ಬಾಳೇವ ತಾ ಮಾಡಿ
ಇದರರ್ಥ ಬಲ್ಲರಾವಣ್ಣ ಕೋಳಿವಾಡದ ಕಲ್ಲಕರಿಗೂಳಿ ತಾ ಬಲ್ಲ ॥ ೩ ॥ ೨

ಶ್ರೀಕೃಷ್ಣ ಲೀಲೆಯನ್ನು ಕವಿ ಹೀಗೆ ವರ್ಣಿಸಿದ್ದಾರೆ :

ನೋಡಿದೆಯಾ ಗೋಪೆಮ್ಮಾ
ರಂಗ ಹೀಂಗ ಆಡಿದಾ ॥ ಪ ॥

ಗೆಜ್ಜಿಲ್ಲದೋಡಾಟ ನೋಡಿವನ ನಗುವಾ
ಒಜ್ಜೆಯಿಲ್ಲೆಂದು ಬೆಟ್ಟವನು ನೆಗುವಾ
ದಾನಕೊಟ್ಟವನ ಪಾತಾಳಕ ಒಯ್ದ
ತಾಯಿ ಮಾತಿಗೆ ತಾ ವಾದವ ಮಾಡಿದಾ
ಥಣಲ್ಲೆಂಬೊ ಬಿಲ್ಲಗಂಟೆಯನೆಳೆದಾ ॥ ೧ ॥

ಬತ್ತಲೆ ನಿಂತಾನ ವಸ್ತ್ರ ಇವಗೇನರಿಯೇ
ಹತ್ತಿ ಕುಣಿಸುವಂಥ ತೇಜಿಯು ಮರಿಯೇ
ಬ್ರಹ್ಮಗೆ ತಂದುಕೊಟ್ಟನು ವೇದಾ
ಬ್ರಹ್ಮ ಮೊದಲಾಗೆಲ್ಲ ದೇವರ ಕಾಯ್ದಾ ॥ ೨ ॥

೧ ಕೋಳಿವಾಡದ ವರಕವಿ ಹುಲಗಪ್ಪನವರು : ಸಂ. : ಎಫ್. ಬಿ. ದೇಸಾಯಿ– ೧೯೫೫– ಪು. ೧೬
೨ ಅದೇ ಪು. ೨೦

ಮಂದರ ಪರ್ವತಕ್ಕೊಂಗಿ ಉಪಾಧ್ಯನಾಗುವಾ
ಬೆದರದೆ ರಾವಣನ ರುಂಡವ ಕೊಯ್ದಿಡುವಾ
ಚದುರ ಗೋಪೇರ ಮನಿ ಕದಗಳ ತೆಗೆವಾ
ಮೋದದಿ ಅವರ ಮುಂದ ನಿಂತಗೊಂಡು ಕುಣಿವಾ ॥ ೩ ॥

ಎತ್ತ ನೋಡಲತ್ತ ದಿಗಂಬರನಾಗುವಾ
ಮತ್ತೆ ಕೈ ಕತ್ತಿಯ ಹಿಡಿದುಕೊಂಡು ಸಾಗುವಾ
ಎತ್ತಲಾಗ ನೋಡಿದರು ಜಗವ ತುಂಬಿರುವಾ
ಕೋಳಿವಾಡದ ಕಲ್ಲನ ಜತ್ತಿಲಿರುವಾ ॥ ೪ ॥ ೧

ಇವೆಲ್ಲ ತತ್ವಜ್ಞಾನ, ಅನುಭವಗಳ ಗಹನ ವಿಷಯದ ಬಗೆಗಿದ್ದರೆ, ಹುಲಗಪ್ಪನವರು ಲಘು ವಿಷಯಗಳ ಬಗೆಗೂ ಹಲವಾರು ಪದ್ಯಗಳನ್ನು ಬರೆದಿದ್ದಾರೆ. ಇವಳು ಕುಸುಗಲ್ಲ ನಾರಿ :

ಬ್ಯಾಹಟ್ಟಿ ಬೆಟ್ಟಿ ಕುಸುಗಲ್ಲ ನಾರಿ

ಬ್ಯಾಹಟ್ಟಿ ಬೆಟ್ಟ ಕುಸುಗಲ್ಲ ನಾರಿ
ದಿಟ್ಟಿಸಿ ನೋಡತಾಳ ವಿಟನ ಮಾರಿ ॥ ಪ ॥

ತೊಟ್ಟಿದ ತೋಳಿಗೆ ಮೆಟ್ಟಿದ ಕುಪ್ಪಸ
ಘಟ್ಟೆರಡು ಗಜನಿಂಬಿ ಪೊಲಿ ॥ ಅ ಪ ॥

ನಿರಿಗೆಗಳೊದೆವಳು ಬಲು ಕೊಂಕಿಲೇ
ಬಾಯಾಗ ಹಾಕ್ಯಾಳು ವಿಳೇದೆಲಿ
ತಣ್ಣನಿಂಬಿ ಹಣ್ಣಿನಂಥ ಇವಳ ಮೈಕಲಿ
ಜೋಕ ಹೊಡೀತಾಳ ಜೋಲಿಲಿ ॥ ೧ ॥

ಹೇ ಜಾಣಕೊಡನ ಹೊತ್ತು ಬಾಗುತ
ಬಳಕುತ ಬರತಾಳ ಭರದಮ್ಮಿಲೆ
ಕಣ್ಣೊಂದೆರಳಿ ನೋಟ ವಹವ್ವರೆ
ಟಣಟಣ ಹಾರುವ ಹುಬ್ಬಿನಗೇರಿ ಐಕಾರ
ಹಿಡಿದರ ಮೈ ಜುಮ್ಮೆಂದಿತು ಐದೇಣಿನ ಕಠಾರಿ ॥ ೨ ॥

ಓಲೆ ಬಾವಲಿ ಹಾಕ್ಯಾಳ ಸರಪಳಿ
ಇಟ್ಟ ಕಾಲುಂಗುರ ಝುಣಝುಣರೆನುತಲಿ
ಇಷ್ಟು ಜಾತ್ರಿಗೆ ಇವಳಲ್ಲೇ–
ಹೇ ಜಾಣತನದ ಬಗಿ
ಬ್ಯಾಹಟ್ಟಿ ನಿಬ್ಬಣಕ ತಾ ಹೋಗಿ
ತಿರುಗಿ ಬರುವದು ಸರುಹೊತ್ತಾಗಿ
ಮನಿಯೊಳಗ್ಯಾರ್ಯಾರಿಲ್ಲದ ಬಗಿ
ಕೋಳಿವಾಡಪುರ ಕಲ್ಲು ಮಾಡಿದ ಯೋಗಿ
ಲಾವಣಿ ಹೇಳತಾನ ತಾ ತಲೆದೂಗಿ ॥ ೩ ॥ ೨

---

೧ ಅದೇ ಪು. ೨೪.
೨ ಅದೇ ಪು. ೨೨.

ಇದು ಹೇಡಿ ಮುಗ್ಗಲಗೇಡಿ ಗಂಡನ ಕೂಡ ಚದುರ ಚಪಲ ಹೆಂಡತಿಯ ಒಗೆತನ :

ಯಾಕಿಷ್ಟ ಮಾಡತೈತಿ ಹರ್ಲಿ !

ಯಾಕಿಷ್ಟ ಮಾಡತೈತಿ ಹರ್ಲಿ
ಈ ಮೂಳನ ಹಂತ್ಯಾಕ ನಾ ಹ್ಯಾಂಗ ಇರಲಿ
ಕಡಕಟ್ಟು ಮಾಡಿ ನಾ ಕಾಳೆಲ್ಲಿ ತರಲಿ
ನೆರೆ ಹೊರಿ ನೋಡಿ ಇದಕ ನಾಚಿಕಿ ಬರಲಿ ॥ ಪ ॥

ಕಷ್ಟಕಂದರ ಹೊರ ಹೊಂಡ
ದಣುವಂತ ಮೂಲಿ ಹಿಡಿದ ಮಲಕೊಂಡ
ಕೂಳ್ಹಾಕುದಿಲ್ಲಂತ ಮಾಡತೈತಿ ಭಂಡ
ಇದಿ ಎಲ್ಲೋ ಕುಂತಿತ್ತ ಇದು ನನ ಗಂಡ ॥ ೧ ॥

ಅಡಿಗೀ ಮಾಡುದ ಕಣ ಗಂಡ
ಹುಡುಗರಿಗೆ ಬಿಡದಾಂಗ ಪಡಿನುಚ್ಚ ತಿಂದಾ
ಪಡಿಗೋದಿ ಹೋಳಿಗ್ಯಾಗ ಚೂರು ಬಿಡದ ತಿಂದ
ಇದರ ಹೊಟ್ಯಾಗ ಏನೈತೆವ್ವ ಶಿವಯುಮಗೊಂಡ ॥ ೨ ॥

ಇಬ್ಬರು ಕೂಡಬಾರದಿತ್ತು ನಾವ್
ಕೂಡಿದಂಥಾ ವಿಷವ್ಯಾಳೇದ್ಹೊತ್ತು
ವೊನ್ನೆ ದುರಗಿ ಬ್ಯಾನ್ಯಾಗ ಹೋಗಲಿಲ್ಲವ್ವ ಸತ್ತು
ಕೋಳಿವಾಡದ ಕಲ್ಲಯ್ಯನ ದಯ ನಮಗಿತ್ತು ॥ ೩ ॥ [೧]

ದೈವಗೇಡಿ ಗಂಡನ ಒಗೆತನ ಹೀಗಾದರೆ, ಇಬ್ಬರು ಭಂಡ ಹೆಂಡಿರನ್ನು ಆಳಬೇಕಾದ ದುರ್ಧರ ಪ್ರಸಂಗ ಬಂದಾಗ ನತದೃಷ್ಟ ಗಂಡ ಹೇಳುವ ಮಾತುಗಳಿವು :

ಇಬ್ಬರ ಹೆಂಡರ ಮಾಡಿಕೊಂಡು :

ಇಬ್ಬರ ಹೆಂಡರ ಮಾಡಿಕೊಂಡು
ಒಂದಿನ ನಿದ್ರಿ ಕಾಣಲಿಲ್ಲಾ
ಇಬ್ಬರು ಹೆಂಡರಾದರಂತ್ಹೇಳಿ
ಉಬ್ಬುಬ್ಬಿ ಬಾಳೇವ ಮಾಡಿದೆನಲ್ಲಾ ॥ ಪ ॥

ಎಮ್ಮಿಯಂಥ ರಂಡೇರು ಮೈಮೇಲೆ ಬೀಳತಾರ
ದಮ್ಮಗಟ್ಟಿ ಸಾಯತೇನೋ ಸತ್ತು ಹೋಗತೀನೋ ॥ ೧ ॥

ಹಿರೇ ಹೇಣತಿ ಮೊದಲ ಸಾಯಲಿ
ಚಿಕ್ಕ ಹೇಣತಿ ಹಿಂದಾಗಿ ಸಾಯಲಿ
ಕೋಳಿವಾಡದ ಕಲ್ಲಗ ಜೋಡು ಕಾಯ ಒಡಿಸತೀನಿ ॥ ೨ ॥ [೨]

---

೧ ಅದೇ ಪು. ೨೩.
೨ ಅದೇ ಪು. ೨೫.

ಶ್ರೀನಿವಾಸದಾಸ

(ಸು. ೧೮೬೫)

ಇವರು ಹಿಂದಿನ ಮೊಗಲಾಯಿ ಇಲಾಖೆಯ ಕಿನ್ನಾಳ ಗ್ರಾಮದವರು. ಕೆಲಕಾಲ ಉತ್ತರ ಕರ್ನಾಟಕ ಭಾಗದಲ್ಲಿದ್ದರು. ಇವರ ಅಡ್ಡ ಹೆಸರು ದೇಶಪಾಂಡೆ ಎಂದು. ಹೆಸರು ಶ್ರೀನಿವಾಸ. ಇವರು ಸುಮಾರು ೧೮೬೫ ರ ಸುಮಾರಿಗೆ ಆಗಿ ಹೋದಂತೆ ಕಾಣುತ್ತದೆ.[೧] ಇವರು ಚಿಕ್ಕವರಿದ್ದಾಗ ಕೇವಲ ಗೋಂಬೆಯಾಟ, ಭಾಗವತರಾಟಗಳಲ್ಲಿ ಮಾತ್ರ ಆಸ್ಥೆಯುಳ್ಳವರಿದ್ದಂತೆ ಕಾಣುತ್ತದೆ. ಇಂಥ ವಿದ್ಯಾವಿಹೀನರಾದ ಮುತ್ಯಾಳರು "ನಳರಾಯರೋ– ಗಂಗಾಧರ ಪಂತರೋ ಮಾತ್ರ ಆಗಬೇಕಾಗುವದು" (ಅಡುಗೆ ನೀರಿನವರು). ಇವರಿಗೆ ಗೊಂಬೆಯ ಶೀನಪ್ಪನೆಂದೂ ಕರೆಯುತ್ತಿದ್ದರು. ಅನಂತರ ಕೆಲಕಾಲ ಹಲವು ವಿದ್ಯಾರ್ಥಿಗಳಿಗೆ ಪಾಠ ಹೇಳಿದರು. ಆದರೆ ಪರಮಾತ್ಮನ ಕೃಪೆಯಿಂದ ಇವರಿಗೆ ಒಮ್ಮೆಲೇ ಜ್ಞಾನೋದಯವಾಯಿತು. ತಮ್ಮ ತೀರ್ಥಯಾತ್ರೆಯ ಸಂಚಾರದಲ್ಲಿ ಧಾರವಾಡ ಜಿಲ್ಹೆಯ ಕದರಮಂಡಲಿಗೆಗೆ ಬಂದು ಅಲ್ಲಿ ವಾಸಿಸಹತ್ತಿದರು. ಈ ಕದರಮಂಡಲಿಗೆಯಲ್ಲಿ ಅನೇಕ ದಾಸರಾಗಿ ಹೋಗಿದ್ದರು– ಹಿರೇ ಆಚಾರ್ಯರು, ರಾಮದಾಸರು ಮೊದಲಾದವರು. ಇವರೂ ಈ ಪರಮಾತ್ಮದಾಸತ್ವವನ್ನು ವಹಿಸಿದರು.

ಒಂದು ಸಲ ಶ್ರೀ ಉತ್ತರಾದಿಮಠದ ಸತ್ಯಪರಾಯಣ ಸ್ವಾಮಿಗಳು ಕದರಮಂಡಲಿಗೆಗೆ ಆಗಮಿಸಿದಾಗ, ಮಠದ ಶಿಷ್ಯರು ಶ್ರೀನಿವಾಸದಾಸರ ಬಗ್ಗೆ 'ಈತನು ಹರಿದಾಸನಾಗಿ ಸಾಧುವಿನಂತೆ ನಟಿಸುತ್ತ, ರಾಯರಂತೆ ಮೀಶೆ ಬಿಡಿಸಿದ್ದಾನೆ' ಎಂದು ಸ್ವಾಮಿಗಳೆದುರು ಚಾಡಿ ಹೇಳಿದರು. ಆಗ ಎಲ್ಲವೂ ಗೊತ್ತಿದ್ದ ಸ್ವಾಮಿಗಳು– 'ಏನು ದಾಸರೇ, ಮೀಸೆಗಳನ್ನು ಬಹು ಬಲವಾಗಿ ಬಿಡಿಸಿದ್ದೀರಿ ?' ಎಂದು ಪ್ರಶ್ನೆ ಮಾಡಿದರು. ಅದಕ್ಕೆ ಶ್ರೀನಿವಾಸರು "ನವದ್ವಾರಕ್ಕೆ ಮಹಾದ್ವಾರ. ಮಹಾದ್ವಾರಕ್ಕೆ ಮಕರತೋರಣ ಕಟ್ಟಿಸಿದ್ದೇನೆ. ತೋರಣಗಳಿಂದಲ್ಲವೆ ದ್ವಾರಕ್ಕೆ ಮಂಗಳವು" ಎಂದರು. ಆಗ ಸ್ವಾಮಿಗಳು ಯಾವುದಾದರೂ ಹಾಡನ್ನು ಹೇಳಬೇಕೆಂದಾಗ ಇವರು ಹೇಳಿದ ಹಾಡನ್ನು ಮೆಚ್ಚಿದ ಸ್ವಾಮಿಗಳು ಇವರಿಗೆ ಸೂರ್ಯವಾದ್ಯ, ಚಂದ್ರವಾದ್ಯ ಎಂಬ ಎರಡು ಝೂಂಗಟೆಗಳನ್ನು ದಯಪಾಲಿಸಿದರು.

ದಾಸರ ಶೈಲಿಯ ನಿದರ್ಶನವಾಗಿ ಈ ಕೆಳಗಿನ ಪದವನ್ನು ನೋಡಬಹುದು :

ಅರ್ಜುನಗಾನಂದಾ ಮಾಡಿದಾ ಗೋವಿಂದಾ ॥ ಪ ॥

ರಥದಿ ಮಂಡಿಸಿ ಚತುರತನದಲಿ
ಚತುರ ಹಸ್ತದಿಂ ವಾಜಿಯ ಪಿಡಿದು

---

೧ ಕರ್ನಾಟಕ ಸತ್ಪುರುಷ ಮಂಡಲ– ಆನಂದವನ ೧೯೩೫– ಪು. ೨೧.

ರಥಿಕನ ಬೆನ್ನಿಂದಿಟ್ಟುಕೊಂಡು ಸಾ
ರಥಿಯು ತಾನೆ ಅಶ್ವವ ನಡಿಸುತಲಿ
ರತಿಪತಿಪಿತನತಿ ಚಮತ್ಕಾರದಿಂ
ಪೃಥಿವಿಯ ಮೇಲೆ ನರನಟನ ತೋರುತಲಿ
ಪತಿತ ಪಾವನನು ಫಲ್ಗುಣಸಖನೂ
ನುತಿಸಿದವರ ನೆರೆ ಪಾಲಿಸುತಿಹನು
ಅತುಳ ಶಂಖದಿಂ ಭೌಂ ಭೌಂ ಎನಿಸುತ
ರಥದ ಗಾಲಿ ಛಿಟ್ ಛಿಟ್ ಛಿಟಿಲೆನುತ
ಕುದುರೆ ಖುರಪುಟಧ್ವನಿ ಫಳ್‌ಫಳ್ ಫಳ್ಳೆ
ನುತ ಸ್ಯಂದನವನು ಮುಂದಕೆ ದೂಡುತ ಗೋವಿಂದನು
ರಭಸದಿ ಭಕ್ತನೊಳಿಗಕೆ

ಮಂದಜಭವ ಮುಖ್ಯಾಮರ ವೃಂದವು
ನಂದತನುಜನಾನಂದ ಲೀಲೆಯಂ
ಛಂದದಿ ನೋಡುತ ನಭೋ ಮಾರ್ಗದೊಳ್
ಬಂದು ಕುಸುಮಗಳವೃಷ್ಟಿಯ ಸುರಿದು
ಸಿಂಧುಶಯನ ನಾಮಾಮೃತ ಸುರಿದು
ಬೃಂದಾರಕ ನಿಕರವು ಕೈಯೆತ್ತಿ
ಇಂದುಕುಲಾಧಿಪ ಪಾರ್ಥನೆ ಸೈಸೈಸೈ ಎಂದು
ದೇವದುಂದುಭಿ ಧೋಂಧೋಂ ಧೋಂ ಕಂಸಾ
ಳದ ರವ ಖಿಣಿ ಖಿಣಿ ಖಿಣಿ ಖಿಣಿ ಭೇರಿ
ನಾದ ಖಟ್ ಖಟ್ ಖಡಲ್ ಭಾರಿತಾ
ಳದಿಂ ಡಿಮಿ ಡಮರುಗದಿಂ ತದ್ಧಿಮಿ ಧಿಂಕಿಟತಾ ಹತಜಂ
ತರಿ ಧಲಾಂಗತರಿ ಕಿಣತಕಿಣಿ ಕಿಣಿ ಕಿಣಿ ಎನುತ ನರ್ತನಗೈವುತ ತೆರಳುತ ॥

ಮಂಗಳರವದಿಂ ಜಯ ಜಯ ಎನಿಸುತ
ಮಂಗಳಾಂಗಿ ರುಕ್ಮಿಣಿ ವಲ್ಲಭನು
ರಂಗಿನಿಂದ ರಥವಿಳಿದು ಗೆಳೆಯನ
ಮುಂಗೈಯನೆ ಪಿಡಿದು ಅಂಗಜನಯ್ಯ
ರಂಗುಮಣಿಯ ಉಂಗುರದಿ ಒಪ್ಪುತಲಿ
ಭಂಗಾರಕೆ ಮಿಗಿಲೆನಿಪ ದುಕೂಲದಿ
ಶೃಂಗರದಲ್ಲಿ ಉತ್ತುಂಗ ಪರಾಕ್ರಮ
ಅಂಗಳದೊಳ್ ನಲಿದಾಡುತ ರಂಗನು
ತಿಂಗಳ ಕುಲದೀಪನ್ನ ನೋಡುತಲಿ
ಭೃಂಗಾರಕ ರುಖಮಾಪತಿ ಪಾಂಡು
ರಂಗ ಕದರುಂಡಲಿಗೀಶನ ಒಡೆಯನು ತಾ ॥ ೧

೧ ಈ ದಾಸರ ಅನೇಕ ಪದಗಳನ್ನು ಕನಕಮಂಡಲಗಿಯ ಗಿರಿಯಪ್ಪನೆಂಬ ಬೇಡರವನು ಮುಖತಃ ಹೇಳುತ್ತಿದ್ದನು. ಅವನು ೧೯೩೦ ರ ಸುಮಾರು ತೀರಿಕೊಂಡನು.

ಒಂದು ಸಲ ದಾಸರು ಧಾರವಾಡಕ್ಕೆ ಹೋದಾಗ ಗುಂಡೇರಾಯನೆಂಬ ಸದ್ಗೃಹಸ್ಥನು ಅವರಿಗೆ ಏಳು ಬಿಲ್ಲಿ ದೇಶಾವರಿ ಕೊಟ್ಟನು. ಆಗ ದಾಸರು ಹೀಗೆ ಅಂದರು :

ಯಾತಕೆ ಹೋದೆವು ದುರುಳನ ಮನೆಗೆ
ಪಾತಕಿ ಇವನು ಛೀ ಛೀ ಛೀ
ನೀತಿವಂತನೆಂದರಿಯದಲೆ ಈ
ಪಾತಕನಲ್ಲಿಗೆ ಥೂ ಥೂ ಥೂ ॥ ಪ ॥

ಏಳುಬಿಲ್ಲಿಯ ಕೊಡಲಿಕ್ಕೆ ಬಂದಾ
ಖೂಳನಿವನು ಈ ಮನೆಯೊಳಗೆ
ತಾಳಲಾರದೆ ಬಿಸಾಟಿ ಬಂದೆನು
ಶ್ರೀಲತಾಂಗಿಯ ರಮಣ ಗೋವಿಂದಾ ॥ ೧ ॥

ಗುಂಡಪ್ಪನು ಗಾಗುಂಡಪ್ಪನು ರುಖು
ಗುಂಡಪ್ಪನು ನಾನಿವನರಿಯೆ
ಮಂಡರಂತಲಿ ದಿನಗಳೆವುತಲಿ ನಮ
ಕಂಡು ಮಾನ್ಯಮಾಡದೆ ಹೋದನು ॥ ೨ ॥

ಹರಿಸರ್ವೋತ್ತಮನೆಂದು ಝಾಂಗಟಿ
ಬಾರಿಪದಾಸರು ನಾವ್ ಹೌದು
ವರ ಕದರುಂಡಲಿಗೀಶನ ಒಡೆಯ ನಮ್ಮ ಪಾಂ
ಡುರಂಗನ ದಾಸನೆಂದು ತಿಳಿಯದಲೆ ॥ ೩ ॥

ಹೀಗೆ ದಾಸರು ಹೋದ ಹೋದಲ್ಲೆಲ್ಲ ಪ್ರಾರ್ಥನಾ ಪದ್ಯಗಳನ್ನು ರಚಿಸಿದರು. ಆದರೆ, ಇವು ಪುರಂದರದಾಸರ ಪದಗಳಂತೆ ಸರಳವಲ್ಲ; ಬಹು ತಿಟ್ಟು. ಆದ್ದರಿಂದಲೇ, 'ಕನಕದಾಸನ ಗುಟ್ಟು, ಶ್ರೀನಿವಾಸದಾಸನ ತಿಟ್ಟು' ಎಂದು ಹೇಳುವುದುಂಟು. ಇವರು ೧೮೮೫ ರ ಸುಮಾರು ದೇಹವಿಟ್ಟರು. ಇವರ ಕೃತಿಗಳೆಲ್ಲವೂ ದೊರಕಿದ್ದರೆ ಕನ್ನಡ ಸಾಹಿತ್ಯ ಇನ್ನೂ ಶ್ರೀಮಂತವಾಗಬಹುದಿತ್ತು.

—

ಕೂಡಲೂರೇಶ

ಗುರುದೇವ ರಾನಡೆಯವರು ತಮ್ಮ ಪ್ರವಚನಗಳಲ್ಲಿ ' ಕೂಡಲೂರೇಶ ' ಎಂಬ ಅಂಕಿತವಿದ್ದ ಹಲವು ಪದಗಳನ್ನು ಹೇಳಿಸುತ್ತಿದ್ದರು. ಇವುಗಳಲ್ಲಿ ಕೆಲವು ಪದಗಳನ್ನು 'ಕನ್ನಡ ಸಂತರ ಪರಮಾರ್ಥ ಪಥ'ದಲ್ಲಿ ಉದ್ಧರಿಸಲಾಗಿದೆ. ಗುರುದೇವ ರಾನಡೆಯವರು ಉಲ್ಲೇಖಿಸಿದ ಪದಗಳನ್ನು ನೋಡಿದರೆ, ಈ ಅನುಭಾವಿಯ ಕವಿತಾಶಕ್ತಿ, ಆಳವಾದ ಅನುಭವ, ತತ್ವಜ್ಞಾನಗಳ ಕಲ್ಪನೆ ಬಾರದಿರದು.

ಈ ಸಂಸಾರ ರಾಟಳದ ಗುಂಡಿಗೆ. ಕಾಳಿಯ ಕಂಕಾಳಿಯ ಮುನ್ನ, ಅದಕ್ಕೂ ಮುನ್ನ– ಆ ಕಾಲದಿಂದಲೂ ಪುನರಪಿ ಜನನಂ, ಪುನರಪಿ ಮರಣಂ, ಪುನರಪಿ ಜನನೀ ಜಠರೇ ಶಯನಂ– ಎಂಬಂತೆ ಜೀವನಚಕ್ರ ಸಾಗಿದೆ. ' ನಾ ತೊಟ್ಟ ದೇಹದಾ ಲೆಕ್ಕಾ ಇಡುವರಾ ಸೊಕ್ಕ, ಯಮಾ ನೋಡಿ ನಕ್ಕ. ' ಚೌರ್ಯಂಶಿಲಕ್ಷದಾಯೋನಿಗಳಲ್ಲಿ ಈ ಜೀವ ಹಾಯ್ದು ಬಂದಿದೆ. ಮಗು ಹುಟ್ಟಿದಾಗ ಸುತ್ತಲಿನವರು ನಗುತ್ತಾರೆ; ಮಗು ಅಳುತ್ತದೆ. ಸತ್ತಾಗ, ಸುತ್ತಲಿನವರು ಅಳುತ್ತಾರೆ, ಹೆಣ ಸುಮ್ಮನೆ ಶಾಂತವಾಗಿ ಬಿದ್ದಿರುತ್ತದೆ. ಹುಟ್ಟಿದಾಗ, ಮಗು ಅಳುವದೇಕೆ ? ತಾನು ತನ್ನ ನಿಜವಾಸ್ತವ್ಯವಾದ ಪರಮಾತ್ಮನನ್ನು ಬಿಟ್ಟು ಬಂದೆನೆಂದೇ ? ಈ ಬಗೆಗೆ ಕೂಡಲೂರೇಶ ಕವಿ ಹೀಗೆ ಹೇಳಿದ್ದಾರೆ :

ಅಳುತಿದ್ಯಾ ಕಂದಾ ಅಳುತಿದ್ಯಾ– ನೀನು–
ತಿಳಿಯದೆ ಮರ್ತ್ಯಕೆ ಮರೆತು ಬಂದೆನೆಂದು ॥ ಪ ॥

ಮಾಯದ ತೊಟ್ಟಿಲೊಳು ಕೈಕಾಲು ಒತ್ತುತ
ಮೋಹದ ಸಿಂಬಿಯೊಳು ಹೊರಳಾಡುತ
ಜೀವ ಮನಸು ಎಂಬ ತಗಣಿ ಉಂಗುಟಕ ಹತ್ತಿ
ದೇಹಕೆ ಯಳ್ಳಷ್ಟು ಸುಖವಿಲ್ಲೆಂದು ॥ ೧ ॥

ತಂದೆ ತಾಯಿಗಳಿಂದ ಬಂಧನದೊಳು ಬಿದ್ದೆ
ಮುಂದೇನು ಗತಿಯೆಂದು ಕೆಡುವೆನೆಂದು
ಅಂದ ಛಂದದಿ ಬಂದು ಮೊಲೆಕೊಟ್ಟು ಹಾಲೆರೆದು
ಬಂದಂಥ ವಿಷಯಕ್ಕೆ ಬಲಿಯ ಹಾಕುವರೆಂದು ॥ ೨ ॥

ನಾವು ಮಗನಿಗೆ ಮದುವೆ ಮಾಡುವೆವೆಂದು
ತಾವು ಬಿದ್ದ ಕುಣಿಯಲ್ಲಿ ಎನ್ನ ನೂಕುವರೆಂದು

ಜಾವ ಜಾವಕೆ ಒಮ್ಮೆ ನೋಡಿ ಹಿಗ್ಗುತಲಿ
ದೇವ ಕೂಡಲೂರೇಶ ಕೂಡಿಕೊ ಎನುತಲಿ ॥ ೩ ॥ [1]

ಈ ಪದ್ಯದ ಬಗೆಗೆ ಡಾ. ರಾನಡೆಯವರು " ಈ ಅಂದವಾದ ಪದವು ಸಂಗೀತಜ್ಞರಾದ ಸಾಧಕರಿಗೆ ಒಂದು ಅತ್ಯುತ್ತಮ ವಿಷಯವನ್ನು ಸಲ್ಲಿಸಿರುವದು. ಈ ಸುಮಧುರವಾದ ಕನ್ನಡ ಗೀತವನ್ನು ಕೇಳಿದವರು, ಕೂಡಲೇ ವರ್ಡ್ಸ್‌ವರ್ಥ ಕವಿಯ 'ಅಮರತ್ವದ ಸೂಚನೆಗಳ ಗೀತ' ವನ್ನು ನೆನೆಯದಿರರು " ಎಂದು ಹೇಳುತ್ತಾರೆ.[2] 'ಜಾವ ಜಾವಕೆ ನೋಡಿ ಹಿಗ್ಗುತಲಿ' ಎಂಬ ಸಾಲು ವರ್ಡ್ಸ್‌ವರ್ಥನ ಈ ಕೆಳಗಿನ ಸಾಲುಗಳನ್ನು ಜ್ಞಾಪಕಕ್ಕೆ ತಾರದಿರದು :

Not in entire forgetfulness
And not in utter nakedness
But trailing clouds of glory do we come
From God, who is our home :
Heaven lies about us in our infancy !
Shades of the prison house begin to close
Upon the growing boy.
(Intimations of Immortality)

ನಾವು ಚಿಕ್ಕವರಿದ್ದಾಗ ಸ್ವರ್ಗ ನಮ್ಮ ಕೈವಾರಿನಲ್ಲಿರುತ್ತದೆ. ಬೆಳೆದಂತೆಲ್ಲ ವರ್ಡ್ಸ್‌ವರ್ಥ ಕವಿ ಹೇಳಿದ ಹಾಗೆ 'Shades of the prison house begin to close.' ಈ ಜಗತ್ತೆಂಬ ಸೆರೆಮನೆಯ ಕರಿನೆರಳು ನಮ್ಮ ಸುತ್ತೆಲ್ಲ ವ್ಯಾಪಿಸುತ್ತದೆ. ಕೂಡಲೂರೇಶರ ಮೇರೆಗೆ ಈ ನೆರಳಿನ ಬಾಧೆ ಉಂಟಾಗುವುದು ನಮ್ಮ ಅಜ್ಞಾನದ ಉಪಾಧಿಯ ಮೂಲಕ.

ಏನು ಹೇಳಲಿ ಎನ್ನ ಅಜ್ಞಾನವಶದಿಂದ ನಾನು ನನ್ನನು ಮರೆತೆ ॥ ಪ ॥

ನಾನಾ ಜನ್ಮವ ತಿರುಗಿ ಹೀನ ಮನೆ ಸಂಸಾರಕಾಗಿ
ಶ್ವಾನಸೂಕರನಂತೆ ಮನೆಮನೆ ಖೂನವಿಲ್ಲದೆ ವ್ಯರ್ಥ ತಿರುಗಿದೆ ॥ ಅ ಪ ॥

ಸಾಧಕ ತನ್ನ ಪೂರ್ವದ 'ಪಾಪ' ಜೀವನವನ್ನು ದಾಟಿ ಪವಿತ್ರ ಜೀವನದಲ್ಲಿ ಕಾಲಿಡುತ್ತಾನೆ. ಕೂಡಲೂರೇಶರು 'ಕುರುಬರೋ ನಾವು ಕುರುಬರೋ' ಎಂಬ ಪದದಲ್ಲಿ ಸಾಮತಿಯ ಮೂಲಕ ಈ ಭಾವವನ್ನು ಸುಂದರವಾಗಿ ವರ್ಣಿಸಿದ್ದಾರೆ :

ಕುರುಬರೋ ನಾವು ಕುರುಬರೋ ॥ ಪ ॥

ಹೀಗೆ ಈಸೊಂದು ಕುರಿಮರಿ
ಕಾಯ್ದುಕೊಂಡಿರುವಂಥ ॥ ಅ ಪ ॥

ಆರೈದು ಮೂರಾರು ಹತ್ತು ಟಗರುಗಳು
ಮಾಯ್ಯಾಗಿ ಹೋಗ್ಯಾವ ಈ ಊರ ಒಳಗೆ
ಬ್ಯಾರೆ ಇನ್ನೂರದಾ ಹದಿನಾರು ಸಾವಿರ
ಸೂರ್‍ಯಾಗಿ ಹೋಗಿರುವ ಕುರಿಮರಿ ಕಾಯ್ವಂಥ ॥ ೧ ॥

೧ ಕನ್ನಡ ಪರಮಾರ್ಥ ಸೋಪಾನ– ೧೯೬೯– ಪು. ೬.
೨ ಕನ್ನಡ ಸಂತರ ಪರಮಾರ್ಥ ಪಥ ೧೯೬೨– ಪು. ೧೪.

ಒಳಗೆ ಹೊರಗೆ ಒಂದೇ ಪರಿಯಲ್ಲಿ ನಾರುವದು
ಬಲು ಜಿಡ್ಡುನಾರುವದು ಇನ್ನು ಬೇರೆ
ಕೊಳಿಕೊಳಿತ ಮಲಮೂತ್ರ ತುಂಬಿ ಸೋರುತಲಿದೆ
ಹಳೆಯ ದೋಷದ ರಗಟೆ ಎಳಕೊಂಡು ತಿರುಗುವಂಥ ॥ ೨ ॥

ಏರು ಹಾಳಾಗಲಿ ನೆಲೆಯು ಬೀಳಾಗಲಿ
ತೋಳ ಒಯ್ಕಲಿ ನಮ್ಮ ಕುರಿಮರಿಗಳನು
ಭಾಳಾಕ್ಷಹರ ನಮ್ಮ ಕೂಡಲೂರೇಶನ
ಒಳಗೆ ಹೊರಗೆ ಹೀಗೆ ಕಾಯ್ದುಕೊಂಡಿರುವಂಥ ॥ ೩ ॥ ೧

–ಕ್ರಿಸ್ತ ಆತ್ಮಗಳನ್ನು ಕಾಯುವ ಕುರುಬ; ಗುರುಲಿಂಗ ಜಂಗಮ ಮಹಾರಾಜರು ನೇಕಾರ ವೃತ್ತಿಯನ್ನು ಬಿಟ್ಟು ಕುರಿ ಕಾಯ್ದರು; ಕನಕದಾಸರು ಕುರುಬದಾಸರೆಂದು ಹೇಳಿಕೊಂಡರು; ಉಮದಿಯ ಭಾವೂಸಾಹೇಬ ಮಹಾರಾಜರು ತಮ್ಮನ್ನು ಕುರುಬನೆಂದೇ ಕರೆದುಕೊಂಡರು.

ಗುರುವಿನ ಪುಣ್ಯದಿಂದ ಸಾಧಕ ಮಹಾಬೆಳಕನ್ನು ಕಾಣುತ್ತಾನೆ :

ಕಾಣಬಾರದಂಥ ವಸ್ತು ಕಂಡೆನೊ ಗುರುರಾಯಾ
ಕಂಡ ಸುಖವ ಕೇಳಿದರೆ ಹೇಳಲಿಕ್ಕೆ ಬಾರದಯ್ಯಾ ॥

–ಎಂದು ಈ ಕವಿ ಒಂದೆಡೆಗೆ ಹೇಳಿದರೆ, ಗುರುವಿನ ಮಹತ್ವವನ್ನು ಮತ್ತೊಂದೆಡೆಗೆ ಸುಂದರವಾಗಿ ವರ್ಣಿಸಿದ್ದಾರೆ.

ಗುರು ಭಕ್ತನಿಗಾಗಿ ತನ್ನ ಮೇಲೆಯೇ ಎಲ್ಲ ಬಾಧೆಗಳನ್ನೂ ತೆಗೆದುಕೊಳ್ಳುತ್ತಾನೆ ಭಗವಾನ್ ಬುದ್ಧದೇವ ಹೀಗೆ ಹೇಳುತ್ತಿದ್ದರಂತೆ :

ಕಲಿಕಲುಷಕೃತಾನಿ ಯಾ ಲೋಕೇ
ಮಯಿ ನಿಪತಂತು, ವಿಮುಚ್ಯತಾಂ ಹಿ ಲೋಕಃ

–" ಎನ್ನಳಲು, ಎನಗಿರಲಿ– ಜಗವೆಲ್ಲ ನಗುತಿರಲಿ " ಎಂದ ಹಾಗೆ, ನಮಗಾಗಿ, " ಬಾಧೆ ತಕ್ಕೊಂಡ ನಮ್ಮ ಕೂಡಲೂರೇಶ. " ಇಂಥ ಗುರ್ವಾಜ್ಞೆಯನ್ನು ತಲೆಯಲ್ಲಿ ಹೊತ್ತು ಪಾಲಿಸಿದವನಿಗೆ ನರನೆನ್ನಬಹುದೇ ? ಅವನು ಪರಮಾತ್ಮನು.

ಗುರುವೆ ನಿಮ್ಮಾಜ್ಞೆಯನು ಮೀರದೆ ನಡೆದವನು
ನರನೆನ್ನಲು ಬೇಡಾ– ಅವ ಪರಮಾತ್ಮನು ॥ ಪ ॥

ಅರಿಯದ ಪ್ರಾಣಿಗಳು– ಅವರೇನು ಬಲ್ಲರು
ಪರಕೆ ಪರತರವಾದ ಪರವಸ್ತು ಅವನು ॥ ಅ ಪ ॥

ಹೆಪ್ಪು ಹಾಲಿಗೆ ಕೊಡಲು, ತುಪ್ಪ ಅದರೊಳಗಾಗಿ
ತುಪ್ಪ ಕೂಡುವದೆ ಮರಳಿ ಹಾಲಿನೊಳು
ನಿಷ್ಪತ್ತಿ ನಿಜರೂಪನಾದಂಥ ಪುರುಷನು
ಅಪ್ಪಿಸಂಸಾರಕ್ಕೆ ಒಳಗಾಗನವನು ॥ ೧ ॥

೧ ಕನ್ನಡ ಪರಮಾರ್ಥ ಸೋಪಾನ– ಪು. ೩೩–೩೪.

ಮುತ್ತು ನೀರೊಳು ಪುಟ್ಟಿ– ಮತ್ತೆ ನೀರಾಗುವದೆ ?
    ಮುತ್ತು ಲಕ್ಷಾಂತರಕೆ ಬೆಲೆಯಾದೀತು
ತತ್ವದ ಜ್ಞಾನಿಯವನು– ಹುಟ್ಟುವ ನರನಲ್ಲ
    ಅತ್ಯಂತ ಆನಂದ ಪೂರ್ಣನವನು ॥ ೩ ॥

ಗರುಡನಮಂತ್ರವ ಕಲಿತಿರುವಾತಗೆ
    ಉರಗ ಕಚ್ಚಿದರೇನು ವಿಷವೇರುವದೆ ?
ಪರಿಪರಿ ವಿಷಯದೊಳು ಮುಳಗಾಡಿದರಾತಗೆ
ಧರ್ಮ–ಕರ್ಮಗಳಿಂದ ಆತಗೇನು ? ॥ ೪ ॥ ೧

ಈ ಮಾತು ಬಾದರಾಯಣರ "ಅನಾವೃತ್ತಿಃ ಶಬ್ದಾತ್" ಎಂಬ ಮಾತನ್ನು ಜ್ಞಾಪಕಕ್ಕೆ ತರುತ್ತದೆ. ಗುರುವಿನ ಕರುಣೆಯಿಂದ ಪರಮಾತ್ಮ ಸ್ವರೂಪದ ಸವಿಯನ್ನುಂಡ ಭಕ್ತ ಈ ಲೋಕದ ನರನಲ್ಲ. ಅವನ ಜಗತ್ತೇ ಬೇರೆ. ಈ ದೈವೀ ಉನ್ಮಾದಾವಸ್ಥೆಯನ್ನು ದಾಸಶ್ರೇಷ್ಠರಾದ ಪುರಂದರ ದಾಸರು ಹೀಗೆ ವರ್ಣಿಸಿದರು :

ಹುಚ್ಚು ಹಿಡಿಯಿತು ಎನಗೆ ಹುಚ್ಚು ಹಿಡಿಯಿತು
    ಅಚ್ಯುತನ ನಾಮವೆಂಬ ಮೆಚ್ಚು ಮದ್ದು ತಲೆಗೆ ಏರಿ ॥ ಪ ॥

ವಾಸುದೇವ ಹರಿಯೆ ಎಂದು ವದನದಿಂದ ಒದರುವೆ ಮಾಯ
    ಪಾಶವೆಂಬ ಅಂಗಿಯನ್ನು ಹರಿದು ಹರಿದು ಹಾಕುವೆ
ಕೇಶವಗೇರಿಸಿದ ಹೂವ ಮುಡಿದು ಕುಣಿದು ಆಡುವೆ– ಕೆಟ್ಟ
    ದೋಷವೆಂಬ ಗೋಡೆಯನ್ನು ಕೆದರಿ ಕೆದರಿ ಹಾಕುವೆ ॥

ಅದರಂತೆಯೇ ಕೂಡಲೂರೇಶರೂ ಕೂಡ ಈ ದೈವೀ ಉನ್ಮಾದಾವಸ್ಥೆಯನ್ನು ಹೀಗೆ ವರ್ಣಿಸಿದ್ದಾರೆ :

ಎಂಥಾ ಹುಚ್ಚು ಹಿಡಿದೀತವಗ
    ಯಾರು ಕಲಿಸಿ ಬಿಟ್ಟರವ್ವಾ
ಅಂತು ಅವನು ಏನೇನಾದ
    ಸಂತಾನಳಿದು ನಿಃಸಂತಾನಾದಾ ॥ ಪ ॥

ಕಟ್ಟಿದ ಗೋಡೆ ಕೆಡವುತಲಾನ
    ಉಟ್ಟ ಅರಿವಿ ಹರಿವುತಲಾನ
ಅಟ್ಟ ಗಡಿಗಿಯೆಲ್ಲನೆ ಒಡೆದು
    ಹುಟ್ಟಾ ಮುರಿದು ಬಿಟ್ಟಾನವ್ವಾ ॥ ೧ ॥ ೨

ಭಗವಂತನ ನಾಮ ರೂಪಗಳನ್ನು ತನ್ನಲ್ಲಿ ತುಂಬಿಕೊಂಡ ಭಕ್ತನ ಉನ್ಮಾದಾವಸ್ಥೆ ಇದು.

ಹೀಗೆ, ಅನೇಕ ಅನುಭಾವ ಪದಗಳನ್ನು ಬರೆದ ಕೂಡಲೂರೇಶರ ಪದಗಳು ಒಂದೆಡೆಗೆ ಸಿಗದಿರುವುದು ವ್ಯಸನದ ಮಾತು.

—

೧ ಅದೇ ಪು. ೯೨–೯೩.

೨ ಅದೇ ಪು. ೯೫.

ಶ್ರೀನಿವಾಸತೀರ್ಥರು

ಇವರು ಶಾಂತಕವಿಗಳ ಪೂರ್ವಜರು. ಇವರು ಸಂಸ್ಕೃತದಲ್ಲಿ ' ಶರ್ಕರಾ ' ಎಂಬ ವ್ಯಾಖ್ಯಾನವನ್ನು ಬರೆದದ್ದರಿಂದ ಈ ಮನೆತನಕ್ಕೆ ' ಸಕ್ಕರಿ ' ಎಂಬ ಹೆಸರು ಪ್ರಾಪ್ತವಾಯಿತು. ಇವರು ಸಂಸ್ಕೃತದಲ್ಲಿ ವ್ಯಾಖ್ಯಾನರಚನೆ ಮಾಡಿದಂತೆಯೇ ಕನ್ನಡದಲ್ಲಿಯೂ ಸಾತೇನಹಳ್ಳಿಯ ಶಾಂತೇಶನನ್ನು ಕುರಿತು ಪರಾಕುಗಳನ್ನು ರಚಿಸಿದ್ದಾರೆ. ಕನ್ನಡದಲ್ಲಿಯ ಪರಾಕುಗಳನ್ನು ಇಲ್ಲಿ ಕೊಡಲಾಗಿದೆ :

ಶ್ರೀಕಾಂತನಾಜ್ಞೆಯಿಂ ವಸುಧಿಯೊಳ್ ಜನಿಸಿದೆ, ಏಕವಿಂಶತಕುಭಾಷ್ಯವನು ಧಿಕ್ಕರಿಸಿದೆ, ಲೋಕದೊಳ್ ಸಜ್ಜನರಿಗೆ ಸದ್ಭಾಷ್ಯವಿರಿಸಿದೆ, ಕಲಿಯುಗದಿ ಮಧ್ವಾವತಾರದಿಂ ನಳಿನನಾಭನಮತವನು ನಿಲಿಸಿದೆ, ನಿಗಮ ಶಾಸ್ತ್ರಾನುಸಾರ ಇಳೆಯೊಳ್ ದುರ್ವಾದಿಗಜಮಸ್ತಕಾಂಕುಶವೆನಿಸಿದೆ, ಭಳಿಭಳಿರೆ ನಮ್ಮ ಗುರು ಮರುತಾವತಾರಾ, ಅಚ್ಯುತ ಪ್ರೇಕ್ಷರ ಕರದಿ ಆಶ್ರಮ ಧರಿಸಿದಾತಾ, ಮತ್ಸ್ಯಾದ್ಯನಂತಾವತಾರ ಪರಮ ಸೇವ್ಯಾ, ತ್ರಿವಿಕ್ರಮಾಚಾರ್ಯರಿಗೆ ನಿಶ್ಚಯಜ್ಞಾನ ತಪ್ತ ಮುದ್ರಿಕೆಯನ್ನಿತ್ತು ಮೂರಾವತಾರ ತೋರಿದಾತಾ. ಅಚ್ಚುತನ ನಾಭಿಕಮಲಜಪಟ್ಟಕ್ಕೆ ಮುಂದೆ ಬಾಹೋ ಆತ, ಈತ ವಾತಜಾತ ವೇದವಿಖ್ಯಾತ ಹರಿಪಾದಸರಸಿಜೋದ್ಭೃಂಗ ಸಕಲ ಸುರಸಂಗ, ಭಕ್ತಕೃಪಾಂಗ, ದುರಿತ ಭಯಭಂಗ, ಸಕ್ಕರೀ ಶ್ರೀನಿವಾಸನಂತರಂಗ ಶ್ರೀಮತ್ ಶಾಂತಪುರವರಾಧೀಶ ಬಹುಪರಾಕ ಸಚ್ಛಾಸ್ತ್ರ ಪ್ರಿಯಾ ಸಚ್ಛಾಸ್ತ್ರ ಸೇವಾಮವಧಾರಯಾತ್ ॥

ವೀರಮುಂಡೆಯನೂರಿ, ಕರಿದಿವೀಣೆಯ ಪಿಡಿದು, ನೂರು ಕೋಟಿರಾಮಾಯಣಪಾರಾಯಣ ಗಾಯನರೂಪವಿಲಾಸಾ, ಕಿಂಪುರುಷ ಖಂಡದಲಿ ವಾಸಾ, ಪಂಕಜನಾಭನದಾಸಾ, ಲಂಕಾಧಿಪ ರಾವಣ ಸುತ ಸಹೋದರನಾಶಾ, ಲಂಕವಿಭೀಷಣಗೆ ಸ್ಥಿರಸಾಮ್ರಾಜ್ಯ ಕೊಟ್ಟಂಥಧೀಶ, ಹರಿ ಮಹಾ ಜ್ಞಾನದಲಿ ನಿನಗೆ ಸರಿಯಿಲ್ಲ, ಹರಿಯನಲ್ಲದೆ ಅನ್ಯ ವಿಷಯನಲ್ಲ, ಹರಿನಿಂದಾ ಪರೋಕ್ಷ ತಾನುವನಲ್ಲಾ, ಹರಿದ್ವೇಷರಿಗೆ ತಮಸಿನ ಹೊರ್ತು ಇನ್ನೊಂದಿಲ್ಲಾ, ಹರಿಯ ಮತವೇ ಹನುಮನ ಮತ, ಹನುಮನ ಮತವೇ ಹರಿಯ ಮತ, ಹನುಮನೊಲಿದ ಸುಗ್ರೀವಗೊಲಿದನು ಹರಿ, ಹನುಮ ಬಿಟ್ಟ ವಾಲಿಯನು ಬಿಟ್ಟನು ಹರಿ. ಹನುಮನಾ ನೀ ಜೀವರೋತ್ತಮಪ್ಪಾ. ಸುಮ್ಮನೇ ಸಲಹು ನಮ್ಮ, ಭಾವೀಬ್ರಹ್ಮಾ, ಶ್ರೀಮತ್ ಶಾಂತಪುರವರಾಧೀಶ ಬಹು ಪರಾಕ ಪುರಾಣಪ್ರಿಯಾ ಪುರಾಣ ಸೇವಾಮವಧಾರಯಾತ್ ॥

ಪಾರೀಕಿತನುರಕ್ಷಿಸುತ ಮುನಿವೇದವ್ಯಾಸ ಕೃತ ಪಂಚಮಸ್ಕಂದಗದ್ಯರೂಪ ವಿಲಾಸಾ ಶುಕಶೌನಿಕರಿಂದ ಪ್ರಕಟಿಸಿತು ಈ ದೇಶಾ ಭಾಪುರೀ ಸಕ್ಕರೀ ಶ್ರೀನಿವಾಸೇಶಾ ಶ್ರೀಮತ್ ಶಾಂತ ಪುರವರಾಧೀಶ ಬಹು ಪರಾಕ ಗದ್ಯಪ್ರಿಯಾ ಗದ್ಯಸೇವಾಮವಧಾರಯಾತ್ ॥

ಗುಂಡಕ್ರಿಯರಾಗದಿಂ ಬಂಡಿಯಂ ಕರಗಿಸಿದೆಯೋ ನಾರದರ ಅಹಂಕಾರವಂ ಖಂಡಿಸಿದೆಯೋ ಖಳಕುಲಾ ಖಂಡಾ, ಕದನ ಪ್ರಚಂಡಾ, ರಾಗ ತಾಳ ಮ್ಯಾಳದಲಿ ಜಾಣಾ, ನೀ ಸುಪ್ರವೀಣಾ, ಸಕಲ ಗುಣ ಧಾಮಾ, ಶ್ರೀ ಸೋಮಸಕ್ಕರೀ ಶ್ರೀನಿವಾಸನ್ನ ಸ್ವಾಮಿ, ಜಗದೊಳ್ ಆಗಮೋತ್ಸವ ಭೋಗಮೂರುತಿ ಶ್ರೀಮತ್ ಶಾಂತಪುರವರಾಧೀಶ ಬಹು ಪರಾಕ ಪದ್ಯಪ್ರಿಯಾ ಪದ್ಯಸೇವಾಮವಧಾರಯಾತ್ ॥

ಛಂದದಾಭೇರಿ ದುಂಧುಬಿ ಧಾಂ ಧಾಂ ಎಂದು ಕಣಕಣಿಸುತ್ತ, ಕನಕ ತಪ್ಪಟಿಕಾಳಿ ಭೌಂ ಭೌಂ ಎಂದು ಭೋರಿಡುತ್ತ, ಶಂಖಗಳು, ಕೋಳಲು, ಶ್ರುತಿ ಸನಾಯಿ ಘನಮಹಿಮ ನಿಮ್ಮ ವಿಭವಕ್ಕೆ ಇನ್ನಾರು ಸರಿಯೇ ಕನಕ ಗೋಪುರ ಗರುಡಸ್ಥಂಭ ಮಧ್ಯದಿ ಸುಸ್ವರವಾದ್ಯವನು ಗರಿಯೇ, ಈ ಶಬ್ದವನು ಕೇಳಿ ಅಸುರರೆದಿಯು ಬಿರಿಯೇ, ಸುರರು ಸಂಭ್ರಮದಿಂದ ಪೂಮಳೆಗರಿಯೇ, ಭಾಪುರೇ ಸಕ್ಕರೀ ಶ್ರೀನಿವಾಸನ್ನ ಧೊರೆಯೇ, ಶ್ರೀಮನ್ ಶಾಂತಪುರವರಾಧೀಶ ಬಹು ಪರಾಕ, ಸರ್ವವಾದ್ಯಪ್ರಿಯಾ ಸರ್ದವಾದ್ಯಸೇವಾಮವಧಾರಯಾತ್ ॥

ಇಂದ್ರಲೋಕದಿಂ ಮಂದಗಮನೆಯರು ಛಂದದಿಂದಲಿ ಬಂದು ಒಂದಿಸುತಾರೆ, ಇಂದುಮುಖಿ ದ್ರೌಪದಿಗೆ ಸೌಗಂಧಿಯನೆ ಮುಡಿಸಿ ಅಂದು ಕೀಚಕನ ಕೊಂದು ಬಿಸುಟಿದಿ, ಆನಂದಭರಿತನೆ ನಿನ್ನ ನಾಟಕ ನೋಡಲಿಬೇಕೆಂದು ತುಂಬರರು ನಾರದರು ರಂಭೆ ಊರ್ವಸಿ ಎಂಬ ಅಪ್ಸರ ಸ್ತ್ರೀಯರು ಕುಂಭ ಕುಚಗಳಿಗೆ ಕುಂಕುಮಗಂಧವನೇ ಲೇಪಿಸಿ, ಹಾವಭಾವದಿಂ ಅಭಿನಯಂ ಪಿಡಿದು, ಭರತಶಾಸ್ತ್ರಾಂತರಂಗೆ ಜಗನ್ಮೋಹನಾಂಗೆ, ವಜ್ರ ವೈಡೂರ್ಯ ಪುಷ್ಪ ಸ್ವರ್ಣ ಖಚಿತ ವಿಚಿತ್ರ ಝೇಂಕಾರ ಸಕಳಾನಂದ ಇತರ ಭೂಸುರರು ಸಭೆಗೆ ಶೋಭಿಸು ಕುಂತಿಯಾ ಕಂದಾ ನೀ ಸಾರ್ವಭೌಮಸಕಲ ಗುಣಧಾಮ ಶ್ರೀ ಸೋಮ ಸಕ್ಕರೀ ಶ್ರೀನಿವಾಸನ್ನ ಸ್ವಾಮೀ, ಜಗದೊಳ್ ಆಗಮೋತ್ಸವ ಭೋಗಮೂರುತಿ ಶ್ರೀಮತ್ ಶಾಂತಪುರವರಾಧೀಶ ಬಹು ಪರಾಕ ನರ್ತನಪ್ರಿಯಾ ನರ್ತನಸೇವಾಮವಧಾರಯಾತ್ ॥

—

ಬೆರಟೂರೇಶ

ಇವರ ಕಾಲ, ಸ್ಥಳ ತಿಳಿಯಲಿಲ್ಲ. ಗುರುದೇವ ರಾನಡೆಯವರು ತಮ್ಮ 'ಕನ್ನಡ ಸಂತರ ಪರಮಾರ್ಥ ಪಥ'ದಲ್ಲಿ (ಪು. ೨೮೨) ಬೆರಟೂರೇಶನ ಈ ಕೆಳಗಿನ ಕವನವನ್ನು ಉದ್ಧರಿಸಿದ್ದಾರಲ್ಲದೆ, ಇದರ ಬಗೆಗೆ "ಪ್ರಸ್ತುತ ಕವನವು ಪೂರ್ಣ ಪಾರಮಾರ್ಥಿಕ ಪ್ರಜಾಪ್ರಭುತ್ವದ ಅತ್ಯುತ್ತಮ ನಿದರ್ಶನ ವಿರುವದು" ಎಂದು ಹೇಳಿದ್ದಾರೆ :

ಇದೆ ಅನುಭವಮಂಟಪವು ॥ ಪ ॥
ಇದು ಘನತರ ಮೋಕ್ಷದುನ್ಮನಿಯ ಸಾಧನವು ॥ ಅ ಪ ॥

ಇದೆ ಗುರುಚರಲಿಂಗ ಸ್ತೋತ್ರ
ಇದೆ ಕರಸ್ಥಲ– ಇಷ್ಟ ಪ್ರಣವ ॥

ಇದೆ ಷಟಸ್ಥಲ– ಬ್ರಹ್ಮಘೋಷ
ಇದೆ ಪ್ರಾಂಜಳ ಬ್ರಹ್ಮಜ್ಞಾನ ॥
ಗುರುಂತರ ಶರಣನೆ ಕರೆಸಿ
ಪರಮಾತ್ಮನನುಭವಮಂಟಪ ವಿಸ್ತರಿಸಿ ॥
ಉರುವ ಕನ್ನಡಿಯ ಶೃಂಗರಿಸಿ
ಗುರುಮೂರ್ತಿ ಜಂಗಮರಂಘ್ರಿಪೂಜಿ ವಿಸ್ತರಿಸಿ ॥

ಕರಡಿ ಕಂಸಾಳ ರುದ್ರವೀಣೆಯು
ಮೆರೆವ ಝಾಂಗಟಿ ತಾಳಮದ್ದಲಿ ॥
ಸುರರು ಘನರು ಆಡುತಾಡುತ
ನೆರೆವ ಧುಮಧುಮು ಘಡನೆ ಆಗುತ ॥

ವಡವಾಗ್ನಿ ಮಂಟಪದೊಳಗೆ– ಆ
ಮೃಡನು ಒಲಿದು ಅನುಭಾವದುಜ್ವಲಗೆ ॥
ಪೊಡವಿಯೊಳು ಶರಣ ಸಂತತಿಗೆ ॥

ಕಡಲು ಉಕ್ಕಿತು ಗಿರಿಯು ಕರಗಿತು
ಷಟಸ್ಥಲದೊಳು ತುಂಬಿ ತುಳುಕಿತು ॥

ಗುಡುಗು ಹೊಡದಿತು ಸಿಡಿಲು ಮಿಂಚಿತು
ಬಿಡದೆ ಜಲದೊಳು ಜ್ಯೋತಿ ಉರಿಯಿತು ॥
ಕಾಯರಹಿತ ಜೀವರಹಿತ– ಮಾಯರಹಿತ ಬೆರಟುರೇಶ
ಛಾಯರೂಪ ಷಡಕ್ಷರಿ ಮನ– ವಾಯಿ ತಿಂದನುಭಾವಮಂಟಪ ॥

ಈ ಬಗ್ಗೆ ಡಾ. ರಾನಡೆಯವರು ವ್ಯಾಖ್ಯಾನ ಮಾಡುವದೇದರೆ– "ಅನಾದಿ ಕಾಲದಿಂದ, ಆದರ್ಶ ಸಮಾಜವನ್ನು ಕಟ್ಟುವದು ಇಡೀ ಮಾನವತೆಯ ಒಂದೇ ಒಂದಾದ ಶ್ರೇಷ್ಠತಮ ಮಹದಾಕಾಂಕ್ಷೆ. ನಾವದನ್ನು ಬಾಯ್ಬಲ್ಲಿನ ಹಳೆಯ ಒಡಂಬಡಿಕೆ, ಹೊಸ ಒಡಂಬಡಿಕೆ, ಸಂತ ಅಗಸ್ಟಾಯಿನ್‌ರವರ 'ದೇವರ ನಗರ' ಇವುಗಳಲ್ಲಿ.......... ಕಾಣಬಹುದು.......... ಯೇಸುಕ್ರಿಸ್ತನು ದೇವರ ಸ್ವರ್ಗೀಯ ಆಳಿಕೆಯು ಸನ್ನಿಹಿತವಾಗಿರುವದೆಂಬ ಶುಭವಾರ್ತೆಯನ್ನು ತಂದನು." ೧೨ ನೆಯ ಶತಮಾನದ ಅನುಭವಮಂಟಪ ಇಂಥ ದೈವೀ ವ್ಯಕ್ತಿಗಳ ಧರ್ಮರಾಜ್ಯವಾಗಿದ್ದಿತು.

—

ಕಡಕೋಳದ ಮಡಿವಾಳಯೋಗಿ

ಗರಗದ ಮಡಿವಾಳಪ್ಪನವರೂ ಇವರೂ ಬೇರೆ. ಕಡಕೋಳ ಗ್ರಾಮ ಹಳೆಯ ಮೊಗಲಾಯಿಯಲ್ಲಿಯೂ ಇದೆ; ಉತ್ತರ ಕರ್ನಾಟಕದಲ್ಲಿಯೂ ಇದೆ. ಇವರು ಅನೇಕ ಅನುಭಾವಪೂರ್ಣ ಪದ್ಯಗಳನ್ನು ಕಾವ್ಯಮಯವಾದ ಹೃದ್ಯಶೈಲಿಯಲ್ಲಿ ರಚಿಸಿದ್ದಾರೆ.

ಗುರುವಿನ ಉಪಕಾರ ಅನಂತ. ಗುರುವನ್ನು ನರನೆಂದು ಅನ್ನಬಾರದು. ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಖಯಾ ಚಕ್ಷುರುನ್ಮೀಲಿತಂ ಏನ ತಸ್ಮೈ ಶ್ರೀ ಗುರವೇ ನಮಃ.

ಹ್ಯಾಂಗ ತೀರೀತು ನಿಮ್ಮುಪಕಾರ– ಇದು ಅಪರಂಪಾರ ॥ ಪ ॥
ಹ್ಯಾಂಗ ಹಿಂಗಿಸಲಿ ಜನ್ಮದ ಅವತಾರ– ಗುರುರಾಯಾ ಗಂಭೀರಾ
ಭೂಪಂಚಕ ದೇಹವನು ಧರಿಸಿ– ನೂತನ ತನು ತೊಡಿಸಿ ॥ ಅ ಪ ॥
ದಾತ ಐದಕ್ಷರವನು ಕಲಿಸಿ– ಚಿತ್ತವ ತಾನೊಲಿಸಿ
ಇತರ ಭಯವ ಪರಿಹರಿಸಿ– ಪ್ರಾರಬ್ಧವನೊರಿಸಿ ॥ ೧ ॥
ಸಕಲಸ್ವರೂಪ ತಾನಾಗಿ– ನಾನೆಂಬುದ ನೀಗಿ
ಮುಕುರಾನಂದ ಬೋಧಿಸಲಾಗಿ– ನಿಖಿಲ ನಿಸ್ಸಂಗಿ ॥ ೨ ॥
ಮುಕ್ತಾಂಗಿಯ ಮದುವೆಯಾಗಿ– ಸಂತರಿಗೆ ಶಿರಬಾಗಿ
ಧರೆಯೊಳು ಕಡಕೋಳ ಕ್ಷೇತ್ರ– ಉಪಮೆಯರಿಯೆನು ಮಾತ್ರ ॥ ೩ ॥
ಸುರನರಲೋಕ ವಿಚಿತ್ರ– ಕರುಣಾರಸನೇತ್ರ
ಸುಕೃಮೀರಿದ ವಿಚಿತ್ರ– ಮಾಡಿದನು ಪವಿತ್ರ ॥ ೪ ॥ [೧]

ಗುರು, ಶಿಷ್ಯನಿಗೆ ನೂತನ ತನು ತೊಡಿಸಿ, ದ್ವಿಜತ್ವ ದಯಪಾಲಿಸುತ್ತಾನೆ. ಭಯವನ್ನು ಪರಿಹರಿಸುತ್ತಾನೆ. ಎರಡನೆಯದಿದ್ದರೆ ಭಯ. ದ್ವಿತೀಯಾದ್ವೈ ಭಯಂ ಭವತಿ. ಪ್ರಾಣ ಆನಂದಮಯವಾದಾಗ, ಭಯವೆಲ್ಲಿಯದು ? ಗುರು ಮುಕ್ತ್ಯಂಗನೆಯ ಮದುವೆ ಮಾಡಿಸಿ, ಹಿರಿಯರಿಗೆ ಶಿರಬಾಗುವಂತೆ ಮಾಡುತ್ತಾನೆ.

ಕಾವ್ಯ ಶೈಲಿಯ ಸುಭಗತೆ, ಮತ್ತು ನಿರಂತರ ಮೌಲ್ಯಗಳ ದೃಷ್ಟಿಯಿಂದ ಈ ಕೆಳಗಿನ ಪದ್ಯ ಸುಂದರವಾಗಿದೆ :

---

೧ ಕನ್ನಡ ಪರಮಾರ್ಥ ಸೋಪಾನ : ೧೯೬೪ : ಪು. ೨೬.

ಒಂದು ಸಲ ರಾಧೆ ಕೃಷ್ಣನ ಕೊಳಲನ್ನು ಕೇಳಿದಳಂತೆ– ಪರಮಾತ್ಮ ಎಷ್ಟೋ ಸಲ ನಿನ್ನನ್ನು ಬಿಟ್ಟಿರುತ್ತಾನೆ. ಆದರೆ ನಿನ್ನನ್ನು ಮಾತ್ರ ಒಂದೂ ಬಿಟ್ಟಿರುವದಿಲ್ಲ. ಇದು ಹೇಗೆ– ಎಂದು. ಆಗ ಕೊಳಲು ಹೇಳಿತಂತೆ : "ನಾನು ನನ್ನದೆನ್ನುವದನ್ನೆಲ್ಲ ಬಿಟ್ಟು ಪರಮಾತ್ಮನಿಗಾಗಿ ಪೊಳ್ಳಾಗಿದ್ದೇನೆ. ಅವನ ಧ್ವನಿಯೇ ನನ್ನ ದೇಹದ ತುಂಬೆಲ್ಲ ವ್ಯಾಪಿಸಿ ಹೊರಬರುತ್ತದೆ. ನನ್ನದೇ ಇಲ್ಲದಿರುವಾಗ, ನಾನು ಹೇಗೆ ಹೇಳಲಿ" –ಎಂದು. "ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕ್ತಿ." ಮಡಿವಾಳ ಶಿವಯೋಗಿಗಳೂ ಹೀಗೆ ಹೇಳುತ್ತಾರೆ :

ಕಡಕೋಳದ ನಾ ಗುಲಾಮಾ– ನಿವು
ಕರೆದಲ್ಲಿಗೆ ನಾ ಬರಾಂವಾ ‖ ಪ ‖

ಹಾಕಿಕೊಟ್ಟ ಜಹಾಗಿರ ಇನಾಮಾ– ನಾ
ಗುರುವಿಗೆ ಮಾಡತೀನಿ ಸಲಾಮಾ ‖ ಅ. ಪ. ‖

ಜಗದೊಳಗೆ ನಾ ಇರಾಂವಾ– ಜಗ
ಕ್ರೀಡೆಯೊಳಗೆ ನಾ ಆಡಾಂವಾ
ಜನರಿಗೆ ಸಣ್ಣಾಗಿ ಬಿದ್ದ್ಯಾಂವಾ– ನಾ
ಗುರುವಿನ ಗೊಳ್ಳಾಗಿ ಹುಟ್ಟ್ಯಾಂವಾ– ನಾ ‖ ೧ ‖

ದಶೇಂದ್ರಿಯ ಗುಣಗಳ ಕಳ್ಯಾಂವಾ– ನಾ
ದಶರಥರಾಯನ್ಹಾಂಗ ಹೊಳ್ಯಾಂವಾ
ಕಸರತ ಕಮಾಯಿ ಮಾಡಾಂವಾ– ನಾ
ಕಬೀರ ಕಮಾಲನ್ಹಾಂಗ ಹಾಡಾಂವಾ ‖ ೨ ‖

ಕೈಲಾಸದೊಳಗ ನಾ ಇರಾಂವ– ನಾ
ರಸರಾಯ ಹೋಳಿಗಿ ತುಪ್ಪಾ ಜಡ್ಯಾಂವಾ
ಗುಣಬಿಟ್ಟು ಗುರುವಿನ ಕೂಡಾಂವಾ– ಗುರು
ಮಡಿವಾಳಪ್ಪನ ಹಾಡಿ ಹರಸಾಂವಾ ‖ ೩ ‖

–ಕಡಕೋಳದ ಮಡಿವಾಳ ಶಿವಯೋಗಿಗಳ ಹೆಚ್ಚಿನ ಪದ್ಯಗಳಿನ್ನೂ ದೊರಕಬೇಕು.

—

ಪಂಚಾಕ್ಷರಿ ಹಿರೇಲಕೇರಿ

ಇವರು ಹಿರೇಲಕೇರಿ ಗ್ರಾಮದವರು. ಕಾಲ ತಿಳಿಯದಿಲ್ಲ. ಹಿರೇಲಕೇರಿ ಗ್ರಾಮ ಬಾದಾಮಿ ತಾಲೂಕಿನ ಹಳ್ಳಿಯಾಗಿದೆ ಎಂದು ಡಾ. ರಾಮೇಗೌಡರು ಹೇಳುತ್ತಾರೆ.[1] ಹಿರೇಹಡಗಲಿ ಬಳಿಯ ಹಾಗಲುಕೋಟೆಯ ಹತ್ತಿರವೂ ಹಿರೇಲಕೇರಿ ಗ್ರಾಮವಿದೆ. ಹಾಗಲುಕೋಟೆಯ [illegible] ದೇವರಾದ [illegible] ಇವರ ಪದಗಳಲ್ಲಿ ಬರುತ್ತವೆ. ಅದ್ದರಿಂದ ಈ ಕವಿ ಹಾಗಲುಕೋಟೆಯ ಹತ್ತಿರದ ಹಿರೇಲಕೇರಿಯವರಾಗಿರಬಹುದೇ ವಿಚಾರಿಸಬೇಕು.

ಇವರ ಪದಗಳಲ್ಲಿಯ ಕೆಲವು ಸಾಲುಗಳನ್ನು ಕೊಡುತ್ತೇವೆ :

ನಿನ್ನ ನಿಜವ ನೀ ನೋಡದೇ
    ಅನುಮಾನಿಸುವ್ಯಾತಕೋ । ......
ಗಿರಿಗಟ್ಟಿ [illegible]
    [illegible]
ಒಡೆಯ ಹಿರೇಲಕೇರಿ
    ಪಂಚಾಕ್ಷರಿ- ಇತ್ಯಾದಿ.

ಇನ್ನೊಂದು ಪದ್ಯ :

ಓಂ ನಮಃ ಶಿವಾಯ [illegible]
ಓಂ ನಮಃ ಶಿವ ಎಂದು ಅನುಮಾನಿಸುವರೆಲ್ಲ । ಪ ।

[illegible] । ಅ ಪ ।

ಜನಕನ ಪ್ರತಿಮ್ಯಾತಕ್ಕೆ, [illegible]
ಕಪಟ ಭ್ರಾಂತಿಗಳ್ಯಾತಕೆ
ಗುಪ್ತದಿ ಗುರುವಿನ ಚರಣಗಳ ಸ್ಮರಿಸಿ
ಮತಿಹೀನರಾಗದೆ [illegible]- ಇತ್ಯಾದಿ.

—

[1] [illegible]

ನರಸಿಂಹ

ಇವರ ಕಾಲ, ಸ್ಥಳ ಗೊತ್ತಾಗಲಿಲ್ಲ. ಡಾ. ರಾನಡೆಯವರು ನರಸಿಂಹರು ಬರೆದ ಈ ಕೆಳಗಿನ ಪದ್ಯದ ಉಲ್ಲೇಖ ಮಾಡಿದ್ದಾರೆ. ಕವಿಯ ಬಗೆಗೆ ಗುರುದೇವರು ಹೀಗೆ ಹೇಳಿದ್ದಾರೆ :

"ನಾವು ವಿವರಿಸಲಿರುವ ಎರಡನೆಯ ಪದವು ಇನ್ನೊಬ್ಬ ಅಪ್ರಸಿದ್ಧ ಸಂತ ಕವಿಯದು. ಆದರೆ ಈ ಕವನವು ಬಲು ಅಂದವಾದುದು. ನಾವು ಕವನದ ಹಿರಿಮೆಯನ್ನೇ ಹೆಚ್ಚಾಗಿ ಗಮನಿಸಬೇಕಲ್ಲದೆ, ಕವಿಯ ಹೆಸರನ್ನಲ್ಲ.'' ಕವನ ಹೀಗಿದೆ. ಅದರ ಸೊಗಸನ್ನು ಆಸ್ವಾದಿಸಬಹುದು :

ಗುರಿಯ ಒಗೆದೆನೋ ಬ್ರಹ್ಮಕೆ
    ಗುರಿಯಾ ಒಗೆದೆನೊ ॥ ಪ ॥

ಸರ್ವಕಾಲದಲಿ ಶರೀರವ ಮರೆದು
    ಸ್ಮರಣೆ ಗುರುನರಸಿಂಹನ ಆಗಿ ॥ ಅ ಪ ॥

ಮಾತಾಡು ಮುಚ್ಚಳವ ಬಿಗಿದು
    ಭೂತಪಂಚಕ ತುಬಾಕಿಲಿ
ಖ್ಯಾತಿಯ ಭಕ್ತಿಜ್ಞಾನ ವೈರಾಗ್ಯ
    ಜಾತಿ ಮದ್ದು ಮೂರು ಬೆರಳಲೆ ಹೊಯ್ದು ॥ ೧ ॥

ಇಡಾಪಿಂಗಳ ಗುಂಡಿಲಿ ಹಾಕಿ
    ರೂಢಿಗೆ ಎನಿಸುವ ಗಜವನು ಜಡಿದು
ಗಾಢಾನುಗ್ರಹ ರಂಜಕ ಸುರಿದು
    ಹೂಡಿ ವೀರಾಸನ ಒಳಿತಾಗಿ ಕುಳಿತು ॥ ೨ ॥

ಗುರುಕರುಣೆಂಬುವ ಜಾವಗಿ ಒತ್ತಿ
    ಎರಡೂ ದೃಷ್ಟಿ ಒಂದೇ ಮಾಡಿ
ಊರ್ಧ್ವ ಮುಜರಿಯನು ನೆಟ್ಟಗೆ ನಿಲಿಸಿ
    ಇರುವ ನಾಸಿಕದ ಕೊನೆಯಲಿ ಮುಳುಗಿ ॥ ೩ ॥

ಘನರಂಜಕ ಈ ತನುವ ಮುಚ್ಚದಲಿ
    ತನು ತುಬಾಕಿಯ ತೂಗಾಡಗೊಡದೆ

ಮನಮಿಸುಕದೆ ಮತ್ತೊಂದು ನೆನೆಯದೆ
ವಿನಯದಿ ನಿತ್ಯ ಎಚ್ಚರದಿಂದ ॥ ೪ ॥

ಬೆದರಿ ಓಡಲು ಅಷ್ಟಮದ ಗಜಗಳು ತಾವು
ಉದುರಿ ಬೀಳಲು ವೈರಿ ಷಡ್ವರ್ಗದಲಿ ತಲಿ
ಸಾಧು ಜ್ಞಾನಿಗಳು ಹೌದು ಹೌದುಯೆನ್ನಲು
ಸಚ್ಚಿದಾನಂದ ನರಸಿಂಹನು ಆಗಿ ॥ ೫ ॥

ತನ್ನ ದೇಹವನ್ನೇ ತುಬಾಕಿಯನ್ನು ಮಾಡಿ, ಮನಸ್ಸನ್ನು ಗುಂಡನ್ನು ಮಾಡಿ, ಕವಿ–

ಗುರಿಯು ಒಗೆದೆನೋ ಬ್ರಹ್ಮಕೆ
ಗುರಿಯು ಒಗೆದೆನೋ ॥ ಎಂದು ಹೇಳುತ್ತಾನೆ.

ಉಪನಿಷತ್ಕಾರರೂ ಇದೇ ಶರಸಂಧಾನವನ್ನು ಹೇಳಿದ್ದಾರೆ :

ಪ್ರಣವೋ ಧನುಃ, ಶರೋ ಹೀ ಆತ್ಮಾ
ಬ್ರಹ್ಮ ತಲ್ಲಕ್ಷ್ಯಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ
ಶರವತ್ತನ್ಮಯೋ ಭವೇತ್ ॥

—

ನಂದ್ಯಾಳ ಸಂಗ

ಇವರ ನಿಶ್ಚಿತ ಕಾಲ ಗೊತ್ತಾಗಲಿಲ್ಲ. ಡಾ. ರಾನಡೆಯವರು ಮೊದಲಿನಿಂದಲೂ ಇವರ ಪದ್ಯಗಳನ್ನು ಕೇಳಿದ್ದರಿಂದ, ಇವರು ಪ್ರಾಯಃ ೧೮೯೦ರ ಸುಮಾರಿಗೆ ಇರಬಹುದಾಗಿದೆ. ಇವರ ಜನ್ಮಸ್ಥಳ ನಂದ್ಯಾಳ. ನಂದ್ಯಾಳ ಗ್ರಾಮವು ಬಿಜಾಪುರ ಜಿಲ್ಲಾ ಬಾಗೇವಾಡಿ ತಾಲೂಕಿನ ಡೋಣಿ ನದಿ ತೀರದಲ್ಲಿದೆ. ಡೋಣಿ ಸುಪ್ರಸಿದ್ಧ ಚಿಕ್ಕ ನದಿ. ಇದರ ದಂಡೆಯ ಭೂಮಿಯೆಲ್ಲ ಫಲವತ್ತಾದ ಎರೆ ಭೂಮಿ. 'ಡೋಣಿ ಬೆಳೆದರೆ ಓಣಿ ತುಂಬೆಲ್ಲ ಕಾಳು' ಎಂದು ವಿಜಾಪುರ ಜಿಲ್ಲೆಯಲ್ಲಿ ಒಂದು ಗಾದೆಯ ಮಾತು. ಶ್ರೀಶೈಲದ ದಾರಿಯಲ್ಲಿಯೂ ಒಂದು ನಂದ್ಯಾಳ ಗ್ರಾಮವಿದೆಯಂತೆ. ಆದರೆ, ಈ ಅನುಭಾವಿಯ ಭಾಷೆ, ಅದರ ರಭಸ, ದೇಸಿಗಳನ್ನು ಗಮನಿಸಿದರೆ, ಇದು ಅಚ್ಚ ಅವಳ ವಿಜಾಪುರಿ ಭಾಷೆಯಿದ್ದುದು ಕಂಡು ಬರುತ್ತದೆ.

ನಂದ್ಯಾಳ ಸಂಗರವರ ಕವಿತೆಯಲ್ಲಿ ಅನುಭಾವ ಮತ್ತು ಕಾವ್ಯದೃಷ್ಟಿಗಳ ಸುಂದರ ಸಂಗಮವನ್ನು ಕಾಣುತ್ತೇವೆ. ಈ ವ್ಯಕ್ತಿ ಅನುಭಾವಿ ಇದ್ದಷ್ಟೇ ಕವಿಯೂ ಆಗಿದ್ದಾನೆ.

ಈ ಜೀವಕ್ಕೆ ಅಂಟಿದ ಭವಬಾಧೆಗಳನ್ನು ಕವಿ ಸುಂದರವಾಗಿ ವರ್ಣಿಸಿದ್ದಾನೆ. ಇಲ್ಲಿಯ ಶೈಲಿಯ ಸೊಗಸನ್ನೂ ಗಮನಿಸಬಹುದು :

ಏನು ಭರಾ ನಟ್ಟಿತಪ್ಪಾ ಎನಗೆ ಮುಳ್ಳಾ
    ಬ್ಯಾನಿ ತಾಳ ಹೇಳಲಾರೆನಪ್ಪಾ ಇದರ ಘೋಳಾ ॥ ಪ ॥

ಹಿಡ್ಡಿ ನೋಡಿದರ ಸಿಗವಲ್ಲದಂಥಾ ಮಾಯಾದ ಮುಳ್ಳಾ
    ಇದು ಬಹಳ ಮಂದಿಗೆ ಮುರಿದು ಮಾಡಿತಪ್ಪಾ ಮಳ್ಳಾ ॥ ಅ ಪ ॥

ಮಾನಾಭಿಮಾನ ಎರಡು ಜೋಡ ಮುಳ್ಳಾ
    ಎನ್ನ ಕಿವ್ಯಾಗ ಬಡಿದು ಕಂಡಿತಪ್ಪಾ ಜಿಹ್ವಾಳಾ ॥
ಸರ್‍ರಾರ್‍ರಾ ವಿಷವೇರಿ ಅಂಗಾಲಾ
    ತಲ್ಯಾಗ ಜುಮ್ಮ ಹಿಡಿದು ಅಳಕಿತಪ್ಪಾ ನಾಭಿಸ್ಥಲಾ ॥ ೧ ॥

ಸ್ವಾದರುಚಿವೆಂಬೆರಡು ಜೋಡ ಮುಳ್ಳಾ
    ಇವು ಬಹಾಳ ಮಂದಿಗು ಮುರಿದು ಮಾಡ್ಯಾವಪ್ಪಾ ಘೋಳಾ ॥
ನಾಲಗಿಯೊಳಗ ಮುರಿದೀತಪ್ಪಾ ಬ್ಯಾಲದ ಮುಳ್ಳಾ
    ಎನ್ನ ಹೊಟ್ಟಿಯೊಳಗ ಉರುಪ ಬಿಟ್ಟಿದೆಯಂಥಾ ಕಾಳಾ ॥ ೨ ॥

ಹೆಣ್ಣು ಹೊನ್ನು ಮಣ್ಣು ಇವು ಮೂರು ಮುಳ್ಳಾ
ಎನ್ನ ಕಣ್ಣೊಳು ಚುಚ್ಯಾವಪ್ಪಾ ಎಂಥಾ ಕಾಳಾ ॥
ಎಲ್ಲಾ ಕಿಂತಾ ದೊಡ್ಡ ಇವು ಡೊಣ್ಣೆ ಮುಳ್ಳಾ
ಮೂರು ಲೋಕಕೆಲ್ಲಾ ಮುರಿದು ಮಾಡ್ಯಾವಪ್ಪಾ ಖುಳ್ಳಾ ॥ ೩ ॥

ಬೇಕಾಗಿ ಮುರಿಸಿಕೊಂಡೀರಪ್ಪಾ ನೀವು ಮುಳ್ಳಾ
ನಿಮ್ಮ ಕಾಲ ತಾವೇ ಬೇಲ್ಯಾಗ ಹೋಗಿ ಹಾಯ್ಲಿಲ್ಲಾ ॥
ತಾ ಮಾಡಿ ನನಗ ತಂದು ಇಟ್ಟು ಕಾಳಾ
ನಾನು ಯಾರ ಮುಂದೆ ಹೇಳಲೆಪ್ಪಾ ನನ್ನ ಫೌಳಾ
ಲೈನದಾರಿಲಿ ನಾಯಿಟ್ಟು ನಂದ್ಯಾಳಾ
ಗುರು ಸಂಗತೀಲಿ ಸುಟ್ಟೇನಪ್ಪಾ ಇಷ್ಟು ಮುಳ್ಳಾ ॥ ೪ ॥ [೧]

ಮರಾಠಿಯಲ್ಲಿ ಒಂದು ಪದ್ಯವುಂಟು– 'ಅಮ್ಹಿ ನವ್ಹತೋ ಅಮಚಾ ಬಾಪ, ಉಗಾ ಚ ಕಾಮಗ ಪಶ್ಚಾತ್ತಾಪ' ಎಂದು. ನಾವು ನಮ್ಮ ತಂದೆಯಾಗಿರಲಿಲ್ಲ; ಅಂದಮೇಲೆ, (ನಮಗುಂಟಾದ ಕೆಟ್ಟುದರ ಸಲುವಾಗಿ) ನಮಗೇಕೆ ಪಶ್ಚಾತ್ತಾಪ ? ಹೀಗೆ ಹೇಳುವುದು ದುರ್ಯೋಧನ ನೀತಿ. ಪಾಂಡವರನ್ನು ಪೀಡಿಸಬೇಕೆಂದು ತನ್ನ ಮನಸ್ಸಿಗೆ ಬಂದುದೂ, ಆ ಶ್ರೀಕೃಷ್ಣನ ಪ್ರೇರಣೆಯ ಮೂಲಕವೇ ಎಂದು ದುರ್ಯೋಧನ ಹೇಳುತ್ತಾನೆ :

ಜಾನಾಮಿ ಧರ್ಮಂ ನಚ ಮೇ ಪ್ರವೃತ್ತಿಃ
ಜಾನಾಮ್ಯಧರ್ಮಂ ನಚ ಮೇ ನಿವೃತ್ತಿಃ ॥
ಕೇನಾಪಿ ದೇವೇನ ಹೃದಿ ಸ್ಥಿತೇನ
ಯಥಾ ನಿಯುಕ್ತೋಽಸ್ಮಿ ತಥಾ ಕರೋಮಿ ॥

ಉದ್ಧರೇತ್ ಆತ್ಮನಾ ಆತ್ಮಾನಂ, ಇದ್ದ ಹಾಗೆ, ನ ಆತ್ಮಾನಂ ಅವಸಾದಯೇತ್ ಎಂದೂ ಇದೆ. ಆತ್ಮ ಹಾನಿಗೆ, ಆತ್ಮಗ್ಲಾನಿಗೆ, ವ್ಯಕ್ತಿಯೇ ಕಾರಣ. "ಏಳು ಕನ್ನೆಯರು ಬಂದು ಬೀಳು ಎಂದು ಎನ್ನಲಿಲ್ಲ; ಸ್ಪರ್ಶ ಸ್ಪರ್ಶದಿಂದ ಹರ್ಷ ಹೆಪ್ಪುಗೊಂಡಿತೂ" ಎಂದು ಕವಿ ಅಂಬಿಕಾತನಯದತ್ತರು ಹೇಳಿದ್ದಾರೆ. ಅವನತಿಗೆ ಹೆರವರ ಪ್ರಲೋಭನ ಬೇಕಿಲ್ಲ. ವ್ಯಕ್ತಿ ತನ್ನ ಶೈಥಿಲ್ಯದಿಂದಲೇ ಪತನಕ್ಕೆ ಕಾರಣನಾಗುತ್ತಾನೆ.

"ಬೇಕಾಗಿ ಮುರಸಿಕೊಂಡೀರಪ್ಪಾ ನೀವು ಮುಳ್ಳಾ
ನಿಮ್ಮ ಕಾಲ ತಾವೆ ಬೇಲ್ಯಾಗ ಹೋಗಿ ಹಾಯ್ಲಿಲ್ಲಾ"

ಅದಕ್ಕಾಗಿ, ಕವಿ, ತನ್ನ ಮನಸ್ಸನ್ನು ರಂಬಿಸಿ, ಸನ್ಮಾರ್ಗದಲ್ಲಿ ನಡೆಯಲು ಬೇಡಿಕೊಳ್ಳುತ್ತಾನೆ :

ಬಾ ಬಾ ಬಾ ಎನ್ನ ಮೋಹದ ಮನಸೆ
ಯತಿ ಮುನೀಶ್ವರರಿಗೆ ಗತಿಗಚ್ಚುವ ಕೂಸೆ ॥ ಪ ॥

ಹರಗುರುವಿನ ಒಲಿಸುವದು ಬರಿಯಲ್ಲೊ ಮನಸೆ
ನೀನೊಲಿದರೆ ಮೂರು ಲೋಕ ಒಲಿಯುವವು ಕೂಸೆ ॥ ೧ ॥

---

೧ ಕನ್ನಡ ಪರಮಾರ್ಥ ಸೋಪಾನ : ೧೯೬೯ – ಪು. ೨೪–೨೫.

ಆತ್ಮದರ್ಶನವಾದ ಸಾಧಕನಿಗೆ ಬಿಸಿಲು–ಬೆಳದಿಂಗಳುಗಳೂ, ಶೀತ–ಉಷ್ಣಗಳೂ, ಮಾನ–ಅಪಮಾನಗಳೂ– ಎಲ್ಲವೂ ಒಂದೇ ಆಗಿ ಕಾಣುತ್ತವೆ.

ಎಂದು ಮೈಯಾ ಮರೆಸಿ ಇದರಂತೆ
ಈ ಜಗವೆಲ್ಲಾ ಶಿವಮಯವಾಗುವಂತೆ ॥ ಪ ॥

ಹುಲಿ ಕರಡಿ ನೋಡಿದರೆ ಆಕಳಂತೆ
ವಿಷದ ಹಾವು ಚೇಳು ಕಂಡರೆ ಕೂಸಿನಂತೆ ॥ ಅ ಪ ॥

ಸೂಳಿಗೆಳೆಯರು ಕೂಡಿ ಬಂದರೆ ಹಿಗ್ಗುವಂತೆ
ನಮ್ಮ ತಾಯಿ ತಂದೆಯೆಂದು ಪಾದಕ್ಕೆರಗುವಂತೆ
ರಾತ್ರಿ ತುಡುಗರು ಬಂದರೆ ಸದ್ಗುರುವಿನಂತೆ
ಇದ್ದದೆಲ್ಲಾ ಕೊಟ್ಟು ಕಾಲ ಹಿಡಿಯುವಂತೆ ॥ ೧ ॥

ವೈರಿ ಹೊಡಿಯಲಿಕ್ಕೆ ಬಂದರೆ ನಗುವಂತೆ
ನಾ ಬಡಿಸಿಕೊಂಡು ಕಾಲ ಹಿಡಿದುಕೊಳ್ಳುವಂತೆ
ನನ್ನ ಕೈಮುಟ್ಟಿ ದೇಹ ಕಡಿದುಕೊಡುವಂತೆ
ಗುರು ಆಶೀರ್ವಾದ ಪೂರ್ಣ ಆಯಿತಂತೆ ॥ ೨ ॥

ವಾದವೆಲ್ಲ ವೇದಾರ್ಥ ಆಗುವಂತೆ
ನಾ ಅರ್ಥ ಮಾಡಿ ಹಾಡ್ಯಾಡಿ ನಗುವಂತೆ
ಷಡ್‌ರುಚಿಗಳು ಬೇವಿನ ಕಾಯಿ ತಿಂದಂತೆ
ನಿಮ್ಮ ನಾಮದ ರಸವು ಜೇನತುಪ್ಪಾ ಸುರದಂತೆ ॥ ೩ ॥

ಈ ದೃಶ್ಯವೆಲ್ಲಾ ಶಿವಮಯವಾಗುವಂತೆ
ಈ ದೃಶ್ಯವಿಲ್ಲದಾಗಿ ಅಡಗಿ ಹೋಗುವಂತೆ
ಶಬ್ದದೊಳು ಶಬ್ದ ಹೋಗಿ ಕೂಡುವಂತೆ
ನಿಃಶಬ್ದದೊಳು ಓಂಕಾರ ಪಾಡುವಂತೆ ॥ ೪ ॥

ಕತ್ತಲಿ ಬತ್ತಲಿ ಗೊತ್ತು ಇಲ್ಲದಂತೆ
ನಾ ಅಲ್ಲಿ ಇಲ್ಲಿ ಎಲ್ಲಿ ಏನು ಎಂಬಂತೆ
ತಾರೆ ಕಡಿದು ಸೂರ್ಯ ಕೆಳಗೆ ಬಂದಂತೆ
ಗುರು ನಂದ್ಯಾಳ ಸಂಗನ ದಯಪೂರ್ಣವಾಗುವಂತೆ ॥ ೫ ॥

ಇಷ್ಟು ಕಾವ್ಯಮಯವಾಗಿ ಬರೆದ ಕವಿಯ ಹೆಚ್ಚಿನ ಕವನಗಳು ಇನ್ನೂ ದೊರಕದಿದ್ದುದು ದುರ್ದೈವದ ಮಾತು.

—

ದೊಡ್ಡಪೇಟೆ ಬಸವ

ಇವರ ಸ್ಥಳ, ಕಾಲ ಗೊತ್ತಾಗಲಿಲ್ಲ. ಇವರ ಪದ್ಯ ಗುರುದೇವ ರಾನಡೆಯವರಿಂದ ಉಲ್ಲೇಖಿತವಾದದ್ದು ಒಂದು ಮಾತ್ರ. ಅದೂ ಆ ಕವಿತೆ ತಮಗೆ ದೊರಕಿದ ರೀತಿಯನ್ನು ಡಾ. ರಾನಡೆಯವರು ಹೀಗೆ ವಿವರಿಸಿದ್ದಾರೆ :

"ಕಳೆದ ಹದಿನೈದು ವರುಷಗಳಿಂದ ನಾನೀ ಪದವನ್ನು ಬಲ್ಲೆ. ಹೊರ್ತಿಯ[೧] ನೆರೆಯಲ್ಲಿರುವ ಡೋಮನಾಳ ಎಂಬ ಗ್ರಾಮದ ರುದ್ರಯ್ಯಸ್ವಾಮಿ ಎಂಬುವವರಿಂದ ಈ ಪದವನ್ನು ನಾನು ಮೊದಲು ಕೇಳಿದೆ." ಅನಂತರ ಸನ್ ೧೯೪೧ರಲ್ಲಿ ರಾನಡೆಯವರ ಸೇವಕನು ದಿನಾಲು ಈ ಪದವನ್ನು ಅವರೆದುರು ಹಾಡಿ ತೋರಿಸುತ್ತಿದ್ದನಂತೆ. ಈ ಪದ ಹೀಗಿದೆ :

ಗುರುವೆ ನಿಮ್ಮ ಸ್ಮರಣೆಯನು ನಾನು ಮರೆಯಲಾರೆನು ॥ ಪ ॥

ಮರೆಯಲಾರೆ ಮರೆಯಲಾರೆ ಮರೆತಿರಲಾರೆನು ॥ ಅ ಪ ॥

ಕಾಲಹರಣ ನೀಲಕಂಠ ಪಾಲಿಸೆನ್ನನು
ಬಾಲಕರಿಗೆ ಅಭಯ ಕೊಟ್ಟು ಸಲಹು ಶಂಕರನೇ ॥ ೧ ॥

ತನುವ ಮನವ ಧನವ ನಿಮಗೆ ಒಪ್ಪಿಸಿರುವೆನೋ
ಮನವ ನಿಮ್ಮ ಪಾದದಲ್ಲಿ ನಿಲ್ಲಿಸಿರುವೆನೋ ॥ ೨ ॥

ಬಂದ ದುರಿತ ದೂರ ಮಾಡೋ ಇಂದು ಶಂಕರಾ
ತಂದೆ ಭಜಕ ಭಕ್ತ ಹರಣ ದೋಷ ಪರಿಹರಾ ॥ ೩ ॥

ಧರೆಯೊಳು ಹಿರಿಯ ಹರಿದಾಸ ಪುರಂದರದಾಸನೇ
ಮೆರೆಯುವ ದೊಡ್ಡಪೇಟೆ ಬಸವ ಗುರುವರ್ಯನೆ ॥ ೪ ॥

ಈ ಪದ್ಯದಲ್ಲಿ "ಧರೆಯೊಳು ಹಿರಿಯ ಹರಿದಾಸ ಪುರಂದರದಾಸ"ರನ್ನು "ಮೆರೆಯುವ ದೊಡ್ಡಪೇಟೆ ಬಸವ"ನ ಕೂಡ ಸೇರಿಸಲಾಗಿದೆ. ವೀರಶೈವ ಕವಿಯೊಬ್ಬ ಇಷ್ಟು ಮುಕ್ತಕಂಠವಾಗಿ ಬ್ರಾಹ್ಮಣ ಪುರಂದರದಾಸರನ್ನು ಹೊಗಳಿದ್ದು ಗಮನಾರ್ಹ.

ಗುರುದೇವ ರಾನಡೆಯವರು ಉಲ್ಲೇಖ ಮಾಡಿದ ಕಲಬುರಗಿಯ ಸಿದ್ಧೇಶ್ವರರ ಪದವೂ ಈ ರೀತಿಯಿಂದ ಗಮನಾರ್ಹವಾಗಿದೆ. ಕಲಬುರಗಿ, ಶರಣಬಸವೇಶ್ವರ ದೇವಸ್ಥಾನಕ್ಕಾಗಿಯೂ,

---

೧ ಹೊರ್ತಿ ವಿಜಾಪುರ ಜಿಲ್ಲೆಯಲ್ಲಿದೆ.

ಬಂದೇನವಾಜ ಮಸೀದೆಗಾಗಿಯೂ ಪ್ರಸಿದ್ಧವಾಗಿದೆ. ಪೈಗಂಬರವಾಸಿ ಹೈದರಾಬಾದದ ನಿಝಾಮರು ಪ್ರತಿವರುಷ ಈ ಬಂದೇನವಾಜ ಮಸೀದೆಗೆ ಕಲಬುರಗಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಈ ಬಂದೇನವಾಜ ಇದ್ದಲ್ಲಿಯೇ ನವಕೋಟಿ ನಾರಾಯಣನ ಹಿಂದೂ ದೇವಾಲಯವೂ ಇದೆ. ಈ ಹಿಂದೂ ಮುಸ್ಲಿಮ್ ಮಧುರ ಬಾಂಧವ್ಯ ಕರ್ನಾಟಕದ ವೈಲಕ್ಷ್ಯಣ್ಯವಾಗಿದೆ. ಸದ್ಯ ಸಿದ್ಧೇಶ್ವರರು ರಚಿಸಿದ ಈ ಕವನದಲ್ಲಿ ಈ ಮಹಮದೀಯ ಪರಿಭಾಷೆಯನ್ನೇ ನೋಡಬಹುದು. ಇದನ್ನೂ ಮತ್ತು 'ಜೋ ಪೀರ ಪೇರಾಬಡಾ ಅವಲಿಯಾ' ಎಂಬ ಇನ್ನೊಂದು ಪದ್ಯವನ್ನೂ ಕಾಲ ಕಾಲಕ್ಕೆ ಹೇಳಿಸುತ್ತಿದ್ದರು. ಸಿದ್ಧೇಶ್ವರರ ಈ ಪದ್ಯ ಡಾ. ರಾನಡೆಯವರಿಗೆ "ಮಹಾರಾಜರವರು ಸಮಾಧಿಸ್ಥರಾದ ಮೇಲೆ, ಅವರ ದಿನಚರಿಯಲ್ಲಿ ಈ ಪದವು ದೊರೆಯಿತು." ೧

ಈ ಪದ ಇದ್ದುದು ಹೀಗೆ :

ಹುಸೇನಿ ಸಾಹೇಬರ ಬದಿಯಲಿ ಹೋಗಿ
        ಹಸನಾಗಿ ನಾವು ಬಂದೇವು ॥ ಪ ॥

ಮಸೂತಿಯೊಳಗಿನ ಮೂಲವ ತಿಳಿದು
        ದೀನದಯಾಳನ ನೆನೆದೇವು ॥ ಅ ಪ ॥

ಲಾಡಬಂಧನದ ಲಾಡಿಯ ಕಟ್ಟಿ
        ಓಡ್ಯಾಡು ಪಂಜೆಯ ಹಿಡಿದೇವು
ಸೂರ್ಯಚಂದ್ರರು ಎಂದಿಗೆ ಇಲ್ಲಾ
        ಅಂದೊಬ್ಬ ಪೀರನ ಕಂಡೇವೊ ॥ ೧ ॥

ಹಸರ ಹಳದಿ ಬಿಳಿದು ಕೆಂಪು
        ಕುಶಲದ ಚೌಕಿಯ ಕಂಡೇವೊ
ಮುಸಲರಗೂಡ ಫಕೀರರಾಗಿ
        ಸವಿ ಸವಿ ಪ್ರಸಾದ ಉಂಡೇವೊ ॥ ೨ ॥

ಖತಾಲವೆಂಬೊ ಕತ್ತಲೆಯೊಳಗೆ
        ಸುತ್ತೆಲ್ಲ ಜ್ಯೋತಿಯ ಕಂಡೇವೊ
ಉತ್ತರ ಪಶ್ಚಿಮ ನವಬಾಜೆ ವಾದ್ಯವ
        ಆದರ ಭ್ರಮಿ ನಾವು ಗೊಂಡೇವೋ ॥ ೩ ॥

ಖಾಲಿಯೆಂಬುವ ಡೋಲಿಯ ಮುರಿದು
        ಒಳಗಿನ ಮೂಲವ ತಿಳಿದೇವೊ
ಕಲಬುರಗಿಯ ಸಿದ್ಧೇಶ್ವರನ
        ಬಾಲರಾಗಿ ಪಡಕೊಂಡೇವೊ ॥ ೪ ॥ ೨

ಅನುಭಾವಿಗಳಿಗೆ ಜಾತಿ ಮತ ಪಂಥಗಳಿಲ್ಲ.

—

೧ ಕನ್ನಡ ಸಂತರ ಪರಮಾರ್ಥ ಪಥ : ಪು. ೨೩೫.

೨ ಕನ್ನಡ ಪರಮಾರ್ಥ ಸೋಪಾನ– ಪು. ೮೪–೮೫.

ಸಾಹಿತ್ಯಕರು

ರಾಮಚಂದ್ರರಾವ ಜುರಮುರಿ

(ಸು. ೧೮೦೦)

ಇವರು ದಾಸಕೂಟದ ಸಾಹಿತ್ಯದ ಅಭಿಮಾನಿಗಳಾದ ಸುಪ್ರಸಿದ್ಧ ಜುರಮುರಿ ಶೇಷಗಿರಿರಾಯರ ತಂದೆಯವರು. ಇವರು ಪೋಲೀಸ ಖಾತೆಯಲ್ಲಿ ಕೆಲಸ ಮಾಡುತ್ತಿದ್ದರು. ಇವರಿಗೂ ಇವರ ಮೇಲಿನ ಅಧಿಕಾರಿಗಳಿಗೂ ಒಂದು ಸಲ ವಾಗ್ವಾದವಾದಾಗ ಮೇಲಧಿಕಾರಿಗಳಾದ ಪೋಲೀಸ ಸುಪರಿಂಟೆಂಡೆಂಟರನ್ನು ಹೊಡೆದೋಡಿಸಿದ್ದರು. ಅನಂತರ ಇವರನ್ನು ಸೆರೆಮನೆಯಲ್ಲಿಡಲಾಯಿತೆಂಬುದನ್ನು ಅನ್ಯತ್ರ ವಿವರಿಸಲಾಗಿದೆ.

ಇವರೂ ಶೀಘ್ರ ಕವಿಗಳು. ಅನೇಕ ಆರತಿ ಪದಗಳನ್ನು ರಚಿಸಿದ್ದಾರೆ. ಈ ಪದಗಳಾವುವೂ ಈಗ ದೊರಕುವಂತಿಲ್ಲ. ಮನಗುಂಡಿ ಕೃಷ್ಣರಾಯರು ಜುರಮುರಿ ರಾಮಚಂದ್ರರಾಯರು ಬರೆದ 'ಗುರುಕರುಣ ಸಿರಿ ಮೋಹ ನಿವಾರಿಸೆನಗಾಗದು' ಎಂಬ ಮೊದಲಾದ ಕವನಗಳನ್ನು ಹೇಳುತ್ತಿದ್ದರು. ವಿವರಗಳಿಗಾಗಿ ಶೇಷಗಿರಿರಾಯರನ್ನು ಕುರಿತ ಭಾಗವನ್ನು ನೋಡುವುದು.

ಇವರ ಕವಿತೆಗಳಾವುವೂ ಈಗ ದೊರಕುತ್ತಿಲ್ಲ.

—

ಶಾಂತವೀರ ರಾಚಿದೇವ ಕಿತ್ತೂರ

(೧೮೨೭–೧೮೮೫)

ಶಾಂತವೀರ ರಾಚಿದೇವ ಕಿತ್ತೂರರು ಕಿತ್ತೂರಲ್ಲಿ ಜನಿಸಿದರು. ಇವರದು ಕಿತ್ತೂರಿನ ಕಟ್ಟಿಮಠದವರ ವಂಶ. ಕಿತ್ತೂರಿನ ಕಟ್ಟಿಮಠದ ಹುಚ್ಚ ರಾಚಿದೇವ (ರಾಚಯ್ಯ) ಸ್ವಾಮಿಗಳಿಗೆ, ಚಿಕ್ಕರಾಚಯ್ಯ (ರಾಚಿದೇವ) ಎಂಬ ತಮ್ಮನಿದ್ದನು. ಚಿಕ್ಕರಾಚಯ್ಯನವರ ಹೆಂಡತಿಯ ಹೆಸರು ಶಿವಗಂಗಾದೇವಿ. ಇವರ ಉದರದಲ್ಲಿ ಶಾಂತವೀರರು ೨೭ ಸಪ್ಟಂಬರ ೧೮೨೭ ರಂದು ಜನಿಸಿದರು. ಶ್ರೀಯುತರ ತಂದೆ ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ನಿಷ್ಣಾತರಾಗಿದ್ದರು. ತಾಯಿ ಶಿವಗಂಗಾದೇವಿಯವರೂ ಬಸವ ಪುರಾಣ, ರಾಜಶೇಖರ ವಿಳಾಸಗಳನ್ನು ಸರಾಗವಾಗಿ ಮುಖೋದ್ಗತವಾಗಿ ಹೇಳುತ್ತಿದ್ದರಂತೆ.[೧] ಇದೂ ಅಲ್ಲದೆ, ಕಟ್ಟಿಮಠದಲ್ಲಿ ಪ್ರತಿನಿತ್ಯ ಪುರಾಣ, ಪುಣ್ಯಕಥಾಶ್ರವಣ ನಡೆಯುತ್ತಿದ್ದಿತು. ಇಂತಹ ಸುಸಂಸ್ಕೃತ, ಸಾಹಿತ್ಯಕ ವಾತಾವರಣದಲ್ಲಿ ಶಾಂತವೀರರು ಬೆಳೆದರು.

ಶಾಂತವೀರರ ಪ್ರಾಥಮಿಕ ವಿದ್ಯಾಭ್ಯಾಸವು ಕಿತ್ತೂರಿನಲ್ಲಿಯೇ ನಡೆಯಿತು. ಕಿತ್ತೂರಿನ ಮಲ್ಲಸರ್ಜ ದೊರೆಯ ಮಗ ಶಿವಲಿಂಗ ಸರ್ಜನೂ, ಗರಗದ ಮಡಿವಾಳಸ್ವಾಮಿಗಳೂ ಇವರ ಸಹಪಾಠಿಗಳಾಗಿದ್ದರೆಂದು ಹೇಳುತ್ತಾರೆ. ಇದು ಖಚಿತವೆಂದು ಹೇಳಲಿಕ್ಕಾಗುವದಿಲ್ಲ. ಇದರಂತೆಯೇ, ಗಂಗಾಧರ ಮಡಿವಾಳೇಶ್ವರ ತುರಮರಿಯವರೂ, ಡೆಪ್ಯುಟಿ ಚೆನಬಸಪ್ಪನವರೂ ಇದೇ ಶಾಲೆಯಲ್ಲಿಯೇ ಓದಿರಬೇಕು. ಈ ಪಾಠಶಾಲೆಯಲ್ಲಿ ಅಭ್ಯಾಸ ಮುಗಿಸಿದ ನಂತರ ಶಾಂತವೀರರು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹಾನಗಲ್ಲು, ಬೆಳ್ಳಿಕಟ್ಟಿ ಮತ್ತು ಮೈಸೂರುಗಳಿಗೆ ಹೋದಂತೆ ಕಾಣುತ್ತದೆ. ಮೈಸೂರಲ್ಲಿ ಅವರಿಗೆ ಅನೇಕ ಕನ್ನಡ ಮತ್ತು ಸಂಸ್ಕೃತ ಪಂಡಿತರ ಸಂಪರ್ಕವುಂಟಾಯಿತು.

ಬೆಳಗಾವಿಯ ಸರದಾರ ಹಾಯ್ಸ್ಕೂಲು ಕ್ರಿ. ಶ. ೧೮೫೦ ರಲ್ಲಿ ಪ್ರಾರಂಭವಾಗಿದ್ದಿತು. ಶಾಂತವೀರರು ಈ ಶಾಲೆಯಲ್ಲಿ ಕನ್ನಡ ಶಿಕ್ಷಕರೆಂದು ಸನ್ ೧೮೬೧ ರಲ್ಲಿ ನೇಮಕವಾದರು, ಧಾರವಾಡ ಟ್ರೇನಿಂಗ ಕಾಲೇಜಿನಲ್ಲಿ ದೊರೆಯುವ ದಾಖಲೆಗಳ ಮೇಲಿಂದ ಶಾಂತವೀರರು ೧–೯–೧೮೬೬ ರಂದು ಕಿತ್ತೂರಿನ ಶಾಲೆಯಲ್ಲಿ ಉಪಾಧ್ಯಾಯರಾಗಿ ಸೇರಿದಂತೆ ಕಾಣುತ್ತದೆ. ೪–೪–೧೮೬೭ರಂದು ಅವರನ್ನು ಅದೇ ಊರಿನ ಹೆಣ್ಣುಮಕ್ಕಳ ಶಾಲೆಯ ಮುಖ್ಯೋಧ್ಯಾಪಕರೆಂದು ವರ್ಗಾಯಿಸಲಾಯಿತು. ೧೧–೯–೧೮೬೭ ರಂದು ಅವರನ್ನು ಟ್ರೇನಿಂಗ ಕಾಲೇಜಿನಲ್ಲಿ ೩೫ ರೂಪಾಯಿ ಪಗಾರದ ಮೇಲೆ ೨ ನೆಯ ಅಸಿಸ್ಟಂಟರೆಂದು ನೇಮಿಸಲಾಯಿತು. ಆಗ ಅಲ್ಲಿ ಹುಯಿಲಗೋಳ ಭುಜಂಗರಾಯರು ಪ್ರಿನ್ಸಿಪಾಲರಾಗಿದ್ದರು.[೨] ಇಲ್ಲಿ ೧೪–೯–೧೮೬೭ ರಂದು ನೌಕರಿ ಸೇರಿದರು.

---

೧ ವೀ. ರು. ಕೊಪ್ಪಳ– ಜೀವನ ಶಿಕ್ಷಣ– ೧೯೫೭. ಪು. ೬೦.

೨ ಶಾಂತವೀರ ರಾಚಿದೇವ ಕಿತ್ತೂರ– ವೀ. ರು. ಕೊಪ್ಪಳ– ೧೯೫೮ ಪು. ೯.

ಮುಂದೆ ರಸೆಲ್ ಸಾಹೇಬರ ಶಿಫಾರಸಿನ ಮೇರೆಗೆ ಈ ನಾರ್ಮಲ್ ಶಾಲೆ ಧಾರವಾಡಕ್ಕೆ ಸ್ಥಳಾಂತರ ಹೊಂದಿದಾಗ, ಶ್ರೀಯುತರು ಭುಜಂಗರಾವ ಹುಯಿಲಗೋಳ ಮತ್ತು ವೆಂಕಟ ರಂಗೋ ಕಟ್ಟಿಯವರ ಕೂಡ ಧಾರವಾಡಕ್ಕೆ ವರ್ಗಮಾಡಲ್ಪಟ್ಟರು. ಈ ಕಾಲಕ್ಕೆ ಅವರು ಭಾಷಾ ವಿಷಯ ವನ್ನು ಕಲಿಸುತ್ತಿದ್ದರು.

ಧಾರವಾಡದಲ್ಲಿದ್ದಾಗ, ಶಾಂತವೀರಯ್ಯನವರು ನಂದಿಕೋಲ ಬಸವಣ್ಣದೇವರ ಗುಡಿ ಓಣಿ ಯಲ್ಲಿಯ ಕೊಂಗಿಯವರ ಮನೆಯಲ್ಲಿ ಇರುತ್ತಿದ್ದರಂತೆ. ಡೆಪ್ಯುಟಿ ಚೆನಬಸಪ್ಪನವರ ಮನೆಯೂ ಸಮೀಪದಲ್ಲಿಯೇ ಇತ್ತಂತೆ. ಈ ಕಾಲಕ್ಕೇ ಅಂದರೆ ೧೮೭೧ ರ ಸುಮಾರು ಕನ್ನಡ ಟ್ರಾನ್ಸಲೇಟರ ಎಗ್ಜಿಬಿಶನರ ಎಂದು ಕೆಲಸ ಮಾಡುತ್ತಿದ್ದ ಗಂಗಾಧರ ಮಡಿವಾಳೇಶ್ವರ ತುರಮರಿಯವರು ಧಾರವಾಡ ಟ್ರೇನಿಂಗ ಕಾಲೇಜದ ವಾಯಿಸ್ ಪ್ರಿನ್ಸಿಪಾಲರಾಗಿ ಕೆಲಸ ಮಾಡುತ್ತಿದ್ದರು.[೧] ಇವರ ಜತೆ ಅನ್ನದಾನೀಶ್ವರ ಬಸಲಿಂಗಾರ್ಯ ಮಂಗಳೂರು ಅರಳೆಲೆಮಠ ಅವರೂ ಕನ್ನಡ ಕೆಲಸದಲ್ಲಿ ಸಹಾಯ ವಾಗುತ್ತಿದ್ದರು. ಶಾಂತವೀರರು, ಸಿದ್ಧಮ್ಮ ಎಂಬ ಸಾಧ್ವಿಯನ್ನು ಮದುವೆಯಾದರು. ಇವರಿಗೆ ರಾಚೋಟಯ್ಯ, ಅಡವಯ್ಯ ಎಂಬ ಇಬ್ಬರು ಗಂಡುಮಕ್ಕಳೂ, ಗಂಗಮ್ಮ, ನಾಗಮ್ಮ, ಅವ್ವಚೆನ್ನಮ್ಮ ಮತ್ತು ಶಿವಲಿಂಗಮ್ಮ ಎಂಬ ನಾಲ್ವರು ಹೆಣ್ಣುಮಕ್ಕಳೂ ಜನಿಸಿದರು.

ಶಾಂತವೀರರು ನಿವೃತ್ತಿ ಹೊಂದಿದ ನಂತರ ಕಿತ್ತೂರಿನಲ್ಲಿಯೇ ನೆಲೆಸಿ, ಕೆರೆ ಬಾವಿಗಳನ್ನು ಕಟ್ಟಿಸುವುದರಲ್ಲಿಯೂ, ತೀರ್ಥಯಾತ್ರೆಗಳನ್ನು ಮಾಡುವುದರಲ್ಲಿಯೂ, ಪುರಾಣ ಹೇಳುವುದರಲ್ಲಿಯೂ ತಮ್ಮ ವಿಶ್ರಾಂತಿ ಜೀವನವನ್ನು ವ್ಯಯ ಮಾಡಿದರಂತೆ. ಒಳ್ಳೆಯ ಪುರಾಣ ಪ್ರವಚನಕಾರರಾಗಿದ್ದ ಮೂಲಕ ಇವರನ್ನು ಎಲ್ಲ ಕಡೆಯಿಂದಲೂ ಜನರು ಆಮಂತ್ರಿಸುತ್ತಿದ್ದರಂತೆ.

ಶಾಂತವೀರರ ಶಿಷ್ಯವೃಂದ ದೊಡ್ಡದು. ಅವರು ಬೆಳಗಾವಿಯಲ್ಲಿದ್ದಾಗ, ದಿವಂಗತ ಅರಟಾಳ ರುದ್ರಗೌಡರು ಅವರ ವಿದ್ಯಾರ್ಥಿಯಾಗಿದ್ದರು. ರೊದ್ದ ಶ್ರೀನಿವಾಸರಾಯರು ಅವರ ಶಿಷ್ಯರಾಗಿ ದ್ದರು. ಅವರಿಗೆ ಹಲವು ಕ್ರೈಸ್ತ ಪಂಡಿತರೂ ಮಿತ್ರರಾಗಿದ್ದರು. ೧೮೩೨ರಲ್ಲಿ ರೀವ್ ಅವರಿಂದ ಪ್ರಕಟಿತವಾದ ಕನ್ನಡ ಇಂಗ್ಲಿಷ ಕೋಶದ ಪ್ರಥಮ ಮುದ್ರಣದ ಪ್ರತಿಯನ್ನು ಮಿಶನರಿಯೊಬ್ಬರು ೧೬–೮–೧೮೬೧ ರಂದು 'Shanti Wirappa Shastri Kittur' ಎಂದು ಬರೆದು ಕಾಣಿಕೆ ಕೊಟ್ಟರು. ಅಲ್ಲದೆ, ಮೆ. ಫ್ಲೀಟರವರು ಡಾ. ಕಿಟೆಲ್ ಅವರು ಪ್ರಕಟಿಸಿದ ನಾಗವರ್ಮನ ಛಂದ ಸ್ಸಿನ ಪ್ರತಿಯೊಂದನ್ನು ೫–೭–೧೮೭೫ ರಂದು 'given to Shantavirayya Rachayya Kittur' ಎಂದು ತಮ್ಮ ಸ್ವಂತ ಕೈಯಿಂದ ಬರೆದು ಇವರಿಗೆ ಕೊಟ್ಟರು.[೨]

ಸಾಹಿತ್ಯ ನಿರ್ಮಿತಿ :

(೧) ಶಾಂತವೀರ ಛಂದಸ್ಸು
(೨) ಶಾಂತವೀರ ನಿಘಂಟು
(೩) ರಾಜಶೇಖರ ವಿಳಾಸದ ೨ನೆಯ ಆಶ್ವಾಸದ ಟೀಕೆ
(೪) ನವರತ್ನಹಾರ
(೫) ಕೆಲವು ಕ್ರಮಿಕ ಪುಸ್ತಕಗಳು.

---

೧ ಜೀವನ ಶಿಕ್ಷಣ : ೧೯೫೭ : ಪು. ೭೪.

೨ ಸಟೀಕ ರಾಜಶೇಖರ ವಿಳಾಸ– ನಾಲ್ಕನೆಯ ಆಶ್ವಾಸದ ಮುಖಪತ್ರ.

ಶಾಂತವೀರಯ್ಯನವರು ತುರಮರಿ, ಪಂಡಿತ, ವೆಂಕಟ ರಂಗೋ ಕಟ್ಟಿಯವರ ಹಾಗೆ ಅನೇಕ ಕ್ರಮಿಕ ಪುಸ್ತಕಗಳನ್ನು ಕನ್ನಡದಲ್ಲಿ ರಚಿಸಿದರು. ಇವು ಯಾವುವೊಂದೂ ದೊರಕಲಿಲ್ಲ.

ಇವೂ ಅಲ್ಲದೆ, ಸಟೀಕ ರಾಜಶೇಖರ ವಿಳಾಸದ ೨ನೆಯ ಆಶ್ವಾಸದ ಸೂಚನೆಯ ಮೇಲಿಂದ, ಇವರು 'ಶಾಂತವೀರ ಛಂದಸ್ಸು' ಎಂಬ ಗ್ರಂಥವನ್ನು ರಚಿಸಿದಂತೆ ಕಾಣುತ್ತದೆ. ಶ್ರೀಯುತರು 'ಶಾಂತವೀರ ನಿಘಂಟು' ಎಂಬ ಗ್ರಂಥವನ್ನು ರಚಿಸಿದ್ದಲ್ಲದೆ, ಷಡಕ್ಷರ ಕವಿಯ ರಾಜಶೇಖರ ವಿಳಾಸದ ಎರಡನೆಯ ಆಶ್ವಾಸಕ್ಕೆ ಟೀಕೆಯನ್ನು ಬರೆದರು. ಡಾ. ಫ್ಲೀಟರ ಬಗ್ಗೆ 'ನವರತ್ನಹಾರ' ಎಂಬ ಕವಿತೆಯನ್ನು ರಚಿಸಿದರು. 'ದೊರೆ ಮಲ್ಲಸರ್ಜ ಕಾವ್ಯ' ಎಂಬ ದುಂದುಮೆ ಧಾಟಿಯ ಗ್ರಂಥದ ಮುನ್ನುಡಿಯಲ್ಲಿ 'ಗುರುಶಾಂತವೀರನು ಪೇಳಿದನೀಗ' ಎಂಬ ಉಕ್ತಿಯಿಂದ ಈ ಕಾವ್ಯವನ್ನೂ ಶಾಂತವೀರಯ್ಯನವರೇ ಬರೆದಿದ್ದಾರೆಂದು ಹೇಳಬಹುದು.

ಈ ಶಾಂತವೀರ ಕವಿಗಳ ಮೊಮ್ಮಕ್ಕಳಾದ ಶಾಂತವೀರಸ್ವಾಮಿ ರಾಚಯ್ಯಸ್ವಾಮಿ ಕಿತ್ತೂರ ಅವರೂ ಸುಪ್ರಸಿದ್ಧ ವೈದ್ಯರಾಗಿದ್ದರು. ಅವರ 'ಪಶು ಸಂಜೀವಿನಿ' ಮತ್ತು 'ಹುರುಕಿನ ಔಷಧಗಳು' ೫೦ ವರ್ಷಗಳ ಹಿಂದೆ ಸುಪ್ರಸಿದ್ಧವಾಗಿದ್ದವು. ಡಾ. ಶಾಂತವೀರಸ್ವಾಮಿಗಳು ೧೯೫೦ ರಲ್ಲಿ ಮೃತಿ ಹೊಂದಿದರು. ಅಜ್ಜನ ಕಾವ್ಯ ಪ್ರಭಾವವೋ ಏನೋ ಶ್ರೀಯುತರು ತಮ್ಮ ಔಷಧದ ಜಾಹೀರಾತುಗಳನ್ನು ಕೂಡ 'ಪ್ರಭಾತ'ದಲ್ಲಿ ಕಾವ್ಯರೂಪದಲ್ಲಿಯೇ ಪ್ರಕಟಿಸುತ್ತಿದ್ದರು. ಹಳೆಯ ತಲೆಮಾರಿನವರಿಗೆ ಡಾ. ಶಾಂತವೀರರ ಈ ಜಾಹೀರಾತು ಸುಪರಿಚಿತವೇ ಇದೆ.

ತರತರದ ತಿಂಡಿಯಿಂದಂ
ಪರಪರನೇ ಕೆರೆದು ಕೆರೆದು ಬೇಸರಗೊಡುವಾ
ಹುರುಕಿನ ಬಾಧೆಯ ಹುರಿಯುವ
ವರತರದೀ ಶಾಂತವೀರನೌಷಧ ತರಿಸೈ ॥ ೧ ॥

ಒಣ ಹುರುಕು ಹಸಿ ಹುರಕುಂ
ಘನತರ ಗಜಕರ್ಣ ಕಜ್ಜಿ ಇಸುಬುಗಳೆಲ್ಲಂ
ಒಣಗೊಣಗಿ ಹುರಿದು ಹೋಗುತ
ಗುಣವಕ್ಕುಂ ಶಾಂತವೀರನೌಷಧದಿಂದಾ ॥ ೨ ॥

ಸಟೀಕ ರಾಜಶೇಖರವು (೧೮೭೨)

'ರಾಜಶೇಖರ ವಿಳಾಸ' 'ಜೈಮಿನಿ'ಗಳು ಒಂದು ಕಾಲಕ್ಕೆ ತುಂಬಾ ಜನಪ್ರಿಯವಾದ ಕಾವ್ಯಗಳಾಗಿದ್ದವಷ್ಟೇ. ಪ್ರತಿಯೊಂದು ಮಠ ಮಂದಿರದಲ್ಲಿ ಅವುಗಳ ವಾಚನ, ವ್ಯಾಖ್ಯಾನಗಳು ನಡೆಯುತ್ತಿದ್ದವು. ಒಂದು ಕಾಲಕ್ಕಂತೂ 'ರಾಜಶೇಖರ ವಿಳಾಸ' ಓದಿದವರಿಗೆ ಹೆಣ್ಣಿನ ವರದಕ್ಷಿಣೆ ಇದ್ದಿತೆಂಬ ಕಲ್ಪನೆ ಇದ್ದಿತು. ವೆಂಗಸೂರಿ ಚೆನ್ನಬಸಪ್ಪನವರು ಈ ಕವಿಯ ಕವಿಕರ್ಣ ರಸಾಯನಕ್ಕೆ ಸಂಸ್ಕೃತ ವ್ಯಾಖ್ಯಾನ ಬರೆದು ಕವಿಯ ಬಗೆಗೆ ಕುತೂಹಲ ಕೆರಳಿಸಿದರು. ಕಿತ್ತೂರ ಶಾಂತವೀರಯ್ಯನವರು, ಗಂಗಾಧರ ಮಡಿವಾಳೇಶ್ವರ ತುರಮರಿಯವರು, ಧೋಂಡೋ ನರಸಿಂಹ ಮುಳಬಾಗಿಲ ಅವರು, ಅನ್ನದಾನಯ್ಯ ಆಲಕೆರೆಮಠ ಅವರು ಈ ಗ್ರಂಥಕ್ಕೆ ಟೀಕೆ, ವ್ಯಾಖ್ಯಾನಗಳನ್ನು ಬರೆದರು. ತುರಮರಿಯವರಿಂದ ರಚಿತವಾದ ಮೊದಲನೆಯ ಆಶ್ವಾಸದ ಟೀಕೆ ಸನ್ ೧೮೭೦ರಲ್ಲಿ ಪ್ರಕಟಿತವಾಯಿತು. ಇದಕ್ಕಾಗಿ ಶಿಕ್ಷಣ ಇಲಾಖೆಯ ಡಾಯರೆಕ್ಟರ ಅವರು ತುರಮರಿಯವರಿಗೆ ೨೦೦ ರೂ.

ಬಹುಮಾನವನ್ನು ಕೊಟ್ಟರು. ಶಾಂತವೀರರ ೨ನೆಯ ಆಶ್ವಾಸದ ಟೀಕೆ ಸನ್ ೧೮೭೨ ರಲ್ಲಿ ಪ್ರಕಟವಾಯಿತು. ಅನ್ನದಾನೀಶ್ವರ ಅರಳೀಮಠ ಅವರ ಮೂರನೆಯ ಆಶ್ವಾಸದ ಟೀಕೆ ಸನ್ ೧೨-೧-೧೮೭೪ ರಂದು ಪ್ರಕಟಿತವಾಯಿತು. ಅನಂತರ, ತುರಮರಿಯವರು ಬೆಳಗಾವಿಯ ನಾರ್ಮಲ್ ಸ್ಕೂಲಿನ ವಾಯಿಸ್ ಪ್ರಿನ್ಸಿಪಾಲರಾಗಿದ್ದಾಗ, ನಾಲ್ಕನೆಯ ಆಶ್ವಾಸದ ಟೀಕೆ ಬರೆದರು. ಅನ್ನದಾನೀಶ್ವರರು ತಮ್ಮ ಪೀಠಿಕಾ ಪದ್ಯದಲ್ಲಿ "ಗಂಗಾಧರ ಶಾಂತವೀರ ಶರಣರ್ ಪೇಳ್ದಾರಿಭಾಷ್ಯದ್ವಿತೀಯ ನವಾಶ್ವಾಸ...." ಎಂದು ಹೇಳಿರುವದರಿಂದ ೯ನೆಯ ಆಶ್ವಾಸದ ಟೀಕೆಯೂ ಈ ಇಬ್ಬರಲ್ಲಿ ಒಬ್ಬರಿಂದ ರಚಿತವಾದಂತೆ ಕಾಣುತ್ತದೆ. ಹೀಗೆ, ರಾಜಶೇಖರ ವಿಳಾಸದ ವ್ಯಾಖ್ಯಾನ ವಿಚಾರ ನಡೆದೇ ಇದೆ. ಇತ್ತೀಚೆಗೆ, ಸನ್ ೧೯೦೭ ರಲ್ಲಿ ಬೆಂಗಳೂರು ಗುರುಪಣ್ಣದೇವರ ಮಠದ ನಂಜುಂಡಸ್ವಾಮಿಗಳು ೧೩ ಮತ್ತು ೧೪ ನೆಯ ಆಶ್ವಾಸಗಳಿಗೆ ಟೀಕೆ ಬರೆದಿದ್ದಾರಲ್ಲದೆ, ತಮ್ಮ ಮುನ್ನುಡಿಯಲ್ಲಿ "೧೧-೧೨ ಈ ಎರಡೂ ಆಶ್ವಾಸಗಳಿಗೆ ಟೀಕೆ ಬರೆದು ಮುದ್ರಣ ಮಾಡಿಸುವ ಸಂಭ್ರಮಾಸಕ್ತರಾಗಿದ್ದೇವೆ" ಎಂದೂ ಹೇಳಿದ್ದಾರೆ. ಇದರಿಂದ ೧೧-೧೨ನೆಯ ಆಶ್ವಾಸಗಳಿಗೂ ಟೀಕೆಗಳು ಬರೆಯಲ್ಪಟ್ಟ ಹಾಗೆ ಕಾಣುತ್ತದೆ. ಇದರಿಂದ ಕಳೆದ ಶತಮಾನದಲ್ಲಿ 'ರಾಜಶೇಖರ ವಿಳಾಸ'ಕ್ಕೆ ಎಷ್ಟು ಪಂಡಿತಮನ್ನಣೆಯಿತ್ತೆಂಬ ಕಲ್ಪನೆ ಬಾರದಿರದು.

'ಸಟೀಕ ರಾಜಶೇಖರ'ವು ಇಂದಿಗೆ ಸುಮಾರು ನೂರು ವರ್ಷಗಳ ಹಿಂದೆ ಸನ್ ೧೮೭೨ ರಲ್ಲಿ ರಚಿತವಾಯಿತು. ಆಗ ಶಾಂತವೀರಯ್ಯನವರು ಬೆಳಗಾವಿಯ ಟ್ರೇನಿಂಗ ಕಾಲೇಜಿನಲ್ಲಿ ಶಿಕ್ಷಕರಾಗಿದ್ದರು. ಇದರ ಮುಖಪುಟವನ್ನು ಅನ್ಯತ್ರ ಕೊಡಲಾಗಿದೆ. ೧೫೩+೮ ಪುಟಗಳ ಈ ಗ್ರಂಥ ಬೆಳಗಾವಿಯ ಬೆಳಗಾವ ಸಮಾಚಾರ ಮುದ್ರಣಾಲಯದಲ್ಲಿ ಮುದ್ರಿತವಾಯಿತು. ಇದರ ಬೆಲೆ ೧ ರೂಪಾಯಿ ೮ ಆಣೆ.

ಗ್ರಂಥದ 'ಸೂಚನೆ'ಯಲ್ಲಿ ಸ್ವವಿಷಯಕವಾಗಿ ಹೇಳುವಾಗ ಲೇಖಕರು "ಮಲ್ಲಾಡ ಕಿತ್ತೂರೆಂಬ ಗ್ರಾಮದಲ್ಲಿಯಿರುವ ಹುಚ್ಚ ರಾಚಯ್ಯನವರ ಮಠದ ರಾಚಿದೇವ ಶಿವಗಂಗಾದೇವಿಯವರ ಪುಣ್ಯಗರ್ಭೋದಯನಾದ ಶಾಂತವೀರದೇವನು ಗುರು ಕಾರುಣ್ಯಾನುಸಾರವಾದ ಯಥಾಮತಿಯಿಂದ ಈ ರಾಜಶೇಖರ ವಿಳಾಸದೆರಡನೆಯ ಸಂಧಿಯನ್ನು ವಿವರಿಸಿ ಶ್ಲೋಕದಲ್ಲಿ ಚರಣ, ಪ್ರಾಸ, ವೃತ್ತನಾಮಗಳಿಂದಲೂ, ಅನ್ವಯದಲ್ಲಿ, ಶ್ಲೋಕಾರ್ಥ, ತದ್ಭವ, ಶಬ್ದಾರ್ಥ, ಸಮಾಸಗಳಿಂದಲೂ, ಶಾಸ್ತ್ರ ವಿಷಯದಲ್ಲಿ, ಕೌಮುದಿ, ಸಾರಸ್ವತ, ಶಬ್ದಮಣಿದರ್ಪಣ, ಮೊದಲಾದ ಸಂಸ್ಕೃತ ಕರ್ಣಾಟ ವ್ಯಾಕರಣ ಸೂತ್ರಾರ್ಥಗಳಿಂದಲೂ ಶಾಂತವೀರ ಛಂದಸ್ಸು, ನಾಗವರ್ಮ ಛಂದಸ್ಸುಗಳ ನೇಮಗಳಿಂದಲೂ ಕುವಲಯಾನಂದ ಚಂದ್ರಿಕಾ ಮೊದಲಾದಲಂಕಾರಗಳ ವ್ಯಾಖ್ಯಾನಗಳಿಂದಲೂ ನವರಸಗಳಿಂದಲೂ ಧ್ವನಿಗಳಿಂದಲೂ ನೋಟದಲ್ಲಿ ಪುರಾಣಾಂತರ ಕಥೆಗಳಿಂದಲೂ ಕೋಶದಲ್ಲಿ ಸಂಸ್ಕೃತ ಕರ್ಣಾಟ ಶಬ್ದಗಳ ಉತ್ಪತ್ತ್ಯಗಳಿಂದಲೂ ಸಯುಕ್ತವಾಗಿ ಸುಲಭ ಭಾಷೆಯೊಳಗೆ ಟೀಕಿಸಿದನು" ಎಂದು ಹೇಳಿದ್ದಾರೆ.

ಮೇಲಿನ ವಿವರಣೆಯಿಂದ ಶ್ರೀಯುತರ ಅನುಷ್ಠಾನ, ಪಾಂಡಿತ್ಯಗಳ ಅರಿವಾಗದಿರದು. ಶೈಲಿಯ ಸುಭಗತೆಗಾಗಿ ಈ ಕೆಳಗಿನ ದೃಷ್ಟಾಂತವನ್ನು ಕೊಡಬಹುದು :

ತೊಳಗುವ ಚಂದ್ರಕಾಂತಕಳಶಂಬಿಡಿದಂಬುಜನೇತ್ರೆ ನೀರನಂ
ಜುಳಿಪುಟದಲ್ಲಿ ನಿಂದೆರೆಯೆ ತನ್ಮಧುರಾಧರರಾಗಮಿಶ್ರಿತೋ
ಜ್ವಳಮರುಣಾಂಬುವೆಂದುಸಿಕನಿರ್ವುದನೀಕ್ಷಿಸೆ ನಕ್ಕೊಡಾಕೆಯು
ಜ್ಜ್ವಳದಶನಾಂಶುಮಿಶ್ರಮದು ಶಂಕೆಯನೋಡಿಸೆ ಪಾಂಥನೀಂಟಿದಂ ॥

"ಭಾವಾರ್ಥ– ಅರವಟ್ಟಿಗೆಯ ಸ್ತ್ರೀಯಳು ಚಂದ್ರಶಿಲೆಯ ಪೊಗೆಯಿಂದ ಹಾದಿಕಾರಗೆ ನೀರ ಹನಿಸುವಾಗ ಕೆಳದುಟಿಯ ಕೆಂಪುಕಾಂತಿಯು ನೀರೊಳಗೆ ಪ್ರತಿಫಲಿಸುದುದರಿಂದ ಭ್ರಾಂತಿಯಾಗಿ ರಕ್ತವೆಂದು ತಿಳಕೊಂಡು ಕುಡಿಯದೆ ಸುಮ್ಮನೆಯಿರುವವನನ್ನು ಕಂಡು ನಕ್ಕ ಕೂಡಲೆ ಈಕೆಯ ನಿರ್ಮಲವಾದ ಹಲ್ಲಿನ ಕಾಂತಿಯು ಆ ನೀರೊಳಗೆ ಪ್ರತಿಫಲಿಸಿ ಸಂಶಯವನ್ನು ಬಿಡಿಸಲಾಗಿ ಹಾದಿಕಾರನು ನೀರ ಕುಡಿದನು." ೧

ಇಂದು 'ಅ–ಸಭ್ಯ' ಎಂದು ನಮಗನಿಸಬಹುದಾದ ಹಲವು ಪದಗಳನ್ನು ಸುಮಾರು ೧೦೦ ವರ್ಷಗಳ ಹಿಂದೆ ಸಲೀಲವಾಗಿ ಪಂಡಿತರೂ ಕೂಡ ಉಪಯೋಗಿಸುತ್ತಿದ್ದಂತೆ ಕಂಡುಬರುತ್ತದೆ. ಅಂದು ಸಭ್ಯವಾದುದು, ಪ್ರಾಯಶಃ ಇಂದು ಅಸಭ್ಯ. ಇಂದಿನ ಸಭ್ಯ, ನಾಳಿನ ಅಸಭ್ಯವಾಗಬಹುದು.

ಬಡನಡು ಬಳ್ಕೆ ಬಟ್ಟಿದೊಲೆ ಮೇಲುದನೆತ್ತೆ ನಿತಂಬಮಂತಲಂ
ಪೊಡವರೆ ಕಪೋಲರಂಗದೊಳ್ ನರ್ತಿಸೆ ಕನ್ನವುರಂ........ ಎಂಬ ಈ ಪದ್ಯದ ಭಾವಾನುವಾದ ಹೀಗೆ :

"ಬಡನಡು ಬಳುಕುತ್ತಲೂ, ಮೊಲೆಗಳ ಮೇಲಿನ ಸೆರಗು ಹಾರುತ್ತಲೂ, ಕುಂಡಿಗಳು ಗದಗದಿಸುತ್ತಲೂ........" ಇತ್ಯಾದಿ. ೨

ಅದರಂತೆಯೇ,

ಎಳೆಯಳ ಕಣ್ಗದಿರೋಡುವ
ಗಿಳಿಗಳ ಬೆಂಬತ್ತಿ ಸುತ್ತಿ ಮುತ್ತಿರೆ ತೋರ್ಕುಂ ।
ಪೊಳೆದಿಡುವಲೆಯಿಡೆಯುವಳವ
ನೊಳಗಾಗಿಸಿದಂತೆ ನೋಳ್ಪ ಪಥಿಕರ್ಗಾಗಳ್ ॥

ಇದರ ಭಾವಾರ್ಥ :

"ಗಿಳಿಗಳನ್ನು ಪೋಗಗೆ ಮಾಡ ಹಾಕಿದ ಬಲೆಯೋ ಏನೋ ಎಂಬ ಹಾಂಗೆ ಹಾರಿ ಹೋಗುವ ಗಿಳಿಗಳ ಬೆನ್ನ ಹತ್ತಿ ಮುತ್ತಿದ ಮಿಂಡಿಯ ನೋಟದ ಕಾಂತಿಯು ಕಣ್ಣಿಗೆ ರಮ್ಯವಾಗಿ ತೋರಿತು." ೩

ಈ ಮಿಂಡಿ, ಲೌಡಿ ಪದಗಳು ಇಂದು ಅಶ್ಲೀಲವೆನಿಸುತ್ತವೆ. ಶಾಂತಕವಿಗಳಲ್ಲಿ ಊರ್ವಶಿ ತನ್ನನ್ನು ಲೌಡಿಯೆಂದು ಕರೆದುಕೊಳ್ಳುತ್ತಾಳೆ. ಭಾಷಾಚರಿತ್ರೆಯ ದೃಷ್ಟಿಯಿಂದಲೂ ಇಂಥ ಪ್ರಯೋಗಗಳು ಗಮನಾರ್ಹವಾಗಿವೆ.

ಕಾಮನು ತನ್ನನ್ನು ಬಾಣವನ್ನಾಗಿ ಉಪಯೋಗಿಸಿಕೊಳ್ಳಬೇಕೆಂದು ಕೇತಕಿಯು ಕೇಳುವ ಸಂದರ್ಭದ ಪದ್ಯದಲ್ಲಿ (ಪದ್ಯ ೫೬: ಆಶ್ವಾಸ ೨) ಶಾಂತವೀರಯ್ಯನವರು ಬರೆದ 'ನೋಟ' ದಲ್ಲಿ ಅವರಪಾಂಡಿತ್ಯವನ್ನು ಗಮನಿಸಬಹುದಾಗಿದೆ :

"ಪೂರ್ವದಲ್ಲಿ ಬ್ರಹ್ಮ ನಾರಾಯಣರು ತಮ್ಮೊಳಗೆ ಅಹಂ ಬ್ರಹ್ಮ ಎಂಬ ನಿಮಿತ್ತವಾಗಿ ಜಗಳಾಡುವ ಸಮಯದಲ್ಲಿ, ಎಲೈ ಬ್ರಹ್ಮ ನಾರಾಯಣರೆ ನಿಮ್ಮ ಗರ್ವವನ್ನು ಪರಿಹರಿಸುವದಕ್ಕೆ

೧ ಸಟೀಕ ರಾಜಶೇಖರ ೧೮೭೨– ಪು. ೨೮–೨೯.

೨ ಅದೇ ಪು. ೨೭.

೩ ಅದೇ ಪು. ೨೯.

ಮಹಾದೇವನು ಉರುಲಿಂಗ ರೂಪದಿಂದ ಉದಯವಾಗುವನೆಂದು ಆಕಾಶವಾಣಿಯು ನುಡಿದು ಬಯಲಾದ ಕೂಡಲೆ ನೇತ್ರಕ್ಕೆ ಅಗೋಚರವಾಗಿ ಉರುಲಿಂಗವು ಉದಯವಾಯಿತು; ಆಗ ಮುನಿಗಳ ಸಮಕ್ಷದಲ್ಲಿ ಈ ಲಿಂಗದ ಪಾದ ಮಸ್ತಕಗಳನ್ನು ಕಂಡವರು ದೊಡ್ಡವರೆಂದು ಪ್ರತಿಜ್ಞಾ ಮಾಡಿಕೊಂಡು ನಾರಾಯಣನು ವರಾಹ ರೂಪದಿಂದ ಪಾತಾಳಾದಿ ಲೋಕಗಳನ್ನು ತಿರಿಗಿ ಪಾದಗಳನ್ನು ಕಾಣದೆ ಬಂದನು. ಹಂಸ ರೂಪದಿಂದ ಸ್ವರ್ಗಾದಿ ಲೋಕಗಳನ್ನು ತಿರಿಗಿ ಕಾಣದೆ ಬ್ರಹ್ಮನು ಸಭೆಯೊಳಗೆ ಲಿಂಗದ ಮಸ್ತಕವನ್ನು ಕಂಡೆನೆಂದು ಸುಳ್ಳು ಹೇಳಿದನು; ಇದಕ್ಕೆ ಮೋಸ ಹೋದ ಕೇತಕೀಪುರುಷನು ಆ ಬ್ರಹ್ಮನು ಲಿಂಗದ ತಲೆಯನ್ನು ಕಂಡನೆಂದು ಸುಳ್ಳು ಸಾಕ್ಷಿ ಹೇಳಿದ ಕೂಡಲೆ ಕೋಪಿಸಿ ನನ್ನ ಪೂಜೆಗೆ ದೂರವಾಗಿ ಸೂಳೆಯರ ತುರುಬಿನಲ್ಲಿ ಇರುಹೋಗೆಂದು ಮಹಾದೇವನು ಆ ಕೇತಕೀಪುರುಷಗೆ ಶಾಪವ ಕೊಟ್ಟನು. ಎಂಬೀ ಕಥೆಯು ವ್ಯಾಸಕೃತ ಪುರಾಣದಲ್ಲಿ ಪ್ರಸಿದ್ಧವಾಗಿರುವದು." ೧

—

೧ ಸಟೀಕ ರಾಜಶೇಖರ ೧೮೭೩– ಪು. ೫೨–೫೫.

ಈ ದೈವದ್ರೋಹದ ಬಗೆಗೆ ಲಕ್ಷ್ಮೀಶನು ಹೀಗೆ ಹೇಳಿದ್ದಾನೆ:

ಬಗೆವೊಡೆ ಇವು (ಕೇತಕಿ) ಮುನ್ನ ಮಾಡಿರ್ದ ದೈವದ್ರೋಹ
ದಘದಿಂದೆ ಬನದ ಪೊರವಳಯದೊಳ್ ಬಹು ಕಂಟ
ಕಗಳಾಗಿ ಬಂದು ಸಂಭವಿಸಿರಲ್ ತಳೆತ ಹೊಂಗೇದಗೆಗಳ್ ಅವರೊಳಾವಿ
ವಿಂಗೆ ಮಲಿನವಾಯ್ತು ಸರ್ವಾಂಗಮುಂ ಭ್ರಮರಾವ
ಳಿಗೆ ತಮಗದರ ಸಂಗಮೇಕೆಂದು ಪೂತ ಸಂಪ
ಗೆಗಳ್ ಅತಿ ಶುಚಿಗಳಂತೆ ಎಸೆಯುತಿವೆ ನೋಡು ನಂದನಪುರದ ನಂದನದೊಳು ॥

—ಜೈಮಿನಿ ಭಾರತ– ಸಂಧಿ ೩

ವಿವರಣೆಗಾಗಿ 'ಆರು ಪ್ರಬಂಧಗಳು' ರಾ. ಮು. ಧಾರವಾಡಕರ : ೧೯೬೩, ಪು. ೯೧– ನೋಡುವುದು.

ಗಂಗಾಧರ ಮಡಿವಾಳೇಶ್ವರ ತುರಮರಿ

(ಸು. ೧೮೨೭–೧೮೭೭)

ಇದು ಅಗಸ್ತ್ಯಾಶ್ರಮದ ಹತ್ತಿರವಿದ್ದ ಪಂಪಾ ಸರೋವರದ ತಡಿಯಲ್ಲಿ ವಿಶಾಲವಾಗಿ ವ್ಯಾಪಿಸಿ ನಿಂತ ಬೂರಲಮರ :

“ಆ ಸರೋವರದ ಪಡುವಣ ಪ್ರದೇಶದಲ್ಲಿ, ರಘುವೀರನ ಕೂರಂಬುಗಳ ಹೊಡೆತಕ್ಕೆ ಕಡಿವಡೆದ ಸಪ್ತತಾಳ ವೃಕ್ಷಗಳ ನೆರೆಯಲ್ಲಿಯೇ ಒಂದು ಬಹು ಕಾಲದ ದೊಡ್ಡ ಶಾಲ್ಮಲೀವೃಕ್ಷ (ಬೂರಲಮರ) ವದೆ. ಆ ಗಿಡದ ಬುಡಕ್ಕೆ ದೊಡ್ಡ ಮುದಿ ಹೆಬ್ಬಾವು ಸುತ್ತು ಹಾಕಿಕೊಂಡಿರುವುದರಿಂದ ಕಟ್ಟೇ ಕಟ್ಟಿದಂತೆ ಕಾಣುತ್ತಿರುವದು. ಆ ಮರದ ಟೊಂಗೆಗಳು ಬಹು ವಿಸ್ತಾರವಾಗಿ, ಗಗನ ಮಂಡಲದಲ್ಲೆಲ್ಲ ಪಸರಿಸಿರುವದರಿಂದ, ಅದು ತನ್ನ ಮಾರು ಹಾಕಿ ದಿಕ್ಕುಗಳನ್ನು ಅಳೆಯುತ್ತದೆಯೋ ಏನೋ ಅನ್ನುವಂತೆ ತೋರುತ್ತಿರುವದು. ಅದರ ಟೊಂಗೆಗಳ ಮೇಲೆ ಲೆಕ್ಕವಿಲ್ಲದಷ್ಟು ಹಾವಿನ ಪರೆಗಳು ಜೋತಾಡುತ್ತಿರುವದರಿಂದ, ಅದು ಸೂಕ್ಷ್ಮವಾದ ಬಿಳಿಯ ಶೆಲ್ಲೆಯನ್ನು ಮೈಮೇಲೆ ಹೊತ್ತುಕೊಂಡಂತೆ ಒಪ್ಪುತ್ತಿರುವದು. ಆ ಗಿಡದ ಬುಡದಿಂದ ತುದಿತನಕ ಸಾವಿರಾರು ಬಳ್ಳಿಗಳು ಹಬ್ಬಿರುವದರಿಂದ, ಮುಪ್ಪಿನ ಕಾಲಕ್ಕೆ ಅದರ ಮೈಮೇಲೆ ನರಗಳು ಎದ್ದಂತೆ ಕಾಣುತ್ತಿರುವವು. ಅದರ ತುದಿಯ ಮೇಲಿನ ಅರಳೆಯು ನರೆಗೂದಲುಗಳಂತೆ ಒಪ್ಪುವದು. ಆ ಮರದ ಹೊದರುಗಳಲ್ಲಿಯೂ, ಹೊದೆಗಳಲ್ಲಿಯೂ, ತುದಿಯಲ್ಲಿಯೂ ನಾಡು ನಾಡುಗಳಿಂದ ಬಂದ ಸಾವಿರಾರು ಗಿಳಿಗಳು ಗೂಡು ಕಟ್ಟಿಕೊಂಡಿರುತ್ತಿದ್ದವು. ಬಹಳ ಹಳೆಯದಾದುದರಿಂದ ಆ ಮರದ ಎಲೆಗಳೆಲ್ಲ ಉದುರಿ ಹೋದರೂ, ಆ ಗಿಳಿಗಳೇ ಅದರ ದಟ್ಟವಾದ ಹಸುರೆಲೆಗಳಂತೆ ಕಾಣಿಸುತ್ತಿರುವವು.” ೧

ಇದು ಪಕ್ಷಿಗಳ ಮಾನವೀಯ ಭಾವನೆ :

“........ಜೀಯಾ, ಕ್ರೂರ ಕರ್ಮಗಳನ್ನು ಮಾಡುವವನಿಗೆ ಯಾವದೂ ಅಸಾಧ್ಯವಲ್ಲವು ನೋಡಿರಿ. ಆ ಮರವು ಎಷ್ಟೋ ತಾಳೆಯ ಮರದುದ್ದ ವಿದ್ದರೂ, ಅದರ ಟೊಂಗೆಗಳು ಮುಗಿಲಿಗೆ ಮುಟ್ಟಿದ್ದರೂ, ಬುಡದಿಂದ ತುದಿತನಕ ಮುಳ್ಳುಗಳಿದ್ದರೂ, ಆ ಮುದಿಬೇಡನು ತೊಂದರೆಗೊಳ್ಳದೆ ಸುಲಭದಿಂದ ಅದನ್ನು ಏರಿದನು........ ಆ ರಕ್ಕಸಸಂಘ ಬೇಡ ಬಂದವನ್ನು ಕಂಡು ನಮ್ಮ ತಂದೆಯು

೧ ಬಾಣಕವಿಯ ಕಾದಂಬರಿ ಕಥೆಯು– ಸಾವಂತ–ಬೆಳಗಾಂವ : ಪು. ೧೨–೧೩.

ಸಾಯುವ ಹೊತ್ತು ಬಂತೆಂದು ಹೌಹಾರಿ, ಇನ್ನೇನು ಮಾಡಲೆಂದು ಕಣ್ಣು ತುಂಬ ನೀರು ತಂದು, ಗದಗದನೆ ನಡುಗಿದನು; ಕಣ್ಣಿಗೆ ಕತ್ತಲೆಗವಿದು, ಕುತ್ತಿಗೆ ನರಲುಬ್ಬಿ, ಬಾಯಿಂದ ಮಾತುಗಳೇ ಬರಲೊಲ್ಲವು. ನನ್ನ ನೆನಪಾದುದರಿಂದಲೂ ಅವನ ದುಃಖಕ್ಕೆ ಅಳವಿಲ್ಲದ ಹಾಗಾಯಿತು. ನನ್ನನ್ನು ತನ್ನ ಎದೆಗೆ ಅವಚಿಕೊಂಡು, ಇನ್ನು ಯತ್ನ ಮೀರಿತೆಂದು, ಪಕ್ಕದೊಳಗಿಟ್ಟುಕೊಂಡು, ಆಶೆದೊರೆದು ಸುಮ್ಮನೆ ಕುಳಿತುಕೊಂಡನು. ಅಷ್ಟರೊಳಗೆ ಆ ಕಿರಾತನು ನಮ್ಮ ಗೂಡಿನ ಹತ್ತರ ಬಂದು, ಕರೇ ಹಾವಿನ ಹೆಡೆಯನ್ನು ಹೋಲುವಂಥ, ಬಿಲ್ಲು ಹಿಡಿದು ದಡ್ಡು ಬಿದ್ದಂಥ, ತನ್ನ ಎಡಗೈಯನ್ನು ನಮ್ಮ ಗೂಡಿನೊಳಗೆ ಹಾಕಿದನು. ಆಗ ನಮ್ಮ ತಂದೆಯೂ ಸಂಕಟದಿಂದ ಅವನ ಕೈ ಕಚ್ಚಿ ಫಡಫಡನೆ ಪಕ್ಕ ಜಾಡಿಸಿ, ಒಳಹೊಕ್ಕು ಒದರಿದರೂ, ಆ ಚಾಂಡಾಲನು ಆ ಮುದಿಗಿಳಿಯನ್ನು ಗೂಡಿನಿಂದ ಹೊರಗೆ ಹಿಡಿದು, ಗೋಣು ಮುರಿದು, ನೆಲಕ್ಕೆ ಒಗೆದನು. (ನಾನು ಮತ್ತೊಂದು ಮರದ ಕೆಳಗೆ ಹಾರಿ ಬಿದ್ದೆನು.) 'ಸತ್ತವರ ಮಕ್ಕಳು ಇದ್ದವರ ಕೈಯೊಳಗೆ' ಎಂಬ ಗಾದೆಯಂತೆ ಆ ಮರವು ನನಗೆ ಆಶ್ರಯ ಕೊಟ್ಟಿತು........ (ನನಗೆ ನೀರಡಿಕೆಯಾಯಿತು.) ನೀರು ಎಲ್ಲಿದ್ದಾವು ಎಂದು ಹುಡುಕುವ ಹವಣಿಕೆಯಿಂದ, ಆ ತಮಾಲವೃಕ್ಷದ ಬುಡದಿಂದ ಮೆಲ್ಲನೆ ಹೊರಟೆನು. ಆಗ ನನ್ನ ಪಕ್ಕ ಬಲಿತಿದ್ದಿಲ್ಲ; ಗೋಣು ನಿಲ್ಲುತ್ತಿದ್ದಿಲ್ಲ. ನಡೆಯಲಿಕ್ಕೆ ಕಾಲೊಳಗೆ ಕಸುವು ಇದ್ದಿಲ್ಲ. ಆದುದರಿಂದ ಆಗಾಗ ನನ್ನ ಮೋರೆಯು ನೆಲಕ್ಕೆ ಬಡೆಯುವದು; ಅಡಿಗಡಿಗೆ ಹೊಳಪ್ಯೈಯಲ್ಲಿಯಿಂದ ಬೀಳುವೆನು. ಹೊರಳಾಡುತ್ತ ಹೋಗುವದರಿಂದ ಮೈಯೆಲ್ಲ ಮಣ್ಣಾಯಿತು........ ಎಷ್ಟು ಕಷ್ಟವಾದರೂ ಬದುಕಬೇಕೆಂಬ ಆಶೆ ಬಿಡುವದಿಲ್ಲ! ಸ್ವಾಮೀ, ಜೀವಕ್ಕಿಂತ ಪ್ರಿಯಕರವಾದದ್ದು ಜಗದೊಳಗೆ ಯಾವದೂ ಇಲ್ಲ ನೋಡಿರಿ! ಅಂಥಾ ನನ್ನ ದಯಾಳು ತಂದೆ ತೀರಿದನೆಂಬ ಹಂಬಲವಿಲ್ಲದೆ, ಆ ಹೆಣವನ್ನು ಅಲ್ಲಿಯೇ ಬಿಟ್ಟು, ನನ್ನ ಜೀವ ಉಳಿಸಿಕೊಳ್ಳುವದನ್ನೇ ನಾನು ನೋಡಿದೆನು ಅದರಿಂದ ನನ್ನಂಥ ನಿರ್ದಯನೂ, ನಿಷ್ಕರುಣನೂ, ಕೃತಘ್ನನೂ, ತಂದೆಗೆ ಮರುಗದವನೂ ಲೋಕದೊಳುಂಟೇ! ಉಪಕಾರ ಮಾಡಿದ ತಂದೆಯನ್ನೇ ಬಯಸದೆ ಬದುಕುವವನ ಬಾಳ್ವೆ ಯಾತರ ಬಾಳ್ವೆ!" ೧

ಇದು ನೃಪಪುತ್ರರಿಗೆ ಉಪದೇಶ :

"ಗುರೂಪದೇಶವನ್ನು ಕೇಳುವದೇ ಕಿವಿಗೆ ಭೂಷಣವು. ಅರಸನ ಮಾತಿಗೆ ತಲೆದೂಗುವವರೇ ಬಹಳ ಮಂದಿ. ನಿಸ್ಪೃಹತೆಯಿಂದ ಅರಸನಿಗೆ ಅಂಜದೆ ಬುದ್ಧಿ ಹೇಳುವವರು ಬಹಳ ಅಪರೂಪ; ಅಂತಹದರೊಳಗೂ ದೈವಯೋಗದಿಂದ ಯಾವನಾದರೊಬ್ಬನು ಗಂಟು ಬಿದ್ದರೂ ಪ್ರಯೋಜನ ವೇನು? ಗರ್ವರೂಪಮದದಿಂದ ಅರಸನ ಕಿವಿಗಳು ಗಡದ್ದು ಹಾಕಿರುತ್ತವೆ. ಆದರಿಂದ ಆತನು ಹೇಳಿದ ಬುದ್ಧಿಯ ಮಾತುಗಳು ವ್ಯರ್ಥವಾಗುವವು. ಮುಖಸ್ತುತಿ ಮಾಡುವವರ ಮರುಳು ಮಾತುಗಳಿಗೆ ಮೋಹಿತರಾದ ಅರಸರ ಮನಸ್ಸು ಗುರು ಹಿರಿಯರ ಸದುಪದೇಶಕ್ಕೆ ಎಳಿಸುವದಿಲ್ಲ. ಅಂಥವರಿಗೆ ಹೇಳುವ ಉಪದೇಶವು ಬುಡಮೇಲು ಮಾಡಿದ ಕೊಡದ ಮೇಲೆ ಹಣಿಸಿದ ನೀರಿನಂತೆ ವ್ಯರ್ಥವೇ ಸರಿ; ಆದುದರಿಂದ ಉಪದೇಶಕನಿಗೆ ಮಾತ್ರ ಖೇದವಾಗುವದೇ ಹೊರ್ತು, ಬೇರೆ ಏನೂ ಫಲವಿಲ್ಲ. ಜೀಯಾ, ಲಕ್ಷ್ಮಿಯು ಪ್ರಾಪ್ತವಾದಾಗ ಜನರು ಬಹಳ ಹೆಮ್ಮೆ ಮಾಡುತ್ತಾರೆ. ಆ ಲಕ್ಷ್ಮಿಯ ದುರ್ಗುಣಗಳನ್ನು ಹೇಳುತ್ತೇನೆ ಕೇಳಿರಿ! ಇಂಗಡಲೊಳಗಿಂದ ಹುಟ್ಟುವಾಗಲೇ ಈಕೆಗೆ ಒಡಹುಟ್ಟಿದವರ ನೆರಳು ಬಿತ್ತೋ ಏನೋ ಅನ್ನುವ ಹಾಗೆ ಚಂದ್ರನ ಕಲೆಯಿಂದ ವಕ್ರತ್ವವು, ಪಾರಿಜಾತವೃಕ್ಷದ ಪಲ್ಲವದಿಂದ ರಾಗವು, ಉಚ್ಚೈಃಶ್ರವದಿಂದ ಚಪಲತೆಯು, ಕಾಲಕೂಟವಿಷದಿಂದ ಮೋಹನ ಶಕ್ತಿಯು, ಮದ್ಯದಿಂದ ಮದವು, ಕಾಸ್ತುಭಮಣಿಯಿಂದ ಕಾಠಿಣ್ಯವು ಪ್ರಾಪ್ತವಾದವು. ಈಕೆ ಒಬ್ಬರನ್ನೂ

೧ ಬಾಣಕವಿಯ ಕಾದಂಬರಿ ಕಥೆಯು– ಪು. ೨೦–೨೧.

ಲೆಕ್ಕಿಸುವದಿಲ್ಲ. ನೋಡ ನೋಡಲು ಮಿಂಚಿನ ಹಾಗೆ ತೋರಿಯಡಗುವಳು. ಜಾಣರು ಸಿರಿಯನ್ನು ನೆಚ್ಚಬಾರದು...." ೧

ಇದು ಭಾಷಾಂತರವೆಂದು ಯಾರು ಹೇಳಬೇಕು! ಬರವಣಿಗೆ ಅಷ್ಟು ಸುಭಗವಾಗಿದೆ; ಲಲಿತವಾಗಿದೆ.

ಇದು ಅಚ್ಛೋದ ಸರೋವರ :

"ಈ ಮೇರೆಗೆ ಮನೋಹರವಾದ ಬನದೊಳಗಿಂದ ಮುಂದಕ್ಕೆ ಹೋಗಲು, ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಿಕೊಳ್ಳುವದಕ್ಕೆ ಮಾಡಿಟ್ಟ ಕನ್ನಡಿಯೋ, ಭೂದೇವಿಯು ಕ್ರೀಡಿಸುವದಕ್ಕೆ ನಿರ್ಮಾಣಮಾಡಿದ ಸ್ಫಟಿಕದ ನೆಲಮನೆಯೋ, ಮಹಾಸಾಗರಗಳ ಉಗಮಸ್ಥಾನವೋ, ಉದಕದ ಅವತಾರವನ್ನು ತಾಳಿ ನೆಲಕ್ಕಿಳಿದ ಆಕಾಶವೋ, ಚಳಿ ಕರಗಿ ಮಡುಗಟ್ಟಿದ ಬೆಟ್ಟವೋ, ಒಬ್ಬುಳಿಗೂಡಿ ಸರೋವರದ ರೂಪ ತಾಳಿದ ತ್ರಿಭುವನದ ಪುಣ್ಯರಾಶಿಯೋ, ರಸರೂಪವನ್ನು ಹೊಂದಿದ ಬೆಳದಿಂಗಳೋ, ಜಲರೂಪವನ್ನಾಂತ ಪರಮೇಶ್ವರನ ಅಟ್ಟಹಾಸವೋ, ಉದಕ ರೂಪವನ್ನು ತಾಳ್ದು ಪಸರಿಸಿ ನಿಂತ ವೈಡೂರ್ಯ ಪರ್ವತವೊ, ಅಥವಾ ನೀರಿನ ರೂಪವನ್ನು ಧರಿಸಿ ಒಂದು ಕಡೆಗೆ ನಿಂತ ಶರತ್ಕಾಲದ ಮೋಡಗಳ ಸಮೂಹವೋ ಏನೋ ಅನ್ನುವ ಹಾಗೆ ತುಂಬಿ ತುಳುಕುವಂಥ ವಿಸ್ತೀರ್ಣವಾದದ್ದೊಂದು ನೆಲೆಯಿಲ್ಲದ ತಂಗೊಳವು ಅತಿ ರಮಣೀಯವಾಗಿ ಕಂಗೊಳಿಸಿತು. ಮತ್ತು ಆ ಸರೋವರವು ಮುನಿಜನರ ಮನದಿಂದ ಅಥವಾ ಹರಿಣಗಳ ನಯನಪ್ರಭೆಯಿಂದ ಅಥವಾ ಮೌಕ್ತಿಕ ಕಿರಣಗಳಿಂದ ನಿರ್ಮಿಸಲ್ಪಟ್ಟಂತೆ ಭ್ರಾಂತಿಯನ್ನುಂಟು ಮಾಡುತ್ತಿತ್ತು. ಆ ಸರೋವರದ ನೀರು ಅತಿ ಸ್ವಚ್ಛವಿದ್ದದ್ದರಿಂದ ತಳದೊಳಗಿನ ವಸ್ತುಗಳೆಲ್ಲ ಸ್ಪಷ್ಟವಾಗಿ ಕಾಣಿಸುತ್ತಿರುವವು. ಇದೇ ಕಾರಣದಿಂದ ಅದಕ್ಕೆ ಅಚ್ಛೋದ ಸರೋವರವೆಂದು ಹೆಸರು ಪ್ರಾಪ್ತವಾಗಿತ್ತು."

ಈ ವರ್ಣನೆ ಅಚ್ಛೋದ ಸರೋವರದ ತಂಪಿನಷ್ಟೇ ಹಿತಾವಹವಾಗಿದೆ. ಈ ಭಾಗಗಳನ್ನು ಓದಿದಂತೆಲ್ಲ ಗಂಗಾಧರ ಮಡಿವಾಳೇಶ್ವರ ತುರಮರಿಯವರ ನೆನಹು ಕಣ್ಣೆದುರಿಗೆ ಕಟ್ಟುತ್ತದೆ. ಈಗ ಸುಮಾರು ೫೦ ವರುಷಗಳ ಹಿಂದೆ ವಿದ್ಯಾರ್ಥಿಗಳಾಗಿದ್ದವರನ್ನು ಈ ಪಠ್ಯಭಾಗಗಳು ಯಾವುದೋ ಒಂದು ದೂರ ಸುದೂರ ಗಂಧರ್ವಲೋಕಕ್ಕೆ ಕರೆದೊಯ್ಯುತ್ತಿದ್ದವು. ಅಲ್ಲಿ ವಿಸ್ತಾರವಾದ ಸರೋವರ, ಸರೋವರದ ತುಂಬೆಲ್ಲ ಅರಳಿದ, ಅರಳುತ್ತಿರುವ ಕಮಲಗಳು, ಅದರಲ್ಲಿ ಎಲ್ಲ ಕಮಲಗಳನ್ನು ಮಾತನಾಡಿಸಿ ಬರುತ್ತಿರುವ ಸುಗಂಧವಾದ ಮಂದಾನಿಲ, ಸುತ್ತಲೂ ಮುಗಿಲುಮುಟ್ಟುವವರೆಗೆ ಬೆಳೆದು ನಿಂತ ಪರ್ವತಶ್ರೇಣಿಗಳು, ಅಲ್ಲಿಯೇ ಮಗ್ಗುಲಿನಲ್ಲಿದ್ದ ಶಿವಾಲಯ, ಅಲ್ಲಿ ಹಾಲಿನ ಕೆನೆಯನ್ನೇ ಕೂಡಿಸಿ ಮಾಡಿದ್ದರೋ, ಬಿಳಿ ಶಂಖಗಳನ್ನು ಕಡೆದು ನಿರ್ಮಿಸಿದರೋ, ಮೃದುಮೃಣಾಲಗಳನ್ನು ಸಂಚಯಿಸಿ ರಚಿಸಿದರೋ ಎನ್ನುವ ಹಾಗೆ ಕಾಣುವ ಗಂಧರ್ವ ಕನ್ಯೆ. ಈ ಜಗತ್ತು ಈ ಭೌತಿಕ ಜಗತ್ತಲ್ಲ, ಗಂಧರ್ವಲೋಕ ಅನ್ನುವ ಹಾಗೆ ಶೈಲಿಯನ್ನು ಮಿಡಿದರು ಗಂಗಾಧರಯ್ಯನವರು. ಬಾಣ ಕಾದಂಬರಿ ಕನ್ನಡಿಗರಿಗೆ ಪ್ರಿಯವಾದುದು ಮೂಲ ಸಂಸ್ಕೃತದಿಂದಲ್ಲ, ಗಂಗಾಧರಯ್ಯನವರ ಕನ್ನಡ ಅನುವಾದದಿಂದ ಎಂದು ಹೇಳಿದರೆ ಅತಿಶಯೋಕ್ತಿಯೇನಲ್ಲ! ಗಂಗಾಧರಯ್ಯನವರ ಶೈಲಿಯಲ್ಲಿ ವೈಶಂಪಾಯನ ವೃತ್ತಾಂತದ ಭಾವುಕತೆ ಇದೆ; ಮಹಾಶ್ವೇತೆಯ ನೈರ್ಮಲ್ಯವಿದೆ; ಅಚ್ಛೋದ ಸರೋವರದ ತಂಪಿದೆ. ಇಂಥ ಗಂಗಾಧರಯ್ಯನವರು ಇನ್ನೂ ಹೆಚ್ಚು ಕೃತಿಗಳನ್ನು ಕನ್ನಡದಲ್ಲಿ ರಚಿಸಿದ್ದರೆ ಎಷ್ಟು ಚೆನ್ನಾಗಿ ಆಗುತ್ತಿತ್ತು ಎಂಬ ಭಾವನೆ ಬಾರದಿರದು. ಗಂಗಾಧರ ಮಡಿವಾಳೇಶ್ವರ ತುರಮರಿ ಎಂಬುದು ಈ ಲೋಕದ ಹೆಸರಲ್ಲ, ಗಂಧರ್ವಲೋಕದ ಹೆಸರು!

---

೧ ಬಾಣಕವಿಯ ಕಾದಂಬರಿ ಕಥೆಯು— ಪು. ೪೬–೪೭.

ಗಂಗಾಧರರ ಮೂಲ ಊರು ಬೆಳಗಾವ ಜಿಲ್ಲೆಯ ಬೈಲಹೊಂಗಲ ತಾಲೂಕದ ತುರಮರಿ ಎಂಬುದು.[೧] ಇವರ ತಂದೆಯ ಹೆಸರು ಚೆನ್ನಬಸಪ್ಪ ಎಂದು. ಇವರು ವೀರಶೈವ ಮತದ ಪಂಚಮಸಾಲಿ ಒಳ ಪಂಗಡಕ್ಕೆ ಸೇರಿದವರು. ಚೆನ್ನಬಸಪ್ಪನವರಿಗೆ ಗಂಗಪ್ಪ, ವೀರಪ್ಪ ಮತ್ತು ಸಿದ್ಧಲಿಂಗಪ್ಪ ಎಂಬ ಮೂವರು ಗಂಡುಮಕ್ಕಳೂ ಚೆನ್ನಬಸವ್ವ ಎಂಬ ಒಬ್ಬ ಹೆಣ್ಣುಮಗಳೂ ಇದ್ದರು. ಚೆನ್ನಬಸಪ್ಪನವರ ಮನೆತನದ ಮೂಲ ಗುರುಗಳು ಅಥಣಿಯ ಹಿರೇಮಠದ ಮಡಿವಾಳಸ್ವಾಮಿಗಳು. ಮಡಿವಾಳಸ್ವಾಮಿಗಳು ತಮ್ಮ ಅಣ್ಣ-ತಮ್ಮಂದಿರಲ್ಲಾದ ಮನೆತನದ ತಂಟೆಯ ಮೂಲಕ ಅಥಣಿಯನ್ನು ಬಿಟ್ಟು ಬಂದು ತಮ್ಮ ಶಿಷ್ಯರಾದ ಚೆನ್ನಬಸಪ್ಪನವರ ಮನೆಯಲ್ಲಿಯೇ ಬಹಳ ದಿವಸಗಳವರೆಗೆ ಇದ್ದರು. ಇಲ್ಲಿದ್ದಾಗ, ಸ್ವಾಭಾವಿಕವಾಗಿಯೇ ಚೆನ್ನಬಸಪ್ಪನವರ ಮಕ್ಕಳ ವಿದ್ಯಾಭ್ಯಾಸದಲ್ಲಿ ಆಸಕ್ತಿ ವಹಿಸಿ, ಅವರಿಗೆ ವಿದ್ಯೆಯನ್ನು ಹೇಳಿಕೊಡುತ್ತಿದ್ದರು.

ಆಗಿನ ಪರಿಸ್ಥಿತಿಯ ಮೇರೆಗೆ, ಚಿಕ್ಕಮಕ್ಕಳಿಗೆ ಮರಾಠಿ, ಮೋಡಿ ಮತ್ತು ಅಲ್ಪಸ್ವಲ್ಪ ಕನ್ನಡವನ್ನು ಅಯ್ಯನವರ ಶಾಲೆಗಳಲ್ಲಿ ಕಲಿಸಲಾಗುತ್ತಿತ್ತು. ಸ್ವಲ್ಪ ಅನುಕೂಲತೆಯಿದ್ದ ಚುರುಕು ವಿದ್ಯಾರ್ಥಿಗಳಿಗೆ ಮಾತ್ರ ಸಂಸ್ಕೃತ ಮತ್ತು ಹಳಗನ್ನಡಗಳನ್ನು ಕಲಿಸಲಾಗುತ್ತಿತ್ತು. ಬಾಲಕ ಗಂಗಾಧರನ ಚುರುಕು ಬುದ್ಧಿಯನ್ನು ಕಂಡ ಮಡಿವಾಳ ಸ್ವಾಮಿಗಳು ಬಾಲಕನಿಗೆ ಕನ್ನಡ, ಮೋಡಿ, ಗಣಿತಗಳನ್ನು ಮಾತ್ರವಲ್ಲದೆ, ಸಂಸ್ಕೃತ ಮತ್ತು ಹಳಗನ್ನಡಗಳ ಅಭ್ಯಾಸವನ್ನೂ ಮಾಡಿಸಿದರು. ಕನ್ನಡಿಯಂತಿದ್ದ ಬಾಲಕನ ಗ್ರಹಣಶಕ್ತಿ ಗುರು ಹೇಳುವ ಮೊದಲೇ ಎಲ್ಲವನ್ನೂ ಗ್ರಹಿಸುತ್ತಿತ್ತು. ಇದರಿಂದ ಸುಪ್ರೀತರಾದ ಮಡಿವಾಳ ಸ್ವಾಮಿಗಳಿಗೆ, ಮಗು ಗಂಗಾಧರನಲ್ಲಿ ಆಸ್ಥೆ ಹೆಚ್ಚಿತು. ಗುರು ಶಿಷ್ಯರ ಪ್ರೀತಿ ವೃದ್ಧಿಂಗತವಾಯಿತು.

ಯುವಕ ಗಂಗಾಧರ ಚಿಕ್ಕವನಿದ್ದಾಗಲೇ ಒಂದು ಸಾಲೀಮಠವನ್ನು ತೆಗೆದು ವಿದ್ಯೆ ಹೇಳತೊಡಗಿದ. ಆದರೆ, ಈ ಸಾಲೀಮಠದ ಗಾವಠೀ ಶಾಲೆಗೆ ಚಿಕ್ಕಮಕ್ಕಳಿಗಿಂತ ವಯಸ್ಸಾದವರೇ ಹೆಚ್ಚು ಜನ ಸೇರಲಾರಂಭಿಸಿದರು. ಬರಬರುತ್ತ ಈ ಸಾಲೀಮಠ ವಯಸ್ಸಾದವರಿಗೆ ವೇಳೆ ಕಳೆಯಲು ಒಂದು ಒಳ್ಳೆಯ ವಿರಾಮ ಸ್ಥಾನವಾಯಿತು. ಅಲ್ಲಿ ಅಭ್ಯಾಸಕ್ಕಿಂತ ಹಿರಿಯರ ಹರಟೆಯೇ ಹೆಚ್ಚಾಗತೊಡಗಿತು. ಸಾಧು ಸ್ವಭಾವದ ಗಂಗಾಧರಯ್ಯನವರಿಗೆ ಜನರ ಮನಸ್ಸನ್ನು ಮುರಿಯಲು ಇಚ್ಛೆಯಾಗಲಿಲ್ಲ. "ತಮ್ಮ ಮಕ್ಕಳ ವಿದ್ಯೆಯಲ್ಲಿ ಆಸಕ್ತರಾಗಿದ್ದ ಊರ ಕೆಲವು ಹಿರಿಯರಿಗೆ ಈ ವಾತಾವರಣವು ಸರಿ ಕಾಣಲಿಲ್ಲ. ಮಕ್ಕಳು ಕೆಟ್ಟು ಹೋಗುತ್ತಿದ್ದಾರೆ ಎಂದು ಅವರು ದೂರಿಕೊಳ್ಳಲಾರಂಭಿಸಿದರು. ಗಂಗಾಧರಯ್ಯನವರ ಮಠದಲ್ಲಿ ಕೇವಲ ಹಾಡು, ಕವಿತೆ, ಬರಹಕ್ಕೆ ಪ್ರಾಧಾನ್ಯತೆ ಕೊಡಲಾಗಿದೆ ಎಂದವರು ಹಲವು ಜನ. ವ್ಯವಹಾರ ಜೀವನಕ್ಕೆ ಅವಶ್ಯವಾಗಿದ್ದ ಬಾಯಿಲೆಕ್ಕ, ಜಮಾಖರ್ಚು ಕಲಿಯದೆ, ಸರಕಾರಿ ನೌಕರಿ ದೊರೆಯದ ಕಾರಣ ಅದನ್ನೇ ಮುಖ್ಯವಾಗಿ ಕಲಿಸಬೇಕು ಎಂದು ಮತ್ತೆ ಕೆಲವರು ಹೇಳಹತ್ತಿದರು. ಅಂತೂ ಸಕಾರಣವೊ, ಅಕಾರಣವೋ ಅವರ ಮಠದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕ್ರಮವಾಗಿ ಕಡಿಮೆಯಾಗುತ್ತ ಬಂತು."[೨]

ಆದರೆ, ಮಡಿವಾಳ ಸ್ವಾಮಿಗಳಿಗೆ ಗಂಗಾಧರಯ್ಯನವರಲ್ಲಿ ಆಸ್ಥೆ ಕಡಿಮೆಯಾಗಲಿಲ್ಲ. ಅವರಿಗೆ ತಮ್ಮ ಹೆಸರು ಗಂಗಪ್ಪನ ಮೂಲಕ ಮುಂದುವರೆಯಬೇಕೆಂದು ಆಸ್ಥೆ ಹುಟ್ಟಿದ್ದರಿಂದ ಮಗುವನ್ನು ತಮ್ಮ ಉಡಿಯಲ್ಲಿ ಹಾಕಿಬಿಡಬೇಕೆಂದು ಚೆನ್ನಬಸಪ್ಪನವರಿಗೆ ಕೇಳಿದರು. ಚೆನ್ನಬಸಪ್ಪನವರೂ ತಮ್ಮ

---

೧ ಈ ವಿವರಗಳನ್ನು ಸಂಗ್ರಹಿಸಿದವರು ಕಿತ್ತೂರಿನ ವೀರಪ್ಪ ವೀರಭದ್ರಪ್ಪ ನಾಗಸೆಟ್ಟಿ ಮಾಸ್ತರರು. ಕೃತಿ ಅಪ್ರಕಟಿತ.

೨ ವೆಂಕಟೇಶ ಸಾಂಗಲಿ, ಕರ್ಮವೀರ– ೧–೧೨–೧೯೬೮–ಪು.೧೩.

ಆಪ್ತೇಷ್ಟರನ್ನು ಕೇಳಿ ಈ ಸೂಚನೆಗೆ ಒಪ್ಪಿಕೊಂಡರು. ಒಂದು ಶುಭಮುಹೂರ್ತದಲ್ಲಿ ವೀರಶೈವ ಭಕ್ತರ ಮತ್ತು ಜಂಗಮರ ಸಮ್ಮುಖದಲ್ಲಿ ಮಗುವಿಗೆ ಶಾಸ್ತ್ರೋಕ್ತವಾಗಿ ಜಂಗಮದೀಕ್ಷೆಯನ್ನು ಕೊಡಿಸಿ ಗುರುವಿನ ಉಡಿಯಲ್ಲಿ ಹಾಕಿದರು. ಅಂದಿನಿಂದ ಮಗು ಗಂಗಪ್ಪ ಗಂಗಾಧರಯ್ಯನಾದನು.

ಜಂಗಮದೀಕ್ಷೆಯಾದ ಕೆಲದಿನಗಳಲ್ಲಿಯೇ ಗುರು ಮಡಿವಾಳಯ್ಯನವರು ಲಿಂಗೈಕ್ಯರಾದರು. ಇದರಿಂದ ಗಂಗಾಧರಯ್ಯನವರು ತಮ್ಮ ಗುರುಸ್ಥಾನವಾದ ಅಥಣಿಗೆ ಹೋಗಬೇಕಿತ್ತು. ಆದರೆ, ಸಹೋದರ ಪ್ರೀತಿಯ ಮೂಲಕ ತಮ್ಮ ತಂದೆಯ ಮನೆಯಲ್ಲಿಯೇ ಉಳಿದರು. ತಮ್ಮ ಉಳಿದ ಮಕ್ಕಳಂತೆಯೇ ತಂದೆ ಚೆನ್ನಬಸಪ್ಪನವರು ಗಂಗಾಧರಯ್ಯನವರಿಗೂ ತಮ್ಮ ಆಸ್ತಿಯಲ್ಲಿ ಪಾಲು ಕೊಟ್ಟರು. ಹೀಗಾಗಿ, ಗಂಗಾಧರಯ್ಯನವರು ತಮ್ಮ ಗುರುವಿನ ನೆನಹಿಗಾಗಿ ಮಡಿವಾಳೇಶ್ವರ ಎಂದೂ ಮನೆತನದ ನೆನಹಿಗಾಗಿ ಮನೆತನದ ಹೆಸರಾದ ತುರಮರಿ ಎಂದೂ ಹೆಸರನ್ನು ಉಳಿಸಿಕೊಂಡರು. ಮಗು ಗಂಗಪ್ಪ ಗಂಗಾಧರಯ್ಯ ಮಡಿವಾಳೇಶ್ವರ ತುರಮರಿಯಾದರು.

ಗಂಗಾಧರಯ್ಯನವರು ನಿತಾಂತ ಅಭ್ಯಾಸಿಗಳು. ಹಳಗನ್ನಡ, ಸಂಸ್ಕೃತಗಳನ್ನು ಆಳವಾಗಿ ಅಭ್ಯಾಸ ಮಾಡಿದವರು. ಪುರಾಣ ಪ್ರವಚನಗಳಲ್ಲಿ ತುಂಬಾ ಚತುರರು. ಬಸವಪುರಾಣ ಮತ್ತು ಪ್ರಭುಲಿಂಗಲೀಲೆಗಳನ್ನು ಗಂಗಾಧರಯ್ಯನವರ ಬಾಯಿಂದಲೇ ಕೇಳಬೇಕೆಂದು ಜನ ಹೇಳುತ್ತಿದ್ದರು. ಆಗ ತಾನೆ ಕನ್ನಡ ಶಾಲೆಗಳನ್ನು ಪ್ರಾರಂಭಿಸಿದ್ದ ಸರಕಾರದವರು, ಅಲ್ಲಲ್ಲಿಯ ಕನ್ನಡ ವಿದ್ವಾಂಸರನ್ನು ಹುಡುಕಿ ಕನ್ನಡ ಶಾಲೆಗಳಿಗೆ ಶಿಕ್ಷಕರನ್ನಾಗಿ ನಿಯಮಿಸುತ್ತಿದ್ದರು. ಆಮೇರೆಗೆ, ಗಂಗಾಧರಯ್ಯ ನವರನ್ನೂ ಬೆಳಗಾವಿ ಜಿಲ್ಲೆಗೊಳಪಟ್ಟ ಹುನಗುಂದ ಶಾಲೆಗೆ ಮುಖ್ಯಾಧ್ಯಾಪಕರನ್ನಾಗಿ ನಿಯಮಿಸಿದರು. ಅವರು ಬಂಕಾಪುರದಲ್ಲಿಯೂ ಕೆಲಸ ಮಾಡಿದರು. ಆಗ ಅವರಿಗೆ ತಿಂಗಳಿಗೆ ೨೫ ರೂಪಾಯಿ ಸಂಬಳ. ಆದರೆ, ಒಂದು ವರ್ಷ ಕಳೆದ ನಂತರ ಎಲ್ಲ 'ಪಂತೋಜಿ'ಗಳ ಸಂಬಳವನ್ನು ಅರ್ಧದಷ್ಟು ಕಡಿಮೆ ಮಾಡಲಾಯಿತು. ಆಮೇರೆಗೆ, ಗಂಗಾಧರಯ್ಯನವರ ಸಂಬಳವೂ ತಿಂಗಳಿಗೆ ೧೨ ರೂಪಾಯಿ ಆಯಿತು. ಇದರಿಂದ ಅಸಂತುಷ್ಟರಾದ ಗಂಗಾಧರಯ್ಯನವರು ಬೇರೆ ನೌಕರಿ ಹಿಡಿಯಬೇಕೆಂದು ಯತ್ನಿಸಿದರು. ಅದು ಸಾಧ್ಯವಾಗದ್ದರಿಂದ ಇದ್ದ ನೌಕರಿಯಲ್ಲಿಯೇ ಮುಂದುವರಿಯಬೇಕಾಯಿತು. ಈ ಬಗ್ಗೆ ಗಂಗಾಧರಯ್ಯನವರು ರಾ. ರಾ. ಫಕೀರಪ್ಪಾ ಶಿವಪ್ಪಾ ಕಿತ್ತೂರ, ಮುಕ್ಕಾಂ ಭಾವಣಿ, ಲಿಂಗಸೂಗೂರು ಇವರಿಗೆ ಬರೆದ ಪತ್ರ ಬೋಧಪ್ರದವಾಗಿದೆ : [೧]

"ಶ್ರೀಗುರುಪ್ರಸನ್ನ

ರಾ. ರಾಜಶ್ರೀ ಫಕೀರಪ್ಪಾ ಶಿವಪ್ಪಾ ಕಿತ್ತೂರ ಮುಕ್ಕಾಂ ಭಾವಣಿ ಲಿಂಗಸುಗೂರ ಇವರಿಗೆ ನಿಮ್ಮ ಹುನಗುಂದ ಅಖವಾನಜಿ ಗಂಗಾಧರ ಮಡಿವಾಳೇಶ್ವರ ಮಾಡುವ ಅನೇಕಾಶೀರ್ವಾದಗಳು. ತಾ. ೧೨ ನವಂಬರವರೆಗೆ ಶ್ರೀ ಗುರುವಿನ ದಯದಿಂದೆ ಕ್ಷೇಮದಲ್ಲಿದ್ದೇವೆ. ತಮ್ಮ ಕಡೆಯ ವರ್ತಮಾನ ತಿಳಿಯದೆ ೪-೫ ತಿಂಗಳಾಯಿತು. ಈ ಪ್ರಕಾರ ಮರೆತು ಬಿಡಬಾರದೆಂದು ನನ್ನ ಹೇಳಿಕೆಯಿದೆ. ತಾವು ಬಲ್ಲವರೇ ಇದ್ದೀರಿ. ಇನ್ನು ಮೇಲೆ ಪತ್ರಗಳ ಮುಖದಿಂದೆ ವರ್ತಮಾನ ತಿಳಿಸಿ, ಇತ್ತ ಕಡೆಯ ಸಮಾಚಾರವನ್ನು ತೆಗೆದುಕೊಳ್ಳುತ್ತ ಹೋಗಬೇಕು. ಇನ್ನು ಇತ್ತ ಕಡೆಯ ಪೂರ್ವೋತ್ತರ ವನ್ನು ಕಲಮವಾರ ಬರೆದಿದ್ದೇನೆ.

೧ ಫಕೀರಪ್ಪನವರೆಂದರೆ ಕಿತ್ತೂರ ನಾಗಶೆಟ್ಟಿ ವೀರಪ್ಪನವರ ಸೋದರ ಮಾವಂದಿರು. ಈ ಮೂಲ ಪತ್ರವನ್ನು ಒದಗಿಸಿಕೊಟ್ಟದ್ದಕ್ಕಾಗಿ ಶ್ರೀ ವಿ. ವಿ. ನಾಗಸೆಟ್ಟಿ, ಕಿತ್ತೂರ ಅವರಿಗೆ ಕೃತಜ್ಞತೆಗಳು. ಇದರ ಪಡಿಯಚ್ಚನ್ನು ಅನ್ಯತ್ರ ಕೊಡಲಾಗಿದೆ.

೧. ನಮ್ಮ ಕುಟುಂಬ ಹಡೆಯಲಿಕ್ಕೆ ಹೋಗಿ ಎರಡೂವರೆ ತಿಂಗಳಾಯಿತು. ಇನ್ನೂ ಹಡೆದ ವರ್ತಮಾನ ಬಂದಿಲ್ಲ. ಈಗ ದಿವಸದಲ್ಲಿ ಅದೆ. ಚಿ. ಚೆನಬಸವ್ವನು ಸಹ ಸುಖರೂಪದಲ್ಲಿ ಮುರಗೋಡದೊಳಗೆ ಇದ್ದಾರೆ. ಹೊಂಗಲ ಮನೆಯ ಕಡೆಯ ವರ್ತಮಾನ ಉತ್ತಮ.

೨. ನಮ್ಮ ಸಂಬಳವು ದರ ತಿಂಗಳಿಗೆ ೨೫ ರೂ ಯಂತೆ ೧೪ ತಿಂಗಳದು ಮುಟ್ಟಿತು. ಇನ್ನು ಮೇಲೆ ದರ ತಿಂಗಳಿಗೆ ೧೨ ರೂ. ಯಂತೆ ಕೊಡಬೇಕೆಂದು ಹುಕುಮು ಬಂದಿದೆ. ಇದರಂತೆ ಸರ್ವ ಪಂತೋಜಿಗಳಿಗೂ ಕಡಿಮೆ ಆಯಿತು. ಶಾಲಾಖಾತೆಕ್ಕೆ ಸಂಬಳ ಕಡಿಮೆ ಮಾಡಬೇಕೆಂದು ಬೊಂಬಯಿಯಿಂದ ಹುಕುಮು ಬಂದ ಪ್ರಯುಕ್ತ ಸಮಸ್ತರಿಗೂ ಅರ್ಧ ಸಂಬಳ ಕಡಿಮೆ ಆಯಿತು. ರಾ. ರಾ. ಧಾರವಾಡ ಅಖವಾನಜಿ ರಾಚೋಟಪ್ಪನವರಿಗೆ ಸಹ ೧೨ ರೂ. ಯಂತೆ ಆಯಿತು. ಇನ್ನು ಮೇಲೆ ಮುಂದೆ ಹ್ಯಾಗಾಗುತ್ತದೋ ತಿಳಿಯದು. ಇಲ್ಲಿ ಸಾಲೆಯಲ್ಲಿ ೫೫ ಇದ್ದಾರೆ. ಅಪೂರ್ಣಾಂಕ ಕಲಿಯುತ್ತಾರೆ. ಮೆ. ಬೇಕರ ಸಾಹೇಬರು ೧೫–೨೦ ದಿವಸದಲ್ಲಿ ಪರೀಕ್ಷೆಗೋಸ್ಕರ ಬರತಕ್ಕವರಿದ್ದಾರೆ. ಸಾಹೇಬರು ಬಂದ ವೇಳೆಯಲ್ಲಿ ನಾನು ರಾಜೀನಾಮೆ ಕೊಡಬೇಕೆಂದು ಯೋಚನೆ ಮಾಡಿದ್ದೇನೆ. ಕಾರಣವೇನಂದರೆ, ೧೨ ರೂ. ಸಂಬಳದಿಂದೆ ಆದೀತೇನು ಹೋದೀತೇನು? ಇಷ್ಟರ ದೆಸೆಯಿಂದ ನೌಕರಿ ಮಾಡುವದಕ್ಕಿಂತಲೂ ಪಲ್ಲೆ ಬಕ್ಕರಿ ಸಿಕ್ಕರೆ ಸಾಕು, ಸ್ವದೇಶದಲ್ಲಿರುವದು ವಾಸಿಯಾಗಿ ತೋರುತ್ತದೆ. ಇದರ ಮೇಲೆ ಈಶಸಂಕಲ್ಪ ಹ್ಯಾಗದೆಯೋ ತಿಳಿಯದು. ಮುಖ್ಯ ಮಾತು ಶಾಲಾಖಾತೇದಲ್ಲಿ ಸ್ವಾರಸ್ಯವಿಲ್ಲ. ನನ್ನ ಮನಸ್ಸಿನೊಳಗೆ ಲಿಂಗಸೂರ ಪ್ರಾಂತಕ್ಕೆ ಬರಬೇಕೆಂಬ ಆಸ್ಥಾ ಇದೆ. ಅಲ್ಲಿ ಏನಾದರೂ ನನ್ನ ಯೋಗ್ಯತೆಯ ಪ್ರಕಾರ ನೌಕರಿ ಹತ್ತುವ ಡೌಲು ಕಂಡರೆ ಬರೆದು ತಿಳಿಸಬೇಕು. ಅಂದರೆ ಟಾಕೋಟಾಕ ಬರುತ್ತೇನೆ. ನಿಮಗೆ ಸಂಬಳವೇನಿದೆ? ದಾವ ಕೆಲಸದ ಮೇಲೆ ಇದ್ದೀರಿ? ಈ ಯಾವತ್ತು ವಿಸ್ತಾರಪೂರ್ವಕ ಬರೆದು ತಿಳಿಸಬೇಕು. ನಿಮ್ಮ ಭೆಟ್ಟಿಯ ಅಪೇಕ್ಷೆ ಬಹಳವಾಗಿದೆ. ಕೂಡಿದರೆ ಒಂದು ವೇಳೆ ಭೆಟ್ಟಿ ಕೊಟ್ಟು ಹೋಗಬೇಕು. ಅಂದರೆ ಬಹಳ ಒಳ್ಳೇದಾಗುತ್ತದೆ. ಮರೆಯಬೇಡಿರಿ. ಮಮತಾಪೂರ್ಣ ಇರಬೇಕು. ಇತಿ ಆಶೀರ್ವಾದಗಳು".

ಹೆಚ್ಚು ಕಡಿಮೆ ಇದೇ ವಿಷಯದ ಬಗ್ಗೆ ಇನ್ನೂ ಒಂದು ಪತ್ರ :

"ರಾ. ರಾ. ಶ್ರೀ ಫಕೀರಪ್ಪಾ ಕಿತ್ತೂರ ಮುಕ್ಕಾಂ ಛಾವಣಿ ಲಿಂಗಸೂಗೂರ ಇವರಿಗೆ–

ನಿಮ್ಮ ಹುನಗುಂದ ಅಖವಾನಜಿ ಗಂಗಾಧರಪ್ಪಯ್ಯನು ಮಾಡುವ ಅನೇಕಾಶೀರ್ವಾದಗಳು. ಅದಾಗಿ ಈಗ ತಾ. ೧೮ನೆ ಮಾಹೆ ಅಗಸ್ತ ಸನ್ ೧೮೫೮ ಇಸವಿವರೆಗೆ ಶ್ರೀ ಗುರುವಿನ ದಯದಿಂದೆ ಕ್ಷೇಮದೊಡನೆ ಇದ್ದೇನೆ. ನಿಮ್ಮ ಕಡೆಯಿಂದ ಕಾಗದ ಪತ್ರಗಳು ಬಾರದೆ ಬಹಳ ದಿವಸವಾಯಿತು. ಈ ರೀತಿ ಉದಾಸೀನ ಮಾಡಲಿಕ್ಕೆ ಅಂಥಾದ್ದು ನಾನೇನು ಮಾಡಿದ್ದೇನಾಯಿತು. ಅದು ನನ್ನ ನೆನಪಿಗೆ ಬರಲೊಲ್ಲದು. ಇನ್ನು ಮೇಲೆ ಈ ರೀತಿಯಿಡದೆ ಪದೇ ಪದೇ ಪತ್ರ ದ್ವಾರದಿಂದೆ ಸಮಾಚಾರ ತೆಗೆದುಕೊಳ್ಳಬೇಕೆಂದು ಅಪೇಕ್ಷಿಸುತ್ತೇನೆ.

ನಾನು ರಜಾ ತೆಗೆದುಕೊಂಡು ೩ ತಿಂಗಳು ಹೊಂಗಲದಲ್ಲಿದ್ದು ತಿರುಗಿ ಹುನಗುಂದಕ್ಕೆ ಬಂದು ೨ ತಿಂಗಳಾಯಿತು. ಹುಟ್ಟಿದ ಹುಡುಗನು ಬೈಲಿಯೆದ್ದು ಶಿವನ ಪಾದಕ್ಕೆ ಸಲ್ಲಿದನು. ಕುಟುಂಬಕ್ಕೆ ಬಹು ದುಃಖವಾದ ಮೂಲಕ ನಾನು ಹುನಗುಂದಕ್ಕೆ ಬರುವಾಗ್ಗೆ ಕರಕೊಂಡು ಬರಲಿಲ್ಲ. ನಾನೊಬ್ಬನೇ ಬಂದಿದ್ದೇನೆ. ಮನೆಯವರು ರಾಜೀನಾಮೆ ಕೊಡಿರೆಂದು ಬಹಳ ಹೇಳಿದರು. ನನಗಾದರೂ ಇದರಂತೆ ತಿಳಿದು ಎರಡು ರಾಜೀನಾಮೆ ಬರೆದು ಕಳಿಸಿದ್ದೇನೆ. ಮಂಜೂರ ಆದದ್ದಕ್ಕೂ ಇಲ್ಲದ್ದಕ್ಕೂ ಇನ್ನೂವರೆಗೂ ಹುಕುಮು ಬರಲಿಲ್ಲ. ಮಂಜೂರಾಯಿತೆಂದರೆ ನಿಮ್ಮ ಕಡೆಗೆ ಬಂದೇನು. ಇಲ್ಲವೇ

ಇದೇ ಸಾಲೆಯ ಕೆಲಸಕ್ಕೆ ಕಾಯಮವಾಯಿತೆಂದರೆ ಹೊಂಗಲಕ್ಕೆ ಹೋಗಿ ಕುಟುಂಬ ಕರಕೊಂಡು ಬರುತ್ತೇನೆ. ಇನ್ನೂ ಅನಕಾ ಎರಡೂ ದಡದ ಮೇಲೆ ಕೈ ಇದೆ. ಇಲ್ಲಿ ದರಗಾದ ಮಠದಲ್ಲಿ ಪುರಾಣ ಪ್ರಾರಂಭ ಮಾಡಿಸಿದ್ದಾರೆ. ನಾನೇ ಹೇಳುತ್ತೇನೆ. ನಿಮ್ಮ ಬೆಟ್ಟಿ ಆಗದೆ ಸುಮಾರು ಒಂದೂವರೆ ವರ್ಷ ಆಯಿತು. ಮನಸು ಬಹು ತವಕಿಸುತ್ತದೆ. ಉಪಾಯವಿಲ್ಲ. ನೀವೂ ಪರತಂತ್ರ, ನಾನೂ ಪರತಂತ್ರ ಇದ್ದ ಮೂಲಕ ಬೆಟ್ಟಿ ಆಗವೊಲ್ಲದು. ಎಂದಿಗೆ ನಮ್ಮಾ ನಿಮ್ಮಾ ಬೆಟ್ಟಿ ಆಗುತ್ತದೋ ಅದೇ ಸುದಿವಸ. ಒಳ್ಳೇದು ಈಶ್ವರೇಚ್ಛಾ. ನೀವು ಸುಖಸ್ವರೂಪದಲ್ಲಿದ್ದದ್ದು ರಾ. ಕೃಷ್ಣಪ್ಪನವರು ಹೇಳಿದರೇ ಹೊರ್ತು ನಿಮ್ಮ ಹಸ್ತಾಕ್ಷರ ಬರಲಿಲ್ಲ. ಆದರೂ ಕ್ಷೇಮವಾಗಿ ಇದ್ದದ್ದು ಕೇಳಿ ಸಂತೋಷ ಪಟ್ಟೆ. ನೀವು ಒಬ್ಬರೇ ಇದ್ದೀರೋ ಕುಟುಂಬ ಸಹಿತ ಇದ್ದೀರೋ ತಿಳಿಸಬೇಕು. ಮಮತಾಪೂರ್ಣ ವಿರಬೇಕು.

ಇತಿ ಆಶೀರ್ವಾದಗಳು.

ತಾ. ಸುರಪೂರಕ್ಕೆ ಚಾಕರೀ ದೆಸೆಯಿಂದ ಬಂದರೆ ಹ್ಯಾಗಾದೀತು. ಬರೆದು ತಿಳಿಸಿರಿ. ರಾ. ರಾಚೋಟಪ್ಪಾ ಅಣ್ಣಾ ಅಖಿವಾನಜಿ ಧಾರವಾಡ ಇವರು ರಾಜೀನಾಮೆ ಕೊಟ್ಟರು. ಕೃಷ್ಣಪ್ಪ ಬೀಡಿಕರ ಇವರಿಗೆ ಶಿಕ್ಷಕ ಕೆಲಸ ೫ ರೂ. ಯದವು ದೊರಕಿತು. ನಿಮಗೆ ಶರಣಾರ್ಥಿ ಬರೆಯ ಹೇಳಿದ್ದಾರೆ.'' [೧]

ಈ ಮನೋಭಾವದಲ್ಲಿ ಗಂಗಾಧರಯ್ಯನವರು ವಿದ್ಯಾಖಾತೆಯನ್ನು ಬಿಟ್ಟು ಸರ್ವೇಖಾತೆಯಲ್ಲಿ ಸೇರಿದ್ದರೆ, ಕನ್ನಡಕ್ಕೆ ಆಗಬಹುದಾಗಿದ್ದ ನಷ್ಟವನ್ನು ಊಹಿಸಬಹುದು. ಆದರೂ, ಈ ಭಾವನೆ ಯಿಂದ, ಅವರ ಕಲಿಸುವಿಕೆಯ ಮಟ್ಟವೇನೂ ಕಡಿಮೆಯಾಗಲಿಲ್ಲ. ಅವರ ಕಲಿಸುವ ಸಾಮರ್ಥ್ಯ ಮತ್ತು ಪಾಂಡಿತ್ಯಗಳನ್ನು ಕಂಡು ಇತರ ಮರಾಠಿ ಶಿಕ್ಷಕರೂ, ಅಧಿಕಾರಿಗಳೂ ಅಸೂಯೆಪಡುತ್ತಿದ್ದರು. ಗಂಗಾಧರಯ್ಯನವರ ಹೆಸರಿನ ಮೇಲಿಂದ ಅನೇಕ ಪಾಲಕರು ತಮ್ಮ ಮಕ್ಕಳನ್ನು ಅವರು ಕಲಿಸುವ ಶಾಲೆಗೆ ಕಳಿಸುತ್ತಿದ್ದರು.

ಸನ್ ೧೮೫೫ ರ ಜನೆವರಿಯಿಂದ ಧಾರವಾಡ ಚೆನಬಸಪ್ಪನವರು ಬೆಳಗಾವಿಯ ಟ್ರೇನಿಂಗ ಶಾಲೆಯ ಪ್ರಿನ್ಸಿಪಾಲರಾಗಿ ಕೆಲಸ ಮಾಡುತ್ತಿದ್ದರಷ್ಟೇ! ಚೆನಬಸಪ್ಪನವರು ಸನ್ ೧೮೬೧ ರಲ್ಲಿ ಬೆಳಗಾವಿ ಜಿಲ್ಲಾ ಡೆಪ್ಯೂಟಿ ಇನಸ್ಪೆಕ್ಟರರೆಂದು ನೇಮಕ ಹೊಂದಿದರು. ಒಂದು ಸಲ ಅವರು ಗಂಗಾಧರಯ್ಯನವರ ಶಾಲೆಗೆ ಪರೀಕ್ಷೆಗೆ ಹೋದಾಗ ಗಂಗಾಧರಯ್ಯನವರ ವಿದ್ವತ್ತು, ಕಲಿಸುವ ಪದ್ಧತಿ ಗಳನ್ನು ನೋಡಿ ಮೆಚ್ಚಿಕೊಂಡು ಇವರನ್ನು ಬೆಳಗಾವಿ ಟ್ರೇನಿಂಗ್ ಸ್ಕೂಲಿನಲ್ಲಿ ಅಸಿಸ್ಟಂಟ ಮಾಸ್ತರ ರನ್ನಾಗಿ ನಿಯಮಿಸಬೇಕೆಂದು ಶಿಫಾರಸು ಮಾಡಿದರು. ಆ ಮೇರೆಗೆ, ಇವರು ಬೆಳಗಾವಿಯ ಟ್ರೇನಿಂಗ ಶಾಲೆಯಲ್ಲಿ ಅಸಿಸ್ಟಂಟ ಮಾಸ್ತರರೆಂದು ವರ್ಗ ಹೊಂದಿದರು. ಬೆಳಗಾವಿಯ ಟ್ರೇನಿಂಗ ಶಾಲೆಯಲ್ಲಿ ಯಂತೂ ಇವರ ಪಾಂಡಿತ್ಯ ಮತ್ತು ಅಧ್ಯಾಪನ ಜಾಣ್ಮೆಗಳು ಮತ್ತಷ್ಟೂ ಪ್ರಖರಗೊಂಡವು. ಅಲ್ಲಿ ಅವರು ಕನ್ನಡ ಅಧ್ಯಾಪನದ ಶ್ರೀಕಾರ ಹಾಕಿದರೆಂದು ಹೇಳಲಿಕ್ಕೂ ಅಡ್ಡಿಯಿಲ್ಲ. ಇವರ ಕಲಿಸುವಿಕೆ ಯಿಂದ ಟ್ರೇನಿಂಗ್ ಸ್ಕೂಲಿಗೆ ಬಂದ ವಿದ್ಯಾರ್ಥಿಗಳಲ್ಲಿ ಕನ್ನಡ ವಿಷಯದ ಬಗ್ಗೆ ಆಸಕ್ತಿ ಮತ್ತು ಅಭಿರುಚಿಗಳು ಕುದುರಿದವು. ಯಾಕೆಂದರೆ, ಈವರೆಗೆ ತರಬೇತಿಗಾಗಿ ಬಂದ ಪಂತೋಜಿ ಮತ್ತು ಅಯ್ಯನವರು ಬೇರೆ ಬೇರೆ ಕನ್ನಡ ಶಾಲೆಗಳಿಂದ ಆಯ್ಕೆಯಾದವರು. ಕನ್ನಡ ಭಾಷೆಯ ಸಾಮಾನ್ಯ ಪರಿಜ್ಞಾನವೂ ಇಲ್ಲದವರು ಕೆಲವರು; ಮತ್ತೆ ಕೆಲವರು ಗಿಳಿಪಾಠದಿಂದ ಕವಿತೆಗಳನ್ನು ಓದಿದವರು. ಕಠಿಣವಾದ ಪದ್ಯಭಾಗಗಳನ್ನು ಅರ್ಥ ಮಾಡುವ ಪ್ರಯತ್ನ ಯಾರಲ್ಲಿಯೂ ಇರಲಿಲ್ಲ. ಸುದೈವದಿಂದ

೧ ನಾಗಶೆಟ್ಟಿಯವರ ಸಂಗ್ರಹ.

ಇಂಥವರಿಗೆ ಅಧ್ಯಾಪಕರಾಗಿ ಬಂದ ಗಂಗಾಧರಯ್ಯನವರು ಕಾವ್ಯಜೀವಿ, ವ್ಯಾಕರಣ ಪಂಡಿತರು. ಎಂಥ ಕಠಿಣ ಪದ್ಯಗಳನ್ನೂ ಸರಳಗೊಳಿಸುವ ಅನ್ವಯ ಸಾಮರ್ಥ್ಯವುಳ್ಳವರು. ಭಾಷಾವಿಷಯವು ಉಳಿದೆಲ್ಲ ವಿಷಯಗಳಿಗಿಂತ ಆಕರ್ಷಕವಾದದ್ದು ಎಂಬ ಅನುಭವವನ್ನು ಗಂಗಾಧರಯ್ಯನವರ ವಿದ್ಯಾರ್ಥಿಗಳು ಕೆಲವೇ ದಿನಗಳಲ್ಲಿ ಕಂಡುಕೊಂಡರು........ ವಿದ್ವತ್‌ಖನಿ, ಕಾವ್ಯಕೋಶ ಎಂದು ಕರೆಯಲ್ಪಟ್ಟ ಗಂಗಾಧರಯ್ಯನವರು ಮಾಡಿದ ಗ್ರಂಥರಚನೆ ಗಾತ್ರದಲ್ಲಿ ಅಷ್ಟೇನೂ ದೊಡ್ಡದಲ್ಲ; ಆದರೆ ಗುಣದಲ್ಲಿ ಅಪ್ಪಟ ಚಿನ್ನ. ಮುಖ್ಯವಾಗಿ, ಕನ್ನಡ ಕಾವ್ಯಸಿರಿಯನ್ನು ಜೀವಂತವಾಗಿ ಉಳಿಸಿದ ಪುಣ್ಯ ಅವರ ಪಾಲಿಗೆ ಸಲ್ಲುತ್ತದೆ. ಪಾಂಡಿತ್ಯವೆಂದರೆ ವೇದ ವಿದ್ಯೆ; ಪಂಡಿತರೆಂದರೆ ಸಂಸ್ಕೃತ ವಿಶಾರದರು ಮಾತ್ರ– ಎಂಬ ನಂಬಿಗೆಯು ಬೇರೂರಿದ್ದ ಕಾಲದಲ್ಲಿ ಅವರು ಕಷ್ಟ ನಿಷ್ಠುರಗಳನ್ನುಂಡು, ಕನ್ನಡ ಭಾಷೆಯ ಸತ್ವ ಸೌಂದರ್ಯದ ಕಡೆಗೆ ಸಮಾಜದ ಗಮನವನ್ನು ಸೆಳೆದರು. ನಾರ್ಮಲ್‌ಸ್ಕೂಲಿನಲ್ಲಿ ಗಂಗಾಧರಯ್ಯನವರು ಹೊತ್ತಿಸಿದ ಕನ್ನಡದ ಕಿಡಿಯನ್ನು ಅಲ್ಲಿಯ ವಿದ್ಯಾರ್ಥಿಗಳು ಹೋದಲ್ಲೆಲ್ಲ ಕೊಂಡೊಯ್ದರು. ಕನ್ನಡ ಕಾವ್ಯಸಂಪತ್ತನ್ನು ಜನತೆಗೆ ಪರಿಚಯ ಮಾಡಿಕೊಡುವುದು, ಭಾಷಾಶುದ್ಧಿಯನ್ನು ಬೆಳೆಸಿ, ಮರಾಠಿ ಪ್ರಭಾವದಿಂದ ಕನ್ನಡವನ್ನು ಮುಕ್ತ ಮಾಡುವುದು– ಗಂಗಾಧರಯ್ಯನವರ ಶಿಷ್ಯವೃಂದವು ಮಾಡಿದ ಮಹತ್ವದ ಕೆಲಸವಾಗಿದೆ. ಗಂಗಾಧರಯ್ಯನವರ ಈ ಗರಡಿಯಲ್ಲಿ ಬೆಳೆದು ಕನ್ನಡಕ್ಕಾಗಿ ಪಣತೊಟ್ಟು ನಿಂತ ಪಾರ್ಥರೆಂದರೆ ಅವರ ವಿದ್ಯಾರ್ಥಿಗಳಾಗಿದ್ದ ಶಾಂತವೀರ ರಾಚಿದೇವ ಕಿತ್ತೂರ ಮತ್ತು ಧೋಂಡೋ ನರಸಿಂಹ ಮುಳಬಾಗಲ ಅವರು.

ಗಂಗಾಧರಯ್ಯನವರು ಬೆಳಗಾವಿಯಲ್ಲಿದ್ದಾಗ ಕೆಲಮಟ್ಟಿನ ಇಂಗ್ಲಿಷದ ಅಭ್ಯಾಸವನ್ನೂ ಮಾಡಿದರು. ತತ್ಪರಿಣಾಮವಾಗಿ, ಇವರು ಜುಲೈ ೧೮೬೬ ರಲ್ಲಿ ಕನ್ನಡ ಟ್ರಾನ್ಸಲೇಟರರೆಂದು ನೇಮಕ ಹೊಂದಿದರು. ಈ ಬಗ್ಗೆ ಹೊರಟ ಸನ್ ೧೮೬೬ ರ ಸರಕಾರೀ ಪರಿಪತ್ರ ಹೀಗಿದೆ :

"ರಾ. ರಾ. ಗೋವಿಂದರಾವ ಕಂಠಿ ಕನ್ನಡ ಟ್ರಾನ್ಸಲೇಟರ ಮತ್ತು ರಾ. ರಾ ಗಂಗಾಧರ ಮಡಿವಾಳೇಶ್ವರ ಥರ್ಡ ಅಶಿಷ್ಟಾಂಟ ಟ್ರೇನಿಂಗ ಸ್ಕೂಲ ಈ ಉಭಯತರು ಮೆಹರಬಾನ ಇನಸ್ಪೆಕ್ಟರರವರ ಹುಕುಮಿನಿಂದ ತಮ್ಮ ಸ್ಥಳಗಳನ್ನು ಹೋದ ತಿಂಗಳಲ್ಲಿ ಪರಸ್ಪರ ಬದಲು ಮಾಡಿದರು." ೧

ಟ್ರಾನ್ಸಲೇಟರರೆಂದು ನೇಮಕ ಹೊಂದಿದ ಮೇಲೆಯೂ ಶ್ರೀಯುತರು ಬರೀ ಸರಕಾರೀ ಕೆಲಸವನ್ನು ಮಾತ್ರ ಮಾಡಿ ತೃಪ್ತರಾಗದೆ, ತಮ್ಮ ಅಭ್ಯಾಸ ಮತ್ತು ಲೇಖನ ಕಾರ್ಯಗಳನ್ನು ಮುಂದುವರಿಸಿದರು. ಆಮೇಲೆಗೆ, ಹಳಗನ್ನಡ ಕಾವ್ಯಗಳಿಂದ ಸುಂದರವಾದ ಭಾಗಗಳನ್ನು ಆಯ್ದು, 'ಕವಿತಾ ಸಂಗ್ರಹ' ಎಂಬ ಹೆಸರಿನಲ್ಲಿ ಸನ್ ೧೮೬೭ ರಲ್ಲಿ ಪ್ರಸಿದ್ಧಿಸಿದರು.

ಗಂಗಾಧರಯ್ಯನವರಿಗೆ ಇಬ್ಬರು ಹೆಂಡಂದಿರು. ಒಬ್ಬರು ಮುರಗೋಡ ಮಠದವರು; ಇನ್ನೊಬ್ಬರು ಬೈಲಹೊಂಗಲದಲ್ಲಿಯ ಮುನವಳ್ಳಿ ಮಠದವರು. ಆದರೆ, ದುರ್ದೈವದಿಂದ ಇವರಿಬ್ಬರ ಹೊಟ್ಟೆಯಿಂದಲೂ ಶ್ರೀಯುತರಿಗೆ ಸಂತಾನ ಬದುಕಿ ಉಳಿಯಲಿಲ್ಲ. ಆಗ, ಕಿರಿಯ ತಮ್ಮನಾದ ಸಿದ್ಧಲಿಂಗಪ್ಪನಿಗೆ ಜಂಗಮ ದೀಕ್ಷೆ ಕೊಡಿಸಿ, ಅವನನ್ನು ದತ್ತು ಪುತ್ರನನ್ನಾಗಿ ಮಾಡಿಕೊಂಡರು. ಆದರೆ, ಅವನ ಮಕ್ಕಳೂ ಯಾರೂ ಉಳಿಯದೆ, ಅವರ ಶಾಖೆಯೂ ನಿಂತುಹೋಯಿತು. ಅನಂತರ ಹೀರೆಮಠ ಪಾಟೀಲ ಎಂಬ ಹೆಸರಿನಿಂದ ಹುಬ್ಬಳ್ಳಿಯಲ್ಲಿ ಸದ್ಯ ವಾಸ ಮಾಡುತ್ತಿದ್ದು, ಉದ್ಯೋಗ

---

೧ ಮಠಪತ್ರಿಕೆ– ಅಗಸ್ಟ ೧೮೬೬– ಪು ೧೧೪.

ವ್ಯವಹಾರ ಮಾಡುತ್ತಿದ್ದಾರೆ. ಅವರ ಹೇಳಿಕೆಯ ಮೇರೆಗೆ ಸದ್ಯ ಬೈಲಹೊಂಗಲದಲ್ಲಿ ಎಸ್. ಟಿ. ಸ್ಟ್ಯಾಂಡ್ ಇರುತ್ತಿರುವ ಸ್ಥಳವೂ, ಇತರ ಕೆಲವು ಹೊಲಗಳೂ ಗಂಗಾಧರಯ್ಯನವರಿಂದ ತಮಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು.

ಗಂಗಾಧರಯ್ಯನವರು ೧೮೬೭ ರಲ್ಲಿ 'ಕವಿತಾ ಸಂಗ್ರಹ' ಮಾತ್ರವನ್ನಲ್ಲದೆ, ರಾಜಶೇಖರ ವಿಲಾಸದ ಒಂದು ಮತ್ತು ನಾಲ್ಕನೆಯ ಆಶ್ವಾಸಗಳಿಗೆ ಟೀಕೆಯನ್ನು ಬರೆದರು. ಒಂದನೆಯ ಆಶ್ವಾಸದ ಟೀಕೆ ಸನ್ ೧೮೭೧ ರಂದು ಪ್ರಕಟವಾಯಿತು. ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ'ಗೆ ಟೀಕೆಯನ್ನು ಬರೆದು ಸನ್ ೧೮೭೩ ರ ಏಪ್ರಿಲ್ ತಿಂಗಳಲ್ಲಿ ಪ್ರಕಟಿಸಿದರು ರಾಜಶೇಖರದ ನಾಲ್ಕನೆಯ ಆಶ್ವಾಸದ ಟೀಕೆ ಸನ್ ೧೮೭೪ ರ ಡಿಸೆಂಬರ ತಿಂಗಳಲ್ಲಿ ಪ್ರಕಟವಾಯಿತು. ವೀರಭದ್ರಯ್ಯ ಮಡಿವಾಳಯ್ಯ ಪಂಡಿತ ಅವರು ಬರೆದಿದ್ದ ಕನ್ನಡ ೧ನೆಯ ಮತ್ತು ೨ನೆಯ ಪುಸ್ತಕಗಳನ್ನು ಪರಿಷ್ಕರಿಸಿ ಸನ್ ೧೮೭೫ ರಲ್ಲಿ ಪ್ರಸಿದ್ಧಿಸಿದರು. ಇದೂ ಅಲ್ಲದೆ, ಬುಕ್ ಕಮಿಟಿಯವರ ಆದೇಶದಂತೆ ಕನ್ನಡ ೩ ಮತ್ತು ೪ನೆಯ ಪುಸ್ತಕಗಳನ್ನು ಬರೆದದ್ದಲ್ಲದೆ, ಅವುಗಳಿಗೆ 'ಓದುವ ರೀತಿ' ಎಂಬ ಉಪಯುಕ್ತವಾದ ಭಾಗವನ್ನು ಸೇರಿಸಿದರು. ಸನ್ ೧೮೭೬–೭೭ ರಲ್ಲಿ ತಮ್ಮ ಕೀರ್ತಿಸ್ತೂಪವಾದ 'ಬಾಣಕಾದಂಬರಿ'ಯ ಅನುವಾದವನ್ನು ಮಾಡಿದರು. ಇದಲ್ಲದೆ, ಸನ್ ೧೮೭೪ ರ ಸೆಪ್ಟೆಂಬರದಿಂದ ಕನ್ನಡ 'ಮಠ ಪತ್ರಿಕೆ' ಯಲ್ಲಿ 'ಭಾಷಾದರ್ಪಣ' ಎಂಬ ಕನ್ನಡ ವ್ಯಾಕರಣ ವಿಷಯಕ ವಾಖ್ಯಾನವನ್ನು ಬರೆದು ಧಾರವಾಹಿಯಾಗಿ ಪ್ರಸಿದ್ಧಿಸಿದರು. ಆದರೆ, ಇದು ಅವರ ಅಕಾಲಿಕ ನಿಧನದ ಮೂಲಕ ಅರ್ಧಕ್ಕೆ ನಿಲ್ಲಬೇಕಾಯಿತು. ೧೮೬೬ ರಿಂದ 'ಮಠ ಪತ್ರಿಕೆ'ಯಲ್ಲಿ ಸರಲವೂ, ಸುಬೋಧವೂ ಆದ 'ಶಬ್ದ ಮಣಿದರ್ಪಣ' ವಿಷಯಕವಾದ ವ್ಯಾಖ್ಯಾನವನ್ನು ಪ್ರಕಟಿಸಿದರು.

ಗಂಗಾಧರಯ್ಯನವರು ಬಹುಶ್ರುತ ಪಂಡಿತರಾಗಿದ್ದಂತೆ, ಒಳ್ಳೆಯ ಶಿಕ್ಷಕರೂ ಆಗಿದ್ದರು. ಅವರು ಕೆಲಸ ಮಾಡಿದಲ್ಲೆಲ್ಲ ಶಾಲೆಗಳು ಊರ್ಜಿತ ಸ್ಥಿತಿಗೆ ಬಂದವು. ಈ ಬಗ್ಗೆ ಬಂಕಾಪುರದ ಮಹನೀಯರಿಬ್ಬರು ೮–೭–೧೮೭೫ ರಂದು ಶಾಲಾಪತ್ರಕದಲ್ಲಿ ಹೀಗೆ ಬರೆದಿದ್ದಾರೆ :

"ಸೇವಕರು ಮಾಡುವಾ ಬಿನ್ನಹವೇನಂದರೆ ಕೆಳಗೆ ಬರೆದ ನಾಲ್ಕು ಪಂಗ್ತಿಗಳನ್ನು ತಮ್ಮ ಮನೋಹರವಾದ ಮಠಪತ್ರಕದಲ್ಲಿ ಮುದ್ರಿಸಿ ಪ್ರಸಿದ್ಧಿಸುವಿರೆಂದು ಮಹತ್ವಾಕಾಂಕ್ಷೆಯನ್ನು ಧರಿಸಿದ್ದೇವೆ. ಈ ಬಂಕಾಪುರ ಸಾಲಿಯು ಸ್ಥಾಪನವು ತಾರೀಖು ೯ನೇ ಜೂನ ೧೮೪೮ನೇ ಇಸವಿ ದಿವಸಾ ಗಂಗಾಧರ ಮಡಿವಾಳೇಶ್ವರ ಎಂಬುವವರಿಂದ ಸ್ಥಾಪಿಸಲ್ಪಟ್ಟಿತು. ಅವರು ಅಜಮಾಸು ೭–೮ ವರ್ಷದ ತನಕ ಈ ಗ್ರಾಮದಲ್ಲಿ ಮಾಸ್ತರ ಕೆಲಸವನ್ನು ಮಾಡಿ ಕೈಲಾದ ಮಟ್ಟಿಗೂ ಪ್ರಯತ್ನ ಮಾಡಿ ಈ ಸಾಲಿಯನ್ನು ಉತ್ತಮ ಸ್ಥಿತಿಗೆ ತಂದು ಬಹು ಜನರನ್ನು ಯೋಗ್ಯ ಮಾರ್ಗಕ್ಕೆ ಹಚ್ಚಿದರು. ಆ ನಂತರ ಬಂದಂಥಾ ಮಾಸ್ತರರು ಕೆಲ ಕೆಲವು ದಿವಸಾ ಈ ಗ್ರಾಮದಲ್ಲಿ ವಾಸ ಮಾಡಿ ತಮ್ಮ ಕೈಲಾದ ಮಟ್ಟಿಗೂ ಶ್ರಮಪಟ್ಟು ಪೂರ್ವದ ಸ್ಥಿತಿಯನ್ನು ಕೆಡಿಸಿ ಸಾಲಿಯನ್ನು ಒಂದು ಸುದ್ಧಾ ಮಾಡಿಸಿಬಿಟ್ಟರು."

ಗಂಗಾಧರಯ್ಯನವರ ಕೃತಿಗಳು :

ಶಬ್ದ ಮಣಿದರ್ಪಣದ ವ್ಯಾಖ್ಯಾನ (೧೮೬೬)

ಶಬ್ದ ಮಣಿದರ್ಪಣ ಕನ್ನಡ ವ್ಯಾಕರಣ ಗ್ರಂಥಗಳಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದ ಗ್ರಂಥ.

ಸಂಬಂಧ, ಅಭಿಧೇಯ, ಶಕ್ಯಾನುಷ್ಠಾನ, ನಿಜೇಷ್ಟಸಿದ್ಧಿಗಳ ಮೂಲಕ ಉಪಾದೇಯವಾಗಬೇಕಾದ ಗ್ರಂಥ. 'ಕರ್ನಾಟಕದೊಳ್ ಪರಕಿಸೆ ಶಬ್ದಜ್ಞನಾವನೊರ್ವನೆ ಕವಿ ಕುಂಜರ ಭಾಪುಕೇಶವರಾಜ' ಎಂದು ಕವಿಮಲ್ಲನೆಂಬವನು ಕ್ರಿ. ಶ. ೧೪೦೦ ರಲ್ಲಿ ಈ ಗ್ರಂಥದ ಬಗ್ಗೆ ಉದ್ಗಾರ ತೆಗೆದನು. ಇಂಥ ಗ್ರಂಥದ ಪರಿಚಯು ಕನ್ನಡ ಜನತೆಗಿರಬೇಕೆಂಬ ದೃಷ್ಟಿಯಿಂದ 'ಮಠಪತ್ರಿಕೆ'ಯು ಜೂನ್ ೧೮೬೭ರ ಸಂಚಿಕೆಯಿಂದ ಮೊದಲುಗೊಂಡು ತಾವು ಬದುಕಿರುವವರೆಗೂ ಗಂಗಾಧರಯ್ಯನವರು ಧಾರವಾಹಿಯಾಗಿ ಈ ಗ್ರಂಥದ ಸೂತ್ರಗಳನ್ನು ಕೊಟ್ಟು ತಮ್ಮ ವ್ಯಾಖ್ಯಾನವನ್ನು ಬರೆದರು.

ಈ ಉಪಕ್ರಮವನ್ನು ಪ್ರಾರಂಭ ಮಾಡುವಾಗ ಉಪೋದ್ಘಾತರೂಪವಾಗಿ ಗಂಗಾಧರಯ್ಯನವರು ಹೀಗೆ ಹೇಳಿದ್ದಾರೆ :

" ಕನ್ನಡಿನಲ್ಲಿ ಶಬ್ದಮಣಿದರ್ಪಣವೆಂಬದೊಂದು ಅತ್ಯಮೌಲ್ಯವಾದ ವ್ಯಾಕರಣವುಂಟು. ಅದು ವಸ್ತುತಃ ಹಳಗನ್ನಡ ಭಾಷೆಯ ವ್ಯಾಕರಣವಾದಾಗ್ಯೂ ಈಗಿನ ಕನ್ನಡು ಭಾಷೆಯ ವ್ಯಾಕರಣಕ್ಕೆ ಮುಖ್ಯವಾದ ಆಶ್ರಯವಾಗಿರುತ್ತದೆ. ಈ ಕಾರಣದಿಂದಲೂ, ಹಳೆಗನ್ನಡಿನ ಜ್ಞಾನಕ್ಕೆ ಅದು ಅತ್ಯವಶ್ಯವಾಗಿರುವದರಿಂದಲೂ ಅದನ್ನು ಛಾಪಿಸಿದರೆ ನಮ್ಮ ಮಾಸ್ತರ ಜನರಿಗೆ ಬಹು ಲಾಭ ಉಂಟಾಗುವದೆಂದು ನೋಡಿ, ಈ ಪತ್ರಿಕೆಯ ದ್ವಾರವಾಗಿ ಅದನ್ನು ಪ್ರಸಿದ್ಧಪಡಿಸುವ ಆಲೋಚನೇ ಮಾಡಿರುತ್ತೇನೆ. ಈ ಕೆಳಗೆ ಬರೆದ ಪ್ರಕಾರ ಒಂದೊಂದು ಸಂಚಿಕೆಯಲ್ಲಿ ಅದರ ಕೆಲವು ಶ್ಲೋಕಗಳನ್ನು ಅರ್ಥಸಹಿತವಾಗಿ ಛಾಪಿಸುವೆವು. ತ್ವರಿತಕ್ಕೆ ಸ್ಥಳ, ವೇಳೆ, ಶ್ರಮ ಈ ಮೂರುಗಳ ಸಂಕೋಚಕ್ಕೋಸ್ಕರ ಮಂಗಳಾಚರಣ ಮೊದಲಾದ ವ್ಯಾಕರಣ ವಿಷಯಕ್ಕೆ ಸಂಬಂಧಿಸದೆ ಇದ್ದ ಅದರ ಶ್ಲೋಕಗಳನ್ನು ನಡುನಡುವೆ ಬಿಟ್ಟು ಕೇವಲ ವ್ಯಾಕರಣ ನಿಯಮಗಳುಳ್ಳ ಶ್ಲೋಕಗಳನ್ನು ಮಾತ್ರ ತೆಗೆದುಕೊಳ್ಳುವದು ಅಗತ್ಯವಾಗಿರುತ್ತದೆ.— ಶ್ಲೋಕಗಳ ಧಾಟಿಯು ಆರ್ಯಾವೃತ್ತಕ್ಕೆ ಅತಿ ನಿಕಟವಾಗಿರುತ್ತದೆ. ಅದಕ್ಕೆ ಕನ್ನಡಿನಲ್ಲಿ ಕಂದವೆಂಬ ಹೆಸರು. " ೧

ಶಬ್ದಮಂಜರಿ (೧೮೭೯)

ಕನ್ನಡ ಸಾಹಿತ್ಯದ ಅಭ್ಯಾಸಿಗಳಿಗೆ ಸರಿಯಾದ ಕೋಶ ದೊರೆಯದ್ದರಿಂದ ಕಾವ್ಯಾಭ್ಯಾಸಕ್ಕೆ ತುಂಬಾ ಅನಾನುಕೂಲವಾಗುತ್ತಿತ್ತು. ಇದನ್ನರಿತ ವಿದ್ಯಾಖಾತೆಯ ಅಧಿಕಾರಿಗಳು ಒಂದು ಕೋಶವನ್ನು ರಚಿಸುವಂತೆ ಗಂಗಾಧರಯ್ಯನವರನ್ನು ಕೇಳಿಕೊಂಡರು. ಅದರ ಫಲವೇ ಸನ್ ೧೮೭೯ ರಲ್ಲಿ ಪ್ರಕಟವಾದ 'ಶಬ್ದಮಂಜರಿ' ಎಂಬ ಬೃಹತ್ಕೋಶ. ೫೮೬ ಪುಟದ ಈ ಗ್ರಂಥ ಬೆಂಗಳೂರಿನ 'ವಿಚಾರದರ್ಪಣ' ಮುದ್ರಣಾಲಯದಲ್ಲಿ ಎಚ್. ನರಸಿಂಹಯ್ಯ ಎಂಬವರಿಂದ ಮುದ್ರಿತವಾಯಿತು. ಬೆಲೆ ನಾಲ್ಕು ರೂಪಾಯಿ. ಈ ಗ್ರಂಥದ ಪ್ರಕಟಣೆಗಾಗಿ ಅಂದಿನ ಮುಂಬಯಿ ಸರಕಾರದವರು ೪೦೦೦ ರೂಪಾಯಿ ಧನ ಸಹಾಯ ಮಾಡಿದರು. ಈ ಕೋಶವನ್ನು ರಚಿಸಿದಾಗ ಗಂಗಾಧರಯ್ಯನವರು ಬೆಳಗಾವಿಯಲ್ಲಿ ಟ್ರಾನ್ಸಲೇಶನ್ ಎಗ್ಸಿಬಿಶನರ್ ಆಗಿದ್ದರು. ಲೇಖಕರು ಈ ಕೋಶವನ್ನು ಕನ್ನಡ ವಿದ್ಯಾ ಪೋಷಕರಾದ ರಸೆಲ್‌ರವರಿಗೆ ಅರ್ಪಿಸಿದ್ದಾರೆ :

---

೧ ಮಠಪತ್ರಿಕೆ : ಜೂನ ೧೮೬೭— ಪು. ೪೩—೪೪.

ಶಬ್ದಮಂಜರಿ
ಎಂಬ
ಈ ಕೋಶವನ್ನು

—

ಗಂಗಾಧರ ಮಡಿವಾಳೇಶ್ವರ
ತ್ರಾನಸ್ಲೇಶನ್ ಎಗ್ಸಿಬಿಶನರ
ಬೆಳಗಾವ ಇವರು ಮಾಡಿ,

ಎತದ್ದೇಶೀಯ ಜನರ ವಿದ್ಯಾವೃದ್ಧಿಗೆ
ಆಶ್ರಯ ಕೊಡುವ

ಮೆಹರಬಾನ ರಸಲ ಸಾಹೇಬ ಬಾಹಾದೂರ
ಎಜ್ಯುಕೇಶನಲ್ ಇನಸ್ಪೆಕ್ಟರ
ಪ್ರಾಂತ ದಕ್ಷಿಣ ಭಾಗ
ಈ ಉದಾರ ದೊರೆಗಳಿಗೆ
ಕಾಣಿಕೆ ಕೊಟ್ಟಿದ್ದಾರೆ

—

ಸನ ೧೮೬೯ ಇಸವಿ
ಶಾಲಿವಾಹನ ಶಕೆ ೧೭೯೧
ಶುಕ್ಲ ಸಂವತ್ಸರ

(ಈ ಗ್ರಂಥವನ್ನು ಪುನಹ ಛಾಪಿಸುವ ಮತ್ತು ಭಾಷಾಂತರ ಮಾಡುವ ಸ್ವತಂತ್ರ ಯಿಟ್ಟು ಕೊಳ್ಳೋಣಾಗಿದೆ.)

ಇದರ ಕ್ರಯ ೪ ರೂ.

ಈ ಕೋಶವನ್ನು ರಚಿಸುವ ಅವಶ್ಯಕತೆಯನ್ನು ಕುರಿತು ಗ್ರಂಥ ಪ್ರಾರಂಭದ ಸೂಚನೆಯಲ್ಲಿ ಲೇಖಕರು ಹೀಗೆ ಹೇಳಿದ್ದಾರೆ :

"ರಾಜಶೇಖರ ವಿಳಾಸ, ವೃಷಭೇಂದ್ರ ವಿಜಯು, ಶಬರ ಶಂಕರ ವಿಳಾಸ, ಜಯಮಿನಿ ಮುಂತಾದ ಪ್ರಾಕ್ಕಾವ್ಯಗಳನ್ನು ಕಲಿಯುವವರಿಗೆ ಸಂಸ್ಕೃತ ಕೋಶಗಳೂ, ಹಳೆಗನ್ನಡ ಕೋಶಗಳೂ ಬಹು ಪ್ರಯೋಜನವಾದವುಗಳು. ಈ ಕೋಶಗಳು ಪದ್ಯಾತ್ಮಕ ರೂಪದಿಂದಿರುತ್ತವೆ. ಕಾವ್ಯಗಳನ್ನು ಕಲಿಯುವವರು ಇವುಗಳನ್ನು ರೂ ಹಾಕಿ ಪಾಠ ಮಾಡುತ್ತಾರೆ. ಅವರು ಬರೇ ಬಾಯಪಾಠವಾಗಿ ಅವುಗಳೊಳಗಿನ ಯಾವತ್ತು ಶಬ್ದಗಳ ಅರ್ಥ ತಿಳಿದು ಸಮಯಕ್ಕೆ ನೆನಪಾಗುವದು ಕಷ್ಟವಾಗುತ್ತದೆ. ಮೊದಲು ಪಾಠ ಮಾಡುವದೇ ಪ್ರಯಾಸ. ಪಾಠವಾದಾಗ್ಯೂ ಅವುಗಳೊಳಗಿನ ಗೂಢ ಶಬ್ದಗಳ ಅರ್ಥವು ಟೀಕಾನೋಡದೆ ಪಂಡಿತರಿಗೆ ಸಹ ತಿಳಿಯುವದು ಅಸಾಧ್ಯ. ಇನ್ನು ಹೊಸದಾಗಿ ಕಲಿಯುವವರಿಗೆ ತಿಳಿಯುವದು ದುರ್ಲಭವೇ ಸರಿ. ಈ ತೊಂದರೆಗಳು ದೂರಾಗುವಂತೆ ಒಳ್ಳೆ

ಪ್ರಸಿದ್ಧವಾದ ಕೋಶಗಳೊಳಗಿನ ಉಪಯೋಗವುಳ್ಳ ಹಳೆಗನ್ನಡ ಶಬ್ದಗಳನ್ನೂ ಸಂಸ್ಕೃತ ಶಬ್ದಗಳನ್ನೂ ಅಕ್ಷರಾನುಕ್ರಮವಾಗಿ ಕೂಡಿಸಿ, ಸುಲಭವಾಗಿ ತಿಳಿಯುವ ಹಾಗೆ ಕನ್ನಡದಿಂದ ಅರ್ಥ ಬರೆದು, ಒಂದು ಕೋಶವನ್ನು ಮಾಡಬೇಕೆಂದು, ವಿದ್ಯಾಖಾತೆಯೊಳಗಿನ ಅಧಿಕಾರಿಗಳು ನನಗೆ ಸೂಚಿಸಿದ್ದರಿಂದ, ಇವರ ಸೂಚನೆಯನ್ನು ನಾನು ಆದರಪೂರ್ವಕವಾಗಿ ಶಿರಸಾವಾನ್ಯ ಮಾಡಿಕೊಂಡು, ಅಮರಕೋಶ, ಕರ್ನಾಟಕ ಶಬ್ದಮಂಜರಿ, ಕಬ್ಬಿಗರ ಕೈಪಿಡಿ, ಪದ್ಯನಾನಾರ್ಥ ಎಂಬ ಸರ್ವಮಾನ್ಯವಾದ ಪ್ರಾಚೀನ ಕೋಶಗಳೊಳಗಿನ ಉಪಯೋಗವುಳ್ಳ ಶಬ್ದಗಳನ್ನು ತಕ್ಕೊಂಡು, ಈ 'ಶಬ್ದಮಂಜರಿ' ಎಂಬ ಕೋಶವನ್ನು ಮಾಡಿ ವಿದ್ಯಾಖಾತೆಯ ಅಧಿಕಾರಿಗಳಾದ ಮೆ. ರಸಲ ಸಾಹೇಬ ಬಾಹಾದೂರವರಿಗೆ ಬಹು ನಮ್ರತೆಯಿಂದ ಕಾಣಿಕೆ ಕೊಟ್ಟಿದ್ದೇನೆ."

ಇದರ ಪ್ರಸ್ತಾವನೆಯಲ್ಲಿ ಶ್ರೀ ಅನಾಡ ಚನವೀರಪ್ಪನವರು ಹೀಗೆ ಹೇಳಿದ್ದಾರೆ :

"ಶ್ರೀಮತ್ಸಮಸ್ತ ಲೋಕದೊಳ್ ಜನರ್ಗತ್ಯಾವಶ್ಯಕವಾದ ನಾನಾವಿಧಮಪ್ಪ ಭಾಷೆಗಳೊಳ್ ಆಯಾಯ ದೇಶದವರಿಂದ ಪ್ರಸಿದ್ಧಮಾದ ಭಾಷೆಗಳಲ್ಲಿ ಆ ದೇಶದ ಸಮರ್ಥ ಕವಿಗಳಿಂದನೇಕ ಗ್ರಂಥಗಳು ರಚಿಸಲ್ಪಟ್ಟಿರುತ್ತವಷ್ಟೆ. ಆದರೆ ನಮ್ಮ ಈ ಕರ್ನಾಟಕಸ್ಥರಿಗೆ ಹಿಂದಕ್ಕೆ ರಚಿಸಿದ ಗ್ರಂಥಗಳ ಅಭ್ಯಾಸಮಂ ಮಾಡಿ ಅದರೊಳಿರ್ಪ ಭಾಷೆಯ ಸ್ವಾರಸ್ಯಮಂ ತಿಳಕೊಳ್ಳಲಿಕ್ಕೆ ಅಂಥ ಗ್ರಂಥವು ಇಲ್ಲದ್ದು ನೋಡಿ ಈ ಕೋಶವನ್ನು ತಯಾರಿಸಿರುತ್ತದೆ..... (ಕನ್ನಡ ಗ್ರಂಥಗಳು) ಹಳೆಗನ್ನಡ, ಹೊಸಗನ್ನಡ, ಕೂಡಿರುವದರಿಂದ ಆ ಗ್ರಂಥಗಳಲ್ಲಿರ್ಪ ಭಾವಂಗಳನರಿಯದೆ ಎಷ್ಟೋ ಜನರು ಕಷ್ಟಪಡುವದನ್ನೂ ಮತ್ತು ನಮ್ಮ ದೇಶದ ಸಾಲೆಯ ಮಾಸ್ತರರಿಗೆ ಬೀಳುವ ತೊಂದರೆಯನ್ನೂ ಮನೆಯಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳ ಅಡಚಣಿಯನ್ನೂ ಕಂಡು ವೇದಶಾಸ್ತ್ರ ಸಂಪನ್ನರಾಗಿದ್ದ ಕೈ. ವಾ. ಗಂಗಾಧರಯ್ಯನವರು ಬಹು ಶ್ರಮಪಟ್ಟು ಈ ಯಾವತ್ತೂ ತೊಂದರೆಗಳನ್ನು ಮಾರ್ಪಡಿಸುವದಕ್ಕೆ ಯೋಗ್ಯವಾದ ಒಂದು ಶಬ್ದಮಂಜರಿಯನ್ನು ರಚಿಸಿದರು.... "

ಈ ಕೋಶದಲ್ಲಿ ಶಬ್ದಗಳ ಅರ್ಥಗಳು ಕೇವಲ "ಸುಲಭವಾಗಿ ತಿಳಿಯುವ ಹಾಗೆ" ಮಾತ್ರ ಲೇಖಕರು ಮಾಡಿರದೆ, ಅದಕ್ಕೂ ಹೆಚ್ಚಿನ ಬಹು ಮಹತ್ವದ ಮತ್ತು ಶಾಸ್ತ್ರೀಯವಾದ ಕೆಲಸವನ್ನೂ ಮಾಡಿದ್ದಾರೆ. ಅದು ಪರಿಪೂರ್ಣವಾಗಿರದಿದ್ದರೂ, ಆ ದಿಶೆಯ ಪ್ರಯತ್ನವನ್ನು ಇಲ್ಲಿ ಕಾಣುತ್ತೇವೆ. ಅದೆಂದರೆ, ಕನ್ನಡ ಕೋಶದಲ್ಲಿ ಕಂಡುಬರುವ ಶಬ್ದಗಳು ಸಂಸ್ಕೃತದವೇ, ಕನ್ನಡದವೇ, ವ್ಯಾಕರಣದಲ್ಲಿ ಅವು ಯಾವ ವಿಭಾಗದಲ್ಲಿ ಬರುತ್ತವೆ ಎಂಬುದನ್ನೂ ಸೂಚಿಸಿದ್ದಾರೆ. ಈ ರೀತಿ ಶಬ್ದಗಳ ಒಂದು ತೌಲನಿಕ ಅಭ್ಯಾಸದ ಪರಿಚಯವೂ ಇಲ್ಲಿ ಕಂಡುಬರುತ್ತದೆ. ಉದಾಹರಣೆಗೆ :

ಅಜಾಜೀವ, ಸಂ. (ನಾ) ಕುರಿಗಳನ್ನು ಕಾಯುವವ, ಕುರುಬ

ಅಜಿತ, ಸಂ. (ವಿ) ಸೋಲದಂಥ ೨. (ನಾ) ಶಿವ. ೩. ವಿಷ್ಣು

ಅಪೂಪ, ಸಂ. (ನಾ) ಅಕ್ಕಿಯ ಹಿಟ್ಟಿನ ಹೋಳಿಗೆ, ವಡೀ, ಗಾರಿಗೆ ಮುಂತಾದವು

ಅಪ್ಪಳಿಸು, ಕ. (ಕ್ರಿ) ಹೊಡೆ

ಅಪ್ಪು, ಕ. (ಕ್ರಿ) ಆಲಿಂಗಿಸು, ಅಪ್ಪಿಕೊಳ್ಳು

ಅಪ್ಪುಕೆಯ್, ಹ. (ಕ್ರಿ) ಅಂಗೀಕರಿಸು, ಒಡಂಬಡು

ಆಂಗೊಳಗು, ಹ. (ನಾ) ಆವಿನ ಕೊಳಗು

ಅಲಾಬು, ಸಂ. (ಸಾ) ಕರೇಕುಂಬಳಕಾಯಿ

ಉಚ್ಚ್ವವ, ತ. (ನಾ) ಉತ್ಸವ

ಝುಂಝಾ ಸಂ. (ನಾ) ಮಳೆಯಾಗುವಾಗ ಗಾಳಿ ಬೀಸಿದರೆ ಆಗುವ ಸಪ್ಪಳ

–ಇತ್ಯಾದಿ. ಶಬ್ದಮಂಜರಿ ಗಂಗಾಧರಯ್ಯನವರು ಕನ್ನಡ ನಿಘಂಟು ಸಾಹಿತ್ಯಕ್ಕೆ ಕೊಟ್ಟ ಅಪೂರ್ವ ಕಾಣಿಕೆ. ಇದು ಕಿಟೆಲ್ ಕೋಶದ ಪ್ರಕಟಣೆಗಿಂತ ೨೪ ವರುಷ ಮೊದಲೇ ಪ್ರಕಟವಾಯಿತೆಂಬುದನ್ನು ಗಮನಿಸಿದಾಗ ಗಂಗಾಧರಯ್ಯನವರ ಪಾಂಡಿತ್ಯ ಮತ್ತು ಪರಿಶ್ರಮದ ಕಲ್ಪನೆ ಬಾರದಿರದು.

'ಶಬ್ದಮಂಜರಿ' ಮತ್ತು 'ಕವಿತಾ ಪದ್ಧತಿ'– ಪುಸ್ತಕಗಳ ಪ್ರತಿಗಳನ್ನು ಕೊಳ್ಳಬೇಕೆಂದು ದೇಶೀ ಸಂಸ್ಥಾನಿಕರಿಗೆ ಗಂಗಾಧರಯ್ಯನವರು ವಿನಂತಿಸಿಕೊಂಡಂತೆ ಕಾಣುತ್ತದೆ ಅದಕ್ಕೆ ಉತ್ತರವಾಗಿ ದಕ್ಷಿಣ ಸಂಸ್ಥಾನಗಳ ಪೊಲಿಟಿಕಲ್ ಏಜಂಟರಾಗಿದ್ದ ಆ್ಯಂಡರ್ಸನ್ ಎನ್ನುವವರು ಗಂಗಾಧರಯ್ಯನವರಿಗೆ ಹೀಗೆ ಪತ್ರ ಬರೆದಿದ್ದಾರೆ :

No 15 of 1870
Assistant Political Agents' Office
Sangli 1st April 1870

In returning herewith correspondence referred to in the above endorsement the Assistant Political Agent has the honour to state that replies to references made from this office, on the subject therein adverted to have been received only from the Moonsiff of Mudhole and Karbharees of Meeruj and Ramdoorg. It appears that the Mudhole Moonsiff requires 3 copies of each of the two books published by Mr. Gangadhar Madiwaleshwar, the Ramdoorg Karbharee also three copies of each book, and the Meeruj Karbharee 4 copies of the Dictionary and 5 copies of " Kavita Pudhutee. "

The undersigned has recently requested the other states to expedite their replies on the subject and as soon as they are received in this office they will be forwarded to the Political Agents.

Signed G. R. C. Westroff
Asst. Pol. Agent Kol & Sli.
No. 662 of 1870

Political Agents' Office
Camp Panalla 4th April 1870

Copy forwarded to Mr. Gangadhar Madiwaleshwar for information. Captain Westroff will be requested to arrange that the copies required be procured from Belgaum on payment.

Anderson
Political Agent ೧

೧ ಪ್ರಿ. ಬಿ. ಜಿ. ತುರಮರಿಯವರ ಸಂಗ್ರಹದಲ್ಲಿದ್ದ ಪತ್ರ.

ರಾಜಶೇಖರ ವಿಳಾಸದ ಮೊದಲನೆಯ ಆಶ್ವಾಸದ ಟೀಕೆ (೧೮೭೧)

ಕನ್ನಡದಲ್ಲಿ ರಾಜಶೇಖರ ವಿಳಾಸದ ಭಿನ್ನ ಭಿನ್ನ ಆಶ್ವಾಸಗಳಿಗೆ ನಾಲ್ವರು ಪಂಡಿತರು ಟೀಕೆಗಳನ್ನು ಬರೆದಿದ್ದಾರೆಂದು ಈ ಮೊದಲೇ ಹೇಳಿತಪ್ಪೇ. ಗಂಗಾಧರ ಮಡಿವಾಳೇಶ್ವರ ತುರಮುರಿ, ಶಾಂತವೀರಯ್ಯ ಕಿತ್ತೂರ, ಅನ್ನದಾನೀಶ್ವರ ಅರಳೆಲಿಮಠ ಮತ್ತು ಧೋಂಡೊ ನರಸಿಂಹ ಮುಳಬಾಗಲರೇ ಆ ನಾಲ್ವರು ವಿದ್ವಾಂಸರು ಅದರಲ್ಲಿಯೂ ಕೆಲಸವನ್ನು ಮೊದಲು ಪ್ರಾರಂಭಿಸಿದವರೆಂದರೆ ಗಂಗಾಧರಯ್ಯನವರು. ಅವರು ರಾಜಶೇಖರದ ಮೊದಲನೆಯ ಆಶ್ವಾಸಕ್ಕೆ ಟೀಕೆಯನ್ನು ಬರೆದು ಸನ್ ೧೮೭೧ ರ ಮೇ ತಿಂಗಳಲ್ಲಿ ಪ್ರಸಿದ್ಧಿಸಿದರು. ಅನಂತರ ೧೮೭೨ ರಲ್ಲಿ ಶಾಂತವೀರಯ್ಯನವರ ಎರಡನೆಯ ಆಶ್ವಾಸದ ಟೀಕೆಯೂ, ಸನ್ ೧೮೭೪ ರಲ್ಲಿ ಅನ್ನದಾನೀಶ್ವರರ ಮೂರನೆಯ ಆಶ್ವಾಸದ ಟೀಕೆಗಳೂ ಪ್ರಸಿದ್ಧವಾದವು. ಈ ಮೊದಲನೆಯ ಆಶ್ವಾಸದ ಟೀಕೆಗೆ ವಿದ್ಯಾಖಾತೆಯ ಡಾಯರೆಕ್ಟರರಾದ ಮಿ. ಪೀಲ್ ಅವರು ಗಂಗಾಧರಯ್ಯನವರಿಗೆ ೨೦೦ ರೂಪಾಯಿ ಬಹುಮಾನ ಕೊಟ್ಟದ್ದಲ್ಲದೆ ಅದರ ಮುದ್ರಣ ವೆಚ್ಚಕ್ಕಾಗಿ ೪೫೦ ರೂಪಾಯಿಗಳನ್ನು ಕೊಟ್ಟು, ಅದರ ೮೦೦ ಪ್ರತಿಗಳನ್ನು ಕೊಂಡುಕೊಂಡರು. ನಂತರ ಗಂಗಾಧರಯ್ಯನವರು ಪುನಃ ನಾಲ್ಕನೆಯ ಆಶ್ವಾಸದ ಟೀಕೆಯನ್ನೂ ಸನ್ ೧೮೭೪ ರ ಡಿಸೆಂಬರ ತಿಂಗಳಲ್ಲಿ ಬರೆದು ಪ್ರಕಟಿಸಿದರು. ೯ ನೆಯ ಆಶ್ವಾಸದ ಟೀಕೆಯಲ್ಲಿ " ಗಂಗಾಧರ ಶಾಂತವೀರ ಶರಣರ್ ಪೇಳ್ದ ಭಾಷ್ಪದ್ವಿತೀಯ ನವಾಶ್ವಾಸ " ಎಂದು ಹೇಳಿದೆ.

ಕನ್ನಡ ಐದನೇ ಪುಸ್ತಕ (೧೮೭೨)

ಗಂಗಾಧರಯ್ಯನವರು ಅನೇಕ ಶಾಲೋಪಯೋಗೀ ಪುಸ್ತಕಗಳನ್ನು ಬರೆದರು. ಇವುಗಳಲ್ಲಿ 'ಕನ್ನಡ ಐದನೇ ಪುಸ್ತಕ'ವನ್ನು ನಮೂದಿಸಬಹುದು.

ಕನ್ನಡ ಐದನೇ ಪುಸ್ತಕವು "(೧೮೭೨) ಮುಂಬಯಿ ಸಂಸ್ಥಾನದೊಳಗಣ ದಕ್ಷಿಣ ತುಕಡಿಯಲ್ಲಿರುವ ಸರಕಾರದ ಕನ್ನಡ ಸಾಲೆಗಳಿಗಾಗಿ, ಗಂಗಾಧರ ಮಡಿವಾಳೇಶ್ವರ, ಕನ್ನಡ ತ್ರಾನ್ಸಲೇಷನ ಎಗ್ಝಿಬಿಶನರ ಇದರಿಂದ ಕನ್ನಡಿಸಲ್ಪಟ್ಟಿದ್ದು " ಇರುತ್ತದೆ. ಇದು ಮುಂಬಯಿ ಇಲಾಖೆಯ ಕನ್ನಡ ಸಾಲೆಗಳಿಗಾಗಿ ಬೆಂಗಳೂರಿನ ವೆಸ್ಲಿಯನ್ ಮಿಶನ್ ಪ್ರೆಸ್ಸಿನಲ್ಲಿ ಗ್ರಾಂಟ ದೊರೆಯಿಂದ ಸನ್ ೧೮೭೨ ರಲ್ಲಿ ಛಾಪಿಸಲ್ಪಟ್ಟಿತು. ಈ ಆವೃತ್ತಿ ' ಎರಡನೇ ಛಾಪೆ. '

ಗಂಗಾಧರಯ್ಯನವರ ಕನ್ನಡ ಶೈಲಿಯ ದೃಷ್ಟಾಂತವಾಗಿ ಈ ಕೆಳಗಿನ ಅವತರಣಿಕೆಯನ್ನು ಕೊಡಬಹುದು :

" ಗ್ಯಾಲಿಲಿಯೊನು ಸರ್ವಜನರ ಹಿತಕ್ಕೋಸ್ಕರವಾಗಿ ಮಾಡಿದ ಗ್ರಂಥವನ್ನು ತೆಗೆದುಕೊಂಡು ಸನ್ ೧೬೩೦ ನೇ ಇಸವಿಯಲ್ಲಿ ರೋಮಪಟ್ಟಣಕ್ಕೆ ಹೋದನು. ಆವಾಗ ಅವನು ೬೬ ವರ್ಷದವನಾಗಿದ್ದನು. ಬಳಿಕ ಧರ್ಮಾಧಿಕಾರಿಗಳೂ, ವಿದ್ವಾಂಸರೂ ಕೂಡಿ ಸಭೆಯನ್ನು ಮಾಡಿ, ಈ ಗ್ರಂಥವನ್ನು ಓದುವದರಿಂದ ಜನರು ಕೆಟ್ಟು ಹೋದಾರೆಂದು ನಿರ್ಣಯಿಸಿದರು. ಆ ಕಾಲದೊಳಗೆ ರೋಮಪಟ್ಟಣದೊಳಗೆ ಪಾಖಂಡ ಜನರ ವಿಚಾರ ಸಲುವಾಗಿ ಇನ್‌ಕ್ವಿಜಿಶನ್ ಎಂಬ ಸಭೆ ಇತ್ತು. ಆ ಸಭೆಯವರು ಗ್ಯಾಲಿಲಿಯೊನನ್ನು ಕೆಲವು ದಿವಸಗಳ ತನಕ ಶೆರೆಯೊಳಗಿಟ್ಟು, ಕಡೆಗೆ ಹೇಳಿದ್ದೇನಂದರೆ, ನಮ್ಮ ಮುಂದೆ ನೀನು ಕೈಜೋಡಿಸಿ ನಿಂತುಕೊಂಡು, ಇಂದಿನ ತನಕ ನಾನು ಅಜ್ಞಾನದೊಳಗಿದ್ದೆನು, ಈಗ ಅದರೊಳಗಿಂದ ಮುಕ್ತನಾದೆನೆಂದು ಒಡಂಬಡು; ಯಾಕಂದರೆ, ಈ ಅಜ್ಞಾನದಿಂದ ನಿನಗೆ ಬಹಳ ಪಾಪ ತಟ್ಟಿದೆ. ನಿನ್ನ ಯೋಗದಿಂದ ಜನರಿಗಾದರೂ ಕೇಡು ಉಂಟಾದೀತು. ಗ್ಯಾಲಿಲಿಯೊನು

ಧಿಟ್ಟನಾದಾಗ್ಯೂ, ಮುಟ್ಟಿನವನಾದದ್ದರಿಂದ ಅವರು ಹೇಳಿದ ಹಾಗೆ ಅಂದನು. ತರುವಾಯ ತತ್ಕಾಲದೆ,.... ಸಿಟ್ಟಿಗೆದ್ದು ಭೂಮಿಯನ್ನು ಒದ್ದು, ನಾನು ಇಲ್ಲಿ ಯೇನು ಅಂದಾಗ್ಯಾದರೂ ಪೃಥ್ವಿಯು ತಿರುಗುವದು ಸತ್ಯವೆಂದನು.” ೧

ಪುಸ್ತಕದ ೮ ನೆಯ ಭಾಗದಲ್ಲಿ ಕನ್ನಡ ಗಾದೆಗಳನ್ನು ಕೊಡಲಾಗಿದೆ. ಈಗ ಸುಮಾರು ಒಂದು ನೂರು ವರುಷಗಳ ಹಿಂದೆ, ಅಂದರೆ ಸರಿಯಾಗಿ ಕ್ರಿ. ಶ. ೧೮೭೨ ರಲ್ಲಿ, ಜನತೆಯಲ್ಲಿ ರೂಢವಾಗಿದ್ದ ಹಲವು ಗಾದೆಗಳನ್ನು ನೋಡೋಣ. ಅವುಗಳಲ್ಲಿ ಅನೇಕ ಗಾದೆಗಳು ಇಂದು ಕೇಳಿಬರುತ್ತಿಲ್ಲ:

ಕಳ್ಳನ ಹೆಂಡತಿ ಯೆಂದಿದ್ದರೂ ಮುಂಡೆ
ಕಾಡಿನಲ್ಲಿ ತಿರುಗಿ ಕಟ್ಟಿಗೆ ಇಲ್ಲಾ ಅಂದ ಹಾಗೆ
ಕಳ್ಳ ಹೊಕ್ಕ ಮನೆಗೆ ಯೆಣ್ಣೆ ದಂಡ
ಕಾಡಿನಲ್ಲಿ ಹುಲಿ ಕೂಗಿದರೆ ನಾಡಿನಲ್ಲಿ ಒಕ್ಕಲು ತೆಗೆದರಂತೆ
ಕಿಚ್ಚಿಗಂಜದವ ಬೂದಿಗಂಜುವನೇ ?
ಕಿವುಡ ಯಜಮಾನಗೆ ಮೂಕ ಬಂಟ
ಕುಂಟಗೆ ಯೆಂಟು ಚೇಷ್ಟೆ, ಕುರುಡಗೆ ಹದಿನಾರು ಚೇಷ್ಟೆ
ಕುಚೋದ್ಯದ ಅರಸಗೆ ಕುಲಗೇಡಿ ಪ್ರಧಾನಿ
ಕೆರದ ಅಳತಿಗೆ ಕಾಲು ಕೊಯಿಸಿದ ಹಾಗೆ
ಕೆರೇಮುಂದೆ ಅರವಟ್ಟಿಗೆಯೇ ?
ಕೆಲಸಗಳ್ಳತಿಗೆ ಕೂಸು ಹುಟ್ಟಿದ ಹಾಗೆ
ಕೊಟ್ಟು ಬರುವ ನಿಷ್ಠುರಕ್ಕಿಂತ, ಕೊಡದೇ ಬರುವ ಮುನಿಸು ಲೇಸು
ಗಿಳಿಯು ಸಾಕಿ ಬೆಕ್ಕಿಗೆ ಕೊಟ್ಟ ಹಾಗೆ
ಗುರು ಕೊಟ್ಟ ಜೋಳಿಗೆಯೆಂದು ಗೂಟಕ್ಕೆ ಹಾಕಿದರೆ, ಹೊಟ್ಟೆ ತುಂಬೀತೇ ?
ಗ್ರಾಮಶಾಂತಿಗೆ ತಳವಾರ ತಲೇ ಬೋಳಿಸಿಕೊಂಡ
ಜಾತಗಿತ್ತಿಯು ಗಂಡನಾದರೂ ನೆಯ್ದಲ್ಲದೆ ಬಟ್ಟೆಯಾಗದು
ಜೋಡು ಇದ್ದರೆ ನಾಡು ತಿರುಗಬಹುದು
ತಗ್ಗಿದವ ಯೆಂದಿಗೂ ನುಗ್ಗಾಗ
ತಲೆ ಚೆನ್ನಾಗಿದ್ದರೆ ಮುಂಡಾಸ ಸಹಸ್ರ ಸುತ್ತಬಹುದು
ತೆಂಗಿನಮರ ಯಾಕೆ ಹತ್ತುತ್ತೀ ಅಂದರೆ ಬೆಕ್ಕಿಗೆ ಹುಲ್ಲು ಕೊಯ್ಯುವದಕ್ಕೆ ಅಂದ ಹಾಗೆ
ಬಾಲಸನ್ಯಾಸಿ ಕೆಟ್ಟರೆ ಖೂಳನಾಯಿಗಿಂತ ಕಡೆ
ಬಿದರು ತಟ್ಟೀ ಮಾರಿದಾಕ್ಷಣ ಸೆಟ್ಟಿಯಾದಾನೇ ?
ಬುದ್ಧಿವಂತ ಬೆಣ್ಣೀ ತಿಂದು ಅಪ್ರಬುದ್ಧನ ಬಾಯಿಗೆ ಒರಸಿದ
ಬೆಲ್ಲವಿಲ್ಲದಿದ್ದರೆ, ಬೆಲ್ಲದಂಥ ಮಾತೂ ಇಲ್ಲವೇ ?
ಭಂಗಿ ಮುಕ್ಕುವವನಿಗೆ ಅಂಗಿಯಾದರೂ ಉಳಿಯದು
ಮಣ್ಣು ದೇವರಿಗೆ ಮಜ್ಜನವೇ ಸಾಕ್ಷಿ
ಮಾಡೋದು ದುರಾಚಾರ, ಮನೇ ಮುಂದೆ ವೃಂದಾವನ
ಮಾನ ಹೋದ ಮೇಲೆ ಮರಣವಾದ ಹಾಗೆ

೧ ಕನ್ನಡ ಪಾಠಗಳ ಐದನೇ ಪುಸ್ತಕವು : ೧೮೭೨ : ಪು. ೧೭೬.

ಮುಪ್ಪಾದ ಮೇಲೆ ಮೂರು ದಿನವಿರಬಾರದು
ಮೂವರ ಕಿವಿಗೆ ಮುಟ್ಟಿದ್ದು ಮೂರು ಲೋಕಕ್ಕೆ ಮುಟ್ಟುವದು. ೧

ಕಳೆದ ಶತಮಾನದ ಕೊನೆಯ ಭಾಗಕ್ಕೆ ಜನರ ಬಳಕೆಯಲ್ಲಿ ಉಳಿದಿದ್ದ ಗಾದೆಗಳ ಕಲ್ಪನೆಯನ್ನು ನಾವು ಮೇಲಿನ ಉದಾಹರಣೆಗಳಿಂದ ಕಂಡುಕೊಳ್ಳಬಹುದು.

ಗಂಗಾಧರಯ್ಯನವರ ಕೃತಿರಚನೆಯ ನಿಯಮಿತತನವನ್ನು ಈ ಮೂಲಕ ಕಂಡುಕೊಳ್ಳಬಹುದಾಗಿದೆ :

೧೮೬೬ ರಿಂದ ಶಬ್ದಮಣಿದರ್ಪಣ ವ್ಯಾಖ್ಯಾನ– 'ಮಠಪತ್ರಿಕೆ' ಯಲ್ಲಿ
೧೮೬೭– 'ಹಳಗನ್ನಡ ಕವಿತಾ ಸಂಗ್ರಹ'
೧೮೬೯– 'ಶಬ್ದಮಂಜರಿ' ರಚನೆ
೧೮೭೧– ರಾಜಶೇಖರ ವಿಲಾಸದ ಮೊದಲನೆಯ ಆಶ್ವಾಸದ ಟೀಕೆ
೧೮೭೩– ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ' ಯ ಟೀಕೆ
೧೮೭೪– ರಾಜಶೇಖರ ವಿಲಾಸದ ನಾಲ್ಕನೆಯ ಆಶ್ವಾಸದ ಟೀಕೆ
೧೮೭೪ ರಿಂದ 'ಭಾಷಾ ದರ್ಪಣ' ದ ಪ್ರಕಟಣೆ– 'ಮಠಪತ್ರಿಕೆ' ಯಲ್ಲಿ
೧೮೭೫– ಕನ್ನಡ ೧ ಮತ್ತು ೨ನೆಯ ಪುಸ್ತಕಗಳ ಪರಿಷ್ಕರಣ
೧೮೭೬–೭೭– ಬಾಣ ಕಾದಂಬರಿ ಅನುವಾದ
೫–೧೧–೧೮೭೭ ರಂದು ಪರಲೋಕಯಾತ್ರೆ.

ಅಂದರೆ, ಸನ್ ೧೮೬೬ ರಿಂದ ಮೊದಲ್ಗೊಂಡು ೧೮೭೭ ರ ವರೆಗೆ ಅಖಂಡ ೧೧ ವರ್ಷಗಳ ವರೆಗೆ ತುಂಬಾ ನಿಯಮಿತವಾಗಿ ಗಂಗಾಧರಯ್ಯನವರು ಕೃತಿ ರಚನೆ ಮಾಡಿ ಆ ಕಾಲದಲ್ಲಿ ಪ್ರಕಟಿಸಿದ್ದು ಹೆಮ್ಮೆಯ ಸಾಧನೆಯಾಗಿದೆ. ಸಾಧನ ಸಂಪತ್ತಿಗಳಿಲ್ಲದ ಒಬ್ಬ ಸಾಮಾನ್ಯ ವ್ಯಕ್ತಿ. (ಆಗ ಅವರ ಪಗಾರ ಸುಮಾರು ೨೫ ರಿಂದ ೩೦ ರೂಪಾಯಿ) ಇಷ್ಟು ಕೆಲಸ ಮಾಡಿದ್ದು, ಯಾರಾದರೂ ಹೆಮ್ಮೆ ಪಡುವಂಥದೇ.

ತುರಮರಿಯವರು ಬರಿಯ ಪುಸ್ತಕ ಪಂಡಿತರು ಮಾತ್ರವಾಗಿರಲಿಲ್ಲ. ಅವರು ಸಮಾಜಸೇವಾ ದೃಷ್ಟಿಯುಳ್ಳವರೂ ಆಗಿದ್ದರು. ಸಮಾಜ ಮುಂದು ಬರಬೇಕು; ಸಮಾಜದಲ್ಲಿ ವಿದ್ಯೆ ಪ್ರಸಾರ ಹೊಂದಬೇಕೆಂಬುದು ಅವರ ಮನೀಷೆಯಾಗಿತ್ತು. ಚಿತ್ರದುರ್ಗದ ಮಹಾಸ್ವಾಮಿಗಳಾಗಿದ್ದ ಶ್ರೀ ಶ್ರೀ ಮಹಾಲಿಂಗಸ್ವಾಮಿಗಳು ಸನ್ ೧೮೬೮ ರ ನವೆಂಬರ ತಿಂಗಳಲ್ಲಿ ವೀರಶೈವ ಬಡ ವಿದ್ಯಾರ್ಥಿಗಳ ವಿದ್ಯಾಸೌಕರ್ಯಕ್ಕಾಗಿ ಬೆಳಗಾವಿಯಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದ್ದರ ವಿಷಯವನ್ನು ಈ ಮೊದಲಿಗೇ ಹೇಳಿದೆಯಷ್ಟೇ! ಆಗ, ಮಿ॥ ರಸೆಲ್‌ರವರು ಹೊರಡಿಸಿದ ಪ್ರಕಟಣೆ ಹೀಗಿತ್ತು :

ನೋಟೀಸು

ಚಿತ್ರಕಲ್ಲದುರ್ಗದ ಮಹಾಸ್ವಾಮಿಗಳು ಯಾವತ್ತೂ ಲಿಂಗಾಯತ ಜನರಿಗೆ ತಿಳಿಯುವದರ ದಶಿಯಿಂದ ಪ್ರಕಟ ಮಾಡುವದೇನಂದರೆ– ಲಿಂಗಾಯತರ ಹುಡುಗರು ಇಂಗ್ರೇಜಿ ಕಲಿತು ಶ್ಯಾಹಣೆರಾಗಿ

೧ ಅದೇ ಪು. ೩೧೧–೩೧೮.

ಚುರಮುರಿ ಶೇಷಗಿರಿರಾಯರು

(೧೮೨೨_೧೮೮೫)

ಈ ವರೆಗೆ ವರ್ಣಿಸಲಾದ ಲೇಖಕರೆಲ್ಲರೂ ಹೆಚ್ಚು ಕಡಿಮೆ ಕನ್ನಡ ಟ್ರೇನಿಂಗ್ ಕಾಲೇಜು ಸುತ್ತ, ಇಲ್ಲವೇ ಶಿಕ್ಷಣ ಖಾತೆಯಲ್ಲಿ ಒಳ್ಳೆಯವರೇ ಆಗಿದ್ದಾರೆ. ಹಾಗಿದ್ದರೂ, ಈ ಕನ್ನಡದ ಅಭಿಮಾನ ಕೇವಲ ಶಿಕ್ಷಕರ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗದೆ, ಬೇರೆ ಬೇರೆ ಇಲಾಖೆಗಳಲ್ಲಿರುವವರಲ್ಲಿಯೂ ಕೆಲವು ಸಲ ಕಾಣಿಸಿಕೊಂಡಿತು.

ಕಾಳಿದಾಸ ಮಹಾಕವಿಯ 'ಶಾಕುಂತಲ' ನಾಟಕವನ್ನು ಸುಂದರವಾಗಿ ಕನ್ನಡ ಭಾಷೆಗೆ ಪ್ರಥಮತಃ ಪರಿವರ್ತನೆ ಮಾಡಿದ ದಿವಂಗತ ಚುರಮುರಿ ಶೇಷಗಿರಿರಾಯರು ಶಿಕ್ಷಕರ ಬಳಗಕ್ಕೆ ಸೇರಿದವರಲ್ಲ. ಅವರು ಪುಣೆಯ ಎಂಜಿನಿಯರಿಂಗ್ ಕಾಲೇಜಿನಿಂದ ಉತ್ತೀರ್ಣರಾಗಿ, ಲೋಕೋಪಯೋಗಿ ಖಾತೆಯಲ್ಲಿ ದ್ವಿತೀಯ ವರ್ಗದ ಓವರ್‌ಸಿಯರ್ ಆಗಿ ಕೆಲಸ ಮಾಡುತ್ತಿದ್ದರು. ಇವರ ತಂದೆಯವರ ಹೆಸರು ರಾಮಚಂದ್ರ ಚುರಮುರಿ.

ಇವರು ಸನ್ ೧೮೭೦ರಲ್ಲಿ ಕಾಳಿದಾಸನ 'ಶಾಕುಂತಲ' ನಾಟಕವನ್ನು ಕನ್ನಡಕ್ಕೆ ನಾಟಕ ರೂಪದಲ್ಲಿ ಅನುವಾದ ಮಾಡಿದರು. ೧೮೯ ಪುಟದ ಈ ಸುಂದರವಾದ ಪುಸ್ತಕ ಮುಂಬಯಿಯ ಭೈಕಳಾದ ಎಜುಕೇಶನ್ ಸೊಸಾಯಟಿಯ ಪ್ರೆಸ್ಸಿನಲ್ಲಿ ಮುದ್ರಿತವಾಯಿತು.

ಆ ಕಾಲದ ಇಂಗ್ಲಿಷ ಶಾಲಾಶಿಕ್ಷಣದ ವೈಚಿತ್ರ್ಯವನ್ನು ತಿಳಿಯಲು ಗ್ರಂಥದ ಮುಖಪುಟ ನೋಡುವಂತಿದೆ (ಪಡಿಯಚ್ಚನ್ನು ಅನ್ಯತ್ರ ಕೊಡಲಾಗಿದೆ).

ಪುರಾಕವೀನಾಂ ಗಣನಾ ಪ್ರಸಂಗೇ
ಕನಿಷ್ಠಿಕಾಧಿಷ್ಠಿತ ಕಾಲಿದಾಸಾ
ಅದ್ಯಾಪಿ ತತ್ತುಲ್ಯಕವೇರಭಾವಾತ್
ಅನಾಮಿಕಾ ಸಾರ್ಥವತೀ ಬಭೂವ

—ಮತ್ತು

ಭಾಸೋ ಹಾಸಃ ಕವಿಕುಲಗುರುಃ ಕಾಲಿದಾಸೋ ವಿಲಾಸಃ

—ಎಂದೂ ಕಾಲಿದಾಸನ ಹಿರಿಮೆಯನ್ನು ಸಂಸ್ಕೃತ ಸಾಹಿತ್ಯದಲ್ಲಿ ಹಾಡಿ ಹೊಗಳುತ್ತಾರೆ. ಆ ಮಹಾಕವಿಯು ಬರೆದ ಸುಪ್ರಸಿದ್ಧ ನಾಟಕವಾದ ಶಾಕುಂತಲವನ್ನು ಶ್ರೀಯುತರು ಕನ್ನಡದಲ್ಲಿ ಭಾಷಾಂತರಿಸಿದ್ದಾರೆ. ಈ ಗ್ರಂಥವನ್ನು ತಾವು ಏಕೆ ಭಾಷಾಂತರಿಸಿದೆವು ಎಂಬುದನ್ನು ಅವರು ಹೀಗೆ ಹೇಳುತ್ತಾರೆ :

ಇದಭಿಜ್ಞಾನ ಶಕುಂತಲಾಖ್ಯ ಕೃತಿಯಂ ಭಾಷಾಂತರಂ ತಂಮ ತ–
ಮ್ಮದರೊಳ್ಮಾಡಿದರೆಲ್ಲ ನಾಡಿನ ಜನರ್ ಕರ್ನಾಟದೊಳಿಲ್ಲೈ
ಮುದಿವಂದಟ್ಟುವದಲ್ಲದೇನ ಮರಣಂ ಯಾವಾಗಲೋ ಎಂದು ಸಿ–
ಕ್ಕಿದ ಶಬ್ದಂಗಳನಿಟ್ಟು ಶೀಘ್ರತರದಿಂದೀ ಕೃತ್ಯಮಂ ಗೈದೆನಾಂ ॥

ಕವಿಯ ಕಾವ್ಯಕಲ್ಪನೆ ಎಂದರೆ :

ಬಿಗಿನುಡಿಯಿರ್ದು ತಕ್ಕ ಸೊಗಸಿಲ್ಲದಿರಲ್ಕದು ತಾಲವೃಕ್ಷದೋ
ಳ್ಮೊಗೆಯೊಳಗಿರ್ಪ ಮದ್ಯಮಧುರೋಕ್ತಿಯು ಕಾವ್ಯಸುಬೋಧಮಾಗಿರಲ್
ಉಗುರೆಳೆಗೆಂಪುವಣ್ಣೊಡೆದ ದ್ರಾಕ್ಷದ ಗೊಂಚಲು ಗೂಢಮಾಗಿ ಮೇಣ್
ಮಿಗೆ ರಸದುಂಬಿರಲ್ಕೆ ರಸದಾಳಿಯ ಕಬ್ಬದು ಕಬ್ಬಮುತ್ತಮಂ ॥

ಕಾವ್ಯ ಹೇಗಿರಬೇಕೆಂದರೆ :

ತಳಿರುಗಳಿಂದ ಮುಚ್ಚಿ ತೆರೆಯಲ್ತನಿಮಾವಿನ ಹಣ್ಣು ಜೋಲ್ದ ಒಲ್
ತಿಳಿವಸನಕ್ಕೆ ಬಟ್ಟಮೊಲೆಗಳ್ಮರೆಯಾಗಿರೆ ತೋರುವಂತೆ ಮೈ
ಯೊಳಗಿನಿಯಂಗೆ ನಾಚಿ ನರಸಂಗದೊಳೊಪ್ಪಿಸದಿರ್ಪ ವೆಣ್ಣೆನಲ್
ಬಲುಬಿಗಿಯಲ್ಲ ತೀರದೆರೆದಲ್ಲದು ಸೊಂಪಿನ ಕಾವ್ಯಮೊಪ್ಪುಗುಂ ॥

ಕವಿಗೆ ತನ್ನ ಕಾವ್ಯಪ್ರತಿಭೆಯ ಬಗೆಗೆ ಆತ್ಮವಿಶ್ವಾಸವಿದೆ :

ಕವಿಸೇನಾಪತಿ ಕಾವ್ಯಶಾಸ್ತ್ರವನಸಿಂಹಂ ಭೀಮಸೇನಂ ಕಣಾ
ನವಪಾಕಕ್ಕೆ ಗುರೋರ್ಗುರುಂ ರಸಿಕಮುಖ್ಯರ್ಗೀತನೈ ಮೇಣು ಮಾ
ನವರೊಳಿಪ್ಪ ಮನಸ್ಸಿನೆಲ್ಲ ಬಗೆದೊರಲ್ದರ್ಪಣಂ ಸಾಮ್ಯರಾ
ರಿವಗೀ ಕನ್ನಡ ಕಾಲಿದಾಸನಿಗತಿ ಪ್ರಖ್ಯಾತ ಲಕ್ಷ್ಮೀಶಗೆ ॥

ಕವಿತೆಗೆ ಪ್ರತಿಭೆ, ವಿದ್ವತ್ಸೇವೆ ಕಾವ್ಯ ಪರಿಚಯಾದಿಗಳು ಕಾರಣವೆಂದು ನಾಗವರ್ಮನು ಹೇಳಿದನು. ಚುರಮುರಿಯುವರು ಕವಿ ವಿದ್ವಾಂಸನಾಗಿದ್ದರೆ, ಕಾವ್ಯದ ರಂಗು ಮತ್ತೂ ಹೆಚ್ಚುವದೆಂದು ಹೇಳುತ್ತಾರೆ :

ಕವಿ ವಿದ್ವಾಂಸನಿರಲ್ಕೆ ತತ್ಕೃತುಪಮಾಲಂಕಾರ ಮುಂತಾದರಿಂ
ಸವಿಯಾಗಿರ್ಪ ಸುಗೂಢದಿವ್ಯಕೃತಿಯಂ ಸಾಮಾನ್ಯನುಂ ಕಟ್ಟಿದಾ
ಕವನಂ ನೋಡಲು ರತ್ನದೊಸ್ತದ ಕರಂಡಂ ಪಕ್ವದಾಡಿಂಬಮಂ
ರವಿಯಂ ಪೊಂಗಲಶಮಂ ಸುಧಾಕಿರಣನಂ ಚಲ್ವಾನನಂ ಪೋಲ್ವುವು ॥

ತಾವು ಅನುವಾದ ಮಾಡಿದ ನಾಟಕ ಉಳಿದ ಭಾಷೆಗಳಲ್ಲಿಯ ಶಾಕುಂತಲ ಅನುವಾದಕ್ಕಿಂತ ಚೆನ್ನಾಗಿದೆಯೆಂಬ ಕಲ್ಪನೆ ಲೇಖಕರಿಗಿದೆ. ಅನುವಾದದಲ್ಲಿ ತಾವು ಸಫಲರಾಗಿರದಿದ್ದರೆ, ಕನ್ನಡ ನಾಡನ್ನೇ ಬಿಟ್ಟು ಕೂಡ ಹೋಗಲು ಸಿದ್ಧರಾಗಿದ್ದಾರೆ :

ಕವಿಜನರೆಲ್ಲ ನೋಡಬಮುದೇನಯ ಕೃತ್ಯವನನ್ಯದೇಶದೊಳ್
ವಿವಿಧ ಜನರ್ಕಳುಂ ವಿವಿಧ ಭಾಷೆಯೊಳಂತರಿಸಿರ್ಪವಂಗಳಂ

ಸವಿಯೊಳು ಹಚ್ಚಿನೋಡಲೊರೆ ಕನ್ನಡಿನೆನ್ನದು ಹೆಚ್ಚದಿರ್ದೊಡೆ
ಕವಿತೆಯು ಗಂಡುಮೆಟ್ಟು ಕರನಾಟಕ ಬಿಟ್ಟು ತೆರಳ್ದು ಪೋಗುವೆಂ ॥ [೧]

ಆದರೂ, ಯಾರಾದರೂ ಈ ಕೃತಿಯನ್ನು ಹೀನವೆಂದು ಬಗೆದರೆ, ಅದನ್ನು ಒಟ್ಟಿ ಹೊರಗೆ ಹಾಕದೆ, ಕವಿಯ ಕಡೆಗೇ ಮರಳಿ ಕಳಿಸಬೇಕೆಂದು ಅವರ ಬಿನ್ನಹ :

ಬಡಕವಿಗೀ ಕುರೂಪಕೃತಿಗಂನಿಕೆ ಪುಟ್ಟಿದಳೀನು ಜಾಣರೊಳ್
ಅಡಿಗಳ ದಾಸಿಯಾಗಿ ಬದುಕಲ್ಕಳುಹಿರ್ಪನಿದಕ್ಕೆ ತಪ್ಪಿತಾಂ
ನಡಿದೊಡೆ ಡೊಂಬದಾಸರೊಳು ಸಾಯ್ನುಡೆಯಂದಿವಳಂನೆ ನೂಂಕಿರೆ
ನ್ನೆಡೆಯೊಳು ಬೇಡವರ್ಗೆ ಸಹ ಬೇಸರಿಡಲ್ಕೆಡಿಪರ್ಚಿಕಿತ್ಸರೇ ॥

ಶೇಷಗಿರಿರಾಯರಿಗೆ ತಮ್ಮ ಗುರುಗಳಾಗಿದ್ದ ಚೆನಬಸಪ್ಪನವರ ಬಗೆಗೆ ತುಂಬಾ ಅಭಿಮಾನ. ' ಬಡವರ ವಿದ್ಯಕಾಗಿ ತನುವಿಂ ಮನದಿಂ ಧನದಿಂದೆ ಸಾಹಸಂ ಪಡುತಿಹ ಧೀರ ಚನ್ನಬಸವೇಶ್ವರ 'ರ ಬಗೆಗೆ ಅವರಿಗೆ ಅಪಾರವಾದ ಅಭಿಮಾನವಿದೆ; ಗುರುಭಕ್ತಿಯಿದೆ. ಆದಕ್ಕಾಗಿ ತಮ್ಮ ಈ ಕೃತಿಯ ಪ್ರಾರಂಭದಲ್ಲಿ ಚೆನಬಸಪ್ಪನವರನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ :

ಕಡುಗುರುಭಕ್ತಿಯಿಂ ಚುರಮರೀತ್ಮ್ಯಪನಾವಃಕ ರಾಮಚಂದ್ರಜಂ
ಜಡಮತಿ ಕಬ್ಬಿ ಶೇಷಗಿರಿಯೆಂಬವನೀಕೃತಿಗೈದು ಮಾಡಿದಂ
ಬಡವರ ವಿದ್ಯೆಕಾಗಿ ತನುವಿಂ ಮನದಿಂ ಧನದಿಂದೆ ಸಾಹಸಂ
ಪಡುತಿಹ ಧೀರ ಚಂನಬಸವೇಶ್ವರ ದಿವ್ಯರ ಪಾದಭೂಷಣಂ ॥

ಚುರಮರಿಯವರು ತಮ್ಮ ಶಾಕುಂತಲವನ್ನು ಉತ್ತರ ಕರ್ನಾಟಕದ ' ದೇಸಿ ' ಮತ್ತು ' ಮಾರ್ಗ ' ಶೈಲಿಗಳಲ್ಲಿ ಅನುವಾದ ಮಾಡಿದ್ದಾರೆ. ಶಾಕುಂತಲದ ಪದ್ಯಭಾಗಗಳನ್ನು ಸಂಸ್ಕೃತದ ವೃತ್ತ ಕಂದಗಳಲ್ಲಿ ಭಾಷಾಂತರಿಸಿದ್ದಲ್ಲದೆ ಹಾಡಿನ ಮಟ್ಟಗಳಲ್ಲಿಯೂ ಅನುವಾದ ಮಾಡಿದ್ದಾರೆ. ಚುರಮರಿಯವರು ಮತ್ತು ಈ ಕಾಲದ ಇನ್ನೂ ಇಂಥ ಲೇಖಕರೂ " .... ಎಂಬಂತೆ " ಎಂದು ಹೇಳಿದ ಅನೇಕ ಹಾಡುಗಳ ಮೂಲವನ್ನೂ, ಸಂಗೀತದ ರೀತಿಯನ್ನೂ ಕಂಡು ಹಿಡಿಯುವುದೂ ಒಂದು ಒಳ್ಳೆಯ ಸಂಶೋಧನೆಯ ಕೆಲಸವೇ ಆದೀತು. ಶ್ರೀಯುತರು ಆ ಕಾಲದಲ್ಲಿ ಪ್ರಚಲಿತವಿದ್ದ ಪಾರಿಜಾತದ ಹಾಡುಗಳು ಮತ್ತು ಇತರ ದೇಸೀ ಹಾಡುಗಳ ಛಂದದಲ್ಲಿ ತಮ್ಮ ಪದ್ಯಗಳನ್ನು ರಚಿಸಿದರು. ಮರಾಠಿಯಲ್ಲಿ ' ಶಾರದಾ ' ನಾಟಕವನ್ನು ರಚಿಸಿದ ಗುರ್ಲಹೊಸೂರಿನ ಅಣ್ಣಾ ಕಿರ್ಲೋಸ್ಕರ ಅವರ ಅನೇಕ ಮರಾಠಿ ಹಾಡುಗಳಿಗೆ ಚುರಮರಿಯವರ ಈ ಹಾಡಿನ ಮಟ್ಟಗಳೇ ಆಧಾರವಾದುವು. ಈ ಹಾಡುಗಳ ಮಟ್ಟ ಮರಾಠಿ ಭಾಷೆಯಲ್ಲಿಯೂ ತುಂಬಾ ಪ್ರಚಲಿತವಾದುವು.

ಉದಾಹರಣೆಗೆ, ಪ್ರಿಯಕರನಿಗೆ ಪತ್ರವನ್ನು ಬರೆಯುತ್ತಿದ್ದ ಶಕುಂತಲೆಯ ಈ ಪತ್ರವನ್ನು ನಿರೂಪಿಸುವ ಹಾಡು ಒಂದು ಕಾಲಕ್ಕೆ ತುಂಬಾ ಜನಪ್ರಿಯವಾದ ಹಾಡಾಗಿದ್ದಿತು :

---

೧ ದಿವಂಗತ ಮುಂದವೀಡು ಕೃಷ್ಣರಾಯರು ಚುರಮರಿ ಶೇಷಗಿರಿರಾಯರ ಆರ್ದ್ರ ಅಭಿಮಾನಿಗಳಾಗಿದ್ದರೆಂದು ಹೇಳಿತಪ್ಪೇ! ಚುರಮರಿಯವರ ಬಗ್ಗೆ ಮಾತಾಡುವಾಗಲೆಲ್ಲ ಅವರ ಈ ಶ್ಲೋಕವನ್ನು ಉದ್ಧರಿಸಿ ಕಣ್ಣೀರು ತುಂಬಿ ಇಂಥ ದೊಡ್ಡ ಕವಿ ಕನ್ನಡದಲ್ಲಿ ಆಗಿ ಹೋದದ್ದು ಕನ್ನಡದ ಸುದೈವವೆಂದು ಹೇಳುತ್ತಿದ್ದರು!

(ಧಾಟಿ- " [illegible] " [illegible])

ಸುಮನ ರಚಿಸುತಿರಲು ನಾದಿರದದನೆ ಮನದೊಳು ಹೃದಯದಾಸೆದೋರಲು ಬಲು ॥
ಹೆದರಿ– ಬೆದರಿ– ಚದುರಿ– ಮಧುರಿ ॥ ಪ ॥

ಕರದಿಗಲ್ಲವಿರಿಸಿ ಒಂದೆ ಕಡೆಗೆ ನೋಡುತಾ
ಬೆರಳಿನಿಂದ ಮೆಲ್ಲನೆ ಮೃದು ತಾಳ ಮೆಟ್ಟುತಾ
ಸಿರಿವನೊಲಿಯೆ ಘಾಸಿಯೊಳ್ ಕರಿ–ಸುರುಳು–ಗುರುಳು ಉರುಳುತಿರಲು ॥ ೧ ॥

ತವಕದಿಂದಲಾಚಿತ ಸೂಚಿಸಿರಲು ಹಿಗ್ಗುತಾ
ಕವನರಸದಿ ಕಿನ್ನೆಯೊಳು ಮುಳ್ಳನಾಟುತಾ
ಕವಿಯ ಬಾಷ್ಪ ಕಣ್ಣೊಳುಕ್ಕು–ತಿದೆ ತ–ರುವತಿ–ನವತ ಯುವತಿ ॥ ೨ ॥

ಒಂದೆ ಭ್ರೂಲತೆಯ ಬಾಲೆ ಮ್ಯಾಲಕೆತ್ತುತಾ
ಹೊಂದಿ ಬರಲು ರಚನೆ ಸಣ್ಣಸ್ವರದಿ ನುಡಿಯುತಾ
ಬಂಧನ ಸೌಂದರಿಯದಾ–ನಂದ–ದಿಂದ ಮಿಂದು ಒಂದು ॥ ೩ ॥

ಶ್ರೀಯುತರ 'ಮಾರ್ಗ' ಶೈಲಿಯೂ ಅಷ್ಟೇ ಪ್ರಬುದ್ಧವಾದುದು. ಉದಾಹರಣೆಗೆ ವಸಂತ ತಿಲಕ ವೃತ್ತದಲ್ಲಿಯ ಈ ಪದ್ಯವನ್ನು ಗಮನಿಸಬಹುದು :

ಸರ್ವಂ ತಪೋಧನರ ಕರ್ಮವದ್ಯೆ ಸುಗಮ್ಯಂ
ನಿರ್ವಿಘ್ನಮಾಗಿ ನಡಿವಿರ್ಪುದು ನೋಡು ರಮ್ಯಂ
ವೈರ್ವೀಕಣಾಂಕ ಭುಜದಿಂ ತಿಳಿ ಇಂದು ನಿಂನಾ
ಊರ್ವಿ ಪ್ರಜಂಗಳು ಸುರಕ್ಷಿತರಿಪ್ಪಿದಂ ನಾ ॥ ೧

ಅನುಪ್ರಾಸ ಲೇಖಕರಿಗೆ ತುಂಬಾ ಸಾಧಿಸಿದೆ. ಬರೆಬರೆದಂತೆ, ನೆನಪಿದು ತಟ್ಟನೆ ನಿಲ್ಲದೆ, ಶಬ್ದಗಳು ತಮ್ಮ ತಮ್ಮ ಸ್ಥಾನದಲ್ಲಿ ಬಂದು ಸೇರುತ್ತವೆ. ಹೇಳಿ ಮಾಡಿಸಿದ ಹಾಗೆ ಈ ಅನುಪ್ರಾಸವನ್ನು ಸಾಧಿಸಿದ್ದಾರೆ. ಉದಾಹರಣೆಗೆ, ಮದಿರಾವೃತ್ತದ ಈ ಪದ್ಯವನ್ನು ಗಮನಿಸಬಹುದು :

ತುಂಗಮೃಗಂಗಳ ಸಂಗಡ ಸಂಗದಸಂಗತಿಂಗೆ ತುರಗಂಗಳಿಗಾವೇ
ಶಂಗೊಡೆ ಪತ್ತಿನೊಳೊತ್ತರಿಸುತ್ತಿರೆ ಕತ್ತಲೆತ್ತಲುರೆ ಮುತ್ತಿತು ಕೆಂಧೂ
ಳೀಂಗತಿ ಬಟ್ಟೆಗಳಟ್ಟಿಗೆ ದಟ್ಟಿನಲೊಟ್ಟಿ ಬಟ್ಟೆಗಳು ಕೆಟ್ಟವಮೀ ವೃ
ಕ್ಷಾಂಗಗಳಿಂಗೆ ತೊಡಂಗಿ ಹಮಂ ಹುಡಿಮ್ಯೆಗಿ ತಿಂಗಡಿಷ್ಪದ್ಯ ಗಮಬಂದಿ ॥ ೨

ದುಷ್ಯಂತನ ಮಿತ್ರನಾದ ವಿದೂಷಕನ ಈ ಸಂಭಾಷಣೆಯು ಅನುವಾದವು ಸಹ ಗಮನೀಯವಾಗಿದೆ :

೧ ಅದೇ ಪು. ೧೧.
೨ ಅದೇ ಪು. ೨೪.

“ ವಿದೂಷಕ : (ಶ್ವಾಸಬಿಡುತ್ತ) ಏನ್ ನನ್ನ ಕರ್ಮಾಪ್ಪಾ ! ಈ ಅರಸಿನ ಬ್ಯಾಟೀ ಕಾಲಾಗ ನಾನಂತೂ ದಣದ ಹೋದ್ನಿ. ಕವನ ಚಿಗರಿ ! ಕವನ ಕಾಡಂದಿ ! ಕವನ ಹುಲಿ ! ಅಂತ ಪದರ್‍ಯಾಡಿಕೊಂತ ಚೀರ್‍ಯಾಡಿಕೊಂತ ಈ ಅಡಿವ್ಯಾಗಿಂದ ಆ ಅಡಿವಿ ಆ ಅಡಿವ್ಯಾಗಿಂದೀ ಅಡಿವಿ. ಓಡಿ ಓಡಿ ಸಾಕಸಾಕಾತ್ನೋ ನಮ್ಮಪ್ಪಾ ! ಬಿಸಲಂತೀ ಆಸಾಡ ಪಾಡ ಕೇಳೂದೇನತಿ. ರಾಡಾ ಕುಟ್ಟೀ ಕುಟ್ಟತತಿ; ಮದ್ಯಾಣದ್ಹೊತ್ತಿನಾಗ ಪಂದ ಜರಾ ಗಿಡದ ಬುಡಕ ಕುಂತೇನಂದರ ನೆಳ್ಳಾದ ಆಕೆ ? ಅದೂ ಇಲ್ಲ. ಗಿರದಸಾಣಾ ತೊಪ್ಪ ಬಿದ್ದ ಕೊಳತ ಪಾಚಾದ ನೀರ ಕುಡ್ಯಾಣಾ, ಪಸಂದಾಗಾಣಾ ಹೊತ್ತಿಲ್ಲದ್ಹೊತ್ತಿನ್ಯಾಗ ಹಸಿ ಬಿಡಾ ತಿಂದಾಣಾ ! ಇವನ ಕುದರೀ ಓಂದ ಓಡಿ ಓಡಿ ಕೈಕಾಲೆಲ್ಲಾ ಸಂದ್ಬಿಟ್ಟು ಹೋದುವು. ರಾತರಿನ್ಯಾಗ ಕಣ್ಣ ತುಂಬಾ ನಿದ್ದ್ಯಾರ ಆಕ್ಕತಿ ? ಅದೂ ಇಲ್ಲ: ಒಂದ ಜರಾ ಜಾವ ಹತ್ತರಿಕ್ಕ ಇಟ್ಟೊ ಟಿಟಿರಾಗ ಬ್ಯಾಟೀ ಆಡೋ ಮುಮ್ಯಕ್ಕಳು ಪದರ್‍ಯಾಡಿಕೊಂತ ಬಂದಕ್ಯಾಕಿ ಎಬ್ಬಿಸಿದರ ! ಎಲಾ ಇವರ ಮಂಜಾಳ ಹೋಗಲಿ ! ” ೧

ಇದೂ ವಿದೂಷಕನ ಭಾಷೆಯಾಗಿರಬಹುದೇ ? ಮೂಲ ನಾಟಕದಲ್ಲಿ ಅವನು ಪ್ರಾಕೃತದಲ್ಲಿ ಮಾತಾಡಿದನಲ್ಲವೆ ? ಅಂತಲೇ ಲೇಖಕರೂ ಇಲ್ಲಿ ಈ ರೀತಿ ಪದಪ್ರಯೋಗ ಮಾಡಿದ್ದಾರೆ.

ಹೀಗೆ ಚುರಮರಿಯವರು ಸನ್ ೧೮೭೦ ರಲ್ಲಿಯೇ ಮಹಾಕವಿ ಕಾಲಿದಾಸನ ಅಪೂರ್ವ ಕೃತಿಯಾದ ಶಾಕುಂತಲವನ್ನು ತಮ್ಮದೇ ಆದ ‘ ದೇಸಿ ’ ಮತ್ತು ‘ ಮಾರ್ಗ ’ ಶೈಲಿಯಲ್ಲಿ ಅನುವಾದ ಮಾಡಿ, ಕನ್ನಡಕ್ಕೆ ವೈಶಿಷ್ಟ್ಯಪೂರ್ಣವಾದ ಕಾಣಿಕೆಯನ್ನು ಸಲ್ಲಿಸಿದರು. ಅವರ ಪದಗಳ ಪ್ರಭಾವ ಮರಾಠಿ ರಂಗಭೂಮಿಯ ಮೇಲೆಯೂ ಆಯಿತು.

ಈ ಅನುವಾದದ ಜನಪ್ರಿಯತೆ :

ಸನ್ ೧೮೭೦ ರಲ್ಲಿ ಮೊದಲ ಸಲ ಪ್ರಕಟವಾದ ಈ ಅನುವಾದ ಮುಂದೆ ಹನ್ನೆರಡು ವರ್ಷಗಳಲ್ಲಿಯೇ ಅಂದರೆ ಸನ್ ೧೮೮೨ ರಲ್ಲಿ ದ್ವಿತೀಯ ಮುದ್ರಣ ಪಡೆಯಿತು. ನಂತರ ಪುನಃ ಹನ್ನೆರಡು ವರ್ಷಗಳಲ್ಲಿ ಅಂದರೆ ಸನ್ ೧೮೯೪ ರಲ್ಲಿ ಮೂರನೆಯ ಮುದ್ರಣ ಅನಾಡ ಚನವೀರಪ್ಪನವರಿಂದ ಪ್ರಕಟವಾಯಿತು. ನಾಲ್ಕನೆಯ ಆವೃತ್ತಿ ಮಾತ್ರ ಸನ್ ೧೯೩೪ ರಲ್ಲಿ ಪ್ರಕಟವಾಯಿತು.

ಮುದ್ರಣ ವ್ಯವಸ್ಥೆಯ ಮಾತು ಹೇಗೋ ಇರಲಿ, ಇಲ್ಲಿಯ ಹಾಡುಗಳು ಮಾತ್ರ ಒಂದು ಕಾಲಕ್ಕೆ ಜನಪ್ರಿಯವಾಗಿದ್ದವು. ಚುರಮರಿಯವರ ಅನೇಕ ಹಾಡುಗಳು ಉತ್ತರ ಕರ್ನಾಟಕದ ಅನೇಕ ಹೆಣ್ಣುಮಕ್ಕಳ ಬಾಯಲ್ಲಿ ಇರುತ್ತಿದ್ದವು. ಶಾಕುಂತಲದ ಜನಪ್ರಿಯತೆಯ ಬಗ್ಗೆ ದಿವಂಗತ ಮುದವೀಡು ಅವರು ಹೀಗೆ ಹೇಳುತ್ತಾರೆ :

“.... ಆಗ ಸುಸಂಸ್ಕೃತರ ಮನೆಮನೆಗೂ ಚುರಮರಿಯವರ ಶಾಕುಂತಲದ ಪುಸ್ತಕಗಳು ನೋಡ

---

೧ ಅದೇ ಪು. ೨೬.

–ಲೇಖಕರು ‘ ಮಂಜಾಳ ಹೋಗಲಿ ’ ಎನ್ನುವಕ್ಕೆ ಅಭಿಟಪ್ಪಯಾಗಿ “ ಮನಿ ಜ್ವಾಲಿ ಹೋಗಲಿ ” ಎಂಬದಾಗಲಿ ಅಥವಾ ‘ ಮನೀ ಜೋಳ ಹೋಗಲಿ ’ ಎಂಬದಾಗಲಿ ಅರ್ಥವಿರಬಹುದು– ಎಂದು ಹೇಳುವಲ್ಲಿ ಅವರ ಶಬ್ದಗಳ ವ್ಯುತ್ಪತ್ತಿ ವಿಷಯಕ ಕುತೂಹಲವನ್ನು ಗಮನಿಸಬಹುದು.

ನಾವು ಹಾಡುವದೆಲ್ಲ ಲಕ್ಷ್ಯದೊಳಿರು ಭಾಗ್ಯ
ದಾವಕಾಲದ ಗರುಡ ದೂರು
ಈ ನಡತೆಯು ಯುವತಿಯರೆಲ್ಲ ಜನರೊಳ್ಳ
ಲಿಪ್ಪೆಯಂದರಿಂದೆಣಿಸುತಿಹರು ॥ ೩ ॥[1]

ತುರಮುರಿ ಶಾಕುಂತಲ ನಾಟಕದ ಪ್ರಯೋಗಗಳು :

ಉತ್ತರ ಕರ್ನಾಟಕದಲ್ಲಿ ತುರಮುರಿ ಶಾಕುಂತಲದ ಜನಪ್ರಿಯತೆಯನ್ನು ಹೇಳಿ ಆಯಿತಷ್ಟೇ; ಇದರಲ್ಲಿನ ಪದಗಳ ರಮ್ಯತೆಗೆ ಮನಸೋತ ಅಣ್ಣಾ ಕಿರ್ಲೋಸ್ಕರ ಅವರು ತಮ್ಮ ಮರಾಠಿ 'ಸಂಗೀತ ಶಾಕುಂತಲ'ದಲ್ಲಿ ಈ ಧಾಟಿಗಳನ್ನು ಹಾಕಿ ಮರಾಠಿಗರ ಮನಸ್ಸನ್ನು ಸೂರೆಗೊಂಡರು. ಮರಾಠಿ ಶಾಕುಂತಲದ ಪ್ರಯೋಗಗಳು ಸಾವಿರಾರು ನಡೆದಿದ್ದರೂ, ಇಂದಿಗೂ ಆ ನಾಟಕವನ್ನು ಮರಾಠರು ಮೆಚ್ಚುತ್ತಿದ್ದಾರೆ. ಆದರೆ, ಈ ಪ್ರಯೋಗಗಳಿಗೆ ಅಷ್ಟಾಗಿ ಕನ್ನಡಿಗರ ಶಾಕುಂತಲಕ್ಕೆ ಒದಗಿ ಬರಲಿಲ್ಲ. ಮುದವೀಡು ಅವರು ಹೇಳಿದಂತೆ "ಸುಭಾಗ್ಯರಾದ ನಾವು ಕನ್ನಡಿಗರು ನಮ್ಮ ನಂದನವನ ದೊಳಗಿನ ಮಂದಾರ ಪಾರಿಜಾತಗಳ ಮಕರಂದಕ್ಕೆ ಮೂಗುಮುರಿದು, ಮತ್ತ್ಯಗಂಧಿ ಮಲ್ಲಿಗೆ ಕಾಗಿಲಾ ತಂದು ಪಕ್ಕೆ ಲಕ್ಕೆ ಮೊದಲಾದ ನಿರ್ಗಂಧ ಕುಸುಮಗಳಿಗೆ ಮುಗಿಬೀಳುತ್ತಿದ್ದೇವೆ." ಅಂತಲೆ, ತುರಮುರಿ ಶಾಕುಂತಲ ರಚಿತವಾದ ೩೦ ವರುಷಗಳವರೆಗೂ ಇದರ ಪ್ರಯೋಗದ ವ್ಯವಸ್ಥೆ ನಡೆದಂತೆ ಕಾಣಲಿಲ್ಲ. ನಾಟಕವಾಡುವುದು ಕೀಳದರ್ಜೆಯ ಜನರ ಕೆಲಸವೆಂಬ ಕಲ್ಪನೆಯೂ ಮತ್ತು ಈ ನಾಟಕ ಸಾಕಷ್ಟು ದೊಡ್ಡದಿದ್ದು ಒಂದೇ ರಾತ್ರಿಯಲ್ಲಿ ಆಡಲು ಸಾಧ್ಯವಿಲ್ಲದಿರುವುದೂ, ಇದಕ್ಕೆ ಕಾರಣ ವಾಗಿರಬಹುದು.

ಈ ನಾಟಕದ ಪ್ರಯೋಗ ಸನ್ ೧೯೦೫ರಲ್ಲಿ ಧಾರವಾಡದಲ್ಲಿ ಆಗಿದ ಸುಮಾರು ೫-೬ ವರುಷ ಮೊದಲು ಅಂದರೆ ಸನ್ ೧೮೯೯ರ ಸುಮಾರಿಗೆ, ಬಾದಾಮಿಯ ಶೀ ಬಸ ಸಂಗೀತಜ್ಞರು ಅಲ್ಲಿ ವಕೀಲರಾಗಿದ್ದ ಮುಗಳಿ ಶ್ರೀನಿವಾಸರಾಯರ (ಅಂದರೆ ಡಾ॥ ರಂ. ಶ್ರೀ. ಮುಗಳಿಯವರ ತಂದೆಯವರ) ಪ್ರೇರಣೆಯಿಂದ ಈ ನಾಟಕದ ಪ್ರಯೋಗವನ್ನು ಬಿಜಾಪುರ ಮತ್ತು ಬಾಗಲಕೋಟೆಗಳಲ್ಲಿ ಮಾಡಿದರು. ಸನ್ ೧೮೯೯ರ ಸುಮಾರಿಗೆ ತಾವು ಬಾಗಲಕೋಟೆಗೆ ಹೋದಾಗ ಈ ನಾಟಕದ ಪ್ರಯೋಗವನ್ನು ಈ ಸಂಘದವರು ಮಾಡಿದ್ದನ್ನು ತಾವು ನೋಡಿದುದಾಗಿಯೂ, ಇದರಿಂದಲೇ ಸ್ಫೂರ್ತಿ ಹೊಂದಿ ತಾವು ಧಾರವಾಡದಲ್ಲಿ ಭರತ ಕಲೋತ್ತೇಜಕ ಸಂಗೀತ ಸಮಾಜವನ್ನು ಸ್ಥಾಪಿಸಿದ್ದಾಗಿಯೂ, ಇದರ ಮೂಲಕ ಶಾಕುಂತಲ ನಾಟಕ ಆಡಿದ್ದಾಗಿಯೂ ಮಾಸ್ತರಮನಿಯವರು ಹೇಳುತ್ತಾರೆ.

ಸನ್ ೧೮೯೯ರಲ್ಲಿ ಬಾಗಲಕೋಟೆ, ಬಿಜಾಪುರಗಳಲ್ಲಿ ಈ ನಾಟಕದ ಪ್ರಯೋಗ ಬಾದಾಮಿ ಸಂಘದವರಿಂದ ನಡೆದ ಮೇಲೆ, ಸನ್ ೧೯೦೫ರ ಸುಮಾರಿಗೆ ಧಾರವಾಡದ ಭರತ ಕಲೋತ್ತೇಜಕ ಸಂಗೀತ ಸಮಾಜದವರು ಈ ನಾಟಕವನ್ನು ತಮ್ಮ ಪ್ರಥಮ ಪ್ರಯೋಗವಾಗಿ ಆಡಿದರು. ಮತ್ತು ಅಂದಿನ ರಂಗಭೂಮಿಯು ಸಿದ್ಧವಾದ ಮೇಲೆ, ಕಂಪನಿಯವರ ಕ್ಷೇತ್ರದಿಂದ ಕ್ಷಿಪ್ರವಾಗಿ ಮುಕ್ತವಾದ ಗಂಧರ್ವರಾಯರನ್ನು ಕರೆದು ನಾಟಕದ ರಂಗಭೂಮಿಯನ್ನು ತೋರಿಸಿದರು. ಗಂಧರ್ವ ರಾಯರೂ ಸ್ವತಃ ನಾಟಕಕರ್ತೃಗಳಾಗಿದ್ದು ಅವರು ಶೇಕ್ಸ್‌ಪಿಯರ ಮುಂತಾದವರ ಒಳ್ಳೆಯ ನಾಟಕ

1 ಅದೇ ಪು. ೧೦೩.

ವನ್ನು 'ರಾಘವೇಂದ್ರರಾವ ನಾಟಕ' ಎಂಬ ಹೆಸರಿನಲ್ಲಿ ಸನ್ ೧೮೮೫ ರಲ್ಲಿ ಕನ್ನಡಕ್ಕೆ ಅನುವಾದ ಮಾಡಿದವರಾಗಿದ್ದಾರೆ. ಈ ರಂಗತಾಲೀಮನ್ನು ಮೆಚ್ಚಿಕೊಂಡ ಗುಂಡೇರಾಯರು ಸ್ವರ್ಗೀಯ ಶೇಷಗಿರಿ ರಾಯರ ಅಭಿಮಾನಿಗಳಾಗಿದ್ದ ದೊಡ್ಡ ಶ್ರೀನಿವಾಸರಾವ ಮೊದಲಾದವರನ್ನು ಕರೆದುಕೊಂಡು ಬಂದು ರಂಗತಾಲೀಮನ್ನು ತೋರಿಸಿದರು. ಇವರೆಲ್ಲರ ಅನುಮತಿಯಿಂದ ಈ ನಾಟಕದ ಮೊದಲನೆಯ ನಾಲ್ಕು ಅಂಕುಗಳ ಪ್ರಯೋಗ ೧೯೦೫ನೆಯ ಇಸವಿ ಫೆಬ್ರುವರಿ ತಿಂಗಳಲ್ಲಿ ಧಾರವಾಡದ ವಿಕ್ಟೋರಿಯಾ ಥಿಯೇಟರಿನಲ್ಲಿ ನಡೆಯಿತು. ಈ ನಾಟಕದ ಪ್ರಥಮ ಪ್ರಯೋಗವನ್ನು ನೋಡಲು ಧಾರವಾಡದ ಅಂದಿನ ಪ್ರತಿಷ್ಠಿತ ವ್ಯಕ್ತಿಗಳಾಗಿದ್ದ ವೆಂಕಟ ರಂಗೋ ಕಟ್ಟಿಯವರು ಬಂದು ತಮ್ಮ ಮೆಚ್ಚುಗೆಯನ್ನು ಮುಕ್ತ ಕಂಠದಿಂದ ವ್ಯಕ್ತಪಡಿಸಿದರು. ಗುಂಡೇರಾಯರಂತೂ ತಾವು ಸ್ವತಃ ತಮ್ಮ ಸ್ವರ್ಗೀಯ ಅಣ್ಣಂದಿರನ್ನು ಕಂಡ ಹಾಗಾಯಿತು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಕಂಪನಿಯವರು ಈ ನಾಟಕದ ಮೊದಲ ನಾಲ್ಕು ಅಂಕುಗಳನ್ನು ಒಂದು ರಾತ್ರಿಯಲ್ಲಿಯೂ, ಮುಂದಿನ ಅಂಕುಗಳನ್ನು ಎರಡನೆಯ ದಿನದ ರಾತ್ರಿಯಲ್ಲಿಯೂ ಆಡುವ ಪರಿಪಾಠವನ್ನು ಇಟ್ಟುಕೊಂಡಿದ್ದರು. ಈ ನಾಟಕದ ಪರಿಣಾಮ ಸುಶಿಕ್ಷಿತರ ಮೇಲೆ ಬಹುವಾಗಿ ಆದುದರಿಂದ ಅನೇಕ ಸುಶಿಕ್ಷಿತರು ಈ ಕಂಪನಿಗೆ ಬಂದು ಸೇರಿಕೊಂಡರು. ಇದರಲ್ಲಿ ಧಾರವಾಡದ ರೇಲ್ವೆ ಹೆಡ್ ಆಫೀಸಿನಲ್ಲಿ ಕೆಲಸ ಮಾಡುವ ಜನರೇ ಹೆಚ್ಚಾಗಿದ್ದರು. ಸನ್ ೧೯೦೯ ರಲ್ಲಿ ರೇಲ್ವೆ ಹೆಡ್ ಆಫೀಸು ಧಾರವಾಡದಿಂದ ಮದ್ರಾಸಕ್ಕೆ ಹೋದದ್ದರ ಮೂಲಕ ಈ ನಾಟ್ಯವಿಲಾಸಿ ಸಂಘ ವಿಸ್ಫಳಿತವಾಯಿತು ಆದರೂ, ಧೃತಿಗೆಡದೆ ಧಾರವಾಡದ ಶುಕ್ರವಾರ ಪೇಟೆಯ ಹಲವಾರು ಯುವಕರು ಪುನಃ ಕೂಡಿ ಈ ನಾಟಕದ ಪ್ರಯೋಗ ವನ್ನು ಅಲ್ಲಲ್ಲಿ ಮಾಡಿದರು.

ಹೀಗಾಗಿ, ಸನ್ ೧೯೦೫ ರಿಂದ ಸನ್ ೧೯೧೩ರ ವರೆಗಿನ ಎಂಟು ವರ್ಷಗಳಲ್ಲಿ ಈ ಸಂಘ ದವರು ಈ ನಾಟಕವನ್ನು ಹತ್ತಿಪ್ಪತ್ತು ಸಲ ಧಾರವಾಡ, ಗದಗು ಮೊದಲಾದ ಸ್ಥಳಗಳಲ್ಲಿ ಆಡಿ ತೋರಿಸಿದರು. ಇಂದಂತೂ, ಶೇಷಗಿರಿರಾಯರ ಶಾಕುಂತಲ ನಾಟಕದ ನೆನಹೇ ಉತ್ತರ ಕರ್ನಾಟಕದ ಜನತೆಯ ಮನಸ್ಸಿನಿಂದ ಹಾರಿ ಹೋಗಿದೆ.

ಚುರಮುರಿ ಶಾಕುಂತಲದ ಅನುವಾದದ ವೈಶಿಷ್ಟ್ಯಗಳು :

ಕವಿಕುಲಗುರು ಕಾಳಿದಾಸನ ಶಾಕುಂತಲವನ್ನು ಕನ್ನಡದಲ್ಲಿ ಅನೇಕರು ಅನುವಾದ ಮಾಡಿದ್ದಾರೆ. ಈ ಅನುವಾದಗಳಲ್ಲಿ ಚುರಮುರಿಯವರು ಸನ್ ೧೮೭೦ರಲ್ಲಿ ಮಾಡಿದ ಅನುವಾದವೇ ಮೊದಲನೆಯ ದೆಂದು ಹೇಳಬೇಕು. ಅನಂತರ ಅಭಿನವ ಕಾಳಿದಾಸ ಕೈಲಾಸವಾಸಿ ಬಸವಪ್ಪ ಶಾಸ್ತ್ರಿಗಳು "ಪಳಗನ್ನಡ ನುಡಿದಾರಿಯನೊಳಗೊಂಡತಿಪಂಡಿತಪ್ರಬುದ್ಧಪ್ರಿಯ" ಎಂಬ ರೀತಿಯಲ್ಲಿ ಭಾಷಾಂತ ರಿಸಿದರು. ನಂತರ ಮೈಸೂರು ಮಹಾರಾಜಾ ಕಾಲೇಜಿನ ಪ್ರೊಫೆಸರರಾಗಿದ್ದ ಟಿ. ಕೃಷ್ಣಪ್ಪನವರು ಸಂಪೂರ್ಣ ಹೊಸಗನ್ನಡ ಗದ್ಯದಲ್ಲಿ ಅನುವಾದ ಮಾಡಿದರು. ಅನಂತರ, ಇತ್ತೀಚೆಗೆ, ಎಂ. ಎಸ್. ಶ್ರೀನಾಪುರ ಅವರೂ ಗದ್ಯಪದ್ಯಮಯವಾಗಿ ಈ ನಾಟಕದ ಅನುವಾದವನ್ನು ಮಾಡಿದ್ದಾರೆ. ಪ್ರೊಫೆಸರ ಎಸ್. ವಿ. ಪರಮೇಶ್ವರ ಭಟ್ಟರವರು ಅಖಂಡ ಕಾಳಿದಾಸ ಮಹಾಸಂಪುಟವನ್ನೇ ಸುಂದರವಾಗಿಯೂ, ಪಾಂಡಿತ್ಯಪೂರ್ಣವಾಗಿಯೂ ಪ್ರಕಟಿಸಿದ್ದಾರೆ.

ಆದರೆ, ಈ ಎಲ್ಲ ಅನುವಾದಗಳಿಗೂ ಒಂದೊಂದು ವೈಶಿಷ್ಟ್ಯವಿದೆ. ಬಸವಪ್ಪ ಶಾಸ್ತ್ರಿಗಳು ಪ್ರೌಢವಾಗಿ ಭಾಷಾಂತರಿಸಿದರೆ, ಶೇಷಗಿರಿರಾಯರು 'ಮಾರ್ಗ'ದೊಡನೆ 'ದೇಸಿ'ಯನ್ನು ಸೇರಿಸಿ

ಕೊಂಡರು. ನಿಜ; ಹಲ ಕೆಲವು ಸಲ ಇವರ ಭಾಷಾಂತರ ಗ್ರಾಮ್ಯವೆನ್ನುವ ಮಟ್ಟಿಗೆ ದೇಸಿಯನ್ನು ಬಳಸಿಕೊಂಡಿದೆ. ಉದಾಹರಣೆಗೆ, ಸೂತ್ರಧಾರನ ಈ ಪದ್ಯವನ್ನು ನೋಡಬಹುದು :

ಕಾಂತೆ ಕೇಳೊರೆಯಂತೆ ಗಂತಿನ ಗಂತದಂತವನಾಂತವರ್
ಕುಂತು ಕೇಳುಂತಲಂತರಂಗದಿ ಸಂತಸಂ ತಳೆದಿಂತು.... (ಪು. ೨)

–ಇಲ್ಲಿ 'ಕುಂತು' ಎಂಬುದು ಗ್ರಾಮ್ಯಪ್ರಯೋಗ. ಹೀಗೆಯೇ, ಇನ್ನೂ ಹತ್ತಾರು ದೃಷ್ಟಾಂತಗಳನ್ನು ಕೊಡಬಹುದು. ಆದರೆ, ಇತರರಲ್ಲಿಲ್ಲದ ಒಂದು ಗುಣ ಶೇಷಗಿರಿರಾಯರ ಅನುವಾದದಲ್ಲಿದೆ. ಉಳಿದವರು ಶಾಕುಂತಲವನ್ನು ಅನುವಾದ ಮಾಡಿದರು; ಶೇಷಗಿರಿರಾಯರು ಅದನ್ನು ಆತ್ಮಸಾತ್ ಮಾಡಿಕೊಂಡು, ಕಾಳಿದಾಸನೂ ಕೂಡ ಅಲ್ಲಲ್ಲಿ ವಿರಲವಾಗಿ ಬಿಟ್ಟ ಸ್ಥಳಗಳಲ್ಲಿ ಹುದುವನ್ನು ತುಂಬಿದರು. ಕಾಳಿದಾಸನ ಕೂಡ 'ಖೋ' ಆಟವಾಡಿದರು. ಕಾಳಿದಾಸನ ಮೂಲ ಶ್ರುತಿಯನ್ನೇ ಹಿಡಿದುಕೊಂಡು, ಎಲ್ಲಿ ಕಾಳಿದಾಸ ಇನ್ನಷ್ಟು ಹೆಚ್ಚು ಹೇಳಬೇಕಾಗಿತ್ತೆಂದು ತಮಗೆನಿಸಿತ್ತೋ, ಅಲ್ಲಲ್ಲಿ ತಾವು ಹಿಗ್ಗಿಸಿ, ಬೇಡಾದಲ್ಲಿ ಮೊಟಕುಗೊಳಿಸಿ, ಈ ಚಿತ್ರದ ಬಣ್ಣ ಇನ್ನಷ್ಟೂ ರಂಗಾಗಿ ಕಾಣುವ ಹಾಗೆ ಮಾಡಿದರು. ಈ ಬೇಕು – ನೆಳಲಿನಾಟದಿಂದ ಶಕುಂತಲೆಯ ಚಿತ್ರ ಇನ್ನಷ್ಟೂ ಎದ್ದು ಕಾಣುವಂತಾಯಿತು. ಕಾಲಿದಾಸನನ್ನು ಹೆಚ್ಚು ಪ್ರಕಾಶಗೊಳಿಸಿದರೆಂದು ಹೇಳುವುದು ಔದ್ಧತ್ಯದ ಮಾತಾದರೂ, ಆ ದಿಶೆಯಲ್ಲಿ ಸಫಲವಾದ ಪ್ರಯತ್ನ ಮಾಡಿದರು. ಮುದವೀಡುರವರು ಹೇಳಿದಂತೆ "ಕಾಲಿದಾಸನ ಸೂತ್ರರೂಪವಾದ ಒಂದೆರಡು ಮಾತುಗಳನ್ನು ವಿಸ್ತಾರಗೊಳಿಸಿ ವಿಶದಪಡಿಸುವಾಗ ಕನ್ನಡ ಕವಿಕುಲದ ಕಲಾಭಿಸಂಧಾನಕ್ಕೆ ಒಪ್ಪುವ ತೆರನಾಗಿ ಭಾಷ್ಯಕಾರನ ಜಾಣ್ಮೆಯನ್ನು ಅಭಿವ್ಯಕ್ತಗೊಳಿಸಿದ್ದಾರೆ."

ಉದಾಹರಣೆಗೆ, ೨ನೆಯ ಅಂಕಿನಲ್ಲಿ ದುಷ್ಯಂತನು ಶಕುಂತಲೆಯ ಲಾವಣ್ಯವನ್ನು ಹೀಗೆ ವರ್ಣಿಸಿದ್ದಾನೆ :

ಚಿತ್ರೇ ನಿವೇಶ್ಯ ಪರಿಕಲ್ಪಿತ ಸತ್ವಯೋಗಾ
ರೂಪೋಚ್ಚಯೇನ ಮನಸಾವಿಧಿನಾ ಕೃತಾನು
ಸ್ತ್ರೀರತ್ನಸೃಷ್ಟಿರಪರಾ ಪ್ರತಿಭಾತಿ ಸಾಮೇ
ಧಾತುರ್ವಿಭುತ್ವಮನುಚಿಂತ್ಯ ವಪುಶ್ಚ ತಸ್ಯಾಃ ॥

ಇದರ ಭಾಷಾಂತರವನ್ನು ಬಸವಪ್ಪಶಾಸ್ತ್ರಿಗಳು ಹೀಗೆ ಮಾಡಿದರು :

ಪ್ರಾಣಂಬೊಯ್ದನೊ ಚಿತ್ರಿಸುತ್ತಮವಳಂ ಸೌಂದರ್ಯಸಾರಂಗಳಿಂ
ವಾಣೀವಲ್ಲಭನೋವೊ ನಿರ್ಮಿಸಿದನೊ ಮೇಣ್‌ಚಿತ್ತದಿಂ ಗೆಯ್ದನೊ
ಜಾಣಂ ಬ್ರಹ್ಮನ ಮತ್ತುಮಾಕೆಯೊಡಲಂ ನೋಡಲ್ಕದೇನೆಂದಪೆಂ
ಕ್ಷೋಣೀಭಾಗದೆ ಬೇರೆ ತೋರ್ಕುಮೆನಗಾಸ್ತ್ರೀರತ್ನಸೃಷ್ಟಿಕ್ರಮಂ ॥

ಇದನ್ನು ಶೇಷಗಿರಿರಾಯರು ಅನುವಾದಿಸಿದ ರೀತಿ ಹೀಗೆ :

ಬಣ್ಣಿಸಲ್ಹ್ಯಾಂಗಿನ್ನು ನುಡಿಯಲಿ ಲಾ
ವಣ್ಯದ ಖಣಿಯನ್ನು ॥ ಪ ॥

ಕಣ್ಣೊಳುಂ ಕಟ್ಟಿದಾ ಹೆಣ್ಣಿನ ರೂಪವು
ಎನ್ನೊಳನಂಗನ ಸನ್ನಿಧಿಯಂತಿರೆ ॥ ಅ ಪ ॥

ಮೊದಲು ಮನಸುಗೊಟ್ಟು ವಿಧಿಯು ಚಿತ್ರ
ಮುದದಿಂದೆ ಬರೆದಿಟ್ಟು
ಅದರ ಮೈಯೊಳು ಜೀವದ ಕಳೆಯನು ತುಂ
ಬಿದ ಮ್ಯಾಲಿಳೆಯೊಳಗುದಭವಿಸಿದಳೇನೋ ॥ ೧ ॥

ಕೈ ನಡಗುವದೆಂದು ವಿಧಾತನು
ಧ್ಯಾನದೊಳಗೆ ತಂದು
ಮೌನದಿಂದತಿಶಯ ಮೋಹದ ರೂಪವ
ಧೇನಿಸಿ ಪಡೆದಿಹ ಮಾನಸಪುತ್ರಿಯೊ ॥ ೨ ॥

ಎಂದಿಗೆ ಬರಬೇಕೈ ಬ್ರಹ್ಮನಿಗಿಂಥ
ಸುಂದರೆ ಕೃತಿ ಸಾಕೈ
ಇಂದಿರಾರೂಪವ ಚೆಂದದಿ ಕಲಿತವ
ಳಂದದೊಳಿಳಿಸಿಹನಿಂದೀವರಾಕ್ಷಿಯ ॥ ೩ ॥ [೧]

ಎರಡೂ ಒಂದೊಂದು ರೀತಿಯಿಂದ ಸುಂದರ; ಒಂದಕ್ಕೆ ಸಾಗರದ ಗಾಂಭೀರ್ಯ; ಇನ್ನೊಂದಕ್ಕೆ ಆಕಾಶದ ವರ್ಣವೈವಿಧ್ಯ.

ಈ ಮೊದಲೇ ವಿವರಿಸಿದ 'ಪದವ ರಚಿಸುತಿಹಳು ಚಂದಿರವದನೆ ಮನದೊಳಂ' ಎಂಬ ಪದ್ಯ ಕಾಲಿದಾಸನ ಈ ಮೂಲ ಪದ್ಯದ ವಿಸ್ತಾರವಾಗಿದೆ :

ಉನ್ನಮಿತೈಕಭ್ರೂಲತಮಾನನಮಸ್ಯಾಃ ಪದಾನಿ ರಚಯಂತ್ಯಾಃ
ಕಂಟಕಿತೇನ ಪ್ರಥಯತಿ ಮಯ್ಯನುರಾಗಂ ಕಪೋಲೇನ ॥

ಅಷ್ಟೇ ಅಲ್ಲ, ಕಾಳಿದಾಸನು ಮೂಲದಲ್ಲಿ ಬರಿಯ ಗದ್ಯದಲ್ಲಿ ಹೇಳಿದ ಹಲವು ಮಾತುಗಳನ್ನೂ ಶ್ರೀಯುತರು ಪದ್ಯಕ್ಕಿಳಿಸಿದ್ದಾರೆ. ಇಂಥ ಪದ್ಯಗಳಲ್ಲಿ ಸುಂದರವಾದುದೆಂದರೆ 'ನೀರು ಚಿಮ್ಮಡಿಸುವಾ ಬನ್ನಿರೆ' ಎಂದು ಶಕುಂತಲೆ ಹೇಳುತ್ತ ಬರುವ ಹಾಡು :

ನೀರು ಚಿಮ್ಮಡಿಸುವಾ ಬನ್ನಿರೆ

(ಧಾಟಿ : ಜಾಕೆ ತಡಾ ಸುಂದರಾಂಗಾ– ಎಂಬಂತೆ)

ನೀರು ಚಿಮ್ಮಡಿಸುವಾ ಬನ್ನಿರೆ ಬನದೊಳು ॥ ಪ ॥

ಸಾರಸಸಖನುರೆ ಮೀರಿದ ಬಿಸಿಲೊಳು ॥ ಅ ಪ ॥

ಜುಳುಜುಳು ಹರಿಯುವ ಝರಿಗಳ ನಿರ್ಮಲ
ಜಲಗಳು ಪೊಳೆದವು ಕಲಶವ ತುಂಬಿ ಕೋ
ಮಲಕಿಸಲಯಗಳು ನಳನಳಿಸುವ ಪೋಲು ॥ ೧ ॥

---

೧ ಅದೇ ಪು. ೨೦.

ಶಾವಂತಿಗೆ ಮೊಲ್ಲೆ ಸಾಲಿಡಲೆಳೆಯಳೆ
ಹೂವಿನ ಗಿಡಗಳು ಹಾದಿಯು ಕೆಲದೊಳು
ತೀವಿರೆ ಮೊಗ್ಗೆಗಳು ತೆರೆದರಳುವ ಓಲು ॥ ೨ ॥

ತಳಿಹಾಕಿರೆ ಬನದೊಳು ಬಿಳಿಮಳಲಿನ
ಥಳಥಳಿಸುವ ಪಥದೊಳು ಬಲು ದಣಿಯುತ
ನೆಳಲೊಳತಿಥಿಗಳು ಬರಲು ಸುಖಿಪ ಒಲು ॥ ೩ ॥ [೧]

ಮೃಚ್ಛಕಟಿಕ ನಾಟಕ :

ಶ್ರೀಯುತರ ಕೃತಿಗಳಲ್ಲಿ ಶಾಕುಂತಲ ಮಾತ್ರ ಇಂದು ಉಪಲಬ್ಧವಿದೆ. ಆದರೆ, ಶ್ರೀಯುತರು ಕಾಳಿದಾಸನ ಶಾಕುಂತಲದ ಹಾಗೆ, ಶೂದ್ರಕ ಕವಿ ವಿರಚಿತ ಮೃಚ್ಛಕಟಿಕವನ್ನೂ ಗದ್ಯರೂಪವಾಗಿ ಕನ್ನಡಕ್ಕೆ ಅನುವಾದ ಮಾಡಿದ್ದರೆಂದು ಮುದವೀಡು ಕೃಷ್ಣರಾಯರು ಹೇಳುತ್ತಾರೆ : "ಬೆಳಗಾವಿಯ ಬೆಳಗಾವ ಸಮಾಚಾರ ಮುದ್ರಣಾಲಯದಲ್ಲಿ ಇದು ಸಂಪೂರ್ಣವಾಗಿ ಮುದ್ರಿತವಾಗಿದೆ. ೧೯೨೯ ನೇ ಇಸ್ವಿಯಲ್ಲಿ ಬೆಳಗಾವಿಯಲ್ಲಾಗ ಕರ್ನಾಟಕ ಸಾಹಿತ್ಯ ಸಮ್ಮೇಲನದ ಕಾಲಕ್ಕಾದ ಕನ್ನಡ ಗ್ರಂಥಗಳ ಪ್ರದರ್ಶನದಲ್ಲಿ ಕೋರೀ ಕಾಗದದ ವೇಷ್ಟನೆಯಿಂದ ಕೂಡಿಸಿ ಹೊಲಿದ ಇದರದೊಂದು ಸಮಗ್ರ ಪ್ರತಿಯು ನೋಡಲಿಕ್ಕೆ ದೊರೆಯಿತು. ಮುಖಪೃಷ್ಠದ ಮುದ್ರಣವಾಗುವ ಮೊದಲೇ ಶೇಷಗಿರಿ ರಾಯರು ಆಕಸ್ಮಿಕವಾಗಿ ಸ್ವರ್ಗಸ್ಥರಾದ ಮೂಲಕ ಅದು ಅಷ್ಟಕ್ಕೇ ಉಳಿದಿರಬೇಕೆಂದು ತೋರುತ್ತದೆ." [೨]

ಸುಂದರಾ ನಾಟಕ :

ಇದೂ ಈಗ ದೊರಕುತ್ತಿಲ್ಲ. ಆದರೆ, ಇದನ್ನು ತಾವು ನೋಡಿದುದಾಗಿ ಕೃಷ್ಣರಾಯರು ಹೇಳುತ್ತಾರೆ :

"ಇವರು ಬರೆದ ಇನ್ನೊಂದು ಚಿಕ್ಕ ಪುಸ್ತಕವನ್ನು ನಾನು ಓದಿದ್ದೂ ನನಗೆ ನೆನಪಿನಲ್ಲಿದೆ. ಧಾರವಾಡದ ಆಗಿನ ಕಾಲದ ಸಾಮಾಜಿಕ ಪರಿಸ್ಥಿತಿಯನ್ನನುಲಕ್ಷಿಸಿ ಬರೆದ 'ಸುಂದರಾ ನಾಟಕ' ವೆಂಬುದೊಂದು ಒಂದೇ ಅಂಕಿನ ನಾಟಕವು. ಇವರ ಪರಮ ಮಿತ್ರರಾದ ಸ್ವ. ಕೃಷ್ಣರಾವ ಪೀತಾಂಬರ ರಾವ ಜೋಶಿಯವರ ಹೆಸರಿನಿಂದ ಮುದ್ರಿತವಾಗಿ ಪ್ರಸಿದ್ಧವಾಗಿತ್ತು. ಈ ನಾಟಕವೂ ಗದ್ಯ ಪದ್ಯಾತ್ಮಕವಾಗಿತ್ತು." [೩]

ವರಕವಿ ಡಾ॥ ದ. ರಾ. ಬೇಂದ್ರೆಯವರೂ ದಿವಂಗತ ವೆಂಕಟ ರಂಗೋ ಕಟ್ಟಿಯವರ ಬಗ್ಗೆ ಹೇಳುವಾಗ ಹೀಗೆ ಹೇಳುತ್ತಾರೆ :

"(ಆರು ಬೆರಳಿನ ಕುರುಹು) ಇದೊಂದು ಸಾಮಾಜಿಕ ನಾಟಕ. ಬಳಕೆ ಮಾತಿನ ಶೈಲಿಯನ್ನು 'ಸುಂದರಾ,' 'ರಾಘವೇಂದ್ರರಾವ' ನಾಟಕಗಳಲ್ಲಿಯಂತೆ ಇದರಲ್ಲಿ ಒಳ್ಳೆಯ ಕೆಚ್ಚಿನಿಂದ ಉಪಯೋಗಿಸಲಾಗಿದೆ."

---

೧ ಅದೇ ಪು. ೧೧.
೨ ಅದೇ ಪು. ೮.
೩ ಅದೇ ಪು. ೮.

ಮುದವೀಡುರವರಂತೂ ಈ ನಾಟಕದಲ್ಲಿಯ ಪಲವು ಪದ್ಯಗಳನ್ನು ಕಂಠಪಾಠವಾಗಿ ಹೇಳು ತ್ತಿದ್ದರು. ಅವುಗಳಲ್ಲಿ ಈ ಕೆಳಗಿನವುಗಳು ನಾಲ್ಕು. ಇವುಗಳ ಮೇಲಿಂದ ಈ ನಾಟಕದ ಶೋಧ ವಾದರೂ ಆಗಬಹುದು. ಮುದವೀಡುರವರು ಹೇಳುತ್ತಿದ್ದ ಪದ್ಯಗಳು ಇವು :

೧. ಇನ್ನೇನು ಗತಿಯೆ ಬಾಲೆ ಗಾಯನಲೋಲೆ ॥ ಪ ॥

ಕನ್ನೆಗರತಿಯರು ಹೊನ್ನು ಬೇಡದಲೆ ಪ್ರ
ಸನ್ನರಾಗುತೆ ವಿಟ–ರನ್ನು ಮೋಹಿಸಿದ ಮ್ಯಾಲಿನ್ನೇನು ॥ ಅ ಪ ॥

೨. ಸಖಿ ಬಾಬಾ ಮಾರನ ಕಿರಿಬೆರಳರಗಿಳಿಯೇ
ಮದನ ಮನೋಹರಳೇ ॥ ಪ ॥

೩. ಸಾಕಮ್ಮಾ ಶಹರದ ಸೊಗಸು ಶೃಂಗಾರಾ
ಬೇಕಮ್ಮಾ ನಮಗ ಹಳ್ಳ್ಯಾರ ವಿಚಾರಾ

೪. ಮೇಘಾವಳಿಯನ್ನಾಗಸದೊಳು ಕಂ
ಡಾಗೇ ನವಿಲ್ ನಲಿನಲಿದು ಕೂಗುವದು ॥

ಜೈಮಿನಿ ಭಾರತದ ಮರಾಠಿ ಅನುವಾದ (೧೮೯೬) :

ಶೇಷಗಿರಿರಾಯರಿಗೆ ಕವಿಚೂತವನಚೈತ್ರ ಲಕ್ಷ್ಮೀಶನ ಬಗೆಗೆ ಆದರವಿದ್ದಿತು. ಆದ್ದರಿಂದ ಲಕ್ಷ್ಮೀಶನ ಭಾರತ ಕಾವ್ಯವನ್ನು ಶ್ರೀಯುತರು ಮರಾಠಿ ಭಾಷೆಗೆ ಪರಿವರ್ತಿಸಿದ್ದಾರೆ. ಇದು ಅವರ ಮರಣಾನಂತರ ಪುಸ್ತಕ ರೂಪದಲ್ಲಿ ಪ್ರಕಟವಾದಂತೆ ಕಾಣುತ್ತದೆ. ಅನಂತರ, ಇದೇ ಜೈಮಿನಿ ಭಾರತವನ್ನೇ 'ಪ್ರಭಾತ' ಕವಿತಾ ಮಾಸಪತ್ರಿಕೆಯ ಸಂಪಾದಕರಾಗಿದ್ದ ಯಶವಂತರಾವ ಜಠಾರ ಅವರು ಸನ್ ೧೯೧೯ ರಲ್ಲಿ ವಾರ್ಧಿಕ ಷಟ್ಪದಿಯ ರೂಪದಲ್ಲಿಯೇ ಮರಾಠಿ ಭಾಷೆಯಲ್ಲಿ ಅನುವಾದ ಮಾಡಿದರು.

ಶೇಷಗಿರಿರಾಯರ ಮರಾಠಿ ಅನುವಾದ ೧೮೯೬ರಲ್ಲಿ ಗ್ರಂಥರೂಪವಾಗಿ ಪ್ರಕಟವಾಗುವ ಮೊದಲು ಅಂದಿನ "ಮರಾಠೀ ಸಾಹಿತ್ಯದ ಶ್ರೇಷ್ಠ ಮಾಸಪತ್ರಿಕೆಯೆಂದು ಹೆಸರಾಗಿರುವ 'ವಿವಿಧ ಜ್ಞಾನ ವಿಸ್ತಾರ'ವೆಂಬ ಮುಂಬಯಿಯ ಮಾಸಪತ್ರದಲ್ಲಿ ಪ್ರಸಿದ್ಧವಾಯಿತು." ಆದರೆ ಈ ಮರಾಠಿ ಅನುವಾದ ಉಪಲಬ್ಧವಾಗಲಿಲ್ಲ.

× × × ×

"ಶೇಷಗಿರಿರಾಯರದು ಬಹು ಸಾಹಸೀ ಜೀವನ. ಇವರ ಮೂಲ ಮನೆತನ ರಾಮದುರ್ಗದ್ದು. ಅಲ್ಲಿ ಈ ಮನೆತನಕ್ಕೆ ಮುದಕವಿಯೆಂದು ಕರೆಯುತ್ತಿದ್ದರು. ಧಾರವಾಡ ಬೆಳಗಾವಿ ಜಿಲ್ಲೆಗಳಲ್ಲಿ ಒಳ್ಳೇ ನಿಸ್ಪೃಹ ಮಾಮಲೇದಾರರೆಂದು ಪ್ರಸಿದ್ಧರಾಗಿದ್ದ ಸ್ವ. ಮುದಕವೀ ಶೇಷಗಿರಿರಾಯರೆಂಬು ವರು ಇದೇ ಮನೆತನಕ್ಕೆ ಸೇರಿದವರು. ರಾಮದುರ್ಗವನ್ನು ಬಿಟ್ಟು ಧಾರವಾಡಕ್ಕೆ ಈ ಮನೆತನ ದವರು ಎಂದು ಯಾಕೆ ಬಂದರೆಂಬುವದು ತಿಳಿಯುವದಿಲ್ಲ. ಧಾರವಾಡಕ್ಕೆ ಬಂದ ನಂತರ ಜುರಮರಿ ಯವರೆಂಬ ದೊಡ್ಡ ಲಿಂಗಾಯತ ವ್ಯಾಪಾರಸ್ಥರಲ್ಲಿ ಇವರ ಮೂಲ ಪುರುಷರು ಗುಮಾಸ್ತರಾಗಿ ನಿಂತು ಬಹುದಿವಸ ಅವರಲ್ಲಿ ಕೆಲಸ ಮಾಡಿದ್ದರಿಂದ ಇವರಿಗೂ ಜುರಮರಿಯವರೆಂದೇ ಅಡ್ಡ ಹೆಸರು ಬಿತ್ತು. ಧಾರವಾಡದ ಪೂರ್ವಕ್ಕೆ ಎರಡು ಹರದಾರಿ ದೂರ ಇರುವ ಗೋಪನಕೊಪ್ಪ

ಎಂಬ ಹಳ್ಳಿಯ ವತನದಾರ ಗೌಡಕೀ ಹಕ್ಕು ಈ ಮನೆತನಕ್ಕೆ ದೊರೆತಿತ್ತು. ಶೇಷಗಿರಿರಾಯರ ತಂದೆಯವರಾದ ರಾಮಚಂದ್ರರಾಯರು ಪೋಲೀಸ ಖಾತೆಯಲ್ಲಿ ಕೆಲಸಕ್ಕೆ ಸೇರಿದ್ದರು. ಸ್ವತಃ ಬಂದು ಗೌಡಕೀ ಮಾಡಬೇಕೆಂದು ವರಿಷ್ಠಾಧಿಕಾರಿಗಳು ಹೇಳಿದ್ದರಿಂದ ಅದಕ್ಕೊಪ್ಪಿಕೊಳ್ಳದೆ ಆ ಹಕ್ಕನ್ನೇ ಬಿಟ್ಟುಕೊಟ್ಟರು. ಆಗಿನ ಕಲಾದಗೀ ಜಿಲ್ಲೆ (ಈಗಿನ ವಿಜಾಪುರ ಜಿಲ್ಲೆ)ಯ ಬಾಗಲಕೋಟೆಯಲ್ಲಿ ಫೌಜದಾರರಾಗಿದ್ದಾಗ ಪೋಲೀಸ ಸುಪರಿಂಟೆಂಡೆಂಟರಿಗೂ ಇವರಿಗೂ ಯಾವದೋ ಸಂದರ್ಭದಲ್ಲಿ ವಾಗ್ವಾದವಾಗಲು ಇವರು ಸುಪರಿಂಟೆಂಡೆಂಟರನ್ನು ಹೊಡೆದೇ ಬಿಟ್ಟರು. ಈ ಬಗ್ಗೆ ಪ್ರಕರಣ ನಡೆದು ರಾಮಚಂದ್ರರಾಯರಿಗೆ ಶಿಕ್ಷೆಯಾಯಿತು. ಆಗಿನ ನಿಯಮಗಳ ಪ್ರಕಾರ ಪ್ರತಿಷ್ಠಿತ ಮನೆತನದವರಾದ ಇವರನ್ನು ಕಲಾದಗಿಯ ಸಿವಿಲ್ ಜೇಲಿನಲ್ಲಿಟ್ಟರು. ರಾಮಚಂದ್ರರಾಯರ ಅಣ್ಣಂದಿರಾದ ಕೃಷ್ಣರಾಯರು ಆಗಿನ ಪರಸಗಡ ತಾಲೂಕ ಸವದತ್ತಿಯಲ್ಲಿ ವಕೀಲರಾಗಿದ್ದರು. ಸಿವಿಲ್ ಜೇಲಿನಲ್ಲಿದ್ದಾಗ ರಾಮಚಂದ್ರರಾಯರ ವೆಚ್ಚವನ್ನೆಲ್ಲ ಅವರೇ ಸಾಗಿಸುತ್ತಿದ್ದರು. ರಾಮಚಂದ್ರರಾಯರು ಜೇಲಿನೊಳಗಿನ ತಮ್ಮ ಸಂಗಡಿಗರಿಗೆಲ್ಲ ತಮ್ಮ ವೆಚ್ಚದಿಂದಲೇ ಪ್ರತಿನಿತ್ಯ ಮಿಷ್ಟಾನ್ನ ಭೋಜನ ಮಾಡಿಸಿ ಭಾಗವತ ಪುರಾಣ ಹೇಳುತ್ತಿದ್ದರು. ಕೆಲವು ದಿನಗಳ ತರುವಾಯ ಹಾಯ್‌ಕೋರ್ಟಿನ ಅಪ್ಪಣೆಯ ಮೇರೆಗೆ ಬಿಡುಗಡೆ ಹೊಂದಿ ಬಂದು ರಾಮಚಂದ್ರರಾಯರು ತಮ್ಮ ಅಣ್ಣಂದಿರ ಮನೆಯಲ್ಲಿಯೇ ಸವದತ್ತಿಯಲ್ಲಿ ಇರಹತ್ತಿದರು. ಭಾಗವತ ಪುರಾಣ ಹೇಳಲು ಸಮರ್ಥರಾದ ಇವರು ಒಳ್ಳೇ ರಸಿಕರೂ ಕವಿಗಳೂ ಆಗಿದ್ದರು. ನವರಾತ್ರಿಯ ಪೂಜಾ ಸಮಾರಂಭದಲ್ಲಿ ಪ್ರತಿವರ್ಷ ಪ್ರತಿದಿವಸ ಬೇರೆ ಬೇರೆ ಆರತೀ ಪದಗಳನ್ನು ಆಗಿಂದಾಗ ಕಟ್ಟಿ ಹಾಡುತ್ತಿದ್ದರೆಂದು ಹೇಳುತ್ತಾರೆ.''೧

"ರಾಮಚಂದ್ರರಾಯರ ಮಕ್ಕಳಾದ ಶೇಷಗಿರಿರಾಯರಲ್ಲಿ ಹಿರಿಯರ ನ್ಯಾಯನಿಷ್ಠುರ ನಿಸ್ಪೃಹ ಸ್ವಭಾವವೂ, ಸಾಹಸ ಪ್ರವೃತ್ತಿಯೂ, ಕವಿತ್ವಸ್ಫೂರ್ತಿಯೂ ಆನುವಂಶಿಕವಾಗಿಯೇ ಇಳಿದು ಬಂದಿದ್ದವೆಂದು ಹೇಳಬಹುದು. ಚಿಕ್ಕಂದಿನ ವಿದ್ಯಾಭ್ಯಾಸವು ತಕ್ಕಮಟ್ಟಿಗೆ ಆದ ಕೂಡಲೆ ಇವರು ನೆಟ್ಟಗೆ ಪುಣೆಗೆ ಹೋಗಿ ಅಲ್ಲಿಯ ಎಂಜನಿಯರಿಂಗ ಕಾಲೇಜಿನಲ್ಲಿ ಶಿಕ್ಷಣ ಹೊಂದಿ ಪಬ್ಲಿಕ್‌ವರ್ಕ್ಸ್ ಡಿಪಾರ್ಟಮೆಂಟಿನಲ್ಲಿ ಕೆಲಸಕ್ಕೆ ಸೇರಿದರು. ಮುಂಬಯಿಯಲ್ಲಿ ಸಮುದ್ರವನ್ನು ಹುಗಿದು ರೇವು ಕಟ್ಟುವ ಕೆಲಸ ನಡೆದಾಗ್ಗೆ ಇವರು ಅಲ್ಲಿ ಓವರ್‌ಸೀಯರರಾಗಿ ಕೆಲಸ ಮಾಡುತ್ತಿದ್ದರು. ಮುಂಬಯಿಯಲ್ಲಿದ್ದಾಗಲೇ ಶಾಕುಂತಲದ ಭಾಷಾಂತರವನ್ನು ಮುಗಿಸಿ ಅದನ್ನು ಅಲ್ಲಿಯೇ ಎಜುಕೇಶನ್ ಸೊಸಾಯಿಟಿ ಪ್ರೆಸ್ಸಿನಲ್ಲಿ ಮುದ್ರಿಸಿ ಸನ್ ೧೮೭೦ರಲ್ಲಿ ಪ್ರಕಟಿಸಿದರು.'' ೨

ಶೇಷಗಿರಿರಾಯರ ಹೆಂಡತಿಯ ಹೆಸರು ಭೀಮಾಬಾಯಿ. ಈ ದಂಪತಿಗಳಿಗೆ ಗಂಡು ಸಂತಾನವಾಗಲಿಲ್ಲ. ಇಬ್ಬರು ಹೆಣ್ಣು ಮಕ್ಕಳಿಗೆ ಮಾತ್ರ ಜನ್ಮಕೊಟ್ಟು ಭೀಮಾಬಾಯಿಯವರು ಮುಂಬಯಿಯಲ್ಲಿದ್ದಾಗಲೇ ತೀರಿಕೊಂಡರು. ಅನಂತರ ಶೇಷಗಿರಿರಾಯರಿಗೆ ಸಿಂಧಕ್ಕೆ ವರ್ಗವಾಯಿತು. ಆದುದರಿಂದ ತಮ್ಮ ಇಬ್ಬರೂ ಹೆಣ್ಣುಮಕ್ಕಳನ್ನು ಧಾರವಾಡದಲ್ಲಿದ್ದ ತಮ್ಮ ಕಕ್ಕ ಕೃಷ್ಣರಾಯರ ಹತ್ತಿರ ಇಟ್ಟು, ತಾವೊಬ್ಬರೇ ಸಿಂಧಕ್ಕೆ ಹೋದರು. ಸಿಂಧದಿಂದ ವರ್ಗವಾಗಿ ಬಂದ ನಂತರ ಧಾರವಾಡ ಜಿಲ್ಲೆಯ ಕೋಡ ತಾಲೂಕಿನ ಮದಗಮಾಸೂರಿನ ಕೆರೆಯ ಜೀರ್ಣೋದ್ಧಾರ ಕೆಲಸ ನಡೆದಾಗ ಅಲ್ಲಿಯೂ ಓವರಸಿಯರರೆಂದು ಕೆಲಸ ಮಾಡಿದರು. ಧಾರವಾಡದಲ್ಲಿದ್ದಾಗ ಶ್ರೀಯುತರು ದೇಸಾಯಿ ಓಣಿಯಲ್ಲಿ ಒಂದು ಕೋಣೆಯನ್ನು ತೆಗೆದುಕೊಂಡು, ಊಟ ಉಪಚಾರಗಳನ್ನು ಸಾಗಿಸಿದರು. ತಾವು ಸಿಂಧದಲ್ಲಿದ್ದಾಗ, ಒಂದು ಸಲ ಬೇನೆ ಬಿದ್ದಾಗ, ಅನ್ಯ ಜಾತಿಯವರೊಬ್ಬರು ಅನ್ನ ನೀರು ಹಾಕಿ ತಮ್ಮನ್ನು ಬದುಕಿಸಿದ್ದರ ಮೂಲಕ ತಾವು ಜಾತಿಭ್ರಷ್ಟರಾದೆವೆಂಬ ಕಲ್ಪನೆಯೇ ಇದಕ್ಕೆ ಕಾರಣವಾಗಿ

---

೧ ಚುರಮರಿ ಕೃತ 'ಶಾಕುಂತಲ ನಾಟಕವು'–೧೯೩೪ ಪು. ೩–೪.

೨ ಅದೇ ಪುಟ ೬.

ದ್ದಿತು. ಮನೆಯವರು ಶೇಷಗಿರಿರಾಯರ ಎರಡನೆಯ ಮದುವೆಯ ತಯಾರಿಯನ್ನೂ ಮಾಡಿದ್ದರು. ಆದರೆ, ಇದಕ್ಕೆ ಒಪ್ಪದ ಶೇಷಗಿರಿರಾಯರು ದೇಸಾಯಿ ಓಣಿಯಲ್ಲಿಯ ತಮ್ಮ ಕೋಣೆಯನ್ನು ಬಿಟ್ಟು ಬಿಟ್ಟು, ಕೋರ್ಟಿನ ಹತ್ತರವಿದ್ದ ಬಂಗ್ಲೆಗಳಲ್ಲಿ ಒಂದನ್ನು ಬಾಡಿಗೆ ತೆಗೆದುಕೊಂಡು ಅಲ್ಲಿ ಇರಹತ್ತಿದರು. ಪ್ರಾಯಶ್ಚಿತ್ತ ಕೊಡಿಸಿ ಶುದ್ಧ ಮಾಡಿಸಿ ಮದುವೆ ಮಾಡುವೆವೆಂದು ಮನೆಯ ಹಿರಿಯರಾದವರು ಗತಿಗಾಲಬಟ್ಟು ಹೇಳಿದರೂ ಒಡಂಬಡಲಿಲ್ಲ. ಅಂದಿನಿಂದ ಕೊನೆಯವರೆಗೆ ಅವರು ಪುನಃ ತಮ್ಮ ಮನೆಗೆ ಬರಲೇ ಇಲ್ಲ." ೧

ಶೇಷಗಿರಿರಾಯರದು ಆದರ್ಶ ದೃಷ್ಟಿ. ಅವರು ತಮ್ಮ ಗಳಿಕೆಯನ್ನು ಸಹ ತಮ್ಮ ಇಬ್ಬರೂ ಹೆಣ್ಣುಮಕ್ಕಳಿಗೇ ಬಿಟ್ಟುಕೊಟ್ಟು ಹೋಗಲಿಲ್ಲ. ಅವರು ತಮ್ಮ ಗಳಿಕೆಯನ್ನೆಲ್ಲ "ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸಕ್ಕೆ ಹೋಗುವ ಬ್ರಾಹ್ಮಣ ವಿದ್ಯಾರ್ಥಿಗೆ ಸ್ಕಾಲರಶಿಪ್ಪು ಕೊಡುವದಕ್ಕಾಗಿ ವಿನಿಯೋಗಿಸಬೇಕೆಂದು ಮೃತ್ಯುಪತ್ರ ಮಾಡಿ ಅದನ್ನು ಕಲೆಕ್ಟರರ ವಶಕ್ಕೆ ಕೊಟ್ಟುಬಿಟ್ಟರು. 'ಚುರಮುರೀ ಸ್ಕಾಲರಶಿಪ್' ಎಂಬ ಹೆಸರಿನಿಂದ ಇದು ಇನ್ನೂ ನಡೆದಿದೆ." ೨

ಪಬ್ಲಿಕ್ ವರ್ಕ್ಸದಂಥ ಶುಷ್ಕ ಖಾತೆಯಲ್ಲಿದ್ದರೂ ಸಹ, ಶೇಷಗಿರಿರಾಯರು ಒಳ್ಳೆಯ ಅಭ್ಯಾಸಿಗಳಾಗಿದ್ದರು. ಚುರಮುರೀ ಸ್ಕಾಲರಶಿಪ್ಪಿಗಾಗಿ ಅವರ ಸ್ವಂತದ ಪುಸ್ತಕ ಭಾಂಡಾರವನ್ನು ಮಾರಿದರೆ, ಅಂದಿನ ಅಗ್ಗಳತೆಯ ಕಾಲಕ್ಕೂ ಅದಕ್ಕೆ ಮೂರು ಸಾವಿರದಷ್ಟು ಹಣ ಬಂದಿತೆಂಬುದನ್ನು ಗಮನಿಸಿದರೆ, ಆ ಪುಸ್ತಕ ಭಾಂಡಾರದ ಗಾತ್ರ ಮತ್ತು ಗುಣಗಳನ್ನು ಊಹಿಸಬಹುದಾಗಿದೆ.

ಶ್ರೀಯುತರು ಅವಿರತ ಪರಿಶ್ರಮಶೀಲರು. ಅಂದಿನ ಕಾಲದ ಅನೇಕ ಹಿರಿಯರಂತೆ ಅವರ ಆಸ್ಥೆಗಳೂ ವಿಶಾಲವಾಗಿದ್ದವು. ಅವರು ಸ್ವತಃ ಕುಶಾಗ್ರಮತಿಗಳಾಗಿದ್ದರಲ್ಲದೆ, ಅನೇಕ ನಾಟಕಾದಿಗಳನ್ನು ಬರೆದುದನ್ನು ಈ ಮೊದಲೇ ವಿವರಿಸಿದೆ. ಶಾಕುಂತಲ ನಾಟಕದಲ್ಲಿಯ ಪದಗಳ ಧಾಟಿ ಮತ್ತು ಸ್ವರ ಯೋಜನೆಗಳನ್ನು ನೋಡಿದರೆ, ಅವರ ಅಗಾಧವಾದ ಸಂಗೀತಜ್ಞಾನದ ಕಲ್ಪನೆ ಬರುತ್ತದೆ. ಈ ಹಾಡುಗಳ ಮಟ್ಟಗಳೇ ಮರಾಠಿಯ ಅಣ್ಣಾ ಕಿರ್ಲೋಸ್ಕರ ಅವರ 'ಸಂಗೀತ ಶಾಕುಂತಲ' ನಾಟಕಕ್ಕೆ ಅಸ್ತಿಭಾರವಾದವು. ಇದೂ ಅಲ್ಲದೆ, ಶ್ರೀಯುತರಿಗೆ ಬಡಗಿತನ ಮತ್ತು ಕಮ್ಮಾರಿಕೆಯಲ್ಲಿ ಗತಿ ಇದ್ದಿತು. ಅವರು ಈ ದಿಶೆಯಲ್ಲಿ ನಿರ್ಮಿಸಿದ ಹಲವು ಸೂಕ್ಷ್ಮ ವಸ್ತುಗಳನ್ನು ಕಂಡವರಿದ್ದರೆಂದು ಮುದವೀಡು ಅವರು ಹೇಳುತ್ತಾರೆ. ಇದೂ ಅಲ್ಲದೆ, ಅವರಿಗೆ ಆಧುನಿಕ ರಸಾಯನ ಶಾಸ್ತ್ರದಲ್ಲಿಯೂ ತುಂಬಾ ಅಭಿರುಚಿಯಿದ್ದಿತು. ಅವರು ಯಾವಾಗಲೂ ಈ ದಿಶೆಯಲ್ಲಿ ಒಂದಿಲ್ಲೊಂದು ಪ್ರಯೋಗವನ್ನು ಮಾಡುತ್ತಲೇ ಇರುತ್ತಿದ್ದರು. ಸುಪ್ರಸಿದ್ಧ ತತ್ವಜ್ಞಾನಿ ಫ್ರಾನ್ಸಿಸ್ ಬೇಕನ್‌ನು ಒಂದು ಪ್ರಯೋಗವನ್ನು ಮಾಡಲು ಹೋಗಿ ಹಿಮದಿಂದ ಜ್ವರಗ್ರಸ್ತನಾಗಿ ತೀರಿಕೊಂಡಂತೆ ಶೇಷಗಿರಿರಾಯರ ಅವಸಾನವೂ ಈ ರಸಾಯನ ಶಾಸ್ತ್ರದ ಪ್ರಯೋಗದ ಮೂಲಕವೇ ಆಯಿತು. "ಇದೇ ಮಾದರಿಯ ಪ್ರಯೋಗದಲ್ಲಿ ತೊಡಗಿದ್ದಾಗ್ಗೆ ಅಂದರೆ ಕಾಜು ಕರಗಿಸಿ ಮುಸಿ ಕುಡಿಕೆಯನ್ನು ಮಾಡುವದಕ್ಕೆ ಎರಕ ಹೊಯ್ಯುವ ಕೆಲಸ ನಡಿಸಿದಾಗ್ಗೆ ಮುಸಿಯೊಳಗಿಂದ ಹೊರಟ ರಾಸಾಯನಿಕ ಹೊಗೆಯು ಹೊಟ್ಟೆಯೊಳಗೆ ಹೊಕ್ಕು ಆಕಸ್ಮಾತ್ತಾಗಿ ಅವರ ದೇಹಾವಸಾನವಾಯಿತು." ೩

ಹೀಗೆ ಕನ್ನಡಕ್ಕಾಗಿ ಮಹತ್ತರ ಸೇವೆ ಗೈದ ಒಂದು ಹಿರಿಯಜೀವಿ ತನ್ನ ಗುರುಭಕ್ತಿಯನ್ನು ತೋರಿ, ಸಾಹಿತ್ಯ ಮತ್ತು ಶಾಸ್ತ್ರಗಳಿಗೆ ತನ್ನ ಸೇವೆಯನ್ನು ಸಲ್ಲಿಸಿ, ಕಣ್ಮರೆಯಾದಂತಾಯಿತು!

—

೧ ಅದೇ ಪು. ೭.

೨ ಅದೇ ಪು. ೭.

೩ ಅದೇ ಪು. ೧೧.

ಅನ್ನದಾನಿ ಬಸವಲಿಂಗಾರ್ಯ

(ಸು. ೧೮೩೦)

ಇವರ ಪೂರ್ಣ ಹೆಸರು ಅನ್ನದಾನಪ್ಪಯ್ಯ ಬಸವಲಿಂಗಾರ್ಯ ಅರಳೆಲೆಮಠ. ಇವರು ಮೃಡಗಿರಿಯಲ್ಲಿ (ಅಂದರೆ ಈಗಿನ ಧಾರವಾಡ ಜಿಲ್ಲಾ ಗದಗ ತಾಲ್ಲೂಕಿನ ಮುಂಡರಗಿಯಲ್ಲಿ) ವಾಸಿಸುತ್ತಿದ್ದರು. ಇವರ ಮೂಲ ಊರು ಪಂಪಾಕ್ಷೇತ್ರ. ಇವರ ತಂದೆಯವರಾದ ಬಸವಾರ್ಯರು ಮೊಗಲಾಯಿ ಇಲಾಖಾ ಕೊಪ್ಪಳ ತಾಲೂಕು ಮಂಗಳೂರಿನ ಅರಳೆಲೆಮಠದ ಕರ್ತೃವಾಗಿದ್ದರು. ತಮ್ಮ ಬಗ್ಗೆ 'ತದ್ರೇಣುಕೇಶಾಚಾರ್ಯ (ಅಂದರೆ ಷಡಕ್ಷರದೇವರ) ಸೂತ್ರಧಾರಕರು' ಎಂದು ಹೇಳಿಕೊಳ್ಳುತ್ತಾರೆ. ಬಹುಶ್ರುತರೂ, ಸಚ್ಚರಿತ್ರರೂ, ಪಂಡಿತಮಾನ್ಯರೂ ಆದ ಬಸವಾರ್ಯರ ಪುಣ್ಯೋದರದಲ್ಲಿ ಅನ್ನದಾನಪ್ಪಯ್ಯನವರು ಜನಿಸಿದರು. ತಂದೆಯೇ ಅವರಿಗೆ ವಿದ್ಯಾಗುರುಗಳಾಗಿದ್ದರು. ರಾಜಶೇಖರ ವಿಲಾಸಕ್ಕೆ ಅವರು ಬರೆದ ಟೀಕೆಯನ್ನು ನೋಡಿದರೆ ಅವರು ಅಮರ, ವಿಶ್ವ, ವೈಜಯಂತಿ, ಹಲಾಯುಧ, ನಾನಾರ್ಥರತ್ನಮಾಲಾ, ಧನಂಜಯ, ಮೇದಿನಿ, ಶಬ್ದಾರ್ಣವ, ಏಕಾಕ್ಷರ, ಮಂಗಿರಾಜ, ನಾನಾರ್ಥ ಕರ್ಣಾಟಕ ಶಬ್ದಮಂಜರಿ, ಕಬ್ಬಿಗರ ಕೈಪಿಡಿ ಮೊದಲಾದ ಗ್ರಂಥಗಳನ್ನು ಪಠಿಸಿದಂತೆ ಕಂಡು ಬರುತ್ತದೆ. ಅಲ್ಲದೆ, ಟೀಕೆಯಲ್ಲಿ ಶ್ರುತಿ, ಸ್ಮೃತಿ, ಪುರಾಣ, ಆಗಮ ಮೊದಲಾದವುಗಳಿಂದ ಶ್ಲೋಕಗಳನ್ನು ಉದಾಹರಿಸಿದ್ದಾರೆ. ಶಿವಲೀಲಾ ಚರಿತ್ರೆಗಳನ್ನು ಗಾಢವಾಗಿ ಓದಿದವರಾಗಿದ್ದಾರೆ. ಇದರಿಂದ ಶ್ರೀಯುತರ ಪಾಂಡಿತ್ಯಪ್ರಗಲ್ಭತೆಯನ್ನು ಊಹಿಸಬಹುದಾಗಿದೆ. ಈ ಟೀಕೆ ಅವರ ಪ್ರಥಮ ಗ್ರಂಥ. ಉಳಿದ ಯಾವ ಗ್ರಂಥಗಳನ್ನು ಬರೆದಿದ್ದಾರೋ ತಿಳಿಯಲಿಲ್ಲ.

ಒಂದು ಕಾಲಕ್ಕೆ ಜೈಮಿನಿ ಭಾರತ, ಕುಮಾರವ್ಯಾಸ ಭಾರತ, ಷಡಕ್ಷರಕವಿ ವಿರಚಿತ ರಾಜಶೇಖರ ವಿಲಾಸ, ವೃಷಭೇಂದ್ರ ವಿಜಯ, ತೊರವೆ ರಾಮಾಯಣಗಳು ಬೀದಿ ಬೀದಿಗಳಲ್ಲಿ, ಮಠಮಠಗಳಲ್ಲಿ ಹೇಳಲ್ಪಡುತ್ತಿದ್ದವು. ಪ್ರೌಢಪ್ರಬಂಧಗಳಾದ ಈ ಕೃತಿಗಳ ಅರ್ಥಾನ್ವಯಗಳು ಅಷ್ಟು ಸರಳವಾಗಿರಲಿಲ್ಲ. ಆದ್ದರಿಂದ ಈ ಕೃತಿಗಳಿಗೆ ಅನೇಕ ವಿದ್ವಾಂಸರು ಟೀಕೆ ಟಿಪ್ಪಣಿಗಳನ್ನು ಬರೆದರು. ಆ ರೀತಿ, ಷಡಕ್ಷರ ಕವಿಯ ರಾಜಶೇಖರ ವಿಲಾಸಕ್ಕೂ ನಾಲ್ವರು ಪಂಡಿತರು ವ್ಯಾಖ್ಯಾನವನ್ನು ಬರೆದಿದ್ದಾರೆ. ಗಂಗಾಧರ ಮಡಿವಾಳೇಶ್ವರ ತುರಮರಿಯವರು ದ್ವಿತೀಯಾಶ್ವಾಸಕ್ಕೂ, ಶಾಂತವೀರ ರಾಚಿದೇವ ಕಿತ್ತೂರ ಅವರು ನವಮಾಶ್ವಾಸಕ್ಕೂ, ಧೋಂಡೊ ನರಸಿಂಹ ಮುಳಬಾಗಲ ಅವರು ಸಪ್ತಮಾಶ್ವಾಸಕ್ಕೂ ಟೀಕೆ ಬರೆದಂತೆ, ಅನ್ನದಾನಿ ಬಸವಲಿಂಗಾರ್ಯರು ರಾಜಶೇಖರ ವಿಲಾಸದ ಮೂರನೆಯ ಆಶ್ವಾಸಕ್ಕೆ ಟೀಕೆ ಬರೆದಿದ್ದಾರೆ.

ಘನಡೈರೇಕ್ಟರ ಸತ್ಯಸಂಧದೊರೆಗಳ್ಮುಂಗೊಬ್ಬನೈರೂಪ್ಯ ನಾ
ಕನದೀಪೂತ ಜಲಾಭಿಷೇಚನಮನಾಂತೀಕಾವ್ಯ ಸಚ್ಛರೀರಂ

ಗನೆ ಗಂಗಾಧರ ಶಾಂತವೀರ ಶರಣರ್ಪೇಳ್ದಾದಿ ಭಾಸ್ವದ್ವಿತೀ
ಯನವಾಶ್ವಾಸಸಮರ್ಥಧೌತವಸನೋದ್ಯತ್ಸ್ವರ್ಣಭೂಷಂಗಳಂ

೧೭೦ ಪುಟಗಳ ಈ ಗ್ರಂಥ ಬೆಂಗಳೂರಿನ ವಿಚಾರದರ್ಪಣ ಮುದ್ರಾಶಾಲೆಯಲ್ಲಿ ಸನ್ ೧೮೭೩ರಂದು ಮುದ್ರಿತವಾಯಿತು. ಸಂಸ್ಕೃತ ಮತ್ತು ವೈದಿಕ ಸಂಸ್ಕೃತಿಗಳ ಪ್ರಭಾವ ಇನ್ನೂ ಹೆಚ್ಚಿಗಿದ್ದ ಕಾಲವದು. ಆದ್ದರಿಂದ ಕುಲದೈವದ ಹೆಸರನ್ನೂ, ತಮ್ಮ ಹೆಸರನ್ನೂ ಕವಿಗಳು ಸಂಸ್ಕೃತದಲ್ಲಿಯೇ ಬರೆಯುತ್ತ ಹೋಗಿದ್ದಾರೆ. ಮುಖ ಪುಟದಲ್ಲಿ ಹೀಗಿದೆ :

ಸಟೀಕಾ ರಾಜಶೇಖರ ತೃತೀಯಾಶ್ವಾಸವು
ಅಂನದಾನಿ ಬಸವಲಿಂಗಾರ್ಯ ಮೃಡಗಿರಿ
ಇವರಿಂದ ನೂತ್ನವಾಗಿ
ರಚಿಸಲ್ಪಟ್ಟು
ಆ
ಮಹಾರಾಜ ಶ್ರೀ
ಬೆಂಗಳೂರು ಹೋಳಕಲ್ಲುಂ
ನರಸಿಂಹ್ಮಯ್ಯನವರು ವಿಚಾರದರ್ಪಣ
ಮುದ್ರಾಕ್ಷರ ಶಾಲೆಯೊಳು ಮುದ್ರಿಸಲ್ಪಟ್ಟಿತು.

ಇದರ ಕ್ರಯ ೧ ರೂ. ೮ ಆಣೆ

ಎರಡನೆಯ ಪುಟದಲ್ಲಿ ಹೀಗೆ ಹೇಳಿದೆ :

ಶ್ರೀ ಸಾಂಬಮೂರ್ತಯೇ ನಮಃ

ಶ್ರೀಮನ್ನಿಖಿಲಸುರಾಸುರ ಪಟಲ ಜಟುಲಮಕುಟ ತಟಘಟಿತಾಗಣಿತ ಮಣಿಗಣೋದ್ಯತ್ತರಿಣದ್ಧ ದ್ಯುತ್ಯುದಾಗೋದ್ದೀಪಿತ ಪರಾತ್ಪರಮಹಿಭ್ರೀ ಶಿವಲಿಂಗಾಂಘ್ರ್ಯಂಜಾ ಮಂದಮಕುಂದ ಪೃಥುಕದ್ವಿರೇಫಾಯಮಾನರಸವತ್ಪ್ರಾಜ್ಯಜನಾಭ ಮಾನಿನೋಭಯ ಕವಿತಾವಿಲಕ್ಷಣ ವಿಚಕ್ಷಣ ( ) ರಮ್ಯಾಶೇಂದು ಪುರವರ ಛತ್ರಾದಿನಿಲಯೀಕೃತ ಶ್ರೀ ಷಡಕ್ಷರದೇವ ಮಹಾಪ್ರವಿರಾಜತ್ಕವಿಸಾರ್ವಭೌಮ ನಿರ್ಮಾಣವಿ ( ) ಧಿಕ ಪ್ರಾಕೃತ ವಸ್ತುಕಾದಿ ಪ್ರಬಂಧಗಳೊಳತಿ ಶ್ಲಾಘನೀಯಭಿರಾಮಸರಸಪ್ರವದ್ರಸವಿಶವಶ್ಲೇಷಾದ್ಯಲಂಕಾರಾಲಂಕೃತ ಸ್ತವನೀಯಮಾನಮಾದ ರಾಜಶೇಖರ ವಿಳಾಸದ ತೃತೀಯಾಶ್ವಾಸವನ್ನು ಮೃಡಗಿರಿಯೊಳಿರುವ ಮಂಗಳೂರು ಅರಳಲೀಮಠದ ಅಂನದಾನಿ ಬಸವಲಿಂಗಾರ್ಯ ಇವರು ಹೊಸ ಕಂನಡದಿಂದ ಕನ್ನಡಿಸಲ್ಪಟ್ಟು, ಬೆಂಗಳೂರು ಹೋಳಕಲ್ಲು ನರಸಿಂಹಯ್ಯನವರ ವಿಚಾರ ದರ್ಪಣ ಮು॥ ಶಾಲೆಯಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿರು ೧೮೭೩

ರಾಜಶೇಖರ ಕಾವ್ಯದ ಉತ್ಪತ್ತಿಯ ಬಗ್ಗೆ ಕವಿ ಹೇಳುವದೇನಂದರೆ :– "ಪರಮಾತ್ಮನ ಪದಿದ್ಯಂ ಮೇಲಣ ವಿಭೂತಿಯ ರೇಣುವಿನಿಂದ ಉದ್ಭವಿಸಿದ ರೇಣುಕಾಚಾರ್ಯರ ವಂಶೀಭೂತನಾಗಿ, ಬೆಂಗಳೂರು ದಕ್ಷಿಣ ಭಾಗದಲ್ಲಿರುವ ದನುಗೂರೆಂಬ ಗ್ರಾಮದ ಮಠಕ್ಕೆ ಅಧಿಕರ್ತೃವಾದ ಚಿಕವೀರ ದೇಶಿಕೋತ್ತಮನ ಅನುಗ್ರಹ ಶಿಷ್ಯನಾದ ಷಡಕ್ಷರಿದೇವನೆಂಬ ಪ್ರಸಿದ್ಧನಾದ ಕವಿಸಿಂಹ್ವನು– ೨೦೫ನೇ ವರ್ಷಗಳಲ್ಲಿ, ಮೈಸೂರ (ಕೃಷ್ಣ) ರಾಜನ ಘನಸಭೆಯೊಳಿದ್ದ ಚಾರ್ವಾಕಾದಿಗಳನ್ನು ಬದ್ಧವಾದದಿಂಗೆದ್ದು, ಸ್ತಬ್ಧರನ್ನು ಮಾಡಲಾ ಧೊರೆಯು– ಸನ್ಮಾನವನ್ನು ಮಾಡಿ ಮೋಹದಿಂ ತನ್ನಲ್ಲಿಯೇ ಇರಿಸಿಕೊಂಡನು'' ಒಂದು ಸಲ .... ಚಾರ್ವಾಕಾದಿಮತಸ್ಥರು ಲೀಲಾವತಿಯೆಂಬುದೊಂದು ಜಿನ್ನ ಕಾವ್ಯವನ್ನು ನರಪತಿಗೆ ತೋರಿಸಿ ಇಂಥ ಕಾವ್ಯ ಎಲ್ಲಿಯೂ ಇಲ್ಲ ಎಂದು ಹೇಳಲು ಅರಸನು ಷಡಕ್ಷರ ಕವಿಯ ಕಡೆಗೆ ನೋಡಿದ ನಂತೆ. ಆಗ ಅಲ್ಲಿಯ ವಿದ್ವಾಂಸರು ಅಂತಸ್ಥವಾಗಿ ಕೊಂಡಾಡಿ "ಎಲೈ ಪಟ್ಟದಸ್ವಾಮೀಗಳೇ !! ನಿಂಮ ನಾಮ (ಷಡಕ್ಷರ) ಮಂತ್ರಮಹಿಮಾಪ್ರದರ್ಶಕಮಾದೊಂದು ಒಸ್ತುಕ ಕಾವ್ಯವನ್ನು ವಿರಚಿಸ ಬೇಕೆಂದು'' ಪ್ರಾರ್ಥಿಸಲು, "ಸಕಲ ದುರ್ಜನರ ಭಂಗಪಡಿಸುವಿಕೆಯೂ, ತನ್ನ ಸುಂದರ ಪ್ರಾಗಲ್ಭ್ಯತೆಯೂ, ಆ ಪಂಡಿತರ ನಿರ್ಮಲ ಸ್ತುತಿಯೂ ಮುಪ್ಪುರಿಗೊಂಡಂತೆ ಹೃತ್ಕಾಳದಲ್ಲಿ'' ಶೋಭಿಸಲು ಗುಬ್ಬಿ ಮಲ್ಲಣಾರ್ಯ ಕೃತ ಭಾವಚಿಂತಾರತ್ನದ ಭಾಗವನ್ನು ವಿವರಿಸಿದಂತೆ ಹೇಳಿದೆ. ಈ ಪ್ರಾಕೃತ (ಶೃಂಗಾರ) ವಸ್ತುಕ ಪ್ರಬಂಧವನ್ನು, "ನವರಸ, ಅಲಂಕಾರ, ಧ್ವನಿ, ಲಕ್ಷಣ, ಬಂಧ, ಶ್ಲೇಷಾದ್ಯರ್ಥ, ಉಪೇಕ್ಷಾಪಾದ್ಯಂಗ, ವೈದರ್ಭ್ಯಾದಿ ರೀತಿ, ಅಂತರ್ಲಾಪಿ, ಬಹಿರ್ಲಾಪಿ, ಸಮಸ್ಯ, ಶಬ್ದ, ಸಂಧಿ, ಸಮಾಸ, ಧಾತು, ದೇಶ, ಅನ್ಯದೇಶ, ತತ್ಸಮ, ತದ್ಭವಾದಿಗಳಿಂ ಗರ್ಭೀಕೃತಮಾದ ಅನೇಕ ವಿಧ ವೃತ್ತ, ಕಂದ, ವಚನ, ರಗಳೆ, ತ್ರಿವಿಧಿ, ತ್ರಿವುಡೆ, ಗದ್ಯ, ಮುಂತಾದವುಗಳಿಂದ ನಿಯುತವಾಗಿ'' ಈ ಗ್ರಂಥವನ್ನು ಒಂದು ವರ್ಷದಲ್ಲಿ ರಚಿಸಿದನು." ಆ ಬಳಿಕ ರಾಜಾಸ್ಥಾನಕ್ಕೆ ತಂದಿರಿಸಲು, ಸರ್ವ ಕುವಾದಿಗಳೂ ಮಾಧ್ವಾದಿ ತ್ರಿಮತಸ್ಥರೂ ನೋಡಿ ಜಿಹ್ವಾಸ್ತಂಭರಾಗಿರಲು ಷಡಕ್ಷರಿ ಮಹಾ ಕವಿಯು ಅಂದದ್ದೇನಂದರೆ–

> ಕಡಿವಡೆದುದೋ ನಂಜಿನಮು
> ಳ್ಪುಡಿದುದೊ ಕಾರ್ಬೊನ್ನ ಸರಳೆ ಕೀಲಿಸಿದುದೊ ಮೇ
> ಣಡರ್ದುದೊ ಮೂಕಗ್ರಹಮೆನೆ
> ಮಿಡುಕದು ಖಳರಸನೆ ಸುಕವಿಕಾವ್ಯಸ್ಥಳದೋಳ್''

ಕವಿಯ ಈ ಕೃತಿಯನ್ನು ಮೆಚ್ಚಿದ ದೊರೆಯು ಎಳಂದೂರ ಗ್ರಾಮದಲ್ಲಿ ಅವನಿಗೆ ಮಠವನ್ನು ಕಟ್ಟಿಸಿಕೊಟ್ಟನು.

ಆದ್ದರಿಂದ, ಇಂಥ ಗ್ರಂಥಕ್ಕೆ ಅನ್ನದಾನಿ ಸ್ವಾಮಿಯು ಟೀಕೆಯನ್ನು ಒರೆದರು. ಸ್ವವಿಷಯಕ ವಾಗಿ ಕವಿಯು ಹೀಗೆ ಹೇಳಿದ್ದಾನೆ :

> "ಶ್ರೀಮದ್ಭಾಂಭವ ದಿವ್ಯಪನ್ನಳಿನ ಚಂಚದ್ಭೃಂಗನುಗ್ರಾಗ ಸ
> ದ್ಧಾಮಂ ಭದ್ರಪುರೀ ಲಲಾಟಭರಣ ಭ್ರಾಜನ್ಮಠಾಧೀಶ್ವರಂ
> ಪ್ರೇಮಂಬೆತ್ತುರು ರಾಜಶೇಖರ ತೃತೀಯಾಶ್ವಸದಸ್ಯುನ್ನತಾ
> ಯಾಮಂದಾರ್ಥಮನನ್ನದಾನಿಗಣನಾಥಂ ಪೇಳ್ದನತ್ಯೂರ್ಜಿತಂ ॥

"ಆ ಷಡಕ್ಷರಿದೇವನಿಂದ ಶಾಲಿವಾಹನ ಶಕ ೧೫೭೯ನೇ ಜಯನಾಮ ಸಂವತ್ಸರ ಮಾಘಮಾಸ ಶುಕ್ಲಪಕ್ಷದ (೩) ಬುಧವಾರಕ್ಕೆ ಸಂಪೂರ್ಣವಾದ ಏತದ್ರಾಜಶೇಖರವಿಲಾಸದ ಮೂರನೇ ಅಧ್ಯಾಯ

ವನ್ನು– ಮುಂಬೈ ಇಲಾಖಾ, ಧಾರವಾಡ ಜಿಲ್ಲಾ, ಗದಗ ತಾಲೂಕ, ಡಂಬಳ ಪೇಠಾ, ಮೈಡಗಿರಿ ಯೆಂಬ ಗ್ರಾಮದಲ್ಲಿ ನಿವಾಸಿಗಳಾದ– ಮೊಗಲಾಯಿ ಇಲಾಖಾ, ಕೊಪ್ಪಳ ತಾಲೂಕ, ಮಂಗಳೂರ ಅರಳೆಲೇಮಠಕ್ಕೆ ಕರ್ತೃಗಳಾಗಿಯೂ, ಮತ್ತೂ ಪಂಪಾಕ್ಷೇತ್ರವೇ ಮೂಲ ಸ್ಥಾನವುಳ್ಳವರಾಗಿಯೂ, ತದ್ರೇಣುಕೇಶಾಚಾರ್ಯ (ಷಡಕ್ಷರದೇವ) ಸೂತ್ರಧಾರಕರಾಗಿಯೂ, ಇಷ್ಟಲಿಂಗಪೂಜಾಸಕ್ತರಾಗಿಯೂ, ಸದಾಚಾರ ಸಂಪನ್ನರಾಗಿಯೂ, ಸತ್ಪುರುಷಜನವಿನುತರಾಗಿಯೂ, ನಯವಿವೇಕ ಸೈರಣೆ ಸದ್ಗುಣಗಣಾ ಭರಣಭೂಷಿತರಾಗಿಯೂ, ಕರ್ಣಾಟಕಾದಿವಿದ್ಯಾಧುರಂಧರರಾಗಿಯೂ ಇರುವ ಬಸವಲಿಂಗಾರ್ಯರ ಪುಣ್ಯೋದರದೊಳ್ಸಂಭವಿಸಿ, ಏತದ್ಗುರುಶಿಕ್ಷಾಬಲದಿಂ ಕುಶಲ ವಿಶಾರದನಾದ ಅನ್ನದಾನಪಯ್ಯನು, ವಿಚಾರಪೂರ್ವಕ ಪರಿಶೋಧಿಸಿ, ಮಂಜುಲವಾಗಿ ಕೆಳಗೆ ಬರೆದ ಆರು ತೆರನಿಂದ ಟೀಕಿಸಿದನು.''೧

ಟೀಕೆಯಲ್ಲಿ :

(೧) ಮೂಲ ಶ್ಲೋಕದಲ್ಲಿಯ ಅಡಿ, ಪ್ರಾಸ, ವೃತ್ತಗಳ ನಾಮಗಳನ್ನು ಹೇಳಲಾಗಿದೆ.

(೨) ಶಬ್ದಾರ್ಥದಲ್ಲಿ ಪದಖಂಡಣ, ಪ್ರತ್ಯೇಕ ಶಬ್ದವಿಚ್ಛೇದ ಮಾಡಿ ಅದರರ್ಥ, ಶ್ಲೇಷಾರ್ಥ, ತದ್ಭವ, ವ್ಯಾಕರಣ ಪ್ರಯೋಗ, ರಸ, ಅಲಂಕಾರ ಹೇಳಿದೆ.

(೩) ಕಠಿಣಶಬ್ದಗಳಿಗೆ ಮೇಲೆ ವಿವರಿಸಿದ ಕೋಶಗಳ ಆಧಾರದಿಂದ ಅರ್ಥ ಹೇಳಲಾಗಿದೆ.

(೪) ತಾತ್ಪರ್ಯ ಸಂಗ್ರಹ– ಎಂಬ ಭಾಗದಲ್ಲಿ ಶ್ರುತಿ, ಸ್ಮೃತಿ, ಪುರಾಣಾಗಮ ಸಂಮತ ಶ್ಲೋಕಗಳನ್ನು ಹೇಳಲಾಗಿದೆ.

(೫) ಭಾವಾರ್ಥಭಾಗದಲ್ಲಿ– ಸಾರಾಂಶಾರ್ಥವನ್ನು ಕೊಡಲಾಗಿದೆ.

(೬) ಟಿಪ್ಪಣ ವಿಭಾಗದಲ್ಲಿ– ವ್ಯಾಕರಣ ಸಂಧಿ ಮೊದಲಾದವುಗಳನ್ನು ಹೇಳಲಾಗಿದೆ.

ಅಲ್ಲದೆ, ಲೇಖಕರು, 'ದ್ರಾಕ್ಷಾಪಾಕದಂತೆ ಸುಲಭವಾಗಿ' ವ್ಯಾಖ್ಯಾನ ಮಾಡಲಾಗಿದೆ ಎಂದೂ ಹೇಳಿದ್ದಾರೆ. ಇಷ್ಟಾದರೂ, ಲೋಪದೋಷಗಳಿರುವದು ಸಾಧ್ಯವೆಂದು ಬಗೆದ ಲೇಖಕರು ಈ ರೀತಿ ಪ್ರಾರ್ಥಿಸಿದ್ದಾರೆ :

"ಪ್ರಾರ್ಥನವು : ಅಕಸ್ಮಾದಲಂಕಾರಾದಿಗಳೋಳ್ಕಿಂಚಿದ್ದೋಷಗಳು ಬಿದ್ದಿದ್ದಾವು; ಅದರ ಕಡಿಗೆ ಲಕ್ಷ್ಯ ಕೊಡದೆ, ಅರ್ಥ ವಿಷಯದ ಕಡಿಗೆ ಮನಸುಗೊಡಬೇಕು. ಯಾಕಂದರೆ– ನಾನು ಕುಗ್ರಾಮ ವಾಸಿಯಾಗಿರುವದರಿಂದಲೂ, ಮತ್ತು ಘನವಿದ್ವಾಂಸನಲ್ಲದರಿಂದಲೂ, ಇದೇ ಪ್ರಥಮ ಗ್ರಂಥವನ್ನು ಬರೆದದರಿಂದಲೂ, ಶಿವಪ್ರಾಜ್ಞಜನವನ್ನು ಕುರಿತು ಸ್ಮರಿಸುತ್ತೇನಲ್ಲಾ ಮೊದಲು ಕೆಲಸ ಮಾಡತಕ್ಕವರಿಗೆಂಥಾವರಿಗಾದರೂ ಸ್ವಲ್ಪ ಭ್ರಮೆಯಾಗುವದು ಕಾರಣ ಇದರಲ್ಲಿ ಕೆಲವು ವ್ಯಂಗಗಳುಂಟಾಗಿದ್ದಾದರೆ ಕ್ಷಮಿಸಬೇಕೆಂದು ಅಪೇಕ್ಷಿಸುತ್ತೇನೆ. ಮತ್ತು ಈ ಪ್ರಬಂಧವು ಕನ್ನಡ ಕಾವ್ಯಗಳಿಗೆ ನೂತ್ನವಾದ ಬಾಹುಳ್ಯ ಸೀಮಂತರತ್ನವಾಗಿರೋಣದರಿಂದ, ಯಾವ ಪಂಡಿತರು, ತಂಮ ಬುದ್ಧಿ ಕೌಶಲ್ಯತೆಯಿಂ ಯಾವ ಕಡಿಗೆ ತಿರಿಗಿಸಿಕೊಳ್ಳುವರೋ ಆ ಕಡಿಗೇ ಪ್ರಕಾಶ ಬೀಳುವದು; ತದುದ್ದಿಶ್ಯ ನಾನು ನನ ಅಲ್ಪಮತಿಗೆ ಜ್ಞಪ್ತಿಯಾದಷ್ಟು ಟೀಕಿಸಿ ಪ್ರಕಟಿಸಿದೆನು. ಅಂನದಾನಿ ಬಸವಲಿಂಗಾರ್ಯ."೨

ಈ ಗ್ರಂಥರಚನೆಯ ಕಾರಣವನ್ನು ಹೇಳುವಾಗ ಲೇಖಕರು ಅನೇಕ ಗುಣಗಣಮಂಡಿತವಾದ ರಾಜಶೇಖರ ವಿಲಾಸದ "ತೃತೀಯ ಪ್ರಕರಣಕ್ಕೆ ಧರ್ಮಶಾಲಾಪ ವಿದ್ಯಾರ್ಥಿಬಾಲರಿಗೂ, ಮಠಮನೆ

೧ ಸಟೀಕಾ ರಾಜಶೇಖರ ವಿಲಾಸ ೧೮೭೪ ಪು. ೭–೮.

೨ ಅದೇ ಪು. ೯.

ಗಳಲ್ಲಿ ಪಠಿಸುವ (ಗುರು ಶೀಕ್ಷಾ ತತ್ಪರರಪ್ಪ) ಶಾಸ್ತ್ರಾಭ್ಯಾಸಿಗಳಿಗೂ, ಏತತ್ಕರ್ನಾಟ ದೇಶೀಯ ಬಹುಳ (ಕಾಂಕ್ಷಾ) ಜನರಿಗೂ ವ್ಯುತ್ಪಾದಕವಾಗುವಂತೆ ವಿವಿಧರ್ಥದಿಂ ಗಂಭೀಕೃತಮಾದ ಟೀಕೆಯಂ ಲಿಖಿಸಬೇಕೆಂದು : ಮಹಾರಾಜಮಾನ್ಯ ರಾಜಶ್ರೀ ಗೋವಿಂದರಾವ್ ಲಕ್ಷ್ಮಣ ಕರಾಡಕರ್ ಸ್ಕೂಲ್ ಮಾಸ್ತರ್ ಮುಂಡರಗೀ ಈ ದಾರ್ಢ್ಯಮಿತ್ರರ ಪ್ರೇರೇಪಣೆಯನಂಗೀಕರಿಸಿ (ಸತ್ಯವಾಕ್ಯ ಪ್ರತಿಪಾಲಕ ಮಹೋದಾರ ಧೊರೆಗಳಾದ ಡೈರೇಕ್ಟರವರ ಪ್ರಕಟನೆಯ ಜಾಹೀರಾತ) ಮೇರೆಗೆ " ರಚಿಸಲಾಗಿದೆ ಎಂದು ಹೇಳಿದ್ದಾರೆ.[೧] ಈ ಪುಸ್ತಕಕ್ಕೆ ಸರಕಾರದ ಧನಸಹಾಯ ಸಿಕ್ಕಂತೆ ಕಾಣುತ್ತದೆ. ಪ್ರಭುವರ್ಣನೆ ಅಂದಿನ ಕಾಲದ ಒಂದು ಪದ್ಧತಿ. (ಇಂದೂ ಇದೆಯೇನೋ ! ಆದರೆ ಇಂದು ಸ್ವಲ್ಪ ಸೂಕ್ಷ್ಮವಾಗಿದ್ದಂತೆ ಕಾಣುತ್ತದೆ.) ಆದರೆ, ಅದು ಯಾವ ರೀತಿ ವಿಚಿತ್ರವಾಗಿ ಕಾಣುತ್ತದೆಂಬುದಕ್ಕೆ ಈ ಕೆಳಗಿನ ದೃಷ್ಟಾಂತವನ್ನು ನೋಡಬಹುದು :

ವಿಭುಡೈರೇಕ್ಟರ್ವಿಗತ ಸ್ಫುರದಸದೃಶಮೀ ಕಾವ್ಯದುದ್ಯದ್ಘನಶ್ರೀ
ಶುಭಜಾಹೀರಾತ ಬೀಜಮದವಯುವಧರಾಭಾಗದೊಳ್ಬೀಳ್ದ ಟೀಕಾ
ಸುಭಗೋತ್ಸಸ್ಯೌಘಮಾಗೀಶ್ರಮಮುಗೆ ಪುಣೇ ದಕ್ಷಿಣಾಪ್ರೇಜ್ಯಮೀಟೀ
ಪ್ರಭುಜೀವೋತಾಳಿ ಕಾರುಣ್ಯಸರಿ ಸುರಿಸದೇನಿರ್ಪುದೇ ಪೇಳ್ಮಹೇಶಾ ॥ [೨]

ಒಟ್ಟಾರೆ, ಪಾಂಡಿತ್ಯಪೂರ್ಣವೂ, ಸುರಸವೂ ಆದ ಟೀಕಾಗ್ರಂಥವೀ ಕೃತಿ.

—

೧ ಅದೇ ಪು. ೨.
೨ ಅದೇ ಪು. ೧೨.

ವೆಂಕಟ ರಂಗೊ ಕಟ್ಟಿ

(೧೮೩೩ – ೧೯೦೯)

ದಿವಂಗತ ವೆಂಕಟ ರಂಗೊ ಕಟ್ಟಿಯವರು ಸ್ವತಃ ಕವಿಗಳಾಗಲಿ ಇಲ್ಲವೆ ಲಲಿತ ಸಾಹಿತ್ಯ ನಿರ್ಮಾಪಕ ಸಾಹಿತಿಗಳಾಗಲೀ ಇರದಿದ್ದರೂ, ಇವರು ಕನ್ನಡಕ್ಕೆ ಸಲ್ಲಿಸಿದ ಸೇವೆ ಅಮೋಘವಾಗಿದೆ. ಕಟ್ಟಿಯವರದು ಕನ್ನಡದ ಉತ್ಕ್ರಾಂತಿ ಕಾಲದಲ್ಲಿ ತುಂಬಾ ಪ್ರತಿಷ್ಠಿತವಾದ ಹೆಸರು. ಅವರಿಗೆ ಧಾರವಾಡದ ಶೈಕ್ಷಣಿಕ ಮತ್ತು ಸಾಮಾಜಿಕ ಜೀವನದಲ್ಲಿ ತುಂಬಾ ಪ್ರತಿಷ್ಠಿತ ಸ್ಥಾನವಿದ್ದಿತು.


ಕಟ್ಟಿಯವರು ಸ್ವತಃ ಕನ್ನಡದ ಅಭಿಮಾನಿಗಳೂ, ಪ್ರಸಿದ್ಧರಾದ ಕನ್ನಡದ ಪಂಡಿತರೂ, ಸಮಾಜ ಸುಧಾರಕರೂ, ಸನಾತನ ಧರ್ಮಾಭಿಮಾನಿಗಳೂ, ಸ್ವದೇಶ ಪ್ರೇಮಿಗಳೂ, 'ಶಾಲಾ ಪತ್ರಕ' ಮತ್ತು 'ಕರ್ನಾಟಕ ಪತ್ರ'ಗಳ ದಕ್ಷ ಸಂಪಾದಕರೂ, ಗೃಹ ಕೈಗಾರಿಕಾಭಿಮಾನಿಗಳೂ ಆಗಿದ್ದರು. "ಉತ್ತರ ಕರ್ನಾಟಕದ ಆಧುನಿಕ ಗದ್ಯಶೈಲಿಯ ತಳಹದಿಯನ್ನು ಹಾಕಿದ ಮೊದಲಿಗರಲ್ಲಿ ಕಟ್ಟಿಯವರು ಪ್ರಮುಖರು. ಇವರ ಕೈಯಲ್ಲಿ ಕಲಿತ ಕನ್ನಡ ಶಾಲಾ ಶಿಕ್ಷಕರು, ಇವರ ಕ್ರಮಿಕ ಪುಸ್ತಕಗಳನ್ನೋದಿಕೊಂಡ ವಿದ್ಯಾರ್ಥಿಗಳು, ಅರೇಬಿಯನ್ ನಾಯಿಟ್ಸ್ ಮೊದಲಾದ ಕಥಾಸಾಹಿತ್ಯ, ಪತ್ರಿಕೆಯ ನಿಯತಕಾಲಿಕ ಸಾಹಿತ್ಯಗಳನ್ನೋದಿದ ಆಗಿನ ಸಾಮಾಜಿಕರು, ಹೊಸ ಕಾಲದ ಹೊಸ ವಿಚಾರಗಳಿಗೆ ಹುರಿಕಟ್ಟಾಗಿ ಅನುಕೂಲವಾಗುವ ಶೈಲಿಯ ಪರಿಚಯವನ್ನು ಇವರಿಂದಲೇ ಪಡೆದರೆನ್ನುವಲ್ಲಿ ಸಂಶಯವಿಲ್ಲ" ಎಂದು ಡಾ. ದ. ರಾ. ಬೇಂದ್ರೆಯವರು ಹೇಳುತ್ತಾರೆ.

ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಬೇಕೆಂದು ೨೦-೭-೧೮೯೦ರಂದು ಧಾರವಾಡದಲ್ಲಿ ಕೂಡಿದ ಪ್ರಾಸ್ತಾವಿಕ ಸಭೆಯಲ್ಲಿ ಶ್ಯಾಮರಾವ ವಿಠ್ಠಲ ಕೈಕಿಣಿಯವರು ಸಂಘದ ಪ್ರಥಮ ಸಂಸ್ಥಾಪಕ ಅಧ್ಯಕ್ಷರಾಗಿಯೂ, ವೆಂಕಟ ರಂಗೊ ಕಟ್ಟಿಯವರು ಪ್ರಥಮ ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು. ಕಟ್ಟಿಯವರು ಸಂಘದ ಹಿತಕ್ಕಾಗಿ ಅವಿಶ್ರಾಂತವಾಗಿ ದುಡಿದರು.

ಮುಂಬಯಿ ಇಲಾಖೆಯಲ್ಲಿ ವಿದ್ಯಾಖಾತೆಯು ೧೮೨೩ ರಲ್ಲಿ ಪ್ರಾರಂಭವಾಗಿದ್ದರೂ, ಕರ್ನಾಟಕದಲ್ಲಿ ಸರಕಾರೀ ಶಾಲೆಗಳು ಪ್ರಾರಂಭವಾದದ್ದು ೧೮೩೬ ರಲ್ಲಿ ಮಾತ್ರ. ಅದೂ ಧಾರವಾಡ ಹುಬ್ಬಳ್ಳಿಗಳಲ್ಲಿ ಮೊದಲು ಪ್ರಾರಂಭವಾದುವು ಮರಾಠಿ ಶಾಲೆಗಳು. ಮರಾಠಿಯಿಲ್ಲದ ಶುದ್ಧ ಕನ್ನಡ ಭಾಗಗಳಲ್ಲಿಯೂ ಶಾಲೆಗಳಲ್ಲಿ ಮರಾಠಿಯನ್ನೇ ಕಲಿಸಲಾಗುತ್ತಿತ್ತು. "೧೮೫೬ ರಲ್ಲಿ ಕನ್ನಡವೆಂಬುದೊಂದು ಸ್ವತಂತ್ರವಾದ ದೇಶಭಾಷೆಯೆಂದೂ, ಅದು ಕರ್ನಾಟಕದ ಮಾತೃಭಾಷೆಯೆಂದೂ ಸರಕಾರಕ್ಕೆ ತಿಳಿದು ಬರಲು ಇಲ್ಲಿ ಕನ್ನಡ ಶಾಲೆಗಳು ಆರಂಭವಾದವು. ಸರಕಾರೀ ಕಾಗದ ಪತ್ರಗಳನ್ನು ಕನ್ನಡದಲ್ಲಿತ ಬೇಕೆಂದು ಗೊತ್ತಾಗಿ ಬೆಳಗಾವಿಯಲ್ಲಿ ಕನ್ನಡ ಕಲಿಸುವ ಶಿಕ್ಷಕರನ್ನು ತಯಾರಿಸುವ ಒಂದು ನಾರ್ಮಲ್




ವೆಂಕಟ ರಂಗೋ ಕಟ್ಟಿ



ಅರಬ ಭಾಷೆಯಲ್ಲಿದ್ದ ಸುರಸ ಕಥೆಗಳ ಸಂಗ್ರಹವು



ಧೋಂಡೋ ನರಸಿಂಹ ಮುಳಬಾಗಲ




ಮುಳಬಾಗಲರು ಪರೀಕ್ಷೆಯಲ್ಲಿ ದೊರಕಿಸಿದ ಗುಣಗಳು



ಶಾಂತಕವಿಗಳು



ಶಾಂತಕವಿಗಳ ಆರಾಧ್ಯ ದೈವತ-ಸಾತೇನಹಳ್ಳಿಯ ಶಾಂತೇಶ



ಶಾಂತಕವಿಗಳು ಪರೀಕ್ಷೆಯಲ್ಲಿ ದೊರಕಿಸಿದ ಗುಣಗಳು



ಗುರುಪಾದಪ್ಪ ಹೇಳಟ್ಟಿ

ಸ್ಕೂಲನ್ನು ಸರಕಾರದವರು ಆರಂಭಿಸಿದರು. ಆದರೂ ಮರಾಠಿಯ ಮೋಹದೊಳಗೆ ಸಿಲುಕಿಕೊಂಡ ಕನ್ನಡಿಗರ ಕಣ್ಣು ತೆರೆಯಿಸಿ ಮರಮರನೆ ಮರುಗುತ್ತಿರುವ ಕರ್ನಾಟಕ ಜನನಿಯು ಕಣ್ಣೊರಿಸಿದ ಶ್ರೇಯಸ್ಸು ವೈಕುಂಠವಾಸಿ ಭುಜಂಗರಾವ ಹುಯಿಲಗೋಳ, ಅಣ್ಣಾರಾವ ಸವದಿ, ಶೇಷಗಿರಿರಾವ ಚುರಮುರಿ, ಗಂಗಾಧರ ಮಡಿವಾಳೇಶ್ವರ, ಧೋಂಡೋ ನರಸಿಂಹ ಮುಳಬಾಗಿಲ ಮುಂತಾದ ಕನ್ನಡ ವೀರರಿಗೆ ಸಲ್ಲುವದು''[1] ಈ ಕನ್ನಡ ಯೋಧರ ಮಾಲಿಕೆಯಲ್ಲಿ ಕಟ್ಟಿಯವರಿಗೆ ಹಿರಿಯ ಸ್ಥಾನವಿದೆ. ಅವರು ಸರಕಾರದ ಹೆಚ್ಚಿನ ಸ್ಥಾನದಲ್ಲಿದ್ದು ಕನ್ನಡವನ್ನು ಸರ್ವಾಂಗಸುಂದರವಾಗಿ ಮಾಡುವಂತೆ ಪ್ರಯತ್ನಿಸಿದರು.

ಜಂಬುಖಂಡಿ ಎಪ್ಪತ್ತರಲ್ಲಿದ್ದ ರನ್ನನ ಮುದುವೊಳಲನ್ನು ಅರಿಯದವರಾರು ? 'ಕನ್ನಡವ್ ಎರಡು ನೂರರ ಕನ್ನಡವ್, ಮಧುರವ್ಯೋತ್ಪನ್ನವ್ ಸಂಸ್ಕೃತವ್ ಎನೆ' ಮೆರೆದ ನಾಡು ಅದು. ಪೆರ್ದೊರೆಯುಂ ಗಟ್ಟಿಗೆಯುಂ ಮೈತೊಳೆವ ಆ ನಲುನಾಡಿನಲ್ಲಿಯ ಕನ್ನಡ, ಗಂಡು ಕನ್ನಡ. ತಿರುಳಗನ್ನಡ. ಕಾಲವಶದಿಂದ ಅದು ಮರಾಠಿ ಆಳರಸರ ಮೂಲಕ ಮರಾಠಿ ಪ್ರಭಾವಲಯಕ್ಕೆ ಸಿಕ್ಕಿದ್ದರೂ, ಅಲ್ಲಿಯ ಮೂಲಸತ್ವ ಕನ್ನಡದ್ದು. ಇಂಥ ಮಹಾಕವಿ ರನ್ನನ ಜನ್ಮದಿಂದ ಪುನೀತವಾದ ಮುದುವೊಳಲಲ್ಲಿ ವೆಂಕಟ ರಂಗೋ ಅವರು ಕ್ರಿ.ಶ. ೧೮೩೩ ರಲ್ಲಿ ಜನ್ಮವೆತ್ತಿದರು.[2] ವೆಂಕಟ ರಂಗೋ ಅವರದು ಶುದ್ಧ ವೈದಿಕ ಸಂಪ್ರದಾಯದ ಮನೆತನ. ಕಟ್ಟಿಯವರ ಪ್ರಾಥಮಿಕ ಶಿಕ್ಷಣ ಅವರ ಸೋದರ ಮಾವಂದಿರ ಊರಾದ ಬಟಕುರಕಿಯಲ್ಲಿ ಆಯಿತು. ಅಲ್ಲಿಯೇ ಅವರು ವೈದಿಕ ವಿದ್ಯೆಯನ್ನು ಕಲಿತರು. ೧೮ ವರ್ಷಗಳವರೆಗೆ ವೈದಿಕ ವಿದ್ಯೆಯನ್ನು ಕಲಿತನಂತರ ಲೌಕಿಕ ವಿದ್ಯಾರ್ಜನೆಗಾಗಿ ಆವರು ಪುಣೆಗೆ ಹೋದರು. ಅಲ್ಲಿ ಮರಾಠಿ ಅರ್ವಾಚೀನ ಸಾಹಿತ್ಯದ ಚಕ್ರವರ್ತಿಯೆನಿಸಿದ ವಿಷ್ಣುಶಾಸ್ತ್ರಿ ಚಿಪಳೂಣಕರ್ ಅವರ ಪರಿಚಯ ಅವರಿಗೆ ಉಂಟಾಯಿತು. ಆದರಿಂದ ಅವರ ಸಾಂಪ್ರದಾಯಕ ವಿಚಾರಗಳಲ್ಲಿ ಎಷ್ಟೋ ಬದಲಾವಣೆಗಳೂ ಆದವು.

ಪುಣೆಯಲ್ಲಿ ನಾಲ್ಕೈದು ವರ್ಷ ಲೌಕಿಕ ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ, ಅಲ್ಲಿಯೇ ಅವರು ಸರಕಾರೀ ಟ್ರೇನಿಂಗ ಕಾಲೇಜಿನಲ್ಲಿ ನೌಕರಿ ಹಿಡಿದರು. ಅಲ್ಲಿ ಅವರು ಹತ್ತು ವರ್ಷ ಕೆಲಸ ಮಾಡಿದ ಮೇಲೆ, ಅವರನ್ನು ಉತ್ತರ ಕನ್ನಡದ ಹೊನ್ನಾವರಕ್ಕೆ ೨೦ ರೂಪಾಯಿ ವೇತನದ ಮೇಲೆ ನೇಮಿಸಲಾಯಿತು. ಇಲ್ಲಿದ್ದಾಗ ಅವರು ಕನ್ನಡವನ್ನು ಆಳವಾಗಿ ಅಭ್ಯಾಸ ಮಾಡಿದರು. ಅದಕ್ಕಾಗಿ ಸರಕಾರದವರು ಅವರನ್ನು ಬೆಳಗಾವಿಯ ನಾರ್ಮಲ್ ಸ್ಕೂಲಿನಲ್ಲಿ ೮೦ ರೂಪಾಯಿ ಪಗಾರದ ಮೇಲೆ ನೇಮಿಸಿದರು. ಮುಂದೆ ಕೆಲವು ವರ್ಷ ಕನ್ನಡ ಟ್ರಾನ್ಸಲೇಟರರೆಂದು ಕೆಲಸ ಮಾಡಿದ ಮೇಲೆ ಸನ್ ೧೮೭೨ರಲ್ಲಿ ಧಾರವಾಡ ಟ್ರೇನಿಂಗ ಕಾಲೇಜಿನಲ್ಲಿ ವ್ಹಾಯಿಸ್ ಪ್ರಿನ್ಸಿಪಾಲರೆಂದು ನೇಮಕ ಹೊಂದಿದರು. ವೆಂಕಟ ರಂಗೊ ಅವರು ಸರಕಾರೀ ಭಾಷಾಂತರಕಾರರಿದ್ದಾಗ, ಆ ಆ ಅಧಿಕಾರಿಗಳ ಸೀನಿಯಾರಿಟಿ, ಅರ್ಹತೆ, ಮತ್ತು ಪಗಾರ ಹೇಗಿದ್ದವೆಂಬುದನ್ನು ಈ ಕೆಳಗಿನ ಜಂತ್ರಿಯಿಂದ ತಿಳಿದುಕೊಳ್ಳಬಹುದು.

---

೧ ವಾಗ್ಭೂಷಣ– ೧೯೨೪; ಸಂ. ೨೯ ಸಂ. ೨– ಪು. ೨.

೨ ಆದರೆ ಸರಕಾರದ ಖಾತೆಯಲ್ಲಿನ ಅವರ ಸೇವಾದಾಖಲೆಯಲ್ಲಿ ವೆಂಕಟ ರಂಗೊ ಕಟ್ಟಿ ಅವರ ಹುಟ್ಟಿದೂರನ್ನು ಸಾತಾರಾ ಎಂದು ತೋರಿಸಿದೆ. ಅದು ಹೇಗೋ ಅರ್ಥವಾಗುತ್ತಿಲ್ಲ. ಆ ಕಾಲಕ್ಕೆ ಉತ್ತರ ಕರ್ನಾಟಕದ ಹಲವು ವೈಷ್ಣವ ಮನೆತನಗಳು ಸಾತಾರೆಗೆ ಹೋದದ್ದೇನೋ ನಿಜ. ಉದಾಹರಣೆಗೆ, ರಾಮದುರ್ಗದ ಗಜೇಂದ್ರಗಡ ಮನೆತನವೂ ಹೀಗೆಯೇ ಸಾತಾರೆಗೆ ಹೋಯಿತು.

ನಂ.	ಹೆಸರು	ಡಿಗ್ರಿ	ಯುನಿವರ್ಸಿಟಿ / ಕಾಲೇಜ	ಭಾಷೆ	ನೌಕರಿಯ ಹೆಸರು	ಪಗಾರ ತಿಂಗಳ
						ರೂ.
೧.	ಕೆ. ಎಮ್. ಚ್ಯಾಟಫೀಲ್ಡ	ಎಂ. ಎ.	ಆಕ್ಸಫರ್ಡ		ಡಿ. ಪಿ. ಆಯ್.	೨೩೦೦-೦೦
೭.	ಎಫ್. ಕೀಲ್‌ಹಾರ್ನ	ಪಿ. ಎಚ್‌ಡಿ.				೧೧೫೦-೦೦
೮.	ಡಬ್ಲ್ಯು. ಎ. ರಸೆಲ್	ಎಂ. ಎ.	ಆಕ್ಸಫರ್ಡ		ಇ. ಐ. ಎಸ್. ಡಿ.	೧೦೦೦-೦೦ ೧೦೦-೦೦ ೧೧-೧-೯ ——— ೧೨೧೧-೧-೯
೨೨.	ವೆಂಕಟ ರಂಗೋ ಕಟ್ಟಿ ವಯಸ್ಸು ೪೫ ಹುಟ್ಟಿದ ಊರು : ಸಾತಾರಾ	—	ಪೂನಾ ನಾರ್ಮಲ್ ಸ್ಕೂಲ್	ಕನ್ನಡ (ಇ.ಮ.ಸಂ.)	ಕನ್ನಡ ಟ್ರಾನ್ಸಲೇಟರ್	೨೦೦-೦೦
೨೭.	ಭುಜಂಗರಾವ್ ಕೃಷ್ಣ ಹುಯಿಲಗೋಳ (೫೧ : ಹುಯಿಲಗೋಳ)	—	ಎಲಫಿನ್‌ಸ್ಟನ್ ಕಾಲೇಜ; ಡೆಕ್ಕನ್ ಕಾಲೇಜ	ಕನ್ನಡ (ಇ.ಮ.)	ಪ್ರಿನ್ಸಿಪಾಲ್ ಟ್ರೇನಿಂಗ ಕಾಲೇಜ, ಧಾರವಾಡ	೨೦೦-೦೦
೪೧.	ಶ್ರೀನಿವಾಸ ಕೊನ್ಹೇರ ರೊದ್ದ (೩೧ : ಧಾರವಾಡ)	—	ಡೆಕ್ಕನ್ ಕಾಲೇಜ ೧೮೭೦ ಮ್ಯಾಟ್ರಿಕ	ಕನ್ನಡ (ಇ.ಮ. ಸಂ.ತೆ.ಹಿ.)	ಡೆಪ್ಯುಟಿ ಎಜುಕೇಶನಲ್ ಇನಸ್ಪೆಕ್ಟರ, ಧಾರವಾಡ	೧೦೦-೦೦

೧೧೨. ಶ್ರೀನಿವಾಸ ರಾಮಚಂದ್ರ ಸವದಿ (೩೫ : ಬೆಳಗಾವ)	—	ಬೆಳಗಾವ್ ಹಾಯ್‌ಸ್ಕೂಲ್ ೧೮೬೬ ಮ್ಯಾಟ್ರಿಕ್	ಕನ್ನಡ (ಇ.ಮ.)	ವ್ಹಾಯಿಸ್ ಪ್ರಿನ್ಸಿಪಾಲ್ ಟ್ರೇನಿಂಗ ಕಾಲೇಜ, ಧಾರವಾಡ	೧೦೦–೦೦
೧೧೮. ಸಂಗಪ್ಪ ಮಲ್ಲಪ್ಪ ಅಂಕಲೆ (ಜೈನ) (೩೧ : ಬೆಳಗಾವ)	— —	ಬೆಳಗಾವ ಹಾಯ್‌ಸ್ಕೂಲ್ ೧೮೮೯ ಮ್ಯಾಟ್ರಿಕ್	ಕನ್ನಡ (ಇ.ಮ.)	ಹೆಡ್‌ಮಾಸ್ತರ ಇಂಗ್ಲಿಷ ಸ್ಕೂಲ್ ಬೆಳಗಾವ	೧೦೦–೦೦
೨೦೯. ಬಾಬಾಜಿ ವೈ. ಕೆರೂರ (೨೬ : ಕಲಾದಗಿ)	—	ಡೆಕ್ಕನ್ ಕಾಲೇಜ	ಕನ್ನಡ (ಇ.ಸಂ.ಮ.)	ಎ. ಡಿ. ಇ. ಐ. ಧಾರವಾಡ	೭೫–೦೦
೩೧೬. ವೆಂಕಟೇಶ ಭೀಮರಾವ ಭಂಡಿವಾಡ (೨೮ : ಭಂಡಿವಾಡ)	— ಬಿ.ಎ.೧೮೮೯	ಡೆಕ್ಕನ್ ಕಾಲೇಜ	ಕನ್ನಡ (ಇ.ಸಂ.ಮ.)	೧ ಅಸಿಸ್ಟೆಂಟ ಬೆಳಗಾವ ಎಚ್. ಎಸ್.	೫೫–೦೦
೩೪೨. ಶಾಂತವೀರ ರಾಚಯ್ಯ ಕಿತ್ತೂರ (೫೪ : ಸಾಂಗ್ಲಿ ಬೆಳಗಾವ)	—	ಖಾಸಗಿ ಶಾಲೆ ಹಾನಗಲ್	ಕನ್ನಡ (ಸಂ.)	೨ ಅಸಿಸ್ಟಂಟ ಧಾರವಾಡ	೫೦–೦೦
೫೦೩. ದಾಸೋ ಶ್ರೀಧರ ಜೋಶಿ (೩೩ : ಗೋಕಾಕ)	—	ಬೆಳಗಾವ ಹಾಯ್‌ಸ್ಕೂಲ್	ಕನ್ನಡ (ಇಂ.ಮ.)	ಹೆಡ್‌ಮಾಸ್ತರ, ಆಂಗ್ಲೊ ವರ್ನಾಕುಲರ್ ಶಾಲೆ, ಕಿತ್ತೂರ	೪೦–೦೦
೭೬೪. ಧೋಂಡೋ ನರಸಿಂಹ ಮುಳಬಾಗಲ (೩೧ : ಕಿತ್ತೂರ)	—	ಧಾರವಾಡ ಟ್ರೇನಿಂಗ ಕಾಲೇಜ (೨೫ ರೂ. ಸರ್ಟಿಫಿಕೇಟ ಪರೀಕ್ಷೆ)	ಕನ್ನಡ (ಸಂ.ಮ.)	ಹೆಡ್‌ಮಾಸ್ತರ, ಕ್ಯಾನರೀಸ ಸಾಲೆ, ರೋಣ	೩೦–೦೦
೮೨೩. ಗೋಪಾಳ ಶ್ರೀನಿವಾಸ ಟೊಣಪಿ (೩೦ : ಕುರಿಹಳ್ಳಿ)	—	ಬೆಳಗಾವ	ಕನ್ನಡ (ಇ.ಮ.)		೩೦–೦೦

ಕನ್ನಡದಲ್ಲಿ ಗ್ರಂಥ ರಚನೆ ಮಾಡಿದ ಲೇಖಕರ ನೌಕರಿಯ ಸ್ಥಾನಮಾನ ಪನಿದ್ದಿತೆಂಬುದನ್ನು ಮೇಲಿನ ಪಟ್ಟಿಯಿಂದ ಊಹಿಸಬಹುದು. ಡಾಯರೆಕ್ಟರರಾದ ಕೆ. ಎಂ. ಚ್ಯಾಟ್‌ಫೀಲ್ಡ್ ಅವರಿಗೆ ೨೩೦೦-೦೦ ಪಗಾರವಿದ್ದಾಗ, ಎಜ್ಯುಕೇಶನ್ ಇನಸ್ಪೆಕ್ಟರರಾದ ರಸೆಲ್ ಅವರಿಗೆ ೧೨೦೦-೦೦ ಪಗಾರ ವಿದ್ದಾಗ, ಕನ್ನಡದಲ್ಲಿ ಇಷ್ಟು ದುಡಿದ ಶಾಂತವೀರ ಕಿತ್ತೂರ ಅವರಿಗೆ ೫೦-೦೦ ರೂಪಾಯಿ, ಧೋಂಡೊ ನರಸಿಂಹ ಮುಳಬಾಗಲ ಅವರಿಗೆ ೩೦-೦೦ ರೂಪಾಯಿ, ಟೋಣಪಿ ಅವರಿಗೆ ೩೦-೦೦ ರೂಪಾಯಿ ಇದ್ದಿತು. ಕಾರ್ಯಶಕ್ತಿಯು ಅಂತಸ್ಥ ಉತ್ಸಾಹ ಮತ್ತು ಪ್ರತಿಭೆಯನ್ನು ಆಶ್ರಯಿಸಿದೆಯೇ ವಿನಾ, ಪಗಾರ, ಹಣದಂಥ ಹೊರಗಿನ ಪ್ರೇರಣೆಯನ್ನಲ್ಲ. ಇಂಥ ಪರಿಸರದಲ್ಲಿಯೂ ಸಹ, ವೆಂಕಟ ರಂಗೊ ಕಟ್ಟಿಯವರು ೨೦೦-೦೦ ರೂಪಾಯಿ ವೇತನದ ಟ್ರಾನ್ಸಲೇಟರರಾಗಿದ್ದರೆಂದರೆ ಇದು ಅವರ ಕ್ರತು ಶಕ್ತಿಯ ನಿದರ್ಶನವೂ ಆಗಿದೆ.

ಭುಜಂಗರಾಯರ ನಂತರ ವೆಂಕಟ ರಂಗೊ ಅವರು ಧಾರವಾಡದ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರಾಗಿ ಸನ್ ೧೮೭೬ ರಲ್ಲಿ ೩೦೦ ರೂಪಾಯಿ ವೇತನದ ಮೇಲೆ ನಿಯಮಿಸಲ್ಪಟ್ಟರು ಸನ್ ೧೮೭೬ ರಿಂದ ೧೮೯೦ರ ವರೆಗೆ ಅಖಂಡ ೧೪ ವರುಷಗಳವರೆಗೆ ಪ್ರಿನ್ಸಿಪಾಲರೆಂದು ಕೆಲಸ ಮಾಡಿ, ೧೮೯೦ ನೆಯ ಇಸವಿ ಜನೆವರಿ ತಿಂಗಳಲ್ಲಿ ಸೇವಾ ನಿವೃತ್ತರಾದರು.

"ಅಂದಿನಿಂದ ಮುಂದೆ ೧೯ ವರ್ಷಗಳವರೆಗೆ ದೇಶ ಸೇವೆ, ಭಾಷಾ ಸೇವೆ, ಸಮಾಜ ಸೇವೆಗಳಲ್ಲಿ ನಿರತರಾಗಿ ಕನ್ನಡಿಗರಲ್ಲಿ ಉಜ್ವಲವಾದ ಭಾಷಾ ಪ್ರೇಮವನ್ನು ಹುಟ್ಟಿಸಿ, ಸರಕಾರದಿಂದಲೂ ಮಾನ ಮರ್ಯಾದೆಗಳನ್ನು ಹೊಂದಿ, ತಮ್ಮ ೭೬ನೇ ವರ್ಷದಲ್ಲಿ, ೧೯೦೯ನೇ ಇಸ್ವಿಯ ಮೇ ತಿಂಗಳ ೧೨ನೇ ತಾರೀಖಿನ ಬುಧವಾರ ರಾತ್ರಿಯಲ್ಲಿ ಕಾಲಪುರುಷನ ಕರಾಳ ಹೃದಯದಲ್ಲಿ ಅಡಗಿ ಹೋಗಿ ಕೀರ್ತಿ ಶೇಷರಾದರು."[೧]

ಕೇವಲ ಸರಕಾರಿ ನೌಕರಿಯನ್ನು ಮಾತ್ರ ಮಾಡದೆ, ಕಟ್ಟಿಯವರು ಸರಕಾರದ ಆದೇಶದ ಮೇಲೆಗೂ ಮತ್ತು ತಮ್ಮ ಸ್ವಂತ ಪರಿಶ್ರಮ ಮತ್ತು ಉತ್ಸಾಹಗಳಿಂದಲೂ ಕನ್ನಡದಲ್ಲಿ ಅನೇಕ ಗ್ರಂಥ ಗಳನ್ನು ರಚಿಸಿದರು.

"ವಿದ್ಯಾಖಾತೆಯ ಟ್ರಾನ್ಸಲೇಟರರೂ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರೂ ಆಗಿದ್ದಾಗ, ಇವರು ಉತ್ತರ ಕರ್ನಾಟಕದ ವಿದ್ಯಾಖಾತೆಯ ಅಪ್ಪಣೆಯ ಮೇರೆಗೆ ಬರೆದ ಕನ್ನಡ ಕ್ರಮಿಕ ಪುಸ್ತಕಗಳು ಆ ಕಾಲದ ಮೈಸೂರು, ಮಂಗಳೂರು ಪ್ರಾಂತಗಳ ಕ್ರಮಿಕ ಪುಸ್ತಕಗಳಿಗಿಂತ ಭಾಷೆಯ ದೃಷ್ಟಿಯಿಂದಲೂ ಎಷ್ಟೋ ಪಾಲು ಮಿಗಿಲಾಗಿರುವವು. ಕನ್ನಡ ಶಾಲಾ ಪತ್ರಕಕ್ಕೆ ಭಾಷೆಯ ದೃಷ್ಟಿಯಿಂದ ಮಹತ್ವ ಕೊಟ್ಟವರು ಈ ಮಹನೀಯರಿಂದಲೇ ಸರಿ. ಇವರು ರಚಿಸಿದ ಜ್ಯೋತಿಷಶಾಸ್ತ್ರ, ಪದಾರ್ಥ ವಿಜ್ಞಾನಶಾಸ್ತ್ರ, ವನಸ್ಪತಿ ಶಾಸ್ತ್ರ, ಖನಿಜ ಶಾಸ್ತ್ರ, ಲಘು ವ್ಯಾಕರಣ, ಕನ್ನಡ ಕ್ರಮಿಕ ಪುಸ್ತಕಗಳು, ಕವಿತೆಯ (ಪಾಠೋಪಯೋಗಿ) ಪುಸ್ತಕಗಳು- ಇವೇ ಮೊದಲಾದವು ಆ ಕಾಲದ ಕನ್ನಡ ಅಭ್ಯಾಸ ಕ್ರಮದಲ್ಲಿ ವಿಶೇಷ ಬದಲಾವಣೆಯನ್ನುಂಟುಮಾಡಿದವು. ಉತ್ತರ ಕರ್ನಾಟಕದ ಅರ್ವಾಚೀನ ಲೇಖಕ ವರ್ಗಕ್ಕೆ ಇವರೇ ಮಾರ್ಗದರ್ಶಿಗಳಾಗಿ ರಾರಾಜಿಸುತ್ತಿರುವರೆಂದರೆ ಅತಿಶಯೋಕ್ತಿಯಾಗ ಲಾರದು. ಇವರ ಕರ್ನಾಟಕದ ಇತಿಹಾಸವು ಭಾಷೆಯಲ್ಲಿಯೂ ಆ ಕಾಲದ ಮಾನದಂತೆ ವಿಷಯ ದಲ್ಲಿಯೂ ಅತಿ ಮಹತ್ವದ್ದಾಗಿರುವದು. ಅದಕ್ಕೂ ಮೊದಲು ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿ

---

೧ ವಾಗ್ಭೂಷಣ- ಸಪ್ಟಂಬರ ೧೯೨೪ : ಸಂ. ೨೯- ಸಂ. ೨. ಪು. ೩.

ಗಳು ತಮ್ಮ ಮಾತೃಭೂಮಿ ಕರ್ನಾಟಕದ ಇತಿಹಾಸವನ್ನು ಮರಾಠಿಯ ಪುಸ್ತಕದಲ್ಲಿ ಓದಬೇಕಾಗುತ್ತಿತ್ತು." ೧

ಈ ಬಗ್ಗೆ ಬರೆಯುವಾಗ ಡಾ॥ ದ. ರಾ. ಬೇಂದ್ರೆಯವರು "ವೆಂಕಟ ರಂಗೋ ಕಟ್ಟಿಯವರು ಉತ್ತರ ಕರ್ನಾಟಕದ ಇಂದಿನ ಕನ್ನಡ ಗದ್ಯ ಶೈಲಿಗೆ ರೂಪ ಕೊಟ್ಟವರಲ್ಲಿ ಒಬ್ಬರು; ಇವರು ಶಿಕ್ಷಣ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಮನಸ್ಸುಳ್ಳವರು; ರಸೆಲ್‌ರವರ ಸೇನಾನಿಗಳಾಗಿ ಕನ್ನಡ ಚಳವಳಿಗೆ ಕಳೆ ತಂದವರು" ಎಂದು ಹೇಳುತ್ತಾರೆ. ೨

ಆ ಕಾಲದ ಉದಯೋನ್ಮುಖ ಕನ್ನಡ ಲೇಖಕರಿಗೆ ವೆಂಕಟ ರಂಗೋ ಅವರು "ಮಾರ್ಗದರ್ಶಿ" ಗಳಾಗಿರಲಿ ಬಿಡಲಿ; ಸತ್ವ ಮತ್ತು ಗಾತ್ರದ ದೃಷ್ಟಿಯಿಂದಲೂ, ಅವರಿದ್ದ ಸ್ಥಾನಬಲದ ದೃಷ್ಟಿಯಿಂದಲೂ ವೆಂಕಟ ರಂಗೊ ಅವರು ಕನ್ನಡಕ್ಕೆ ಗೈದ ಸೇವೆ ಗಣನೀಯವಾಗಿದೆ.

ಮೇಲೆ ವಿವರಿಸಿದ ಶಾಲಾ ಪಠ್ಯಪುಸ್ತಕಗಳನ್ನಲ್ಲದೆ, ಶ್ರೀಯುತರು ಹಲವಾರು ಸ್ವತಂತ್ರ ಕೃತಿಗಳನ್ನೂ ಬರೆದರು. ಅಖಂಡ ಕರ್ನಾಟಕದ ಭೂಪಟವನ್ನು ಪ್ರಪ್ರಥಮವಾಗಿ ನಿರ್ಮಿಸಿದವರೂ ಅವರೇ. ೩

'ಸವಾಯಿ ಮಾಧವರಾವ್' ಮತ್ತು 'ಆರುಬೆರಳಿನ ಕುರುಹು' ಎಂಬ ನಾಟಕ, 'ನರತನು' ಎಂಬ ಶರೀರಶಾಸ್ತ್ರ ಕುರಿತ ಗ್ರಂಥ, 'ಕರ್ನಾಟಕ ಗ್ಯಾಝಿಟೀಯರ್' ಉದ್ಗ್ರಂಥ, 'ಕರ್ನಾಟಕದ ವರ್ಣನೆಯೂ ಇತಿಹಾಸವೂ' ಎಂಬ ಚಿಕ್ಕ ಇತಿಹಾಸ ಗ್ರಂಥ, 'ವಿಧವಾ ಮುಂಡನ ಅನಾಚಾರ' ಎಂಬ ಶಾಸ್ತ್ರಗ್ರಂಥ, 'ಉಪನ್ಯಾಸ ವಿದ್ಯಾ' ಎಂಬ ಪ್ರಬಂಧ ಗ್ರಂಥ, 'ಬರ್ಥೋಲ್ಡನ ಚರಿತ್ರೆ' ಎಂಬ ಚರಿತ್ರಗ್ರಂಥ, 'ರಸೆಲ್ ಸಾಹೇಬರ ಆಡಳಿತ' ಎಂಬ ಇಂಗ್ಲೀಷಿನಲ್ಲಿ ಬರೆದ ಪ್ರಶಸ್ತಿ ಪುಸ್ತಕ– ಇವೆಲ್ಲ ವೆಂಕಟ ರಂಗೊ ಅವರ ಹರವಾದ ಆಸ್ಥೆಯನ್ನೂ, ವಿದ್ವತ್ತನ್ನೂ, ಮನಸ್ಸಿನ ನಿಲುವನ್ನೂ ತೋರಿಸುತ್ತವೆ.

ಸವಾಯಿ ಮಾಧವರಾವ್ :

ಇದನ್ನು ನೋಡಲು ದೊರಕಲಿಲ್ಲ. ಇದೊಂದು ನಾಟಕ. ಮರಾಠಿ ಭಾಷೆಯಲ್ಲಿ ರಚಿತವಾಗಿರಬೇಕು. ೪

ಆರು ಬೆರಳಿನ ಕುರುಹು :

"ಇದೊಂದು ಸಾಮಾಜಿಕ ನಾಟಕ. ಬಳಿಕೆ ಮಾತಿನ ಶೈಲಿಯನ್ನು 'ಸುಂದರಾ,' 'ರಾಘವೇಂದ್ರರಾವ' ನಾಟಕಗಳಲ್ಲಿಯಂತೆ ಇದರಲ್ಲಿ ಒಳ್ಳೆಯ ಕೆಚ್ಚಿನಿಂದ ಉಪಯೋಗಿಸಲಾಗಿದೆ." ೫

---

೧ ವಾಗ್ಭೂಷಣ– ಸಪ್ಟಂಬರ ೧೯೨೪ ಸಂ. ೨೯ : ಸಂ. ೨– ಪು. ೪.

೨ ೧೯೫೭ ರ ಧಾರವಾಡ ಸಾಹಿತ್ಯ ಸಮ್ಮೇಳನಕ್ಕೆ ಸಾದರ ಪಡಿಸಿದ ಪ್ರಬಂಧ. (ಅಪ್ರಕಟಿತ).

೩ "ಅವರು ಸಿದ್ಧಪಡಿಸಿದ ಕರ್ನಾಟಕದ ನಕ್ಷೆಯು ಮುಂದೆ ಬಂದ ಎಲ್ಲ ನಕಾಶಗಳಿಗೆ ಮಾತೃಸ್ಥಾನದಲ್ಲಿದೆ." ದ. ರಾ. ಬೇಂದ್ರೆ–ಅದೇ.

೪ ಜೀವನ ಶಿಕ್ಷಣ : ವಿಶೇಷ ಸಂಚಿಕೆ– ೧೯೫೮. ಪು. ೩೬.

೫ ದ. ರಾ. ಬೇಂದ್ರೆ– ೧೯೫೭ ರ ಧಾರವಾಡದ ಸಾಹಿತ್ಯ ಸಮ್ಮೇಳನಕ್ಕೆ ಸಾದರ ಪಡಿಸಿದ ಪ್ರಬಂಧ. (ಅಪ್ರಕಟಿತ).

‘ ನರತನು ’

ಇದು ಶರೀರ ಶಾಸ್ತ್ರವನ್ನು ಕುರಿತ ಗ್ರಂಥ. ಇದು ಮರಾಠಿ ಭಾಷೆಯಲ್ಲಿದ್ದಂತೆ ಕಾಣುತ್ತದೆ. ಈ ಪುಸ್ತಕವನ್ನು ನೋಡಲು ಸಿಗಲಿಲ್ಲ.

‘ ಕರ್ನಾಟಕ ಗ್ಯಾಝಿಟಿಯರ ’ (೧೮೯೩) :

ಇದರ ಮುಖಪುಟದಲ್ಲಿ “ ಗ್ಯಾಝಿಟೀಯರು ಮುಂಬಯಿ ಇಲಾಖೆಗೆ ಶೇರಿದ ಕರ್ನಾಟಕ ಭಾಗದ್ದು ಅಥವಾ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳು ಸಹಿತ, ಧಾರವಾಡ, ಬೆಳಗಾವಿ, ವಿಜಾಪುರ, ಕಾನಡಾ ಈ ನಾಲ್ಕು ಜಿಲ್ಹೆಗಳದು ” ಎಂದು ಬರೆದಿದೆ. ಇದನ್ನು ಶ್ರೀಯುತರು ಸರಕಾರದ ಹುಕು ಮಿನ ಮೇರೆಗೆ ಭಾಷಾಂತರಿಸಿದರು. ೧೮೯೩ ರಲ್ಲಿ ಪ್ರಕಟವಾದ ಸುಮಾರು ೬೫೪ ಪುಟದ ಈ ಸಂಪುಟವು ಮಂಗಳೂರಿನ ಕೋಡಿಯಾಲಬೈಲ ಛಾಪಖಾನೆಯಲ್ಲಿ ಮುದ್ರಿತವಾಯಿತು.

ಆ ಕಾಲದ ಜನಜೀವನ, ಆಹಾರ ವಿಹಾರಗಳು, ಶಿಕ್ಷಣ, ಆರ್ಥಿಕ ಪರಿಸ್ಥಿತಿ, ಉದ್ಯೋಗ ವ್ಯವಹಾರಗಳು, ಕರ್ನಾಟಕದ ಇತಿಹಾಸ– ಮೊದಲಾದವುಗಳನ್ನು ತಿಳಿದುಕೊಳ್ಳಲಿಕ್ಕೆ ಇದು ಅಮೋಘ ವಾದ ಗ್ರಂಥವಾಗಿರುತ್ತದೆ.

ವೆಂಕಟ ರಂಗೊ ಅವರ ಶೈಲಿಯ ನಿದರ್ಶನವಾಗಿಯೂ, ಆ ಕಾಲದ ಸ್ಥಿತಿಯ ನಿರೂಪಣೆ ಗಾಗಿಯೂ ಕೆಳಗಿನ ಅವತರಣಿಕೆಯನ್ನು ಕೊಡಬಹುದು :

“ ನಿವಾಸಿಗಳು– ವೈಷ್ಣವರು–

ದೊಡ್ಡ ದೊಡ್ಡ ಊರುಗಳಲ್ಲಿ ಇವರು ಇರುವದೇ ಬಹಳ. ಇವರು ಹಳ್ಳಿಪಳ್ಳಿಗಳಲ್ಲಿ ಬಹು ತರ ಇರುವದಿಲ್ಲ. ಕ್ರಿಸ್ತೀಶಕದ ಹನ್ನೆರಡನೇ ಶತಮಾನದಲ್ಲಿ ಮಧ್ವಾಚಾರ್ಯನೆಂಬ ಘನವಿದ್ವಾಂಸ ನಾದ ವಿರಕ್ತ ಪುರುಷನು ವೈಷ್ಣವ ಮತವನ್ನು ಬಲಗೊಳಿಸಿದನು. ಅದರಿಂದ ಅದಕ್ಕೆ ಮಾಧ್ವಮತ ವೆಂದು ಹೆಸರು ಬಂದದೆ. ಮಧ್ವಾಚಾರ್ಯನಿಗೆ ಸರ್ವಜ್ಞಾಚಾರ್ಯನೆಂತಲೂ ಅನ್ನುವರು........ ಮಾಧ್ವರು ಚೆಲುವರೂ, ಕಸುವುಳ್ಳವರೂ, ವೊಳ್ಳೇ ಮೈಕಟ್ಟುಳ್ಳವರೂ ಇರುತ್ತಾರೆ. ಪಶ್ಚಿಮ ಕಡೆಯ ಮಾಧ್ವರು ಕೆಂಪಗಿರುತ್ತಾರೆ. ಪೂರ್ವದ ಕಡೆಯವರು ಕಪ್ಪು. ಇವರು ಶ್ರೀಮುದ್ರೆಗಳನ್ನೂ ಉದ್ದ ನಾಮಗಳನ್ನೂ ಧರಿಸುವರು........ ” ೧

ಇನ್ನೊಂದು ಉದಾಹರಣೆ :

“ ವರ್ತಮಾನ ಪತ್ರಗಳು–

ಸನ್ ೧೮೮೨–೮೩ ನೇ ವರ್ಷದಲ್ಲಿ ಧಾರವಾಡದಲ್ಲಿ ಧಾರವಾಡ ವೃತ್ತ, ಚಂದ್ರೋದಯ, ಛಾಯಾ ಯೆಂಬ ಮೂರು ವರ್ತಮಾನ ಪತ್ರಗಳಿದ್ದವು. ಧಾರವಾಡ ವೃತ್ತದ ೪೫೦ ಪ್ರತಿಗಳು ಗುರುವಾರ ಹೊರಡುತ್ತಿದ್ದವು; ಚಂದ್ರೋದಯದ ೧೫೦ ಪ್ರತಿಗಳು ಶನಿವಾರ ಹೊರಡುತ್ತಿದ್ದವು; ಛಾಯಾ ಪತ್ರದ ಸ್ವಲ್ಪ ಪ್ರತಿಗಳು ರವಿವಾರ ಹೊರಟು ಬಹುತರ ಧಾರವಾಡದ ಹೊರಗೆ ಹೋಗು ತ್ತಿದ್ದಿಲ್ಲ.

೧ ಗ್ಯಾಝಿಟೀಯರ್ ಪು. ೭೨.

ಬೆಳಗಾವಿಯಲ್ಲಿ ಸದರೀ ವರ್ಷ ಬೆಳಗಾವ ಸಮಾಚಾರವೆಂಬ ಪತ್ರದ ೨೫೦ ಪ್ರತಿಗಳು ಸೋಮವಾರ ಹೊರಡುತ್ತಿದ್ದವು; ಕರ್ನಾಟಕ ಮಿತ್ರವೆಂಬ ಪತ್ರದ ೧೫೦ ಪ್ರತಿಗಳು ಬುಧವಾರ ಹೊರಡುತ್ತಿದ್ದವು; ಜ್ಞಾನಬೋಧಕವೆಂಬ ಪತ್ರದ ೧೫೦ ಪ್ರತಿಗಳು ರವಿವಾರ ಹೊರಡುತ್ತಿದ್ದವು.

ಸದರೀ ವರ್ಷ ಕಲಾದಗಿಯಲ್ಲಿ ಹಿತೇಚ್ಛುವೆಂಬ ಪತ್ರದ ೮೩ ಪ್ರತಿಗಳು ರವಿವಾರ ಹೊರಡುತ್ತಿದ್ದವು. ಈ ವರ್ಷದ ೧೩ ವರ್ಷದ ಪೂರ್ವದಿಂದ ಹೊರಡುತ್ತಿತ್ತು.

ಕಾನಡಾ ಜಿಲ್ಹೆಯಲ್ಲಿ ಸದರೀ ವರ್ಷದಲ್ಲಿ ವರ್ತಮಾನ ಪತ್ರವೇ ಇದ್ದಿಲ್ಲ. "

ಕರ್ನಾಟಕದ ವರ್ಣನೆಯೂ ಇತಿಹಾಸವೂ :

೧೨೦ ಪುಟಗಳ ಈ ಚಿಕ್ಕ ಪುಸ್ತಕದ ಮುಖಪುಟದಲ್ಲಿ ಇಂಗ್ಲಿಷಿನಲ್ಲಿಯೂ ಹೀಗೆ ಬರೆಯಲಾಗಿದೆ :

Description and History of Karnataka
(The Kanarese Country)
Compiled by
Venkat Rango Katti
Kanarese Translator E. D.
(After much research and with great labour)

ಈ ಪುಸ್ತಕದ ಎರಡನೆಯ ಆವೃತ್ತಿ ೧೮೮೭ ರಲ್ಲಿ ಮಂಗಳೂರಿನ ಬಾಸೆಲ್ ಮಿಶನ್ ಛಾಪಖಾನೆಯಲ್ಲಿ ಮುದ್ರಿತವಾಯಿತು.

"After much research and great labour" ಎಂದು ಹೇಳುವಲ್ಲಿ ಅರ್ಥವೂ ಇದೆ.[೧] ಯಾಕೆಂದರೆ, ಭೌಗೋಲಿಕ, ಸಾಮಾಜಿಕ, ಐತಿಹಾಸಿಕ ದಾಖಲೆಗಳು ತೀರ ವಿರಳವಾಗಿ

---

೧ ಈ ಗ್ರಂಥದ ಬಗ್ಗೆ ದಿವಂಗತ ಮುದವೀಡು ಅವರು ಹೀಗೆ ಹೇಳಿದ್ದಾರೆ : "......ವೆಂಕಟ ರಂಗೊ ಕಟ್ಟಿಯವರೂ ಪುಣೆಯ ಟ್ರೇನಿಂಗ್ ಸ್ಕೂಲಿನಲ್ಲಿ ಶಿಕ್ಷಕರಾಗಿದ್ದವರೇ. ಇವರು ಮುಧೋಳದವರಾಗಿದ್ದುದರಿಂದ, ಇವರಿಗೆ ಕನ್ನಡ ಮಾತನಾಡಲು ಬರುತ್ತಿದ್ದುದರಿಂದ, ಕನ್ನಡ ನಾರ್ಮಲ್ ಸ್ಕೂಲಿನಲ್ಲಿ ಇವರಿಗೂ ಸ್ಥಾನ ದೊರೆಯಿತು. ಇಲ್ಲಿಯ ಬೇರೆ ಕನ್ನಡ ಪಂಡಿತರ ಪರಿಚಯ ಸಹವಾಸಗಳಿಂದ ಇವರೂ ಹೊಸಗನ್ನಡ ಶ್ರೇಷ್ಠ ನಿರ್ಮಾಣಕರ್ತರುಗಳಲ್ಲೊಬ್ಬರಾದರು. ಇವರು ಬರೆದ ಆರನೆಯ ಪುಸ್ತಕ, ಲಘು ವ್ಯಾಕರಣ, ಪ್ರಾಕೃತಿಕ ಭೂಗೋಲ, ಮುಂಬಯಿ ಇಲಾಖೆಯ ಹಿಂದುಸ್ಥಾನ ಹಾಗೂ ಜಗತ್ತಿನ ಭೂಗೋಲವಿದ್ಯೆ ಮೂರು ಭಾಗಗಳು ಇನ್ನೂ ಅಲ್ಲಲ್ಲಿ ಕಣ್ಣಿಗೆ ಬೀಳುತ್ತವೆ. ಕನ್ನಡ ಶಾಲೆಯಲ್ಲಿ ಮಹಾರಾಷ್ಟ್ರದ ಇತಿಹಾಸವನ್ನೇ ನಾನು ಕಲಿತದ್ದನ್ನು ಮೇಲೆ ಹೇಳಿದೆನಷ್ಟೇ? ಇತ್ತ ಕಡೆಯ ಪ್ರದೇಶಕ್ಕೆಲ್ಲ ಕಂಪನೀ ಸರಕಾರದ ಆಳಿಕೆಯಲ್ಲಿ ಮೊದಲು ಕೊಡಲಾಗಿದ್ದ 'ದಕ್ಷಿಣ ಮಹಾರಾಷ್ಟ್ರ' ವೆಂಬ ಹಂಡಬಂಡ ಹೆಸರಿನ ಪ್ರಭಾವವೇ ಇದಕ್ಕೆ ಕಾರಣವೆಂಬುದು ಸ್ಪಷ್ಟವಾಗಿದೆ. ಈ ಪ್ರದೇಶವೆಲ್ಲ ಕರ್ನಾಟಕದ ಭಾಗ; ಇಲ್ಲಿ ಶಾಲೆಗಳಲ್ಲಿ ಪ್ರಾಂತಿಕ ಇತಿಹಾಸವೆಂಬುದು ಕರ್ನಾಟಕದ್ದೇ ಕಲಿಸಲಾಗಬೇಕೆಂಬ ಭಾವನೆಯಿಂದ 'ಸಂಕ್ಷಿಪ್ತ ಕರ್ನಾಟಕದ ಇತಿಹಾಸ' ವನ್ನು ಮೊದಲು ಬರೆದವರು ಇವರೇ. ಬೆಳಗಾವಿಯ ನಾರ್ಮಲ್ ಸ್ಕೂಲು, ಟ್ರೇನಿಂಗ್ ಕಾಲೇಜಾಗಿ ಧಾರವಾಡಕ್ಕೆ ಬರಲು ಹುಯಿಲಗೋಳ ಭುಜಂಗರಾಯರು ಪ್ರಿನ್ಸಿಪಾಲರಾಗಿಯೂ ವೆಂಕಟ ರಂಗೊ ಕಟ್ಟಿಯವರು ಕನ್ನಡ ಟ್ರಾನ್ಸಲೇಟರರಾಗಿಯೂ ಇಲ್ಲಿಗೆ ಬಂದ ನಂತರ ಇತ್ತ ಕಡೆಗೆಲ್ಲ ಕನ್ನಡಕ್ಕೆ ಚೆನ್ನಾಗಿಯೇ ಕಳೆಕಟ್ಟಹತ್ತಿತು. ಅಲ್ಲಿಯವರೆಗೂ ಕನ್ನಡ ಶಾಲೆಗಳ ಶಿಕ್ಷಕರೂ ಮೇಲ್ವಿಚಾರಕರೂ ಪರೀಕ್ಷಕರೂ ಬಹುಶಃ ಮರಾಠಿಗರೇ ಇರುತ್ತಿದ್ದರೆಂಬ ಸಂಗತಿಯು ಆಗಿನ ಕಾಲದ ವರಿಷ್ಠಾಧಿಕಾರಿಗಳ ವರದಿಯಲ್ಲಿಯೇ ನಿರ್ದೇಶಿಸಲಾಗಿದೆ." –ಸಂಭಾವನೆ– ಪು. ೧೦೪–೧೦೫.

ದೊರಕುತ್ತಿದ್ದ ಆದಿನ ಕಾಲದಲ್ಲಿ, ಲೇಖಕರು ಅನೇಕ ವಿಧವಾಗಿ ಪರಿಶ್ರಮಪಟ್ಟು ಈ ಗ್ರಂಥವನ್ನು ಶಾಸ್ತ್ರೀಯವಾಗಿ ರಚಿಸಬೇಕಾಯಿತು. ವೆಂಕಟ ರಂಗೊ ಅವರು ಈ ಗ್ರಂಥಕ್ಕಾಗಿ ಹೇಗೆ ವಿಷಯ ಸಂಗ್ರಹಣೆ ಮಾಡಿದರೆಂಬ ಬಗ್ಗೆ ಶಾಲಾಪತ್ರಕದಲ್ಲಿ ಮನೋರಂಜಕವಾದ ಉಲ್ಲೇಖ ದೊರಕುತ್ತದೆ. ಶ್ರೀಯುತರು ಎಲ್ಲ ವಿಭಾಗಗಳಲ್ಲಿಯ ಪಂತೋಜಿಗಳೂ ವಿಷಯ ಸಂಗ್ರಹಣೆ ಮಾಡಬೇಕೆಂದು ಹೇಳಿ, ಅದನ್ನು ವ್ಯವಸ್ಥಿತವಾಗಿ ಪರಿಶೀಲಿಸಿ, ಶಾಸ್ತ್ರೀಯ ರೀತಿಯಿಂದ ಸ್ವೀಕರಿಸಿದರು. ಈ ಬಗೆಗೆ ಹೊರಟ ಪರಿಪತ್ರವನ್ನು ಉಲ್ಲೇಖಿಸಬಹುದಾಗಿದೆ; ಇದರಿಂದ ವೆಂಕಟ ರಂಗೊ ಕಟ್ಟಿಯವರು ಈ ಬಗ್ಗೆ ಎಷ್ಟು ಪರಿಶ್ರಮ ಪಟ್ಟರೆಂಬ ಕಲ್ಪನೆ ಬರುತ್ತದೆ :

ಸರಕ್ಯುಲರ ನೋಟೀಸು

ದಕ್ಷಿಣ ಭಾಗದೊಳಗಿನ ಸಮಸ್ತ ಪಂತೋಜಿಗಳಿಗೆ ಇದರಿಂದ ಹುಕುಮು ಮಾಡಲ್ಪಡುವದೇನಂದರೆ— ಮಿ॥ ವೆಂಕಟ ರಂಗೊ ಕಟ್ಟಿ ಕನ್ನಡ ಟ್ರಾನ್ಸಲೇಟರ ಇವರು ಈಗ ಕರ್ನಾಟಕ ದೇಶದ ಇತಿಹಾಸವನ್ನು ರಚಿಸುವ ಕ್ರಮ ನಡಿಸಿದ್ದಾರೆ. ಅವರಿಗೆ ಸಹಾಯವಾಗುವದಕ್ಕೋಸ್ಕರ ಯೆಲ್ಲ ಮಾಸ್ತರರು ಈ ಕೆಳಗೆ ಬರೆದ ಪ್ರಕಾರ ವರ್ಣನೆಗಳನ್ನು ತಮಗೆ ಸಿಕ್ಕಷ್ಟು ಬರೆದು ಬೇಗಾವಿಯಲ್ಲಿ ಅವರ ಕಡಿಗೆ ಕಳುಹಿಸಬೇಕು.

೧. ತಾವು ಇರುವ ಊರಿನ ವರ್ಣನೆ.
೨. ಅದರಲ್ಲಿ ಯಾವ ಜಾತಿಯ ಜನರು ವಿಶೇಷವುಂಟು.
೩. ಜನರ ಮುಖ್ಯ ಉದ್ಯೋಗವೂ, ಆಹಾರವೂ.
೪. ಅಲ್ಲಿ ಬೆಳೆಯುವ ಮುಖ್ಯ ಧಾನ್ಯವೃಕ್ಷಾದಿಗಳು.
೫. ವ್ಯಾಪಾರ, ಕಾರಖಾನೆಗಳೇನಾದರೂ ನಡೆಯುತ್ತಿದ್ದರೆ ಯಾವ ತರಹದವು ?
೬. ಊರಲ್ಲಿ ಪುರಾತನ ಗುಡಿ ಮೊದಲಾದ ಹಳೆ ಇಮಾರತುಗಳಿದ್ದರೆ, ಅವುಗಳನ್ನು ಯಾರು ಕಟ್ಟಿಸಿದರು ಯೆಂಬ ಮೊದಲಾದ ಬಗ್ಗೆ ತಿಳಿದಷ್ಟು ನಿಜ ವೃತ್ತಾಂತವು ಇ. ಇ.

ಡಬ್ಲ್ಯು. ಎ. ರಸೆಲ್
(ಶಾಲಾಪತ್ರಕ ೧೮೯೩— ಪು. ೧೩೨)

" 'ಕರ್ನಾಟಕ ಗ್ಯಾಝೆಟಿಯರ್' ಮತ್ತು 'ಕರ್ನಾಟಕ ಇತಿಹಾಸ'— ಈ ಎರಡು ಪುಸ್ತಕಗಳು ಕನ್ನಡದ ಮೂರ್ತಿ ಕಣ್ಣಿಗೆ ಕಟ್ಟುವಂತೆ ಕಡೆದು ನಿಲ್ಲಿಸಿದವು" ಎಂದು ಡಾ॥ ದ. ರಾ. ಬೇಂದ್ರೆಯವರು ಹೇಳುತ್ತಾರೆ. (೧೯೫೭— ಸಾಹಿತ್ಯ ಸಮ್ಮೇಲನ ಪ್ರಬಂಧ)

ವಿಧವೆಗಳ ಮುಂಡನ ಅನಾಚಾರವು (೧೮೮೯) :

ವೆಂಕಟ ರಂಗೊ ಕಟ್ಟಿಯವರು ವೀರವೈಷ್ಣವರು. ಸಂಪ್ರದಾಯದ ಕುಟುಂಬದಲ್ಲಿ ಹುಟ್ಟಿದರು. ವೈಷ್ಣವ ಮತದ ತತ್ವಗಳನ್ನು, ಆಚಾರ ವಿಚಾರಗಳನ್ನೂ ಕಟ್ಟು ನಿಟ್ಟಾಗಿ ಪಾಲಿಸಿಕೊಂಡು ಬಂದವರು. ಉದಾಹರಣೆಗೆ, ವೆಂಕಟ ರಂಗೊ ಅವರು ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರಾಗಿದ್ದಾಗ, ಮೊದಲಿನ ಹತ್ತು ವರ್ಷಗಳಲ್ಲಿ ಒಂದೇ ಒಂದು ಸಲ ಕೋರಮ್ ಇಲ್ಲದ್ದಕ್ಕಾಗಿ ಸಭೆ ಮುಂದೆ ಹಾಕಲ್ಪಟ್ಟಿದೆ. ೨೦-೯-೧೮೭೨ರ ದಿವಸ ಕೂಡಿದ ಸಭೆಗೆ ವೆಂಕಟ ರಂಗೊ ಅವರು ಹಾಜರಿರಲಿಲ್ಲ.

ಈ ಬಗ್ಗೆ "ವಾ. ರಾ. ಕಟ್ಟಿ ವೆಂಕಟರಾಯರು ಏಕಾದಶಿಯ ಉಪವಾಸದ ಮೂಲಕ ಬಂದಿದ್ದಿಲ್ಲ" ಎಂದು ಪದವಳಿಯಲ್ಲಿ ನಮೂದಿಸಲಾಗಿದೆ. ಇಷ್ಟು ಕಟ್ಟುನಿಟ್ಟಾಗಿ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದವರು ವೆಂಕಟರಾಯರು. ಅವರ ಭಾವಚಿತ್ರವನ್ನು ನೋಡಿದರೂ ಅವರ ಈ ಸನಾತನ ಪ್ರವೃತ್ತಿ ಸ್ಪಷ್ಟವಾಗಿ ಕಾಣುತ್ತದೆ.

ಹೀಗಿದ್ದರೂ, ಈ ಸಮಾಜದಲ್ಲಿದ್ದ ವಿಧವಾಮುಂಡನವು ವೆಂಕಟರಾಯರ ಮನಸ್ಸಿಗೆ ಬರಲಿಲ್ಲ. ಪ್ರಾಯಶಃ ಇದು ವಿಷ್ಣುಶಾಸ್ತ್ರಿ ಚಿಪಳೂಣಕರರ ಪ್ರಭಾವವಾಗಿದ್ದರೂ ಇರಬಹುದೆಂದು ಕಾಣುತ್ತದೆ. ಅದ್ದರಿಂದ, ಇದನ್ನು ಖಂಡಿಸಿ, ವೆಂಕಟರಾಯರು ವಿಧವೆಗಳ ಮುಂಡನ ಅನಾಚಾರವು ಎಂಬ ಈ ಪುಸ್ತಕವನ್ನು ಬರೆದರು.

ಈ 'ಸದ್ವೈಷ್ಣವ' ಇಂಥ ಪ್ರಗತಿಶೀಲವಾದ ಪುಸ್ತಕವನ್ನು ಬರೆದಿರುವದು ಅವರ ಬುದ್ಧಿ ಪ್ರಾಧಾನ್ಯದ ದ್ಯೋತಕವೇ ಆಗಿದೆ. ೧೫೫ ಪುಟದ ಈ ಪುಸ್ತಕ ೧೮೮೯ ರಲ್ಲಿ ಧಾರವಾಡದ ಜ್ಞಾನ ವರ್ಧಕ ಮುದ್ರಾಯಂತ್ರದಲ್ಲಿ ಮುದ್ರಿಸಲ್ಪಟ್ಟಿತು. ಪುಸ್ತಕದ ಮುಖಪುಟದಲ್ಲಿ ಹೀಗೆ ಹೇಳಿದೆ :

ವಿಧವೆಗಳ ಮುಂಡನ
ಅನಾಚಾರವು
ಧಾರವಾಡ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ
ವೆಂಕಟ ರಂಗೊ ಕಟ್ಟಿ
ಇವರು
ವಿಧವಾ ದುಃಖ ಪರಿಮಾರ್ಜನಾರ್ಥವಾಗಿ
ಬರೆದದ್ದು

———

———

ಧಾರವಾಡದಲ್ಲಿ ಜ್ಞಾನವರ್ಧಕ ಮುದ್ರಾಯಂತ್ರದಲ್ಲಿ
ಮುದ್ರಿಸಲ್ಪಟ್ಟಿತು.
೧೮೮೯

ತಾವು ಕನ್ನಡದಲ್ಲಿ ಬರೆದದ್ದರ ಸಾರಾಂಶವನ್ನು ಲೇಖಕರು ಇಂಗ್ಲಿಷಿನಲ್ಲಿ ಗ್ರಂಥದ ಪ್ರಾರಂಭದಲ್ಲಿ ಕೊಟ್ಟಿದ್ದಾರೆ. ಶ್ರೀಯುತರ ಇಂಗ್ಲಿಷ ಶೈಲಿಯ ನಿದರ್ಶನವಾಗಿ ಕೆಳಗಿನ ಪರಿಚ್ಛೇದವನ್ನು ಕೊಡಬಹುದು :

"From what we have seen..... we are led to believe that the shaving of widows was also borrowed from Buddhism......These (Buddhist)

nuns shaved their heads and wore red cloth like religious men, relinquishing at the same time the short petty coat or kanchuki, the glass beads in their necks, the bangles on their wrists and the red mark on their forehead...... The nuns of Burma at the present day prove the truth of these facts. It may therefore be assumed without fear of contradiction that the present dress of our widows, including the shaving of their heads, is a faithful copy of the Buddhist nuns of yore."

ಈ ಗ್ರಂಥಗಳನ್ನು ಬರೆಯಲಿಕ್ಕೂ ಇದರ ಬಗೆಗೆ ಲೇಖಕರು ಶ್ರಮಿಸಲಿಕ್ಕೂ ಅವರ ಸುಧಾರಣ ಪ್ರಿಯತೆ ಮತ್ತು ತತ್ವಶ್ರದ್ಧೆಗಳೇ ಕಾರಣ. ಆ ಕಾಲದಲ್ಲಿ ಶ್ರೀಯುತರು ಈ ಪುಸ್ತಕವನ್ನು ತಮ್ಮ ಸ್ವಂತ ಖರ್ಚಿನಿಂದ ಮುದ್ರಿಸಿದ್ದಲ್ಲದೆ, ಅದನ್ನು ಎಲ್ಲ ಪತ್ರಕರ್ತರಿಗೂ ಕಳಿಸಿ ಅದರ ಬಗ್ಗೆ ಜಾಹೀರು ಮಾಡಬೇಕೆಂದು ಕೇಳಿಕೊಂಡರು. ಅಷ್ಟೇ ಅಲ್ಲದೆ, ಪುಸ್ತಕದ ಕೊನೆಯಲ್ಲಿ ಒಂದು ಜಾಹೀರ ಪತ್ರಿಕೆಯನ್ನು ಪ್ರಸಿದ್ಧಿಸಿ ಶಕೆ ೧೪೫೦ ರ ಮೊದಲಿನ ಯಾವ ಧರ್ಮ ಶಾಸ್ತ್ರಗ್ರಂಥದಲ್ಲಿಯೂ ವಿಧವಾವಪನಕ್ಕೆ ಶಾಸ್ತ್ರಾಧಾರವಿದ್ದರೆ ತೋರಿಸಿಕೊಡಬೇಕೆಂದೂ, ಹಾಗೆ ತೋರಿಸಿಕೊಟ್ಟವರಿಗೆ ೫೦೦ ರೂಪಾಯಿ ಬಹುಮಾನ ಕೊಡುವುದಾಗಿಯೂ ಸಾರಿದರು.

ಈ ಗ್ರಂಥ ರಚನೆಯ ಕಾರಣವನ್ನು ಶ್ರೀಯುತರು ಹೀಗೆ ಹೇಳಿದ್ದಾರೆ :

" ಈ ವಿಷಯವು ನನ್ನ ಮನಸಿನಲ್ಲಿ ಸೇರಲಿಕ್ಕೆ ಒಂದು ಅತ್ಯಂತ ಖೇದಕಾರಕವಾದ ಸಂಗತಿಯು ಕಾರಣವಾಯಿತು. ಅದು ಹ್ಯಾಗಂದರೆ–

ಸುಮಾರು ಯೇಳೆಂಟು ವರ್ಷಗಳ ಹಿಂದೆ ವೊಬ್ಬ ಸ್ನೇಹಿತನ ಮನೆಯಲ್ಲಿ ಬ್ರಾಹ್ಮಣರ ಭೋಜನವಾಗುತ್ತಿತ್ತು. ಅಲ್ಲಿ ನಾನು ಹೋಗಿದ್ದೆನು. ಯಾವತ್ತು ಜನರು ಕೂಡಿದ ಮೇಲೆ ಯೆಲೆಗಳನ್ನು ಹಾಕುವ ಕಾಲಕ್ಕೆ ನಾನು ಸಹಜವಾಗಿ ನೆರೆದ ಜನರನ್ನು ನೋಡಬೇಕೆಂದು ಪಂಕ್ತಿಯಲ್ಲಿ ಅಡ್ಡಾಡುತ್ತ ಹೋಗುತ್ತಿರುವಾಗ ವೊಂದು ಸ್ಥಳದಲ್ಲಿ ಹತ್ತು ವರ್ಷದೊಳಗಿನ ವಯಸ್ಸುಳ್ಳಂಥ ಹುಡಿಗೆಯರು ಐದಾರು ಜನರು ಯೆಲೆಗಳನ್ನು ಹಾಕಿಕೊಂಡು ಹರಟೆ ಕೊಚ್ಚುತ್ತ ಕೂತಿರುವದನ್ನು ಕಂಡೆನು. ಅವರಲ್ಲಿ ಯೇಳೆಂಟು ವರ್ಷದ ವಿಧವೆಯಾದ ಹುಡಿಗಿಯೊಬ್ಬಳಿದ್ದಳು. ಆ ಬಡ ಹುಡಿಗೆಯ ಕೂದಲನ್ನು ತೆಗೆದಿದ್ದರು; ಕೈಯಲ್ಲಿ ಬಳೆಗಳಿದ್ದಿಲ್ಲ. ಮೈಯಲ್ಲಿ ಕುಬ್ಬಸವಿದ್ದಿಲ್ಲ; ಕೊರಳಲ್ಲಿ ಯೇನೂ ಇದ್ದಿಲ್ಲ.... ....ನಾನು ಬಹು ಕೌತುಕದಿಂದ ಆಕೆಯನ್ನು ನೋಡುತ್ತ ನಿಂತಿರುವಷ್ಟರಲ್ಲಿ ಅತ್ತ ಕಡೆಯಿಂದ ದೊಡ್ಡ ದೊಡ್ಡ ನಾಮಗಳನ್ನೂ ಮುದ್ರೆಗಳನ್ನೂ ಹಚ್ಚಿಕೊಂಡವನೊಬ್ಬ ಬ್ರಾಹ್ಮಣನು ಅಲ್ಲಿಗೆ ಬಂದು ಆ ಅನಾಥ ವಿಧವೆಯನ್ನು ನೋಡಿ ಕೆಕ್ಕರಿಸಿ ಅಂದದ್ದು–

ಬ್ರಾ. :– ಏನೇ, ನೀನು ಇಲ್ಲಿ ಯಾಕೆ ಕೂತಿ ? ಏಳು ಅಲ್ಲಿಂದ.

ಹುಡಿಗೆಯು :– ಯಾಕೋ, ನಿನ್ನದೇನು ಉಪದ್ರ ಹೋಗು, ನಾನು ಇಲ್ಲಿಂದ ಯೇಳುವದಿಲ್ಲ........

ಬ್ರಾ. :– ನೀನು ಮಡಿಯಾದವಳು, ಅವರ ಸಂಗಡ ಕೂಡ್ರಬಾರದು, ಏಳು ಬೇಗ, ಇಲ್ಲದಿದ್ದರೆ ತಳಿಸುತ್ತೇನೆ.

............(ನಾನು ತಿರುಗಿ ಹೋಗಿ ಅಲ್ಲಿ ನೋಡಿದಾಗ) ಅವಳು ಅಲ್ಲಿ ಇದ್ದಿಲ್ಲ; ಬೇರೊಂದು ಮನೆಯಲ್ಲಿ ಆಗಂತುಕರಾದ ಮುದಿ ಹೆಂಗಸರಲ್ಲಿ ವೊಂದು ಮೂಲೆಯೊಳಗೆ ಕತ್ತಲಲ್ಲಿ ಆಕೆ ಅಳುತ್ತ ಊಟಕ್ಕೆ ಕೂತದ್ದನ್ನು ನೋಡಿ ಬಹಳ ಮರುಗಿದೆನು."[೧]

೧ ವಿಧವೆಗಳ ಮುಂಡನ ಅನಾಚಾರವು ೧೮೮೯– ಪು. ೨.

ಇದರಿಂದ ವ್ಯಾಕುಲಿತರಾದ ಲೇಖಕರು ಎಲ್ಲ ಶಾಸ್ತ್ರಗ್ರಂಥಗಳನ್ನು ನೋಡಿ, ಮನು, ಯಾಜ್ಞವಲ್ಕ್ಯ, ಪರಾಶರ, ದಕ್ಷಸಂಹಿತೆ, ವ್ಯಾಸಸಂಹಿತೆ, ಮಹಾಭಾರತ, ರಾಮಾಯಣ, ಔಶನಸ್‌ಸ್ಮೃತಿ, ಅಂಗಿರಸ ಮೊದಲಾದವುಗಳ ಆಧಾರದ ಮೇಲಿಂದ ವಿಧವಾವಪನ ಶಾಸ್ತ್ರಸಮ್ಮತವಲ್ಲ ಎಂದು ಪ್ರಸ್ತಾಪಿಸಿದ್ದಾರೆ. ಇದರಲ್ಲಿ ಶ್ರೀಯುತರ ಪ್ರಕಾಂಡಪಾಂಡಿತ್ಯವನ್ನೂ, ನಿಶಿತವಾದ ತರ್ಕಶಕ್ತಿಯನ್ನೂ, ಸುಧಾರಣಾಪ್ರಿಯತೆಯನ್ನೂ ಕಾಣುತ್ತೇವೆ.

ಸನಾತನಿಗಳಂತೆ ಕಾಣುವ ಕಟ್ಟಿ ವೆಂಕಟರಾಯರು ತಮ್ಮ ಪ್ರಬಂಧದ ಕೊನೆಯಲ್ಲಿ :

"ಆದರೆ ವಿಧವಾವಪನವು ಶಾಸ್ತ್ರವಿರುದ್ಧವಿರುತ್ತದೆಂಬ ಬಗ್ಗೆ ನಾವು ಈ ಪರಿಯಾಗಿ ಕಂಠಶೋಷ ಮಾಡಿದ್ದು ನೋಡಿ, ಕ್ರಿಯಾ ಕರ್ಮಾದಿಗಳನ್ನು ಮಾಡಿಸಿ ಹೊಟ್ಟೆ ಹೊರಕೊಳ್ಳುತ್ತಿರುವಂಥ ಭಿಕ್ಷುಕರು ಇದು ಪಿಷ್ಟಪೇಷಣವಿರುತ್ತದೆಂದೆನ್ನಬಹುದು.......... ಈ ಧರ್ಮಬೋಧಕರು ಮಾಡುವದಿನ್ನೊಂದು ಕಾಯಕವೇನೆಂದರೆ. ಅವರು ಬಹುತರ ವಿಧವೆಗಳ ಗೊಡವೆಗೆ ಹೋಗದೆ, ಅವರ ಅಜ್ಞಾನಿಗಳಾದ ತಾಯಿ ತಂದೆಗಳ ಕಿವಿಯನ್ನು ಊದಿಬಿಡುತ್ತಾರೆ........ಧರ್ಮಬೋಧಕರು ಪರದೆಯ ಮೊರೆಗೆ ಕೂತು ಸೂತ್ರವನ್ನು ಯೆಳೆಯುವ ಕೃತ್ಯ ಮಾತ್ರ ಚಾತುರ್ಯದಿಂದ ಮಾಡುತ್ತಿರುತ್ತಾರೆ."೧

ಕಟ್ಟಿಯವರ ಈ ಸ್ಪಷ್ಟ ನುಡಿ ಯಾವ ಆಧುನಿಕ ಸುಧಾರಣವಾದಿಯ ನುಡಿಗಿಂತ ಕಡಿಮೆ ಶಕ್ತಿಯದಾಗಿದೆ ? ಬೆಳೆಯುವ ಮನಸ್ಸು ಯಾವ ಕಾಲದಲ್ಲಿಯೂ ಒಂದೇ ತರಹವಾಗಿದೆ.

ಕನ್ನಡ ಐದನೆ ಪುಸ್ತಕ

ಕನ್ನಡದಲ್ಲಿ ಅನೇಕ ಕ್ರಮಿಕ ಪುಸ್ತಕಗಳನ್ನು ಶ್ರೀ ಕಟ್ಟಿಯವರು ರಚಿಸಿದರು. ಇವುಗಳಲ್ಲಿಯ ಅನೇಕ ಪಾಠಗಳು ಭಾಷಾಂತರವಾಗಿರಲು ಸಾಕು. ಐದನೆಯ ಪುಸ್ತಕದ ಎರಡನೆಯ ಆವೃತ್ತಿ ೧೮೮೮ರಲ್ಲಿ ಮಂಗಳೂರಿನ ಬಾಸೆಲ್ ಮಿಶನ್ ಛಾಪಖಾನೆಯಲ್ಲಿ ಮುದ್ರಿತವಾಯಿತು. ಪುಟ ಸಂಖ್ಯೆ ೩೧೨. ಕಟ್ಟಿಯವರ ಶೈಲಿಯ ದೃಷ್ಟಾಂತವಾಗಿ ಈ ಕೆಳಗಿನ ಪರಿಚ್ಛೇದವನ್ನು ಉದ್ಧರಿಸಬಹುದು :

ಸೆಂಟ ಬೆರ್ನರ್ದವೆಂಬ ಮಠವು

"ಸ್ವಿತ್ಸರ್‌ಲಂಡ, ಸೆವಾಯಗಳೆಂಬೆರಡು ನಾಡುಗಳ ನಡುವೆ ಆಲ್‌ಪ್ಸವೆಂಬ ಪ್ರಸಿದ್ಧವಾದ ಗುಡ್ಡವದೆ; ಆ ಗುಡ್ಡದ ಮೇಲಿಂದ ಆಚೆ ಕಡೆಗೆ ಹೋಗಬೇಕಾದರೆ, ಜೀವಕ್ಕೆ ಅಪಾಯಪಡಿಸುವಂಥ ಬಿಕ್ಕಟ್ಟಿನ ಘಟ್ಟಗಳುಂಟು; ಅವುಗಳೊಳಗೆ ಗ್ರೇಟ ಸೆಂಟ ಬೆರ್ನರ್ದವೆಂಬದೊಂದು ಘಟ್ಟವದೆ. ಅದರ ತುದಿಯ ಹತ್ತರ ಅದೇ ಹೆಸರಿನದೊಂದು ಮಠವುಂಟು. ಆ ಪ್ರಾಂತದಲ್ಲಿ ಒಮ್ಮೊಮ್ಮೆ ಆಕಾಶದಲ್ಲಿ ಮೋಡವಿಲ್ಲದಾಗ, ಸೂರ್ಯನ ಕಿರಣವು ಬರ್ಫದ ಮೇಲೆ ಬೀಬಿಸಿ ಹೊಳೆಯುವದು; ರಾದೊದೇಂದ್ರನವೆಂಬ ಗಿಡಗಳು ಕೆಂಪು ಹೂಗಳಿಂದ ತುಂಬಿಕೊಂಡು ಬಹು ಚಂದವಾಗಿ ಕಂಗೊಳಿಸುವವು........ಈ ಮಠದೊಳಗೆ ಮಂಕ ಎಂಬ ಜೋಗಿಗಳು, ದಾರಿಕಾರರನ್ನು ಪರಾಮರ್ಶಿಸುವದರಲ್ಲಿ ಬಹು ತತ್ಪರರಾಗಿರುತ್ತಾರೆ; ಅವರಿಗೆ ಸ್ವಲ್ಪವೇ ಹುಟ್ಟುವಳಿಯುಂಟು; ಆದರೂ ಬಂದಂಥ ಹಾದಿಕಾರರನ್ನು ಪ್ರೀತಿಯಿಂದ ಸತ್ಕರಿಸುವರು. ಚಳಿ ಹತ್ತಿ ಗದಗದ ನಡುಗುವವರಾಗಲಿ, ಹೊತ್ತು ಮುಳುಗಿದ ಬಳಿಕ ಇಳಕೊಳ್ಳುವವರಾಗಲಿ, ದಾರಿ ನಡಿದು ದಣಕೊಂಡವರಾಗಲಿ, ಮಠಕ್ಕೆ ಬಂದರೆ, ಜೋಗಿಗಳು ಅವರಿಗೆ ಇಳಿಕೊಳ್ಳಲಿಕ್ಕೆ ಇಂಬು ಕೊಟ್ಟು, ಚನ್ನಾಗಿ ಊಟವನ್ನು ಮಾಡಿಸಿ, ಅವರ ಕೂಡ ಪ್ರೀತಿಯಿಂದ ಮಾತಾಡಿ ಹೊತ್ತುಗಳೆವರು."

---

೧ ಅದೇ ಪು. ೧೫೨–೧೫೩.

ನಮ್ಮ ಜ್ಞಾನ ಮತ್ತು ಅನುಭವಗಳ ಆಚೆಗಿದ್ದ ವಿಷಯಗಳನ್ನು ಎಂಥ ಸರಳ ಸುಂದರ ಶೈಲಿಯಲ್ಲಿ ವರ್ಣಿಸಿದ್ದಾರೆಂಬುದನ್ನು ಮೇಲಿನ ಉದಾಹರಣೆಯಲ್ಲಿ ಕಾಣಬಹುದು.

ಅರಬ ಭಾಷೆಯಲ್ಲಿದ್ದ ಸುರಸ ಕಥೆಗಳ ಸಂಗ್ರಹವು (೧೮೬೩) :

೧೬೮ ಪುಟಗಳ ಈ ಪುಸ್ತಕ ಸನ್ ೧೮೬೩ರಲ್ಲಿ ಮುಂಬಯಿಯ ಎಜ್ಯುಕೇಶನ್ ಸೊಸಾಯಿಟಿಯ ಛಾಪಖಾನೆಯಲ್ಲಿ ಮುದ್ರಿತವಾಗಿದೆ. ಲೇಖಕರ ಹೆಸರು ವೇಂಕಟ ರಂಗೊ ಎಂದಿದ್ದು, ಆಗ ಅವರು ಕನ್ನಡ ನಾರ್ಮಲ್ ಶಾಲೆಯಲ್ಲಿ ಮಾಸ್ತರರಾಗಿದ್ದರು. ಇದು ಮೊದಲನೆಯ ಭಾಗ. ಎರಡನೆಯ ಭಾಗ ಮುದ್ರಿತವಾಯಿತೋ ಇಲ್ಲವೋ ಎಂಬುದು ತಿಳಿಯುವಂತಿಲ್ಲ. ಇದನ್ನು ಲೇಖಕರು ಅಂದಿನ ಶಿಕ್ಷಣ ಇಲಾಖೆಯ ಡಾಯರೆಕ್ಟರರಾಗಿದ್ದ ಮಿ. ಇ. ಆಯ್. ಹಾವರ್ಡ ಅವರಿಗೆ ಗೌರವಪೂರ್ವಕವಾಗಿ ಸಮರ್ಪಿಸಿದ್ದಾರೆ.

ಈ ಪುಸ್ತಕ ಇಂಗ್ಲೀಷಿನಲ್ಲಿದ್ದ ಅರೇಬಿಯನ್ ನಾಯಿಟ್ಸ ಕಥೆಗಳ ಸುಂದರವಾದ ಅನುವಾದ. ಪುಸ್ತಕವನ್ನು ಒಂದು ಸಲ ಓದಲು ಪ್ರಾರಂಭಿಸಿದರೆ, ಓದಿ ಮುಗಿಸುವವರೆಗೆ ಬಿಡಬೇಕೆಂದು ಎನಿಸುವದಿಲ್ಲ. ಇಲ್ಲಿಯ ಮುದ್ರಣವೂ ವೈಶಿಷ್ಟ್ಯಪೂರ್ಣವಾಗಿದ್ದು, ಸನ್ ೧೮೬೩ರ ಸುಮಾರು ಅಚ್ಚು ಮೊಳೆಗಳು ಯಾವ ರೀತಿಯಾಗಿದ್ದವೆಂಬುದನ್ನು ಕಾಣಬಹುದು (ಅನ್ಯತ್ರ ಕೊಟ್ಟ ಭಾವಚಿತ್ರವನ್ನು ನೋಡುವುದು).

ವೃತ್ಯನುಪ್ರಾಸ ಅಂದಿನ ಶೈಲಿಯ ಒಂದು ಲಕ್ಷಣ; ಅದನ್ನು ವೆಂಕಟ ರಂಗೋರವರಲ್ಲಿಯೂ ಕಾಣುತ್ತೇವೆ. ಉದಾಹರಣೆಗೆ– "ಯಾರನ್ನು ಲೆಕ್ಕಿಸದೇ ಸೊಕ್ಕಿನಿಂದ ಮಾಡಿದ್ದು ತಕ್ಕುದೆಂದೆಣಿಸಿ ತಕ್ಕ ಮಂಚದ ಮೇಲೆ ಅಕ್ಕರೆಯಿಂದ ಕುಕ್ಕರಿಸಿಕೊಂಡಳು." (ಪುಟ ೪)

"(ಅವಳು) ಕುಳಿತಿರುವದನ್ನು ಕಂಡು ಕೋಪದಿಂದಡಿಗನನ್ನು ಝಾಡಿಸಿ ಕತ್ತಿಯನ್ನು ತಡವಿಲ್ಲದೇ ಪಡಕೊಂಡು, ನಡ ಹುಬ್ಬುಗಳನ್ನು ಕೂಡಿಸಿ ಸುಡು ಸುಡುವ ಕೆಂಡದಂಥ ಕಣ್ಣುಗಳೊಡನೆ, ಮುಂದೆ ನಡೆದು ಹೋಗಿ, ಸಿಟ್ಟು ತಾಳದೇ ಆ ದುಷ್ಟರನ್ನು ನಟ್ಟ ನಡುವೆ ಕಟ್ಟನೆ ಕಡಿದು ಒಟ್ಟಿಗೆ ಒಂದೇ ಪೊಟ್ಟಿಯೊಳಗೆ ಘಟ್ಟಿಯಾಗಿ ಕಟ್ಟಿ ಆ ಕೊಠಡಿಯ ಕಿಡಕಿಯೊಳಗಿಂದ ಅದನ್ನು ಪಟ್ಟದ ಕೋಟೆಯ ಕಂದಕದೊಳಗೆ ಬಿಟ್ಟುಬಿಟ್ಟನು". ಇದೂ ಅಲ್ಲದೇ "ಅವನು ತನ್ನ ಸೇವಕರಿಗೆ ಖಾನಾ ತಯಾರು ಮಾಡುವದಕ್ಕೆ ಅಪ್ಪಣೆ ಕೊಟ್ಟನು". (ಪುಟ ೧೧) "ಅವನಿಗೆ ಶರೀರ ಭಾನವಿರಲಿಲ್ಲ" (ಪುಟ ೧೯) ಮೊದಲಾದುವೂ ವೈಶಿಷ್ಟ್ಯಪೂರ್ಣ ಪ್ರಯೋಗಗಳು.

ಸಟೀಕ ಜೈಮಿನಿ (೧೮೭೪) :

ಈ ಗ್ರಂಥ ಉಪಲಬ್ಧವಾಗಲಿಲ್ಲ. ಇದನ್ನು ಶ್ರೀ ಕಟ್ಟಿಯವರು ಬರೆಸಿದಂತೆ ಹೇಳಿದೆ. ಸ್ವತಃ ಅವರೇ ಬರೆದರೋ ತಿಳಿಯುವಂತಿಲ್ಲ. ಆದರೆ, ಸನ್ ೧೮೭೪ರ ಅಕ್ಟೋಬರ ತಿಂಗಳ 'ಕನ್ನಡ ಶಾಲಾಪತ್ರಿಕೆ'ದಲ್ಲಿ ಈ ರೀತಿ ಜಾಹೀರಾತು ಪ್ರಕಟವಾಗಿದೆ :

"ವೇಂಕಟ ರಂಗೊ ಕಟ್ಟಿ ಇವರು ಬಹಳ ಶ್ರಮದಿಂದ ಜೈಮಿನಿಯ ಮೊದಲನೇ ನಾಲ್ಕು ಸಂಧಿಗಳಿಗೆ ಟೀಕೆಯನ್ನು ಬರೆಸಿದ್ದು, ನಾವು ಬೆಳಗಾವ ಸಮಾಚಾರ ಛಾಪಖಾನೆಯಲ್ಲಿ ಛಾಪಿಸಿರುತ್ತೇವೆ. ಇದು ಚತುಷ್ಪತ್ರಿ ೧೦೭ ಪುಟಗಳ ಪುಸ್ತಕವಾಗಿರುತ್ತದೆ. ಮೂಲ ವಾರ್ಧಿಕಗಳನ್ನು ಸುವಾಚ್ಯವಾದ ದೊಡ್ಡ ಅಕ್ಷರಗಳಿಂದ ಛಾಪಿಸಿ, ಪ್ರತಿ ವಾರ್ಧಿಕದ ಟೀಕೆಯು. ರಾಜಶೇಖರದ ಮೊದಲನೇ ಆಶ್ವಾಸ

ದಂತೆ, ಅದರ ಕೆಳಗೆ ಬರೆದಿರುತ್ತದೆ. ಟೀಕೆಯಲ್ಲಿ ಮೂಲದೊಳಗಿನ ಪದಗಳನ್ನು ಯೆಷ್ಟು ಮಾತ್ರವೂ ಬಿಡದೆ, ಕೈಯಿಂದ ಹೊಸ ಪದಗಳನ್ನು ಹಾಕದೆ ಗ್ರಂಥಕರ್ತನ ರಚನೆ ಇದ್ದಂತೆಯೇ ರಚನೆಯುಳ್ಳ ವಾಕ್ಯಗಳು ಬರೆಯಲ್ಪಟ್ಟಿರುತ್ತವೆ. ಇದರಿಂದ ಕಲಿಯುವವರಿಗೂ ಮನೋರಂಜನಾರ್ಥವಾಗಿ ಓದು ವವರಿಗೂ ಈ ಪುಸ್ತಕವು ಸರಿಯಾಗಿ ಉಪಯೋಗಿಸುವದೆಂದು ಕೋರುತ್ತೇವೆ.'' ಪುಸ್ತಕದ ಕ್ರಯ ೧೨ ಆಣೆ.

ಕನ್ನಡ ಆರನೇ ಪುಸ್ತಕ (೧೮೪೯) :

''ವೆಂಕಟ ರಂಗೊ ಕಟ್ಟಿ ಇವರಿಂದ ರಚಿಸಲ್ಪಟ್ಟು ಕನ್ನಡ ಟ್ರಾನ್ಸಲೇಟರ್, ಎ. ಡಿ. ಇವರಿಂದ ಸುಧಾರಿಸಲ್ಪಟ್ಟದ್ದು''. ೧೮೪೯ರಲ್ಲಿ ಮಂಗಳೂರು ಬಾಸೆಲ್ ಮಿಶನ್ ಛಾಪಖಾನೆಯಲ್ಲಿ ಛಾಪಿ ಸಲ್ಪಟ್ಟಿತು. ಪುಸ್ತಕದಲ್ಲಿ ವಿಜ್ಞಾನ, ಸಾಹಿತ್ಯ, ತತ್ವಜ್ಞಾನ, ಶರೀರಶಾಸ್ತ್ರ– ಮೊದಲಾದವುಗಳನ್ನು ಕುರಿತ ಪಾಠಗಳಿವೆ. ಪದ್ಯದ ಮಟ್ಟದ ಮಾದರಿಗಾಗಿ, ಗುರು ಶಿಷ್ಯರ ಸಂವಾದ (ಅನುಭವ ರಸಾಯನ) ವೆಂಬ ಪದ್ಯಭಾಗವನ್ನು ಉದ್ಧರಿಸಬಹುದು :

"ಭ್ರಾಂತಿಯೇತಕ್ಕೆ ಬಂದುದು– ವಿವೇಕವಿಲ್ಲದ ಕಾರಣಂ ಬಂದುದು. ವಿವೇಕವೆಂದರೇನು ? ಹಿಂಗಡಿಸಿ ನೋಡುವದು– ಯಾವ ಪದಾರ್ಥಗಳಂ ? ಸರ್ವ ಪದಾರ್ಥಗಳನು– ಸರ್ವಪದಾರ್ಥಂ ಗಳೂ ದೋಷಾಕ್ರಾಂತಂಗಳೇ ? ಅಹುದು– ಇದೆಂತು ? ಯದ್ದೃಷ್ಟಂ ತನ್ನಷ್ಟಮೆಂಬದರಿಂ ನೋಡ ತಕ್ಕ ಪದಾರ್ಥಂಗಳೆಲ್ಲವು ನೋಟದಿಂ ಸಾಧ್ಯಮಾದದರಿಂ ಜಡಮಾಗಿ ಕೆಡುವದಾದುದರಿಂ ದೋಷಾ ಕ್ರಾಂತಂಗಳು. ಕೆಲವು ಸಾಂಸರ್ಗಿಕ ದೋಷಂಗಳು, ಕೆಲವು ಕಾಲಕೃತ ದೋಷಂಗಳು, ಕೆಲವು ಕರ್ಮ ಕೃತ ದೋಷಂಗಳು– ಅವಾವವು ? ವಿಷಮುಷ್ಟಿ, ವತ್ಸನಾಭಿ ಮೊದಲಾದವು ಸಹಜ ದೋಷಂ ಗಳು– ಜೇನಿಗೆ ಬೆರದ ತುಪ್ಪ, ಎಣ್ಣೆಗೆ ಬೆರದ ಕುಂಬಳ, ಸಾಂಸರ್ಗಿಕ ದೋಷಂಗಳು– ಮುಪ್ಪಂ ಕೂಡಿದ ಶರೀರ, ಹುಳಿಯಂ ಕೂಡಿದ ಹಾಲು, ಕಾಲಕೃತ ದೋಷಂಗಳು– ಶುದ್ಧಿಯಿಲ್ಲದ ರಸ ಗಂಧಕ ಪಾಷಾಣಂಗಳೂ, ಮಂತ್ರಾಲೋಚನೆಯಿಲ್ಲದ ರಾಜಕಾರ್ಯವೂ ಕರ್ಮಕೃತ ದೋಷಂಗಳು– .... ಹೊನಯ್ಯ, ಈ ಸ್ಥಳದಲ್ಲಿ ಇವರಾಡಿದ ಮಾತೇ ಸತ್ಯ. ಇಲ್ಲಿರುವ ಪದಾರ್ಥವೇ ಸಕಲ ಪ್ರಪಂಚಗಳ ಲಯ ಜನನಕ್ಕೆ ಕಾರಣವೆಂದು ನೀ ತಿಳಿದರೆ ನಿನ್ನಲ್ಲಿ ಬುದ್ಧಿಯುಂಟು. ಇಲ್ಲದಿದ್ದರೆ ನಿನಗೆ ಬುದ್ಧಿ ಯಿಲ್ಲವು– ಬುದ್ಧಿಯಿಲ್ಲದಿದ್ದರೆ ನಾನೇನು ಮಾಡಬೇಕು ? ಬುದ್ಧಿಗೆಂತು ನೈರ್ಮಲ್ಯಂ ಬರಬೇಕು ?– ಬರುವಂತೆ ಮಾಡಿಕೋ– ಹ್ಯಾಗೆ ಮಾಡಿಕೊಳ್ಳಲಿ ? ಮೊದಲು ದ್ರವ್ಯಶುದ್ಧಿ ಇರಬೇಕು. –ದ್ರವ್ಯ ಶುದ್ಧಿಯೆಂದರೇನು ? ನರಜನ್ಮದಲ್ಲಿ ಪುರುಷನಾಗಿ ಹುಟ್ಟುವದು, ಹುಟ್ಟಿದರೋ, ಸತ್ಕುಲದಲ್ಲಿ ಜನಿಸುವದು– ಅದು ದೊರಕಿದರೋ, ಧರ್ಮದಲ್ಲಿ ಬುದ್ಧಿ ಬರುವದು– ಅದು ಬಂದರೋ, ಪಾಪಂ ಗಳ ಮಾಡದಿರುವದು– ಧರ್ಮ ಬುದ್ಧಿಯೇ ಪಾಪನಿವಾರಕವಾದ ಮೇಲೆ ಪಾಪಂಗಳನೂ ಮಾಡದಿರ ಬೇಕೆಂದು ಯಾಕೆ ಚರ್ವಿತಚರ್ವಣಂ ಮಾಡುತಿದ್ದೀರಿ– ಕೇಳೈ, ತಾನಾಗಿ ಮಾಡದಿದ್ದರೂ, ಇಂದ್ರಿಯ ಗಳ ದೌರ್ಬಲ್ಯದಿಂದಲೂ, ಇಷ್ಟ ಜನಾನುರೋಧದಿಂದಲೂ, ರಾಜೋಪದ್ರವಂಗಳಿಂದಲೂ, ದೇಶ ಕ್ಷೋಭೆ, ಸ್ವಜನದ್ವೇಷ, ಕ್ಷಾಮಕಾಲಂಗಳಿಂದಲೂ, ಮಾಡಬೇಕಾಗಿ ಬರುವದು– ಅಂತಾದ್ದು ಬಂದಾಗ ಪ್ರಾಣತ್ಯಾಗವನ್ನಾದರೂ ಮಾಡಬೇಕಲ್ಲದೆ, ಧರ್ಮತ್ಯಾಗವಂ ಮಾಡಲಾಗದು"[೧] –ಇತ್ಯಾದಿ.

ಜ್ಯೋತಿಃಶಾಸ್ತ್ರವು : (೧೮೫೪)

೧೭೬ ಪುಟಗಳ ಈ ಪುಸ್ತಕವನ್ನು ಶ್ರೀ ಕಟ್ಟಿಯವರು ಮುಖ್ಯವಾಗಿ ಟಿ. ಕುಕ್ ಅವರ ಪುಸ್ತಕದ

೧ ಕನ್ನಡ ಆರನೇ ಪುಸ್ತಕ : ೧೮೪೯; ಪು. ೪೦೬–೪೦೭.

ಆಧಾರದಿಂದ ರಚಿಸಿದರು. ಇದರಲ್ಲಿ ಖಗೋಲ, ಮತ್ತು ರೇಖೀ ಪದ್ಧತಿಗಳ ಮೂಲಕ ಜ್ಯೋತಿಶ್ಶಾಸ್ತ್ರವನ್ನು ವಿವರಿಸಲಾಗಿದೆ. ಈ ಪುಸ್ತಕ ೧೮೭೪ರಲ್ಲಿ ಧಾರವಾಡ ಜ್ಞಾನವರ್ಧಕ ಛಾಪಖಾನೆಯಲ್ಲಿ ಮುದ್ರಿಸಲ್ಪಟ್ಟಿತು. ಇದರ ಉಪೋದ್ಘಾತದಲ್ಲಿಯ ಮಾತುಗಳಿವು :

“ಸರ್ ನಾರ್ಮನ್ ಲಾಕಿಯರನೆಂಬ ಜ್ಯೋತಿಷಿಯು ದಕ್ಷಿಣ ಹಿಂದುಸ್ಥಾನದಲ್ಲಿ ತಾನು ನೋಡಿದ ಚರಿತ್ರೆಯನ್ನು ಬರೆದಿದ್ದಾನೆ. ಅದು ಹ್ಯಾಗೆಂದರೆ— ಸನ್ ೧೮೬೮ನೇ ವರುಷ ಸೂರ್ಯ ಗ್ರಹಣವನ್ನು ನೋಡುವದಕ್ಕೋಸ್ಕರ ಕೆಲವರು ಜ್ಯೋತಿಷಿಗಳು ಗ್ಲಾಸ್ಗೋ ಯೆಂಬ ಹಡಗದಲ್ಲಿ ಕೂತು ಕೊಂಡು ಇಂಗ್ಲಂಡದಿಂದ ಬೇಕಲಕೋಟೆಯಲ್ಲಿಗೆ ಹೋದರು. ಅಲ್ಲಿಯ ಕೋಟೆಯು ಬಹಳ ಎತ್ತರವಾದ ಇದ್ದು ಆ ಕೋಟೆಯ ಮುಂದಿನ ಬೈಲಲ್ಲಿ ಸ್ವಚ್ಛವಾದ ಇಡೀ ಮರಳು ಕಾಣುತ್ತಿತ್ತು. ಆದದರಿಂದ ಆ ಜ್ಯೋತಿಷಿಗಳು ಆ ಬೈಲಲ್ಲಿ ತಮ್ಮ ದುರ್ಬೀನು ಮೊದಲಾದ ಯಂತ್ರಗಳನ್ನು ಒಯ್ದು ಹಚ್ಚಿ ಗ್ರಹಣ ನೋಡುವ ಸಿದ್ಧತೆಯನ್ನು ಮಾಡಹತ್ತಿದರು. ಇತ್ತ ಆ ಜ್ಯೋತಿಷಿಗಳು ಇಳಿದು ಹೋದ ಕೂಡಲೆ ಆ ಪಟ್ಟಣದೊಳಗಿನ ಜನರು ತಮ್ಮ ತಮ್ಮೊಳಗೆ ಕೂಡಿ ಹಾಕಿ ಇನಾಮು ಕೊಡುವದ ಕ್ಯೋಸ್ಕರ ತೋಪುಗಳನ್ನು ಹಾರಿಸ ಹತ್ತಿದರು. ಇದನ್ನೆಲ್ಲ ನೋಡಿ ಆ ಊರೊಳಗಿನ ಜನರು ಅಪಾಯ ಬರಬಹುದೆಂದು ಅನುಮಾನ ಮಾಡಿ ಸ್ವಲ್ಪಮಾತ್ರವೂ ಅವಕಾಶ ಮಾಡದೆ ತಮ್ಮ ಹೆಂಡರು ಮಕ್ಕಳನ್ನು ಪರ ಊರಿಗೆ ಗುಳೆಕಟ್ಟಿ ಕಳಿಸಹತ್ತಿದರು. ಮನೆಯೊಳಗಿನ ವಸ್ತು ಪೂಡವೆಗಳನ್ನು ಹುಗಿದು ಇಡಹತ್ತಿದರು. ಆ ಜ್ಯೋತಿಷಿಗಳೆಲ್ಲ ಸೋಲ್ಜರರಂತೆಯೂ ಅವರು ಹಚ್ಚಿಟ್ಟ ದುರ್ಬೀನುಗಳು ತೋಪುಗಳಂತೆಯೂ ಊರವರು ತಿಳಿದುಕೊಂಡಿದ್ದರು........” ೧

ಉಪನ್ಯಾಸ ವಿದ್ಯಾ (೧೯೦೭) :

ಸುಮಾರು ೧೦೭ ಪುಟದ ಈ ಪುಸ್ತಕವು ಮಂಗಳೂರಿನ ಕೊಡಿಯಾಲಬೈಲ್ ಮುದ್ರಣಾಲಯ ದಲ್ಲಿ ಸನ್ ೧೯೦೭ರಲ್ಲಿ ಪ್ರಕಟವಾಯಿತು.

ಈ ಪುಸ್ತಕದ ಪ್ರಕಟನೆಗೆ ಕಾರಣೀಭೂತರಾದವರು ಶ್ರೀಮಂತ ರಾ. ಸಾ. ಮಲ್ಲಪ್ಪ ಬಸಪ್ಪ ಅಣ್ಣಾ ವಾರದ, ಸೊಲ್ಲಾಪುರ ಅವರು. ಈ ಗ್ರಂಥದ ಪ್ರಸ್ತಾವನೆಯಲ್ಲಿ ಹೀಗೆ ಹೇಳಿದೆ :

“ಉಪನ್ಯಾಸ ವಿದ್ಯದ ಕೊರತೆಯು ನಮ್ಮ ದೇಶ ಬಾಂಧವರಿಗೆ ಬಹಳ ದಿವಸದ ಪೂರ್ವದಲ್ಲೇ ತಿಳಿದಿರುತ್ತದೆ, ಸಂದೇಹವಿಲ್ಲ. ಈ ವಿದ್ಯದ ಪ್ರಯೋಜನವನ್ನು ಅರಿತಿದ್ದರಿಂದಲೇ ಮುಂಬಯಿ, ಪುಣೆ, ಸಾತಾರೆ, ಬೆಳಗಾವಿ, ಮೊದಲಾದ ಪಟ್ಟಣಗಳ ನಾಗರಿಕರು ವಕ್ತೃತ್ವ ಸಭೆಗಳನ್ನು ಸ್ಥಾಪಿಸಿ, ಸಾರ್ವಜನಿಕ ಸಭೆಗಳಲ್ಲಿ ನಾನಾ ವಿಷಯಗಳ ವ್ಯಾಖ್ಯಾನರ ಭಾಷಣಗಳನ್ನು ಮಾಡಿಸಿ, ಯೋಗ್ಯತಾನು ಸಾರವಾಗಿ ಅವರಿಗೆ ಬಹುಮಾನಗಳನ್ನು ಕೊಡುತ್ತಿದ್ದರು. ಈ ಕ್ರಮವು ಕೆಲವು ವರ್ಷಗಳವರೆಗೆ ಮಾತ್ರ ಉಬ್ಬರದಿಂದ ನಡೆದು, “ಆರಂಭ ಶೂರಾಃ ಖಲು ದಾಕ್ಷಿಣಾತ್ಯಾಃ” ಎಂಬ ನಿಂದೆಯಕ್ಕೆ ಸರಿಯಾಗಿ ಮುಂದೆ ಹ್ರಾಸವಾಗುತ್ತ ಬಂತು. ಈಗ ಮುಂಬಯಿ, ಪುಣೆ, ಈ ಎರಡು ಪಟ್ಟಣಗಳಲ್ಲಿ ಮಾತ್ರ ಕ್ವಚಿತ್ತಾಗಿ ವಕ್ತೃತ್ವ ಸಭೆಗಳಾಗುತ್ತವೆ.”

ಅಲ್ಲದೆ ವಕ್ತೃತ್ವ ಕಲೆ ಎಲ್ಲರಿಗೂ ಉಪಯುಕ್ತವಾಗಬೇಕೆಂಬ ದೃಷ್ಟಿಯಿಂದ ಲಕ್ಷ್ಮಣ ತ್ರ್ಯಂಬಕ ಸಾರಂಗಪಾಣಿ ಎಂಬುವರು ಮರಾಠಿಯಲ್ಲಿ ಬರೆದ ‘ವಕ್ತೃತ್ವಕಲಾ’ ಎಂಬ ಪುಸ್ತಕ ಮತ್ತು “ಬೇರೆ ಇಂಗ್ಲೀಷ ಸಂಸ್ಕೃತ ಪುಸ್ತಕಗಳ ಆಧಾರದಿಂದಲೂ, ಈ ಗ್ರಂಥವು ರಚಿಸಲ್ಪಟ್ಟಿರುತ್ತದೆ.”

೧ ಜ್ಯೋತಿಶಾಸ್ತ್ರದ ಉಪೋದ್ಘಾತ : ಪು. ೧-೨.

ವಕ್ತೃತ್ವಕಲೆ ನೈಸರ್ಗಿಕ ಸಿದ್ಧಿಯೇನೋ ನಿಜ; ಆದರೂ, ಪ್ರಯತ್ನದಿಂದಲೂ ಮನುಷ್ಯ ಈ ವಿದ್ಯೆಯನ್ನು ಸಾಧಿಸಬಹುದಾಗಿದೆ.

ಶತೇಷು ಜಾಯತೇ ವೀರ:
ಸಹಸ್ರೇಷು ಚ ಪಂಡಿತ:
ವಕ್ತಾದಶಸಹಸ್ರೇಷು
ದಾತಾ ಭವತಿ ವಾ ನವಾ ॥ ಎಂಬಂತೆ ದಶಸಹಸ್ರದಲ್ಲಿ ಒಬ್ಬ ವಕ್ತಾ ಹೊರಡುತ್ತಾನೆ. ವಾಗ್ಮಿ ಸಮಯಕ್ಕೆ ತಕ್ಕಂತೆ ಮಾತಾಡಬೇಕು. ಮಧುರ ಸ್ವಭಾವದವನಾಗಿರಬೇಕು. ಚೆನ್ನಾಗಿ ವೇಷಭೂಷಣ ಧರಿಸಿರಬೇಕು. ತನ್ನ ಭಾವನೆಗಳನ್ನು ಯುಕ್ತವಾದ ಅಭಿನಯದಿಂದ ವ್ಯಕ್ತಪಡಿಸುವಂತಿರಬೇಕು. ವಿನೋದ, ಭಾಷಣಕ್ಕೆ ಮಸಾಲೆ ಹಾಕಿದ ಹಾಗೆ. ಅದು ಭಾಷಣದ ಸ್ವಾದ.

“ಪರರನ್ನು ನಗಿಸುವಂಥ ವಿನೋದ ಸ್ವಭಾವವು ಮಾತುಗಾರಿಕೆಯೊಳಗೆ ಬರುತ್ತದೆ. ವಿನೋದದ ನುಡಿಗಳಿಗೆ ಎಲ್ಲರೂ ಮೆಚ್ಚುವರು. ಸುಶ್ರಾವ್ಯವಾದ ಸ್ವರದಿಂದ ಸಮಯೋಚಿತವಾಗಿ ಮಾತಾಡುವವನ ಭಾಷಣಗಳಲ್ಲಿ ಅಲ್ಲಲ್ಲಿಗೆ ಯೋಗ್ಯವಾದ ಅಭಿನಯವೂ, ವಿನೋದೋಕ್ತಿಗಳೂ, ಬೆರಿಸಲ್ಪಟ್ಟರೆ, ಸುಂದರ ಸ್ತ್ರೀಗೆ ಬೆಲೆಯುಳ್ಳ ಆಭರಣಗಳನ್ನಿಡಿಸಿದಂತೆ ಅವನ ಉಪನ್ಯಾಸವು ಮನೋಹರವಾಗುವದು. ಈ ಪ್ರಕಾರದ ಸ್ವಭಾವಗುಣಗಳುಳ್ಳ ಮನುಷ್ಯನು ಉಪನ್ಯಾಸಕ್ಕೆ ಬೇಕಾಗುವ ಬಂಡವಲು ತಕ್ಕೊಂಡೇ ಹುಟ್ಟಿರುತ್ತಾನೆಂದು ಹೇಳಬಹುದು.” ೧

ಭಾಷಾ ಮಾತೆಯ ದೇಹ ಸೌಂದರ್ಯವನ್ನು ಹೀಗೆ ವರ್ಣಿಸಲಾಗಿದೆ :

“ಭಾಷೆ ಎಂಬ ಮಾತೆಯನ್ನು ಸಭಾಸ್ಥಾನದಲ್ಲಿ ಆರಾಧಿಸುವದಕ್ಕೋಸ್ಕರ ಶೃಂಗರಿಸುವ ಕ್ರಮದಲ್ಲಿ ಸ್ವರವೆಂಬ ನತ್ತು ಇಡಿಸಿದೆವು; ಅಭಿನಯವೆಂಬ ಬುಗುಡಿ, ವಾಲಿ ಮುಂತಾದ ಕರ್ಣಾಭರಣಗಳನ್ನೂ ಮಾತುಗಾರಿಕೆ ಎಂಬ ಶಿರೋಭೂಷಣಗಳನ್ನೂ ಹಾಕಿದೆವು. ಸಾಮತಿಗಳು, ಗೆಜ್ಜೀ ಟಿಕ್ಕಿ, ಸರಿಗೆ, ಮುತ್ತಿನ ಸರ, ಮುಂತಾದ ಕಂಠಾಭರಣಗಳಾದವು. ನವರಸಗಳೆಂಬ ಕಂಕಣ ಮೊದಲಾದ ಹಸ್ತಾಭರಣಗಳನ್ನು ಹಾಕಿ, ಅಲಂಕಾರಗಳೆಂಬ ಬಹು ಮೌಲ್ಯವಾದ ಉಡಿಗೆ ತೊಡಿಗೆಗಳಿಂದ ಭಾಷಾ ಮಾತೆಯನ್ನು ಅಲಂಕರಿಸಿದೆವು. ಇನ್ನು ಉಪನ್ಯಾಸ ವಿಷಯಗಳೆಂಬ ಮಂಗಳಸೂತ್ರ, ಕುಂಕುಮಗಳೆಂಬ ಸೌಭಾಗ್ಯಾಲಂಕಾರಗಳನ್ನು ವಿಂಗಡಿಸುತ್ತೇವೆ.”

ಬೇಸರ ತರಿಸುವುದು ಕಲೆಗೆ ಹಾನಿಕರ ಎಂದು ಡಾ॥ ಜಾನ್ಸನ್ ಹೇಳುತ್ತಾರೆ. ವಕ್ತೃತ್ವದಲ್ಲಿಯಂತೂ ಇದು ತುಂಬಾ ಹಾನಿಕಾರಕ. ಭಾಷಣ ವಿಫಲವಾಯಿತೆಂದು ಹೇಳಲಿಕ್ಕೆ ಶ್ರೋತೃಗಳ ಮುಖವೇ ಕೈಗನ್ನಡಿ. ಅವರು ಬೇಸರಿಯ ಹತ್ತಿದರೋ, ಭಾಷಣಕಾರ ಭಾಷಣವನ್ನು ನಿಲ್ಲಿಸಲೇ ಬೇಕು. “ಸುಶಿಕ್ಷಿತರೇ ತಮ್ಮ ತಮ್ಮೊಳಗೆ ಹರಟೆ ಹಚ್ಚಿದರೆ ಉಪನ್ಯಾಸವು ಹಾಳಾಯಿತೆಂದೆನ್ನಲಿಕ್ಕೆ ಅಡ್ಡಿ ಇಲ್ಲ.” ಕಟ್ಟಿಯವರ ಮೇರೆಗೆ ಸರಕಾರೀ ಅಧಿಕಾರಿಗಳು ಅನೇಕ ಸಲ ವಕ್ತೃತ್ವ ಕಲೆಯಲ್ಲಿ ವಿಫಲರಾಗುವದುಂಟು.

“ಸನಿಕೆಯಿಂದ ಸಂಬಳ ಪಡೆಯುವಂಥ ಸರಕಾರೀ ಅಧಿಕಾರಸ್ಥರಲ್ಲಿ ತಾವು ಬುದ್ಧಿವಂತರೆಂದು ದುರಹಂಕಾರವು ವಾಡಿಕೆಯಾಗಿ ನೆಲೆಗೊಂಡಿರುತ್ತದೆ. ಕಚೇರಿಯಲ್ಲಿ ತಮ್ಮ ಅಮಲು ನಡೆದಂತೆ

---

೧ ಉಪನ್ಯಾಸ ವಿದ್ಯಾ : ೧೯೦೭, ಪು. ೧೫.

ಸಭೆಯಲ್ಲಿಯೂ ನಡೆಸುಲಿಕ್ಕೆಬೇಕೆಂದು ಅವರ ಹಟವಿರುತ್ತದೆ. ಅಂಥವರು ಉಪನ್ಯಾಸ ಮಾಡಲಿಕ್ಕೆ ಎಷ್ಟು ಮಾತ್ರವೂ ತಕ್ಕವರಲ್ಲ." ೧ ಅನೇಕ ವರ್ಷಗಳ ವರೆಗೆ ಸ್ವತಃ ಸರಕಾರೀ ಅಧಿಕಾರಿಗಳಾಗಿದ್ದ ಶ್ರೀ ಕಟ್ಟಿಯುವರ ಮುಖದಿಂದ ಹೊರಟ ಈ ಉದ್ಗಾರ ಮನನೀಯವಾಗಿದೆ. ವಕ್ತೃತ್ವ ಶೈಲಿಯ ಬಗೆಗೆ ಹೇಳುವಾಗ, ಸಂಸ್ಕೃತ ಶಬ್ದಗಳಿರಬೇಕೆಂದೂ, ಮರಾಠಿ ಹಿಂದುಸ್ತಾನಿ ಶಬ್ದಗಳಿರಬಾರದೆಂದೂ ಹೇಳುತ್ತಾರೆ :

"ಪ್ರೌಢತ್ವಕ್ಕೂ ತೊಡಕುಳ್ಳ ಮನೋಭಾವನೆಗಳನ್ನು ಪ್ರಕಟಿಸಲಿಕ್ಕೂ ಸಂಸ್ಕೃತ ಶಬ್ದಗಳಿಂದ ಒಳಿತಾಗಿ ಸಹಾಯವಾಗುತ್ತದೆ. ಆದರೆ ಮರಾಠೀ ಹಿಂದುಸ್ತಾನೀ ಶಬ್ದಗಳಿಗೆ ಸಾಧಿಸಿದಷ್ಟು ಮಟ್ಟಿಗೆ ಬಹಿಷ್ಕಾರ ಹಾಕಲಿಕ್ಕೆ ಬೇಕು. ಯಾಕಂದರೆ, ಆ ಭಾಷೆಗಳ ಸ್ವರಕ್ಕೂ ರಚನೆಗೂ ಎಷ್ಟು ಮಾತ್ರವೂ ಹೊಂದಿಕೆಯಾಗುವದಿಲ್ಲ." ೨

ಬರ್ಥೋಲ್ಡನ ಚರಿತ್ರೆ :

ಈ ಗ್ರಂಥವನ್ನು ಶ್ರೀ ಕಟ್ಟಿಯುವರು ಮರಾಠಿ ಭಾಷೆಯಿಂದ ಕನ್ನಡಿಸಿದರು. "ತಮ್ಮ ಕಾಲದ ಕಥಾಸಾಹಿತ್ಯಾಭಿರುಚಿಗಾಗಿಯೂ, ವಿನೋದವೃತ್ತಿ ಪರಿಪುಷ್ಟಿಗಾಗಿಯೂ ಬರ್ಥೋಲ್ಡನೆಂಬ ವಿದೂಷಕನ ಹಾಸ್ಯಮಯ ಕತೆಗಳನ್ನು ಅವರು ಕನ್ನಡಿಸಿದರು" ಎಂದು ಡಾ॥ ದ. ರಾ. ಬೇಂದ್ರೆಯುವರು ಹೇಳುತ್ತಾರೆ. ಪ್ರಾಯಶಃ "ಬರ್ಥೋಲ್ಡನು ನಾಯಿಗಳ ಕೈಯೊಳಗಿಂದ ಪಾರಾದದ್ದು" ಎಂಬ ಕ್ರಮಿಕ ಪುಸ್ತಕದಲ್ಲಿಯ ಪಾಠ ಈ ಪುಸ್ತಕದಿಂದಲೇ ತೆಗೆದುಕೊಂಡದ್ದಾಗಿರಬೇಕು.

ದಿನಚರಿ (೧೮೬೫–೧೮೭೫)

ವೆಂಕಟ ರಂಗೋ ಕಟ್ಟಿಯುವರು ಸನ್ ೧೮೬೫ ರಿಂದ ೧೮೭೫ ರ ವರೆಗಿನ ಹಲವು ವಿಷಯುಗಳ ಉಲ್ಲೇಖವಿದ್ದಂಥ, ತಮ್ಮ ದಿನಚರಿಯನ್ನು ಬರೆದಿಟ್ಟಿದ್ದಾರೆ. ಅವರು ಇದರಲ್ಲಿ ಸಮಗ್ರವಾಗಿ, ವಿವರಪೂರ್ಣವಾಗಿ ಬರೆದಿರದೆ, ಅಲ್ಲಲ್ಲಿ ಹಲವು ವಿಷಯುಗಳನ್ನು ಕುರಿತು ಉಲ್ಲೇಖ ಮಾಡಿದ್ದಾರೆ. ಇದು ಪೆನ್ಸಿಲಿನಿಂದ ಬರೆಯಲ್ಪಟ್ಟದ್ದಾಗಿದೆ. ಶ್ರೀಯುತರ ವ್ಯವಹಾರ ಜ್ಞಾನ, ಮುದ್ರಣದ ಪೊಳೆಗಳನ್ನು ಸಿದ್ಧಗೊಳಿಸುವಲ್ಲಿ ಅವರು ವಹಿಸಿದ ಪಾತ್ರ, ಅಂದಿನ ಕನ್ನಡ–ಮರಾಠಿ ಭಾವನೆಯ ತೀವ್ರತೆ, ರಾಷ್ಟ್ರೀಯ ಪ್ರಜ್ಞೆ, ಅವರ ವಾಚನದ ಆಳ ಮತ್ತು ವೈವಿಧ್ಯ, ನೈಸರ್ಗಿಕವಾದ ಕುತೂಹಲಗಳ ದೃಷ್ಟಿಯಿಂದ ಇಲ್ಲಿಯ ಹಲವು ಉಲ್ಲೇಖಗಳನ್ನು ಗಮನಿಸುವಂತಿದೆ. ಫ್ರಾನ್ಸಿಸ್ ಬೇಕನ್‌ನ ಬಗೆಗೆ 'He took all knowledge for his province' ಎಂದು ಹೇಳುವುದುಂಟು. ಕಟ್ಟಿಯುವರ ದಿನಚರಿಯನ್ನು ಓದಿದಾಗ, ಇದೇ ಭಾವನೆ ಓದುಗರಲ್ಲಿ ಉಂಟಾಗದೆ ಇರದು. ಈಗ ನಾವು ಹಲವು ಉಲ್ಲೇಖಗಳನ್ನು ಗಮನಿಸಬಹುದು :

"There are 3 stages of knowing a man- 1 the first occasion of conversing with- 2 continued correspondence with 3- actually living together. The last alone appears to give a thorough knowledge. It

---

೧ ಉಪನ್ಯಾಸ ವಿದ್ಯಾ : ೧೯೦೭, ಪು. ೪೪.

೨ ಅದೇ ಪು. ೪೭.

appears, however, possible that a man may successfully conceal his bad part of nature from one with whom he has put up together for years."

"I thank Lord Bacon whose moral essays I happenned to read this morning. Among many other most striking principles I have found these golden letters–

Death is made more terrible than it is by its attendant circumstances, the surrounding weak friends etc......

Resolved, Lord Bacon's essays be.. ...made the subject of my study when the mind is calm and quiet."

5th Feb. 1865

"A most expedient measure to remedy evil of wrong and unjust treatment of the poor Rayat or Natives at large from the Collectors, Magistrates and Judges is to appoint natives as official Assistants to these officers. These Assistants must be well educated, should pass searching examinations in Laws both Civil and Criminal, must possess thorough knowledge of the language of the district in which to be appointed and they should be able to write correctly in English."
–ಇತ್ಯಾದಿ.[೧]

ಸನ್ ೧೮೬೫ ರ ಮಾರ್ಚ ತಿಂಗಳಸುಮಾರು ಶ್ರೀಯುತರಿಗೆ ತೊಂದರೆದಾಯಕವಾದ ಹಾಗೆ ಕಾಣುತ್ತದೆ.

10th March

Many troubles during the interval– the chief to be noted are–

1. The most oppressing correspondence on account of the Depot during this time.

2. A letter to the Educational record against the..... etc.

3. Mr. Little's attack on account of Timmappa's appointment at Butcul in which case I was held guilty almost unreasonably.

4. My own health suffered much by a severe cough.

5. An application for promotion and in its connection correspondence with Native opinion.

ಈ ಕೆಳಗಿನ ಉಲ್ಲೇಖ ಲೇಖಕರ ದೇಶಾಭಿಮಾನವನ್ನೂ ಅವರ ಚಾಣಾಕ್ಷತನವನ್ನೂ ಸೂಚಿ

---

೧ ಇದರಲ್ಲಿ ಶ್ರೀಯುತರ ಆಡಳಿತ ದೃಷ್ಟಿಯನ್ನೂ ಕಾಣಬಹುದು.

ಸುತ್ತದೆ. ಭಾರತದ ಪ್ರಥಮ ಸ್ವಾತಂತ್ರ್ಯ ಯುದ್ಧ ಮುಗಿದ ಎಂಟೇ ವರ್ಷಗಳಲ್ಲಿ ಇದು ಬರೆಯಲ್ಪಟ್ಟುದನ್ನು ಗಮನಿಸಬೇಕು :

11th March 1865

"It would be a blessing, if any one undertakes to collect facts connected with the tyranny, oppression, mismanagement, senselessness of English Officers– A book should be prepared wherein the contrariness of English Law to its spirit and justness and impartiality should be clearly shown– such a book is not impossible, nay, not even difficult to be prepared. The man that (is) willing to attempt this should find out a correspondent in each Zilla town— such correspondent be paid if necessary– Through him information regarding the present and past bad Zilla Officers can earlier be obtained. The information must be as correct and definite as possible. This can be achieved within the expenditure of Rs. 1000/-. Besides these informations public reports and newspapers of past time will give abundant information.

Such a book when ready, both in Marathi and in English should be spread throughout India and England gratis, if possible and I am sure it will never fail to produce salutary results."

ಮೇಲಿನ ಉಲ್ಲೇಖದಲ್ಲಿ ಶ್ರೀಯುತರ ಸಾರ್ವಜನಿಕ ಹಿತರಕ್ಷಣ ದೃಷ್ಟಿಯನ್ನೂ, ಸ್ವದೇಶಾಭಿಮಾನವನ್ನೂ ಕಾಣುತ್ತೇವೆ. ಈಗ ನೂರು ವರ್ಷಗಳ ಹಿಂದೆ ಶ್ರೀಯುತ ಕಟ್ಟಿಯವರು ಹೇಳಿದ ಈ ಮಾತುಗಳು ಇಂದಿಗೂ ಅವಶ್ಯವೆಂದು ಕಂಡುಬರುತ್ತವೆ.

16th June 1865

" ....

Thanks to B. Luxman for his advice to translate Law of Contract from Broom's Commentaries... I am now reading with interest and hope to succeed in my object in view.

A book containing stories exhibiting wonder and related as facts would be of great public utility......

Those that are good writers only, and are not good orators, appear to possess no ready wit.

Quick understanding keeps a man often ignorant... ..

He, that talks most does least."

ಇದು ಆಗಸ್ಟ–ಸಪ್ಟೆಂಬರ ೧೮೬೬ ರ ಉಲ್ಲೇಖ : ತಮ್ಮ ಬಗ್ಗೆಯೇ ಶ್ರೀಯುತರು ಯಾವ ಆತ್ಮವಿಶ್ಲೇಷಣೆಯ ದೃಷ್ಟಿಯಿಂದ ನೋಡಿಕೊಂಡರೆಂಬುದನ್ನೂ ಇದರಲ್ಲಿ ಕಾಣುತ್ತೇವೆ :

"I arrived in Bombay via Pandhurpore on 13th– was the next day employed as 2nd Shirastedar in the High Court. I felt the work very easy till the 2nd Court began– but on 12 August, the Hd. Shirastedar being on leave, I occupied "his place" and was called "Stupid man" by West for my not understanding his pronunciation of the word फर्द as farrad. This accident dispirited me totally and was on the point of resigning. But hoped for better prospects in the 2nd Court (which) began after two or 3 days. This court was conducted by me quietly but Newton's dislike for Canarese was excited already by Dhirajlal who was interested in Jagannath. Newton (a man naturally a shame to the Bench) often accused me of groundless faults and I was again disgusted with the service.

This position afforded however best opportunity to notice my own defects– want of quick perception and ready memory and inability to understand Englishman's conversation clearly. I have almost been convinced that I am not a man that will please a European by my immediate conversation.

I had to quarrel with Virabhadra for finding out his faults in translations but acquired in Gururao a true friend there.

My private circumstances were also very bad. I was from the very first day sick by ......, fell in friendship with ......"

ಶ್ರೀಯುತರ ವಿಜ್ಞಾನ ವಿಷಯಕ ಕುತೂಹಲವನ್ನು ಇಲ್ಲಿ ನೋಡಬಹುದು :

12–2–1867

"New clothes can be prepared from rags, as the fibres of cotton do not lose their tenacity although worn out– a worn out cloth loses in fact nothing but its weight or quantity, which is the only thing that is lost."

"Big trees can be removed from one place to another without causing the least injury. To do this we are only required to take care that the sucking power of some of its roots is not destroyed which is an easy thing."

"We must not hurt others– this is the only principle of our life that exempts us from censure from posterity."

5th July 1867

Curiosities of Nature.

1. Why our thinking is bright when we go to stools?
2. Why are we troubled by dreadful dreams when we sleep with one hand on our breast..... Why are the signs of natural language the same in all men?

19th July 1867

Books read, that I now recollect scientific.

1 Lardners mission.
2. Natural P of L useful knowledge.
3. Martins Natural and chambers information.
4. Das chemistry.
5. Sullivan's Geography.
6. Thomson's Natural Philosophy.
7. Kiethe's Use of the Globe.
8. Little Philosopher.
9. The Reason Why.
10. Amusing Experiments.
11. Geology......
12. Carpenter's physiology.
13. Anatomy.
14. Whitley's Logic.
15. Larder's History of Philosophy.
16. ....

History.

....

LITERARY

1. Hume's Works Vol. 4.
2. Friends in council.
3. Junius's letters.
4. Macaulay's Essays.
5. Tates' Philosophy of Education
6. Sydenham's Notes.
7. ....
8. ....

DRAMAS NOVELS FICTION

1. Shakespeare's plays– 14.
2. Don Charolos (?)
3. Rasselas.
4. Gulliver's Travels.
5. Vicar of Wakefield.
6. Robinson Crusoe.
7. The Arabian Nights.
8. Bagubahar.
9. ......
10. More which cannot now be recollected.

23rd Nov. 1869

"I can succeed in my wishes by publishing a small book containing the Devanagari and ancient Canarese alphabets of cave characters with some examples of actual inscriptions in each...... "

December 18th 1869

Disadvantages from English rule–

1. Drinking liquor.
2. The contagious Act.
3. Irreligious young men.
4. Prohibition of the use of Arms.
5. Negligence of the valuable native medicines.
6. Hypocrisy and show slowly but surely triumphing over real worth.

10th January 1870

"By the doctrine of probability I find that I shall have $1\frac{2}{3}$ of female children hereafter, supposing that my wife gives birth to 5 children more and that generally 1/3 of children die ......"

15th August 1870

"My 2nd son can walk now to a distance of 10 feet– He can utter ಬಾ, ಬಾಬಾ, ಬಾಪ್ಪ, ಅವ್ವಾ, ತಾ, ತಾತ್ಯಾ."

24th July 1871

"I printed my drama of Savai and Nara Tanu in the last month. A copy of the former to be sent to the D. P. I.".

19th March 1872

"I see enemies on all sides whose principal aim is to injure my reputation by means of roguish intrigues. I feel much depressed by this state of things though I have many bright prospects before me."

7th July 1874

"reading in the 'ಜ್ಞಾನಪ್ರಕಾಶ' the day before yesterday the dismissal of my Libel case by the Railway Magistrate of Poona, I felt something like sudden coldness a little to the left of the centre immediately over cerebellum i. e., the place of self-esteem– a similar coldness was felt in one of my eyes also at the same time."

26th March 1874

"Is it necessary to suppose the existence of a Maker in order to account for the existence of Man, his life and mind or intelligence? I think not.

Man is a natural machine of the highest perfection brought into existence by natural process by the combination of certain elements of certain proportions- and the prospects of this grand combination as a whole are the feelings, intelligence, mind and life. It is extremely difficult to draw a line of demarcation between these prospects ... Even growth can not be ascribed to life. It is apparently the result of certain mechanical construction of the body, as much as is the growth of plants. I therefore take it that life is the part of self motion ... I believe that the element named oxygen is the essence of life ..... "

ವೆಂಕಟ ರಂಗೊ ಕಟ್ಟಿಯವರ ಭಾವಚಿತ್ರವನ್ನು ಅನ್ಯತ್ರ ಕೊಟ್ಟಿದೆ. ಒಂದು ದುಡ್ಡಿನಗಲ ಆಕೃತಿಯನ್ನು ಹಚ್ಚಿಕೊಂಡು, ಹಳೆಯ ದಾನಿರಿಯ ಸನ್ಯಾಸಿನ ಹಾಗೆ ಕಾಣುತ್ತಿರುವ ವ್ಯಕ್ತಿಯೇ ಇದನ್ನು ಬರೆದಿರಬಹುದೇ ಎಂದು ಸಂಶಯವುಂಟಾಗುವಷ್ಟು ಈ ವಿಚಾರಗಳು ಕ್ರಾಂತಿಕಾರಕವಾಗಿವೆ. ಅದೂ ಅಲ್ಲದೆ, ಧರ್ಮದ ಬಗ್ಗೆ ಶ್ರೀಯುತರು ಇಟ್ಟುಕೊಂಡ ಅಭಿಪ್ರಾಯವನ್ನೂ ಗಮನಿಸಬಹುದು :

27–8–1874

" Religion is the idle fancy of primitive people, improved by degrees by men of intelligence. Remember the fear of ಭೂತ shown to children by their parents ......"

ಕಟ್ಟಿಯವರ ಮರಾಠಿ ಕೃತಿಗಳು :

ನರತನು (೧೮೭೧) :

ಇದು ಶರೀರಶಾಸ್ತ್ರವಿಷಯಕ ಮರಾಠಿ ಗ್ರಂಥ. ದಿನಚರಿಯಲ್ಲಿಯ ಉಲ್ಲೇಖದ ಮೇಲಿಂದ ಇದು ಜೂನ್ ೧೮೭೧ ರಲ್ಲಿ ಪ್ರಕಟವಾದದ್ದಾಗಿ ತಿಳಿಯುತ್ತದೆ. ಈ ಗ್ರಂಥ ಪೇಟರ್ ಎಂಬವನು ಇಂಗ್ಲೀಷಿನಲ್ಲಿ ಬರೆದ ಕೃತಿಯ ಅನುವಾದ.

ಸವಾಯಿ ಮಾಧವರಾಯಾಂಚೇ ನಾಟಕ (೧೮೭೧) :

ದಿನಚರಿಯಲ್ಲಿ ಈ ನಾಟಕದ ಪ್ರಕಟನೆಯು ಜೂನ್ ೧೮೭೧ ಎಂದು ಹೇಳಲಾಗಿದೆ. ಇದು ಪೇಶವೆಯವರ ಇತಿಹಾಸದಲ್ಲಿಯ ಒಂದು ಮಹತ್ವದ ಘಟನೆಯನ್ನು ಆಧರಿಸಿ ಬರೆದದ್ದಾಗಿದೆ. ಮರಾಠಿ ತಮ್ಮ ಮಾತೃಭಾಷೆಯಾಗಿರದಿದ್ದರೂ, ಸ್ಫೂರ್ತಿಯ ಮೂಲಕ ಆ ಭಾಷೆಯಲ್ಲಿ ಕೃತಿರಚನೆ ಮಾಡಿದ್ದಾಗಿ ಲೇಖಕರು ಹೇಳಿಕೊಂಡಿದ್ದಾರೆ. " This is a much better performance than his translation indicating that the author had some literary talent " ಎಂದು History of Modern Marathi Literature ಎಂಬ ಚರಿತ್ರೆಯಲ್ಲಿ ಹೇಳಲಾಗಿದೆ.

ನೆಪೋಲಿಯನ್ ಬೋನಾಪಾರ್ಟನ ಚರಿತ್ರೆ :

ಇದೂ ಮರಾಠಿಯಲ್ಲಿದ್ದಂತೆ ಕಾಣುತ್ತದೆ. ಗ್ರಂಥ ಉಪಲಬ್ಧವಾಗಲಿಲ್ಲ.

ಪತ್ರಿಕಾ ವ್ಯವಸಾಯ :

ಶ್ರೀ ಕಟ್ಟಿಯವರು ಮೇಲೆ ವಿವರಿಸಿದ ಗ್ರಂಥಗಳನ್ನು ರಚಿಸಿದ್ದು ಮಾತ್ರವಲ್ಲದೆ, 'ಕರ್ನಾಟಕ ಪತ್ರ', 'ಲೋಕ ಶಿಕ್ಷಕ' ಎಂಬ ವಾರ ಪತ್ರಿಕೆಗಳನ್ನೂ ಅನೇಕ ವರ್ಷಗಳ ವರೆಗೆ ನಡೆಸಿದರು. ಅನಂತರ ಈ ಪತ್ರವನ್ನು ಕೃಷ್ಣರಾವ್ ಅಂಕಲಗಿಯವರು ವಹಿಸಿಕೊಂಡು ಆಚಾರ್ಯರ ಮರಣದ ವರೆಗೆ ನಡೆಸಿದರು.

ಆಚಾರ್ಯರಿಗೆ ಮೊದಲಿನಿಂದಲೂ ಆಯುರ್ವೇದದಲ್ಲಿ ಆಸ್ಥೆ ಇದ್ದಿತು. ಸರಕಾರೀ ನೌಕರಿ ಯಿಂದ ನಿವೃತ್ತರಾದ ನಂತರ ಆಚಾರ್ಯರು ವಾಗ್ಭಟ ಸುಶ್ರುತಾದಿಗಳ ಆಳವಾದ ಅಭ್ಯಾಸವನ್ನು ಮಾಡಿ ಆಯುರ್ವೇದದ ಔಷಧಗಳನ್ನೂ ಕೊಡುತ್ತಿದ್ದರು. ಅಷ್ಟೇ ಅಲ್ಲದೆ, ಭಾರತೀಯರು ವಿದೇಶೀಯ ಸಾಬೂನುಗಳನ್ನು ಉಪಯೋಗಿಸಬಾರದೆಂದು ಸೀಗೇಕಾಯಿ ವಡಿಗಳನ್ನು ಮಾಡಿ ಮಾರಲಿಕ್ಕೆ ಇಡಿಸಿದ್ದರು. ಡಾ॥ ಗೋಡಬೋಲೆ ಎಂಬವರು ಬನಾರಸ ವಿಶ್ವವಿದ್ಯಾಲಯದಲ್ಲಿ ಸುಪ್ರಸಿದ್ಧ ಪ್ರಾಧ್ಯಾಪಕರು; ವಿಜ್ಞಾನಿಗಳು. ಮೂಲತಃ ಧಾರವಾಡದವರಾದ ಅವರು ಈ ಸಾಬೂನು ಗಳನ್ನು ಶಾಸ್ತ್ರೀಯವಾಗಿ ಸಿದ್ಧಗೊಳಿಸಿದರು.

ಇದೂ ಅಲ್ಲದೆ, ಶ್ರೀ ಕಟ್ಟಿಯವರು ಸನ್ ೧೮೭೦ ರಲ್ಲಿ ಬೆಳಗಾವಿಯಲ್ಲಿರುವಾಗಲೇ, ಒಬ್ಬ ಕಂಚಗಾರನಿಗೆ ತಕ್ಕ ಸಲಹೆಗಳನ್ನಿತ್ತು ಕನ್ನಡ ಅಕ್ಷರಗಳನ್ನು ಮುದ್ರಣ ಯೋಗ್ಯವಾಗುವಂತೆ ಸಿದ್ಧ ಮಾಡಿಸಿದರು.[೧] ಅಲ್ಯುಮಿನಿಯಮ್ ಧಾತುವಿನಿಂದ ಕತ್ತಿ, ಕತ್ತರಿಗಳನ್ನು ಸಿದ್ಧಗೊಳಿಸಲು ಯತ್ನಿಸಿ ದರು. ಆ ರೀತಿ, ಮಣ್ಣಿನ ಹೂಜೆ ಹಾಗೂ ಮಂಗಳೂರು ಹಂಚಿನ ಮಾದರಿಯಲ್ಲಿ ಮನೆಯ ಹಂಚುಗಳು ಮೊದಲಾದವುಗಳನ್ನು ಸಿದ್ಧಗೊಳಿಸಿದರು.

ಕಟ್ಟಿ ವೆಂಕಟರಾಯರು ಯಾವಾಗಲೂ ಸಾರ್ವಜನಿಕ ಸೇವಾ ಧುರಂಧರರಾಗಿದ್ದರು. ಸೆಪ್ಟೆಂಬರ ೧೮೯೮ ರಲ್ಲಿ ಲೋಕಮಾನ್ಯ ಟಿಳಕರ ಬಿಡುಗಡೆಯಾಯಿತು. ಆದರೆ ಅವರು ಮರಳಿ ಬರುವದ ರಲ್ಲಿಯೇ ದೇಶದಲ್ಲೆಲ್ಲ ಪ್ಲೇಗು, ಬರಗಾಲಗಳು ತಾಂಡವವಾಡುತ್ತಿದ್ದವು. ಪ್ಲೇಗಿನಕಿಂತ ಪ್ಲೇಗಿನ ಚುಚ್ಚುಮದ್ದಿನ ಹಾವಳಿ ತೀರ ಹೆಚ್ಚಾಗಿದ್ದಿತು. ರ್‍ಯಾಂಡ್ ಎನ್ನುವ ಮಿಲಿಟರಿ ಅಧಿಕಾರಿಗಳು ಪುಣೆ ಯಲ್ಲಿ ಮನೆ ಮನೆ ಹೊಕ್ಕು ಒತ್ತಾಯದಿಂದ ಜನರನ್ನು ಮನೆ ಬಿಟ್ಟು ಹೊರ ಹಾಕಹತ್ತಿದರು. ಈ ದಬ್ಬಾಳಿಕೆ ಜನರಿಗೆ ದುಸ್ಸಹವಾಯಿತು. ಆದ್ದರಿಂದ ೧೮೯೮ ರಲ್ಲಿ ವಿಮುಕ್ತರಾದ ಲೋಕಮಾನ್ಯರು ೧೮೯೯ ರ ಜುಲೈ ತಿಂಗಳ 'ಕೇಸರೀ' ಪತ್ರಿಕೆಯಲ್ಲಿ ಸುಪ್ರಸಿದ್ಧವಾದ ತಮ್ಮ "ಪುನಶ್ಚ ಹರಿ ಓಂ" ಎಂಬ ಸಂಪಾದಕೀಯವನ್ನು ಬರೆದರು.

ಈ ಪ್ಲೇಗಿನ ಹಾವಳಿ ಧಾರವಾಡ ಬೆಳಗಾವಗಳನ್ನೂ ಬಿಡಲಿಲ್ಲ. ೧೮೯೯ ನೆಯ ಇಸವಿ ಜೂನ ತಿಂಗಳ ಸುಮಾರಿಗೆ ಬೆಳಗಾವ, ಧಾರವಾಡ ಜಿಲ್ಲೆಗಳಲ್ಲಿಯೂ ಒತ್ತಾಯದಿಂದ ಪ್ಲೇಗಿನ ಮೈಲಿ

---

೧ ಈ ಬಗ್ಗೆ ಮುದವೀಡು ಅವರು ಹೀಗೆ ಹೇಳಿದ್ದಾರೆ : "ಪುಸ್ತಕಗಳು ಬರೆದು ಸಿದ್ಧವಾದರೂ ಅವುಗಳನ್ನು ಮುದ್ರಿಸುವುದಕ್ಕೆ ಗತಿಯೇನು? ಕೊನೆಗೆ ಈ ಭಾಗದ ಎಜುಕೇಶನಲ್ ಇನ್ಸಪೆಕ್ಟರರಾಗಿದ್ದ ರಸೆಲ್ ಅವರು ಇಂಗ್ಲಂಡ, ಜರ್ಮನಿಗಳ ಮುದ್ರಕರೊಡನೆ ಸಂಧಾನ ಹಚ್ಚಿ ಮುಂಬಯಿಯ ಎಜುಕೇಶನ್ ಸೊಸಾಯಿಟಿಯ ಮುದ್ರಣಾಲಯದಲ್ಲಿ ಕನ್ನಡ ಪುಸ್ತಕಗಳ ಮುದ್ರಣಕ್ಕೆ ಅವಕಾಶವನ್ನು ಕಲ್ಪಿಸಿಕೊಳ್ಳ ಬೇಕಾಯಿತು. ಈ ಕೆಲಸವಲ್ಲಿ ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್ಸಿನ ಉಪಯೋಗವನ್ನು ನಮ್ಮ ಕಡೆಯವರು ಬಹಳವಾಗಿ ಹೊಂದಿದರು. ಈಗಿನಂತೆ ರೈಲು, ಮೋಟಾರುಗಳ ಪ್ರವಾಸದ ಅನುಕೂಲ

[ಮುಂದಿನ ಪುಟಕ್ಕೆ ಮುಂದುವರೆದಿದೆ.]

ತೆಗೆಯುವ ಕಾರ್ಯಕ್ರಮ ಪ್ರಾರಂಭವಾಯಿತು. ಇದರಿಂದ ಜನರೆಲ್ಲರೂ ತ್ರಸ್ತರಾದರು. "ಪ್ಲೇಗು ಬೇಕು, ಈ ಮೈಲಿಯ ಜುಲುಮೆ ಬೇಡ" ಎಂದು ಅನ್ನಹತ್ತಿದರು. ಪ್ಲೇಗಿನ ಲಸಿಕೆಯ ಮೂಲಕ ಅನೇಕ ಜನ ಬೇರೆ ಬೇರೆ ರೋಗಗಳಿಗೆ ತುತ್ತಾದರು. ಲಸಿಕೆಯ ಪ್ರಯೋಗ ಇಲ್ಲಿಯ ಜನರ ಮೇಲೆಯೇ ನಡೆದಂತೆ ಕಂಡಿತು. ಧಾರವಾಡ ಈ ಲಸಿಕೆಯ ವಿರುದ್ಧ ಮೊದಲಿಗೆ ಚಳುವಳಿ ಹೂಡಿತು. ಪ್ಲೇಗಿನ ಲಸಿಕೆಯ ಮೂಲಕ ರೋಗಗ್ರಸ್ತರಾದವರ ಪೂರ್ಣ ಹೆಸರುಗಳನ್ನು ಧಾರವಾಡದ ಗುರೂಜಿ ಎಂಬವರು ಕೇಸರೀ ಪತ್ರಿಕೆಗೆ ಬರೆದು ಕಳುಹಿಸಿಕೊಟ್ಟರು. ಕೂಡಲೇ, ಟಿಳಕರು ಅದನ್ನು ಮುದ್ರಿಸಿ, ಮೈಲಿಯ ವಿರುದ್ಧ ಲೇಖಗಳನ್ನು ಬರೆದರು. ಧಾರವಾಡದ 'ಕರ್ನಾಟಕ ವೃತ್ತ', 'ರಾಜಹಂಸ' ಗಳೂ ಮೈಲಿಯ ಭಯಂಕರ ಪರಿಣಾಮಗಳ ಬಗ್ಗೆ ಬರೆದವು.

ಇದೆಲ್ಲದರ ಪರಿಣಾಮವಾಗಿ ಸರಕಾರದಿಂದ ನಿಯಮಿತವಾದ ಇನಾಕ್ಯುಲೇಶನ್ ಕಮಿಶನ್ ಧಾರವಾಡಕ್ಕೆ ಬಂದಿತು. ಇಲ್ಲಿಯ ಮುಖಂಡರು ಈ ಬಗ್ಗೆ ತಮ್ಮ ಹೇಳಿಕೆಗಳನ್ನು ಕೊಟ್ಟರು. ಅಂದಿನ ಧಾರವಾಡದ ಮುಖಂಡರಾದ ವೆಂಕಟ ರಂಗೊ ಕಟ್ಟಿಯವರೂ, ಮಾಯಿರ್ಘುರಕರ್ ಎಂಬವರೂ ಜನತೆಯ ಭಾವನೆಗಳನ್ನು ಪುಷ್ಟೀಕರಿಸಿ ಕಮಿಶನದೆದುರು ಸಾಕ್ಷ್ಯ ಹೇಳಿದರು. ತತ್ಪರಿಣಾಮವಾಗಿ, ಸನ್ ೧೯೦೦ ರ ಫೆಬ್ರುವರಿ ತಿಂಗಳಿನಲ್ಲಿ ಸರಕಾರದವರು ಒಂದು ಪರಿಪತ್ರವನ್ನು ಹೊರಡಿಸಿ, ಒತ್ತಾಯದಿಂದ ಪ್ಲೇಗಿನ ಮೈಲಿ ಚುಚ್ಚಕೂಡದೆಂದು ಸಾರಿದರು.[೧] ಇವೆಲ್ಲವುಗಳಲ್ಲಿಯೂ ವೆಂಕಟ ರಂಗೊ ಕಟ್ಟಿಯವರ ಪ್ರಭಾವ, ವ್ಯಕ್ತಿಮತ್ತೆ, ಸಾರ್ವಜನಿಕ ಸೇವಾದೃಷ್ಟಿಗಳು ವ್ಯಕ್ತವಾಗುತ್ತವೆ.

ಆದರೆ, ಆಚಾರ್ಯರು, ವಿದ್ಯಾವರ್ಧಕ ಸಂಘದ ಅಧ್ಯಕ್ಷರಿದ್ದಾಗ ಒಂದು ದುರ್ದೈವೀ ಘಟನೆ ನಡೆಯಿತು. ಆ ಕಾಲದ ಜನರ ತತ್ವನಿಷ್ಠೆಯನ್ನೂ, ಕನ್ನಡದ ಅಭಿಮಾನವನ್ನೂ, ಈ ಘಟನೆ ವ್ಯಕ್ತ ಮಾಡಬಹುದಾದ್ದರಿಂದ ಈ ಘಟನೆಯನ್ನು ಕೆಲಮಟ್ಟಿಗೆ ನಾವಿಲ್ಲಿ ನೋಡಬಹುದು :

ಸನ್ ೧೮೯೬ ರಲ್ಲಿ ಶಿಕ್ಷಣಾಧಿಕಾರಿಗಳ ಸಭೆಯೊಂದು ಪುಣೆಯಲ್ಲಿ ಸೇರಿತು. ಸಂಘವು ೨೨-೧೧-೧೮೯೬ ರ ತನ್ನ ಸಭೆಯಲ್ಲಿ 'ಕನ್ನಡ ಶಾಲೆಗಳಲ್ಲಿ ಬಾಳಬೋಧ ಅಕ್ಷರಗಳನ್ನೂ ಮರಾಠಿ ಭಾಷೆಯನ್ನೂ ಕಲಿಸುವ ಅವಶ್ಯವಿಲ್ಲ'ವೆಂದು ನಿರ್ಣಯವನ್ನು ಪಾಸು ಮಾಡಿ, ಪುಣೆಯಲ್ಲಿ ಸೇರಿದ ಸಭೆಗೆ ಕಳಿಸಿಕೊಟ್ಟಿತು. ಆದರೆ, ಈ ದಿಸೆಯಲ್ಲಿ ಯಾವ ಮಾರ್ಪಾಡೂ ಆಗಲಿಲ್ಲ. ಆಗ ಸಂಘವು ಪುನಃ ಸನ್ ೨೯-೧-೧೯೦೦ ರ ವ್ಯವಸ್ಥಾಪಕರ ಸಭೆಯಲ್ಲಿ 'ಕನ್ನಡ ಸ್ಟಾಂಡರ್ಡಗಳಲ್ಲಿ ಈ ಕಮಿಟಿಗೆ ಯೋಗ್ಯ ತೋರಿದ ದುರಸ್ತಿಗಳನ್ನು ಮೆ. ಡಾಯರೆಕ್ಟರ ಸಾಹೇಬರ ಕಡೆಗೆ ವಿಚಾರಕ್ಕೋಸ್ಕರ ಕಳಿಸಬೇಕು. ಈ ನಮ್ಮ ಕನ್ನಡ ಶೀಮೆಯ ಶಾಲೆಗಳಲ್ಲಿ ಮರಾಠೀ ಭಾಷೆಯ ಅಭ್ಯಾಸವು ಅಪ್ರಯೋಜಕವೆಂಬ ಬಗ್ಗೆ ಪೂರ್ವದಲ್ಲಿ ಬರೆದ ಪತ್ರ ೨೩ ನೇ ನವಂಬರು ಸನ್ ೧೮೯೬ ಇದರ ನಕಲು ಸಾಹೇಬರ ಕಡೆಗೆ ಇನ್ನೊಮ್ಮೆ ಕಳಿಸಬೇಕು' ಎಂದು ನಿರ್ಣಯ ಮಾಡಿ, ಇದೇ ವರುಷದ ಅಕ್ಟೋಬರ ತಿಂಗಳಲ್ಲಿ ಧಾರವಾಡದಲ್ಲಿ ಸೇರಿದ ವಿದ್ಯಾಪರಿಷತ್ತಿನಲ್ಲಿ 'ಕನ್ನಡ ಶಾಲೆಗಳಲ್ಲಿ ಮರಾಠಿ ಕಲಿಸಬಾರದು' ಎಂಬ ವಿಷಯದ ಬಗೆಗೆ ಸಂಘದ ಪ್ರತಿನಿಧಿಗಳು ಒಂದು ಪ್ರಬಂಧವನ್ನು ಓದಿದರು. ಈ ಪ್ರಬಂಧ

ವಿಲ್ಲದ ಆ ಕಾಲದಲ್ಲಿ ಇತ್ತ ಮುಂಬಯಿ ಅತ್ತ ಮಂಗಳೂರು ಅಂತರದ ಅನಾನುಕೂಲತೆಯನ್ನು ಮನಗಂಡು ವೆಂಕಟ ರಂಗೊ ಕಟ್ಟಿಯವರು ತಮ್ಮ ಸ್ವಂತ ಪರಿಶ್ರಮದಿಂದ ಕನ್ನಡ ಅಕ್ಷರದ ಮಾತೃಕೆಗಳನ್ನು ಇಲ್ಲಿಯೇ ಮಾಡಿಸಿ ಒಂದು ಮುದ್ರಣಾಲಯವನ್ನು 'ಜ್ಞಾನವರ್ಧಕ ಪ್ರೆಸ್' ಎಂಬ ಹೆಸರಿನಿಂದ ನಿರ್ಮಾಣ ಮಾಡಿದರು."

ಸಂಭಾವನೆ : ೧೯೪೧ : ಪು. ೧೦೪.

೧ 'ನನ್ನ ಜೀವನ ಸ್ಮೃತಿಗಳು' : ಆಲೂರ ವೆಂಕಟರಾವ : ಪು. ೨೬.

ವನ್ನು ಸಂಘವು ಮುದ್ರಿಸಿದಾಗ, ಆಗ ಸಂಘದ ಅಧ್ಯಕ್ಷರಾಗಿದ್ದ ವೆಂಕಟ ರಂಗೊ ಕಟ್ಟಿಯವರು ಅದಕ್ಕೊಂದು ಪುರವಣಿಯನ್ನು ಸೇರಿಸಿ, 'ಮರಾಠಿಯನ್ನು ಕಲಿಸಬೇಕು' ಎಂದು ಪ್ರಸಿದ್ಧಿಸಿದರು. ವೇಂಕಟ ರಂಗೊ ಅವರಾದರೋ ದೊಡ್ಡ ಮನುಷ್ಯರು! ಮಾನ್ಯರು! ಅಭಿಪ್ರಾಯವಾದರೋ ಇಂತಹದು! ಅದಕ್ಕಾಗಿ, ಈ ಬಗ್ಗೆ ಸಂಘದ ವ್ಯವಸ್ಥಾಪಕ ಸಮಿತಿಯ ಸಭೆಯು ೨೦-೧-೧೯೦೧ರಂದು ಈ ಕೆಳಗಿನ ನಿರ್ಣಯವನ್ನು ಪಾಸು ಮಾಡಿತು.

"ಅವರು ಸಂಘದ ಅಧ್ಯಕ್ಷರಿದ್ದರೂ ಅವು ಸಂಘದ ಅಭಿಪ್ರಾಯಗಳು ಇರುವದಿಲ್ಲ ಸಂಘದವರ ಅಭಿಪ್ರಾಯಗಳು ಅವರ ಅಭಿಪ್ರಾಯಗಳಿಂದ ಭಿನ್ನವಿರುತ್ತವೆ. ಈ ಪ್ರಕಾರ ಬರಿಯಬೇಕು........ (ಈ ಬಗ್ಗೆ ಬರೆದ ಮಾತು) ಅಧ್ಯಕ್ಷರ ಮಾನಹಾನಿಯಾಗಬೇಕೆಂಬ ಹೇತುವಿನಿಂದ ಬರೆದಂಥವು ಅಲ್ಲ. ಕೇವಲ ಸಂಘದ ಮತ್ತು ಕರ್ನಾಟಕ ವಿದ್ಯೆಯ ಹಿತದ ಸಲುವಾಗಿ ಬರೆದಂಥವು ಇರುತ್ತವೆಂದು ಸಹ ಅವರಿಗೆ ತಿಳಿಸಬೇಕು."[೧] ಇದು ವ್ಯಾವಹಾರಿಕವಾಗಿ, ಅವಿಶ್ವಾಸ ಸೂಚನೆಯೇ ಆದಂತೆ. ಈ ಭಿನ್ನಾಭಿಪ್ರಾಯದ ಮೂಲಕ ಕನ್ನಡಕ್ಕಾಗಿ ಇಷ್ಟು ದುಡಿದಿದ್ದ ವೇಂಕಟ ರಂಗೊ ಕಟ್ಟಿಯವರು ಅಧ್ಯಕ್ಷಪದಕ್ಕೆ ರಾಜೀನಾಮೆಯನ್ನು ಕೊಡಬೇಕಾಯಿತು.

ಇದೇನೇ ಇದ್ದರೂ, ಕನ್ನಡ, ಸಂಸ್ಕೃತ, ಮರಾಠಿ, ಇಂಗ್ಲೀಷ ಭಾಷೆಗಳಲ್ಲಿ ಪಂಡಿತರಾಗಿ, ವಿದ್ಯಾನುರಾಗಿಗಳಾಗಿ, ಅನೇಕ ಗ್ರಂಥಗಳ ಲೇಖಕರಾಗಿ, ಪತ್ರಿಕಾ ಸಂಪಾದಕರಾಗಿ, ಅನೇಕ ಕನ್ನಡ ಗ್ರಂಥಗಳ ನಿರ್ಮಾಪಕರಾಗಿ, ವಿದ್ಯಾವರ್ಧಕ ಸಂಘದ ಸ್ಥಾಪನೆಗೆ ಕಾರಣರಾಗಿ, ಸಮಾಜ ಸುಧಾರಕರಾಗಿ, ಉದ್ಯೋಗ ವ್ಯವಸಾಯಗಳ ಪ್ರೋತ್ಸಾಹಕರಾಗಿ, ಪ್ರಯೋಗಶೀಲರಾಗಿ, ತಮ್ಮ ಪ್ರತಿಭೆ, ಪರಿಶ್ರಮ, ಜಾಣ್ಮೆಗಳಿಂದ ಕನ್ನಡದ ತೇರನ್ನು ಮುಂದೆ ಸಾಗಿಸಿಕೊಂಡು ಬಂದ ಮಹಾವಿಭೂತಿಗಳಲ್ಲಿ ವೆಂಕಟ ರಂಗೊ ಕಟ್ಟಿಯವರಿಗೆ ನಿಶ್ಚಿತವಾಗಿ ಹಿರಿದಾದ ಸ್ಥಾನವಿದೆ. ಇಂಥವರ ತಪಃಪ್ರಭೆಯಿಂದಲೇ ಕನ್ನಡ ಅನೇಕ ಮಾರು ಮುಂದುವರಿಯಿತು. ಇಂಥ ಹಿರಿಯ ಜೀವ ಸನ್ ೧೯೦೯ ರ ಮೇ ೧೨ ನೆಯ ತಾರೀಖಿನ ದಿವಸ ವೈಕುಂಠ ಪದವನ್ನು ಪಡೆಯಿತು.

—

೧ ಸನ್ ೧೯೦೦ ರ ಶಾಲಾಪತ್ರಕದಲ್ಲಿ ಸಂಘವು ಆಕ್ಷೇಪ ತೆಗೆದುಕೊಂಡ ಈ ಸಮ್ಮೇಲನದ ವಿವರಗಳೆಲ್ಲ ಪ್ರಕಟವಾಗಿದ್ದು, ಅದರಲ್ಲಿ ಜಡ್ಜ ತಿರುಮಲರಾಯರು ಎಲ್ಲ ವರ್ಗಗಳಲ್ಲಿಯೂ ಮರಾಠಿ ಕಲಿಸಬೇಕೆಂದೂ, ವೆಂಕಟ ರಂಗೊ ಕಟ್ಟಿಯವರು ಕೆಳಗಿನ ಕೆಲ ವರ್ಗಗಳಿಗೆ ಮಾತ್ರ ಕಲಿಸಬೇಕೆಂದು ಹೇಳಿದರೆಂದೂ ವರದಿಯಾಗಿದೆ. ಪಾಠಕ ಗುರುನಾಥರಾಯರು ಮಾತ್ರ ಮರಾಠಿ ಕಲಿಸಲೇ ಕೂಡದೆಂದು ಹೇಳಿದರಂತೆ. ಅಧ್ಯಕ್ಷರು ತಾವು ಸ್ವೀಕೃತವಾದ ಯಾವ ನಿರ್ಣಯವನ್ನೂ ಅಂಗೀಕರಿಸುವದಾಗಿ ಹೇಳಿದರಂತೆ.

ಸವದಿ ಅಣ್ಣಾರಾಯರು

(೧೮೪೬–೧೯೦೦)

ಇವರು ಸ್ವಭಾವದಿಂದ ಎಲ್ಲರ ಕೂಡ ಹೊಂದಿಕೊಂಡು ಹೋಗುವಂಥವರಿದ್ದು ಅಜಾತ ಶತ್ರುಗಳೆನಿಸಿಕೊಂಡಿದ್ದರು. ಏಪ್ಪತ್ತೋ ವರ್ಷ ಕಾಲ ಧಾರವಾಡದ ಟ್ರೇನಿಂಗ ಕಾಲೇಜಿನ ವ್ಹಾಯಿಸ್ ಪ್ರಿನ್ಸಿಪಾಲರಾಗಿ ಕೆಲಸ ಮಾಡಿದರು. ಇವರ ಮುಖ್ಯ ಆಸ್ಥೆ ವಿಜ್ಞಾನ.

ಅಣ್ಣಾರಾಯರು ಸನ್ ೧೮೪೬ರ ಅಕ್ಟೋಬರ ೨೬ರಂದು ಬೆಳಗಾವಿಯಲ್ಲಿ ಜನಿಸಿದರು. ಇವರ ತಂದೆಯ ಹೆಸರು ರಾಮಚಂದ್ರರಾವ, ತಾಯಿಯ ಹೆಸರು ಸೀತಾಬಾಯಿ. ರಾಮಚಂದ್ರರಾಯರು ಬೆಳಗಾವಿಯಲ್ಲಿ ಕಾರಕೂನರಿದ್ದುದರಿಂದ ಅಣ್ಣಾರಾಯರ ಅಭ್ಯಾಸವೂ ಬೆಳಗಾವಿಯಲ್ಲಿಯೇ ಆಯಿತು. ಪ್ರಾಥಮಿಕ ಮರಾಠಿಯನ್ನು ಕಲಿತು, ಮಾಧ್ಯಮಿಕ ಅಭ್ಯಾಸಕ್ಕಾಗಿ ಸರದಾರ ಹಾಯ-ಸ್ಕೂಲನ್ನು ಸೇರಿದರು. ೨೦ನೆಯ ವರ್ಷದಲ್ಲಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಪಾಸಾಗಿ, ಬೆಳಗಾವಿಯಲ್ಲಿ ತಾವು ಕಲಿತ ಸರದಾರ ಹಾಯಸ್ಕೂಲಿನಲ್ಲಿಯೇ ಶಿಕ್ಷಕರಾಗಿ ನಿಯಮಿಸಲ್ಪಟ್ಟರು. ಇವರಿಗೆ ಅಲ್ಪಸ್ವಲ್ಪ ಗುಜರಾಥಿ ಮತ್ತು ಹಿಂದೀ ಬರುತ್ತಿದ್ದವು. ಕನ್ನಡವನ್ನು ಮನೆಯಲ್ಲಿಯೇ ಪಂಡಿತರನ್ನಿಟ್ಟುಕೊಂಡು ಕಲಿತರು. ಇವರ "ದಕ್ಷತೆ, ನಿಯಮಿತತನ, ಚಟುವಟಿಕೆ, ಜಾಣತನ, ಆಸಕ್ತಿ, ಸೌಜನ್ಯ"ಗಳನ್ನು ಮನದಂದು ಮೇಲಧಿಕಾರಿಗಳು ಇವರನ್ನು ಶಿರಸಿಯ ಆಂಗ್ಲೋ ವರ್ನಾಕ್ಯುಲರ ಶಾಲೆಯಲ್ಲಿ ಸ್ವತಂತ್ರ ಶಿಕ್ಷಕರೆಂದು ನಿಯಮಿಸಿದರು. ಶಿರಸಿಯಲ್ಲಿ ಎರಡೂವರೆ ವರ್ಷ ಕೆಲಸ ಮಾಡಿದ ನಂತರ, ಸನ್ ೧೮೭೩ರಲ್ಲಿ ಧಾರವಾಡದ ಟ್ರೇನಿಂಗ ಕಾಲೇಜಿನಲ್ಲಿ ೧೦೦ ರೂಪಾಯಿ ಪಗಾರದ ಮೇಲೆ ವ್ಹಾಯಿಸ್ ಪ್ರಿನ್ಸಿಪಾಲರೆಂದು ನೇಮಕವಾದರು. ಅಂದಿನಿಂದ ಸುಮಾರು ೨೨ ವರ್ಷಕಾಲ ಧಾರವಾಡದ ಟ್ರೇನಿಂಗ ಕಾಲೇಜಿನಲ್ಲಿಯೇ ಕೆಲಸ ಮಾಡಿದರು.

ಸನ್ ೧೮೯೭ರಲ್ಲಿ ಇವರು ಏಳು ತಿಂಗಳ ಕಾಲ ಮುಂಬಯಿಯ ಹಾಯಕೋರ್ಟಿನಲ್ಲಿ ಕನ್ನಡ ಭಾಷಾಂತರಕಾರರೆಂದು ಕೆಲಸ ಮಾಡಿದ ಮೇಲೆ, ಸನ್ ೧೮೯೮ರಲ್ಲಿ ಕೆಲಕಾಲ ಕಲಾದಗಿಯ ಡೆಪ್ಯುಟಿ ಇನಸ್ಪೆಕ್ಟರರೆಂದೂ ಕೆಲಸ ಮಾಡಿದರು. ಅನಂತರ ವಿಜಾಪುರ ಜಿಲ್ಲೆಯ ಕಾಯಂ ಡೆಪ್ಯುಟಿ ಇನಸ್ಪೆಕ್ಟರರಾಗಿ ೧೭೫ ರೂಪಾಯಿ ಸಂಬಳದ ಮೇಲೆ ನಿಯಮಿಸಲ್ಪಟ್ಟರು.

ಅಣ್ಣಾರಾಯರು ಒಳ್ಳೆಯ ವಾಗ್ಮಿಗಳೂ ಆಗಿದ್ದರು. ಧಾರವಾಡದಲ್ಲಿ ಆದ ಸಭೆಗಳಲ್ಲಿ ಸವದಿಯವರ ವ್ಯಾಖ್ಯಾನವಾಗದ ಸಭೆಯೇ ಇರಲಿಲ್ಲವೆಂದು ಹೇಳಬಹುದು. ಇವರ ವ್ಯಾಖ್ಯಾನಗಳು ಹೆಚ್ಚಾಗಿ ಆರೋಗ್ಯಶಾಸ್ತ್ರ ವಿಷಯಕವಾಗಿರುತ್ತಿದ್ದವು. ಇವರು ತಮ್ಮ ಹಿರಿಯರಿಂದ ಹರಿಕೀರ್ತನ

ಮಾಡುವ ಕಲೆಯನ್ನು ಚೆನ್ನಾಗಿ ಅರಿತಿದ್ದರು. ಸ್ವತಃ ಕೀರ್ತನಗಳನ್ನು ಮಾಡುತ್ತಿದ್ದರು. ಗಾಯನಕಲೆ ಇವರಿಗೆ ತುಂಬಾ ಅವಗತವಾಗಿದ್ದಿತು. ಸಮಯಸ್ಫೂರ್ತ ಆಶುಕವಿತಾಶಕ್ತಿಯೂ ಇದ್ದಿತು.

ಶ್ರೀ ಸವದಿಯವರು ಪ್ರಾಮುಖ್ಯವಾಗಿ ವಿಜ್ಞಾನ ಶಿಕ್ಷಕರು, ಆಡಳಿತಗಾರರು. ಆದರೂ ಆ ಕಾಲಕ್ಕೆ ತಕ್ಕಂತೆ ಶ್ರೀಯುತರು ಹಲಕೆಲವು ಗ್ರಂಥಗಳನ್ನು ರಚಿಸಿದರು.

ಇವರು ಬರೆದ "ವಿದ್ಯಾಶಾಲಾ ಗುರುಮಿತ್ರ" ಎಂಬ ಪುಸ್ತಕವನ್ನು ಗೋವಿಂದ ದಾಮೋದರ ದೀಕ್ಷಿತ ಎಂಬವರು ಮರಾಠಿ ಭಾಷೆಗೆ ಪರಿವರ್ತಿಸಿದರು. ಇದನ್ನು ನ್ಯಾಯಮೂರ್ತಿ ಮಹದೇವ ಗೋವಿಂದ ರಾನಡೆಯವರಂಥವರೂ ಸಹ ಶ್ಲಾಘಿಸಿದರು.[1] ಧಾರವಾಡದ 'ವಾಗ್ಭೂಷಣ'ದಲ್ಲಿ 'ದೀರ್ಘಾಯುಷ್ಯದ ಗುಟ್ಟು' ಎಂಬ ಇವರ ಲೇಖನಮಾಲೆ ಪ್ರಸಿದ್ಧವಾಯಿತು. ಇದೂ ಅಲ್ಲದೆ, ಶ್ರೀಯುತರು– 'ವಿನೋದ ತರಂಗಿಣಿ' 'ಮಕರ ಸಂಕ್ರಮಣ' ಎಂದು ಮೊದಲಾಗಿ ಚಿಕ್ಕ ಚಿಕ್ಕ ಮನೋರಂಜಕ ಪುಸ್ತಿಕೆಗಳನ್ನೂ ಬರೆದರು. ಧಾರವಾಡದಲ್ಲಿ ಪ್ಲೇಗಿನ ಹಾವಳಿ ವಿಪರೀತವಾಗಿದ್ದಾಗ, ಪ್ಲೇಗಿನ ಬಗ್ಗೆ ಅಲ್ಲಲ್ಲಿ ಭಾಷಣ ಮಾಡಿದರಲ್ಲದೆ, ಅಶಿಕ್ಷಿತ ಜನರಿಗೂ ಕೂಡ ತಿಳಿಯುವಂತೆ, ಆರೋಗ್ಯ ವಿಷಯಕವಾದ ಲಾವಣಿಗಳನ್ನು ರಚಿಸಿ ಸ್ವತಃ ಹಾಡಿ ಹೇಳುತ್ತಿದ್ದರು. ಇವರು ೧೮೯೯ರಲ್ಲಿ ಬರೆದ 'ಪ್ಲೇಗವೆಂಬ ಪಿಡುಗನ್ನು ಕುರಿತು ನಾಲ್ಕು ಮಾತುಗಳು' ಎಂಬ ಪ್ರಬಂಧಕ್ಕೆ ಮದ್ರಾಸಿನ ಅಪ್ಪು ಸುಂದರಂ ಪಿಳ್ಳೆಯವರಿಟ್ಟ ೫೦ ರೂಪಾಯಿ ಬಹುಮಾನ ದೊರಕಿತು.

ಇವರು ಸನ್ ೧೯೦೦ರಲ್ಲಿ ಮೃತಿ ಹೊಂದಿದಾಗ, ಇವರ ಅಭಿಮಾನಿಗಳು "ಯಾವ ಸತ್ಪುರುಷರು ಟ್ರೇನಿಂಗ ಕಾಲೇಜದಲ್ಲಿ ೨೭ ವರ್ಷ ಕೆಲಸ ಮಾಡಿದರೋ, ಅವರ ಸ್ಮಾರಕವನ್ನು ಕಾಲೇಜದಲ್ಲಿ ಇಡುವದು ಅವರ ಶಿಷ್ಯವರ್ಗದ ಕರ್ತವ್ಯವದೆ. ಅದಕ್ಕಾಗಿ ರಾ. ಸಾ. ಸವದಿಯವರ ಶಿಷ್ಯರೆಂದು ಅನ್ನಿಸಿಕೊಳ್ಳುವ ಪ್ರತಿ ಒಬ್ಬ ಮನುಷ್ಯನು ಈ ಕೆಲಸಕ್ಕೆ ಸಹಾಯ ಮಾಡಬೇಕೆಂದು" ನಿರ್ಧರಿಸಿದರು. ಆದರೆ ಈ ಸಾತ್ವಿಕ ಸದುದ್ದೇಶದ ಗತಿ ಏನಾಯಿತೋ ತಿಳಿಯಲಿಲ್ಲ!

—

[1] ಈ ಬಗ್ಗೆ ಪ್ರಸಿದ್ಧ ಸಂಶೋಧಕರಾಗಿದ್ದ ಸಾ. ಶ್ರೀ. ರಾಜಪುರೋಹಿತರು ಹೀಗೆ ಬರೆಯುತ್ತಾರೆ: "ಸುಪ್ರಸಿದ್ಧ ವಿನೋದಿ ಲೇಖಕರಾದ ಪರಲೋಕವಾಸಿ ಶ್ರೀಯುತ ಅಣ್ಣಾರಾವ ಸವದಿ ಇವರ ಸ್ವಾರಸ್ಯವಾದ ಉಪನ್ಯಾಸವು 'ವಿದ್ಯಾಶಾಲಾಗುರುಮಿತ್ರ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಈ ಸುಂದರ ಉಪನ್ಯಾಸವನ್ನು ಗೋವಿಂದ ದಾಮೋದರ ದೀಕ್ಷಿತ ಎಂಬವರು ಮರಾಠಿ ಭಾಷೆಯಲ್ಲಿ ಭಾಷಾಂತರಿಸಿದ್ದಾರೆ." –ವಾಗ್ಭೂಷಣ : ೧೯೨೦ : ಪು. ೫೬.

ಧೋಂಡೊ ನರಸಿಂಹ ಮುಳಬಾಗಲ

(೧೮೪೪–೧೯೯೪)

ಧೋಂಡೊ ನರಸಿಂಹ ಮುಳಬಾಗಲ ಅವರು ಕನ್ನಡದ ಉದ್ದಾಮ ಪಂಡಿತರು. ಸಂಸ್ಕೃತವನ್ನೂ ಚೆನ್ನಾಗಿ ಓದಿಕೊಂಡವರು. ಕನ್ನಡ ಗದ್ಯ–ಪದ್ಯ ರೂಪಗಳೆರಡರಲ್ಲೂ ಪ್ರಕಾಂಡ ಪಂಡಿತರು. ಇವರಿಗೆ ತಾವು ಕಲಿಸುವ ಸಾಹಿತ್ಯವೆಲ್ಲ ಮುಖೋದ್ಗತವಾಗಿದ್ದಿತು. ಮುಳಬಾಗಲ ಗುರುಗಳು ಪಾಠ ಹೇಳುವಾಗ್ಗೆ ಅವರಿಗೆ ಪುಸ್ತಕದ ಅವಶ್ಯಕತೆಯೇ ಇರಲಿಲ್ಲವೆಂದು ಅವರ ಕೈಯಲ್ಲಿ ಕಲಿತ ವಿದ್ಯಾರ್ಥಿಗಳು ಹೇಳುತ್ತಾರೆ. ಧೋಂಡೋಪಂತರು ಧಾರವಾಡದ ಟ್ರೇನಿಂಗ ಕಾಲೇಜದಲ್ಲಿ ಕನ್ನಡ ಶಿಕ್ಷಕರಾಗಿದ್ದರು.

ಧೋಂಡೋ ನರಸಿಂಹರು ಸಂಸ್ಕೃತ ಸಾಹಿತ್ಯದ ಸುಂದರವಾದ ಆಣಿಮುತ್ತುಗಳನ್ನು ಕನ್ನಡಕ್ಕೆ ತಂದರು. ಇವರು ಈ ರೀತಿ ಅನುವಾದ ಮಾಡಿದ ಗ್ರಂಥಗಳೆಂದರೆ :

(೧) ಭವಭೂತಿ ಕೃತ ' ಉತ್ತರರಾಮಚರಿತ್ರ '
(೨) ಶೂದ್ರಕ ಕೃತ ' ಮೃಚ್ಛಕಟಿಕ '
(೩) ಭಟ್ಟನಾರಾಯಣ ಕೃತ ' ವೇಣೀಸಂಹಾರ '
(೪) ಕಾಲಿದಾಸ ಕೃತ ' ಮಾಲವಿಕಾಗ್ನಿಮಿತ್ರ '

ಇವೂ ಅಲ್ಲದೆ, ಕನ್ನಡದ ಅಭ್ಯಾಸಿಗಳ ಅನುಕೂಲತೆಗಾಗಿ ' ಕನ್ನಡ ನುಡಿಗಟ್ಟು ', ' ಕನ್ನಡ ' ಕೈಪಿಡಿ ', ' ಛಂದಸ್ಸಾರ ', ' ಪದ್ಯಾರ್ಥಸಾರ ' ಎಂಬ ಅಭ್ಯಾಸಪೂರ್ಣವಾದ ಉದ್ಗ್ರಂಥಗಳನ್ನೂ ಬರೆದರು. ಈ ಭಾಗದ ಕನ್ನಡ ಅಭ್ಯಾಸಿಗಳಿಗೆ ಮುಳಬಾಗಲರ ' ನುಡಿಗಟ್ಟು ' ಎಷ್ಟೋ ವರ್ಷ ಭಗವದ್ಗೀತೆಯಾಗಿದ್ದಿತು. ಅವರು ರಾಜಶೇಖರ ವಿಳಾಸದ ಏಳನೆಯ ಸಂಧಿಗೆ ಟೀಕೆಯನ್ನೂ ಬರೆದರು. ತೀರಿಕೊಳ್ಳುವ ಕಾಲಕ್ಕೆ ಅವರು ಅಲಂಕಾರ ವಿಷಯಕವಾದ ಒಂದು ಗ್ರಂಥವನ್ನು ಬರೆಯುತ್ತಿದ್ದರಂತೆ. ಅದೂ ಅಲ್ಲದೆ, ಶ್ರೀ ಶಿವರುದ್ರಪ್ಪ ಕುಲಕರ್ಣಿಯವರು ಹೇಳುವಂತೆ ಅವರು ಹಿತೋಪದೇಶವನ್ನೂ ಅರ್ಧ ಮಾತ್ರ ಬರೆದು ಮುಗಿಸಿದ್ದರು. ಈ ಬಗೆಗೆ ' ಮುಳಬಾಗಲರವರ ಚರಿತ್ರಶತಕ ' ದಲ್ಲಿ ಹೀಗೆ ಹೇಳಲಾಗಿದೆ :

ಉರುತರ ರಾಜಶೇಖರದ ಸಪ್ತಮ ಸಂಧಿಯ ಟೀಕೆಯನ್ನುರೆ
ವಿರಚಿಸಿ ಬಾಲಕರ್ಗೆ ಮುದವಿತ್ತರು ತಾಂ ಕವಿತಾರ್ಥಸಾರವಂ
ಸುರುಚಿರವಾದಲಭ್ಯ ಸಿರಿಗನ್ನಡದೊಳ್ ನುಡಿಗಟ್ಟು ಕೈಪಿಡೀ
ಬರೆದರು ಸಾಗ್ರವಾಗಿ ಪರಿಶೋಧಿಸಿ ಮೇಣುರೆ ಛಂದಶಾಸ್ತ್ರಮಂ

ಪುರದ ಗೀರ್ವಾಣಭಾಷೆಯೊಳು ರಚಿಸಿದ
ಸುರುಚಿರ ಶ್ರೀ ವೇಣಿಸಂಹಾರ ನಾಟಕವ
ಸಿರಿಗನ್ನಡದಲ್ಲಿ ರಚಿಸಿ ಪಡೆದರ್ ಕೀರ್ತಿಯಾ
ಸರಿಗಾಣೆನು ಧರೆಯೊಳಗೀ ತೇಜೋ ನೃಸಿಂಹರಾ

ಕಾಲಿದಾಸನೆಂಬೋರ್ವ ಸುಕವಿಯು ರಚಿಸಿದಂ
ಮಾಲವಿಕಾಗ್ನಿಮಿತ್ರವೆಂಬ ಗ್ರಂಥವಾ
ಲೋಲರಾದ ಗುರುಗಳಿವರುಪಟ್ಟು ಕಷ್ಟವ
ಬಾಲರು ಸಹ ಸ್ಪಷ್ಟ ತಿಳಿಯುವಂತೆ ಬರೆದರೈ

ಮಾಡಿದರೈ ಮೃಚ್ಛಕಟಿಕವೆಂಬ ಗ್ರಂಥವಂ
ರೂಢಿಯ ಕವಿಜನಕೆ ನೆರವನಾಳ್ವಮನಸಿನಿಂ
ಮಾಡಲುಪಕ್ರಮಿಸೆಯಲಂಕಾರಶಾಸ್ತ್ರವಂ
ಖೋಡಿ ಯಮನು ಅರ್ಧಸಮಯದಲ್ಲಿ ವೈದನೈ ೧

ಧೋಂಡೊ ನರಸಿಂಹ ಮುಳಬಾಗಲ ಅವರು ತುಂಬಾ ಕುಶಾಗ್ರಮತಿಗಳು. ಅವರು ಸನ್ ೧೮೬೬ ರಲ್ಲಿ ೧೮ ವರುಷದವರಿದ್ದಾಗ್ಗೆ ಮೂರನೆಯ ವರುಷದ ಟ್ರೇನಿಂಗ ಪರೀಕ್ಷೆಯನ್ನು ಧಾರವಾಡದ ಟ್ರೇನಿಂಗ ಕಾಲೇಜಿನಿಂದ ಪಾಸಾದರು. ಅವರು ಆ ವರುಷ ಪರೀಕ್ಷೆಗೆ ಕುಳಿತ ಎಲ್ಲ ವಿದ್ಯಾರ್ಥಿಗಳಕಿಂತ ಅತಿ ಹೆಚ್ಚು ಗುಣಗಳನ್ನು – ಅಂದರೆ ೩೨೨ ರಲ್ಲಿ ೨೯೪ ಗುಣಗಳನ್ನು ದೊರಕಿಸಿ – ಪ್ರಪ್ರಥಮರಾಗಿ ಉತ್ತೀರ್ಣರಾದರು. ಅವರ ಈ ಅಪ್ರತಿಮ ಯಶಸ್ಸಿಗಾಗಿ ಅವರನ್ನು ನೇರವಾಗಿ ಹೆಡ್‌ಮಾಸ್ತರರೆಂದು ಆಯ್ಕೆ ಮಾಡಲಾಯಿತು. ೨

ನೌಕರಿಯಲ್ಲಿಯೂ ಅಷ್ಟೇ. ಅವರಿಗೆ ಪುಸ್ತಕದ ವಿಷಯಗಳೆಲ್ಲ ಮುಖೋದ್ಗತವಾಗಿದ್ದವು. ಒಂದು ಸಲ ಈ ಘಟನೆ ನಡೆಯಿತು :

ಮುಳಬಾಗಲರು ಕವಿಯೆಂದು ಟ್ರೇನಿಂಗ ಕಾಲೇಜಿನಲ್ಲಿದ್ದಾಗ ಹೆಸರು ಮಾಡಿಕೊಂಡಿದ್ದರು. ಒಂದು ಸಲ, ಮೇಲಿನ ಸಾಹೇಬರು ತಪಾಸಣೆಗಾಗಿ ಟ್ರೇನಿಂಗ ಕಾಲೇಜಿಗೆ ಬರಬೇಕಾದಾಗ, ಕಾಲೇಜಿನ ಪ್ರಿನ್ಸಿಪಾಲರು ಆ ಮೇಲಿನ ಸಾಹೇಬರ ಹೆಸರು ಬರುವ ಹಾಗೆ ಒಂದು ಸ್ವಾಗತಗೀತವನ್ನು ರಚಿಸಿಕೊಡ ಬೇಕೆಂದು ಮುಳಬಾಗಲ ಅವರನ್ನು ಕೇಳಿದರು. ಸ್ವಾಭಿಮಾನಿಗಳಾದ ಮುಳಬಾಗಲರು ಇದಕ್ಕೆ ಒಪ್ಪಲಿಲ್ಲ. ಪ್ರಿನ್ಸಿಪಾಲರು ಕ್ರೋಧಾವಿಷ್ಟರಾಗಿ, ಇದರ ಸೇಡನ್ನು ತೀರಿಸಿಕೊಳ್ಳಬೇಕೆಂದು ವರ್ಷಾಂತ್ಯ ದಲ್ಲಿ ಶಿಕ್ಷಕರ ಬಗ್ಗೆ 'ಶರಾ' ಬರೆಯುವಾಗ, ಧೊಂಡೋ ನರಸಿಂಹರಿಗೆ ಕಣ್ಣು ಕಾಣಿಸುವದಿಲ್ಲವೆಂದೂ, ಇದರಿಂದ ಅವರಿಗೆ ಕಲಿಸಲಿಕ್ಕೆ ತೊಂದರೆಯಾಗುತ್ತದೆಂದೂ, ಆದ್ದರಿಂದ ಇವರನ್ನು ಕೆಲಸದಿಂದ ನಿವೃತ್ತಿ ಮಾಡಿಸಬೇಕೆಂದೂ ಬರೆದರು. ಪ್ರಿನ್ಸಿಪಾಲರ ಈ ವರದಿ ಇನಸ್ಪೆಕ್ಟರರ ಕಡೆಗೆ ಹೋಯಿತು. ಅವರು ಮುಳಬಾಗಲರಿಗೆ ಕರೆಕಳಿಸಿ ವಿಚಾರಣೆ ನಡೆಸಿದರು. ಆಗ ಮುಳಬಾಗಲ ಅವರು ತಮ್ಮ ಸಮರ್ಥನೆಯಾಗಿ, ತಮಗೆ ಸಂಸ್ಕೃತ–ಕನ್ನಡ ಕಾವ್ಯಗಳು ಮುಖೋದ್ಗತವಾಗಿರುವವೆಂದೂ ಅದಕ್ಕಾಗಿ ಕಲಿಸುವ ಸಮಯದಲ್ಲಿ ತಮಗೆ ಪುಸ್ತಕಗಳ ಅವಶ್ಯಕತೆಯೇ ಇಲ್ಲವೆಂದೂ ಹೇಳಿದರು. ಆಗ,

೧ ಮುಳಬಾಗಲವರ ಚರಿತ್ರಶತಕ : ಕೃಷ್ಣಾರ್ಯ : ೧೮೯೮.

೨ ಕನ್ನಡ ಶಾಲಾಪತ್ರಿಕೆ : ೧೮೬೬.

ಇನಸ್ಪೆಕ್ಟರರು ಕಾಳಿದಾಸನ ಶಾಕುಂತಲ ನಾಟಕದಲ್ಲಿಯ ಕೆಲವು ಪದ್ಯಗಳನ್ನು ಸೂಚಿಸಿ, ಅವುಗಳ ಬಗೆಗೆ ವಿವರಣೆ ಕೊಡಹೇಳಿದರು. ಕಾವ್ಯವನ್ನೆಲ್ಲ ಆತ್ಮಸಾತ್ ಮಾಡಿಕೊಂಡ ಮುಳಬಾಗಲರು ಯಾವ ಪುಸ್ತಕದ ಸಹಾಯವೂ ಇಲ್ಲದೆ, ಆಯೆಲ್ಲ ಪದ್ಯಗಳ ಬಗೆಗೆ ವ್ಯಾಖ್ಯಾನ ಮಾಡಿದರು. ಇದರಿಂದ ಸಂತುಷ್ಟರಾದ ಇನಸ್ಪೆಕ್ಟರರು ಮುಳಬಾಗಲರ ಸೇವೆಯನ್ನು ಮುಂದುವರಿಸಿದರು.

ಶ್ರೀಯುತರು ಪ್ಲೇಗ ಬೇನೆಯಿಂದ ನವೆಂಬರ್ ೧೮೯೮ ರಲ್ಲಿ ಪರಂಧಾಮವನ್ನೈದಿದರು. ಆಗ ಧಾರವಾಡ ಜಿಲ್ಲೆಯಲ್ಲಿ ಹಾವಳಿ ಮಾಡಿದ ಪ್ಲೇಗ ಬೇನೆ ಟ್ರೇನಿಂಗ ಕಾಲೇಜಿನ ಇಬ್ಬರು ಶಿಕ್ಷಕರನ್ನು ಆಹುತಿ ತೆಗೆದುಕೊಂಡಿತು. ಆ ವರ್ಷ ಧಾರವಾಡ ಜಿಲ್ಲೆಯಲ್ಲಿ ೧೫,೦೬೨ ಜನರಿಗೆ ಪ್ಲೇಗ ರೋಗ ತಗುಲಿ, ೧೨,೨೫೩ ಜನ ಮೃತಿ ಹೊಂದಿದರು.

ಮುಳಬಾಗಲರ ನಿಧನದ ಬಗೆಗೆ 'ಕನ್ನಡ ಶಾಲಾ ಪತ್ರಕವು' ತನ್ನ ನವಂಬರ ೧೮೯೮ರ ಸಂಚಿಕೆಯಲ್ಲಿ ಹೀಗೆ ಉಲ್ಲೇಖಿಸಿದೆ :

"ಧೋಂಡೊಪಂತ ಮುಳಬಾಗಲರು ತಮ್ಮ ಆಯುಷ್ಯವನ್ನೆಲ್ಲ ಕನ್ನಡ ಭಾಷಾಧ್ಯಯನಕ್ಕೆ ವಹಿಸಿ, ಕನ್ನಡ ಏಳ್ಗೆಯನ್ನು ತ್ರಿಕರಣಪೂರ್ವಕವಾಗಿ ಬಯಸುವರು. ಕಾಲೇಜದಲ್ಲಿ ವಿದ್ಯಾರ್ಥಿಗಳಿಗೆ ಕಲಿಸುವಾಗ ಕೈಯಲ್ಲಿ ಪುಸ್ತಕ ಹಿಡಿಯುವ ಪ್ರಸಂಗವಂತೂ ಇವರಿಗೆ ಎಂದಿಗೂ ಬರಲಿಲ್ಲ. ಎಲ್ಲ ಗ್ರಂಥಗಳೂ ಕೇವಲ ಮುಖೋದ್ಗತವಾಗಿ ಬರುತ್ತಿದ್ದವು. ಆದರಿಂದ ಶಿಕ್ಷಣವನ್ನಾದರೂ ಸರಸವಾಗಿ ಸಾಗಿಸಲಿಕ್ಕೆ ಇವರಿಗೆ ಬಹಳ ಅನುಕೂಲವಾಗಿತ್ತು. ಸಂಸ್ಕೃತದ ಪರಿಚಯವಾದರೂ ಇವರಿಗೆ ಚೆನ್ನಾಗಿತ್ತು. ಇಂಗ್ಲಿಷದ ಪರಿಚಯವು ಇವರಿಗೆ ತಕ್ಕಷ್ಟು ಇಲ್ಲದ್ದರಿಂದ ಇಂಗ್ಲಿಷ ವಾಙ್ಮಯ ಸಂಬಂಧದಿಂದ ದಿನದಿನಕ್ಕೆ ನಡೆದ ಶೋಧದಂತೆ, ಕನ್ನಡ ವಾಙ್ಮಯದ ಶೋಧವನ್ನು ಮಾಡಲಿಕ್ಕೆ ಅನುಕೂಲವಿದ್ದಿಲ್ಲ. ಆದಾಗ್ಯೂ ಅವರು ತಮ್ಮಿಂದಾದಷ್ಟು ಶ್ರಮಬಟ್ಟು ಐತಿಹ್ಯವನ್ನೂ ಭಾಷಾ ಬೆಳವಣಿಗೆಯ ಕ್ರಮಾಕ್ರಮಗಳನ್ನೂ ಗೊತ್ತು ಹಚ್ಚಲಿಕ್ಕೆ ಹವಣಿಸಿದರು. ಸಾರಾಂಶ, ಇಂಥ ವಿದ್ವಾಂಸರು ಸ್ವರ್ಗಸ್ಥರಾದ್ದರಿಂದ ಕನ್ನಡದ ಭಾಷಾಸೂರ್ಯನು ಅಸ್ತವಾದಂತೆ ಆಗುತ್ತದೆನ್ನಲಿಕ್ಕೆ ಅಡ್ಡಿ ಇಲ್ಲ." ೧

ಅಷ್ಟೇ ಅಲ್ಲ; ಎಪ್ರಿಲ್ ೨೨ನೆಯ ತಾರೀಖಿನ ದಿವಸ ನಡೆದ ಟ್ರೇನಿಂಗ ಕಾಲೇಜಿನ ವಾರ್ಷಿಕ ಸಮಾರಂಭದಲ್ಲಿ, ಅನೇಕ ಯುರೋಪಿಯನ್ ಮತ್ತು ಸ್ಥಳೀಯ ಸದ್ಗೃಹಸ್ಥರು ಉಪಸ್ಥಿತರಿದ್ದಾಗ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀಮಾನ್ ಕರಂದೀಕರ ಅವರು ಒಪ್ಪಿಸಿದ ವರದಿಯೂ ಗಮನಾರ್ಹವಾಗಿದೆ :

"........ಕಳೆದ ವರ್ಷ ಸಪ್ಟಂಬರ ತಿಂಗಳಲ್ಲಿ ಧಾರವಾಡ ಶಹರವನ್ನು ಸುತ್ತಿಕೊಂಡ ಪ್ಲೇಗದ ಹಾವಳಿಗೆ ನಮ್ಮ ಕಾಲೇಜದ ಇಬ್ಬರು ವ್ಯವಸಾಯ ಬಂಧುಗಳೂ ಒಬ್ಬ ನೌಕರನೂ ಆಹುತಿಯಾಗಿ ಬಿದ್ದ ನಂತರ ಕಲೆಕ್ಟರ ಸಾಹೇಬರವರ ಸಮ್ಮತಿಯಿಂದ ಕಾಲೇಜವು ಬಂದು ಮಾಡಲ್ಪಟ್ಟಿತು. ಕಾಲೇಜದ ಕನ್ನಡ ಪಂಡಿತರಾದ ದಿ. ಮುಳಬಾಗಲ ಮತ್ತು ಕುಂಬಾರ ಮಾಸ್ತರನಾದ ಕರೀಮಖಾನ ಇವರ ಮರಣದಿಂದ ಕಾಲೇಜಕ್ಕೆ ಬಹಳ ಹಾನಿಯುಂಟಾಯಿತು. ಇವರ ಸ್ಥಳಗಳನ್ನು ತುಂಬಲಿಕ್ಕೆ ತಕ್ಕ ಜನರು ಸಿಗುವದು ದುಸ್ತರವಾಗಿರುತ್ತದೆ. ಇವರ ಮರಣಕ್ಕಾಗಿ ನಾನು ತುಂಬಾ ವ್ಯಸನಪಡುತ್ತೇನೆ....

೧ ಕನ್ನಡ ಶಾಲಾ ಪತ್ರಕವು : ನವೆಂಬರ ೧೮೯೮.

ಇಂಥ ಕಷ್ಟಕಾಲದಲ್ಲಿ ನಮ್ಮನ್ನು ಕಾಯ್ದು ಈ ಸುದಿನವನ್ನು ತೋರಿಸಿದ್ದಕ್ಕಾಗಿ ನಾವು ದೇವರನ್ನು ಅನನ್ಯಭಾವದಿಂದ ಭಜಿಸತಕ್ಕದ್ದು ಸರಿಯಾಗಿರುತ್ತದೆ." [೧]

ಕನ್ನಡಕ್ಕಾಗಿ ಇಷ್ಟು ದುಡಿದ ಮಹಾವಿಭೂತಿಗಳ ಬಗೆಗೆ ಅವರ ಕಾರ್ಯವಿವರವನ್ನಾದರೂ ಹೇಳ ಬಹುದಿತ್ತಲ್ಲವೇ? ಯಾಕೆ ಹೇಳಲಿಲ್ಲವೋ ಏನೋ! ಡಾ॥ ಡಿ. ವಿ. ಗುಂಡಪ್ಪನವರು ಒಂದು ಸಲ ಧಾರವಾಡಕ್ಕೆ ಬಂದಾಗ ಧಾರವಾಡದ ಒಬ್ಬ ಪ್ರಖ್ಯಾತ ವಕೀಲರಲ್ಲಿ ಇಳಿಗುಕೊಂಡಿದ್ದರಂತೆ. ಅವರಿಗೆ ಧಾರವಾಡದಲ್ಲಿದ್ದಾಗ ಕನ್ನಡದ ಪ್ರಗಲ್ಭ ಪಂಡಿತರಾದ ಮ. ಪ್ರ. ಪೂಜಾರ ಅವರನ್ನು ಕಾಣಬೇಕೆಂದು ಬಲವಾದ ಆಶೆ ಇದ್ದಿತಂತೆ. ಅದಕ್ಕಾಗಿ ತಾವು ಇಳಿದುಕೊಂಡ ಮನೆಯ ಯಜಮಾನರನ್ನು ಕುರಿತು :

"ನಾನು ಪಂಡಿತ ಪೂಜಾರ ಅವರನ್ನು ಕಾಣಬೇಕಾಗಿದೆಯಲ್ಲಾ. ಅವರು ಇರುವದೆಲ್ಲಿ?" ಎಂದು ಕೇಳಿದರಂತೆ. ಅದಕ್ಕೆ ಆ ವಕೀಲ ಮಹಾಶಯರು :

"ಪೂಜಾರರೇ? ಯಾವ ಪೂಜಾರರು? ಧಾರವಾಡದಲ್ಲಿ ಆ ಹೆಸರಿನವರಿದ್ದಂತೆ ಕಾಣುವದಿಲ್ಲ ವಲ್ಲ" ಅಂದರಂತೆ. ಈ ಪ್ರಖ್ಯಾತ ವಕೀಲಮಹಾಶಯರಿಗೆ ಧಾರವಾಡದಲ್ಲಿ ಕನ್ನಡದ ಪ್ರಕಾಂಡ ಪಂಡಿತರಾಗಿದ್ದ ಮ. ಪ್ರ. ಪೂಜಾರ ಎಂಬವರಿದ್ದರೆಂಬ ಕಲ್ಪನೆಯೂ ಕೂಡ ಇರಲಿಲ್ಲ. ಇದು ಸರಸ್ವತೀಪುತ್ರರ ಅನೂನವಾದ ವಿಧಿಲಿಖಿತ.

ಯಥಾಪ್ರಕಾರ, "ಮುಳಬಾಗಲ ಇವರು ಕಾಲೇಜಕ್ಕೆ ಮೊದಲು ೧೮೮೨ನೇ ಇಸ್ವಿಯಲ್ಲಿ ನೇಮಿಸಲ್ಪಟ್ಟರು. ಅವರ ಕೈಯಲ್ಲಿ ಈ ೧೬ ವರ್ಷಗಳೊಳಗೆ ಕನಿಷ್ಠ ಸಾವಿರದ ವರೆಗೆ ವಿದ್ಯಾರ್ಥಿಗಳು ಕಲಿತು ಹೋಗಿರುವರು. ಈ ವಿದ್ಯಾರ್ಥಿಗಳೂ ಮುಳಬಾಗಿಲ ಇವರ ಸ್ನೇಹಿತರೂ ಕನ್ನಡ ಭಾಷಾ ಭಿಮಾನಿಗಳೂ ಒಟ್ಟಾಗಿ ಒಂದು ಸ್ಮಾರಕವನ್ನು ಮಾಡುವದು ಅವಶ್ಯ. ಆದರೆ, ಬರಪಿಡುಗುಗಳಿಂದ ಜನರು ಹಣ್ಣಾದ ಕಾರಣ ಶಕ್ತ್ಯನುಸಾರ ಹಣವನ್ನು ಕೂಡಿಸಿ, ಕನ್ನಡ ಭಾಷಾವಿಷಯದಲ್ಲಿ ಉತ್ತಮ ರೀತಿಯಿಂದ ಪಾಸಾದ ಟ್ರೇನಿಂಗ ಕಾಲೇಜದ ಮೂರನೇ ವರ್ಷದ ವಿದ್ಯಾರ್ಥಿಗೆ ಪ್ರತಿವರ್ಷ ೩೦ ರೂಪಾಯಿ ಬೆಲೆಬಾಳುವಂಥ ಒಂದು ಉಚಿತವನ್ನು ಮ. ರಾ. ಮುಳಬಾಗಲರವರ ಹೆಸರಿನಿಂದ ಕೊಡುವಂತೆ ಎತ್ತುಗಡೆ ಮಾಡಬೇಕೆಂದು ನಾವು ಸೂಚಿಸುತ್ತೇವೆ" ಎಂದೂ ನಿಶ್ಚಯಿಸಲಾಯಿತು. ಈ ನಿರ್ಧಾರ ಎಷ್ಟರಮಟ್ಟಿಗೆ ಕಾರ್ಯಗತವಾಯಿತೋ ತಿಳಿಯುವಂತಿಲ್ಲ.

"ನಮ್ಮೀ ಗುರುಗಳು ನಮ್ಮಂತೆ (ಟ್ರೇನಿಂಗ) ಕಾಲೇಜಿನಲ್ಲಿ ಕಲಿತರಾದರೂ, ಅವರಲ್ಲಿಯ ವಿಶಾಲಬುದ್ಧಿಯ ಮೂಲಕ ಶಾಲಾಶಿಕ್ಷಕರಾಗಿ ಕೆಲಸ ಮಾಡುತ್ತಿರುವಾಗ್ಗೆ ಸಂಸ್ಕೃತ ಕನ್ನಡ ಭಾಷೆಗಳ ಹಲಕೆಲವು ಗ್ರಂಥಗಳನ್ನೋದಿ ಭಾಷಾವಿಶಾರದತ್ವವನ್ನು ಪಡೆದರು.... ಮುಳಬಾಗಲರು ಶುದ್ಧ ಸಾತ್ವಿಕ ರಿದ್ದರೆಂಬುದು ಅವರ ಮೂರ್ತಿದರ್ಶನದಿಂದಲೇ ವ್ಯಕ್ತವಾಗುತ್ತಿತ್ತು. ಅವರಿಗೆ ಯಾವ ತರದ ದುರ್ವ್ಯಸನವೂ ಇದ್ದಿಲ್ಲ; ಆದರೆ, ಕನ್ನಡದ ಭಾಷಾ ಸೇವೆಯನ್ನು ಮಾಡಬೇಕೆಂಬ ಸದ್‌ವ್ಯಸನ ಮಾತ್ರ ಇತ್ತು. ಅವರು ಹಾದಿ ಹಿಡಿದು ಹೋಗುವಾಗಲೂ, ಬರುವಾಗಲೂ, ಮನಸ್ಸಿನೊಳಗೆ ಕವಿತೆಯನ್ನು ರಚಿಸುತ್ತಾ, ಬಾಯಿಂದ ಮೆಲ್ಲಗೆ ಅನ್ನುತ್ತ ಇರುವರು. ಶಿಕ್ಷಣಾಲಯದಲ್ಲಿ ಹೊತ್ತಿಗೆ ಸರಿಯಾಗಿ ತಮ್ಮ ಕೆಲಸ ನಡಿಸಬೇಕೆಂಬ ಲವಲವಿಕೆಯಿಂದ ಅವರು ೯ ಗಂಟೆಗೇ ಮನೆಯಿಂದ ಹೊರಡುವರು; ಮೇಲೆ ಮೇಲೆ ವರ್ಗಗಳಿಗೆ ಹೋಗಿ ತಮ್ಮ ಸಮಯವನ್ನು ಅರಿತುಕೊಳ್ಳುವದು........ ನುಡಿಗಟ್ಟು, ಕನ್ನಡ ಕಬ್ಬಿಗರ ಕಾವ್ಯರಚನೆಗಳಿಂದಂತೂ ವಿದ್ಯಾರ್ಥಿವೃಂದದ ಮೇಲೆ ಅತ್ಯಂತ ಉಪಕಾರವನ್ನು ಗೆಯ್ದಿದ್ದಾರೆ. ಭಾಷೆಯ ಕಣ್ಣು ವ್ಯಾಕರಣವಾದ ಕಾರಣ ಸುಲಭ ಗದ್ಯದಲ್ಲಿ ಬರೆದ ಹಳೆ ಹೊಸಗನ್ನಡ ವ್ಯಾಕರಣದ ಅಭಾವ

೧ ಕನ್ನಡ ಶಾಲಾ ಪತ್ರಕವು : ಮೇ ೧೮೯೯ : ಪು. ೩೫

ದಿಂದ ಕನ್ನಡಿಗರು ಭಾಷಾ ಸಂಬಂಧದಿಂದ ಕತ್ತಲೆಯಲ್ಲಿದ್ದರೆಂದರೆ ಸಲ್ಲುವದು.... (ಶ್ರೀಯುತರು) ನಾಲ್ಕೈದು ಉತ್ತಮ ನಾಟಕಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ವಾಚಕ ವೃಂದವನ್ನು ಆನಂದಾಬ್ಧಿ ಯಲ್ಲಿ ಮುಳುಗಿಸಿಬಿಟ್ಟಿದ್ದಾರೆ.'' ಎಂದು ಧಾರವಾಡದ ಪ್ರಾಕ್ಟಿಸಿಂಗ್ ಶಾಲೆಯಲ್ಲಿ ಆಗ ಸೇರಿದ ದುಃಖ ಸೂಚಕ ಸಭೆಯಲ್ಲಿ ಹೇಳಲಾಯಿತು.

ಸ್ವತಃ ಬಡತನದಲ್ಲಿದ್ದರೂ, ಮುಳಬಾಗಲರ ಕನ್ನಡ ಭಾಷಾಭಿಮಾನ ಉಜ್ವಲವಾಗಿದ್ದಿತು. ಈ ಬಗೆಗೆ ಸಂಘದ ೫೦ನೆಯ ವರ್ಷದ ವರದಿಯಲ್ಲಿ ಹೀಗೆ ಉಲ್ಲೇಖ ಮಾಡಲಾಗಿದೆ :

"ಈ ಹಿರಿಯರು ಉಪಜೀವನಕ್ಕಾಗಿಯೂ ಸಾರ್ವಜನಿಕವಾಗಿಯೂ ಬೇರೆ ಬೇರೆ ಅಧಿಕಾರ ಸ್ಥಾನಗಳಲ್ಲಿದ್ದುಕೊಂಡು ಪರತಂತ್ರರೆನಿಸಿದ್ದರೂ, ಅವರಲ್ಲಿ ಎಲ್ಲ ಬಂಧನಗಳನ್ನು ಕಡಿದೊಗೆವ ಶಕ್ತಿಯ ಕಳಕಳಿ ಇದ್ದಿತು. ಮೊದಲ ಸಭೆಯ ಭಾಷಣಗಳಲ್ಲಿ ಮಾತ್ರವೇ ಈ ಕಳಕಳಿ ಕಂಡುಬರುವದೆಂದಲ್ಲ. ದಿನದಿನಕ್ಕೆ ಸಂಘದ ವ್ಯವಸ್ಥಾಪಕರು ಕೈಕೊಂಡ ಕೆಲಸವನ್ನೂ ವ್ಯಕ್ತ ಮಾಡುವ ಧೋರಣೆಯನ್ನೂ ನೋಡಿದರೆ ಈ ಮಹಾನುಭಾವರ ಮನೋಧೈರ್ಯದ, ನಿಶ್ಚಯಾತ್ಮಕ ಬುದ್ಧಿಯ, ಸ್ವಾಭಿಮಾನದ ಹಟದ ಕಲ್ಪನೆ ನಮಗಾಗುವದು. ಮೊದಲ ವರ್ಷದಲ್ಲಿಯೇ, ಅದೇಕೆ ಸ್ಥಾಪನೆಯ ೪ ತಿಂಗಳು ಗಳಲ್ಲಿಯೇ ವ್ಯವಸ್ಥಾಪಕರು ತಮ್ಮ ೧೩-೧೧-೧೮೯೦ರ ಅಧಿವೇಶನದಲ್ಲಿ ಧೋಂಡೊಪಂತ ಮುಳಬಾಗಲ ಇವರ ಉತ್ತರರಾಮಚರಿತ್ರೆಯನ್ನು ಅಚ್ಚು ಹಾಕಿಸಿ, ಅಚ್ಚಿನ ವೆಚ್ಚವನ್ನು ಕಳೆದು, ಉಳಿದುದರಲ್ಲಿ ನೂರಕ್ಕೆ ೬೦ರಷ್ಟು ಮಿಕ್ಕದ್ದನ್ನು ಸಂಘದ ಲೆಕ್ಕಕ್ಕೆ ಜಮೆ ಮಾಡಬೇಕೆಂದು ನಿರ್ಣಯಿ ಸಿದರು; ಈ ವ್ಯವಸ್ಥೆಗಾಗಿ ಗ್ರಂಥಕರ್ತರ ಉಪಕಾರ ನೆನೆಸಿದ್ದಾರೆ. ಗ್ರಂಥಕರ್ತರೂ ಈ ಕರಾರು ಪತ್ರಕ್ಕೆ ಮೋಡಿ ಲಿಪಿಯಲ್ಲಿ ರುಜು ಹಾಕಿದ್ದಾರೆ.''[೧]

ಕೃತಿಗಳು :

ವೇಣೀಸಂಹಾರ (೧೮೮೫) :

ಮುಳಬಾಗಲರು ಉತ್ತರರಾಮಚರಿತ್ರವನ್ನು ೧೮೭೮ರಲ್ಲಿಯೇ ಬರೆದು ಮುಗಿಸಿದ್ದರೆಂದು ಹೇಳಲಾಗಿದೆ. ಆದರೆ, 'ವೇಣೀ ಸಂಹಾರ' ನಾಟಕ ಅವರ ಪ್ರಕಟವಾದ ಕೃತಿಗಳಲ್ಲಿ ಮೊದಲನೆ ಯದು. ಈ ನಾಟಕದ ಮೊದಲನೆಯ ಆವೃತ್ತಿಯ ಪ್ರಸ್ತಾವನೆಯನ್ನು ಮುಳಬಾಗಲರು ೧-೭-೧೮೮೩ ರಂದು ಬರೆದಿದ್ದಾರೆ. ಗ್ರಂಥ ಪ್ರಕಟವಾದದ್ದು ೧೮೮೫ರಲ್ಲಿ. ಭಟ್ಟನಾರಾಯಣನ ಈ ನಾಟಕ ತನ್ನ ವೀರಶೈಲಿಯ ಮೂಲಕ ಸಂಸ್ಕೃತ ಸಾಹಿತ್ಯಪ್ರಪಂಚದಲ್ಲಿಯೇ ಪ್ರಸಿದ್ಧವಿದೆ. ರನ್ನ ಮಹಾಕವಿಯ ಸಾಹಸಭೀಮವಿಜಯಕ್ಕೆ ಎಷ್ಟೋ ಮಟ್ಟಿನ ಸ್ಫೂರ್ತಿ ದೊರೆತದ್ದು ಭಟ್ಟನಾರಾಯಣನಿಂದಲೇ. ಮೂಲ ವೇಣೀಸಂಹಾರವು ಗದ್ಯಪದ್ಯ ಸಮ್ಮಿಶ್ರವಾಗಿದ್ದರೆ, ಅನುವಾದ ಬರೀ ಗದ್ಯದಲ್ಲಿ ಮಾತ್ರ ಇದೆ. ಓದುಗರಿಗೆ ಅರ್ಥಜ್ಞಾನ ಕಷ್ಟವಾಗಬಾರದೆಂದು ಹಾಗೆ ಮಾಡಲಾಗಿದೆಯೆಂದು ಲೇಖಕರು ಹೇಳಿದ್ದಾರೆ. ಯಾವ ಉದ್ದೇಶಕ್ಕಾಗಿ ಈ ಅನುವಾದವನ್ನು ಮಾಡಲಾಯಿತೆಂಬುದರ ಬಗ್ಗೆ ಗ್ರಂಥ ಕರ್ತರು ಈ ರೀತಿ ಹೇಳಿರುತ್ತಾರೆ. ಇದರಿಂದ ಅವರ ಭಾಷಾಭಿಮಾನವನ್ನೂ ಸಾಹಿತ್ಯಪ್ರೇಮವನ್ನೂ ಅರಿತುಕೊಳ್ಳಬಹುದಾಗಿದೆ. ಇದು ೧೮೮೩ರಲ್ಲಿ ಬರೆದ ಮಾತು :

"ಕನ್ನಡ ಭಾಷೆಯ ಈಗಿನ ಸ್ಥಿತಿಯನ್ನು ನೋಡಿದರೆ, ಈ ಭಾಷೆಯಲ್ಲಿ ಎಲ್ಲಾ ವಿಷಯಗಳ ಗದ್ಯಾತ್ಮಕ ಗ್ರಂಥಗಳು ತೀರ ಕಡಿಮೆಯಾಗಿವೆ; ಒಂದು ಪಕ್ಷದಲ್ಲಿ ಇಲ್ಲೆಂದರೂ ಚಿಂತೆಯಿಲ್ಲ;

೧ ಕರ್ನಾಟಕ ವಿದ್ಯಾವರ್ಧಕ ಸಂಘ : ಐವತ್ತು ವರುಷ : ೧೯೪೧ : ಪು. ೩-೪.

ಸಾಧಾರಣ ಜನರ ಮನೋರಂಜನಾರ್ಥವಾಗಿ ಏನಾದರೂ ಓದಬೇಕೆಂದರೆ ಯೋಗ್ಯವಾದ ಪುಸ್ತಕಗಳು ಇರುವದಿಲ್ಲ; ಇದೊಂದು ಈ ಭಾಷೆಯು ಜನರ ತಿರಸ್ಕಾರಕ್ಕೊಳಗಾಗುವ ಕಾರಣವಾಗಿರುತ್ತದೆ.

ಈ ಕೊರತೆಯನ್ನು ಈಗಿನ ದೊಡ್ಡ ದೊಡ್ಡ ಕನ್ನಡ ವಿದ್ವಾಂಸರು ಕಡಿಮೆ ಮಾಡತಕ್ಕದ್ದು; ಆದರೆ, ಅವರೆಲ್ಲಾ ಬಹುಶಃ ಇಂಗ್ಲೀಷ ಅಭ್ಯಾಸದವರಾದುದರಿಂದ ಅವರ ಲಕ್ಷ್ಯವು ಆ ರಾಜಭಾಷೆಯನ್ನೋದುವದು, ಅದರ ಸ್ವಾರಸ್ಯವನ್ನೇ ಗ್ರಹಿಸುವದು ಮುಂತಾದವುಗಳ ಕಡೆಗೆ ಹೋಗಿರುತ್ತದೆ. ಆದರಂತೆ ಆ ಭಾಷೆಯಾದರೂ ಎಲ್ಲಾ ರೀತಿಯಿಂದ ಪರಿಪೂರ್ಣವಾಗಿರುವದರಿಂದ ನಮ್ಮ ಬಡ ಕನ್ನಡ ನುಡಿಯನ್ನು ನೋಡಬೇಕೆಂಬ ಪ್ರಸಂಗವೇ ಅವರಿಗೆ ಬರುವದಿಲ್ಲ. ಸರ್ವಾಲಂಕಾರ ಭೂಷಿತೆಯಾದ ಸುಂದರಿಯು ಬೇಕಾದದ್ದನ್ನೆಲ್ಲಾ ಕೊಟ್ಟು, ಸವಿ ಮಾತುಗಳನ್ನಾಡುತ್ತ ಸಮೀಪದಲ್ಲಿರುವಾಗ ೯೯ ವರ್ಷದ ಮುಪ್ಪಿನ ತಾಯಿಯ ಕಡೆಗೆ ಯಾರು ನೋಡುತ್ತಾರೆ ಎಂಬಂತೆ.

ಇನ್ನು ನಮ್ಮ ದೇಶಭಾಷೆಯನ್ನು ಮಾತ್ರ ಕಲಿತ ವಿದ್ವಜ್ಜನರಾದರೂ ಈ ಕೊರತೆಯನ್ನು ವಿಚಾರಿಸಬೇಕೆಂದರೆ ಅವರೆಲ್ಲ ಬಹುಶಃ ಬಡವರು. ಹಗಲಿರುಳು ಸರಕಾರದ ಸೇವೆಯಲ್ಲಿ ಅಥವಾ ಗೃಹಕೃತ್ಯದ ತೊಂದರೆಗಳಲ್ಲಿ ಮುಳುಗಿರುತ್ತಾರೆ. ಅಂತಹರಿಂದ ಈ ಕೆಲಸವು ಹೇಗಾದೀತು ? ಇತ್ಯಾದಿ ಸಹಸ್ರಾವಧಿ ವಿಘ್ನಗಳುಂಟಾಗಿ, ನಮ್ಮ ದೇಶ ಭಾಷೆಯು ತಿದ್ದಲ್ಪಡವೊಲ್ಲದು.

ಈಯಪೂರ್ಣತ್ವದ ಒಂದು ಲಕ್ಷಾಂಶವನ್ನಾದರೂ ಪೂರ್ಣ ಮಾಡಬೇಕೆಂದು ಮೊದಲಿಂದ ನನ್ನ ಮನಸ್ಸು ಹವಣಿಸುತ್ತದೆ. ಆದರೆ, ನನ್ನಲ್ಲಿ ಅಂತಹ ದೊಡ್ಡ ವಿದ್ವತ್ತೆ ಎಲ್ಲಿಂದ ಬರಬೇಕು ? ನಾನೂ ಮೇಲಿನವರ ವರ್ಗದವನೇ. ಆದರೂ ನನಗೆ ದೊರೆತ ಕಿಂಚಿತ್ ಜ್ಞಾನದಿಂದ ಶಕ್ತ್ಯಾನುಸಾರವಾಗಿ, ನಮ್ಮ ದೇಶಭಾಷಾ ಜನನಿಯ ಶುಶ್ರೂಷೆಯನ್ನು ಮಾಡಬೇಕೆಂದು ಈ ವೇಣೀ ಸಂಹಾರ ನಾಟಕ ಗ್ರಂಥವನ್ನು ಕನ್ನಡದಲ್ಲಿ ಬರೆದಿರುತ್ತೇನೆ.''

ಲೇಖಕರ ಮೇರೆಗೆ ಈ ನಾಟಕದಲ್ಲಿ ''ಭೀಮನ ಉಗ್ರತ್ವವೂ, ಕರ್ಣನ ದುರಭಿಮಾನವೂ, ಅಶ್ವತ್ಥಾಮನ ಕೃಪೆಯುಳ್ಳದ್ದಾದರೂ ಶೀಘ್ರಕೋಪದ ಸ್ವಭಾವವೂ, ದುರ್ಯೋಧನನ ಸ್ವಾರ್ಥದ ಅಹಂಕಾರವೂ ಬಹು ಸರಸವಾಗಿ ವರ್ಣಿಸಲ್ಪಟ್ಟಿದೆ.''

ನಾಟಕಗಳನ್ನು ಓದುವದರ ಫಲವೇನು ? ಇದು ಲೌಕಿಕ ವಿದ್ಯೆಯೇ ? ಅದಕ್ಕೆ ಅನುವಾದಕರ ಉತ್ತರವಿದು : "ನಾಟಕ ಗ್ರಂಥಗಳನ್ನೋದುವದರಿಂದ ನ್ಯಾಯಾನ್ಯಾಯಗಳ ಫಲಗಳೂ ಸತ್ಪುರುಷರ ಮೇಲಿನ ಈಶ್ವರಕೃಪೆಯೂ ದುಷ್ಟರ ಮೇಲಿನ ದೇವರ ಕ್ಷೋಭವೂ ಶಾಂತಿ ದಯಾ ಕ್ಷಮಾದಿಗಳ ಸುಖಕರ ಪರಿಣಾಮುಗಳೂ ಸತ್ಸಂಗದ ಲಾಭಗಳೂ ದುಃಸಂಗತಿಯ ದುಷ್ಟ ಪರಿಣಾಮಗಳೂ ಸದಸದ್ವಿಚಾರಗಳೂ ಜನರಿಗೆ ತಿಳಿಯುತ್ತವೆ. ಹಾಗೂ ಬೇಸತ್ತ ಜನರ ಮನರಂಜನೆಯಾಗುತ್ತದೆ."

ಇದು ಮುಳಬಾಗಲರ ಕಾಲದ ಕನ್ನಡದ ಸ್ಥಿತಿ ಹಾಗೂ ಅವರ ಗ್ರಂಥೋದ್ದೇಶ. ಭಾಷಾಂತರಕಾರರು ತಮ್ಮ ಮಂಗಲಾಚರಣದಲ್ಲಿ ಹೀಗೆ ಹೇಳಿದ್ದಾರೆ :

ಸಕಲ ಗ್ರಹಬಲ ನೀನೆ ಸರಸಿಜಾಕ್ಷಾ
ಪ್ರಕಟಮಿದು ವಿಶ್ವಸಂರಕ್ಷ ನಿರಪೇಕ್ಷಾ ॥

ನಿನ್ನ ಕರೆಯದ ಬಾಯಿ ನಿನ್ನ ಹೊಗಳದ ಕವಿತೆ
ನಿನ್ನ ಕಥೆಯಿಲ್ಲದಿಹ ಸರಸ ನಾಟಕವು

ನಿನ್ನ ನೆನೆಯುದ ಮನಸು ನಿನಗರ್ಪಿಸದ ತಿನಿಸು
ಮನ್ನಣೆಯ ಕೊಡವೆನಗೆ ಹೊನ್ನೊಡಲನಯ್ಯಾ ॥

ಮುಳಬಾಗಲರ ಗದ್ಯಶೈಲಿಯ ದೃಷ್ಟಾಂತವಾಗಿ ಈ ಕೆಳಗಿನ ಸಂಭಾಷಣೆಯನ್ನು ಗಮನಿಸಬಹುದು :

ದುರ್ಯೋಧನ : ಅವ್ವಾ ನೀನು ಆಡುವ ಮಾತು ನನಗೆ ಏನೋ ಅಯೋಗ್ಯವಾಗಿಯೂ ವಿಪರೀತವಾಗಿಯೂ ತೋರುತ್ತದೆ.

ಸಂಜಯ : ಅರಸೇ, 'ಕೊಡವು ಬಾವಿಯಲ್ಲಿ ಬಿದ್ದ ಮಾತ್ರಕ್ಕೆ ಹಗ್ಗವನ್ನು ಅಲ್ಲೇ ಚೆಲ್ಲಿಕೊಡಬಾರದು' ಎಂಬ ನಾಣ್ಣುಡಿ ಏನು ಸುಳ್ಳೇ ? ಹೇಳು.

ದುರ್ಯೋಧನ : ಈ ಮಾತಿನಲ್ಲೇನು ಅರ್ಥವಿಲ್ಲ. ಪ್ರಯೋಜನವೇ ಹೋದ ಬಳಿಕ ಸಾಧನಗಳಿಂದ ಫಲವೇನು ?........

ಮುಳಬಾಗಲರ ಈ ಅನುವಾದ ತುಂಬಾ ಜನಪ್ರಿಯವಾದಂತೆ ಕಾಣುತ್ತದೆ. ಅಂತಲೇ, ೧೮೮೫ರಲ್ಲಿ ಮೊದಲನೆಯ ಆವೃತ್ತಿ ಪ್ರಕಟವಾದ ೮ ವರ್ಷಗಳಲ್ಲಿಯೇ ಕರ್ನಾಟಕ ವಿದ್ಯಾವರ್ಧಕ ಸಂಘದವತಿಯಿಂದ ಎರಡನೆಯ ಆವೃತ್ತಿ ೧೮೯೩ರಲ್ಲಿ ಪ್ರಕಟವಾಯಿತು. ಮುಂದೆ ೧೯೧೪ರಲ್ಲಿ ಮೂರನೆಯ ಆವೃತ್ತಿಯೂ, ೧೯೨೧ರಲ್ಲಿ ನಾಲ್ಕನೆಯ ಆವೃತ್ತಿಯೂ, ೧೯೬೦ರಲ್ಲಿ ಐದನೆಯ ಆವೃತ್ತಿಯೂ ಪ್ರಕಟವಾದವು.

ಅಂದಿನ ಕಾಲಕ್ಕೆ ಕನ್ನಡವನ್ನುದ್ಧರಿಸಲು ಯಾವ ರಾಜ ಮನೆತನ ದೊರಕಿದರೂ ಸಾಕಾಗಿತ್ತು. ಮೈಸೂರೊಡೆಯರಂತೂ ಕರ್ನಾಟಕ ರತ್ನಸಿಂಹಾಸನದ ರಾಜ್ಯರಮಾರಮಣರಾಗಿದ್ದರು. ಆದರೆ, ಧಾರವಾಡದಿಂದ ಮೈಸೂರು ಬಹಳ ದೂರದ ದಾರಿ. ಆ ದಿಶೆಯಲ್ಲಂತೂ ಪ್ರಯತ್ನ ಅಗತ್ಯವೇ. ಅದೂ ಅಲ್ಲದೆ, ಉತ್ತರಕರ್ನಾಟಕದಲ್ಲಿಯೇ ರಾಜ್ಯವಾಳುತ್ತಿದ್ದ ಪಟವರ್ಧನ ಸಂಸ್ಥಾನಾಧಿಪರ ಆಸ್ಥೆ ದೊರಕಿಸಬೇಕಾಗಿತ್ತು. ಈ ಮರಾಠಿಭಾಷಿಕ ರಾಜರಲ್ಲಿ ಪಟವರ್ಧನರಕಿಂತ ಕೊಲ್ಹಾಪುರದ ಛತ್ರಪತಿ ಸಿಂಹಾಸನದವರು ಕನ್ನಡದ ಬಗ್ಗೆ ಹೆಚ್ಚು ಆಸ್ಥೆಯನ್ನು ತಳೆದಂತೆ ಕಾಣುತ್ತದೆ. ವಿದ್ಯಾವರ್ಧಕ ಸಂಘದ ಅನೇಕ ನಡೆವಳಿಕೆಗಳಲ್ಲಿ ಕೊಲ್ಹಾಪುರ ಅಧಿಪತಿಗಳನ್ನು ಧಾರವಾಡಕ್ಕೆ ಆಹ್ವಾನಿಸಬೇಕೆಂಬ ಗೊತ್ತುವಳಿಗಳಿವೆ. ಅದೂ ಅಲ್ಲದೆ, ಕೊಲ್ಹಾಪುರ ಪ್ರಾಂತದಲ್ಲಿ ಸಾಕಷ್ಟು ಮಟ್ಟಿನ ಕನ್ನಡವೂ ಇದ್ದಿತು. ರುಕಡಿ, ಶಿರೋಳ, ಹಾತಕಣಗಿಲೆ– ಮೊದಲಾದ ಭಾಗಗಳಲ್ಲದೆ, ಸ್ವತಃ ಕೊಲ್ಹಾಪುರದಲ್ಲಿಯೇ ಕನ್ನಡ ಕೆಲಮಟ್ಟಿಗಿದ್ದಿತು. ಕೊಲ್ಹಾಪುರದ ಲಕ್ಷ್ಮೀಸೇನ ಮಠಾಧೀಶರು ಕನ್ನಡ ಮಾತನಾಡುವವರಾಗಿದ್ದರು. ಕೊಲ್ಹಾಪುರದ ರಾಜಕೀಯ ಅಧಿಕಾರಿಯನ್ನು Political Agent for Karnataka and Karwira Ilakha ಎಂದೇ ಸಂಬೋಧಿಸಲಾಗುತ್ತಿತ್ತು.

ಈ ಹಿನ್ನೆಲೆಯಲ್ಲಿಯೇ ಏನೋ, ೧–೭–೧೮೯೩ರಂದು ಪ್ರಕಟವಾದ ಈ ಗ್ರಂಥದ ದ್ವಿತೀಯ ಆವೃತ್ತಿಯನ್ನು–"ಕೊಲ್ಹಾಪುರ ಪ್ರಾಂತದರಸರಾದ ಶ್ರೀಮಂತ ಛತ್ರಪತಿ ಶಾಹೂ ಮಹಾರಾಜರಿಗೆ.... ಕೃತಜ್ಞತೆಯಿಂದ ಕಾಣಿಕೆಯಾಗಿ" ಅರ್ಪಿಸಲಾಯಿತು. ಇಷ್ಟೇ ಅಲ್ಲ, ಈ ವಿಷಯಕವಾಗಿ ಔಪಚಾರಿಕವಾಗಿ ಧಾರವಾಡದಲ್ಲಿ ನೆರವೇರಬೇಕಾಗಿದ್ದ ಸಮಾರಂಭಕ್ಕೆ ಭೀಮಾಜಿ ಶ್ರೀನಿವಾಸ ಆಪಟಿಡ್ಡಿ ಎಂಬವರು ಈ ಕೆಳಗಿನ ಪದ್ಯವನ್ನೂ ರಚಿಸಿದ್ದರು :

ಶ್ರೀಮತ್ಕರವೀರ ಪುರಾಧೀಶ ಪಾಲಿಸಯ್
ಪ್ರೇಮದೆ ನಾಂ ಮಾಡುವ ಬಿನ್ನಪವ ಲಾಲಿಸಯ್ ॥ ಪ ॥

ಪೂರ್ವದೆ ಭವದೀಯ ಪದವನಾಂತ ರಾಜರು
ಉರ್ವಿಯ ಕರ್ನಾಟಕವನಾಳ್ದು ಪೋದರು ॥

ಇದರಿಂ ಕರವೀರ ರಾಜ್ಯಕೆಂದರರೆಬರು
ಮೊದಲಂ ಕರ್ನಾಟಕವೆಂದು ಬರೆದರೆಲ್ಲರು ॥

ಈಗಾದೊಡಮಿರ್ಪುದು ತಮ್ಮಾಳ್ಕೆಯಲ್ಲಿಯೇ
ಭಾಗಂ ಕೆಲಂ ಕರ್ನಾಟಕ ದೇಶವಾಗಿಯೆ ॥

ಮೊದಲೊಳೆ ಕನ್ನಡಿಗ ರಾಮರಾಯರೇಬರು
ಮುದದೆ ತಮ್ಮ ಸನ್ನಿಧಿಯ ದಿವಾಣರಿದ್ದರು ॥

ಕನ್ನಡದ ನುಡಿಯಂ ಸಮಂತು ಬೆಳೆಸಲೋಸುಗಂ
ತಮ್ಮ ಕೃಪಾದೃಷ್ಟಿಯೆಮಗಗತ್ಯಮಾವಗಂ ॥[೧]

ಈ ವೇಣೀಸಂಹಾರ ನಾಟಕದ ಬಗೆಗೆ ಅಂದಿನ ಪಂಡಿತರಾದ ರಾ. ಹ. ದೇಶಪಾಂಡೆಯವರು ಈ ರೀತಿ ಬರೆದರು :

" Mr. Dhondo Narasimha Mulabagal to whose literary labours we owe several good Kannada works, translated this drama in 1883. As the translation was favourably reported upon, Mr. W. Leewarner, M. A. C. S., then the Acting Director of Public Instruction, Bombay, was pleased to patronise the book by purchasing 250 copies".

ಮೃಚ್ಛಕಟಿಕ : (೧೮೮೯)

ಶೂದ್ರಕ ಕವಿ ವಿರಚಿತವಾದ ಮೃಚ್ಛಕಟಿಕ ನಾಟಕವು ಪ್ರಪಂಚದ ಅನೇಕ ಭಾಷೆಗಳಲ್ಲಿ ಪರಿವರ್ತಿತವಾಗಿದೆ. ಈ ನಾಟಕದ ಆಕರ್ಷಣೆ ಪ್ರಾಮುಖ್ಯವಾಗಿ ಅದರ ಸಾಮಾಜಿಕ ಕಥಾವಸ್ತುವಿನಲ್ಲಿದೆ. ಕೇವಲ ದೇವಾಸುದೇವತೆಗಳನ್ನು ಕುರಿತು ಸಾಹಿತ್ಯಸೃಷ್ಟಿಯಾಗುತ್ತಿದ್ದ ಕಾಲದಲ್ಲಿ ಓರ್ವ ಸದ್ಗುಣಿ ವೇಶ್ಯೆಯನ್ನು ಕಥಾನಾಯಕಿಯನ್ನಾಗಿ ಮಾಡಿದ ಶ್ರೇಯಸ್ಸು ಶೂದ್ರಕಕವಿಗಿದೆ. ಅದರಲ್ಲಿಯೂ ಇಲ್ಲಿಯ ಸಂಭಾಷಣೆಯಲ್ಲಿ ಬರುವ "ಕರ್ನಾಟ ಕಲಹ ಪ್ರಯೋಗಂ ಕರಿಷ್ಯಾಮಿ:" ಮೊದಲಾದ ಉಲ್ಲೇಖಗಳು ಕನ್ನಡಿಗರಿಗೆ ಆಸಕ್ತಿ ಹುಟ್ಟಿಸುತ್ತವೆ.

ಈ ಕೃತಿಯನ್ನು ಶ್ರೀ ಮುಳಬಾಗಲ ಅವರು ಕ್ರಿ. ಶ. ೧೮೮೯ ರಲ್ಲಿ ಮುದ್ರಿಸಿ ಪ್ರಕಟಿಸಿದರು. ದಿವಂಗತ ಮುಳಬಾಗಲರಲ್ಲದೆ, ಇನ್ನೂ ಇಬ್ಬರು ಗ್ರಂಥಕರ್ತರು ಈ ನಾಟಕದ ಅನುವಾದವನ್ನು ಮಾಡಿದ್ದಾರೆ. ಅವರೆಂದರೆ ದಿವಂಗತ ಗರಣೀ ಕೃಷ್ಣಮಾಚಾರ್ಯರು. ಇವರು ಮುಳಬಾಗಲರ ಗ್ರಂಥ ಪ್ರಕಟವಾದ ಮರು ವರ್ಷವೇ, ಅಂದರೆ ೧೮೯೦ ರಲ್ಲಿ ಮೃಚ್ಛಕಟಿಕ ನಾಟಕವನ್ನು ಮೃಚ್ಛಕಟಿಕ ಪ್ರಕರಣಂ ಎಂಬ ಹೆಸರಿನಿಂದ ಹಳಗನ್ನಡ ಶೈಲಿಯಲ್ಲಿ ಭಾಷಾಂತರಿಸಿದರು. ತದನಂತರ ಸುಮಾರು ೩೦ ವರ್ಷಗಳ ನಂತರ ನಂಜನಗೂಡು ಸುಬ್ಬಾಶಾಸ್ತ್ರಿ ಎಂಬವರು 'ಕರ್ನಾಟಕ ಮೃಚ್ಛಕಟಿಕ ಪ್ರಕರಣಂ' ಎಂಬ ಹೆಸರಿನಿಂದ ಈ ನಾಟಕವನ್ನು ೧೯೨೯ ರಲ್ಲಿ ಪ್ರಕಟಿಸಿದರು.

'ಮೃಚ್ಛಕಟಿಕವನ್ನು' ಸಾದ್ಯಂತವಾಗಿ ಗದ್ಯದಲ್ಲಿ ಭಾಷಾಂತರಿಸಲಾಗಿದೆ. ಈ ಅನುವಾದ

೧ ವೇಣೀ ಸಂಹಾರ ನಾಟಕ : ಸಂ. ವಾಸಿಷ್ಠ : ೧೯೬೭.

ದಕ್ಷಿಣೆಯೂ ಕೂಡ ಚಾರುದತ್ತನ ಉದಾತ್ತತೆ. (ನಿದಾಘ ಕಾಲೇಷ್ವಿವ ಸೋದಕೋದಪಾನೋ ನರಾಣಾಂ ತೃಷ್ಣಾಂ ಅಪನೀಯ ಶುಷ್ಕವಾನ್) ಶಕಾರನ ಕ್ರೂರ ಹಾಸ್ಯ, ಮೈತ್ರೇಯನ ವಿನೋದ— ಎಲ್ಲವೂ ಸಮರ್ಪಕವಾಗಿ ನಿರೂಪಿತವಾಗಿದೆ. ಶಕಾರನ ಅಪಕ್ವ ಸಂಸ್ಕೃತದ ನಿದರ್ಶನವಾಗಿ ಈ ಮಾತುಗಳನ್ನು ನೋಡಬಹುದು :

"ಸಿದ್ದೆ ಕಣ್ಣೊಳಗೇ ಇದ್ದರೂ ಕಾಣುವದಿಲ್ಲವಲ್ಲ". "ಮೂಗಿನೊಳಗೆ ಕತ್ತಲೆ ತುಂಬಿಕೊಂಡದ್ದರಿಂದ ಅಲಂಕಾರಗಳ ಸಪ್ಪಳವು ನೆಟ್ಟಗೆ ಕಾಣುವದಿಲ್ಲ", "ಉದ್ದಿನ ರಾಶಿಯಲ್ಲಿ ಕಾಡಿಗೆಯು ಗುಳಿಗೆಯಂತೆ ಈ ಕಗ್ಗತ್ತಲೆಯಲ್ಲಿ ವಸಂತಸೇನೆ ನೋಡುತ್ತಿರಲಿಕ್ಕೆ ಮಾಯವಾದಳು". "ಶಕಾರನ ಕೈಗೆ ಸಿಕ್ಕ ವಸಂತ ಸೇನೆ— ರಾವಣನ ಕೈಗೆ ಸಿಕ್ಕ ಕುಂತಿಯಂತೆ, ದ್ರೋಣಾಚಾರ್ಯರ ಕೈಗೆ ಸಿಕ್ಕ ದ್ರೌಪದಿಯಂತೆ, ಚಾಣಕ್ಯನ ಕೈಗೆ ಸಿಕ್ಕ ಸೀತೆಯಂತೆ."

ವಸಂತಸೇನೆಯು ಮನೆಯಲ್ಲಿ ಸ್ಥೂಲಾಕಾರವಾಗಿ ಮಲಗಿಕೊಂಡಿದ್ದ ಅವಳ ತಾಯಿಯನ್ನು ಕಂಡು ಮೈತ್ರೇಯನು "ಈ ರಾಕ್ಷಸಿಯ ಹೊಟ್ಟೆಯ ವಿಸ್ತಾರವಾದರೂ ಎಷ್ಟಿದೆ ? ಇವಳನ್ನು ಮುಂಚೆಯೇ ಈ ಮನೆಯಲ್ಲಿ ಕುಳ್ಳಿರಿಸಿ ಆ ಮೇಲೆ ಬಾಗಿಲವನ್ನು ಹಚ್ಚಿದರೋ ಏನೋ ?" ಎಂದು ಅನ್ನುತ್ತಾನೆ.

ಶರ್ವಿಲಕ ಕನ್ನ ಹಾಕಿದ ಮನೆಯ ಬಿಂಡಿಯನ್ನು ನೋಡಿದ ಚಾರುದತ್ತನು "ಅಯೋಗ್ಯ ಜನರ ಸಂಪರ್ಕಕ್ಕೆ ಹೆದರಿ, ಮಹಾಗೃಹದ ಎದೆ ಒಡೆಯಿತೇನೋ ಎಂಬಂತೆ ಕನ್ನವು ತೋರುತ್ತದೆ" ಎನ್ನುತ್ತಾನೆ.

ಉತ್ತರ ರಾಮ ಚರಿತ್ರ (೧೮೯೨) :

ಇದು "ಕಾರುಣ್ಯಂ ಭವಭೂತಿರೇವ ತನುತೇ" ಎಂದು ಖ್ಯಾತನಾದ ಭವಭೂತಿ ಮಹಾಕವಿ ರಚಿತವಾದ ನಾಟಕ. ಈ ನಾಟಕವಲ್ಲದೆ, ಭವಭೂತಿಯು 'ಮಾಲತೀ ಮಾಧವ' 'ಮಹಾವೀರ ಚರಿತ್ರ'— ಎಂಬ ಇನ್ನೆರಡು ನಾಟಕಗಳನ್ನೂ ಬರೆದಿದ್ದಾನೆ. ಆದರೆ, ಉತ್ತರರಾಮ ಚರಿತ್ರದಲ್ಲಿ ಭವಭೂತಿಯ ಕಾವ್ಯಶಕ್ತಿ ಪರಾಕಾಷ್ಠೆಯನ್ನು ಮುಟ್ಟಿದೆ. "ಉತ್ತರೇ ರಾಮಚರಿತೇ ಭವಭೂತಿರ್ವಿಶಿಷ್ಯತೇ" ಎಂದು ಹೇಳುವದುಂಟು. ಉತ್ತರ ರಾಮಚರಿತವನ್ನು ಓದಿ ಕಣ್ಣಲ್ಲಿ ನೀರು ಬಾರದಿದ್ದವನು "ಪಶುರೇವ ವಾ ಪಶುಪತಿ:". ಇಂಥ ನಾಟಕವನ್ನು ಮುಳಬಾಗಲರು ಸನ್ ೧೮೭೯ರ ಸಪ್ಟಂಬರ ತಿಂಗಳೊಳಗಾಗಿಯೇ ಅನುವಾದ ಮಾಡಿ ಮುಗಿಸಿದರು. ಆದರೆ, ಅದು ಮುದ್ರಣದ ಬೆಳಕನ್ನು ಕಾಣಬೇಕಾದರೆ ಸುಮಾರು ೧೩–೧೪ ವರ್ಷಗಳ ಕಾಲ ಹಿಡಿಯಿತು. ಇದನ್ನು ಕೊನೆಗೆ ಧಾರವಾಡದ ವಿದ್ಯಾವರ್ಧಕ ಸಂಘದವರು ಪ್ರಕಟಮಾಡಿದರು. ಈ ೧೪ ವರುಷಗಳ ವನವಾಸ, ಅಜ್ಞಾತವಾಸಗಳಿಗೆ ಕಾರಣ ಕನ್ನಡ ಲೇಖಕರ ದಾರಿದ್ರ್ಯವೇ ಆಗಿದೆ. ಈ ಗ್ರಂಥ ಹುಟ್ಟಿದ ಮೇಲೂ ಹಣದ ಅಭಾವದ ಮೂಲಕ ತನ್ನ ಜನ್ಮಾಂತ ಕೋಣೆಯನ್ನು ಬಿಟ್ಟು ಹೊರಬೀಳಲಾಗಲಿಲ್ಲ. ಈ ಗ್ರಂಥದ ಪ್ರಥಮ ಮುದ್ರಣದ ಪ್ರಸ್ತಾವನೆಯಲ್ಲಿ ಧೋಂಡೋಪಂತರು ಹೇಳಿದ ಮಾತುಗಳು ಆ ಕಾಲದ ಕನ್ನಡದ ಸ್ಥಿತಿ, ಕನ್ನಡ ಬರಹಗಾರರ ಆರ್ಥಿಕ ಪರಿಸ್ಥಿತಿ ಮತ್ತು ಸ್ವತಃ ಲೇಖಕನ ಸ್ವಾಭಿಮಾನಶೀಲತೆಯನ್ನು ವ್ಯಕ್ತಪಡಿಸುವದರಿಂದ ಆ ಪ್ರಸ್ತಾವನೆಯ ಕೆಲ ಭಾಗವನ್ನು ಇಲ್ಲಿ ಉದ್ಧರಿಸಲಾಗಿದೆ. ಸರಕಾರ ಗ್ರಂಥ ಪ್ರಕಟನೆಗೆಂದು ಕೊಟ್ಟ ದುಡ್ಡನ್ನು ಆ ಪ್ರಕಟನಕಾರ್ಯಕ್ಕಾಗಿ ಉಪಯೋಗಿಸಲಾರದೆ, ಸಂಸಾರದ ಆರ್ಥಿಕ ತಾಪತ್ರಯಕ್ಕಾಗಿ ಈ ಕನ್ನಡ ಲೇಖಕ ಉಪಯೋಗಿಸಿಕೊಂಡದ್ದನ್ನು ಕಾಣುತ್ತೇವೆ :

"ನಾನು ಸನ್ ೧೮೭೮ನೆಯ ಇಸವಿಯಲ್ಲಿ ಧಾರವಾಡ ಹಾಯಸ್ಕೂಲಿನ ಕನ್ನಡ ಅಧ್ಯಾಪಕನಾಗಿರುವಾಗ ಮೇಲಿನ ವರ್ಗದ ವಿದ್ಯಾರ್ಥಿಗಳು ಸಂಸ್ಕೃತ ನಾಟಕಗಳನ್ನೋದುವದನ್ನು ಕಂಡೆನು. ಅದರಿಂದ ನಾಟಕಗಳನ್ನು ಓದಬೇಕೆಂಬ ಹಂಬಲವು ನನಗೆ ಉಂಟಾಯಿತು. ಹಾಯಸ್ಕೂಲಿನ ಸಂಗ್ರಹದಲ್ಲಿ ಸಂಸ್ಕೃತ ಭಾಷೆಯ ಹೆಸರಾದ ನಾಟಕಗಳೆಲ್ಲ ಓದುವವರಿಗೆ ಸಿಗುತ್ತಿದ್ದುದರಿಂದ ನನ್ನ ಮನೋರಥಕ್ಕೆ ಮಾರ್ಗ ದೊರೆದಂತಾಗಿ ನಾನು ಪ್ರಸನ್ನ ರಾಘವ, ವೇಣೀಸಂಹಾರ, ಉತ್ತರರಾಮಚರಿತ್ರ, ಮೃಚ್ಛಕಟಿಕ, ಮುದ್ರಾರಾಕ್ಷಸ, ಪಾರ್ವತೀಪರಿಣಯ, ಮಾಲತೀ ಮಾಧವ, ಶಾಕುಂತಲ, ವಿಕ್ರಮೋರ್ವಶೀಯ ಮುಂತಾದ ನಾಟಕಗಳನ್ನು ವಿದ್ವಜ್ಜನರ ಸಹಾಯದಿಂದ ಓದಿ ಅರ್ಥವನ್ನು ತಿಳಿದುಕೊಳ್ಳುತ್ತಿದ್ದೆನು. ಹೀಗೆ, ಕೆಲವು ದಿವಸಗಳಾದ ಬಳಿಕ ನಮ್ಮ ಕನ್ನಡ ನುಡಿಯಲ್ಲಿ ಒಂದಾದರೂ ಇಂಥಾ ನಾಟಕವಿಲ್ಲದ್ದು ಕನ್ನಡಿಗರಿಗೆ ನಾಚಿಕೆಯೇ ಸರಿ ಎಂದು ಎಣಿಸಿ, ಮೊದಲು ಉತ್ತರರಾಮಚರಿತ್ರವನ್ನು ಕನ್ನಡಿಸುವ ಕೆಲಸದಲ್ಲಿ.... ತೊಡಗಿದೆನು.

ನಾನು ಇದನ್ನು ಆರೇಳು ತಿಂಗಳಲ್ಲಿ ಕನ್ನಡಿಸಿ, ಸನ್ ೧೮೭೯ನೇ ಇಸವಿ ಸಪ್ಟಂಬರ ತಿಂಗಳಿಗೆ ಮುಗಿಸಿದೆನು. ಇದನ್ನು ಬರೆಯುವಾಗ ನನ್ನ ಮಿತ್ರರಲ್ಲಿ ಒಬ್ಬ ಕನ್ನಡಿಗನು ಯಾಕೆ ವ್ಯರ್ಥ ಕಷ್ಟ ಪಡುತ್ತೀರಿ. ಇದರಿಂದ ನಿಮಗೆ ಏನೂ ಲಾಭವಿಲ್ಲ ಎಂದು ಹೇಳಿದನು. ಇದೇ ಮಾತು ನಿಜವಿರಬಹುದೆಂಬ ಭ್ರಮೆಯು ವಿಷ್ಟೋ ದಿವಸ ನನ್ನ ಮನಸಿನೊಳಗಿಂದ ಹೋಗಲಿಲ್ಲ. ಆದರೂ, ಒಂದು ಅರ್ಜಿಯನ್ನು ಬರೆದು, ಧೈರ್ಯಮಾಡಿ, ಅದನ್ನೂ ನಾನು ಕನ್ನಡಿಸಿದ ಈ ಗ್ರಂಥವನ್ನೂ ಮಹರ್ಬಾನ ಚಾಟ್‌ಫೀಲ್ಡ ಸಾಹೇಬ ಬಹಾದ್ದೂರ್, ಡಾಯರೆಕ್ಟರ, ಮುಂಬಯಿ, ಇವರ ಸನ್ನಿಧಿಗೆ ಇದಕ್ಕೆ ಸಹಾಯ ಬೇಡುವದಕ್ಕಾಗಿ ಕಳುಹಿದೆನು. ಮುಂದೆ ಕೆಲಸ ನಡೆದು ಆಯ್ದಾರು ತಿಂಗಳ ಮೇಲೆ ಮ. ಡಾಯರೆಕ್ಟರ ದೊರೆಗಳವರು ಕನ್ನಡದ ದುರ್ದೈವದ ಮೂಲಕವಾಗಿ 'ನಮ್ಮ ಗ್ರಂಥಕ್ಕೆ ಏನೂ ದೊರೆಯಲಾರದು' ಎಂದು ಅಪ್ಪಣೆಯನ್ನು ದಯಪಾಲಿಸಿದರು. ಆ ಬಳಿಕ ನನ್ನ ಉತ್ತರರಾಮ ಚರಿತ್ರವು ತಿರುಗಾಡಿ ದಣಿದು ಬಂದು ನನ್ನ ಗಂಟಿನಲ್ಲಿ ಉಸ್ಸೆಂದು ಕೂತುಕೊಂಡಿತು.

ಹೀಗಾದರೂ, ನಾನು ನಿರಾಶನಾಗದೆ, ಯಾವ ರೀತಿಯಿಂದಾದರೂ ಈ ಗ್ರಂಥವು ಪ್ರಸಿದ್ಧವಾಗಲೆಂದು ಕನ್ನಡ ಶಾಲಾ ಪತ್ರಕರ್ತರಿಗೆ ಅದರ ನಾಲ್ಕು ಅಂಕಗಳನ್ನು ಬರೆದು ಕೊಟ್ಟೆನು. ಅವರು ಅದನ್ನೆಲ್ಲ ತಮ್ಮ ಕನ್ನಡ ಶಾಲಾಪತ್ರಕದಲ್ಲಿ ತುಸು ತುಸು ಮುದ್ರಿಸಿ ಪ್ರಸಿದ್ಧ ಮಾಡಿದರು. ಬಳಿಕ ಇಲ್ಲಿಯ ಹೈಸ್ಕೂಲಿನಿಂದ ರೋಣದ ಸಾಲೆಗೆ ನನಗೆ ವರ್ಗವಾಯಿತು. ನಾನು ಅಲ್ಲಿಯ ಶಾಲಾಧ್ಯಾಪಕನಿರುವಾಗ ಮ. ರಾ. ರಾ. ದೊಡ್ಡ ಶ್ರೀನಿವಾಸರಾಯರು ಶಾಲೆಯ ಪರೀಕ್ಷೆಗೆ ಬಂದಾಗ್ಗೆ, ಈ ಪುಸ್ತಕದ ಪ್ರಸ್ತಾಪವನ್ನು ತೆಗೆಯಲು, ಇದನ್ನು ನಾವು ಮುದ್ರಿಸುತ್ತೇವೆಂದು ಹೇಳಿ ಪುಸ್ತಕವನ್ನು ತಕ್ಕೊಂಡು ಹೋಗಿ, ಧಾರವಾಡ ಜ್ಞಾನವರ್ಧಕ ಮುದ್ರಾಲಯದ ಒಡೆಯರ ಕೈಯಲ್ಲಿ ಕೊಟ್ಟರು. ಅವರು ಅದನ್ನು ತಮ್ಮ ಪುಸ್ತಕಗಳ ಸಂಗ್ರಹದಲ್ಲಿ ಇಟ್ಟುಬಿಟ್ಟರು.

ಆಮೇಲೆ ಧಾರವಾಡ ಕನ್ನಡದ ಶಿಕ್ಷಣಾಲಯದ ಕನ್ನಡ ಅಧ್ಯಾಪಕರ ಸ್ಥಳವು ತೆರವಾದದ್ದರಿಂದ ಅದಕ್ಕೆ ನನ್ನನ್ನು ಶಿಫಾರಸು ಮಾಡುವಾಗ ಮ. ರಾ. ಭುಜಂಗರಾಯರು ಮತ್ತು ಮ. ರಾ. ದೊಡ್ಡ ಶ್ರೀನಿವಾಸರಾಯರು ಇವರಿಬ್ಬರು ಉತ್ತರ ರಾಮ ಚರಿತ್ರದ ಹೆಸರನ್ನು ಹೊರಗೆ ತೆಗೆದು, ಅದಕ್ಕೆ ಆಶ್ರಯವನ್ನು ಕೊಡಬೇಕೆಂದು ಮ. ರಸೆಲ್‌ಸಾಹೇಬ, ಎಜ್ಯುಕೇಶನಲ್ ಇನಸ್ಪೆಕ್ಟರ್, ಪ್ರಾಂತ ದಕ್ಷಿಣ ಭಾಗ ಇವರಿಗೆ ಸೂಚಿಸಿದರು. ಈ ಕಾರಣದಿಂದ ಸನ್ ೧೮೮೦ನೇ ಇಸವಿಯ ಡಿಸೆಂಬರ ತಿಂಗಳಲ್ಲಿ ನನಗೆ ಪುನಃ ಧಾರವಾಡಕ್ಕೆ ಕನ್ನಡದ ಶಿಕ್ಷಣಾಲಯಕ್ಕೆ ವರ್ಗವಾಯಿತು. ಇಲ್ಲಿಗೆ ಬಂದ ಮೇಲೆ ನಾನು ಮತ್ತೆ ಜ್ಞಾನವರ್ಧಕ ಮುದ್ರಾಲಯದ ಒಡೆಯರಿಗೆ ಹೇಳಿಕೊಂಡದ್ದರಿಂದ ಅವರು ಈ ನಾಟಕವನ್ನು

ತಮಗೆ ಅನುವಾದಂತೆ ನಾಲ್ಕು ಅಂಕಗಳ ವರೆಗೆ ಶಿಲಾಕ್ಷರಗಳಿಂದ ಮುದ್ರಿಸಿದರು. ಆದರೂ, ಆ ಕೆಲಸವು ಮುಂದೆ ಸಾಗದೆ ಅಷ್ಟಕ್ಕೇ ನಿಂತು ಹೋಯಿತು.

ಇಷ್ಟರಲ್ಲಿ ಮೆ. ರಸೆಲ್ ಸಾಹೇಬರವರ ಸನ್ನಿಧಿಗೆ ಉತ್ತರರಾಮಚರಿತ್ರದ ಶಿಫಾರಸುಗಳು ತಲುಪಿದ್ದವು. ಅವರು ಈ ಪುಸ್ತಕವು ಲೋಕಪ್ರಿಯವಾಗಿದೆ, ಇದಕ್ಕೆ ರಾಜಶೇಖರದ ಆಶ್ವಾಸನೆಗಳಿಗೆ ಕೊಟ್ಟಂತೆ ಆಶ್ರಯವನ್ನು ಕೊಡಬೇಕು ಎಂದು ಮೆ. ಡಾಯರೇಕ್ಟರ ದೊರೆಗಳಿಗೆ ಬರೆದದ್ದರಿಂದ, ಡಾಯರೇಕ್ಟರ ದೊರೆಗಳು 'ಉತ್ತರ ರಾಮ ಚರಿತ್ರವು ಮುದ್ರಿಸಲ್ಪಟ್ಟಿತೋ ಹ್ಯಾಗೆ' ಎಂದು ಮ. ರಾ. ಕನ್ನಡದ ಶಿಕ್ಷಣಾಲಯದ ಪ್ರಿನ್ಸಿಪಾಲ ಭುಜಂಗರಾಯರನ್ನು ಕೇಳಿದರು. ಪ್ರಿನ್ಸಿಪಾಲರು ನನ್ನನ್ನು ಕೇಳಿಕೊಂಡು, ಇನ್ನೂ ಮುದ್ರಿಸಿಲ್ಲವೆಂದು ಬರೆದು ತಿಳುಹಿಸಿದರು. ಆ ಬಳಿಕ ಸುದೈವದಿಂದ ಅದೇ ಡಾಯರೇಕ್ಟರ ದೊರೆಗಳಿಂದ ಇನ್ನೂರು ರೂಪಾಯಿಗಳ ಹುಂಡಿಯು 'ಉತ್ತರ ರಾಮ ಚರಿತ್ರ'ದ ಇನಾಮೆಂದು ನನಗೆ ಬಂದು ತಲುಪಿತು." ೧

ಇದು ಉತ್ತರರಾಮಚರಿತ್ರದ ಮುದ್ರಣದ ಕಥೆ; ಅದು ನಡೆದು ಬಂದ ದಾರಿ. ಹಣವಿಲ್ಲದ ಒಬ್ಬ ವ್ಯಕ್ತಿ ಒಂದು ಪುಸ್ತಕವನ್ನು ಪ್ರಕಟಿಸಬೇಕಾಗಿದ್ದರೆ, ಪಡಬೇಕಾಗಿದ್ದ ಪರಿಶ್ರಮದ ಕಲ್ಪನೆಯನ್ನು ನಾವು ಇದರಲ್ಲಿ ಕಾಣಬಹುದು. ಜಿಗುಟಿದ್ದವರೇ ಇಂಥ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗುತ್ತಿತ್ತು. ಆದರೆ, ಇಲ್ಲಿಗೆ ಚರಿತ್ರದ ಮುದ್ರಣದ ಕಥೆ ಮುಗಿಯಿತೇ ? ಇನ್ನೂ ಇಲ್ಲ; ಮುಳಬಾಗಲರ ವೈಯಕ್ತಿಕ ಅನಾನುಕೂಲತೆ ಪುನಃ ಅಡ್ಡಿವೊಡ್ಡಿತು. ಅವರೇ ಪ್ರಾಮಾಣಿಕವಾಗಿ ಹೇಳುವಂತೆ :

"(ಆ ಬಳಿಕ ಸುದೈವದಿಂದ ಅದೇ ಡಾಯರೆಕ್ಟರ ದೊರೆಗಳಿಂದ ಇನ್ನೂರು ರೂಪಾಯಿಗಳ ಹುಂಡಿಯು ಉತ್ತರರಾಮ ಚರಿತ್ರದ ಇನಾಮೆಂದು ನನಗೆ ಬಂದು ತಲುಪಿತು.) ಆಗ ನನ್ನ ಮಗಳ ಮದುವೆಯ ಕಾರ್ಯ ನಡೆದಿತ್ತು. ಅದಕ್ಕೆ ಆಯತ್ತವಾಗಿ ರೂಪಾಯಿಗಳು ದೊರೆದವೆಂದು ನಾನು ಆ ಹಣವನ್ನು ಬಳಸಿಕೊಂಡ ಕಾರಣ ಉತ್ತರರಾಮಚರಿತ್ರವನ್ನು ಮುದ್ರಿಸುವದು ಹಾಗೇ ಉಳಿಯಿತು. ಇತ್ತಲಾಗಿ, ಕನ್ನಡ ಗ್ರಂಥಗಳ ಸುದೈವದಿಂದ ಧಾರವಾಡದಲ್ಲಿ ಮ. ರಾ. ರಾಮಚಂದ್ರರಾವ ದೇಶಪಾಂಡೆ. ನರೇಂದ್ರ ಇವರ ಅವಿಶ್ರಾಂತ ಪ್ರಯತ್ನದಿಂದ, ಕನ್ನಡ ಪುಸ್ತಕಗಳಿಗೆ ನೆರವಾಗುವ ಉದ್ದೇಶದಿಂದ 'ಕರ್ನಾಟಕ ವಿದ್ಯಾವರ್ಧಕ ಸಂಘವು' ಎಂಬ ಹೊಸ ಸಂಸ್ಥೆಯು ಉಂಟಾಯಿತು. ಕೊನೆಗೆ, ಸಂಘದ ಉದಾರಾಶ್ರಯದಲ್ಲಿ ಉತ್ತರರಾಮಚರಿತ್ರದ ಹಸ್ತಪ್ರತಿ ಸಿದ್ಧವಾದ ೧೪ ವರ್ಷಗಳ ನಂತರ, ಅಂದರೆ ೧೮೯೨–೯೩ ರಲ್ಲಿ ಗ್ರಂಥ ಪ್ರಕಟಿತವಾಯಿತು."

ಮುಳಬಾಗಲರು ಸಂಸ್ಕೃತ ಮೂಲದಿಂದ ಅನುವಾದ ಮಾಡಿದ್ದರೂ, ಅವರ ಭಾಷಾಂತರ ಶೈಲಿ ಲಲಿತವಾಗಿದೆ; ಹೃದಯಂಗಮವಾಗಿದೆ. ಅವರ ಕೃತಿಗಳನ್ನು ಓದುವಾಗ ಯಾವುದೋ ಅನುವಾದವನ್ನು ಓದುತ್ತಿದ್ದೇವೆಂಬ ಭಾವನೆ ಕೂಡ ಉಂಟಾಗುವದಿಲ್ಲ. ದಿನಬಳಕೆಯ ಪಡೆನುಡಿಗಳು ಮತ್ತು ಗಾದೆಯ ಮಾತುಗಳು ಅವರ ಶೈಲಿಯ ಪ್ರಸಾದ ಗುಣವನ್ನು ಹೆಚ್ಚಿಸುತ್ತವೆ. ಉದಾಹರಣೆಗೆ ಈ ಸಲೀಲತೆಗಾಗಿ 'ಉತ್ತರ ರಾಮಚರಿತೆ'ಯ ಈ ಅನುವಾದಗಳನ್ನು ನೋಡಬಹುದು :

ರಾಮಚಂದ್ರನು ಲವನ ರೂಪವನ್ನು ನೋಡಿ :

ಇವು ಲೋಕಂಗಳ ಕಾಯಪುಟ್ಟಿದ ಧನುರ್ವೇದಾಂಗವೋ ವೇದ ಘೋ
ಷದ ಸಂರಕ್ಷಣೆಗಾಗಿ ಜನ್ಮಿಸಿದ ಸಾಕ್ಷಾತ್ ಕ್ಷಾತ್ರ ಸದ್ಧರ್ಮವೋ

೧ ಉತ್ತರರಾಮಚರಿತ ನಾಟಕವು : ೧೮೯೨ : ಪು. ೧–೪.

ಇದು ಸಾಮರ್ಥ್ಯದ ರಾಶಿಯೋ, ಗುಣಗಣಕ್ಕಾಧಾರವೋ ಬಾಲರೂ
ಪಿದು ಲೋಕಂಗಳ ಪುಣ್ಯ ಕರ್ಮನಿಕರಂ ಪ್ರತ್ಯಕ್ಷಮೆಂ ನಿಂದುದೊ ! ॥

ವೈರಂ ನಂದಿತು ಶಾಂತಿ ಪೆರ್ಚುತಿತುದೀಗಾನಂದ ಸಂಪೂರಿತಂ
ದೂರಾಯ್ತುದ್ಧತ ಭಾವಮುಂ ವಿನಯವೆನ್ನಂ ಬಾಗಿಸುತ್ತಿರ್ಪುದು
ಸೇರಿತ್ತೆನ್ನಯ ಚಿತ್ತವೀಮುಹಿಮನೊಳ್, ಕಂಡಾಕ್ಷಣಕ್ಕೀತನಂ
ಚಾರಿತ್ರ್ಯಾತಿಶಯಂ ಮಹಾಂತರೊಳಗಾಧಂ ತೀರ್ಥಮಹಾತ್ಮೆವೊಲ್ ॥

ಇನ್ನೊಂದು ಭಾಗ ಮೂಲ ಸಂಸ್ಕೃತದಲ್ಲಿ ಹೀಗಿದೆ :

ವ್ಯತಿಸೃಜತಿ ಪದಾರ್ಥಾನ್ ಆಂತರಃಕೋಪಿ ಹೇತುಃ
ನಖಲು ಬಹಿರುಪಾಧೀನ್ ಪ್ರೀತಯಃ ಸಂಶ್ರಯಂತೇ ॥

ಇದರ ಕನ್ನಡಾನುವಾದ :

ಒಳಗಿರ್ಪೊಂದು ನೆವಂ ಪದಾರ್ಥಗಳ ತಾಂ ಕಟ್ಟಳ್ಕರಿಂ ಕಟ್ಟುಗುಂ
ತಿಳಮಾತ್ರಂ ಬಹಿರಂಗ ಕಾರಣಗಳಂ ಪ್ರೇಮಂಗಳಾಶ್ರೈಸವು
ನಳಿನಂ ಕೋಮಲಮುಷ್ಣರಶ್ಮಿಯುದಯಕ್ಕಾನಂದಮಂ ತಾಳ್ವುದು
ತ್ಪಳಮಿತ್ರಾಮೃತ ರಶ್ಮಿಯಿಂ ದ್ರವಿಸುಗುಂ ಚಂದ್ರೋಪಲಂ ಕರ್ಕಶಂ ॥

ನುಡಿಗಟ್ಟು (೧೮೯೨):

೨೧೪ ಪುಟಗಳ ಈ ಪುಸ್ತಕ ಸನ್ ೧೮೯೨ ರಲ್ಲಿ ಪ್ರಥಮ ಸಲ ಪ್ರಕಟವಾಯಿತು. ಸನ್ ೧೯೨೭ ರಷ್ಟರಲ್ಲಿಯೇ ಇದರ ೧೨ ಆವೃತ್ತಿಗಳು ಹೊರಬಂದವು. ಪ್ರತಿಸಲವೂ ಸುಮಾರು ೧೦,೦೦೦ ದಷ್ಟು ಪ್ರತಿಗಳನ್ನು ಮುದ್ರಿಸಿದಂತೆ ಕಾಣುತ್ತದೆ. ಇದರ ಮೇಲಿಂದ ಕನ್ನಡ ವ್ಯಾಕರಣದ ಅಭ್ಯಾಸಕ್ಕೆ ಒಂದು ಕಾಲದಲ್ಲಿ ಈ ಪುಸ್ತಕ ಎಷ್ಟು ಅನಿವಾರ್ಯವಾಗಿತ್ತೆಂಬುದನ್ನು ಊಹಿಸಬಹುದು.

ನುಡಿಗಟ್ಟು ಒಂದು ಕಾಲಕ್ಕೆ ಕನ್ನಡ ಅಭ್ಯಾಸಿಗಳ ಭಗವದ್ಗೀತೆಯಾಗಿದ್ದಿತು. ದರ್ಪಣ, ಶಾಸನ ಮೊದಲಾದ ಹಳಗನ್ನಡ ವ್ಯಾಕರಣಗಳ ಅಭ್ಯಾಸ ಮಾತ್ರವಲ್ಲದೆ, ಲೇಖಕರ ಸ್ವಾನುಭವದ ಮೂಲಕ ಹೇಳಲ್ಪಟ್ಟ ನಿಯಮ– ದೃಷ್ಟಾಂತಗಳೂ ಈ ಗ್ರಂಥದಲ್ಲಿವೆ. ಉದಾಹರಣೆಗೆ, ಸಂಧಿ ಮಾಡಬೇಕಾದಲ್ಲಿ ಕಡ್ಡಾಯವಾಗಿ ಸಂಧಿಯನ್ನು ಮಾಡಬೇಕೆಂತಲೂ, ಮಾರ್ಗದಲ್ಲಿದ್ದ ಸಂಧಿಯನ್ನು ಬಿಡಬಾರ ದೆಂತಲೂ ಕೇಶಿರಾಜನು ಹೇಳಿದ್ದಾನಷ್ಟೆ ! ಹಾಗೆಯೇ ಮುಳಬಾಗಲರು ಈ ಉದಾಹರಣೆಯನ್ನು ಹೇಳುತ್ತಾರೆ : "ಅವನು ಅಂಥ ಜಾಣನೇ ?" ಈ ವಾಕ್ಯದ ಮೊದಲಿನ ಎರಡು ಪದಗಳನ್ನು ಕೂಡಿಸಬಾರದು. ಕೂಡಿಸಿದರೆ, 'ಅವನಂಥ ಜಾಣನೇ ?' ಎಂಬ ಬೇರೆ ಅರ್ಥವಾಗುತ್ತದೆ. 'ಬಾಳಾ ಊರು ಅನ್ನು, ನೋಡುತ್ತೇನೆ' ಈ ವಾಕ್ಯದ ನಡುವಿನ ಎರಡು ಪದಗಳನ್ನು ಕೂಡಿಸಬಾರದು; ಕೂಡಿಸಿದರೆ', 'ಬಾಳಾ, ಊರನ್ನು ನೋಡುತ್ತೇನೆ' ಎಂದು ಬೇರೆ ಅರ್ಥವು ಹುಟ್ಟುತ್ತದೆ."[೧]

ಮುಳಬಾಗಲರ ಈ ಪ್ರತಿಭೆಯನ್ನು ಇನ್ನೂ ಹಲವೆಡೆಗೆ ನೋಡುತ್ತೇವೆ. ಅವರು ಭಾಷಾ

೧ ನುಡಿಗಟ್ಟು ೧೯೨೪ : ಪು. ೧೪.

[illegible]

[illegible] :

ರ ಸಿದ್ಧಂ ಮೋಹನ ಯಂ
[illegible]
ರಳಿಯುಂದರ ಪತ್ರಗೊಳನೆ
[illegible] ॥

[illegible] ಶೋಭಿಸುವವು." ೧

[illegible] ಈ ರೀತಿ [illegible] ತಿಳಿಸಿದ್ದಾರೆ :

[illegible] ದರ ಸಂಗಡ ೩೦೧ ಕಳುಹಿಸಿರುತ್ತದೆ.

[illegible]

[illegible] ರವರ ಅಂಕಿತವಿದೆ. ೨

([illegible]) :

[illegible]

ಅದನೇ ಕನ್ನಡ ಗದ್ಯಪದ್ಯರಚನಾವಿನ್ಯಾಸಮಂ ಮಾಡಿದಂ
ಪದಿನೆಣ್ಣೂರ್ಪದಿನಾರ್ಶಕಾಬ್ದದಲಿ ತಾಂ ತೇಜೋನೃಸಿಂಹಾಭಿಧಂ ॥

–ಎಂಬ ಕನ್ನಡ ಮಾಲವಿಕಾಗ್ನಿಮಿತ್ರದ ಮುಖಪುಟದ ಮೇಲಿನ ಪದ್ಯದಿಂದ, ಇದನ್ನು ಮುಳಬಾಗಲರು ಪದಿನೆಣ್ಣೂರ್ಪದಿನಾರ ಶಕಾಬ್ದದಲ್ಲಿ– ಅಂದರೆ ೧೮೧೬ನೆಯ ಶಾಲಿವಾಹನ ಶಕೆಯಲ್ಲಿ, ಅಂದರೆ ಸನ್ ೧೮೯೪ರಲ್ಲಿ ರಚಿಸಿದಂತೆ ಕಂಡುಬರುತ್ತದೆ.

ಈ ಗ್ರಂಥವನ್ನು ಕರ್ನಾಟಕ ವಿದ್ಯಾವರ್ಧಕ ಸಂಘದವರು ೧೮೯೭ನೆಯ ಇಸವಿಯಲ್ಲಿ ಪ್ರಕಟಿಸಿದರು. ಈ ಪುಸ್ತಕವನ್ನು ಕೆಲಕಾಲ ಮುಂಬಯಿ ಹಾಯಕೋರ್ಟಿನ ನ್ಯಾಯಾಧೀಶರೂ, ಮುಂಬಯಿ ವಿಶ್ವವಿದ್ಯಾಲಯದ ಕುಲಪತಿಗಳೂ ಮತ್ತು ಸಂಘದ ಬಹುಮಾನಿತ ಸಭಾಸದರೂ ಆಗಿದ್ದ ಮಿ. ಜಾನ್ ಜಾರ್ಡಿನ್ ಐ.ಸಿ.ಎಸ್ ಇವರಿಗೆ "ಕನ್ನಡಿಗರ ಮೇಲೂ ಕನ್ನಡ ಭಾಷೆಯ ಮೇಲೂ ಮಾಡುವ ಪ್ರೀತಿಯನ್ನೂ ಧಾರವಾಡ ಜಿಲ್ಲೆಯಲ್ಲಿ ಸ್ತ್ರೀ ಶಿಕ್ಷಣಕ್ಕೆ ಉತ್ತೇಜನ ಕೊಟ್ಟದ್ದನ್ನೂ ನೋಡಿ" ಸಮರ್ಪಿಸಲಾಗಿದೆ.

ಮುಳಬಾಗಲರ ಈ ಅನುವಾದದ ಬಗೆಗೆ ಮಿ. ಜಾರ್ಡಿನ್ ಅವರು ಹೀಗೆ ಹೇಳಿದ್ದಾರೆ :

"Mulbagal has chosen what after these centuries of the past may be called now everlasting, something that remains grandly in contrast to the less enduring writings."

ಮುಳಬಾಗಲರ ಅನುವಾದ ಶೈಲಿಯ ದೃಷ್ಟಾಂತವಾಗಿ ಕೆಳಗಿನವುಗಳನ್ನು ನೋಡಬಹುದು :

ಪ್ರವೇಶಮಲ್ತಯ್ ಪಳದೆಂದೆ ಎಲ್ಲಂ
ನವೀನಮೆಂದೇ ಕೆಡಕಲ್ತು ಕಬ್ಬಂ
ಪ್ರವೀಣರೊಂದಂ ನಡೆನೋಡಿಕೊಂಬರ್
ವಿವೇಕಹೀನಂ ಪರವಾಕ್ಯಪ್ರಮಾಣಂ ॥

ಇದು ಈ ಕೆಳಗಿನ ಸಂಸ್ಕೃತ ಶ್ಲೋಕದ ಅನುವಾದ :

ಪುರಾಣಮಿತ್ಯೇವ ನ ಸಾಧುಸರ್ವಂ
ನಚಾಪಿ ಕಾವ್ಯಂ ನವಮಿತ್ಯವದ್ಯಂ
ಸಂತಃ ಪರೀಕ್ಷಾಂತರಾದ್ಭವಂತೇ
ಮೂಢಃ ಪರಪ್ರತ್ಯಯನೇನ ಬುದ್ಧಿಃ ॥

ಮುಳಬಾಗಲರು ಪದ್ಯರೂಪದಂತೆ ಗದ್ಯರೂಪವನ್ನೂ ಅಷ್ಟೇ ಯಶಸ್ವಿಯಾಗಿ ಉಪಯೋಗಿಸಿದರು. ಮುಳಬಾಗಲರ ಸಾಹಿತ್ಯ ಸೇವೆಯ ಬಗೆಗೆ ಬರೆಯುವಾಗ ವಿಮರ್ಶಕರೊಬ್ಬರು ಹೀಗೆ ಹೇಳಿದ್ದಾರೆ :

"ದಿವಂಗತ ಮುಳಬಾಗಲ ಅವರ ಜೀವಿತ ಕಾಲದಲ್ಲಿ ಹೊಸಗನ್ನಡ ಗದ್ಯಶೈಲಿ ಇನ್ನೂ ರೂಪುಗೊಂಡಿರಲಿಲ್ಲ. ಕನ್ನಡದ್ದುವೆಂದು ಇದ್ದ ಗ್ರಂಥಗಳೆಲ್ಲ ಹಳಗನ್ನಡ–ನಡುಗನ್ನಡ ಭಾಷೆಯ ಪದ್ಯಮಯವಾದವುಗಳು. ಗದ್ಯರೂಪದಲ್ಲಿ ಕಿವಿಗೆ ಬೀಳುವ ಕನ್ನಡವೆಂದರೆ ಈ ಪ್ರದೇಶದ ಜನ ಬಳಕೆಯ ಆಡುಗನ್ನಡ ! ಇದೇ ಕನ್ನಡ ನುಡಿ, ಅಂದಿನ ಸರಕಾರದ ಕಚೇರಿಯ ಕಾಗದಪತ್ರಗಳಲ್ಲಿ,

ಅನ್ಯಭಾಷೆಯ ಪದ– ಪಡೆನುಡಿಗಳೊಂದಿಗೆ ಕೂಡಿ ವಿಚಾರ ಹೊಂದಿ, ಕನ್ನಡ ಗದ್ಯವಾಗಿ ಮೂಡಿಕೊಂಡಿತ್ತು. ಈ ಪರಿಸ್ಥಿತಿಯಲ್ಲಿ, ಗಂಭೀರ ವಿಷಯಗಳನ್ನು ಒಳಗೊಂಡ ಕನ್ನಡ ಗ್ರಂಥಗಳನ್ನು ಬರೆಯುವುದಕ್ಕೆ ಅನುಕೂಲವಾದ ಗದ್ಯಶೈಲಿಯನ್ನು ನಿರ್ಮಿಸುವ ಪ್ರಾರಂಭ ಪ್ರಯತ್ನಗಳು ನಡೆದುವು. ದಿವಂಗತ ಚುರಮರಿ ಶೇಷಗಿರಿರಾಯರು, ದಿವಂಗತ ವೆಂಕಟ ರಂಗೊ ಕಟ್ಟಿಯವರು, ದಿವಂಗತ ಗಂಗಾಧರ ಮಡಿವಾಳೇಶ್ವರ ತುರಮರಿಯವರು, ದಿವಂಗತ ಧೋಂಡೋ ನರಸಿಂಹ ಮುಳಬಾಗಲ ಅವರು– ಇವರೇ ಅಂತಹ ಪ್ರಯತ್ನಕಾರರಲ್ಲಿ ಪ್ರಮುಖರಾದವರು.

ಶ್ರೀ ಮುಳಬಾಗಲ ಅವರು ನಿರ್ಮಿಸಿದ ಗದ್ಯಸಾಹಿತ್ಯವೆಲ್ಲವೂ ಅವರ ಪ್ರಾರಂಭಪ್ರಯತ್ನದ ಫಲವಾಗಿ ಬಂದುದು. ಅವರ ಮರಣೋತ್ತರದ ಈ ಮುಕ್ಕಾಲು ಶತಮಾನದ ಅವಧಿಯಲ್ಲಿ, ಕ್ರಮಕ್ರಮವಾಗಿ ಕನ್ನಡ ಗದ್ಯಶೈಲಿ ಹೊಸ ಹೊಸ ಬೆಡಗು–ಬಿನ್ನಾಣಗಳನ್ನು ಪಡೆಯುತ್ತ ಮುನ್ನಡೆಯುತ್ತ ಬಂದಿದೆ........ ಇಂದಿನ ಕನ್ನಡ ವಾಚಕವರ್ಗಕ್ಕೆ, ಅಂದಿನ ಪ್ರಾರಂಭ ಕಾಲದ ಗದ್ಯದ ಗತಿ ವಿಲಕ್ಷಣವಾಗಿಯೂ, ವಿಚಿತ್ರವಾಗಿಯೂ, ಅಸ್ವಾಭಾವಿಕವೆಂದೂ ಎನಿಸುತ್ತಲಿದೆ. ಆದರೆ ನಮ್ಮ ಪ್ರಾರಂಭದ ಗದ್ಯ ಶೈಲಿಯ ನಿರ್ಮಾತೃಗಳ ಋಣವನ್ನು ಇಂದಿನ ನಾವು ಮರೆತು ನಡೆಯುವದೆಂದರೆ, ಅದು ಕೃತಘ್ನವೆನಿಸದಿರದು.''[೧]

೧ ಮೃಚ್ಛಕಟಿಕ. ಪ್ರಸ್ತಾವನೆ : ಬೆಟಗೇರಿ ಕೃಷ್ಣಶರ್ಮ : ೧೯೬೧ : ಪು. ೯.

ಮಲ್ಲಪ್ಪ ಬಸಪ್ಪ ಚಾಂದಕವಠೆ

(೧೮೫೦)

ಇವರು ವಿಜಾಪುರ ಜಿಲ್ಲೆಯ ಜುಮನಾಳ ಎಂಬ ಗ್ರಾಮದಲ್ಲಿ ಶಾಲಾ ಮಾಸ್ತರರಾಗಿದ್ದರು. ಇವರು 'ಗಂಗಾವತರಣ ಮಹಿಮೆ ಅಥವಾ ಸಿಂದುಗಿ ನೀಲಗಂಗಾ ವಿಲಾಸ' ಎಂಬ ಭಾಮಿನಿ ಷಟ್ಪದಿ ರೂಪವಾದ ೧೪ ಸಂಧಿಗಳ ಕಾವ್ಯವನ್ನು ರಚಿಸಿದ್ದಾರೆ. ಈ ಕೃತಿ ಸನ್ ೧೯೨೫ ರಲ್ಲಿ ವಿಜಾಪುರದ ಹಿತಚಿಂತಕ ಛಾಪಖಾನೆಯಲ್ಲಿ ಮುದ್ರಿತವಾಯಿತು. ಈ ಗ್ರಂಥ ರಚನೆಯ ಬಗೆಗೆ ಪ್ರಸ್ತಾವನೆಯಲ್ಲಿ ಕವಿಗಳು ಹೀಗೆ ಹೇಳಿದ್ದಾರೆ :

"ವಿಜಾಪುರ ಜಿಲ್ಲೆಯಲ್ಲಿಯ ತಾಲೂಕ ಸಿಂದಗಿಯಲ್ಲಿ ನೀಲಗಂಗಾ ಉತ್ಸವವು ಬಹು ದಿನಗಳಿಂದ ನಡೆಯುತ್ತಿದ್ದು ಭಕ್ತರ ಸಂಖ್ಯೆಯೂ ಹೇರಳವದೆ. ಹೀಗಿದ್ದು ನೀಲಗಂಗೆಯ ನಿಜವಾದ ಸಚ್ಚರಿತ್ರೆಯ ಗೂಢವೇ ತಿಳಿಯದಾಗಿತ್ತು. ಕೆಲವರು ಶ್ರೀ ಬಸವೇಶ್ವರರ ಪತ್ನಿಯವರಾದ ನೀಲಮ್ಮನವರೇ ಈ ನೀಲಗಂಗಾಂಬೆಯೆಂದೂ, ಮತ್ತೆ ಕೆಲವರು ಪವಿತ್ರಳಾದ ಒಬ್ಬ ಹೆಣ್ಣುಮಗಳು ಅಗಾಧ ಮಹಿಮೆಗಳನ್ನು ಮಾಡಿ ಈ ಹೆಸರಿನಿಂದ ಪ್ರಸಿದ್ಧಳಾಗಿರುವಳೆಂತಲೂ ಅಭಿಪ್ರಾಯಪಡುತ್ತಲಿದ್ದರು. ನಾನು ಈ ಸಿಂದುಗಿಯಲ್ಲಿ ೪ ವರ್ಷ ಕೆಲಸ ಮಾಡುವಾಗ ನಿಜ ವೃತ್ತಾಂತವನ್ನು ಶೋಧಿಸಲು ನೀಲಗಂಗಾಂಬೆಯು ಕೇವಲ ಭಾಗೀರಥಿಯೆಂದು ಸ್ಪಷ್ಟವಾಗಿ ತಿಳಿಯಿತು.

ಭಾಗೀರಥಿಯು ಸಿಂದುಗಿಯಲ್ಲಿರುವ ಪಾವಾಡ ಶೆಟ್ಟಿಯವರ ಮನೆಯ ನಡುಗಂಬದಿಂದ ಜಲರೂಪವಾಗಿ ಪ್ರಕಟಿಸಿ, ಪೂಜಕರ ಮುಖದಿಂದ ಅನಂತ ಮಹಿಮೆಗಳನ್ನು ತೋರಿಸಿ ಲೋಕೋದ್ಧಾರವನ್ನು ಮಾಡಿದಳು."

ಈ ಕಥೆಯನ್ನೇ ಕವಿಗಳು ಸುಂದರವಾಗಿ ಪ್ರಸ್ತುತ ಗ್ರಂಥದಲ್ಲಿ ವಿವರಿಸಿದ್ದಾರೆ. ಶ್ರೀಯುತರಿಗೆ ಈ ಐತಿಹ್ಯದ ವಿವರಗಳನ್ನು ಒದಗಿಸಿದವನು ಚನವೀರ ಬೊಮನಿಂಗಪ್ಪ ಬೊಮ್ಮಣ್ಣೆ ಎಂಬವರು. ಅವರು ಗದ್ಯರೂಪದಲ್ಲಿ ಬರೆದುಕೊಟ್ಟುದನ್ನೇ ತಾವು ಪದ್ಯರೂಪದಲ್ಲಿ ಬರೆದುದಾಗಿ ಹೇಳುತ್ತಾರೆ. ಅವರು ಸ್ವವಿಷಯಕವಾಗಿ ಹೀಗೆ ಹೇಳುತ್ತಾರೆ :

ಕಾಲದಲಿ ಮಲ್ಲಪ್ಪನೆನ್ನುತೆ
ಕೀಲಿಸಿದರೀ ನಾಮವಂಗಕೆ
ಪಾಲಿಸಿದರಾ ತಾತ ಬಸವನು ಮಾತೆ ಸಂಗಮ್ಮಾ ॥

–ಶ್ರೀಯುತರು ಸಿದ್ಧರಾಮನ ಸೇವಕರು. ತಾವು ೭೫ ವರುಷದವರಿದ್ದಾಗ, ಇದನ್ನು ರಚಿಸಿದೆವೆಂದು

ಹೇಳುವುದರಿಂದಲೂ, ಈ ಗ್ರಂಥ ೧೯೨೫ ರಲ್ಲಿ ಪ್ರಕಟವಾದುದರಿಂದಲೂ ಶ್ರೀಯುತರ ಜನನ ಸನ್ ೧೮೫೦ ಎಂದು ಹೇಳಬೇಕಾಗುತ್ತದೆ.

ಈ ಕಾವ್ಯದಲ್ಲಿ ಭಗೀರಥನು ಅತಿಶಯ ಪ್ರಯತ್ನದಿಂದ ದೇವಗಂಗೆಯನ್ನು ಭೂಮಿಗೆ ತಂದ ವಿಷಯವೂ, ಆ ಗಂಗೆ ಭೀಮಾನದಿಯಲ್ಲಿ ಕೂಡಿದ ವಿಷಯವೂ, ಅನಂತರ ಅವಳು ವಿಜಾಪುರ ಜಿಲ್ಲೆಯ ಹಂಚಿನಾಳ ಎಂಬ ಗ್ರಾಮದಲ್ಲಿ ಪ್ರಕಟವಾಗಿ, ಕೊನೆಗೆ ಸಿಂದಗಿಯ ಪಾವಾಡ ಶೆಟ್ಟಿಯವರ ಕಂಭದಲ್ಲಿ ಉಗಮ ಹೊಂದಿದುದನ್ನು ವಿವರಿಸಲಾಗಿದೆ. ಗ್ರಂಥದಲ್ಲಿ ಸಿಂದಗಿ ಊರಿನ ಐತಿಹಾಸಿಕ ಮಹತ್ವ ಮತ್ತು ಭೌಗೋಲಿಕ ವರ್ಣನೆಗಳೂ ಬರುತ್ತವೆ. ಪಾವಾಡ ಶೆಟ್ಟರ ಮನೆಯ ಸೊಸೆ ಬಸಮ್ಮ ಎಂಬವಳ ತಲೆಯ ಮೇಲೆ ತುಪ್ಪದ ಕೊಡವನ್ನು ಹೊರಿಸಿ, ಅವಳನ್ನು ಜಾತ್ರೆಗಾಗಿ ಕರೆದು ಕೊಂಡು ಹೋಗುತ್ತಿರುವಾಗ, ಎಲ್ಲರೂ ಮುಂದೆ ಹೋಗಲಾಗಿ, ಪಾಪ, ಮುಗ್ದ ಬಸಮ್ಮ ಎಡವಿ, ತುಪ್ಪವೆಲ್ಲ ನೆಲದ ಪಾಲಾಗುತ್ತದೆ. ಮುಗ್ಧ ಬಸಮ್ಮ ಗಂಗಾಮಾತೆಯನ್ನು ತನ್ನನ್ನು ಸಂರಕ್ಷಿಸಬೇಕೆಂದು ಬೇಡಿಕೊಳ್ಳುತ್ತಾಳೆ :

ದೇವಿಯನಗಿಲ್ಲಾಸರವು ಯಿ
ನ್ನಾವ ಮುಖದಿಂದಿದನು ಪೇಳಲಿ
ಕಾವ ಹಿತಚಿಂತಕಳು ನೀನೇ ಮಾತೆ ಶಿವಗಂಗಾ
ಅವ್ವಯಿನ್ನೇನೆಂದು ಹೇಳಲಿ
ಭಾವ ಬಲು ಸಿಟ್ಟಿನವ ತಾಯೀ
ಮಾವನಬ್ಬರ ಅತ್ತೆಯುಗ್ರವನೆಂತು ಸಹಿಸುವೆನು ॥

—ಎಂದು ಹಲುಬಿಕೊಂಡಾಗ,

ಕರುಳ ಕಿಚ್ಚವು ಹೆಚ್ಚು ಹೆಣ್ಣಿನ
ಮರುಗಯಿನ್ನಿಷ್ಟಧಿಕ ಸಾಜದಿ
ಹರನ ಮಸ್ತಕ ಮಂಗಳೆಯು ಕರುಳಂತೆ ಕರಗುತ್ತಾ ॥

—ಬಸಮ್ಮನಿಗೆ ದರುಶನ ಕೊಟ್ಟು, ಅವಳ ಕೊಡವನ್ನು ಪುನಃ ತುಂಬಿ, ಆಷಾಢ ಮಾಸದ ಹುಣ್ಣಿಮೆಯ ದಿನ ಅವಳ ಮನೆಯ ನಡುಗಂಬದಲ್ಲಿ ಪ್ರತ್ಯಕ್ಷವಾಗುವುದಾಗಿ ಹೇಳುತ್ತಾಳೆ.

ಶ್ರೀಯುತರ ರಚನೆಯಲ್ಲಿ ಅಲ್ಲಲ್ಲಿ ಕಾವ್ಯಶಕ್ತಿ ಮಿಂಚಿದೆ. ಕಾವುಡೀ ಗೊಲ್ಲನು ಗಂಗಾಪೂಜೆಗೆ ಹೊರಟಾಗ ಗಡಗಡನೆ ಗದ್ದರಿಸುವ ಮಳೆ ಬಂದು, ಸಿಡಿಲು ಮಿಂಚು ಅಪ್ಪಳಿಸುತ್ತದೆ. ಸುತ್ತಲೆಲ್ಲ ನೀರೇ ನೀರಾಗುತ್ತದೆ. ಆ ಮಳೆಯ ರಭಸ ಹೇಗಿತ್ತೆಂದರೆ :

ಸುಳಿದಿರುವಿ ಭರದಿಂದಲೊದರುತೆ
ಬಳಸಿ ಮಳೆಯಂಬ್ಬರವ ಪಿಂದೆಗೆ
ದಳವದಿಲ್ಲದ ಜಲವು ತುಂಬಿತುಯಿಳೆಯ ಪಥಗಳಲಿ
ಖಳರು ಕಾರಿರುಳಲ್ಲಿ ಸುಜನರ
ಬಳಸಿಬಹ ಪರಿ ಹಳ್ಳ ಹೊಳೆಗಳು
ಘಳಿಲನೊದರುತ್ತೈದಿದವುಯೇನೆಂಬೆನದ್ಭುತವಾ ॥ ೧

ಗಂಗಾವತರಣ ಮಹಿಮೆ ಒಂದು ಕುತೂಹಲಪೂರ್ಣವಾದ ರಚನೆ.

—

೧ ಗಂಗಾವತರಣ ಮಹಿಮೆ : ೧೯೨೫ : ಪು. ೨೭.

ಗುರುರಾವ ವಿಠ್ಠಲ ಮೊಹರೆ

(ಸು. ೧೮೫೦)

ಇವರು 'ಶಬ್ದಸಂಗ್ರಹ' ಎಂಬ ಕನ್ನಡ ನಿಘಂಟನ್ನು ಬರೆದಿದ್ದಾರೆ. ೧೭೭ ಪುಟದ ಈ ನಿಘಂಟು ಬೆಳಗಾವಿಯ ಸಮಾಚಾರ ಮುದ್ರಣಾಲಯದಲ್ಲಿ ಮುದ್ರಿತವಾಗಿ ಸನ್ ೧೮೭೪ ರಲ್ಲಿ ಪ್ರಕಟವಾಯಿತು. ಈ ನಿಘಂಟನ್ನು ರಚಿಸಿದಾಗ ಶ್ರೀಯುತರು ಧಾರವಾಡ ವಿಭಾಗದ ಉಪ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಹೆಡ್‌ಕ್ಲಾರ್ಕರಾಗಿದ್ದರು. ಶ್ರೀಯುತರು ಡೆಪ್ಯುಟಿ ಚೆನಬಸಪ್ಪನವರ ವಿದ್ಯಾರ್ಥಿಗಳು. ಆದ್ದರಿಂದಲೇ, ಈ ಗ್ರಂಥವನ್ನು ಗುರುಭಕ್ತಿಯಿಂದ ಅವರಿಗೆ ಅರ್ಪಿಸಿದ್ದಾರೆ.

ಈ ಮೊದಲೇ ಒಂದು ನಿಘಂಟನ್ನು ಗಂಗಾಧರ ಮಡಿವಾಳೇಶ್ವರ ತುರಮರಿಯವರು ಸನ್ ೧೮೬೯ ರಲ್ಲಿ ರಚಿಸಿದ್ದರು. ಆದರೆ, ಆ ನಿಘಂಟು ಗಾತ್ರದಲ್ಲಿ ದೊಡ್ಡದೂ ಮತ್ತು ಹೆಚ್ಚು ಬೆಲೆಯಿಟ್ಟದ್ದೂ ಆದುದರಿಂದ ಪ್ರಸ್ತುತ ನಿಘಂಟನ್ನು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಶ್ರೀಯುತರು ರಚಿಸಿದರು.

ಸಾಧ್ಯವಿದ್ದಮಟ್ಟಿಗೆ, ಈ ನಿಘಂಟಿನಲ್ಲಿ ಶಬ್ದಗಳ ವ್ಯಾಕರಣಾಂಶಗಳನ್ನೂ ಅವುಗಳ ಮೂಲ ವನ್ನೂ ಕೊಡಲು ಯತ್ನಿಸಲಾಗಿದೆ. ಉದಾಹರಣೆಗೆ :

ಅಲ್ತೆ (ಹ. ಅ.) ಅಲ್ಲವೇ

ಅವಗಡಿಸು (ಹ. ಕ್ರಿ.) ಅಡ್ಡಿಮಾಡು

ಅವಗತ (ಸ. ವಿ.) ತಿಳಿದಂಥ, ಹೋದಂಥ

ಅವಗಾಹ–ಅವಗಾಹನ (ಸ. ನಾ.)– ಸ್ನಾನ ಮಾಡೋಣ– ಇತ್ಯಾದಿ.

ಹೊಸ ಹೊಸ ಸಂಶೋಧನೆಗಳಾದಂತೆ, ಹಲವು ಪದಗಳ ಮೂಲ ರೂಪಗಳ ಬಗೆಗೆ ಕಲ್ಪನೆಯೂ ಬದಲಾಗಿರಬಹುದು. ಆದರೆ, ಲೇಖಕರು ಪಟ್ಟ ಪರಿಶ್ರಮ ಸ್ತುತ್ಯರ್ಹವಾಗಿದೆ.

—

ಕುಂದಗೋಳದ ಬಸವಲಿಂಗ

(ಸು. ೧೮೫೦)

ಇವರ ಕಾಲ ಸು. ೧೮೦೦ ಆಗಿರಬಹುದೆಂದು ಕವಿಚರಿತೆಕಾರರು ಹೇಳುತ್ತಾರೆ. ಇವರ ಬರವಣಿಗೆಯ ರೀತಿಯನ್ನು ನೋಡಿದರೆ ಇವರ ಕಾಲ ಸು. ೧೮೫೦ ಇರಬಹುದೆಂದು ಕಾಣುತ್ತದೆ. ಇವರ ತಂದೆಯ ಹೆಸರು ಮಡಿವಾಳ. ಇವರ ಕೃತಿಗಳ ಬಗೆಗೆ ಡಾ. ಕಿಟೆಲ್ ಅವರು ಹೀಗೆ ಹೇಳುತ್ತಾರೆ : "A Krishna lila Dundume, 25 verses, the last of which mentions Sriguru of Kundgolla" "Krishnarjuna Dundume, 142 verses, as it appears by Kali Basava Lingayya, who is invoking the favour of the guru of Kundagolla, composed the work by wish of Kenchendra and Sirasa of Bhrulatapura (Hubballi), sons of Timmendra and Majavva".[೧]

ಈ ಎರಡೂ ಕೃತಿಗಳೂ 'ಕೃಷ್ಣಗೊಲ್ಲತಿ' ಮತ್ತು 'ಕೃಷ್ಣಾರ್ಜುನರ ಕಾಳಗ'– ಎಂಬ ಹೆಸರಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಲಭ್ಯವಾಗಿವೆ. ಇವೂ ಅಲ್ಲದೆ, ಈ ಕವಿ 'ವೀರ ಅಭಿಮನ್ಯು' ಎಂಬ ಹೋಳೀ ಹಾಡನ್ನೂ ಸಂಶಿಯಲ್ಲಿ ನಡೆದ ಸ್ವಾಮಿಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಹಾಡನ್ನೂ 'ಸೌಮಿನೀ ಕಥೆ' ಎಂಬ ಕೃತಿಯನ್ನೂ ಬರೆದಿದ್ದಾರೆ. 'ಸೌಮಿನೀ ಕಥೆ' ಯಲ್ಲಿ 'ಸೌಮಿನಿ ಎಂಬ ಸ್ತ್ರೀ ಗೋಕರ್ಣಕ್ಕೆ ಹೋಗಿ ಸದ್ಗತಿಯನ್ನು ಪಡೆದ ಕಥೆ ಹೇಳಿದೆ.'

ಕವಿಯ ಕೃತಿಗಳಲ್ಲಿ ಇವನ ನಿಶ್ಚಿತ ಕಾಲ ತಿಳಿದು ಬರುವದಿಲ್ಲವಾದರೂ, ಇವರಿಗೆ ಪರಿಚಯವಿದ್ದ ಹುಬ್ಬಳ್ಳಿ ಮತ್ತು ಸಂಶಿಗಳ ಉಲ್ಲೇಖ ಬರುತ್ತಿದೆ.

"ಭೂರಮ್ಯವಾದಂಥ ಭ್ರೂಲತಪುರ ಸ್ಥಿರಗಾರ ಪುಣ್ಯಸ್ಥರೆಂದೆನಿಸುವರು– ಮಾಕುಮಾರನ ಚೆಲ್ವಿಕೆ ಮರೆಸುವರು– ಮತ್ತಿಚಾರಿಸಲ್ ಕುಶಲರಿರುತಿಹರು– ನಾಮಚಾರು ಕೆಂಚೇಂದ್ರನನುಜ ಸ್ಥಿರ ಸೌಖ್ಯ ಸಂಪೂರದಿಂದಿರುವರು" ಇವರ ಅಪೇಕ್ಷೆಯ ಮೇರೆಗೆ 'ಕೃಷ್ಣಾರ್ಜುನ ಕಾಳಗ' ವನ್ನು ಹೇಳಿದಂತೆ ವಿವರಿಸಲಾಗಿದೆ. ಈ ಕೆಂಚೇಂದ್ರ ಮತ್ತು ಅವರ ತಮ್ಮ ಹುಬ್ಬಳ್ಳಿಯ ಮಾಲಗತ್ತಿ ಮನೆತನದವರು. ಇವರ ತಂದೆಯ ಹೆಸರು, ತಿಮ್ಮೇಂದ್ರ, ತಾಯಿಯ ಹೆಸರು ಮಾಜವ್ವ. 'ವೀರ ಅಭಿಮನ್ಯು' ವಿನ ಹಾಡಿನ ಕೊನೆಯಲ್ಲಿ

ವಸುಧೆಗೆ ಒಪ್ಪುವ ಎಸೆವ ಶ್ರೀ ಕುಂದಗೋಳ
ಅಸಮಾಕ್ಷ ಗುರುಪಾದ ಕರುಣದಲಿ– ಅತಿ

---

೧ ನಾಗವರ್ಮನ ಕನ್ನಡ ಛಂದಸ್ಸು : ೧೮೭೫ : ಪು. LXXVIII–LXXIX.

ಪೆಸರ್ವಡೆದಿಹ ದ್ರೋಣಪರ್ವದಲಿ– ತೆಗೆ
ಮಸುರಿದೆನಿದರೊಳು ತಪ್ಪಿರಲಿ– ನೋಡಿ
ರಸಿಕರು ಜರಿಯದೆ ಬಸಲಿಂಗ ರಚಿಸಿದ
ಹಸನಾಗಿ ಲಾಲಿಸಿ ಕುಶಲಕೋವಿದರು

–ಎಂದು ಹೇಳಿದೆ.

ಡಾ. ಕಿಟೆಲ್ ಅವರು 'ಸಿಂಹಾಸನ ಬತ್ತೀಸ ಪುತ್ತಳಿ' ಅಥವಾ ಮೂವತ್ತೆರಡು ಗೊಂಬೆಗಳು ಹೇಳಿದ ಮೂವತ್ತೆರಡು ಕಥೆಗಳನ್ನು ಮರಾಠಿಯಿಂದ ಕನ್ನಡಕ್ಕೆ ಚೆನ್ನಬಸವ ಮತ್ತು ಬಸವಲಿಂಗ ಎಂಬ ಇಬ್ಬರು ಭಾಷಾಂತರಿಸಿದ್ದಾಗಿ ಹೇಳುತ್ತಾರೆ. ಇಲ್ಲಿಯ ಬಸವಲಿಂಗರು ಈ ಕುಂದಗೋಳದ ಬಸವಲಿಂಗರೇ ಆಗಿರಬಹುದೆ ?

ಈ ಕವಿಯ ಶೈಲಿಯ ಸೌಂದರ್ಯವನ್ನು ಸವಿಯಲು 'ಕೃಷ್ಣ–ಗೊಲ್ಲತಿ' ಯಲ್ಲಿ ಬರುವ ಈ ಕೆಳಗಿನ ಭಾಗವನ್ನು ನೋಡಬಹುದು. ಇಲ್ಲಿ ಮಥುರೆಗೆ ಹಾಲು–ಮೊಸರು ಮಾರಲು ಹೋಗುತ್ತಿರುವ ಗೋಪಸ್ತ್ರೀಯರ ವರ್ಣನೆ ಇದೆ :

ಮತ್ತೇಭ ನಡೆಯರು ಮಥುರೆಗೆ ಪಾಲ್ಮೊಸ
ರ್ಹೊತ್ತುಂಬರುತ ಸತಿಮೊತ್ತಗಳು । ಗಳ
ಹತ್ತಿಟ್ಟ ಸರಿಗಿ ಚಿಂತಾಕಗಳು । ನವ
ರತ್ನ ಖಚಿತ ಮುತ್ತಿನ್ಹಾರಗಳು । ಮೆರೆ
ವುತ್ತ ಕಂಗಳ ನೆರವೃತ್ತಪುಟಲನಿಟ್ಟ
ಸುತ್ತಾಡಿ ಜತ್ತಿಲಿ ಬಂದರಾ ಪುರಕೆ

ಬಾಲೇರು ಮದನನುಕೂಲೇರು ಯೌವನ
ಕಾಲೇರು ಕನಕ ಕಪೋಲೆಯರು । ಸುವಿ
ಶಾಲೇರು ಚಂಪಕ ಮಾಲೆಯರು । ಸ್ಮರ
ನೀಲೇರು ಕಂದರ್ಪ ಸಾಲೆಯರು । ರತಿ
ಗಾಲೇರು ಘನತರ ಲೋಲೇರು ಮೋಹನ್ನ
ಜಾಲೇರು ಸತಿ ಶಿರೋಮಣೇರು ಬರಲು

—

ಮಾನವಿ ವೀರಪ್ಪ

(ಸು. ೧೮೫೧)

ಇವರು ೫೩ ಕಥೆಗಳುಳ್ಳ 'ಕಥಾಸಾಗರ' ಎಂಬ ಗ್ರಂಥವನ್ನು ಬರೆದಂತೆ ಡಾ. ಕಿಟೆಲ್ ಅವರು ಹೇಳುತ್ತಾರೆ. (ಛಂದೋಂಬುಧಿ ಪ್ರಸ್ತಾವನೆ, ಪು. LXXVIII.) ಕವಿಚರಿತೆಕಾರರು ೪೦ ಕಥೆಗಳೆಂದು ಹೇಳಿದ್ದಾರೆ. (ಕರ್ನಾಟಕ ಕವಿಚರಿತೆ, ಭಾಗ ೩., ಪು. ೧೯೮). ಈ ಗ್ರಂಥದ ಪುನರ್ಮುದ್ರಣ ಸನ್ ೧೮೯೪ ರಲ್ಲಿ ನಡೆಯಿತು. ಈ ಗ್ರಂಥದಲ್ಲಿ ವಜ್ರಚೂಡಾಮಣಿ ಎಂಬ ರಾಜನಿಗೆ ಹೇಳಿದ ೫೩ ಕಥೆಗಳಿವೆ.

ಗ್ರಂಥೋದ್ದೇಶವನ್ನು ಲೇಖಕರು ಹೀಗೆ ವಿವರಿಸಿದ್ದಾರೆ :

" ಈ ಪುಸ್ತಕವನ್ನು ಭ್ರೂಪುರಾಂತರ್ಗತವಾದ ಮಾನವಿ ವೀರಪ್ಪನು ಎಂದರೆ ನಾನು ಸರಕಾರದ ಕಾರ್ಯದ ಮೇಲೆ ಧಾರವಾಡ ಗ್ರಾಮದಲ್ಲಿದ್ದು ವೃಥಾ ವ್ಯಾಳೆಗಳಿಯಬಾರದೆಂದು ಸ್ವಕಲ್ಪನೆಯಿಂದಲೂ ಕೇಳುವಿಕೆಯ ಬಲದಿಂದಲೂ ಚಮತ್ಕಾರ ಭಾವವುಳ್ಳ ಕಥೆಗಳು, ಶ್ಲೋಕಾರ್ಥಗಳು, ಮಾತುಗಳು ಮೊದಲಾಗಿ ಕಲ್ಪಿಸಿದ ಶಕೆ (೧೭೭೩) ವಿರೋಧಿಕೃತನಾಮ ಸಂವತ್ಸರ ಆಶ್ವೀಜ ಶುದ್ಧ ದ್ವಾದಶಿ ಕ್ರಿಸ್ತ ಸನ್ (೧೮೫೧) ನೇ ಇಸವಿ ತಾರೀಖು (೬) ಅಕಟೋಬರ ಇಂದುವಾರ ಪ್ರಾರಂಭಿಸಿದೆನು. " ಇದರ ಮೇಲಿಂದ ಈ ಗ್ರಂಥ ೧೮೫೧ ರ ಸುಮಾರಿಗೇ ಪ್ರಾರಂಭವಾದುದು ವ್ಯಕ್ತವಾಗುತ್ತದೆ.

'ಕಥಾಸಾಗರ'ದ ಕಥೆಗಳಲ್ಲಿ ಶ್ರೀಯುತರು ಸ್ವೋಪಜ್ಞವಾದ ಅನೇಕ ಅಂಶಗಳನ್ನು ಸೇರಿಸಿದ್ದಾರೆ. ಶೃಂಗಾರ–ವಿನೋದವನ್ನು ತಂದಿದ್ದಾರೆ. ತಮ್ಮ ಗ್ರಂಥದಲ್ಲಿಯ ದೋಷಗಳನ್ನು ಮನ್ನಿಸಿ ಅದನ್ನು ಸ್ವೀಕರಿಸಬೇಕೆಂದು ಈ ರೀತಿ ಪ್ರಾರ್ಥಿಸಿದ್ದಾರೆ :

" ಮಳೆಯು ಸುರಿದಾಕ್ಷಣವೆ ಹಳ್ಳ–ಹೊಳೆಗಳು ಮೊದಲಾಗಿ ಭೂಮಿಯ ಮೇಲೆ ಬಿದ್ದಿರ್ದ ಮಲಿನ ಕಸವನು ತಮ್ಮ ತಲೆಯ ಮೇಲೆ ಹೊತ್ತುಕೊಂಡು ಸಮುದ್ರಕ್ಕೆ ತಂದು ಹಾಕುವವು. ಆ ಸಮುದ್ರರಾಜನು ಅಂಥಾ ಮಲಿನವನ್ನು ಗರ್ಭೀಕರಿಸಿಕೊಂಡು, ಕೋಪಿಸದೆ ಮತ್ತು ಅಂತಃಕರುಣದಿಂದ ಲೋಕರಕ್ಷಣಾರ್ಥ ವೃದ್ಧಿಯಗೋಸ್ಕರ ಮೇಘಪಙ್ತಿಗೆ ತನ್ನ ಉದಕವನ್ನು ಹ್ಯಾಗೆ ಕೊಡುವನೋ ಹಾಗೆಯೇ ನನ್ನ ಮೊದಲು ಮಾತುಗಳನ್ನು ಕೆಟ್ಟ ಕಸದಂತೆ ತಿಳಿದು ಗರ್ಭೀಕರಿಸಿಕೊಂಡು ಈ ಗ್ರಂಥವನ್ನು ಶ್ಲಾಘನೆ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ. "

ಒಟ್ಟಾರೆ, 'ಕಥಾಸಾಗರ' ಸ್ವೋಪಜ್ಞತೆ, ಶೃಂಗಾರ ಮತ್ತು ವಿನೋದಗಳ ಸುಂದರವಾದ ತ್ರಿವೇಣೀ ಸಂಗಮವೆಂದು ಹೇಳಬಹುದು.

—

ಪಾಂಡುರಂಗ ವೆಂಕಟೇಶ ಚಿಂತಾಮಣಿಪೇಟಕರ

(೧೮೫೧– ಸು. ೧೮೯೯)

ಇವರು ' ಸಂಸ್ಕೃತ–ಕನ್ನಡ ಶಬ್ದ ವ್ಯುತ್ಪತ್ತಿ ' ಎಂಬ ಸುಮಾರು ೧೦೨ ಪುಟದ ಪುಸ್ತಕವನ್ನು ಸನ್ ೧೮೮೦ ರಲ್ಲಿ ಪ್ರಕಟಿಸಿದರು. ಇದು ಮುಂಬಯಿ ಇಲಾಖೆಯ ಸರಕಾರೀ ವಿದ್ಯಾಖಾತೆಯ ಪ್ರಕಟಣೆಯಾಗಿದ್ದು, ಮಂಗಳೂರಿನ ಕೊಡಿಯಾಲ್‌ಬೈಲ್ ಮುದ್ರಣಾಲಯದಲ್ಲಿ ಮುದ್ರಿತವಾಯಿತು. ಇದರ ಆರನೆಯ ಆವೃತ್ತಿ ಸನ್ ೧೮೯೫ ರಲ್ಲಿ ಪ್ರಕಟವಾಯಿತು.

ಪ್ರಸ್ತುತ ಗ್ರಂಥದಲ್ಲಿ ಸಂಸ್ಕೃತ ಮತ್ತು ಕನ್ನಡ ಧಾತುಗಳನ್ನೂ, ಪ್ರಾತಿಪದಿಕಗಳನ್ನೂ ಹೇಳಿ, ಅವುಗಳ ಸಾಧಿತ ರೂಪಗಳನ್ನೂ ಕೊಡಲಾಗಿದೆ. ಇದರಲ್ಲಿ ಸುಮಾರು ೪೦೦೦ ಕ್ಕೂ ಮಿಕ್ಕಿ ಶಬ್ದಗಳನ್ನು ವಿವರಿಸಲಾಗಿದೆ. ಸರ್ವಾಸಾಂ ಅಪಿ ಪ್ರಕೃತಿರೂಪಾ– ಎಂಬಂತೆ ಎಲ್ಲ ಧಾತುಗಳ, ಪ್ರಾತಿಪದಿಕಗಳ ಮೂಲರೂಪವನ್ನು ಇದರಲ್ಲಿ ಗುರುತಿಸಲಾಗಿದೆ. ಭಾಷಾವಿವೇಚನೆಯ ಹಿಡಿತವನ್ನು ಸಾಧಿಸುವಲ್ಲಿ ಲೇಖಕರು ಪಟ್ಟ ಪರಿಶ್ರಮ ಅಭಿನಂದನೀಯವಾಗಿದೆ. ಇವರು ಕೊಡುವ ರೂಪಗಳನ್ನು ನೋಡಿದಲ್ಲಿ, ಲೇಖಕರ ಅನುಷ್ಠಾನ, ಭಾಷಾಶಕ್ತಿ ಮತ್ತು ಪರಿಶ್ರಮಗಳ ಕಲ್ಪನೆ ಬಾರದಿರದು.

ಉದಾಹರಣೆಗೆ ಈ ಕೆಳಗಿನವುಗಳನ್ನು ನೋಡಬಹುದು :

> " ಅದ್–ಧಾ. (ತಿನ್ನು); ಅದನ (ತಿನ್ನೋಣ); ಅದ್ಯ; ಅನ್ನ; ಕದನ್ನ (ಕದ್–ಕೆಟ್ಟ; ಕಾಹುತಿನಸು); ಕ್ರವ್ಯಾದ (ಮಾಂಸ ತಿನ್ನುವವ, ರಾಕ್ಷಸ); ಪಕ್ವಾನ್ನ (ಪಕ್ವ–ಬೆಂದ; ಬೆಂದಕೂಳು; ಅಂದರೆ ರೂಢಿಯಲ್ಲಿ ಹಬ್ಬ ಹುಣ್ಣಿವಿಗೆ ಮಾಡತಕ್ಕ ಪದಾರ್ಥಗಳಿಗೆ ಈ ಶಬ್ದವನ್ನು ಉಪಯೋಗಿಸುತ್ತಾರೆ); ಪರಮಾನ್ನ (ಪರಮ–ಶ್ರೇಷ್ಠ, ಹೆಚ್ಚಿನ; ಎಲ್ಲಾ ಅನ್ನಗಳಲ್ಲಿ ಶ್ರೇಷ್ಠವಾದದ್ದು, ಪಾಯಸ); ಮಿಷ್ಟಾನ್ನ (ಮಿಷ್ಟ–ಸವಿ; ಸವಿಗೂಳು) "

ಹಾಗೆಯೇ–

> " ಸ್ಥಾ–ಧಾ. (ಇರು, ನಿಲ್ಲು) ಸ್ಥಾನ; ಸ್ಥಾಪನ (ಇರಿಸೋಣ); ಸ್ಥಾಪನಾ; ಸ್ಥಾಯಿಕ (ಒಂದೇ ಕಡೆಯಲ್ಲಿ ನಿಲ್ಲುವ); ಸ್ಥಾವರ; ಸ್ಥಿತಿ; ಅನುಷ್ಠಾನ (ಸಮೀಪದಲ್ಲಿ ನಿಲ್ಲೋಣ; ಇದರ ಮೇಲಿಂದ ಸೇವೆ ಮಾಡೋಣ ಎಂಬ ಅರ್ಥ ಬಂದದೆ); ಅವಸ್ಥಾ; ಆಸ್ಥಾ; ಉತ್ಥಾನ (ಎದ್ದು ನಿಲ್ಲೋಣ); ಪ್ರಸ್ಥಾನ (ಹೊರಹೊರಡೋಣ); ಪ್ರತಿಷ್ಠಾ; ಪ್ರತಿಷ್ಠಿತ; ವ್ಯವಸ್ಥಾ; ಸಂಸ್ಥಾ (ಸಂತೆ); ಸಂಸ್ಥಾನ. "

ಕನ್ನಡ ಧಾತುಗಳಲ್ಲಿ ಈ ಕೆಳಗಿನವುಗಳನ್ನು ಕೊಡಲಾಗಿದೆ :

" ಅನು–ಧಾ. (ಆಧಾರ ಹೊಂದು) ಅನಿಕೆ; ಅನೆ; ಅಂದಿ (ಹೊಣೆ); ಅಂದಿಗ (ಹೊಣೆಗಾರ); ಅಂದುಗಲ್ಲು (ಒಜ್ಜೆ ಹೊತ್ತುಕೊಂಡು ಹೋಗುವ ದಾರಿಕಾರರು ದಾರಿಲಿ ಹೋಗುವಾಗ ದಣಿದರೆ, ಅವರು ಒಜ್ಜೆ ಇಳಿಸುವದಕ್ಕಾಗಿ ನಿಲ್ಲಿಸಿದ ಕಲ್ಲು.) "

" ಉಣ್ಣು–ಧಾ. (ತಿನ್ನು) ಉಣಿ (ತಿನ್ನುವವ); ಊಟ; ಉಂಡೋಡಿಗ (ಉಂಡ ಕೂಡ್ಲೆ ಹೊರಗೆ ಹೋಗುವವ); ಉಂಬಳಿ (ಉಂಬುವ ಹಳ್ಳಿ, ಇನಾಮ ಗ್ರಾಮ) ಉಂಬಳಿಗಾರ. "

" ಮೆಟ್ಟು–ಧಾ. (ತುಳಿ) ಮೆಟ್ಟಲ; ಮೆಂಟಿಕೆ (ಕಾಲೊಳಗಿನ ಆಭರಣ) ಮೆಟ್ಟು. "

" ರಾಟು–ಧಾ. (ತಿರುಗಿಸು) ರಾಟಣ; ರಾಟಿ; ರಾಟೆ; ಕೈರಾಟೆ; ಕಾಲರಾಟೆ. "

" ಹಿಂ– ವಿ. (ಹಿಂದಿನ, ಈಚೆಯ) ಹಿಂಗಾರು (ಹಿಂದಿನ ಮಳೆ); ಹಿಂಬರುಗ (ಬೆನ್ನಟ್ಟಿ ಬರುವವ); ಹಿಂಬಾಲ; ಹಿಮ್ಮಡ; ಹಿಮ್ಮೇಳ. "

" ಹಿಂಡು–ಧಾ. (ರಸ ತೆಗೆ) ಹಿಂಡಿ (ಎಣ್ಣೆ ತಕ್ಕೊಂಡ ಮೇಲೆ ಗಾಣದೊಳಗೆ ಉಳಿದ ಕಾಳಿನ ಶೇಷ); ಹಿಂಡಿಗೆ. "

ಆದರೆ, ಲೇಖಕರು ' ಅಡಿಗ– ತದ್ಧಿತ ಪ್ರತ್ಯಯ; ಇವನು ಇದನ್ನು ಇಕ್ಕುವನು ' ಎಂಬರ್ಥದಲ್ಲಿ ಪ್ರಯುಕ್ತವಾಗುತ್ತದೆಂದು ಹೇಳುವದು ಸರಿಯೆಂದು ಕಾಣುವದಿಲ್ಲ. ಹೂವಡಿಗ– ಹೂ ಇಕ್ಕುವವನು ಎಂಬರ್ಥವೇನೋ ಸರಿ ಹೋಯಿತು. ಹಾಗಿದ್ದರೆ, ಹಾವಡಿಗ, ದೇವಡಿಗ, ಇವುಗಳ ಸಿದ್ಧಿ ಹೇಗೆ? ಲೇಖಕರು ಹೇಳಿದುದು ' ವಡಿಗ ' ಪ್ರತ್ಯಯಕ್ಕೆ ಸಂಬಂಧಪಟ್ಟುದು. ' ವಡಿಗ ಪ್ರತ್ಯಯಮಕ್ಕುಂ ಬಿಡದಿಕ್ಕುವನೀತನಿದನೆನಿಪ್ಪೊಂದೆಡೆಯೊಳ್. ' ಅದೇನೇ ಇದ್ದರೂ ಶ್ರೀ ಚಿಂತಾಮಣಿಪೇಟಕರ ಅವರ ಪ್ರಯತ್ನ ತುಂಬಾ ಪಾಂಡಿತ್ಯಪೂರ್ಣವಾದದ್ದು, ಸ್ತುತ್ಯವಾದದ್ದು.

ಶ್ರೀಯುತರು ಮರಾಠಿ ಭಾಷೆಯಲ್ಲಿ ' ಗಂಗಾವರ್ಣನಾ ' ಎಂಬ ಗ್ರಂಥವನ್ನೂ ಬರೆದಿದ್ದಾರೆ.

—

ಗುರುಬಸಪ್ಪ ಹಳಕಟ್ಟಿ

(೧೮೫೪–೧೯೩೬)

ಇವರು ವಚನಪಿತಾಮಹ ಡಾ. ಫ. ಗು. ಹಳಕಟ್ಟಿಯವರ ತಂದೆಯವರು. ಇವರ ಶ್ರೀಮತಿಯವರ ಹೆಸರು ದಾನಾದೇವಿ. ಬೆಳಗಾವಿ ಜಿಲ್ಲೆಯ ಹೂಲಿ ಗ್ರಾಮದ ಸೊಪಡಲದ ಮನೆತನದವರು. ಗುರುಬಸಪ್ಪನವರು ಧಾರವಾಡ ಜಿಲ್ಲೆಯ ಅಣ್ಣಿಗೇರಿ ಮೊದಲಾದ ಸ್ಥಳಗಳಲ್ಲಿಯೂ ಧಾರವಾಡದ ಟ್ರೇನಿಂಗ ಕಾಲೇಜಿನ ಪ್ರ್ಯಾಕ್ಟಿಸಿಂಗ್ ಶಾಲೆಯಲ್ಲಿಯೂ ಶಿಕ್ಷಕರೆಂದು ಕೆಲಸ ಮಾಡಿದರು. ಇದಾದ ನಂತರ, ಧಾರವಾಡದ ಡೆಪ್ಯುಟಿ ಎಜ್ಯುಕೇಶನ್ ಇನಸ್ಪೆಕ್ಟರ ಕಚೇರಿಯಲ್ಲಿ ಎರಡನೆಯ ದರ್ಜೆಯ ಕಾರಕೂನನಾಗಿ ಸೇವೆ ಸಲ್ಲಿಸಿ, ೩೧–೩–೧೯೧೨ ರಂದು ನಿವೃತ್ತಿ ಹೊಂದಿದರು. ಗುರುಬಸಪ್ಪನವರು ೧೯೩೬ನೆಯ ಇಸವಿ ಆಗಸ್ಟ ೨೭ನೆಯ ತಾರೀಖಿನ ದಿವಸ ಶಿವಾಧೀನರಾದರು.

ಸತತಾಭ್ಯಾಸಿಗಳಾದ ಗುರುಬಸಪ್ಪನವರು 'ಇಂಗ್ಲಂಡದೇಶದ ಇತಿಹಾಸ', 'ಯುಕ್ಲಿಡನ ಆರು ಪುಸ್ತಕಗಳು', 'ಏಕನಾಥ ಸಾಧುಗಳ ಚರಿತ್ರೆ', 'ಡ್ಯೂಕ ಆಫ್ ವೆಲಿಂಗ್ಟನ್', 'ಗ್ಲ್ಯಾಡ್‌ಸ್ಟನ್', 'ಚಿಂತಾಮಣಿ ಅಥವಾ ಟಾಲಿಸ್ಮನ್', 'ನೆಪೋಲಿಯನ್ ಬೋನಾಪಾರ್ಟ', 'ಸಿಕಂದರ ಬಾದಶಹ', 'ಫ್ರಾನ್ಸಿನ ರಾಜ್ಯಕ್ರಾಂತಿ'– ಮೊದಲಾದ ಗ್ರಂಥಗಳನ್ನು ಬರೆದಿದ್ದಾರೆ. ತಮ್ಮ ಜೀವನದ ಕೊನೆಯ ಭಾಗದಲ್ಲಿ ದೇವರ ದಾಸಿಮಯ್ಯನ ಚರಿತ್ರೆಯನ್ನು ಬರೆಯತೊಡಗಿದ್ದರಂತೆ.

ಸಿಕಂದರ ಬಾದಶಹನ ಚರಿತ್ರೆ (೧೮೯೪) :

೨೫೨ ಪುಟದ ಈ ಗ್ರಂಥ ಸನ್ ೧೮೯೪ ರಲ್ಲಿ ಧಾರವಾಡದ ಕರ್ನಾಟಕ ಬುಕ್ ಡಿಪೋ ಮುದ್ರಾಲಯದಲ್ಲಿ ಮುದ್ರಿತವಾಗಿ ಪ್ರಕಟವಾಯಿತು. ಇದನ್ನು ಬರೆದಾಗ ಶ್ರೀಯುತರು ಧಾರವಾಡದ ಟ್ರೇನಿಂಗ ಕಾಲೇಜದಲ್ಲಿ ಕಾರಕೂನರಾಗಿದ್ದರು. ಲೇಖಕರು ಪ್ರಸ್ತಾವನೆಯಲ್ಲಿ "ಕನ್ನಡ ಭಾಷೆಯಲ್ಲಿ ಇತಿಹಾಸ ಪ್ರಸಿದ್ಧರಾದ ಪುರುಷರ ಚರಿತ್ರೆಗಳು ತೀರ ತುಸು ಇರುತ್ತವೆ. ಒಂದು ವೇಳೆ ಇಲ್ಲವೆಂದರೂ ಸಲ್ಲುವದು. ಈ ಕೊರತೆಯನ್ನು ನನ್ನಂಥ ಅಲ್ಪಜ್ಞನು ದೂರ ಮಾಡುವದು ಅಸಾಧ್ಯವಾಗಿದ್ದರೂ, ಕೈಲಾದ ಮಟ್ಟಿಗೆ ಪ್ರಯತ್ನ ಮಾಡದೇ ಬಿಡುವದು ತಕ್ಕದ್ದಲ್ಲೆಂದು ಗ್ರಹಿಸಿ, ಪ್ರಾಚೀನ ಇತಿಹಾಸದಲ್ಲಿ ಹೆಸರಾದ ಸಿಕಂದರ ಬಾದಶಹನ ಚರಿತ್ರೆಯನ್ನು ಹಲವು ಇಂಗ್ಲಿಷ–ಮರಾಠಿ ಗ್ರಂಥಗಳ ಆಧಾರದಿಂದ ಬರೆದೆನು."– ಎಂದು ಹೇಳಿದ್ದಾರೆ. ಅದೂ ಅಲ್ಲದೆ, "ಈ ಪುಸ್ತಕವನ್ನು ಬರೆಯುವಾಗ ಧಾರವಾಡ ಟ್ರೇನಿಂಗ ಕಾಲೇಜದ ಪೆನ್‌ಶನ್ನ ಪ್ರಿನ್ಸಿಪಾಲರಾದ ರಾವಸಾಹೇಬ ವೆಂಕಟರಂಗೊ ಕಟ್ಟಿ ಮತ್ತು

ಕನ್ನಡ ಗುರುಗಳಾದ ರಾ. ರಾ. ಧೋಂಡೋ ನರಸಿಂಹ ಮುಳಬಾಗಲ ಇವರಿಬ್ಬರು ಬಹಳ ಸಹಾಯ ಮಾಡಿದ್ದಾರೆ" ಎಂದು ಅವರನ್ನು ಮನಃಪೂರ್ವಕವಾಗಿ ಸ್ಮರಿಸುತ್ತಾರೆ. ಕಥೆಯ ವಿವರಣೆಯೊಡನೆ ಶ್ರೀಯುತರು ಅನೇಕ ಕಡೆಗೆ ನೀತಿಬೋಧೆಯನ್ನೂ ಮಾಡಿದ್ದಾರೆ. ಶ್ರೀಯುತರ ಬಣ್ಣಣೆಗೆಯ ಸುಭಗತೆ ಮತ್ತು ನೀತಿಬೋಧೆಯ ನಿದರ್ಶನವಾಗಿ ಈ ಕೆಳಗಿನ ಅವತರಣಿಕೆಯನ್ನು ಕೊಡಬಹುದು :

"ಸಿಕಂದರ ಬಾದಶಹನು ಸಿಟ್ಟಿನ ಸ್ವಭಾವದವನಿದ್ದನು. ಒಮ್ಮೊಮ್ಮೆ ಈ ಸಿಟ್ಟಿನಿಂದ ಕೆಟ್ಟ ಪರಿಣಾಮಗಳು ಆಗುತ್ತಿದ್ದವು. ಇದು ಅವನಲ್ಲಿ ಒಂದು ದೊಡ್ಡ ದೋಷವಿತ್ತೆಂದು ಹೇಳಬಹುದು. ಕಾಲಿಸ್ತೀನೀಸನೆಂಬ ಪಂಡಿತನನ್ನು ವಿಶೇಷ ಕಾರಣವಿಲ್ಲದೆ ಸಿಟ್ಟಿನ ಭರದಲ್ಲಿಯೇ ಕೊಲ್ಲಿಸಿದನು........ ಆತ್ಮಸಂಯಮನ ಮಾಡುವದಕ್ಕೆ ಅವನ ಗುರುವಾದ ಅರಿಸ್ಟಾತಲನು ಅವನಿಗೆ ಉಪದೇಶ ಮಾಡಿದ್ದಿಲ್ಲೆಂದು ಹೇಳಲಿಕ್ಕೆ ಬರುವದಿಲ್ಲ........ ಆದರೆ ಮೈಯಲ್ಲಿ ತಾರುಣ್ಯದ ಮತ್ತು ರಾಜ್ಯಾಧಿಕಾರದ ಮದಗಳು ಸೇರಿದವೆಂದರೆ, ಚಿಕ್ಕಂದಿನಲ್ಲಿ ಹೇಳಿದ ಬೋಧಗಳೆಲ್ಲ ಇಲ್ಲದಂತೆ ಆಗಿ, ಅಂತಃಕರಣದಲ್ಲಿ ಇಚ್ಛೆಯ ಪ್ರಾಬಲ್ಯವೇ ಬೆಳೆಯುತ್ತ ಹೋಗುತ್ತದೆಂದು ಮೇಲಿಂದ ಮೇಲೆ ಅನುಭವಕ್ಕೆ ಬರುತ್ತದೆ. ಅದೇ ಮಾತು ಸಿಕಂದರನಿಗೆ ಸರಿಯಾಗಿ ಹತ್ತುತ್ತದೆ." (ಪು. ೨೪೬)

ಇಂಗ್ಲೆಂಡ್ ದೇಶದ ಇತಿಹಾಸ (೧೮೯೬) :

೩೬೩ ಪುಟದ ಈ ಪುಸ್ತಕ ಮಂಗಳೂರಿನ ಕೊಡಿಯಾಲ್‌ಬೈಲ್ ಮುದ್ರಾಲಯದಲ್ಲಿ ಮುದ್ರಿತವಾಯಿತು. ಲೇಖಕರು ಇದನ್ನು ಅಂದಿನ ಶಿಕ್ಷಣಖಾತೆಯ ಇನಸ್ಪೆಕ್ಟರ್ ಜನರಲ್‌ರಾಗಿದ್ದ ಶ್ರೀ ಹೊರಮಸ್ಜಿ ಜಹಂಗೀರ ಭಾಭಾ ಅವರಿಗೆ, (ಅವರ ಕನ್ನಡ ಜನತೆ ಮತ್ತು ಭಾಷೆಯಲ್ಲಿಯ ಆಸ್ಥೆಯನ್ನು ಗಮನಿಸಿ) ಅರ್ಪಿಸಿದ್ದಾರೆ. ಈ ಪುಸ್ತಕ ಪಠ್ಯವೂ ಆಗಿದ್ದಿತು. ಇದರ ಎರಡನೆಯ ಆವೃತ್ತಿ ಸನ್ ೧೯೦೧ ರಲ್ಲಿ ಪ್ರಕಟವಾಯಿತು. ಇದು ಹೆಚ್ಚು ಕಡಿಮೆ ಶ್ರೀ ನಾರಾಯಣ ವಿಷ್ಣು ಬಾಪಟ ಎನ್ನುವವರು ಮರಾಠಿಯಲ್ಲಿ ಬರೆದ ಪುಸ್ತಕದ ಕನ್ನಡಾನುವಾದವಾಗಿದೆ. ೨ ನೆಯ ಆವೃತ್ತಿಯಲ್ಲಿ ಲೇಖಕರು, ಸ್ಮಿಥ್, ಹ್ಯೂಮ್, ಬರ್ಕ್ಲೆ ಮೊದಲಾದ ಆಂಗ್ಲ ಲೇಖಕರ ಗ್ರಂಥಗಳಿಂದಲೂ ವಿಷಯಸಂಗ್ರಹಣೆ ಮಾಡಿದ್ದಾಗಿ ಹೇಳುತ್ತಾರೆ. ಪುಸ್ತಕದ ಪ್ರಾರಂಭದಲ್ಲಿ ಇಂಗ್ಲೀಷಿನಲ್ಲಿ ಬರುವ ಹಲವು ಪದಗಳ ತುಂಬಾ ಉಪಯುಕ್ತವಾದ ಅರ್ಥವನ್ನು ಕೊಟ್ಟಿದ್ದಾರೆ. ಇದರಿಂದ ಲೇಖಕರ ಪರಿಶ್ರಮವನ್ನು ಕಾಣಬಹುದಾಗಿದೆ :

> "ನೋಬಲ್ಲರು– ಇವರು ದೊಡ್ಡ ಜನರು. ಇವರು ವಾಡಿಕೆಯಾಗಿ ದೊಡ್ಡ ದೊಡ್ಡ ಜಮೀನದಾರರಿರುತ್ತಾರೆ. ಇವರಲ್ಲಿ ಡ್ಯೂಕ್, ಮಾರ್ಕ್ವಿಸ್, ಅರ್ಲ್, ವಾಯ್‌ಕೌಂಟ್, ಬ್ಯಾರನ್ ಎಂಬ ದರ್ಜೆಗಳಿರುತ್ತವೆ.
>
> ಡ್ಯೂಕ್– ಈ ದರ್ಜೆಯವನು ಅರಸನ ಹಿರಿಯ ಮಗನನ್ನು ಬಿಟ್ಟು ಉಳಿದ ನೋಬಲ್ಲರೊಳಗೆ ಮೊದಲನೆಯವನು. ಈ ದರ್ಜೆಯವರು ವಾಡಿಕೆಯಾಗಿ ಅರಸುಮನೆತನದವರಿರುತ್ತಾರೆ. ಡ್ಯೂಕ್ ಎಂಬ ಪದವಿಯು ಯುರೋಪ್ ಖಂಡದೊಳಗಿನ ಕೆಲವು ಸೀಮೆಗಳ ಅರಸರಿಗೆ ಇರುತ್ತದೆ.
>
> ನಾಯಿಟ್ (ಸರದಾರ)– ಇದು ಒಂದು ಪದವಿಯು. ಇದು ಇಂಗ್ಲಂಡದಲ್ಲಿ ಜಹಗೀರದಾರಿಯ ಕ್ರಮವು ನಡೆಯುತ್ತಿದ್ದಾಗ್ಗೆ, ಯುದ್ಧವನ್ನು ಕೈಕೊಳ್ಳುವ ಬಂಟನಿಗೆ ಕೊಡಲ್ಪಡುತ್ತಿತ್ತು. ಆದರೆ ಈಗ ಅದು ಬಹುಮಾನಾರ್ಥವಾಗಿ ಕೊಡಲ್ಪಡುತ್ತದೆ. ಈ ಪದವಿ

ಯನ್ನು ಹೊಂದಿದವನ ಹೆಸರಿನ ಹಿಂದೆ ' ಸರ್ ' ಎಂಬ ಬಿರುದನ್ನು ಉಪಯೋಗಿಸುತ್ತಾರೆ. ಉದಾಹರಣೆ, ಸರ್ ರಿಚರ್ಡ ಟೆಂಪಲ್, ಸರ್ ಟಿ. ಮಾಧವರಾವ. "

ನಾಮದಾರ ವಿಲಿಯಮ್ ಎವರ್ಟ ಗ್ಲ್ಯಾಡ್‌ಸ್ಟನ್ (೧೯೦೯) :

೧೫೫ ಪುಟಗಳ ಈ ಪುಸ್ತಕ ಧಾರವಾಡ ವಿದ್ಯಾವರ್ಧಕ ಸಂಘದ ೫೦ ನೆಯ ಪುಸ್ತಕವಾಗಿ ಪ್ರಕಟವಾಯಿತು. ಈ ಪುಸ್ತಕದಲ್ಲಿ ಬರುವ ಕವನ ಭಾಗಗಳನ್ನು ಶ್ರೀ ಎನ್. ಆರ್. ಕರಿಬಸವಶಾಸ್ತ್ರಿಗಳು ಬರೆದುಕೊಟ್ಟಿದ್ದಾರೆ. ಈ ಗ್ರಂಥರಚನೆಯ ಕಾಲಕ್ಕೆ ಗ್ಲಾಡ್‌ಸ್ಟನ್ನನ ವಂಶಜರು ಯಾವ ಯಾವ ಪರಿಸ್ಥಿತಿಯಲ್ಲಿ ಇದ್ದರೆಂಬುದನ್ನೂ ಕಂಡುಹಿಡಿಯಲು ಲೇಖಕರು ಪ್ರಯತ್ನಿಸಿದ್ದಾರೆ. ಇದರಲ್ಲಿ ಲೇಖಕರ ಸಾಹಸಪ್ರವೃತ್ತಿಯನ್ನು ಕಾಣುತ್ತೇವೆ :

" ಆದರೆ, ಅದನ್ನು ಹೇಗೆ ಸಂಗ್ರಹಿಸಬೇಕೆಂದು ಯೋಚಿಸುತ್ತಿರುವಲ್ಲಿ, ನಮ್ಮ ಚರಿತ್ರನಾಯಕನ ೪ ನೆಯ ಚಿರಂಜೀವರಾದ ನಾಮದಾರ ಹರ್ಬರ್ಟ ಗ್ಲ್ಯಾಡ್‌ಸ್ಟನ್‌ರೆಂಬವರು ನಮ್ಮ ಪ್ರಭುಗಳಾದ ಎಡ್ವರ್ಡ ಬಾದಶಹರ ಪ್ರಧಾನ ಮಂಡಲದಲ್ಲಿ ಒಬ್ಬ ಮಂತ್ರಿಗಳಾಗಿರುವರೆಂಬ ವೃತ್ತಾಂತವನ್ನು ಕೇಳಿ, ಆ ಮಹಾನುಭಾವರಿಗೆ ನನ್ನ ಕೋರಿಕೆಯನ್ನು ಅರುಹಲು, ಅವರು ಆತ್ಮಾನಂದದಿಂದ ನನಗೆ ಬೇಕಾದ ವಿವರವನ್ನೊದಗಿಸಿಕೊಟ್ಟು, ಈ ಗ್ರಂಥಕ್ಕೆ ಒಳ್ಳೆಯ ಸಹಾಯಕರಾದರು. " (ಪು. ೨) ಪುಸ್ತಕದ ಶೈಲಿ ಲಲಿತವೂ, ಹೃದಯಂಗಮವೂ ಆಗಿದೆ.

—

ಶಾಂತಕವಿ

(೧೮೫೬–೧೯೨೦)

ಕನ್ನಡದ ಉದಯಕಾಲದಲ್ಲಿ ಕನ್ನಡದ ಸೇವೆಯನ್ನು ಅವ್ಯಾಜ ಪ್ರೀತಿಯಿಂದ ಮಾಡಿ, ಕನ್ನಡಕ್ಕೆ ಸತ್ವಪೂರ್ಣವೂ ಬಹು ಬೆಲೆಯುಳ್ಳುದೂ ಆದ ಕಾಣಿಕೆಯನ್ನು ಸಲ್ಲಿಸಿದ ಶ್ರೇಯಸ್ಸು ದಿವಂಗತ ಶಾಂತ ಕವಿಗಳಿಗೆ ಸಲ್ಲುತ್ತದೆ. ಅವರು ಉದಯಕಾಲದ ಕನ್ನಡ ಕವಿಗಳಲ್ಲಿ ಮೂರ್ಧನ್ಯರು. ಯಾವ ದೃಷ್ಟಿಯಿಂದ ವಿಚಾರ ಮಾಡಿದರೂ 'ಮಹಾಕವಿ' ಅನ್ನುವಷ್ಟು ಶ್ರೀಮಂತವಾದ ಸಾಹಿತ್ಯವನ್ನು ನಿರ್ಮಿಸಿದವರು. ನಿಜ; ಅವರ ಅಂದಿನ ಶೈಲಿ ಇಂದಿನ ಬರವಣಿಗೆಗೆ ಹಳೆಯದಾಗಿ ಕಾಣಬಹುದು; ಪ್ರಯೋಗ ಅಲ್ಲಲ್ಲಿ ಗ್ರಾಮ್ಯವೆನ್ನಿಸಬಹುದು. ಹಾಗೆ ವಿಚಾರ ಮಾಡಿದರೆ, ಪ್ರಪಂಚದ ಎಷ್ಟೋ ಜನ ಕವಿಗಳಿಗೆ ಈ ಆಕ್ಷೇಪ ಬಾರದಿರಲಾರದು. ಏನೇ ಆದರೂ, ಶಾಂತಕವಿಗಳ ದೃಷ್ಟಿ ಹೊಸದು; ಬರವಣಿಗೆ ಹೊಸ ಮಾದರಿಯದು; ಕೈ ಬಲು ಹುಲುಸು. ನಿಜವಾಗಿ 'ಮಹಾ' ಎನ್ನುವಷ್ಟು ಸಿದ್ಧಿಯನ್ನು ಸಾಧಿಸಿದ ಹಿರಿಯರವರು.

ಯಾವ ಕವಿಗೆ 'ಮಹಾ' ಎಂದೆನ್ನಬೇಕೆಂದು ಹೇಳಿದಾಗ, ಈ ಕೆಳಗಿನ ನಿಕಷಗಳನ್ನು ವಿಮರ್ಶೆಯಲ್ಲಿ ಹೇಳುವುದುಂಟು :

(೧) ಆ ಕವಿಯ ಕೃತಿ ಅಂತಸ್ಸತ್ವಪೂರ್ಣವಾಗಿರಬೇಕು.
(೨) ಕೃತಿಗಳು ಸಾಕಷ್ಟು ವಿಪುಲವಾಗಿರಬೇಕು.
(೩) ಅವು ವೈವಿಧ್ಯಪೂರ್ಣವಾಗಿರಬೇಕು.
(೪) ಆ ಕವಿಯ ಪ್ರಭಾವ ಇತರ ಕವಿಗಳ ಮೇಲೆ ಕಂಡುಬರುತ್ತಿರಬೇಕು.

ಈಯೆಲ್ಲ ನಿಕಷಗಳನ್ನಿಟ್ಟು ನೋಡಿದರೂ, ಶಾಂತಕವಿಗಳು ಯಶಸ್ವಿಯಾಗುತ್ತಾರೆ. ಅವರಿಗೆ 'ಮಹಾ' ಅನ್ನಲಿ ಬಿಡಲಿ; ಅವರು ಅದ್ಭುತ ಸಿದ್ಧಿಯನ್ನು ಪಡೆದ ಕವಿ ಎಂದು ಸ್ಪಷ್ಟವಾಗಿ ಹೇಳಬಹುದು.

ಬಹುಮಟ್ಟಿಗೆ ಭಾಷಾಂತರಯುಗವೆನ್ನಿಸಿಕೊಂಡ ಕಾಲದಲ್ಲಿ ಶಾಂತಕವಿಗಳು ಸ್ವೋಪಜ್ಞ ಕೃತಿ ರಚನೆ ಮಾಡಿದರು. "ಎತ್ತುಂ ಪೊತ್ತರೆ ತಾಳಲಾರದ ಮಹಾಗ್ರಂಥಂಗಳಂ ಗೈದೆನಾಂ"– ಎನ್ನುವಷ್ಟು ಅನೇಕ ಕೃತಿಗಳನ್ನು ರಚಿಸಿದರು ತಾವು ೬೫ ಗ್ರಂಥಗಳನ್ನು ರಚಿಸಿರುವದಾಗಿ ಸ್ವತಃ ಕವಿಗಳೇ ಹೇಳುತ್ತಾರೆ. ಕೇವಲ ಗ್ರಂಥ ಬಾಹುಲ್ಯ ಮಾತ್ರವಲ್ಲದೆ, ಗ್ರಂಥ ವೈವಿಧ್ಯವೂ ಅಪ್ರತಿಮವಾಗಿದೆ. ಶಾಂತ ಕವಿಗಳು ಬಿಡಿ ಕವನಗಳನ್ನು ಬರೆದರು; ಕೀರ್ತನೆಗಳನ್ನು ರಚಿಸಿದರು; ನಾಟಕಗಳನ್ನು ನಿರ್ಮಿಸಿದರು;

ಛಂದಸ್ಸು–ಅಲಂಕಾರ ವಿಷಯಕವಾಗಿ ಪಾಂಡಿತ್ಯಪೂರ್ಣವಾದ ಪ್ರಬಂಧಗಳನ್ನು ಬರೆದರು, 'ಅಡ್ಡ ಕಥೆಗಳ ಬುಕ್ಕನ್ನು' ಬರೆದರು. ಅವರೇ ಹೇಳಿದ ಹಾಗೆ, "ಕವಿಕಂಠಕುಠಾರ" ಎಂಬ ಕಲ್ಪಿತ ಕಾದಂಬರಿಯನ್ನು ರಚಿಸಿದರು. ಈ ಗ್ರಂಥ ೧೮೮೧ರ ಮೊದಲೇ ರಚಿತವಾಗಿತ್ತು. ಈ ಗ್ರಂಥ ಉಪಲಬ್ಧವಾಗಲಿಲ್ಲ. ಇದು ದೊರೆತಲ್ಲಿ, ಪ್ರಾಯಶಃ ಇದೇ ಕನ್ನಡದಲ್ಲಿಯ ಪ್ರಥಮ ಕಲ್ಪಿತ ಕಾದಂಬರಿಯಾಗುತ್ತದೇನೊ ! ಅಲ್ಲದೆ, ನವೀನತೆಯ ಸಂಕೇತಗಳಾದ ವ್ಯಕ್ತಿನಿಷ್ಠತೆ, ಯುಕ್ತಾಯುಕ್ತ ಪರಿಜ್ಞಾನದ ಕಲ್ಪನೆ, ಸಮಕಾಲೀನ ಭಾಷಿಕ ಮತ್ತು ರಾಜಕೀಯ ಪ್ರಜ್ಞೆ, ಹಳೆಯ ಛಂದಸ್ಸಿನಲ್ಲಿದ್ದರೂ ಶರಷಟ್ಪದಿಯ ಪ್ರಯೋಗದ ಮೂಲಕ ನವೀನವೆನ್ನಿಸುವಂಥ ಬಂಧ– ಇವೆಲ್ಲ ಶಾಂತಕವಿಗಳಿಗೆ ಹಿರಿಯ ಸ್ಥಾನವನ್ನು ಕಲ್ಪಿಸಿಕೊಟ್ಟಿವೆ. ಕೇವಲ ಉದ್ದೇಶ ಮಾತ್ರವಲ್ಲದೆ, ರಚನೆಗಳ ಅಂತಸ್ಸತ್ವವೂ, ಊಹಾ–ಚಮತ್ಕಾರವೂ ಶಾಂತಕವಿಗಳ ಕೃತಿಗಳಿಗೆ ಹೆಚ್ಚಿನ ಸಾಹಿತ್ಯಕ ಬೆಲೆಯನ್ನು ತಂದುಕೊಟ್ಟಿವೆ.

ಸ್ವೋಪಜ್ಞ ಕೃತಿರಚನೆ :

ಶಾಂತಕವಿಗಳು ಜಯದೇವನ 'ಗೀತಗೋವಿಂದ'ವನ್ನು ಆಧರಿಸಿ 'ವಿರಹತರಂಗ' ಎಂಬ ಕೃತಿಯನ್ನು ರಚಿಸಿದರು. ಕಾಳಿದಾಸನ 'ಮೇಘದೂತ'ವನ್ನು ಆಧರಿಸಿ ತಮ್ಮ 'ಮೇಘದೂತ' ಕಾವ್ಯವನ್ನು ಬರೆದರು. 'ಪಾರ್ವತೀಪರಿಣಯ'ವನ್ನು 'ಗಿರಿಜಾ ಕಲ್ಯಾಣ'ವೆಂದು ಭಾಷಾಂತರಿಸಿದರು. ಆದರೆ, ಈ ಭಾಷಾಂತರ ರೂಪಾಂತರಗಳಿಗಿಂತ ಅವರ ಸ್ವತಂತ್ರವಾದ ಕೃತಿಗಳ ಸಂಖ್ಯೆಯೇ ಹೆಚ್ಚು.

ಗ್ರಂಥ ಬಾಹುಲ್ಯ :

ಶಾಂತಕವಿಗಳು ಗ್ರಂಥ ರಚನೆ ಮಾಡಿದ ಕಾಲವೆಂದರೆ, ಕನ್ನಡಿಗರಲ್ಲಿ ಕನ್ನಡದ ಬಗ್ಗೆ ಸ್ವಲ್ಪವೂ ಅಭಿಮಾನವಿರದ ಕಾಲ. ಇದೂ ಅಲ್ಲದೆ, ಶಾಂತಕವಿಗಳು ಕನ್ನಡ ಶಾಲಾಮಾಸ್ತರರಾಗಿದ್ದವರು. ಇಂಥವರ ಕೃತಿಗಳನ್ನು ಸ್ವಯಂ ಪಂಡಿತಮನ್ಯಮಾನ್ಯರಾದ ಪದವೀಧರರು ಕಣ್ಣೆತ್ತಿ ಕೂಡ ನೋಡುವುದೆಂತು ? ಪದವೀಧರರು ಕನ್ನಡವೆಂದರೆ ಮೂಗು ಮುರಿಯುತ್ತಿದ್ದ ಕಾಲವದು. ಅಂಥ ಸಮಯದಲ್ಲಿ ತಮ್ಮ ಪ್ರಪಂಚದ ತಾಪತ್ರಯಗಳನ್ನು ಎದುರಿಸಿ, ಶಾಲೆಯಲ್ಲಿ ಮಕ್ಕಳಿಗೆ ಪಾಠ ಹೇಳಿ, "ಎತ್ತುಂ ಪೊತ್ತರೆ ತಾಳಲಾರದ''ಷ್ಟು ಅನೇಕ ಮಹಾ ಗ್ರಂಥಗಳನ್ನು ಶಾಂತಕವಿಗಳು ರಚಿಸಿದರು. ಹಣವಿರದ ಅಂದಿನ ಕಾಲದಲ್ಲಿ ಇವುಗಳ ಪ್ರಕಟಣೆಗೆ ಶಾಂತಕವಿಗಳು ಒಂದು ಒಳ್ಳೆಯ ತಂತ್ರವನ್ನು ಹುಡುಕಿ ತೆಗೆದಿದ್ದರು. ಯಾರಾದರೂ ಶ್ರೀಮಂತರಿಂದ ಮುದ್ರಣದ ವೆಚ್ಚವನ್ನು ಭರಿಸಿ, ಆ ಗ್ರಂಥವನ್ನು ಅವರಿಗೆ ಕಾಣಿಕೆಯಾಗಿ ಅರ್ಪಿಸಿಬಿಡುತ್ತಿದ್ದರು. ಈ ರೀತಿ ಅವರ ಅನೇಕ ಗ್ರಂಥಗಳು ಶ್ರೀ ಶೇಷಗಿರಿರಾವ ಅಣ್ಣಿಗೇರಿ ಎಂಬವರಿಗೂ, ಅಗಡಿಯ ಬಹದೂರ ದೇಸಾಯರಿಗೂ ಅರ್ಪಿತವಾಗಿವೆ. ಇದು ಎಂಥ ಪರಿಸ್ಥಿತಿಯಲ್ಲಿ ಶಾಂತಕವಿಗಳು ಸಾಹಿತ್ಯ ಸೇವೆ ಮಾಡಿದರೆಂಬುದರ ಕಲ್ಪನೆಯನ್ನು ಕೊಡುತ್ತದೆ. ಅವರೇ ಹೇಳಿದಂತೆ "........ನಂಮ ಕನ್ನಡ ಹಿರಿಯರಾದರೂ ತಂಮ ಕಾಲದಲ್ಲಿಯ ಲೋಕಸಮಾಜದ ಸುಧಾರಣಾನುಸಾರವಾಗಿ ಪದ್ಯ ಗ್ರಂಥಗಳನ್ನು ರಚಿಸಿ ಹೆಸರು ಪಡೆದರು. ಅವರಿಂದ ಇತ್ತ ಕಡೆಗೆ ಯಾರಾದರೂ ನಂಮ ಕನ್ನಡ ಭಾಷೆಯ ವಿಷಯದಲ್ಲಿ ಪ್ರಯತ್ನ ಮಾಡದ್ದರಿಂದ ಈಗ ಅದು ತೀರ ಕೀಳಸ್ಥಿತಿಯಲ್ಲಿರುವದು. ಇದು ನಮಗೆ ಬಹಳೇ ದೊಡ್ಡ ಕುಂದು........ ಈ ಸಂಗತಿಯು ಯಃಕಶ್ಚಿತರೂ ಅಲ್ಪಮತಿಗಳೂ ದರಿದ್ರರೂ ಉದರದಾಸರೂ ಆಗಿರುವ ನಂಮಂಥವರಿಗೆ ಸುದ್ದಾ ತಿಳಿಯುತ್ತದೆ. ಹೀಗಿದ್ದೂ ದೊಡ್ಡವರೂ ಬುದ್ಧಿವಂತರೂ ಸಂಪನ್ನರೂ ಸರಸ್ವತೀಸಮಾನರೂ ಆಗಿರುವ ಪಂಡಿತರ ಲಕ್ಷ್ಯವು ಈ ಸಂಗತಿಯ ಕಡೆಗೆ ಇಲ್ಲವೇ ಇಲ್ಲ. ಅಂದಮೇಲೆ ನಮ್ಮ ಕನ್ನಡ ಭಾಷೆಯ

ದುರ್ಭಾಗ್ಯವನ್ನು ಎಷ್ಟೆಂತ ವರ್ಣಿಸಬೇಕು ? ಕಟ್ಟುಗಟ್ಲೇ ಕಂಠಪತ್ರಗಳು ಸವೆದು ಹೋದರೂ ಸ್ವಲ್ಪವೇ ಸರಿ. ಇರಲಿ, ಎಷ್ಟು ಮಾಡಿದರೂ ಅವರು ಪಂಡಿತರೇ ಪಂಡಿತರು. ಅವರಂತೆ ನಂಮಿಂದ ಹ್ಯಾಗೆ ಆದೀತು ? ಅವರ ಮುಗುಳು ನಗೆಯ ಒಂದೆರಡು ಶಬ್ದಗಳಿಂದ ಆದಷ್ಟು ಕಾರ್ಯವು ನಮ್ಮಂಥವರ ಇಡೀ ಜೀವಿತದಿಂದಲೂ ಆಗಲಿಕ್ಕಿಲ್ಲ. ಆದರೆ ಅಂಥ ಅರಸು ಪಂಡಿತರಿಗೆ ಅಣಕಿಸಿ ಅವರಲ್ಲಿ ಗ್ರಂಥ ರಚನೆಯ ಈರ್ಷೆಯನ್ನು ಉತ್ಪನ್ನ ಮಾಡುವ ಮಂದ ವಿಚಾರದಿಂದ ಕನ್ನಡ ಭಾಷೆ ಯನ್ನು ಊರ್ಜಿತಗೊಳಿಸುವ ಅಭಿಲಾಷೆಯುವರಾದ ನಾವು ಕನ್ನಡ ಭಾಷೆಯಲ್ಲಿ ೬೫ ಗ್ರಂಥಗಳನ್ನು ರಚಿಸಿರುವೆವು.''೧

ಅದೂ ಅಲ್ಲದೆ, ತಮ್ಮ ನೌಕರಿಯ ತಾಪತ್ರಯದಲ್ಲಿ ಗ್ರಂಥ ರಚನೆಗೆ ಅವರಿಗೆ ಅವಕಾಶ ವಾದರೂ ಇದ್ದಿತೆ ? "ನಾವು ದೇವರನ್ನು ಸ್ಮರಿಸಿ ನಂಮ ಭಂಗಾರದಂಥ ಹಗಲಿನ ಆಯುಷ್ಯವನ್ನು ಸಾಲಿಯ ವಿದ್ಯಾರ್ಥಿಗಳೊಡನೆ ತಲೆಯೊಡೆದುಕೊಳ್ಳುತ್ತ ಕಳೆಯುತ್ತಿರುವದರಿಂದ ನಮಗೆ ಉಂಟಾದ ವೇಳ್ಯದ ಅಭಾವದಿಂದಲೂ, ಗ್ರಂಥ ರಚನೆಯ ಕಾರ್ಯದಲ್ಲಿ ಬಹು ಅವಸರವನು ಮಾಡುವ ನಂಮ ವಿಲಕ್ಷಣ ಸ್ವಭಾವದಿಂದಲೂ, ಸೂಟಿಯ ದಿವಸ ಇಲ್ಲವೆ ರಾತ್ರಿ ಕಾಲದಲ್ಲಿ ಅಲ್ಪಸ್ವಲ್ಪ ಬರೆಯ ದೊರ ಕುತ್ತಿರುವ ಸಮಯವಿಶೇಷದಲ್ಲಿ ಉಂಟಾಗುತ್ತಿರುವ ಬಡತನದ ಚಿಂತಾವಿಚಾರಗಳಿಂದಲೂ ನಂಮಿಂದಲೇ ಆಗಲಿ, ಯಾರಿಂದಲೇ ಆಗಲಿ'' ಆಗಿರುವ ತಪ್ಪುಗಳನ್ನು ಮನ್ನಿಸಬೇಕೆಂದು ಕೇಳಿ ಕೊಳ್ಳುತ್ತಾರೆ.೨

೧೮೯೨ರಲ್ಲಿ ಪ್ರಕಟವಾದ 'ಮೇಘದೂತ ಕಾವ್ಯ'ದ ಕೊನೆಗೆ ಕೊಟ್ಟ ಪ್ರಕಟನೆಯಲ್ಲಿ ಶಾಂತಕವಿ ರಚಿತವಾದ ಕೃತಿಗಳು ಇಂತಿವೆ :

ಕಾವ್ಯ :

*೧. ಮೇಘದೂತ (ಪದ್ಯರೂಪ)
*೨. ಮುಕುಂದ ದಾನಾಮೃತ
*೩. ವಿರಹತರಂಗ (೧೮೮೫)
೪. ರಘುವಂಶ (೩ನೇ ಸರ್ಗ)
೫. ಋತುಸಂಹಾರ
೬. ಪುಷ್ಪಬಾಣವಿಲಾಸ
೭. ರಸಿಕಾರಸಿಕ ವಿಚಾರ
೮. ವಿಷಕಂಠಖಡ್ಗ
೯. ಆನಂದಲಹರಿ

ನಾಟಕ :

*೧೦. ಉಷಾಹರಣ
*೧೧. ವತ್ಸಲಾಹರಣ
*೧೨. ಕೀಚಕವಧ (೧೮೯೧)
*೧೩. ಶ್ರೀಯಾಳಸತ್ವ ಪರೀಕ್ಷಾ
*೧೪. ಚಂದ್ರಾವಳಿ
*೧೫. ಸೀತಾರಣ್ಯ ಪ್ರವೇಶ ನಾಟಕ (೧೮೮೬)
*೧೬. ಸುಂದೋಪಸುಂದ ವಧೆ
೧೭. ಸುಧನ್ವ ವಧೆ
೧೮. ಸೀತಾಸ್ವಯಂವರ
೧೯. ಕಾಳಿದಾಸ
೨೦. ಹರಗರ್ವ ಪರಿಹಾರ
೨೧. ಮಯೂರಧ್ವಜ ಪ್ರತಾಪ
೨೨. ಕೃಷ್ಣರಾಧಿಕಾ ವಿಲಾಸ
೨೩. ಆಂಜನೇಯ ವಿಜಯ

೧ ಸೀತಾರಣ್ಯ ಪ್ರವೇಶ ನಾಟಕ : ೧೮೮೬ : ಪು. ೩–೪.
೨ ಅದೇ : ಪು. ೭–೮.

*೨೪. ಪಾರ್ವತಿ ಪರಿಣಯ (ಗಿರಿಜಾ ಕಲ್ಯಾಣ)
*೨೫. ನಾಗಾನಂದ
೨೬. ಗಾಲವ ಚಿತ್ರಸೇನ
೨೭. ಬೃಹಜ್ಜಂಬೂ ಚರಿತ್ರ
೨೮. ವಿಶ್ವಾಮಿತ್ರ ತಪೋಭಂಗ ಅಥವಾ ಶಕುಂತಲಾ ಉತ್ಪತ್ತಿ
೨೯. ಹರಿಶ್ಚಂದ್ರ ಸತ್ವಪರೀಕ್ಷಾ ಭಾಗ ೧–೨
೩೦. ರಾವಣ ವಧ
೩೧. ನಾರದ ಕುಚೇಷ್ಟಾ
೩೨. ಜರಾಸಂಧ ವಧ
೩೩. ವಾಸಪ್ಪ ನಾಯಕನ ಫಾರ್ಸು
೩೪. ಭುಜಂಗೋಪದೇಶ
೩೫. ವ್ಯಭಿಚಾರಾನಾರ್ಥ ಸಿಂಧು

ಕೀರ್ತನ :

*೩೬. ಗಜೇಂದ್ರ ಮೋಕ್ಷ (೧೮೯೧)
೩೭. ರಾವಣ ವೇದವತೀ
೩೮. ಶ್ರೀಮತಿ ಸ್ವಯಂವರ
೩೯. ಹರಿಮಿತ್ರೋಪಾಖ್ಯಾನ

ಶಾಸ್ತ್ರ :

೪೦. ಅಲಂಕಾರ ಶಾಸ್ತ್ರ (೧ನೇ ಭಾಗ)
೪೧. ಲಘು ಕವಿತಾ ಪದ್ಧತಿ (ಟಿಪ್ಪಣಿ)

ಇತರ ಗ್ರಂಥ :

*೪೨. ಶೃಂಗಾರ ವಚನ ಸಂಗ್ರಹ ಭಾಗ ೧–೨ (೨ನೇ ಭಾಗ ೧೮೯೧)
೪೩. ವೇಶ್ಯಾವಾಟಿಕಾ ಸಂಚಾರ
೪೪. ಬರಗಾಲರಸು
*೪೫. ಶ್ರೀಕೃಷ್ಣ ಮೋಹಿನಿ ದುಂದುಮೆ
*೪೬. ಅಲಾವಿಜಂಗು
೪೭. ಕವಿಕಂಠಕುಠಾರ (ಕಲ್ಪಿತ ಕಾದಂಬರಿ)
೪೮. ಶೃಂಗಾರ ಸಾಗರ
೪೯. ಆಡ್ಡಕಥೆಗಳ ಬುಕ್ಕು
೫೦. ಸದ್ವರ್ತನ

ಇವುಗಳಲ್ಲಿ * ಈ ಚಿಹ್ನವಿದ್ದ ಗ್ರಂಥಗಳು ಆಗಲೇ ಪ್ರಕಟವಾಗಿದ್ದವು. 'ಮುಕುಂದ ದಾನಾಮೃತ' ವೇ ಪ್ರಾಯಶಃ 'ಶ್ರೀಕೃಷ್ಣದಾನಾಮೃತ' ಎಂಬ ಹೆಸರಿನಿಂದ ೧೯೨೬ ರಲ್ಲಿ ಪ್ರಕಟವಾದಂತೆ ಕಾಣುತ್ತದೆ. 'ವಾಸಪ್ಪ ನಾಯಕನ ಫಾರ್ಸು', 'ವ್ಯಭಿಚಾರಾನರ್ಥ ಸಿಂಧು', 'ಬರಗಾಲರಸು', 'ಅಲಾವಿ ಜಂಗು'– ಮೊದಲಾದುವು ಸಾಮಾಜಿಕವಿದ್ದಂತೆ ಕಾಣುತ್ತವೆ. ವಾಸಪ್ಪ ನಾಯಕನ ಫಾರ್ಸು, ಫಾರ್ಸು ಎನ್ನುವ ಹೆಸರಿನ ಮೇಲಿಂದ ಪುರಂದರದಾಸರ ವಿಷಯವಾಗಿರಲಾರದು. ಶ್ರೀಯುತರ 'ನಾಟಕಾವಲೋಕನ' ಎಂಬ ಪದ್ಯಕೃತಿ 'ಪ್ರಭಾತ' ದಲ್ಲಿ ನವೆಂಬರ ೧೯೧೯ ರ ಸಂಚಿಕೆಯಿಂದ ಕ್ರಮಶಃ ಪ್ರಕಟವಾಯಿತು. ಇವುಗಳಲ್ಲದೆ ಶ್ರೀಯುತರು 'ಕನ್ನಡ ದಾಸಯ್ಯನ ಪದಗಳು', 'ಕನ್ನಡಿಗರಿಗೆ ಸವಾಲುಗಳು', 'ಕಾಲಮಹಿಮೆ', 'ಕಾಳಾಸುರ', 'ನಾಟಕ ಪದಸಂಗ್ರಹ', 'ಮನೋರಮ ನಾಟಕ' ಮೊದಲಾದವುಗಳನ್ನೂ ಬರೆದಂತೆ ಕಂಡುಬರುತ್ತದೆ.

ಗ್ರಂಥವೈವಿಧ್ಯ :

ಮೇಲಿನ ಪಟ್ಟಿಯಿಂದ ಶಾಂತಕವಿಗಳು ಸಾಹಿತ್ಯದ ವಿವಿಧ ರೂಪಗಳಲ್ಲೆಲ್ಲ ಕೃತಿ ಮಾಡಿದರೆಂಬುದು ವ್ಯಕ್ತವಾಗುತ್ತದೆ. ಬಿಡಿ ಕವನಗಳು, ನಾಟಕಗಳು, ಕೀರ್ತನೆಗಳು, ಪಾಂಡಿತ್ಯದ ಗ್ರಂಥಗಳು

ಕಾದಂಬರಿ ಮೊದಲಾದವುಗಳನ್ನು ಬರೆದು ಅವರು ಜ್ಞಾನಪ್ರಪಂಚವನ್ನೆಲ್ಲ ತಮ್ಮದನ್ನಾಗಿ ಮಾಡಿಕೊಂಡರೆಂದು ಹೇಳಬಹುದು. ಶ್ರೀಯುತರ ಅನೇಕ ಸುಂದರವಾದ ಬಿಡಿ ಕವನಗಳು 'ಪ್ರಭಾತ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿವೆ.

ನವೀನ ಪ್ರಜ್ಞೆ :

ಕನ್ನಡದಲ್ಲಿ ಪ್ರಾಚೀನ ಕಾಲದಿಂದ ಕೃಷಿಮಾಡಿದ ಕವಿಗಳು ಹೆಚ್ಚಾಗಿ ವಸ್ತುನಿಷ್ಠವಾದ ಕಾವ್ಯ ರಚನೆಯನ್ನೇ ಮಾಡಿದರು. ತಮ್ಮ ವೈಯಕ್ತಿಕ ಭಾವನೆಗಳು, ಅಭಿಪ್ರಾಯಗಳು, ಎನಿಸಿಕೆಗಳು ಇವನ್ನು ಹೇಳಬೇಕಾದರೂ ಸಹ ರಾಮನ ಬಾಯಿಂದಲೋ ಸೀತೆಯ ಬಾಯಿಂದಲೋ ದ್ರೌಪದಿ ಇಲ್ಲವೆ ರಾಜಲಕ್ಷ್ಮಿಯ ಬಾಯಿಂದಲೋ ಹೇಳಿಸಿದ್ದುಂಟು. ಹೇಳುವವನು ಕವಿಯೇ ಆದರೂ ಮಾತಾಡುವ ಬಾಯಿ ಪೌರಾಣಿಕ ವ್ಯಕ್ತಿಗಳದು.

ಉದಾಹರಣೆಗೆ, ರನ್ನನ ಗದಾಯುದ್ಧದಲ್ಲಿ 'ನಾರಾಯಣಂ ಬೆಸಸೆ ಪೋದಪೆ' ನೆಂದ ಲಕ್ಷ್ಮಿಗೆ ದ್ರೋಣನಂದನನು ಲಕ್ಷ್ಮಿಯನ್ನು ಹಳಿದು ಹೇಳುವ ಮಾತಿದು :

ಇಱಿಯಿಸುವೆ ತಂದೆ ಮಕ್ಕಳ
ನಿಱಿಯಿಸುವಯ್ ಸೋದರರ್ಕಳಂ ತಮ್ಮೊಳ್ ತ
ಳ್ತಿಱಿಯಿಸುವಯ್ ಗುರು ಶಿಷ್ಯರ
ನಱಿಗುಲಿ ನಿನ್ನಂ ನಿಕೃಷ್ಟರಾದರುಮೊಳರೇ ? ೧

ಇದು ಅಶ್ವತ್ಥಾಮನ ಅನುಭವವಾಗಿರಲಿ ಬಿಡಲಿ, ಪ್ರಾಯಶಃ ರನ್ನ ತನ್ನ ಸುತ್ತಲಿನ ಜೀವನದಲ್ಲಿ ನೋಡಿದ ಅನುಭವವಾಗಿರಬಹುದು. ಇದರಂತೆಯೇ ಅನಲನಂದನೆ ಅನಿಲನಂದನನನ್ನು ಕುರಿತು ಹೇಳಿದ ಪೌರುಷದ ಮಾತಿನಲ್ಲಿಯೂ ಬಹುಶಃ ಕವಿ ರನ್ನನು ತನ್ನ ವ್ಯಕ್ತಿಗತವಾದ ಅಭಿಪ್ರಾಯವನ್ನೇ ಹೇಳುತ್ತಿದ್ದಾನೆ :

ಒಡಲೊಡಮೆಯೆಂಬಿವೆರಡುಂ
ಕೆಡಲಿರ್ಪುವು ಕೆಡದ ಕಸವರಂ ಜಸಮದಱಿಂ
ಕೆಡುವೊಡಲೊಡಮೆಯನೆಂದುಂ
ಕೆಡದೊಡಮೆಗೆ ಮಾಱುಗುಡುವುದಿಱಿವಬೆಡಂಗಾ

ಮಣಿಕನಕಂ ವಸ್ತು ವಿಭೂ
ಷಣಂಗಳಂ ಕೊಟ್ಟು ಪೆಂಡಿರೊಲ್ವರೆ ಗಂಡರ್
ಗುಣಮನೆ ಮೆಱೆವುದು ಶಸ್ತ್ರ
ವ್ರಣಮುಂ ನಿನ್ನಂತೆ ಮೆಱೆವುದಿಱಿವಬೆಡಂಗಾ ೨

ವ್ಯಕ್ತಿನಿಷ್ಠವಾದ ಭಾವನೆಗಳನ್ನು ನೇರವಾಗಿ ವ್ಯಕ್ತಮಾಡುವುದು ಹೊಸಗನ್ನಡದ ಸ್ಥಾಯಿಗಳಲ್ಲಿ ಒಂದಾಗಿದೆ. ಇದು ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದಲೂ ಬಂದಿರಬಹುದು. ಹೊಸ

---

೧ ಗದಾಯುದ್ಧ ಸಂಗ್ರಹ : ೧೯೬೩ : ಪು. ೮೨.

೨ ಅದೇ : ಪು. ೯.

ಗನ್ನಡದ ಕವಿ ಜಾಗೃತನಾದಾಗ ಕನ್ನಡಕ್ಕೆ ಬಾಯಿಯಿರಲಿಲ್ಲ. ತೋರಿಸುವ ಮುಖವಿರಲಿಲ್ಲ. ಶಾಂತ ಕವಿಗಳ ಕಾಲಕ್ಕೆ ಮರಾಠಿಗರ ಪ್ರಭಾವವೇ ಅತಿಶಯವಾಗಿತ್ತು. ಸಾಹಿತ್ಯ, ಸಂಸ್ಕೃತಿ, ನಾಟಕ ಎಲ್ಲದರಲ್ಲಿಯೂ ಅವರದೇ ಪ್ರಸ್ಥ. ಇಂಥ ಆಕ್ರಮಣವನ್ನು ಶಾಂತಕವಿಗಳು ಬಲವಾಗಿ ಪ್ರತಿಭಟಿಸಿದರು. ಈ ಪ್ರತಿಭಟನೆಯ ಮೂಲಕವೇ ಏನೋ ೩ ನೆಯ ವರ್ಷದ ಟ್ರೇಂಡ್ ಆದ ಈ ಪ್ರತಿಭಾವಂತನಿಗೆ ಯಾವ ಬಡತಿಯೂ ಸಿಗಲಿಲ್ಲ. ಅಷ್ಟೇ ಅಲ್ಲ; ಇವರು ಗದುಗಿನಲ್ಲಿದ್ದಾಗ ನಡೆಸಿದ ನಾಟಕಚಟುವಟಿಕೆಗಳ ಮೂಲಕ ಇವರು ಕನ್ನಡದ ಪ್ರಸ್ಥ ಬೆಳೆಸಿಯಾರೆಂದು ಅಂದಿನ 'ಆರೇ' ಅಧಿಕಾರಿಗಳು ಇವರನ್ನು ಗದುಗಿನಿಂದ ೯ ಮೈಲು ದೂರವಿರುವ ಹೊಂಬಳಕ್ಕೆ ವರ್ಗ ಮಾಡಿದರು. ಇಷ್ಟಾದರೂ ಶಾಂತಕವಿಗಳು ಕನ್ನಡದ ಮೇಲಿನ ಅಭಿಮಾನದಿಂದ ಪ್ರತಿದಿವಸ ಶಾಲೆಯ ಕೆಲಸ ಮುಗಿದ ಮೇಲೆ ಕುದುರೆಯನ್ನು ಹತ್ತಿಕೊಂಡು ಬಂದು ಗದುಗಿನಲ್ಲಿ ರಂಗತಾಲೀಮನ್ನು ಮುಗಿಸಿ ಹೊಂಬಳಕ್ಕೆ ಮರುಳುತ್ತಿದ್ದರು.[೧] ಇಂಥ ಪುಣ್ಯಪುರುಷರು ನಿಸ್ವಾರ್ಥವಾಗಿ ದುಡಿದದ್ದರ ಮೂಲಕವೇ ಉತ್ತರ ಕರ್ನಾಟಕದಲ್ಲಿ ಕನ್ನಡ ಬದುಕಿ ಉಳಿಯಿತು. ಮರಾಠಿಗರ ಪ್ರಭಾವವನ್ನು ಶಾಂತಕವಿಗಳು 'ನಾಟಕಾವಲೋಕನ ಸಮಾರಂಭ'ದಲ್ಲಿ ವಿವರವಾಗಿ ಚಿತ್ರಿಸಿದ್ದಾರೆ :

"ಎಲ್ಲಿ ನೋಡಲು ಮರಾಠಿಯರ ನಾಟಕಕೀರ್ತಿ
ಯೆಲ್ಲಿ ನೋಡಲು ಮರಾಠಿಯರ ನಾಟಕದರ್ಥಿ
ಯೆಲ್ಲಿ ನೋಡಲು ಮರಾಠಿಯರ ನಾಟಕ ನಟರ ಮೂರ್ತಿಗಳ ಸಂಚಾರವು
ಎಲ್ಲಿ ನೋಡಲು ಮರಾಠಿಯರ ನಾಟಕದಾಟ
ವೆಲ್ಲಿ ನೋಡಲು ಮರಾಠಿಯರ ನಾಟಕದೂಟ
ವೆಲ್ಲಿ ನೋಡಲು ಮರಾಠಿಯರ ನಾಟಕಮಯಂ ತಾನಾಯ್ತು ಕರ್ನಾಟಕಂ

ಇಂಥ ಕಾಲದಲ್ಲಿ ಕರ್ನಾಟಕದ್ದೇ ಆದ ನಮ್ಮ ಧಾರವಾಡ ಸೀಮೆಯ ಜನರು ಏನು ಅನ್ನುತ್ತಿದ್ದರು ಮತ್ತು ಇಂಥ ಕಾಲದಲ್ಲಿ ಕನ್ನಡ ನಾಟಕವು ಎಲ್ಲಿ ಹುಟ್ಟಿತು ? ಅಂದರೆ–

ಎಲ್ಲಿ ನೋಡಲು ಕನ್ನಡದ ಭಾಷೆಯೆಟ್ಟಿಯದ
ರಲ್ಲಿಲ್ಲ ಮೃದು ಶಬ್ದವಿಲ್ಲ ಭಾಷಾಸರಣಿ
ಯಿಲ್ಲವೈ ಸ್ವಾರಸ್ಯವಿಲ್ಲ ನಾಟಕವಿಲ್ಲ ನಟನರ್ಟಿಗಳಿಲ್ಲವಿನ್ನು
ಇಲ್ಲವವು ಮುಂದಾಗುವಾಶೆ ಕೂಡಾ ಇಲ್ಲ
ವಿಲ್ಲವೆಂದೀ ಧಾರವಾಡ ಸೀಮೆಯ ಜನರು
ಸೊಲ್ಲಿಸುವ ಕಾಲದಲಿ ಕರ್ನಾಟ ನಾಟಕಂ ಪುಟ್ಟಿದುದು ಕೃತಪುರದೊಳು[೨]

ಈ ಕೃತಪುರದ ಕರ್ನಾಟಕ ನಾಟಕ ಕಂಪನಿಯ ಉತ್ಪಾದಕರೂ ನಾಟಕಗಳನ್ನು ಬರೆದುಕೊಟ್ಟವರೂ ಕಲಿಸಿದವರೂ ಯಾರು ಅಂದರೆ ನಾವು–

ಕೃತಪುರದೊಳಿರ್ದಾಗ ಕನ್ನಡ ನುಡಿಯ ದು
ಸ್ಥಿತಿಯ ನಾಟಕ ನಟನದಿಂ ಕಳೆಯಬೇಕೆಂದು
ಸತತಮಲ್ಲಿಯ ಜನಕೆ ಪೇಳ್ದಿವದರಿಂ ಸ್ಫೂರ್ತಿಗೊಂಡವರ ಬಯಕೆಯಂತೆ
ಅತಿಶಯಾನಂದದಿಂದತ್ಯವಸರವ ಮಾಡಿ

---

೧ ಆರು ಪ್ರಬಂಧಗಳು : ರಾ. ಯ. ಧಾರವಾಡಕರ : ೧೯೭೨ : ಪು. ೪೯.

೨ ಕೃತಪುರವಲ್ಲಿ ಅಂದರೆ ಗದಗಿನಲ್ಲಿ ೧೮೭೭ ರಲ್ಲಿ ಪ್ರಾರಂಭವಾಯಿತು.

ಪ್ರಥಮದೊಳುಷಾಹರಣ[೧] ನಾಟಕವ ರಚಿಸಿ ಪ
ದ್ಧತಿಯಂತೆ ನಟನವಂ ಕಲಿಸಿದೆವು ನಾಟಕವು ರಂಗಸ್ಥಳಕೆ ಬಂದುದು

ಈ ಪ್ರಥಮ ಪ್ರಯೋಗದಿಂದ ಏನಾದುದೆಂದರೆ–

ಬರೆದು ಕಲಿಸಿದರಿಂದೆ ಗುರುಗಳಾದೆವು ನಾವು
ನೆರೆ ಕಲಿತು ನಟಿಸಿದವರೆಲ್ಲರೂ ಶಿಷ್ಯರಾ
ದರು ನಮ್ಮ ನಾಟಕ ಪ್ರಥಮ ಪ್ರಯೋಗವಂ ಕಂಡೆಮ್ಮ ಕನ್ನಡಿಗರು
ಹರುಷದುದ್ಗಾರದಿಂ ಕನ್ನಡದೊಳಿಹ ಸವಿಯ
ನರಿಯಲದಂ ಪಳಿದ ದೋಷಿಗಳು ತಾವೆಂದು
ಸುರಿಸಿದಾನಂದ ಭಾಷ್ಪದಿ ನೆನೆದು ನಮ್ಮೆಟ್ಟಿಗನ್ನಡಂ ಮೃದುವಾದುದು " [೨]

ಹೀಗೆ ಕನ್ನಡದ ದಾಸಯ್ಯರಾಗಿ ಮನೆ ಮನೆಗೆ ಹೋಗಿ ಕನ್ನಡದ ಭಿಕ್ಷೆಯನ್ನು ಬೇಡಿದರು. ಬಡವರು ಕೊಟ್ಟರು; ಅನೇಕ ಸಲ ಬಲ್ಲಿದರು ಇಲ್ಲೆಂದರು. ಆದರೆ, ಕನ್ನಡದ ಕೆಲಸ ಮಾತ್ರ ಅವಿಚ್ಛಿನ್ನವಾಗಿ ಸಾಗಿತು. ತಮ್ಮ 'ಕನ್ನಡ ದಾಸಯ್ಯ' ಎಂಬ ಪದ್ಯದಲ್ಲಿ ಕವಿಗಳು ಹೀಗೆ ಹೇಳಿದ್ದಾರೆ :

ಬೇಡಲು ಕನ್ನಡ ದಾಸಯ್ಯ ಬಂದಿಹ
ನೀಡಿರಮ್ಮಾ ತಡಮಾಡದಲೇ ॥ ಪ ॥

ಹಾಡೊಂದನಾತನು ಹೊಸದಾಗೆ ಮಾಡಿಹ
ಕೂಡಿರಿ ಕೇಳಿರಿ ಹಾಡುವನು ॥ ಅ ಪ ॥

ಕನ್ನಡ ಮಾತಿನ ತಂದೆ ತಾಯಿಗಳಿಂದ
ಚೆನ್ನ ಚೆನ್ನೆಯರೆಲ್ಲ ಹುಟ್ಟಿದಿರಿ
ಕನ್ನಡ ಮಾತಿನ ಜೋಗುಳವನು ಕೇಳಿ
ಕನ್ನಡ ತೊಟ್ಟಿಲೊಳಾಡಿದಿರಿ

ಕನ್ನಡ ದೇಶದೆ ದೊಡ್ಡವರಾದಿರಿ
ಕನ್ನಡವಿದ್ಯೆಯ ಗಳಿಸಿದಿರಿ
ಕನ್ನಡದಿಂದಲೆ ಸಿರಿವಂತರಾದಿರಿ
ಕನ್ನಡ ದೇಶದೆ ಹೆಸರಾದಿರಿ........

ಹೊಟ್ಟೆಗಿಲ್ಲದೆ ಬಂದ ದಾಸಯ್ಯನಿವನಲ್ಲ
ಕೊಟ್ಟುದ ಬಿಟ್ಟು ಹೋಗುವನಲ್ಲವು
ದಿಟ್ಟಿಸಿ ದಿಟ್ಟಿಸಿ ಕೊಡಬಂದ ಕೈಗಳ
ನೊಟ್ಟುಗೂಡಿಸಿ ಪದ ಕಟ್ಟುವನು

೧ ಶಾಂತಕವಿಗಳ ಪ್ರಥಮ ನಾಟಕ 'ಉಷಾಹರಣ'. ಅವರು ಅನಂತರ ಶ್ರೀಯಾಳ ಸತ್ವಪರೀಕ್ಷೆ, ಸುಂದೋಪಸುಂದವಧ, ವತ್ಸಲಾಹರಣ, ಕೀಚಕವಧ, ಸುಧನ್ವವಧ, ಸೀತಾರಣ್ಯ ಪ್ರವೇಶ, ಶಕುಂತಲೋತ್ಪತ್ತಿ, ಚಂದ್ರಾವಳೀ ಚರಿತ್ರ ಮೊದಲಾದ ರಂಗೀತ ಅಂದರೆ ಗದ್ಯ ನಾಟಕಗಳನ್ನು ರಚಿಸಿದರು. (ನೋಡುವುದು– ಪ್ರಭಾತ : ಮಾರ್ಚ : ೧೯೧೯ : ಪು. ೭)

೨ ಅದೇ : ೧೯೧೯ : ಪು. ೭.

ಚಿನ್ನದ ಕಡಗದ ಕೈ ಕಾಸನಿತ್ತಿತು
ರನ್ನದುಂಗುರದ ಕೈ ಇಲ್ಲೆಂದಿತು
ಹೊನ್ನವಂಕಿಯು ಕೈಸುಮ್ಮನೆ ಕುಳಿತಿತು
ಇನ್ನೊಂದು ಬಳೆಗೈ ಹಣ ಕೊಟ್ಟಿತು........

ಕಾಸಿಗಲ್ಲವು ನಿಮ್ಮ ಸೋಸಿಗೆ ಬೆಲೆಯಿದೆ
ಕಾಸಲ್ಲವೇ ಕೋಟಿಯ ಮೂಲವು
ಈ ಶಾಸ್ತ್ರವ ಶಾಂತವಿಠಲನೊಳು ಕಲಿತನು
ಸಾಸಿರವಿದರಂತೆ ತಂದಿಹನು ೧

ಕನ್ನಡಿಗರ ಪರಮ ವೈರಿಯೆಂದರೆ ಅವರ ನಿರಾಶಾಭಾವ; ಹೀನಗಂಡ ಭಾವನೆ. 'ಪೈಶೂನ್ಯ ಪಶುವನಾಶ್ರಯಿಸಲೇನು ಶನಿತಾಗಿತೇನು ನಿನಗೆ' 'ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಂ ಅನಾರ್ಯಜುಷ್ಟಂ ಅಸ್ವರ್ಗ್ಯಂ ಅಕೀರ್ತಿಕರಮ್.' ಕನ್ನಡಿಗರ ಈ ಅಭಿಮಾನಶೂನ್ಯತೆ ನಷ್ಟವಾಗಬೇಕೆಂದು ಅವರು ಹೇಳಿದರು.

ಅವರಿಗೆ ಸಮಗ್ರ ಪ್ರಪಂಚ ಮತ್ತು ಪ್ರಕೃತಿಯಲ್ಲಿಯೂ ಸಹ ಈ ನಿರಾಶಾಭಾವನೆ ಕಂಡು ಬಂದಿತು. ಪ್ರಭಾತ ಸಮಯವನ್ನು ಕನ್ನಡಿಗರ ಸ್ಥಿತಿಗೆ ಹೋಲಿಸಿ ಹೀಗೆ ಹೇಳಿದ್ದಾರೆ :

ಇದು ಪ್ರಭಾತದ ಸಮಯ ! ಇದರ ದರ್ಶನದಿಂದ
ಹೃದಯದೊಳಗಾಲ್ಹಾದವುದಯಿಸಿದರೂ
ವಿಧುಮುಖಿಯೆ, ಕನ್ನಡದ ನಾಡಿನಿರವನು ಕಂಡ
ರೆದೆಯೊಡೆದು ನೀರಾಗುತಿಹುದಕ್ಕಟಾ !

ನೀರಿಳಿದ ಹಳೆಮುತ್ತುಗಳ ಬಣ್ಣಬಂದಿರುವ
ತಾರಕೆಗಳೊಂದೆರಡು ಮೂರು ಮಾತ್ರಂ
ಏ ರಮಣಿ, ಭಾಷಾಭಿಮಾನಿಗಳ ತೆರದಿಂದ
ತೋರುತಿವೆ ಬಹು ವಿರಳ ವಿರಳವಾಗಿ........

ಸಲೆ ದೇಶಹಿತಚಿಂತನದ ಗೊಡವೆಯನೆ ಬಿಟ್ಟು
ಕುಳಿತ ಕನ್ನಡಿಗರುತ್ಸಾಹದಂತೆ
ಬೆಳದಿಂಗಳ ರಸವ ಕುಡಿಕುಡಿದು ಮದವೇರಿ
ಮಲಗಿಕೊಂಡಿವೆ ಚಕೋರಿಗಳು ಕೇಳು

ನೆರೆನಾಡಿನವರೆದ್ದು ದುಡಿಯತೊಡಗಿದರಹೋ
ತೊರೆದು ನಿದ್ರೆಯ ಬೇಗನೇಳಿರೆಂದು
ನೆರೆ ಕನ್ನಡಿಗರನೆಚ್ಚರಿಸುತಿಹ ಪಕ್ಷಿಗಳ
ಸರಸ ಕೋಲಾಹಲವು ಕೇಳು ಸಖಿಯೇ ೨

---

೧ ಕನ್ನಡ ಬಾವುಟ : ೧೯೪೦ : ಪು. ೧೩೦–೧೩೧.
೨ ಪ್ರಭಾತ : ೧೯೧೯ : ಪು. ೨೦.

ಶಾಂತಕವಿಗಳಿಗೆ ಧರ್ಮನಿರ್ಧಮನಿಯಲ್ಲಿಯೂ ಕನ್ನಡದ ಪ್ರಜ್ಞೆ ಹರಿದಾಡುತ್ತಿತ್ತು. ಕನ್ನಡವನ್ನು ಕಂಡ ಅವರ ಕಣ್ಣು ಬೇರೆ ನೋಡಲಿಲ್ಲ; ಕಿವಿ ಬೇರೆ ಕೇಳಲಿಲ್ಲ. ಅವರು ಕಂಡ ಕರ್ನಾಟಕ ಎಂಥ ಸಾಹಸಮಯ ಕರ್ನಾಟಕ ! ಎಂಥ ವಿಶಾಲವಾದ ಕರ್ನಾಟಕ !!

ವಿಶಾಲ ದೇಶವು
ಪ್ರಶಸ್ತ ವಸ್ತುಗ
ಳಸಂಖ್ಯಮಾಗಿಹವವುಗಳೊಳು
ಅಸಾಧ್ಯವರಸುವ
ದಸಾಧ್ಯವಯ್ಯಾ
ಉಸುರ್ವೆ ಯುಕ್ತಿವಿಶೇಷವನು ॥ ೧

ಕರ್ನಾಟಕದೇವಿ ಕದಂಬಾದಿ ಸಂಪೂಜಿತಚರಣೆ; ಗಂಗಾರಾಧಿತ ಪದನಖಸರಣೆ; ರಾಷ್ಟ್ರಕೂಟ ಮಣಿ ಕಂಠಾಭರಣೆ; ಚಾಲುಕ್ಯಾಂಶುಕ ಶೋಭಾವರಣೆ; ಯಾದವಮಣಿ ಕಂಕಣಾಂಶುಸುಂದರಿ; ಬಲ್ಲಾಳರ ಭುಜಭೂಷಣಬಂಧುರೆ; ವಿಜಯನಗರ ಮಂಗಳಮಣಿ ಕಂಧರೆ; ಮೈಸೂರೊಡೆಯರ ಸುಕೀರ್ತಿ ಮಂದಿರೆ; ಮತಸ್ಥಾಪಕ ಸ್ಥಾಪಿತಪ್ರಾಣೆ; ಶಿಲ್ಪಕಲಾಮಂಡಪ ಸುಸ್ಥಾನೆ; ಕವಿಜನ ಕೀರ್ತಿತ ಸುಯಶಸ್ತ್ರಾಣೆ; ಸಾಧು ಸತ್ಕಥಾಭೇರೀಧ್ವಾನೆ.

ಇಂಥ ವೈಭವಯುತವಾದ ಕರ್ನಾಟಕ ಕಾಲರಾಯನ ಕಾಲಿಗೆ ಸಿಕ್ಕು ತತ್ತರಿಸಿತು. ಅದರ ವೈಭವದ ಗೋಪುರ ಕಳಚಿತು :

ಆ ಸೌಂದರ್ಯದ ರಾಜಧಾನಿಯಕಟಾ ಆ ರಾಜನಾ ವೈಭವಂ
ಆ ಸಾಮಂತಸಮೂಹವಾ ಬುಧಸಭಾಸ್ಥಾನಂಗಳಾ ಗ್ರಂಥಗಳ್
ಆ ಸೋಮಾನನೆಯರ್ ಪ್ರಮತ್ತನೃಪಪುತ್ರರ್ ಘೋಷಿಪಾವಂದಿಗಳ್
ಆ ಸರ್ವರ್ ಮರೆಯಾದರಾರವಶದಿಂದಾ ಕಾಲಗೀ ವಂದನಂ ॥ ೨

ಆದುದರಿಂದ ಕನ್ನಡದ ಈ ಹಿರಿಮೆಯನ್ನು ಶಾಂತಕವಿಗಳು ಸಾರಿ, ಕೀರಿ ಹೇಳಿದರು. ಕನ್ನಡದ ಬಗ್ಗೆ ಜ್ವಲಂತವಾದ ಅಭಿಮಾನವನ್ನು ತಾಳಬೇಕೆಂದು ಹುರಿದುಂಬಿಸಿದರು. ಕನ್ನಡದ ಕಣಜ ಬಹು ದೊಡ್ಡದು; ಶ್ರೀಮಂತವಾದುದು. ಇದರ ಪೇಟೆ ವಿಶಾಲವಾದುದು; ಸಂಪದ್ಭರಿತವಾದುದು :

ಕನ್ನಡದ ಪೇಟೆ ! ನೃಪತುಂಗನಿದಕ್ಕೆ ಸೆಟ್ಟಿ !
ಬಿನ್ನಣದಿ ಪಂಪರಿಟ್ಟಿರುವ ಚಿನ್ನದ ಗಟ್ಟಿ !
ರನ್ನ ಮೊದಲಾದವರ ತಿಳಿಮುತ್ತುಗಳ ಮೊಟ್ಟೆ ! ಲಕ್ಷ್ಮೀಶ ಮುಖ್ಯರಿರಿಸಿದ
ರನ್ನಗಳ ಪೇರ್ಬುಟ್ಟಿ ! ತೀವಿಕೊಂಡಿಹದಿದರೊ
ಳೆನ್ನದೆಂದೀ ಪೂಗಳಿಂದ ತುಂಬಿದ ತಟ್ಟೆ
ಯನ್ನಿಡುವೆ ! ನೆಳಲಿರ್ದು ಸುಳಿಗಾಳಿ ಸುಳಿಯುತಿರ್ದಾಯಕಟ್ಟೆನ ಬಯಲೊಳಂ ॥ ೩

ನಿಜವಾದ ಮಾನವನೆಂದರೆ ಯಾರೆಂಬುದರ ಲಕ್ಷಣವನ್ನು ಸುಮಾರು ಸಾವಿರ ವರುಷದ ಹಿಂದೆ

---

೧ ಶ್ರೀ ವಿದ್ಯಾರಣ್ಯ ವಿಜಯ : ೧೯೫೭ : ಪು. ೧೨.

೨ ಅದೇ : ಪು. ೧೮.

೩ ಶ್ರೀಕೃಷ್ಣದಾನಾಮೃತ : ೧೯೨೬ : ಪು. ೨.

ಪಂಪ ಸಾರಿದ. ತ್ಯಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನ ಪೆಂಪುಗಳ್ಗಾಗರವಾದ ಮಾನಿಸರೆ ಮಾನಿಸರ್. ಶಾಂತಕವಿಗಳಿಗೆ ಉಳಿದ ಈ ಯಾವ ಗುಣಗಳೂ ಬೇಕಾಗಿಲ್ಲ. ಅವರಿಗೆ ಕನ್ನಡದ ಅಭಿಮಾನ ಮಾತ್ರವೇ ಮಾನವತೆಯ ಲಕ್ಷಣ :

ಇಹದಿ ಮಾನವನು ಮಾನವತನವ ಬಯಸುವದು
ವಿಹಿತವಾ ಬಯಕೆ ಕೈಗೂಡಿ ಬಹ ಸಾಧನವ
ಬಹುಯತ್ನವಂ ಮಾಡಿ ಮೊದಲು ಶೋಧಿಸಲು ಬೇಕಲ್ಲವೇ ಕನ್ನಡಿಗನೇ
ಇಹುದೊಂದು ಸರ್ವಸಮ್ಮತ ಸುಲಭ ಸಾಧನವು !
ವಹಿಸು ಸ್ವಭಾಷಾಭಿಮಾನವಂ ! ತಾನೆಯದು
ಬಹುದು ನೀವಿರ್ದಲ್ಲಿಗರಸುತಂ ಶ್ರೀ ಶಾಂತವಿಠ್ಠಲನ ಸತ್ಕೃಪೆಯೊಳು ॥ ೧

ಸ್ವಭಾಷಾಭಿಮಾನಶೂನ್ಯರಾಗಿ ಸಂಸ್ಕೃತ ಇಲ್ಲವೆ ಇಂಗ್ಲೀಷಿನ ವೈಭವಕ್ಕೆ ಮಾರುಹೋದ ಪಂಡಿತರನ್ನು ಅವರು ಚಾಟಿಯಿಂದ ಹೊಡೆದು ಎಬ್ಬಿಸಿದರು. ಕನ್ನಡಿಗರಭಿಮಾನ ಎಲ್ಲಿದೆ ? ಮನೆಯ ಮುಂದು ಶ್ರೀಕಾರ ಹಾಕಬೇಕಾದರೆ ಸಂಸ್ಕೃತದಲ್ಲಿ ಹಾಕಬೇಕು. ತುಲಸೀವಿವಾಹದ ಹಬ್ಬವನ್ನು ಆಚರಿಸಬೇಕಾದರೆ ವೃಂದಾವನದ ಮೇಲೆ ಸಂಸ್ಕೃತದಲ್ಲಿಯೇ ಬರೆಯಬೇಕು. ಮದುವೆ ಮುಂಜಿವಿಗಳ ಆಹ್ವಾನಪತ್ರಗಳನ್ನು ಕಳಿಸಬೇಕಾದರೆ, ಸಂಸ್ಕೃತದಲ್ಲಿಯೇ ಕಳಿಸಬೇಕು. ವ್ಯಾಪಾರಸ್ಥರಾಗಿರುವವರು ತಾವು ಇಡುವ ಲೆಕ್ಕ ಪತ್ರಗಳನ್ನು ತಮಗೂ ತಮ್ಮ ಮನೆಯವರಿಗೂ ತಿಳಿಯದ ಅನ್ಯಭಾಷೆಯಲ್ಲಿ ಇಡಬೇಕು. ಅರಿತವರೆಂದಿಗೂ ತಮ್ಮದನ್ನು ಬಿಡರು. ಗಾಂಪರು ಮಾತ್ರ ಹೆರವರ ಒನಪು ಒಯ್ಯಾರಗಳಿಗೆ ಮನಸೋಲುತ್ತಾರೆ. ಈ ಭಾವನೆ ಈ ಕೆಳಗಿನ ಪದ್ಯದಲ್ಲಿ ಮನೋಜ್ಞವಾಗಿ ಅಭಿವ್ಯಕ್ತವಾಗಿದೆ :

ಕನ್ನಡಿಗರೇ ಅಭಿಮಾನವು ಎಲ್ಲಿರುವುದು ?

ಎಲ್ಲಿರುವದಭಿಮಾನ ಕನ್ನಡಿಗರೇ ಪೇಳಿ
ಸುಳ್ಳೆ ಬಡಬಡಿಸುವಿರಿ ಸಭೆಗಳಲ್ಲಿ ॥ ಪ ॥

ಭಳಿರೆ ! ಕಾರ್ತೀಕದಾಮೋದರಾಕ್ಷರಗಳಂ
ತುಳಸೀವಿವಾಹದಲಿ ಬಣ್ಣದಿಂದ
ಸಲೆ ಬಾಲಬೋಧದಿಂ ವೃಂದಾವನದಿ ಬರೆದು
ಕಳೆಯುವಿರಿ ಕನ್ನಡದ ಬಹು ಮಾನವ ॥ ೧ ॥

ಕುಲದೇವತೆಯ ನಾಮವಂ ಬಾಲಬೋಧದಿಂ
ತಲೆಬಾಗಿಲಲಿ ಬರೆವುದನ್ನು ಬಿಟ್ಟು
ಚೆಲುವ ಕನ್ನಡದ ಲಿಪಿಯಿಂದಲೇ ಬರೆದಹೊ
ಉಳಿಸಿರೈ ಕನ್ನಡದ ಮಾನವನ್ನು ॥ ೨ ॥

ಹೆರವರಂ ಕರೆದೊಳಗೆ ಹೊರದೂಡಿ ತಾಯಿಯಂ
ಪರಮೋತ್ಸವವ ಮಾಳ್ಪ ಮೂರ್ಖರಂತೆ
ನೆರೆ ಕನ್ನಡವ ಬಿಟ್ಟು ಪರಿಣಯದ ಪತ್ರವನು
ಬರೆಯುವಿರಿ ನೀವನ್ಯಭಾಷೆಯಲ್ಲಿ ॥ ೩ ॥

---

೧ ಶ್ರೀಕೃಷ್ಣದಾನಾಮೃತ : ೧೯೨೩ : ಪು. ೩-೪.

ತನ್ನವರಿಗರುಹದಾದಾಯ ವೆಚ್ಚಗಳನ್ನು
ಅನ್ಯರಿಗದಂ ಪೇಳ್ವ ದಡ್ಡನಂತೆ
ಕನ್ನಡವನುಳಿದಹೋ ಪಂಡಿತರೆ ಲೆಕ್ಕಗಳ
ನನ್ಯಭಾಷೆಯೊಳೇಕೆ ನೀವಿಡುವಿರಿ ? ॥ ೪ ॥

ಹೆರವರದನಾದರಿಸಿ ತನ್ನದನುಪೇಕ್ಷಿಸುವ
ಮರುಳಗಪ್ಪುದು ಕೇಡು ನೀವೆಲ್ಲರು
ಅರಿತವರು ನಿಮ್ಮವನು ಬಿಡಬೇಡಿರೈ ಸುಖವ
ವರ ಶಾಂತವಿಠ್ಠಲನು ತಾನೆ ಕೊಡುವಂ ॥ ೫ ॥ [೧]

ಸಂಸ್ಕೃತಕ್ಕೆ ಮಾರುವೋದ ಸನಾತನಿಗಳ ಸ್ಥಿತಿ ಹೀಗಾದರೆ, ಆಂಗ್ಲಭಾಷಾ ಪ್ರಕಾಂಡ ಪಂಡಿತರೆಂದು ಅಂದುಕೊಳ್ಳುವವರು ಕನ್ನಡಕ್ಕಾಗಿ ಏನು ಮಾಡಿದರು ? ಜನತೆಯ ಹಣದಿಂದ ಕಲಿತ ವಿದ್ಯೆಯನ್ನು ಜನತೆಗೆ ಯಾವ ರೂಪದಲ್ಲಿ ಮುಟ್ಟಿಸಿದರು ? ಶಿಷ್ಟರು ಮತ್ತು ಜನಸಾಮಾನ್ಯರು ಎಂಬ ಅಂತರವನ್ನು ಹೆಚ್ಚಿಸಲು ಈ ತ್ರಿಶಂಕುಗಳು ಸಹಾಯಕರಾದರಲ್ಲದೆ, ಇವರು ಇಲ್ಲಿಯೂ ಸಲ್ಲಲಿಲ್ಲ, ಅಲ್ಲಿಯೂ ಸಲ್ಲಲಿಲ್ಲ. ಆಂಗ್ಲ ಸಾಹಿತ್ಯದ ಅಮೌಲ್ಯ ಮೌಕ್ತಿಕಗಳನ್ನು ಕನ್ನಡಕ್ಕೆ ತರಲಿಲ್ಲ. 'ಇವಳ ಸೊಬಗನವಳಿಗಿಟ್ಟು' ನೋಡಬಯಸಲಿಲ್ಲ. ಯಾರಿಗೂ ತಿಳಿಯದ ಇಂಗ್ಲಿಷ ಸಭೆಗಳಾದರೆ, ನುಗ್ಗಿದರು; ಕನ್ನಡ ಸಭೆಗಳ ಹತ್ತಿರ ಹಾಯಲಿಲ್ಲ. ಕನ್ನಡದ ಜೀವಕಳೆಯಾಗಿರುವ ಇವರೇ ಹೀಗೆ ನಡೆದರೆ ಗತಿ ಏನು ? ಇಂಥ ಆಂಗ್ಲ ಭಾಷಾ ಪದವೀಧರರಿಗೆ ಶಾಂತಕವಿಗಳು ಹೀಗೆ ಹೇಳಿದರು :

ಎಲ್ಲಿರುವದಭಿಮಾನ ಕನ್ನಡಿಗರೇ ಪೇಳಿ
ಸುಳ್ಳೆ ಬಡಬಡಿಸುವಿರಿ ಸಭೆಗಳಲ್ಲಿ

ಗುರುಪರಿಶ್ರಮದಿನಾಂಗ್ಲೇಯಂ ಭಾಷೆಯ ಕಲಿತು
ಧರಿಸಿ ಪದವಿಗಳನುಪಜೀವಿಸುವಿರೇ
ಹೊರತು ತದ್ಭಾಷೆಯುದ್ಗ್ರಂಥಗಳ ಕನ್ನಡದಿ
ಪರಿವರ್ತನಂಗೊಳಿಸಲಿಲ್ಲವಲ್ಲಾ

ಸರಸಮಾದಚ್ಚಗನ್ನಡದ ವಾಕ್ಯಗಳಲ್ಲಿ
ಬೆರಸಿ ಪರಭಾಷೆಗಳ ಶಬ್ದಂಗಳಂ
ನೆರೆನುಡಿವ ದುಶ್ಚಟವು ನಿಮ್ಮನ್ನು ಬಿಟ್ಟಹೋ
ತೆರಳಲಿಲ್ಲವು ನಮ್ಮ ದೌರ್ಭಾಗ್ಯವು........

ಕನ್ನಡಿಗರು ದೊಡ್ಡವರು ! ಅವರ ಹಣ ಬೇಡಾದ ಕೆಲಸಕ್ಕೆ ಹಳ್ಳ ಹರಿದಂತೆ ಹರಿದು ಹೋದರೂ, ಕನ್ನಡದ ಕೆಲಸಕ್ಕೆ ಒಂದು ಕಾಸು ಸಹ ದೊರಕುವಂತಿಲ್ಲ. ಅವರು ರಾಯರು ! ಅವರಿಗೆ ಹಗಲು, ರಾತ್ರಿ ದುಡಿದು ಸಣ್ಣಾಗುವ ಆಳುಗಳು ಬೇಕು ! ಆದರೆ ಅವನ ಹೊಟ್ಟೆಗೆ ಕೊಡುವುದು ಬೇಡ ! ಅವರು ತಂದೆ ! ಆದರೆ, ಅವರಿಗೆ ಹೊರಗೇ ಉಂಡು, ತಮ್ಮನ್ನು ರಕ್ಷಿಸುವ ಮಕ್ಕಳು ಬೇಕು !! ಅವರು ಮೀಸೆ ಹೊತ್ತ ಗಂಡಸರು !! ಅವರಿಗೆ ರತಿಸುಖಕ್ಕೆ ಹೊರಗೆ ಬಿಕ್ಕೆ ಬೇಡಿ ಹೊಟ್ಟೆ ತುಂಬಿಕೊಳ್ಳುವ ಹೆಂಡತಿ ಬೇಕು !! ಹೆಂಡತಿಯ ಪೋಷಣದ ಜವಾಬುದಾರಿ ಅವರದಲ್ಲ !! ಅವರು

---

೧ ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ : ೧೯೧೮ : ಪು. ೯೫-೯೬.

ಪಂಡಿತರು !! ಆದರೆ, ಅವರಿಗೆ ಅರೆ ಕಾಸೂ ಖರ್ಚಿಲ್ಲದೆ ಓದಲು ಗ್ರಂಥಗಳು ಬೇಕು !!........ ಕತ್ತಲೆ ಮುತ್ತಿದ ಕೋಣೆಯೊಳಗೆ ಸ್ವಲ್ಪ ಹಿಸು ಮಾತನ್ನಾಡುವ ಬೆಲೆವೆಣ್ಣಿಗಾಗಿ, ಆಕಾಶದೆತ್ತರ ಕಟ್ಟಿಸಿದ ಮನೆ ಮಹಲುಗಳನ್ನು ಸ್ವಸಂತೋಷದಿಂದ ಬೇಕಾದರೆ ಕೊಟ್ಟಾರು ! ಆದರೆ, "ಎತ್ತುಂ ಪೊತ್ತರೆ ತಾಳಲಾರದ ಮಹಾಗ್ರಂಥಗಳಂ" ಗೈದ ಕವಿಗಳ ದಾರಿದ್ರ್ಯವನ್ನು ನಿವಾರಿಸಲು ಅವರಲ್ಲಿ ಹಣವಿಲ್ಲ !! "ಬತ್ತಲ್ ದೀಪದ ಬತ್ತಿ ಹೊಯ್ಮಲಕಟಾ ಸ್ನೇಹಾಂಶವೇ ದುರ್ಲಭಂ" !! ಇಲ್ಲಿಯ ಸ್ನೇಹಾಂಶ ದಲ್ಲಿಯ ಶ್ಲೇಷ ಸುಂದರವಾಗಿದೆ. ಬತ್ತಿ ಉರಿಗಿದಾಗ ಸ್ನೇಹಾಂಶ ಎಣ್ಣೆಯು ಒಂದು ಹನಿಯೂ ಇಲ್ಲ; ಬತ್ತಿ ತೀರಿದಾಗ ದುಡ್ಡಿರಲಿ ಬಿಡಲಿ, ಸ್ನೇಹದ ಒಂದೆರಡು ಮಾತೂ ಇಲ್ಲ !!

ಕನ್ನಡಿಗರು !!

ಕರುಳುಂಡೆನ್ನ ವಿಶ್ರಾಂತದೊಳ್ ದುಡಿವ ದೂತರ್ ಬೇಕು, ನಾಂ ರಾಯನು !
ಹೊರಗುಂಡಂಬರವುಟ್ಟು ರಕ್ಷಿಪ ಕುಮಾರಂ ಬೇಕು, ನಾಂ ತಂದೆಯು !!
ತಿರಿದುಂಡುಂ ಗಜಕೇಳಿಗಾಗುವ ಸುಕಾಂತಾ ಬೇಕು, ನಾಂ ಗಂಡಸು !
ಅರೆಕಾಸಿಲ್ಲದೆ ಗ್ರಂಥಗಳ್ ದೊರೆಯಬೇಕೋದಲ್ಕೆ, ನಾಂ ಪ್ರಾಜ್ಞನು !!

ಕತ್ತಲ್ ಮುತ್ತಿದ ಕೋಣೆಯೊಳ್ ಕಿವಿಯೊಳೊಂದೇ ಮಾತದೂ ಮೆಲ್ಲಗೆ
ತೆತ್ತಿರ್ದಂಗನೆಗೀವರ್ಗೆ ಗಗನಮಂ ಮುತ್ತಿರ್ದ ಸೌಧಂಗಳಂ
ಎತ್ತುಂ ಪೊತ್ತರೆ ತಾಳಲಾರದ ಮಹಾಗ್ರಂಥಗಳಂ ಗೈದೆ ನಾಂ
ಬತ್ತಲ್ ದೀಪದ ಬತ್ತಿ ಹೊಯ್ಮಲಕಟಾ ಸ್ನೇಹಾಂಶವೇ ದುರ್ಲಭಂ

ದೊಡ್ಡವರು ! ದೊಡ್ಡವರದೆಲ್ಲವೂ ದೊಡ್ಡದೆಂಬುವ ಮಾತು ಸುಳ್ಳಲ್ಲ ! ಇಲ್ಲಿಯ ಕಟುಕಿ, ವ್ಯಂಗ್ಯ, ಚಾಟಿಯ ಹೊಡೆತ ಸಾಮಾನ್ಯವಾದುದೇ ?

ಶಾಂತಕವಿಗಳು ಹೇಳಿದ ಸ್ವಭಾಷಾಭಿಮಾನವು ಬರಿಯ ಭಾವನಾತ್ಮಕವಾದ, ಅಮೂರ್ತವಾದ ವಿಚಾರವಾಗಿರಲಿಲ್ಲ. ಕನ್ನಡದ ಮುನ್ನಡೆ ಹೇಗಾಗಬೇಕೆಂಬ ಬಗೆಗೆ ಅವರಿಗೆ ನಿಶ್ಚಿತವಾದ ವಿಚಾರ ಗಳಿದ್ದವು. ಕನ್ನಡ ಬೆಳೆಯಬೇಕು; ಕನ್ನಡ ಮುಂದಾಗಬೇಕು ಎಂದು ಬರಿಯ ಕಲ್ಪನೆಯ ಮಾತನ್ನು ಹೇಳಿ ಈ ಬಗೆಗೆ 'ಕಿಂ ಕರ್ತವ್ಯಂ' ಎಂಬ ಉದಾಸೀನ ಭಾವನೆಯನ್ನು ತಾಳಬಾರದು ಎಂದು ಅವರು ಹೇಳಿದರು. ಹನಿ ಕೂಡಿದರೆ ಹಳ್ಳ, ತೆನೆ ಕೂಡಿದರೆ ರಾಶಿ. ಔದಾರ್ಯ ಸ್ವಂತ ಮನೆಯಿಂದ ಪ್ರಾರಂಭವಾಗಬೇಕು. ಅದಕ್ಕಾಗಿ ವ್ಯಾವಹಾರಿಕವಾದ ಕಾರ್ಯಕ್ರಮ ಬೇಕು. ಕನ್ನಡದ ಏಳ್ಗೆ ಯಾಗಬೇಕೆನ್ನುವವರು 'ಕರ್ನಾಟಕ ವೈಭವ' ವನ್ನು ತರಿಸಬೇಕು: 'ಸ್ವದೇಶಾಭಿಮಾನಿ', 'ಕರ್ನಾಟಕ ವೃತ್ತ', 'ಚಂದ್ರೋದಯ' ಗಳಿಗೆ ಚಂದಾದಾರರಾಗಬೇಕು. ಮದುವೆ ಪ್ರಸ್ತಗಳಲ್ಲಿ ಕನ್ನಡಕ್ಕಾಗಿ ದುಡ್ಡನ್ನು ತೆಗೆದಿಡಬೇಕು. ಯಾರೂ ಹುಗ್ಗಿಯ ಗಡಿಗೆಯನ್ನು ಹೊರಗಿಡಬೇಕೆಂದು ಕವಿಗಳು ಹೇಳುವದಿಲ್ಲ. ಆದರೆ ಯಥಾಶಕ್ತಿ ಸಹಾಯ ಮಾಡಬೇಕು. ಈ ಮಾತನ್ನು 'ಕನ್ನಡಿಗರೇ, ಕಿಂ ಕರ್ತವ್ಯಂ' ಎಂಬ ಕವಿತೆಯಲ್ಲಿ ಶಾಂತಕವಿಗಳು ಪ್ರಭಾವಶಾಲಿಯಾಗಿ ಹೇಳಿದ್ದಾರೆ.

ಹೀಗಾಗಿ, ಶಾಂತಕವಿಗಳು ಕನ್ನಡಕ್ಕಾಗಿ ಎತ್ತಿದ ಕೈ ಕಲ್ಪವೃಕ್ಷವಾಯಿತು: ಕನ್ನಡ ಭುವನೇಶ್ವ ರಿಯ ಮೆರವಣಿಗೆಯಲ್ಲಿ ನೂರಾರು ಜನ ಪಾಲ್ಗೊಳ್ಳುವಂತಾಯಿತು. ಪದವೀಧರರೆನ್ನುವವರೂ ಕನ್ನಡದಲ್ಲಿ ಬರೆಯಲು ಪ್ರಾರಂಭಿಸಿದರು. ಕನ್ನಡದ ದಾಸಯ್ಯರಾಗಿ ಶಾಂತಕವಿಗಳು ಮಾಡಿದ ಕೆಲಸ ಅವರ ಜೀವನದ ೬೦-೭೦ ವರುಷಗಳ ವಯಸ್ಸಿನಲ್ಲಿ ಫಲ ಕೊಡಹತ್ತಿತು. ಈ ಮಾತನ್ನು ಶ್ರೀಕೃಷ್ಣದಾಸಾಮೃತದಲ್ಲಿ ಅವರೇ ಆನಂದತುಂದಿಲರಾಗಿ ಹೀಗೆ ಹೇಳಿದರು :

ಉದಯಾಲಕ್ಷಣವಿದ್ಯೆ ! ಯೀಗಳಂಪ್ಪವಡಿಸಿದ
ಪದಪೀಧರರ್ ಕೆಲರು ಭಾಷಾಭಿಮಾನದಿಂ
ಬಿದಿಗಾರರಾಗಿ ಕನ್ನಡಕೇಳ್ಗಿಯಂ ತಂದುಕೊಡಲು ಹವಣಿಸುತಿರುವರು
ಇದು ಪರಮಶುಭಶಕುನ !! ವಿದರಿಂದಲೆನಗೆ ಹಿ
ಗ್ಗೊದಗಿರ್ಪುದೀ ಕಾಲವಂ ನೋಡೆ ಬಯಬಯಸಿ
ಮುದುಕನಾದೆನ್ನ ಸಂಪ್ರಾರ್ಥನೆಗೆ ಪರಮಾತ್ಮನಿಂದೊಲಿದನೆನ್ನ ಭಾಗ್ಯಂ ॥ ೧

ಐಹಿಕವಾಗಿ ಈ ವೃದ್ಧರು ಏನೇ ಸಾಧಿಸದಿದ್ದರೂ, ನಾಡಿಗಾಗಿ ಪಟ್ಟ ಪರಿಶ್ರಮ ಅವರಿಗೆ ಫಲವಿತ್ತಿತು. ಈ ಧನ್ಯತಾಭಾವದಲ್ಲಿಯೇ ಅವರು ಕಣ್ಮುಚ್ಚಿದರು. !

ಮೆರವಣಿಗೆ ಮಿಗಿಲಾಯ್ತು
ಸಾಹಸವು ಹಿರಿದಾಯ್ತು
ಧರೆಯಲುದಿಸಿದ ಕಾರ್ಯ ಸಫಲವಾಯ್ತು !!

ದೇಶಾಭಿಮಾನ :

ಶಾಂತಕವಿಗಳ ಅಭಿಮಾನ ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ರಾಷ್ಟ್ರಕ್ಕಾಗಿಯೂ ಭಾರತಮಾತೆಗಾಗಿಯೂ ಅವರ ಅಂತಃಕರಣ ಅಷ್ಟೇ ಮಿಡಿಯಿತು. ಕರ್ನಾಟಕ–ಭಾರತ ಶಾಂತಕವಿಗಳ ಎರಡು ಕಣ್ಣು ಇದ್ದ ಹಾಗೆ. ಭಾರತದ ಬಗೆಗೆ ಅವರ ಅಭಿಮಾನ ಉಕ್ಕೇರಿ ಬರುತ್ತದೆ. ಪರಮಾತ್ಮ ಅವತಾರ ಮಾಡಿದ ಭೂಮಿ ಭಾರತ. ಉಚ್ಚತತ್ವಾರ್ಥಗಳನಾಚರಿಸಿ ದೇವರಿಚ್ಛಾ ಜ್ಯೋತಿಯನ್ನು ಸಲ್ಲಿಸಿದ ನಾಡು :

ನಮ್ಮದೀ ನಮ್ಮದೀ ಭರತಭೂಮಿ
ಹೆರವರಂ ನಂಬದಲೆ ಜಗದೀಶ್ವರಂ ತಾನೆ
ಧರಿಸಿ ನಾನಾವತಾರಂಗಳನ್ನು
ಕರೆವ ಸರ್ವಸ್ವಮಂ ಧರೆಯ ಸಂರಕ್ಷಿಸುವ
ತೆರವ ಕಲಿಸಿದ ಪೂರ್ವ ಪಾಠಶಾಲೆ

ಉಚ್ಚತತ್ವಾರ್ಥಗಳನಾಚರಿಸಿ ಲೋಕವಂ
ಎಚ್ಚರಿಸಿ ದೇವರಿಚ್ಛಾ ಜ್ಯೋತಿಯಂ
ಅಚ್ಚಳಿಯದೊಲುಗೈದ ಸುಮುಖಿ ಪದವೀಧರರು
ಸ್ವೇಚ್ಛೆಯಿಂ ನೆಲೆಗೈದ ಸುಕ್ಷೇತ್ರವು ೨

ಈಗ ೪೦ ವರ್ಷಗಳ ಹಿಂದೆ ಈ ಪದ್ಯ ಸ್ವಾತಂತ್ರ್ಯ ಸ್ಫೂರ್ತಿಯ ಪ್ರಭಾತಫೇರಿಯ ಹಾಡಾಗಿದ್ದಿತು. ಇಂಥ ಪುಣ್ಯದ ಜೀವಾದ ಭಾರತ ಪರರ ದಾಸ್ಯದ ಸಾಧಾದುದಕ್ಕೆ ಕವಿಗಳು ವ್ಯಥೆಪಟ್ಟರು.

ಇಳಿಯುತಿದೆ ಪಾತಾಳಖಾತಕೆ
ಬೆಳೆದ ಭಾರತದೇಶವು

೧ ಶ್ರೀಕೃಷ್ಣದಾನಾಮೃತ : ೧೯೨೬ : ಪು. ೩.
೨ ಶ್ರೀವಿದ್ಯಾರಣ್ಯ ವಿಜಯ : ೧೯೩೭ : ಪು. ೧೧.

ಕಳಚುತಿವೆ ಧರ್ಮಾಲಯದ ಹೊಂ
ಗಳಸ, ಛತ್ರಿ, ಧ್ವಜಗಳು

ಉದ್ಧರಿಸುವ ಮಹಾತ್ಮರಿಲ್ಲವೆ
ಇದ್ದರೇಕೆ ವಿಲಂಬವೈ
ಎದ್ದು ಬನ್ನಿರಿ, ಭೂತದಯೆ ಬಲು
ಕದ್ದರದನೇ ತೋರಿರೈ ೧

ಭಾರತದ ಈ ಹೀನಾಯ ದುಸ್ಥಿತಿಗೆ ಕಾರಣವೇನು ? ಇದರ ಕಾರಣ ಭಾರತದ ಜನತೆ ಸ್ವಂತಿಕೆಯನ್ನು ಮರೆತು ಪರಕೀಯರ ಧೋರಣೆಗೆ ಮಾರುಹೋದುದೇ ಆಗಿದೆ. [illegible] ಕಮತನಾದುದಾಗಿ ಹಾಳಾಗಿ ಒಂದು ಪಟ್ಟಣ ಬೆಳೆಯಿತು. ರೈತ ತನ್ನ ನೈಸರ್ಗಿಕ ಜೀವನವನ್ನು ಮರೆತನು. ಇಂಥ ಭಾರತೀಯ ರೈತನ ಸ್ಥಿತಿ ಏನಾಗಿದೆ ?

ಮುರಿದ ಕಮತವು ಹಿರಿಯರ ಹೊಲ ರೈ
ತರಿಗೆ ಕೊಟ್ಟ ಕಷ್ಟವ ಪಡುವ
ನೆರೆ ದುಡಿವಾಳ್ಗಳ ತೊರೆದು ದುಡಿಯುವ
ಪರವರಾಳು ಹೀನಾಗಿರುವ

ಹಿರಿಯೆತ್ತುಗಳೂ ಹಿರಿಗೋಣಗಳೂ
ಸುರುಕುವ ಹರೆಯದ ಹೋರಿಗಳೂ
ಕರೆಯುವಾವುಗಳ್ ಕರುಮರಿಯಿಲ್ಲದ
ಬರಿ ಹಕ್ಕೆಯು ರೋಗಗಟ್ಟುವದು……..

ಬರಿದೈ ಬಳತಂ ಬರಿದೈ ಗಳಿಗೆಯು
ಬರಿದೈ ಸರುವಿಗಿಂತಕೆಲದ
ಬರಿದೈ ಹಗೆಗಳ್ ಬರಿದೈ ಚೀಲಗಳ್
ಬರಿದೇ ಬರಿದೈ ಮನೆಯೆಲ್ಲ

ಮುರಿದ ಕಮತವು ಮರಳಿಯುಟ್ಟು ನಲು
ನೆರೆ [illegible] ಕೃಷಿಕರ್ಮವನು
ಹಿರಿಹಿರಿದೆಸೆಗಳ ಹಿರಿದು ಪ್ರದರ್ಶಿಸಿ
ದೊರಕಿಸಿಕೊಳ್ಳಿ [illegible] ೨

[illegible] ಮೇಲಕ, [illegible] ಮರೆತ [illegible] ಭಾರತ ತನ್ನ [illegible] ತನ್ನ ಕಾಲ [illegible] ಭಾರತ [illegible] ' [illegible] ? ' ಎಂದು ಕವಿಯೊಬ್ಬ ಹೀಗೆ ಹೇಳಿದ್ದಾರೆ :

---

೧ ಶ್ರೀವಿದ್ಯಾರಣ್ಯ ವಿಜಯ : ೧೯೫೭ : ಪು. ೨೭.
೨ ಪ್ರಭಾತ : ೧೯೨೦ : ಪು. ೨೭–೨೮.

ಪರರ ಕಂಡು ಕುಣಿದರೆ ನೀಂ ಮೂರ್ಖನು
ಅರಿ ನಿನ್ನಯ ಸಂಪದಮಂ ನೀನು
ಅರಿಯುದರಂತೆಯೆ ಸಿರಿಯಂ ನಿನ್ನವ
ರಿರವಂ ದೇಶದ ಗತಿಯನ್ನು

ಶಿಲೆಗಾಜಿನ ಬಟ್ಟಲಕೊಳವಿಗಳಾ
ಪೊಳಪಷ್ಟೇ ಕಣ್ಣಿಗೆ ಚಂದಂ
ರಬಳರುವ ಬೆಳಗು ತೊಳಗುವುದಿಲ್ಲವೆ
ಚಲುವ ಧಾತುಗಳ ವಸ್ತುಗಳು

ಕಾಷ್ಠಾಸನದ ಪರಿಷ್ಕೃತಿಯೊಳದು
ಇಷ್ಟು ಶೂಕದಿಂ ಕುಳಿತಿರುವೆ
ಕಷ್ಟಪಟ್ಟು ಮೈಗಿಷ್ಟವಲ್ಲವೇ
ಶ್ರೇಷ್ಠ ತೂಲಿಕಾಸನಗಳಿಲ್ಲೆ

ಪರತಂತ್ರದೊಳಿರುವಗೆ ಮಹೇಂದ್ರನ
ಪುರವೂ ನರಕವು ಶಾಂತೇಶ
ನೆರೆ ಸ್ವತಂತ್ರತೆಯೊಳಿರುವ ನರಕವೇ
ಸುರೇಂದ್ರಮಂದಿರದಧಿವಾಸಂ ೧

ಕಾವ್ಯಪ್ರಜ್ಞೆ :

ಶಾಂತಕವಿಗಳಿಗೆ ಬರಿಯ ಕನ್ನಡ ಮತ್ತು ಭಾರತ ಪ್ರಜ್ಞೆ ಮಾತ್ರವಿತ್ತೆಂದಲ್ಲ. ಕಾವ್ಯವೆಂದರೇನು ? ಕವಿಯ ಸಾಮ್ರಾಜ್ಯ ಎಂಥದು ? ಕವಿಯ ಸ್ಥಾನವೇನು ? ಎಂದು ಮೊದಲಾದ ಕಾವ್ಯ ವಿಷಯಕವಾದ ವಿಚಾರಗಳ ಬಗೆಗೆಯೂ ಅವರ ಅಭಿಪ್ರಾಯಗಳು ಎಷ್ಟು ನವೀನವಾಗಿದ್ದುವೆಂಬುದನ್ನು ಅವರ ಅನೇಕ ಕವನಗಳಲ್ಲಿ ಕಾಣುತ್ತೇವೆ. ಕಾವ್ಯಂ ಯಶಸೇ, ಅರ್ಥಕೃತೇ, ವ್ಯವಹಾರವಿದೇ, ಕಾಂತಾಸಮ್ಮಿತತಯಾ ಉಪದೇಶಯುಜೇ ಎಂದು ನಮ್ಮ ಅಲಂಕಾರಿಕರೇನೋ ಹೇಳಿದರು. ಆದರೆ ಈ ಬಗೆಗೆ ಶಾಂತಕವಿಗಳ ಅಭಿಪ್ರಾಯವು ನವೀನವಾಗಿದೆ. ಅವರ ಮೇರೆಗೆ ಕವಿಗೆ ಹೃದಯರಂಜನೆ, ಮನೋರಂಜನೆ ಮತ್ತು ಜನರಂಜನೆಯೆಂಬ ಮೂವರು ವನಿತೆಯರು ಯಾವಾಗಲೂ ಅನುಕೂಲೆಯರು. ಒಬ್ಬಳು ಪದದೆ, ಇನ್ನೊಬ್ಬಳು ಅರ್ಥದೆ, ಮಗದೊಬ್ಬಳು ಸಾಹಿತ್ಯಪ್ರದೆ. ಕಾವ್ಯಸೃಷ್ಟಿ ಕವಿಯ ಆತ್ಮತುಷ್ಟಿಗಾಗಿ; ಜನತಾಹೃದಯ ಪುಷ್ಟಿಗಾಗಿ. ಈ ಬಗೆಗೆ ಶಾಂತಕವಿಗಳು 'ಕವಿಯ ಪ್ರಪಂಚ' ಎಂಬ ಕವಿತೆಯಲ್ಲಿ ಹೀಗೆ ಹೇಳಿದ್ದಾರೆ :

ಕವಿ : ನಾನು ಯಾರ ಅನುಮತಿಯಿಂದ ವರ್ತಿಸುವೆನೆಂದರೆ–

ಎನಗೆ ಹೃದಯರಂಜನೆಯು ಮನೋರಂಜನೆಯು
ಜನರಂಜನೆಯೆಂಬ ವನಿತೆಯರಾವಗಮನುಕೂಲೆಯರವ
ರನುಮತದಿಂ ವ್ಯವಹರಿಸುವೆನು

ಇವರಿಂದ ಫಲವೇನೆಂದರೆ–

ಓರ್ವಳ್ ಪದದೆಯು
ದೋರ್ವಳ್ ಅರ್ಥದೆಯು

---

೧ ಪ್ರಭಾತ . ೧೯೧೮ : ಪು. ೨೫–೨೮.

ದೋರ್ವಳ್ ಸಾಹಿತ್ಯಪ್ರದೆಯು
ಓರ್ವಳಂಣಿಸುವಳ
ದೋರ್ವಳ್ ನಗಿಸುವ
ಳೋರ್ವಳೆನ್ನ ಕೊಂಡಾಡುವಳು

ಆದಕಾರಣ, ರಸಿಕರೇ ! ನೀವು ನನಗೆ ಏನು ಆಶೀರ್ವಾದ ಮಾಡಬೇಕೆಂದರೆ–

ನೆರೆ ಸವಿಯೂ ಸ
ಕ್ಕರಿಯೂ ಕೂಡಿಹ
ತೆರದೊಳಿವರ ಸಂಗಡವಾನು
ಇರುವೊಲಾವಗಂ
ಹರಿಸಿರಿ ನನ್ನಂ
ಗುರುವಿನಯದಿ ಕೈಮುಗಿಯುವೆನು

ಇವರೂ ನಾನೂ ಕೂಡಿ ದೇವರಲ್ಲಿ ಏನು ಪ್ರಾರ್ಥಿಸುತ್ತೇವಂದರೆ–

ಪರಾತ್ಪರ ! ಶ್ರೀ
ಪರಮೇಶ್ವರ ! ತವ
ಕರುಣಾಲೇಶದಿ ಕನ್ನಡದ
ಧರಣಿಯೊಳೆಲ್ಲಿಯು
ಮಿರಲಿ ಸ್ವಸ್ಥತೆ
ಹರಡಲಿ ಸುಖಸಂಪತ್ತಿಗಳು ೧

ಕವಿ ಅದ್ಭುತ ವ್ಯಕ್ತಿ. ಅಪರೇ ಕಾವ್ಯಸಂಸಾರೇ ಕವಿರೇಕಃ ಪ್ರಜಾಪತಿಃ ಎಂದು ಹೇಳುವದುಂಟು. ರವಿ ಕಾಣದುದನ್ನು ಕವಿ ಕಾಣುವನೆಂದೂ ಲೋಕೋಕ್ತಿ. ಆದರೆ, ಕವಿಯು ರವಿಗಿಂತ ಹೆಚ್ಚಿನವ. ಬ್ರಹ್ಮನಕಿಂತ ಶ್ರೇಷ್ಠ. ವ್ಯಾವಹಾರಿಕ ಜಗತ್ತಿನಲ್ಲಿ ಸಾಧ್ಯವಿದ್ದುದನ್ನು ಮಾತ್ರ ವಿರಂಚಿ ಸೃಷ್ಟಿಸಬಲ್ಲ; ಕವಿ ವ್ಯವಹಾರದಲ್ಲಿರದ್ದನ್ನೂ ಸೃಷ್ಟಿಸಬಲ್ಲ. ಅವ ಅಘಟಿತಘಟನಾ ನೂತನಬ್ರಹ್ಮ.

ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿ ಸಂತತಿ ವಾಮನಕ್ರಮಂ
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರನಂ ನರನೊತ್ತಿ ಗಂಟಲಂ
ಮೆಟ್ಟುಗೆ ಮೆಟ್ಟದಿರ್ಕೆ ಕವಿಗಳ್ ಕೃತಿಬಂಧದೊಳೊತ್ತಿ ಕಟ್ಟಿದರ್
ಮುಟ್ಟಿದರೊತ್ತಿ ಮೆಟ್ಟಿದರೇನಳವಗ್ಗಳವೊ ಕವೀಂದ್ರರಾ

ಅದೂ ಅಲ್ಲದೆ, ಬ್ರಹ್ಮಸೃಷ್ಟಿ ಪರಿಮಿತವಾದದ್ದು. ಆ ಆ ವ್ಯಕ್ತಿಗಳು ಅವರವರ ಆಯುಃ ಪರಿಮಿತಿಯ ವರೆಗೆ ಮಾತ್ರ ಇರಬಲ್ಲರು; ಕವಿಸೃಷ್ಟರು ಚಿರಂತನರು. ಅವರಿಗೆ ಮರಣದ ಬಾಧೆ ಇಲ್ಲ. ಎಂದೋ ಸತ್ತ ಹ್ಯಾಮ್ಲೆಟ್ ಇನ್ನೂ ಜನಮನದಲ್ಲಿ ನಿತ್ಯನೂತನವಾಗಿದ್ದಾನೆ. ಬಲಿಷ್ಠವಾದ ಸಿಂಹಗಳನ್ನು ಹಿಡಿದು ಪಂಜರದಲ್ಲಿ ಹಾಕಿರಬಹುದು: ಆದರೆ, ಕವಿಯನ್ನು ಕಟ್ಟಿ ಹಾಕಿದವನನ್ನು ಇನ್ನೂ ಯಾರೂ ಕೇಳಿಲ್ಲ. ಯಾವ ಕಲ್ಲಿನ ಗೋಡೆಗಳೂ ಅವನಿಗೆ ಸೆರೆಮನೆಯನ್ನು

೧ ಪ್ರಭಾತ : ೧೯೧೯ : ಪು. ೨೪–೨೭.

ಕಟ್ಟಲಾರವು. ಪಂಜರದಲ್ಲಿಯ ಸಿಂಹವನ್ನು ಕಂಡು ಕರಗುವ ಅವನ ಮೃದುಹೃದಯ, ಸತ್ಯಕ್ಕಾಗಿ ಉಕ್ಕಿನಷ್ಟು ಬಲಿಷ್ಠ. ಅವನು ಸ್ವಯಂಲೀಲಾರತ. ಹಿಂಡಗಲಿದ ಗಜ. ಕ್ರಾಂತಿಕಾರಿ. ಮಾನವ್ಯದ ಅನಭಿಷಿಕ್ತ ದೊರೆ. ಅವನ ವಾಣಿ ನಿಯತಿಕೃತನಿಯಮರಹಿತ, ಹ್ಲಾದೈಕಮಯೀ, ಅನನ್ಯ ಪರತಂತ್ರ. ಈ ಅಭಿಪ್ರಾಯಗಳನ್ನು ಶಾಂತಕವಿಗಳು ತಮ್ಮ 'ಕವಿ ಸೃಷ್ಟಿ' ಎಂಬ ಕವನದಲ್ಲಿ ಸುಂದರವಾಗಿ ಹೇಳಿದ್ದಾರೆ :

ಶ್ರವಣಮಂಗಳಂ ಕವಿಯಭಿಧಾನಂ
ಭುವನಮಂಗಳಂ ಕಾವ್ಯವೆಲ್ಲೆ
ಕವಿಯೀ ಸೃಷ್ಟಿಯ ಭವನ ರಹಸ್ಯವ
ಕವನದಿಂದ ವ್ಯಾಖ್ಯಾನಿಸುವಂ

ವಿರಂಚಿಕರ್ತೃವು ಮೆರೆವ ಸೃಷ್ಟಿಗಾ
ದರೂ ನಿರಂಕುಶನಲ್ಲನವಂ
ನಿರಂಕುಶಂ ಕವಿ ನೆರೆ ನಿರ್ಮಿಸುವಂ
ಪರಮ ಕಲ್ಪನಾ ಸೃಷ್ಟಿಯನು........

ವಿರಂಚಿಯಾಯುಃಪರಿಮಿತಿಯೊಡನೆ
ನರರಂ ಸೃಷ್ಟಿಸಿದನೆ ಹೊರತು
ನೆರೆಯಮರತ್ವವ ಕರುಣಿಸಲಿಲ್ಲೊ
ಬ್ಬರಿಗಾದರೂ ಮತಿಕೃಪಣನವಂ........

ರವಿ ಕಾಣದುದಂ ಕವಿ ಕಾಣುವನೆ
ನ್ನುವ ಗಾದೆಯು ಬಲು ಮೆತ್ತಗಿದೆ
ಅವಗಲ್ಲದೆ ಮಿಕ್ಕವರಿಗಲಭ್ಯಂ
ಪವಡಿಸಿ ಸುಖಮಂ ಪಡೆಯಲದು

ಮರೆಮೋಸದಿ ಪಂಜರದೊಳು ಸಿಲುಕಿದ
ಹರಿಯ ಕಂಡು ಕರಗುವ ಕವಿಯು
ಪರರಾಶ್ರಯವಂ ಸ್ಮರಿಸನು ಸ್ವಪ್ನದಿ
ಪರಮಸ್ವೇಚ್ಛಾಚಾರಿಯವಂ

ಹರಿದಾಡುವ ಮದಕರಿಘಟಿಯಂ ಕ
ಟ್ಟಿರುವರೆಲ್ಲ ಭೂನಾಯಕರು
ನೆರೆ ಕವಿಯಂ ಕಟ್ಟಿರುವರಸರು ಕೇಳ್
ಧರಾವಲಯದೊಳೆ ಬಹುವಿರಳಂ ೧

ಇಂಗ್ಲಿಷ್ ಸಾಹಿತ್ಯದಲ್ಲಿ ಮಿಲ್ಟನ್ ಮಹಾಕವಿಗೆ ಇದ್ದ ಹಾಗೆ ಶಾಂತಕವಿಗಳಿಗೂ ತಾವು ಕವಿಯೆಂಬ ಆತ್ಮವಿಶ್ವಾಸವಿತ್ತು. ಕವಿಯಾಗಿಯೇ ಇರಬೇಕೆಂದೂ ಅವರು ಆಶೆಪಟ್ಟರು. ತಮ್ಮದೊಂದು ಕವಿತೆಯಲ್ಲಿ ಅವರು ಹೀಗೆ ಹೇಳಿದ್ದಾರೆ :

---

೧ ಪ್ರಭಾತ : ೧೯೧೫ : ಪು. ೫–೭.

ಎನ್ನ ಕೋಣೆಯ ಸುಖವು ಸಾಕೆನಗೆ ಜಗದೀಶ
ಇನ್ನಾವುದನ್ನು ನಾನೊಲ್ಲೆನಯ್ಯ

ಬೇಂಗಾಗವದ ಗಡ್ಡಿ, ಚೆಲುವ ಲೆಕ್ಕಣಿಕೆಗಳು ಇವಿಷ್ಟು ತಮಗಿದ್ದರೆ ಸಾಕೆಂದು ಹೇಳಿದ್ದಾರೆ.

ಶಾಂತಕವಿಗಳ ಕೃತಿಗಳ ಕಾವ್ಯ ಗುಣಗಳನ್ನು ಮೇಲಿನ ಅನೇಕ ಉದಾಹರಣೆಗಳಲ್ಲಿ ಈಗಾಗಲೇ ಕಂಡುಕೊಂಡಿದ್ದೇವೆ. ಅವರ ಅದ್ಭುತವಾದ ಊಹಾಚಮತ್ಕೃತಿಯನ್ನೂ ನಾವೀನ್ಯವನ್ನೂ ಗುರುತಿಸಿದ್ದೇವೆ. ಹಿರಿಯ ಇಲ್ಲವೆ ಮಹಾಕವಿ ಅನ್ನಿಸಿಕೊಳ್ಳಬೇಕಾದರೆ, ಆ ಕವಿಯ ಕೃತಿ ಆಕಸ್ಮಿಕವಾಗಿ ಕಾವ್ಯಗುಣವುಳ್ಳದ್ದಾಗಿದ್ದರೆ ಆಗದು; ತಾನು ರಚಿಸಿದ ಕೃತಿ ಮಹತ್ವಪೂರ್ಣವಾದುದೆಂಬ ಆತ್ಮಪ್ರಜ್ಞೆಯು ಕವಿಯಲ್ಲಿಯೂ ಇರಬೇಕು. ಅದರಂತೆಯೇ ಸುಧಾರಕನೂ ಕೂಡ ಆಕಸ್ಮಿಕವಾಗಿ ಒಂದು ಹೊಸ ಪ್ರಯೋಗವನ್ನು ಮಾಡಿದರೆ ಸಾಲದು; ತಾನು ಮಾಡುವ ಪ್ರಯೋಗ ಹೊಸದೆಂಬ ಕಲ್ಪನೆ ಅವನಲ್ಲಿರಬೇಕು. ಇದನ್ನು ಗಮನಿಸಿದರೆ, ತಾವು ರಚಿಸುತ್ತಿರುವ ಕೃತಿಗಳು ಛಂದ, ಬಂಧ, ವಸ್ತು, ವಿನ್ಯಾಸ ಮತ್ತು ಊಹಾಚಮತ್ಕೃತಿಗಳ ಮೂಲಕ ಹೊಸವಾಗಿವೆಯೆಂಬ ಕಲ್ಪನೆ ಶಾಂತಕವಿಗಳಿಗಿದ್ದಿತು. ೧೯೧೮ರಷ್ಟರಲ್ಲಿಯೇ ತಮ್ಮ ಈ ಕವಿತೆಗಳನ್ನು 'ಹೊಸ ಕವಿತೆಗಳು' ಎಂಬ ಅಭಿಧಾನದಿಂದ ಶಾಂತಕವಿಗಳು ಪ್ರಬುದ್ಧ ಕರ್ನಾಟಕದಲ್ಲಿ ಪ್ರಸಿದ್ಧಿಸಿದರು. ಇದರಿಂದ ತಮ್ಮ ಕವಿತೆಗಳು ಹಳೆಯ ಜಾಡನ್ನು ಬಿಟ್ಟು, ಹೊಸ ಮಾರ್ಗದಲ್ಲಿವೆಯೆಂಬ ಕಲ್ಪನೆ ಶಾಂತಕವಿಗಳಿಗಿತ್ತೆಂಬುದು ಸ್ಪಷ್ಟವಾಗುತ್ತದೆ.

ಶಾಂತಕವಿಗಳ ಜೀವನ :

ನೋಡಲಿಕ್ಕೆ ಕೆಂಪಾದ ಗಿಡ್ಡ ಆಳು. ತಲೆಗೆ ಒಂದು ಜರದ ರುಮಾಲು. ಕೈಯಲ್ಲಿ ಬಂಗಾರದ ಖಡೆ. ಶೀಘ್ರಕೋಪ. ಜೀವನದ ನಿರಾಶೆಗಳಿಂದ ಜರ್ಝರಿತವಾಗಿದ್ದರೂ ತಾವು ಕವಿಯೆಂಬ ಆತ್ಮಪ್ರತ್ಯಯವುಳ್ಳ ಮುಖತೇಜಸ್ಸು– ಇದು ಶಾಂತಕವಿಗಳ ವ್ಯಕ್ತಿತ್ವ. ಕವಿ, ಅಲಂಕಾರ ಶಾಸ್ತ್ರಜ್ಞ, ನಾಟಕಕಾರ, ನಟ, ಸಂಗೀತಪ್ರಿಯ, ವಾಗ್ಮಿ, ಸಾತೇನಹಳ್ಳಿಯ ಶಾಂತೇಶನ ಪರಮಭಕ್ತ– ಇದು ಅವರ ಸ್ವಭಾವ, ಸಿದ್ಧಿ.

ಶಾಂತಕವಿಗಳ ಪೂರ್ಣ ಹೆಸರು ಬಾಳಾಚಾರ್ಯ ಗೋಪಾಳಾಚಾರ್ಯ ಸಕ್ಕರಿ. ಮನೆತನ ಪಂಡಿತ ಪರಂಪರೆಯದು. ಈ ಮನೆತನದ ಅಡ್ಡ ಹೆಸರು ಮೂಲತಃ ಸಕ್ಕರಿ ಎಂದಲ್ಲ. ಈ ಮನೆತನದ ಸುಪ್ರಸಿದ್ಧ ಪಂಡಿತರಾದ ಶ್ರೀನಿವಾಸಾಚಾರ್ಯ ಎಂಬವರು 'ಶರ್ಕರಾ' ಎಂಬ ಸಂಸ್ಕೃತ ಟೀಕೆಯನ್ನು ರಚಿಸಿದ್ದರಿಂದ ಈ ಮನೆತನಕ್ಕೆ 'ಸಕ್ಕರಿ' ಎಂಬ ಹೆಸರಾಯಿತು. ಶ್ರೀಯುತರು ತಮ್ಮ ಮನೆಯ ದೈವತವಾದ ಶಾಂತೇಶನ ಹೆಸರಿನಲ್ಲಿ ಕಾವ್ಯಗಳನ್ನು ರಚಿಸಿದರು.

ಸನ್ ೧೮೫೭ ಭಾರತ ಸ್ವಾತಂತ್ರ್ಯ ಯುದ್ಧದ ಮೊದಲನೆಯ ಕಿಡಿ ಹಾರಿದ ಕಾಲ. ಶಾಂತಕವಿಗಳು ಹುಟ್ಟಿದ್ದು ಸನ್ ೧೮೫೬ ಜನೆವರಿ ೧೫ನೆಯ ತಾರೀಖಿನಂದು. ಈ ಕಾಲದಲ್ಲಿ ಭಾರತೀಯರ ಆಶೋತ್ತರಗಳಾದರೂ ಏನಿದ್ದವು? ಸಾಧ್ಯವಾದರೆ, ರೆವಿನ್ಯೂ ಇಲಾಖೆಯಲ್ಲಿ ಒಂದು ಕಾರಕೂನಿಕೆ, ದೈವ ತೆರೆದರೆ ಮಾಮಲೇದಾರಿಕೆ. ಕರ್ನಾಟಕದ ಸ್ಥಿತಿಯನ್ನಂತೂ ಹೇಳುವಂತಿಲ್ಲ. ಸ್ವ–ಭಾಷೆ, ಸ್ವ–ಪ್ರಾಂತ, ಸ್ವ–ಸಂಸ್ಕೃತಿಯ ಸ್ವ–ತ್ವದ ಕಲ್ಪನೆಯೇ ಜನರಲ್ಲಿರಲಿಲ್ಲ. ಉತ್ತರ ಕರ್ನಾಟಕವಂತೂ ಮರಾಠರು ಮತ್ತು ಹೈದರ ಅಲಿಯ ದಾಳಿಗಳಿಗೆ ಕ್ಷಣ ಕ್ಷಣಕ್ಕೆ ತುತ್ತಾಗಿ, ಮದ್ದಳೆಯಂತೆ ಎರಡೂ ಕಡೆಯಿಂದಲೂ ಹೊಡೆತ ತಿನ್ನುತ್ತಿತ್ತು. ಅಭಿಮಾನಶೂನ್ಯತೆ, ಅಲ್ಪತೃಪ್ತಿ, ಮೇಲಧಿಕಾರಿಗಳ ಲಾಂಗೂಲಚಾಲನ– ಜನತೆಯ ಜೀವನದ ಉಸಿರಾಗಿದ್ದವು. ಬಾಲಕನಾಗಿ ಇವನ್ನೆಲ್ಲ ಗಮನಿಸಿದ

'ಬಾಳ'ನು ಕವಿಯಾಗಿ ಇವೆಲ್ಲವುಗಳನ್ನು ಪ್ರತಿಭಟಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಶಾಂತಕವಿಗಳು ಸ್ವ-ತ್ವಪ್ರಜ್ಞೆಯನ್ನು ವಿದ್ಯಾರಣ್ಯವಿಜಯ ಮೊದಲಾದ ಕೀರ್ತನೆಗಳಿಂದ ಪ್ರಸ್ಥಾಪಿಸಿದರು. ದೇಶಾಭಿಮಾನವನ್ನು ಅನೇಕ ಬಿಡಿ ಕವನಗಳು ಮತ್ತು 'ಶ್ರೀಕೃಷ್ಣದಾನಾಮೃತ' ಮೊದಲಾದ ನಾಟಕಗಳಿಂದ ಸಚೇತನಗೊಳಿಸಿದರು.

ಶಾಂತಕವಿಗಳು ತಮ್ಮ ವಯಸ್ಸಿನ ೧೬ ನೆಯ ವರುಷದಲ್ಲಿ, ಅಂದರೆ ಸನ್ ೧೮೭೨ ನೆಯ ಇಸವಿಯಲ್ಲಿ, ರಾಣೆಬೆನ್ನೂರ ಕನ್ನಡ ಶಾಲೆಯಲ್ಲಿ ೧೨ ರೂಪಾಯಿ ಸಂಬಳದ ಮೇಲೆ ಶಾಲಾ ಮಾಸ್ತರರಾಗಿ ನಿಯಮಿಸಲ್ಪಟ್ಟರು. ಮುಂದೆ ಹಾವೇರಿ, ಧಾರವಾಡ, ಬೆಳಗಾವ, ಗೋವನಕೊಪ್ಪ, ಗದಗು, ಹೊಂಬಳ, ಶಿಗ್ಗಾವಿ, ಬಂಕಾಪುರ, ಪುನಃ ಧಾರವಾಡ, ಅಗಡಿ, ಕೋಳಿವಾಡ ಹುಬ್ಬಳ್ಳಿ ಮತ್ತೆ ಧಾರವಾಡ- ಹೀಗೆ ೪೦ ವರುಷ ಕಾಲ ಚಕ್ರಾರಪಂಕ್ತಿಯ ಹಾಗೆ ಸೇವಾವರ್ತುಲದಲ್ಲಿ ತಿರುಗಿ ತಿರುಗಿ ಕೊನೆಗೆ ೧-೬-೧೯೧೨ ನೆಯ ತಾರೀಖಿನ ದಿವಸ, ೧೨ ರೂಪಾಯಿಯಿಂದ ಪ್ರಾರಂಭ ಮಾಡಿದ ಸೇವಾಜೀವನದ ಕೊನೆಯ ಹಂತದಲ್ಲಿ ವೈಭವಪೂರ್ಣವಾದ ೨೨ ರೂಪಾಯಿಗಿಂತ ಹೆಚ್ಚಿನ ಪಗಾರವನ್ನು ಕಾಣದೆ, ೧೧ ರೂಪಾಯಿ ಪೆನ್‌ಶನ್ ಪಡೆದು ನಿವೃತ್ತರಾದರು. ಶಾಂತಕವಿಗಳಿಗಿಂತಲೂ ಕಡಿಮೆ ಸಿದ್ಧಿಯಿದ್ದ ಅನೇಕ ಜನ ಕನ್ನಡ ಶಾಲಾಮಾಸ್ತರರು ಹೆಚ್ಚಿನ ಪಗಾರದ ಸ್ಥಳಕ್ಕೆ ಹೋಗಿದ್ದಾಗ, ಶಾಂತಕವಿಗಳು ಮಾತ್ರ ಇಪ್ಪತ್ತೆರಡೇ ರೂಪಾಯಿ ಕೊನೆಯ ಪಗಾರವನ್ನು ಪಡೆಯಲು ಕಾರಣ ಬಹುಶಃ ಅವರ ದೇಶಾಭಿಮಾನ, ಮಾತೃಭಾಷಾಭಿಮಾನ, ನಿಸ್ಪೃಹತೆ, ನಿರ್ದಾಕ್ಷಿಣ್ಯಗಳೇ ಕಾರಣವಿದ್ದ ಹಾಗೆ ಕಾಣುತ್ತದೆ. ಅಷ್ಟೇ ಅಲ್ಲ; ಇಪ್ಪ 'ಎತ್ತಂ ಪೊತ್ತರೆ ತಾಳಲಾರದ ಮಹಾಗ್ರಂಥಗಳನ್ನು' ಸಮರ್ಥವಾಗಿ ರಚಿಸಿದ ಶಾಂತಕವಿಗಳ ಅಲಂಕಾರ ಶಾಸ್ತ್ರವನ್ನು ಕುರಿತ ಗ್ರಂಥವನ್ನು ಮಿತ್ರರು ಸಂಭಾವನೆಗಾಗಿ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧಿಕಾರಿಗಳಿಗೆ ಸಮರ್ಪಿಸಿದರೆ, ಆ ಸಂಭಾವನೆಯೂ ಕೂಡ, ಅದಕ್ಕೆ ದೊರಕದೆ ಹೋಯಿತು. ನರಗುಂದ ರಾಮರಾಯರೆನ್ನುವವರು ಸಂಭಾವನೆಗೆಂದು ಈ ಗ್ರಂಥವನ್ನು ಸಮರ್ಪಿಸಬೇಕು ಎಂದು ಹೇಳಿದಾಗ ಶಾಂತಕವಿಗಳು ತಮ್ಮ ಯಾವ ಗ್ರಂಥಕ್ಕೂ ಸಂಘದ ಸಂಭಾವನೆ ದೊರಕದೆಂದು ಮೊದಲೇ ಹೇಳಿದ್ದರಂತೆ. ಆದರೂ, ಮಿತ್ರರು ಪರೀಕ್ಷೆಗಾಗಿ ಎಂದು ಆ ಗ್ರಂಥವನ್ನು ಸಮರ್ಪಿಸಿದರು. ಎಣಿಸಿದಂತೆ ಅದಕ್ಕೆ ಮನ್ನಣೆ ದೊರಕದೆ ಹೋಯಿತು.

ಕಾವ್ಯಸ್ಫುರಣ :

ಬಡ ಕನ್ನಡ ಶಾಲಾಮಾಸ್ತರರ ವೃತ್ತಿಯಂತೂ ಯಾವ ಸರಕಾರೀ ಅಮಲ್‌ದಾರನೇ ಬರಲಿ, ಅವನ ಬಗೆಗೆ ಒಂದು ಸ್ವಾಗತ ಪದ್ಯವನ್ನು ರಚಿಸಿ ತೃಪ್ತವಾಗುವದು. ಪ್ರತಿಭಾವಂತರಾದ ಕಿತ್ತೂರ ಶಾಂತವೀರಯ್ಯನವರೂ ಡಾ. ಫ್ಲೀಟರ ಬಗೆಗೆ 'ನವರತ್ನಹಾರ' ಎಂಬ ಕವಿತೆಗಳನ್ನು ರಚಿಸಬೇಕಾಯಿತು. ಶಾಂತಕವಿಗಳ ಕಾವ್ಯಪ್ರತಿಭೆಯು ವ್ಯಕ್ತವಾದದ್ದೂ ಇಂಥ ಒಂದು ಸಂದರ್ಭದಲ್ಲಿಯೇ. ತಮ್ಮ ಮೇಲಿನ ಅಧಿಕಾರಿಗಳೊಬ್ಬರ ಬಗೆಗೆ ಕವನ ರಚಿಸಿದಾಗ ಇವರಲ್ಲಿದ್ದ ಕಾವ್ಯತ್ವವನ್ನು ಜನ ಅರಿತುಕೊಂಡಿತು. ಶಾಂತಕವಿಗಳು ಪುರಂದರದಾಸರ ಕವನದ ಮಾದರಿಯಲ್ಲಿ ತಾವೊಂದು ದೇವತಾಸ್ತುತಿಯನ್ನು ಪ್ರಪ್ರಥಮವಾಗಿ ಬರೆದದ್ದಾಗಿಯೂ ಅದನ್ನು ಯಾರಿಗೂ ತೋರಿಸಲಿಲ್ಲವಾಗಿಯೂ ಹೇಳುತ್ತಿದ್ದರಂತೆ.

ಶಾಂತಕವಿಗಳ ಪ್ರಥಮ ಗ್ರಂಥ :

'ಮುಕುಂದ ದಾನಾಮೃತ' ವೆಂಬ ಕೀರ್ತನವೇ ಶಾಂತಕವಿಗಳ ಪ್ರಥಮ ಕೃತಿಯೆಂದು ಕಂಡು

ಬರುತ್ತದೆ.[1] ಇದು ಕ್ರಿ. ಶ. ೧೮೭೫ ರಲ್ಲಿಯೇ ರಚಿಸಲ್ಪಟ್ಟಿತು. ಬಾಳಾಚಾರ್ಯರಿಗೆ ಹಳ್ಳಿಗರೊಡನೆಯೇ ಒಡನಾಟ ಹೆಚ್ಚು. ಅವರ ಸೇವೆಯ ಬಹು ಭಾಗವೂ ಹಳ್ಳಿಗಳಲ್ಲಿಯೇ ಹೆಚ್ಚಾಗಿ ಹೋಯಿತು. ಹೀಗಾಗಿ, ಅವರಿಗೆ ಹಳ್ಳಿಯ 'ರಾಧಾನಾಟ', 'ಗೊಂಬೆಯ ಆಟ' ಗಳೆಂದರೆ ಪಂಚಪ್ರಾಣ. ಅವರು ಪಟ್ಟಣದ ಮರಾಠಿಮೇಳದ ಥಳಕಿಗೆ ಆಹುತಿಯಾಗುವ ಸಂದರ್ಭ ಬರಲಿಲ್ಲ. ಮುಕುಂದ ದಾನಾಮೃತದ ರಚನೆಗೆ ಹೀಗೆ ಕಾರಣವಾಯಿತು : ಬಾಳಾಚಾರ್ಯರು ಮುಗುಂದದಲ್ಲಿದ್ದಾಗ, ಅಲ್ಲಿ ಆಠವಲೆ ಗಣಪತರಾಯರೆಂಬ ಸಂಸ್ಕೃತದ ಪಂಡಿತರೂ ಘನ ವೇದಾಂತಿಗಳೂ ಇರುತ್ತಿದ್ದರು. ಇವರು ಸ್ಥಳೀಯರಾದ ಈಶ್ವರಶಾಸ್ತ್ರಿ ಎಂಬವರಿಗೆ ಕನ್ನಡ ಕೀರ್ತನೆಗಳನ್ನು ಮಾಡಲು ಪ್ರೋತ್ಸಾಹಿಸಿದರು. ಶ್ರೀಯುತರು ಮಾಡುವ ಕೀರ್ತನೆಯೆಲ್ಲ ಕನ್ನಡದಲ್ಲಿದ್ದರೂ, ನಡುವಿನ ಪದಗಳೆಲ್ಲ ಮರಾಠಿ ಅಭಂಗಗಳಾಗಿದ್ದವು. ಈ ಕೀರ್ತನೆಯನು ಕೇಳಿದ ಬಾಳಾಚಾರ್ಯರಿಗೆ ಈ ಕನ್ನಡ ಮರಾಠಿಗಳ ಕಲಸು ಮೇಲೋಗರ ಹಿಡಿಸಲಿಲ್ಲ. ಕೂಡಲೇ ಅವರು ಮನೆಗೆ ಬಂದವರೇ 'ಮುಕುಂದ ದಾನಾಮೃತ' ಎಂಬ ಕನ್ನಡ ಕೀರ್ತನವನ್ನು ರಚಿಸಿದರು. ಆದರೆ, ಬಡ ಕನ್ನಡ ಶಾಲಾಮಾಸ್ತರನ ಕೀರ್ತನವನ್ನು ಕೇಳುವವರಾರು ? ಅದಕ್ಕೆಂದೇ ಶ್ರೀಯುತರು ಕೀರ್ತನವನ್ನು ಬಿಟ್ಟು ನಾಟಕರಚನೆಗೆ ಕೈಹಾಕಿದರು.

ನಾಟಕ ರಚನೆ :

ಇದೇ ಕಾಲಕ್ಕೆ, ಅಂದರೆ ಕ್ರಿ. ಶ. ೧೮೭೬ ರಲ್ಲಿ, ಗದುಗಿನ ಸುಪ್ರಸಿದ್ಧ ಉಮಚಗಿ ಲಚ್ಚಪ್ಪ ನಾಯಕ ಎನ್ನುವವರು ಶಾಂತಕವಿಗಳ ಉತ್ತೇಜನದಿಂದ 'ಗದುಗಿನ ಶ್ರೀ ವೀರನಾರಾಯಣ ಪ್ರಾಸಾದಿಕ ಕೃತಪುರ ನಾಟಕ ಮಂಡಳಿ' ಎಂಬ ನಾಟ್ಯಸಂಘವನ್ನು ಪ್ರಾರಂಭಿಸಿದರು. ಇದರಲ್ಲಿ ಗುಡಿ ರಾಮಚಂದ್ರಾಚಾರ್ಯ ಮೊದಲಾದವರು ನಟರಾಗಿದ್ದರು. ಈ ಕಾಲಕ್ಕೇ ಚುರಮುರಿ ಶೇಷಗಿರಿರಾಯರ 'ಶಾಕುಂತಲ' ನಾಟಕ ರಚಿತವಾಗಿತ್ತೇನೋ ನಿಜ; ಆದರೆ, ಅದಿನ್ನೂ ರಂಗಭೂಮಿಯ ಮೇಲೆ ಪ್ರಯುಕ್ತವಾಗಿರಲಿಲ್ಲ. ಗದುಗಿನ ಈ ನಾಟಕ ಕಂಪನಿಗಾಗಿ, ಆಗ ಗದುಗಿನಲ್ಲಿದ್ದ ಶಾಂತಕವಿಗಳು 'ಉಷಾಹರಣ' ಎಂಬ ನಾಟಕವನ್ನು ಸನ್ ೧೮೭೭ ರ ಸುಮಾರಿಗೆ ಬರೆದುಕೊಟ್ಟರು. ಹಿಂದೆ ಹೇಳಿದಂತೆ, ಈ ಕಾಲಕ್ಕೆ ಎಲ್ಲಿ ನೋಡಿದಲ್ಲಿ ಮರಾಠಿ ನಾಟಕಗಳ ಪ್ರಭಾವವೇ ಎದ್ದುಕಾಣುತ್ತಿತ್ತು. ಅಂಥ ಕಾಲದಲ್ಲಿ ಕೃತಪುರದ ಈ ಕಂಪನಿಯವರಿಗೆ ನಾಟಕವಾಡಲು ಕಲಿಸಿದ್ದರಿಂದ ಅವರು ನಾಟಕಗುರುಗಳಾದರು. ತಮ್ಮ ಸಂತೃಪ್ತಿಯನ್ನು ಅವರು ಹೀಗೆ ವ್ಯಕ್ತಮಾಡಿದ್ದಾರೆ :

ಇದೆ ಮೊದಲಿನದು ನಮ್ಮ ಕನ್ನಡ ನಾಡಿನೊಳ
ಗುದಯಿಸಿದ ಕನ್ನಡದ ನಾಟಕ ಮೇಳವಾ
ದುದರಿಂದೆ ಕರ್ಣಾಟನಾಟಕ ಪ್ರಥಮಗುರುವೆಂದೆಂಬರೆಮಗಿಂದಿಗಂ
ಇದರಿಂದಲೇನು ನಾಟಕ ನಟನರಿಂದೆಮ್ಮ
ಹೃದಯಂ ಪ್ರಭಾತ ಪೂರ್ವಕ್ಷಣದ ಪದುಮದಂ
ದಮೊಳಾದುದೈ ಮುಂದೆ ಬಹುಸಿರಿಯು ಕುಸುಹಿಂದೆ ಬಿಗ್ಗೊಡಲೊಳೊಗೆಯದಿಹುದೆ[2]

ಈ ನಾಟಕವನ್ನು ನೋಡಿದ ಜನರೂ ಕೂಡ ಹೀಗೆ ಉದ್ಗಾರ ತೆಗೆದರು :

---

[1] ಇದೇ 'ಶ್ರೀಕೃಷ್ಣದಾನಾಮೃತ' ಎಂದು ಸನ್ ೧೯೩೬ ರಲ್ಲಿ ಮುದ್ರಿತವಾದಂತೆ ಕಾಣುತ್ತದೆ. ಪ್ರಥಮ ಕೃತಿಯಾದ ಈ ಗ್ರಂಥ ಸುಮಾರು ೫೦ ವರುಷ ಕಾಲ ಅಪ್ರಕಟಿತವಾಗಿ ಏಕೆ ಉಳಿಯಿತೋ ಅರ್ಥವಾಗಲಿಲ್ಲ.

[2] ಪ್ರಭಾತ : ೧೯೧೯ : ಪು. ೭.

ದೊರೆದುದೆಮಗೀ ನೂತ್ನ ನಾಟ್ಯಗ್ರಂಥದ ಗಿರಿಯು
ದೊರೆದುದೆಮಗೀಗಳೀ ಮಧುರ ಶಬ್ದದ ಝರಿಯು
ದೊರೆದುದೀಗಳ್ ಸರಸವರ್ಣನಾತ್ಮಕವಾದ ಭಾಷಣದ ರಸದ ತೊರೆಯು
ದೊರೆದುದೀಗಳ್ ರಸಿಕರಾನಂದಗಳ ತೆರೆಯು
ದೊರೆದುದೀಗಳ್ ಪ್ರೇಕ್ಷಕರಭಿಮಾನದ ಸರಿಯು
ದೊರೆದುದೀಗಳ್ ಕನ್ನಡದ ಭಾಷೆಯೈಸಿರಿಯು ಶಾಂತೇಶನೊಲುಮೆಯಿಂದೆ

ಈ ಕಂಪನಿಯವರ ಉತ್ಸಾಹ ಹಾಗೆಯೇ ಉಳಿಯಬೇಕೆಂದು ಶಾಂತಕವಿಗಳು ಇವರಿಗಾಗಿ, 'ಉಷಾಹರಣ' ನಾಟಕವಲ್ಲದೆ, 'ಶ್ರೀಯಾಳ ಸತ್ವಪರೀಕ್ಷೆ', 'ಸುಂದೋಪಸುಂದ ವಧ', 'ವತ್ಸಲಾಹರಣ', 'ಕೀಚಕವಧ', 'ಸುಧನ್ವವಧ', 'ಸೀತಾರಣ್ಯಪ್ರವೇಶ', 'ಶಕುಂತಲೋತ್ಪತ್ತಿ', 'ಚಂದ್ರಾವಳೀ ಚರಿತ್ರ', 'ಬಾಣಾಸುರಾಖ್ಯಾನ', 'ಬೃಹಜ್ಜಂಬು ಚರಿತ್ರೆ' ಮೊದಲಾದ ರಂಗೀತ ಅ.ದರೆ ಗದ್ಯನಾಟಕಗಳನ್ನು ಬರೆದರು. ಅಂದಿನ ಕಾಲದ ಮರಾಠಿ ವೃತ್ತಪತ್ರಿಕೆಗಳಾದ ಕಲಾದಗಿಯ 'ಹಿತೇಚ್ಛು', ಬೆಳಗಾವಿಯ 'ಜ್ಞಾನಬೋಧಕ', ಧಾರವಾಡದ 'ಧಾರವಾಡ ವೃತ್ತ' ಮೊದಲಾದುವು ಶಾಂತಕವಿಗಳ ರಚನಾಕೌಶಲ್ಯವನ್ನೂ ನಟರ ನಟನಾಕೌಶಲ್ಯವನ್ನೂ ಮನಮೆಚ್ಚಿ ಹೊಗಳಿದುವು. ಈ ಬಗೆಗೆ ಶಾಂತಕವಿಗಳು ಹೀಗೆ ಹೇಳುತ್ತಾರೆ :

ಸ್ಥಿರಗೊಳಿಸಲೀ ಜನರ ಸುಸ್ಫೂರ್ತಿಯನ್ನಾವು
ಬರೆಯುತಲೆ ಹತ್ತೆಂಟು ನಾಟಕಗಳಂ ಕಲಿಸಿ
ಹರಸಿದೆವು ಬಳಿಕಲೀ ಮೇಳವೆಮ್ಮೀ ದೇಶದಲ್ಲಿ ಸಲೆ ಸಂಚರಿಸಿತು
ಒರೆವದೇನಿದು ಜನರ ಮನಕೆ ಮೆಚ್ಚಾಗಿರ್ದ
ಪರಿಯನಾಗಿನ ವರ್ತಮಾನಪತ್ರಗಳನ್ನು
ತೆರೆದೋದಿದರೆ ತಾನೆ ತಿಳಿದೆಲ್ಲ ಸಂಗತಿಯು ನಿಮಗೆ ಹಿಗ್ಗೀಗಳಹುದು

'ಬರೆದು ಕಲಿಸಿದರಿಂದೆ ಗುರುಗಳಾದೆವು ನಾವು'– ಎಂದು ಧನ್ಯತಾಭಾವದಿಂದ ಶಾಂತಕವಿಗಳು ಹೇಳಿಕೊಂಡದ್ದು ಯಥಾರ್ಥವೇ ಆಗಿದೆ. ಯಾಕೆಂದರೆ, ಇಂದಿಗೂ ಗದಗು, ಮುಳಗುಂದ ಭಾಗಗಳ ಹಳ್ಳಿಗರು ನಾಟಕವನ್ನು ಪ್ರಾರಂಭಮಾಡಬೇಕಾದಾಗ ಶಾಂತಕವಿಗಳ ಹೆಸರನ್ನು ತೆಗೆದುಕೊಂಡೇ ನಾಟಕ ಪ್ರಾರಂಭಿಸುತ್ತಾರೆ. ಇಂದಿಗೂ ಈ ಭಾಗದಲ್ಲಿ ಯಾವುದೇ ಹಳ್ಳಿಯ ಬಯಲಾಟ ಪ್ರಾರಂಭವಾಗಬೇಕಾದರೆ, ಈ ರೀತಿ ಸಂಭಾಷಣೆ ಪ್ರಾರಂಭವಾಗುತ್ತದೆ :

ಬಯಲಾಟದ ಪೂರ್ವರಂಗ

(ಶಾರದೆ ಕುಣಿಯುತ್ತ ಬಂದು ಪೀಠದಲ್ಲಿ ವಿಶ್ರಮಿಸುವಳು)

ಭಾಗವತ : ಭೋ ಶಾರದಾದೇವಿಯವರೇ, ತಾವು ಈ ನೆರೆದ ಜನಸಮೂಹಕ್ಕೆ ದರ್ಶನವಿತ್ತು ಸರ್ವಲೋಕಕ್ಕೂ ಮಂಗಳ ಉಂಟು ಮಾಡಿದ್ದೀರಿ. ತಮ್ಮ ಅಡಿದಾವರೆಗಳಲ್ಲಿ ವಿನಯದಿಂದ ವಂದಿಸುತ್ತೇವೆ.

ಶಾರದೆ : ಭಾಗವತ, ನಾನು ದೇವಲೋಕದಲ್ಲಿ ಸುಖದಿಂದ ಕುಳಿತುಕೊಂಡಿದ್ದೆ. ವಿನಯ ಭಕ್ತಿಗಳಿಂದ ನನ್ನನ್ನು ಸ್ತುತಿಸಿದ ಪ್ರಯುಕ್ತ ನಾನಿಲ್ಲಿಗೆ ದಯಮಾಡಿಸಿದ್ದೇನೆ. ನನ್ನಿಂದ ಏನಾಗಬೇಕಾಗಿದೆ. ಬೇಗನೆ ಬಿತ್ತರಿಸುವಂಥವನಾಗು.

ಭಾಗವತ : ತಾಯೀ, ಐದನೆಯ ಅಗ್ರಹದ ಮೂಲಕವಾಗಿ ನಾನೊಂದು ಆಖ್ಯಾನವನ್ನು ಅರಿ ಕೋರಿಕೊಳ್ಳಬೇಕೆಂದಿದ್ದೇನೆ. ಶಾಂತಕವಿಗಳ ಕೃಪಾಪ್ರೋತ್ಸಾಹಿತವಾದ ಈ ರಂಗಸ್ಥಳದಲ್ಲಿ ತಿರುನೀಲಕಂಠ ಎಂಬ ಬಯಲಾಟವನ್ನು ಹಮ್ಮಿಕೊಂಡಿದ್ದೇನೆ. ಈ ಆಟಕ್ಕೆ ಯಾವ ತರದ ವಿಘ್ನಾದಿಗಳು ಬಾರದಂತೆ ವರವನ್ನಿತ್ತು ಕಾಪಾಡಬೇಕೆಂದು ಅತಿವಿನಯದಿಂದ ಬೇಡಿಕೊಳ್ಳುತ್ತೇನೆ.

ಶಾರದೆ : ತಥಾಸ್ತು ! ನಿಮಗೆ ಮಂಗಳವಾಗಲಿ ! ೧

ಇದೂ ಅಲ್ಲದೆ, ಧಾರವಾಡ ಭಾಗದಲ್ಲಿ ಇಂದಿಗೂ ಬಯಲಾಟಗಳನ್ನಾಡುವಾಗ ಸರಸ್ವತೀ ಆಹ್ವಾನವಾಗಿ ಹೇಳುವ ಪದ ಶಾಂತಕವಿಗಳು ರಚಿಸಿದ 'ಕೀಚಕ ವಧ' ನಾಟಕದೊಳಗಿನ 'ವಾಗ್ದೇವಿ, ಬಾ, ಶ್ರೀ ಶಾರದೆ ಬಾ, ಬಾರೆ ನೀರೆ' ಎಂಬುದು.

ಶಾಂತಕವಿಗಳ ಈ ನಾಟಕಗಳ ಯಶಸ್ಸು ಅಧಿಕಾರಿಗಳ ಮನಸ್ಸಿಗೆ ಬಾರದ್ದರಿಂದಲೂ, ಇವರ ಕನ್ನಡ ಚಳುವಳಿಗಳನ್ನು ಸಂಶಯದೃಷ್ಟಿಯಿಂದ ಅವರು ನೋಡಿದ್ದರಿಂದಲೂ, ಶಾಂತಕವಿಗಳನ್ನು ಗದುಗಿನಿಂದ ಹೊಂಬಳಕ್ಕೆ ವರ್ಗ ಮಾಡಲಾಯಿತು. ಹೀಗಿದ್ದರೂ, ಕಲೆ ಮತ್ತು ಕರ್ನಾಟಕಗಳ ಅಭಿಮಾನದ ಮೂಲಕ ಶಾಂತಕವಿಗಳು ಪ್ರತಿದಿವಸ ಶಾಲೆಯ ಕೆಲಸ ಮುಗಿದ ನಂತರ ನಡೆದಾಗಲೀ, ಕುದುರೆಯನ್ನು ಹತ್ತಿಯಾಗಲೀ, ಹೊಂಬಳದಿಂದ ಗದುಗಿಗೆ ಬಂದು, ಮೈಲು ನಡೆದು ಬಂದು ನಾಟಕದ ರಂಗತಾಲೀಮನ್ನು ಕಲಿಸುತ್ತಿದ್ದರು.

ಶಾಂತಕವಿಗಳು ಸ್ವತಃ ಕವಿಗಳಾಗಿದ್ದರೂ, ತಮ್ಮ ನಾಟಕಗಳಲ್ಲಿ ಹೆಚ್ಚಾಗಿ ಪದ್ಯಗಳನ್ನು ಹಾಕಲಿಲ್ಲ. ಅದಕ್ಕೆ ಕಾರಣ, ನಾಟಕಕ್ಕೆ ತಕ್ಕ ಸೋಗು ಎನ್ನುವದಕ್ಕಿಂತ, ಸೋಗಿಗೆ ತಕ್ಕ ನಾಟಕವನ್ನು ಅವರು ಬರೆಯಬೇಕಾದುದೇ. ನಟನ ಯೋಗ್ಯತೆಯನ್ನು ಅನುಸರಿಸಿ ಅವರು ಹಾಡುಗಳನ್ನು ಹಾಕಬೇಕಾಗುತ್ತಿತ್ತು. ೨

ಸಂಸ್ಕೃತ ಕೃತಿಗಳ ಅನುವಾದ-ರೂಪಾಂತರ :

ನಾಟಕ ಮತ್ತು ಕವನಗಳನ್ನು ಮಾತ್ರವಲ್ಲದೆ ಶಾಂತಕವಿಗಳು 'ಮೇಘದೂತ', 'ಗೀತಗೋವಿಂದ', 'ಪಾರ್ವತೀ ಪರಿಣಯ', 'ನಾಗಾನಂದ', 'ರಘುವಂಶದ ಎರಡನೆಯ ಸರ್ಗ' ಮೊದಲಾದವುಗಳ ಸರಸವಾದ ಭಾಷಾಂತರವನ್ನು ಮಾಡಿದರು.

ಸ್ವತಂತ್ರ ಕೃತಿಗಳು :

ಈ ಮೇಲಿನ ಗ್ರಂಥಗಳಲ್ಲದೆ, 'ಗಜೇಂದ್ರಮೋಕ್ಷ', 'ರಾವಣ-ವೇದವತಿ', 'ಶ್ರೀಮತಿ ಸ್ವಯಂವರ', '[illegible]ಮಾಹಾತ್ಮ್ಯ', 'ಹರಿಮಿತ್ರೋಪಾಖ್ಯಾನ', 'ಸ್ಯಮಂತಕಮಣಿಚರಿತ' ಮೊದಲಾದ ಅನೇಕ ಕೀರ್ತನಗಳನ್ನು ರಚಿಸಿದರು. ಹೀಗೆ ಕ್ರಿ. ಶ. ೧೮೭೫ ರಿಂದ ಮೊದಲುಗೊಂಡು ತಮ್ಮ ಜೀವದ ಕೊನೆಯ ದಿವಸದವರೆಗೆ, ಅಂದರೆ ೧೯೨೦ ರ ವರೆಗೂ, ಅವಿರತ ೪೫ ವರ್ಷ

೧ ಈ ಸಂವಾದವನ್ನು ದೊರಕಿಸಿದವರು [illegible] ಡಾ. ಎಂ. ಎಸ್. ಸುಂಕಾಪುರ ಅವರು.

೨ ವಾಗ್ಭೂಷಣ : ೧೯೨೦ : ಪು. ೧೩.

ಬಿಟ್ಟು ಬಿಡದೆ ಕನ್ನಡ ಸಾಹಿತ್ಯಸೇವೆಯನ್ನು ಶಾಂತಕವಿಗಳು ಮಾಡಿದರು. ಕೃಷ್ಣಪುರ ನಾಟಕ ಮಂಡಳಿಯವರು ೧೮೮೧ ರಲ್ಲಿ ಇವರ ನಾಟಕಗಳನ್ನು ಬೆಳಗಾವಿಯಲ್ಲಿ ಆಡಿ ತೋರಿಸಿದರು. ನರಗುಂದ ನಾಟಕ ಕಂಪನಿಯವರೂ ಆ ಕಾಲಕ್ಕೆ ಇವರ ನಾಟಕಗಳನ್ನು ಆಡುತ್ತಿದ್ದರು.

ವಿದ್ಯಾರಣ್ಯ ಕೀರ್ತನ ಮತ್ತು ಅಲಂಕಾರವಿಷಯಕ ಗ್ರಂಥಗಳೇ ಅವರ ಕೊನೆಯ ರಚನೆಗಳಾದಂತೆ ಕಾಣುತ್ತದೆ. ಅಲಂಕಾರವಿಷಯಕ ಗ್ರಂಥವನ್ನು ಆಲೂರ ವೆಂಕಟರಾಯರ ಕಡೆಯಿಂದ ತಿದ್ದು ವಡಿಕೊಳ್ಳಸ್ಕರ ಒಪ್ಪುವರು ಆ ಕೆಲಸವನ್ನು ಪೂರ್ತಿ ಮಾಡದೆ ಹೋದರು.

ಇಷ್ಟು ಕೃತಿ ರಚನೆಯನ್ನು ಮಾಡಿದ ಬಾಳಾಚಾರ್ಯರಿಗೆ ಬಡತಿ ಏಕೆ ಸಿಗಲಿಲ್ಲವೋ ತಿಳಿಯದಾಗಿದೆ. ಸುಶಿಕ್ಷಿತರೆನ್ನಿಸಿಕೊಳ್ಳುವವರು ಶಾಂತಕವಿಗಳೆಂದರೆ ಯಾರೋ ಒಬ್ಬ ಕವಿ, ಹಳ್ಳಿಗಾಡಿನ ಕಡೆಯವರು ಅವರ ನಾಟಕಗಳನ್ನು ಆಡುತ್ತಾರಂತೆ ಎಂದು ಮಾತ್ರ ಭಾವಿಸಿದ್ದರು. ಆಲೂರ ವೆಂಕಟರಾಯರು ಹೇಳುವಂತೆ– "ಶ್ರೀ ವೆಂಕಟ ರಂಗೊ ಕಟ್ಟಿ, ಶ್ರೀ ರಾಮಚಂದ್ರ ಹಣಮಂತ ದೇಶಪಾಂಡೆ, ಶ್ರೀ ಶ್ರೀನಿವಾಸರಾವ ಕೊಪ್ಪ, ಶ್ರೀ ಕೈ. ಚನಬಸಪ್ಪಾ ಮುಂತಾದ ಕನ್ನಡದ ಅತ್ಯಭಿಮಾನಿಗಳು ಇವರ ಯೋಗ್ಯತೆಯನ್ನು ಕಂಡುಹಿಡಿಯಬಹುದಾಗಿತ್ತು. ಆದರೆ, ಈ ದೊಡ್ಡ ಸರಕಾರೀ ಅಧಿಕಾರಿಗಳಿಗೆ ಈ ಬಡ ಮಾಸ್ತರನ ಲಕ್ಷ್ಯವೆತ್ತ?"[೧] ಇದಕ್ಕೆ ಕಾರಣ ಬಹುಶಃ ಅವರ ಸ್ವಾತಂತ್ರ್ಯಪ್ರಿಯತೆ, ನಿಸ್ಪೃಹತೆಗಳೇ ಆಗಿರಬೇಕು. "ಅವರು ಸ್ವಾತಂತ್ರ್ಯಪ್ರಿಯರು, ಅವರಿಗೆ ಅಧಿಕಾರಿಗಳ ಕೈಕಾಲು ಹಿಡಿದು ಎಂದೂ ಗೊತ್ತಿರಲಿಲ್ಲ. ಆದುದರಿಂದಲೇ ಅವರು ಸರಕಾರೀ ನವಕರಿಯಲ್ಲಿ ಏರಲಿಲ್ಲ. ಇಷ್ಟೇ ಅಲ್ಲ; ಈ ಸ್ವಾರಿಯು ಒಮ್ಮೆ ಬೇಸತ್ತು ಶಾಳಾ ಖಾತೆಯಲ್ಲಿ ದಣಿ ಕಾಯುವದಕ್ಕಿಂತಲೂ ಅಧಿಕಾರೀ ಖಾತೆಯನ್ನು ಅಥವಾ ಸಬ್ ರಜಿಷ್ಟರ ಖಾತೆಯನ್ನು ಸೇರಬೇಕೆಂದು ಬಯಸಿ ೧೯೦೦ ನೇ ಇಸ್ವಿಯಲ್ಲಿ ಅರ್ಜಿಯನ್ನು ಸಹ ಮಾಡಿತ್ತು. ಆದರೆ, ಅದು ಅವರಿಗೆ ಸಿಗಲಿಲ್ಲ."[೨]

ಹೀಗಿದ್ದರೂ, ಸಾಹಿತ್ಯಪಕ್ಷಪಾತಿಗಳು ಮಾತ್ರ ಶಾಂತಕವಿಗಳಿಗೆ ಮರ್ಯಾದೆ ಕೊಡದೇ ಹೋಗಲಿಲ್ಲ. ಶಾಂತಕವಿಗಳ ೨೫ ನೆಯ ವರುಷದ ತಾರುಣ್ಯದಲ್ಲಿ, ಧಾರವಾಡದ ಸಾರ್ವಜನಿಕ ಕಾಕಾ ಎಂದು ಪ್ರಸಿದ್ಧರಾಗಿದ್ದ ಶ್ರೀ ಗೋವಿಂದರಾವ ಮಡಿವಾಳೆ ಎನ್ನುವವರು ಈ ಚಿಕ್ಕ ಬಾಲಕನ ಉತ್ಕಟ ಕವಿತ್ವಕ್ಕೆ ಮರುಳುಗೊಂಡು ಧಾರವಾಡದ ಆನಂದೋದ್ಭವ ಥಿಯೇಟರದಲ್ಲಿ ದಿನಾಂಕ ೨೪–೮–೧೮೮೧ ರಂದು ಒಂದು ಸಾರ್ವಜನಿಕ ಸಭೆಯನ್ನು ಕೂಡಿಸಿ, ಇವರಿಗೆ ಮರ್ಯಾದೆ ಮಾಡಿ, ಒಂದು ಗಡಿಯಾರವನ್ನು ಉಡುಗೊರೆಯಾಗಿ ಕೊಟ್ಟರು. ರಂಗರಾವ ಭೀಮಾಜಿ ಎಂಬುವರು ಇವರ ನಾಟಕಗಳನ್ನು ಮೆಚ್ಚಿ ಇವರಿಗೆ ಒಂದು ಸುಂದರವಾದ ಉಡುಪನ್ನು ಕೊಟ್ಟರು. ಬೆಳಗಾವಿಯಲ್ಲಿ ಒಬ್ಬರು ಇವರಿಗೆ ಜರದ ಟೊಪ್ಪಿಗೆಯನ್ನೂ, ಮತ್ತೊಬ್ಬರು ೨೫–೩೦ ರೂಪಾಯಿ ಬೆಲೆ ಬಾಳುವ ಜರದ ರುಮಾಲು ಇವೇ ಮುಂತಾದುವನ್ನೂ ಉಡುಗೊರೆಯಾಗಿ ಕೊಟ್ಟರು.[೩] ಇದೂ ಅಲ್ಲದೆ, ಶಾಂತಕವಿಗಳು ಅಗಡಿಯಲ್ಲಿದ್ದಾಗ ಅಲ್ಲಿಯ ಮಹಾಜನರು ಇವರ ಕವಿತ್ವವನ್ನೂ ನಿಷ್ಕಾಮಸೇವೆಯನ್ನೂ ಮೆಚ್ಚಿ ಅಗಡಿಯಲ್ಲಿ ಒಂದು ಮನೆಯನ್ನೂ ಮತ್ತು ಅಗಡಿಯ ಒಂದೂವರೆ ಮೈಲು ದೂರದಲ್ಲಿರುವ ಈರಾಪುರ ಗ್ರಾಮದ ಸರ್ವೆ ನಂಬರಿನ ೧೨ ಎಕರೆ ಹೊಲವನ್ನೂ ಸ್ವತಃ ತಾವೇ ಪಟ್ಟಿ ಹಾಕಿ ಹಣಕೂಡಿಸಿ, ತಮ್ಮ ಪ್ರಿಯ ಕವಿಗೆ ಉಡುಗೊರೆಯಾಗಿ ಕೊಟ್ಟರು.[೪] ಅಲ್ಲದೆ, ಅಗಡಿಯಲ್ಲಿರುವ ತಾಸಪ್ಪಾ ಅವರ

೧ ವಾಗ್ಭೂಷಣ : ೧೯೨೦ : ಪು. ೧೮.
೨ ಅದೇ ಪು. ೧೯.
೩ ಅದೇ ಪು. ೧೮.
೪ ಅದೇ ಪು. ೩೦.

ಯೋಗಕ್ಷೇಮವನ್ನು ಅಲ್ಲಿಯೂ ಅವರೇ ನೋಡುತ್ತಿದ್ದರು. ಇದು ಶಿಷ್ಯರೆಡೆಗೆ ಅವರ ಪ್ರೀತಿಯ ಮರ್ಯಾದೆಯ ನಿದರ್ಶನವಾಗಿದೆ.

ಪ್ರಾಸಾದಿಕ ಕವಿ :

ಬಾಳಾಚಾರ್ಯರು ಪ್ರಾಸಾದಿಕ ಕವಿ. ಅನ್ಯರ ಕಾವ್ಯವನ್ನು ಮುಟ್ಟುವವರಲ್ಲ. ಸಮಯ ಸ್ಫೂರ್ತವಾಗಿ ತಕ್ಷಣ ಕಾವ್ಯ ರಚಿಸುವವರು. ಒಂದು ಸಲ ಅಲ್ಲಿಯ ವೆಂಕಟರಾಯರು ದಾಸರ ಪದಗಳಲ್ಲಿಯ "ನ್ಯಾಯವೇನು ದೇವ ದೇವಾ" ಮೊದಲಾದ ಪದ್ಯಗಳಂತೆ ಹೊಸಗನ್ನಡದಲ್ಲಿಯೂ ಪದ್ಯ ರಚಿಸಿಕೊಡಬೇಕೆಂದು ಹೇಳಿದಾಗ "ಈ ದಾಸರು ಅನ್ಯರು ಮಾಡಿದ ಪದಗಳನ್ನು ಮುಟ್ಟುವವರಲ್ಲ ಎಂದು ಹೇಳಿ ತಮ್ಮ ಸ್ವಂತ ಪುಸ್ತಕಕ್ಕೆ ಅವರು ಅನೇಕ ಕವನಗಳನ್ನು ಬರೆದುಕೊಟ್ಟರು."

೧೯೧೭ ನೇ ಇಸವಿಯಲ್ಲಿ ದಾವಣಗೆರೆಯಲ್ಲಿ ನಡೆದ ವೀರಶೈವ ಮಹಾಸಭೆಗೆ ಬಾಳಾಚಾರ್ಯರೂ ರಾಮರಾವ ನರಗುಂದ ಮೊದಲಾದ ಸ್ನೇಹಿತರೊಡನೆ ಹೋಗಿದ್ದರು. ಶ್ರೀ ಸಕ್ಕರಿಯವರಿಗೆ ಸರ್ವಮತಗಳ ಬಗ್ಗೆಯೂ ಉದಾರವಾದ ಅಭಿಪ್ರಾಯವಿದ್ದಿತು. ಮಧ್ವರಾದ ಇವರು ಸರ್ವಮತಗಳನ್ನೂ ಒಂದೇ ದೃಷ್ಟಿಯಿಂದ ನೋಡುತ್ತಿದ್ದರು. ದಾವಣಗೆರೆಯ ಈ ಸಭೆಯ ಬಗೆಗೆ ರಾಮರಾವ ನರಗುಂದ ಅವರು ಹೀಗೆ ಹೇಳುತ್ತಾರೆ :

"ಅಲ್ಲಿದ್ದ ತಮ್ಮ ಸ್ನೇಹಿತರು ಒಂದು ಸಲ ದಾಸರ ಪದಗಳ ಮೇಳ ಮಾಡಿದರು. ಮತ್ತು ಬಹುತರವಾಗಿ ಆ ಪದಗಳನ್ನು ಬಲ್ಲವರು ಪದಗಳನ್ನು ಹಾಡಿ ತೋರಿಸಿದರು. ಮೇಳವು ಒಳ್ಳೆ ಧರಕ್ಕೆ ಬಂದಿತ್ತು. ಶ್ರೀ ಬಾಳಾಚಾರ್ಯರಿಗೆ ಪದಗಳನ್ನು ಅನ್ನಲಿಕ್ಕೆ ಜನರು ಆಗ್ರಹಮಾಡಿದ್ದರಿಂದ ಅವರು ಅಲ್ಲಿ ೧-೨ ದಾಸರ ಪದಗಳನ್ನು ಹಾಡಿದರು. ಆದರೆ, ಅವರು ಹಾಡಲಿಕ್ಕೆ ಪ್ರಾರಂಭಿಸಿದಾಗ್ಗೆ ಜನರಿಗೆ ಅವು ಹೊಸ ಪದಗಳು ಎಂದು ತೋರಿದವು. ಮುಂದೆ ಕಡೆಗೆ ಶಾಂತೇಶ ವಿಠ್ಠಲನ ಮುದ್ರಿಕೆಯನ್ನು ಕೇಳಿ ಜನರಿಗೆ ಆ ಪದವು ಶಾಂತಕವಿಗಳ ಪದವೆಂದು ಗೊತ್ತಾಯಿತು." ೧

ಬಾಳಾಚಾರ್ಯರ ಹಿರಿಯ ಮಗನ ಹೆಸರು ಭೀಮಾಚಾರ್ಯ. ಈ ಭೀಮಾಚಾರ್ಯರು ವಕೀಲರಾಗಿದ್ದರು. ತಮ್ಮ ತಂದೆಯವರಿಗೂ ಈ ಭೀಮಾಚಾರ್ಯರಿಗೂ ಕೂಡಿಯೇ ತಮ್ಮ ಮೇಘದೂತ ಕಾವ್ಯವನ್ನು ಆಚಾರ್ಯರು ಅರ್ಪಿಸಿದ್ದಾರೆ. ಬಾಳಾಚಾರ್ಯರ ಹೆಂಡತಿಯ ಹೆಸರು ರಂಗೂಬಾಯಿ. ಇವರು ತುಂಬಾ ಸಾತ್ವಿಕ ಸ್ವಭಾವದವರು. ಶಾಂತಮನಸ್ಕರು. ಬಾಳಾಚಾರ್ಯರ ಶಿಷ್ಯಕೋಟಿಯನ್ನು ಅನೇಕ ವಿಧವಾಗಿ ಹಿಡಿದು ಪಾಲಿಸಿಕೊಂಡು ಪರಿಶ್ರಮಪಟ್ಟರು. ತಮ್ಮ ಗಂಡನಿಗೆ ತುಂಬಾ ಹೆದರುತ್ತಿದ್ದರು. ರಂಗೂಬಾಯಿಯವರ ಸ್ವಭಾವಚಿತ್ರವನ್ನು ಚಿತ್ರಿಸುತ್ತ ರಾಮರಾವ ನರಗುಂದ ಅವರು ಹೀಗೆ ಕೊಟ್ಟಿದ್ದಾರೆ :

"ಬಾಳಾಚಾರ್ಯರು ಅತ್ಯಂತ ಮುಗ್ಧರು. ಇನ್ನು ಬಹುತರ ಅನ್ಯರ ಸಂಗತ ಸಂಬಂಧವನ್ನು ಇಟ್ಟುಕೊಂಡಿರಲಿಲ್ಲ. ಮನೆಯಲ್ಲಿಯೂ ಅವರು ವಿಶೇಷ ಮಾತುಗಳನ್ನಾಡುತ್ತಿದ್ದಿಲ್ಲ. ಅವರ [illegible] ಇರುತ್ತಿದ್ದರು. [illegible] ಬಾಳಾಚಾರ್ಯರ [illegible] ಆದರೆ, ಬಾಳಾಚಾರ್ಯರ ಪತ್ನಿಯವರಾದ ಸೌ॥ ರಂಗೂಬಾಯಿಯವರ [illegible] ಅವರು ಗೃಹಕೃತ್ಯವನ್ನು ಬಲ್ಲವರಿದ್ದುದರಿಂದ ಅನೇಕ ಶಿಷ್ಯವರ್ಗಕ್ಕೂ [illegible] ಅವರಲ್ಲಿ [illegible] ಸಲುವಾಗಿ ಬರುತ್ತಾ ಇದ್ದರು. ಸೌ॥ ರಂಗೂಬಾಯಿ

೧ ವಾಗ್ಭೂಷಣ : ೧೯೩೦ : ಪು. ೨೫.

ಯವರು ಕೇವಲ ಸೌಜನ್ಯದ ಖನಿಯೇ ಆಗಿದ್ದರು. ಅವರು ವೃದ್ಧಾಪ್ಯದಲ್ಲಿ ಸಹ ಬಾಳಾಚಾರ್ಯರಿಗೆ ಹೆದರಿ ನಡೆಯುತ್ತಿದ್ದರು. ಬಾಳಾಚಾರ್ಯರ ಸ್ವಭಾವವು ಶೀಘ್ರಕೋಪಿಯಾದ್ದರಿಂದ ಆ ಪುಣ್ಯಾತ್ಮಳಿಗೆ ಬಹಳ ವ್ಯಸನವಾಗುತ್ತಿತ್ತು. ಅನೇಕ ವಿಧದಿಂದ ಪತಿಯ ಮನಸ್ಸನ್ನು ಸುಪ್ರಸನ್ನವಾಗಿ ಇಡಬೇಕೆಂದು ಅವರು ಪ್ರಯತ್ನಿಸುತ್ತಿದ್ದರು. ಬಾಳಾಚಾರ್ಯರು ಅವರ ಸಂಗಡ ನಿಕಟ ಸ್ನೇಹವನ್ನು ಮಾಡದಿದ್ದರೂ ಬಾಲಕರನ್ನು ಬಹಳ ಪ್ರೀತಿಸುತ್ತಿದ್ದರು. ತಮಗೆ ಮನಸ್ಸು ಬಂದಾಗ್ಗೆ ಬಹುತರವಾಗಿ ಚಿಕ್ಕಮಕ್ಕಳನ್ನು ಕರೆದುಕೊಂಡು ಅವರ ಸಂಗಡವೇ ಅವರು ಆಡುತ್ತಿದ್ದರು.” ೧

ರಂಗೂಬಾಯಿಯವರು ಈ ರೀತಿ ಪತಿಪರಾಯಣರಾಗಿ ಪತಿಸೇವೆಯನ್ನು ಮಾಡಿ ಸನ್ ೧೯೧೯ ರ ಅಕ್ಟೋಬರ ತಿಂಗಳಲ್ಲಿ ವೈಕುಂಠವಾಸಿಗಳಾದರು. ಪತ್ನಿಯ ಮರಣದ ನಂತರ ಆಚಾರ್ಯರ ಸ್ವಭಾವದಲ್ಲಿ ತುಂಬಾ ಬದಲಾವಣೆ ಆಯಿತು. ಯಾರು ಬೇಕಾದವರೂ ಅವರ ಕೂಡ ಮಾತಾಡುತ್ತಿದ್ದರು. ಅವರ ಕೋಪವು ಹೊರಟುಹೋಯಿತು.

“ಸನ್ ೧೯೦೪ ರಲ್ಲಿ ಗೃಹಕಲಹವು ಹುಟ್ಟಿ ಬಾಳಾಚಾರ್ಯರು ಬಹು ಪ್ರಯಾಸದಿಂದ ದೊರಕಿಸಿದ್ದ ತಮ್ಮ ಮನೆಯನ್ನು ಬಿಟ್ಟು ಅನ್ಯಸ್ಥಳದಲ್ಲಿ ವಾಸಿಸುವ ಪ್ರಸಂಗವೊದಗಿತು. ಬಾಳಾಚಾರ್ಯರು ಒಳ್ಳೇ ಮಾನೀ ಸ್ವಭಾವದವರಾಗಿದ್ದರು. ತಮಗೆ ಮಾನಭಂಗವಾಗುವಂಥ ಪ್ರಸಂಗಗಳೇ ಅವರು ತರಗೊಡುತ್ತಿದ್ದಿಲ್ಲ. ತಾವು ದೊರಕಿಸಿದ ಮನೆಯನ್ನು, ಆಸ್ತಿಯನ್ನು ಬಿಟ್ಟು ತಮಗೆ ಅನ್ಯಸ್ಥಳಕ್ಕೆ ಹೋಗುವ ಪ್ರಸಂಗವು ಬಂದದ್ದರಿಂದ ಆ ಮನೆಯಲ್ಲಿ ಅವರು ತಮ್ಮಿಂದ ಸಾಗುವಷ್ಟು ದಿವಸಗಳಲ್ಲಿ ಕಾಲು ಸಹ ಹಾಕಲಿಲ್ಲ. ಆದರೆ ೧೯೧೬ ನೇ ಇಸ್ವಿಯ ಅಕ್ಟೋಬರ ತಿಂಗಳದಲ್ಲಿ ಅವರ ಪತ್ನಿಯಾದ ಸೌ॥ ರಂಗೂಬಾಯಿಯವರು ಮೃತರಾದರು. ಅನಂತರ ಬಾಳಾಚಾರ್ಯರು ಪರಾಧೀನರಾದರು. ಅವರ ಮಕ್ಕಳಾದ ಶ್ರೀ ಹಣಮಂತಾಚಾರ್ಯರು ಪುನರಪಿ ಅವರಿಗೆ ಅವರ ಮುಂಚಿನ ಮನೆಗೆ ಕರೆ ತಂದರು. ಬಾಳಾಚಾರ್ಯರು ಆ ಮನೆಗೆ ಬಂದರೂ ಸಹ ಮುಂದಿನ ಅಟ್ಟದ ಮೇಲೆಯೇ ವಾಸಿಸುತ್ತಿದ್ದರು. ಊಟಕ್ಕೆ ಸಹ ಅವರು ಎಂದಿಗೂ ಪರಾಧೀನರಾಗುವ ವರೆಗೆ ಆ ಮನೆಯಲ್ಲಿ ಹೋಗಲಿಲ್ಲ. ಪತ್ನಿನಿಧನವೇ ಮುಂದೆ ಬಾಳಾಚಾರ್ಯರ ಬದಲಾದ ಆಯುಃಕ್ರಮಕ್ಕೆ ಕಾರಣವಾಯಿತು. ಮುಗ್ಧ ಮತ್ತು ಅನ್ಯರಿಗೆ ದುರ್ಶೀಲಿತರಾದ ಬಾಳಾಚಾರ್ಯರು ಆ ಮುಂದೆ ಎಲ್ಲರಿಗೂ ಸಹಜ ಸುಲಭರಾದರು.” ೨

ಕನ್ನಡದ ಕೈಂಕರ್ಯ :

ಈ ಸುಮಾರಿಗೇ ಅವರಿಗೆ ದಿವಂಗತ ಆಲೂರ ವೆಂಕಟರಾಯರು, ಕಡಪಾ ರಾಘವೇಂದ್ರರಾಯರು ಮತ್ತು ರಾಮರಾವ ನರಗುಂದ ಮೊದಲಾದವರ ಸಂಪರ್ಕ ಬಂದಿತು. ಕರ್ನಾಟಕ ಮತ್ತು ಭಾರತದ ಬಗೆಗಿನ ದೇಶಪ್ರೇಮದ ಕವನಗಳನ್ನು ಅವರು ಈ ಕಾಲಕ್ಕೇ ಹೆಚ್ಚಾಗಿ ರಚಿಸಿದರು. ವಿದ್ಯಾರಣ್ಯರ ಕೀರ್ತನೆ, ಕನ್ನಡ ದಾಸಯ್ಯನ ಪದಗಳು, ಕಾಲಮಹಿಮೆ, ಕನ್ನಡಿಗರಿಗೆ ಸವಾಲುಗಳು ಮೊದಲಾದುವು ಅವರ ಈ ದೇಶ ಮತ್ತು ಭಾಷಾಭಿಮಾನವನ್ನು ತೋರಿಸುತ್ತವೆ. “ನನಗೆ ನನ್ನ ತಾರುಣ್ಯದಲ್ಲಿ ಈ ಕಾಲದ ತರುಣರಂಥ ಜನರ ಸ್ನೇಹವು ದೊರೆಯಲಿಲ್ಲ. ನಮ್ಮ ಕಾಲಕ್ಕೆ ಜನರಲ್ಲಿ ದಾಸ್ಯಕ್ಕೇನೇ ಮಾನವು ದೊರೆಯುತ್ತಿತ್ತು. ದುರ್ಗುಣಗಳೇ ಗೃಹಸ್ಥರ ಲಕ್ಷಣಗಳಾಗಿದ್ದವು. ಎತ್ತ ನೋಡಿದತ್ತ ತಮೋಗುಣಗಳ ಪ್ರಾಬಲ್ಯವೇ ದೇಶದಲ್ಲಿ ಹಬ್ಬಿತ್ತು. ನನ್ನ ಮುಪ್ಪಿನಲ್ಲಾದರೂ ನನಗೆ

೧ ವಾಗ್ಭೂಷಣ : ೧೯೨೦ : ಪು. ೨೨.
೨ ಅದೇ : ಪು. ೨೨.

ರಾಷ್ಟ್ರಸೇವಕರ ಸ್ನೇಹವು ದೊರೆಯಿತು. ಇದೇ ನನ್ನ ಸುದೈವವು" ಎಂದು ಅವರು ಅನೇಕಾವರ್ತಿ ಅನ್ನುತ್ತಿದ್ದರು.

ನಾಲ್ಕನೆಯ ಕರ್ನಾಟಕ ಸಾಹಿತ್ಯಸಮ್ಮೇಲನವನ್ನು ಧಾರವಾಡದಲ್ಲಿ ನೆರವೇರಿಸಬೇಕೆಂದು ಗೊತ್ತಾಯಿತು. ಆದರೆ ಕಾರ್ಯಕರ್ತರಲ್ಲಿ ಮೊದಲಿದ್ದ ಉತ್ಸಾಹವೇಕೋ ಕಂಡುಬರಲಿಲ್ಲ. ಹಣದ ಚಿಂತೆಯೇ ಇದಕ್ಕೆ ಕಾರಣವೆಂದು ತಿಳಿದ ಬಾಳಾಚಾರ್ಯರು ಕಾರ್ಯಕರ್ತರನ್ನು ಕರೆದು ಹಣಕ್ಕಾಗಿ ನೀವು ಚಿಂತಿಸಬೇಡಿರಿ. ನಾನು ಸಹಾಯ ಮಾಡುತ್ತೇನೆ ಎಂದು ಹೇಳಿದರು. ನೀವು ಹೇಗೆ ಸಹಾಯ ಮಾಡುತ್ತೀರಿ ಎಂದು ಕೇಳಿದಾಗ ಅವರು "ನಾನು ರಾಷ್ಟ್ರಭಿಕ್ಷುಕನಾಗಿದ್ದೇನೆ. ರಾಜರಿಂದ ಆಗದಂಥ ಸಹಾಯವನ್ನು ನಾನು ನಿಮಗೆ ಭಿಕ್ಷಾವೃತ್ತಿಯಿಂದ ಮಾಡುತ್ತೇನೆ" ಎಂದು ಹೇಳಿ, ಅದೇ ರೀತಿಯಾಗಿ ಕನ್ನಡ ದಾಸಯ್ಯನ ಪದಗಳನ್ನು ರಚಿಸಿ, ಧಾರವಾಡ, ಬೆಳಗಾವ, ಬಾಗಿಲಕೋಟೆ, ಗದಗು, ಹುನಗುಂದ, ದಾವಣಗೇರಿ— ಮೊದಲಾದ ಸ್ಥಳಗಳಿಗೆ ಹೋಗಿ ಕೀರ್ತನೆಗಳನ್ನು ಮಾಡಿ ಹಣವನ್ನು ಸಂಪಾದಿಸಿ ತಂದರು. ಹೀಗಾಗಿ ಕರ್ನಾಟಕ ಸಾಹಿತ್ಯಸಮ್ಮೇಳನ ನೆರವೇರಿತು. ಇದಾದ ಮೇಲೆ ಅವರು ಕರ್ನಾಟಕ ರಾಜಕೀಯ ಸಮ್ಮೇಳನವನ್ನು ಕೂಡಿಸಬೇಕೆಂದೂ ಅದಕ್ಕೂ ದ್ರವ್ಯವನ್ನು ತರುವದಾಗಿಯೂ ಹೇಳಿ, ಹೊಸ ಮಾದರಿಯ ಕವನಗಳನ್ನು ರಚಿಸಲು ಉದ್ಯುಕ್ತರಾದರು. ಆದರೆ ದೈವೇಚ್ಛೆ ಬೇರೆಯೇ ಆಗಿದ್ದಿತು. ಈ ಸಮ್ಮೇಳನ ಕೂಡುವುದರಲ್ಲಿಯೇ ಶಾಂತಕವಿಗಳು ದಿವಂಗತರಾದರು. "ಬಾಳಾಚಾರ್ಯರು ವರಕವಿಗಳು. ಅವರು ಅವರ ದುರ್ದೈವದಿಂದ ಧಾರವಾಡದಲ್ಲಿ ಜನಿಸಿದ್ದರಿಂದ ಅವರ ಯೋಗ್ಯತೆಯ ಮೇರೆಗೆ ಜನರಲ್ಲಿ ಆದರವು ದೊರೆಯಲಿಲ್ಲ. ಮುಂಬಯಿ ಪ್ರಜೆಗಳಂಥ ಪಟ್ಟಣದಲ್ಲಿ ಅವರು ಬದುಕಿದ್ದರೆ, ಅವರಿಗೆ ಒಳ್ಳೇ ಗೌರವವು ದೊರೆಯುತ್ತಿತ್ತು. ಮೈಸೂರಂಥ ಕನ್ನಡ ರಾಜ್ಯಲಕ್ಷ್ಮಿಯ ಸ್ಥಳದಲ್ಲಿ ಅವರು ಆಸ್ಥಾನ ಕವಿಗಳಾಗುತ್ತಿದ್ದರು. ಆದರೆ ಮಾತೃಭಾಷೆಯನ್ನೇ ಮರೆತ ಉತ್ತರ ಕರ್ನಾಟಕದಲ್ಲಿ ಅವರು ಜನಿಸಿದ್ದರಿಂದ ಅರಣ್ಯ ಕುಸುಮದಂತೆ ತುಸು ಮಟ್ಟಿಗೆ ಅವರ ಸ್ಥಿತಿಯಾಗಿತ್ತು" ಎಂದು ರಾಮರಾವ ನರಗುಂದ ಅವರು ಬಾಳಾಚಾರ್ಯರ ಜೀವನದ ಬಗೆಗೆ ಹೇಳುತ್ತಾರೆ.[೧]

ಶಾಂತಕವಿಗಳ ಅಗಡಿಯ ವಾಸ :

೧೮೫೬ ರಲ್ಲಿ ಜನಿಸಿ ಸನ್ ೧೯೨೦ ರಲ್ಲಿ ಶಾಂತಕವಿಗಳು ವೈಕುಂಠವಾಸಿಗಳಾದರಷ್ಟೇ! ಈ ೬೪ ವರುಷಗಳ ಕಾಲಾವಧಿಯ ಮಹತ್ವದ ಮಧ್ಯವರ್ತಿ ಕಾಲವಾದ ೩೦ ನೆಯ ವರುಷದಿಂದ ೩೯ ನೆಯ ವರುಷದ ವರೆಗೆ, ಅಂದರೆ ಸನ್ ೧೮೮೬ ರಿಂದ ೧೮೯೫ ರ ವರೆಗೆ, ಅವರು ಅಗಡಿಯಲ್ಲಿ ವಾಸವಾಗಿದ್ದರು. ಅಗಡಿ ಪವಿತ್ರ ಸ್ಥಳ. ಈ ಸಮಯಕ್ಕಾಗಲೇ ಅದು ಅನೇಕ ವಿಧವಾಗಿ ಪ್ರಖ್ಯಾತಿಯನ್ನು ಪಡೆದಿತ್ತು. ಈ ಕಾಲದಲ್ಲಿಯೇ ಅಗಡಿಯಲ್ಲಿ ಅಧ್ಯಾತ್ಮಸಿಂಹಾಸನದ ಸಮ್ರಾಟರಾಗಿದ್ದ ಶ್ರೀ ಶೇಷಾಚಲ ಸದ್ಗುರುಗಳು ಉದಯವಾಗಿದ್ದರು. ಮೂಡಲಪಾಯದ ಭಾಗವತರಾಟಗಳನ್ನು ರಚಿಸುವದರಲ್ಲಿ ಪ್ರಖ್ಯಾತರಾಗಿದ್ದ ಕರಡಪ್ಪನೆಂಬವರು ಇದೇ ಗ್ರಾಮದವರಾಗಿದ್ದು, ಬಾಳಾಚಾರ್ಯರು ಅಗಡಿಗೆ ಬರುವದರೊಳಗಾಗಿ 'ವಿರಾಟಪರ್ವ'ದ ಕಥೆಯನ್ನು ಮೂಡಲಪಾಯದಲ್ಲಿ ಹೃದಯಂಗಮವಾಗಿ ರಚಿಸಿ, ಸವಣೂರು ಪ್ರಾಂತದಲ್ಲಿಯೂ, ಶಿವಮೊಗ್ಗಾ ಜಿಲ್ಲೆಯಲ್ಲಿಯೂ, ಶಿರ್ಸಿ, ಸಿದ್ದಾಪುರ ತಾಲೂಕಗಳಲ್ಲಿಯೂ ಆಡಿಸಿ, ಜಿಸ್ಮಾದ ಲೋಕಕೀರ್ತಿಯನ್ನೂ ವಿಪುಲವಾದ ಧನ ಸಂಗ್ರಹವನ್ನೂ ಮಾಡಿದ್ದರು. ಕರ್ನಾಟಕದಲ್ಲಿಯ ಮೊದಲನೆಯ ಸರ್ಕಸ್ ಈ ಅಗಡಿಯಲ್ಲಿಯೇ ಇದೇ ಕಾಲಕ್ಕೆ ಹುಟ್ಟಿ ಭರದಿಂದ ಸಾಗಿತ್ತು. 'ಬಿದ್ದ' ನೆಂಬ ಹೆಸರಿನಿಂದ ಪ್ರಖ್ಯಾತರಾಗಿದ್ದ ಲಿಂಗಾಯತ ಜಟ್ಟಿ

೧ ವಾಗ್ಭೂಷಣ : ೧೯೨೦ : ಪು. ೨೫

ಯೊಬ್ಬರು ಇದೇ ಕಾಲದಲ್ಲಿ ಇಲ್ಲಿ ಪ್ರಸಿದ್ಧರಾಗಿದ್ದರು. ಇಂಥ ಸಮಯದಲ್ಲಿ ಇಲ್ಲಿಗೆ ಬಾಳಾಚಾರ್ಯರು ಮುಖ್ಯೋಪಾಧ್ಯಾಯರಾಗಿ ಬಂದರು. ಅಗಡಿಯಲ್ಲಿದ್ದಾಗ ಅವರು ಕೇವಲ ಶಾಲೆಯ ಮುಖ್ಯೋಪಾಧ್ಯಾಯರು ಮಾತ್ರವಾಗಿರದೆ, ಇಡೀ ಊರಿನ ಮುಖ್ಯೋಪಾಧ್ಯಾಯರೇ ಆಗಿದ್ದರು.

ಈ ಊರಲ್ಲಿದ್ದಾಗ ಶಾಂತಕವಿಗಳು 'ಚಿತ್ರಸೇನ ಗಂಧರ್ವ', 'ವಿರಾಟಪರ್ವ' ಮೊದಲಾದ ನಾಟಕಗಳನ್ನು ರಚಿಸಿದ್ದಲ್ಲದೆ, ತಾಳಿಕೋಟಿ ಮಹದೇವಭಟ್ಟ, ಕೇಶವಭಟ್ಟ, ಅಮೃತರಾಯ ಮೊದಲಾದ ನಟರ ಸಹಾಯದಿಂದ ಅಗಡಿ, ರಾಣೇಬೆನ್ನೂರು, ಬ್ಯಾಡಗಿ, ಹಾವೇರಿ, ಕರ್ಜಗಿ, ಬಿಲಗಟ್ಟು ಮೊದಲಾದ ಸ್ಥಳಗಳಲ್ಲಿ ಅವುಗಳನ್ನು ಯಶಸ್ವಿಯಾಗಿ ಆಡಿ ತೋರಿಸಿದರು. 'ಮೇಘದೂತ', 'ವಿರಹತರಂಗ', 'ಋತುಸಂಹಾರ' ಎಂಬ ಕಾವ್ಯಗಳೂ, 'ಗಜೇಂದ್ರಮೋಕ್ಷ' ಎಂಬ ಕೀರ್ತನೆಯೂ ಶಾಂತಕವಿಗಳು ಅಗಡಿಯಲ್ಲಿದ್ದಾಗಲೇ ರಚಿತವಾದವು. ಇವುಗಳ ಪ್ರಕಟಣೆಗೆ ಬಹದೂರ ದೇಸಾಯಿ ನಾಗನಗೌಡರೂ, ಚಿದಂಬರಗೌಡರೂ ಸಹಾಯಕರಾದರು.

"ಸಕ್ಕರಿಯಪ್ಪಾ ನಿಜವಾಗಿಯೂ ಇದು ಸಕ್ಕರಿ"!

ಶಾಂತಕವಿಗಳು ಅಗಡಿಯಲ್ಲಿ ವಾಸವಾಗಿದ್ದಾಗ ನಡೆದ ಇನ್ನೊಂದು ಘಟನೆಯನ್ನು ವಿವರಿಸಬೇಕು. ಅಗಡಿಯಲ್ಲಿದ್ದಾಗ ಶಾಂತಕವಿಗಳು ನಾಸೀಪುಡಿ ಪಾರ್ವತಿ ಎಂಬುವಳ ಅಂಗಡಿಯಲ್ಲಿ ಕೆಲಕಾಲ ಕುಳಿತಿರುತ್ತಿದ್ದರು. ಅಲ್ಲಿಯೇ ಎಷ್ಟೋ ಸಲ ತಮ್ಮ ಅನೇಕ ಕವನಗಳನ್ನು ಹಾಡುತ್ತ ಕುಳಿತುಕೊಳ್ಳುತ್ತಿರುವುದೂ ಇದ್ದಿತು. ಹೀಗೆ ಒಂದು ಸಲ ಕುಳಿತಿದ್ದಾಗ, ಮಹಾಯೋಗಿಗಳೆಂದು ಹೆಸರಾದ ಶಿಶುನಾಳ ಶರೀಫ ಸಾಹೇಬರು ಅಗಡಿಗೆ ಬಂದರು. ಅಗಡಿಗೆ ಬಂದ ಕೂಡಲೇ ಶೇಷಾಚಲ ಸದ್ಗುರುಗಳ ದರ್ಶನವನ್ನು ಪಡೆದು ಪೇಟೆಯಲ್ಲಿ ಬರುತ್ತಿರುವಾಗ ನಾಸೀಪುಡಿ ಪಾರ್ವತಿಯ ಅಂಗಡಿಯಲ್ಲಿ ಉಲ್ಲಾಸದಿಂದ ಪದಗಳನ್ನು ಹೇಳುತ್ತ ಕುಳಿತಿದ್ದ ಶಾಂತಕವಿಗಳ ಕಾವ್ಯಪ್ರತಿಭೆಗೂ ಸಂಗೀತಕ್ಕೂ ಪ್ರಸನ್ನರಾಗಿ ಶಾಂತಕವಿಗಳ ಹತ್ತಿರ ಬಂದು ಕುಳಿತುಕೊಂಡು ಆ ಹಾಡುಗಳನ್ನೆಲ್ಲಾ ಕೇಳಿದರು. ಹಾಡುಗಳನ್ನು ಕೇಳಿಯಾದ ಮೇಲೆ ಶರೀಫ ಸಾಹೇಬರು ಶಾಂತಕವಿಗಳನ್ನು ಕುರಿತು, "ಇವರು ಯಾರು?" ಎಂದು ಕೇಳಿದರು. ಆಗ ಸುತ್ತಲಿನವರು "ಇವರು ಬಾಳಾಚಾರ್ಯ ಸಕ್ಕರಿ ಉರ್ಫ ಶಾಂತಕವಿ" ಎಂದು ಹೇಳಿದರು. ಇದನ್ನು ಕೇಳಿ ಹರ್ಷನಿರ್ಭರರಾದ ಶರೀಫ ಸಾಹೇಬರು ಪ್ರಸನ್ನಚಿತ್ತರಾಗಿ "ಇದು ಸಕ್ಕರಿಯಪ್ಪಾ, ನಿಜವಾಗಿಯೇ ಇದು ಸಕ್ಕರಿ" ಎಂದು ಉದ್ಗಾರ ತೆಗೆದು ಶಾಂತಕವಿಗಳನ್ನು ಬಿಗಿಯಾಗಿ ಅಪ್ಪಿಕೊಂಡರು. ಇಂಥ ಪ್ರಾಸಾದಿಕ ಕವಿಗೆ ಅಗಡಿಯ ಜನತೆ ಪಟ್ಟಿ ಕೂಡಿಸಿ, ಒಂದು ಮನೆಯನ್ನೂ ಒಂದು ಹೊಲವನ್ನೂ ಕೊಡಿಸಿದ್ದರಲ್ಲಿ ಆಶ್ಚರ್ಯವಿಲ್ಲ.

ಶಾಂತೇಶವಿಠ್ಠಲ ಮುದ್ರಿಕೆ :

ಬಾಳಾಚಾರ್ಯ ಸಕ್ಕರಿಯವರ ಕಾವ್ಯನಾಮ 'ಶಾಂತಕವಿ'. ಅವರ ಪ್ರತಿ ರಚನೆಯೂ 'ಶಾಂತೇಶ', 'ಶಾಂತವಿಠ್ಠಲ' ಎಂದು ಮುಗಿಯುತ್ತದೆ. ಈ 'ಶಾಂತವಿಠ್ಠಲ' ಕಾವ್ಯಮುದ್ರಿಕೆ ಹೇಗೆ ಬಂದಿತು? ೧

---

೧ "ಶಾಂತಕವಿಗಳಿಗೆ ಪೂಜ್ಯರಾದ ಶ್ರೀ ಕಿತ್ತೂರ ಶಾಂತಪ್ಪನವರು ಕನ್ನಡ ಕವಿತಾ ಪಂಡಿತರು... ಶಾಂತಕವಿಗಳಿಗೆ ಕವಿತಾಸ್ಫೂರ್ತಿಯನ್ನು ಕೊಟ್ಟವರೂ ಇವರೇ" ಎಂಬ ಆಲೂರ ವೆಂಕಟರಾಯರ ಒಂದು ಹೇಳಿಕೆಯಿಂದ (ವಾಗ್ಭೂಷಣ ೧೯೫೦ ಪು. ೧೪) ಶಾಂತವಿಠ್ಠಲ ಎಂಬ ಮುದ್ರಿಕೆ ಕಿತ್ತೂರ ಶಾಂತಪ್ಪನವರ ನೆನಹಿಗಾಗಿ ಶಾಂತಕವಿಗಳಿಂದ ಸ್ವೀಕೃತವಾಯಿತೆಂಬ ಅಭಿಪ್ರಾಯವೂ ಇದೆ. ಆದರೆ ಅದನ್ನು ಸಮರ್ಥಿಸುವ ಯಾವ ಆಧಾರವೂ ದೊರಕಲಿಲ್ಲ. ಬುರವರಿ ಶೇಷಗಿರಿರಾಯರು ಚೆನ್ನಬಸಪ್ಪನವರ ಬಗೆಗೆ ಹೇಳಿದ ಹಾಗೆ ಶಾಂತಕವಿಗಳು ಹೇಳಿಲ್ಲ. ಶಾಂತೇಶ ಎಂದು ಬಂದಲ್ಲೆಲ್ಲ ತಮ್ಮ ಕುಲದೇವತೆಯನ್ನೇ ಸೂಚಿಸಿದ್ದಾರೆ.

ಸಾತೇನಹಳ್ಳಿಯ ಶಾಂತೇಶ, ಕದರಮಂಡಲಿಗೆಯ ಕಾಂತೇಶ, ಶಿಕಾರಿಪುರದ ಭ್ರಾಂತೇಶ ಈ ಮೂವರು ಪ್ರಸಿದ್ಧರಾದ ಹನುಮಂತದೇವರು. ಈ ಸಾತೇನಹಳ್ಳಿಯ ಹನುಮಂತದೇವರು ಸಕ್ಕರಿ ಮನೆತನದ ಕುಲದೈವತ. ಇಲ್ಲಿಯ ಹನುಮಂತದೇವರ ದೇವಾಲಯದ ಮುಂಭಾಗವನ್ನು ಶಾಂತಕವಿಗಳ ಪೂರ್ವಜರಾದ ಶ್ರೀನಿವಾಸತೀರ್ಥರೇ ಯಾವುದೋ ಒಂದು ರೋಗದ ನಿವಾರಣೆಯಾದುದರಿಂದ ಕಟ್ಟಿಸಿದರೆಂದು ಐತಿಹ್ಯವಿದೆ. ಸಾತೇನಹಳ್ಳಿ ಧಾರವಾಡ ಜಿಲ್ಲೆಯ ಹಿರೇಕೆರೂರಿನ ಹತ್ತಿರವಿದೆ. ಇಂದು ಶಾಂತೇಶ ಕ್ಷೇತ್ರವೆನಿಸಿದ ಈ ಹಳ್ಳಿ ಮೊದಲು ವಿಶ್ವಂಭರ ಕ್ಷೇತ್ರವೆನಿಸಿದ್ದಿತು. ವಿಶ್ವಂಭರ ಗಣಪತಿ ಈ ಕ್ಷೇತ್ರದ ಅಧಿದೈವವಾಗಿದ್ದ. ಇಲ್ಲಿ ಹೊಯ್ಸಳ ಕಾಲದ ಕಟ್ಟಡವಿದೆ. ಆ ಕಾಲದ ಶಿಲಾಲೇಖವಿದೆ. ಈ ವಿಶ್ವಂಭರ ಗಣಪತಿಯ ಎದುರಿಗಿದ್ದ ಹುತ್ತದಲ್ಲಿ ಶಾಂತೇಶ ಪ್ರಾಣದೇವರು ಹುಟ್ಟಿದನೆಂದೂ, ವ್ಯಾಸರಾಯರ ಗುರುಗಳಾದ ಸುಬ್ರಹ್ಮಣ್ಯತೀರ್ಥರು ಈ ಕ್ಷೇತ್ರಕ್ಕೆ ಬಂದಾಗ ಅವರ ಸ್ವಪ್ನದಲ್ಲಿ ತನ್ನ ಪ್ರತಿಷ್ಠಾಪನೆ ಅವರಿಂದ ಆಗಬೇಕೆಂದು ಹೇಳಿದುದಾಗಿಯೂ, ಹಾಗೆ ಅವರು ಈ ಮೂರ್ತಿಯನ್ನು ಪ್ರತಿಷ್ಠಾಪಿಸಿದರೆಂಬುದಾಗಿಯೂ ಉಲ್ಲೇಖವಿದೆ.[೧] ಅಂದಿನಿಂದ ವಿಶ್ವಂಭರ ಕ್ಷೇತ್ರ, ಶಾಂತೇಶ ಕ್ಷೇತ್ರ, ಶಾಂತೇಶನ ಹಳ್ಳಿಯಾಗಿ ಸಾತೇನಹಳ್ಳಿ ಎಂದಾಯಿತು. ಈ ಶಾಂತೇಶನಿಗೆ ಅನೇಕ ರಾಜಮಹಾರಾಜರೂ ಭಕ್ತಿ ಗೌರವಗಳನ್ನು ತೋರಿಸಿದ್ದಾರೆ. ಪೆನಗೊಂಡೆಯ ರಾಜಾಧಿರಾಜ ಪರಮೇಶ್ವರವೀರಪ್ರತಾಪ ಶ್ರೀರಂಗರಾಜ, ಕೆಳದಿಯ ಇಮ್ಮಡಿ ಶ್ರೀ ಸದಾಶಿವನಾಯಕ, ಇಕ್ಕೇರಿಯ ಮಾಂಡಲಿಕ ನಾಯಕರು ಹಾಗೂ ಬನವಾಸಿಯ ಅರಸರು ಈ ದೇವರಿಗೆ ಅನೇಕ ದತ್ತಿ-ಕಾಣಿಕೆಗಳನ್ನು ಕೊಟ್ಟಿದ್ದಾರೆ. ಬನವಾಸಿ ರಾಜರ ಕಾಲದಲ್ಲಿ ಮುದಕೊಂಡನಕೊಪ್ಪ ಮತ್ತು ಹನುಮಸಮುದ್ರಗಳು ಉಂಬಳಿಯಾಗಿ ದೊರಕಿವೆ. ವಿಕ್ಟೋರಿಯಾ ರಾಣಿಯವರ ಜಾಹೀರುನಾಮೆಯ ಮೂಲಕವೂ (೧೮೫೮) ಶಾಂತೇಶನ ಸೇವಾಕಾರ್ಯಗಳಿಗೆ ಅನುಕೂಲ ಮಾಡಿಕೊಟ್ಟದ್ದುಂಟು.[೨]

ಹೀಗಾಗಿ, ಇಷ್ಟು ಪ್ರಾಚೀನವೂ ಭವ್ಯಪರಂಪರೆಯುಳ್ಳದ್ದೂ, ತಮ್ಮ ಮನೆತನಕ್ಕೆ ಇಷ್ಟು ಸಮೀಪವಾಗಿದ್ದುದೂ, ತಮ್ಮ ಕುಲದೈವವೂ ಆಗಿದ್ದ ಶಾಂತೇಶನ ಹೆಸರಿನಲ್ಲಿ ಶಾಂತಕವಿಗಳು ಕಾವ್ಯ ರಚನೆ ಮಾಡಿದ್ದರೆ ಆಶ್ಚರ್ಯವೇನೂ ಇಲ್ಲ.

ಕವಿ ಕಾವ್ಯ ಪ್ರಶಂಸೆ :

೧೮೫೬ ರಿಂದ ೧೯೨೦ ರ ವರೆಗೆ ೬೪ ವರ್ಷಗಳ ಸುದೀರ್ಘವಾದ ಜೀವಿತಕಾಲದಲ್ಲಿ ಶಾಂತಕವಿಗಳು ಅನೇಕ ಕಷ್ಟ ನಿಷ್ಠುರಗಳನ್ನು ಎದುರಿಸಿದರು. ವರಿಷ್ಠಾಧಿಕಾರಿಗಳ ಪುರಸ್ಕಾರವಿಲ್ಲದೆ, ಇದ್ದ ಸ್ಥಳದಲ್ಲಿಯೇ ಹಾಗೆಯೇ ಉಳಿದರು. ಮನೆತನದ ಹೊಡೆದಾಟದ ಮೂಲಕ ಇದ್ದ ಮನೆಯನ್ನೂ ಬಿಟ್ಟು ಹೊರಬಂದರು. ಸಾಧ್ವಿಯಾದ ಹೆಂಡತಿಯನ್ನು ತಮ್ಮ ವೃದ್ಧಾಪ್ಯದಲ್ಲಿ ಕಳೆದುಕೊಂಡು ಮೊದಲಿನ ತಮ್ಮ ಶೀಘ್ರಕೋಪಿತ್ವವನ್ನೂ ಸಿಡುಕು ಸ್ವಭಾವವನ್ನೂ ತ್ಯಜಿಸಿದರು. ಹಾಲಿನಲ್ಲಿ ಹಾಲಾದರು. ನೀರಿನಲ್ಲಿ ನೀರಾದರು. ಜೀವನದ ಅಂತ್ಯಕಾಲದಲ್ಲಿಯಾದರೂ ತಮಗೆ ಒಳ್ಳೆಯ ರಾಷ್ಟ್ರಾಭಿಮಾನಿಗಳಾದ ಸ್ನೇಹಿತರು ಸಿಕ್ಕರೆಂದು ಹರ್ಷಪಟ್ಟರು. ಕನ್ನಡದ ಕೈಂಕರ್ಯವೇ ತಮ್ಮ ಜೀವಿತದ ಮಣಿಹವೆಂದು ಅನೇಕ ಗ್ರಂಥಗಳನ್ನು ರಚಿಸಿದರು. " ಎಲ್ಲಿರುವದಭಿಮಾನ ಕನ್ನಡಿಗರೇ ಹೇಳಿ ಸುಳ್ಳೆ ಬತಬಡಿಸುವಿರಿ ಸಭೆಗಳಲ್ಲಿ " ಎಂದು ಅಭಿಮಾನಶೂನ್ಯರಾದ ಕನ್ನಡಿಗರಿಗೆ ಛೀ ಹಾಕಿದರು. " ಕನ್ನಡದ ದಾಸಯ್ಯ ಬಾಗಿಲಿಗೆ ಬಂದಿಹನು " ಎಂದು ಕನ್ನಡಕ್ಕಾಗಿ ಭಿಕ್ಷೆಯನ್ನು ಬೇಡಿ,

---

೧ ಕರ್ಮವೀರ : ೧-೧೨-೬೮ : ಪು. ೪೦.

೨ ಅದೇ : ಪು. ೪೦.

ರಾಷ್ಟ್ರಭಿಕ್ಷುಕರಾದರು. "ಕನ್ನಡ ನಾಡಿನ ಕನ್ನಡ ಮಾತಿನ ಕನ್ನಡ ಮಾನಿಸನೈ ನಾನು" ಎಂದು ಸಾರಿದರು. ತಮ್ಮ ಜೀವಿತಕಾಲದಲ್ಲಿ ತಮ್ಮ ಬಾಳಿನ ಧ್ಯೇಯ ಬಹುಮಟ್ಟಿಗೆ ಯಶಸ್ವಿಯಾಯಿತೆಂದೂ ಆನಂದಪಟ್ಟರು. ಈ ಆನಂದದ ಭರದಲ್ಲಿಯೇ–

ವೇರವಣಿಗೆ ಮಿಗಿಲಾಯ್ತು ! ಸಾಹಸವು ಹಿರಿದಾಯ್ತು
ಧರೆಯೊಳುದಿಸಿದ ಕಾರ್ಯ ಸಫಲವಾಯ್ತು !!
ಪರಮಕರ್ನಾಟಕದ ಕೀರ್ತಿ ವಿಸ್ತರವಾಯ್ತು
ಹರುಷನಿರ್ಭರವಾಯ್ತು ಶಾಂತೇಶಗೆ–

ಎಂಬ ಧನ್ಯತಾಭಾವದಿಂದ ತಮ್ಮ ಇಹಲೋಕ ಯಾತ್ರೆಯನ್ನು ಮುಗಿಸಿದರು.

ಕವಿ ವಿಷಯಕವಾಗಿ ವಿರಚಿತವಾದ ಅನೇಕ ಕವನಗಳು :

ಬದುಕಿದ್ದಾಗ ಕವಿಯನ್ನು ಮನೆಯಿಂದ ಹೊರಗೆ ಹಾಕಿದ ಜನ, ಅವನು ತೀರಿಕೊಂಡಾಗ ಮಹಲು ಕಟ್ಟಲು ಮುಂದಾಗುತ್ತಿರುವುದು ಎಂದಿನಿಂದಲೂ ನಡೆದುಕೊಂಡು ಬಂದ ರೀತಿ. "ಕವಿ ಪೊರಗಿರೆ, ಕೀಳ್ ಒಳಗಿರೆ, ತುರುಗಮುಖವೊ ನೃಪಮಂದಿರವೊ !" ಎಂದು ಕನ್ನಡ ಕವಿಗಳು ಕೇಳಿದ್ದುಂಟು. "ಅರಸಂ ಮೂರ್ಖಂ; ಸಚಿವರ್ ಸರಸ್ವತೀ ದ್ರೋಹರ್" ಇದು ಸರಸ್ವತೀ ಪುತ್ರರ ಹಣೆಬರಹ. ತಾನು ಸಿಗರೇಟಿನ ತುಂಡನ್ನು ಒಗೆದಲ್ಲಿ ಸ್ಮಾರಕವನ್ನು ಕಟ್ಟಿಸಲು ಜನ ಧಾವಿಸುತ್ತಾರೆಂದು ದಿವಂಗತ ಕೈಲಾಸಂ ಅವರು ಹೇಳುತ್ತಿದ್ದರು. "People will rush to build a cenotaph where I have thrown the stump of my cigarette." ಎಂದು ಅವರು ಹೇಳುತ್ತಿದ್ದರು. ಆದರೂ, ಶಾಂತಕವಿಗಳಿಗೆ ಬದುಕಿದ್ದಾಗ ಸಾರಸ್ವತ ಪುತ್ರರಿಂದ ಕೆಲಮಟ್ಟಿನ ಮನ್ನಣೆಯಾದರೂ ದೊರಕಿತು. ಅವರು ತೀರಿಕೊಂಡಾಗ ಹತ್ತಾರು ಜನ ಅವರ ಬಗೆಗೆ ಪ್ರಶಂಸಾಪರವಾದ ಕವಿತೆಗಳನ್ನು ಬರೆದರು.

ಶಾಂತಕವಿಗಳ ಸಮಕಾಲೀನರೂ ಮತ್ತು ಸ್ವತಃ ಖ್ಯಾತಕವಿಗಳೂ ಆಗಿದ್ದ ಕಾವ್ಯಾನಂದ ಪುಣೇಕರ ಅವರು

ಮಂಗಲನಾಮರು ಬಾಳಲಿ
ಇಂಗಿದರೂ ಕಾಯ ಕಾಳಕರ್ದಮದಲ್ಲಿ
ಶೃಂಗಾರ ಕವನ ಕಾಮಿನಿ
ಯಿಂಗಿತವಂ ಬೈಲಿಗಿಡಲು ಜಯದೇವರಿವರ್

ಸಕ್ಕರೆ ಬಾಳಾಚಾರ್ಯರು
ಸಕ್ಕರೆಯಂ ಮಿಕ್ಕುವಂಥ ಕವಿತೆಯ ಮಾಡಿ
ಸಕ್ಕರೆವಿದವನ್ವರ್ಥಕ
ವಕ್ಕರೆಯಿಂ ಮಾಡಿದ ತೋರಿದ ಪೂರ್ವಜರೋಲ್

–ಎಂದು ಹೇಳಿದರೆ, ೧೯೨೦ ರ 'ವಾಗ್ಭೂಷಣ' ದಲ್ಲಿ 'ವಿದ್ಯಾರ್ಥಿ' ಎಂಬವರು ಹೀಗೆ ಬರೆದರು :

ಎಷ್ಟು ಕಷ್ಟವ ಸೈರಿಸಿದಿ ನೀ
ನೆಷ್ಟು ಸಲಹಿದಿ ಮಾತೃಭಾಷೆಯ
ಶಿಷ್ಟವಂದ್ಯನೆ ನಿನ್ನ ನಾಮವು ಸಾರ್ಥವಾಗಿಹುದು

ಅದೇ ಪತ್ರಿಕೆಯಲ್ಲಿ ' ಸಕ್ಕರಿಯು ಸವಿಯು ಸೊಲ್ಲಿನ ಶಾಂತಕವಿಗಳಿಗೆ ' ಎಂಬ ಕವಿತೆಯಲ್ಲಿ ಹೀಗೆ ಹೇಳಿದೆ :

ಎದ್ದರೆ ಕನ್ನಡ ಕುಳಿತರೆ ಕನ್ನಡ ನುಡಿದರೆ ಕನ್ನಡವು
ಹೃದ್ಯವು ಕನ್ನಡ ಉದ್ಯಮ ಕನ್ನಡ ಕನ್ನಡ ಕನ್ನಡವು
ಕನಸು ಮನಸಿನೊಳು ಕನ್ನಡ ಕನ್ನಡ ನಿದ್ದೆಯು ಕನ್ನಡವು
ತಿನಸು ಕನ್ನಡವು ಜೀವಿತ ಕನ್ನಡ ಎದ್ದರು ಕನ್ನಡವು

ಈ ರೀತಿ ಕನ್ನಡವೇ ಅವರ ಉಸಿರಾಗಿ ಬಾಳಿದರವರು.

ಶಾಂತಕವಿಗಳು ಕನ್ನಡಕ್ಕಾಗಿ ಗೈದ ಸೇವೆಯನ್ನು ' ಶಾಂತಕವಿಗಳು ' ಎಂಬ ಇನ್ನೊಂದು ಕವಿತೆ ಹೀಗೆ ವರ್ಣಿಸಿದೆ :

ಪರಚಕ್ರಗಳ ಕ್ರೂರ ಕೊರ್ಗಣೆಗಳಿಂದೊಡೆದು
ಸರಸ ಕರ್ನಾಟಕದ ಹೃದಯ ಕಮಲವು ಬಿರಿದು
ಹರಿದು ಚೂರಾಗಿ, ಹಾಯ್ ! ಕೊರಗಿಕೊಂಡಿತು ಕುಸುಮ ಸುಕುಮಾರ ಶಿಶುವಿನಂತೆ
ಕರುಣದಿಂ ಕೂಡಿದಂತಹ ಸರಸನುಡಿಗಳನು
ಕರುಳಿನಿಂ ತೆಗೆದು ಹಾಡುವರಾರು ? ಹಾ ! ನಮ್ಮ
ವರ ಪಂಪ ರನ್ನ ಲಕ್ಷ್ಮೀಶ ಕವಿಗಳು ಪೋದರೆಂದು ಜನ ಮರುಗುತಿರಲು

ಬೆರಗಾಗಿ ಬಣಗು ಪರಭಾಷೆಯೊಳಗಿನ ನುಡಿಗೆ
ಮರೆತು ತಾಯ್ತಂದೆಗಳ ಮಧುಮಧುರ ನುಡಿಗಳನು
ಬಿರಸು ಕನ್ನಡದ ನುಡಿಗಳ ಕಾವ್ಯಕಾಡೆಂದು ಹಳಿಯುವವರನ್ನು ಜರೆದು
ಸರಸ ತಿಳಿಗನ್ನಡದ ಸೌಂದರ್ಯವನು ಸುರಿಸಿ
ಮೆರೆಯುತಿರುವಂಥ ನುಡಿಗಳ ಹಾಡುಗಳನು ಬಲು
ವರ ಕಂಠದಿಂದ ಸುರಿಯುತ್ತ ಜಗದೊಳಗೆ ನೀ ಹೊರಟೆಯೊ ಶಾಂತಕವಿಯೇ

ಕಲ್ಲುಕಲ್ಲಾದ ಕನ್ನಡದ ನುಡಿಯನು ಕಟೆದು
ಸಲ್ಲಲಿತ ಸೊಗಸು ಸುರಿಯುವ ಭಾಮಿನಿಯ ಹಾಗೆ
ಕೊಲ್ಲುತದರೊಳಗೆ ತೀವಿದ ವಿಪರಸವನ್ನು ಸಂಜೀವನಿಯನು ಸುರಿದು
ನಿಲ್ಲು ನಿಲ್ಲುತೆ ನಡೆವ ಕಾವ್ಯಕಾಮಿನಿಯನ್ನು
ಬಿಲ್ಲಿನೊಳು ಶರಪಟ್ಟದಿಯ ಕುಸುಮಬಾಣವನು
ಮೆಲ್ಲಮೆಲ್ಲನೆ ತೊಟ್ಟು ಹೊಡೆದು ಹಚ್ಚಿದೆಯಲ್ಲ ಸೊಬಗಿನಿಂದಾಡಲಿಕ್ಕೆ

ನಮ್ಮದೀ ಭರತಭೂಮಿಯು ! ನಮ್ಮದೀ ನಾಡು
ನಮ್ಮ ಕರ್ನಾಟಕದ ನಾಡುನುಡಿಯೇ ನುಡಿಯು
ನಮ್ಮ ದೇಶದ ಧೀರವೀರ ಬಾಂಧವರೊಳಗೆ ಹರಿಯುತಿಹುದೀಗ ಬೆಳಕು
ನಮ್ಮ ಕರ್ನಾಟಕವು ನಮ್ಮ ಕನ್ನಡ ನುಡಿಯು
ನಮ್ಮ ಬಾಂಧವರೊಳಗೆ ಜನಿಸಿದರು ಬಲುಮೆಯಿಂ
ನಮ್ಮ ದೇಶದ ದಾಸ್ಯಪಾಶಗಳನೀಡಾಡಿ ಶೌರ್ಯದಿಂ ಮಡಿಯುವವರು

ಈಯೆಲ್ಲ ಕವಿಗಳು ಶಾಂತಕವಿಗಳ ಪ್ರಭಾವಕ್ಕೆ ಒಳಗಾದವರು; ಅವರ ಪ್ರತಿಭಾಸಾಮರ್ಥ್ಯದಿಂದ ಪುಲಕಿತರಾದವರು. ಆದರೆ, ಇವರೆಲ್ಲರಕಿಂತ ಹೆಚ್ಚು ಹೊಸಗನ್ನಡದ ವರಕವಿಗಳಾದ ದ. ರಾ. ಬೇಂದ್ರೆ ಅವರೇ ಆ ಕಾಲಕ್ಕೆ ಶಾಂತಕವಿಗಳ ಕಾವ್ಯಪ್ರತಿಭೆಯಿಂದ ಮುಗ್ಧರಾಗಿದ್ದರೆಂದು ಹೇಳಿದ ಮೇಲೆ ಶಾಂತಕವಿಗಳ ಕಾವ್ಯಪ್ರಭಾವದ ಬಗೆಗೆ ಬೇರೆ ಹೇಳಬೇಕೆ? ಶಾಂತಕವಿಗಳ ನಿಧನಾನಂತರ ದ. ರಾ. ಬೇಂದ್ರೆಯವರು ೧೯೨೦ ನೆಯ ಇಸವಿಯ ವಾಗ್ಭೂಷಣವನ್ನು ಶಾಂತಕವಿಗಳ ವಿಶೇಷ ಸಂಚಿಕೆಯೆಂದು ಪ್ರಕಟಿಸುವಲ್ಲಿ ಮುಂದಾದರು. ಶಾಂತಕವಿಗಳ ಹೆಸರಿನಿಂದ 'ಶಾಂತೇಶ ವಾಚನಾಲಯ' ವನ್ನು ಪ್ರಾರಂಭಿಸುವ ಹೊಣೆ ಹೊತ್ತರು. ಅದಕ್ಕೂ ಹೆಚ್ಚು ಶಾಂತಕವಿಗಳ ವ್ಯಕ್ತಿತ್ವವನ್ನು ಕುರಿತು ಸುಂದರವಾದ ಪದ್ಯವನ್ನು ಬರೆದು ಒಬ್ಬ ಹಿರಿಯ ಕವಿ, ಇನ್ನೊಬ್ಬ ಹಿರಿಯ ಕವಿಗೆ ತೋರಬೇಕಾದ ಕಾವ್ಯಮನ್ನಣೆಯನ್ನು ತೋರಿಸಿದರು. ಕವಿ, ನಾಟಕಕಾರ, ಪಂಡಿತ, ವಾಗ್ಮಿ, ಕೀರ್ತನಕಾರರಾದ ಶಾಂತಕವಿಗಳು ವೈಕುಂಠವಾಸಿಗಳಾದಾಗ ಅವರನ್ನು ಹೀಗೆ ನೆನೆದರು :

ಶಾಂತಕವಿಗಳ ವಿಶ್ರಾಂತಿ :

ನಟ ತೆರೆಯ ಮರೆಯಾದ ಆಟ ತೀರಿಸಿಕೊಂಡು
ಭಟ ಸಮರದಿಂದ ತೆರಳಿದ ಅರಸನರಮನೆಗೆ
ಪಟು ಪಾಡುಗಾರ ತುಟಿ ಮುಚ್ಚಿದನು ನಾಡು ನುಡಿಗಳ ಹಾಡುಗಳನು ಹಾಡಿ
ಅಟಮಟದ ಮಾತಲ್ಲ ನಾಡೆ ನಾರಾಯಣನು
ದಿಟವಾಗಿ ನುಡಿಯೆ ಸಿರಿ ಎಂದು ಕೀರ್ತನೆಗೈದು
ಹಟದಿ ಕೀರ್ತನಕಾರ ಬೆವರನೊರಿಸಲು ಹಿಂದೆ ಸರಿದ ವಿಶ್ರಾಂತಿಗಾಗಿ ॥

× × × ×

ಮುಪ್ಪಾಗಿ ಜಿರಿಯಾದ ಬಟ್ಟೆಯನು ಬೀಸಾಡಿ
ದಪ್ಪನ್ನ ಹೊಸದೊಡಿಗೆಯನು ಬೇಡಲಂಬರಕೆ
ಸಪ್ಪಗಿನ ನುಡಿಗಾಗಿ ಉಪ್ಪು ತರಹೋಗಿಹರು ರಸವಂತಿಯಿರುವ ಕಡೆಗೆ
ಸಿಪ್ಪಿಯನೆ ಬಹುದಿವಸ ಚೀಪಿ ಬೇಸರಬಟ್ಟು
ಅಪ್ಪನಲಿ ಹೊಸಹಣ್ಣು ಪಡೆಯಹೋಗಿಹರಿಂತು
ತಪ್ಪದೇ ತಿರುಗುತಿಹರೆಂದು ತಿಳಿಯಲಿ ಜನರು ಬೆಳವೊಲದ ನಾಡಿಗಾಗಿ ॥ [೧]

ಶಾಂತಕವಿಗಳ ಕೃತಿಗಳು :

ವಿರಹತರಂಗ (೧೮೮೫) :

ಇದು ಸಂಸ್ಕೃತದಲ್ಲಿ ಜಯದೇವ ಕವಿಯು ರಚಿಸಿದ 'ಗೀತ ಗೋವಿಂದ' ವನ್ನು ಆಧರಿಸಿ ಪದ್ಯರೂಪದಲ್ಲಿ ರಚಿತವಾಗಿದೆ. "ಮೂಲ ಗ್ರಂಥದಲ್ಲಿಯ ಏನಿಕೇ ಅಂಶವನ್ನು ಕೆಲಕೆಲ ಕಡಿಗೆ ಬಿಟ್ಟು ಅದರ ಬದಲು ಕೆಲವು ಹೊಸ ಕಲ್ಪನೆ" ಯನ್ನು ಹಾಕಲಾಗಿದೆ.

ಇದರಲ್ಲಿಯ ಕಥಾಭಾಗವೆಂದರೆ– "ಶ್ರೀಕೃಷ್ಣ ಪರಮಾತ್ಮನು ಗೋಪಿಕಾ ಸ್ತ್ರೀಯರನ್ನು ಕೂಡಿಕೊಂಡು ಯಮುನಾತೀರಕ್ಕೆ ಒಂದು ದಿವಸ ಹೋಗಿದ್ದನು. ಅಲ್ಲಿ ಪ್ರಾಣಪದಕಳಾದ ರಾಧಿಕೆಯನ್ನು

೧ ಸಖೀಗೀತ : ೧೯೬೦ : ಪು. ೨೭.

ಬಿಟ್ಟು ಅನ್ಯಸ್ತ್ರೀಯರ ಸಂಗತ ಶ್ರೀಹರಿಯು ವಿನೋದ ಮಾಡಲಾರಂಭಿಸಿದನು. ಇದನ್ನು ಕಂಡು ರಾಧಿಕೆಯು ಒಂದು ಕಡೆಗೆ ಮುನಿಸಿನಿಂದ ಹೊರಟು ಹೋಗಿ ಕುಳಿತಳು. ದೇವನಾದರೂ ಅವಳನ್ನು ಮನ್ನಿಸದೆ ತಾನೂ ಒಂದು ಕಡೆಗೆ ಕೂತುಕೊಂಡನು. ಈ ಉಭಯತರೂ ವಿರಹಾಗ್ನಿ ಸಂತಪ್ತರಾಗಿ ವಿಷಾದಗೊಂಡು ತಮ್ಮ ತಮ್ಮ ದೂತಿಯರನ್ನು ಪರಸ್ಪರ ಮಧ್ಯಸ್ಥಿಗೆ ಕಳುಹಿಸಿದರು. ಆ ದೂತಿಯರು ತಮ್ಮ ಚಾತುರ್ಯದಿಂದ ಆಯಾ ಸ್ಥಲಗಳಲ್ಲಿ ಅವರವರ ಸರಸ ಭಾಷಣಗಳನ್ನು ಆಡಿದರು. ನಂತರ ಜನಾರ್ದನನು ಸ್ವತಃ ರಾಧೆಯಲ್ಲಿಗೆ ಹೋಗಿ ಬಹು ಪ್ರಕಾರದಿಂದ ಅವಳನ್ನು ಸಮಾಧಾನಿಸಿ ಸಂತೋಷಪಡಿಸಿ ತಾನು ಆನಂದ ಹೊಂದಿದನು." ೧

ಈ ಗ್ರಂಥ ಧಾರವಾಡದ ಕರ್ನಾಟಕ ಬುಕ್ ಡಿಪೋ ಪ್ರೆಸ್ಸಿನಲ್ಲಿ ಚೆನವೀರ ಫಕೀರಪ್ಪ ಅವರಿಂದ ೧೮೮೫ ರಲ್ಲಿ ಮುದ್ರಿತವಾಯಿತು. ಪುಟಸಂಖ್ಯೆ ೩೪. ಇದರ ಮುದ್ರಣಕ್ಕೆ ಧನಸಹಾಯ ಮಾಡಿದವರು ಬಾಳಾಜಿ ಶೇಷಗಿರ ಅಣೆಗೇರಿಕರ. ಶೈಲಿ ಮಧುರವಾಗಿದೆ; ಲಾಲಿತ್ಯಪೂರ್ಣವಾಗಿದೆ. ಇದಕ್ಕಾಗಿ ಹಲವು ಪದ್ಯಗಳನ್ನು ಉದ್ಧರಿಸಬಹುದು :

ಶಾರದೆಯ ವರ್ಣನೆ :

ಸುರನರೋರಗ ಗರುಡಗಂಧರ್ವ ಕಿಂಪುರುಷ
ಶಿರಮಂಡಿತೋತ್ತಮ ಕಿರೀಟವಜ್ರಪ್ರಭಾ
ಪರಿರಮ್ಯಪಾದಾಂಬುರುಹಯುಗಳೆ ರಮಣೀಯ ವೀಣಾಂಕಶೋಭಾಸ್ವದೇ
ಅರವಿಂದಭವನರಸಿ ಯರುಣಬಿಂಬಾಧರಿಯೆ
ಸುರುಚಿರಸುಧಾಕಲಶಕರೆ ವಿಮಲ ಸುಜ್ಞಾನೆ
ಕರುಣಾಕಟಾಕ್ಷದಿಂದೊಲಿದೆನಗೆ ನಟಿಸೆನ್ನ ರಸನಾಗ್ರದೊಳ್ ಶಾರದೇ

ಜಯದೇವ :

ಹರುಷದಿಂದನುದಿನಂ ವಿಷ್ಣುಪೂಜಾಸಮಯ
ಪರಿಭಕ್ತಿಯಿಂ ತನ್ನ ಪದ್ಮಾವತಿಯೆನಿಸುವ
ತರುಣಿಯಿಂ ಕುಣಿಸುತ್ತ ತಾನು ಗಾನಂಗೈವ ಜಯದೇವ ಕವಿತಿಲಕನೂ
ಸುರಸಪದಲಾಲಿತ್ಯದಿಂದಮರ ಭಾಷೆಯೊಳು
ವಿರಚಿಸಿದ ಗೀತಗೋವಿಂದವೆಂಬುವ ಕೃತಿಯ
ಸುರುಚಿಯಿಂ ಕನ್ನಡಿಗರೆಲ್ಲರ್ಗೆ ಸವಿಸಲ್ಕೆ ನಾನಿದಂ ಕನ್ನಡಿಸುವೆ

ಕವಿಯ ಸ್ವವಿಷಯ :

ಸುರಗಣಾಧೀಶ್ವರನ ಪದೋಪರಿಪಾಲಕನ
ನಿರುಪಮಗುಣಾಬ್ಧಿ ಹರಿ ನಿರಂಜನವಂದಿತನ
ಸುರುಚಿರ ಶ್ರೀರಾಮಕೃಷ್ಣರಾಯನಾರತಿಯು ಪರಿಣಮಿಸಿ ಶಶಿಧರನ
ಕರುಣದಿಂದುತ್ಕರ್ಷ ಹರ್ಷದೊಳಾಮ್ನಸ್ತಕುಲ
ವರವಿಪ್ರಸದ್ವತ್ಸ ಗೋತ್ರಜಾತ್ಮಜನು
ವಿರಚಿಸಿದನೀ ಕೃತಿಯ ಚಾಣಾಕ್ಷ್ಯನೆಂಬುವ ಜಯದೇವನಾಥಾಮಾದಿದ

೧ ವಿಜಯ ಶಂಕರ : ೧೮೮೫ : ಪು. ೩.

ಸುರಪುರದ ಲಕ್ಷ್ಮೀಶ ಕವಿಸಾರ್ವಭೌಮನೋಲ್
ಸಿರಿಯರಸನ ಕೃಪೆಯು ಲವದನಿಸುಮಿಲ್ಲೆನಗೆ
ಗಿರಿಜಾಮನೋಹರನ ದಯೆಯಿಲ್ಲವಾರಕ್ಕರದ ಕವಿಯು ಕೆರೆಯಿಂದಲಿ
ಪರಮಗದುಗಿನ ವೀರನಾರಾಯಣನ ಭಕ್ತ
ವರಕುಮಾರವ್ಯಾಸ ಕವಿಚಕ್ರವರ್ತಿಯೋಲ್
ಬಿರುದಾವಳಿಗಳಿಲ್ಲವೆಂದೆನ್ನ ಕಾವ್ಯಮಂ ಪ್ರೀತಿಸದೆ ರಸಿಕಾವಲಿ

ದಧಿಯೊಳುಂಟಾದಡೇಂ ಮಾಧುರ್ಯವದರಿಂದ
ಅಧಿಕಮಧುರಸದ ಮಾಧುರ್ಯವದರಿಂದ
ಅಧಿಕರುಚಿಕರವೆಲ್ಲೆ ದ್ರಾಕ್ಷಾರಸವು ಸುರತಸಮರದೊಳ್ ಸುಂದರಿಯಳಾ
ಅಧರಸುಧಾರಸವದಲ್ತೆ ಮಿಗಿಲದರಿಂದ
ಅಧಿಕವೀ ನವಕಾವ್ಯಕರ್ಣಮಂಜುಳಮಾದ
ಮೃದುಮಧುರಪದಪುಂಜ ರಂಜನಾಮೃತಸಾರವೆನಿಸಿರದೆ ರಸಿಕರಿಗಹಾ

ವತ್ಸಲಾಹರಣ (?)

ಮುಖಪುಟ ದೊರಕದ್ದರಿಂದ ಈ ನಾಟಕ ನಿಶ್ಚಿತವಾಗಿ ಎಂದು ಪ್ರಕಟವಾಯಿತೆಂದು ಹೇಳಲಿಕ್ಕಾಗುವದಿಲ್ಲ. ಒಂದು ನೂರು ಪುಟದ ಈ ನಾಟಕ ' ಭಕ್ತಸಂರಕ್ಷಂಗೆ– ಮುಕ್ತ್ಯಂಗನೇಶಂಗೆ– ಶಾಂತೇಶಗೇ– ಜಯ ಮಂಗಲಂ ' ಎಂದು ಮುಗಿಯುತ್ತದೆ.

ಶಾಂತಕವಿಗಳು ಶೃಂಗಾರರಸ ನಿರೂಪಣೆಯಲ್ಲಿ ಎತ್ತಿದ ಕೈ ಎಂಬುದಕ್ಕೆ :

ಮಂಗಲನಾಮರು ಬಾಳಲಿ
ಇಂಗಿದರೂ ಕಾಯ ಕಾಳಕರ್ದಮದಲ್ಲಿ
ಶೃಂಗಾರಕವನಕಾಮಿನಿ
ಯಿಂಗಿತವಂ ಬೈಲಿಗಿಡಲು ಜಯದೇವರಿವರ್ –ಎಂದು

ಕಾವ್ಯಾನಂದ ಪುಣೇಕರರು ಹೇಳಿದರು. ಈ ನಾಟಕದಲ್ಲಿ ಬಂದ ವಾರನಾರಿಯರ ಕೇರಿಯ ವರ್ಣನೆಯೇ ಈ ಶೃಂಗಾರವರ್ಣನೆಗೆ ಸುಂದರ ದೃಷ್ಟಾಂತವಾಗಿದೆ :

" ಶಾಬಾಸ್ ! ಪ್ರಧಾನಾ ! ಈ ಕೌರವೇಶ್ವರನ ಸಂಪತ್ತಿಗೆ ಸರ್ವದಾ ಜಯ ಜಯಕಾರ ವಿರಲಿ ! ಅಹಹಾ ! ಇದು ಪಾತ್ರದವರ ಓಣಿಯಲ್ಲಾ ! ಇಲ್ಲಿ ಬಂದ ಭುಜಂಗನಾಯಕರನ್ನು ಮೋಕ್ಷ ಮಾಡುವ ಕಾಮದೇವನ ಪೂಜಾಪ್ರಾಂತವು. ಇವು ವಾರನಾರಿಯರ ಮಂದಿರಗಳಲ್ಲ. ವಿಟಪುರುಷರು ಸುರತ ಸ್ನಾನ ಮಾಡಿ ವಿನೋದ ಮುಕ್ತಿಯನ್ನು ಸಂಪಾದಿಸುವ ಕ್ಷೇತ್ರಸ್ಥಾನಗಳು. ಇವು ವಾರಸ್ತ್ರೀಯರ ಉಪಯೋಗಕ್ಕಾಗಿ ಮಾಡುತ್ತಿರುವ ಸುಗಂಧೀಕಾರರ ಅಂಗಡಿಗಳಲ್ಲಾ. ತರುಣ ಪುರುಷರಲ್ಲಿ ವಿಭ್ರಮವನ್ನುಂಟು ಮಾಡುವ ಮಂತ್ರಪೀಠಗಳು. ಶಿವಶಿವಾ ! ಇವರು ಸ್ತ್ರೀಯರಲ್ಲಾ ! ಕಾಮನ ಪಟ್ಟವಾಸಿಗಳು ! ಇವು ಇವರ ನೇತ್ರಕಟಾಕ್ಷಗಳಲ್ಲಾ ! ಭೋಗಿ ಜನರ ಹೃದಯವನ್ನು ಭೇದನ ಮಾಡುವ ಕಾಮನ ಬಾಣಗಳು. ಇವರ ವದನಗಳಲ್ಲ. ವಿಟಕಮಲಗಳ ಚಂದ್ರಮಂಡಲವು ! ಇವು ಯಿವರ ತೊಡಿಗಳಲ್ಲಾ. ಸುರತ ಮಂಟಪಕ್ಕೆ ಸ್ಥಾಪನ ಮಾಡಿದ ಬಾಳೇಕಂಭಗಳು. ಹರಹರಾ !

ಇವರೇನು ಸ್ತ್ರೀಯರೋ! ಅಥವಾ ಅರಗಿಣಿಗಳೋ! ಅಲ್ಲ ಅಲ್ಲ. ಎರಡೂ ಅಲ್ಲ. ವಿಟಪುರುಷರ ಭಾಗ್ಯವನ್ನು ವರ್ಧನ ಮಾಡುವ ಇಷ್ಟದೇವತಾಮೂರ್ತಿಗಳು." [೧]

ಅಲ್ಲಲ್ಲಿ ಬರುವ "ಅವ್ವನು ಹತ್ತರ ಇದ್ದರೆ ಅರವತ್ತು ಸಾವಿರ ಆನೆಯ ಬಲವು ಬಂದ ಹಾಗೆ." ಮೊದಲಾದ ವಾಕ್ಯಗಳಲ್ಲಿ ದೇಸಿಯ ಸೊಬಗನ್ನು ಕಾಣುತ್ತೇವೆ. ಹಿಡಿಂಬೆ, ಮೃತಿ ಹೊಂದಿದ ಘಟೋತ್ಕಚನನ್ನು ಕಂಡು :

ಇದುವೇ ನನ್ನಯ– ಮಡಿದ ಮಗನ ಮೃದು
ಮಧುರಸ್ಮಿತ ಮುಖ ಚಂದ್ರಮಾ
ಇದುವೇ ನನ್ನಯ– ಕಡಿದ ಗಿಡದ ಹೂ
–ವುದರಿದ ಬೆಂಕೀ ಚಂದ್ರಮಾ

ಎಂದು ಹೇಳುವಲ್ಲಿ ಕವಿಗಳ ಅದ್ಭುತವಾದ ಊಹಾಶಕ್ತಿಯನ್ನು ಕಾಣುತ್ತೇವೆ.

ಸೀತಾರಣ್ಯ ಪ್ರವೇಶ ನಾಟಕ (೧೮೯೬) :

೧೭೭ ಪುಟದ ಈ ನಾಟಕ ಧಾರವಾಡದ ಕರ್ನಾಟಕ ಬುಕ್ ಡಿಪೋದಲ್ಲಿ ಚೆನವೀರ ಫಕೀರಪ್ಪ ಇವರಿಂದ ಸನ್ ೧೮೮೭ರಲ್ಲಿ ಪ್ರಕಟವಾಯಿತು. ಬೋಧರಾಯಾಚಾರ್ಯ ಸವಣೂರ ಮತ್ತು ಭಿಷ್ಟೊ ಭಾವುರಾವ ಪದಕಿ ಅವರು ದ್ರವ್ಯಸಹಾಯ ಮಾಡಿ ಮುದ್ರಣಕ್ಕೆ ಸಹಾಯಕರಾಗಿದ್ದರಿಂದ, ಅವರಿಗಾಗಿ ಇದನ್ನು ಪ್ರಸಿದ್ಧಿಸಲಾಗಿದೆ. ಇದೇ ಗ್ರಂಥದಲ್ಲಿಯೇ ಲೇಖಕರು ತಾವು ಸಾಹಿತ್ಯ ವ್ಯವಸಾಯಕ್ಕಾಗಿ ಪಟ್ಟ ಪರಿಶ್ರಮವನ್ನು ಅಂತಃಕರಣಕ್ಕೆ ನಾಟುವಂತೆ ಹೇಳಿದ್ದಾರೆ :

"ನಾವು ದೇವರನ್ನು ಸ್ಮರಿಸಿ ನಂಮ ಭಂಗಾರದಂಥ ಹಗಲಿನ ಆಯುಷ್ಯವನ್ನು ಸಾಲಿಯ ವಿದ್ಯಾರ್ಥಿಗಳೊಡನೆ ತಲೆಯೊಡೆದುಕೊಳ್ಳುತ್ತ ಕಳೆಯುತ್ತಿರುವದರಿಂದ ನಮಗೆ ಉಂಟಾದ ವೇಳ್ಯದ ಅಭಾವದಿಂದಲೂ ಗ್ರಂಥ ರಚನೆಯ ಕಾರ್ಯದಲ್ಲಿ ಬಹು ಅವಸರವಂನು ಮಾಡುವ ನಂಮ ವಿಲಕ್ಷಣ ಸ್ವಭಾವದಿಂದಲೂ ಸೂಟಿಯ ದಿವಸ ಇಲ್ಲವೆ ರಾತ್ರೀ ಕಾಲದಲ್ಲಿ ಅಲ್ಪಸ್ವಲ್ಪ ಬರೆಯ ದೊರಕುತ್ತಿರುವ ಸಮಯ ವಿಶೇಷದಲ್ಲಿ ಉಂಟಾಗುತ್ತಿರುವ ಬಡತನದ ಸಂಸಾರದ ಚಿಂತಾವಿಚಾರಗಳಿಂದಲೂ ನಂಮಿಂದಲೇ ಆಗಲಿ,........ ಇದರಲ್ಲಿ ಏನಾದರೂ ವ್ಯತ್ಯಾಸಗಳಾಗಿದ್ದರೆ" ಮನ್ನಿಸಬೇಕೆಂದು ಕೇಳಿಕೊಂಡಿದ್ದಾರೆ.

ಸೀತಾದೇವಿ ಅರಣ್ಯಪ್ರವೇಶ ಮಾಡಬೇಕಾದ ಸಂದರ್ಭದ ಕತೆ ಸುಪ್ರಸಿದ್ಧವೇ ಆಗಿದೆ. ಶಾಂತಕವಿಗಳು ಪ್ರತಿಯೊಂದು ಕೃತಿಯಿಂದಲೂ ಒಂದು ಜೀವನ ನೀತಿಯನ್ನು ಕಲಿಯಬಹುದೆಂಬ ಅಭಿಪ್ರಾಯವುಳ್ಳವರಾದುದರಿಂದ ಪ್ರಸ್ತಾವನೆಯಲ್ಲಿ ಈ ಗ್ರಂಥದ ಸಂದೇಶವನ್ನು ಹೇಳಿದ್ದಾರೆ :

"ಸಂತಾನವಿಲ್ಲದಿರುವದರಿಂದ ದಂಪತಿಗಳಿಗೆ ಆಗುವ ವ್ಯಸನವೂ ಮಹಾತ್ಮರ ವಾಕ್ಯ ಸಿದ್ಧಿಯೂ ಸ್ವಪ್ನಗಳು ತೋರುವ ಫಲವೂ ಗರ್ಭಧಾರಣ ಮಾಡಿದ ಸ್ತ್ರೀಯರ ಬಯಕೆಯೂ ನೀಚಾತ್ಮರು ಸಹಜ ರೀತಿಯಿಂದ ಮಹಾತ್ಮರಿಗೆ ಹುಟ್ಟುವ ಅಪವಾದವೂ ಸ್ತ್ರೀಯಿಂದ ಅಪಮಾನ ಬಂದ ಪುರುಷರ ವ್ಯಸನವೂ ಹಿರಿಯರು ಮಾಡತಕ್ಕ ಅನ್ಯಾಯಕ್ಕೆ ಚಿಕ್ಕವರ ಪ್ರೇಮ ನಿರ್ಮಲಾಂತಃಕರಣದ ಪ್ರತಿಬಂಧಕವೂ ಉಚ್ಚ–ನೀಚಗಳನ್ನು ನೋಡದೆ ಸ್ವಾಮಿಕಾರ್ಯವನ್ನು ಮಾಡುವವರ ಏಕನಿಷ್ಠೆಯೂ ಅನ್ಯಾಯದಿಂದ

೧ ವತ್ಸಲಾಹರಣ : ಪು. ೧೫.

ಒಬ್ಬರನ್ನು ಕೆಡಿಸುವ ವಿಷಯದಲ್ಲಿ ಸಭ್ಯ ಹೃದಯರ ಅನಿವಾರ್ಯ ಶೋಕವೂ ಗಂಡನು ಬಯಕೆ ತುಂಬಿಕೊಟ್ಟದ್ದರಿಂದ ಹೆಂಡತಿಗೆ ಆಗುವ ಅಪಾರಾನಂದವೂ ಎಷ್ಟು ಸಂಕಟ ಬಂದರೂ ಅದನ್ನು ತಾಳಿಕೊಳ್ಳುವ ಪತಿವ್ರತಾಸ್ತ್ರೀಯರ ನಿರ್ಧಾರವೂ ಪುಣ್ಯವಂತರು ರುದ್ರಾರಣ್ಯದಲ್ಲಿ ಬಿದ್ದರೆ ಸುದ್ಧಾ ಅವರನ್ನು ದೇವರು ಪಾರು ಮಾಡುವ ಕೌತುಕವೂ ಪರೋಪಕಾರ ವಿಷಯದಲ್ಲಿ ಸಜ್ಜನರು ಹೊಂದುವ ಜಾಗ್ರತೆಯೂ ಇನ್ನೂ ಈ ಮಾದರಿಯ ಕೆಲವುಗಳೂ ಲೋಕದಲ್ಲಿ ಎಷ್ಟು ಸತೇಜದಿಂದ ಕೀರ್ತಿಗೊಳ್ಳುತ್ತವೆಂಬುವದು ಈ ನಾಟಕಾವಲೋಕನದಿಂದ ವ್ಯಕ್ತವಾಗುತ್ತದೆ. "[೧]

ಈ ನಾಟಕದ ಪ್ರಕಟನೆಯ ಹೊತ್ತಿಗೆ, ಅಂದರೆ ೧೮೮೬ ರಷ್ಟರಲ್ಲಿಯೇ, 'ಬಾಣಾಸುರ', 'ಕೀಚಕವಧ', 'ಶ್ರೀಯಾಳ ಸತ್ವಪರೀಕ್ಷಾ', 'ಸುಂದೋಪಸುಂದ ವಧ', 'ವತ್ಸಲಾ ಹರಣ', 'ಚಂದ್ರಾವಲೀ ಚರಿತ್ರ' ಎಂಬ ನಾಟಕಗಳೂ 'ವಿರಹ ತರಂಗ' ಎಂಬ ಪದ್ಯರೂಪ ಸಂಗ್ರಹವೂ 'ಶೃಂಗಾರ ಪದ ಸಂಗ್ರಹ', 'ನಾಟಕ ಪದ ಸಂಗ್ರಹ' ಎಂಬ ಗ್ರಂಥಗಳೂ ಪ್ರಕಟವಾಗಿದ್ದವು.

ಈ ನಾಟಕದ ಗದ್ಯಶೈಲಿಯ ದೃಷ್ಟಾಂತವಾಗಿ ಈ ಕೆಳಗಿನ ಅವತರಣಿಕೆಯನ್ನು ಕೊಡಬಹುದು. ಮಾರ್ಗ, ದೇಸಿ ಮತ್ತು ಅಂದಿನ ಪ್ರಯೋಗಗಳ ರೀತಿಯನ್ನು ಇಲ್ಲಿ ಕಾಣುತ್ತೇವೆ :

ವಸಿಷ್ಠ : ಅಸ್ತು, ರಾಮರಾಜಾ! ಕನಸಿನ ಅಭಿಪ್ರಾಯವು ಗೊತ್ತಾದಂತಾಯ್ತು. ಏನೂ ಗೋಜಿಲ್ಲ. ನಾವೆಲ್ಲಾ ಅದಕ್ಕೆ ಶಾಂತಿಯನ್ನು ಹೇಳುತ್ತೇವೆ. ಆ ಕನಸು ಭಲಾ ನಾವು ಭಲಾ. ಅದರ ಗೊಡವೆಯೇ ನಿನಗೆ ಬೇಡ........ಯಾಕಾಗಲೊಲ್ಲದು. ಪರಮೇಶ್ವರನ ಇಚ್ಛಾ. ಈಗಂತೂ ಹೋಗಿ ಬರುತ್ತೇನೆ, ಅಪ್ಪಣೆ ಕೊಡು. ". [೨]

ಇಲ್ಲಿಯ ಹಾಡುಗಳ ಮಾದರಿಗಾಗಿ ಸೀತೆಯನ್ನು ಅಡವಿಯಲ್ಲಿ ಬಿಟ್ಟ ಲಕ್ಷ್ಮಣ ಗಂಗಾನದಿಗೆ ಮಾಡಿಕೊಂಡ ಪ್ರಾರ್ಥನೆಯ ಪದ್ಯವನ್ನು ನೋಡಬಹುದು :

ಹೊಯ್ದಾಡೇ ಗಂಗೆ ಹೊಯ್ದಾಡೇ ॥ ಪ ॥

ಹೊಯ್ದಾಡೇ ಗಂಗೆ ನೀಂ
ನೈದಾವರೆಗಳಿಂದ–
ಸೈಧರೆಯಣುಗೆಯು
ಮೈದೊಳೆದೀರ್ಪಗೆ ॥ ಅ ಪ ॥

ಪರಮ ಮಂದಾರ ವಿ
ಸ್ಫುರಿತ ಸದಂಗನೆ
ಅಪರೆ ಅರಣ್ಯದಿ
ಚರಿಸುವ ದುಃಖಿಕೆ ॥ ೧ ॥

ಅಕಟಕಟಾ ಬಹು
ಸುಖಿವನೆ ಸುರಿದುಂಡು
ಸಕಲಮುದಾನ್ವಿತ
ವಿಕಳೆಗಳೀರ್ಪಗೆ ॥ ೨ ॥

---

೧ ಸೀತಾರಣ್ಯ ಪ್ರವೇಶ ನಾಟಕ : ೧೮೮೬ : ಪು. ೫–೬.
೨ ಅದೇ : ಪು. ೬–೭.

ಅಪರಾಧವಿಲ್ಲದೆ
ಕುಳಿತ ಶಾಂತೇಶನು
ಚಪಲಾಕ್ಷಿಯಳಕೊಂದ
ಅಪಕೀರ್ತಿಗಯ್ಯಯ್ಯೋ ॥ ೩ ॥ ೧

ಗಜೇಂದ್ರ ಮೋಕ್ಷ (೧೮೯೧) :

ಇದನ್ನು ರಂಗಸ್ಥಲದಲ್ಲಿ ನಿಂತು ಹರಿಕೀರ್ತನ ಮಾಡಲಿಕ್ಕೆ ಯೋಗ್ಯವಾಗುವಂತೆ ರಚಿಸಲಾಗಿದೆ. ಇದು ಧಾರವಾಡದ ಪ್ರಸಾದ ರಾಘವ ಪ್ರೆಸ್ಸಿನಲ್ಲಿ ಸನ್ ೧೮೯೧ ರಲ್ಲಿ ಪ್ರಕಟವಾಗಿದೆ. ಪುಟ ಸಂಖ್ಯೆ ೫೧. ಈ ಗ್ರಂಥಕ್ಕೂ ಧನಸಹಾಯವನ್ನು ಮಾಡಿದವರು ಹುಬ್ಬಳ್ಳಿಯ ಬಾಳಾಜಿ ಶೇಷಗಿರ ಅಣ್ಣೀಗೇರಿಯವರು.

ಈ ಗ್ರಂಥರಚನೆಯ ಉದ್ದೇಶವನ್ನು ಲೇಖಕರು ಹೀಗೆ ಹೇಳಿದ್ದಾರೆ :

"ಎಲೈ ಕನ್ನಡ ಭಾಷೆಯ ಅಭಿಮಾನಿಗಳಿರಾ ! ಜಗಚ್ಚಾಲಕನಾಗಿರುವ ಶ್ರೀಮನ್ನಾರಾಯಣನ ಗುಣಗಳನ್ನು ಕೊಂಡಾಡುವ ವಿಷಯದಲ್ಲಿ ಲೋಕಮಾನ್ಯವಾಗಿರುವ ಅನೇಕ ಮಾರ್ಗಗಳಿರುತ್ತವೆ. ವೀಣಾ ಮೃದಂಗಾದಿ ಸಂಗೀತ ಸಾಹಿತ್ಯಗಳೊಂದಿಗೆ ರಂಗಸ್ಥಲದಲ್ಲಿ ನಿಂತು ಹರಿಕೀರ್ತನವನ್ನು ಮಾಡುವದು ಆ ಅನೇಕ ಮಾರ್ಗದೊಳಗಿನದೇ ಒಂದಾಗಿದೆ. ಈ ದಿವ್ಯಮಾರ್ಗದ ವಿಷಯದಲ್ಲಿ ಸ್ವತಂತ್ರವಾದ ಗ್ರಂಥಗಳು ದುರ್ದೈವಿಗಳಾದ ನಮ್ಮ ಕನ್ನಡ ಭಾಷೆಯಲ್ಲಿ ಇಲ್ಲದಿರುವದರಿಂದ ನಂಮ ದೇಶದ ಕನ್ನಡ ಹರಿದಾಸರು ಮೋರೋಪಂತರ ಮಹಾರಾಷ್ಟ್ರ ಆರ್ಯಾ, ಅಮೃತರಾಯರ ಮಹಾರಾಷ್ಟ್ರ ಕಟಾವ, ಕಬೀರದಾಸರ ಹಿಂದುಸ್ಥಾನೀ ದೋಹರೇ ಮುಂತಾದವುಗಳನ್ನು ತೆಗೆದುಕೊಂಡು ಅವುಗಳ ಅರ್ಥವನ್ನು ಕನ್ನಡ ಮಾತಿನಿಂದ ಹೇಳುತ್ತ ಕೀರ್ತನ ಮಾಡುತ್ತಾರೆ. ಹೀಗೆ ಭತ್ತಾ ಮೊಸರೂ ಕಲಿಸಿದಂತೆ ಕೀರ್ತನ ಮಾಡುವದರಿಂದ ಕನ್ನಡ ಭಾಷೆಯ ಗೌರವವು ಕಡಿಮೆ ಆಗುತ್ತದೆ. ಅದು ಆಗಬಾರದೆಂಬ ಅಭಿಮಾನದಿಂದ ನಾವು ಈ ಗ್ರಂಥವನ್ನು ರಚಿಸಿರುತ್ತೇವೆ........ ಸಾಕಿ, ದಿಂಡಿ, ಆರ್ಯಾ, ಕಟಾವ, ಶ್ಲೋಕ ಮುಂತಾದ ಕೀರ್ತನೋಪಯುಕ್ತವಾದ ಕನ್ನಡ ಕವಿತ್ವಗಳಿಂದಲೇ ಇದು ಪೂರ್ಣವಾಗಿದೆ........ ಅಲ್ಲಲ್ಲಿ ಚುಟಕೀ ವಾಕ್ಯಗಳನ್ನು ಸೇರಿಸಿರುತ್ತೇವೆ."

ಶ್ರೀಯುತರು ಈ ಕೀರ್ತನವನ್ನು ಸ್ವತಃ ತಾವೇ 'ಟೊಂಕಾ ಕಟ್ಟಿಕೊಂಡು' ಧಾರವಾಡ, ಹುಬ್ಬಳ್ಳಿ, ಬಂಕಾಪುರ, ಹಾವೇರಿ, ಕರ್ಜಗಿ, ಅಗಡಿ, ಮುರಗೋಡ ಈ ಗ್ರಾಮಸಪ್ತಕದಲ್ಲಿ ಮಾಡಿದರು. ಜನ ಮೆಚ್ಚಿದರು. ಪುಸ್ತಕರೂಪದಲ್ಲಿ ಕೀರ್ತನೆ ಬರಬೇಕೆಂದು ಅಪೇಕ್ಷಿಸಿದ್ದರಿಂದ ಕೃತಿ ಗ್ರಂಥರೂಪ ತಾಳಿತು.

ಗಜೇಂದ್ರಮೋಕ್ಷದ ಕಥೆ ಸುಪ್ರಸಿದ್ಧವೇ ಆಗಿದೆ. ಕವಿಯ ಶೈಲಿಯ ಪ್ರಾಸಾದಿಕತೆ, ಲಾಲಿತ್ಯ, ಪ್ರೌಢಿಮೆ, ಊಹಾಚಮತ್ಕೃತಿ ಮತ್ತು ಭಾಷಾಪ್ರಭುತ್ವದ ನಿದರ್ಶನಕ್ಕಾಗಿ ಈ ಕೆಳಗಿನ ಪದ್ಯಗಳನ್ನು ಉದ್ಧರಿಸಬಹುದು :

ಲಾಲಿತ್ಯ ಪ್ರಾಸಾದಿಕತೆ :

ಪೊರಿಯೊ ಪಾಂಡುರಂಗ– ಭಜಕರ ॥ ಪ ॥

ಪುಂಡಲೀಕ ಕೀರ್ತಿ ಧ್ವಜಮಂದಿರ
ಪುಂಡರೀಕಸಮ ಲೋಚನಸುಂದರ

---

೧ ಸೀತಾರಣ್ಯಪ್ರವೇಶ ನಾಟಕ : ೧೮೮೬ : ಪು. ೧೩೨.

ತುಲಸೀಮಾಲಾ ವಿಲಸಿತಕಂಧರ
ಲಲಿತ ಜಘನನಿಹಿತ ಹಸ್ತಬಂಧುರ
ಶರಣಾಗತಜನ ಸೌಖ್ಯಧುರಂಧರ
ಚರಣಕಮಲ ನತ ಬ್ರಹ್ಮಪುರಂದರ
ಮಂಡನಮಂಡನಭವಕುಲಖಂಡನ
ಮಂಡಿತ ವಿವಿಧ ವಿಕಾರವಿದಂಡನ........ ಇತ್ಯಾದಿ.

ಹರಿಕಥೆಯ ಶ್ರೋತೃಗಳು ಹೇಗಿರಬೇಕೆಂದರೆ :

ತ್ವರವ ಕಲ್ಪಿಸಿ ನುಸುಳದಿರು ಬೇ
ಸರಿಯದಿರು ಪೊಗದಿರುಹದಿರು ತರ
ದಿರು ಮನೋಂತರವನ್ನು ಸ್ಥಾನಾಸ್ಥಾನವರಿಸದಿರು
ಹರಟದಿರು ಬರಿಬಯಲವಿಷಯವ
ನೆರೆದಿರುವ ಸಂದಣಿಯ ರೂಪಕೆ
ಬೆರೆಯದಿರು ನಿದ್ರಾಂಗನಾಪರ್ಯಂಕವೇರದಿರು ॥

ಭಾಷಾಪ್ರೌಢಿಮೆ– ಗಜೇಂದ್ರದ ವರ್ಣನೆ :

ಕರಿವಂಶೋದ್ಭವನಾಗಿ ಕಾಡಿನೊಳು ತಾಂ ಹಿಂಡಾನೆಯಂ ಕೊಂಡು ಸಂ
ಚರಿಸುತ್ತಂ ನೃಪನಿರ್ದನಂದು ಲತಿಕಾಗುಲ್ಮಂಗಳಂ ಮೆಟ್ಟುತಂ
ನೆರೆಫೂತ್ಕಾರದಿ ಬಾಂಗೆ ಧೂಳಿಯನು ತೂರುತ್ತಂ ತರುಸ್ಕಂಧಮಂ
ಮುರಿದೊಯ್ಯಾರದಿ ಬೀಸಿಕೊಳ್ಳುತಲರಂ ಮತ್ತೇಭವಿಕ್ರೀಡೆಯೊಳ್ ೧

ಭಾಷಾ ಪ್ರಭುತ್ವ :

ಈ ಕೆಳಗಿನ ಕಟಾವಿನಲ್ಲಿ ' ಅ ' ದಿಂದ ' ಹ ' ದ ವರೆಗಿನ ವರ್ಣಗಳೆಲ್ಲ ಬಂದಿವೆ : ಗಜೇಂದ್ರ ಪರಮಾತ್ಮನನ್ನು ಪ್ರಾರ್ಥಿಸಿದ ಬಗೆ ಹೀಗೆ :

ಅನಂತ ಮಹಿಮಾ ರಕ್ಷಿಸು ರಕ್ಷಿಸು
ಆರ್ತರಾಪ್ತಾ ರಕ್ಷಿಸು ರಕ್ಷಿಸು
ಇಲಾಧರನೇ ರಕ್ಷಿಸು ರಕ್ಷಿಸು
ಈಶ್ವರಾ ನೀ ರಕ್ಷಿಸು ರಕ್ಷಿಸು
ಉಪಮಾತೀತಾ ರಕ್ಷಿಸು ರಕ್ಷಿಸು........
ಶಂಕರನೀನೇ ರಕ್ಷಿಸು ರಕ್ಷಿಸು
ಷಡ್ಗುಣಪೂರ್ಣಾ ರಕ್ಷಿಸು ರಕ್ಷಿಸು
ಸಂಪದ್ದಾಯಕ ರಕ್ಷಿಸು ರಕ್ಷಿಸು
ಹರಿಯೇ ರಕ್ಷಿಸು ರಕ್ಷಿಸು

ಶ್ರೀಕೃಷ್ಣಮೋಹಿನೀ ದುಂದುಮೆ (೧೮೮೬) :

ಈ ಚಿಕ್ಕ ಪುಸ್ತಕದಲ್ಲಿ 'ವೇಶ್ಯಾರಹಸ್ಯ ದುಂದುಮೆ' ಮತ್ತು ' ಶ್ರೀಕೃಷ್ಣಮೋಹಿನೀ ದುಂದುಮೆ'

೧ ಗಜೇಂದ್ರ ಮೋಕ್ಷ : ೧೮೯೧ : ಪು. ೨೩.

ಎಂಬ ಎರಡು ದುಂದುಮೆಗಳಿವೆ. ಇದು ಕ್ರಿ. ಶ. ೧೮೮೬ ರಲ್ಲಿ ಕರ್ನಾಟಕ ಬುಕ್ ಡಿಪೋ ಪ್ರೆಸ್ಸಿನಲ್ಲಿ ಪ್ರಕಟವಾಯಿತು. ಇದನ್ನು 'ರಸಿಕರ ಉಪಯೋಗಾರ್ಥವಾಗಿ' ಕವಿಗಳು ರಚಿಸಿದರು. ಕನ್ನಡದಲ್ಲಿ ದುಂದುಮೆ ಸಾಹಿತ್ಯ ವಿಪುಲವಾಗಿದೆ. ಎಷ್ಟೋ ದುಂದುಮೆಗಳು ಪ್ರಕಟವೂ ಆಗಿವೆ. ದುಂದುಮೆಗಳೆಲ್ಲ ಅಶ್ಲೀಲವಲ್ಲ. ದುಂದುಮೆಗಳಲ್ಲೆಲ್ಲ ಶೃಂಗಾರವು ಪ್ರಧಾನವಾಗಿದ್ದರೂ ಉಳಿದ ಭಾವನೆಗಳಿಗೂ ಎಡೆಯಿದೆ. ಆದ್ದರಿಂದ ದುಂದುಮೆಯೆಂದರೆ ನೀಚಶೃಂಗಾರವೆಂಬ ಭಾವನೆ ಸರಿಯಾಗದು. ಉದಾಹರಣೆಗೆ ಭೂಪ್ರಪುರಧೀಶನ ಮುದ್ರಿಕೆಯಲ್ಲಿ ಪ್ರಕಟವಾದ ಒಂದು ದುಂದುಮೆಯಲ್ಲಿ ಭೀಮಸೇನನು ಬಕಾಸುರನನ್ನು ಕೊಂದ ಕಥೆ ವರ್ಣಿತವಾಗಿದೆ. 'ಹುಬ್ಬಳ್ಳಿ ಮಂಗನ ದುಂದುಮೆಯು' ಎಂಬ ದುಂದುಮೆ ಹುಬ್ಬಳ್ಳಿಯ ಪೇಟೆಗಳಲ್ಲಿ ಮಂಗಗಳ ಹಾವಳಿಯ ಚಿತ್ರವನ್ನು ಕೊಡುತ್ತದೆ. ಈ ದುಂದುಮೆಯಲ್ಲಿ ಕಂಡುಬರುವ ಸಮಾಜಚಿತ್ರಣ ಮತ್ತು ವಿನೋದಗಳು ಮನೋಜ್ಞವಾಗಿವೆ :

ಸಭ್ಯದೇಶದೊಳು ಇಂಥಾ ಹೆಚ್ಚಿನ ಮರ್ಕಟ
 ಅಬ್ಬರಿಸುತ್ತ ಹಾರ್‍ಯಾಡುವವು– ತಮ್ಮ
 ಹುಬ್ಬು ಹಾರಿಸಿ ಹಲ್ಲು ಕಿಶಿಯುವವು– ಮತ್ತೆ
 ವುಬ್ಬುತಕೊಬ್ಬುತ ಹಬ್ಬುತ ಒಳಗೆಲ್ಲ
 ಹುಬ್ಬಳ್ಳಿಯೊಳು ಮಂಗ ಹುಡದಿಯಾಡಿದವು

ಬುಟ್ಟೇದ ಕುಪ್ಪಸ ಬಂಗಡಿ ಅಂಚಿನ ಸೀರಿ
 ತೊಟ್ಟು ಉಟ್ಟುಕೊಂಡು ಇರುತಿದ್ದೆನೆ– ಅಕ್ಕಿ
 ಕುಟ್ಟಿಕೊಂತ ನಾ ಕುಂತಿದ್ದೆನೆ– ಹತ್ತ
 ಕಟ್ಟಿಗಿ ಕೋಲೊಂದು ಇಟ್ಟಿದ್ದೆನೆ– ಬಂದು
 ಬಟ್ಟಕುಚವ ಮುಟ್ಟಿ ಕಟ್ಟನೆ ಕಡದಿತು
 ಕಟ್ಪಾಣಿ ಹರದೀತು ಕವಡೀಯ ಮಂಗಾ

ಲೋಕದೊಳೆಲ್ಲೆಲ್ಲಿ ನಾ ಕಾಣೆನ್ನಿಂತಾದು
 ಸಾಕು ಸಾಕಾದೀತು ಜನ್ಮಕೀಗ– ಇರು
 ಕಟಕಟಿ ಬಹಳವ್ವಾ ಅಡರೆಷ್ಟುಕೆ
 ಬೆಂಕಿ ಹಚ್ಚಲೆವ್ವಾ– ಮಾಡುವ ಬಾಳುವಿಗೆ– ಮುಂದ
 ಶ್ರೀ ಕುಂದಗೋಳ ಭೂಕಾಂತ ಗುರುವಿಗೆ ನಾನು
 ಕಾಯವಡೆವೆನೀ ಸಾಯಲಿ ಮಂಗಾ [೧]

ವೇಶ್ಯಾರಹಸ್ಯ ದುಂದುಮೆ (ಕಲ್ಪಿತ) :

ಕೃಷ್ಣಮೋಹಿನಿ ಮತ್ತು ವೇಶ್ಯಾರಹಸ್ಯ ದುಂದುಮೆಗಳು ಕೂಡಿಯೇ ಕ್ರಿ. ಶ. ೧೮೮೬ ರಲ್ಲಿ ಪ್ರಕಟವಾದುವೆಂದು ಹೇಳಿತಷ್ಟೆ ! ಸಾಂಪ್ರದಾಯಿಕ ದುಂದುಮೆ ಸಾಹಿತ್ಯದಲ್ಲಿ ಕಂಡುಬರುವ ಅಶ್ಲೀಲತೆಯನ್ನು ಕಡಿಮೆ ಮಾಡಿ ಅದನ್ನು ಉನ್ನತ ಮಟ್ಟಕ್ಕೆ ಒಯ್ಯಬೇಕೆಂದು ಶಾಂತಕವಿಗಳು ಬಯಸಿದರು.

೧ ಡಾ. ಕಿಟೆಲ್ ಅವರ ಮೇರೆಗೆ ಈ ದುಂದುಮೆಯ ಕವಿ ಮುಂಗರಬಳಿ ಚಿನ್ನಲಿಂಗ "Son of Canna Vrishabha (Basawa) and belongs to the Tarabetsalimath of Dharawada.".
(ನಾಗವರ್ಮನ ಛಂದಸ್ಸು : ೧೮೭೫ : ಪು. LXXXI)

ಇದನ್ನು ನಾವು ಪ್ರಸ್ತುತ ದುಂದುಮೆಯಲ್ಲಿ ಕಾಣುತ್ತೇವೆ. ವೇಶ್ಯಾರಹಸ್ಯ ದುಂದುಮೆ ಆ ಕಾಲದ ವೇಶ್ಯಾ ಸ್ತ್ರೀಯರ ಸುಂದರವಾದ ವರ್ಣನೆಯನ್ನೂ ಸ್ವಭಾವ ಚಿತ್ರವನ್ನೂ ಕೊಡುತ್ತದೆ. ವೇಶ್ಯೆಯರಿಗೂ ನೂರು ಚೇಳುಂಗಳ ಕಡಿತವಿದೆ. ಆದರೂ, "ಎಷ್ಟು ಪಾಡೇನಗಿರಲಿ, ಆದರ ಹಾಡನ್ನಷ್ಟೆ ನೀಡುವೆನು ರಸಿಕ ನಿನಗೆ" ಎನ್ನುವ ಮನೋಭಾವನೆಯಿಂದ ವಿಟರನ್ನು ನೋಡಿಕೊಳ್ಳುತ್ತಾರೆ. ಮರುಳ ವಿಟರು ಸಿಕ್ಕರೆ, ಹಣ ಸೂರೆಗೊಳ್ಳುತ್ತಾರೆ. ನೈಸರ್ಗಿಕವಾದ ಚಿತ್ರಣ, ಸೌಂದರ್ಯ, ರಸಿಕತೆ, ಕಾಂತಾಸಮ್ಮಿತತೆಯ ಉಪದೇಶ ಮತ್ತು ಮಾತಿನ ಬುದ್ಧಿವಂತಿಕೆ, ಚಮತ್ಕಾರ ಇತ್ಯಾದಿಗಳ ಮೂಲಕ ವೇಶ್ಯಾರಹಸ್ಯ ದುಂದುಮೆ ಮನಸ್ಸನ್ನು ಸೆಳೆಯದಿರಲಾರದು.

ಬೆಳಗಿಸಿದೊಡವೆ ಮೈಯೊಳಗಿಟ್ಟು ಗುಜ್ಜರಿ
    ಎಲರಿಗೆ ಶೆರಗನು ಹಾರಿಸುತಾ– ಮೊಲೆ
ಗಳ ಚಲ್ವ ಜನರಿಗೆ ತೋರಿಸುತಾ– ಕಾಲ
    ನಲುಗಿಸಿ ಕಾಲುಂಗುರ ಬಾರಿಸುತಾ– ಸಲಿ
ಯೊಳು ಕೆಲಿದಾಡುತ್ತ ನಕಲಿಯ ಮಾಡುತ್ತ
    ಎಲೆಯ ತಿಂದುಗುಳುತಂಗಳದಿ ಕೂಡಂಪರು........

ಮರುಳರು ಮನಿಗೆ ಬಂದರೆ ಗರತಿಯರಂತೆ
    ನೆರೆ ನಾಚಿ ಮುಜರಿಯ ಮಾಡುವರು– ಮುಂ
ದಿರಿಸಿ ತಾಂಬೂಲವ ನೋಡುವರು– ಓರಿ
    ಸುರಿವ ಪ್ರೀತಿಯ ಮುರುಕ ಮಾಡುವರು– ಯಾ
ಕರಿ ತಿನ್ನಿ ತಂಬಾಕ ಶೇದಿ ಬೇಕಾದರೆ
    ತರಿಸಿ ಮನಿ ನಿಮ್ಮದೆಂಬರು ನಲಿದು

ಅರಸೇನು ಆಳೇನು ದುಡ್ಡು ಕೊಟ್ಟವನೆ ನ
    ಮ್ಮರಸು ನಾವಾತನ ಆಳುಗಳು– ಬಲ್ಲ
ವರೆ ನೀವು ನಮಗೆ ನೂರ್ಚೇಳುಗಳು– ಇರು
    ತಿರಲು ನಿಮಗೆ ಆ ಗೋಳುಗಳು– ಬೇಡ
ಹರುಷದಿ ಮನಬಂದ ಸಮಯದಿ ನೀ
    ವಿರಿರಿ ಕೂಡಿರಿ ಮಲಗಿರಿಯೆಂಬುವರು

ಧಡಿಯ ಶೀರಿಗೆ ಹೂ ಜರದ ಕುಪ್ಪಸಕು ಹೂ
    ಕಡಗ ಕಂಕಣ ಡಾಬುಗಳಿಗೂ ಹೂ– ಮೇಲೆ
ಮಡಿಗಿ ಚೌಕಟ್ಟು ಬಾಗಿಲಕೂ ಹೂ– ಗೋದಿ
    ಕಡಲಿ ಯಾಲಕ್ಕಿ ಸಕ್ಕರಿಗೂ ಹೂ– ಹೊಸ
ನಡತೆಗೆ ಹೂ ನಿದ್ದೆಗೆ ಹೂಯೆಂದು
    ಪಡೆವರಲ್ಲದೆ ಧನ ಊಹೂ ಇಲ್ಲಾ........

ಸಾಲಕೆ ಗುರಿಯೊಬ್ಬ ಸಾಲ ಮಾಡುವನೊಬ್ಬ
    ಹಾಲ ತರುವನೊಬ್ಬ ಕುಡಿವನೊಬ್ಬ– ಚಂದ್ರ
ಕಾಳಿ ಕುಪ್ಪಸಕೊಬ್ಬ ಸಂತಿಗೊಬ್ಬ– ಹೊಸ

ಶಾಲೆ ತರುವನೊಬ್ಬ ಹರಿವನೊಬ್ಬ– ರಾತ್ರಿ
ಲೋಲಾಕ್ಷಿ ಬಾರೆಂದು ನಲಿದು ಮುದ್ದಿಪನೊಬ್ಬ
ಹಾಳಾಗಿ ಹೊಲಮನೆ ಮಾರುವನೊಬ್ಬ

ಶ್ರೀಕೃಷ್ಣಮೋಹಿನೀ ದುಂದುಮೆ :

ಹಿಂದೊಮ್ಮೆ ವಿಷ್ಣುವಿನ ಮೋಹಿನೀ ರೂಪವನ್ನು ಕಂಡಿದ್ದ ಪರಶಿವನು ಮತ್ತೊಂದು ಸಲ ಆ ರೂಪವನ್ನು ಕಾಣಬೇಕೆಂದು ಅಪೇಕ್ಷಿಸುತ್ತಾನೆ. ವಿಷ್ಣುವು ಎಷ್ಟೇ ಬೇಡವೆಂದರೂ ಪರಶಿವನಿಗೆ ನೋಡಬೇಕೆಂಬ ಆಸೆ. ಈ ಕಥೆ ಯಾವ ಪುರಾಣದಲ್ಲಿ ಬರುತ್ತದೋ, ಆದರೆ, ಶಾಂತಕವಿಗಳು ಕೃಷ್ಣ–ಶಿವರ ನಡುವಿನ ಸಂಭಾಷಣೆಯ ರೂಪದಲ್ಲಿ ಈ ಶೃಂಗಾರಪೂರ್ಣವಾದ ದುಂದುಮೆಯನ್ನು ರಚಿಸಿದ್ದಾರೆ.

ಇಂದಿರೆಯರಸನಿಗೊಂದು ದಿವಸ ವಿಷ
ಕಂಧರನೆಂದನು ಹರುಷದಲೀ– ಗೋ
ವಿಂದ ವಿಲಂಬವ ಬರಿಸದಲೀ– ತ್ವರ
ದಿಂದಲಿ ನೀನೀಗ ಸರಸದಲೀ– ನಿನ
ಹಿಂದಿನ ಮೋಹಿನೀ ರೂಪವ ತೋರಿಸು
ಯಿಂದು ನೋಡುವ ಮನವಾಗಿಹುದೆಂದು

ಅದಕ್ಕೆ ವಿಷ್ಣು :

ಬೇಡ ನಿನಗೆ ನನ್ನ ಮೋಹಿನೀ ರೂಪವ
ನೋಡುವ ಬಯಕೆಯು ಲೋಕಪಿತಾ– ಹರಿ
ದಾಡುವಿ ಕಂಡರೆ ಶೂಲಯುತಾ– ಒಡ
ಗೂಡಬೇಕೆಂದು ನೀ ಚಿಂತಿಸುತಾ– ಓ
ಡ್ಯಾಡುವಿ ಬೆಂಬತ್ತಿ ತಿರುಗುವಿ– ಸುರತವ
ನೀಡೆಂದು ಕಾಡುವಿಯೆಂದ ಮುಕುಂದ

ಆದರೆ ಶಿವ, ಕೇಳಲಿಲ್ಲ. ವಿಷ್ಣು ಸ್ತ್ರೀರೂಪ ಧರಿಸಲು ಒಪ್ಪಿದನು. ಸೃಷ್ಟಿಯ ತುಂಬೆಲ್ಲ ಶೃಂಗಾರ ತುಂಬಿ ಹರಿಯಿತು.

ಎಲ್ಲಿಯು ಬಗೆ ಬಗೆ ಫಲದ ಗಿಡದ ಗುಂಪು
ಬಳ್ಳಿಯ ಮನೆಗಳ ತಂಪುಗಳು– ಮ
ತ್ತೆಲ್ಲಿಯುಮಳಿರವದಿಂಪುಗಳು– ಮೋ
ಹೆಲ್ಲಿಯು ಕಾರಂಜಿಯ ಲಂಪುಗಳು– ಎ
ಲ್ಲೆಲ್ಲಿಯು ದ್ರಾಕ್ಷವಲ್ಲಿಯ ಪೆಂಪುಗಳು– ಮ
ತ್ತೆಲ್ಲಿಯು ಮಲ್ಲಿಗೆ ಕಂಡು ಮನದೊಳು

ಇಂಥ ಸಮಯದಲ್ಲಿ ವಿಷ್ಣುವಿನ ಮೋಹಿನೀ ರೂಪದ ವೈಭವವನ್ನು ಹೇಳಬೇಕೆ ?

ಯಾವನು ಕಪಟನಾಟಕ ಸೂತ್ರಧಾರನೊ
ಯಾವ ತ್ರಿಲೋಕಕೆ ಸುಂದರನೋ– ಮೋ

ಣ್ಯಾವ ಶೃಂಗಾರದ ಮಂದಿರನೋ– ಮ
ತ್ಯಾವ ವಿಲಾಸ ಧುರಂಧರನೋ– ಇ
ನ್ಯಾವನು ಸರ್ವಗುಣಾಲಯನಾತನ
ಶ್ರೀವನಿತೆಯ ರೂಪವನಾವ ಬಂಣಿಸುವಾ

ಇದರಿಂದ ಪರಶಿವ ಮನಸೋತುಹೋಗುತ್ತಾನೆ. ವಿಷ್ಣು ಪುನಃ ತನ್ನ ಮೂಲರೂಪವನ್ನು ಧರಿಸಿ ಹರನಿಗೆ ತನ್ನ ಪ್ರತಿಜ್ಞೆಯ ಜ್ಞಾಪಕ ಮಾಡಿಕೊಡುತ್ತಾನೆ. ಅಶ್ಲೀಲವೆಂದು ಹೀಗಳೆಯಲ್ಪಟ್ಟ ದುಂದುಮೆಗಳನ್ನು ಶೃಂಗಾರಪೂರ್ವಕವಾಗಿ ಬಳಸಿಕೊಂಡು ದೇವಾಧಿದೇವರ ಕಥೆಗಳನ್ನು ಆ ಮೂಲಕ ಹೇಳಿದ ಉದಾತ್ತೀಕರಣವನ್ನು ನಾವು ಶಾಂತಕವಿಗಳಲ್ಲಿ ಕಾಣುತ್ತೇವೆ.

ಕೀಚಕ ವಧ (?) :

ಇದರ ಎರಡನೆಯ ಆವೃತ್ತಿ ಸನ್ ೧೮೯೧ ರಲ್ಲಿ ಪ್ರಕಟವಾಯಿತು. ಇದೂ ಸಹ ಬಾಳಾಜಿ ಶೇಷಗಿರ ಅಂಣಿಗೇರಿ ಮತ್ತು ಮಿತ್ರರ ಸಹಾಯದ ಮೂಲಕ ಬಳ್ಳಾರಿಯ ಕೋನೇರೀ ಶೆಟ್ರವರಿಂದ ಮುದ್ರಿತವಾಯಿತು. ಪುಟ ಸಂಖ್ಯೆ ೯೮. ಗ್ರಂಥದ ಅರ್ಪಣೆಯಲ್ಲಿ "ನಮ್ಮ ಅತ್ಯಂತ ಸ್ನೇಹಿತರೂ ನಮಗೆ ಒಂದು ಸಮಯದಲ್ಲಿ ದ್ರವ್ಯಸಹಾಯವನ್ನು ಮಾಡಿದವರೂ ಆಗಿರುವ ಲಕ್ಷ್ಮಣರಾವ ರಾಘ ವೇಂದ್ರನಾಯಕ ದೇಸಾಯಿ ಜಟಗೀಹಾಳ ಮುಕ್ಕಾಮ ಸೂಡಿ, ತಾಲೂಕ ರೋಣ ಇವರಿಗೆ ಬಹು ಆದರದಿಂದ ನಜರಾಣಿಯಾಗಿ ಕೊಟ್ಟಿರುವೆವು." ಎಂದು ಹೇಳಿದೆ. ಈ ಗ್ರಂಥ ರಚನೋದ್ದೇಶವೂ ಸಹ ಕನ್ನಡದಲ್ಲಿ ನಾಟಕಗಳಿಲ್ಲವಲ್ಲಾ, ಯಾರೂ ಬರೆಯಲು ಮುಂದು ಬರುತ್ತಿರಲಿಲ್ಲವಲ್ಲಾ ಎಂಬ ಕಳಕಳಿಯೇ ಆಗಿದೆ.

"ಮಹಾಮುನಿ ಪ್ರಣೀತವಾದದ್ದೂ ಇಷ್ಟೊಂದು ಪುರಾತನ ಕಾಲದಿಂದ ಬಂದದ್ದೂ ಮಾನಿತ ಜನರಿಂದ ಅಂಗೀಕರಿಸಲ್ಪಟ್ಟದ್ದೂ ಆಗಿರುವ ನಾಟಕ ವಿಷಯದ ಗ್ರಂಥಗಳು ಕಂನಡ ಭಾಷೆಯಲ್ಲಿ ಇಲ್ಲದಿರುವದು ನಮ್ಮೆಲ್ಲರಿಗೆ ಬಹು ಲಾಂಛನದಾಯಕವಾಗಿರುತ್ತದೆ........ ಈ ಮಾತು ನಂಮಂಥ ಅಲ್ಪಜ್ಞರ ಮನಸ್ಸಿಗೆ ಹತ್ತಿದಂತೆ ಕಂನಡ ಪಂಡಿತರ ಮನಕ್ಕೆ ಹತ್ತಿದರೆ ಈ ಲಾಂಛನವು ಹಾರಿ ಹೋಗ ಲಿಕ್ಕೆ ಬಹು ಕಾಲ ಹಿಡಿಯಲಿಕ್ಕಿಲ್ಲ. ಈ ಸಂಗತಿಯು ಪಂಡಿತರ ಮನಸ್ಸಿಗೆ ಹತ್ತಿದ ಸುಮುಹೂರ್ತವು ಬರುವ ತನಕ ಬಕಧ್ಯಾನಮಾಡುತ್ತ ಸುಮ್ಮನಿರುವದಕ್ಕಿಂತ ನಮ್ಮ ಅಲ್ಪಮತಿಗೆ ತಿಳಿದಷ್ಟಾದರೂ ಈ ವಿಷಯದಲ್ಲಿ ಯತ್ನ ಮಾಡುವುದೇ ಉಚಿತವೆಂಬದಾಗಿ ನಮಗೆ ಕಂಡದ್ದರಿಂದ ನಾವು ಕಂನಡ ಭಾಷೆ ಯಲ್ಲಿ ಹಲವು ನಾಟಕಗಳನ್ನು ರಚಿಸಿದೆವು." [೧]

ಸಾಮಾನ್ಯವಾಗಿ ನಾಟಕದ ಸಂದೇಶ– ಪಾಠವೇನೆಂಬುದನ್ನು ಪ್ರಸ್ತಾವನೆಯಲ್ಲಿ ಹೇಳುವುದು ಶಾಂತಕವಿಗಳ ಪರಿಪಾಠವಾಗಿದ್ದಿತು. ಆ ಮೇರೆಗೆ ಕೀಚಕವಧ ನಾಟಕದಿಂದ "ತಮ್ಮ ವಚನಕ್ಕೆ ಭಂಗಬರಬಾರದೆಂಬ ವಿಷಯದಲ್ಲಿ ಸತ್ಯಸಂಧರು ಎಷ್ಟು ಜಪ್ಪಿಸಿ ನಡೆಯುತ್ತಾರೆಂಬುವದೂ, ಮುಂದೆ ಬರಲಿರುವ ಸುಖಕ್ಕೋಸ್ಕರವಾಗಿ ವಿಚಾರವಂತರು ಸತ್ಯಕ್ಕೆ ಬಂದಿರುವ ಕಷ್ಟವಂನು ಹ್ಯಾಗೆ ಸಹಿಸುತ್ತಾ ರೆಂಬುವದೂ ಪತಿವ್ರತೆಯರ ಮನೋನಿಗ್ರಹವು ಎಷ್ಟು ದುರ್ಭೇದ್ಯವಾಗಿರುತ್ತದೆಂಬುವದೂ ಸಾಧ್ವಿ ಯರಂನು ಕಾಮ ವಿಕಾರದಿಂದ ಭಂಗಪಡಿಸುವ ನೀಚನು ಪಾಪಿಷ್ಠನು ಆದ ಮನುಷ್ಯನು ಹ್ಯಾಗೆ ಸಂಪೂರ್ಣವಾಗಿ ನಾಶ ಹೊಂದುತ್ತಾನೆಂಬುವದೂ ಪರರ ಮಂದಿರದಲ್ಲಿ ವಾಸ ಮಾಡುವದು ಎಷ್ಟು

೧ ಕೀಚಕ ವಧ : ೧೮೯೧ : ಪು. ೩.

ಕಠಿಣವೆಂಬುವದೂ........ ಇನ್ನೂ ಈ ಮಾದರಿಯ ಅನೇಕ ಉಪಯುಕ್ತ ವಿಷಯಗಳೂ ಈ ನಾಟಕಾವಲೋಕನದಿಂದ ತಿಳಿಯುವಂತಿದೆ. "

ಈ ನಾಟಕದಲ್ಲಿ ವಿನೋದಕ್ಕಾಗಿ ಹಿಡಿದು ತಂದ ಆನಂದ ಪಾತ್ರವು ಅಷ್ಟು ಸೊಗಸಾಗಿ ಕಾಣುವದಿಲ್ಲ. ಅವನ ಭಾಷೆಯೂ ಸಹ ಕರ್ಣಕರ್ಕಶವಾಗಿದೆ.

ಶೃಂಗಾರಪದ ಸಂಗ್ರಹ (?):

(೧೮೯೧– ೨ನೆಯ ಭಾಗ)

ರಸಿಕ ಜನಮನೋರಂಜನಾರ್ಥವಾಗಿ ಪ್ರಕಟವಾದ ಈ ಕವನಗಳ ಗುಚ್ಛ ಎರಡು ಭಾಗಗಳಲ್ಲಿ ಮುದ್ರಿತವಾಗಿದೆ. ಎಂಟು ಪುಟಗಳ ಎರಡನೆಯ ಭಾಗವು ಕರ್ನಾಟಕ ಬುಕ್ ಡಿಪೋ ಪ್ರೆಸ್ಸಿನಲ್ಲಿ ಸನ್ ೧೮೯೧ ರಲ್ಲಿ ಪ್ರಕಟವಾಯಿತು. ಮೊದಲನೆಯ ಭಾಗ ಎಂದು ಪ್ರಕಟವಾಯಿತೆಂದು ತಿಳಿಯುವಂತಿಲ್ಲ. ಈ ಪುಸ್ತಿಕೆಗಳ ಜನಪ್ರಿಯತೆಯ ಬಗೆಗೆ ಕವಿಗಳು ಹೀಗೆ ಹೇಳಿದ್ದಾರೆ :

"ಶ್ರೀಮದ್ವೇಣುಗಾನದ ಕುಶಲತೆಯಿಂದಲೂ ಮನೋವೇಧಕವಾದ ಶೃಂಗಾರಗೋಷ್ಠಿಗಳಿಂದಲೂ ಸುಂದರವಾದ ಪರಿಪರಿಯ ವೇಷಗಳಿಂದಲೂ ಇನ್ನೂ ಇದೇ ಮಾದರಿಯ ಅನೇಕ ಪ್ರಕಾರದ ಅನಂಗರಾಗೋತ್ಪಾದಕವಾದ ಚಾತುರ್ಯಗಳಿಂದಲೂ ಗೋಪಸ್ತ್ರೀ ಸಮೂಹವನ್ನು ಶೃಂಗಾರ ದೀಕ್ಷಾ ಗುರುವಾಗಿ ಆಳೀ ಆಳೀ ಬಾಲಬ್ರಹ್ಮಚಾರಿಯೆಂದು ಎನಿಸಿಕೊಂಡಿರುವ ಶ್ರೀ ಲಕ್ಷ್ಮೀಕಾಂತನ ಕರುಣಾಕಟಾಕ್ಷದ ಯೋಗದಿಂದ ನಾವು ರಚಿಸಿದ 'ಶೃಂಗಾರ ಪದ ಸಂಗ್ರಹ' ವೆಂಬ ಪುಸ್ತಕಕ್ಕೆ ೧–೨ ವರ್ಷದಲ್ಲಿಯೇ ಒಂದು ಸಾವಿರ ಸವಿಗಾರರ ಉದಾರಾಶ್ರಯವು ಲಭ್ಯವಾದ ಮೂಲಕ ನಮ್ಮಲ್ಲಿ ಉಂಟಾದ ಉಚಿತೋಲ್ಲಾಸದಿಂದ ಈ ಪುಸ್ತಕ (ಶೃಂಗಾರಪದ ಸಂಗ್ರಹ ೨ ನೆಯ ಭಾಗ) ವನ್ನು ಮೊದಲನೆಯದನ್ನು ರಚಿಸಿದ ಪದ್ಧತಿಯಿಂದಲೇ ರಚಿಸಿರುತ್ತೇವೆ." ೧

ಈ ಚಿಕ್ಕ ಪುಸ್ತಕದಲ್ಲಿ ಶೃಂಗಾರರಸಪೂರ್ಣವಾದ ೧೦ ಪದ್ಯಗಳಿವೆ. ಮಾದರಿಗಾಗಿ, ಕೆಲವು ಪದ್ಯಗಳನ್ನು ಕೊಡಬಹುದು :

"ಅನ್ಯಳಿಗೆ ಮೆಚ್ಚಿಕೊಂಡು ತನ್ನ ಪ್ರಿಯಪುರುಷನು ತನ್ನನ್ನು ಹೊರಗೆ ದೂಡಿಸಿದ್ದರಿಂದ ತನಗೆ ಆದ ದುಃಖದ ಪರಿಯನ್ನು ತನ್ನ ಗೆಳತಿಯ ಮುಂದೆ ಅಲಂಕಾರೋಕ್ತಿಯಿಂದ (ಒಬ್ಬಳು) ಹೇಳುತ್ತಾಳೆ. ಹ್ಯಾಗಂದರೆ :

ಇನ್ನಾರಿಗುಸುರಲೇ
ನಿನ್ನ ಹೊರತು ಸಖಿ
ಯೆನ್ನವ ನನಗಿತ್ತ ಭೂಷಣವಾ ॥ ಪ ॥

ಕನ್ಯಾಶಿರೋಮಣಿ
ಚನ್ನಿಗನೆನ್ನಯ
ಕಣ್ಣಿಗೆ ಕಂಕಣವೆರಸಿದಾ
ಸುಖಮೂರಿಸಿದಾ ॥ ೧ ॥

ಚಾರು ಶೃಂಗಾರ
ಸಾರಜ್ಞ ಚೂಡಾಮಣಿ

---

೧ ಶೃಂಗಾರಪದ ಸಂಗ್ರಹ : ೧೮೯೧ : ಪು. ೧.

ಡಾರವ ಮುಖಿಕಿರಿಸಿದಾ
ಮತಿ ಸರಿಸಿದಾ ॥ ೨ ॥

ಅರೆಚಂದಿರನೆನ್ನ
ಕೊರಳಿಗಿರಿಸಿದನು
ವರ ಶಾಂತೇಶ ವಿಠಲಾ
ರತಿಚಟುಲಾ ॥ ೩ ॥

ಓರ್ವ ಜಾರಿಣಿ ಪರಪುರುಷನೊಂದಿಗೆ ರತಳಾದುದನ್ನು ಕುರಿತು ಅವಳ ಸಖಿ ಅವಳಿಗೆ ಸೂಕ್ಷ್ಮವಾಗಿ ಕೇಳಿದ ಪ್ರಶ್ನೆಗಳಿವು :

ಏನೆಲೆಗೆ ಯೀ ಹೊಸ ಪರೀ
ಏ ನವಯುವ್ವನೆ ಮಾಜದಲೆ ಪೇಳ್ ॥ ಪ ॥

ಸುರುಚಿರ ಬಿಂಬಾ– ಧರವಲ್ಲಲ್ಲಿಗೆ
ಧರಿಸಿಹುದೇತಕೆ– ಕರಿಯ ಚಿಕ್ಕೆಗಳಾ ॥ ೧ ॥

ಉರಗಾಕೃತಿಯುಂ– ಜರಿಯುವ ಬಿಗುವಿನ
ಹೆರಳು ಸೈಲವಾಗಿರುವದೇಕೆ ಸಖಿ ॥ ೨ ॥

ಸಲೆನಯನಂಗಳ– ಕಳೆಯು ಹೆಚ್ಚಿಸುವ
ಲಲಿತಾಂಜನವೆಲೆ– ಅಳಿಸಿಹುದೇತಕೆ ॥ ೩ ॥

ಚಾರುತರದ ಘನ– ಸಾರದಲೇಪವು
ಹಾರಿಹುದೇತಕೆ– ಯೇ ರಾಜಮುಖಿ ॥ ೪ ॥

ಚದುರದೂತೆಯರು– ಚದುರತನದಿ ಬಾ
ಚಿದ ತಲೆಗೂದಲು– ಕೆದರಿಹವೇತಕೆ ॥ ೫ ॥

ಬಿಸಿಲು ಗಾಳಿಗಳ– ಹೆಸರ ಬಲ್ಲ ಹೇ
ಕುಶಲೆ ಪೇಳು ನಿ– ಟ್ಟುಸರ್ಯಾಕಿಕ್ಕುವಿ ॥ ೬ ॥

ಮಳೆಯಿಲ್ಲದ ಬೆಳೆ– ಯೊಲು ವೊಣಗಿದ ವೊಗ
ಕಳೆಯೇರಿದೆ ಶಾಂತೇಶ ಕೂಡಿದನೆ ॥ ೭ ॥

ಮೇಘದೂತ ಕಾವ್ಯ (೧೮೯೨) :

ಕಾಳಿದಾಸಕೃತ ಸಂಸ್ಕೃತ ಗ್ರಂಥಾಧಾರದಿಂದ ಇದನ್ನು ರಚಿಸಿ ಸನ್ ೧೮೯೨ ರಲ್ಲಿ ಪ್ರಕಟಿಸಿದರು. ಇದು ಧಾರವಾಡದ ಹಿಂದು ಪ್ರಿಂಟಿಂಗ ವರ್ಕ್ಸ ಮುದ್ರಾಲಯದಲ್ಲಿ ಮುದ್ರಿತವಾಯಿತು. ಪುಟಸಂಖ್ಯೆ ೩೮. ಈ ಗ್ರಂಥವನ್ನು ಕವಿಗಳು ತಮ್ಮ ಪೂಜ್ಯ ತಂದೆಯವರಾದ ಗೋಪಾಳಾಚಾರ್ಯರಿಗೂ ಮತ್ತು ಅವರ ಅನುಜರಾದ ವೆಂಕಟಾಚಾರ್ಯರ ಮಕ್ಕಳಾದ ಭೀಮಾಚಾರ್ಯ ಸಕ್ರಿ ವಕೀಲರಿಗೂ ಆದರಪೂರ್ವಕವಾಗಿ ಸಮರ್ಪಿಸಿದ್ದಾರೆ. ಗ್ರಂಥಸ್ಥ ಸತ್ವದ ಮಹತ್ವವಲ್ಲದೆ, ಈ ಗ್ರಂಥಕ್ಕೆ ಇನ್ನೂ ಒಂದು ರೀತಿಯಲ್ಲಿ ಮಹತ್ವವಿದೆ; ಬೆಲೆಯಿದೆ. ಪುಸ್ತಕದ ಕೊನೆಯಲ್ಲಿ ಶಾಂತಕವಿ ವಿರಚಿತವಾದ

೫೦ ಗ್ರಂಥಗಳ ಒಂದು ಪಟ್ಟಿಯಿದೆ. ಇದರಲ್ಲಿ ೧೮೯೨ ರ ವರೆಗೆ ಶಾಂತಕವಿಗಳು ಬರೆದ ಗ್ರಂಥಗಳು ಯಾವುವು ಮತ್ತು ಅವುಗಳಲ್ಲಿ ಮುದ್ರಿತವಾದವುಗಳು ಯಾವುವು ಎಂಬುದನ್ನು ಹೇಳಲಾಗಿದೆ. ಈ ಪಟ್ಟಿಯನ್ನು ನೋಡಿದಾಗ, ನಾರದ ಕುಚೇಷ್ಟಾ, ವಾಸಪ್ಪ ನಾಯಕನ ಫಾರ್ಸು, ವ್ಯಭಿಚಾರಾನರ್ಥ ಸಿಂಧು, ವೇಶ್ಯಾವಾಟಿಕಾ ಸಂಚಾರ, ಬರಗಾಲರಸು, ಅಲಾವಿಜಂಗು, ಅಷ್ಟಕಥೆಗಳ ಬುಕ್ಕು ಮೊದಲಾದ ತಲೆಬರಹಗಳು ಕುತೂಹಲಜನಕವಾಗಿವೆ. ದುಂದುಮೆ ಮತ್ತು ಅಲಾವಿ ಪದಗಳನ್ನು ಶಾಂತಕವಿಗಳು ತಮ್ಮ ಉದ್ದೇಶಕ್ಕಾಗಿ ಹೇಗೆ ಪಳಗಿಸಿಕೊಂಡರೆಂಬುದನ್ನು ಈ ಮೇಲಿನ ಪಟ್ಟಿ ತೋರಿಸುತ್ತದಲ್ಲದೆ, ವಾಸಪ್ಪನಾಯಕನ ಫಾರ್ಸಿನಂತಹವು ಬಹುಶಃ ಸಾಮಾಜಿಕ ನಾಟಕದ ಪೂರ್ವಪೀಠಿಕೆಯಾಗಿರಬಹುದು. ಇದೆಲ್ಲದಕ್ಕೂ ಹೆಚ್ಚು 'ಕವಿಕಂಠಕುಠಾರ' ಎಂಬ ಗ್ರಂಥದ ಎದುರಿಗೆ 'ಕಲ್ಪಿತ ಕಾದಂಬರಿ' ಎಂದು ಉಲ್ಲೇಖಿಸಲಾಗಿದೆ. ಈ ಕಾದಂಬರಿ ಮುದ್ರಿತವಾಯಿತೋ ಇಲ್ಲವೋ ತಿಳಿಯುವಂತಿಲ್ಲ. ೧೮೯೨ ರಷ್ಟರಲ್ಲಿಯೇ ರಚಿತವಾದ ಈ ಕಾದಂಬರಿ ಪ್ರಾಯಶಃ ಕನ್ನಡ ಸಾಹಿತ್ಯದಲ್ಲಿಯೇ ತೀರ ಮೊದಲಿಗೆ ರಚಿತವಾದ ಸಾಮಾಜಿಕ ಕಾದಂಬರಿಯಾಗಿದೆಯೆಂದು ಹೇಳಬೇಕು. ಇವೆಲ್ಲ ಗ್ರಂಥಗಳು ಮುದ್ರಿತವಾಗಿಯಾಗಲಿ ಇಲ್ಲವೆ ಹಸ್ತಪ್ರತಿಯ ರೂಪದಲ್ಲಿಯಾಗಲೀ ದೊರಕಿದರೆ, ಅಂದಿನ ಕಾಲದ ಕನ್ನಡ ಸಾಹಿತ್ಯೇತಿಹಾಸದ ಮೇಲೆ ತುಂಬಾ ಮಹತ್ವಪೂರ್ಣವಾದ ಬೆಳಕನ್ನು ಚೆಲ್ಲುತ್ತವೆ.

ಸುಪ್ರಸಿದ್ಧ ಮೇಘದೂತ ಕಾವ್ಯವು ಮಾಲಿನಿವೃತ್ತದಲ್ಲಿದೆ. ಅದನ್ನು ಶಾಂತಕವಿಗಳು ವಾರ್ಧಿಕ ಷಟ್ಪದಿಯಲ್ಲಿ ಭಾಷಾಂತರಿಸಿದ್ದಾರೆ. ಮಾಲಿನಿಯಿಂದ ವಾರ್ಧಿಕಕ್ಕೆ ಸಾಲುಗಳ ಹರವು ಹೆಚ್ಚಾಯಿತೇನೋ ಎನಿಸುತ್ತದೆ. ಹೀಗೆ ಹೆಚ್ಚಾದಲ್ಲಿ ಮೂಲದಲ್ಲಿರದ ಅನೇಕ ಅನಾವಶ್ಯಕ ಮಾತುಗಳನ್ನು ಕನ್ನಡದಲ್ಲಿ ಹಾಕಬೇಕಾಗುತ್ತದೇನೋ ಎಂಬ ಭಯವುಂಟಾಗುತ್ತದೆ. ಆದರೆ, ಶಾಂತಕವಿಗಳು ಮೂಲ ಸಾಲುಗಳನ್ನೇ ಹೆಚ್ಚು ಕಡಿಮೆ ಇಟ್ಟುಕೊಂಡದ್ದನ್ನು ಕಾಣಬಹುದು. ಉದಾಹರಣೆಗೆ ಮೊದಲಿನ ಈ ಶ್ಲೋಕವನ್ನು ನೋಡಬಹುದು :

ವರಕುಬೇರನ ಸೇವಕರೊಳೊಬ್ಬ ಯಕ್ಷನಿರು
ತಿರಲವನೊಂದು ದಿವಸಂ ಸ್ವಾಮಿಕಾರ್ಯ ವಿ
ಸ್ಮರಣದೊಳಗಿರುವ ಪರಿಯನ್ನರಿದು ಧನಪತಿಯು ಕಡುಕೋಪದಿಂದವನಿಗೆ
ಮರುಳೆ ನೀನಾವ ಸುಂದರಿಯ ಲಂಪಟದಿಂದ
ಮರೆದಿಯೋ ಸ್ವಾಮಿಕಾರ್ಯವನವಳ ಗುರುವಿರಹ
ದುರಿಯಿಂದಲೊಂದು ಸಂವತ್ಸರಂ ಬಳಲೆಂದು ಘೋರಶಾಪವನಿತ್ತನು

ಈ ಕೆಳಗಿನ ಸುಂದರವಾದ ಶ್ಲೋಕ ವಾರ್ಧಿಕದಲ್ಲಿ ಬಹಳ ಹಿಗ್ಗಬೇಕಾಯಿತು :

'ಮೇಘಾಲೋಕೇ ಭವತಿ ಸುಖಿನಪ್ಯನ್ಯಥಾವೃತ್ತಿ ಚೇತಃ
ಕಂಠಶ್ಲೇಷೇ ಪ್ರಣಯಿನಿಜನೇ ಕಿಂಪುನರ್ದೂರಸಂಸ್ಥೇ

ಇದರ ಭಾಷಾಂತರ :

ಚಾರುತರ ಮೇಘದರ್ಶನದಿಂದ ಚಿತ್ತದ ವಿ
ಕಾರವಾಗುವದುಂಟು ಯುವತಿಯ ಸಮೀಪವಂ
ಸಾರಿರುವ ಪುರುಷಗೀ ಯಕ್ಷನಂತೂ ತೀರ ತನ್ನ ಜೀವನವಾಗಿಹ
ನಾರಿಯ ವಿಯೋಗದಿಂದುರೆ ಬಳಲುವವನಿವನ
ಪಾರದುಃಖವ ವರ್ಣಿಸುವನಾವನಂಬಕವು
ನೀರೊಡೆದುವಂಗವುಬ್ಬಿತು ಮನವು ಹರಿದಾಡಿತಾತ್ಮವಿಸ್ಮೃತಿಯಾದುದು

ವಿಶಾಲಾಪಟ್ಟಣವನ್ನು ಹೀಗೆ ಸುಂದರವಾಗಿ ವರ್ಣಿಸಲಾಗಿದೆ :

ಎರಕೊಂಡ ತರುಣಿಯರು ಕೂದಲವನೊಣಗಿಸಲು
ಪರಿಮಳದ ಹೊಗೆಗೊಡುವರದು ಗವಾಕ್ಷಗಳಿಂದ
ಹೊರಗೆ ಬರಲದನುಂಡು ದೇಹಪುಷ್ಟಿಯನೊಂದಿ ಸೌಧಾಗ್ರದೊಳ್ ಕುಣಿಯುವ
ವರಮಯೂರಗಳ ನರ್ತನಗಳುಪಹಾರಮಂ
ಧರಿಸಿ ಲಲಿತಾಂಗನೆಯರಂಗಾಲ ಕೆಂಪಿನಿಂ
ದರುಣತೆಯನಾಂತ ಹರ್ಮ್ಯಗಳ ವೈಭವವ ಕಂಡಳಿ ಪದಶ್ರಮವನಬ್ಬಾ ೧

ಯಕ್ಷನ ಪತ್ನಿಯನ್ನು ಹೀಗೆ ಸುಂದರವಾಗಿ ವರ್ಣಿಸಲಾಗಿದೆ :

ವಿರಹದಿಂ ಬಿಳುಪಾದ ಗಲ್ಲಗಳ ಬಹುಸೂಕ್ಷ್ಮ
ವಿರುವ ಮಧ್ಯದ ಪಕ್ವಬಿಂಬಾಧರದ ಚರಿತ
ಹರಿಣೀಸಮ ಪ್ರೇಕ್ಷಣದ ನಿಮ್ನನಾಭಿಯ ನಿತಂಬಭಾರದ ಯೋಗದಿಂ
ನೆರೆಯಲಸಗತಿಯ ಪೀನಸ್ತನದ ತಿಳಂವಾದ
ವರತನುವಿನೆನ್ನಂಗನಾಮಣಿಯಿರುವಳಲ್ಲಿ
ಶರದ ಮಿಕ್ಕ ಸ್ತ್ರೀಯರಂ ನಿವಾಳಿಸಲೆಂದು ನಿರ್ಮಿಸಿದನವಳನಜನು ೨

ಸುಂದರ ಸಲೀಲವಾದ ಪ್ರಾಸಾದಿಕ ಶೈಲಿ, ಭಾಷಾಂತರದ ಪ್ರಾಮಾಣಿಕತೆಗಳ ಮೂಲಕ ಮೇಘದೂತ ಕಾವ್ಯವು ಗಮನಾರ್ಹವಾದ ಕೃತಿಯಾಗಿದೆ.

ಗಿರಿಜಾ ಕಲ್ಯಾಣ ನಾಟಕ (?) :

ಈ ನಾಟಕವನ್ನು ಬಾಣಭಟ್ಟನ 'ಪಾರ್ವತೀ ಪರಿಣಯ' ವೆಂಬ ನಾಟಕದಿಂದ ಅನುವಾದ ಮಾಡಿದ್ದಾಗಿ ಲೇಖಕರು ಹೇಳುತ್ತಾರೆ. ಆದರೆ ಈ ಕೃತಿ ಬಾಣಭಟ್ಟ ರಚಿತವಲ್ಲ. ಸಂಸ್ಕೃತ ನಾಟಕದ ಪ್ರಸ್ತಾವನೆಯಲ್ಲಿ ಬರುವ 'ಅಸ್ತಿ ಕವಿಸಾರ್ವಭೌಮೋ ವತ್ಸನ್ವಯಜಲಧಿಕೌಸ್ತುಭೋ ಬಾಣಃ' ಎಂಬ ಉಕ್ತಿಯಿಂದ ಈ ಕೃತಿ ಬಾಣಭಟ್ಟವಿರಚಿತವೆಂಬ ಕಲ್ಪನೆಯಾಗಿರಬೇಕು. ಯಾಕೆಂದರೆ, ಕಾದಂಬರೀ ಕರ್ತೃವಾದ ಬಾಣಭಟ್ಟನೂ ವತ್ಸಗೋತ್ರದವನೇ. ಬಾಣಭಟ್ಟನೇ ಬರೆದಿದ್ದರೆ ದಶರೂಪಕದಿಂದ ಮೊದಲುಗೊಂಡು ಸಾಹಿತ್ಯದರ್ಪಣದ ವರೆಗಿನ ಯಾವ ಗ್ರಂಥದಲ್ಲಿಯಾದರೂ ಇದರ ಉಲ್ಲೇಖ ಬರಬೇಕಿತ್ತು. ಯಾವ ಅಲಂಕಾರ ಗ್ರಂಥಗಳಲ್ಲಿಯಾದರೂ ಇಲ್ಲಿಯ ಉದಾಹರಣೆ ಬರಬೇಕಿತ್ತು. ಯಾವ ಅಲಂಕಾರ ಗ್ರಂಥಗಳಲ್ಲಿಯಾದರೂ ಇಲ್ಲಿಯ ಉದಾಹರಣೆ ಬರಬೇಕಾಗಿತ್ತು. ಕವಿಯು ಕಾದಂಬರಿಯ ಹಾಗೆ ಪಾರ್ವತಿಯ ವರ್ಣನೆಯನ್ನು ಮಾಡುವದೂ ಅನುಚಿತ. ಅದ್ದರಿಂದ ಈ ಗ್ರಂಥವನ್ನು ಬರೆದವನು ವೀರನಾರಾಯಣ ಚರಿತವೆಂಬ ಗದ್ಯಕಾವ್ಯವನ್ನೂ, ಶಬ್ದರತ್ನಾಕರವೆಂಬ ನಿಘಂಟನ್ನೂ ರಚಿಸಿದ ವಾಮನ ಬಾಣಭಟ್ಟನಾಗಿರಬೇಕು. ಶಬ್ದರತ್ನಾಕರದಲ್ಲಿ "ಜಾಗರ್ತಿ ವಾಮನೋ ಬಾಣೋ ವತ್ಸವಂಶಶಿಖಾಮಣಿಃ" ಎಂದೂ, ವೀರನಾರಾಯಣ ಚರಿತದಲ್ಲಿ "ಭುವನೇ ವಾಮನೇ ಭಟ್ಟಬಾಣೇ" ಎಂದೂ ಬರುತ್ತದೆ. ವಾಮನ ಬಾಣ ಎಂಬುದರಲ್ಲಿ ವಾಮನ ಎಂಬುದು ಹಾರಿ, ಬರಿಯ ಬಾಣ ಎಂಬುದುಳಿದು ಈ ಪಾರ್ವತೀ ಪರಿಣಯದ ಕರ್ತೃವು ಬಾಣನಾಗಿರಬೇಕೆಂಬ ಕಲ್ಪನೆಗೆ ಎಡೆಗೊಟ್ಟಿರಬೇಕು.

---

೧ ಮೇಘದೂತ ಕಾವ್ಯ : ೧೮೯೨ : ಪು. ೨೬.
೨ ಅದೇ : ಪು. ೫೯.

ಲೇಖಕರು ಈ ನಾಟಕವನ್ನು ತಮ್ಮ "ಜನಕ ಗೋಪಾಲಾಚಾರ್ಯರ ಅನುಜರಾದ ವೆಂಕಟಾಚಾರ್ಯರ ಪ್ರಿಯ ಪುತ್ರರಾದ ಭೀಮಾಚಾರ್ಯ ಸಕ್ಕರಿ ವಕೀಲ ಇವರಿಗೆ ಬಂಧುಪ್ರೇಮ ಪ್ರದರ್ಶನಾರ್ಥವಾಗಿ ಬಹು ವಿನಯದಿಂದ ಕಾಣಿಕೆ" ಕೊಟ್ಟಿದ್ದಾರೆ. ನಾಟಕದ ಪುಟಸಂಖ್ಯೆ ೭೪.

ನಾಟಕದ ಮಂಗಲ ಶ್ಲೋಕ ಹೀಗಿದೆ :

ಪರಿಪೂರ್ಣವಾದ ಸತ್ಪ್ರೇಮ ರಸದಿಂ ಮೊದಲು
ಹರನ ಮೊಗದಾವರೆಯ ಸೌಂದರ್ಯವಂ ಕಂಡು
ನೆರೆ ಹಿಗ್ಗಿ, ಗಿರಿಶನೀಕ್ಷಿಸಲು ತಂನಂ ತತ್‌ಕ್ಷಣಂ ತಾನೆ ಲಜ್ಜೆಯಂನು
ಧರಿಸಿ ಹಿಂದಕೆ ಸರಿದು, ಲಗ್ನ ಹೋಮದ ಧೂಮ
ಭರದಿ ಮುಕುಲಿತವಾಗಿ, ರಂಜಿಸಿದ ಪಾರ್ವತಿಯ
ಸಿರಿನೋಟವನವರತಮವನಿಗತ್ಯಾನಂದವಂನು ಸತಿ ಕೊಡುತಲಿರಲಿ

ಸುಂದೋಪಸುಂದ ವಧೆ (?) :

ಪ್ರಕಟಣೆಯ ವರುಷ ತಿಳಿಯಲಿಲ್ಲ. ಇದು ಹೆಚ್ಚಾಗಿ ಗದ್ಯಪ್ರಧಾನವಾದ ನಾಟಕವೇ ಆಗಿದೆ. ಪುಟಸಂಖ್ಯೆ ೭೭. ಇಲ್ಲಿಯ ಪದ್ಯಕ್ಕೆ ಏಕಮುಖವಿದೆ; ಏರಿಳಿತಗಳಿಲ್ಲ. ಗದ್ಯ ದಿನದ ಮಾತನ್ನು ಒಳಗೊಂಡಿರುವುದರಿಂದಲೂ, ಗ್ರಾಂಥಿಕ ಮತ್ತು ದೇಸಿಗಳ ಸರಿಯಾದ ಹೊಂದಿಕೆ ಎಷ್ಟೋ ಸಲ ಇರದ ಮೂಲಕವೂ, ಏಕವಾಗಿ ಕಾಣುವದಿಲ್ಲ. ಹಲಕೆಲವು ಸಲವಂತೂ ಅಶ್ಲೀಲ–ಅಪಹಾಸ್ಯಕರ ಎನ್ನುವ ಮಟ್ಟಿಗೂ ಇಲ್ಲಿಯ ಗದ್ಯಶೈಲಿ ಕಂಡುಬರುತ್ತದೆ. ಒಟ್ಟಾರೆ, ಪದ್ಯರಚನೆಯಲ್ಲಿ ಶಾಂತಕವಿಗಳು ಪಡೆದ ಸಿದ್ಧಿಯನ್ನು ಅವರು ಗದ್ಯದಲ್ಲಿ ಸಾಧಿಸಲಿಲ್ಲವೆಂದೇ ಹೇಳಬೇಕಾಗುತ್ತದೆ.

ಉದಾಹರಣೆಗೆ ಸುಂದೋಪಸುಂದರಿಂದ ಅವಮಾನಿತಳಾದ ರಂಭೆ, ದೇವೇಂದ್ರನಿಗೆ ಹೇಳುವ ಈ ಮಾತನ್ನು ನೋಡಬಹುದು :

ರಂಭೆ (ಅಳುತ್ತ) : ದೇವೇಂದ್ರ! ಏನು ಹೇಳಲಿ ಸುಂದ ಮತ್ತು ಉಪಸುಂದರೆಂಬ ಇಬ್ಬರು ದೈತ್ಯರು ಈವತ್ತಿನ ದಿವಸ ಸ್ವರ್ಗಲೋಕಕ್ಕೆ ದಾಳೀ ಮಾಡಿ, ಸಕಲ ಕಿನ್ನರ ಸ್ತ್ರೀಯರನ್ನು ಅವಮಾನ ಮಾಡಿದರು. ಗಂಧರ್ವಾಂಗನೆಯರನ್ನು ಹಿಂಸೆ ಪಡಿಸಿದರು! ಮತ್ತು ಸುರಸ್ತ್ರೀಯರನ್ನು ಮಂಚಕ್ಕೆ 'ಬಾ' ಎಂದು ಜಗ್ಗಿದರು! ದೇವಾ! ಸ್ತ್ರೀಯರ ಗೋಳನ್ನು ಕೇಳುವವರೇ ಇಲ್ಲ!........

ದೇವೇಂದ್ರ : ಹಾಹಾ! ರಂಭೇ, ಸೈರಿಸು, ಸೈರಿಸು! ದುಃಖವನ್ನು ಶಾಂತಮಾಡು, ಶಾಂತಮಾಡು!

ರಂಭೆ (ಅಳುತ್ತ) : ಮಹಸ್ ಹ್ಯಾಗೆ ಸಹನ ಮಾಡಲಿ? ಹ್ಯಾಗೆ ದಮ್ಮು ಹಿಡಿಯಲಿ? ದೇವರೂ, ಯಾವ ರಂಭೆಯ ಮೇಲೆ ಕೈಯಿಟ್ಟರೆ ಲೌಡಿಯು ಮಹಾಸ್ತ್ರೀ ಎಂಬ ಅಂತಃಕರಣದಿಂದಾ ತಂಮಂಥವರು ಸುದ್ಧಾ ಹೆದರುತ್ತಿದ್ದರೋ, ಅಂಥಾ ದಾಸ ಈ ಪಾಪಿಯನ್ನು ಆ ದುಷ್ಟ, ಭ್ರಷ್ಟ, ಕ್ರೂರಾ, ಕಠೋರ ಹೃದಯರಾದ ದೈತ್ಯರು ದುಷ್ಟಪಣದಿಂದ ಬಾಯಿಗೆ ಬಂದಂತೆ ಬೊಗಳಿ, ಕೈಗೆ ಬಂದಂತೆ ಬಡಿದರು! ಅವರ ಮಾತಿಗೆ ನಾನು 'ವಲ್ಲೆ' ಎಂದು ಹೇಳಿದ ಕೂಡ್ಲೇ (ಅತ್ತು) ದೇವೇಂದ್ರಾ ನನಗೆ ಪಾದಪ್ರಹಾರ ಮಾಡಿದರು. ಆ ವ್ಯಾಳ್ಯಾದಲ್ಲಿ ನಾನು

ಮೂಲವನ್ನು ಕೊಯ್ದು ಯಾಳೀ ಬಳ್ಳಿಯು ಕತ್ತರಿಸಿಕೊಂಡು ಭೂಚಕ್ರಕ್ಕೆ ಬೀಳುವ
ಹಾಗೆ ಬಿದ್ದೆನು. ೧

ಶ್ರೀ ವಿದ್ಯಾರಣ್ಯ ವಿಜಯ (೧೯೧೮) :

ಶಾಂತಕವಿಗಳ ಅಪರವಯಸ್ಸಿನಲ್ಲಿ ಅವರಿಗೆ ಆಲೂರ ವೆಂಕಟರಾಯರು, ಕಡಪಾ ರಾಘವೇಂದ್ರ ರಾಯರು ಮತ್ತು ನರಗುಂದ ರಾಮರಾಯರು– ಮೊದಲಾದ ದೇಶಭಕ್ತರ ಹಾಗೂ ಉಜ್ವಲ ಕನ್ನಡಾಭಿ ಮಾನಿಗಳ ಸಂಪರ್ಕವುಂಟಾಯಿತು. ಕಡಪಾ ರಾಘವೇಂದ್ರರಾಯರಿಂದ ಆಂಧ್ರಪ್ರಾಂತದ ಏಕೀಕರಣ ಕ್ಕಾಗಿ ನಡೆದ ಚಟುವಟಿಕೆಗಳನ್ನು ಅವರು ತಿಳಿದುಕೊಂಡರು. ಕನ್ನಡ ಭಾಷೆ ಮತ್ತು ಪ್ರಾಂತದ ಬಗೆಗೆ ಜನರಲ್ಲಿ ಉಗ್ರವಾದ ಅಭಿಮಾನ ಉಂಟಾಗುವ ವಿನಾ ದೇಶದ ಏಳ್ಗೆಯಿಲ್ಲವೆಂದು ಅವರು ಭಾವಿಸಿ ದರು. ಕರ್ನಾಟಕಕ್ಕೆ ಅನ್ವಯಿಸುವ ಮಾತೇ ಭಾರತದ ವಿಮೋಚನೆಗೂ ಅನ್ವಯಿಸಿತು. ಸ್ವ–ತ್ವ ವನ್ನು ತಿಳಿದುಕೊಳ್ಳದ ಮನುಷ್ಯ ಇದ್ದರೇನು ? ಇರದಿದ್ದರೇನು ?

ವಿದ್ಯಾರಣ್ಯ ವಿಜಯವು ಕ್ರಿ. ಶ. ೧೯೧೮ ರಲ್ಲಿ ಪ್ರಥಮ ಸಲ ಪ್ರಕಟವಾಗಿ, ನಾಲ್ಕೈದು ತಿಂಗಳಲ್ಲಿಯೇ ಅದರ ಪ್ರತಿಗಳೆಲ್ಲ ತೀರಿ ದ್ವಿತೀಯ ಮುದ್ರಣ ಹೊಂದಿತು. ಅನಂತರ ಯಥಾ ಪ್ರಕಾರವಾದ ಕನ್ನಡಿಗರ ಗಾಢನಿದ್ರೆಯ ಮೂಲಕ ಮೂಲೆಗುಂಪಾಗಿದ್ದ ಈ ಕೀರ್ತನೆ ೩೯ ವರುಷಗಳ ನಂತರ ೧೯೫೭ ರಲ್ಲಿ ಮೂರನೆಯ ಮುದ್ರಣ ಹೊಂದಿತು.

ಪ್ರಸ್ತುತ ಕೀರ್ತನೆಯಲ್ಲಿ ಕೇಳಪ್ಪ ಮತ್ತು ಹೇಳಪ್ಪರವರ ನಡುವಿನ ಸಂವಾದದ ಮೂಲಕ ಸ್ವ–ತ್ವದ ಕಲ್ಪನೆಯನ್ನು ಶಾಂತಕವಿಗಳು ಮಾಡಿಕೊಟ್ಟಿದ್ದಾರೆ. ನಿನ್ನ ವಸ್ತುವೆಂದರೆ ಯಾವುದೆಂದು ಕೇಳಪ್ಪನು ಕೇಳಿದ್ದಕ್ಕೆ. ಹೇಳಪ್ಪನು–

ಹೊಲಮನೆಗಳು ಹೆಂ
ಗಳು ಮಕ್ಕಳು ಮರಿ
ಗಳು ಧನಧಾನ್ಯಂ
ಗಳಂಬರಂಗಳು
ಇವೇ ನನ್ನ ವಸ್ತುಗಳಯ್ಯಾ –ಎಂದು ಹೇಳುತ್ತಾನೆ.

ಅದಕ್ಕೆ ಕೇಳಪ್ಪನು ಇವುಗಳನ್ನೆಲ್ಲಾ ಮೀರಿದ ವಸ್ತುವೊಂದಿದೆ, ಅದಾವುದೆಂದು ಬಗೆದು ನೋಡು ಎಂದಾಗ ಅವ ತನ್ನ ಊರು, ತನ್ನ ದೇಶ, ಭರತಭೂಮಿ ಎಂದು ಮೊದಲಾಗಿ ಯಥಾರ್ಥ ಜ್ಞಾನ ವನ್ನು ಕೊಡುತ್ತಾನೆ. ಸುಪ್ರಸಿದ್ಧವಾದ 'ನಮ್ಮದೀ ಭರತಭೂಮಿ' ಎಂಬ ಹಾಡು ಈ ಸಂದರ್ಭ ದಲ್ಲಿಯೇ ಕೇಳಪ್ಪನಿಂದ ಹೇಳಲ್ಪಡುತ್ತದೆ. ಇಂಥ ದೇಶದಲ್ಲಿ ನಿನ್ನ ವಸ್ತು ಯಾವುದೆಂಬುದನ್ನು ಪುನಃ ನೋಡು ಎಂದಾಗ, ಹೇಳಪ್ಪನು ಆಲೋಚಿಸಿ :

ವಿಶಾಲದೇಶವು
ಪ್ರಶಸ್ತ ವಸ್ತುಗ
ಳಸಂಖ್ಯಮಾಗಿಹವವುಗಳೊಳು
ಅಸಾಧ್ಯವರಸುವ

---

೧ ಸುಂದೋಪಸುಂದ ವಧೆ : ಪು. ೨೪–೨೫.

ದಸಾಧ್ಯವಯ್ಯಾ
ಉಸುರ್ರೈ ಯುಕ್ತಿವಿಶೇಷವನು —ಎಂದು ಹೇಳುತ್ತಾನೆ.

(ದಿವಂಗತ ಶಿ. ಶಿ. ಬಸವನಾಳರು ಸಭಾಧ್ಯಕ್ಷತೆಯನ್ನು ವಹಿಸಿದ ಒಂದು ಸಭೆಯಲ್ಲಿ ಶರಪಟ್ಪದಿಯಲ್ಲಿ ಜಗಣವನ್ನು ಇಡಬಹುದೇ ಎಂದು ಶಾಂತಕವಿಗಳನ್ನು ಪ್ರಶ್ನಿಸಿದರಂತೆ. ಅದಕ್ಕೆ ಕ್ರುದ್ಧರಾದ ಈ ವೃದ್ಧರು ಎದ್ದು ನಿಂತು ಈ ಮೇಲಿನ ಪದ್ಯವನ್ನು ಹೇಳಿ ಇದರಲ್ಲಿರುವ ನಾದಮಾಧುರ್ಯ ಮತ್ತು ವಿಸ್ತೀರ್ಣದ ಕಲ್ಪನೆ ಯಾವ ಬಂಧದಿಂದ ಬರುತ್ತದೆಂಬುದನ್ನು ಹೇಳಬೇಕೆಂದು ಪುನಃ ಪ್ರಶ್ನಿಸಿದರಂತೆ.) ೧

ಇದಾದ ಮೇಲೆ—

ಒಕ್ಕಡೆ ಚಿಕ್ಕವ
ಳೊಕ್ಕಡೆ ದೊಡ್ಡವ
ಳೊಕ್ಕಡೆ ಬಡಗೆರೆಯಂಥವಳು
ಒಕ್ಕಡೆ ಮುನ್ನೀ
ರಿಕ್ಕೊ ಕನ್ನಡವ
ನಿಕ್ಕದಲೆವೆಗಳ ಕಾವರೆಲ್ಯೆ —ಎಂದು ಕನ್ನಡದ ಭೂಪಟವನ್ನು ವರ್ಣಿಸಿ, ಕರ್ನಾಟಕ ದೇವಿ ಕದಂಬಾದಿ ಸಂಪೂಜಿತಳೂ, ಗಂಗಾರಾಧಿತ ಪದನಖಸರಣಳೂ, ರಾಷ್ಟ್ರಕೂಟ ಮಣಿಕಂಠಾಭರಣಳೂ, ಚಾಲುಕ್ಯಾಂಶುಕ ಶೋಭಾವರಣಳೂ ಆಗಿರುವದನ್ನು ವರ್ಣಿಸುತ್ತಾರೆ. ಇಂಥ ಉಜ್ವಲವಾದ ಕನ್ನಡ ನಾಡು— ವಿಜಯನಗರ ಇಂದು ಹೇಳ ಹೆಸರಿಲ್ಲದಾಗಿದೆ. ಆ ಸೌಂದರ್ಯದ ರಾಜಧಾನಿಯಕಟಾ, ಆ ರಾಜನಾವೈಭವಂ, ಆ ಸಾಮಂತ ಸಮೂಹವಾ, ಬುಧಸಭಾಸ್ಥಾನಂಗಳ್, ಆ ಗ್ರಂಥಂಗಳ್ ಆ ಸೋಮಾನನೆಯರ್, ಪ್ರಮತ್ತ ನೃಪಪುತ್ರರ್, ಘೋಷಿಪಾವಂದಿಗಳ್— ಎಲ್ಲರೂ ಕಾಲರಾಯನ ಗರ್ಭದಲ್ಲಿ ಮರೆಯಾಗಿದ್ದಾರೆ. ಅದಕ್ಕಾಗಿ ಕನ್ನಡಿಗರು ಕಳೆದುಹೋದ ಸಾಮ್ರಾಜ್ಯವನ್ನು ಮರಳಿ ಕಟ್ಟಬೇಕು. ಇದು ಬರಿಯ ವೇದ ಪಾರಾಯಣ ಮಾಡುವ ವೇಳೆಯಲ್ಲ. ಬ್ರಾಹ್ಮ, ಕ್ಷಾತ್ರಕ್ಕೆ ಸ್ಥಾನ ಮಾಡಿಕೊಡಬೇಕು. ಅದಕ್ಕಾಗಿ ವಿದ್ಯಾರಣ್ಯರು ಸಾಯಣಾಚಾರ್ಯರಿಗೆ :

ಏಳು ಸಾಯಣ ಕಟ್ಟು ಗ್ರಂಥವ
ನೇಳು ಪಂಪಾಕ್ಷೇತ್ರಕೆ
ಗಾಳಿಗಂಟುಗಳೋದಿದೇತಕೆ
ಏಳು ಈ ಕ್ಷಣ ಮಾತ್ರಕೆ —ಎಂದು ಹೇಳಿ,

ಪಾರತಂತ್ರ್ಯವು ಮೋಕ್ಷಸುಖಕಪ
ಕಾರಿಯದುವೆಯಧೋಗತಿ
ಪಾರತಂತ್ರ್ಯ ಸ್ಥಿತಿಯ ಕುಲಸಂ
ಹಾರವೇ ಸುತಪಃಕೃತಿ —ಎಂದು ಸಾರುತ್ತಾರೆ.

ವಿಜಯವಿದ್ಯಾರಣ್ಯರು ಹಂಪೆಗಾಗಿ ಹೊನ್ನಿನ ಮಳೆಯನ್ನು ಸುರಿಸುತ್ತಾರೆ. ಅವರ ತಪಃಪ್ರಭಾವದಿಂದ ಪುನಃ ಒಂದು ಹಿಂದೂ ಸಾಮ್ರಾಜ್ಯ ತಲೆ ಎತ್ತಿ ನಿಲ್ಲುತ್ತದೆ. ಹಾಳು ಬಿದ್ದಲ್ಲಿ ನಗರ ನಿರ್ಮಿತವಾಗುತ್ತದೆ.

---

೧ ಈ ಅಂಶವನ್ನು ಹೇಳಿದವರು ಕವಿಭೂಷಣ ಬೆಟಗೇರಿ ಕೃಷ್ಣಶರ್ಮರು.

ಅಟ್ಟಹಾಸದಿಂ
ಕಟ್ಟಿದವಾಗಳೆ
ಪಟ್ಟಣ ಪೇಟೆಗ
ಳಟ್ಟಾಲಕಗಳಂ

ಕಟ್ಟಾಳ್ ಮನೆಗಳಂ
ಅಟ್ಟಕಟ್ಟೆಗಳಂ
ಕಟ್ಟಿ ಕಟ್ಟಿ ಜಸ
ವಟ್ಟ ಶಿಲ್ಪಿಗರ
ದಿಟ್ಟಿಗಚ್ಚರಂ
ಪುಟ್ಟುವಂದಚಂದಗಳಿಂದ ೧

ಈಯೆಲ್ಲ ಪದ್ಯಗಳಲ್ಲಿಯ ನೃತ್ಯವನ್ನೂ ಲಾಲಿತ್ಯವನ್ನೂ ಗಮನಿಸಬಹುದಾಗಿದೆ. ಇದರಂತೆಯೇ 'ಲ' ಕಾರದ ಉತ್ಸಾಹಯುತವಾದ ಪ್ರಯೋಗಕ್ಕೆ ಈ ಕೆಳಗಿನ ಸಾಲುಗಳನ್ನು ನೋಡಬಹುದು :

ಮೇಲಲೆಲೆಗೊನೆಗಳ
ಬಾಳೆಯ ಕಂಬದ
ಸಾಲು ಹಂದರದ
ಮೇಲು ಮೊಗದ ಬದಿ
ಜೋಲುವ ಹೂವಿನ
ಮಾಲೆಯ ಬಂಡಿಗೆ
ಸೋಲುವ ಸುತ್ತುವ
ರೋಲಂಬಂಗಳ
ಜಾಲವೆಂಬ ನವ
ನೀಲಮಣಿಯ ಮಾಲಿಕೆಯಿಂದ ೨

ಶಾಂತಕವಿಗಳ 'ಶ್ರೀ ವಿದ್ಯಾರಣ್ಯ ವಿಜಯ' ಕೀರ್ತನೆಯು ನಾಡಿನ ತುಂಬೆಲ್ಲ ಕರ್ನಾಟಕತ್ವ ಮತ್ತು ಭಾರತೀಯತ್ವದ ನವಚೈತನ್ಯದ ಹೊಳೆ ಹರಿದಾಡುವಂತೆ ಮಾಡಿತು.

ಶ್ರೀಕೃಷ್ಣದಾನಾಮೃತ (೧೯೨೬) :

ಶ್ರೀಕೃಷ್ಣದಾನಾಮೃತ ಒಂದು ಅತಿಸುಂದರವಾದ ಕಾವ್ಯ. ಇದರ ಪೀಠಿಕೆಯಲ್ಲಿ ಬರುವ ಕನ್ನಡದ ಅಭಿಮಾನವಿಷಯಕವಾದ ಮಾತುಗಳಂತೂ ಸರಿಯೇ. ಇಡೀ ಕಾವ್ಯದ ಉದ್ದೇಶವೇ ಘನವಾದುದು. ಶಾಂತಕವಿಗಳ ಅನೇಕ ಕೃತಿಗಳಂತೆ ಇದೂ ಮುದ್ರಣ ಕಾಣದೆ ಮೂಲೆಯಲ್ಲಿ ಬಿದ್ದಿತ್ತು. ಶಾಂತಕವಿಗಳು ತಾವು ತೀರಿಕೊಳ್ಳುವ ಒಂದೆರಡು ವರ್ಷ ಪೂರ್ವದಲ್ಲಿ ಹುಬ್ಬಳ್ಳಿಯಲ್ಲಿ ಇದನ್ನು ಕೀರ್ತನರೂಪವಾಗಿ ಹೇಳಿದರು. "ಕನ್ನಡ ಭಾಷೆಯ ಮೇಲಿನ ಅಭಿಮಾನದಿಂದ ಮೈಯುಬ್ಬಿ ಕುಣಿಕುಣಿದಾಡಿ ಅವರು ಮಾಡಿದ ಕೀರ್ತನದಿಂದ ಜನರೆಲ್ಲರೂ ಆನಂದಪರವಶರಾದರು." ಆ ಕಥೆ

---

೧ ಶ್ರೀ ವಿದ್ಯಾರಣ್ಯ ವಿಜಯ : ೧೯೧೮ : ಪು. ೩೨.

೨ ಅದೇ : ಪು. ೩೩.

ಯನ್ನು ತಿದ್ದಿ ಬರೆದು ಕೊಡಬೇಕೆಂದು ಆಲೂರ ವೆಂಕಟರಾಯರು ಹೇಳಿದಾಗ ಕವಿಗಳು ಅದನ್ನು ಬರೆದುಕೊಟ್ಟರು. ಅದಾದ ನಂತರವೂ ಈ ಕೃತಿಯು ೭-೮ ವರ್ಷ ಅಜ್ಞಾತವಾಸದಲ್ಲಿಯೇ ಉಳಿದು ಸನ್ ೧೯೨೬ ರಲ್ಲಿ ಪ್ರಕಟವಾಯಿತು.

ಶಾಂತಕವಿಗಳ ಬಗೆಗೆ ವೆಂಕಟರಾಯರು ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ :

"ಹಲವು ಹೂವುಗಳು ಕಾಡಿನಲ್ಲಿ ಅರಳಿ, ದಾರಿಗರ ಕಂಗಳಿಗೆ ಕಾಣದೆ, ದೂಳದಲ್ಲಿ ಉರುಳಿ, ಬಾಡಿ ಹೋಗುತ್ತವೆ. ಶಾಂತಕವಿಗಳ ಅನೇಕ ಕವಿತೆಗಳ ಹಾಡು ಹೀಗೇ ಆಗಿದೆ. ಕನ್ನಡಿಗರಲ್ಲಿ ಅಭಿಮಾನಲೇಶವು ಇಲ್ಲದಿರುವ ಕಾಲದಲ್ಲಿ ಅವರು ಹುಟ್ಟಿದರು. ಬಡ ಶಾಲಾಮಾಸ್ತರರಾಗಿ ಹಳ್ಳಿಗಳಲ್ಲಿ ಕಾಲ ಕಳೆದರು. ಆದರೆ, ಅವರು ಹುಟ್ಟುಕವಿಗಳಿದ್ದಂತೆಯೇ 'ಹುಟ್ಟುಗನ್ನಡಿಗ'ರಾದ್ದರಿಂದ, ಅವರ ಕನ್ನಡ ಅಭಿಮಾನವು ಬೂದಿ ಮುಚ್ಚಿದ ಕೆಂಡದಂತೆ ಒಳಗಿಂದೊಳಗೇ ಹೊತ್ತುತ್ತಲೇ ಇತ್ತು."[೧]

ಶ್ರೀಕೃಷ್ಣದಾನಾಮೃತ ಎಂಬುದು ಒಂದು ಅಪೂರ್ವ ಕಾವ್ಯ. ಕಾವ್ಯದ ಉದ್ದೇಶ ಘನವಿದ್ದಂತೆಯೇ, ನಿರ್ವಹಣೆಯೂ ಅಪೂರ್ವವಾಗಿದೆ. ಪರಮಾತ್ಮನ ಪತ್ನಿಯರಾದ ರುಕ್ಮಿಣಿ, ಸತ್ಯಭಾಮೆಯರಲ್ಲಿ ಒಬ್ಬೊಬ್ಬರದು ಒಂದೊಂದು ತರಹದ ಭಕ್ತಿ. ರುಕ್ಮಿಣಿಯ ಪ್ರೀತಿ ಬರಿಯ ತುಳಸಿಯ ಉದಕದಂತಿರೆ ಪರಮ ಪಾವನ. ಸತ್ಯಭಾಮೆಯದು ಸಕಾಮ ಈರ್ಷೆ. ತನ್ನ ಸೌಂದರ್ಯಕ್ಕೆ ಮಾರುಹೋಗಿ ಶ್ರೀಕೃಷ್ಣ ತನ್ನನ್ನು ಪ್ರೀತಿಸುತ್ತಾನೆಂದು ಅವಳು ಭಾವಿಸುವಳು. ಪರಮಾತ್ಮನ ಅಂತಃಕರಣದ ಮೂಲಕವಾಗಿಯೇ ಅವನ ಸಾನ್ನಿಧ್ಯ ಸಾಧ್ಯವೆಂಬುದನ್ನು ಮರೆತವಳು ಸತ್ಯಭಾಮೆ ! ಅವಳಿಗೆ ಸರಿಯಾದ ದಾರಿ ತೋರಿಸಬೇಕೆಂದು ಕೃಷ್ಣಪರಮಾತ್ಮ ಅವಳ ಮಂದಿರಕ್ಕೆ ಎಷ್ಟೋ ದಿವಸ ಕಾಲಿಡುವದಿಲ್ಲ. ಇದರಿಂದ ಅವಳ ಅಭಿಮಾನ ಹೆಡೆತುಳಿದ ಹಾವಿನಂತೆ ಫೂತ್ಕರಿಸಹತ್ತುತ್ತದೆ. ಅವಳು ಸಿಟ್ಟಿನ ಕೆಂಡವಾಗುತ್ತಾಳೆ. ಅದೇ ಸಮಯಕ್ಕೆ ತನ್ನ ಅರಮನೆಗೆ ಬಂದ ನಾರದರನ್ನು ಕೃಷ್ಣನನ್ನು ತನ್ನ ಮನೆಗೆ ತರಿಸಿಕೊಳ್ಳಬೇಕಾದ ಮಾರ್ಗ ಯಾವುದೆಂದು ಕೇಳುತ್ತಾಳೆ. ಸರ್ವಾರ್ಪಣಭಾವದಿಂದ ಪರಮಾತ್ಮನನ್ನು ಒಲಿಸುವ ಸರಳ ಮಾರ್ಗವನ್ನು ಬಿಟ್ಟು ತಾಮಸದ ಅಹಂಕಾರದ ಮಾರ್ಗಕ್ಕೆ ಒಲಿಯುತ್ತಾಳೆ. ಅವಳು ನಾರದರಿಗೆ ಹೀಗೆ ಹೇಳುತ್ತಾಳೆ :

ಹರಿಯನೊಲಿಸುವ ಯಂತ್ರಮಂತ್ರಗಳಿರಲಿ
ಪರಮದಾನಗಳಿರಲಿ ಕಠಿಣವ್ರತಗಳಿರಲಿ
ಪಿರಿದಾದ ಮದ್ದಿರಲಿ ಮಾಟ ಮೋಸಗಳಿರಲಿ ಯಿನ್ನಾವುದಾದರಿರಲಿ
ಮರೆದು ಮೈ ಪರಿವೆಯಂ ಮಾಳ್ಪೆನೈ ನಿರ್ಭಯದಿ
ನರುಹೆಲೈ ಕೃಷ್ಣನಂ ಪ್ರಾರ್ಥಿಪುದು ಸಾಕವನೆ
ಬರುವವೋಲ್ ಮಾಡಿ ಹೆಣ್ಣೆದೆಯ ಹೇವಂ ತೋರ್ಪೆನೆಂದು ಮುನಿಯಂ ಕೇಳ್ದಳು

ನಿರಶನರು, ನಿಷ್ಪಾಪಮಯರು, ತಾಪಸರು ಎಲ್ಲರರಸುತಿಹ ಸನ್ಮೂರ್ತಿ ಇವಳ ಕೈಪಿಡಿದಿರಲು ಇವಳಿಗೆ ಈ ಬುದ್ಧಿ ಏಕೆ ಬಂದಿತು ಎಂದು ದೇವಮುನಿಗೆ ಆಶ್ಚರ್ಯವಾಗುತ್ತದೆ.

ಹರಹರಾ ದುರ್ಭಾಗ್ಯದಾಟವಿದು ಬಹುಚಿತ್ರ
ತರವಾಗಿಹುದು ತನ್ನ ಪುಣ್ಯಪರಿಪಾಕದಿಂ
ಕರದೊಳಗೆ ಪಾಯಸಪೂರ್ಣಪಾತ್ರಮದಿರಲು ಸೇವಿಸದಲಾಸುಧೆಯನು
ಅರಸಿ ಬರೆವರಟೆಯಂ ಸಾಸದಿಂ ನೆಕ್ಕಲಾ

---

೧ ಶ್ರೀಕೃಷ್ಣದಾನಾಮೃತ : ೧೯೨೬ : ಪು. ೧.

ತುರ ಬಡುವಳಲ್ಲಕಟ ಕಾಮಿತಾರ್ಥವನೀವ
ಕರುಣಾಸಮುದ್ರನಂ ಶ್ರೀಕೃಷ್ಣನಂ ತಂನ ಪತಿಯನೀಭಾಮೆ ಜರಿದು ೧

ಅದಕ್ಕಾಗಿ ನಾರದ ಇವಳ ಅಹಂಕಾರಭಂಗಕ್ಕಾಗಿ ಒಂದು ಉಪಾಯ ಯೋಚಿಸುತ್ತಾನೆ. ಶ್ರೀಕೃಷ್ಣನನ್ನು ತನಗೆ ಕೂಷ್ಮಾಂಡದಂತೆ ದಾನವಾಗಿ ಕೊಟ್ಟು ಮರಳಿ ಪಡೆಯಬೇಕು. ಈರ್ಷೆಯ ಕಿಚ್ಚಿನಿಂದ ಉರಿದೇಳುತ್ತಿದ್ದ ಸತ್ಯಭಾಮೆಗೆ ಇದೇನು ಮಹಾ ಎನಿಸುತ್ತದೆ. ಶ್ರೀಕೃಷ್ಣನನ್ನು ತನ್ನರಮನೆಗೆ ಕರೆಯಲು ದೂತಿಯನ್ನುಟ್ಟುತ್ತಾಳೆ. ಅವಳು ಜಾಣ್ಮೆಯನ್ನೆಲ್ಲ ಉಪಯೋಗಿಸಿ ಕೃಷ್ಣನಿಗೆ ಬರಹೇಳುತ್ತಾಳೆ. ಕೃಷ್ಣ ಭಾಮೆಯ ಅರಮನೆಗೆ ಬರುತ್ತಾನೆ. ಭಾಮೆ ಉಬ್ಬಿದಳು– ಕೊನೆಗೂ ಕೃಷ್ಣ ತನ್ನೆಡೆಗೆ ಬಂದನೆಂದು. ಕಪ್ಪೊಡಲನುತ್ಸವದಿ ತನ್ನ ಮಂದಿರಕೆ ನಡೆತಪ್ಪುದಂ ಕಂಡು, ಬಲು ಹಿಗ್ಗಿ, ಕೆಳದಿಯ ಬೆನ್ನ ಚಪ್ಪರಿಸಿದಳ್, ಕಂಗಳು ಅರಳಿದವು, ಅಂಗ ಉಬ್ಬಿತು, ಆಕೆಯು ತೊಟ್ಟಿಹ ಕುಪ್ಪುಸದ ಹೊಲಿಗೆ ಛಟ್ಟೆಂದು ಹಾರಿತು. ಸರಿ ! ರಥಸಪ್ತಮಿಯ ದಿವಸ ಶ್ರೀಕೃಷ್ಣನನ್ನು ಕೂಷ್ಮಾಂಡವನ್ನು ದಾನವೀಯುವಂತೆ ನಾರದನಿಗೆ ದಾನವಾಗಿ ಕೊಟ್ಟಳು. ಕೊಟ್ಟು ಹಿಗ್ಗಿದಳು. ' ಉರಿಯೆನ್ನ ಸರಿಸವತಿ ! ರುಕ್ಮಿಣಿಯೆ ! ನೀನೆನ್ನನುರಿಸಿದಕಿಕೋ ಮರಳಿ ಮುಯ್ಯಮಂ ಮಾಡಿದೆನು ! ' ಎಂದು ಅಂದುಕೊಳ್ಳುತ್ತಾಳೆ. ಇತ್ತ ದಾನವಾಗಿ ದೊರಕಿದ ಕೃಷ್ಣನನ್ನು ತನ್ನ ಊಳಿಗದಾಳಾಗಿ ಮಾಡಿಕೊಂಡು ನಾರದನು ಹೊರಡಲು ಸಿದ್ಧನಾಗುತ್ತಾನೆ. ಸತ್ಯಭಾಮೆ ಗಾಬರಿಯಾಗುತ್ತಾಳೆ. ತನಗೆ ದೊರಕುವನೆಂದು ಬಗೆದ ಹರಿಯು ನಾರದನ ಆಳಾಗಿ ಹೊರಡಲಣಿಯಾಗಬೇಕೇ ? ನಾರದನ ಕಾಲನ್ನು ಒತ್ತುತ್ತಿರುವ ಹರಿಯನ್ನು ಕಂಡು ಬಲರಾಮನು ಕ್ರೋಧದಿಂದ ಕಿಡಿಕಿಡಿಯಾಗುತ್ತಾನೆ–

ನಡೆ ಹರಿಯ ನುಡಿಗೇಳ್ದು ಕಡುಮುಳಿದು ಹಲಧರಂ
ಮಡದಿಯೇಂ ದಾನವೇನಿತ್ತಳೇಂ ಮುನಿಪನೇಂ
ಪಡೆದನೇಂ ಪೋದೆಯೇಂ ಪಾದವೇಂ ಸಂವಹನವನ್ನೇನು ಮಾಡುತಿರುವೆ !

ಒಡಹುಟ್ಟಿದವನಾಗಿ ದೊಡ್ಡ ಕೀರ್ತಿಯ ಕೊಟ್ಟೆ ಎಂದು ಅನ್ನುತ್ತಾನೆ. ನಾರದನು ಹರಿಯ ತೂಕದ ಬಂಗಾರವನ್ನು ಕೊಟ್ಟರೆ ಮಾತ್ರ ಹರಿಯನ್ನು ಬಿಡುವೆನೆಂದು ಹೇಳುತ್ತಾನೆ. ಯಾರು ಎಷ್ಟು ಬಂಗಾರ ಹಾಕಿದರೂ ಪರಡಿ ಮೇಲೇಳುವದಿಲ್ಲ. ಸತ್ಯಭಾಮೆ ತನ್ನ ಆಭರಣಗಳನ್ನೆಲ್ಲ ಹಾಕುತ್ತಾಳೆ. ಅಂದರೂ ಬಂಗಾರದ ತೂಕ ಹೆಚ್ಚಾಗುವದಿಲ್ಲ. ಕೊನೆಗೆ ಸಾಧ್ವಿ ರುಕ್ಮಿಣೀದೇವಿಯನ್ನು ಕರೆಸಿ ಹರಿಯ ತೂಕಕ್ಕೆ ಸರಿಯಾದ ಬಂಗಾರವನ್ನು ಹಾಕಬೇಕಾಗಿ ಪ್ರಾರ್ಥಿಸುತ್ತಾರೆ. ಸಾಧ್ವಿ, ಪತಿವ್ರತೆ ರುಕ್ಮಿಣೀದೇವಿ ಬಂದು ನಡೆದುದನ್ನೆಲ್ಲ ನೋಡುತ್ತಾಳೆ. ಹರಿಯ ತೂಕದ ಬಂಗಾರ ! ಎಲ್ಲಿ ಸಾಧ್ಯ ? ಛೇ ! ಆಗದ ಮಾತಂ ಹರಿಯನ್ನು ಪರಡಿಯಲ್ಲಿ ಹಾಕಿ ಯಾರು ತೂಗಬಲ್ಲರು ?

ಇವನು ಭಕ್ತಾಧೀನನವನ ತೂಗಲು ಬಲ್ಲ
ರಿವನನೆತ್ತಲು ಬಲ್ಲರಿವನ ಮೆಚ್ಚಿಸಬಲ್ಲ
ರಿವನನಾಡಿಸಬಲ್ಲರಿವನನುಣಿಸಲು ಬಲ್ಲರಿವನಕುಣಿಸಬಲ್ಲರು
ಇವನನಂಕೆಯೊಳಿಡಲು ಬಲ್ಲರೀತನ ಭಕ್ತ
ರವರ ನಿರ್ಮಳ ಭಕ್ತಿಭಾರವನಿಟ್ಟರೇ
ಳುವನೆಂದು ರುಕ್ಮಿಣಿಯು ಪರಡಿಯೊಳ್ ಸುರುವಿರ್ದ ಚಿನ್ನವಂ ತೆಗೆಯಿಸಿದಳು

೧ ಅದೇ : ಪು. ೧೧.

ಹರಿಪಾದಪಂಕರುಹಕೆರಗಿ ರುಕ್ಮಿಣೀದೇವಿ
ಪರಡಿಯೊಳಗಾ ದಳವನಿಟ್ಟು ಕೈಗಳ ಮುಗಿದು
ಪರಮಪುರುಷಾರ್ಥಮಂ ಸಜ್ಜನರಿಗೀಯಲವತರಿಸಿ ಮಾನವರಂದದಿ
ನೆರೆನಟನಮಂಗೆಯ್ವ ಸರ್ವಜ್ಞ ಸರ್ವೇಶ
ಪರಮಾತ್ಮ ಸರ್ವತಂತ್ರ ಸ್ವತಂತ್ರನೆ ಕೃಷ್ಣ
ಪೊರೆ ಭಕ್ತಿಯಭಿಮಾನ ಸರ್ವಸ್ವವದು ನಿನ್ನದೆಂದು ಸಂಪ್ರಾರ್ಥಿಸಿದಳು

ಭಕ್ತಿಪ್ರಪೂರ್ಣವಾಗಿ ರುಕ್ಮಿಣೀದೇವಿ ತುಲಸಿಯ ದಲವನ್ನು ಪರಡಿಯಲ್ಲಿಡಲು–

ತುಲಸಿಯ ದಲದಿ ಹರಿಯ ಮಹಾತ್ಮೆಯಂ ತೋರು
ವೊಲು ರುಕ್ಮಿಣಿಯ ಭಕ್ತಿಯನು ವಿಸ್ತಾರ ಗೈ
ವೊಲು ಸತ್ಯಭಾಮೆ ಪಶ್ಚಾತ್ತಾಪದಿಂದ ಪರಿಶುದ್ಧೆಯಪ್ಪೊಲು ಕೃಷ್ಣನು
ಕುಳಿತ ಪರಡಿಯು ಮೇಲಕೇರ್ದುದಳವಿಹ ಪರಡಿ
ಕೆಳಗಿಳಿದು ಸಮನಾದವೆರಡು ಪರಡಿಗಳಹೋ
ತಿಳಿವುದಾರ್ಗಿವನ ಲೀಲಾಜಾಲಮಾಲೆಯೆಲ್ಲರಿಗಾದುದಾಶ್ಚರ್ಯವು [೧]

ಈ ಕಾವ್ಯದಲ್ಲಿ ವ್ಯಕ್ತವಾದ ಕನ್ನಡ ಭಾಷೆಯ ಅಭಿಮಾನವನ್ನು ಈ ಮೊದಲೇ ವರ್ಣಿಸಿ ಆಗಿದೆ. ಈ ಕಾವ್ಯ ತುಂಬಾ ನವೀನ ದೃಷ್ಟಿಯುಳ್ಳದ್ದೂ ಆಗಿದೆ. ಕಾವ್ಯದ ಸಂದೇಶವೇನೆಂಬುದನ್ನು ಈ ಮೊದಲೇ ಹೇಳಿ ಆಯಿತು. ಅದನ್ನು ಒಂದೇ ಪದ್ಯದಲ್ಲಿ ಶಾಂತಕವಿಗಳು ಹೀಗೆ ಹೇಳಿದ್ದಾರೆ :

ಪತಿಯು ಸವತಿಯನುಳಿದು ತನಗೆ ಮೋಹಿಸುವಂತೆ
ಪತಿಯುವಶಮಾಡಿಕೊಳ್ಳಲು ಸಕಾಮೋಪ್ಷೆಯಿಂ
ಪತಿಸೇವೆಯಂ ಬಿಟ್ಟಿತರ ಕುತ್ಸಿತೋಪಾಯಗಳನು ಕೈಕೊಂಡು ಕಡೆಗೆ
ಗತಿಗಾಣದಳಲುವ ಮರುಳ್ತನದ ಸತಿಗೆ ಶಾ
ಶ್ವತ ಸುಖವು ಪತಿಯಿಂದಲೆಂಬ ತಾತ್ಪರ್ಯವೀ
ಕಥೆಯೊಳಿಹುದೆನ್ನಕ್ಕತಂಗಿಯರು ಮೇಣಣ್ಣತಮ್ಮಂದಿರಿರಿದನೋದಲಿ

ಕಾವ್ಯದಲ್ಲಿ ಯಾವ ವರ್ಣನೆ ಉಚಿತ, ಯಾವುದು ಅನುಚಿತ ಎಂಬ ಪ್ರಜ್ಞೆ ಶಾಂತಕವಿಗಳಿಗಿದ್ದಿತು. ಸತ್ಯಭಾಮೆಯ ಮನೆಗೆ ಹೊರಟ ದೇವಋಷಿಯು ವಾರನಾರಿಯರ ಕೇರಿಯಲ್ಲಿಯೂ ಹಾಯ್ದು ಹೋಗುತ್ತಾನೆ. ಇದು ಅನುಚಿತವೆಂದು ಕವಿಗಳಿಗೆ ಗೊತ್ತು. ಆದರೂ ಇದನ್ನು ವರ್ಣಿಸಿದ್ದಾರೆ. ಈ ಸಂಕೋಚವನ್ನು ಅವರು ಹೀಗೆ ಒಪ್ಪಿಕೊಳ್ಳುತ್ತಾರೆ :

ಪುರವ ನಸು ಬಣ್ಣಿಸಲು ಬಯಸಿ ಸೂರ್ಯೋದಯದಿ
ಸುರಮುನಿಪನಂ ದ್ವಾರಕೆಯ ಬೀದಿಬೀದಿಯೊಳ್
ಕರೆದೊಯ್ದು ಹಾಯಿಸಿದೆನಿದು ಕಥೆಗೆ ಸಂಬಂಧವಲ್ಲವೆಂದಾನೊಪ್ಪುವೆ

ಶಾಂತಕವಿಗಳ ವರ್ಣನಾ ಕೌಶಲ್ಯದ ಮಾದರಿಗಾಗಿ ಹಾರುವರ ಕೇರಿಯನ್ನು ವರ್ಣಿಸುವ ಈ ಕೆಳಗಿನ ಪದ್ಯವನ್ನು ನೋಡಬಹುದು :

---

೧ ಅದೇ : ಪು. ೩೬.

ಕೆಲವರು ಮಿಂದವರು ಮೀವರ್ಕೆಲರು ಪೊಗಗಳಂ
ತೊಳೆದು ಕೊಳ್ವರ್ಕೆಲರ್ ಪುಷ್ಪಪತ್ರಂಗಳಂ
ಕೆಲರಾಯುವರ್ ತುಟಿಗಳೊಳಗೆ ಮಂತ್ರಂಗಳಂ ಗುಣಗುಣಿಸುವರ್ ಕೆಲವರು
ಕೆಲವರು ತುಲಸಿಗೆ ನೀರನೆರೆಯುವರ್ ಮೃತ್ತಿಕೆಯ
ತಳೆಯುವರ್ಕೆಲರು ಮೇಲ್ದನಿಯಿಂದ ಶಿಷ್ಯರಿಗೆ
ಕಲಿಸುವರ್ ವೇದಪಠಣಕ್ರಮವ ಕೆಲರಲ್ಲಿ ಹಾರುವರ ಕೇರಿಯಲ್ಲಿ

ಉಜ್ವಲವಾದ ಕನ್ನಡ ಪ್ರಜ್ಞೆ, ಯುಕ್ತಾಯುಕ್ತ ಕಾವ್ಯವಿಚಾರ, ಅಮೋಘವಾದ ಜೀವನ ಸಂದೇಶ, ಸರಸವಾದ ವರ್ಣನೆಗಳು, ಲಾಲಿತ್ಯಪೂರ್ಣವಾದ ಶೈಲಿ– ಇವುಗಳ ಮೂಲಕ ಶ್ರೀಕೃಷ್ಣ ದಾನಾಮೃತ ಒಂದು ಅಪೂರ್ವವಾದ ಕೃತಿಯಾಗಿದೆ.

ಶ್ರೀರುಕ್ಮಿಣಿಯ ನಗೆಯ ಬೆಳಕು ಬಾವನ್ನದ
ಣ್ಬಾರುಚಿರಕೌಸ್ತುಭದ ಕಾಂತಿ ಸತ್ಕಂಚುಕಂ
ಕೋರಯಿಸುತಿರುವ ಭಾಮೆಯ ಕಣ್ಣ ಕುಡಿಗದಿರ್ ಪಾವಾರವಾಗಿದ್ದರೂ
ನೀರದ ಶ್ಯಾಮನೆಂತಲೆ ನಿನ್ನ ಬಣ್ಣಿಸಿದ
ಸೂರಿಗಳ ಸೂರಿತನದಿಂದೆನಗೆ ಬಹುದೇನು
ಶ್ರೀರಮಣ ! ನಿನ್ನ ನಿಜವರ್ಣಮಂ ಕಾಂಬ ದೃಷ್ಟಿಯನಿತ್ತು ಪಾಲಿಸೆನ್ನನು

ರಾವಣ-ವೇದವತಿ (೧೯೧೯) :

ಶಾಂತಕವಿಗಳು ರಚಿಸಿದ ಕೀರ್ತನೆಗಳಲ್ಲಿ ರಾವಣ–ವೇದವತಿ ಪ್ರಾಯಶಃ ಅತ್ಯುತ್ತಮವಾದ ಕೀರ್ತನೆ. ಇದು ಧಾರವಾಡ ಕರ್ನಾಟಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿತವಾಗಿ ೧೦–೧–೧೯೧೯ ರ ದಿವಸ ಪ್ರಭಾತ ಪುಸ್ತಕ ಮಾಲೆಯ ಪ್ರಥಮ ಪುಸ್ತಕವಾಗಿ ಪ್ರಕಟವಾಯಿತು. ಇದನ್ನು ಲೇಖಕರು ಕಾವ್ಯಪ್ರಿಯರೂ, ಕೀರ್ತನಲೋಲುಪರೂ, ಹುನಗುಂದದ ಅಂದಿನ ಮಾಮಲೇದಾರರಾಗಿದ್ದ ಬಂಡೋರಾವ ಶಿರೋಳಕರ್, ಬಿ.ಎ. ಅವರಿಗೆ ವಿನಯದಿಂದ ಕಾಣಿಕೆಯಾಗಿ ಅರ್ಪಿಸಿದ್ದಾರೆ.

ಈ ಕೀರ್ತನದ ಪ್ರಸ್ತಾವನೆಯಲ್ಲಿ ಕವಿಗಳು ಹೀಗೆ ಹೇಳಿದ್ದಾರೆ :

" ಎಲೈ ಕನ್ನಡ ನುಡಿಯ ಅಭಿಮಾನಿಗಳಿರಾ ! ಕನ್ನಡಿಗರಾದ ನಮ್ಮ ಕೀರ್ತನಕಾರರು ಮರಾಠಿ, ಹಿಂದುಸ್ಥಾನಿ ಮುಂತಾದ ಅನ್ಯ ಭಾಷೆಗಳೊಳಗಿನ ಕವಿತೆಗಳನ್ನು, ಕನ್ನಡ ಕವಿತೆಗಳನ್ನು ಬೆರಸಿಕೊಂಡು ಭತ್ತಾ ಮೊಸರು ಕೂಡಿಸಿ ಕಲಿಸಿದಂತೆ, ಕೀರ್ತನಗಳನ್ನು ಮಾಡುತ್ತಾರೆ. ಇದರಿಂದ ಕನ್ನಡ ನುಡಿಯ ಅಪಮಾನವೂ ಅಪಕೀರ್ತಿಯೂ ಆಗುತ್ತದೆ. ಇವು ಆಗಬಾರದೆಂಬ ಅಭಿಮಾನದಿಂದ ನಾವು ಕನ್ನಡದಲ್ಲಿ ೧೦–೧೨ ಕೀರ್ತನಗಳನ್ನು ರಚಿಸಿರುತ್ತೇವೆ. ಅವುಗಳಲ್ಲಿ ಈ ರಾವಣ–ವೇದವತಿಯೆಂಬ ಕೀರ್ತನವು ಒಂದು. ''

ಸಾಮಾನ್ಯವಾಗಿ, ಶಾಂತಕವಿಗಳು ತಮ್ಮ ಪ್ರತಿಯೊಂದು ಗ್ರಂಥದ ಪ್ರಸ್ತಾವನೆಯಲ್ಲಿಯೂ ಆ ಆ ಗ್ರಂಥದ ಸಂದೇಶವೇನು ಎಂಬುದರ ಬಗ್ಗೆ ಹೇಳುವದುಂಟಷ್ಟೇ ! ಆ ಮೇರೆಗೆ ಈ ರಾವಣ– ವೇದವತಿ ಕೀರ್ತನದ ಸಂದೇಶವೇನೆಂಬುದನ್ನು ಈ ರೀತಿಯಾಗಿ ಹೇಳಿದ್ದಾರೆ :

"ಕಾಮವಿಕಾರವುಳ್ಳ ಪುರುಷಾಧಮರು ಸುಂದರಿಯರಾದ ಪರಸ್ತ್ರೀಯರನ್ನು ಕಂಡು, ಎಚ್ಚರ ದಪ್ಪಿ, ನಿರ್ಲಜ್ಜರಾಗಿ, ಮನುಷ್ಯತ್ವವನ್ನು ಬಿಟ್ಟು, ಆಡುವ ಅಶ್ಲಾಘ್ಯವಾದ ಉಕ್ತಿಗಳನ್ನು, ಆಚರಿಸುವ ನಿಂದ್ಯವೃತ್ತಿಯನ್ನು ರಾವಣನ ಪಾತ್ರದಿಂದ ಪರಿಷ್ಕಾರವಾಗಿ ವ್ಯಕ್ತಮಾಡಿರುತ್ತೇವೆ. ಇದರಂತೆಯೇ ಕಾಮವಿಕಾರಿಗಳಾದ ಪರಪುರುಷರನ್ನು ಅನೇಕ ರೀತಿಗಳಿಂದ ಧಿಕ್ಕಾರ ಮಾಡಿ, ಸದುಪದೇಶ ಮಾಡಿ, ಶಾಸನಗೊಳಿಸಿದ ಸಾಧ್ವೀಮಣಿಗಳ ಉಕ್ತಿಗಳನ್ನೂ, ಸದ್ವರ್ತನವನ್ನೂ, ನಿರ್ಧಾರವನ್ನೂ ವೇದವತಿಯ ಪಾತ್ರದಿಂದ ವ್ಯಕ್ತಮಾಡಿರುತ್ತೇವೆ. ಮತ್ತು ತನ್ನಲ್ಲಿ ಅನನ್ಯಭಕ್ತಿಯನ್ನಿಟ್ಟು ಸದ್ವರ್ತನದಿಂದ ವರ್ತಿಸುವ ಭಕ್ತರ ಇಚ್ಛೆಯನ್ನು ಶ್ರೀಹರಿಯು ಎಷ್ಟು ಅಭಿಮಾನದಿಂದ ಬೇಗ ಪೂರ್ಣ ಮಾಡುತ್ತಾನೆಂಬುದನ್ನು ಶ್ರೀಮದ್ರಾಮಾವತಾರವಾಯಿತೆಂಬ ಮಾತಿನಿಂದ ವಿಶದೀಕರಿಸುತ್ತೇವೆ."

ಈ ಕೀರ್ತನೆಯನ್ನು ಕವಿಗಳು ಧಾರವಾಡ, ವಿಜಾಪುರ, ಬೆಳಗಾವ ಜಿಲ್ಲೆಗಳಲ್ಲಿ ಸ್ವತಃ ಓಡಾಡಿ ಮಾಡಿದರು. ಈ ಕೀರ್ತನೆಯಲ್ಲಿ ಬರುವ ಕನ್ನಡ ಸಂಸ್ಕೃತಗಳ ಹಿತವಾದ ಬಳಕೆ, ಸುಭಗವಾದ ಪ್ರಾಸಾದಿಕ ಶೈಲಿ ಮತ್ತು ಮನೋಹರವಾದ ಸಂದೇಶಗಳು ಇದಕ್ಕೆ ಹೆಚ್ಚಿನ ಸ್ಥಾನವನ್ನು ಕಲ್ಪಿಸಿ ಕೊಟ್ಟವೆ.

ಭೂಮಿಯ ಮೇಲೆ ಹುಟ್ಟಿ ಬಂದ ಮೇಲೆ ಮನುಷ್ಯನು ಪರಮಾತ್ಮನನ್ನು ಹೊಂದಲು ಯತ್ನಿಸ ಬೇಕು. ಆದರೆ, ಅದನ್ನು ಸಾಧಿಸುವ ಬಗೆ ಹೇಗೆ ?

ಭಾವೇನ ದೇವಂ ಕಲಯಾ ನರೇಂದ್ರಂ,
ಧನೇನ ಕಾಂತಾಂ, ಕಪಟೇನ ಶತ್ರುಂ,
ಸತ್ಯೇನ ಮಿತ್ರಂ, ಕೃಪಯಾ ಚ ಪುತ್ರಂ,
ಜ್ಞಾನೇನ ಮೋಕ್ಷಂ, ವಶಮಾನಯಂತಿ

ಪರಮಾತ್ಮನು ಭಕ್ತಿಪ್ರಿಯನಾದುದರಿಂದ ಅವನು ಭಕ್ತಿಯನ್ನೇ ಮಾತ್ರ ನೋಡುವನಲ್ಲದೆ, ಭಕ್ತನ ಅವಗುಣಗಳನ್ನು ಲಕ್ಷಿಸುವದಿಲ್ಲ. ಹೇಗಂದರೆ–

"ವ್ಯಾಧಸ್ಯಾಚರಣಂ ಧ್ರುವಸ್ಯ ಚ ವಯೋ, ವಿದ್ಯಾ ಗಜೇಂದ್ರಸ್ಯ ಕಾ ?
ಕಾ ಜಾತಿರ್ವಿದುರಸ್ಯ, ಯಾದವಪತೇರುಗ್ರಸ್ಯ ಕಿಂಪೌರುಷಂ ?
ಕುಬ್ಜಾಯಾಃ ಕಮನೀಯರೂಪಮಧಿಕಂ ಕಿಂ ತತ್ ಸುದಾಮ್ನೋಧನಂ ?
ಭಕ್ತ್ಯಾ ತುಷ್ಯತಿ ಕೇವಲಂ, ನತು ಗುಣೈಃ ಭಕ್ತಿಪ್ರಿಯಃ ಶ್ರೀಪತಿಃ"

ಇಂಥ ಭಕ್ತಿ ನವವಿಧವಾಗಿದೆ :

"ಶ್ರವಣಂ, ಕೀರ್ತನಂ, ವಿಷ್ಣೋಃ ಸ್ಮರಣಂ, ಪಾದಸೇವನಂ,
ಅರ್ಚನಂ, ವಂದನಂ, ದಾಸ್ಯಂ, ಸಖ್ಯಮ್ ಆತ್ಮನಿವೇದನಂ"

ಇದು ನವವಿಧ ಭಕ್ತಿ. ಯಾವ ಯಾವ ಭಕ್ತರು ಯಾವ ಯಾವ ರೀತಿಯಲ್ಲಿ ಉದ್ಧಾರ ವಾದರೆಂದರೆ–

"ಶ್ರೀಕೃಷ್ಣಶ್ರವಣೇ ಪರೀಕ್ಷಿತರಭೂತ್, ವೈಯ್ಯಾಸಕಿ ಕೀರ್ತನೇ
ಪ್ರಹ್ಲಾದಃ ಸ್ಮರಣೇ, ತದಂಘ್ರಿಭಜನೇ ಲಕ್ಷ್ಮೀಃ, ಪೃಥುಃಪೂಜನೇ
ಅಕ್ರೂರಸ್ತು ಅಭಿವಂದನೇ, ಕಪಿಪತಿರ್ದಾಸ್ಯೇ ಚ ಸಖ್ಯೇರ್ಜುನೋ
ದೇವಸ್ಯಾತ್ಮನಿವೇದನೇ ಬಲಿರಭೂತ್ಸರ್ವಸ್ವ ಸಂಪೂಜನೇ"

ಈ ಭಕ್ತಿಸಾಧನೆಗಾಗಿ ಮನುಷ್ಯ ಮೊದಲು ಷಡ್ರಿಪುಗಳನ್ನು ಗೆಲ್ಲಬೇಕು. ಆ ಷಡ್ರಿಪುಗಳಲ್ಲಿ ಮೊದಲನೆಯದು, ಘೋರವಾದುದು ಕಾಮ. ಕಾಮವನ್ನು ಗೆದ್ದವರು ವಿರಳ. ಎಲ್ಲರೂ ವೀರರು; ಎಲ್ಲರೂ ಶೂರರು; ಕಾಳೆಗದ ಮುಖದಲ್ಲಿ ಕಾಣಬಹುದಲ್ಲದೆ, ಓಡುವ ಮುಖದಲ್ಲಿ ಕಾಣಲಾಗದು. ಗರಿದೋರೆ ಗಂಡರೆಂಬರ ಕಾಣೆ; ನಿರಿಸೋಂಕಲು ಮುನಿಯಿಲ್ಲ. ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಂ. ಕಾಮವಿಕಾರ ಎಂಥವರನ್ನೂ ಬಿಟ್ಟಿಲ್ಲ.

ವಿಶ್ವಾಮಿತ್ರ ಪರಾಶರಪ್ರಭೃತಯೊ ವಾತಾಂಬುಪರ್ಣಾಶನಾಃ
ತೇಪಿ ಸ್ತ್ರೀಮುಖಪಂಕಜಂ ಸುಲಲಿತಂ ದೃಷ್ಟ್ವಾ ವಿಮೋಹಂ ಗತಾಃ ॥

ಅಂತಲೇ ಈ ಕಾಮವನ್ನು ಕುರಿತು ವ್ಯಾಸರು–

ಬಲವಾನ್ ಇಂದ್ರಿಯಗ್ರಾಮಃ ವಿದ್ವಾಂಸಮಪಿಕರ್ಷತಿ– ಎಂದು ಒಂದು ಗ್ರಂಥದಲ್ಲಿ ಬರೆದಿದ್ದರು. ಇದರ ಅರ್ಥವು ಬಲಿಷ್ಠವಾದ ಇಂದ್ರಿಯಗಳು ವಿದ್ವಾಂಸರನ್ನು ಸಹ ಕೆಡಿಸುತ್ತವೆ. ವ್ಯಾಸಶಿಷ್ಯರಾದ ಜೈಮಿನ್ಯಾಚಾರ್ಯರು "ವಿದ್ವಾಂಸಂ ನಾಪಿಕರ್ಷತಿ" ಅಂದರೆ ವಿದ್ವಾಂಸರನ್ನು ಕೆಡಿಸುವದಿಲ್ಲವೆಂದು ಆ ವ್ಯಾಸರ ವಚನವನ್ನು ತಿದ್ದಿದರು. ಈ ಸಂಗತಿಯು ವ್ಯಾಸರಿಗೆ ತಿಳಿಯಿತು. ಕೆಲವು ದಿವಸದ ನಂತರ–

ತರುಣಿಯ ವೇಷವ ಧರಿಸಿಕೊಂಡು ವ್ಯಾಸರು ಜೈಮಿನಿಯಿರ್ದಾಶ್ರಮಕೆ
ಭರದಿಂದೈತಂದರು ಹೂಬಿಸಿಲಿನ ಸಿರಿಯಿಹ ಸಮಯದಲೊಲೆಯುತಲಿ

ಅಪ್ಪರೊಳಗೆ–

ಮಳೆಯುದುರಲು ತೊಡಗಲು, ನಿಂದರು ಸೂರೊಳಗವನಿರುತಿರ್ದಾಲಯದ
ಮಳೆಯಿಂ ತೋದಿಹ ಸಲೆ ಸೆರಗಂ ತೆಗೆದೆಲರಿಗೆ ಹಿಡಿದರೊಣಗಲೆಂದು
ಗಲಕ್ಕೆಂದ ಬಳೆಗಳ ಸಪ್ಪಳವೂ, ಉಲಿದ ಸುಮಂಜೀರ ಧ್ವನಿಯೂ
ಒಳಗಿಹ ಜೈಮಿನಿಗಳ ಕರ್ಣಕೆ ಬೀಳಲು ಬಂದರು ಹೊರಗಾರೆಂದು

ನಾರಿಯನು ನೋಡಿದರು, ಮುಳುಗುವ
ಸೂರನಂ ನೋಡಿದರು, ಸುತ್ತಲ
ದಾರುಮಿಲ್ಲದ ನಿರ್ಜನತ್ವವ ನೋಡಿದರು, ಮಳೆಯ
ಧಾರೆಯನು ನೋಡಿದರು, ಕತ್ತಲೆ
ಯೇರಿಕೆಯ ನೋಡಿದರು, ನಿಳಯಕೆ
ಸಾರುವಿತರರ ಹೊತ್ತು ಮೀರಿದುದನ್ನು ನೋಡಿದರು

ಉರಿವ ಕಣ್ಣಿನ ಹರನ ಕೊಳ್ಳದ
ಸ್ಮರನು ಬಡ ಹಾರುವನ ಕೇಳ್ವನೆ
ಭರದಿ ಮೋಹಾಸ್ತ್ರವನು ಕೀಲಿಸಿ ಮರುಳಗೊಳಿಸಿದನು
ಗುರುಗಳುಕ್ತಿಯ ತಿದ್ದಿದನು ತಾಂ
ಮರೆದನೈ ಯುವತಿಯ ಸಮೀಪಕೆ
ಸರಿದನೈ ಮೇಣ್ ಕರೆದನವಳಂ ಯೊಳಗೆ ಬಾಯೆಂದು

ಆಗ ಯುವತಿವೇಷ ಧರಿಸಿದ ವ್ಯಾಸರು ತನ್ನಲ್ಲಿ ಅನುರಕ್ತನಾದ ಪುರುಷನು ಕುದುರೆಯ ಹಾಗೆ ಬಗ್ಗಬೇಕೆಂದೂ, ತಾನು ಬೆನ್ನಮೇಲೆ ಕುಳಿತ ನಂತರ ಅಶ್ವತ್ಥವೃಕ್ಷಕ್ಕೆ ಮೂರು ಪ್ರದಕ್ಷಿಣೆ ಹಾಕಬೇಕೆಂದೂ, ವೇಗ ಕಡಿಮೆಯಾದರೆ, ತಾನು ಕೈಯಲ್ಲಿಯ ಚಬಕದಿಂದ ಮೂರು ಏಟು ಹೊಡೆಯುವದಾಗಿಯೂ ಹೇಳಿದರು. 'ವಿದ್ವಾಂಸಂ ನಾಪಿಕರ್ಷತಿ' ಎಂದು ತಿದ್ದಿದ ಜೈಮಿನಿಗಳು ಈಯೆಲ್ಲ ಕರಾರುಗಳಿಗೂ ಸಿದ್ಧರಾಗಿ—

ತರುಣಿಯಾಡಿದ ನುಡಿಯ ಕೇಳ್ದನು
ಕರದಿ ಚಬಕವ ತಂದುಕೊಟ್ಟನು
ತುರಗದೊಲು ಬಾಗಿದನು ಗಡ ಹತ್ತೆಂದು ಹೇಳಿದನು
ಕಿರುನಗೆಯ ನಗುತೇರಿದಳಂ ಭರ
ಭರನೆ ನಡೆದುದು ಕುದುರೆಯರಳಿಯ
ಮರವಸುತ್ತಲು ಮದನಮಂತ್ರಗಳಿಂದ ಮರುಳಾಗಿ

ತುರಗವಾಮರವನ್ನು ಸುತ್ತುತ
ಲಿರಲು ವೇದವ್ಯಾಸರುಚ್ಚ
ಸ್ವರದಿ ಬಲವಾನಿಂದ್ರಿಯಗ್ರಾಮಾಖ್ಯವಾಕ್ಯವನು
ಎರಡು ಮೂರಾವರ್ತಿ ನುಡಿಯುತ
ತುರಗಮಂ ಸೆಳೆಸೆಳೆದಿಳಿದು ನಗೆ
ವೆರಸಿ ನಿಂದರು ವ್ಯಾಸರಂದದಿ ಜೈಮಿನಿಯ ಮುಂದೆ

ಇದರಿಂದ ಬುದ್ಧಿ ಕಲಿತವರಾದ ಜೈಮಿನ್ಯಾಚಾರ್ಯರು ಪುನಃ ಆ ವಾಕ್ಯವನ್ನು ಮೊದಲಿನಂತೆಯೇ ತಿದ್ದಿದರು. "ಜೈಮಿನ್ಯಾಚಾರ್ಯರಂಥವರ ಅವಸ್ಥೆಯೇ ಹೀಗಾದ ಮೇಲೆ ಉಳಿದವರ ಪಾಡೇನು?.... ಇದರಿಂದ ಆಗುವ ಅನರ್ಥವನ್ನು ಕುರಿತು ರಾಮಾಯಣದ ಆದಿ ಭಾಗದಲ್ಲಿರುವ ಒಂದು ಸಣ್ಣ ಕಥೆಯನ್ನು ನಿರೂಪಿಸುತ್ತೇವೆ ಕೇಳು" ಎಂದು ಹೇಳಿ ಶಾಂತಕವಿಗಳು ರಾವಣ–ವೇದವತಿಯರ ಕಥೆಯನ್ನು ಹೇಳಲು ಪ್ರಾರಂಭಿಸುತ್ತಾರೆ.

ವೇದವತಿಯ ಸೌಂದರ್ಯಕ್ಕೆ ಮನಸೋತ ರಾವಣನಿಗೆ ಬುದ್ಧಿ ಕಲಿಸಲು ಅವಳು ಬೆಂಕಿಯಲ್ಲಿ ಹಾರಿಕೊಂಡ ಕಥೆ ಈ ಕೀರ್ತನದಲ್ಲಿ ಬರುತ್ತದೆ. ಕಾಮಾಂಧ ರಾವಣನ ಕಥೆಯು ಹಿನ್ನೆಲೆಯಾಗಿ ಬಂದ ಜೈಮಿನಿ ಪ್ರಸಂಗ, ತೀರ ಸಮರ್ಪಕವಾಗಿ ಉದಾಹೃತವಾದ ಸಂಸ್ಕೃತ ಶ್ಲೋಕಗಳು, ಇಲ್ಲಿಯ ಪದ್ಯಗಳ ಕಾವ್ಯಮಯತೆ, ರಾವಣ–ವೇದವತಿ ಕೀರ್ತನಕ್ಕೆ ಕೀರ್ತನಸಾಹಿತ್ಯದಲ್ಲಿ ತೀರ ಹೆಚ್ಚಿನ ಸ್ಥಾನವನ್ನು ಕಲ್ಪಿಸಿ ಕೊಟ್ಟಿವೆ.

ಅಡ್ಡಕತೆಗಳ ಬುಕ್ಕು (?) :

ಈ ಪುಸ್ತಕ ನೋಡಲು ಸಿಗಲಿಲ್ಲ. ಇದರ ಒಂದು ಪ್ರತಿ ಲಂಡನ್ನದ ಇಂಡಿಯಾ ಲಾಯಬ್ರರಿಯಲ್ಲಿದೆ. ಈ ಪುಸ್ತಕದಲ್ಲಿ ಹರಿಕೀರ್ತನಕಾರರು ಕೀರ್ತನ ಹೇಳುವಾಗ ಹೇಳುವ ಅಡ್ಡಕತೆಗಳನ್ನು ಸಂಗ್ರಹಿಸಿ ಹೇಳಲಾಗಿದೆಯಂತೆ. ಈ ಕತೆಗಳು ತುಂಬಾ ಮನೋರಂಜಕವೂ, ಹಾಸ್ಯಪ್ರಧಾನವೂ ಆಗಿವೆಯೆಂದು ಓದಿದವರು ಹೇಳುತ್ತಾರೆ.[೧] ಇದನ್ನು ನೋಡಿದರೆ, ಅಂದಿನ ಕಾಲದಲ್ಲಿ ಎಷ್ಟು ಉತ್ಸಾಹಯುತವಾಗಿಯೂ ವೈವಿಧ್ಯಪೂರ್ಣವಾಗಿಯೂ ಬರೆಯಲು ಶಾಂತಕವಿಗಳು ಯತ್ನಿಸಿದರೆಂಬುದನ್ನು ಕಾಣುತ್ತೇವೆ.

೧ ಈ ಮಾತುಗಳನ್ನು ಹೇಳಿದವರು ಕವಿಭೂಷಣ ಬೆಟಗೇರಿ ಕೃಷ್ಣಶರ್ಮರು.

ಕವಿಕಂಠಕುಠಾರ (?) :

ಇದೊಂದು ಕಲ್ಪಿತ ಕಾದಂಬರಿ ಎಂದು ವರ್ಣಿಸಲಾಗಿದೆ. ಆದರೆ ನೋಡಲು ಲಭ್ಯವಾಗಲಿಲ್ಲ. ಇದು ದೊರಕಿದರೆ ಕನ್ನಡದಲ್ಲಿ ಇದು ಪ್ರಪ್ರಥಮವಾಗಿ ರಚಿತವಾದ ಸಾಮಾಜಿಕ ಕಾದಂಬರಿಯಾಗುತ್ತದೆ. ಶಾಂತಕವಿಗಳ ಅನೇಕ ಪ್ರಥಮಗಳಲ್ಲಿ ಇದೂ ಒಂದು ಎಂಬುದನ್ನು ನಾವು ಗಮನಿಸಬೇಕು.

ಅಲಾವಿಜಂಗು (?) :

ಇದರಲ್ಲಿ ಹಿಂದೂದುಂದುಮೆ ಹಾಡುಗಳನ್ನು ಸರಿಯಾಗಿ ಶಾಂತಕವಿಗಳು ಬಳಸಿದ ಹಾಗೆ, ಮಹಮದೀಯ ಅಲಾವಿ ಹಾಡುಗಳನ್ನೂ ಉಪಯೋಗಿಸಿದ್ದಾರೆಂದು ಓದಿದವರು ಹೇಳುತ್ತಾರೆ.[೧] ಈ ಪುಸ್ತಕವೂ ಉಪಲಬ್ಧವಾಗಲಿಲ್ಲ.

ಈ ರೀತಿ ತುಂಬಾ ಸತ್ವಯುತವೂ, ವೈವಿಧ್ಯಪೂರ್ಣವೂ, ಪಾಂಡಿತ್ಯಪ್ರಪೂರ್ಣವೂ ಆದ ಕಾವ್ಯ ರಚನೆಯನ್ನು ಮಾಡಿ ಶಾಂತಕವಿಗಳು ಹೊಸಗನ್ನಡ ಉದಯಕಾಲದ ಸಾಹಿತಿಗಳಲ್ಲಿ ತೀರ ಹೆಚ್ಚಿನ ಸ್ಥಾನವನ್ನು ಪಡೆದರು. ತಾವು ಕವಿಯೆಂಬ ಕಲ್ಪನೆ ಅವರಲ್ಲಿ ಸ್ಪಷ್ಟವಾಗಿ ಇದ್ದಿತು. ಮತ್ತು ಆ ರೀತಿಯಾಗಿಯೇ ಬಾಳಲು ಅವರು ಬಯಸಿದರು.

ಎನ್ನ ಕೋಣೆಯ ಸುಖವೆ ಸಾಕೆನಗೆ ಜಗದೀಶ
ಇನ್ನಾವುದನ್ನು ನಾನೊಲ್ಲೆನಯ್ಯಾ........
ಶ್ರೀ ಶಾಂತವಿಠ್ಠಲನೆ ಎನ್ನೊಳಿಹ ತವಕೃಪಾ
ಕೋಶದೌದಾರ್ಯದಿಂ ಹೆಚ್ಚಿಗಿನ್ನು
ಐಸಲೇ ಕೊಡುವೆಯಾದರೆ ನೀನೆ ಕೊಡು ಕಾವ್ಯ
ರಾಶಿಯಂ ಬರೆವ ಸುಸ್ಫೂರ್ತಿಯನ್ನು

ಎಂದು ದೇವರಲ್ಲಿ ಪ್ರಾರ್ಥಿಸಿ ಆ ರೀತಿಯಾಗಿ ಅದ್ಭುತವಾದ ಕಾವ್ಯರಾಶಿಯನ್ನು ನಿರ್ಮಿಸಿ ಕೀರ್ತಿಶಾಲಿಗಳಾದರು.

—

೧ ಇದನ್ನು ಹೇಳಿದವರೂ ಶ್ರೀ ಕೃಷ್ಣಶರ್ಮ ಬೆಟಗೇರಿಯವರು.

ರಾಮರಾವ ತಮ್ಮಾಜಿ ಕುಲಕರ್ಣಿ

(೧೮೫೬–೧೯೨೬)

ಇವರ ಊರು ಚೆನ್ನಮ್ಮನ ಕಿತ್ತೂರಿನ ಹತ್ತಿರವಿರುವ ತುರುಕರ ಶೀಗೀಹಳ್ಳಿ ಎಂಬುದು. ಇವರು ಕನ್ನಡ ಮತ್ತು ಮೋಡಿಗಳನ್ನು ಮಾತ್ರ ಕಲಿತಿದ್ದರು. ಇವರ ವೃತ್ತಿ ಕುಲಕರ್ಣಿಕಿ. ಆದರೂ ಇವರ ಮನಃಪ್ರವೃತ್ತಿ ಸಾಹಿತ್ಯದ ಕಡೆಗಿದ್ದಿತು.

ಶ್ರೀಯುತರು ಲಾವಣೀ ಪದಗಳನ್ನು ತಮ್ಮ ವಯಸ್ಸಿನ ಸುಮಾರು ೨೫ ರಿಂದ ಬರೆಯಲು ಪ್ರಾರಂಭಿಸಿ, ಒಟ್ಟಿಗೆ ಸುಮಾರು ೭೦ ಲಾವಣಿಗಳನ್ನು ರಚಿಸಿದ್ದಾರೆ. ಇವುಗಳ ಪೈಕಿ, ಭಕ್ತ ಸುದಾಮ, ಘಟೋತ್ಕಚನ ಸಂಹಾರ, ಗಣಪತಿಯ ಪದ, ಆನೆ ತುಂಬಿಯ ಸಂವಾದ, ದ್ರೌಪದೀ ವಸ್ತ್ರಾಪಹರಣ, ಗಜೇಂದ್ರ ಮೋಕ್ಷ, ಜೋಡಕ್ಷರ ಶೃಂಗಾರ ಪದಗಳು, ಹೆಣ್ಣು ಗಂಡಿನ ಶೃಂಗಾರ ಪದಗಳು ಮತ್ತು ಇಡೀ ಲಾವಣೀ ಪದದಲ್ಲಿ 'ರ' ಕಾರ ಬರದಂತೆ ತಯಾರಿಸಿದ ಲಾವಣೀ ಪದ ಹಾಗೂ ಏಳು ಭಾಷೆಯಲ್ಲಿ ಬರೆದ ಒಂದೇ ಲಾವಣಿ ಪದ ಇವು ಮುಖ್ಯವಾದವುಗಳು. ಶ್ರೀಯುತರು ತಮ್ಮ ಲಾವಣಿಗಳನ್ನು ಬಸವಂತಪ್ಪ ಭೀಮನಗೌಡ್ರ ಎಂಬ ತಮ್ಮ ಶಿಷ್ಯರ ಸುರಮ್ಯ ಕಂಠದಿಂದ ಹೇಳಿಸುತ್ತಿದ್ದರು. ಕೃಷ್ಣರಾವ ನಾಗಾವೆ ಇವರನ್ನು ತಮ್ಮ ಗುರುಗಳನ್ನಾಗಿ ಮಾಡಿಕೊಂಡಿದ್ದರು. ಶೀಗೀಹಳ್ಳಿಯ ಬಲಭೀಮದೇವರನ್ನು ತಮ್ಮ ಆರಾಧ್ಯ ದೇವರೆಂದು ತಮ್ಮ ಲಾವಣಿಗಳ ಕೊನೆಯಲ್ಲಿ ತಿಳಿಸಿದ್ದಾರೆ.[1]

ಇವರ ಶೈಲಿಯ ನಿದರ್ಶನವಾಗಿ ಒಂದೆರಡು ಲಾವಣಿ ಭಾಗಗಳನ್ನು ಇಲ್ಲಿ ಕೊಡಲಾಗಿದೆ. ಒಂದು ಸಲ ಪಾರ್ವತಿ ಪರಮೇಶ್ವರನನ್ನು ಶ್ರೀಕೃಷ್ಣನಿಗೆ ಅನಾಥಬಂಧು ಎಂದು ಏಕೆ ಕರೆಯುತ್ತಾರೆ ಎಂದು ಕೇಳಿದಳಂತೆ. ಅದಕ್ಕೆ ಪರಮೇಶ್ವರ ಪಾರ್ವತಿಗೆ ಅನಾಥಬಾಂಧವನಾದ ಶ್ರೀಕೃಷ್ಣನು ಸುದಾಮನಿಗೆ ಸಹಾಯ ಮಾಡಿದ ಕಥೆಯನ್ನು ಹೇಳುತ್ತಾನೆ.

ಸುದಾಮನ ಬಡತನವನ್ನು ವರ್ಣಿಸುವ ಈ ಭಾಗವನ್ನು ನೋಡಬಹುದು :

ಹುಡುಗರದ ಹಸಿತ ಭಾಳ ಹೊಟ್ಟೆ । ಬೇಡತಕ್ಕಾರ ರೊಟ್ಟಿ । ಕೊರಳಿಗಂಟುಬಿಟ್ಟಿ ಹಾಕಿ
ಹಾಯಿಬಾ । ಯಾರಿಗೆ ಪತಿ ಬಗೆ ಮಾಡಿ ಹಾಕಿ ಅನ್ನ ॥ ಸುದಾಮ ಸುರಿಸಿ ಕಣ್ಣೀರು ।
ಹಾಕಿದಾನ ಉಸಿರು । ಕೊಡ ದೇವರು ಎಂಥಾ ಬಡತನಾ । ಇದರೊಳಗೆ ಉಳಿಯದು ಕರಿನಾ ॥

---

[1] ಈ ವಿವರಗಳನ್ನು ಕೊಟ್ಟವರು ಶ್ರೀಯುತರ ಮೊಮ್ಮಕ್ಕಳು, ಧಾರವಾಡದಲ್ಲಿ ಟಪ್ಪಾಲ ಖಾತೆಯ ಅಧಿಕಾರಿಗಳಾಗಿರುವ ಶ್ರೀ ಆರ್. ಎಚ್. ಕುಲಕರ್ಣಿಯವರು.

ದಾಸರ‍್ಯಾರು ಕೊಡವಲ್ರಿ ಏನೇನಾ । ಎಷ್ಟಂತ ದಿನ ದಿನಾ । ಕೊಟ್ಟಾರ ನಮಗಿನ್ನಾ ॥
ಪುಗಸಟ್ಟೆ ಜನಾ । ಹ್ಯಾಂಗ ತಿರಿಗವರಿಗೆ ಬೇಡೂನಾ ॥

ಸತಿ ಅಂತಾಳ ಏನ ಹೇಳ್ರಿ ಬಗಿ । ಎತ್ತಿ ಹಿಂದ ಕೂಡದೇನಂದ್ರ ಇಲ್ಲ ಮಗಿ ॥ ಎತ್ತ
ಹೋದ್ರ ಮನಿ ಸೋರಿ ಹಾದಾಗಿ । ಸುತ್ತ ಬರುವಂಥ ಗಾಳಿ ಬಿಸಲಿಗಿ ॥

(ಏರು)

ದೀನ ನಮಗವರೂಳವೆಂದು ಸಂತಾಪ ಕುಚ್ಚಿಲಿಗಾಗಿ ಅತಕೊಂತಾ । ಹಿಂತಾವ ಸಂಸಾರದಾಗ
ಸುತ್ತುವುತ್ತಾ । ಅಂತಾವ ಹಸದ ಆಕೋ ಭಾಳಿತ್ತಾ ॥

—

ನರಹರಿರಾವ ಕನಮಡಿ

(೧೮೫೭ – ಸು. ೧೯೨೮)

ಇವರು ಮೂಲತಃ ಅಥಣಿ ಊರಿನವರು. ತಂದೆಯ ಹೆಸರು ರಾಮಚಂದ್ರರಾಯ. ತಾಯಿ ಭೀಮಾಬಾಯಿ. ಇವರ ಜನನ ಭಾರತೀಯ ಸ್ವಾತಂತ್ರ್ಯ ಹೋರಾಟದ ವರ್ಷ ಅಂದರೆ ಇಸ್ವಿ ಸನ್ ೧೮೫೭ರಂದು ಅಥಣಿಯಲ್ಲಿ ಆಯಿತು. ಶ್ರೀಯುತರ ತಂದೆಯವರು ಪ್ರಸಿದ್ಧರಾದ ವಕೀಲರಾಗಿದ್ದರು.

ಶ್ರೀಯುತರ ಪ್ರಾರಂಭಿಕ ಶಿಕ್ಷಣ ಮರಾಠಿ ಭಾಷೆಯಲ್ಲಿಯೇ ಆಯಿತು. ಮೊದಲಿನ ಮೂರು ವರ್ಗಗಳನ್ನು ಮರಾಠಿಯಲ್ಲಿ ಕಲಿತು ನಾಲ್ಕನೆಯ ವರ್ಗದಲ್ಲಿ ಮಾತ್ರ ಕನ್ನಡವನ್ನು ಕಲಿತರು. ಇವರ ಅಣ್ಣಂದಿರೊಬ್ಬರು ಇಂಗ್ಲಿಷ ಕಲಿಯುವಾಗ ತೀರಿಕೊಂಡದ್ದರಿಂದ, ಇವರ ತಂದೆಯವರು ಮಗನ ಇಂಗ್ಲಿಷ ಅಭ್ಯಾಸದ ಸಲುವಾಗಿ ಉತ್ಸುಕರಾಗಿರಲಿಲ್ಲ. ಇವರು ಸನ್ ೧೮೬೭ರಲ್ಲಿ ಆಗಿನ ಜಿಲ್ಲಾ ಸ್ಥಳವಾಗಿದ್ದ ಕಲಾದಗಿಗೆ ಹೋಗಿ ಅಲ್ಲಿ ನಾಲ್ಕು ತಿಂಗಳು ಇಂಗ್ಲಿಷ ಕಲಿತರು. ಇವರು ೧೬ ವರ್ಷದವರಿದ್ದಾಗ, ಅಂದರೆ ಸನ್ ೧೮೭೩ ರಲ್ಲಿ ಮದುವೆಯಾದರು. ವಯಸ್ಸಿನ ೧೮ನೇ ವರ್ಷದಲ್ಲಿ ಪುಣೆ ಪಟ್ಟಣಕ್ಕೆ ಹೋಗಿ ಅಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡಿದರು. ಆದರೆ, ೧೮೭೬ರಲ್ಲಿ ವಿಜಾಪುರಕ್ಕೆ ಮರಳಿ ಬಂದವರು, ಬರಗಾಲದ ಮೂಲಕ ಮರಳಿ ಪುಣೆಗೆ ಹೋಗಲಿಲ್ಲ. ಇದೇ ಕಾಲಕ್ಕೆ ಇವರು ಫರ್ಸ್ಟ್‌ಕ್ಲಾಸ್ ಪಬ್ಲಿಕ್ ಸರ್ವಿಸ್ ಪರೀಕ್ಷೆ ಪಾಸಾಗಿ, ಇಂಜಿನಿಯರ್ ಖಾತೆಯಲ್ಲಿ ೨೫ ರೂಪಾಯಿ ವೇತನದ ಮೇಲೆ ಹಂಗಾಮಿ ಕಾರಕೂನರಾಗಿ ನಿಯಮಿಸಲ್ಪಟ್ಟರು. ಆದರೆ, ೧೮೭೭ ರಲ್ಲಿ ಈ ನೌಕರಿ ಕಡಿಮೆ ಮಾಡಲ್ಪಟ್ಟದ್ದರಿಂದಲೂ, ೧೮೭೯ ರಲ್ಲಿ ಇವರ ತಂದೆಯವರು ಮೃತಿ ಹೊಂದಿದ್ದರ ಮೂಲಕವೂ ಮನೆತನದ ಜವಾಬುದಾರಿಯೆಲ್ಲ ಇವರ ಮೇಲೆಯೇ ಬಿದ್ದಿತು. ಆದ್ದರಿಂದ, ಸರಕಾರಿ ನೌಕರಿ ಸಿಗುವವರೆಗೆ ಶ್ರೀಯುತರು ಒಂದು ಕಿರಾಣಿ ಅಂಗಡಿಯನ್ನು ತೆಗೆಯ ಬೇಕಾಯಿತು. ಮುಂದು ೧೮೮೦ರಲ್ಲಿ ಪುನಃ ಸರಕಾರಿ ನೌಕರಿ ದೊರಕಿತು. ಆದರೆ, ಸ್ವತಂತ್ರ ಪ್ರವೃತ್ತಿಯವರಾದ ಶ್ರೀಯುತರು ೧೮೮೨ ರಲ್ಲಿ ವಕೀಲಿ ಪರೀಕ್ಷೆಯನ್ನು ಪಾಸಾಗಿ, ೧೮೮೨ ರಿಂದ ೧೯೧೬ ರ ವರೆಗೆ ವಕೀಲಿ ವೃತ್ತಿಯನ್ನೇ ನಡೆಸಿದರು. ಅವರು ವಿಜಾಪುರ ನಗರಸಭೆಯ ಪ್ರಥಮ ಲೋಕನಿಯುಕ್ತ ಅಧ್ಯಕ್ಷರಾಗಿಯೂ ಸಮಾಜಸೇವೆಯನ್ನು ಮಾಡಿದರು.

ನರಹರಿರಾಯರಿಗೆ ಮೊದಲು ಸಂಸ್ಕೃತಪದಪರಿಚಯ ಅಷ್ಟಾಗಿ ಇರಲಿಲ್ಲ. ತಮ್ಮ ವಯಸ್ಸಿನ ೫೦ನೆಯ ವರ್ಷದಲ್ಲಿ ಸಂಸ್ಕೃತದ ಅಭ್ಯಾಸವನ್ನು ಪ್ರಾರಂಭಿಸಿ, ಅದರಲ್ಲಿ ವಿಶೇಷವಾದ ಪರಿಣತಿಯನ್ನು ಹೊಂದಿದರು. ವಕೀಲಿ ವೃತ್ತಿಯಿಂದ ನಿವೃತ್ತರಾದ ಮೇಲೆ ಕನ್ನಡದ ಸೇವೆ ಮಾಡಬೇಕೆಂಬ ಅಭಿಲಾಷೆ ಇವರಲ್ಲಿ ತೀವ್ರವಾಯಿತು.

"ಇವರು ಕನ್ನಡದಲ್ಲಿ ಎಷ್ಟೋ ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಪಾರ್ವತೀ ಪರಿಣಯ ಮತ್ತು ಭಗವದ್ಗೀತೆ ಈ ಎರಡು ಗ್ರಂಥಗಳು ಮುದ್ರಿತವಾಗಿವೆ. ಕರ್ನಾಟಕ ವಿದ್ಯಾವರ್ಧಕ ಸಂಘದವರು ಇವರ ರಘುವಂಶವೆಂಬ ಪದ್ಯಗ್ರಂಥದ ಮುದ್ರಣವನ್ನು ಕೈಕೊಂಡಿರುವರು. ಇವಲ್ಲದೆ, ಶಿವಗೀತಾ, ಋತುಸಂಹಾರ, ಉದ್ಯೋಗಪರ್ವ, ರುಕ್ಮಿಣೀಹರಣ, ಮಾನವೀಮೀಮಾಂಸಾ (Pope's Essay on Man) ಮುಂತಾದ ಎಷ್ಟೋ ಗ್ರಂಥಗಳು ಅಚ್ಚಾಗದೆ, ಕೈಬರಹದಲ್ಲಿ ಉಳಿದಿವೆ." ೧

ಹೀಗೆ ಕೈ ಬರಹದಲ್ಲಿ ಉಳಿದ ಇನ್ನೂ ಕೆಲವು ಕೃತಿಗಳೆಂದರೆ 'ಕನ್ನಡ ಗಂಗಾಲಹರಿ', 'ಕನ್ನಡ ಶಿವಗೀತಾರ್ಥ ಪ್ರಕಾಶಿನಿ', 'ಕನ್ನಡ ಮೇಘದೂತ ಕಾವ್ಯ' ಮತ್ತು ಪಾರಿಜಾತೋನ್ನಯನ'. ೨

ನರಹರಿರಾಯರ ಕೃತಿಗಳು :

ಪಾರ್ವತೀ ಪರಿಣಯ (೧೯೨೧) :

೩೨ ಪುಟಗಳ ಈ ಪುಸ್ತಕದಲ್ಲಿ ಪಾರ್ವತಿಯ ಪರಿಣಯದ ಕಥಾನಕವನ್ನು ಭಾಮಿನಿ ಷಟ್ಪದಿಯಲ್ಲಿ ವಿವರಿಸಲಾಗಿದೆ. ಇದು ಸನ್ ೧೯೨೧ರಲ್ಲಿ ಪ್ರಕಟವಾಯಿತು.

ಇದರ ಮುನ್ನುಡಿಯನ್ನು ಬರೆದ ದಿವಂಗತ ಕೌಜಲಗಿ ಶ್ರೀನಿವಾಸರಾಯರು ಹೀಗೆ ಹೇಳಿದ್ದಾರೆ : "With the publication of this poem is brought out the first poetical production of an author unknown to fame till now, as he commenced literary activities rather late in life...... The very few authors who devote their time to literary work in their mother tongue engage themselves in translating foreign authors. The present author is to be congratulated upon his not following this tempting course, but turning to Sanskrit poetry, the perennial spring from which we derive life and joy-giving fluid rasa......"

ಈ ಕೃತಿ ಅಂದಿನ ಪದ್ಧತಿಯಂತೆ ಕೇವಲ ಅನುವಾದವಾಗಿರದೆ, ಸ್ವೋಪಜ್ಞವಾದ ಕೃತಿಯಾಗಿದ್ದಿತು. ಈ ಗ್ರಂಥದ ಬಗೆಗೆ ದಿವಂಗತ ಕೆರೂರ ವಾಸುದೇವಾಚಾರ್ಯರು ಹೀಗೆ ಹೇಳಿದ್ದಾರೆ :

"ರಾಯರಿಗೆ ಭಾಮಿನೀ ಷಟ್ಪದಿಯು ಕೈವಶವಾಗಿ ಹೋಗಿರುವದರಿಂದ ಕಾವ್ಯದ ಸರಣಿಯು ಸುಲಲಿತವಾಗಿ ಸಾಗಿದೆ. ಕುಮಾರ ಸಂಭವ, ಪಾರ್ವತೀ ಪರಿಣಯವೆಂಬ ನಾಟಕ ಹಾಗೂ ಪುರಾಣಾಂತರ್ಗತವಾದ ಕಥಾನಕಗಳ ಸಮ್ಮಿಶ್ರಣವನ್ನು ಮಾಡಿ ಶ್ರೀಯುತ ನರಹರಿರಾಯರು ಪ್ರಸ್ತುತವಾದ ಕಾವ್ಯವನ್ನು ರಚಿಸಿರುವದಾಗಿ ತೋರುತ್ತದೆ. ಅಲ್ಲಲ್ಲಿ ಕವಿಗಳ ಸ್ವತಂತ್ರವಾದ ಕಲ್ಪನೆಗಳೂ ಕಂಡುಬರುತ್ತವೆ."

ರಘುವಂಶ (೧೯೨೮) :

ಇದು ಕವಿಕುಲಗುರು ಕಾಳಿದಾಸನ 'ರಘುವಂಶ' ಕಾವ್ಯದ ಕನ್ನಡಾನುವಾದ. ೨೨೮ ಪುಟಗಳ

೧ ವಾಗ್ಭೂಷಣ : ೧೯೨೫ : ಸಂ. ೧೨ : ಪು. ೨-೪.

೨ ಈ ಹಸ್ತಪ್ರತಿಗಳು ನರಹರಿರಾಯರ ಚಿರಂಜೀವರೂ ವಿಜಾಪುರದ ಪಿ. ಡಿ. ಜೆ. ಪ್ರೌಢಶಾಲೆಯ ಮುಖ್ಯಾಧ್ಯಾಪಕರೂ ಆದ ಶ್ರೀ ಬಿ. ಜಿ. ಕನಮಡಿ ಅವರ ಹತ್ತಿರ ಇವೆ.

ಈ ಗ್ರಂಥ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ೮೬ ನೆಯ ಪುಷ್ಪವಾಗಿ ಪ್ರಕಟವಾಯಿತು. ಗ್ರಂಥ ೧೯೨೮ ರಲ್ಲಿ ಪ್ರಕಟವಾಗಿದ್ದರೂ, ಇದು ಬಹಳ ಮೊದಲೇ ರಚಿತವಾದಂತೆ ಕಾಣುತ್ತದೆ. ನರಹರಿರಾಯರು ೬೦ ವರುಷದವರಿದ್ದಾಗ ಇದನ್ನು ರಚಿಸಿದಂತೆಯೂ, ಆಗ ವಿಜಾಪುರದ ಸರಕಾರೀ ಹಾಯ್‌ಸ್ಕೂಲಿನಲ್ಲಿ ಮುಖ್ಯಾಧ್ಯಾಪಕರಾಗಿದ್ದ ಶ್ರೀ ರಾಮರಾವ ಮಹಿಷಿಯವರ ಪ್ರಯತ್ನದ ಮೂಲಕ ಧಾರವಾಡದಲ್ಲಿ ಇದು ಮುದ್ರಿತವಾದಂತೆಯೂ ಕಂಡುಬರುತ್ತದೆ. ಈ ಗ್ರಂಥಕ್ಕೆ ಮುನ್ನುಡಿಯನ್ನು ಬರೆದ ಶ್ರೀ ಕೆ. ಜಿ. ಅಂಕಲಗಿಯವರು ಹೀಗೆ ಹೇಳಿದ್ದಾರೆ :

"ಪ್ರತಿಭಾಸಂಪನ್ನರಾದ ಕನ್ನಡ ಕವಿಗಳು ಕಾವ್ಯರಚನೆಗೆ ಕೈಯೆತ್ತುವಾಗ ಹಲವು ಮಾತುಗಳನ್ನು ಯೋಚಿಸಬೇಕಾಗಿದೆ. ಕಾವ್ಯಕ್ಕೆ ತಕ್ಕುದಾದ ವಸ್ತುವನ್ನು ಆಯ್ದುಕೊಳ್ಳುವದು; ಓದುಗರ ಯೋಗ್ಯತೆಗೆ ತಕ್ಕಂತಹ ಶೈಲಿಯನ್ನು ನಿರ್ಣಯಿಸುವದು; ಮುಂದೆ ಆ ಕಾವ್ಯದ ಪ್ರಕಟನೆಗೆ ತಕ್ಕ ಸಾಧನ ಸಂಪತ್ತಿಯನ್ನು ಕಲ್ಪಿಸಿಕೊಳ್ಳುವದು.... ಪ್ರಸ್ತುತ ಕಾವ್ಯದ ಕರ್ತರಾದ ಶ್ರೀ ನರಹರಿರಾಯರು ಕಾವ್ಯದ ವಸ್ತುವನ್ನು ಶೋಧಿಸಲು ಹೆಚ್ಚು ಪರಿಶ್ರಮ ಪಡಲಿಲ್ಲವೆಂದು ಹೇಳಬೇಕಾಗುವದು. ಯಾಕಂದರೆ– ಇವರು ಬರೆದ ಋತುಸಂಹಾರ, ಪಾರ್ವತೀಪರಿಣಯ, ಭಗವದ್ಗೀತೆ, ಶಿವಗೀತೆ, ರುಕ್ಮಿಣೀಹರಣ, ಮಾನವೀ ಮೀಮಾಂಸೆ– ಮುಂತಾದುವೆಲ್ಲ ಭಾಷಾಂತರಿತ ಗ್ರಂಥಗಳಾಗಿವೆ. ಕಾಲಕ್ಕೆ ತಕ್ಕಂತೆ ಕಾವ್ಯದ ಶೈಲಿಯು ಮಾರ್ಪಡುವದು ಸಹಜವಾದುದರಿಂದ ಶ್ರೀ ನರಹರಿರಾಯರು ಹಳೆಯ ಬಿಗುವಿನ ಅಕ್ಷರವೃತ್ತಗಳ ಶೈಲಿಯನ್ನು ಬಿಟ್ಟು ಹೊಸದೂ ಸುಗಮವೂ ಆದ ಷಟ್ಪದಿಯ ಮಾರ್ಗವನ್ನು ಆರಿಸಿಕೊಂಡುದರಲ್ಲಿ ಆಶ್ಚರ್ಯವೇನಿದೆ ? "[೧]

ನರಹರಿರಾಯರು ಸಮಗ್ರ ರಘುವಂಶವನ್ನು ಭಾಮಿನಿ ಷಟ್ಪದಿಯಲ್ಲಿ ಅನುವಾದ ಮಾಡಿದ್ದಾರೆ. ಮೂಲದ ಸೌಂದರ್ಯಕ್ಕೆ ಧಕ್ಕೆ ಬಾರದ ಹಾಗೆ, ಬಂಧದ ವಿಸ್ತಾರ ಹೆಚ್ಚದ ಹಾಗೆ, ಜಾಗ್ರತೆ ವಹಿಸಿದ್ದಾರೆ. ಆದರೂ, ಕಾಲಿದಾಸ ಅನನುಕರಣೀಯ. "ಪುರಾಕವೀನಾಂ ಗಣನಾಪ್ರಸಂಗೇ ಕನಿಷ್ಠಕಾವಿಷ್ಠಿತ ಕಾಲಿದಾಸಃ, ತಯೋಃ ತತ್ತುಲ್ಯ ಕವೇರಭಾವಾತ್ ಅನಾಮಿಕಾ ಸಾರ್ಥವತೀ ಬಭೂವ" "ಭಾಸೋಹಾಸಃ ಕವಿಕುಲಗುರುಃ ಕಾಲಿದಾಸೋ ವಿಲಾಸಃ" "ಉಪಮಾ ಕಾಲಿದಾಸಸ್ಯ". ಆದ್ದರಿಂದ ಮೂಲದ ರಘುವಂಶದಲ್ಲಿ ಬರುವ ಶೃಂಗಾರ, ಸೌಂದರ್ಯಗಳ ಕೆಲ ಭಾಗಗಳನ್ನು ಇವರ ಅನುವಾದದ ಕೂಡ ತುಲನೆ ಮಾಡಿ ನೋಡಬಹುದು.

ಇಂದುಮತಿ ಸ್ವಯಂವರ ಕಾಲದಲ್ಲಿ ಇಂದುಮತಿಗೆ ಅವಳ ಸಖಿಯಾದ ಸುನಂದೆಯು ವಿವಿಧ ರಾಜರನ್ನು ಪರಿಚಯ ಮಾಡಿಕೊಡುವಾಗ ಅಂಗರಾಜನ ಬಗೆಗೆ ಹೀಗೆ ಹೇಳುತ್ತಾಳೆ :

> ನಿಸರ್ಗಭಿನ್ನಾಸ್ಪದಮೇಕಸಂಸ್ಥಂ ಅಸ್ಮಿನ್ ದ್ವಯಂ ಶ್ರೀಶ್ಚ ಸರಸ್ವತೀಚ
> ಕಾಂತ್ಯಾ ಗಿರಾ ಸೂನೃತಯಾ ಚ ಯೋಗ್ಯಾ ತ್ವಮೇವ ಕಲ್ಯಾಣಿ ತಯೋಸ್ತೃತೀಯಾ ॥

ಇದರ ಅನುವಾದ ಹೀಗೆ :

> ಭರತ ಭೂತಲದಲ್ಲಿ ಕಾಣದ, ಸಿರಿಯು ಮೇಣ್ ಸರಸತಿಯು ಸಂಗವು
> ನಿರುತದಲ್ಲೀ ರಾಜನಲಿ ನೆಲೆಗೊಂಡು ತೋರುವದು
> ಪರಮ ಸೂನೃತವಾಣಿಯಿಂ ಮೇಣ್ ಸರಸ ಚಲುವಿಕೆಯಿಂದಲೊಪ್ಪುವ
> ತರಳೆ, ನೀನಿವನಲ್ಲಿ ರತಿಯನು ತಾಳಲರ್ಹಳಿಹೆ ॥ [೧]

೧ ರಘುವಂಶ : ೧೯೨೮ : ಪು. ೫೯.

ಇದಕ್ಕೆ ಮನವೊಪ್ಪದ ಇಂದುಮತಿ :

ಅಥಾಂಗರಾಜಾದ್ ಅವತಾರ್ಯ ಚಕ್ಷುಃ ಯಾಹೀತಿ ಕನ್ಯಾಮ್ ಅವದತ್ ಕುಮಾರೀ
ನಾಸೌ ನಕಾಮ್ಯೋ ನ ಚ ವೇದ ಸಮ್ಯಗ್ದ್ರಷ್ಟುಂ ನಸಾ ಭಿನ್ನರುಚಿರ್ಹಿಲೋಕಃ ॥

ಅನುವಾದ :

ನುಡಿದಮೇಲೀಪರಿ ಸುನಂದೆಯು, ತಡೆದು ನಿಂತಿರೆ ರಾಜ ತನುಜೆಯು
ಪೊಡವಿಯೊಡೆಯನ ನೋಡತೊಡಗಿದ ದೃಷ್ಟಿಯನು ತಿರುಹಿ
ಕಡುಗುಣಾನ್ವಿತ ರಾಜನಿರಲುಂ, ಮಡದಿಗವುಗಳ ಜ್ಞಾನವಿರಲುಂ
ಗಡನೆ ಸಖಿ ನಡೆಯೆಂದು ಪೇಳ್ದಳು, ಭಿನ್ನರುಚಿ ಜನರು ॥

ಅನುವಾದದಲ್ಲಿ ಮೂಲದ ಸಾಂದ್ರತೆ (Compactness), ಪ್ರಸಾದ, ಮಾಧುರ್ಯ, ಗಾಂಭೀರ್ಯ ಗಳಿಲ್ಲ. ಕಾಲಿದಾಸನು ಸಾಧಿಸಿದ ಧೀಮಂತಿಕೆ, ಸೊಗಸುಗಳು ಅನುವಾದದಲ್ಲಿ ಜಾಬಾಳವಾಗಿವೆ. ವರಾನ್ವೇಷಿಯಾದ ಇಂದುಮತಿ, ' ಮಡದಿ 'ಯೇ ? ' ಯಾಹೀತಿ ಕನ್ಯಾಂ ಅವದತ್ ಕುಮಾರೀ ' ' ಗಡನೆ ನಡೆಯೆಂದು ' ಎಲ್ಲಿ ಹೇಳಿದಳು ? ' ಗಡನೆ ' ಪಾದಪೂರಣಕ್ಕೋ, ಪ್ರಾಸದ ಅವಶ್ಯಕತೆಗೋ ಬಂದು ಇಂದುಮತಿಯ ಗಾಂಭೀರ್ಯ ಮತ್ತು ಲಾಲಿತ್ಯಗಳನ್ನು ಹಾಳು ಮಾಡಿದೆ. ' ಭಿನ್ನರುಚಿ ರ್ಹಿಲೋಕಃ ' ಎಲ್ಲಿ ? ' ಭಿನ್ನರುಚಿ ಜನರು ' ಎಲ್ಲಿ ?

ಕಾಲಿದಾಸ ಅವಂತಿ ರಾಜನನ್ನು ವರ್ಣಿಸಿದ್ದು ಹೀಗೆ :

ಅನೇನ ಯೂನಾ ಸಹ ಪಾರ್ಥಿವೇನ ರಂಭೋರು ಕಚ್ಚಿನ್ಮನಸಾ ರುಚಿಸ್ತೇ
ಸಿಪ್ರಾತರಂಗಾನಿಲಕಂಪಿತಾಸು, ವಿಹರ್ತುಮುದ್ಯಾನಪರಂಪರಾಸು ॥

ಅನುವಾದ ಃ

ಅನಿಲವೇಗದೆ ಚಲಿಪ ಕ್ಷಿಪ್ರಾವನದ ವೀಚಿಗಳಿಂದ ಶೋಭಿಪ
ಘನಮನೋಹರವಾದ ತೋಟಗಳಲ್ಲಿ ನೃಪನೊಡನೆ
ವನವಿಹಾರಕೆ ಪೋಪುದಾದರೆ, ವನಜಲೋಚನೆ ಮನಸಿನಿಂದಲೆ
ಜನಪನನ್ನನುಸರಿಸು ಬೇಗನೆ ವರಿಸಿ ಸುಖಿಯಾಗು ॥ ೧

(ಅನಿಲ ವೇಗದೆ, ' ಸಿಪ್ರಾತರಂಗಾನಿಲ ಕಂಪಿತಾಸು ' ಎಂಬುದರ ಅಭಿವ್ಯಕ್ತಿಯನ್ನು ಸರಿಯಾಗಿ ಮಾಡುವಂತೆ ಕಾಣಲಿಲ್ಲ.)

ಕೊನೆಗೆ, ಅಜನೃಪನನ್ನು ಮೆಚ್ಚಿದ ಇಂದುಮತಿ ಹೋಮಾಗ್ನಿಯಲ್ಲಿ ಅರಳುಗಳನ್ನು ಹಾಕು ತ್ತಾಳೆ :

ನಿತಂಬಗುರ್ವೀ ಗುರುಣಾ ಪ್ರಯುಕ್ತಾ ವಧೂರ್ವಿಧಾತೃಪ್ರತಿಮೇನ ತೇನ
ಚಕಾರ ಸಾ ಮತ್ತ ಚಕೋರನೇತ್ರಾ ಲಜ್ಜಾವತೀ ಲಾಜವಿಸರ್ಗಮಗ್ನೌ ॥

ಅನುವಾದ :

ಗುರುನಿತಂಬಿನಿಯಾದ ಭೋಜನ ತರಳೆ, ಮತ್ತ ಚಕೋರನೇತ್ರೆಯು
ಸುರರ ಜ್ಯೇಷ್ಠನ ತೆರದಿ ತೋರುವ ಗುರುವಿನಾಜ್ಞೆಯಲಿ

೧ ರಘುವಂಶ : ೧೯-೨೮ : ಪು. ೫೯.

ಪರಮ ತೇಜದೆ ಮೆರೆವ ವಹ್ನಿಗೆಯುರಳುಗಳನರ್ಪಿಸಿದಳಾಗಲೆ
ನೆರೆದ ನರನಾರಿಯರು ಸರ್ವರು ತೋಷ ಹೊಂದಿದರು ॥ ೧

(ಕೊನೆಯ ಸಾಲು ಮೂಲದಲ್ಲಿ ಎಲ್ಲಿದೆ ?)

ಮೇಲೆ ಹೇಳಿದ ಕೆಲವು ನ್ಯೂನತೆಗಳು ಯಾವ ಭಾಷಾಂತರಕಾರನೂ ಸಾಮಾನ್ಯವಾಗಿ ಎದುರಿಸ ಬೇಕಾದ ತೊಂದರೆಗಳೇ. ಒಟ್ಟಿನಲ್ಲಿ, ಕನಮಡಿಯವರ ಅನುವಾದ ಸುಭಗವಾಗಿದೆ; ಲಾಲಿತ್ಯಪೂರ್ಣ ವಾಗಿದೆ.

ಶ್ರೀಕನ್ನಡ ಶಿವಗೀತಾರ್ಥ ಪ್ರಕಾಶಿನಿ : ೨

ಇದು ಮುದ್ರಿತವಾಗಿಲ್ಲ. ಶ್ರೀಯುತರು ಅಧ್ಯಾಯ ೭ ರಿಂದ ೧೨ ರ ವರೆಗೆ ಅನುವಾದ ಮಾಡಿದ್ದಾರೆ. ರಘುವರನಿಗೆ ಪರಶಿವನು ಬೋಧಿಸಿದ ಪೂಜಾವಿಧಾನ, ವಿಶ್ವರೂಪದರ್ಶನ, ಪಾಂಚ ಭೌತಿಕ ದೇಹದ ಉದಯ, ಸ್ಥಿತಿಲಯ ವಿಚಾರ, ದೇಹಸ್ವರೂಪ, ಮರಣಾನಂತರ ದೇಹ ಹೊಂದುವ ಲೋಕಾಂತರಗಳು, ಉಪಾಸ್ತಿಯ ಕಾಲ ವಿಧಿ– ಮೊದಲಾದವುಗಳ ವಿವರಣೆ ಇದೆ. ಇದನ್ನು ಭಾಮಿನಿ ಷಟ್ಪದಿಯ ರೂಪದಲ್ಲಿ ಸುಲಲಿತವಾಗಿ ರಚಿಸಲಾಗಿದೆ. ಶೈಲಿ ಸರಳವೂ, ಸುಂದರವೂ, ಮಾಧುರ್ಯಪೂರ್ಣವೂ ಆಗಿದೆ. ದೃಷ್ಟಾಂತವಾಗಿ ಈ ಕೆಳಗಿನ ಪದ್ಯಗಳನ್ನು ಕೊಡಬಹುದು :

ಜನಪ ಕೇಳೀ ಮೊದಲು ಜರುಗಿದ
ಜನುಮದಲಿ ಜೀವಾತ್ಮನಾಡಿದ
'ಚಿಣಿಘಣಿ'ಯ ಮೇಣಿತರ ನಾನಾಪರಿಯ ಕ್ರೀಡೆಗಳ
ಸ್ತನವ ಪ್ರಾಶನಗೆಯ್ದು ಕಾರ್ಯದ
ನೆನವು ಪ್ರಾಕ್ಸಂಸ್ಕಾರದಿಂದೀ
ತನಿಗೆ ಶೈಶವದಲ್ಲಿಯಾಗುವದುಂಟು ಸ್ವಪ್ನದಲಿ ॥

ಗರುಡಪಕ್ಷಿಯು ಗಗನದೊಳು ಸಂ
ಚರಿಸಿ ವಿಶ್ರಮುಪಡೆಯಲೋಸುಗ
ತ್ವರದೆ ನೀಡವ ಸೇರುವಂದದಿ ಕರಣಸಂಘವನು
ವಿರಮಹೊಂದಿಸಿ ಧರಣಿಪನೆ ಜಾ
ಗರದ ಸ್ವಪ್ನದ ಶ್ರಮವ ಕಳೆಯ
ಲ್ಕಿರದೆ ಜೀವನು ನಿದ್ರೆಯಲಿ ತಾದಾತ್ಮ್ಯ ತಾಳುವನು ॥

ಕನ್ನಡ ಗಂಗಾಲಹರಿ :

ಇದೂ ಮುದ್ರಿತವಾಗದೆ, ಹಸ್ತಪ್ರತಿಯ ರೂಪದಲ್ಲಿ ಇದೆ. ಸಂಸ್ಕೃತದ ಪ್ರಸಿದ್ಧ ರಸಕವಿಯಾದ ಜಗನ್ನಾಥ ಪಂಡಿತನ ಗಂಗಾಲಹರಿಯ ಅನುವಾದವಿದು. ಇದರಲ್ಲಿ ೫೩ ಷಟ್ಪದಿ ಪದ್ಯಗಳಿವೆ. ಶೈಲಿ ಸುಭಗವೂ ನಿರ್ದುಷ್ಟವೂ ಆಗಿದೆ. ಅದರ ದೃಷ್ಟಾಂತವಾಗಿ ಈ ಕೆಳಗಿನ ಪದ್ಯಗಳನ್ನು ಉದ್ಧರಿಸಬಹುದು :

---

೧ ರಘುವಂಶ : ಪು. ೭೦.

೨ ಹಸ್ತಪ್ರತಿ ಶ್ರೀ ಬಿ. ಜಿ. ಕನಮಡಿಯವರ ಹತ್ತಿರ ಇದೆ.

ದರುಶನದೆ ಭವವನ್ನು ಹರಿಸುವ
ಪರಮಪಾವನೆ ನಿನ್ನ ಮಹಿಮೆಯು
ನರಿವರಾರೀ ಮೂರುಲೋಕಗಳಲ್ಲಿ ನಿಜವಾಗಿ
ಪರಮಮಾತ್ಸರ್ಯದಲಿ ಗೌರಿಯು
ಕೆರಳಿ ರೋದನ ಮಾಡಿದೊಡೆ ಶ್ರೀ
ಹರನು ನಿನ್ನನು ತನ್ನ ಮಸ್ತಕದಲ್ಲಿ ಧರಿಸಿದನು

ಕುರುಡರನು ಜನ್ಮಾಂಧರನು ಮೇಣ್
ಚರಣಪಾಣಿವಿಹೀನರರನು ನಿಜ
ದುರಿತನಿಸ್ತಾರವನು ಬಯಸದ ದೈವಹತಕರನು
ಮರುಳರನು ಗ್ರಹಪೀಡೆಯಿಂದುರೆ
ಮರಗುವವರನು ಮತ್ತೆ ನರಕದೊ
ಳಿರುವ ನರರನು ತ್ರಾಣ ಮಾಡುವ ಭೇಷಜವು ನೀನೇ

ಮೇಘದೂತ ಕಾವ್ಯ :

ಇದೂ ಹಸ್ತಪ್ರತಿಯ ರೂಪದಲ್ಲಿಯೇ ಇದೆ. ಇದನ್ನು ಎಂದು ಬರೆದರೆಂಬುದರ ಬಗೆಗೆ ತಾರೀಖು ಇಲ್ಲವೆ ಇಸವಿ ಹಾಕಿಲ್ಲ. ಇದರಲ್ಲಿ ೧೨೦ ಶ್ಲೋಕಗಳಿವೆ. ನರಹರಿರಾಯರು ಇನ್ನೂ ವಯಸ್ಸಿರುವಾಗಲೇ ದೃಷ್ಟಿಲಾಭವನ್ನು ಕಳೆದುಕೊಂಡಿದ್ದರು. ಅವರು ಹೇಳಿ ಹೇಳಿದಂತೆ, ಯಾರಾದರೂ ಎದುರು ಕುಳಿತುಕೊಂಡು ಅವರ ರಚನೆಗಳನ್ನು ಬರೆದುಕೊಳ್ಳುತ್ತಿದ್ದರು. ಪುನಃ ಅವನ್ನೊಮ್ಮೆ ಓದಿಸಿ ನೋಡಿ, ಅಲ್ಲಲ್ಲಿ ಆಗಿದ್ದ ಅಕ್ಷರ ಸ್ಖಾಲಿತ್ಯಗಳನ್ನು ಶ್ರೀಯುತರು ತಿದ್ದುತ್ತಿದ್ದರು. ಪ್ರಸ್ತುತ ಅನುವಾದವನ್ನು ನರಹರಿರಾಯರು ಹೇಳಿದಂತೆ, ಶ್ರೀ ಆರ್. ಕೆ. ಜಂತಲಿ, ಸವಣೂರ ಎಂಬವರು ಬರೆದುಕೊಂಡಿದ್ದಾರೆ. ಇದನ್ನು ಓದುತ್ತಿದ್ದಂತೆ ಮೂಲದ ಮೇಘದೂತದ ಪ್ರತಿಧ್ವನಿಯನ್ನೂ ನಾವು ಕೇಳಬಹುದು.

ಮರೆತು ನಿಜಕರ್ತವ್ಯವನು ಸಂ
ಚರಿಪ ಕಶ್ಚಿದ್ಯಕ್ಷನೊಡೆಯನ
ವರುಷ ಬಾಳುವ ಶಾಪದಿಂ ಗತಮಹಿಮನಾದವನು
ವಿರಹತಾಪದೆ ರಾಮಗಿರಿಯುರು
ಮರದ ತಂಪಾಗಿರುವ ನೆರಳಲಿ
ಸುರರಸ್ರೋತಃಸಿನ ತಟಾಕದೆ ವಸತಿ ಮಾಡಿದನು

ಜರೆದ ಚಾಮೀಕರದ ಕಂಕಣ
ಕರನು ವಿರಹದೆ ಮರುಗಿಯಾಗಿರಿ
ವರನಿಕೇತನದಲ್ಲಿ ಕೆಲಮಾಸಂಗಳನು ಕಳೆಯೆ
ಭರದೆ ವಪ್ರಕ್ರೀಡೆಯಾಡುವ
ಕರಿಯವೋಲ್ಮುಗಿಲ ಪ್ರಥಮದಿನದಲಿ
ನಿರೀಕಿಸಿದನಾ ಶಿಖರಿ ಶಿಖರದೆ ಮೋಡವಾ ಬಿಡದೆ

ಋತುಸಂಹಾರ :

ಇದೂ ಹಸ್ತಪ್ರತಿಯ ರೂಪದಲ್ಲಿಯೇ ಇದೆ. ಇದು ಸರಸಕವಿ ಕಾಲಿದಾಸನ ಋತುಸಂಹಾರದ ಕನ್ನಡಾನುವಾದ. ಇದರಲ್ಲಿ ೫ ಮತ್ತು ೬ ನೆಯ ಸರ್ಗಗಳ ೨೯ ಪದ್ಯಗಳಿವೆ. ಇದನ್ನು ಶ್ರೀಯುತರು ತಮ್ಮ ಮಿತ್ರರಾಗಿದ್ದ ರಂಗೋ ಭೀಮರಾಯರ ಇಚ್ಛೆಯ ಮೇರೆಗೆ ಸ್ನೇಹವರ್ಧನೆಗಾಗಿ ರಚಿಸಿದಂತೆ ಹೇಳುತ್ತಾರೆ :

ಕಾಮದೇವನ ಕರುಣೆಯಿಂದಭಿ
ರಾಮವಾದೀ ಚಿಕ್ಕ ಕಾವ್ಯವ
ರಾಮಸುತ ನರಹರಿಯು ಕನ್ನಡ ಭಾಷೆಯಲಿ ರಚಿಸಿ
ಕಾಮನೈಯನ ಭಕ್ತ ರಂಗೋ
ಭೀಮರಾಯನಿಗಿತ್ತನದು ತತ್
ಕಾಮವನು ಪೂರೈಸಿ ಮಿತ್ರಪ್ರೇಮ ವರ್ಧಿಸಲಿ ॥

ಋತುಸಂಹಾರದ ಪದ್ಯಗಳು ತುಂಬಾ ಶೃಂಗಾರಪೂರ್ಣವಾದುವು. ಕವಿಗಳು ಹೇಳಿದಂತೆ 'ಕಾಮದೇವನ ಕರುಣೆಯಿಂದಭಿರಾಮ'ವಾದುವು. ಅವನ್ನು ಅಷ್ಟೇ ರಸಿಕತೆಯಿಂದಲೂ, ಶೃಂಗಾರ ಪೂರ್ಣವಾಗಿಯೂ ಲೇಖಕರು ಭಾಷಾಂತರಿಸಿದ್ದಾರೆ. ಉದಾಹರಣೆಗೆ, ಇದು ಶಿಶಿರ ಕಾಲದ ವರ್ಣನೆ:

ಮದನನುದ್ದೀಪಿಸುವ ಸತಿಯರ
ವದನವಾತಸುಗಂಧದಿಂದುರೆ
ಕದಲುವಂತಹ ಕಮಲತತಿಯಿಂ ಯುಕ್ತವಾಗಿರುವ
ಮದನನೀಯುವ ಮಧುರ ಮಧುವನು
ಸುದತಿಯರು ಪ್ರಿಯರೊಡನೆ ನಿಶೆಯಲಿ
ಮುದದೆ ಪ್ರಾಶನ ಮಾಡುತಿಹರೀ ಸಮಯದಲಿ ಸಖಿಯೆ

ಸುರೆಯಮದವಿಳಿದಿರುವ ರಮಣನ
ಪರುಷಪರಿರಂಭಣದೆ ಸಾಂದ್ರೀ
ಕರಿಸಿದಂತಹ ಕುಚಾಗ್ರಗಳುಳ್ಳ ಕಾಮಿನಿಯು
ನಿರುಕಿಸುತೆ ಪತಿಭುಕ್ತ ತನುವನು
ಹೊರಟು ಮುಂಜಾವಿನಲಿ ಶಯನದೆ
ಹರುಷದಿಂ ಬೇರ್ಮನೆಯ ಭಾಗಕೆ ತ್ವರದೆ ತೆರಳುವಳು

ಪಾರಿಜಾತೋನ್ನಯನವು :

ಇದನ್ನೂ ಎಂದು ಬರೆದರೆಂಬ ದಿನಾಂಕ ಹಾಕಿಲ್ಲ. ಈ ಖಂಡಕಾವ್ಯದಲ್ಲಿ ೬೭ ಷಟ್ಪದಿ ಪದ್ಯಗಳಿವೆ. ನರಕಾಸುರನನ್ನು ವಧಿಸಿದ ನಂತರ ಶ್ರೀಹರಿಯು ಪ್ರಾಗ್ಜ್ಯೋತಿಷಪುರದಿಂದ ಹೊರ ಹೊರಟು ತನ್ನ ಭಾಮೆಯಾದ ಸತ್ಯಭಾಮೆಯಿಂದೊಡಗೂಡಿ, ದ್ವಾರಾವತಿಗೆ ಬರುತ್ತಿರುವಾಗ ದಾರಿಯಲ್ಲಿ ಇಂದ್ರನ ನಂದನವನ್ನು ನೋಡುತ್ತಾನೆ. ಅಲ್ಲಿರುವ ಪಾರಿಜಾತ ವೃಕ್ಷದ ಸೌಂದರ್ಯಕ್ಕೆ ಮಾರುಹೋದ ಸತ್ಯಭಾಮೆಯು ಆ ಸುಂದರವಾದ ವೃಕ್ಷವು ತನಗೆ ಬೇಕೆಂದೂ ಅದನ್ನು ತನ್ನ ಅಂಗಳದಲ್ಲಿ ಊರಬೇಕೆಂದೂ ವಿನಂತಿಸುತ್ತಾಳೆ. ಪಾರಿಜಾತ ವೃಕ್ಷ ಹೀಗೆ ಸುಂದರವಾಗಿದೆ :

ಥಳಥಳಿಪ ವೈಡೂರ್ಯಮಣಿಗಳ
ವಲಯದಿಂ ರಚಿಸಿರ್ದ ವೇದಿಕೆ
ಯೊಳು ಪ್ರವಾಲದ ಮೂಲಗಳ ಮೇಣ್ಕನಕಮಯವಾದ
ಪೊಳೆವ ದೇಹದ ಮರಕತಂಗಳ
ಹಲವು ಶಾಖೆಗಳುಳ್ಳ ಪಚ್ಚದ
ದಲಗಳಿಂ ತೀವಿರುವ ಮೌಕ್ತಿಕ ಕುಲದ ಕಾಯಿಗಳ

ಅದನ್ನು ಬಯಸಿದ ಸತ್ಯಭಾಮೆಗೆ ಶ್ರೀವರನು 'ಶರಧಿ ಮಥನವ ಜರುಗಿಸುವ ಸಮಯದಲಿ, ಹೊರಟೀ ಮರವನಸುರರು ಶಕ್ರಗೆ' ಕೊಟ್ಟುಬಿಟ್ಟಿದ್ದಾರೆ. 'ಸುರಪರಿಂ ಸೇವ್ಯವೂ ದೇವಲೋಕದ ಶ್ರೇಷ್ಠಭೂಷಣವೂ' ಆದ ಈ ಪಾದಪವನ್ನು ಬಯಸುವುದು ಯುಕ್ತವಲ್ಲ. ನಾವು ಈ ವೃಕ್ಷವನ್ನು ಒಯ್ದುದ್ದೇ ಆದರೆ, ಅದರಿಂದ ಕ್ರುದ್ಧರಾದ ದೇವತೆಗಳೆಲ್ಲ ನಮ್ಮ ಕೂಡ ಸೆಣಸದೆ ಬಿಡರು– ಎಂದು ಹೇಳುತ್ತಾನೆ. ಆದರೆ ಆಗ್ರಹಸ್ವಭಾವದ ಸತ್ಯಭಾಮೆ ಒಪ್ಪುವದಿಲ್ಲ. ದೇವಾಧಿದೇವ ತನ್ನ ಕೈಯಿಂದಲೇ ಆ ಗಿಡವನ್ನು ಕಿತ್ತು ತೆಗೆಯುತ್ತಾನೆ. ಇದು ಗೊತ್ತಾದ ದೇವತೆಗಳೆಲ್ಲ ಯುದ್ಧಕ್ಕೆ ಧಾವಿಸಿ ಬರುತ್ತಾರೆ :

ತೇರುಗಳ ಚಕ್ರಗಳ ಶಬ್ದವು
ವಾರಣಂಗಳ ವಾಜಿಗಳ ರವ
ವೀರಸುರರ ಭರದ ಕೋಲಾಹಲದ ವಿನಾದವದು
ಬಾರಿಸಿದ ವಾದ್ಯಗಳ ಪೆರ್ಧ್ವನಿ
ಮೂರು ಲೋಕಗಳನ್ನು ತ್ವರದೆ ವಿದಾರಿಸುವದೇನೋ........

–ಎಂಬ ಭೀತಿಯುಂಟಾಗುತ್ತದೆ. ಸತ್ಯಭಾಮೆ ಬಿಲ್ಲನ್ನು ಒಡಿದು ಯುದ್ಧಕ್ಕೆ ಸನ್ನದ್ಧಳಾಗುತ್ತಾಳೆ. ಅವಳನ್ನು ಎದುರಿಸಿದ ದೇವತೆಗಳು :

ಗೊಲ್ಲರಲಿ ದಿನಗಳೆದು ಕೃಷ್ಣನೆ
ಕಳ್ಳತನದಲಿ ಪಡೆದು ಪಾಟವ
ಮೆಲ್ಲನೇ ನೀನೀಗ ಸುರತರುವನ್ನು ಹರಿಸುವೆಯಾ
ನಿಲ್ಲು ಪೋಗದಿರಿನ್ನು ನಿನ್ನನು
ಕೊಲ್ಲುವೆನು ಪಿಡಿ ಚಾಪವನು ನೀಂ
ಸಲ್ಲದಿದು ಸ್ತ್ರೀಯನ್ನು ಯುದ್ಧಕೆ ಮುಂದೆ ಮಾಡುವದು

–ಎಂದು ಹೇಳುತ್ತಾರೆ. ಘನಘೋರ ಯುದ್ಧ ನಡೆಯುತ್ತದೆ. ಇಂದ್ರ ವರುಣಾದಿಗಳು ಸೋತು ಹಿಮ್ಮೆಟ್ಟುತ್ತಾರೆ. ಸತ್ಯಭಾಮೆಯನ್ನು ಎದುರಿಸಲು ಯಮನು ಸಿದ್ಧನಾಗಿ ಬರುತ್ತಾನೆ :

ಸ್ಥಿರಚರಾತ್ಮಕ ವಿಶ್ವವನು ಸಂ
ಹರಿಪ ಕಾಲನು ಹತ್ತಿ ಮಹಿಷವ
ಕರದಿ ಪೆರ್ದಂಡವನು ಕೊಂಡತಿವೇಗದಿಂ ಕೆರಳಿ
ಹರಿಯು ಹರಣವ ಕೊಳ್ಳುತಿಹೆನೆಂ
ದರಿಯದೇ ತನ್ನಮಹಿಮೆಯನು ಮುರ
ಹರನ ಮೇಲೇರಿ ಪೋದನು ದಂಡವನ್ನೆತ್ತಿ

—ಆದರೆ, ಎಲ್ಲರೂ ಸೋತು ಹೋಗುತ್ತಾರೆ. ಶ್ರೀಕೃಷ್ಣ ಆ ಪಾರಿಜಾತ ವೃಕ್ಷವನ್ನು ದ್ವಾರಕಾವತಿಗೆ ಒಯ್ದು ಸತ್ಯಭಾಮೆಯ ಮನೆಯ ಅಂಗಳದಲ್ಲಿ ಸ್ಥಾಪಿಸುತ್ತಾನೆ.

ಮಣಿದು ಗುರುಹಿರಿಯರಿಗೆ ಮೇಣ್ಬ್ರಾ
ಹ್ಮಣರ ಪಾದಂಗಳಿಗೆ ವಿನಯದೆ
ವನಜನಾಭನು ಗಳಿಸಿಯಾಜನರಾಶಿಷಂಗಳನು
ವನಿತೆ ಭಾಮೆಯ ಪೊಳೆವ ರನ್ನದ
ಮನೆಯ ಪ್ರಾಂಗಣದಲ್ಲಿ ಸುರರುಪ
ವನದ ಪಾದಪವನ್ನು ಮರುಕದೆ ಸ್ಥಾಪಿಸಿದನಾಗ

—ಕಾವ್ಯದ ಶೈಲಿ ಸುಲಭ ಸರಳವಾಗಿದೆ, ರಸಪೂರ್ಣವಾಗಿದೆ.

ಇವೂ ಅಲ್ಲದೆ, ಶ್ರೀಯುತರ ಹಲವಾರು ಪದ್ಯಗಳು ಅಂದಿನ 'ಕರ್ನಾಟಕ ವೈಭವದಲ್ಲಿ' ಪ್ರಕಟವಾಗಿವೆ. ಉದಾಹರಣೆಗೆ, ೮–೫–೧೯೧೭ ರ 'ವೈಭವ' ದಲ್ಲಿ ಈ ಕೆಳಗಿನ ಪದ್ಯಗಳನ್ನು ನೋಡಬಹುದು :

'ವನಜಮುಖಿ' 'ಸುಲತಾಂಗಿ' 'ಸೌದಾ
ಮಿನಿ' 'ಸುಹಾಸಿನಿ' 'ಪುಷ್ಪಮಂಜರಿ'
'ಕನಕಲತೆ' ಮುಂತಾದ ಸಂಬೋಧನೆಗಳನು ಕೊಟ್ಟು
ವನಿತೆಗಳ ವರ್ಣನೆಯ ಕವಿಗಳು
ನುಣುಪ ಶಬ್ದಗಳಿಂದ ಮಾಳ್ಪರು
ನನಗೆ ನೆರಳಿನ ತೆರದಿ ನಾರೀಜನರು ತೋರುವರು

ನರರು ಪೇಳ್ ನೆರಳನ್ನು ಪಿಡಿಯಲು
ಕರಗಳನು ಚಾಚಿದರೆ ಪಿಂತೆಯೆ
ಭರದಿಯೋಡಿದರೇನು ಸಿಗುವದೆ ಬರಿದೆ ಶ್ರಮಿಸುವರು
ತರುಣಿಜನರಾ ತೆರದಿ ಪುರುಷರ
ಕರಕೆ ಸೇರರು ಸ್ನೇಹ ತೋರದೆ
ತಿರುಗಿ ನಡೆದರೆ ನೆರಳಿನಂತನುಸರಿಸಿ ಬರುತಿಹರು

ಯುದ್ಧಕಾಲದಲ್ಲಿ ಸಾರ್ವಭೌಮ ಸರಕಾರವನ್ನು ವರ್ಣಿಸಿದ ಈ ಪದ್ಯಭಾಗವನ್ನು ನೋಡಬಹುದು :

ಈಶನಿಚ್ಛಾಮಾತ್ರದಿಂದಿಂ
ಗ್ಲಿಷಪ್ರಭುಗಳ ರಾಜ್ಯಸತ್ತೆಯು
ವಾಸಿಯಾಗೀ ದೇಶದಲಿ ವಿಕಾಸ ಹೊಂದಿದರೂ
ದ್ವೇಷಿ ಜರ್ಮನರು ನಮ್ಮಯ
ದೇಶದೊಳಗಿನ ಕೋಶವನ್ನವ
ಶೇಷವುಳಿಸದೆ ಹರಿಸಿದರು ವ್ಯಾಪಾರಮಿಷದಿಂದ

ನಡೆದ ಕಾಳಗದಿಂದಲೆಲ್ಲರ
ನಡತೆಪ್ರಭುಗಳ ಕಣ್ಗೆ ತೋರದೆ
ಬಿಡದೆ ನೀವೀಸಮಯದೊಳು ಕಡು ಶೌರ್ಯದಿಂ ಕೂಡಿ
ಜಡೆದು ಜರ್ಮನ್ ಕೋತಿಗಳನುರೆ
ಪೊಡವಿಯೊಳು ಜಯಭೇರಿ ನುಡಿಸಿರಿ
ಪಡೆದುಕೊಳ್ಳಿರಿ ಕೀರ್ತಿಯನು ಪುರುಷಾರ್ಥವನ್ನೀಗ

ಆದಕಾರಣ ನೀವು ಬೇಗನೆ
ಹಾದಿಯಿಂದಲಿ ಸೇರಿ ಸೈನ್ಯವ
ಬಾಧೆಗೊಳಿಸುವ ಜರ್ಮನರ ಕೂಡಿಂದು ಕಾದಾಡಿ
ಮೋದದಿಂದವರನ್ನು ಸೋಲಿಸಿ
ಸಾಧಿಸಿರಿ ಯಶವನ್ನು ಜಗದೊಳು
ಹೋದ ಕಾಲದ ನಿಮ್ಮ ಕೀರ್ತಿಯನಿನ್ನು ಪ್ರಕಟಿಸಿರಿ

ದೈಹಿಕ ತೊಂದರೆಯಿದ್ದರೂ ತಮ್ಮ ಪ್ರತಿಭಾಬಲದ ಮೂಲಕ ಸ್ವೋಪಜ್ಞಕೃತಿರಚನೆ ಮಾಡಿ ನರಹರಿರಾಯರು ಕನ್ನಡ ಸಾಹಿತ್ಯಪ್ರಪಂಚಕ್ಕೆ ಸಾಕಷ್ಟು ಸತ್ವಪೂರ್ಣವಾದ ಗ್ರಂಥಗಳನ್ನು ನೀಡಿದರು.

—

ಭೀಮಾಜಿ ಶ್ರೀನಿವಾಸ ಅಡಬಡ್ಡಿ

(೧೮೬೦–೧೯೪೪)

ಇವರು ಗಾಂತ್ರಿವಾಡದ ಭೀಮೇಶ ಹನುಮಂತ ದೇವರ ಭಕ್ತರು. ಇವರೂ ಧಾರವಾಡದ ಶಿಕ್ಷಕರ ಟ್ರೇನಿಂಗ ಕಾಲೇಜಿನಲ್ಲಿ ಶಿಕ್ಷಣ ಪಡೆದವರು. ಅನಂತರ ಕಾಗಿನೆಲ್ಲಿಯಲ್ಲಿ ಉಪಾಧ್ಯಾಯರೆಂದು ಕೆಲಸ ಮಾಡಿ. ಹುಬ್ಬಳ್ಳಿಗೆ ವರ್ಗವಾಗಿ ಬಂದರು. ಇವರು ಹುಬ್ಬಳ್ಳಿಗೆ ಬಂದಾಗ ಶಾಂತಕವಿಗಳೂ ಹುಬ್ಬಳ್ಳಿಯಲ್ಲಿಯೇ ಶಿಕ್ಷಕರಾಗಿದ್ದರು. ಯಾವುದೋ ಒಂದು ವ್ಯಾಕರಣವಿಷಯಕ ಚರ್ಚೆಯ ವರದಿಯನ್ನು ಮಾಡುವಾಗ ಅಡಬಡ್ಡಿಯವರು ''ಏಳನೆಯ ನಂಬರ ಶಾಲೆಯ ಮುಖ್ಯಾಧ್ಯಾಪಕನಾದ ನನ್ನ ಗೆಳೆಯ ಬಾಳಾಚಾರ್ಯನು.... ಹೀಗೆ ಅನ್ನುತ್ತಾನೆ'' ಎಂದು ಬರೆದಿದ್ದಾರೆ. 'ನೀತಿ ದರ್ಪಣ'ದ ಕೊನೆಯಲ್ಲಿ ಸ್ವವಿಷಯಕವಾಗಿ ಹೀಗೆ ಹೇಳಿದ್ದಾರೆ :

ಶ್ರೀನಿವಾಸ ಮನೀಷಿಸಂಭವಂ ಭೀಮಾಭಿ
ಧಾನಕಂ ಕಾಂತಭೀಮೇಶಾಂಘ್ರಿ ಕಿಂಕರಂ
ಸಾನುರಾಗದಿನೀ ಸುಶತಕಮಂ ಗೆಯ್ದು ನಿದನೋದಲುಂ ಬುಧವೃಂದವು
ಜ್ಞಾನಿನೃಪ ಶಾಲಿವಾಹನಶಕದ ನೇತ್ರಾವ
ನೀನಾಗಮೇದಿನೀಯುಂತ ವಿಕೃತಿವತ್ಸರದ
ಭಾನುವಾಸರ ಶುದ್ಧ ಮಾರ್ಗಶೀರ್ಷವರಮಿಗಾದುದೀ ಕೃತಿಪೂರ್ಣವು ॥

" ಶ್ರೀಮತ್ ಗಾಂತ್ರಿವಾಡದ ಕಾಂತಭೀಮೇಶನ ಚಾರುಚರಣಾರವಿಂದ ಕಿಂಕರನಾದ ಭೀಮಾರನಿಂದ ರಚಿಸಲ್ಪಟ್ಟ ನೂತನ 'ನೀತಿದರ್ಪಣ'ಮಿಲ್ಲಿಗೆ ಸಮಾಪ್ತವಾದುದು— ಶ್ರೀಮತ್ ಭೀಮೇಶಾರ್ಪಣಮಸ್ತು". ಶ್ರೀಯುತರು 'ಪ್ರವಾಸ' ಎಂಬ ವಿಷಯವಾಗಿ ವಿವಿಧ ಛಂದಸ್ಸಿನಲ್ಲಿ ಕವಿತಾರಚನೆ ಮಾಡಿ 'ಶೀಘ್ರಕವಿ' ಪರೀಕ್ಷೆಯನ್ನು ಪಾಸಾದರು. ಭೀಮಾಜಿಯವರ ಹೆಂಡತಿಯ ಹೆಸರು ರಿಂದವ್ವಾ. ಭೀಮಾಜಿಯವರು ರಚಿಸಿದ ಒಂದು ಅಣಕವಾಡನ್ನು ಅವರು ಹೇಳುತ್ತಿದ್ದರಂತೆ. "ಗುರುವೇ, ಸುರತರುವೇ, ನಿಮ್ಮನು ನಿತ್ಯವು ನೆನೆಯುತಲಿರುವೆ" ಎಂಬ ಪದವನ್ನು ಭೀಮಾಜಿಯವರು "ಗುರುವೇ, ಬೂರಲಮರವೇ, ನಿಮ್ಮನ್ನು ನಿತ್ಯವು ಬೈಯುತಲಿರುವೆ" ಎಂದು ಪರಿವರ್ತಿಸಿದ್ದರಂತೆ. ಭೀಮಾಜಿಯವರ ತಂದೆಯವರು ರಚಿಸಿದ ಹಾಡುಗಳು 'ಧ್ರುವಪದ ವಿಠ್ಠಲ' ಎಂಬ ಹೆಸರಿನಲ್ಲಿ ದೊರಕುತ್ತವೆ. ಅವನ್ನು ಭೀಮಾಜಿಯವರು ಟ್ರೇನಿಂಗ ಕಾಲೇಜಿನಲ್ಲಿದ್ದಾಗ ಮುದ್ರಿಸಿದ್ದರು. ಅವುಗಳಲ್ಲಿ ಒಂದು ಹೀಗಿದೆ :

ಮುತ್ತಿನಾರುತಿ ಎತ್ತಿ ಬೆಳಗಿರೆ, ಚಿತ್ತಜನಪಿತಗೆ ಹರಿಗೆ
ಮೆಲ್ಲನೇ ಪರರಲ್ಲಿ ಪಾಲ್ಮೊಸರೆಲ್ಲ ತಿಂದವಗೆ
ಮೆಲ್ಲಿ ಜನನೀಗುಲ್ಲವಾಲಿಸುತ್ತೆಲ್ಲ ಜಗವ ಬಾಯಲ್ಲಿ ತೋರ್ದವಗೆ
ವಾಸವಾದ್ಯಮರೇಶವಂದಿತ ಭಾಸುರಾಂಗನಿಗೇ
ಕೌರವನಾಶ ಪೂರೈಸಿದಾ
ಜಗದೀಶವರದ ಭೀಮೇಶರಾಯನಿಗೆ ॥

—ಇತ್ಯಾದಿ[೧]

ಭೀಮಾಜಿಯವರು ಬರೆದ ಧಾತ್ವರ್ಥ ಪ್ರಕಾಶಿಕೆ, ನೀತಿದರ್ಪಣವು, ಪೆಣ್ಣಡೆಗನ್ನಡಿ, ಸ್ತ್ರೀಧರ್ಮಸಾರ, ಪ್ರಕಟವಾಗಿವೆ. ಪದ್ಮಗಂಧೀ ಸ್ವಯಂವರ, ಮಾರ್ಕಂಡೇಯ, ಸುಧನ್ವ ನಾಟಕ—ಎಂಬವುಗಳು ಅಪ್ರಕಟಿತವಾಗಿಯೇ ಉಳಿದಿವೆ.

ನೀತಿದರ್ಪಣವು (೧೮೯೩):

ಶ್ರೀಯುತರು 'ನೀತಿ ದರ್ಪಣ'ವು ಎಂಬ 'ನೂತನ' ಶತಕವನ್ನು ಬರೆದಿದ್ದು, ಅದು ನಾರಾಯಣ ದಾದಾಜಿ ಕರಿ ಎಂಬವರಿಂದ ಧಾರವಾಡದ ಹಿಂದು ಪ್ರಿಂಟಿಂಗ ವರ್ಕ್ಸ ಮುದ್ರಣಾಲಯ ದಲ್ಲಿ ಮುದ್ರಿತವಾಗಿದೆ. ಈ ಚಿಕ್ಕ ಪುಸ್ತಿಕೆಯ ಕಾಲ ೧೮೯೩. ಸೂಚನೆಯಲ್ಲಿ ಕವಿಗಳು ಹೀಗೆ ಹೇಳಿದ್ದಾರೆ: "ಅಯ್ಯಾ ರಶಿಕ ಶಿಖಾಮಣಿಗಳಾದ ಕನ್ನಡ ವಿದ್ವಜ್ಜನರೇ, ನಾನು ನನ್ನ ಮಂದಮತಿಗನುಸಾರವಾಗಿ ನೀತಿ ದರ್ಪಣವೆಂಬೀ ಚಿಕ್ಕ ಪುಸ್ತಕವನ್ನು ರಚಿಸಿದ್ದೇನೆ. ಇದರಲ್ಲಿ ನೀತಿಯೇ ಪ್ರಾಧಾನ್ಯವೆಂಬುದು ನಿಜವು; ಆದರೂ ಓದುವವರ ಮನೊ (೯) ರಂಜನಾರ್ಥವಾಗಿ ಅಭಿನವ ಶೃಂಗಾರವೂ ವೈಚಿತ್ರ್ಯವನ್ನುಂಟುಮಾಡುವ ದೇವತಾ ಸ್ತೋತ್ರಗಳೂ ಅರಸರ ಕೀರ್ತಿ ಪರಾಕ್ರಮೇ-ತ್ಯಾದಿ ಸದ್ಗುಣಗಳ ವರ್ಣನೆಯೂ ಅಲ್ಲಲ್ಲಿಗೆ ಕಂಡುಬರುತ್ತವೆ." (೧೫–೨–೧೮೯೩).

ಶ್ರೀಯುತರ ಶೈಲಿಯಲ್ಲಿ ಸುಂದರ ಬಂಧವೂ ಸುಭಗತೆಯೂ ಕಂಡು ಬರುತ್ತವೆ. ಕೆಳಗಿನ ಪದ್ಯದಲ್ಲಿಯ ವೃತ್ತ್ಯನುಪ್ರಾಸ ಗಮನಾರ್ಹವಾಗಿದೆ:

ನುಡಿಗಳೊಡತಿ ನಲ್ಗಡವರ
ದೊಡಲನಮಡದಿಯೆ ಬೆಡಂಗಿನಡಿದಾವರೆಗಾಂ
ಪೊಡಮಡುವೆಂ ಕಡುಕೂರ್ಪಿಂ
ಕಡೆಗಣ್ಣಿಂನೋಡಿ ನನಗೆ ಕುಡು ತಿಳಿಯರಿವಂ

ಶ್ರೀಯುತರೇ ಹೇಳಿದ ಹಾಗೆ ಅವರ ರಚನೆಗಳಲ್ಲಿ "ವೈಚಿತ್ರ್ಯವನ್ನುಂಟು ಮಾಡುವ" ಸುಂದರವಾದ ದೇವತಾ ಸ್ತೋತ್ರಗಳಿವೆ:

ಗಣಪ ನೀನಳುತಿರ್ಪುದೇಕೆನ್ನ ಕರ್ಣಮಂ
ಜನನಿಯೇ ಪಿಡಿದೆಳೆದು ನೋಯಿಸುವನೀ ಗುಹಂ
ತನುಜ ನಿನ್ನನುಜನಂ ಪೀಡಿಸುವದಲ್ಲವೈ ಮನ್ಮುಖಾಕ್ಷಿಗಳನಿವನು
ಕುಣಿದೆಣಿಸಬಹುದೆ ದಲ್ ಸಲ್ಲದೀ ಬುದ್ಧಿನೂ
ತನಮೆನ್ನಸುಂಡಿಲವನೆಳೆವನೇಕೆಂಬಿವರ
ಘನ ಕಲಹಮಂ ತೀರ್ಚುವಗಜೆಯಂ ನೋಡಿ ನಗುವಾಭವಂ ಪೊರೆಗೆಮ್ಮನು

೧ ಈ ಸಾಲುಗಳನ್ನು ಬರೆದು ಕಳಿಸಿದವರು ಶ್ರೀಯುತರ ಮೊಮ್ಮಕ್ಕಳಾದ ಶ್ರೀ ವಾ. ಸು. ಅಡಬಡ್ಡಿಯವರು.

—ಇದು ಸಂಸ್ಕೃತದ ಈ ಕೆಳಗಿನ ಶ್ಲೋಕದ ಭಾಷಾಂತರ :

ಹೇ ಹೇರಂಬ ಕಿಮಂಬ ರೋದಿಷಿ
ಕಥಂ ಕರ್ಣೌ ಲುಠತ್ಯಗ್ನಿಭೂಃ
ಕಿಂ ತೇ ಸ್ಕಂದ ವಿಚೇಷ್ಟಿತಂ ಮಮ
ಪುರಾಸಂಖ್ಯಾಕೃತಾ ಚಕ್ಷುಷಃ
ನೈತತ್ತೇಪ್ಯುಚಿತಂ ಗಜಾಸ್ಯ
ಚರಿತಂ ನಾಸಾಂ ಮಿಮಿತೇಂಬ ಮೇ
ತಾವೇವಂ ಸಹಸಾ ವಿಲೋಕ್ಯ ಹ
ಸಿತವ್ಯಗ್ರಾ ಶಿವಾ ಪಾತು ವಃ ॥

ಲೋಕಬೋಧೆ :

ಈ ದೇಹಮನಿತ್ಯಂ ವಿಭ
ವಾದಿಗಳಸ್ಥಿರಮೆನಿಕ್ಕುಮನಿಶಂ ಮರಣಂ
ಭೇದಿಸಬರ್ಪುಗುಮದರಿಂ
ವೋದದೆ ಸದ್ಧರ್ಮ ಧನವ ಕೂಡಿಡುಮನವೇ ॥

ಸ್ತ್ರೀನೀತಿ :

ಪಂಚಪತಿಗಳಿಂ ಕೂಡಿದ
ಪಾಂಚಾಲೆಯುಮಾರನೆಯನಿಚ್ಛಿಸಿದಳ್ ಕೇ
ಳಿಂ ಚದುರೆಯರುಳಿದೆಲ್ಲರ್
ವಾಂಛಿತವಿಲ್ಲದೊಡೆನಿಕ್ಕು ಸುಪತಿವ್ರತೆಯರ್ ॥
ಅತಿದಾನದಿಂದೆ ಬಲಿಭೂಪತಿ ಕೆಟ್ಟಂ ರಾವಣಾಖ್ಯನತಿ ಗರ್ವದೆ ತಾಂ
ಪತಿಯನ್ನಗಲ್ದಳ್ ಜಾನಕಿಯತಿರೂಪದಿನತಿಯ ವರ್ಜಿಕುಂ ಸರ್ವತ್ರಂ ॥
ತೊರೆದಂಡಿಯೊಳಿರುವ ಗಿಡಂ
ಪರಗೇಹದೊಳಿರ್ಪಪತ್ನಿ ಮಂತ್ರಿವಿಹೀನಂ
ಧರಣೀಪತಿಯುಂ ಕೇಡಿಗೆ
ಗುರಿಯಾಗುವರೆಂಬ ನುಡಿಗದೇಂ ಸಂದೇಹಂ ॥

ಒಂದು ಅತಿಶಯೋಕ್ತಿ :

ಧರಣೀಶ ಕೇಳ್ ನಿನ್ನ ಕೀರ್ತಿ ಪ್ರಭಾವದಿಂ
ಧರೆಯೊಳೆಲ್ಲಾ ಸ್ಥಳದೆ ಧವಲತ್ವಮೆಯ್ದೆ ಪ
ರ್ಬಿರುವದರೀಗಳುಂ ಪರಮಪುರುಷಂ ಪಯೋಂಬುಧಿಯ ರಜತಾಚಲವನು
ಗಿರಿಜಾತೆಯಾಣ್ಮಂ ಸುಧಾಕರನ ರಾಹು ನಿ
ರ್ಜರದೇವನಾತ್ಮೀಯ ಗಜಮಂ ಮರಾಳನಂ
ಸರಸಿರುಹೋದ್ಭವ ಪರಿಶೋಧಿಸುತ್ತಿರುವರೇನೆಂಬೆನಚ್ಚರಿಯನು ॥

ಒಂದು ಅನ್ಯೋಕ್ತಿ :

ಕೆಳಗೇಕೀಕ್ಷಿಪೆ ವನಿತಾ
ಕುಲಮಣಿಯೇ ಪೋದುದೇನದಂ ಗಡಪೇಳ್ ನೀಂ

ತಿಳಿಯೈ ಮೂರ್ಖ ಮದೀಯಾ
ಮಲತರ ತಾರುಣ್ಯ ಮೌಕ್ತಿಕಂ ಬೀಳ್ದಿರ್ಕುಂ

ಇನ್ನೂ ಕೆಲವು ಪದ್ಯಗಳನ್ನು ನೋಡಬಹುದು :

ಪರಮಾತ್ಮನ ನಾಮ :

ಮಧುವಿರ್ಕುಂ ಮಧುರಂ ದಧಿಮಧುರಂ
ದ್ರಾಕ್ಷಾಮೃತಂಗಳುಂ ಮಧುರಂ
ಮಧುರಕ್ಕಿಂತತಿಮಧುರಂ
ಮಧುರೇಶನ ನಾಮಮ್ ಇದುವೆ ಭವದೂರಂ

ಮೂಲ ಸಂಸ್ಕೃತ :

ದಧಿ ಮಧುರಂ, ಮಧು ಮಧುರಂ
ದ್ರಾಕ್ಷಾ ಮಧುರಾ, ಸುಧಾಪಿ ಮಧುರೈವ
ತಸ್ಯ ಮಧುರಾದಪಿ ಮಧುರಂ
ಮಧುರಾನಾಥಸ್ಯ ನಾಮಮ್

ಇಂದ್ರಿಯನಿಗ್ರಹ ಕಠಿಣ :

ಮರದಂಬು ಪರ್ಣಂಗಳಾಹಾರಮಾಗಿರ್ದ
ಪರಮ ವಿಶ್ವಾಮಿತ್ರ ಸುಪರಾಶರೇತ್ಯಾದಿ
ವಿರತಿಗಳುಮ್ ಅಂಬುಜೋಪಮಮುಖಿಯರಂ ಕಂಡು ಮೋಹಪರವಶರಾದರು
ಸರಸದಿಂ ಘೃತಪಯೋದಧಿಯುತಾನ್ನವನುಂಬ
ನರರ ಪಾಡೇನು ಇಂತಹರ್ ಜಿತೇಂದ್ರಿಯರಾಗಲ್
ಉರುತರದ ವಿಂಧ್ಯಾದ್ರಿತೇಲ್ವುದು ಅಬ್ಧಿಯೊಳ್ ಎಂದು

ಗಾಯಕ್ಕೆ ಎರಡೇ ಔಷಧಗಳು :

ಅಂಭೋಜನೇತ್ರೇ, ತವತೀಕ್ಷ್ಣಕಟಾಕ್ಷ ನಾರಾ
ಚಂ ಬಂದು ನಾಂಟಿದ ವ್ರಣಕ್ಕೆ ಎರಡೌಷಧಂ ಕೇಳ್
ಬಿಂಬಾಧರೋಷ್ಠದ ಸುಧಾಘನಪಾನಮಿರ್ಕುಂ
ಕುಂಭಾಭವೃತ್ತ ಕುಚಕುಂಕುಮ ಪಂಕಲೇಪಂ

ವೈರಾಗ್ಯ :

ವರನಾರಿಯರಂ ನೋಡುವ
ದರೊಳಂಧಕನಂತೆ ಮೂಕನೋಲಿರಬೇಕ
ಸ್ವರಿಗವಮಾನಂ ಗೆಯ್ವುದ
ಕರಿ ಪರವಿತ್ತಾಪಹರಣಕಾಗಿರು ಕುಂಟಂ

ಈ ರೀತಿ ವಿನೋದ, ಲೋಕಬೋಧೆ, ಸ್ತ್ರೀ ಸ್ವಭಾವ ನಿರೂಪಣೆ, ಶೃಂಗಾರಗಳು, ಹದವಾಗಿ, ಮಿತವಾಗಿ, ಸುಭಗವಾಗಿ, ಇವರ ಕವನಗಳಲ್ಲಿ ಪ್ರಕಟಗೊಂಡಿವೆ.

—

ಅಯ್ಯಪ್ಪಯ್ಯ ಹಿರೇಮಠ - ಶಾಂತಗಿರಿ

(ಸು. ೧೮೬೦)

ಇವರು " ಸ್ತ್ರೀಯರ ಹಾಡು " ಎಂಬ ಕವನಗಳನ್ನು ಬರೆದು ಜನಬಸವಯ್ಯಾ ಚಂಡೂರಮಠ, ಗದಗ ಎಂಬವರಿಗೆ ಕೊಟ್ಟರು. ನಿಶ್ಚಿತ ಕಾಲ ತಿಳಿಯುವಂತಿಲ್ಲ. ಇವರು ' ಬಾಲಿಕಾ ಗೀತಶತಕ ' (೧೯೧೧) ಮತ್ತು ' ಬೀಗಿತ್ತಿಯರ ಪದ ' (೧೯೧೧) ಎಂಬ ಚಿಕ್ಕ ಪುಸ್ತಕಗಳನ್ನು ಬರೆದಂತೆ ಕಾಣುತ್ತದೆ. [೧]

ಈ ಕವನಗಳಲ್ಲಿ ಸ್ತ್ರೀಯರಿಗೆ ವೀರಶೈವ ಆಚಾರಗಳನ್ನು ವಿವರಿಸಲಾಗಿದೆ. ಮಾದರಿಗಾಗಿ ಈ ಕೆಳಗಿನ ಹಾಡುಗಳನ್ನು ಕೊಡಬಹುದು :

ಹಡದಾರ ಚವಕವಾ– ಗಡಗೀಯೊಳಿಡುಬ್ಯಾಡ
ಮಡದಿ ನಿನಗಿಲ್ಲ ಮೈಲಿಗಿ
ಮಡದಿ ನಿನಗಿಲ್ಲ ಮೈಲಿಗಿ– ಲಿಂಗವಾ
ಬಿಡದೆ ಯೆಚ್ಚರದೀ ಧರಿಸವ್ವಾ

ಗುರುಕೊಟ್ಟ ಲಿಂಗವಾ– ಮರೆದು ಮನೆಯೊಳು ಬಿಟ್ಟು
ಬರಿಗೊರಳಿನಿಂದ ತಿರುಗುವಾ
ಬರಿಗೊರಳಿನಿಂದ ತಿರುಗುವಾ– ಹೆಣ್ಣಿಗೆ
ನರಕ ತಪ್ಪದು ಕಡಿತನಕ

ಉಣುವಾಗ ಉಡುವಾಗ– ಮನೆಯೊಳಗ ಹೊಲದೊಳಗ
ದಣಿವು ಬೇಸರಿಕಿ ಬಂದಾಗ
ದಣಿವು ಬೇಸರಿಕಿ ಬಂದಾಗ– ಲಿಂಗವಾ
ಕ್ಷಣ ಮಾತ್ರವಗಲೀ ಇರಬ್ಯಾಡ

ಲಿಂಗವಂತರ ಮನಿಯಾ– ಹೆಂಗಸು ನೀನಾಗಿ
ಲಿಂಗಾ ಪೆಟ್ಟಿಗೆಯೊಳಿಟ್ಟು
ಲಿಂಗಾ ಪೆಟ್ಟಿಗೆಯೊಳಿಟ್ಟು– ತಿರುಗಿದರೆ
ಹ್ಯಾಂಗ ಭಕ್ತಳೀ ಭವಿ ನೀನು

---

೧ ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ : ೧೯೬೦ : ಪು. ೩೨೮.

ಲಿಂಗವ ಬಿಟ್ಟವಳು– ಲಿಂಗವಂತಳು ಹ್ಯಾಂಗ
ಲಿಂಗವಿಲ್ಲದ ಭವಿ ನೀನು
ಲಿಂಗವಿಲ್ಲದ ಭವಿ ನೀನು– ಅಟ್ಟಡಿಗಿ
ಲಿಂಗಯ್ಗ ಹ್ಯಾಂಗ ಸಲ್ಲುವದ ?

ನಾಚಿ ಲಿಂಗವ ಬಿಟ್ಟು– ನೀಚಾಳೆ ಗಂಡನಾ
ಆಚಾರ ಕೆಡಿಸಿ ಬಿಟ್ಟೆಲ್ಲೆ
ಆಚಾರ ಕೆಡಿಸಿ ಬಿಟ್ಟೆಲ್ಲೆ– ಯಮಬಾಧೆ
ಪೇಚು ನಿನಗ್ಹ್ಯಾಗೆ ತಪ್ಪೀತ ?

ಗುರುವಿನ ಹಸ್ತಸ್ಪರ್ಶವಾದ ಮೇಲೆ ಪರುಷ ಮುಟ್ಟಿದಂತೆ. ಸುಪ್ರೀತನಾದ ಗುರು ಶಿಷ್ಯನಿಗೆ ತನ್ನಂತೆಯೇ ಸಂಸಾರದ ಸಿಜವ ತೋರುವ.

ಎನ್ನಯ್ಯ ಗುರುತಂದೆ ತನ್ನಂತೆ ಮಾಡಿದ
ಇನ್ನಾರ ಗೊಡವಿ ನಮಗೇನ
ಇನ್ನಾರ ಗೊಡವಿ ನಮಗೇನ– ಈವೂರ
ಅಸ್ನಿಗರ ಆಶಿ ನಮಗೇನ

ಮರದ ಮೇಲಿನ ಹಕ್ಕಿ ಭುರ್‌ನ್ಹಾರಿ ಹೋದಂತೆ
ಇರಬಂದದ್ದಲ್ಲ ಈ ಕಾಯ
ಇರಬಂದದ್ದಲ್ಲ ಈ ಕಾಯ– ನಾ ಇನ್ನು
ಸ್ಥಿರವಲ್ಲವೆಂದು ತಿಳಕೊಂಡೆ

ಬರಿ ಗಂಟುಗದಡಿ ಮಾಡಿ ದೊರಿಲಿಲ್ಲ ಏನೇನು
ಹೆರವರ ಕಾಟ ಎನಗಾಯ್ತು
ಹೆರವರ ಕಾಟ ಎನಗಾಯ್ತು– ನಾ ಮನದ
ಉರಲು ತಪ್ಪಿಸಿ ಹೊರಗಾದೆ

ಗಾಳಿಗೆ ಗಾಳೆವ್ವ ಧೂಳಿಗೆ ಧೂಳೆವ್ವ
ಹೇಳತೇನವ್ವ ವಿಪರೀತ
ಹೇಳತೇನವ್ವ ವಿಪರೀತ– ಇಂಥಾದು
ಜೋಳಗಿಯೊಳಗೆ ನಮ್ಮಾಟ

ಗಟ್ಟಿ ಜೀವದ ಬಿತ್ತಿ ಬಿಟ್ಟಾನು ಸದ್ಗುರು
ಮತ್ತುಟ್ಟು ಬಾಧೆ ನಮಗಿಲ್ಲ
ಮತ್ತುಟ್ಟು ಬಾಧೆ ನಮಗಿಲ್ಲ– ನಾ ಇನ್ನು
ಇಷ್ಟೆ ಸಾಕೆಂದು ಹಿಗ್ಗಿದೆ

ಪೊಡವಿಗಧಿಕವಾದ ಗಡಿಗ್ರಾಮ ಬಾಗೇವಾಡಿ
ಒಡೆಯನ ಬಿಡದೆ ಭಜಿಸುತ
ಒಡೆಯನ ಬಿಡದೆ ಭಜಿಸುತ– ಬಸವನ
ಅಡಿಗ್ಹೊಂದಿ ಮುಕ್ತಿ ಪಡಕೊಂಡೆ

ಗುರುಬಸವೇಶನ ತರಳಗೌರವ್ವನ
ಪರಮ ಭವ ದೂರ ಮಾಡಿದನ
ಪರಮ ಭವ ದೂರ ಮಾಡಿದನ– ಗುರುವಿನ
ಚರಣವಸ್ಮರಿಸಿ ದಾಟುವೆನ

ಸಂಸಾರ ಗಾಳಿಗೆ ಗಾಳಿವ್ವ– ಧೂಳಿಗೆ ಧೂಳಿವ್ವ– ಜೋಳಿಗೆಯೊಳಗ ಸಮ್ರಾಟ. 'Dust thou art and to dust thou returneth.' ಈ ಜ್ಞಾನವನ್ನು ಗುರುವೇ ಕೊಡಬಲ್ಲ. ಬಗಲಲ್ಲಿ ಕೂಸನ್ನಿಟ್ಟುಕೊಂಡು, ಊರ ತುಂಬ ಹುಡುಕಿದಂತೆ ಮಾನವನ ಪರಿಭ್ರಮಣ. "ಅಲ್ಲಲ್ಲಿ ಹುಡುಕಿದೆ– ಎಲ್ಲೆಲ್ಲಿ ನೋಡಿದೆ– ತನ್ನಲ್ಲಿ ಇತ್ತ ಈ ಮುತ್ತು ! ತನ್ನಲ್ಲಿ ಇತ್ತ ಈ ಮುತ್ತು– ಮುನಿಗೇಂದ್ರ ಬಲ್ಲಿದ ಜ್ಞಾನ ತಿಳಿಸಿದ." ಈ ಆತ್ಮ– ಮೌಕ್ತಿಕವನ್ನು ಅರಿತುಕೊಂಡು ಸಾಗಿದವನೇ ಜಾಣ. ಈ ಕವನ ಅಯ್ಯಪ್ಪಯ್ಯನವರೇ ಬರೆದದ್ದಾಗಿದ್ದರೆ, ಅವರ ಅದ್ಭುತ ಕವಿತಾಸಾಮರ್ಥ್ಯವನ್ನೂ, ಅನುಭಾವವನ್ನೂ ಅರಿತುಕೊಳ್ಳಬಹುದಾಗಿದೆ !

ಈ ಸಂಗ್ರಹದಲ್ಲಿ ಬರುವ ಇನ್ನೊಂದು ಕವನವೆಂದರೆ ' ಲೋಕವ ಬಿಡಬೇಕು ' ಎಂಬುದು.

ಲೋಕವ ಬಿಡಬೇಕು– ಹೃದಯದ
ಶೋಕವ ಬಿಡಬೇಕು ॥ ಪ ॥

ಭೀಕರ ಪಾಪಕೆ ಆಸ್ಪದವಾಗಿರು
ಶೀಕರಿಸುವ ಬಹು ಮಾಯಾವಿಕಾರವ ॥ ಅ ಪ ॥

ನಂಟರು ಹಳಿಯುವರು– ಬಹುತರ
ಕಂಟಕವತಗಿಪರು
ತುಂಟರು ನಿನ್ನನು ಹೇಳನೆ ಮಾಡುತ
ಕೊಂಟಿತನಕ ಬರಮಾಡುವರೀ– ಲೋಕವ

ಆತ್ಮನ ಬೇಡುತಿರು– ನೀ ಪರ
ಮಾತ್ಮನ ಪಾಡುತಿರು
ಆತ್ಮಿಕ ವರಗಳ ಹೊಂದುತನೇಕ ದು
ರಾತ್ಮರನೆದುರಿಸಿ, ಮೋಕ್ಷವ ಬಯಸುತ

–ಇತ್ಯಾದಿ

ಗುರುವೇ ಮಾನವನನ್ನು ಈ ಭವಬಂಧನದಿಂದ ಪಾರು ಮಾಡಬಲ್ಲ. ಅವನು ಕೊಡುವದೇ ನಿಜವಾದ ವಿದ್ಯೆ. ಮುಕ್ತಿಯನ್ನರುಹುವುದೇ ನಿಜವಾದ ವಿದ್ಯೆ: ಉಳಿದುದೆಲ್ಲ ವರ್ಣಪಾಂಡಿತ್ಯ.

ಓದು ಕಲಿಸಿದಾ– ಸದ್ಗುರುರಾಯಾ
ಓದು ಕಲಿಸಿದಾ ॥ ಪ ॥

ಓದು ಕಲಿಸಿದೆನ್ನ ಗುರುವು ಆದಿಗುಣಗಳೆಲ್ಲ ಕಳೆದು
ನಾದ ಬಿಂದು ಕಳೆಗಳಿಂದ
ಬೋಧವನ್ನು ಮಾಡಿಯೆಮಗೆ ॥ ಅ ಪ ॥

ಪ್ರಣವವೆಂಬ ಬೀಜಮಂತ್ರ ಕ್ಷಣದಿಯೆಮಗೆ ಬೋಧಮಾಡಿ
ಗುಣಗಳೆಲ್ಲ ಕಳೆದು ನಮ್ಮ
ಪಣೆಯ ಬರಹ ತಿದ್ದಿದಾನೆ ॥ ೧ ॥

ಅಷ್ಟಮದಗಳೆಲ್ಲ ಕಳೆದು ಶ್ರೇಷ್ಠವಾದ ವಸ್ತು ತುಂಬಿ
ಸೃಷ್ಟಿಗಧಿಕ ಬಸವನಳ್ಳಿ
ಶ್ರೇಷ್ಠ ಭಕ್ತರಿಗೆಲ್ಲಾ ॥ ೨ ॥

ಕರ್ಮವೆಂಬ ಕತ್ತಲೊಳಗೆ ಧರ್ಮವೆಂಬ ಜ್ಯೋತಿ ತುಂಬಿ
ನಿರ್ಮಳವಾದ ಬೆಳಕಿನೊಳು
ಗುರುವು ಕುಳಿತುಕೊಂಡು ಯೆಮಗೆ ಓದು ಕಲಿಸಿದಾ ॥ ೩ ॥

–ಈ ಕವಿಗಳ ಹಾಡುಗಳಿಗೆ ಅಂಕಿತಗಳಿಲ್ಲದೆ ಇರುವದರಿಂದ, ಇವನ್ನು ನಿಶ್ಚಿತವಾಗಿ ಇವರೇ ಬರೆದರೆಂದು ಹೇಳುವುದೂ ಹಲವು ಸಲ ಕಷ್ಟಸಾಧ್ಯ. ಅದೂ ಅಲ್ಲದೆ, ಈ ಹಸ್ತಪ್ರತಿಯಲ್ಲಿ ಗುರುಪಾದಪ್ಪ ನಾಗಸೆಟ್ಟಿ ಮೊದಲಾದವರ ಹಲವು ಕವನಗಳೂ ಕೂಡಿವೆ.

—

ಶ್ರೀ ಗುರುಶಾಂತಲಿಂಗ

(ಸು. ೧೮೬೦)

ನಾಗಶೆಟ್ಟಿಯವರ ಸಂಗ್ರಹದಲ್ಲಿ ಈ ಅಂಕಿತವಿದ್ದ ಹಲವು ಹಾಡುಗಳು ಬರುತ್ತವೆ. ಶೈಲಿಯನ್ನು ನೋಡಿದಾಗ, ಸುಮಾರು ೧೮೬೦ ರ ಸಮೀಪದಲ್ಲಿ ಇವನ್ನು ಬರೆದುದಾಗಿ ಕಾಣುತ್ತದೆ. ಗಂಗೆ-ಗೌರಿಯರ ಸಂವಾದವಿರುವ ಈ ಕೆಳಗಿನ ಎರಡು ಸುಂದರವಾದ ಹಾಡುಗಳನ್ನು ಉದ್ಧರಿಸಬಹುದು :

ಯಾತಕಿಲ್ಲಿಗೆ ಬಂದೆ ಗಂಗೀ

ಯಾತಕಿಲ್ಲಿಗೆ ಬಂದೆ ಗಂಗೀ– ಭೂತ
ನಾಥನ ಮಾತಿಗೆ ಮರುಳಾಗಿ ತಂಗೀ ॥ ಪ. ॥

ಪುಲಿದೊಗಲುಟ್ಟುಕೊಂಡಿರುವ ಆನೆ
ಹೊಲಸು ಹಸಿಯ ಚರ್ಮವ ಮೇಲೆ ಹೊದ್ದಿರುವಾ
ಎಲುವಿನ ಮಾಲೆ ಹಾಕಿರುವಾ ಇಂಥಾ
ಬಲುಹೇಸಿ ಶಿವಗೆಂತು ಮಾಡಿ ನೀ ಮನವಾ ॥ ೧ ॥

ಹರಿಪ ಹಾವನು ಪಿಡಿತಂದು ತನ್ನ
ಶರೀರಕ್ಕಾಭರಣವ ಮಾಳ್ಪುವ ನಲಿದು
ಕರದೊಳು ಶಿರಪಾತ್ರೆ ಪಿಡಿದು ನಾಡ
ತಿರಿದು ಜೀವಿಸುವಂಥಾ ಗೊರವನಿಗೊಲಿದು ॥ ೨ ॥

ಸುಟ್ಟನಿವನು ಮೂರು ಪುರವಾ ಬಹು
ಸಿಟ್ಟಿನಿಂ ದಹಿಸಿದ ಕಾಮನ ತನುವಾ
ಪುಟ್ಟ ಚಿಲಾಳನ ಶಿರವಾ– ಕೊಯ್ಸಿ
ದಷ್ಟ ಮೂರುತಿಯವನೆಂಬದೇನರಿಯಾ ॥ ೩ ॥

ಮರುಳಂಗಳೊಡನಾಡುತಿಹನು– ಸಣ್ಣ
ತರಳರಿಂದಲಿ ಕಲ್ಲಿಲೊಗಿಸಿಕೊಂಬುವನು
ಗರಳವನೆತ್ತಿ ಕುಡಿಯುವನು– ಇಂಥಾ
ದುರುಳ ಶಂಕರನ ರೂಪವ ಕಂಡು ನೀನು ॥ ೪ ॥

ಮಾದಿಗರೊಡನುಂಬುತಿರುವಾ– ಚಿತಾ
ಬೂದಿಯ ಮೈಗೆಲ್ಲಾ ಸೂಸುತ್ತಲಿರುವಾ
ವ್ಯಾಧನಿಂದೊದಿಸಿಕೊಂಡಿರುವಾ ನಮ್ಮ
ಸಾಧು ಶ್ರೀ ಗುರುಶಾಂತಲಿಂಗನೇಂ ಚಲುವಾ ॥ ೫ ॥

"ಉಕ್ತಿರ್ವ್ಯಾಜಸ್ತುತಿರ್ನಿಂದಾಸ್ತುತಿಭ್ಯಾಂ ಸ್ತುತಿನಿಂದಯೋಃ" ಎಂಬುದರಿಂದ ಇಲ್ಲಿ ಬರುವ ವ್ಯಾಜಸ್ತುತಿ ಅಲಂಕಾರವು ಮನೋಜ್ಞವಾಗಿದೆ.

ಗೌರಿ ಕೇಳಿದ ಈ ಪ್ರಶ್ನೆಗೆ ಗಂಗೆ ಕೊಟ್ಟ ಉತ್ತರ :

ಕರೆದರೆ ಬಂದೆ ನೋಡಕ್ಕಾ– ನಿನ್ನಾ
ತೆರದಿ ನಾ ಭ್ರಮಿಸಿ ಬಂದಿಲ್ಲ ಗೌರಕ್ಕಾ ॥ ಪ. ॥

ತೊಗಲುಟ್ಟುಕೊಂಡರೇನಾಯ್ತು ಈತ
ಗಘಮಲಂಗಳ ಕುಂದುಪೊಂದುವದೆಂತು
ನಿಗಮಕ್ಕೆ ನಿಲುಕದ ವಸ್ತು– ಈಯ
ಸಘ ಚಿದಂಬರನೆನ್ನಾರೂಪಕ್ಕೆ ಸೋಲ್ತು– ಕರೆದರೆ ಬಂದೆ ॥ ೧ ॥

ಭಿಕ್ಷೆ ಬೇಡಿದಡೇನೇ ಶಿವನು
ಶಿಕ್ಷಾ ಮೋಕ್ಷಾದಿಗಳಿಗಿನ್ನು ಕರ್ತೃವಾಗಿಹನು
ರಕ್ಷಿಪನಖಿಲ ಲೋಕವನು ನೀನು
ಪೇಕ್ಷಗೆಯ್ದುದ ಬಲ್ಲೆ ಮೆಚ್ಚಿ ಶಂಕರನು ॥ ೨ ॥

ಪುರಸುಟ್ಟು ಸುರರನ್ನು ಪೊರೆದಾ
ಸ್ಮರನುರುವಣಿಸಲು ಸುಟ್ಟು ಪ್ರಾಣವ ಪಡೆದಾ
ಸಿರಿಯಾಳ ಚೆಂಗಳೆಗೊಲಿದಾ– ತಾನೇ
ಪರತರ ಮೂರುತಿ ಶರಣೇಷ್ಟವರದಾ ॥ ೩ ॥

ಭೂಪತಿಯು ಈತ ಖರೆಯೇ
ಆದಡೀತನಲಿರುತಿರುವ ಗುಣಗಳನರಿಯೇ
ದಾತೃತನಕೆ ಹುಚ್ಚೆ ದೊರೆಯೇ– ಜಗ
ನ್ನಾಥನೊಲಿದನೆನ್ನಾ ಭಾಗ್ಯಕೆ ಸರಿಯೇ ॥ ೪ ॥

ನಿನ್ನನ್ನು ಶಿವ ತಂದಾನೇನೇ– ಆತ
ನನ್ನು ನೀ ತಪಗೆಯ್ದು ಒಲಿಸಲಿಲ್ಲೇನೇ
ನಿನ್ನ ಮೇಲೆನ್ನ ತಂದಿಹನೇ– ನಮ್ಮ
ಚನ್ನ ಶ್ರೀಗುರುಶಾಂತ ಚಿನ್ಮಯತಾನೇ ॥ ೫ ॥

ಕರೆದರೆ ಬಂದೆ ನೋಡಕ್ಕಾ– ನಿನ್ನಾ
ತೆರದಿ ನಾ ಭ್ರಮಿಸಿ ಬಂದಿಲ್ಲ ಗೌರಕ್ಕಾ [೧]

—

೧ ಕಿತ್ತೂರಿನ ಸಿದ್ಧಲಿಂಗಪ್ಪ ನಾಗಸೆಟ್ಟಿಯವರ ಸಂಗ್ರಹ– ಅಪ್ರಕಟಿತ.

ರಾ. ಹ. ದೇಶಪಾಂಡೆ

(೧೮೬೧–೧೯೩೦)

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ರಾ. ಹ. ದೇಶಪಾಂಡೆಯವರೆಂದರೆ ಪರ್ಯಾಯ ಪದಗಳು; ಒಂದೇ ನಾಣ್ಯದ ಎರಡು ಮುಖಗಳು. ಇವರಿಗೆ "ಎಂ.ಎ." ದೇಶಪಾಂಡೆ ಎಂದೇ ಸಾಮಾನ್ಯವಾಗಿ ಜನ ಕರೆಯುತ್ತಿದ್ದರು. ಧಾರವಾಡದಲ್ಲಿ ಆಗ ಪ್ರಥಮ ಎಲ್. ಸಿ. ಇ. ಆಗಿದ್ದ ನರಸಾಪುರ ರಾಮರಾಯರು "ಎಲ್ಸಿ" ರಾಮರಾಯರೆಂದೂ, ಪ್ರಥಮ ಬಿ. ಎ. ಆಗಿದ್ದ ಜಠಾರ ಭಾಸ್ಕರರಾಯರು "ಬಿ. ಎ." ಭಾಸ್ಕರರಾಯರೆಂದೂ, ಪ್ರಥಮ ಎಂ. ಎ. ಪದವೀಧರರಾದ ದೇಶಪಾಂಡೆಯವರು "ಎಂ.ಎ." ದೇಶಪಾಂಡೆಯವರೆಂದೂ ಕರೆಯಲ್ಪಡುತ್ತಿದ್ದರು. ದೇಶಪಾಂಡೆ ಯವರದು ಉಗ್ರವಾದ, ಉಜ್ವಲವಾದ ಕನ್ನಡಾಭಿಮಾನ. ಇದಕ್ಕಾಗಿ, ಅವರು ಬಹು ಬೆಲೆಯ ದಂಡವನ್ನೂ ತೆರಬೇಕಾಯಿತು. ಉತ್ತರ ಕರ್ನಾಟಕದಲ್ಲಿ ಕನ್ನಡ ನವೋದಯ ಚಳವಳಿಗೆ ವಿದ್ಯಾ ವರ್ಧಕ ಸಂಘದ ಮೂಲಕ ನಾಂದಿಯನ್ನು ಹಾಕಿದ ಹಿರಿಯರಲ್ಲಿ ರಾ. ಹ. ಅವರು ಒಬ್ಬರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಸಂಸ್ಥಾಪಕ ಕಾರ್ಯದರ್ಶಿಗಳೂ ಆಗಿದ್ದರು.

ಧಾರವಾಡದಿಂದ ೫–೬ ಮೈಲು ಮಾತ್ರ ದೂರದಲ್ಲಿರುವ ಇತಿಹಾಸ ಪ್ರಸಿದ್ಧವಾದ ನರೇಂದ್ರ ಗ್ರಾಮದಲ್ಲಿ ರಾಮಚಂದ್ರರಾಯರು ಸನ್ ೧೮೬೧ ರ ಮಾರ್ಚ ತಿಂಗಳು ೨೦ನೆಯ ತಾರೀಖಿನ ದಿವಸ ಜನ್ಮ ತಾಳಿದರು. ಶ್ರೀಯುತರದು ನರೇಂದ್ರ ದೇಶಪಾಂಡೆಯವರ ಮನೆತನ. ಧಾರವಾಡದಲ್ಲಿಯೇ ಮಾಧ್ಯಮಿಕ ವಿದ್ಯಾಭ್ಯಾಸವನ್ನು ಮುಗಿಸಿ, ಶಿಷ್ಯವೇತನವನ್ನು ಪಡೆದುಕೊಂಡು ಪುಣೆಯ ಡೆಕ್ಕನ್ ಕಾಲೇಜನ್ನು ಸೇರಿದರು. ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ರಾಬರ್ಟ್ಸನ್ ಸುವರ್ಣ ಪದಕ ವನ್ನೂ, ಸುಮಾರು ೫೦೦ ರೂಪಾಯಿ ಮೌಲ್ಯದ ಪುಸ್ತಕಗಳನ್ನೂ ಬಹುಮಾನವಾಗಿ ಪಡೆದರು. ಎಂ. ಎ. ಮುಗಿಸಿದ ನಂತರ ಎಲ್‌ಎಲ್. ಬಿ. ಅಭ್ಯಾಸವನ್ನು ಮುಂದುವರಿಸಬೇಕೆಂದು ಬಯಸಿದ್ದ ದೇಶಪಾಂಡೆಯವರನ್ನು, ರಸೆಲ್‌ರವರು ಮನವೊಲಿಸಿ, ಶಿಕ್ಷಣ ಖಾತೆಯನ್ನು ಸೇರುವಂತೆ ಮಾಡಿದರು. ಈ ಮೂಲಕವಾಗಿ ಸನ್ ೧೮೮೪ರಲ್ಲಿ ಬೆಳಗಾವಿಯ ಸರದಾರ ಹಾಯ್‌ಸ್ಕೂಲಿನ ಪ್ರಥಮ ಉಪಶಿಕ್ಷಕ ರಾಗಿ ಸೇವೆಯನ್ನು ಪ್ರಾರಂಭಿಸಿದರು. ಮುಂದೆ ಒಂದೇ ವರ್ಷದಲ್ಲಿ ಅಂದರೆ ಸನ್ ೧೮೮೫ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿ ಬಡತಿ ಹೊಂದಿದರು. ಅನಂತರ ಸನ್ ೧೯೧೦ರಲ್ಲಿ ಹೆಡ್‌ಮಾಸ್ತರರೆಂದು ವರ್ಗ ಹೊಂದಿ, ಸನ್ ೧೯೧೪ರಲ್ಲಿ ಮುಂಬಯಿ ಶಿಕ್ಷಕರ ತರಬೇತಿ ಕಾಲೇಜಿಗೆ ವರ್ಗಾಯಿಸಲ್ಪಟ್ಟರು. ಹೀಗೆ ೩೨ ವರುಷ ಸರಕಾರದ ಸೇವೆ ಸಲ್ಲಿಸಿ, ಸನ್ ೧೯೧೬ರಲ್ಲಿ ಧಾರವಾಡ ಸರಕಾರೀ ಶಾಲೆಯ ಮುಖ್ಯಾಧ್ಯಾಪಕರಾಗಿ ನಿವೃತ್ತಿ ಹೊಂದಿದರು.

ಮೇಲೆ ವಿವರಿಸಿದ ಶ್ರೀಯುತರ ನೌಕರಿ ಜೀವನವನ್ನು ನೋಡಿದರೆ, ನೌಕರಿಯಲ್ಲಿ ಅವರಿಗೆ ಸಿಗಬೇಕಾದದ್ದು ಸಿಗಲಿಲ್ಲವೆಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಆ ಕಾಲದಲ್ಲಿ ಸರಕಾರಿ ಹಾಯ್ ಸ್ಕೂಲಿನ ಹೆಡ್‌ಮಾಸ್ತರರ ಪಗಾರ ೮೦೦ ರೂಪಾಯಿಗಳಿಗೆ ಹೋಗುತ್ತಿತ್ತು. ಆದರೆ, ದೇಶಪಾಂಡೆ ಯವರು ೩೨ ವರ್ಷ ಸೇವೆ ಸಲ್ಲಿಸಿದ ನಂತರವೂ ೫೦೦ ರೂಪಾಯಿ ವೇತನದ ಮೇಲೆಯೇ ನಿವೃತ್ತಿ ಹೊಂದಬೇಕಾಯಿತು. ಇದಕ್ಕೆ ಕಾರಣ ಬಹುಶಃ ಅವರ ಉಗ್ರವಾದ ಕನ್ನಡದ ಅಭಿಮಾನ ಮತ್ತು ರಾಷ್ಟ್ರೀಯ ಮನೋವೃತ್ತಿಗಳೇ ಎಂದು ಹೇಳಬೇಕು. ರಾಮಚಂದ್ರರಾಯರು ಕನ್ನಡದ ಬೆಂಕಿಯ ಪಿಂಡ. ಇವರು ಡೆಕ್ಕನ್ ಕಾಲೇಜಿನಲ್ಲಿದ್ದಾಗ, ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಇವರ ಸಮ ಕಾಲೀನರಾಗಿದ್ದರು. ವಿಶ್ವೇಶ್ವರಯ್ಯನವರು ಮೈಸೂರ ದಿವಾನರಾಗಿ ನೇಮಕರಾದಾಗ, ದೇಶಪಾಂಡೆ ಯವರಿಗೂ ಒಂದು ಒಳ್ಳೆಯ ನೌಕರಿಗಾಗಿ ಮೈಸೂರಿಗೆ ಬರಲು ಆಮಂತ್ರಿಸಿದರು. ಆದರೆ, ತಾವು ಕನ್ನಡದಲ್ಲಿ ಪುಸ್ತಕಗಳನ್ನು ಬರೆಯುವ ವಿಚಾರವನ್ನು ಇಟ್ಟುಕೊಂಡದ್ದರಿಂದ ಬರುವುದಾಗುವದಿಲ್ಲ ವೆಂದು ದೇಶಪಾಂಡೆಯವರು ನಿರಾಕರಿಸಿದರು. ಇವರ ಎರಡನೆಯ ಮಕ್ಕಳಾದ ಶ್ರೀ ಶ್ರೀಪಾದರಾವ ದೇಶಪಾಂಡೆಯವರು ಅಂದಿನ ಕಾಲದ ಬಿ. ಎಸ್.ಸಿ. ಆಗಿದ್ದರು. ಆಗ ಧಾರವಾಡದಲ್ಲಿ ಆದೇ ಪ್ರಾರಂಭವಾಗಿದ್ದ ಕರ್ನಾಟಕ ಕಾಲೇಜಿನಲ್ಲಿ ಇವರನ್ನು ಲೆಕ್ಚರರ್ ಎಂದು ನೇಮಕ ಮಾಡಬೇಕೆಂದರೆ, "ಬೇಡ; ಕನ್ನಡದ ಕೆಲಸಕ್ಕಾಗಿ ಅವನು ಶಂಕರ ಕರ್ನಾಟಕ ಪುಸ್ತಕ ಭಂಡಾರವನ್ನು ತೆಗೆದು, ಕನ್ನಡ ಪುಸ್ತಕಗಳನ್ನು ಮಾರಲಿ"– ಎಂದು ಮಗನಿಗೂ ಕನ್ನಡದ ದೀಕ್ಷೆಯನ್ನು ಕೊಟ್ಟರು. ಅವರ ಕನ್ನಡದ ಅಭಿಮಾನವನ್ನು ಕಂಡ ಅನೇಕರು ಅವರಿಗೆ ಚೇಷ್ಟೆ ಮಾಡುತ್ತಿದ್ದರು– ರಾಮಚಂದ್ರರಾಯರು ಆನೆಗೆ ಆನೆ ಎನ್ನದೆ, ಮುಂಬಾಲದ ದೊಡ್ಡೆಮ್ಮೆ ಎಂದು ಕರೆಯುತ್ತಾರೆಂದು. ದೇಶಪಾಂಡೆ ಯವರು ತಮ್ಮ ಹೆಸರಾದ ರಾಮಚಂದ್ರ ಹಣಮಂತ ದೇಶಪಾಂಡೆ ಎಂಬುದನ್ನು ಮಂಗನೊಡೆ ಯಪ್ಪ ಮಂಗಪ್ಪ ನಾಡಸಂಕಿ ಎಂದು ಹೇಳುತ್ತಿದ್ದರೆಂದೂ ಜನರು ವಿನೋದ ಮಾಡುತ್ತಿದ್ದರು. ಇದರಲ್ಲಿ ಅತಿಶಯೋಕ್ತಿ ಇದೆಯೆಂಬುದು ಮೇಲೆಯೇ ಸ್ಪಷ್ಟವಾಗಿಯೇ ಕಾಣುತ್ತದೆ. ಅದೇನೇ ಇದ್ದರೂ, ರಾಮಚಂದ್ರರಾಯರು ಕನ್ನಡದ ಕಟ್ಟಾ ಸೇನಾನಿಗಳಾಗಿ, ಆದರ್ಶಯುತರಾಗಿ ಮಾಡಿದ ಕೆಲಸ ಅವಿಸ್ಮರಣೀಯ.

ರಾಮಚಂದ್ರರಾಯರು ಧಾರವಾಡದ ಸರಕಾರೀ ಹಾಯ್‌ಸ್ಕೂಲನ್ನು ಶಿಕ್ಷಕರೆಂದು ಸೇರಿದಾಗ, ಅಲ್ಲಿಯ ವಕ್ತೃತ್ವ ಸ್ಪರ್ಧೆಗಳೆಲ್ಲ ಮರಾಠಿಯಲ್ಲಿಯೇ ನಡೆಯುತ್ತಿದ್ದವು. ಮುಂದೆ ಕನ್ನಡದ ಹುಲಿ ಯೆಂದು ಪ್ರಸಿದ್ಧರಾದ ಮುದವೀಡು ಕೃಷ್ಣರಾಯರು ಆಗ ಸರಕಾರೀ ಹಾಯ್‌ಸ್ಕೂಲಿನಲ್ಲಿ ವಿದ್ಯಾರ್ಥಿ ಗಳಾಗಿದ್ದರು. ಕೃಷ್ಣರಾಯರು ಮರಾಠಿ ವಕ್ತೃತ್ವ ಸ್ಪರ್ಧೆಯಲ್ಲಿಯೇ ಭಾಗವಹಿಸಿ, ಪ್ರಥಮ ಸ್ಥಾನ ವನ್ನು ಗಿಟ್ಟಿಸುತ್ತಿದ್ದರು. ಕೃಷ್ಣರಾಯರ ವಕ್ತೃತ್ವ ಶಕ್ತಿಯ ಬಗ್ಗೆ ದೇಶಪಾಂಡೆಯವರಿಗೆ ಅಭಿಮಾನ ವೆನ್ನಿಸಿದರೂ, ಹುಟ್ಟುಕನ್ನಡಿಗರಾದ ಕೃಷ್ಣರಾಯರು ಮರಾಠಿ ವಕ್ತೃತ್ವ ಸ್ಪರ್ಧೆಯಲ್ಲಿ ಭಾಗವಹಿಸು ವುದು ಅವರ ಮನಸ್ಸಿಗೆ ಬರಲಿಲ್ಲ. ಆದ್ದರಿಂದ ಅವರು ಕೃಷ್ಣರಾಯರನ್ನು ತಮ್ಮಲ್ಲಿ ಕರೆಸಿ, ತಾವು ಕನ್ನಡದ ವಕ್ತೃತ್ವ ಸ್ಪರ್ಧೆಯ ಏರ್ಪಾಡನ್ನು ಮಾಡುವುದಾಗಿಯೂ ಅದರಲ್ಲಿ ಕೃಷ್ಣರಾಯರು ಭಾಗ ವಹಿಸಬೇಕಾಗಿಯೂ, ಪ್ರಥಮ ಸ್ಥಾನ ಪಡೆದವರಿಗೆ ತಾವು ಇಪ್ಪತ್ತೈದು ರೂಪಾಯಿಗಳ ಬಹುಮಾನ ಕೊಡುವುದಾಗಿಯೂ ಹೇಳಿದರು. ಆ ರೀತಿ ಏರ್ಪಟ್ಟ ಕನ್ನಡ ಸ್ಪರ್ಧೆಯಲ್ಲಿ ಕೃಷ್ಣರಾಯರು ಪ್ರಥಮ ಸ್ಥಾನವನ್ನು ಪಡೆದು ಇಪ್ಪತ್ತೈದು ರೂಪಾಯಿ ಬಹುಮಾನವನ್ನು ಪಡೆದರು. ಅಂದು ರಾಮಚಂದ್ರ ರಾಯರು ಬಿತ್ತಿದ ಮೊಳಕೆ, ಕನ್ನಡ ವಕ್ತೃತ್ವದ ಹೆಮ್ಮರವಾಗಿ ಬೆಳೆದು ಎಲ್ಲರಿಗೂ ತಂಪನ್ನೂ, ಸುಖ ವನ್ನೂ ಕೊಟ್ಟಿತೆಂಬುದನ್ನು ಕೃಷ್ಣರಾಯರ ಭಾಷಣವನ್ನು ಕೇಳಿದವರಿಗೆ ಬೇರೆ ಹೇಳಬೇಕಾಗಿಲ್ಲ. ಅವರು ಕನ್ನಡದ ಶರಾವತಿಯಾಗಿ, ನಾಡಿನ ತುಂಬೆಲ್ಲ ಭೋರ್ಗರೆದರು.

ಹೀಗೆ, ಕನ್ನಡದ ಬೆಳವಣಿಗೆಗೆ ಅಪರೋಕ್ಷವಾಗಿ ರಾಯರು ಮಾಡಿದ ಸೇವೆಯನ್ನು ಇನ್ನೊಂದು ಸಂದರ್ಭದಲ್ಲಿಯೂ ಕಾಣಬಹುದು. ರಾಯರ ಮನೆಯಲ್ಲಿ ದಿನನಿತ್ಯದ ಸಂಭಾಷಣೆಯಲ್ಲಿ ತಪ್ಪದೆ ಕನ್ನಡವನ್ನೇ ಉಪಯೋಗಿಸಬೇಕಾಗಿತ್ತು. ಯಾರಾದರೂ ಅಪ್ಪಿ ತಪ್ಪಿ ಬೇರೆ ಭಾಷೆಯ ಶಬ್ದಗಳನ್ನುಪಯೋಗಿಸಿದರೆ, ಅವರು ದಂಡ ತೆರಬೇಕಾಗುತ್ತಿತ್ತು. ಹೀಗಿದ್ದಾಗ, ಒಂದು ಸಲ, ರಾಯರು ಮನೆಗೆ ಬಂದಾಗ ಅವರ ಮನೆಯ ಹೆಣ್ಣುಮಕ್ಕಳೆಲ್ಲ ಗುಂಪಾಗಿ ಕುಳಿತುಕೊಂಡು ಯಾವುದೋ ಒಂದು ಮರಾಠಿ ಕಾದಂಬರಿಯನ್ನು ಓದುತ್ತಿದ್ದರು. ಇದನ್ನು ನೋಡಿದ ರಾಯರಿಗೆ ಸಿಟ್ಟು ತಡೆಯಲಾರದಾಯಿತು. ಹೆಣ್ಣುಮಕ್ಕಳನ್ನೆಲ್ಲ ತರಾಟೆಗೆ ತೆಗೆದುಕೊಂಡರು. ಕೊನೆಗೆ, ಅವರೂ ಧೈರ್ಯ ಮಾಡಿ, ತಾವು ಕನ್ನಡದಲ್ಲಿದ್ದ ಕಾದಂಬರಿಗಳನ್ನೆಲ್ಲ ಈಗಾಗಲೇ ಓದಿಬಿಟ್ಟಿರುವುದಾಗಿಯೂ, ಈಗ ಓದಲು ಕನ್ನಡ ಕಾದಂಬರಿಗಳಿಲ್ಲದ ಮೂಲಕ ಮರಾಠಿ ಕಾದಂಬರಿ ಓದುತ್ತಿರುವುದಾಗಿಯೂ ಹೇಳಿದರು. ಆಗ ತಕ್ಷಣವೇ, ರಾಯರು "ಹಾಗಾದರೆ, ನೀವೇನೂ ವಿಚಾರ ಮಾಡುವ ಕಾರಣವಿಲ್ಲ; ನಾನು ಇಂದೇ ನೀವು ಈಗ ಓದುತ್ತಿರುವ ಕಾದಂಬರಿಯನ್ನು ಕನ್ನಡದಲ್ಲಿ ಅನುವಾದ ಮಾಡಿಸುತ್ತೇನೆ" ಎಂದು ಹೇಳಿದರು. ಅದರ ಪರಿಣಾಮವೇ, ಶ್ರೀಗಳಗನಾಥರು ಬರೆದ "ಪ್ರಬುದ್ಧ ಪದ್ಮನಯನೆ" ಎಂಬ ಕಾದಂಬರಿ.[೧]

ಅನಂತರ, ಎಷ್ಟೋ ದಿವಸ ಗಳಗನಾಥರು ರಾಯರ ಮನೆಯಲ್ಲಿಯೇ ಇದ್ದುಕೊಂಡು, ತಮ್ಮ ಲೇಖನ ವ್ಯವಸಾಯವನ್ನು ಸಾಗಿಸುತ್ತಿದ್ದರು. ರಾಯರು ಅವರಿಗೆ ಒಂದು ಪ್ರತ್ಯೇಕವಾದ ಕೋಣೆಯನ್ನೇ ಕೊಟ್ಟಿದ್ದರು.

ಇದೆಲ್ಲಕ್ಕೂ ಹೆಚ್ಚು ಶ್ರೀ ದೇಶಪಾಂಡೆಯವರು ಮಾಡಿದ ಮಹತ್ವದ ಕೆಲಸವೆಂದರೆ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಗೆ ಕಾರಣರಾದುದು. ಈ ವಿವರಗಳನ್ನು ಈ ಹಿಂದೆಯೇ ವಿವರಿಸಲಾಗಿದೆ (ಪು. ೨೦-೨೧). ಶ್ರೀಯುತರು ಸನ್ ೧೮೯೦ ರಿಂದ ೧೮೯೫ರ ವರೆಗೆ ಐದು ವರ್ಷಗಳ ಕಾಲ ಸಂಘದ ಗೌರವ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು.

ಶ್ರೀ ದೇಶಪಾಂಡೆಯವರ ದೃಷ್ಟಿಯು ವಿಶಾಲವಾದುದು. ಅವರು ಈ ಕನ್ನಡದ ಕೈಂಕರ್ಯಕ್ಕೆ ಕೇವಲ ಕನ್ನಡ ಜನರನ್ನು ಮಾತ್ರವಲ್ಲದೆ, ವಿದೇಶೀಯರನ್ನೂ ಸೇರಿಸಿಕೊಳ್ಳಬೇಕೆಂದು ಅಪೇಕ್ಷಿಸಿದರು. ಅದಕ್ಕಾಗಿ, ದಿನಾಂಕ ೧೨-೯-೧೮೯೩ರಂದು ಸೇರಿದ ಸಂಘದ ಸಭೆಯಲ್ಲಿ "ಮ. ರಾ. ದೇಶಪಾಂಡೆ ಇವರು ಮೆ. ಜಿಗ್ಲರ್ ಸಾಹೇಬರನ್ನು ಅಧ್ಯಕ್ಷರಾಗಿ ನೇಮಿಸಲಿಕ್ಕೆ ಸೂಚಿಸಿದ್ದಕ್ಕೆ ಮ. ರಾ. ರಾ ಹಣಮಂತರಾವ ಶಿರಹಟ್ಟಿ ಇವರು ಅನುಮೋದನ ಕೊಟ್ಟದ್ದಕ್ಕೆ ಡಾಕ್ಟರ ಜಿಗ್ಲರ್ ಧೊರೆಗಳನ್ನು ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷರನ್ನಾಗಿ ನಿಯಮಿಸಿತು." ಅದೂ ಅಲ್ಲದೆ, ದಿನಾಂಕ ೧-೧೧-೧೮೯೪ರಂದು ಅಪರಾಹ್ನ ನಾಲ್ಕುವರೆ ಗಂಟೆಗೆ ಸೇರಿದ ಸಂಘದ ವಾರ್ಷಿಕ ಸಭೆಯಲ್ಲಿ "ಮ. ರಾ. ರಾ. ದೇಶಪಾಂಡೆಯವರು ಮೆ. ಜಿಗ್ಲರ್ ಸಾಹೇಬರನ್ನೇ ಮುಂದಿನ ವರುಷಕ್ಕೆ ಅಧ್ಯಕ್ಷರಾಗಿ ಮಾಡಬೇಕೆಂದು ಸೂಚಿಸಿದರು. ಮ. ರಾ. ರಾ. ಗುರುನಾಥ ಫಾಟಕ ಇವರೊಬ್ಬರ ಹೊರತು ಉಳಿದವರೆಲ್ಲರೂ ಒಪ್ಪಿದ್ದರಿಂದ ಜಿಗ್ಲರ್ ಸಾಹೇಬರಿಗೆ ಪುನಃ ಪತ್ರ ಬರೆದುಕೊಳ್ಳಬೇಕೆಂದು ಗೊತ್ತಾಯಿತು." ದಿನಾಂಕ ೧-೩-೧೮೯೧ರ ಸಭೆಯಲ್ಲಿ ಕಿಟೆಲ್, ಬಿ. ಎಲ್. ರೈಸ್, ಜಿಗ್ಲರ್, ಜಾರ್ಡಿನ್, ಮ್ಯೂರ್, ಫ್ಲೀಟ್ ಸಂಘದ ಬಹುಮಾನಿತ ಸದಸ್ಯರಾಗಿದ್ದರು.

---

೧ ಇದನ್ನು ತಿಳಿಸಿದವರು ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಭಾಂಡಾರಿಗರೂ, ಶ್ರೀಯುತರ ಮೊಮ್ಮಕ್ಕಳೂ ಆದ ಶ್ರೀ ಕೆ. ಎಸ್. ದೇಶಪಾಂಡೆಯವರು.

ಹೀಗಿದ್ದೂ ಸಹ, ಧಾರವಾಡವು ರಾಮಚಂದ್ರರಾಯರನ್ನೂ ಪರೀಕ್ಷೆ ಮಾಡದೆ ಬಿಡಲಿಲ್ಲ. ಈ ವಿಷಯ ಸಂಘದ ೨೧-೨-೧೯೦೨ರ ಸಭೆಯಲ್ಲಿ ವ್ಯಕ್ತವಾಗುತ್ತದೆ. ಸಂಘದವರು ತಮ್ಮ ಪ್ರಕಟನೆಗಾಗಿ ಕಾಗದವನ್ನು ಕೊಡಿದ್ದರು. ಆದರೆ, ಆ ಪ್ರಕಟನೆ ಹೊರಡಲಿಲ್ಲ. ಆದಕ್ಕಾಗಿ. ಆ ಕಾಗದಗಳು ನಾಶವಾಗಬಾರದೆಂದು ರಾ. ಹ. ದೇಶಪಾಂಡೆಯವರು ತಮ್ಮ ಸ್ವಂತದ ಪ್ರಕಟನೆಗಾಗಿ ಈ ಕಾಗದಗಳನ್ನು ಉಪಯೋಗಿಸಿ, ಅದರ ಹಣವನ್ನು ಸಂಘಕ್ಕೆ ಮುಟ್ಟಿಸಿದ್ದರು. ಆದರೆ, ಬಡ್ಡಿಯ ಗತಿ ಏನು ? ಆಗ ಕಾರ್ಯದರ್ಶಿಗಳು, "ಸಂದ ಮೂಲ ರಕಮಿನ ಮೇಲೆ ಮ. ರಾ. ದೇಶಪಾಂಡೆಯವರಿಂದ ಖರೀದೀ ತಾರೀಖಿನಿಂದ ಈವರೆಗೆ ಆಗುವ ವ್ಯಾಜ ಸಹ ವಸೂಲ ಮಾಡಬೇಕಂತ ಆಡಿಟರ........ ಇವರ ಅಭಿಪ್ರಾಯವದೆ. ಕಾರಣ ಸಂಘದ ವಿಷಯವಾಗಿ ಇಷ್ಟು ಹಗಲಿರುಳು ಪ್ರಯತ್ನ ಮಾಡಿ, ಈ ಸ್ಥಿತಿಗೆ ತಂದಂಥ ದೇಶಪಾಂಡೆಯವರಂತಹರೂ ಅಹಿತ ಬಗೆಯಲಿಕ್ಕಿಲ್ಲ. ನಮ್ಮ ಇಡಿ ಈ ಕರ್ನಾಟಕದ ಮೇಲೆ ಮಹದುಪಕಾರ ಮಾಡಿದವರ ಕಡಿಂದ ಈ ಕ್ಷುಲ್ಲಕ ರಕಮಿನ ವ್ಯಾಜ ಬೇಡುವುದು ಯೋಗ್ಯವಾಗಲಿಕ್ಕಿಲ್ಲ" ಎಂದು ಸೂಚನೆ ಮಾಡಿದರು. ಆದರೆ, "ದೇಶಪಾಂಡೆ ಇವರು ಬಡ್ಡಿ ಕೊಟ್ಟರೆ ಅಥವಾ ಕೊಡೋದಕ್ಕೆ ಕಬೂಲ ಇದ್ದರೆ ಬಡ್ಡಿ ತಗೊಬೇಕು. ಇಲ್ಲದಿದ್ದರೆ ಬಡ್ಡಿ ವಸೂಲ ಮಾಡಬಾರದು" ಎಂದೂ ವ್ಯವಸ್ಥಾಪಕರಲ್ಲೊಬ್ಬರು ಅಭಿಪ್ರಾಯಪಟ್ಟರು.

ಇದು ದೇಶಪಾಂಡೆಯವರ ಕನ್ನಡಕಥೆ. ರಾಮಚಂದ್ರರಾಯರು ದೇಶಾಭಿಮಾನಿಗಳೂ ಆಗಿದ್ದರು. ಅವರ ಮನೆಯಲ್ಲಿರುವವರೆಲ್ಲರೂ ಖಾದಿಯನ್ನೇ ಧರಿಸುತ್ತಿದ್ದರು. ಅದೂ ಅಲ್ಲದೆ, ೧೯೦೧ರ ಸುಮಾರಿಗೆ ಲೋಕಮಾನ್ಯ ಟಿಳಕರು ಬೆಳಗಾವಿಗೆ ಬಂದಾಗ, ಟಿಳಕರ ಭಾಷಣವನ್ನು ಕೇಳುವ ಅನುಕೂಲತೆಗಾಗಿ ತಮ್ಮ ಶಾಲೆಯ ವಿದ್ಯಾರ್ಥಿಗಳನ್ನು ಶ್ರೀ ದೇಶಪಾಂಡೆಯವರು ಬಿಟ್ಟುಬಿಟ್ಟರೆಂದೂ ಮತ್ತು ಅವರು ಶಾಲೆಯ ಪಟಾಂಗಣದಲ್ಲಿ 'ವಂದೇ ಮಾತರಮ್' ಗೀತೆಯನ್ನು ಹಾಡಲು ಪರವಾನಿಗೆ ಕೊಟ್ಟರೆಂತಲೂ ಬೆಳಗಾವಿಯ ಅಂದಿನ ಕಲೆಕ್ಟರರು ಶ್ರೀ ದೇಶಪಾಂಡೆಯವರ ವಿರುದ್ಧ ಗುಪ್ತ ವರದಿಯನ್ನು ಮಾಡಿದರೆಂದು ಹೇಳಲಾಗುತ್ತದೆ. ದೇಶಪಾಂಡೆಯವರ ಕನ್ನಡದ ಅಭಿಮಾನ ಮತ್ತು ಈ ದೇಶಪ್ರೇಮ ಅವರ ನೌಕರಿ ಜೀವನದಲ್ಲಿ ಅವರಿಗೆ ಪ್ರತಿಕೂಲವುಂಟುಮಾಡಿದ್ದರೆ ಆಶ್ಚರ್ಯವೇನೂ ಅಲ್ಲ.

ಕೃತಿಗಳು :

ರಾ. ಹ. ದೇಶಪಾಂಡೆಯವರು ಸುಮಾರು ೩೦ ಪುಸ್ತಕಗಳನ್ನು ಬರೆದಿದ್ದಾರೆ. ಅವೆಲ್ಲ ಹೆಚ್ಚಾಗಿ ಭಾರತ ಮತ್ತು ಕರ್ನಾಟಕದ ಇತಿಹಾಸಕ್ಕೆ ಸಂಬಂಧಪಟ್ಟವುಗಳಾಗಿವೆ. 'ಚೈತನ್ಯ ಚರಿತ್ರ', 'ಚರಿತ್ರ ಸಂಗ್ರಹ' (೧ನೆಯ ಭಾಗ), 'ಚರಿತ್ರ ಸಂಗ್ರಹ' (೨ನೆಯ ಭಾಗ), 'ಗ್ರೇಟ್‌ಬ್ರಿಟನ್ ಆಯರ್ಲಂಡ ದೇಶಗಳ ಸಂಕ್ಷಿಪ್ತ ವರ್ಣನೆಯು', 'ಅಕಬರ ಚರಿತ್ರ'- ಮೊದಲಾದ ಪುಸ್ತಕಗಳು ಸನ್ ೧೮೯೫ರ ಮೊದಲೇ ಪ್ರಕಟವಾದಂತೆ 'ಮೊಗಲ್ ಬಾದಶಾಹಿ ಪೂರ್ವಾರ್ಧ' ಎಂಬ ಪುಸ್ತಕದಿಂದ ಕಂಡು ಬರುತ್ತದೆ. ಅದೂ ಅಲ್ಲದೆ, ಈ ಕಾಲಕ್ಕೇ, 'ಕನ್ನಡ ನುಡಿಯ ಸಂಕ್ಷಿಪ್ತವಾದ ಇತಿಹಾಸವು', 'ಸಂಸಾರ ಕ್ರಮ', 'ಅಮೇರಿಕ ಖಂಡವನ್ನು ಗೊತ್ತು ಹಚ್ಚಿದ ಕ್ರಿಸ್ಟೋಫರ ಕೊಲಂಬಸನ ಚರಿತ್ರವು'- ಎಂಬ ಪುಸ್ತಕಗಳು ಸಿದ್ಧವಾಗುತ್ತಿದ್ದವೆಂದೂ 'ಅರಿಕೆ'ಯಿಂದ ಕಂಡುಬರುತ್ತದೆ.

ಮೊಗಲ್ ಬಾದಶಾಹಿ, ಪೂರ್ವಾರ್ಧ (೧೮೯೫) :

ಇದು ಮಂಗಳೂರ ಬಾಸೆಲ್ ಮಿಶನ್ ಛಾಪಖಾನೆಯಲ್ಲಿ ಮುದ್ರಿತವಾಯಿತು. ಲೇಖಕರು ಈ

ಗ್ರಂಥವನ್ನು "ಕರ್ನಾಟಕ ವಿದ್ಯಾವರ್ಧಕ ಸಂಘದ ಬಹುಮಾನಿತ ಸಭಾಸದರೂ ದಕ್ಷಿಣ ಭಾಗದ ಕಮಿಶನರರೂ 'ಕರ್ನಾಟಕ ರಾಜವಂಶಗಳ ಇತಿಹಾಸ' ಎಂಬ ಇಂಗ್ಲಿಷ ಗ್ರಂಥದ ಕರ್ತರೂ ಆದ ಮೆಹರ್ಬಾನ್ ಜೆ. ಎಫ್. ಫ್ಲೀಟಸಾಹೇಬ ಬಹದ್ದೂರ, ಐ. ಸಿ. ಎಸ್., ಪಿ. ಯೆಚ್.ಡಿ., ಸಿ. ಆಯ್. ಈ. ಇವರಿಗೆ– ಇವರು ಕೇವಲ ಪರಾರ್ಥಬುದ್ಧಿಯಿಂದ ಕನ್ನಡಿಗರಿಗೂ ಕನ್ನಡ ನುಡಿಗೂ ಮಾಡಿದ ಉಪಕಾರವನ್ನು ನೆನೆದು, ಇವರ ಕನ್ನಡ ನುಡಿಯನ್ನು ಬೆಳಿಸುವ ಇಚ್ಛೆಯನ್ನು ನೋಡಿ" ಕಾಣಿಕೆಯಾಗಿ ಸಮರ್ಪಿಸಿದ್ದಾರೆ. ತಾವು ಕೈಕೊಂಡ ಕಾರ್ಯಗಲ್ಲಿಯ ತೊಂದರೆಗಳ ಬಗೆಗೆ ಲೇಖಕರು ಹೀಗೆ ಹೇಳಿದ್ದಾರೆ :

"The extensive nature of such a work, the difficulty of reconciling conflicting statements of different historians, the inadequacy of materials at my disposal, and above all, the little time that I could spare amidst official duties, made me hesitate." ೧

ಬಾಯ ಲೆಕ್ಕದ ಮೊದಲನೆಯ ಪುಸ್ತಕ (೧೮೯೬) :

ಇದನ್ನು ಬರೆದಾಗ ದೇಶಪಾಂಡೆಯವರು ಧಾರವಾಡದ ಟ್ರೇನಿಂಗ್ ಕಾಲೇಜದ ವಾಯಿಸ್ ಪ್ರಿನ್ಸಿಪಾಲರಾಗಿದ್ದರು. ಇದರಲ್ಲಿ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಬಾಯ ಲೆಕ್ಕದ ಪದ್ಧತಿಯನ್ನು ಹೇಳಲಾಗಿದೆ. ಇದು ಮರಾಠಿಯಲ್ಲಿ ರಾವಜಿ ಮೋರೇಶ್ವರ ದೇವಕುಳೆ ಎಂಬವರು ಬರೆದ ಪುಸ್ತಕದ ಆಧಾರದಿಂದ ಬರೆಯಲ್ಪಟ್ಟಿದೆ.

ಛತ್ರಪತಿ ಶಿವಾಜಿ ಮಹಾರಾಜ (೧೯೨೩) :

ಕನ್ನಡದ ಕಟ್ಟಾಭಿಮಾನಿಗಳಾಗಿದ್ದ ದೇಶಪಾಂಡೆಯವರು ಮಹಾರಾಷ್ಟ್ರ ಛತ್ರಪತಿ ಶಿವಾಜಿಯ ಬಗೆಗೆ ೪೩೨ ಪುಟದ ಈ ಪುಸ್ತಕವನ್ನು ಬರೆಯಬಹುದೇ ಎಂದು ಅನೇಕರಿಗೆ ಸಂದೇಹ ಉಂಟಾಗುತ್ತದೆ. ಕನ್ನಡದ ವೀರಾಗ್ರಣಿ ಮಹಾರಾಷ್ಟ್ರದ ಚರಿತ್ರೆಯನ್ನು ಬರೆಯುವದೆಂದರೆ ?– ಇದನ್ನು ಊಹಿಸಿಯೇ ಲೇಖಕರೂ ಕೂಡ ತಮ್ಮ ಪ್ರಸ್ತಾವನೆಯಲ್ಲಿ ಹೀಗೆ ಬರೆದಿದ್ದಾರೆ :

" ಶಿವಾಜಿಯು ಮರಾಠಿಗನಾದ್ದರಿಂದ ಅವನ ಚರಿತ್ರೆಯಿಂದ ಕನ್ನಡಿಗರಿಗೆ ಹೆಚ್ಚು ಪ್ರಯೋಜನವಿಲ್ಲೆಂದು ಕೆಲವರು ಆಕ್ಷೇಪಿಸಬಹುದು. ಈ ಆಕ್ಷೇಪಣೆಯಲ್ಲಿ ತಥ್ಯಾಂಶವು ಅತ್ಯಲ್ಪ ಪ್ರಮಾಣದಲ್ಲಿರುತ್ತದೆಂದು ಎಲ್ಲರೂ ಒಡಂಬಡುವರು. ಮರಾಠಿ ಮಹನೀಯರು, ಕನ್ನಡ ಮಹಾಪುರುಷರಷ್ಟು ಪೂಜ್ಯರೂ ಪ್ರೀತ್ಯಾಸ್ಪದರೂ ಆಗದಿದ್ದರೂ, ಕನ್ನಡಿಗರ ತರುವಾಯ ಅವರು ನಮಗೆ ಬೇಕಾದವರೇ ಸರಿ. ತಾಯಿಯ ತರುವಾಯ ಸೋದರಮಾವನೇ ಕಕ್ಕುಲತೆಯುಳ್ಳವನಲ್ಲವೇ ? "

ಇದೇನೋ ಸಾಮಾನ್ಯವಾದ ಮಾತಾಯಿತು. ಇದಕ್ಕೂ ಹೆಚ್ಚು, ಶ್ರೀ ದೇಶಪಾಂಡೆಯವರು ತಮ್ಮ ಆಳವಾದ ಅಭ್ಯಾಸದಿಂದ ಯಾವ ಯಾವ ಕನ್ನಡಿಗರು ಮಹಾರಾಷ್ಟ್ರೀಯರ ಅರಸೊತ್ತಿಗೆಯ ಕಾಲದಲ್ಲಿ ಪ್ರಭಾವಶಾಲಿ ಹುದ್ದೆಗಳಲ್ಲಿದ್ದರೆಂಬುದನ್ನೂ ವಿವರಿಸಿ, ಮರಾಠಿ ಸಾಮ್ರಾಜ್ಯಕ್ಕೆ ಕನ್ನಡಿಗರು ಕೊಟ್ಟ ಕಾಣಿಕೆಯನ್ನು ಈ ಗ್ರಂಥದಲ್ಲಿ ವಿವರಿಸುತ್ತಾರೆ :

---

೧ ಮೋಗಲ್ ಬಾದಶಾಹಿ : ೧೮೯೫ : ಪು. ೧.

“ ಹದಿನೇಳನೆಯ ಶತಮಾನದ ಹಿಂದಿನ ಶತಮಾನಗಳಲ್ಲಿ ಎಷ್ಟೋ ಮಂದಿ ಕನ್ನಡಿಗರು ಮರಾಠಿ ಪ್ರಾಂತದೊಳಗೆ ಅರಸರೂ ಇನಾಮದಾರರೂ ವತನದಾರರೂ ಆಗಿದ್ದರೆಂದು ಈ ಚರಿತ್ರೆಯಿಂದ ಕಂಡುಬರುತ್ತದೆ. ಕರ್ನಾಟಕ (ವಿಜಯನಗರ) ಸಾಮ್ರಾಜ್ಯಕ್ಕೆ ಸೇರಿದ ಒಬ್ಬ ಕುಲಗೆಟ್ಟ ಕನ್ನಡ ಬ್ರಾಹ್ಮಣನು ಅಹಮ್ಮದನಗರದಲ್ಲಿ ನಿಜಾಮಶಾಹಿಯನ್ನು ಸ್ಥಾಪಿಸಿದನು. (೧೪೯೦– ಹಂಟರ್ ಇತಿಹಾಸ ಪು. ೨೩೨). ಹೊನ್ನಪ್ಪನೆಂಬವನು ಪುಣೆಯ ದೇಶಪಾಂಡೆಯಾಗಿದ್ದನು. ಚಾಕಣದ ಕೋಟೆಯು ಅವನ ವಶದಲ್ಲೇ ಇತ್ತು. ಅವನ ಹೆಸರೇ ಅವನು ಕನ್ನಡಿಗನಾಗಿದ್ದನೆಂದು ಒತ್ತಿ ಹೇಳುತ್ತದೆ. ಚಾಕಣದ ಕಿಲ್ಲೇದಾರನಾದ ನರಪಾಲನಾದರೂ ಕನ್ನಡಿಗನೇ ಆಗಿರಲಿಕ್ಕೆಬೇಕು. ಸುಪೆ ಪರಗಣೆಯ ಜಹಗೀರದಾರರಾದ ರಾಮು, ಹನುಮಂತ ಎಂಬವರಾದರೂ ಕನ್ನಡಿಗರಾಗಿದ್ದರೆಂದು ತೋರುತ್ತದೆ. ಜುನ್ನರದ ಇನಾಮದಾರನಾದ ಶ್ರೀನಿವಾಸರಾಯ ಕನ್ನಡಿಗನಾಗಿರಬಹುದೆಂದು ಅನುಮಾನ ಮಾಡಲಿಕ್ಕೆ ಅನುವು ದೊರೆಯುತ್ತದೆ.

೨. ಶಿವಾಜಿಗೆ ನೆರವಾದವರೊಳಗೆ ಎಷ್ಟೋ ಮಂದಿ ಕನ್ನಡಿಗರಾಗಿದ್ದರೆಂದು ಕಂಡುಬರುತ್ತದೆ. ಮಾದಣ್ಣ ಮಂತ್ರಿ, ಮುರಾರಿರಾಯ, ಹನಮಂತೆ ಬಾಳಕೃಷ್ಣರಾಯ, ಹನಮಂತೆ ರಘುನಾಥರಾಯ, ನೆಲ್ಲೂರ ರಾಮಣ್ಣ, ಜನಾರ್ದನ ನಾರಾಯಣ ಹನಮಂತೆ, ಅಣ್ಣಾಜಿ ದತ್ತು– ಇವರು ಕನ್ನಡಿಗರಾಗಿದ್ದ ರೆಂಬ ಬಗ್ಗೆ ಸಂಶಯವಿಲ್ಲ.” ೧

ಕರ್ನಾಟಕ ಸಾಮ್ರಾಜ್ಯ (ಭಾಗ ೧–೨) (೧೯೨೬) :

ಈ ಹೊತ್ತಗೆಗಳ ರಚನೆಗಾಗಿ ಲೇಖಕರು ತುಂಬಾ ಪರಿಶ್ರಮಿಸಿದರು. ಮೊದಲನೆಯ ಸಂಪುಟ ದಲ್ಲಿ ಆಳುಪ– ಕದಂಬರ ವರೆಗೂ, ಎರಡನೆಯ ಸಂಪುಟದಲ್ಲಿ ಬಾದಾಮಿಯ ಚಾಳುಕ್ಯರ ವರೆಗೂ ಕರ್ನಾಟಕದ ಇತಿಹಾಸವನ್ನು ರೂಪಿಸಲಾಗಿದೆ. ಮೂರನೆಯ ಸಂಪುಟದಲ್ಲಿ ವಿಜಯನಗರದ ಕಾಲದ ವರೆಗೆ ಈ ಇತಿಹಾಸವನ್ನು ಮುಂದುವರಿಸಿಕೊಂಡು ಹೋಗಿದ್ದು, ಅದು ಪ್ರಕಟವಾಗಿರದೆ ಹಸ್ತ ಪ್ರತಿಯ ರೂಪದಲ್ಲಿಯೆ ಇದೆ. ಈ ಸಂಪುಟಗಳನ್ನು ರಚಿಸುವಲ್ಲಿ ತಾವು ಪಟ್ಟ ಪರಿಶ್ರಮದ ಬಗೆಗೆ ಲೇಖಕರು ಹೀಗೆ ಹೇಳಿದ್ದಾರೆ :

“ ಈ ಇತಿಹಾಸವನ್ನು ಬರೆಯಲಿಕ್ಕೆ ನಾನು ಪಟ್ಟಷ್ಟು ಶ್ರಮವನ್ನು ಬೇರೆ ಯಾವ ಪುಸ್ತಕವನ್ನು ಬರೆಯುವಾಗ ಪಡಲಿಲ್ಲೆಂದು ನಿಸ್ಸಂದೇಹವಾಗಿ ಹೇಳುತ್ತೇನೆ. ಇತಿಹಾಸ ಬರೆಯುವುದೇ ಕಷ್ಟದ ಕೆಲ ಸವು. ಏಕೆಂದರೆ ನಡೆದ ಸಂಗತಿಯು ಒಂದೇ ಆದರೂ ಅದನ್ನು ನೋಡುವವರು ತಂತಮ್ಮ ಮನಸ್ಸಿನ ಒಲವಿನಂತೆ ಆ ಸಂಗತಿಗೆ ಬೇರೆ ಬೇರೆ ರೂಪ ಕೊಡುವುದರಿಂದ ಒಬ್ಬನ ವರ್ಣನೆಯು ಮತ್ತೊಬ್ಬನ ವರ್ಣನೆಯಿಂದ ತೀರ ಭಿನ್ನವಾಗಬಹುದು.” (ಪು. ೧) ದೇಶಪಾಂಡೆಯವರಂಥವರಿಗೆ ಕನ್ನಡ ಬರಿಯ ಒಂದು ಅಮೂರ್ತ ಶಕ್ತಿಯಾಗಿರಲಿಲ್ಲ; ಕನ್ನಡ ದೇವಿ ಪ್ರತ್ಯಕ್ಷಮೂರ್ತಸ್ವರೂಪಳಾಗಿದ್ದಳು. ಅವರ ಜಾಗೃತ–ಸ್ವಪ್ನ–ಸುಷುಪ್ತಾವಸ್ಥೆಗಳಲ್ಲೆಲ್ಲ ಕನ್ನಡವೇ ಅವರ ಕಣ್ಣೆದುರು ನೆಲಸಿರುತ್ತಿತ್ತು. ಕನ್ನಡ ತಾಯಿ ಅವರ ಕೂಡ ಪ್ರತ್ಯಕ್ಷವಾಗಿ ಮಾತನಾಡುತ್ತಿದ್ದಳು. ಒಂದು ವಿಧದಲ್ಲಿ ಈ ಕಾಲದಲ್ಲಿ ಕನ್ನಡ ಕ್ಕಾಗಿ ದುಡಿದವರೆಲ್ಲ ಕನ್ನಡದ ಕೋಲಂಬಸರು; ಅನಂತರ ಬಂದವರು ಹೆಚ್ಚಾಗಿ ಈ ಶೋಧದೀಪ ವ್ಯಾಪಾರ ಮಾಡಿಕೊಂಡವರು ಎಂದು ಹೇಳುವ ಮಾತು ಅರ್ಥಪೂರ್ಣವಾಗಿದೆ. ಅಂತಲೇ, ಈ ಇತಿಹಾಸ ಸಂಪುಟಗಳನ್ನು ಬರೆಯಲಿಚ್ಛಿಸಿದ ಕಾರಣವನ್ನು ಹೇಳುವಾಗ ಲೇಖಕರು ಹೀಗೆ ವಿವರಿಸು ತ್ತಾರೆ :

---

೧ ಛತ್ರಪತಿ ಶಿವಾಜಿ ಮಹಾರಾಜ : ೧೯೨೩ : ಪು. ii.

"ನನ್ನ ತಾಯ್ನುಡಿಯ ಅಭಿವೃದ್ಧಿಯು ಹೇಗಾಗುವದೆಂಬ ವಿಚಾರವು ೪೦ ವರುಷ ನನ್ನ ಮೈಯ್ಯಲ್ಲಿ ನೆತ್ತರೊಡನೆ ಸಂಚರಿಸುತ್ತಿರುವದಷ್ಟೇ. ರೌದ್ರಿ ಸಂವತ್ಸರ ಫಾಲ್ಗುಣ ಶುದ್ಧ ೧ (೧೦, ಮಾರ್ಚ ೧೯೨೧) ಗುರುವಾರ ದಿವಸ ರಾತ್ರಿ ನಾನೊಂದು ಕನಸು ಕಂಡೆನು. ಉತ್ತರ ಕರ್ನಾಟಕದ ಮಹಾದೇವಿಯಾದ ಶ್ರೀ ಶಾಕಂಭರಿಯು ನನ್ನ ಕನಸಿನಲ್ಲಿ ಬಂದು, 'ಮಗನೇ, ನೀನೇಕೆ ಚಿಂತಿಸುವೆ? ಕರ್ನಾಟಕದ ಇತಿಹಾಸ ಬರೆ, ಅದನ್ನು ಓದುವದರಿಂದ ಕನ್ನಡಿಗರ ಅಭಿಮಾನವು ಮಿತಿಮೀರಿ ಬೆಳೆಯು ವದು'– ಎಂದು ಹೇಳಿ ಅದೃಶ್ಯಳಾದಳು. ನನಗೆ ಸಾಮಾನ್ಯವಾದ ಸ್ವಪ್ನಗಳಲ್ಲಿ ವಿಶ್ವಾಸವಿಲ್ಲದಿದ್ದರೂ, ಶುದ್ಧ ಮನಸ್ಸಿನಿಂದ ಸ್ವಜನ ಸೇವೆಯನ್ನು ಮಾಡುವವರಿಗೆ ಪರಮೇಶ್ವರನು ಸ್ವಪ್ನರೂಪದಿಂದ ಆಜ್ಞೆ ಯನ್ನು ದಯಪಾಲಿಸುತ್ತಾನೆಂದು ದೃಢವಾಗಿ ನಂಬುತ್ತೇನೆ." ಆದರೂ ಅಂದಿನ ಪೊಲಬಿನಲ್ಲಿ (ಪರಿಸ್ಥಿತಿಯಲ್ಲಿ) ಲೇಖಕರಿಗೆ ಈ ಕೆಲಸವನ್ನು ಪ್ರಾರಂಭಿಸಲಾಗಲಿಲ್ಲ. "ಇಷ್ಟು ದಿವಸಗಳಾದರೂ, ಶ್ರೀ ಜಗದಂಬೆಯ ಆಜ್ಞೆಯನ್ನು ಪಾಲಿಸಲಿಲ್ಲೆಂದು ಹಳಹಳಿಸಿದೆನು; ಆಯುಷ್ಯ ಮರ್ಯಾದೆಯು ಕಡಿಮೆಯಾಗುತ್ತ ನಡೆಯಿತೆಂದು ಚಡಪಡಿಸಿದೆನು; ಈ ಪ್ರಕಾರವಾಗಿ ಚಿಂತಿಸಿ, ಚಿಂತಿಸಿ, ನೊಂದು, ಬೆಂದು, ಕೊರಗಿ, ಮಿಡಿಕಿ, ತಲ್ಲಣಿಸಿ ಶ್ರೀ ಬನಶಂಕರಿಯು ಮಾಡಿಸಿದ್ದಾಗಲಿ, ಇದ್ದ ಸಾಮಗ್ರಿಯಿಂದ ಬರೆಯಲಿಕ್ಕೆ ಆರಂಭಿಸಬೇಕೆಂದು ನಿಶ್ಚಯಿಸಿ, ದುಂದುಭಿ ಸಂವತ್ಸರ ಶ್ರಾವಣ ಕೃಷ್ಣ ೮ ಮಂಗಳವಾರ (೧೫, ಅಗಷ್ಟ ೧೯೨೨) ದಿವಸ ಕರ್ನಾಟಕ ಸಾಮ್ರಾಜ್ಯ ಎಂಬ ಈ ಇತಿಹಾಸವನ್ನು ಬರೆಯ ಲಾರಂಭಿಸಿದೆನು."

ಇವೂ ಅಲ್ಲದೆ, ಶ್ರೀಯುತರು 'ಧರ್ಮ ಸ್ಥಾಪಕರೂ, ಧರ್ಮ ಸುಧಾರಕರೂ', 'ಕಥೆಗಳ ನ್ನೊಳಗೊಂಡ ಬೀರಬಲ್ಲನ ಚರಿತ್ರೆ', 'ಹೈದರಲ್ಲಿ ಟೀಪುಸುಲ್ತಾನ', 'ನಾನಾ ಫಡನವೀಸ', 'ನೂರಜಹಾನ ಮಹಾರಾಣಿ'– ಮೊದಲಾದ ಪುಸ್ತಕಗಳನ್ನೂ ಬರೆದಿದ್ದಾರೆ. ಇದು ಅವರ ಸುದೀರ್ಘವಾದ ಅಭ್ಯಾಸ, ಅವಿರತ ಪ್ರಯತ್ನ ಮತ್ತು ಸಂಶೋಧಕ ಶಕ್ತಿಗಳ ನಿದರ್ಶನವಾಗಿದೆ.

—

ತಮ್ಮಣ್ಣಪ್ಪ ಸತ್ಯಪ್ಪ ಚಿಕ್ಕೋಡಿ

(೧೮೭೨-೧೯೩೩)

ಕನ್ನಡದ ಗಡಿನಾಡಿನಲ್ಲಿ ಕನ್ನಡ ಧ್ವಜವನ್ನು ಎತ್ತಿ ಹಿಡಿದ ತಮ್ಮಣ್ಣಪ್ಪನವರದು ವೈಶಿಷ್ಟ್ಯಪೂರ್ಣ ಜೀವನ. ನಡುನಾಡಿನ ಕನ್ನಡವೀರರು ಗತಪ್ರಾಣವಾಗುತ್ತಿದ್ದ ಕನ್ನಡ ಭಾಷೆಗೆ ಸಂಜೀವಿನಿಯನ್ನು ಇತ್ತಿದ್ದರೆ, ತಮ್ಮಣ್ಣಪ್ಪನವರು ಕನ್ನಡ ನಶಿಸಿಯೇಹೋದ ಕನ್ನಡ ಭಾಗದಲ್ಲಿ ಅದಕ್ಕೆ ಪ್ರಾಣಪ್ರತಿಷ್ಠಾಪನೆ ಮಾಡಿದರು.

ಗಡಿ ಬಿದ್ದಲ್ಲಿ ನೆಲದ ಗಡಿ ನಿರ್ಮಾಣವಾಗುತ್ತವೆಂದು ಹೇಳುತ್ತಾರೆ. ಆದರೆ, ೧೯ನೆಯ ಶತಮಾನದ ಕನ್ನಡ ಭೂಮಿಯಲ್ಲಿ ಕೂಗಳತೆಯಲ್ಲಿ ಗಡಿ ನಿರ್ಮಾಣವಾದವು. ಕರ್ನಾಟಕದಲ್ಲಿ ಪೇಶವೆಯರ ಆಳಿಕೆ ಮುಗಿಯುತ್ತಿದ್ದಂತೆ, ಪಟವರ್ಧನ ಸಂಸ್ಥಾನಿಕರೂ, ಕೊಲ್ಹಾಪುರದ ಛತ್ರಪತಿ ಮನೆತನದವರೂ ಜತ್ತ, ಕುರಂದವಾಡ, ಸವಣೂರ ಅಧಿಪತಿಗಳೂ ಈ ಕನ್ನಡದ ಭೂಮಿಯ ಮೇಲೆ ಮೈಗೆಬರೆ ಕೊಟ್ಟಂತೆ ಗಡಿಯ ಗೆರೆಯನ್ನು ಎಳೆದಾಡಿದರು. ಕೈಗೆ ಸಿಕ್ಕಷ್ಟು ತಮ್ಮ ತಮ್ಮಲ್ಲಿಯೇ ಹಂಚಿಯಾಡಿದರು. ಸ್ವಾಭಾವಿಕವಾಗಿಯೆ ರಾಜಭಾಷೆ, ರಾಜ್ಯಭಾಷೆಯಾಯಿತು. ರಾಜರ ಸಂಸ್ಕೃತಿ, ಪ್ರಜೆಗಳು ಹೆಮ್ಮೆ ಪಟ್ಟುಕೊಳ್ಳಬೇಕಾದ ಸಂಸ್ಕೃತಿಯಾಯಿತು.

ಇಂಥ ಪರಿಸರದಲ್ಲಿ ಕನ್ನಡದಿಂದ ದೂರಾಗಿದ್ದ ಕೊಲ್ಹಾಪುರ ಸಂಸ್ಥಾನದ ಮಿಣಜಗಿ ಗ್ರಾಮದಲ್ಲಿ ಒಂದು ಬಡ ನೇಕಾರ ಕುಟುಂಬದಲ್ಲಿ ತಮ್ಮಣ್ಣಪ್ಪನವರು ೧೮೭೨ನೆಯ ಇಸವಿ ಸೆಪ್ಟೆಂಬರ ೨ನೆಯ ತಾರೀಖಿನಂದು ಜನಿಸಿದರು. ತಮ್ಮಣ್ಣಪ್ಪನವರ ತಂದೆಯ ಹೆಸರು ಸತ್ಯಪ್ಪ. ಬಡವರಾಗಿದ್ದರೂ ಶಿಕ್ಷಣ ಪ್ರೇಮಿಗಳು. ಮಕ್ಕಳ ಶಿಕ್ಷಣದ ಅನುಕೂಲತೆಗಾಗಿ, ಸ್ವಗ್ರಾಮವಾದ ಮಿಣಜಗಿಯನ್ನು ಬಿಟ್ಟು ಬಂದು, ಚಿಕ್ಕೋಡಿಯಲ್ಲಿ ನೆಲೆಸಿದರು. ಚಿಕ್ಕೋಡಿಯಲ್ಲಿ ಮರಾಠಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ, ತಮ್ಮಣ್ಣಪ್ಪನವರು ತಮ್ಮ ಅಣ್ಣಂದಿರಾದ ರಾಯಪ್ಪನವರನ್ನು ಕೂಡಿಕೊಂಡು ರಬಕವಿಗೆ ಬಂದರು. ಅಲ್ಲಿ ಅಭ್ಯಾಸಮಾಡಿ ವಿಜಾಪುರ ಜಿಲ್ಲೆಯ ಗಲಗಲಿ ಗ್ರಾಮದ ಪರೀಕ್ಷಾ ಕೇಂದ್ರದಿಂದ ಪಾಸಾದರು. ಬಡತನದ ಮೂಲಕ ಅಭ್ಯಾಸವನ್ನು ಮುಂದುವರಿಸಲು ಸಾಧ್ಯವಿಲ್ಲದ್ದಕ್ಕಾಗಿ ತಾವು ಸ್ವತಃ ಶಿಕ್ಷಣವನ್ನು ಮುಂದುವರಿಸದೆ, ಅಣ್ಣ ರಾಯಪ್ಪನವರು ಮಾತ್ರ ಇಂಗ್ಲಿಷ ಕಲಿಯಲು ಅನುಕೂಲತೆ ಒದಗಿಸಿಕೊಟ್ಟು, ತಾವು ಉದರನಿರ್ವಹಣೆಗಾಗಿ ಪೋಲೀಸ್ ವೃತ್ತಿಯನ್ನು ಕೈಕೊಂಡರು.

ಆದರೆ, ಈ ವೃತ್ತಿ ಸರಿಹೋಗದೆ, ರಬಕವಿಯಲ್ಲಿಯೇ ಕನ್ನಡ ಶಾಲಾ ಶಿಕ್ಷಕರಾಗಿ ಕೆಲಸ ಮಾಡ

ಹತ್ತಿದರು. ಇಂಗ್ಲಿಷ ಕಲಿಯುವ ಲವಲವಿಕೆಯ ಮೂಲಕ, ಇಂಗ್ಲಿಷಬಲ್ಲ ರಬಕವಿ ಪೋಸ್ಟ ಮಾಸ್ತರರ ಅರಿವೆಗಳನ್ನು ಒಗೆದುಕೊಟ್ಟು ಅವರಿಂದ ಇಂಗ್ಲಿಷ್ ಕಲಿತರು. ಮುಂದು ಬನಹಟ್ಟಿಯ 'ಅಬಕಾರ' ಮನೆತನದ ಕೂಡ ಸಂಬಂಧವಾದ ಮೇಲೆ, ಬನಹಟ್ಟಿಯಲ್ಲಿಯೇ ಬಂದು ನೆಲೆಸಿ ಅವರ ಮನೆತನದ ಉಸ್ತುವಾರಿಯನ್ನು ನೋಡಿಕೊಂಡರು. ಅಲ್ಲಿದ್ದಾಗ ಅವರು "ಜಮಖಂಡಿ ಸಂಸ್ಥಾನ ದಲ್ಲಿ ಹಳ್ಳಿಹಳ್ಳಿಗೂ ಶಾಲೆಗಳಾಗಿ, ಬಡವರಿಗೂ ಮಾತೃಭಾಷೆ ಕನ್ನಡದಲ್ಲಿ ಶಿಕ್ಷಣ ಸಿಗುವಂತೆ ಮಾಡಿದರು. ಆಗ, ಶಾಲೆಗಳಲ್ಲಿ ಮರಾಠಿಯನ್ನೇ ಕಲಿಸಲಾಗುತ್ತಿದ್ದಿತು. ಅಂಥ ವಿಷಮಕಾಲದಲ್ಲಿ, ಆಗಿನ ಅರಸರ ಕೂಡ ಹೋರಾಡಿ, ವೈರ ಕಟ್ಟಿಕೊಳ್ಳದೆ, ಸ್ನೇಹದಿಂದಲೇ, ಸಂಸ್ಥಾನದ ೭೨ ಶಾಲೆಗಳಲ್ಲಿ ೫೬ ಶಾಲೆಗಳನ್ನು ಪೂರ್ಣ ಕನ್ನಡ ಶಾಲೆಗಳನ್ನಾಗಿ ಪರಿವರ್ತಿಸಿ ಸಫಲರಾದರು."[೧] ಆಗ ಬನಹಟ್ಟಿ ರಬಕವಿ ಭಾಗದಲ್ಲಿ ವ್ಯಾಪಾರಸ್ಥರು ಮರಾಠಿಯಲ್ಲಿಯೇ ಲೆಕ್ಕಪತ್ರಗಳನ್ನಿಡುತ್ತಿದ್ದರು. ತಮ್ಮಣ್ಣಪ್ಪನವರು ಸ್ವತಃ ತಮ್ಮ ಅಂಗಡಿಯ ಲೆಕ್ಕ ಪತ್ರಗಳನ್ನೆಲ್ಲ ಕನ್ನಡದಲ್ಲಿಟ್ಟು ಮಾರ್ಗದರ್ಶಕರಾದರು. ಇದರಂತೆಯೇ ಬನಹಟ್ಟಿಯಲ್ಲಿ 'ನೇಟಿವ್ ಜನರಲ್ ಲಾಯಬ್ರರಿ' ಎಂಬ ವಾಚನಾಲಯವನ್ನು ತೆರೆಯಲು ಕಾರಣೀಭೂತರಾದರು. ಇಂಗ್ಲಿಷ ಶಿಕ್ಷಣದ ಮಹತ್ವವನ್ನರಿತ ತಮ್ಮಣ್ಣಪ್ಪನವರು ತಮ್ಮ ಆಸ್ತಿಯನ್ನೆಲ್ಲ ಧಾರೆಯೆರೆದು, ಬನಹಟ್ಟಿಯಲ್ಲಿ 'ಜನತಾ ಶಿಕ್ಷಣ ಸಂಸ್ಥೆ'ಯನ್ನು ಕಟ್ಟಿದರು. ತಮ್ಮ ಬೆಲೆಬಾಳುವ ಗ್ರಂಥಾಲಯವನ್ನು ಬೆಳಗಾವಿಯ ಕೆ. ಎಲ್. ಇ. ಸಂಸ್ಥೆಗೆ ದಾನ ಮಾಡಿದರು.

ಸಾಹಿತ್ಯನಿರ್ಮಿತಿ ಮಾತ್ರವಲ್ಲದೆ, ರಾಜಕೀಯ, ಸಾಮಾಜಿಕ ಕಾರ್ಯಗಳಲ್ಲಿಯೂ ತಮ್ಮಣ್ಣಪ್ಪನವರು ಮುಖಂಡರಾಗಿರುತ್ತಿದ್ದರು. ಅವರು ಜಮಖಂಡಿಯಲ್ಲಿ ಜರುಗಿದ ಮೊದಲನೆಯ ಜಮಖಂಡಿ ಸಂಸ್ಥಾನ ಪ್ರಜಾಪರಿಷತ್ತಿನ ಸ್ವಾಗತಾಧ್ಯಕ್ಷರಾಗಿದ್ದರು. ೧೯೨೫ರಲ್ಲಿ ಬೆಳಗಾವಿಯಲ್ಲಿ ನೆರವೇರಿದ ೧೧ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಸ್ವಾಗತಾಧ್ಯಕ್ಷರಾಗಿದ್ದರು. ೧೯೧೫ರಲ್ಲಿ ದಕ್ಷಿಣ ಸಂಸ್ಥಾನಗಳ ಹಿತವರ್ಧನ ಸಮಿತಿಯ ಸದಸ್ಯರಾಗಿ ಮುಂಬಯಿಯಲ್ಲಿ ಕೂಡಿದ್ದ ಎ. ಐ. ಸಿ. ಸಿ. ಸಭೆಗೆ ಹೋಗಿ, ಕನ್ನಡ ಸಂಸ್ಥಾನಗಳ ಬಗೆಗೆ ಚರ್ಚೆ ನಡೆಸಿದರು. ೧೯೧೫ನೆಯ ಇಸವಿ ಮೇ ೫ನೆಯ ತಾರೀಖಿನಂದು ಕನ್ನಡ ಸಾಹಿತ್ಯ ಪರಿಷತ್ತು ವಿಧಿವತ್ತಾಗಿ ಸ್ಥಾಪಿತವಾದಾಗ, ಪ್ರಥಮ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿದ್ದರು.

ತಮ್ಮಣ್ಣಪ್ಪನವರ ಬಳಗದ ಬಳ್ಳಿಯೂ ಕನ್ನಡಕ್ಕಾಗಿ, ಕನ್ನಡತನಕ್ಕಾಗಿ ಹೆಸರಾದುದು. ವಚನ ಪಿತಾಮಹ ಡಾ ಫ. ಗು. ಹಳಕಟ್ಟಿಯವರು ತಮ್ಮಣ್ಣಪ್ಪನವರ ಅಳಿಯಂದಿರು. ಇನ್ನೊಬ್ಬ ಅಳಿಯಂದಿರೆಂದರೆ, ರಬಕವಿ ಭಾಗದಲ್ಲಿ ಕನ್ನಡಕ್ಕಾಗಿ ದುಡಿದ ದಿವಂಗತ ಜ. ಜ. ಅಬಕಾರ ಅವರು. ತಮ್ಮಣ್ಣಪ್ಪನವರ ಅಣ್ಣನ ಮಕ್ಕಳಾದ ಪಂಡಿತಪ್ಪನವರು ಬೆಳಗಾವಿಯಲ್ಲಿ ಕನ್ನಡದ ಕಿಡಿಯನ್ನು ಬೆಳಗಿದವರು. ತಮ್ಮಣ್ಣಪ್ಪನವರು ತಮ್ಮ ಆಸ್ತಿಯನ್ನೆಲ್ಲ ಬನಹಟ್ಟಿಯ ಎಸ್. ಆರ್. ಎ. ಹಾಯಸ್ಕೂಲಿಗೆ ಕೊಡ ಮಾಡಿ ದಿ. ೬-೧೨-೧೯೩೩ರಂದು ತಮ್ಮ ವಯಸ್ಸಿನ ೭೧ನೆಯ ವರ್ಷದಲ್ಲಿ ಇಹಲೋಕ ಯಾತ್ರೆಯನ್ನು ಮುಗಿಸಿದರು. ಹೀಗೆ, ತುಂಬು ಜೀವನವನ್ನೂ, ಸ್ವಾರ್ಥತ್ಯಾಗಪೂರ್ಣವಾದ ಜೀವನವನ್ನೂ ನಡೆಸಿ ಕನ್ನಡದ ಗಡಿನಾಡಿನಲ್ಲಿ ಕನ್ನಡದ ಜ್ಯೋತಿ ಬೆಳಗುವಂತೆ ಮಾಡಿದವರು ತಮ್ಮಣ್ಣಪ್ಪನವರು.

ಕೃತಿಗಳು :

ತಮ್ಮಣ್ಣಪ್ಪನವರು ಆಶುಕವಿಗಳು. ಅನೇಕ ಕನ್ನಡ ಪದ್ಯಗಳನ್ನು ಮರಾಠಿಗೂ, ಮರಾಠಿ ಪದ್ಯಗಳನ್ನು ಕನ್ನಡಕ್ಕೂ ಅನುವಾದ ಮಾಡಿದರು.

೧ ಸುಧಾ : ದು. ನಿಂ. ಬೆಳಗಲಿ : ಡಿಸೆಂಬರ್ ೧೯೭೧.

ಸ್ವತಃ ನಾಟಕಗಳನ್ನು ಬರೆದು, ಆಡಿಸಿ, ಆಡಿ, ನಾಟಕ ಕಲೆ ಮುಂದುವರಿಯುವಂತೆ ಮಾಡಿದರು. "ಉತ್ತರ ಕರ್ನಾಟಕ ಸಂಸ್ಥಾನಗಳಲ್ಲಿ ಕನ್ನಡವನ್ನೂ ಕನ್ನಡ ನಾಟಕ ಕಲೆಯನ್ನೂ ಉಳಿಸಿದ ಕೀರ್ತಿ ಕೈ. ವಾ. ಚಿಕ್ಕೋಡಿ ತಮ್ಮಣ್ಣಪ್ಪನವರಿಗೆ ಸೇರಬೇಕು." ಎಂದು ಅ. ನ. ಕೃಷ್ಣರಾಯರು ತಮ್ಮ 'ಸಂಸ್ಕೃತಿಯ ವಿಶ್ವರೂಪ' ಎಂಬ ಗ್ರಂಥದಲ್ಲಿ ಹೇಳಿದ್ದಾರೆ.

ತಮ್ಮಣ್ಣಪ್ಪನವರು ತಮ್ಮ ಕೃತಿಗಳನ್ನು 'ರಾಮಲಿಂಗಸುತ' ಎಂಬ ಅಂಕಿತದಲ್ಲಿ ಬರೆಯುತ್ತಿದ್ದರು.

'ಪ್ರಮೀಲಾಸ್ವಯಂವರ ಅಥವಾ ಸ್ತ್ರೀವಿಜಯ', 'ಉಷಾಪರಿಣಯ', 'ಗಿರಿಜಾ ಸ್ವಯಂವರ', 'ಭೀಮದೇವ', 'ಶಾರದಾ' ಇವು ತಮ್ಮಣ್ಣಪ್ಪನವರು ರಚಿಸಿದ ನಾಟಕಗಳು. ಇವುಗಳಲ್ಲಿ ನಮಗೆ ಈಗ ದೊರೆಯುವುದು 'ಉಷಾ ಪರಿಣಯ' ನಾಟಕ ಮಾತ್ರ.

ಉಷಾಪರಿಣಯ (೧೮೮೩) :

೮೭ ಪುಟದ 'ಉಷಾ ಪರಿಣಯ' ನಾಟಕವು ಬೆಂಗಳೂರಿನ ವಿಚಾರದರ್ಪಣ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿತವಾಗಿ ಸನ್ ೧೮೮೩ ರಲ್ಲಿ ಅಂದರೆ ತಮ್ಮಣ್ಣಪ್ಪನವರ ೨೧ ನೆಯ ವಯಸ್ಸಿನಲ್ಲಿ ಪ್ರಕಟವಾಯಿತು. ಈ ನಾಟಕವನ್ನು ಶ್ರೀಯುತರು 'ಕರ್ನಾಟಕ ಭಾಷಾಭಿಮಾನಿಗಳಾದ ಮಿತ್ರವರ್ಯ ವ್ಯಂಕಟೇಶ ಬಾಳಾಜಿ ಆನಿಖಿಂಡಿ, ಮರ್ಚಂಟ, ರಬಕವಿ' ಎಂಬವರಿಗೆ ಆದರಪೂರ್ವಕವಾಗಿ ಸಮರ್ಪಿಸಿದ್ದಾರೆ. ಈ ನಾಟಕ ಪ್ರಕಟವಾದಾಗ ತಮ್ಮಣ್ಣಪ್ಪನವರು ಸಾಂಗಲಿ ಸಂಸ್ಥಾನದ ರಬಕವಿಯ ಎರಡನೆಯ ನಂಬರ ಶಾಲೆಯ ಉಪಶಿಕ್ಷಕರಾಗಿದ್ದರು. ತಾವು ಈ ನಾಟಕವನ್ನು ರಚಿಸಿದ ಉದ್ದೇಶದ ಬಗೆಗೆ ಲೇಖಕರು ಪ್ರಸ್ತಾವನೆಯಲ್ಲಿ ಹೀಗೆ ಹೇಳುತ್ತಾರೆ :

"ಯಾವದೊಂದು ಭಾಷೆಯು ಪೂರ್ಣ ರೀತಿಯಿಂದ ಸುಧಾರಿಸಬೇಕಾದರೆ, ಆ ಭಾಷೆಯಲ್ಲಿ ಅನೇಕ ವಿಷಯಗಳ ಗ್ರಂಥ ಸಮೃದ್ಧಿಯಾಗುವದು ಉಚಿತವಿರುತ್ತದೆ.

ನಮ್ಮ ಕರ್ನಾಟಕ ಭಾಷೆಯಲ್ಲಿ ನಾನಾ ವಿಧದ ಗದ್ಯ ಪುಸ್ತಕಗಳು ದೊರಿಯುವುದಿಲ್ಲ. ಭಾಷಾ ಸುಧಾರಣೆಗೆ ಸಾಧನವಾದ ಒಂದಾದರೂ ವರ್ತಮಾನಪತ್ರ ಹೊರಡುವದಿಲ್ಲ. ಕಾದಂಬರಿ, ನಾಟಕಾದಿ ಮನೋರಂಜಕ ಗ್ರಂಥಗಳು ಸಹ ಸ್ವಲ್ಪವೇ ಸರಿ. ನಮ್ಮ ಕರ್ನಾಟಕ ಭಾಷಾ ಮಾತೆಯ ಇಂಥ ಸ್ಥಿತಿಯನ್ನು ವಿಲೋಕಿಸಿ ಬಹಳ ಸಖೇದಾಶ್ಚರ್ಯವಾಗುತ್ತದೆ. ಇನ್ನು ಕೇವಲ ದುಃಖಿತರಾಗಿ ಕೂಡ್ರದೇ ಗ್ರಂಥಗಳನ್ನು ರಚಿಸಿ ಖೇದರಹಿತರಾಗಿ ಮಾಡುವದು ಪ್ರತ್ಯೇಕ ವಿದ್ವಜ್ಜನರ ಕರ್ತವ್ಯ ಕರ್ಮವದೆ.

ಮೊದಲು ಎಂಥ ಗ್ರಂಥಗಳನ್ನು ರಚಿಸಬೇಕು ? ಎಂಬ ಪ್ರಶ್ನೆ ಹೊರಡುವದು ಸಾಹಜಿಕವದೆ. ಅದಕ್ಕೆ ಪ್ರತ್ಯುತ್ತರವೇದರೆ :– ಯಾವ ಪ್ರಕಾರ ಜಟ್ಟಿಯು ದೊಡ್ಡ ದೊಡ್ಡ ಕಲ್ಲಿನ ಗೋಲುಗಳನ್ನು ಸಹಜ ಎತ್ತುವಷ್ಟು ಸಾಮರ್ಥ್ಯವು ತನ್ನಲ್ಲಿ ಬರುವದಕಿಂತ ಮೊದಲು ಸಣ್ಣ ಗೋಲುಗಳನ್ನು ಎತ್ತುವ ಪರಿಪಾಠವಿಡುತ್ತಾನೋ, ತದ್ವತ್ ಕಾದಂಬರಿ, ನಾಟಕ ಮೊದಲಾದ ಮನೋರಂಜಕ ಪುಸ್ತಕಗಳನ್ನು ರಚಿಸಿ, ಜನರ ಮನಸ್ಸುಗಳನ್ನು ಆಕರ್ಷಣ ಮಾಡಬೇಕು. ಯಾಕಂದರೆ, ಮೊದಲು ಅವರ ಹಸ್ತದಲ್ಲಿ ಶಾಸ್ತ್ರೀಯ ವಿಷಯುಗಳ ಗ್ರಂಥಗಳನ್ನು ಕೊಟ್ಟರೆ, ಅದರ ಅಭಿಪ್ರಾಯವು ಬೇಗ ತಿಳಿಯದ್ದರಿಂದ, ಆ ಗ್ರಂಥಗಳು ಅಪ್ರಿಯವಾಗುವವು. ಅರ್ಥಾತ್ ಕರ್ನಾಟಕ ಭಾಷಾಭಿಮಾನ ವರ್ಧಿಸುವದಿಲ್ಲ."

ಈ ರೀತಿ ರೂಪಗೊಂಡುದು, 'ಉಷಾ ಪರಿಣಯ' ನಾಟಕ. ಇದರ ಪ್ರಾರಂಭಭಾಗದಲ್ಲಿಯೇ, ಶ್ರೀಯುತರು 'ಪ್ರಮೀಳಾಸ್ವಯಂವರ ಅಥವಾ ಸ್ತ್ರೀವಿಜಯ' ಎಂಬ ನಾಟಕವನ್ನು ಬರೆದ ಬಗೆಗೆ ಸ್ಪಷ್ಟವಾದ ಉಲ್ಲೇಖವಿದೆ. ಹಾಗಿದ್ದಲ್ಲಿ, ಶ್ರೀಯುತರು ತಮ್ಮ ವಯಸ್ಸಿನ ೨೧ರ ಮೊದಲೇ 'ಸ್ತ್ರೀವಿಜಯ' ನಾಟಕವನ್ನು ಬರೆದಂತಾಯಿತು.

ಈ ನಾಟಕದ ಶೈಲಿಯ ದೃಷ್ಟಿಯಿಂದಲೂ, ಲಲಿತವಾದ ಹಾಸ್ಯದ ದೃಷ್ಟಿಯಿಂದಲೂ, ಸ್ತ್ರೀ ವಿಜಯ ನಾಟಕದ ಉಲ್ಲೇಖದ ದೃಷ್ಟಿಯಿಂದಲೂ ಸೂತ್ರಧಾರ ಮತ್ತು ವಿದೂಷಕರ ನಡುವಿನ ಸಂಭಾಷಣೆಯನ್ನು ಉದ್ಧರಿಸಬಹುದು :

(ನಾಟಕ ಪ್ರಾರಂಭಾವಸರದಲ್ಲಿ ಈಶ್ವರ ಸ್ತುತಿಯನ್ನು ಮುಗಿಸಿದ ಸೂತ್ರಧಾರನು ರಂಗಸ್ಥಲದೆಡೆಗೆ ನೋಡಿ–)

ಸೂತ್ರಧಾರ : ನಾನು ಅತ್ಯಂತ ಹರುಷದಿಂದ ವಿಶ್ವಚಾಲಕ ಶ್ರೀಮತ್ಸಾಂಬನ ಸ್ತವನವನ್ನು ಅಂತಃಕರಣಪೂರ್ವಕ ಮಾಡುತ್ತಿರಲು, ರಂಗಮಂಟಪದ ಮಧ್ಯಭಾಗದಲ್ಲಿ ಯಾವ ವಿಚಿತ್ರ ಪುರುಷನು ನರ್ತಿಸುತ್ತಿರುವನು ?

ವಿದೂಷಕ : ನಾನು ರುದ್ರವೀಣೆಯ ಕರ್ಕಶ ಧ್ವನಿಯ ಉಪದ್ರವವನ್ನು ತಾಳಲಾರದೆ, ಇಲ್ಲಿ ಬಂದರೂ ಸಹ, 'ಘಾಘಾ, ರೌರೌ, ಝಣ ಝಣ' ಎಂಬ ಕಠೋರಧ್ವಾನವೇ ನನ್ನ ಬೆನ್ನು ಹತ್ತಿರುತ್ತದೆ. ಎಂಥ ಚಮತ್ಕಾರವು.

ಸೂತ್ರಧಾರ : ಎಲೋ, ನಾನು ವೀಣೆಯ ಸುನಾದದಲ್ಲಿ ಮಾಡಿದ ಮಂಗಲಕಾರಕ ಭಾಲಚಂದ್ರನ ಸ್ತವನವು ನಿನಗೆ ಕಠೋರವಾಗಿ ಕೇಳಿಸಿತೇ ? ಒಳ್ಳೇದು, ಇಂಥ ವೈಚಿತ್ರ್ಯ ವೇಷಧಾರಿಯಾದವನು ನೀನು ಯಾರು ?

ವಿದೂಷಕ : ನಾನು ಅರಣ್ಯ ಪಂಡಿತನು !

ಸೂತ್ರಧಾರ : ಅಂದರೇನು ?

ವಿದೂಷಕ : ಇಷ್ಟು ತಿಳಿಯುವದಿಲ್ಲೇನು ? ಕೇಳು. ಹೇಳುತ್ತೇನೆ. ಅರಣ್ಯದಲ್ಲಿ ವಾಸ ಮಾಡುವ ಯಾವತ್ತು ಚತುಷ್ಪಾದಿಗಳಿಗಿಂತ ಅಧಿಕ ಜ್ಞಾನ ಉಳ್ಳವನು !

ಸೂತ್ರಧಾರ : ಹೀಗೇನು ! ಈ ಪಶುಜ್ಞಾನಾಧ್ಯಯನವನ್ನು ಎಲ್ಲಿ ಮಾಡಿದಿ ?

ವಿದೂಷಕ : ಪಶುನರಾದಿಗಳು ಇಲ್ಲದ ಪಟ್ಟಣದಲ್ಲಿ.

ಸೂತ್ರಧಾರ : ಶಾಹಬಾಸ, ಇದೇ ಏನು ನಿನ್ನ ನಿಜಾಭಿಧಾನವು ?

ವಿದೂಷಕ : ನನಗೆ ಸಹಸ್ರ ನಾಮಗಳಿರುತ್ತವೆ.

ಸೂತ್ರಧಾರ : ಹಾಗಾದರೆ, ನೀನು ಮಹಾಪುರುಷನಂತೆ ಕಾಣುತ್ತಿ ! ದಯಮಾಡಿ, ನಿಮ್ಮ ಅಭಿಧಾನವರ್ಷವಾಗಲಿ.

ವಿದೂಷಕ : ಒಳ್ಳೇದು, ಹೇಳುತ್ತೇನೆ. ಏಕಚಿತ್ತದಿಂದ ಆಲಿಸು : ಕದನಾಭಿಲಾಷಿ, ಶುಷ್ಕಾಭ್ಯಾಸಿ, ಸದಾವಿನಾಶಿ, ಶಾಂತಧ್ವಂಸಿ, ದುರ್ಗುಣರಾಶಿ........

ಸೂತ್ರಧಾರ : ಸಭ್ಯಗೃಹಸ್ಥರೇ, ನಿಮ್ಮ ಶುಭಸೂಚಕ ನಾಮವರ್ಷವು ನಿಂದಿರಲಿ.

ವಿದೂಷಕ : ಯಾಕೆ ? ನೀವು ತೊಯ್ಸಿಕೊಂಡಿರೇನು ?

ಸೂತ್ರಧಾರ : ತೊಯ್ಸಿ ಯಾಕೆ ? ತಮ್ಮ ವಾಕ್ಪ್ರವಾಹದಲ್ಲಿ ಹರಿದು ಹೋದೆನು.

ವಿದೂಷಕ : ಅದ್ಯಾಕೆ ?

ಸೂತ್ರಧಾರ : ಇನ್ನು ಹಾಳ ರಗಳೆ ಉಪಯೋಗದ್ದಲ್ಲಾ. ರಾತ್ರಿ ಬಹಳಾಗಿರುತ್ತದೆ. ಆದ್ದರಿಂದ, ಬೇಗ ನಿನ್ನ ಕರಿಯತಕ್ಕ ನಾಮವ್ಯಾವದು ಹೇಳು !

ವಿದೂಷಕ : ನಾನು ನಾಮ, ಸರ್ವನಾಮ, ವಿಶೇಷಣ, ಕ್ರಿಯಾಪದಗಳೇನೂ ನಾನು ಅಲ್ಲ.

ಸೂತ್ರಧಾರ : ಎಲೋ, ನಾನು ವ್ಯಾಕರಣ ಸಂಬಂಧ ನಾಮ ಕೇಳುವದಿಲ್ಲ. ನಿನ್ನ ಅಂಕಿತನಾಮ ಯಾವದು ?

ವಿದೂಷಕ : ನನ್ನ ಹೆಸರು ವಿದೂಷಕರಾಯರು.

ಸೂತ್ರಧಾರ : ಅಂದಮೇಲೆ ನಿನ್ನಿನ ನಾಟಕದಲ್ಲಿ ಸಹಾಯ ಮಾಡಿದವನು ನೀನೇ ಏನು ?

ವಿದೂಷಕ : ಇದರಲ್ಲೇನು ಸಂದೇಹ ?

ಸೂತ್ರಧಾರ : ನಿನ್ನ ವಿಚಿತ್ರ ರೂಪವನ್ನು ನೋಡಿ ಗುರುತು ಹತ್ತಲಿಲ್ಲ. ಒಳ್ಳೇದು, ಇನ್ನು ಯಾವ ನಾಟಕವನ್ನಾಡಿ ಈ ಸಭೆಯಲ್ಲಿ ವಿರಾಜಿಸುವ ವಿದ್ವನ್ಮಣಿಗಳನ್ನು ಸಂತೃಪ್ತ ಮಾಡ ಬೇಕು, ಹೇಳು ನೋಡುವಾ !

ವಿದೂಷಕ : ನನ್ನದೇನು ನಾಟ್ಯ ಕಲೆಯಲ್ಲಿ ವಿಶೇಷ ಗಮ್ಯವಿಲ್ಲ. ಆದರೆ, ನನ್ನ ಮನಸ್ಸಿಗೆ ತಮ್ಮಪ್ಪ ಸತ್ಯಪ್ಪ ಚಿಕ್ಕೋಡಿ ಉರ್ಫ ರಾಮಲಿಂಗಸುತ ಕವಿ ಇವರಿಂದ ರಚಿಸಲ್ಪ ಟ್ಟದ್ದು ಮತ್ಯಾವದಾದರೂ ನಾಟಕವಿದ್ದರೆ, ಅದೇ ಮಾಡುವದು ವಿಹಿತ ಕಾಣು ತ್ತದೆ. ಯಾಕಂದರೆ– ಅದೇ ಕವಿಯಿಂದ ವಿರಚಿಸಲ್ಪಟ್ಟ "ಪ್ರಮೀಲಾ ಸ್ವಯಂವರ ಅಥವಾ ಸ್ತ್ರೀವಿಜಯ'' ನಾಟ್ಯವನ್ನು ನಿನ್ನೇ ಪ್ರೇಕ್ಷಿತರು (ಪ್ರೇಕ್ಷಕರು) ನೋಡಿ, ಬಹು ಆನಂದಪಟ್ಟರೆಂದು ಅವರ ಮುಖತೇಜದ ಮೇಲಿಂದಲೇ ನನಗೆ ತಿಳಿಯ ಬಂತು. ಪರಂತು ತಮ್ಮ ಚಿತ್ತ.

ಸೂತ್ರಧಾರ : ಹಾ ಹಾ ! ಸ್ಮರಣವಾಯಿತು. ನೀನು ಹೇಳಿದಂತೆ ಅದೇ ಕವಿಯಿಂದ ರಚಿಸಲ್ಪಟ್ಟ 'ಉಷಾ ಪರಿಣಯ'ವೆಂಬ ನಾಟಕವದೆ. ಅದನ್ನೇ ಈ ಸಭಾಸದರಿಗೆ ತೋರಿಸಿ, ಆನಂದ ಮಜ್ಜನ ಮಾಡಿಸೋಣ!........

—

ಹಟ್ಟಿಯಂಗಡಿ ನಾರಾಯಣರಾಯರು

(೧೮೬೩-೧೯೨೧)

ಶ್ರೀಯುತರ ಪೂರ್ಣ ಹೆಸರು ನಾರಾಯಣರಾವ ಪರಮೇಶ್ವರ ಹಟ್ಟಿಯಂಗಡಿ. ಪಾಂಡಿತ್ಯ, ಅಧ್ಯಾತ್ಮ ಮತ್ತು ಕಾವ್ಯಪ್ರತಿಭೆಗಳ ಸುಂದರವಾದ ಸಮನ್ವಯವನ್ನು ಶ್ರೀಯುತರಲ್ಲಿ ಕಾಣುತ್ತೇವೆ. ಇವರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರಾಗಿದ್ದರೂ, ತಮ್ಮ ಜೀವನದ ಮಹತ್ವದ ಭಾಗವನ್ನು ಮುಂಬಯಿಯಲ್ಲಿ ಕಳೆದರು. ಆದ್ದರಿಂದ ಇವರ ಬಗೆಗೆ ಇಲ್ಲಿ ಹೇಳಿದೆ. ಶ್ರೀಯುತರು, ಒಳ್ಳೆಯ ಪಂಡಿತರು, ಸರಸ ಕವಿಗಳು, ಅಧ್ಯಾತ್ಮವಾದಿಗಳು, ತೀಕ್ಷ್ಣ ವಿಚಾರವಂತರು, ಪ್ರಗಲ್ಭ ಸಂಶೋಧಕರು– ಎಲ್ಲಕ್ಕೂ ಹೆಚ್ಚು ಮಾನವತಾವಾದಿಗಳು.

ನಾರಾಯಣರಾಯರ ತಂದೆಯ ಹೆಸರು ಪರಮೇಶ್ವರಯ್ಯ. ಪರಮೇಶ್ವರಯ್ಯನವರು ಬಡತನದಲ್ಲಿ ಬೆಂದವರು. ಸದ್ಗುಣಿಗಳು. ಅವರಲ್ಲಿದ್ದ ಅಧ್ಯಾತ್ಮವೃತ್ತಿ ಮತ್ತು ಸದ್ಗುಣಗಳು ಮಗ ನಾರಾಯಣರಾಯರಲ್ಲಿಯೂ ಬಳುವಳಿಯಾಗಿ ಬಂದವು. ತೀಕ್ಷ್ಣಮತಿಗಳಾದ ನಾರಾಯಣರಾಯರು ಶಾಲೆ, ಕಾಲೇಜುಗಳ ಎಲ್ಲ ಪರೀಕ್ಷೆಗಳಲ್ಲೂ ಪ್ರಥಮ ಸ್ಥಾನವನ್ನು ಪಡೆದು, ವಿದ್ಯಾರ್ಥಿವೇತನದಿಂದಲೇ ವ್ಯಾಸಂಗವನ್ನು ಸಾಗಿಸಿದರು. ತಮ್ಮ ೨೧ನೇ ವಯಸ್ಸಿನಲ್ಲಿಯೇ– ಅಂದರೆ ಸನ್ ೧೮೮೪ರಲ್ಲಿ ಬಿ.ಎ. ಪದವಿಯನ್ನು ಪಡೆದ ನಂತರ ಶಿಕ್ಷಣ ಇಲಾಖೆಯಲ್ಲಿ ಸೇರಿ, ಆಂಧ್ರಪ್ರದೇಶದ ಮಛಲಿಪಟ್ಟಣ, ಕನ್ನಡದ ಮಡಿಕೇರಿ, ಮಂಗಳೂರು ಮತ್ತು ಮದ್ರಾಸ ಮುಂತಾದ ಕಡೆಗಳಲ್ಲಿ ಕೆಲಸ ಮಾಡಿದರು. ಮಂಗಳೂರಿನಲ್ಲಿದ್ದಾಗ ಹೆಂಡತಿಯನ್ನೂ, ಮಕ್ಕಳನ್ನೂ ಕಳೆದುಕೊಂಡ ನಾರಾಯಣರಾಯರು ತುಂಬಾ ದುಃಖಕ್ಕೀಡಾದರು. ಮುಂದು, ಮದ್ರಾಸಿಗೆ ಹೋಗಿ ಬಿ. ಎಲ್. ಓದಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು. ತುಂಬಾ ಪ್ರಾಮಾಣಿಕರೂ, ಸಾಹಿತ್ಯಪ್ರೇಮಿಗಳೂ ಆದ ನಾರಾಯಣರಾಯರಿಗೆ ವಕೀಲಿವೃತ್ತಿ ಹಿಡಿಸದಾಯಿತು. ಮಹತ್ವಾಕಾಂಕ್ಷಿಯಾಗಿದ್ದ ಡಿಸ್ರೇಲಿ ವಕೀಲಿವೃತ್ತಿಯ ಬಗೆಗೆ ಹೀಗೆ ಹೇಳಿದ್ದನು : "To be a great lawyer, I must give up my chance of being a great man." (Life of Disraeli : Lytton Strachey) ಮಹತ್ವಾಕಾಂಕ್ಷೆಯ ಕಾರಣಕ್ಕಲ್ಲದಿದ್ದರೂ, ತಮ್ಮ ಮನಃಸ್ವಭಾವಕ್ಕೆ ಒಗ್ಗದ್ದರಿಂದ ನಾರಾಯಣರಾಯರು ಕೇವಲ ಆರು ವರ್ಷ ಅಂದರೆ ೧೮೯೬ ರಿಂದ ೧೯೦೨ರ ವರೆಗೆ ವಕೀಲಿಯನ್ನು ಮಾಡಿ, ಪತ್ರಿಕಾವ್ಯವಸಾಯದ ಕಡೆಗೆ ಮನಸ್ಸನ್ನು ಹಾಕಿದರು. ೧೮೯೮ರಲ್ಲಿ 'ಇಂಡಿಯನ್ ಸೋಶಿಯಲ್ ರಿಫಾರ್ಮರ'ದ ಸಂಪಾದಕರಾಗಿ ಕೆಲಸ ಮಾಡಿದರು. ಸತ್ಯಸಂಧರೂ, ಕುಶಾಗ್ರಮತಿಗಳೂ, ಕಾಯ್ದೆತಜ್ಞರೂ ಆದ ನಾರಾಯಣರಾಯರಿಗೆ ಪತ್ರಿಕಾ ವ್ಯವಸಾಯ ಯೋಗ್ಯವಾದ ಕಾರ್ಯಕ್ಷೇತ್ರವಾಯಿತು. ಇದರಿಂದ ಅವರು ಮುಂಬಯಿಗೆ

ಹೋಗಿ, ಅಲ್ಲಿ 'ಇಂಡಿಯನ್ ಸ್ಪೆಕ್ಟೇಟರ್' ಎಂಬ ಪತ್ರಿಕೆಯ ಸಂಪಾದಕತ್ವವನ್ನು ವಹಿಸಿದರು. ಇದು ಬಿ. ಎಂ. ಮಲಬಾರಿ ಎಂಬವರ ಪತ್ರಿಕೆ. ಹಿಂದೂ ಸಮಾಜ ಸುಧಾರಿಸಬೇಕೆಂಬುದೂ ಬ್ರಿಟಿಶ್ ರಾಜಸತ್ತೆಯಲ್ಲಿಯೇ ಇದ್ದು ಪ್ರಗತಿಯನ್ನು ಸಾಧಿಸಬೇಕೆಂಬುದೂ ಮಲಬಾರಿಯವರ ಅಭಿಪ್ರಾಯ ವಾಗಿದ್ದಿತು. ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗಿದ್ದ ಮಲಬಾರಿಯವರು ಪೂರ್ವ ಮತ್ತು ಪಶ್ಚಿಮದ ಸ್ನೇಹಸಂವರ್ಧನೆಗಾಗಿ 'ಈಸ್ಟ್ ಆ್ಯಂಡ ವೆಸ್ಟ್' ಎಂಬ ಪತ್ರಿಕೆಯನ್ನೂ ಪ್ರಾರಂಭಿಸಿದರು. ಈ ಎರಡೂ ಪತ್ರಿಕೆಗಳಿಗೆ ನಾರಾಯಣರಾಯರು ಆಧಾರಸ್ತಂಭರಾಗಿದ್ದರು. ಸ್ವತಂತ್ರ ವೃತ್ತಿಯ ನಾರಾಯಣರಾಯರು ಅನೇಕ ಸಲ ತಮ್ಮ ಸ್ವಂತ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ೧೯೧೨ರಲ್ಲಿ 'ಸ್ಪೆಕ್ಟೇಟರ್' ಪತ್ರಿಕೆ ನಿಂತಿತು. 'ಈಸ್ಟ್ ಆ್ಯಂಡ ವೆಸ್ಟ್' ಕೂಡ ಹಸ್ತಾಂತರ ಹೊಂದಿತು. ಸುಮಾರು ಹತ್ತು ವರ್ಷ ಕಾಲ ಈ ಪತ್ರಿಕೆಗಳ ಆಧಾರಸ್ತಂಭರಾಗಿದ್ದ ನಾರಾಯಣರಾಯರು ತದನಂತರ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಗೆ ಲೇಖನಗಳನ್ನು ಬರೆಯಹತ್ತಿದರು.

ನಾರಾಯಣರಾಯರು ಕವಿಗಳು; ಸಂಶೋಧಕರು. ನಂದಳಿಕೆ ನಾರಾಯಣಪ್ಪನವರು ಕುಂದಾಪುರ ಶಾಲೆಗೆ ಡ್ರಿಲ್ ಮಾಸ್ತರರಾಗಿ ಬಂದಾಗ, ನಾರಾಯಣರಾಯರು ಮಂಗಳೂರ ಗವರ್ನಮೆಂಟ ಕಾಲೇಜಿನಲ್ಲಿ ಸಹಾಯಕ ಉಪಾಧ್ಯಾಯರಾಗಿದ್ದರು. ಮುದ್ದಣನ 'ಕುಮಾರ ವಿಜಯ' ಪ್ರಕಟವಾದಾಗ ನಾರಾಯಣರಾಯರೂ ಅಭಿನಂದನೆ ಸಲ್ಲಿಸಿದರು. ಅನೇಕ ಭಾಷಾಶಾಸ್ತ್ರ ವಿಷಯಕ ವಿವರಗಳ ಬಗೆಗೆ ಮುದ್ದಣ ಇವರ ಕೂಡ ಪತ್ರವ್ಯವಹಾರ ಮಾಡಿದ್ದುಂಟು.

ಶ್ರೀಯುತರ 'ಕನ್ನಡದ ಕಥೆ' ಎಂಬ ಲೇಖ ಅವರ ಅಗಾಧ ಪಾಂಡಿತ್ಯದ ದ್ಯೋತಕವಾಗಿದೆ. ಅದಕ್ಕೂ ಹೆಚ್ಚು ಅವರ ಕವಿತಾಶಕ್ತಿ ಮನೋಜ್ಞವಾಗಿದೆ. ಹೊಸಕಾವ್ಯಪ್ರಯೋಗದಲ್ಲಿ ದಕ್ಷಿಣ ಕನ್ನಡದ ಬರೆಹಗಾರರಲ್ಲಿ– ಅಷ್ಟೇ ಏಕೆ ಅಖಂಡ ಕರ್ನಾಟಕದ ಬರೆಹಗಾರರಲ್ಲಿ– ನಾರಾಯಣ ರಾಯರಿಗೆ ತೀರ ಹೆಚ್ಚಿನ ಸ್ಥಾನವಿದೆ. ಶಾಂತಕವಿಗಳ ನಂತರ ಕನ್ನಡವನ್ನು ಇಷ್ಟು ಹಿತವಾಗಿ, ಮಿತವಾಗಿ, ನಯವಾಗಿ, ಸುಲಲಿತವಾಗಿ, ನುಡಿಸಿದವರೆಂದರೆ ನಾರಾಯಣರಾಯರೇ. ಅವರದು ತುಂಬಾ ನೂತನವಾದ ದೃಷ್ಟಿ. ಕಾವ್ಯವಸ್ತು, ಶೈಲಿ, ಬಂಧ, ಪ್ರಾಸರಾಹಿತ್ಯ, ಪದಪ್ರಯೋಗ– ಎಲ್ಲ ದೃಷ್ಟಿಯಿಂದಲೂ ಇಂದಿನ ಹೊಸಗನ್ನಡ ಕವಿತೆಗಳ ಹಾಗೆ ಅವರ ಕವನಗಳು ಕಂಡುಬರುತ್ತವೆ. ದಿವಂಗತ ಬಿ. ಎಂ. ಶ್ರೀ. ಅವರು ಇಂಗ್ಲಿಷ ಗೀತಗಳನ್ನು ರಚಿಸುವ ಎಷ್ಟೋ ವರ್ಷ ಮೊದಲೇ ನಾರಾಯಣ ರಾಯರು ಇಂಗ್ಲಿಷ ಚೆಲುವೆಯ ಒಡವೆಯನ್ನು ಕನ್ನಡ ದೇವಿಗೂ, ಕನ್ನಡ ತಾಯಿಯ ಆಭರಣಗಳನ್ನು ಇಂಗ್ಲಿಷ ಸುಂದರಿಗೂ ಇಟ್ಟು ನೋಡಬಯಸಿದರು.

ಶ್ರೀಯುತರು ಇಂಗ್ಲಿಷದ ಅನೇಕ ಕವನಗಳನ್ನು ಸೊಗಸಾದ ಆಧುನಿಕ ಶೈಲಿಯಲ್ಲಿ ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಅಂತೂ ನಾರಾಯಣರಾಯರಂಥವರ ಮೂಲಕ ಕನ್ನಡ ಕವಿತಾಕಾಮಿನಿ ಕೊನೆಗೊಮ್ಮೆ ಖ್ಯಾತವೃತ್ತಗಳು, ಕಂದಪದ್ಯ, ಮಂದಾಕ್ರಾಂತ, ಮಾಲಿನಿಗಳ ಕಳ್ಳುಸುಳನ್ನು ದಾಟಿ ಹೊರಬಂದಳು. ದೇಹಕ್ಕೆ ತಕ್ಕಂತೆ ಬಟ್ಟೆ, ಭಾವಕ್ಕೆ ತಕ್ಕಂತೆ ಭಾಷೆ ರೂಪಗೊಂಡವು. ಪ್ರಾಸದ ಅನಾವಶ್ಯಕವೂ ಅಸಹ್ಯವೂ ಆದ ಹೊರೆ ಕಳಚಿಹೋಯಿತು. ಹ. ನಾ. ಅವರ ಸಾಧನೆಗಾಗಿ ಈ ಕೆಳಗಿನ ಪದ್ಯಗಳನ್ನು ಉದಾಹರಿಸಬಹುದು.

ಇದು ಹೆನ್ರಿ ಲಾಂಗ್‌ಫೆಲೊ ಅವರ ಇಂಗ್ಲಿಷ್ ಕವಿತೆಯ ಸುಂದರವಾದ ಅನುವಾದ :

ಜೀವನಗೀತ :

ಬದುಕು ಬರಿಕನಸೆಂದು ಮರುಗುವುದು ಸರಿಯಲ್ಲ,
ಅದಕೆ ನಿದ್ರೆಯೆ ಮೃತ್ಯು, ತೋರುವಂತಿರವಿಲ್ಲ,

ಬದುಕು ನಿಜ ತಕ್ಕಲ್ಲ, ಮಸಣಮುಗಿಸುವುದಲ್ಲ,
ಅದು ಚೇತ, ಮಣ್ಣ ಸೇರುವುದೆಂಬುದಲ್ಲ

ಜಗದ ರಣರಂಗದಲಿ, ಜೀವಿತದ ಪಾಳ್ಯದಲಿ,
ಮೃಗಪಶುಗಳಂತಿರದೆ ಕಲಿಯಾಗಿ ಹೋರಾಡು
ಮುಗಿದ ಕಾಲವೆ ತೀರಿಹೋದುದನು ಮಾನಿಸಲಿ,
ಬಗೆದದರ ಚಿಂತೆಯದು ನಿನಗೇಕೆ ನೋಡು

ಈಗನಡೆಯುವ ಕಾಲ ಶುಭಸಫಲವಾಗಿರಲಿ
ಸೋಗಿನ ಭವಿಷ್ಯದಲಿ ನಂಬಿಕೆಯನೀಡಾಡು;
ಬೀಗಿ ಒಳಗೆದೆ ಬಡಿದು ಮೇಲೆ ಈಶ್ವರನಿರಲು,
ಈಗಲೇ ಮೆಯ್ಯೊಡ್ಡು, ಈಗೆಲ್ಲ ಮಾಡು

ಮಹನೀಯ ಚರಿತಗಳು ಪಾಲಿಸುವುದೀ ನೆನಪು
ಇಹದರಲಿರಲುತ್ತುಂಗ ಚರಿತ ನಮಗಳವಹುದು;
ಇಹಬಿಡಲು ಭವಸಿಂಧು ಪುಳಿನದಲಿ ಕಾಲ್ಗುರಿಪು
ಭಯಭಗ್ನಯಾನರಿಗೆ ಹುರಿಗೊಡಲುಬಹುದು.

ಇದನರಿತು ನಾವೆದ್ದು ಕಾರ್ಯಕ್ಕೆ ಮೆಯ್ಗೊಡುತ,
ಎದೆಗೆಡದೆ ದೈವಕ್ಕೆ ಸಡಗರವ ಪಡೆದಿರುವ !
ಇದರಲ್ಲಿ ಗೆಲ್ಲುತಲೆ ಬಿಡದದಕೆ ಹೆಗಲಿಡುತ,
ಬದುಕಿರಲು ದುಡಿಯುತ್ತ ತಾಳುತ್ತಲಿರುವ !

ಇದು ಕೀಟ್ಸ ಕವಿಯ ಒಂದು ಕವನಭಾಗದ ಭಾಷಾಂತರ :

ಭಾವನೆಯ ಬಿಚ್ಚಿಬಿಡು, ನೋಡಿದುದ ನೋಡಿದರೆ,
ಆವ ರಮಣೀಯತೆಗೆ ತಪ್ಪುವದು ನಿಯತಜರೆ ?

ಮಧುಮಾಸದಾನಂದ ಹೂಗಳೊಡನಳಿಯುವದು,
ವಿಧುಕಿರಣಗಳ ಸೊಬಗು ಮಬ್ಬಿನೊಳಗಡಗುವುದು

ನೋಡಿದುದ ನೋಡಿದರೆ ಮೋಹಿಸುವ ಕಣ್ಣೆಲ್ಲಿ ?
ಬಾಡದಂತಹ ಕದಪು ದಂತಮೌಕ್ತಿಕವೆಲ್ಲಿ ?
ಕೇಳಿದುದ ಕೇಳಿದರೆ ಸವಿಮಾತಿಗಿಂಪೆಲ್ಲಿ ?
ಹೇಳಿದುದ ಹೇಳಿದರೆ ಕಥೆಯ ರಂಜನವೆಲ್ಲಿ ?

ಇದು ಶೆಲ್ಲಿ ಕವಿಯ ಕವನಭಾಗವೊಂದರ ಭಾಷಾಂತರ :

ನಭ :

ಜಗದ ನಿರಭ್ರತಮಿಸ್ರಪಟಲವದು
ಅಗಣಿತ ದೀಪಗಳುರಿಯುವ ದಿವವದು;
ಗಹನಾಮಿತ ಶಾಶ್ವತ ವಿಸ್ತೃತಿಯದು
ಇಹಬಹ ಕಳೆದೆಲ್ಲವುಗಳ ಮನೆಯದು.

ತೇಜದ ವಪುಗಳ ರಂಗನಿಲಯವದು
ಓಜೆಯು ಉಡುಗಳು ಹಾರುವ ಹೊಲವದು,
ಕೇತುಗಳಡಗಿ ವಿಹರಿಸುವ ದರಿಯದು
ಶೀತಲ ಚಂದ್ರಮರಲೆಯುವ ವನವದು.

ಇದು ಹೆನ್ರಿ ವಾಟನ್ ಅವರ ಕವಿತೆಯ ಭಾಷಾಂತರ :

ನಿತ್ಯಸುಖಿ :

ಪರರ ತುಷ್ಟಿಗೆ ದಣಿಯದವನ ಸುಖಕೆಣೆಯೆಲ್ಲಿ ?
ಸರಲಭಾವದ ಕವಚದಂತೆ ರಕ್ಷಣವೆಲ್ಲಿ ?
ಸತ್ಯಶೀಲತೆ ನಿತ್ಯಸುಖಿಗೆ ಬಲು ಜಾಣತನ
ನರರ ಭಣಿತದ ಭೀತಿಯೆಂಬ ಸಂಕಟವಿಲ್ಲ
ಮರಣಕಂಜದೆ ಸಿದ್ಧನಾಗಿರದ ದಿನವಿಲ್ಲ
ಭಾಗ್ಯದಭ್ಯುದಯದಭಿಲಾಷೆ ಪಡುವವನಲ್ಲ
ಯೋಗ್ಯತೆಯನಗಲಿದೈಸಿರಿಗೆ ಮತ್ಸರವಿಲ್ಲ
ಸ್ತುತಿ ಕೇಳಿ ದುಂಮಾನದಿರಿತ ತಾಳುವವನಲ್ಲ
ಹಿತವನಲ್ಲದೆ ರಾಜನೀತಿ ಬಲ್ಲವನಲ್ಲ........ [೧]

ನಾರಾಯಣರಾಯರು ವೃತ್ತಿಯಿಂದ ವಕೀಲ ಹಾಗೂ ಪತ್ರಿಕಾವ್ಯವಸಾಯಿಗಳಾಗಿದ್ದರೂ, ಪ್ರವೃತ್ತಿಯಿಂದ ಆಧ್ಯಾತ್ಮವಾದಿಗಳಾಗಿದ್ದರೆಂದು ಈ ಮೊದಲೇ ಹೇಳಿತಷ್ಟೇ. ಕಲಿಯುಗದಲ್ಲಿ ಭಜನೆಗೆ ತುಂಬಾ ಮಹತ್ವವಿದೆ. 'More things are wrought by prayer than this world dreams of' ಎಂದು ಮಹಾಕವಿ ಟೆನಿಸನ್ ಹೇಳಿದ್ದಾನೆ. ಮಮಭಕ್ತಾಃ ಯತ್ರ ಗಾಯಂತೇ ತತ್ರ ತಿಷ್ಠಾಮಿ ನಾರದ– ಎಂದು ಭಗವದ್‌ವಾಣಿ. ಇದಕ್ಕನುಸಾರವಾಗಿ ಭಜನೆಗಾಗಿ ನಾರಾಯಣ ರಾಯರು ಹಲವು ಕನ್ನಡ ಭಕ್ತಿಗೀತಗಳನ್ನು ರಚಿಸಿ, ಅವನ್ನು 'ಬ್ರಾಹ್ಮಗೀತಾ' ಎಂಬ ಸಂಕಲನವಾಗಿ ಪ್ರಕಟಿಸಿದರು. ಅವರ 'ಆಂಗ್ಲ ಕವಿತಾವಳಿ', 'ಶ್ರೀ'ಯವರ 'ಇಂಗ್ಲಿಷ ಗೀತಗಳ'ಕಿಂತ ಮೊದಲೇ, ಅಂದರೆ ಸನ್ ೧೯೧೯ ರಲ್ಲಿ ಪ್ರಕಟವಾಯಿತು. ಇದೂ ಅಲ್ಲದೆ, ತಮ್ಮ ಮಾತೃಭಾಷೆಯಾದ ಕೊಂಕಣಿ ಯಲ್ಲಿ ಒಂದು ಶಬ್ದಸಂಗ್ರಹವನ್ನೂ ಇವರು ಪ್ರಕಟಿಸಿದರು. ಕೊಂಕಣಿ ಮಾತ್ರವಲ್ಲದೆ, ಇಂಗ್ಲಿಷ ಮರಾಠಿಗಳಲ್ಲೂ ಇವರ ಅನೇಕ ಪ್ರಕಟನೆಗಳಿವೆ. ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ತತ್ವವೇತ್ತರ ವಿಚಾರಗಳನ್ನು ಸಂಗ್ರಹಿಸಿ 'ಟ್ರ್ಯಾಕ್ಟ ಫಾರ ಥಿಂಕರ್ಸ್' ಎಂಬ ಮಾಲಿಕೆಯಲ್ಲಿ ಹ. ನಾ. ಅವರು ಇಂಗ್ಲಿಷ ಮತ್ತು ಮರಾಠಿ ಭಾಷೆಗಳಲ್ಲಿ ಪ್ರಕಟನೆಗಳನ್ನು ಹೊರತಂದರು.

ಆಂಗ್ಲ ಕವಿತಾವಳಿ (೧೯೧೯) :

೨೨ ಪುಟದ ಈ ಚಿಕ್ಕ ಪುಸ್ತಿಕೆ ಪುತ್ತೂರಿನ 'ಸದಾನಂದ ಕೋ–ಆಪರೇಟಿವ್' ಮುದ್ರಾ ಕ್ಷರದಲ್ಲಿ ಮುದ್ರಿತವಾಯಿತು. ಇದರಲ್ಲಿ ಷೇಕ್ಸಪಿಯರ್, ವರ್ಡ್ಸ್‌ವರ್ಥ, ಷೆಲ್ಲಿ ಮೊದಲಾದ ಆಂಗ್ಲಕವಿಗಳ ಕವಿತೆಗಳ ಅನುವಾದಗಳಿವೆ. ಈ ಬಗೆಗೆ ಪರಿಷತ್ಪತ್ರಿಕೆಯಲ್ಲಿ ಹೀಗೆ ಬಂದಿದೆ :

---

೧ ಈ ಎಲ್ಲ ಕವನಗಳು ಮಾರ್ಚ ೧೯೧೮ ರ 'ವಾಗ್ಭೂಷಣ' ದಲ್ಲಿ 'ಆಂಗ್ಲ ಕವಿತಾ ಸಾರ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾಗಿವೆ.

ಶ್ರೀಯುತರ ಗದ್ಯಲೇಖನಗಳಲ್ಲಿ ಈ ಲೇಖನಗಳನ್ನು ನೋಡಬಹುದು :

ಸಂದೇಹಗಳೂ, ಸೂಚನೆಗಳೂ (ಅದೇ : ಏಪ್ರಿಲ್ ೧೯೧೯ : ಪು. ೬೨)

ಇದರಲ್ಲಿ ಪಂಪ, ಪೊನ್ನ, ನಾಗವರ್ಮರ ಅರಸರ ಬಗೆಗೆ ವಿವೇಚನೆ ಇದೆ.

ಇದು ಯಾವ ಪ್ರಾಸ ? (ಅದೇ : ಪು. ೬೩)

“ ಪಂಪನಲ್ಲಿ–

ಅವನಂ ತನಗೆಂದುದು
ನಾಗವರ್ಮನಂ ದೊಂಗಿದಬಂ ತನ ಸೊಗಯಿಸುಗುಂ (xiv- ೪೦)

–ಎಂದು ಬರುತ್ತದಷ್ಟೆ. ಇಲ್ಲಿ ಪ್ರಾಸ ಸ್ಥಾನದಲ್ಲಿ ಬರುವ ‘ ವ ’, ‘ ಮ ’ ಯಾವ ಪ್ರಾಸ ? ‘ ವ ’ ವರ್ಗಾಕ್ಷರವಲ್ಲ. ಸೋಜಿಗ ಪ್ರಾಸವಾದ ವ್ಯಂಜನಗಳ ‘ ಶ, ಷ, ಸ ’ ಅಲ್ಲ. ಇದು ಮುದ್ರಣ ದೋಷವೊ ? ಅಥವಾ ಹೀಗೆ ಪ್ರಾಸವಿರುತ್ತಿತ್ತೇ ? ತಿರುಮಕೂಡಲು-ನರಸೀಪುರದ ಶಾಸನವೊಂದರಲ್ಲೂ ಹೀಗಿದೆ :

ಭೀಮಾರ್ಜುನರುಂ ಪ್ರೋ
ದ್ದಾಮೋರುಬಲಿಗಳ್ ಸಮಸ್ತಶತ್ರುಗಣಮುಮಾ
ರೀಮೊಳಗಾಜು ಕುರಾಂತಕ
ದೇವ ಸಹಾಯ್ಯಗಳವರ್ಗೆ ಮಾರಯೋಜ್ಜರರ ”

ಸಂದೇಹಗಳೂ, ಸೂಚನೆಗಳೂ (ಅದೇ : ಅಕ್ಟೋಬರ ೧೯೧೯ : ಪು. ೧೭೭)

ಕನ್ನರ, ಕನ್ನಡಿ, ಕನ್ನಡ


ಈ ಪದಗಳ ರೂಪವ್ಯುತ್ಪತ್ತಿಗಳ ಬಗೆಗೆ ಚರ್ಚಿಸಲಾಗಿದೆ.

ರನ್ನನ ಪಾಠ (ಅದೇ : ಪು. ೧೭೮)


“ ದರವೃಷಮುಮಂಬಸುಂಬರಾಜಾದಿತ್ಯರಕಾಮಗಿಸಿ ಶಬಶಬ ” ಎಂದಿರುವುದರಿಂದ ರನ್ನನು ಪ್ರಯೋಗಿಸಿದನು. ಇದು ಯಾರ ಮೇಲೆ ಬಿಟ್ಟ ಬಾಣ ? ಪಂಪನು ಈ ಮಾತುಗಳನ್ನು ಪ್ರಯೋಗಿಸಿದನು. ಆದಿಪುರಾಣದಲ್ಲಿ ‘ ಮನಮೊಲ್ವುತನ ಗಾಡಿಯಿಂ ದರವೃ ರಂಗಂಬಾಕೆಗಳ್ ’ (೭೫) ‘ ಧರ್ಮಬಿಂಬಂಗಳಿಂ ಪಾಂದು ಪುಷ್ಪಕೆದರವೃಂದಕಾದ ’ (೭೦) ಈ ವಾಕ್ಯಗಳು ಕಾಣುತ್ತವೆ. ಪಂಪನ ಸ್ವತ್ತುಗಳನ್ನು ರನ್ನನು ದೋಚಿಸಿದನೊ, ಅಥವಾ ಅವರ ನಡುವೆ ಕಳೆದುಹೋದ ೫೦ ವರ್ಷಗಳೊಳಗೆ ಕವಿಗಳ ವಾಕ್ಪದ್ಧತಿ ಮಾರ್ಪಟ್ಟಿತೋ ? ”

—












[illegible]



[illegible]



[illegible]



[illegible]

ಸಂಸ್ಕೃತ ಪಾಂಡಿತ್ಯಕ್ಕೆ ಇನ್ನೊಂದು ಹೆಸರು. ಅವರು ಪಂಡಿತ ದಿಗ್ಗಜ. ಅವರ ಬಗೆಗೆ ಸ್ವತಃ ಆಚಾರ್ಯರಿಗೆ ಅಪಾರವಾದ ಅಭಿಮಾನವಿದೆ. 'ಬಾಗಿಲುಕೋಟೆಯ ಆಚಾರ್ಯರು' ಎಂಬ ತಮ್ಮ ಸುಂದರವಾದ ಪ್ರಬಂಧದಲ್ಲಿ ಸ್ವಾಮಿರಾಜಾಚಾರ್ಯರ ಜೀವನ ಚರಿತ್ರೆಯನ್ನು ಆಚಾರ್ಯರು ಹೀಗೆ ಕೊಟ್ಟಿದ್ದಾರೆ. ಇದರಲ್ಲಿ ವಾಸುದೇವಾಚಾರ್ಯರ ಪಾಂಡಿತ್ಯದ ಒಪ್ಪೆಲೆಯನ್ನೂ ಮತ್ತು ಅವರ ಮೋಹಕವಾದ ಬರವಣಿಗೆಯ ಶೈಲಿಯನ್ನೂ ಕಾಣಬಹುದು :

"ಕವಿನುತ ಕರ್ನಾಟಕದಲ್ಲಿ ಪಂಡಿತರಿಗೆ ಗಂಡುಮೆಟ್ಟಾಗಿರುವ ಬಾಗಲಕೋಟೆಯ ಸಮೀಪದಲ್ಲಿ ಘಟಪ್ರಭಾ ನದಿಯ ದಂಡೆಯ ಮೇಲೆ ಇರುವದೊಂದು ರಮಣೀಯವಾದ ಪ್ರದೇಶದಲ್ಲಿ ಹೆರಕಲ್ಲು ಎಂಬ ಚಿಕ್ಕದಾದ ಗ್ರಾಮವಿರುತ್ತದೆ. ಗ್ರಾಮದ ದಕ್ಷಿಣ ಮರ್ಯಾದೆಯಾಗಿದ್ದ ಗುಡ್ಡವನ್ನು ಅಡ್ಡ ಸೀಳಿ ಘಟಪ್ರಭೆಯು ಒಳ್ಳೇ ಆರ್ಭಟೆಯಿಂದ ಹೆರಕಲ್ಲಿನ ಪೂರ್ವಮರ್ಯಾದೆಯಾಗಿ ಹರಿದು ಹೋಗುತ್ತದೆ. ಊರ ಮಗ್ಗುಲೊತ್ತರಿಸಿ ಹಾಯುತ್ತಿರುವ ಆ ನಿರ್ಮಲವಾದ ನದಿಯ ಸೌಲಭ್ಯಕ್ಕಾಗಿಯೂ, ಊರಿನ ದಕ್ಷಿಣ ಪಶ್ಚಿಮ ಮರ್ಯಾದೆಗಳಾಗಿರುವ ಪರ್ವತಗಳ ವೃಕ್ಷಮಯವಾದ ಘನವಾದ ಶೋಭೆಗೆ ಮೆಚ್ಚಿಯೂ, ಪೂರ್ವ ಕಾಲದಲ್ಲಿ ಬ್ರಾಹ್ಮಣರು ಹೆರಕಲ್ಲ ಗ್ರಾಮವನ್ನು ತಮ್ಮ ಅಗ್ರಹಾರವನ್ನಾಗಿ ಮಾಡಿಕೊಂಡಿದ್ದರು.

ನ್ಯಾಯ ವೇದಾಂತಾದಿ ಷಟ್‌ಶಾಸ್ತ್ರಗಳಲ್ಲಿ ಪಾರಂಗತರಾದ ಪಂಡಿತರೂ, ಪದಕ್ರಮ ಜಟಾ ಘನಾಂತವಾಗಿ ಅಸ್ಖಲಿತವಾದ ವಾಣಿಯಿಂದ ವೇದಪಠಣವನ್ನು ಮಾಡುವ ವಿಪ್ರೋತ್ತಮರೂ, ಕಾವ್ಯ ನಾಟಕ ಅಲಂಕಾರಾದಿಗಳಲ್ಲಿ ಒಳ್ಳೇ ಮಾರ್ಮಿಕರಾದ ರಸಿಕರೂ ಅಗ್ನಿಹೋತ್ರಾದಿಗಳಲ್ಲಿ ನಿರತರಾಗಿರುವ ದೀಕ್ಷಿತರೂ ಅಲ್ಲಿ ವಾಸ ಮಾಡಿರುವದರಿಂದ ಹೆರಕಲ್ಲ ಗ್ರಾಮವು ವಿದ್ಯಾಪಕ್ಷಪಾತಿಗಳಾಗಿದ್ದ ಶ್ರೀಮಂತರಿಂದ ಪೂಜ್ಯವಾದ ಕ್ಷೇತ್ರವೇ ಆಗಿತ್ತು. ಸಂಸ್ಕೃತ ವಿದ್ಯೆಯ ಹ್ರಾಸಕಾಲವು ಪ್ರಾಪ್ತವಾದ ಬಳಿಕಾದರೂ ಇಂದಿಗೆ ೭೫ ವರ್ಷಗಳ ಪೂರ್ವದಲ್ಲಿ ಆ ಗ್ರಾಮವು ತನ್ನ ಬಿರುದನ್ನು ಕಳಕೊಂಡಿದ್ದಿಲ್ಲ. ತುಲಸೀ ವನದ ಮಧ್ಯದಲ್ಲಿರುವ ಶ್ರೀ ನಾರಾಯಣ ದೇವರ ರಮಣೀಯವಾದ ಮಂದಿರದಲ್ಲಿ ಕುಳಿತು ಪಂಡಿತರು ತಮ್ಮ ತಮ್ಮೊಳಗೆ ಪೂರ್ವಪಕ್ಷ ಪರಪಕ್ಷಗಳನ್ನು ನಡಿಸುತ್ತಲೇ ಇದ್ದರು. ಮನೆ ಮನೆಗಳಲ್ಲಿ ವೇದಘೋಷವು ಅವಿರತವಾಗಿ ಕೇಳ ಬಂದೇ ಬರುತ್ತಿತ್ತು. ವನೋಪವನಗಳಲ್ಲಿಯ ವೃಕ್ಷಗಳ ನೆಳಲಿನಲ್ಲಿ ಕುಳಿತುಕೊಂಡು, ನ್ಯಾಯ, ವ್ಯಾಕರಣ ಶಾಸ್ತ್ರಗಳನ್ನು ಕಲಿಯುವ ವಿದ್ಯಾರ್ಥಿಗಳು ಗುರುಗಳು ಹೇಳಿಕೊಟ್ಟ ವಿಷಯಗಳ ಚಿಂತನೆ ಮಾಡುತ್ತಲೇ ಇದ್ದರು.

ಗುರುಗಳ ಪೂಜೆಯ ಉಪಕರಣಗಳನ್ನು ಹರಟೀ ಕೊಡುತ್ತ ನದಿಯ ಘಾಟಿನಲ್ಲಿ ಕುಳಿತು ತೊಳೆಯುವದು ಅಲ್ಲಿಯ ಶಿಷ್ಯವರ್ಗಕ್ಕೆ ಒಂದು ವಿನೋದದ ಆಟವೇ ಆಗಿತ್ತು. ದೇವತಾರ್ಚನಕ್ಕಾಗಿ ಹೂ ತುಳಸಿಗಳನ್ನು ತೆಗೆಯುವದು ಅವರಿಗೆ ಪವಿತ್ರವಾದ ಕರ್ತವ್ಯಕರ್ಮವೇ. ಗುರುಗಳ ಮನೆಯಲ್ಲಿ ನೀರು ತುಂಬುವದೆಂದರೆ ತಮ್ಮ ಶಕ್ತಿ ಚಾಪಲ್ಯಗಳಿಗೊಂದು ಸ್ಫೂರ್ತಿಯುತವಾದ ವ್ಯಾಯಾಮವೇ ಎಂದು ತಿಳಿದು ಅವರು ನಾ ಮುಂದೆ ನೀ ಮುಂದೆ ಎನ್ನುತ್ತ ಗಡಿಬಿಡಿಯಿಂದ ಕೊಡಗಳನ್ನು ಹೊತ್ತಾಡುತ್ತಿದ್ದರು. ನದಿಯಲ್ಲಿ ಈಸುತ್ತ ಸ್ಫೂರ್ತಿಯಿಂದ ಬಡಿದಾಡುವದಕ್ಕೊಂದು ನೆವ ಬೇಕಾದ್ದರಿಂದ ಆ ಪೋರರು ಗುರುಭಕ್ತಿ ಪುರಸ್ಸರವಾಗಿ ಅಧ್ಯಾಪಕರ ಬಟ್ಟೆಗಳನ್ನು ತೊಳೆಯುವ ದಕ್ಕೆ ನದಿಗೆ ಹೋಗುತ್ತಿದ್ದರು. ಅನಾಧ್ಯಾಯದ ದಿವಸವು ಪ್ರಾಪ್ತವಾದರಂತೂ ಊರಿಂತೂರೆಲ್ಲ ಆ ವಿದ್ಯಾರ್ಥಿಗಳು ನಡಿಸಿದ ಅನರ್ಥಕ್ಕೆ ಎಣೆಯೇ ಇಲ್ಲ. ಈ ಓಣಿಯಲ್ಲಿ ಅವರು ಘಣೇಂದಾಡಿ ಹೋಗಿ ಬರುವವರ ಹಾದಿಯನ್ನು ಕಟ್ಟಿಬಿಡುವರು. ಆ ಓಣಿಯಲ್ಲಿ ಅವರಾಡುತ್ತಿರುವ ಚಿಣಿ ಕೋಲಾಟದಿಂದ ಎಷ್ಟೋ ಜನ ಹೆಂಗಸರ ಕೊಡಗಳೊಡೆದು ವ್ಯಾಜ್ಯಗಳು ನಡೆಯುವವು. ಕೆಲವರು

ಬೋರೇ ಗಿಡಗಳನ್ನು ಒಳತಾಗಿ ಅಲ್ಲಾಡಿಸಿ ಹಣ್ಣು ಕಾಯಿ ಎಲೆಗಳನ್ನು ಕೂಡಿಸಿ ಉದುರಿಸುತ್ತಿರುವರು. ಉನ್ನತವಾದ ವೃಕ್ಷಾಗ್ರಗಳಲ್ಲಿ ಶಾಖಾಮೃಗಗಳಿಗೂ ನಿಲುಕದಿರುವ ಕಾಯಿಗಳನ್ನು ಆ ಬಾಲಕರು ಜಿದ್ದುಕಟ್ಟಿ ಹರಿಯುವರು. ಹುಡುಗರು ನಡಿಸಿರುವ ಅಂಥ ಅನರ್ಥಗಳನ್ನು ನಿಲ್ಲಿಸಬೇಕೆಂದು ಹಿಟ್ಟು ಮಾಡಲು ಬಂದ ಆ ವೃದ್ಧರ ನುಡಿಗಳನ್ನು ಯಾರಾದರೂ ಕಿವಿಯ ಮೇಲೆ ಹಾಕಿಕೊಂಡಿದ್ದರೆ ಆಣೆ.

ಒಂದು ದಿನ ಹತ್ತೆಂಟು ಜನ ವಿದ್ಯಾರ್ಥಿಗಳು ಚಪಲನಾದ ವಟುವಾಗಿರುವ ತಮ್ಮ ಸಹಾಧ್ಯಾಯಿಯೋರ್ವನನ್ನು ಗುರುಗಳಾಜ್ಞೆಯಿಂದ ಹಿಡಿಯುವದಕ್ಕಾಗಿ ಅವನ ಬೆನ್ನಟ್ಟಿ ಓಡಾಡುತ್ತಿದ್ದರು. ಸಾಹಸಿಯಾದ ಆ ಬಟುವು ಟಣ್ಣನೆ ಬೇಲಿಯನ್ನು ಜಿಗಿದು ನದಿಯ ದಂಡೆಯ ಮೇಲಿರುವ ತೋಟದಲ್ಲಿ ಹೊಕ್ಕುಕೊಂಡನು. ಬಲಿತ ವಯಸ್ಸಿನವರಾದ ಕೆಲ ಜನ ವಿದ್ಯಾರ್ಥಿಗಳು ಆ ಬೇಲಿಯನ್ನು ಹಿರಿದು ತೋಟದಲ್ಲಿ ಹೊಕ್ಕು ಆ ಬಟುವನ್ನು ಸುತ್ತುಗಟ್ಟಿದರು. "ಹಿಡಿ, ಭಾರತೀರಮಣ" "ಬಿಡಬೇಡ, ಗೋವಿಂದ" ಎಂದು ಕೂಗುತ್ತ ಅವರಿನ್ನು ಆ ಪೋರನನ್ನು ಹಿಡಿಯುವಷ್ಟರಲ್ಲಿಯೇ ಅವನು ಇನಿಟಿಯ ಚಾಪಲ್ಯದಿಂದ ಬಳಿಯಲ್ಲಿರುವ ಹುಣಸೆಯ ಹೆಮ್ಮರವನ್ನೇರಿ ಕುಳಿತನು. ಹಿಡಿಯಬಂದ ಲಂಗೋಟಿಯವರಾದರೂ ವಾನರರ ಪಿತಾಮಹರು. ಅವರು ಸರಸರನೆ ಆ ಮರವನ್ನೇರಿ ಗುರುಪುತ್ರನನ್ನು ಹಿಡಿಯುವ ಸಾಹಸ ನಡಿಸಿದರು. ನೆಲದ ಮೇಲಿನ ಓಡಾಟಕ್ಕಿಂತಲೂ ಹೆಚ್ಚಿನದಾದ ಗೊಂದಲವು ಗಿಡದ ಮೇಲೆ ನಡೆಯಿತು. ಕಡೆಗೆ ಭಾರತೀರಮಣನು ಗುರುಪುತ್ರನಿದ್ದ ತುದಿಯ ಕೊಂಬೆಗೆ ಬಂದು ಅವನನ್ನು ಇನ್ನು ಹಿಡಿಯುವವನು. ಅಕೋ! ಅಷ್ಟರಲ್ಲಿ ಕೆಳಗೆಯೇ ತುಂಬಿ ಹರಿಯುವ ನದಿಯಲ್ಲಿ 'ಧುಡುಮ್ಮ!'. ಎಂಬ ಗಂಭೀರವಾದ ಸಪ್ಪಳವಾಯಿತು. "ಅಯ್ಯೋ! ಘಾತವಾಯಿತು! ಹುಡುಗ ಸತ್ತನೆಂ"ದವರೇ ಮರದ ಮೇಲಿನವರೆಲ್ಲರೂ ಧಡಧಡನ್ನನೆ ಹೊಳೆಯಲ್ಲಿ ಹಾರಿಕೊಂಡರು. ಆದರೆ ಪ್ರವಾಹದ ಸೆಳವಿಗೆ ಅಂಜಿ ಅವರೆಲ್ಲರೂ ಮರಳಿ ದಂಡೆಗೆ ಬಂದರು."[೧]

ಹೀಗೆ ಬದುಕಿ ಬಂದ ಹುಡುಗನೇ ಮುಂದೆ ಕನ್ನಡ ನಾಡಿನ ಕೀರ್ತಿಯನ್ನು ದಶದಿಕ್ಕುಗಳಲ್ಲಿಯೂ ಬೆಳಗಿಸುವವನಾಗಿದ್ದನು. ಆ ಹುಡುಗನೇ ಸ್ವಾಮಿರಾಯಾಚಾರ್ಯ. ಅವರ ತಂದೆ ಯಲಗುರ್ದಾಚಾರ್ಯರು. ಮಗ ಬದುಕಿ ಬಂದದ್ದನ್ನು ನೋಡಿ ಯಲಗುರ್ದಾಚಾರ್ಯರಿಗೆ ತುಂಬಾ ಆನಂದವಾಯಿತು. ಈ ಮನೆತನದ ಬಗೆಗೆ ವಾಸುದೇವಾಚಾರ್ಯರು ಹೀಗೆ ಹೇಳುತ್ತಾರೆ :

"ಯಲಗುರದಾಚಾರ್ಯರೆಂದರೆ ಯಾರೆಂದು ನಮ್ಮ ವಾಚಕರು ಕೇಳಬಹುದು. ಕೆರೂರ ಗ್ರಾಮದಲ್ಲಿ ಘನ ವಿದ್ವಾಂಸರದೊಂದು ಮನೆತನವಿರುತ್ತದೆ. ಭಾರದ್ವಾಜ ಗೋತ್ರೋತ್ಪನ್ನರಾದ ಆ ಮಹನೀಯರು ಯಜುರ್ವೇದ ತೈತ್ತರೀಯ ಶಾಖೆಯಲ್ಲಿಯ ಆಪಸ್ತಂಬ ಸೂತ್ರಾಧ್ಯಾಯಿಗಳು. ಯಲಗುರದಾಚಾರ್ಯರ ತಂದೆ ಕಕ್ಕಂದಿರಾದ ಶ್ರೀನಿವಾಸಾಚಾರ್ಯ ಹಾಗೂ ತಮ್ಮಣ್ಣಾಚಾರ್ಯರೆಂಬ ಅಸಾಧ್ಯರಾದ ಬುದ್ಧಿವಂತರು, ಜಗದ್ವಿಖ್ಯಾತರಾದ ಶ್ರೀಮತ್ ಧೀರೇಂದ್ರತೀರ್ಥ ಸ್ವಾಮಿಗಳವರ ಬಳಿಯಲ್ಲಿ ಅಧ್ಯಯನ ಮಾಡಿ ಷಟ್‌ಶಾಸ್ತ್ರ ಪಂಡಿತರಾಗಿ ಪಾಲಕೀಪದಸ್ಥರಾಗಿ ಹೋದರು. ಯಲಗುರದಾಚಾರ್ಯರಾದರೂ ಮಾನ್ಯರಾದ ಪಂಡಿತರು. ಆದರೆ ಅವರೊಳ್ಳೆ ಸಾಧುವೃತ್ತಿಯುಳ್ಳವರೂ ದಂಭರಹಿತರೂ ಲೌಕಿಕವನ್ನರಿಯದವರೂ ಆಗಿದ್ದರಿಂದ ಗೃಹಕೃತ್ಯದ ತೊಂದರೆಗೆ ಬೇಸತ್ತು ವೃತ್ತಿಸ್ವಾಸ್ತಿಗಳನ್ನು ಬಿಟ್ಟುಕೊಟ್ಟು ಹೆರಕಲ್ಲ ಗ್ರಾಮಕ್ಕೆ ತಮ್ಮ ಕುಟುಂಬವನ್ನು ತೆಗೆದುಕೊಂಡು ಬಂದಿದ್ದರು. ಯಲಗುರದಾಚಾರ್ಯರ ಸಂತಾನದ ಅಭಿವೃದ್ಧಿಯಾದ ಬಳಿಕ

೧ ಸಚಿತ್ರ ಭಾರತ : ೧೯೧೫.

ಅವರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ (ಲೌಕಿಕ ವಿದ್ಯಾಭ್ಯಾಸಕ್ಕಾಗಿ) ಬಾಗಲಕೋಟೆಯ ಪಟ್ಟಣಕ್ಕೆ ಬಂದು ಅಲ್ಲಿ ವಾಸ ಮಾಡಿಕೊಂಡಿದ್ದರು. ಮನೆಗೆ ಮುಖ್ಯರಾಗಿರುವವರು ಪಂಡಿತರೂ, ಧರ್ಮ ನಿಷ್ಠರೂ, ಸತ್‌ಶೀಲರೂ ಆಗಿರಲು ಅವರ ಪುತ್ರಮಿತ್ರ ಕಳತ್ರಾದಿಗಳೆಲ್ಲರೂ ಅವರಂತೆಯೇ ಆಗಿರುವ ದೇನು ಆಶ್ಚರ್ಯ ? ದೇವತಾರ್ಚನ, ಪುರಾಣಶ್ರವಣ, ವಿದ್ಯಾದಾನ, ಅನ್ನಸಂತರ್ಪಣೆ, ಶಿಷ್ಟಸಂಭಾ ವನೆಗಳು ಯಲಗುರದಾಚಾರ್ಯರ ಮನೆಯಲ್ಲಿ ಸತಿಸುತರ ಆಸ್ಥಾಪೂರ್ವಕವಾದ ಸಹಾಯ್ಯದಿಂದ ಯಥಾಸಾಂಗವಾಗಿ ಸಾಗುತ್ತಿದ್ದವು. ವಿದ್ಯಾಸಂಪತ್ತಿಗಿಂತಲೂ ಹೆಚ್ಚಿನ ಸಂಪತ್ತು ಮತ್ತೊಂದು ತಾನಿಲ್ಲ; ಅನ್ನದಾನಕ್ಕಿಂತಲೂ ಬೇರೊಂದು ಆತ್ಮತುಷ್ಟಿಯಿಲ್ಲ. ಯಲಗುರದಾಚಾರ್ಯರ ಆರು ಜನ ಮಕ್ಕಳಲ್ಲಿ ಎಲ್ಲರೂ ಸಂಸ್ಕೃತ ಭಾಷಾವಿಶಾರದರಾಗಿರುವದಲ್ಲದೆ, ಅವರಲ್ಲಿ ಒಬ್ಬರಿಗೆ ಪುರಾಣ ಗಳಲ್ಲಿ ಅಭಿರುಚಿಯು. ಒಬ್ಬರಿಗೆ ನ್ಯಾಯ ವ್ಯಾಕರಣಗಳಲ್ಲಿ ಮಿಗಿಲಾದ ಲಕ್ಷ್ಯ; ಸ್ವಯಂವ್ಯಕ್ತನಾದ ಗಣಿತಜ್ಞನೋರ್ವನಂತೂ ಆ ವಿಷಯಲ್ಲಿ ಎಲ್ಲರಿಗೂ ಮೀರಿ ನಿಂತನು. ಉಳಿದ ಮೂವರು ಬುದ್ಧಿ ವಂತರು; ಸನ್ಮಾನ್ಯರಾದ ಲೌಕಿಕರಾಗತಕ್ಕವರು.''

ಈ ಯಲಗುರದಾಚಾರ್ಯರ ಎರಡನೆಯ ಮಕ್ಕಳೇ ಸ್ವಾಮಿರಾಚಾರ್ಯರು. ಸ್ವಾಮಿ-ರಾಚಾರ್ಯರು ತುಂಬಾ ಕುಶಾಗ್ರಮತಿಗಳು. ಹೆಚ್ಚಿನ ವೈದಿಕ ವಿದ್ಯಾಭ್ಯಾಸಕ್ಕಾಗಿ ತೀರ ಚಿಕ್ಕ ವಯಸಿ ನಲ್ಲಿಯೇ ಪುಣೆ ಪಟ್ಟಣಕ್ಕೆ ಹೋಗಿ, ಅಲ್ಲಿ ಒಬ್ಬ ಶಾಸ್ತ್ರಿಗಳ ಹತ್ತಿರ ವ್ಯಾಸಂಗಕ್ಕಾಗಿ ನಿಂತರು. "ಲಬ್ಧಪ್ರತಿಷ್ಠರಾದ ಶಾಸ್ತ್ರಿಗಳವರಿಗೆ ಯಾರ ಲಕ್ಷ್ಯವೂ ಇದ್ದಿಲ್ಲ. ಕರ್ನಾಟಕಸ್ಥರಂತೂ ಅವರಿಗೆ ತುಚ್ಛರಾಗಿ ಕಾಣುತ್ತಿದ್ದರು.'' ಆದರೆ, ಅವರಲ್ಲಿ ಪಾಂಡಿತ್ಯದಕಿಂತ, ಆಡಂಬರವೇ ಹೆಚ್ಚಾಗಿತ್ತು. ಶಿಷ್ಯ ಸ್ವಾಮಿರಾಚಾರ್ಯರು ಶಾಸ್ತ್ರಿ ಬುವಾರವರ ಕೈಯಲ್ಲಿ ಅಧ್ಯಯನಕ್ಕೆ ನಿಂತ ಕೆಲವೇ ದಿವಸ ಗಳಲ್ಲಿಯೇ ಶಾಸ್ತ್ರಿ ಬುವಾರವರ ವಿದ್ಯೆಯ ಹಂಡೆ ಬರಿದಾಯಿತು. ಆದರೂ, ಅಹಂಕಾರವೇನೂ ಕಡಿಮೆಯಾಗಲಿಲ್ಲ. ಆಚಾರ್ಯರು ಶಾಸ್ತ್ರಿಗಳನ್ನು ಬಿಟ್ಟು, ಕಾಶಿಗೆ ಹೋಗುವದೆಂದು ನಿಶ್ಚಯಿಸಿ ದರು. ಆಗ ಶಾಸ್ತ್ರಿಗಳು, "ಯಾಕೆ ಆಚಾರ್ಯರೇ, ಈಗಾಗಲೇ ಹೊರಟಿರೇನು ? ನಮ್ಮಲ್ಲಿ ಇದ್ದ ದ್ದರ ಪ್ರಯೋಜನವೇನಾಯಿತು ?" ಎಂದು ಕೊಂಕಾಗಿ ಕೇಳಿದರು. ಆಚಾರ್ಯರು ಬಾಗಿಲುಕೋಟೆಯ ಕೆಚ್ಚಿನವರು, ಬೌದ್ಧಿಕ ಶ್ರೀಮಂತಿಕೆಯುಳ್ಳವರು. ಶಾಸ್ತ್ರಿಗಳಿಗೆ ಉತ್ತರ ಹೇಳಿಯೇ ಬಿಟ್ಟರು : "ಪ್ರಯೋಜನವಾಗಲಿಲ್ಲವೆಂದರೂ ಒಂದು ಮಾತಿನ ಜ್ಞಾನವು ನನಗಾಯಿತು. ದಂಭರಹಿತರಾದ ನಮ್ಮ ತಂದೆಯವರು ಸಾಮಾನ್ಯರಾದ ಪಂಡಿತರೆಂದು ಇಷ್ಟು ದಿನ ನಾನು ತಿಳಿದಿದ್ದೆನು. ದೊಡ್ಡ ಪಂಡಿತ ಡಂಕೆಯನ್ನು ಹೊಡಿಸುತ್ತಿರುವರಾದ ತಮ್ಮ ಪರಿಚಯವು ನನಗಾದ ಬಳಿಕ ತಮಗಿಂತಲೂ ನನ್ನ ತಂದೆಯವರು ಕಡಿಮೆಯ ವಿದ್ವಾಂಸರಲ್ಲವೆಂದು ನನಗೆ ಜ್ಞಾನವಾದದ್ದು ಚಿಕ್ಕದಾದ ಲಾಭವಲ್ಲ." ಇದರಲ್ಲಿ ಕೆರೂರ ಮನೆತನದ ಪಾಂಡಿತ್ಯದ ಕೆಚ್ಚನ್ನು ಕಾಣುತ್ತೇವೆ.

ಹೀಗೆ ಹೇಳಿದ ಸ್ವಾಮಿರಾಚಾರ್ಯರು ಕಾಶಿಗೆ ಹೋಗಿ, ಅಲ್ಲಿ ನೆಲೆಸಿದ್ದ ಕನ್ನಡಿಗರಾದ ಮಹಾ ಮಹೋಪಾಧ್ಯಾಯ ಚಿಕ್ಕೇರೂರ ಹನುಮಂತಾಚಾರ್ಯರಲ್ಲಿ ವ್ಯಾಸಂಗವನ್ನು ಸಾಗಿಸಿದರು. ಹನು ಮಂತಾಚಾರ್ಯರ ಪಾಠಶಾಲೆ ಗ್ವಾಲೇರಕ್ಕೆ ಹೋದಾಗ ಆಚಾರ್ಯರೂ ಅಲ್ಲಿ ಹೋಗಿ, ಆರು ವರುಷ ಅಧ್ಯಯನ ಮಾಡಿದರು. ಅಲ್ಲಿಂದ ಬಡೋದೆಗೆ ಹೋಗಿ, ತಿರುಗಿ ಬಾಗಿಲುಕೋಟೆಗೆ ಬರುವದ ರಲ್ಲಿಯೇ ಸ್ವಾಮಿರಾಚಾರ್ಯರ ತೀರ್ಥರೂಪರಾದ ಯಲಗುದ್ರಾಚಾರ್ಯರು ಶಕೆ ೧೭೮೮ರ (ಅಂದರೆ ಸನ್ ೧೮೬೬) ಕ್ಷಯ ಸಂವತ್ಸರ ಪುಷ್ಯವದಿ ಅಮಾವಾಸ್ಯೆಯ ದಿವಸ ವೈಕುಂಠವಾಸಿಗಳಾ ಗಿದ್ದರು. ಆಗ ಸ್ವಾಮಿರಾಚಾರ್ಯರಿಗೆ ಕೇವಲ ೨೫ ವರುಷ. ಅವರನ್ನು ಕಂಡ ಘನಪಂಡಿತ ರೋರ್ವರು "ಏನು ತರುಣರೇ, ನಿಮ್ಮ ತಲೆಯ ಮಾಸವನ್ನೂ ಆರಿಲ್ಲ. ನೀವು ಇಷ್ಟು ಘನ ವಿದ್ವಾಂಸರೇ ? '' ಎಂದು ಆಶ್ಚರ್ಯ ವ್ಯಕ್ತಪಡಿಸಿದರು. ಅಲ್ಲಿಂದ ಆಚಾರ್ಯರು ಗದ್ವಾಲಕ್ಕೆ

ಹೋಗಿ, ಅಲ್ಲಿ ಸುಬ್ಬಾಶಾಸ್ತ್ರಿ ಎಂಬವರನ್ನು ವಾದದಲ್ಲಿ ಸೋಲಿಸಿದರು. ಉತ್ತರಾದಿಮಠದ ಶ್ರೀಗಳಾದ ಸತ್ಯಪರಾಕ್ರಮಸ್ವಾಮಿಗಳ ಸಹೋದರರು ಆಚಾರ್ಯರ ಕೂಡ ವಾಕ್ಯಾರ್ಥವನ್ನು ಮಾಡಬೇಕೆಂದು ಬಯಸಿದಾಗ, ಸ್ವತಃ ಸತ್ಯಪರಾಕ್ರಮ ಸ್ವಾಮಿಗಳು "ಯಾರೊಡನೆ ಪ್ರಸಂಗ ಮಾಡಲಿಚ್ಛಿಸುವಿ ನೀ ? ಆಚಾರ್ಯರೊಡನೆ ಪ್ರಸಂಗ ಮಾಡಿ ಪಾರಾಗುವೆನೆಂಬ ಧೈರ್ಯ ನನಗಿಲ್ಲ. ನಿನ್ನ ಪಾಡೇನು ?'' ಎಂದು ಹೇಳಿ ಆಚಾರ್ಯರಿಗೆ ಮೇಣೆಯಲ್ಲಿ ಕುಳಿತು ಸಂಚಾರ ಮಾಡುವ ಬಹುಮಾನವನ್ನು ಕೊಟ್ಟು ಗೌರವಿಸಿದರು. ಸ್ವಾಮಿರಾಯಾಚಾರ್ಯರದು ಇಂತಹ ಪಾಂಡಿತ್ಯ ! ಇಂತಹ ವಿದ್ಯಾದರ್ಪ !! ಸನ್ ೧೮೮೦ರಲ್ಲಿ ಬಡೋದೆಯ ಸಂಸ್ಥಾನದವರು ಆಚಾರ್ಯರನ್ನು ತಮ್ಮಲ್ಲಿ ಇಟ್ಟುಕೊಳ್ಳಬೇಕೆಂದು ಅಪೇಕ್ಷಿಸಿ, ಆಂದಿನ ಸೋವಿ ದಿನಗಳಲ್ಲಿ ಅವರಿಗೆ ಪ್ರತಿ ತಿಂಗಳು ೧೫೦ ರೂಪಾಯಿ ಕೊಡುವುದಾಗಿ ಹೇಳಿ ಕಳಿಸಿದರು. ಆಚಾರ್ಯರು ಇದಕ್ಕೆ ಒಪ್ಪಲಿಲ್ಲ. ಆಚಾರ್ಯರ ತಮ್ಮಂದಿರಾದ ವಕೀಲ ರಾಘವೇಂದ್ರಾಚಾರ್ಯರಿಗೆ ಆಚಾರ್ಯರು ಬಡೋದೆಗೆ ಹೋಗಬೇಕೆಂದಿತ್ತು. ಅವರು ಹಾಗೆ ಆಚಾರ್ಯರಿಗೆ ಸೂಚಿಸಿದಾಗ, ಅವರು "ರಾಘವೇಂದ್ರ, ಬಡೋದೆಯ ಸಂಸ್ಥಾನಕ್ಕೆ ಒಬ್ಬ ಪಂಡಿತನು ಬೇಕಾಗಿರುವನೆಂದು ತಿಳಿದು ನಾನಿಷ್ಟು ಕಷ್ಟಪಟ್ಟು ವಿದ್ಯಾರ್ಜನವನ್ನು ಮಾಡಲಿಲ್ಲ. ಕರ್ನಾಟಕದ ಹೆಸರನ್ನೂ, ವಿಶೇಷತಃ ಬಾಗಿಲುಕೋಟೆಯ ಹೆಸರನ್ನೂ ಬೆಳಕಿಗೆ ತರಬೇಕೆಂಬ ಉದ್ದೇಶವನ್ನಿಟ್ಟುಕೊಂಡೇ ನಾನು ಪಂಡಿತನಾಗಿರುವೆನು'' ಎಂದು ಸ್ವಾಭಿಮಾನಪೂರ್ವಕವಾಗಿ ಹೇಳಿದರು.[೧]

ಸ್ವಾಮಿರಾಯಾಚಾರ್ಯರು ಒಂದು ಓಣಿಯಲ್ಲಿ ಹೊರಟರೆಂದರೆ, ಅಂತಿಂಥ ಬಣಗು ಆಚಾರ್ಯರಿಗೆ ಅವರೆದುರು ಹಾಯ್ದು ಹೋಗುವ ಧೈರ್ಯವಾಗುತ್ತಿರಲಿಲ್ಲ. ಅವರೆದುರು ಶಾಲನ್ನು ಹೊತ್ತುಕೊಳ್ಳುವದಂತೂ ದೂರದ ಮಾತು. ಒಂದು ಸಲ ಯಾರೋ ವೈದಿಕರಲ್ಲಿ ಕೊಟ್ಟ ಶಾಲೊಂದನ್ನು ಸ್ವಾಮಿರಾಯಾಚಾರ್ಯರು ಊರಲ್ಲಿಲ್ಲವೆಂದು ಭಾವಿಸಿ ಪಂಢರಿ ಶೇಷಾಚಾರ್ಯರು ಹೊತ್ತುಕೊಂಡು ಹೊರಟಾಗ, ಎದುರಿಗೆ ಬಂದ ಸ್ವಾಮಿರಾಯಾಚಾರ್ಯರನ್ನು ಕಂಡು ಸಂದೀ ಬಿದ್ದು ಓಡಬೇಕೆಂದಾಗ, ಆಚಾರ್ಯರು " ಯಾಕೋ ಶೇಷಾ ! ನಿನ್ನ ಪಾಂಡಿತ್ಯಕ್ಕೆ ಕೋಡು ಮೂಡಿವೆಯೇನೋ " ಎಂದು ಕೇಳಿದರೆ, ಶೇಷಾಚಾರ್ಯರು ೧೫ ದಿವಸ ಮನೆ ಬಿಟ್ಟು ಹೊರಬೀಳಲಿಲ್ಲವಂತೆ! ಇಂಥ ಪ್ರಕಾಂಡ ಪಂಡಿತರು ಶಕೆ ೧೮೧೫ ರ (ಅಂದರೆ ಸನ್ ೧೮೯೩ ರ) ವಿಜಯ ಸಂವತ್ಸರದ ಆಷಾಢ ವದಿ ಪಂಚಮಿ ದಿವಸ ಅಂದರೆ ಜಯತೀರ್ಥ ಸ್ವಾಮಿಗಳ ಪುಣ್ಯತಿಥಿಯ ದಿವಸ ವೈಕುಂಠವಾಸಿಗಳಾದರು. ಆಚಾರ್ಯರ ನಿಧನವನ್ನು ಕುರಿತು, ಎಲ್ಲತ್ತೂರ ಕೃಷ್ಣಾಚಾರ್ಯರೆಂಬವರು " ಬಾಗಲಕೋಟೆಯ ಆಚಾರ್ಯರು ತೀರಿಕೊಂಡಂದಿನಿಂದ ಕಂಡಕಂಡವರು ಶಾಲು ಹೊದ್ದುಕೊಂಡು ತಾವು ಪಂಡಿತರೆಂದು ಹೇಳಿಕೊಳ್ಳಲಾರಂಭಿಸಿದ್ದಾರೆ " ಎಂದು ಉದ್ಗಾರ ತೆಗೆದರಂತೆ.

ವಾಸುದೇವಾಚಾರ್ಯರು ಯಲಗುರ್ದಾಚಾರ್ಯರ ಹಿರಿಯ ಮಕ್ಕಳಾಗಿದ್ದ ಶ್ರೀನಿವಾಸಾಚಾರ್ಯರ ಮಕ್ಕಳು. ಇದು ವಾಸುದೇವಾಚಾರ್ಯರ ಮನೆತನ. ಆದರ ಸಂಸ್ಕೃತಿ, ಪಾಂಡಿತ್ಯ, ದರ್ಪ ಈಯೆಲ್ಲ ಗುಣಗಳೂ ವಾಸುದೇವಾಚಾರ್ಯರಲ್ಲಿಯೂ ಇಳಿದು ಬಂದಿದ್ದವು.

ವಾಸುದೇವಾಚಾರ್ಯರ ಮನೆತನ ಸಂಸ್ಕೃತ ಪಾಂಡಿತ್ಯದ ಮನೆತನ. ಸ್ವತಃ ವಾಸುದೇವಾಚಾರ್ಯರು ಸಂಸ್ಕೃತ ವಿದ್ಯೆಯಲ್ಲಿ ನಿಷ್ಣಾತರಾಗಿದ್ದರಲ್ಲದೆ, ತಮ್ಮ ಇಂಗ್ಲಿಷ್ ವಿದ್ಯಾಭ್ಯಾಸಕ್ಕಾಗಿ ಪುಣೆಯಲ್ಲಿ ನೆಲೆಸಿದ್ದರು. ಹೀಗಾಗಿ ಇಂಗ್ಲಿಷ್ ಸಾಹಿತ್ಯದ ಸ್ವತಂತ್ರ ವಿಚಾರಪ್ರಣಾಲಿಯ ಪರಿಣಾಮವೂ ಅವರ ಮೇಲೆ ತುಂಬಾ ಆಗಿತ್ತು. ಹೀಗೆ, ಸಂಸ್ಕೃತ–ಇಂಗ್ಲಿಷುಗಳ ಗಂಗಾ–ಭೀಮ್ಸ(?)ದಲ್ಲಿ ಮಿಂದ ವಾಸುದೇವಾಚಾರ್ಯರು ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಬಂದದ್ದು ಒಂದು ಸಂತೋಷಕರ ಆಕಸ್ಮಿಕ

[೧] ಸಚಿತ್ರಭಾರತ : ೧೯೧೫.

ವೆಂದೇ ಹೇಳಬೇಕು. ಅದಕ್ಕೆ ಕಾರಣ, ಈ ಗಂಗಾ–ಥೇಮ್ಸ ನದಿಗಳಿಗೆ ಕಾವೇರೀ ನದಿಯು ಸಂಗಮವಾದದ್ದೇ. ಆಚಾರ್ಯರ ಒಲವು ಹೆಚ್ಚಾಗಿ ಸಂಸ್ಕೃತ ಮತ್ತು ಇಂಗ್ಲಿಷಿನ ಕಡೆಗಿತ್ತು. ಒಂದು ಸಲ ಅವರೂ, ಅವರ ಹತ್ತಾರು ಮಿತ್ರರೂ ಕೂಡಿಕೊಂಡು ಮೈಸೂರು, ಬೆಂಗಳೂರು, ಶ್ರೀರಂಗಪಟ್ಟಣಗಳನ್ನು ನೋಡಿಕೊಂಡು ಬರಬೇಕೆಂದು ಹೊರಟರು. ಹೋಗುವಾಗ ಕನ್ನಡದ ಅಭಿಮಾನ ಅಷ್ಟಾಗಿ ಇಲ್ಲದ ಆಚಾರ್ಯರು, ತಿರುಗಿ ಬರುವಾಗ ಶ್ರೀರಂಗಪಟ್ಟಣದ ಕಾವೇರೀ ನೀರನ್ನು ಕುಡಿದೋ ಏನೋ ಕನ್ನಡದ ಅಪಾರವಾದ ಅಭಿಮಾನವನ್ನು ಹೊತ್ತುಕೊಂಡು ಬಂದರು. ಆಗಲೇ ಅವರ ' ಇಂದಿರೆ ' ಎಂಬ ಪ್ರಥಮ ಸಾಮಾಜಿಕ ಕಾದಂಬರಿ ರೂಪಗೊಂಡದ್ದು. ಅಂತಲೇ 'ಇಂದಿರೆ'ಯಲ್ಲಿಯ ಕಾರ್ಯಕ್ಷೇತ್ರ ಪುಣೆ, ಮುಂಬಯಿ, ಉತ್ತರ ಕರ್ನಾಟಕ, ಮದ್ದೂರು, ಮೈಸೂರು, ಶ್ರೀರಂಗಪಟ್ಟಣಗಳನ್ನೆಲ್ಲ ವ್ಯಾಪಿಸಿನಿಂತಿದೆ. ಅಲ್ಲಿ ಮಹಾರಾಷ್ಟ್ರದ ಬಾಪ್ಕಳಪಂತನೂ ಇದ್ದಾನೆ; ಮೈಸೂರಿನ ಮದ್ದೂರ ನಟೇಶನೂ ಇದ್ದಾನೆ. ಹೀಗಾಗಿ ಆಚಾರ್ಯರಲ್ಲಿ ಭಾರತೀಯ ಪರಂಪರಾ ಪ್ರೀತಿಯಿದೆ; ಹೊಸದನ್ನು ಸ್ವೀಕರಿಸಬೇಕೆಂಬ ನವೀನ ಆಂಗ್ಲ ಪ್ರಜ್ಞೆಯೂ ಇದೆ. ಉದಾಹರಣೆಗೆ, 'ಇಂದಿರೆ' ಕಾದಂಬರಿಯಲ್ಲಿ ಬರುವ 'ಉಪಾಸನಾ ಸಮಾಜದ ಸಭೆ'ಯ ಈ ಚರ್ಚೆಯನ್ನು ಗಮನಿಸಬಹುದು. ಇದರಲ್ಲಿ ಬರುವ ತತ್ಕಾಲೀನ ಉಲ್ಲೇಖಗಳೂ ಸಾಮಾಜಿಕಇತಿಹಾಸದ ದೃಷ್ಟಿಯಿಂದ ಮಹತ್ವಪೂರ್ಣವಾಗಿವೆ :

"ಬ್ಯಾನರ್ಜಿ : ಆದ್ಯರೆ, ನೀವು ಪುನರ್ವಿವಾಹ ಸಶಾಸ್ತ್ರವೆಂದು ಮಾಡಿಕೊಂಡಿರೊ, ಇದು ಸಮಾಜಕ್ಕೆ ಹಿತಕರವಾದದ್ದೆಂದು ಮಾಡಿಕೊಂಡಿರೊ ?

ಫಣೀಂದ್ರಾಚಾರ್ಯ : ಶಾಸ್ತ್ರಸಮ್ಮತವಿರಲಿ, ಇಲ್ಲದಿರಲಿ, ಪುನರ್ವಿವಾಹವು ಸಮಾಜಕ್ಕೆ ಹಿತಕರವಾದದ್ದೆಂದು ನನ್ನ ಮತ. ಇನ್ನು ಶಾಸ್ತ್ರವೇ ಬೇಕಾಗಿದ್ದರೆ 'ನಷ್ಟೇಮೃತೇ' ಎಂಬ ನಾರದರ ವಚನವಿರಲು, ಪುನರ್ವಿವಾಹವು ಶಾಸ್ತ್ರಸಮ್ಮತವಿಲ್ಲವೆಂದು ಹೇಳುವ ಗಂಡಸು ಯಾವನಾದರೂ ಇದ್ದರೆ ನನ್ನೆದುರಿಗೆ ಬರಲಿ.

ಗಫೂರ ಸಾಹೇಬ : ವಹವ್ವಾ ! ಫಣೀಂದ್ರಸ್ವಾಮಿ, ನೀವು ಈ ಹಿಂದೂ ಭಟ್ಟರ ಸೊಂಟವನ್ನೆ ಮುರಿದು ಕೊಟ್ಟಿರಿ ! " ೧

ಅನಂತರ, ಜಾನ್ ಮಹಾಂತಪ್ಪಾ ಅವರು ವಿಧವಾವಪನದ ಬಗೆಗೆ ಚರ್ಚೆ ಪ್ರಾರಂಭ ಮಾಡಿದಾಗ, ಗಫೂರನು ಪುರಾಣದಲ್ಲಿ ವಿಧವೆಯರ ವಪನ ಹೇಳಿದೆ ಎಂದನು. ಆಗ ಫಣೀಂದ್ರಾಚಾರ್ಯರು "ಔರ್ಧ್ವದೇಹಿಕ ಕ್ರಿಯೆಯ ಕಾಲಕ್ಕೆ ಪುರುಷರಿಗೆ ಕ್ಷೌರವನ್ನು ವಿಧಿಸಿದಂತೆ ಮೃತನ ಹೆಂಡತಿಗಾದರೂ ವಪನ ಹೇಳಿದೆ. ಆದರೆ ಅವಳು ಪುನಃ ಪುನಃ ವಪನಕ್ಕೊಳಗಾಗಬೇಕೆಂಬುದು ಎಲ್ಲಿ ಹೇಳಿದೆ ? " ಅಂದರು. ಅದಕ್ಕೆ ಅಧ್ಯಕ್ಷರು " ವಾಹವ್ವಾ ಆಚಾರ್ಯರೇ ! ನೀವೊಂದು ಹುಲಿಯೇ ಇರುವಿರಿ " ಎಂದು ಉದ್ಗಾರ ತೆಗೆದರು. ಆಗ ಪುನಃ ಫಣೀಂದ್ರಾಚಾರ್ಯರು 'ಶಾಸ್ತ್ರಾತ್ ರೂಢಿರ್ಬಲೀಯಸೀ' ಎಂಬಂತೆ ನಮ್ಮಲ್ಲಿ ವಿಧವಾ ವಪನವು ರೂಢಿಯಿಂದ ಮಾತ್ರ ಬಂದಿದೆಯೆಂದು ಹೇಳಿ, ರೂಢಿಯ ಮೇಲೆ ಸವಿಸ್ತಾರವಾದ ಒಂದು ಭಾಷಣವನ್ನು ಮಾಡಿ, "ವಿದ್ವದ್ವರ್ಯರಾದ ವೆಂಕಟರಾವ ಕಟ್ಟಿಯವರು ಬರೆದ 'ವಿಧವಾವಪನ ಅನಾಚಾರ'ವೆಂಬ ೨ ಗ್ರಂಥದ ಬಗೆಗೆ ವರ್ಣಿಸಿ ಹೇಳಿದ ನಂತರ,

೧ ಇದು ಉತ್ತರ ಕರ್ನಾಟಕದಲ್ಲಿ ಅಂದು ಸಾಮಾಜಿಕ ಕೋಲಾಹಲವನ್ನುಂಟು ಮಾಡಿದ ಆದ್ಯ ಮನೆತನದ ಶೇಷದಾಸಾಚಾರ್ಯರ ಉಲ್ಲೇಖ. ಸಂಪ್ರದಾಯವಂತ ಆದ್ಯ ಮನೆತನದ ಇವರು ಬಾಲವಿಧವೆಯಾಗಿದ್ದ ಒಬ್ಬ ಶಾಲಾ ಶಿಕ್ಷಕಿಯನ್ನು ಮದುವೆಯಾದರು. ಅನಂತರ, ಇದನ್ನು ಸಮರ್ಥಿಸಿ 'ಸುವದನಾಭಾಸ್ಕರ' ಎಂಬ ನಾಟಕವನ್ನು ಸನ್ ೧೯೦೬ ರಲ್ಲಿ ಬರೆದರು.

೨ ಈ ಗ್ರಂಥದ ವಿವರಣೆಗಾಗಿ ಪು. ೨೩೮–೨೪೧ ನೋಡುವುದು.

ಒಂದವರೆಲ್ಲ ಆ ಗ್ರಂಥವನ್ನು ಓದದ್ದಕ್ಕಾಗಿ ವಿಷಾದ ವ್ಯಕ್ತಮಾಡಿದರು. ಮತ್ತು ಅಧ್ಯಕ್ಷರು "ಈ ನಿಬಂಧ ಶೋಧದ ಸನ್ಮಾನಕ್ಕಾಗಿ ನಾವು ಈ ದಿನ ಸಭೆಯನ್ನು ಮುಗಿಸುತ್ತೇವೆ'' ಎಂದು ಹೇಳಿ ಪ್ರಾರ್ಥನೆಯೊಂದಿಗೆ ಸಭೆಯನ್ನು ಮುಗಿಸುತ್ತಾರೆ.

ಪರಂಪರೆ–ಸುಧಾರಕತೆ, ಸಂಸ್ಕೃತ-ಕನ್ನಡ, ಭಾವನಾತ್ಮಕತೆ–ಪ್ರಚಂಡವಾದ ತೀಕ್ಷ್ಣಬುದ್ಧಿಶಕ್ತಿ, ಕಾವ್ಯ- ನಿಶಿತ ವಿಮರ್ಶೆ, ಈ ದ್ವಂದ್ವಗಳೆಲ್ಲ ಆಚಾರ್ಯರ ಬರೆಹಗಳಲ್ಲಿ ಮನೆ ಮಾಡಿಕೊಂಡಿವೆ. ಅವರ ಶೈಲಿ ವಜ್ರದುಂಡಿ ಕಲ್ಲು ಇದ್ದ ಹಾಗೆ. ಅದರಿಂದ ಒಂದೇ ಸವನೆ ಬುದ್ಧಿಯ ಕಿಡಿಗಳು ಹಾರಿಯೇ ಹಾರುತ್ತಿರುತ್ತವೆ.

ಆಚಾರ್ಯರ ಬರೆಹಗಳ ಈ ಸಂಕೀರ್ಣತೆಯನ್ನು ಡಾ. ರಂ. ಶ್ರೀ. ಮುಗಳಿಯವರು ಮನೋಜ್ಞವಾಗಿ ಬಣ್ಣಿಸಿದ್ದಾರೆ :

''ವಾಸುದೇವಾಚಾರ್ಯರ ಮೇಲೆ ೧೯ನೆಯ ಶತಮಾನದ ಕೊನೆಯ ಭಾಗದಿಂದಲೂ ಅನೇಕ ತರದ ಸಂಸ್ಕಾರಗಳಾಗಿವೆ. ಮನೆತನದ ಸಂಸ್ಕೃತ ಪಾಂಡಿತ್ಯವು ಸ್ಥಾಯಿಯಾಗಿ, ಉಳಿದ ಸಂಸ್ಕಾರಗಳು ಸಂಚಾರಿಯಾಗಿ ಬಂದು ಅವರ ಜೀವನ ದೃಷ್ಟಿಯನ್ನೂ ಶೈಲಿಯನ್ನೂ ರೂಪಿಸುತ್ತವೆ. ಇಂಗ್ಲಿಷ ವಿದ್ಯಾಭ್ಯಾಸದಿಂದ ಅವರು ಪಡೆದ ನವೀನ ಸಂಸ್ಕಾರ, ಪುಣೆಯಲ್ಲಿಯ ವಾಸದಿಂದ ದೊರಕಿಸಿದ ರಾಜಕೀಯ ಸಾಮಾಜಿಕ ದೃಷ್ಟಿಕೋನ ಮತ್ತು ಮರಾಠಿಯ ಪ್ರಭಾವ, ಮೈಸೂರು ಪ್ರವಾಸದಿಂದ ಪಡೆದ ಮೈಸೂರು ಕನ್ನಡದ ವರ್ಚಸ್ಸು, ಇತಿಹಾಸ ವಾಚನದಿಂದ ಅವರಲ್ಲಿ ಕುದುರಿದ ಕಲ್ಪನಾಶಕ್ತಿ ಮತ್ತು ಅವರು ಮಾಡಿಕೊಂಡ ಉರ್ದು ಭಾಷೆಯ ಪರಿಚಯ ಈ ಮುಂತಾದುವನ್ನು ನೆನೆಯಬೇಕು. ಮುಖ್ಯವಾಗಿ ಸಂಸ್ಕೃತದ ಸಾಹಿತ್ಯ ಮತ್ತು ಉತ್ತರ ಕರ್ನಾಟಕದ ದೇಸಿ ಇವೆರಡರ ಗಾಢ ಸಂಸ್ಕಾರಗಳ ಗರ್ಭದಲ್ಲಿ ಅವರ ವಿಶಿಷ್ಟ ಶೈಲಿ ಜನ್ಮತಾಳಿದೆ ಎಂದು ಹೇಳಬಹುದು.''[೧]

ಆಚಾರ್ಯರ ರೂಪ :

ಆಚಾರ್ಯರ ರೂಪ ಶುದ್ಧ ಡೋಣಿಸಾಲಿನದು. ಇವರು ದುಂಡಾಗಿ, ಗಿಡ್ಡಾಗಿ, ಕಪ್ಪಾಗಿ ಇದ್ದರು. ಧ್ವನಿ ತುಂಬಾ ಗೊಗ್ಗರ. ಶೀಘ್ರಕೋಪಿಗಳು. ವಿನೋದ ಮೂರ್ತಿಗಳಾಗಿದ್ದರೂ, ಮಾತನಾಡಿದರೆ ಜನ ಹೆದರುವಂತಿದ್ದರು. ಇವರು ಆ ಕಾಲದಲ್ಲಿ ಮೀಸೆಯನ್ನು ಬೋಳಿಸುತ್ತಿದ್ದರು. ಇವರು ಕೃಷ್ಣವರ್ಣದವರೆಂದು ಹೇಳಿತಷ್ಟೇ. ಇವರನ್ನು ನೋಡಿದ ಸಲವೆಲ್ಲ ಇವರ ಮಿತ್ರರಾದ ಶ್ರೀಮಾನ್ ಬೆಂಡಿಗೇರಿಯವರು ಇವರನ್ನು ''ಬಾಗಿಲುಕೋಟೆಯ ಸಾಲಿಗ್ರಾಮ'' ಎಂದು ಕರೆಯುತ್ತಿದ್ದರಂತೆ. ''ಆದರೆ ಶಾಲಿಗ್ರಾಮವು ರತ್ನಗರ್ಭ ಆಗಿತ್ತು. ವಿಷ್ಣೂಪಾಸಕರಿಗಂತೂ ರತ್ನಗರ್ಭ ಶಾಲಿಗ್ರಾಮ ಅತ್ಯಂತ ಪೂಜನೀಯ. ಕಾಯವು ಕೃಷ್ಣವಾದರೂ ತೇಜಸ್ವಿ ನೇತ್ರಗಳನ್ನು ನೋಡಿದರೆ 'ಪಶ್ಯ ನೀಲೋತ್ಪಲದ್ವಂದ್ವಾತ್ ನಿಸ್ಸರಂತಿ ಶಿಲೀಮುಖಾಃ' ಎಂಬ ಅಪ್ಪಯ್ಯ ದೀಕ್ಷಿತರ ಪದ್ಯ ನೆನಪು ಆಗುತ್ತಿತ್ತು."[೨]

ಪಂಡಿತ ಕೇಶವಶರ್ಮಾ ಗಲಗಲಿಯವರು ಸಾಯನ ಪದ್ಧತಿಯಲ್ಲಿ ಆಚಾರ್ಯರ ಕುಂಡಲಿಯನ್ನು ಹೀಗೆ ಹಾಕಿದ್ದಾರೆ :

---

೧ ವಾಸುದೇವ ಪ್ರಶಸ್ತಿ : ೧೯೬೪ : ಪು. ೩೩೯.

೨ ವಾಸುದೇವ ಪ್ರಶಸ್ತಿ : ಪಂಡಿತ ಕೇಶವಶರ್ಮಾ ಗಲಗಲಿ ಅವರ ಲೇಖ : ೧೯೬೪ : ಪು. ೨೪೯.

ಜನ್ಮದಿನ ೧೫–೧೦–೧೮೬೬, ಸೋಮವಾರ ಅಶ್ವೀನ ಶುದ್ಧ ಸಪ್ತಮೀ.

ಕೇ ೧೨ ೨೯	ನೇ ೨೧ ೧	೨	೩
೧೧			ಮಂ ೨೧ ೪ ಹ ೮
ಗು ೨೩ ೧೦ ಚ ೪			೫
ಶು ೮ ೯	ಶ ೧೨ ೮	ರ ೨೧ ೭ ಬು ೩೦	ರಾ ೨೯ ೬

ಆಚಾರ್ಯರು ಎದುರಿಗೆ ಒಂದು ಕಿಟ್ಲಿ ಚಹ, ಹತ್ತು ಕಟ್ಟು ಬೀಡಿ ಇಟ್ಟುಕೊಂಡು ಕುಳಿತರೆ, ಇಡೀ ರಾತ್ರಿ ಬರೆಯುತ್ತ ಕೂಡುತ್ತಿದ್ದರಂತೆ. ಪ್ರಾಯಶಃ ಅವರ ಕಾಲದ ಯಾವ ಲೇಖಕರೂ ಅವರೆದುರು ನಿಂತು ವಾದಹಾಕಲು ಸಾಧ್ಯವಿದ್ದಂತೆ ಕಾಣಲಿಲ್ಲ. ಅಷ್ಟು ಕಟುವಾಗಿತ್ತು ಅವರ ಟೀಕೆಯ ಶೈಲಿ. ಆಚಾರ್ಯರ ಬಾಲ್ಯವೆಲ್ಲ ಬಾಗಿಲುಕೋಟೆಯಲ್ಲಿಯೂ, ಅವರ ತಾಯಿಯ ತವರೂರಾದ ತೋಳಮಟ್ಟಿ ಎಂಬ ಹಳ್ಳಿಯಲ್ಲಿಯೂ, ಅವರ ಮನೆತನದ ಮೂಲಗ್ರಾಮವಾದ ಕೆರೂರಲ್ಲಿಯೂ ಕಳೆಯಿತು. ಈಯೆಲ್ಲ ಪ್ರದೇಶಗಳ ವರ್ಣನೆ ಅವರ ಸಾಹಿತ್ಯದಲ್ಲಿ ಬರುತ್ತದೆ. ಆಚಾರ್ಯರು ಮುಲ್ಕಿ ಪರೀಕ್ಷೆಯನ್ನು ಬಾಗಿಲುಕೋಟೆಯಲ್ಲಿ ಮುಗಿಸಿ, ಮಾಧ್ಯಮಿಕ ಶಿಕ್ಷಣಕ್ಕಾಗಿ ತಮ್ಮ ಕಕ್ಕಂದಿರಾದ ಬಾಬಾಚಾರ್ಯ ಕೆರೂರ ಅವರು ಇದ್ದ ಬೆಳಗಾವಿಗೆ ಹೋದರು. ನಂತರ, ಬಾಬಾಚಾರ್ಯರಿಗೆ ಧಾರವಾಡಕ್ಕೆ ವರ್ಗವಾದಾಗ, ಇವರೂ ಧಾರವಾಡಕ್ಕೆ ಬಂದು ಸನ್ ೧೮೮೭ರಲ್ಲಿ ಮ್ಯಾಟ್ರಿಕ್ಯಲೇಶನ್ ಪರೀಕ್ಷೆಯನ್ನು ಧಾರವಾಡದಲ್ಲಿದ್ದಾಗಲೇ ಪಾಸಾದರು. ನಂತರ ಪುಣೆಯಲ್ಲಿ ಕೆಲಕಾಲ ಕಾಲೇಜಿನಲ್ಲಿ ಕಲಿತು, ಮರಳಿ ಬಾಗಿಲುಕೋಟೆಗೆ ಹೋಗಿ ಸನ್ ೧೮೯೯ರಲ್ಲಿ ವಕೀಲಿ ಪರೀಕ್ಷೆ ಪಾಸಾದರು. ವಕೀಲಿ ಕಡೆಗೆ ಹೆಚ್ಚು ಲಕ್ಷ್ಯ ಕೊಡದೆ, ಸನ್ ೧೯೧೫ರಲ್ಲಿ ಪುನಃ ಧಾರವಾಡಕ್ಕೆ ಬಂದರು. ೧೯೧೬–೧೭ ರಲ್ಲಿ 'ಸಚಿತ್ರ ಭಾರತ'ವನ್ನೂ ನಂತರ ೧೯೧೭ ರ ಏಪ್ರಿಲ್ ದಿಂದ 'ಶುಭೋದಯ' ಪತ್ರಿಕೆಯನ್ನೂ ನಡೆಸಿದರು. ಶ್ರೀಯುತರು ಅನೇಕ ವರ್ಷಗಳ ಕಾಲ ಬಾಗಿಲುಕೋಟೆಯ ನಗರಸಭೆಯ ಸದಸ್ಯರಾಗಿಯೂ ಸಾರ್ವಜನಿಕ ಸೇವೆಯನ್ನು ಮಾಡಿದರು. ಹೀಗೆ ಸಾಹಿತ್ಯಕ ಜೀವನದಲ್ಲಿಯಂತೆಯೇ ಲೌಕಿಕ ಜೀವನದಲ್ಲಿಯೂ ಅವರು ಅಮೋಘವಾದ ಸೇವೆಯನ್ನು ಸಲ್ಲಿಸಿ, ಸನ್ ೧೯೨೧ರ ಜನೆವರಿ ತಿಂಗಳ ೨೧ನೆಯ ದಿನಾಂಕದಂದು ವೈಕುಂಠವಾಸಿಗಳಾದರು. ಅವರ ಈ ಅಗಲುವಿಕೆಗಾಗಿ 'ಕನ್ನಡ ವಾಮನ'ರು ಹೀಗೆ ಉದ್ಗಾರವನ್ನು ತೆಗೆದರು :

ಏನು ಪೇಳಿದಿ ಕೆಟ್ಟ ಸುದ್ದಿಯ ವಾಸುದೇವನು ಪೋದನೆ !
ನಾನು ನೋಡಿದೆನಾತನನ್ನೆಯೆ ನಿನ್ನೆ ಬಾಗಡಕೋಟೆಯೊಳ್

ಏನು ಬರ್ಪುದು ದುಷ್ಟವಾರ್ತೆಯನಿಂತು ಪುಟ್ಟಿಸೆ ದೇಶದೊಳ್
ನಾನು ಪೇಳ್ವುದು ತೀರಸತ್ಯವು ಮಿಥ್ಯವಲ್ಲವು ಮಿತ್ರನೇ

ಘಾತವಾಯಿತು ನಮ್ಮ ದೇಶದಭೀಷ್ಟವೆಲ್ಲವು ಕೆಟ್ಟಿತು
ಆತ ಪೋಗಲು ನಮ್ಮ ದೇಶದ ದರ್ಪವೇ ಬರಿದಾಯಿತು
ಅಯ್ಯೊ ಆತನ ಹಾಗೆ ಪ್ರೀತಿಯ ಮಾಳ್ಪರಾರೆಲೊ ಭಾಷೆಗೆ
ಅಯ್ಯೊ ನಮ್ಮಯ ವಾಸುದೇವನನೆಲ್ಲಿ ಕಾಂಬೆನೊ ದೇಶದೆ

ಎತ್ತವಡಗಿದವಯ್ಯ ನಿನ್ನಯ ವಕ್ರವಚನಗಳೆಲ್ಲವು
ಎತ್ತಲಡಗಿತು ನಿನ್ನ ಹಾಸ್ಯದ ಮುಖವು ನಿಸ್ಪೃಹವಾಕ್ಯವು
ಎತ್ತಲಡಗಿತು ವಾಸುದೇವನೆ ನಿನ್ನ ವಾರದಪತ್ರವು
ಎತ್ತಲಡಗಿದವಯ್ಯಾ ನಿನ್ನ ಅಭಿನಯಂಗಳೆಲ್ಲಿಯು ಕಾಣವು

ನಿನ್ನ ರೂಪವು ನನ್ನ ಕಣ್ಣಿನ ಮುಂದೆ ಕಟ್ಟಿಹುದೀಗಲು
ನಿನ್ನ ದುಃಖದ ನೀರಿನಿಂ ತೊಯ್ದಿಹುದು ನನ್ನಯ ದೇಹವು
ನಿನ್ನ ನುಡಿಗಳೆ ನನ್ನ ಕಿವಿಯಲಿ ತುಂಬಿಕೊಂಡಿಹವೆತ್ತಲು
ನಿನ್ನ ವಿರಹದೆ ವಾಸುದೇವನೆ ನಿಲ್ಲದೆನ್ನಯ ಪ್ರಾಣವು[೧]

ಕೃತಿಗಳು :

ಕಾದಂಬರಿಗಳು :

ನೂರು ಜನ ಮಾಡದಷ್ಟು ಕೆಲಸವನ್ನು ಆಚಾರ್ಯರು ಅಂದಿನ ಕಾಲದಲ್ಲಿ ಏಕಾಂಗವೀರರಾಗಿ, ಸವ್ಯಸಾಚಿಯಾಗಿ, ಮಾಡಿದರು. ಆಚಾರ್ಯರು ಸನ್ ೧೯೦೮ ರಲ್ಲಿ ತಮ್ಮ ಮೊದಲನೆಯ ಕೃತಿಯಾದ 'ಇಂದಿರೆ' ಕಾದಂಬರಿಯನ್ನು ಪ್ರಕಟಿಸಿದರು. ೧೯೧೩ರಲ್ಲಿ ಹೊರಟ 'ಸಚಿತ್ರಭಾರತ' ಮಾಸಪತ್ರಿಕೆಯಲ್ಲಿ ಅವರ 'ಯದು ಮಹಾರಾಜ' ಎಂಬ ಎರಡನೆಯ ಕಾದಂಬರಿ ಪ್ರಕಟವಾಯಿತು. ೧೯೧೪–೧೯೧೭ರ ವರೆಗೆ 'ಸಚಿತ್ರ ಭಾರತವು' ವಾಸುದೇವಮಯವಾಯಿತು. ವಾಸುದೇವಾಚಾರ್ಯರು ಬರೆದ ಕಾದಂಬರಿಗಳೆಂದರೆ 'ಇಂದಿರೆ', 'ಯದು ಮಹಾರಾಜ', 'ಭ್ರಾತೃಘಾತಕಿ ಔರಂಗಜೇಬ', 'ವಾಲ್ಮೀಕಿ ವಿಜಯ' ಮತ್ತು 'ಯವನ ಸೈರಂಧ್ರೀ'.

ನಾಟಕಗಳು :

'ಪತಿವಶೀಕರಣ' (ಗೋಲ್ಡ್‌ಸ್ಮಿಥ್ ಕವಿಯ ಷೀ ಸ್ಟೂಪ್ಸ ಟು ಕಾಂಕರ್ ಇದರ ಅನುವಾದ), 'ಸುರತ ನಗರದ ಶ್ರೇಷ್ಠಿ'. (ಷೇಕ್ಸಪಿಯರ್ ಮಹಾಕವಿಯ ದಿ ಮರ್ಚಂಟ ಆಫ್ ವೇನೀಸ್ ನಾಟಕದ ಅನುವಾದ), 'ವಸಂತ ಯಾಮಿನೀ ಸ್ವಪ್ನ ಚಮತ್ಕಾರ' (ಷೇಕ್ಸಪಿಯರ್ ಮಹಾಕವಿಯ ಎ ಮಿಡ್ ಸಮರ್‌ನಾಯಿಟ್ಸ್ ಡ್ರೀಮ್‌ದ ಅನುವಾದ), 'ರಮೇಶ–ಲಲಿತಾ' (ರೋಮಿಯೊ ಅ್ಯಂಡ ಜೂಲಿಯೆಟ್ ಕೃತಿಯ ಅನುವಾದ), 'ನಲದಮಯಂತಿ' (ಸಂಗೀತ ನಾಟಕ), 'ರುಕ್ಮಿಣಿ ಹರಣ' (ಅಪೂರ್ಣ), 'ಪುರಂದರದಾಸ' (ಅಪೂರ್ಣ)– ಇವು ಈ ಲೇಖಕರ ನಾಟಕಗಳು.

---

೧ ವಾಗ್ಭೂಷಣ : ಜನೆವರಿ ೧೯೨೧ : ಪು. ೨೧೩–೨೧೪.

ಕಥಾಸಂಗ್ರಹ :

'ಬೆಳ್ಳಿಚಿಕ್ಕಿ' 'ತೊಳೆದ ಮುತ್ತು' ಅಲ್ಲದೆ, ಇತ್ತೀಚೆಗೆ ಸಂಕಲನವಾಗಿ ಪ್ರಕಟವಾದ 'ಪ್ರೇಮ ವಿಜಯ' 'ಬೆಳಗಿದ ದೀಪಗಳು'– ಹೀಗೆ ಒಟ್ಟು ೨೬ ಸಂಪೂರ್ಣ ಕಥೆಗಳನ್ನು ಬರೆದಿದ್ದಾರೆ.

ಪತ್ರಿಕಾ ವ್ಯವಸಾಯ; ಇತರ ಲೇಖಗಳು :

ಇದೂ ಅಲ್ಲದೆ, ಆಚಾರ್ಯರು ಬರೆದ ವಿಚಾರಪ್ರಚೋದಕ ಲೇಖಗಳೇ ಸಾವಿರ ಪುಟದಷ್ಟು ಆಗುತ್ತವೆ. " 'ಸಚಿತ್ರ ಭಾರತವು' ನಿಂತ ಮೇಲೆ ೧೯೧೭ರಲ್ಲಿ ಇವರು 'ಶುಭೋದಯ' ಎಂಬ ಒಂದು ವಾರಪತ್ರಿಕೆಯನ್ನೂ ತಾವೇ ಸಂಪಾದಕರಾಗಿ ಹೊರಡಿಸಿದರು. ೧೯೨೦–೨೧ರಲ್ಲಿ ಬಂದ ಆಚಾರ್ಯರ ಮರಣವೇ ಈ ವಾರಪತ್ರಿಕೆಯನ್ನು ನಿಲ್ಲಿಸಿತು. ದೇಹದಲ್ಲಿ ಉಸಿರಿರುವವರೆಗೂ ಇವರ ಕೈ, ಕೆಲಸ ಮಾಡುತ್ತಿತ್ತು. ಕೊನೆಯ ಈ ಮೂರು ವರ್ಷಗಳಲ್ಲಿಯೂ ಇವರು ಬರೆದದ್ದು ಅಷ್ಟಿಷ್ಟಲ್ಲ. ಅದ ರಲ್ಲಿಯ ಬರಹಗಳನ್ನು ಸಂಗ್ರಹಿಸಿದರೆ ಸುಮಾರು ಎರಡು ಸಾವಿರ ಪುಟಗಳಷ್ಟಾದರೂ ಆಗ ಬಹುದು.''

ಶುಭೋದಯದಲ್ಲೆಲ್ಲ ಆಚಾರ್ಯರ ಲೇಖಗಳೇ ಇರುತ್ತಿದ್ದವು. ಬರೆದು ಬಂದ ಲೇಖಗಳು ಬಹಳೇ ಕಡಿಮೆ. ಆಚಾರ್ಯರದು ನಿರ್ಭಿಡೆ ಸ್ವಭಾವ. ಅವರು 'ಶುಭೋದಯ'ದ ಧೋರಣೆ ಯನ್ನು ಹೀಗೆ ವಿವರಿಸಿದ್ದಾರೆ : "ಧಾರ್ಮಿಕ ವಿಷಯಗಳಲ್ಲಾಗಲಿ ಉದಾರ ಮತವಾದಿಗಳ ಪ್ರಾಗತಿಕ ವಾದ ಅನುಕರಣೆಯನ್ನೆ ನಾವು ಮಾಡುತ್ತಿರುವೆವಲ್ಲದೆ ಆ ವಿಷಯಗಳಲ್ಲಿ ನಾವು ಸಂಕುಚಿತವಾದ ವಿಚಾರವನ್ನು ತಳೆದವರಲ್ಲ.... ಜನರು, ಪ್ರಶಸ್ತವಾಗಿರಲಿ ಅಪ್ರಶಸ್ತವಾಗಿರಲಿ ಎಂಥದೇ ಕೆಲಸವನ್ನು ಮಾಡಿದರೂ ಅವರ ಸ್ತುತಿಯನ್ನು ಮಾಡುವಂಥ ಭಟ್ಟಂಗಿ ಕೆಲಸವನ್ನು ಶುಭೋದಯಕಾರರು ಸರ್ವಥಾ ಮಾಡತಕ್ಕವರಲ್ಲ.''

'ಶುಭೋದಯ'ದ ಧ್ಯೇಯಶ್ಲೋಕವು ಹೀಗಿದ್ದಿತು :

ವೀರವಿಚಾರಯುಕ್ತ ವರಧಾರ್ಮಿಕ ನೈತಿಕ ರಾಜಕೀಯ ಸಾಂ
ಸಾರಿಕ ವಿದ್ಯೆಯುದ್ಯಮ ಕಲಾಕೃಷಿಕರ್ಮ ಸುಲೇಖಮಾಲೆಯಿಂ
ಚಾರುಚರಿತ್ರ ಸಂಪದಭಿವೃದ್ಧಿ ಸಮಾಜಹಿತ ಪ್ರಬಂಧದಿಂ
ಭಾರತಸಾರ ಕಲ್ಪಲತೆಯಂತೆಸೆಯುತ್ತಿಹುದೀ ಶುಭೋದಯಂ

'ಸಚಿತ್ರ ಭಾರತವು' ಹೆಚ್ಚಾಗಿ ಸಾಹಿತ್ಯ ವಿಷಯಗಳಿಗೆ ಮೀಸಲಾಗಿದ್ದರೆ, 'ಶುಭೋದಯ'ದಲ್ಲಿ ರಾಜಕೀಯಾಂಶ ಹೆಚ್ಚಾಗಿರುತ್ತಿತ್ತು. 'ಶುಭೋದಯ' ಪ್ರತಿ ಶುಕ್ರವಾರ ಸಾಯಂಕಾಲ ಪ್ರಕಟವಾಗು ತ್ತಿತ್ತು. ಇದರ ಪುಟ ಸಂಖ್ಯೆ ಮೊದಲು ನಾಲ್ಕಿದ್ದದ್ದು, ಅನಂತರ ಆರಾಯಿತು. ' ಶುಭೋದಯ ' ದಲ್ಲಿ ವಾಸುದೇವಾಚಾರ್ಯರ ಪತ್ರಿಕಾ ವ್ಯವಸಾಯಕವಾದ ನೀತಿಮತ್ತೆಯನ್ನೂ ರಾಜಕೀಯ– ಸಾಮಾಜಿಕ ಅಭಿಪ್ರಾಯಗಳನ್ನೂ, ಕನ್ನಡದ ಅಭಿಮಾನವನ್ನೂ, ವ್ಯಂಗ್ಯ ಶೈಲಿಯ ರೀತಿಯನ್ನೂ ಕಾಣುತ್ತೇವೆ.

ಆಚಾರ್ಯರು ಸಂಪಾದಕರಾಗಿದ್ದಾಗ ಯಾರೋ ಒಬ್ಬರು ಅಲ್ಲಮಪ್ರಭುಗಳ ಬಗೆಗೆ ಒಂದು

ಲೇಖವನ್ನು ಬರೆದು ಕಳಿಸಿದರು. ಅವರು ಲೇಖದಲ್ಲಿ ತಮ್ಮ ಹೆಸರನ್ನು ಹಾಕಿರಲಿಲ್ಲ. ಆಚಾರ್ಯರು ಅದನ್ನು ಮುದ್ರಿಸಿಬಿಟ್ಟರು. ಈ ಲೇಖ ಸಮಾಜದ ಒಂದು ವರ್ಗಕ್ಕೆ ಅವಮಾನವನ್ನುಂಟುಮಾಡು ವಂತಿದೆಯೆಂದು ಕೋಲಾಹಲವೆದ್ದಿತು. ಬ್ರಾಹ್ಮಣ ಮತ್ತು ವೀರಶೈವ ಸಮಾಜಗಳು ಎರಡು ತುಂಡು ಗಳಾಗುವವೇನೋ ಎನ್ನುವಷ್ಟು ಕುದಿ ಏರಿತು. ಆಗ ವಾಸುದೇವಾಚಾರ್ಯರು ಲೇಖವು ತಾವು ಬರೆದದ್ದಲ್ಲವೆಂದೂ, ಬೇರೊಬ್ಬರಿಂದ ಬರೆಯಲ್ಪಟ್ಟದ್ದೆಂದೂ ಹೇಳಿ ಪಾರಾಗಬಹುದಿತ್ತು. ಆದರೆ, ಪತ್ರಿಕಾ ವ್ಯವಸಾಯದ ಉಚ್ಚ ಆದರ್ಶಗಳ ಮೇರೆಗೆ, ಆ ಲೇಖದ ಜವಾಬುದಾರಿಯನ್ನು ತಾವೇ ಹೊತ್ತುಕೊಂಡು, ವರ್ಷಾನುವರ್ಷ, ಕೋರ್ಟು–ಕಚೇರಿ ಅಡ್ಡಾಡಬೇಕಾಯಿತು. ವೀರಶೈವ ಸಮಾಜದ ಎಷ್ಟೋ ಮುಂದಾಳುಗಳನ್ನು ಎದುರು ಹಾಕಿಕೊಳ್ಳಬೇಕಾಯಿತು. ಆ ಕಾಲದಲ್ಲಿ ಅವರು ಬರೆದ ಲೇಖನಗಳನ್ನು ನೋಡಿದರೆ, ಈ ಪ್ರಕರಣದಿಂದ ಅವರಿಗುಂಟಾದ ಮಾನಸಿಕ ವೇದನೆಯನ್ನು ಅರಿತುಕೊಳ್ಳಬಹುದಾಗಿದೆ.

ಆಚಾರ್ಯರು ಸ್ಪಷ್ಟವಾದಿಗಳು. ಅವರ ಮಾತಿನಲ್ಲಿ ಹಿಂದುಮುಂದಿಲ್ಲ. ಅವರ ಅಭಿಪ್ರಾಯ ಗಳಲ್ಲಿ ಆ ಕಾಲದ 'ಜಹಾಲ' ಮುಖಂಡರಾದ ಲೋಕಮಾನ್ಯ ಟಿಳಕರ ಪ್ರಭಾವ ಎದ್ದುಕಾಣುತ್ತದೆ. ಈ ತತ್ವಪ್ರಣಾಲಿಯವರು "ಸ್ವರಾಜ್ಯವೇ ನಮ್ಮ ಜನ್ಮ ಸಿದ್ಧ ಹಕ್ಕು; ಉಳಿದ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳು ಸ್ವರಾಜ್ಯವನ್ನು ಅನುಸರಿಸಿ ತಾವೇ ತಾವಾಗಿ ಬರುತ್ತವೆ" – ಎಂಬ ಅಭಿಪ್ರಾಯ ವುಳ್ಳವರು. ಗೋಖಲೆ–ಆಗರಕರರ ಹಾಗೆ ಸಮಾಜ ಸುಧಾರಣೆಯನ್ನು ಮುಂದುಮಾಡಿ, ರಾಜಕೀಯ ಗುರಿಯಾದ ಸ್ವರಾಜ್ಯದ ಗುರಿಯನ್ನು ಕಡೆಗಣಿಸಲಾಗದು ಎಂಬ ಅಭಿಪ್ರಾಯದವರು. ಈ ಬಗೆಗೆ ಆಚಾರ್ಯರು ಹೀಗೆ ಬರೆದಿದ್ದಾರೆ :

"'ಆದದ್ದೆಲ್ಲ ಒಳಿತೆ ಆಯಿತು' ಎಂದು ಪುರಂದರದಾಸರ ಉಕ್ತಿಯನ್ನು ಪಾಠಮಾಡುತ್ತ, ಕೈಯಿಂದ ತಾಳ ಕುಟ್ಟುತ್ತ ಕೂತರೆ ನಮ್ಮ ಸ್ಥಿತಿಯು ಕಲ್ಲುಕುಟಿಕನಿಗಿಂತ ಕೀಳಾದೀತೆಂಬ ಭೀತಿಯು ನಮ್ಮಲ್ಲಿರಬಾರದೆ ? ಕಾಲಮಹಿಮೆಯಿಂದಲೂ ಅಭಿಮಾನಶೂನ್ಯತೆಯಿಂದಲೂ ನಮ್ಮ ಗತಿಯು ಹೀಗೆ ವಿಪರೀತವಾಗಿ ಪರಿಣಮಿಸಲು ನಾವು ಸುಮ್ಮನೆ ಕೈ ಮುಚ್ಚಿಕೊಂಡು, ಕಾಲು ಚಾಚಿಕೊಂಡು ಭಗವಂತನ ಕೃಪೆ ಹೊಂದಿದರೆ ಸಾಕೆಂದು ತಟಸ್ಥರಾಗಿ ಕುಳಿತರೆ ನಮ್ಮ ಸ್ಥಿತಿಯು ದಾಸರ ಪದಗಳನ್ನು ಹೇಳುವವರಕಿಂತ ಕಡೆಯದಾಗಬಹುದು."[೧] (ಇದು ವೈದಿಕ ಪ್ರಕಾಂಡ ಪಂಡಿತ, ವಾದೇಭಸಿಂಹ, ಪ್ರಾಣಾನ್ ಹರನ್ ಭೂತ ಇವ ಪ್ರವಿಷ್ಟಃ ಎಂದು ಹೇಳಬಹುದಾದ ತರ್ಕತಾಂಡವ, ಸ್ವಾಮಿರಾಚಾರ್ಯರ ಅಣ್ಣನ ಮಕ್ಕಳ ಸನಾತನ ಮನೆತನಕ್ಕೆ ಸೇರಿದ ವಾಸುದೇವಾಚಾರ್ಯರ ಮಾತುಗಳು.)

ಆಗಿನ ಸಮಾಜಸುಧಾರಕರಲ್ಲಿ "ಕಲಿತ ಜನರಲ್ಲಿ ಸ್ವಕುಲಾಚಾರ ನಿಂದೆ ಹಾಗೂ ಪರಕೀಯ ಆಚಾರ ವಿಚಾರಗಳ ಡಾಮಡೌಲುಗಳೆಂದರೆ ದೈವೀ ಪ್ರಶಸ್ತಿ ಎಂಬ ಹುಚ್ಚುತನವು ಹೆಚ್ಚಾಗಿಹೋಗಿತ್ತು. ಆ ಹುಚ್ಚುತನದ ಅತಿರೇಕಕ್ಕೆ ಆ ಕಾಲದಲ್ಲಿ ಸಾಮಾಜಿಕ ಸುಧಾರಣೆ ಎಂಬ ಹೆಸರಾಗಿತ್ತು" ಎಂದು ಹೇಳುತ್ತಾರೆ. ಈ ಸಮಾಜಸುಧಾರಣೆಯ ತಾತ್ವಿಕ ಚರ್ಚೆ ಆಚಾರ್ಯರ ಲಲಿತ ಸಾಹಿತ್ಯದಲ್ಲಿಯೂ ಅನೇಕ ಕಡೆಗೆ ಕಂಡುಬರುತ್ತದೆ. 'ಇಂದಿರೆ'ಯಲ್ಲಿ ಬರುವ 'ಉಪಾಸನಾ ಸಮಾಜ'ದ ಚರ್ಚೆ ಇದಕ್ಕೊಂದು ದೃಷ್ಟಾಂತ. ರಾಜಕಾರಣಿಗಳಲ್ಲಿ ಆಚಾರ್ಯರು ಎರಡು ವರ್ಗ ಗಳನ್ನು ಮಾಡುತ್ತಾರೆ : "ಒಂದು, ಸಮಯಸಾಧಕ ರಾಜಕಾರಣಿಗಳದು; ಎರಡನೆಯದು, ಲೋಕ ಹಿತಕ್ಕಾಗಿ ರಾಜಕಾರಣವನ್ನು ಪ್ರವೇಶಿಸಿದಂಥವರದು. ಈ ಎರಡನೆಯ ವರ್ಗದಲ್ಲಾದರೂ ತಾತ್ವಿಕರಾದ ಭಾವುಕರು, ವಸ್ತುಸ್ಥಿತಿಯ ಸಮಾಲೋಚಕರು ಎಂಬ ಎರಡು ಭೇದಗಳಿರುವವು."

೧ ವಾಸುದೇವ ಪ್ರಶಸ್ತಿ : ೧೯೬೪ : ಪು. ೨೧.

ಕಸುಗಾಯನ್ನು ಒತ್ತಾಯದಿಂದ ಹಣ್ಣು ಮಾಡಲಿಕ್ಕೆ ಬಾರದು; ಹಾಗೆಯೇ ಸಮಾಜ ಪಕ್ವವಾಗದ ವಿನಾ, ಕಾಯ್ದೆಯ ಮೂಲಕವಾಗಿ ಸಮಾಜ ಸುಧಾರಣೆ ಮಾಡಲು ಆಗದು. ದಿವಂಗತ ವಿಠ್ಠಲಭಾಯಿ ಪಟೇಲರು ಮಿಶ್ರವಿವಾಹದ ಬಗೆಗೆ ಕೌನ್ಸಿಲಿನಲ್ಲಿ ಮಸೂದೆಯೊಂದನ್ನು ತಂದಾಗ, ಆಚಾರ್ಯರು ಹೀಗೆ ಬರೆದರು. ಇದರಲ್ಲಿ ಅವರ ಸಂಸ್ಕೃತಭೂಯಿಷ್ಠವೂ, ವೇದ ಪುರಾಣಗಳ ಲೇಪವುಳ್ಳದೂ, ಮರಾಠಿ ಇಲ್ಲವೆ ಉತ್ತರ ಕರ್ನಾಟಕದ ಕೆಚ್ಚುಳ್ಳ ಪದಪ್ರಯೋಗವುಳ್ಳದೂ ಆದ ವಿಶಿಷ್ಟವಾದ 'ಆಚಾರ್ಯ ಶೈಲಿ'ಯನ್ನೂ ನೋಡುತ್ತೇವೆ :

"ಹಿಂದಿ ಸಮಾಜಗಳು ಈ ಬಗೆಯ ಹೊಸ ಉತ್ಪಾತಗಳನ್ನು ತಾಳಿಕೊಳ್ಳಲಿಕ್ಕೆ ಇನ್ನೂ ಸಿದ್ಧವಾಗಿಲ್ಲ. ಇಂಥ ಸುಧಾರಣೆಗಳು ಪರಿಸ್ಥಿತಿಗೆ ಅನುಗುಣವಾಗಿ ತಾವಾಗಿಯೆ ಜರುಗತಕ್ಕವು. ಪರಾಶರ ಋಷಿಯು ಮತ್ಸ್ಯಕನ್ಯೆಯನ್ನು ವರಿಸಿ ಮಹರ್ಷಿ ವ್ಯಾಸರಿಗೆ ಜನ್ಮವನ್ನು ಕೊಟ್ಟಾಗ ಸಮಾಜ ಸುಧಾರಕರ ಚಿಥಾವಣಿಯ ಅವಶ್ಯಕತೆ ಇದ್ದಿರಲಿಲ್ಲ." ೧

ಇದರಿಂದ ಅವರು ಸನಾತನ ಪಂಥದ ಜಡರಾಗಿದ್ದರೆಂದು ಅರ್ಥವಲ್ಲ. ಅವರಿಗೆ ಹಿಂದೂ ಸಮಾಜದಲ್ಲಿ ಆಗಬೇಕಾದ ಸುಧಾರಣೆಯ ಪೂರ್ಣ ಅರಿವಿದ್ದಿತು. "ಪೂರ್ವ ಕಾಲದ ಧರ್ಮ ಶಾಸ್ತ್ರಕಾರರು ಹಾಕಿಕೊಟ್ಟ ಇಲ್ಲವೆ ಬಹು ದಿವಸದಿಂದ ರೂಢವಾಗಿರುವ ನಿಯಮಗಳನ್ನೆ ಅಭಂಗವಾಗಿ ನಡೆಸುವದರಿಂದಲೆ ಸಮಾಜದ ಉತ್ಕರ್ಷವಾಗುವದು ಎಂದು ಯಾರಾದರೂ ಆಗ್ರಹಪಟ್ಟರೆ, ಇಂಥ ಪ್ರತಿಪಾದನವೂ ಆಗ್ರಹವೂ ಆ ಪ್ರತಿಪಾಯಿತೃಗಳ ಹಾಗು ಆಗ್ರಹಕಾರರ ಬುದ್ಧಿಕೃಪಣತೆಯನ್ನೂ ವಿಚಾರಸಂಕೋಚವನ್ನೂ ಅದೂರದರ್ಶಿತ್ವವನ್ನೂ ಮಾತ್ರ ವ್ಯಕ್ತಪಡಿಸುತ್ತದೆ.'' ೨ (ಇಲ್ಲಿ ಪ್ರತಿಪಾಯಿತೃ– ಶಬ್ದಪ್ರಯೋಗವನ್ನು ನೋಡುವುದು. ಇದು ಅಡ್ವೋಕೇಟ್ಸ ಎನ್ನುವುದರ ಭಾಷಾಂತರ. ಇಲ್ಲಿ ಕನ್ನಡ ಗದ್ಯಶೈಲಿ ಇನ್ನೂ ಕುದಿಗೊಳ್ಳುತ್ತಿದೆ.) ಇನ್ನೊಂದೆಡೆ ಆಚಾರ್ಯರು "ಹಿಂದುಸ್ಥಾನ ದೇಶದಲ್ಲಿ ಇರುವಷ್ಟು ಜಾತಿಗಳು ಬೇರೆ ಯಾವ ದೇಶದಲ್ಲಿಯೂ ಇಲ್ಲವೆ ಇಲ್ಲವು." ಎಂದು ಹೇಳುತ್ತಾರೆ. ಲೋಕದ ಡೊಂಕ ನೀವೇಕೆ ತಿದ್ದುವಿರಿ ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. Improve yourself and there will be one scoundrel less in this world ಅಂದ ಹಾಗೆ ಆಚಾರ್ಯರೂ ''ನೀವು ಧರ್ಮೋಪದೇಶಕರಾಗುವ ಹವ್ಯಾಸಕ್ಕೆ ಹೋಗದೆ, ಪೂರ್ವಿಕರಾದ ಮಹಾತ್ಮರಿಂದ ಉಪದಿಷ್ಟವಾದ ರೀತಿಯಿಂದ ನಡೆಯುವ ಯತ್ನ ಮಾಡಿದರೆ ಸಾಕು; ಧರ್ಮವನ್ನು ನೀವು ಉದ್ಧರಿಸುವಿರೋ, ಧರ್ಮವೆ ನಿಮ್ಮನ್ನು ಉದ್ಧರಿಸುವದೋ ತಿಳಿದು ನೋಡಿರಿ'' ಎಂದು ಹೇಳುತ್ತಾರೆ.

'ಆಚಾರ್ಯಶೈಲಿ' ಎಂದರೆ ಸಂಸ್ಕೃತಭೂಯಿಷ್ಠತೆ, ಇಂಗ್ಲಿಷ್ ಪರಿಜ್ಞಾನ, ಪುರಾಣಾದಿಗಳ ಸಾಹಚರ್ಯ, ಉತ್ತರ ಕರ್ನಾಟಕದ ದೇಸಿಯ ಕೆಚ್ಚು, ವಿವರಗಳ ಸಜೀವ ಚಿತ್ರಣ, ಸುಂದರ ಮತ್ತು ಹರಿತವಾದ ವ್ಯಂಗ್ಯ–ಕೊಂಕುಗಳ ಸಮನ್ವಯವೆಂದು ಹೇಳಬಹುದು. ಅವರು ಯಾವ ವಿಷಯದ ಬಗೆಗೆ ಬರೆದರೂ–ಅದು ಸಾಮಾಜಿಕವೇ ಇರಲಿ, ರಾಜಕೀಯವೇ ಇರಲಿ, ತಾತ್ವಿಕವೇ ಇರಲಿ – ಈ ಶೈಲಿ ಅವರಲ್ಲಿ ಅಭಿವ್ಯಕ್ತಿಗೆ ಹಿತವಾಗಿ ಅಳವಡುತ್ತದೆ. ಉದಾಹರಣೆಗೆ, "ಕಾಷ್ಠಲೋಷ್ಟ ನಿರ್ಮಿತವಾದ, ನಿರ್ಜೀವ ಪ್ರತಿಮೆಯಂತೆ ಆಚರಿಸಿ" ಇಂಗ್ಲಂಡಕ್ಕೆ ಮರಳಿದ ಮಾಂಟೇಗರವರ 'ಮಾಂಟೇಗು – ಚೆಮ್ಸ್‌ಫರ್ಡ' ಸುಧಾರಣೆಗಳ ಬಗೆಗೆ ಅವರು ಹೇಳಿದ ಮಾತುಗಳು ಇವು :

೧ ವಾಸುದೇವ ಪ್ರಶಸ್ತಿ : ೧೯೬೪ : ಪು. ೨೨
೨ ಅದೇ : ಪು. ೨೩

"ಈ (ಬ್ರಿಟಿಶ್ ಅಡಳಿತವು) ಕಟ್ಟಿಗೆಯಂತೆ ಮಣಿಯದಿದ್ದರೂ, ಕಬ್ಬಿಣದಂತೆ ಕಠಿಣವಾದದ್ದೂ, ಮತ್ಸ್ಯಾವತಾರಕಾಲೀನವಾದ ವಸ್ತುವಿನಂತೆ ಅಪ್ರಸ್ತುತವೂ ಆಗಿರುವದರಿಂದ ಈಗಿನ ಸುಧಾರಿಸಿದ ಕಾಲದಲ್ಲಿ ಈ ಆಡಳಿತವು ಅಪ್ರಯೋಜಕವಾಗಿರುವದು........

ಇರಲಿ. ಮುಖ್ಯವಾಗಿ ಮಾಂಟೇಗರವರ ಅಭಿವಚನದಲ್ಲಿಯೆ ಮೊದಲು ವಿಶೇಷವಾದ ಸಾರ ವಿದ್ದಂತೆ ಕಾಣದಿದ್ದರೂ ದುಷ್ಕಾಳಪೀಡಿತರಾದ ಹಿಂದಿ ಜನರಿಗೆ ಅದೇ ದೊಡ್ಡ ಪ್ರಸಾದವಾಗಿ ತೋರಿತ್ತು. ಅದರಲ್ಲಿ ಕಂಡಕಂಡವರು ಸೆರಿಸೆರಿ ಅಂಬಲ ಸೊಪ್ಪೆರಸಗಳನ್ನು ಕಲಿಸಿದ್ದನ್ನು ವ್ಹಾಯಿಸ ರಾಯರೂ ಸ್ಟೇಟ ಸೆಕ್ರೆಟರಿಗಳೂ ಹುಟ್ಟಾಡಿಸಿ ನಮಗೊಂದು ಪಕ್ವಾನ್ನವನ್ನು ಮಾಡಿಕೊಡುವವರು. ಈ ಮಿಶ್ರಣವು ಚನ್ನಾಗಿರುವದೆಂದು ವ್ಹಾಯಿಸರಾಯರ ಅಭಿಪ್ರಾಯವು. ಸಂಸ್ಥೆಯ ನಿಯಮಗಳನ್ನು ಉಲ್ಲಂಘಿಸಿ ಒಲಿವ್ಹರ್ ಟ್ವಿಸ್ಟನಂತೆ ಕಂಡಕಂಡಂತೆ 'ಹುಳಿ' 'ರೊಟ್ಟಿ' ಎಂದು ಕೂಗದೆ ವಿನೀತರಂತೆ ಕೇಳಿಕೊಂಡವರ ಅಭಿಪ್ರಾಯಾನುಸಾರವಾಗಿ ಪ್ರಸಾದವು ಹಂಚಲ್ಪಡುವದು ಎಂದು ವ್ಹಾಯಿಸರಾಯರು ಆಶ್ವಾಸನವಿತ್ತಿರುವರು............ ಮಾಂಟೇಗು – ಚೇಮ್ಸಫರ್ಡ ಸಂಯೋಗದಿಂದುಟಾದ ಗರ್ಭದಲ್ಲಿ ಗಂಡಿರುವದೋ ಎಂದು ಹಿಂದುಸ್ಥಾನದ ನಿವಾಸಿಗಳು ಮಾರ್ಗಪ್ರತೀಕ್ಷೆ ಮಾಡುತ್ತಿರುವರು. ಇಂದು ನಾಳೆ ಪ್ರಸೂತಿಯ ಕಾಲವು. ತಳಿಯನ್ನು ಬಲ್ಲವರೂ, ಸೂತಿಕಾಶಾಸ್ತ್ರಜ್ಞರೂ ಆದ ಜನರ ಅಭಿಪ್ರಾಯ ವನ್ನು ಲಕ್ಷಿಸಿದರೆ ಹುಟ್ಟುವ ಸತ್ವವು ಹೆಣ್ಣೆ ಆಗಬಹುದಾಗಿ ತೋರುತ್ತದೆ. ಹೆಣ್ಣಾದರೂ ಆಗಲಿ, ಅದು ಸಲಕ್ಷಣವಾದದ್ದೊ ಕುಬ್ಜೆ ಕುರೂಪಿಯೋ ಎಂಬ ಬಲವತ್ತರವಾದ ಶಂಕೆ ಇರುವದು. ವಿಲಾ ಯತಿಯ ಪತ್ರಕಾರರಾದ ಜ್ಯೋತಿರ್ಮಾರ್ತಾಂಡರು ಹೆಣ್ಣೆ ಹುಟ್ಟುವದೆಂತಲೂ ಆ ಹೆಣ್ಣಾದರೂ ಕುರೂಪಿಯೆ–ಎಂತಲೂ ಭವಿಷ್ಯವನ್ನು ವರ್ಣಿಸಿರುವರು.''[೧]

ರಾಷ್ಟ್ರವಿಮೋಚನೆಗಾಗಿ ಕೆಲಸ ಮಾಡಿದವರಲ್ಲಿ ಹಲವರು ಸಾಮ್ಯಮತವಾದಿಗಳು, ಇನ್ನೂ ಹಲವರು ಉಗ್ರಮತವಾದಿಗಳೂ ಇದ್ದರಷ್ಟೇ. ಮೊದಲಿನ ವರ್ಗಕ್ಕೆ ಮವಾಳರೆಂದೂ, ಎರಡನೆಯ ವರ್ಗಕ್ಕೆ ಜಹಾಲರೆಂದೂ ಕರೆಯುತ್ತಿದ್ದರು. ಆಚಾರ್ಯರು ಲೋಕಮಾನ್ಯ ಟಿಳಕರ ಮುಖಂಡತ್ವದ ಜಹಾಲ ಪಕ್ಷಕ್ಕೆ ಸೇರಿದವರು. 'ಮವಾಳರ ಅಜಾಗಳತನವು' 'ಇವರು ರಾಷ್ಟ್ರಭಕ್ತರೇ ?' ಎಂಬ ಅಗ್ರ ಲೇಖಗಳಲ್ಲಿ ಲೇಖಕರು ಸಾಮ್ಯಮತವಾದಿಗಳ ಧೋರಣೆಯನ್ನು ಕಟುವಾಗಿ ಟೀಕಿಸಿದ್ದಾರೆ : "ಮವಾಳ ರೆಂಬ ಉದಗ್ರ ಹೆಸರನ್ನಿಟ್ಟುಕೊಂಡು ಮೈಗಳ್ಳತನದಿಂದ ಆ ಜನರು ಮೆಲ್ಲಮೆಲ್ಲಗೆ ಕಾಂಗ್ರೆಸದಿಂದ ಕಾಲು ತೆಗೆಯಲಾರಂಭಿಸಿದರು........ ನಿಜವಾದ ರಾಷ್ಟ್ರಹಿತದ ಕೆಲಸಗಳೊದಗಿದಾಗ ಆ ಜನರು ನೆವ ತೆಗೆದು ಜಗಳ ಹೂಡುತ್ತ ಬಂದರು; ಇಂದಿಗೂ ಹೂಡಿರುವರು.

ಕಾಕಃ ಕೃಷ್ಣಃ ಪಿಕಃ ಕೃಷ್ಣಃ ಕೋಭೇದಃ ಪಿಕ ಕಾಕಯೋಃ
ವಸಂತಕಾಲೇ ಸಂಪ್ರಾಪ್ತೇ ಕಾಕಃ ಕಾಕಃ ಪಿಕಃ ಪಿಕಃ........"

ಅಲ್ಲಮಪ್ರಭುಗಳ ವಿಷಯಕವಾಗಿ ವಾಸುದೇವಾಚಾರ್ಯರು ಇಲ್ಲದ ವಾದವಿವಾದದಲ್ಲಿ ಸಿಕ್ಕು ಬಿದ್ದದ್ದು ದುರ್ದೈವದ ಮಾತು. ಆ ಗದ್ದಲದಲ್ಲಿ, ಆ ಧೂಳಿಯಲ್ಲಿ, ಆಚಾರ್ಯರು ವೀರಶೈವ ವಿರೋಧಿಗಳೆಂದೂ, ಸನಾತನಿಗಳೆಂದೂ ಭಾವನೆಯಾಗಿರಲು ಸಾಕು. ಇದೂ ಅಲ್ಲದೆ, ಅವರ ಸ್ವಭಾವ ಸಹಜವಾದ ವಿನೋದದ ಮೂಲಕವಾಗಿಯೂ, ಅಲ್ಲಲ್ಲಿ ಗಾಯ – ಕೆರೆತಗಳೂ ಆಗಿರುವ ಸಂಭವವಿದೆ. ಹಲವು ಸಲ ಕೇವಲ ವಿನೋದಕ್ಕಾಗಿ ಬಂದ ಈ ಮಾತುಗಳು ಸಮಾಜದ ಎಲ್ಲ ವರ್ಗಗಳಿಗೂ ಕೊಟ್ಟ ಚಾಟಿಯೇಟವಾಗಿದ್ದರೂ, ಆ ಕಾಲದಲ್ಲಿ ಹಲ ವರ್ಗಕ್ಕೆ ಅಹಿತಕರವಾಗಿ ಕಂಡು ಬಂದಿರುವುದೂ

---

೧ ಅದೇ : ಎಸ್. ಬಿ. ನರಗುಂದಕರ ಅವರ ಲೇಖ : ಪು. ೨೭.

ಸಾಧ್ಯವಿದೆ. ಆದರೆ ಕಾಲ ಕ್ರಮಿಸಿದಾಗ, ಎದ್ದ ಧೂಳಿ ಪುನಃ ಈಗ ನೆಲಕ್ಕೆ ಕುಳಿತಾಗ, ಇಂಥ ವಿಷಯಗಳಲ್ಲಿ ಲೇಖಕರ ಬಗೆಗೆ ಪುನರ್ಮೌಲ್ಯಮಾಪನವಾಗುವುದು ಅವಶ್ಯವೆಂದು ಕಾಣುತ್ತದೆ. ಉದಾಹರಣೆಗೆ, ನರಗುಂದ ಬಾಬಾಸಾಹೇಬನು ಸೋತಾಗ, ಇಂಗ್ಲಿಷರು ನಡೆಸಿದ ನರಗುಂದದ ಸುಲಿಗೆಯ ವರ್ಣನೆಯನ್ನು ಆಚಾರ್ಯರು ಹೀಗೆ ಮಾಡುತ್ತಾರೆ :

'ಎದೆಯೊಡೆದು ಕೈ ಕಾಲುಗಳಲ್ಲಿಯ ನಾಡಿಗಳು ಸತ್ತಂತಾಗಿ ಆ ಜನರು ಅಲ್ಲಲ್ಲಿ ಪ್ರೇತಪ್ರಾಯ ಬಿದ್ದುಕೊಂಡಿದ್ದರು. ತನ್ನ ಮನೆಯಲ್ಲಿಯ ವಸ್ತು ಒಡವೆಗಳುಳಿದರೆ ಶ್ರೀ ವೆಂಕಟೇಶನಿಗೆ ಟೆಂಕಿಯ ಮುಡುಪು ಕೊಡುವೆನೆಂದು ಕೃಪಣನಾದ ಕೋಮಟಿಗನು ಮನಸ್ಸಿನಲ್ಲಿಯೇ ಬೇಡಿಕೊಳ್ಳುತ್ತಿದ್ದನು. ಏನು ಹೋದರೂ ತನ್ನ ಜನಿವಾರವೊಂದುಳಿಯಲೆಂದು ಚಿಂತಿಸಿ ಸಾಧುಭಾವನಾದ ಬ್ರಾಹ್ಮಣನೋರ್ವನು ತನ್ನ ಯಜ್ಞೋಪವೀತವನ್ನು ಟೊಂಕದಲ್ಲಿಯ ಪಂಜೆಯಲ್ಲಿ ಅಡಗಿಸಿಟ್ಟು, ವೆಂಕಟೇಶ ಸ್ತೋತ್ರವನ್ನು ಆರಂಭದಿಂದ ಸಂಗ್ರಾಮೇ ರಿಪುಸಂಕಟೇದವರೆಗೆ ಪಠಿಸುವಷ್ಟರಲ್ಲಿ, ಸೋಲ್ಜರನೊಬ್ಬನು ಆ ಬಡಬ್ರಾಹ್ಮಣನ ಬೆನ್ನ ಮೇಲೆ ಒಳಿತಾಗಿ ಗುಮ್ಮಿ ಅವನ ಮನೆಯಲ್ಲಿದ್ದ ವಸ್ತುಗಳನ್ನೆಲ್ಲ ಎತ್ತಿಕೊಂಡು ನಡೆದನು....ಮುಸಲ್ಮಾನನಾದ ಸೈನಿಕನೊಬ್ಬನು ಅಲ್ಲಿಯ ದೇವರ ಮನೆ ಹೊಕ್ಕು ದೇವರ ಪೆಟ್ಟಿಗೆ ದೊಡ್ಡದೇವರ ಪೆಟ್ಟಿಗೆಗಳನ್ನು ಬಿಚ್ಚಿ ಬಿಚ್ಚಿ ನೋಡಿದನು.'' ಆದರೆ, ಆ ಮುಂದೆ ಬಂದ ವಾಕ್ಯ ಅಭಿರುಚಿಯ ಎಲ್ಲೆಯನ್ನು ಸ್ವಲ್ಪ ಮೀರಿತೇನೋ ಎನಿಸುತ್ತದೆ. ಆದರೆ, ಇದನ್ನು ಅಂದಿನ ಪಡಸಿನಿಂದ ಕೂಡಿದ ವಿನೋದ ಪದ್ಧತಿಯೆಂದು ಅರ್ಥಮಾಡಿಕೊಳ್ಳಬೇಕು. ಅದರಂತೆಯೇ, ಆಚಾರ್ಯರು ಇದೇ ಸಂದರ್ಭದಲ್ಲಿ "ಆ ರಾಜಸ್ತ್ರೀಯರನ್ನು ಹಿಡಿದು ಮಾನ ತೆಗೆದುಕೊಳ್ಳಬೇಕೆಂಬ ಆಗ್ರಹವು ಇಂಗ್ಲಿಶ ಅಧಿಕಾರಿಗಿಲ್ಲದಿದ್ದರೂ ಸ್ವಾಮಿದ್ರೋಹಿಗಳೂ ಉಂಡ ಮನೆಯ ಗಳಗಳನ್ನೆಣಿಸುವವರೂ ಆದ ನರಾಧಮರಾದ ಬ್ರಾಹ್ಮಣರಿಗೆ ಅಂಥ ಆಗ್ರಹವು ಅಧಿಕವಾಗಿತ್ತು'' ಎಂದು ಹೇಳುತ್ತಾರೆ.

ಅದೇನೇ ಇದ್ದರೂ, ಸನ್ ೧೯೧೭ ರಲ್ಲಿ ಆಚಾರ್ಯರು ಶ್ರೀ ಬಸವೇಶ್ವರರ ಬಗೆಗೆ ಬರೆದ ಲೇಖ, ಅವರ ಉದಾರ ಮತವನ್ನೂ, ಹೃದಯವೈಶಾಲ್ಯವನ್ನೂ ತೋರಿಸುತ್ತದೆ. ವಾಸುದೇವಾಚಾರ್ಯರ ಉದಾರಮತವನ್ನು ತೋರಿಸಲಿಕ್ಕೆ ಅವರು ಸನ್ ೧೯೧೫ ರಲ್ಲಿ ಬರೆದ 'ನಮ್ಮ ಸಮಾಜವು' ಎಂಬ ಲೇಖವೂ ಒಳ್ಳೆಯ ನಿದರ್ಶನವಾಗಿದೆ :

"ಯಾರಿಗೆ ಸಮಾಜದ ಘಟನೆ, ಅಭಿವೃದ್ಧಿ ಹಾಗೂ ಲಯಗಳ ಕಾರಣಗಳು ಗೊತ್ತಿಲ್ಲವೊ, ಪಿತೃತರ್ಪಣವನ್ನು ದಾಟಿ ಯಾರ ಜ್ಞಾನವು ಮುಂದೆ ಹೋಗಿಲ್ಲವೊ, ವಿಷಯೋಪಭೋಗದ ಹೊರತು ಅನ್ಯವ್ಯವಸಾಯವು ಯಾರಿಗೆ ಗೊತ್ತಿಲ್ಲವೊ, ವರಿಷ್ಠರ ಪ್ರಶಂಸೆ ಕನಿಷ್ಠರ ಕೂಡ ದರ್ಪೋಕ್ತಿಗಳ ವಿನಾ ಅನ್ಯಪ್ರಕಾರದ ಭಾಷಣವನ್ನೆ ಯಾರು ಅರಿತಿಲ್ಲವೊ, ಯಾರಿಗೆ ಅನೇಕ ದೇಶಗಳೊಳಗಿನ ಉದ್ಯೋಗಿಗಳಾದ ಪುರುಷರು ಅಹರ್ನಿಶ ಪರಿಶ್ರಮಪಟ್ಟು ಪದಾರ್ಥ ಧರ್ಮಗಳ ಜ್ಞಾನವನ್ನು ಹೇಗೆ ಸಂಪಾದಿಸಿದರು, ವಿಪದ್ವಿನಾಶಕಗಳಾದ ಹಾಗೂ ಸುಖವರ್ಧಕಗಳಾದ ಎಷ್ಟೆಷ್ಟು ಸಾಧನಗಳನ್ನು ಶೋಧಿಸಿ ತೆಗೆದರು,........ಎಂಬ ವಿಷಯಕ್ಕೆ ಯಾರಿಗೆ ಅದರ ಗಂಧವು ಕೂಡ ಇಲ್ಲವೊ,........ಪುರಾತನ ಕಾಲದ ಸಂಸ್ಕೃತ ಗ್ರಂಥಗಳೆಲ್ಲ ಈಶ್ವರ ಪ್ರಣೀತವಾದ ಶಾಸ್ತ್ರಗಳೆಂತಲೂ, ಅವುಗಳನ್ನು ಮಥಿಸುವದು ಮಹಾಪಾತಕವೆಂತಲೂ ಯಾರ ತಿಳುವಳಿಕೆ, ಗುಣಕರ್ಮವಿಭಾಗದಿಂದ ನಾಲ್ಕು ವರ್ಣಗಳ ಉತ್ಪತ್ತಿಯಾಯಿತೆಂಬುದನ್ನು ತಿಳಿಯದೆ, ಜಗತ್ಕಾರಣನ ಮುಖದಿಂದ ಬ್ರಾಹ್ಮಣರೂ, ಬಾಹುಗಳಿಂದ ಕ್ಷತ್ರಿಯರೂ, ತೊಡೆಗಳಿಂದ ವೈಶ್ಯರೂ, ಪಾದಗಳಿಂದ ಶೂದ್ರರೂ ಎಂದು ವರ್ಣೋತ್ಪತ್ತಿಯ ವಿಷಯಕವಾಗಿ ಯಾರ ಕಲ್ಪನೆ (ಇರುವದೋ) ಪಂಚಾಮೃತ ಧೂಪ ದೀಪಗಳಿಂದ ಮಾಡಲ್ಪಟ್ಟ ಪೂಜೆಯೆ ಈಶ್ವರನಿಗೆ ಮಾನ್ಯವು, ಇದನ್ನುಳಿದ ಈಶ್ವರ ಪೂಜೆಯ ಅನ್ಯವಾದ ಪ್ರಶಸ್ತ ಮಾರ್ಗವು

ಇಲ್ಲೆಂದು ಯಾರ ಧರ್ಮ ವಿಚಾರಗಳು (ಇರುವವೋ), ಇದ್ದ ಸಾಮಾಜಿಕಸ್ಥಿತಿಯೆ ಅತ್ಯುತ್ತಮವಾದದ್ದು, ಅದರಲ್ಲಿ ಕೈ ಹಾಕಲು ಅವಕಾಶವಿಲ್ಲೆಂದು ಯಾರ ದೃಢವಾದ ನಂಬಿಕೆಯು. ಜ್ಞಾನ ಸಂಪಾದಿಸುವದು ಪುರುಷರ ಕರ್ತವ್ಯವು, ಶಿಶುಸಂಗೋಪನ ಸ್ತ್ರೀಯರ ಕರ್ತವ್ಯವು, ಪುರುಷನು ಸ್ವಾಮಿಯು, ಸ್ತ್ರೀಯು ದಾಸಿಯು, ಸ್ವಾತಂತ್ರ್ಯವು ಪುರುಷರಿಗೆ, ಪಾರತಂತ್ರ್ಯವು ಸ್ತ್ರೀಯರಿಗೆ, ಗೃಹವೆ ಸ್ತ್ರೀಯ ವಿಶ್ವವು, ವೈಧವ್ಯವೇ ಅವಳ ಮಹಾವ್ರತವು– ಇಂಥ ಇಲ್ಲವೆ ಈ ಮಾದರಿಯ ಸಾಮಾಜಿಕ ಧಾರ್ಮಿಕ ವಿಚಾರಗಳನ್ನು ಎದೆಯಲ್ಲಿಟ್ಟುಕೊಂಡ ಸಂಕೋಚವೃತ್ತಿಯ ಜನರು ಪ್ರಗತಿಯ ಕಾಲಕ್ಕೆ ಸಮಾಜಾಗ್ರಣಿಗಳು ಆಗುವದರಿಂದ ಹಾನಿಯಲ್ಲದೆ ಲಾಭವಾವದು ?''

ಆಚಾರ್ಯರ ಸಾಹಿತ್ಯಸೃಷ್ಟಿಯ ವೈಶಿಷ್ಟ್ಯಗಳು :

ಮೊದಲನೆಯದಾಗಿ, ಆಚಾರ್ಯರು ಸಾಹಿತ್ಯದ ಎಲ್ಲ ವಿಭಾಗಗಳಲ್ಲಿಯೂ ಕೃಷಿ ಮಾಡಿದರೆಂಬುದನ್ನು ಈಗಾಗಲೇ ಹೇಳಿದೆ. ಹೊಸಗನ್ನಡದ ಈ ಉದಯಕಾಲವು ಕೇವಲ ಅನುಕರಣ ಇಲ್ಲವೆ ಅನುವಾದದ ಯುಗ ಎಂಬ ಹೇಳಿಕೆಯನ್ನು ಅಲ್ಲಗಳೆಯುವಂತೆ ಅವರು ಕಥೆ, ಕಾದಂಬರಿ, ಕಾವ್ಯ, ನಾಟಕ, ಪ್ರಬಂಧ ಸಾಹಿತ್ಯಗಳೆಲ್ಲದರಲ್ಲಿಯೂ ಅನೇಕ ಸ್ವೋಪಜ್ಞವಾದ ಕೃತಿಗಳನ್ನು ರಚಿಸಿದರು.

ಎರಡನೆಯದಾಗಿ, ಇಂಗ್ಲಿಷ ಸಾಹಿತ್ಯದಿಂದ ಕನ್ನಡಿಸುವುದರಲ್ಲಿಯೂ ಕೇವಲ ಅನುವಾದ ಮಾಡದೆ, ಮೂಲಕೃತಿಗಳ ರೂಪಾಂತರ ಮಾಡಿ, ನಮ್ಮ ಕನ್ನಡ ಸಮಾಜಕ್ಕೆ ಅವು ಹೊಂದುವಂತೆ ಅವನ್ನು ಅಳವಡಿಸಿದರು. ಇದರಿಂದ ಈ ಕೃತಿಗಳನ್ನು ಓದುವಾಗ ಇವು ಸ್ವತಂತ್ರ ಕೃತಿಗಳೇನೋ ಎಂಬ ಭಾವನೆ ಬರುತ್ತದೆ. ಈ ಕಾರಣದ ಮೂಲಕವೇ ಪತಿವಶೀಕರಣದ ಕಾರ್ಯಕ್ಷೇತ್ರ ಒಂದು ವೀರಶೈವ ಮಠವಾಯಿತು; ಮರ್ಚಂಟ್ ಆಫ್ ವೆನಿಸ್ಸದ ಶೈಲಾಕ್ ಕನ್ನಡದ ಜನಕ್ಕೆ ಪರಿಚಿತನಾದ ಮಾರವಾಡಿಯಾದ.

ಮೂರನೆಯದಾಗಿ, ಆಚಾರ್ಯರು ಪಾತ್ರಗಳ ಹೆಸರಿಡುವಲ್ಲಿ ಎತ್ತಿದ ಕೈ ಎಂದು ಹೇಳಬೇಕು. ಅವರು ಇಟ್ಟ ಹೆಸರುಗಳಲ್ಲಿ ಆ ಆ ವ್ಯಕ್ತಿಗಳ ಸ್ವಭಾವವೇ ಎದ್ದು ಕಾಣುತ್ತದೆ. ಆ ಹೆಸರುಗಳ ಹಿಡಿತವೂ ಚಿತ್ತವೇಧಕವಾಗಿದೆ. ಹೀಗಾಗಿ, ಸುರತನಗರದ ಶ್ರೇಷ್ಠಿಯ ಮಾರವಾಡಿ, ಕಠೋರಮಲ್ಲನಾದನು. ದುಃಖದ ಸಮಯದಲ್ಲಿಯೂ ಸಮಾಧಾನ ವೃತ್ತಿಯಲ್ಲಿರುವ ಎಂಟೋನಿಯೊ ಸಂತೋಷಪ್ರಸಾದನಾದನು. ಬೆಸೇನಿಯೋ, ಬಸಂತಕುಮಾರನಾದನು. ಗೋಬೋನು, ಗೊಬ್ಬಿಯ ಸಂಗನಾದನು. ಮಾರ್ಗೇರಿಯು ಮರಿಗೆವ್ವಳಾದಳು. ನೆರಿಸಾ, ನರ್ಮದೆಯೂ, ಜೆಸಿಕಾ ಯಶೋದೆಯೂ ಆದರು. ಇದರಂತೆಯೇ ಪತಿವಶೀಕರಣದಲ್ಲಿ ಟೋನಿ ಲಂಪಕಿನ್, ತಮ್ಮಣ್ಣಗೌಡನಾದನು. ಪತ್ತೆದಾರಿ ಕಥೆಗಳಲ್ಲಿಯ ಶರ್ಲಾಕ್ ಹೋಮ್ಸ, ಸರಲಾಕ್ಷ ಹುಲಿಮೀಶಿರಾಯನಾದನು.

ನಾಲ್ಕನೆಯದಾಗಿ ಸಮಕಾಲೀನ ವಿಷಯಗಳ ಉಲ್ಲೇಖ ಆಚಾರ್ಯರ ಒಂದು ವೈಶಿಷ್ಟ್ಯವಾಗಿದ್ದಿತು. ಉದಾಹರಣೆಗೆ, ಪತಿವಶೀಕರಣ ನಾಟಕದಲ್ಲಿ, ತಮ್ಮನಗೌಡ, ಬಿದ್ದಾಡಿ ಮೊದಲಾದವರು ಸುರಾಪಾನಕ್ಕಾಗಿ ಸುಖವಾಸವೆಂಬ ಉಪಹಾರದ ಅಂಗಡಿಯಲ್ಲಿ ಕುಳಿತಾಗ, ಈ ಸಂಭಾಷಣೆ ನಡೆಯುತ್ತದೆ :

ಬಿದ್ದಾಡಿ : ಏ ಅನಂತ ಬತ್ತಾ ತೋಟಿಗ್ಯಾ, ಇನ್ನೊಂದು ಗುಂಪೆ ಒಡೆಗಳನ್ನು ತಂದು ಒಟ್ಟು.

ಅನಂತ : ಎಲೇ ಬಿದ್ದಾಡೀ ಇನ್ನೊಮ್ಮೆ ತೋಟಿಗನೆಂದು ನನ್ನನ್ನು ಕರೆದರೆ ಒಳಿತಾಗಲಿಕ್ಕಿಲ್ಲ ನೋಡು. ನಾವು ಉಡುಪಿಯ ಬ್ರಾಹ್ಮಣರು. ಜನಿವಾರ ಕಾಣದೆ ?

ಕಲ್ಲನಗೌಡಾ : ಬಟ್ಟಾ ಜಗಳಾ ಮಾಡಬ್ಯಾಡಾ ! ಜುಟ್ಟ ಹಾರ್ಯಾಡಾವು !! ಒಳ್ಳೇ ಮಾತಿಲೆ ನಾಕ ಸೇರ ಒಡೆ. ನಾಕ ಸೇರ ಸಂಗೀತ ತಂದ ಸುರುವು ! ನಾವು ನಿನ್ನ ಜನಿವಾರ ನೋಡಿ ಇಲ್ಲಿ ಬಂದಿಲ್ಲ. ೧

ಇಲ್ಲಿಯ ಬ್ರಾಹ್ಮಣ– ತೋಟಿಗ ವಾಗ್ವಾದ ಆ ಕಾಲದಲ್ಲಿ ಧಾರವಾಡದಲ್ಲಿದ್ದ ಚಹದಂಗಡಿಗಳೆಲ್ಲ ಕೇವಲ ಉಡುಪಿ ಬ್ರಾಹ್ಮಣರಿಂದಲೇ ನಡೆದುವಾಗಿರಲಿಲ್ಲವೆಂಬುದನ್ನು ತೋರಿಸುತ್ತದೆ. ಆ ಕಾಲಕ್ಕೆ ದಕ್ಷಿಣ ಕನ್ನಡದ ಹಲವು 'ತೋಟಿಗ' ಜಾತಿಯವರೂ ಧಾರವಾಡದಲ್ಲಿ ಉಪಾಹಾರ ಗೃಹಗಳನ್ನು ತೆಗೆಯಲು ಪ್ರಾರಂಭಿಸಿದ್ದರು.

ಅದರಂತೆಯೇ, ಹಳೆಯ ಮೈಸೂರಿನ ಬಗೆಗೆ ಬರುವ ಈ ತಿವಿತವನ್ನೂ ಗಮನಿಸಬಹುದು. ತಮ್ಮಣ್ಣಗೌಡನು 'ಮೆರೆವ ಕೇವೆಯನುಟ್ಟು ತಿರುಗುವ ಸಂನ್ಯಾಸಿ ಇರುಳು ಕಾಮಿನಿಯರನರಸುವನು' ಎಂಬ ಪದ ಹಾಡಿದ ಮೇಲೆ ಈ ರೀತಿ ಸಂಭಾಷಣೆ ನಡೆಯುತ್ತದೆ :

ಬಿದ್ದಾಡಿ : ಪದ್ದಾಗ ಅಸರಗ್ಗೇ ಅಂದ್ರ ಎಳ್ಳಾನ ಅರ್ದಾ ಇಲ್ಲ ! ಮೈಸೂರಾಗ ನೋಡ್ರಿ, ಪದ್ದಾಗ ಪ್ರೀತಿ ಮಾತ ಬಂದ್ರ ಅಲ್ಲೆವರು ಬಲುಬೆಂಕಿ !

ಕಲ್ಲನಗೌಡ : ಏಳಲೇ ಕಿಸುಬಾಯಿದಾಸಾ ! ಹೆಣಗಂಡಿನ ವ್ಯಾಲಿದ್ರ ಪದಾ ಕೇಳಾಣ ! ಮೈಸೂರು ನನಗ ಅರೀದ್ದೇನು ? ನಾಟಕಾನ ಓದಿಗ್ದೆ ! ನಾಟಕದ ಸ್ತ್ರೀ ಪಾರ್ಟು ಪುರುಷ ಪಾರ್ಟು ಕೂಡಿ ಗಬಕ್ಕನೆ ಅಪಿಗೊಂಡರ ಅಲ್ಲಿ ಹೆಂಗಸರೂ ಗಂಡಸರೂ ಕೂಡೇ ಚಪ್ಪಾಳಿ ಹೊಡದು ವಣಸಮೋರ್ ಅಂತ ಬೊಬ್ಬೀ ಹೋಡೀತಿದ್ರು !

ಬಿದ್ದಾಡಿ : ಅಲ್ಲೆ ದೊಡ್ಡವರಂಬೂ ಅವರು ಸ್ರಿಂಗಾರ ಪಾಡಲ್ಲಂತಿರಬೇಕು. ಅವರಿಗೆ ನಾಟಕದ ತುಂಬ ಗಾದೀ ಮಾತಿರಬೇಕು. ಹೆಂಗಸರೂ ಗಂಡಸರೂ ಸಂಸಾರ ಬಿಟ್ಟು ಮಟಾ ಸೇರತಿರಬೇಕು. ಬಾವಾಗೊಳ ಪದಾ ಇರಬೇಕ ಅಂದ್ರ ನಾಟಕಂತ. ೨

ವಸ್ತುಸ್ಥಿತಿ ಏನೇ ಇರಲಿ, ಆಚಾರ್ಯರ ಅನುಭವಕ್ಕೆ ಬಂದ ಮೈಸೂರಿನ ವರ್ಣನೆ ಇದು. ಹಾಗೆಯೇ, 'ಇಂದಿರೆ' ಕಾದಂಬರಿಯಲ್ಲಿ ಫಣೀಂದ್ರಾಚಾರ್ಯರು ವಿಧವಾವಪನ ಅನಾಚಾರದ ಬಗೆಗೆ ಮಾಡಿದ ಭಾಷಣದ ಉಲ್ಲೇಖವನ್ನು ಅನ್ಯತ್ರ ಕೊಟ್ಟದ್ದನ್ನೂ ನೋಡಬಹುದು.

ಐದನೆಯದಾಗಿ, ಆಚಾರ್ಯರ ಸಾಹಿತ್ಯ ಕೃತಿಗಳಲ್ಲೆಲ್ಲ ವಿಜಾಪುರ, ಧಾರವಾಡ ಜಿಲ್ಲೆಗಳ ನೆಲದ ಮಣ್ಣಿನ ಸುವಾಸನೆ ತುಂಬಿ ಸೂಸುತ್ತದೆ. ಇದನ್ನು ಅವರು ಕೊಡುವ ಉಲ್ಲೇಖಗಳಲ್ಲಿಯೂ, ಶೈಲಿಯಲ್ಲಿಯೂ ಕೂಡಿಯೇ ಗಮನಿಸುತ್ತೇವೆ. ಉದಾಹರಣೆಗೆ, 'ಪುರಂದರದಾಸ' ನಾಟಕದಲ್ಲಿ ಕೃಷ್ಣಪ್ಪ ನಾಯಕ ತನ್ನಲ್ಲಿ ಬಂದ ಬ್ರಾಹ್ಮಣರನ್ನು ಯಾವೂರಾಯಿತೆಂದು ಕೇಳುತ್ತಾನೆ. ಆಗ ನಡೆದ ಸಂಭಾಷಣೆ:

ಕೃಷ್ಣ : ....ಯಾವ ಸ್ಥಳ ನಿಮ್ಮದು ?

ಗೋವಿಂದ : ಮಹಾರಾಯಾ, ನಮ್ಮದು ಖ್ಯಾಡಮಣ್ಣೂರು.

೧ ಪತೀವಶೀಕರಣ : ೧೯೨೮ : ಪು. ೧೭.

೨ ಅದೇ : ಪು. ೨೦.

ಕೃಷ್ಣ : ಖ್ಯಾಡಮಣ್ಣೂರು; ಆ ಊರಲ್ಲೆಲ್ಲ ತಿರುಕೊಳ್ಳುವವರ ಮನೆಗಳೇ ಇರುವವೇನು? ದೇಶಾವರಕ್ಕೆ ಬಂದ ಬ್ರಾಹ್ಮಣರೆಲ್ಲ ಖ್ಯಾಡಮಣ್ಣೂರು, ಶೂರ್ಪಾಲಿ, ಅಲೂರು ಇವೇ ಮೂರು ನಾಲ್ಕು ಊರಿನವರಾಗಿರುತ್ತಾರೆ. ನಿಮ್ಮೂರ ಗ್ರಾಮದೇವತೆಯು ತಿರಕವ್ವನೇ ಆಗಿರಬೇಕು.

ಗೋವಿಂದ : ನಮ್ಮ ಊರು ಒಂದೇ ಅಲ್ಲ; ಎಲ್ಲ ಊರ ಬ್ರಾಹ್ಮಣರ ಮೇಲೆಯೂ ತಿರಕವ್ವನ ಅನುಗ್ರಹವೇ ಇರುವದು. [೧]

ಇಲ್ಲಿ ಬರುವ ಖ್ಯಾಡಮಣ್ಣೂರು, ಶೂರ್ಪಾಲಿ, ಅಲೂರುಗಳು ವಿಜಾಪುರ ಜಿಲ್ಲೆಯಲ್ಲಿಯ ಸ್ಥಳಗಳು.

'ಪತಿವಶೀಕರಣ'ದ ಶಿವಗಂಗೆ ಹೇಳುವ ಮಾತಿದು : ''ನಮ್ಮ ಆರಮನಿ; ಕೂರಿಗೆ ಮಾರುದ್ದ ಈ ಪಡಸಾಲೆಯನ್ನು ನೋಡಿದರ ಪಂಡ್ಯಾನ ಮಠಕ್ಕೂ ಅತ್ತತ್ತಾಗಿ ಕಾಣುತ್ತದೆ.'' ಇನ್ನೊಂದೆಡೆಗೆ ಬರುವ ಮಾತು : ''ಪಡಸಾಲೆ ನೋಡು, ವಿಜಾಪುರದ ಆಸಾರಮಹಾಲಿನಂತೆ ಎಷ್ಟು ದೊಡ್ಡ ದಾಗಿವೆ'' ತಮ್ಮಣ್ಣಗೌಡನ ಸ್ನೇಹಿತರೆಂದರೆ ಹುಲಿಗೇರಿ ಶ್ರೀ ಸಂಗೀತ ನಾಟಕ ಕಂಪನಿಯ ಕಲ್ಲನಗೌಡ, ಸೂಳಿಗಾವಿಯ ಗಿರಿಮಲ್ಲ, ಚಪ್ಪರಬಂದ ಅಮೀನ ಅದಾಬ, ಕಂದಗಲ್ಲ ಜೀವಪ್ಪ. ಈ ನಾಟಕದಲ್ಲಿ, ಧಾರವಾಡದ ಅತ್ತಿಕೊಳ್ಳ, ಕೆಲಗೇರಿ, ಕಾಲೇಜದಿನ್ನೆ, ಎಲ್ಲವುಗಳೂ ಬರುತ್ತವೆ. ತಮ್ಮಣ್ಣಗೌಡ ಚಹ ಸಿಗದಿದ್ದರೆ, "ರಾಯಪ್ಪನಾಯಕರ ಫಲಾಹಾರ'' ಮಾಡುತ್ತೇನೆಂದು ಹೇಳುತ್ತಾನೆ. ಪತಿವಶೀ ಕರಣದಲ್ಲಿ ಸುಪ್ರಸಿದ್ಧ ಡೆಪ್ಯುಟಿ ಚೆನಬಸಪ್ಪನವರ ಉಲ್ಲೇಖವೂ ಬರುತ್ತದೆ. ಶಿವಗಂಗೆ, ತಮ್ಮಣ್ಣ ಗೌಡನನ್ನು ಹದಿನಾರು, ಇಪ್ಪತ್ತೈದು ಕೂಡಿಸಿದರೆ, ಎಷ್ಟಾಗುತ್ತದೆ ಎಂದು ಕೇಳಿದಾಗ, ರಾಚಿದೇವ, ''ಲೆಕ್ಕದಲ್ಲಿ ಇವನೊಬ್ಬ ಪ್ರತಿ ಚೆನಬಸಪ್ಪನೇ'' ಎಂದು ಹೇಳುತ್ತಾನೆ.

ಶೈಲಿಯ ದೃಷ್ಟಿಯಿಂದ "ರಾಯಪ್ಪನಾಯಕನ ಫಳಾರ", ''ನೆನಸುವವರೊಳಗೆ ತೊನಶಾಗೌಡ ಬಂದ'', ''ನಿಮ್ಮ ಊರಿಗೆ ಗಚ್ಚ ಮಾಡು'', ''ಝ್ಯಾಂ ಬಡಿಯುವದು'', ''ಅಬಟು ಹೋಗಿ ಜಬಟಾಗು'', ''ಬನದ ಹುಣ್ಣಿವೆಗೆ ಬನ ನಡುಗುವದು'' "ಸುಟ್ಟು ಸುಡ ಬಗ್ಗೆ ಮಾಡು" ''ಶುಂಠಿ'' ಇವೆಲ್ಲ ಉತ್ತರ ಕರ್ನಾಟಕದ ನೆಲದ ಮಾತುಗಳು.

ಆರನೆಯದಾಗಿ ವಾಸುದೇವಾಚಾರ್ಯರು ಕನ್ನಡಕ್ಕೆ ಆಚಾರ್ಯಶೈಲಿ ಎಂಬುದನ್ನು ಕಾಣಿಕೆ ಯಾಗಿ ಕೊಟ್ಟರು. ಇದರ ವಿವರವನ್ನು ಈಗಾಗಲೇ ಕೊಡಲಾಗಿದೆ.

ಏಳನೆಯದಾಗಿ, ಆಚಾರ್ಯರು ಯಾವ ವಿಷಯವನ್ನೇ ತೆಗೆದುಕೊಂಡರೂ, ಅದನ್ನು ಸಂಪೂರ್ಣವಾಗಿ ಅವಗತ ಮಾಡಿಕೊಳ್ಳುತ್ತಿದ್ದರು. ಮೊಗಲ ಕಾಲದ ಐತಿಹಾಸಿಕ ಕಾದಂಬರಿಗಳನ್ನು ಬರೆಯುವದಾದರೆ, ಆ ಕಾಲದ ವಿವರವಾದ ಅಭ್ಯಾಸವನ್ನು, ಉರ್ದು ಭಾಷೆಯ ಪರಿಚಯವನ್ನು ಮಾಡಿಕೊಂಡಿದ್ದರು. ಇದಕ್ಕೆ ನಿದರ್ಶನವಾಗಿ ಈ ಕೆಳಗಿನ ಅವತರಣಿಕೆಯನ್ನು ಕೊಡಬಹುದು. ಇದ ರಲ್ಲಿಯ ಶೈಲಿಯ ಸುಭಗತೆಯನ್ನೂ ಗಮನಿಸಬೇಕು :

" ಬರ್ಹಾಣಪುರದಲ್ಲಿ ಔರಂಗಜೇಬ ಮುರಾದರ ಸಂದರ್ಶನವಾಯಿತು. ಬಿಳೀಗಂಜಿಯ ಚಲ್ಲಣವನ್ನುಟ್ಟು, ಮೈಯಲ್ಲಿ ಹಸರು ಬಣ್ಣದ 'ಕಫನಿ'ಯನ್ನು ತೊಟ್ಟು, ತಲೆಗೆ ತೆಳುವಾದ ಬಿಳಿಯ

೧ ವಾಸುದೇವ ಪ್ರಶಸ್ತಿ : ೧೯೬೪ : ಪು. ೧೩೬

ಅರಿವೆಯ ಟೊಪ್ಪಿಗೆಯನ್ನು ಹಾಕಿಕೊಂಡು ಔರಂಗಜೇಬನು ನಿಂತಿದ್ದನು. ಕುದುರೆಯ ಕೊರಳಿಗೆ ಹಾಕಿದ ಮಣಿಯ ಸರದಂತೆ ವಿಚಿತ್ರವಾಗಿ ಕಾಣುವ ಸ್ಫಟಿಕಮಣಿಯ ಮಾಲೆಯು ಅವನ ವಿಶಾಲವಾದ ಎದೆಯಲ್ಲಿ ಜೋತಾಡುತ್ತಿತ್ತು. ಕೈಯಲ್ಲಿ ಕರೀಮಣಿಗಳ ಮಾಲೆಯನ್ನು ಹಿಡಕೊಂಡು ಬಾಯಿಯಲ್ಲಿ ಏನೇನೋ ಒಟಗೊಡುತ್ತ ಆ ಫಕೀರನು ಮಾಲೆಯಲ್ಲಿಯ ಮಣಿಗಳನ್ನು ಭರಭರನೆ ಎಣಿಸುತ್ತಿದ್ದನು. ಒಂದು ಆವರ್ತಿನಿಯಾವ ಬಳಿಕ ಆ ಯೋಗಿಯು 'ಹರ್ ದಮ್ ಅಲ್ಲಾಃ! ಹರ್ ದಮ್ ಅಲ್ಲಾಃ! ಅಲ್ಲಾಃ! ಅಲ್ಲಾಃ!' ಎಂದು ಗರ್ಜಿಸಿ ಭಕ್ತಿಪುರಸ್ಸರವಾಗಿ ಆಕಾಶವನ್ನು ನಿರೀಕ್ಷಿಸಿ ನೋಡುವನು."[೧]

ಎಂಟನೆಯದಾಗಿ, ಆಚಾರ್ಯರ ವಿನೋದಕೌಶಲ ಗಮನಾರ್ಹವಾಗಿದೆ. ಈ ಬಗೆಗೆ ಪಂಡಿತ ಕೇಶವಶರ್ಮಾ ಗಲಗಲಿಯವರು ಹೀಗೆ ಹೇಳಿದ್ದಾರೆ :

"ಉತ್ತರ ಕರ್ನಾಟಕದಲ್ಲಿ ಹಾಸ್ಯರಸದ ಒಂದು ಸ್ವರೂಪವನ್ನು ನಿರ್ಮಿಸಿದ ಶ್ರೇಯಸ್ಸು ೨೦ನೇ ಶತಕದ ಮೊದಲಿನ ಕಾಲು ಭಾಗದಲ್ಲಿ ಮುಖ್ಯವಾಗಿ ವಾಸುದೇವರಿಗೆ ಸಲ್ಲುತ್ತದೆ. ಮರಾಠಿಯಲ್ಲಿ ಆಗ ಗಡಕರಿ. ಕೊಲ್ಹಟಕರ ಕೆಲವು ವಿನೋದಿ ಲೇಖಕರು ಆಗಿಹೋದರು........ ಕನ್ನಡದಲ್ಲಿ ಹಾಸ್ಯರಸದ ಬಗ್ಗೆ ಯಾರಾದರೂ ಕೇಳಕರರಂತೆ ವಿಮರ್ಶಕ ಗ್ರಂಥವನ್ನು ಬರೆದರೆ ವಾಸುದೇವರ ಸಹಜ ಮೃದು ಮಧುರ ಹಾಸ್ಯವು ಉದಾಹೃತವಾಗುವದು."[೧]

ವಿನೋದ ಆಚಾರ್ಯರ ಬತ್ತಳಿಕೆಯಲ್ಲಿರುವ ಮಹಾಸ್ತ್ರ. ಈ ವಿನೋದ ಅನೇಕ ಸಲ ಬಹುತೀಕ್ಷ್ಣವಾಗಿ, ವ್ಯಂಗ್ಯಕಟಕಿಗಳ ಕಡೆಗೂ ವಾಲುತ್ತಿತು. ಆಚಾರ್ಯರು ಚಿತ್ರಿಸಿದ ಡಾಕ್ಟರ ಭಾಸ್ಕರಪಂತ, ಸದಗಿನಲ್ಲಿ ಲೆಫ್ಟರೈಟ ಹೆಜ್ಜೆಗಳನ್ನಿಡುತ್ತ ಮಾರ್ಚ್ ಮಾಡುತ್ತಿದ್ದ ಮದ್ದೂರ ನಟೇಶ, ತಮ್ಮಣಗೌಡ, ಗೊಬ್ಬೀಸಂಗ, ಕೈಜೋಳಿಗಿ ಮೊದಲಾದವರೆಲ್ಲ ಷೇಕ್ಸಪಿಯರ್ ಮಹಾ ಕವಿ ಚಿತ್ರಿಸಿದ ಫಾಲ್‌ಸ್ಟಾಫ್, ಮೆಲ್ವೋಲಿಯೋ, ಟೋಬಿ ಬೆಲ್ಚ ಮೊದಲಾದವರ ಹಾಗೆ ಅಜರಾಮರರು ಅವರನ್ನು ನೆನೆದಾಗಲೆಲ್ಲ ಈ ಬಾಳಿನ ಭಾರ ಎಷ್ಟೋ ಕಡಿಮೆಯಾಗುತ್ತದೆ. ಔರಂಗಜೇಬ ಕಾದಂಬರಿಯಲ್ಲಿ ಬರುವ ಅಬದುಲ್‌ಮಜೀದನ ಆಕೃತಿ ಹೀಗೆ: "ಗೋಪುರಾಕಾರನಾಗಿ ಕುಳಿತಿರುವ ಮಹಾಕಾಯ" "ಮುಂಡಿಗೆಯ ತುಂಡುಗಳ ಮೇಲಿರಿಸಿದ ತುಂಬಿದ ಚೀಲದಂತಿರುವ ಹೊಟ್ಟೆ" "ಗುಳ್ಳವ್ವನಂತಿರುವ ಅವನ ಆನೆಯ ಕುತ್ತಿಗೆಯ ಮೇಲಿನ ಮುಖ" "ಗಳಿಗೆ ಜಲ್ಲಣ, ತೇರಿನ ಗವಸಣಿಕೆಯಂತೆ ಇರುವ ನಿಲುವಂಗಿ........ ಭವ್ಯವಾದ ಹೊಟ್ಟೆಯ ತಿದಿಯು ಎಡೆಬಿಡದೆ ಊದುತ್ತಿರಲು ಅಥತ ಪ್ರಮಾಣವಾಗಿ ಹೊರಟ ಉಸಿರಿಗೆ ಗೆಣಸಿನಂತೆ ಇರುವ ಅವನ ಮೂಗು ಸಾಲದೆ ವಿಸ್ತಾರವಾಗಿ ತೆರೆದಿದ್ದ ಬಾಯಿ" ಇತ್ಯಾದಿ. ಔರಂಗಜೇಬನ ಸೈನಿಕರು ದಾಳಿ ಮಾಡಿದಾಗ, ಅಲ್ಲಿಯ ಬ್ರಾಹ್ಮಣ ವಿಧವೆಯರು "ಅಯ್ಯೊ. ನಮ್ಮಪ್ಪಗಳಿರಾ, ಪ್ರತದ ಉಪ್ಪಿನಕಾಯಿಗಳನ್ನು ದಯಮಾಡಿ ಮುಟ್ಟಬೇಡಿರಿ ಕಂಡಿರಾ" ಎಂದು ಬೇಡಿಕೊಳ್ಳುತ್ತಾರೆ.

ಮಹಾ ಮೇಧಾವಿ ವಿನ್‌ಸ್ಟನ್ ಚರ್ಚಿಲ್‌ರ ತಾಯಿಯೂ, ಲಾರ್ಡ ರ್‍ಯಾಂಡೋಲ್ಫ ಚರ್ಚಿಲ್‌ರ ಹೆಂಡತಿಯೂ ಆಗಿದ್ದ ಲೇಡಿ ಚರ್ಚಿಲ್‌ಳು ಸನ್ ೧೯೧೩ ರಲ್ಲಿ ತನ್ನ ವಯಸ್ಸಿನ ೬೪ ನೆಯ ವರ್ಷದಲ್ಲಿ ಮೂರನೆಯ ಮದುವೆಯಾದಳೆಂಬ ಸುದ್ದಿಯನ್ನು ಓದಿ ವಾಸುದೇವಾಚಾರ್ಯರು ತಮ್ಮ "ಸ್ಫುಟ ವಿಚಾರ"ದಲ್ಲಿ ಹೀಗೆ ಬರೆದಿದ್ದಾರೆ :

"ಮುತ್ತಮ್ಮನ ಸ್ತುತ್ಯವಾದ ಮದುವೆಯು

ಆಂಗ್ಲ ಮಹಾಮುತ್ಸದ್ದಿಯಾದ ಲಾರ್ಡ ರ್‍ಯಾಂಡೋಲ್ಫ ಚರ್ಚಿಲ್ ಪ್ರಭುವಿನ ಹೆಂಡತಿಯೂ,

೧ ಔರಂಗಜೇಬ : ೧೯೪೬ : ಪು. ೧೬೧,

ಮೊನ್ನೆ ಮೊನ್ನೆ ಬ್ರಿಟಿಶ ಮಂತ್ರಿಮಂಡಲದಲ್ಲಿ ಮಾನ್ಯನಾಗಿದ್ದ ವಿನ್‌ಸ್ಟನ್ ಚರ್ಚಿಲ್‌ನ ಜನನಿಯೂ ಆಗಿದ್ದ ಲೇಡಿ ಚರ್ಚಿಲ್ ಎಂಬ ಸೌಭಾಗ್ಯಕಾಂಕ್ಷಿಣಿಯಾದ ಜರಠ ಕನ್ಯೆಯು ಮೊನ್ನೆ ಲೆಫ್ಟನಂಟ ಪೋರ್ಚನೆಂಬ ಶಿಪಾಯಿಗಡಿಯನ್ನು ಮದುವೆ ಮಾಡಿಕೊಂಡಳೆಂಬ ಅಚುಂಬಿತವಾದ ವಾರ್ತೆ ಬಂದಿರುವದು. ಮದುವೆಯ ಕಾಲಕ್ಕೆ ಈ ನೂತನಾವತಾರೆಯಾದ ಕನ್ಯೆಯ ವಯಸ್ಸು ೬೪ ಇತ್ತು. ನಮ್ಮಲ್ಲಿ 'ಅಷ್ಟವರ್ಷಾ ಭವೇತ್ ಕನ್ಯಾ' ಎಂದು ಹೇಳಿದೆ. ಆ ಅಷ್ಟಕ್ಕೆ ಅಷ್ಟರಿಂದ ಗುಣಿಸಲಾಗಿ ಬಂದಷ್ಟು ಗುಣಾಕಾರವೆ (೮×೮=೬೪) ಲೇಡಿ ಚರ್ಚಿಲ್‌ಳ ವಯಸ್ಸಾಗಿರುವದರಿಂದ ಅವಳು ಕನ್ಯಾತ್ವ ವರ್ಗದಲ್ಲಿರುವಳೆಂದು ಹೇಳಬಹುದು. ಲಾರ್ಡ್ ರ್‍ಯಾಂಡೊಲ್ಪ ೧೮೯೫ ರಲ್ಲಿ ತೀರಿಕೊಂಡ ಬಳಿಕ ಆ ಸತಿಯು ಮತ್ತೊಬ್ಬ ವರನನ್ನು ಹುಡುಕಿ ಮದುವೆಯಾಗಿ ಏನೋ ನಿಮಿತ್ತದಿಂದ ಸನ್ ೧೯೧೪ ರಲ್ಲಿ ತನ್ನ ಮಂಗಲಸೂತ್ರವನ್ನು ಹರಿದೊಗೆದು ಆ ದ್ವಿತೀಯ ಪತಿಯನ್ನು ತನ್ನ ಮಂಚಕದಿಂದ ಬಹಿಷ್ಕಾರ ಮಾಡಿಸಿ, ಈಗ ಈ ಮೂರನೆಯ ಕಲ್ಯಾಣೋತ್ಸವವನ್ನು ಬೆಳಸಿಕೊಂಡಿರುವಳು........ ನಮ್ಮಲ್ಲಿಯಾದರೂ ಖಾನೆಸುಮಾರಿಯಲ್ಲಿ ಮಾತ್ರ ಗಂಡಸರೆಂದು ಬರಿಸಿಕೊಳ್ಳಲಿಕ್ಕೆ ಪಾತ್ರರಾದ ವೃದ್ಧ ಮದಿವಕ್ಕಳು ತಮ್ಮ ಪೂರ್ವದ ಹೆಂಡತಿಯ ಸ್ಮಶಾನಯಾತ್ರೆಯನ್ನು ಮುಗಿಸಿಕೊಂಡು ಮರಳಿ ಮನೆಗೆ ಬರುವಾಗ ಮಾರ್ಗದಲ್ಲಿ ಕಂಡ ಕನ್ಯೆಯನ್ನು ತಮ್ಮ ಸುಲೋಚನಗಳ (ಚಾಳೀಸು) ದ್ವಾರಾ ದಿಟ್ಟಿಸಿ ನೋಡಿ "ಇವಳಾರ ಮಗಳು ? ಇವಳಾರ ಮಗಳು ?. ಎಂಬ ಪೃಚ್ಛೆಯನ್ನು ಮಾಡುತ್ತಾರಲ್ಲವೇ ?" ೧

ಒಮ್ಮೆ ಧಾರವಾಡದ ಒಂದು ಸಾಪ್ತಾಹಿಕವು ಭಕಾರ ಪ್ರಾಸದಿಂದ ಆಚಾರ್ಯರ ಮೇಲೆ ಬೈಗಳ ಮಳೆಯನ್ನೇ ಸುರಿಸಿತ್ತು. "ಬಾಗಿಲುಕೋಟೆಯ ಭೂರಿತಿನ್ನುವ ಭೂರಿಭೋಜನದ ಬ್ರಾಹ್ಮಣ ...." ಇತ್ಯಾದಿ. ಆಗ, ಆಚಾರ್ಯರು ಮರುವಾರದ ಶುಭೋದಯದಲ್ಲಿ ಇವೇ ವಾಕ್ಯಗಳನ್ನೇ ಅವತರಣ ಚಿಹ್ನದಲ್ಲಿ ಕೊಟ್ಟು, ಕೆಳಗೆ "ಗಚ್ಛ ಗಚ್ಛ ಶುನಶ್ರೇಷ್ಠ ಸ್ವಸ್ಥಾನಂಪ್ರತಿ ತೇ ಶಿವಂ" ಎಂದು ಬರೆದಿದ್ದರು.

ಇನ್ನೊಂದು ಸಲ ಯಾರೋ ಆಚಾರ್ಯರಿಗೆ ಕೇಳಿದರು : "ಚಳವಳಿ ಚಳವಳಿ ಎನ್ನುತ್ತಾರೆ. ಪ್ರತಿಯೊಂದಕ್ಕೂ ಚಳವಳಿ ಬೇಕೇ ?" ಎಂದು. ಅದಕ್ಕೆ ಆಚಾರ್ಯರು "ಹೌದು; ಬೇಕು. ಜಮಖಂಡಿ ಅಪ್ಪಾಸಾಹೇಬರ ಶ್ರಾದ್ಧಕ್ಕೂ ಅದೇ ಮಂತ್ರ, ಓರ್ವ ಬಡವೈದಿಕ ಬ್ರಾಹ್ಮಣನ ಶ್ರಾದ್ಧಕ್ಕೂ ಅದೇ ಮಂತ್ರ" ಎಂದು ಹೇಳಿದರು.

ಆಚಾರ್ಯರು ಇಷ್ಟು ವಿಪುಲವಾಗಿ ಬರೆದರೂ, ಒಳ್ಳೆಯ ವಾಗ್ಮಿಗಳಾಗಿರಲಿಲ್ಲ. ಆದರೆ, ಅವರ ವಿಚಾರಧಾರೆ ನಾಡಿನ ತುಂಬೆಲ್ಲ ಚೈತನ್ಯದ ಮಿಂಚನ್ನು ಸಂಚಲಿಸಿತು. ಈ ವೈಚಾರಿಕ ಮುಖಂಡತ್ವಕ್ಕಾಗಿ, ಜನರು ಅವರನ್ನು ತಮ್ಮ ಧುರೀಣರನ್ನಾಗಿ ಮಾಡಿಕೊಳ್ಳಲು ಬಹು ವಿಧವಾಗಿ ಪ್ರಯತ್ನಿಸಿದರು. ೧೯೧೯ರ ಸುಮಾರು ಧಾರವಾಡದಲ್ಲಿ ಕರ್ನಾಟಕ ಸಭೆಯು ಒಂದು ದೊಡ್ಡ ಸಮ್ಮೇಲನವನ್ನೇ ಕೂಡಿಸಿತ್ತು. ಇದರ ಅಧ್ಯಕ್ಷಸ್ಥಾನವನ್ನು ವಹಿಸಲು ಅಂತೂ ಇಂತೂ ಮಾಡಿ ವಾಸುದೇವಾಚಾರ್ಯರನ್ನು ಒಪ್ಪಿಸಲಾಗಿತ್ತು. ಈ ಬಗೆಗೆ ಬುರ್ಲಿ ಬಿಂದುಮಾಧವರು ಹೀಗೆ ಬರೆಯುತ್ತಾರೆ :

"(ಇದರಿಂದ) ಹುಡುಗರಿಗಂತೂ ಪರಮಾನಂದ. ಹಸ್ತಪತ್ರಿಕೆಗಳನ್ನು ಮುದ್ರಿಸಿ ಊರಲ್ಲೆಲ್ಲ ಹಂಚಿದೆವು. ತುತೂರಿಗಳನ್ನು ತೆಗೆದುಕೊಂಡು ಕೂಗಿ ಹೇಳಿದೆವು. ಅತ್ಯಂತ ಉತ್ಸಾಹದಿಂದ ವಿಠ್ಠಲ ಮಂದಿರದಲ್ಲಿ ಸಭೆಯ ಸಿದ್ಧತೆಯನ್ನು ಮಾಡಿದೆವು. ವಾಸುದೇವಾಚಾರ್ಯರು ಅಧ್ಯಕ್ಷರೆಂಬ ಸುದ್ದಿ ಯಾದೊಡನೆಯೆ ಊರ ಜನರೆಲ್ಲ ಅರ್ಧ ಘಂಟೆ ಮೊದಲೇ ಬಂದು ಗುಡಿಯಲ್ಲಿ ಕಿಕ್ಕಿರಿದು ತುಂಬಿ

೧ ವಾಸುದೇವ ಪ್ರಶಸ್ತಿ : ೧೯೭೪ : ಪು. ೩೪

ದ್ದರು. ಸ್ಥಳವಿಲ್ಲದಂತಾಯಿತು. ಜನರು ಮಾಳಿಗೆಗಳನ್ನು ಹತ್ತಿ ನಿಂತರು. ಶ್ರೀ ಗದಿಗೆಯ್ಯ ಹೊನ್ನಾಪುರಮಠ, ಕಡಪಾ ರಾಘವೇಂದ್ರರಾವ, ನಾರಾಯಣರಾವ ದೇಶಪಾಂಡೆ ಮೊದಲಾದ ಮುಖಂಡರ ಭಾಷಣಗಳಾದವು. ಅಧ್ಯಕ್ಷರ ಭಾಷಣದ ಪ್ರಸಂಗ ಬಂದಿತು. ನೆರೆದ ಜನಸ್ತೋಮವೆಲ್ಲ ಕರತಾಡನದಿಂದ ಆಚಾರ್ಯರಿಗೆ ಸ್ವಾಗತವನ್ನು ನೀಡಿತು. ಆದರೆ ಮುಂಗಾರಿಯ ಗುಡುಗಿನಂತೆ ಗುಡುಗು ಮಿಂಚುಗಳು ಹೊಡೆದರೂ ಮಳೆ ಬರಲಿಲ್ಲ. ಆಚಾರ್ಯರು ಮಾತನಾಡಲು ಎದ್ದು ನಿಂತೊಡನೆಯೆ ಕಂಪನ ಹೊಂದಿ ''ನಾನು ಹೇಳುವದನ್ನೆಲ್ಲ ನಾಳಿನ ಶುಭೋದಯದಲ್ಲಿ ಬರೆಯುವೆ'' ಎಂದು ಹೇಳಿ ಕುಳಿತು ಬಿಟ್ಟರು. ಸಭೆಗೆಲ್ಲ ನಿರಾಶೆಯಾಯಿತು. ಏನಿದು ಏನಿದು ಎಂದು ಜನ ಮರಳಿತು.''[೧] ಆದರೆ, ಬಿಂದುಮಾಧವರು ಹೇಳಿದ ಹಾಗೆ, ಆ ವಾರದ ಶುಭೋದಯದ ಪ್ರತಿಗಳು ಮಾತ್ರ ಜನರಿಗೆ ಸಾಲದೆ ಹೋದವು.

ಆಚಾರ್ಯರು ಎಷ್ಟೋ ಸಲ ನಿಜಜೀವನದಲ್ಲಿಯೂ ವಿನೋದ ಸಂದರ್ಭಗಳನ್ನುಂಟುಮಾಡಿದ್ದುಂಟು. ಕಲಕತ್ತೆಯ ಕಾಂಗ್ರೆಸ್ ಮಹಾಧಿವೇಶನವೆಂದು ಕಾಣುತ್ತದೆ. ಆಗ ಆಚಾರ್ಯರು ತಮ್ಮ ಪತ್ರಿಕೆಯಲ್ಲಿ ತಾವು ಒಬ್ಬ ಸ್ವಂತ ಖಾಸಗಿ ಬಾತ್ಮಿದಾರರನ್ನು ಕಾಂಗ್ರೆಸಿನ ಕಾರ್ಯಕಲಾಪಗಳ ವರದಿ ಮಾಡಲು ಕಲಕತ್ತೆಗೆ ಕಳಿಸಿರುವದಾಗಿ ಬರೆದರು. ಇದರಿಂದ ಜನರ ಕುತೂಹಲ ಕುದುರಿ, ಯಾವಾಗ ಅಧಿವೇಶನ ಪ್ರಾರಂಭವಾಗುವದೋ, ಯಾವಾಗ ಸ್ವಂತ ಬಾತ್ಮಿದಾರರ ವರದಿಗಳನ್ನು ಓದೇವೋ ಎಂದು ಕಾತರರಾಗಿದ್ದರು. ಕಲಕತ್ತೆಯಲ್ಲಿ ಅಧಿವೇಶನ ಪ್ರಾರಂಭವಾಯಿತು. ಮರುದಿನವೇ ಆಚಾರ್ಯರ ಪತ್ರಿಕೆಯಲ್ಲಿ ಕಾಂಗ್ರೆಸ್ ಅಧ್ಯಕ್ಷರ ವೈಭವದ ಮೆರವಣಿಗೆ, ಅವರಿಗಾಗಿ ಸಿದ್ಧಪಡಿಸಿದ್ದ ಕುದುರೆಯ ವಾಹನ, ಮಾಲೆಗಳು, ವಾದ್ಯ, ವೈಭವ– ಎಲ್ಲದರ ವರ್ಣನೆಯೂ ಬಂದಿತು. ಜನತೆ ಆನಂದಾಶ್ಚರ್ಯಗಳಿಂದ ಈಯೆಲ್ಲ ವಿವರಗಳನ್ನೂ ಓದಿದರು. ಇಂಗ್ಲಿಷ ವೃತ್ತಪತ್ರಿಕೆಗಳಲ್ಲಿ ಬರುವದಕ್ಕಿಂತ ಮೊದಲೇ ಇಷ್ಟು ವಿವರಗಳನ್ನು ಆಚಾರ್ಯರು ಯಾವ ಅಂಚೆಯ ಮೂಲಕ ತರಿಸಿರಬಹುದೆಂದು ಆಶ್ಚರ್ಯಪಟ್ಟರು........ ಆದರೆ, ಆದದ್ದೇನೆಂದರೆ, ಆಚಾರ್ಯರು ಇವನ್ನೆಲ್ಲ ಕೇವಲ ತಮ್ಮ ಕಲ್ಪನೆಯಿಂದಲೇ ಊಹಿಸಿ ಪತ್ರಿಕೆಯಲ್ಲಿ ಹಾಕಿಬಿಟ್ಟಿದ್ದರು. ಕಾಂಗ್ರೆಸ ಅಧ್ಯಕ್ಷರ ಮೆರವಣಿಗೆ ಬಾಜಾ–ಬಜಂತ್ರಿಗಳಿಲ್ಲದೆ ಆಗುವದೆಂತು ? ಮೂರು ದಿವಸಗಳವರೆಗೂ ಜನ ಹೀಗೆಯೇ ನಾಲಿಗೆ ಚಪ್ಪರಿಸುತ್ತ ಈ ವರದಿಗಳನ್ನು ಓದಿದರು.[೨]

ನಮ್ಮ ಅಜ್ಜಂದಿರಾದ ಶಾಮಾಚಾರ ಧಾರವಾಡಕರ ಅವರೂ ಒಂದು ಮಾತನ್ನು ಹೀಗೆಯೇ ಹೇಳುತ್ತಿದ್ದರು. ಒಂದು ಸಲ ಆಚಾರ್ಯರೂ ಅವರೂ ಕೂಡಿ, ಹುಬ್ಬಳ್ಳಿಯಿಂದ ಬಾಗಿಲುಕೋಟೆಗೆ ಹೋಗಬೇಕಾಗಿತ್ತು. ರೈಲಿನಲ್ಲಿ ತುಂಬಾ ಗದ್ದಲ. ಇವರಿಗೆ ಕೂಡಲಿಕ್ಕೆ ಸಹ ಸ್ಥಳವಿಲ್ಲದ ಹಾಗಾಗಿತ್ತು. ಆಗ ಆಚಾರ್ಯರು ಒಂದು ಯುಕ್ತಿಯನ್ನು ಹುಡುಕಿ ತೆಗೆದರು. ಕ್ಯಾಲೆಂಡರ್ ತಿರುವಿದ ಹಾಗೆ ಪ್ರತಿವರುಷ ಬಿಟ್ಟೂ ಬಿಡದೆ. ಪ್ಲೇಗ್ ಹಾವಳಿ ಆಗುತ್ತಿದ್ದ ಕಾಲವದು. ಆಚಾರ್ಯರು ನಮ್ಮ ಅಜ್ಜಂದಿರಿಗೆ ಹೇಳಿದರು : "ಶಾಮಾ, ನಾನೊಂದು ಯುಕ್ತಿ ಮಾಡುತ್ತೇನೆ. ನೀನೂ ಹೂಂ ಅನಬೇಕು. ಅಂದರೆ ಇಬ್ಬರೂ ಆರಾಮಾಗಿ ಪ್ರವಾಸ ಮಾಡಬಹುದು.'' "ಏನು ?" ಎಂದು ಕೇಳಲಾಗಿ, ಆಚಾರ್ಯರು ಹೇಳಿದರು : "ನಾನು ಮುಸುಕು ಹಾಕಿಕೊಂಡು ಅಂತೂ ಇಂತೂ ಮಲಗುತ್ತೇನೆ. ನೀನು ನನ್ನ ಹತ್ತಿರವೇ ಅಳುತ್ತ ಕೂಡ್ರಬೇಕು. ಯಾರಾದರೂ ಯಾಕೆ ಅಳುತ್ತೀರಿ ಎಂದು ಕೇಳಿದ ಕೂಡಲೇ, ಇವ ನಮ್ಮ ತಮ್ಮ, ಇವನಿಗೆ ಪ್ಲೇಗ ಬಂದಿದೆ ಎಂದು ಇನ್ನೂ ಹೆಚ್ಚಾಗಿ ಅಳಬೇಕು"

೧ ಅದೇ : ಪು. ೨೬೦.

೨ ಈ ವಿವರವನ್ನು ಹೇಳಿದವರು ಕರ್ಮವೀರದ ಸಂಪಾದಕರಾಗಿದ್ದ ಶ್ರೀ ಹ. ರಾ. ಪುರೋಹಿತ ಅವರು.

ಸರಿ; ಶಾಮಾಚಾರ್ಯರು ಹಾಗೆಯೇ ಮಾಡಿದರು. ಪ್ಲೇಗ್ ಎಂದಾಕ್ಷಣಕ್ಕೇ ಗಾಡಿಯಲ್ಲಿದ್ದ ಜನರು ಕೆಳಗೆ ಇಳಿದು ಹೋದರು. ಆಮೇಲೆ ಶಾಮಾಚಾರ್ಯರು ಒಂದೇ ಸವನೆ ಅಳುವ ಕಾರಣ ಬೀಳಲಿಲ್ಲ. ಒರಿಯ ಸ್ಟೇಶನ್ ಬಂದಾಗಷ್ಟು ಅತ್ತರೆ ಸಾಕಾಗುತ್ತಿತ್ತು. ಜನ ಮುಂದಿನ ಡಬ್ಬಿಗೆ ಹೋಗುತ್ತಿದ್ದರು. ಇದರಿಂದ ಆ ಕಂಪಾರ್ಟಮೆಂಟಿಗೆ ಬಾಗಿಲುಕೋಟೆಯ ವರೆಗೂ ಯಾವ ನರಪಿಳ್ಳೆಯೂ ಬರಲಿಲ್ಲ ವೆಂದು ಬೇರೆ ಹೇಳಬೇಕಾಗಿಲ್ಲ.

ಆಚಾರ್ಯರ ಸಾಹಿತ್ಯದಲ್ಲಿಯ ಲೋಪದೋಷಗಳು :

ಸಂಸ್ಕೃತದ ವೈಪುಲ್ಯ ಮತ್ತು ಒಮ್ಮೆಲೆ ನುಸುಳಿ ಬರುವ ದೇಶಿಪದಪ್ರಯೋಗಗಳ ಮೂಲಕ ಆಚಾರ್ಯರ ಶೈಲಿಯಲ್ಲಿ ಒಂದು ತರಹದ ವಿಷಮತೆ, ಶೈಥಿಲ್ಯ ಕಂಡುಬರುತ್ತದೆಂದು ಒಂದು ಅಭಿ ಪ್ರಾಯವಿದೆ. ಡಾ. ರಂ. ಶ್ರೀ. ಮುಗಳಿಯವರು ಈ ಬಗೆಗೆ ಹೀಗೆ ಬರೆಯುತ್ತಾರೆ :

"ವಾಸುದೇವಾಚಾರ್ಯರ ಶೈಲಿ ಎಷ್ಟು ವಿಶಿಷ್ಟವಾಗಿದ್ದರೂ ವಿವಿಧವಾಗಿದೆ, ಪ್ರಾಯೋಗಿಕ ವಾಗಿದೆ. ವಿಷಯ, ಸಾಹಿತ್ಯಪ್ರಕಾರ, ಸಂದರ್ಭ ಇವನ್ನನುಸರಿಸಿ ಅದು ತರತರದ ರೂಪ ತಾಳಿದೆ.... ಅದಕ್ಕೆ ಒಂದು ಆದರ್ಶ, ಒಂದು ರೂಪ ಇದ್ದಂತೆ ಕಂಡರೂ ಪ್ರತ್ಯಕ್ಷವಾಗಿ ಅದು ಕೆಲವು ಕಡೆಗೆ ಹೊಯ್ದಾಡಿದಂತೆ, ಹಾಗೂ ಹೀಗೂ ಇದ್ದಂತೆ ತೋರುತ್ತದೆ. ಶುದ್ಧ ಪ್ರೌಢ ಶೈಲಿಯೊಡನೆ, ಅಶುದ್ಧ ಶೈಲಿ ಬೆರೆತುಕೊಂಡಿದೆ. ಪ್ರಗಲ್ಭವಾದ ಸಂಸ್ಕೃತದೊಡನೆ ಸರಳವಾದ ಕನ್ನಡವು ಸೇರು ತ್ತದೆ.... (ಹಲವು ಸಲ) ಕನ್ನಡದಲ್ಲಿ ಸಹಜವಾಗಿ ಸೇರಿಕೊಂಡ ಇಲ್ಲವೆ ಸೇರಿಕೊಳ್ಳಬಹುದಾದ ಸಂಸ್ಕೃತ ಪ್ರಯೋಗಗಳು ಹವಣಾಗಿ ಬರುತ್ತವೆ. ಮಾದರಿಯ ಕನ್ನಡ ಶೈಲಿ ಹತ್ತರ ಬರತೊಡಗುತ್ತದೆ. ಆದರೆ ಸಂಸ್ಕೃತ ಪ್ರೌಢಿಮೆಯ ಆವೇಶವು ಮತ್ತೆ ಅವರನ್ನಾವರಿಸಿ ತಾನು ಮೇಲಾಗಿ ಬಿಡುತ್ತದೆ. ಇದರ ಪರಿಣಾಮವಾಗಿ ಆದರ್ಶವು ಮತ್ತೆ ದೂರ ಸರಿಯುತ್ತದೆ. ಪಂಪನಿಂದ ಮುದ್ದಣನವರೆಗೆ ಕನ್ನಡ ಶೈಲಿ ಹೇಳುವ ಮಾತೇ ಇದು." ೧

ಈ ಮಾತಿನಲ್ಲಿ ತಥ್ಯವಿಲ್ಲದೆ ಇಲ್ಲ. ಅದಕ್ಕೇ ಹೊಸಗನ್ನಡದ ಪದ್ಯಶೈಲಿ ತೀವ್ರ ಕುದಿಗೊಂಡಂತೆ ಗದ್ಯಶೈಲಿ ಅಷ್ಟು ತೀವ್ರವಾಗಿ ಕುದಿಗೊಂಡು ಪಾಕವಾಗಲಿಲ್ಲ ಎಂದು ನಾವು ಈ ಹಿಂದೆ ಹೇಳಿದುದು. ಅದೂ ಅಲ್ಲದೆ, ಏಕಾಂಗ ಸಾಹಸಿಗಳಾಗಿ ಆಚಾರ್ಯರು ಪತ್ರಿಕೆಗಾಗಿ ಬರೆಯಬೇಕಾಗುತ್ತಿತ್ತೆಂಬುದನ್ನೂ ಗಮನಿಸಬೇಕು. ಆದರೂ ಆಚಾರ್ಯರ ಶೈಲಿಯಲ್ಲಿ ಸುಭಗತೆ, ಸಲೀಲತೆ ಇಲ್ಲದೆ ಇಲ್ಲ. "ಪ್ರಖರ ವಾದ ಬಿಸಲಿನಿಂದ ಹೊರತು ಫಲಗಳಿಗೆ ಪರಿಪಕ್ವತೆಯು ಬರುವದಿಲ್ಲ" ಎಂದು ನಂಜರಾಜನು ಹೇಳಿದ ಹಾಗೆ, ಆಚಾರ್ಯರ ಶೈಲಿಯೂ ಅನುಭವದ ಬಿಸಿಲಲ್ಲಿ ಕಾದು, ಮಾಗಿ, ಪಕ್ವವಾಯಿತು.

ಉದಾಹರಣೆಗೆ, ಬ್ರಹ್ಮದೇವನು ವಾಲ್ಮೀಕಿ ಮಹರ್ಷಿಗೆ ಸ್ವರ್ಗಕ್ಕೆ ಬರಲು ಹೇಳಿದಾಗ, ವಾಲ್ಮೀಕಿ ಹೇಳುವ ಮಾತುಗಳಿವು :

"....ದೇವಾ, ಈ ಲೋಕದಲ್ಲಿ ಇನ್ನೂ ಅಹಂಕಾರವು ತುಂಬಿದೆ. ತಾವು ಬ್ರಾಹ್ಮಣರು, ತಾವು ಕ್ಷತ್ರಿಯರು ಎಂಬ ಗರ್ವದಿಂದಲೇ ಜನರು ಸೆಟೆದಿರುವರು. ಜ್ಞಾನಿ, ಅಜ್ಞಾನಿ, ಶ್ರೀಮಂತ, ಬಡವ, ಉಚ್ಚ, ನೀಚ ಮುಂತಾದ ಭೇದಗಳನ್ನು ಮಾಡುವದನ್ನು ಇವರಿನ್ನೂ ಬಿಟ್ಟಿಲ್ಲ.... ಜನರಲ್ಲಿ ನೆಲೆ ಗೊಂಡಿರುವ ಈ ಅಹಂಕಾರವು ಸುಟ್ಟುಹೋದ ಬಳಿಕ ಈ ಲೋಕವೇ ತನ್ನಿಂದ ತಾನೇ ಸ್ವರ್ಗವನ್ನೈದ

೧ ವಾಸುದೇವ ಪ್ರಶಸ್ತಿ : ೧೯೬೪ : ಪು ೨೩೦.

ಬಹುದಲ್ಲವೆ ?........ ಬಳಿಕ ಬ್ರಹ್ಮದೇವನು ವಾಲ್ಮೀಕಿಯನ್ನು ಕುರಿತು 'ವಾಲ್ಮೀಕಿ ಕಣ್ಣೆತ್ತಿ ಮೇಲೆ ನೋಡು' ಎಂದು ಆಜ್ಞಾಪಿಸಿದನು. ವಾಲ್ಮೀಕಿಯು ಮೋರೆಯನ್ನೆತ್ತಿ ನೋಡಲಾಗಿ, ಅಂತರಿಕ್ಷದಲ್ಲಿ–

ಧ್ಯೇಯಃ ಸದಾ ಸವಿತೃಮಂಡಲ ಮಧ್ಯವರ್ತೀ
ನಾರಾಯಣಃ ಸರಸಿಜಾಸನಸನ್ನಿವಿಷ್ಟಃ
ಕೇಯೂರವಾನ್ ಮಕರಕುಂಡಲವಾನ್ ಕಿರೀಟೀ
ಹಾರೀ ಹಿರಣ್ಮಯವಪು ಧೃತ ಶಂಖಚಕ್ರಃ

(ಕಂಡನು).... ...ದೇವದಾನವರೂ, ಯಕ್ಷ–ರಾಕ್ಷಸರೂ, ಬ್ರಹ್ಮಾದಿದೇವೇಶರೂ, ಸಕಲವಾದ ಮನುಷ್ಯ ಕೋಟಿಯೂ ಆ ಅನಂತರೂಪಿಯಾದ ಪರಮಾತ್ಮನ ಮುಖದಲ್ಲಿ ಎಡೆಬಿಡದೆ ಸೇರಿಕೊಳ್ಳುತ್ತಿದ್ದವು.... ಇಂಥ ರೂಪವನ್ನು ನೋಡಲಾಗಿ ದೇವತೆಗಳು ಕೂಡ ಕೀಟಕಪ್ರಾಯರೆಂದೂ ಮನುಷ್ಯರಂತೂ ಯಾತಕ್ಕೂ ಬಾರದವರೆಂದೂ ವಾಲ್ಮೀಕಿಯು ಕಂಡುಕೊಂಡನು.

ನಮ: ಪುರಸ್ತಾದಥಪೃಷ್ಠತಶ್ಚ
ನಮೋಸ್ತುತೇ ಸರ್ವತ ಏವ ಸರ್ವ
ಅನಂತವೀರ್ಯಾಯುತ ವಿಕ್ರಮಸ್ತ್ವಂ
ಸರ್ವಂ ಸಮಾಪ್ನೋಷಿ ತತೋಸಿ ಸರ್ವಂ

—ಎಂದು ಅವನು ಆ ವಿಶ್ವರೂಪನಾದ ಪರಮಾತ್ಮನ ಸ್ತುತಿಯನ್ನು ಪರಿಪರಿಯಾಗಿ ಮಾಡಿದನು"[೧]

ಇದೂ ಅಲ್ಲದೆ, ಅಲ್ಲಲ್ಲಿ ಒಂದೆರಡು ಕಡೆಗೆ ನಿರ್ಣಯ ದೋಷಗಳೂ ಆದ ಹಾಗೆ ಕಾಣುತ್ತವೆ. ಉದಾಹರಣೆಗೆ, 'ನರಗುಂದದ ಸಾವಿತ್ರಿಬಾಯಿ' ಎಂಬ ಕಥೆಯಲ್ಲಿ ಸಾವಿತ್ರಿಬಾಯಿಯ ಬಗೆಗೆ ಆಚಾರ್ಯರೇನೋ ಬಹಳ ಉದಾರವಾದ ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ. ಆದರೆ, ಅವಳ ಗಂಡ ವೀರ ಬಾಬಾಸಾಹೇಬ ಮತ್ತು ಅತ್ತೆ ಯಮುನಾಬಾಯಿಯ ಬಗೆಗೆ ಲೇಖಕರು ವ್ಯಕ್ತಪಡಿಸಿದ ಅಭಿಪ್ರಾಯಗಳು ಆ ವೀರರ ಜೀವನ ಚರಿತ್ರೆಗೆ ಮರ್ಯಾದೆ ತರುವಂಥವಲ್ಲ. ವೀರ ಬಾಬಾಸಾಹೇಬನ ದಿನನಿತ್ಯದ ನಡವಳಿಯನ್ನು ಅವಲೋಕಿಸುತ್ತಿರಬೇಕೆಂದು ಸರಕಾರ ನವಲಗುಂದದ ಮಾಮಲೇದಾರ ನನ್ನು ಕೇಳಿಕೊಂಡಿತ್ತು. ಅವನು ಎಡೆಬಿಡದೆ ಪ್ರಯತ್ನಮಾಡಿ, ದಿನಾಂಕ ೨೭–೫–೧೮೫೮ ಮತ್ತು ೨೯–೫–೧೮೫೮ರಂದು ಮೂರು ವರದಿಗಳನ್ನು ಕಳಿಸಿದ್ದಾನೆ. ಬಾಬಾಸಾಹೇಬನು ಮ್ಯಾನ್ಸನ್ ಸಾಹೇಬನ ರುಂಡವನ್ನು ಕತ್ತರಿಸಿ ಹಾಕುತ್ತಾನೆ. ಅವನು ಸೋತದ್ದು ಕೃಷ್ಣಾಜಿಪಂತ ಜೋಶಿ ಮತ್ತು ಮನಿಯಾ ಬಾಪು ಎಂಬವರ ರಾಜದ್ರೋಹದ ಮೂಲಕವಾಗಿ. ಅದೂ ಅಲ್ಲದೆ ಮುಂಡರಗಿ ಭೀಮರಾಯನು ಕೊಪ್ಪಳ ಯುದ್ಧದಲ್ಲಿ ತೊಡಗಿದ್ದರಿಂದ ಸಕಾಲಕ್ಕೆ ಅವನಿಂದ ಸಹಾಯವು ಬಾರದೇ ಹೋಯಿತು. ಇದರಿಂದ ಬಾಬಾಸಾಹೇಬ ಓಡಿ ಹೋಗಬೇಕಾಗುತ್ತದೆ.

"A traitor informed the British that Baba Saheb and a small number of followers were in the forests of Toragal. Frank Souter, an intrepid police officer, at once went to the place and apprehended them. The prisoners were brought to Belgaum and condemned to death by a Judicial Tribunal. On the 12 th June ended his life on the gallows at Belgaum. It is said that the people wept to see this ignominious end of valiant and popular Rajah."[೨]

---

೧ ವಾಲ್ಮೀಕಿ ವಿಜಯ : ಪು. ೧೦೪

೨ History of Freedom Movement in Karnatak : 1952 : p. 265

ಇಂಥ ವೀರ ಬಾಬಾಸಾಹೇಬನ ವರ್ಣನೆಯನ್ನು ವಾಸುದೇವಾಚಾರ್ಯರು ಕೊಡುವುದು ಹೀಗೆ :

" 'ದೌರ್ಮಂತ್ರ್ಯಾನ್ನೃಪತಿರ್ವಿನಶ್ಯತಿ' ಎಂಬಂತೆ ನರಗುಂದದ ಬಾಬಾಸಾಹೇಬನು ಮನೆಮುರಕರಾದ ದುರ್ಜನರ ದುರ್ಬೋಧನಕ್ಕೆ ಕಿವಿಗೊಟ್ಟು ಇಂಗ್ಲಿಶ್ ಸರಕಾರದ ಮೇಲೆ ಬಂಡು ಮಾಡಿದನು. ಬಾಬಾಸಾಹೇಬನ ಕ್ಷುದ್ರವಾದ ಸಂಸ್ಥಾನವೆಷ್ಟು ಮಾತ್ರದ್ದು, ಅವನ ಬಲವೇನು ಸುಟ್ಟಿತು. ಕತ್ತಿ ತುಬಾಕಿಗಳ ಉಪಯೋಗವನ್ನರಿಯದವರೂ ಸಮರವನ್ನು ಕಣ್ಣಿಲೆ ನೋಡದವರೂ ಆದ ನೂರಾರು ಜನ ರೆಂಟೆಯ ಬಂಟರನ್ನು ಕೂಡಿಸಿಕೊಂಡು ಅವಿಚಾರಿಯೂ ಮೂರ್ಖನೂ ಆದ ಬಾಬಾಸಾಹೇಬನು ಬಲಾಢ್ಯರಾದ ಇಂಗ್ಲಿಶ್ ಸರಕಾರದವರ ಮೇಲೆ ಬಂಡು ಮಾಡ ಹೋದರೆ ಅದೆಲ್ಲಿಗೆ ಮುಟ್ಟುವದು ? ಒಂದು ದಿನ ಒಪ್ಪತ್ತಿನಲ್ಲಿ ಬಾಬಾಸಾಹೇಬನ ಬಂಡು ಮುರಿದು ಹೋಗಿ ಅವನ ಸಂಸ್ಥಾನವು ಡಬ್ಬ ಬಿದ್ದು ಹೋಯಿತು."[1]

ನರಗುಂದ ಯುದ್ಧವಾದುದು ೧೮೫೮ರಲ್ಲಿ. ವಾಸುದೇವಾಚಾರ್ಯರು ಹುಟ್ಟಿದ್ದು ಮುಂದು ಎಂಟು ವರ್ಷಗಳಲ್ಲಿ. ಆದ್ದರಿಂದ ತೀರ ಸಮೀಪದಲ್ಲಿದ್ದುದರಿಂದ ಈ ಘಟನೆಯ ಮಹತ್ವ ಆಚಾರ್ಯರಿಗೆ ಕಂಡು ಬಂದಂತೆ ಕಾಣುವದಿಲ್ಲ. ಗಿಡ ಬಿದ್ದಾಗಲ್ಲವೇ ಅದರ ಎತ್ತರ – ವೈಶಾಲ್ಯಗಳು ನಿಚ್ಚಳವಾಗಿ ಕಾಣುವುದು ? ಅದೇನೇ ಇದ್ದರೂ, ವೈಚಾರಿಕವಾಗಿ, ಸಾಹಿತ್ಯ – ಶಾಸ್ತ್ರ ವಿಚಾರವಾಗಿ ಆಚಾರ್ಯರು ವ್ಯಕ್ತಪಡಿಸಿದ ಅನೇಕ ಅಭಿಪ್ರಾಯಗಳು ಸಾರ್ವಕಾಲಿಕ ಸತ್ಯವುಳ್ಳವುಗಳಾಗಿವೆ. ಉದಾಹರಣೆಗೆ, ಮಾನವಸ್ವಭಾವದ ವಿಷಯವಾಗಿ ಅವರು ಹೇಳುವ ಮಾತುಗಳಿವು : "........ಮನುಷ್ಯನು ಭೀರುವು; ಯಾವಾಗಲೂ ಯಾಚಕವೃತ್ತಿಯುಳ್ಳವನು; ಅವನು ಪ್ರಬುದ್ಧನಾದ ಪ್ರಾಮಾಣಿಕನಲ್ಲ; 'ನಾನು ವಿಚಾರಿಸುತ್ತೇನೆ, ನಾನು ಇದ್ದೇನೆ' ಎಂದು ಎದೆಗೆ ಕೈ ಹಚ್ಚಿಕೊಂಡು ಹೇಳಲು ಎದೆ ಸಾಲದೆ, ಯಾವನೊಬ್ಬ ಸಾಧುವಿನ ಇಲ್ಲವೆ ಸತ್ಪುರುಷನ ಸುಧೋಕ್ತಿಯನ್ನು ಮುಂದೆ ಮಾಡಿ ತಾನು ಅದರ ಮರೆಯಲ್ಲಿ ನಿಂತುಕೊಳ್ಳುವನು."

ಆಚಾರ್ಯರು ವಿಜಾಪುರದ ಶಾಲೆಯ ಹೊಸ ಕಟ್ಟಡದಲ್ಲಿ ಮರಾಠಿ ಮುಲಿಗಳು ಹೊಕ್ಕ ವಿಷಯವನ್ನು ನಿರೂಪಿಸಿದ್ದನ್ನು ಈಗಾಗಲೇ ವಿವರಿಸಲಾಗಿದೆ. (ಪು. ೧೬–೧೭) ಈ ಮರಾಠಿ ಪ್ರಭಾವ ಉತ್ತರ ಕರ್ನಾಟಕದಲ್ಲಿ ಹೇಗೆ ನೆಲೆಗೊಂಡಿತೆಂಬ ಬಗೆಗೆ ಆಚಾರ್ಯರು ಹೀಗೆ ಹೇಳುತ್ತಾರೆ :

''ಮುಸಲ್ಮಾನರ ಕಾಲದಲ್ಲಿ ಉರ್ದು ಭಾಷೆಯ ಪ್ರಾಬಲ್ಯವು ನಮ್ಮಲ್ಲಿ ಉಂಟಾಯಿತು. ಸರಕಾರಿ ದಫ್ತರಗಳಲ್ಲಿಯೂ ಪತ್ರ ವ್ಯವಹಾರಗಳಲ್ಲಿಯೂ ಉರ್ದು ಭಾಷೆಯು ಪ್ರಾಚುರ್ಯವನ್ನು ಹೊಂದಿತು. ಆ ಕಾಲಕ್ಕೆ ಕನ್ನಡ ನುಡಿಗೆ ಉತ್ತೇಜನವೆ ಇರಲಿಲ್ಲ. ತರುವಾಯ, ಮರಾಠಿ ಶಾಹಿಯು ಪ್ರಾಬಲ್ಯವಾಯಿತು. ಆಗ, ಪ್ರಮಿತರೆಂಬುವರೆಲ್ಲರು ಮರಾಠಿಯಲ್ಲಿಯೆ ಮಾತುಕತೆಗಳನ್ನು ನಡಿಸಿದರೆ ತಮಗೆ ಗೌರವವೆಂದು ತಿಳಿದಿದ್ದರು. ನಮ್ಮಲ್ಲಿಯವರು ತಾತ್ಯಾ ಪಂತೋಜಿಯವರನ್ನು ಕರೆಸಿಕೊಂಡು ಮರಾಠಿ ಭಾಷೆಯ ಜ್ಞಾನ ಮಾಡಿಕೊಳ್ಳುತಿದ್ದರು........ (ಒಂದು ಕಾಲಕ್ಕೆ) ಉರ್ದು ಶಬ್ದಗಳಿಗೆ ಬದಲಾಗಿ ಶಾಸ್ತ್ರಿಗಳು ಸಂಸ್ಕೃತ ಶಬ್ದಗಳನ್ನು ಪ್ರತಿಯಾಗಿ ಕಲ್ಪಿಸಿದರು. 'ಕಚೇರಿತು ಸಭಾಗೃಹಂ', 'ಫೀಲಖಾನಾತು ಗಜಶಾಲಾ', 'ಫೀಲಸ್ತು ಗಜ ಉಚ್ಯತೇ'– ಇತ್ಯಾದಿಯಾದ ಸಂಸ್ಕೃತ ಶಬ್ದಗಳಿಂದ ತುಂಬಿದ ರಾಜ್ಯ ವ್ಯವಹಾರಕೋಶವು ನಿರ್ಮಾಣವಾಯಿತು........... ಉರ್ದು ಭಾಷೆಯು ಅಳಿದು ಹೋಗುವಾಗ ಮರಾಠಿಯನ್ನು ಕುರಿತು 'ಭುಕ್ಕುಂಡೋಹಂ ಭೂಪತಿಸ್ತ್ವಂ ಹಿ ರಾಜನ್' ಎಂಬುದಾಗಿ ಶಾಪವನ್ನು ಕೊಟ್ಟು ಹೋಗಿದ್ದಕ್ಕಾಗಿ ಮರಾಠಿಗೂ ಕರ್ನಾಟಕದಲ್ಲಿ ಕ್ಷೀಣ ಕಾಲವು ಬಂದಿತೆಂದು ಹೇಳ

[1] ಬೆಳಗಿದ ದೀಪಗಳು : ಪು. ೩.

ಬಹುದು. ಕರ್ಮಧರ್ಮ ಸಂಯೋಗದಿಂದ ಮರಾಠಿಗೆ ಇದ್ದ ರಾಜಾಶ್ರಯವು ತಪ್ಪಿಹೋಯಿತು.... ಭೂದೇವಿಯ ತೊಡೆಯ ಮೇಲೆ ಆಡುತ್ತಲೂ ಕಷ್ಟಾರ್ಜಿತವಸ್ತುಗಳಲ್ಲಿ ವ್ಯವಹಾರ ಮಾಡುತ್ತಲೂ ಭಾಷಾ ಮಾತೆಯ ಸೊಲ್ಲಿಗೆ ಸೊಲ್ಲುಗೊಡುತ್ತಲೂ ಜೀವನವೃತ್ತಿಯನ್ನು ನಡಿಸುವ ನಮ್ಮ ಲಿಂಗಾಯತ ಬಾಂಧವರೆ ಹತಭಾಗ್ಯಳಾದ ಕನ್ನಡ ಮಾತೆಯನ್ನು ಕಾಪಾಡಿಕೊಳ್ಳುತ್ತ ಬಂದಿದ್ದರಿಂದಲೆ ಇಂದಿಗೆ ಕರ್ನಾಟಕವು ಕರ್ನಾಟಕವಾಗಿ ಉಳಿದಿದೆ. ಇನ್ನು ನಮ್ಮ ಕೆಲವು ಪ್ರಮಿತರನ್ನು ನೋಡಿರಿ ! ದಾದಾ ಸಾಹೇಬ ದಾಸ್ತಿಕೊಪ್ಪಕರ್, ಭೈಯಾಸಾಹೇಬ ಭೈರಮಟ್ಟೀಕರ್, ಗಂಗಾಧರರಾವ ಇಂಗಳೀಕರ್, ಮುಂತಾದವರೆಲ್ಲರೂ ಶುದ್ಧಬೀಜದ ಕನ್ನಡಿಗರಾಗಿದ್ದರೂ ಕನ್ನಡವನ್ನು ಹೇದು 'ಮರಾಠೀಂತ ವ್ಯಾಖ್ಯಾನೇ ಝೋಡೂನ್' ಮರಾಠಿಗರಿಂದ ಸ್ತುತಿ ಪಡೆಯಬೇಕೆಂಬುದೆ ಹೊರತಾಗಿ ಕನ್ನಡಿಗರಾದವರ ಉದ್ಧರಣಕ್ಕಾಗಿ ಯತ್ನ ಮಾಡಿದರೆ ಅವರು ತಮ್ಮ ಗೌರವಕ್ಕೆ ಹಾನಿ ಎಂದು ತಿಳಿದುಕೊಳ್ಳುತ್ತಾರೆ."[೧]

ಸನ್ ೧೯೧೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿನಲ್ಲಿ ಪ್ರಾರಂಭವಾದಾಗ, ಅದರ ಧ್ಯೇಯೋದ್ದೇಶಗಳನ್ನು ಜನರಿಗೆ ಮನವರಿಕೆ ಮಾಡಿಕೊಡಲು ಆಚಾರ್ಯರು ಅನೇಕ ಲೇಖನಗಳನ್ನು ಬರೆದರು. ಸ್ವತಃ ಸಮ್ಮೇಲನಗಳಿಗೆ ಹೋಗಿ ಬಂದರು. ಆದರೆ, ಸಮ್ಮೇಲನಕ್ಕೆಂದು ಬರುವ ಜನರ ಬಗೆಗೆ ಹೀಗೆ ಉದ್ಗಾರ ತೆಗೆದರು : "ಇದೇನು ಭೂತವೇತಾಳಗಳ ಚೇಷ್ಟಿತವೊ ಅಥವಾ ನಿಜವಾಗಿಯೂ ಎಲ್ಲಿ ಏನಾದರೂ ನಡಿಯುತ್ತಿರುವದೋ ಹೇಳುವದು ಸಾಹಸದ ಮಾತು........ ಸಾಹಿತ್ಯ ಸಮ್ಮೇಲನದ ಉದ್ದೇಶವು ಸ್ತುತ್ಯವಾಗಿದ್ದರೂ ಜನರು ಆ ಉದ್ದೇಶದಲ್ಲಿ ತದೇಕ ಧ್ಯಾನವುಳ್ಳವರಾಗಿ ಸಮ್ಮೇಲನಕ್ಕೆ ಬಾರದೆ, ಬೇರೆ ಅನೇಕವಾದ ಚಿಲ್ಲರೆ ಉದ್ದೇಶಗಳನ್ನಿಟ್ಟುಕೊಂಡು ಸಭೆಗೆ ಬರುತ್ತಿರುವರು........ ಕೆಲವರು ತಮ್ಮ ಸೀಮೆಯ ಭಾಷೆಯೇ ಮುಂದೆ ಓಡಿ ಬಂದು ವಿಜಯಿಯಾಗಬೇಕೆಂಬ ಸಾಹಸ ಪಡುತ್ತಿದ್ದರು. ಕೆಲವರು ಯುನಿವರ್ಸಿಟಿಯ ಡಿಗ್ರಿಯ ಮೇಲಿಂದ ಕಾನ್‌ಫರನ್ಸದ ಸ್ಪಿರಿಟ್ ಅಳೆಯಬೇಕೆಂದು ಹವಣಿಸುತ್ತಿದ್ದರು. ಕೆಲವೊಂದು ಸಂಚಿನವರು ತಮ್ಮ ಸೋಗಿನ ಗುರುವನ್ನು ಲೋಕಮಾನ್ಯರ ಮಾಲಿಕೆಯಲ್ಲಿ ಪೋಣಿಸಿದಂತೆ ಮಾಡಿ ಅವನ ಗುಣಗಾನವನ್ನು ಮಾಡಿ ಜನರನ್ನು ವಂಚಿಸುತ್ತಿದ್ದರು........ ವಾಸ್ತವವಾಗಿ ಪ್ರಾಂತಪ್ರಾಂತೀಯರಾದ ಕರ್ನಾಟಕಸ್ಥರಲ್ಲಿ ಇನ್ನೂ ನಿಜವಾದ ಬಂಧುಪ್ರೇಮವು ಹುಟ್ಟಿಲ್ಲ. ಭಾಷಾ ಮಾತೆಯಲ್ಲಿರುವ ಸಾಮಾನ್ಯವಾದ ಪ್ರೇಮವು ಅವರೆಲ್ಲರಲ್ಲಿ ನೆಲಸಿದಷ್ಟು ಸತ್ಯವಾದ ಬಳಿಕವೆ ಅವರಲ್ಲಿ ಬಂಧುಪ್ರೇಮವಿರುವದೆಂದು ಊಹಿಸಬಹುದಲ್ಲವೆ? ಮೂಲೇಕುಠಾರಃ"[೨]

ಸತ್ವವಿದ್ದ ಕಾಳನ್ನು ಎಂಥ ನೆಲದಲ್ಲಿ ಒಗೆದರೂ ಬೆಳೆಯುವಂತೆ, ಆಂತಸ್ಸತ್ವವಿದ್ದ ಲೇಖಕ ಎಂಥ ಪರಿಸರದಲ್ಲಿಯೂ ಸಾಹಿತ್ಯನಿರ್ಮಿತಿ ಮಾಡಬಲ್ಲ. ಹೊರಗಿನ ಪ್ರೋತ್ಸಾಹ, ಹೊಯ್-ನೀರು. ಹೊತ್ತುಕೊಂಡು ಹೋದ ನಾಯಿ ಮೊಲ ಹಿಡಿಯಬಲ್ಲುದೇ ? ಕಾಲು ಕೊಟ್ಟು ನಿಲ್ಲಿಸಿದವ ಎಷ್ಟು ಹೆಜ್ಜೆ ನಡೆದಾನು ? "ಹೊಸ ಗ್ರಂಥಗಳನ್ನು ಬರೆಯುವವರಿಗೆ ಉತ್ತೇಜನವಿಲ್ಲವೆಂಬ ಮಾತು ಅಪಹಾಸ್ಯಾಸ್ಪದ. ಉತ್ತೇಜನವನ್ನು ಕಂಡಬಳಿಕವೇ ಗ್ರಂಥವೊಂದನ್ನು ಬರೆಯುವೆನೆಂಬವನಲ್ಲಿ ಸತ್ವವೇ ಇಲ್ಲವೆಂದು ನಾವು ನಿರ್ವಿವಾದವಾಗಿ ಹೇಳುವೆವು. ರಚಿತವಾದ ಗ್ರಂಥಗಳ ಪ್ರಸಾರಕ್ಕಾಗಿ ನಾವು ಪ್ರಯತ್ನ ಮಾಡಬೇಕಲ್ಲದೆ ಸತ್ವಹೀನರನ್ನು ಉತ್ತೇಜಿಸಿ ಗ್ರಂಥ ಬರೆಸುವ ಹವ್ಯಾಸವನ್ನು ನಾವು ಬಿಡಬೇಕು."[೩]

---

೧ ಅದೇ : ಪು. ೨೯-೩೦

೨ ಅದೇ : ಪು. ೩೧

೩ ಅದೇ : ಪು. ೬೨೯.

ಸಾಹಿತ್ಯಕೃತಿ ಹೆಚ್ಚು ನಿರಂತರವಾಗಿ ಉಳಿಯಬೇಕಾದರೆ, ನಿಷ್ಠಾಪೂರ್ವಕವಾದ ಪರಿಶ್ರಮ ಬೇಕು "ಇಂದು ಬರೆದ ಇಲ್ಲವೆ ನುಡಿದ ವಿಚಾರಗಳು ಮರುದಿನವೇ ಹಳೆಯುವೆಂದು ಹೀಯಾಳಿ ಸಲ್ಪಡಬಾರದೆಂದು ಮನಸ್ಸಿದ್ದವರು ನುಡಿಯನ್ನಾಗಲಿ ಲೇಖವನ್ನಾಗಲಿ ಏಕಮನಸ್ಸಿನಿಂದ ನಿಷ್ಠಾ ಪೂರ್ವಕವಾಗಿ ನುಡಿಯುತ್ತ ಇಲ್ಲವೆ ಬರೆಯುತ್ತಿರಬೇಕು. ತನ್ನ ಮನಸ್ಸಿಗೇ ಬಾರದ ನುಡಿವಿಧಾನ ಗಳು ಎರಡನೆಯವರನ್ನು ಹೇಗೆ ಸಮ್ಮತಿಸುವವು ?........ ಅರ್ಧ ಜನಸಮೂಹವು 'ಎಂಥ ಕವಿತೆ!', 'ಎಂಥ ಗ್ರಂಥ!' 'ಎಂಥ ನಾಟಕ!' ಎಂತ ಅವನ್ನು ಹಾಡಿ ಹಾರೈಸುತ್ತಿದ್ದರೂ, ಅಲ್ಲಿ ಜ್ಞಾನ ಜ್ಯೋತಿಯು ಪೂರ್ಣಪ್ರದೀಪ್ತವಾಗಬೇಕಾದರೆ, ಇನ್ನೂ ತೈಲಸಾಹಿತ್ಯವು ಎಷ್ಟೋ ಬೇಕು............ ಜೀವನವೇ ಪುನರುಜ್ಜೀವನಕ್ಕೆ ಸಮರ್ಥವು; ನಾವು ಎಷ್ಟು ಬೆಳೆದಾಡಿದರೂ ನಮ್ಮ ಬೆಲೆಯಿದ್ದಷ್ಟೇ ಬೆಲೆ ಬಾಳುವೆವು"

ನಾವು ಎಷ್ಟು ಬೆಳೆದಾಡಿದರೂ, ನಮ್ಮ ಬೆಲೆಯಿದ್ದಷ್ಟೇ ಬೆಲೆ ಬಾಳುವೆವು! ಎಂಥ ಮುತ್ತಿ ನಂಥ ಮಾತುಗಳಿವು!

ಹಾಗೆಯೇ ಶಾಶ್ವತವಾಗಿ ನಿಲ್ಲಬೇಕಾದ ಸಾಹಿತ್ಯಕ್ಕೆ ಯಾವ ವಿಮರ್ಶಕನ ಪ್ರಶಂಸೆಯೂ ಬೇಕಾಗಿಲ್ಲ. ಅಂತಿಮವಾಗಿ, ಸಾಹಿತ್ಯದ ಸತ್ವವನ್ನು ಗುರುತಿಸಬೇಕಾದವರು ಸಹೃದಯರು. ಅವರ ಹೃದಯಸಿಂಹಾಸನದಲ್ಲಿ ಆ ಕೃತಿ ವಿರಾಜಮಾನವಾಗಬೇಕು.

"ಭಾಷಾ ಜ್ಞಾನ ಸಂಪಾದಿತವಾದ ಕೀರ್ತಿಯು ದೈವಾಧೀನವಲ್ಲ. ಪುಸ್ತಕವು ಪ್ರಕಟವಾದ ಕ್ಷಣವೇ ಅದನ್ನು ಅರ್ಧಮರ್ಧ ಓದಿ ಅದರ ದೈವನಿರ್ಣಯವನ್ನು ಮಾಡುವ ಅಧಿಕಾರವು ವಾಚಾಲರಾದ ಸರಸ್ವತೀ ಪುತ್ರರದಲ್ಲ; ಈ ನಿರ್ಣಯದಾನಕ್ಕೆ ಅಧಿಕಾರಿವರ್ಗವು ಬೇರೆಯಿರುವದು. ಹಣದಾಸೆ, ಸ್ತುತಿಯ ಲಾಲಸೆ, ಹಾಗು ಭೀತಿಯ ಬೆದರಿಕೆ ಮುಂತಾದ ಯಾವ ಉಪಾಯಗಳಿಗೂ ಒಳಗಾಗದಂಥ ದೊಂದು ನಿರ್ಮಲವಾದ ನಿರ್ಣಾಯಕರ ಸಭೆಯು ಪ್ರತಿಯೊಂದು ಸಮಾಜದಲ್ಲಿರುತ್ತದೆ. ಬಾಳಲಿಕ್ಕೆ ಯೋಗ್ಯವಿದ್ದಂಥ ಪುಸ್ತಕಗಳೇ ಬಾಳುತ್ತವೆ. ಸುವರ್ಣಾಕ್ಷರಗಳಲ್ಲಿ ಮುದ್ರಿತವಾದ ಪುಸ್ತಕವಾದರೂ, ಅಂತರಂಗದಲ್ಲಿ ತತ್ವಾಭಿನಿವೇಶವಿಲ್ಲದಿದ್ದರೆ ಅದು ಸ್ಮೃತಿಪಥವನ್ನು ಹೊಂದಲಿಕ್ಕೇಬೇಕು........ಯಾವ ಪುಸ್ತಕವನ್ನು ಯಾರೂ ಬರೆಯಬೇಕಾಗಿಲ್ಲ; ಅದು ತನ್ನನ್ನು ತಾನೇ ಬರೆದುಕೊಳ್ಳುತ್ತದೆ."[೧]

ಹೀಗಾಗಿ, ಕಾವ್ಯ, ನಾಟಕ, ಕಾದಂಬರಿ, ವಿಡಂಬನೆ, ಸಣ್ಣ ಕಥೆ – ಮೊದಲಾದ ಲಲಿತ ವಾಙ್ಮಯ ವಿಭಾಗದಲ್ಲಿಯೂ, ವೈಚಾರಿಕ, ಸಾಹಿತ್ಯವಿಷಯಕ ಪ್ರಬಂಧಗಳ ರಚನೆಯಲ್ಲಿಯೂ ಸತ್ವ ಮತ್ತು ಗಾತ್ರದ ದೃಷ್ಟಿಯಿಂದ ತುಂಬಾ ಹೆಚ್ಚಿನ ಸ್ಥಾನ ಗಳಿಸಿದ ಕೆರೂರ ವಾಸುದೇವಾಚಾರ್ಯರು ಹೊಸಗನ್ನಡ ಉದಯಕಾಲದ ಶ್ರೀಮಂತಿಕೆಯನ್ನು ಅಮೋಘವಾಗಿ ಹೆಚ್ಚಿಸಿದರು. ಕನ್ನಡಕ್ಕೊಂದು ಆಚಾರ್ಯತ್ವವನ್ನೂ, ಆಚಾರ್ಯಶೈಲಿಯನ್ನೂ ಒದಗಿಸಿಕೊಟ್ಟರು. ಡಾ. ರಂ. ಶ್ರೀ. ಮುಗಳಿಯವರು ಹೇಳಿದಂತೆ, "ಸ್ವತಂತ್ರ ಮತ್ತು ಸಂಪನ್ನ ಪ್ರತಿಭೆಯ ಪ್ರಾರಂಭಕಾರರೆಂದು ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಾಸುದೇವಾಚಾರ್ಯರಿಗೆ ಎತ್ತರದ ಸ್ಥಾನವು ಸಲ್ಲುತ್ತದೆ. ಅವರ ವೈಶಿಷ್ಟ್ಯಪೂರ್ಣ ಶೈಲಿಯಲ್ಲಿ ಸಂಧಿಕಾಲದ ವಿಷಮತೆ ಆಗಾಗ ತಲೆದೋರಿದರೂ, ಉತ್ತರ ಕರ್ನಾಟಕದ ದೇಸಿಗೆ ಸಾಹಿತ್ಯ ವೇಷ ತೊಡಿಸಿ, ಅದನ್ನು ಹೊಸಗನ್ನಡದ ಸಿಂಹಾಸನದ ಮೇಲೆ ಕೂಡಿಸಿ, ಅದಕ್ಕೆ ಅರಸುಪಟ್ಟವನ್ನು ಕಟ್ಟಿದ ಪ್ರಥಮ ಶ್ರೇಯಸ್ಸು ಅವರಿಗೆ ಸಲ್ಲಬೇಕು."[೨]

೧ ಯಾವನಸ್ಸೈರಂಧ್ರೀ : ೧೯೫೨ : ಪು. ೩–೪

೨ ವಾಸುದೇವಪ್ರಶಸ್ತಿ : ೧೯೬೪ : ಪು. ೨೩೩

ಗಳಗನಾಥ[೧]

(೧೮೬೯–೧೯೪೨)

ಕನ್ನಡದ ನುಡಿವೆಣ್ಣು ಕಬ್ಬದುಡಿಗೆಯ ತೊಟ್ಟು
ಗಂಭೀರಗಮನದಲಿ ಪಂಡಿತರ ಕೋಲೂರಿ
ರಾಜವೈಖರಿಯಲ್ಲಿ ಮಂದ ಹೆಜ್ಜೆಗಳಿಟ್ಟು
ಪಾಮರರ ಕಡೆಗಣಿಸಿ ಆಕಾಶಕುಸುಮಗಳ
ಕಂಪನಾಘ್ರಾಣಿಸುತ ಕಲ್ಪವೃಕ್ಷದ ಹಣ್ಣ
ಸವಿಸೊದೆಯ ಸೊಗಕೆಂದು ಬಾಯ ಚಪ್ಪರಿಸುತ್ತ
ಸಗ್ಗಕಭಿಮುಖವಾಗಿ ಪಯಣ ಹೊರಟಿರುವಾಗ
ಆಕೆಯನೆ ಕೆಣಕಿದಿರಿ ಗಳಗನಾಥರೆ ನೀವು !

ಉಭಯಭಾಷಾ ಪ್ರೌಢಸಾಮ್ರಾಜ್ಞಿ ತಾನಿಂದು
ರನ್ನಪೀಠವ ತೊರೆದು ಸಾಮಾನ್ಯರೆದೆಯಲ್ಲಿ
ಸಲೆಮೆರೆದು ನಿಂತಿಹುದು ನಿಚ್ಚಳದಿ ಕಂಡಾಗ
ನಿಮ್ಮ ಸೇವೆಯ ಮರೆದು ಬಾಳುವನೆ ಕನ್ನಡಿಗ ?
ನಿಮ್ಮ ಗದ್ಯದ ಶೈಲಿ ಕನ್ನಡದ ಜನಕಿತ್ತ
ದಿವ್ಯ ಕಾಣಿಕೆಯಾಯ್ತು; ಹೆಸರು ಶಾಸನವಾಯ್ತು

–ಎಂದು ಕೃಷ್ಣಮೂರ್ತಿ ಪುರಾಣಿಕರವರು ಗಳಗನಾಥರ ಕನ್ನಡ ಸೇವೆಯನ್ನು ಕುರಿತು ಮುಕ್ತಕಂಠವಾಗಿ ಹಾಡಿದರು. "ನಿಮ್ಮ ಗದ್ಯದ ಶೈಲಿ ಕನ್ನಡದ ಜನಕಿತ್ತ ದಿವ್ಯ ಕಾಣಿಕೆಯಾಯ್ತು; ಹೆಸರು ಶಾಸನವಾಯ್ತು" ಇದರಲ್ಲಿ ಅತಿಶಯೋಕ್ತಿಯೆಂಬುದೇನೂ ಇಲ್ಲ. ಕನ್ನಡದ ರಸಜ್ಞತೆಯನ್ನು ಹೆಚ್ಚಿಸಿದವರು ಗಳಗನಾಥರು. ಗಂಟೆ ಗಂಟೆ ಕುಳಿತು, ದಿನ ದಿನ ಕುಳಿತು ಕಾದಂಬರಿಯನ್ನು ಓದಬೇಕೆಂಬ ರುಚಿಯನ್ನು ಹುಟ್ಟಿಸಿದವರು ಗಳಗನಾಥರು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರ ಹೆಸರು ಶಾಸನವಾಯ್ತು; ಶಾಶ್ವತವಾಯ್ತು. 'ಗಳಗನಾಥ' ಅಂಕಿತನಾಮವಾಗಲಿಲ್ಲ; ಅನ್ವರ್ಥನಾಮವಾಯಿತು. ಕುಲ–ಕರಣಿಕರು ಈ ಸಾಹಿತ್ಯ ಸೃಷ್ಟಿಯ ಮೂಲಕ 'ಗಳಗ–ನಾಥ'ರಾದರು. "ಗಳಗನಾಥರಲ್ಲಿ ಲೇಖನಸರಳತೆ ಇದ್ದಿತೆಂದೇ ಸದ್ಬೋಧ ಚಂದ್ರಿಕೆಯ ದಾರಿಯನ್ನು ಕಾಯುತ್ತ, ಅಂಚೆಯವನನ್ನು

---

[೧] ಇವರ ಬಗೆಗೆ ಒಂದು ಮಹಾಪ್ರಬಂಧವನ್ನು ಬರೆಯುವಷ್ಟು ಸಾಮಗ್ರಿ ಇರುವದರಿಂದ ಇಲ್ಲಿ ಸ್ಥೂಲ ವಿವರಣೆಯನ್ನು ಮಾತ್ರ ಕೊಡಲಾಗಿದೆ.

ಕೇಳುತ್ತ ವಿದ್ಯಾರ್ಥಿಯಾಗಿದ್ದಾಗ ನನ್ನಂತೆಯೆ ಸಾವಿರಾರು ಸಾಮಾನ್ಯ ಕನ್ನಡಿಗರು ವಾಚನಾಭಿರುಚಿಯನ್ನು ಹೆಚ್ಚಿಸಿಕೊಂಡರು'' ಎಂದು ಪ್ರಖ್ಯಾತ ನಾಟಕಕಾರರಾದ ಶ್ರೀ ಆದ್ಯ ರಂಗಾಚಾರ್ಯರು ಹೇಳುತ್ತಾರೆ. "ಹೊಸ ಆಸೆಗಳ ಮೂರ್ತಸ್ವರೂಪವೇ ಗಳಗನಾಥರ ಕೃತಿಗಳೆಂದು ಧಾರಾಳವಾಗಿ ಹೇಳಬಹುದು. ಸಾಹಿತ್ಯಕ್ಷೇತ್ರದಲ್ಲಿ ಹೊಸ ದಾರಿಯನ್ನು ಮೆಟ್ಟಬೇಕಾದಾಗ ಅವಶ್ಯವಿರುವ ಆತ್ಮವಿಶ್ವಾಸ ಇನ್ನೂ ಅದೇ ಹುಟ್ಟಿ ಬಲಿಯುವದರಲ್ಲಿತ್ತು. ಅನುವಾದಗಳ ಮೂಲಕವಾಗಿ ಅಂದಿನ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿದ್ದ ಅದೇ ಭರವಸೆಯನ್ನು ಕಳೆಯಲು ಎಲ್ಲೆಡೆಯಲ್ಲಿಯೂ ಯತ್ನ ನಡೆದಂತೆ ಗಳಗನಾಥರಲ್ಲಿಯೂ ನಡೆದಿತ್ತು........ ಯಾವ ಬರವಣಿಗೆಯಾದರೂ ಒಂದು ನಿರ್ದಿಷ್ಟವಾದ ಉದ್ದಿಶ್ಯ ಸಾಧಿಸುವಂತಹದಿರಬೇಕು, ಬರವಣಿಗೆಯ ರೀತಿ ನಮ್ಮ ಸಂಸ್ಕೃತಿಗಳ ಬಗೆಯಲ್ಲಿ ಕುತೂಹಲಪೂರ್ವಕವಾದ ಆದರವನ್ನು ಓದುಗನಲ್ಲಿ ಹುಟ್ಟಿಸುವಂತಹದಾಗಿರಬೇ (ಕು)'' ೧ "ಗಳಗನಾಥರ ಕಾಲವೆಂದರೆ ಕನ್ನಡ ಕಾದಂಬರಿಯು ತನ್ನ ಶೈಶವಾವಸ್ಥೆಯನ್ನು ಬಿಟ್ಟು ಧೈರ್ಯವಾಗಿ ಹುಮ್ಮಸಿನಿಂದ ಹೆಜ್ಜೆಯನ್ನು ಮುಂದಿಕ್ಕಿದ ಕಾಲ'' ಎಂದೂ ಪ್ರಶಂಸಿಸಲಾಗಿದೆ.

ಜೀವನವೃತ್ತಾಂತ :

ಗಳಗನಾಥರ ಪೂರ್ಣ ಹೆಸರು ವೆಂಕಟೇಶ ತಿರಕೊ ಕುಲಕರಣಿ. ಗಳಗನಾಥ ಇವರು ಹುಟ್ಟಿದ ಊರು. ಇವರ ತಂದೆಯವರು ಆ ಊರ ಹಕ್ಕಲಿನ ಕುಲಕರಣಿಕರು. ಗಳಗನಾಥ ಊರು ತುಂಗಭದ್ರಾ ನದಿಯ ತಟದಲ್ಲಿದೆ. ಪ್ರಶಾಂತವಾದ ಊರು. ಐತಿಹಾಸಿಕ ಮಹತ್ವವುಳ್ಳದು. ನದಿಯ ದಂಡೆಯ ಮೇಲೆ ಸುಪ್ರಸಿದ್ಧವಾದ ಗಳಗೇಶ್ವರ ದೇವಾಲಯವಿದೆ. ನದಿಯ ಪ್ರವಾಹದಗುಂಟ ತುಸು ಮುಂದಕ್ಕೆ ಹೋದರೆ ವರದಾ ನದಿಯ ಸಂಗಮ ಕಾಣುತ್ತದೆ. ಊರು ನಿಸರ್ಗದ ಮಡಿಲಲ್ಲಿ ಹಾಯಾಗಿ ಮಲಗಿಕೊಂಡಿದೆ. ಮಗು ಗಳಗನಾಥರ ಮೇಲೆ ಈ ನಿಸರ್ಗಸೌಂದರ್ಯ ಮತ್ತು ಇತಿಹಾಸಗಳು ಪರಿಣಾಮ ಮಾಡದೆ ಬಿಡಲಿಲ್ಲ.

ವೆಂಕಟೇಶರು ಚೊಚ್ಚಲ ಮಗ. ಇವರ ಜನನ ಶಾಲಿವಾಹನ ಶಕ ೧೭೮೦ ರ ವಿಭವ ಸಂವತ್ಸರದ ಪುಷ್ಯಮಾಸದ ಷಷ್ಠಿಯ ದಿವಸ. ಅಂದರೆ ಇಸವಿ ಸನ್ ೧೮೫೯ ರ ಜನೆವರಿ ಐದನೆಯ ತಾರೀಖಿನ ದಿವಸ. ಇವರ ಜನ್ಮಕುಂಡಲಿ ಹೀಗಿದೆ :

ಶಾಲಿವಾಹನ ಶಕೆ ೧೭೮೦ ವಿಭವ ಸಂವತ್ಸರ ಪುಷ್ಯ ಬಹುಳ ಷಷ್ಠಿ
ರಾತ್ರಿ ೧೦-೧೦ : ಜನೆವರಿ ೫, ೧೮೫೯

ಗು. ೧೨	೧	೨	೩
೧೧			೪ ರಾ
೧೦			೫ ಮಂ
೯ ಶ ಶು	೮ ಕ	೭	೬ ಚಂ

ಸ್ವಾಭಾವಿಕವಾಗಿಯೇ, ಮಗುವಿನ ಜನನದ ದಿವಸ ಊರ ಗಳಗೇಶ್ವರ ದೇವಸ್ಥಾನದಲ್ಲಿ ಹೆಚ್ಚಿನ ಸಂಭ್ರಮದ ಪೂಜೆ ಪುರಸ್ಕಾರಾದಿಗಳು ನಡೆದವು. ಗಳಗನಾಥರ ತಂಗಿ ದುರಗವ್ವನನ್ನು ಹತ್ತಿರದ

೧ ಗಳಗನಾಥ : ಕರ್ನಾಟಕ ವಿದ್ಯಾವರ್ಧಕ ಸಂಘ : ೧೯೪೮.

ಹಾವನೂರಲ್ಲಿ ಮದುವೆ ಮಾಡಿಕೊಟ್ಟಿದ್ದರು. ಬೇಸರವಾದಾಗಲೆಲ್ಲ ಗಳಗನಾಥರು ಈ ತಂಗಿಯ ಮನೆಗೆ ಹೋಗುತ್ತಿದ್ದರು. ಹಾವೇರಿ ಕೇಂದ್ರದಿಂದ ಮುಲ್ಕೀ ಪರೀಕ್ಷೆ ಪಾಸಾಗಿ, ಧಾರವಾಡ ಟ್ರೇನಿಂಗ್ ಕಾಲೇಜನ್ನು ಸೇರಿದರು. ಈ ಕಾಲೇಜಿನಲ್ಲಿ ಅವರಿಗೆ ಆಗ ಕನ್ನಡವನ್ನು ಕಲಿಸಿದವರು ಕಿತ್ತೂರ ಅಯ್ಯನವರು ಮತ್ತು ಮುಳಬಾಗಲ ಪಂಡಿತರು. ಇದೇ ಕಾಲಕ್ಕೇ ರೊದ್ದ ರಾಯರೂ, ಕರಂದೀಕರರೂ ಟ್ರೇನಿಂಗ್ ಕಾಲೇಜದಲ್ಲಿ ಅಧ್ಯಾಪಕರಾಗಿದ್ದರು. ರೊದ್ದರಾಯರ ಹೃದಯ ವೈಶಾಲ್ಯ ಮತ್ತು ಕರಂದೀಕರರ ಅಚ್ಚುಕಟ್ಟುತನ ಎಳೆಯ ಗಳಗನಾಥರ ಮನಸ್ಸಿನ ಮೇಲೆ ತುಂಬಾ ಪರಿಣಾಮ ಮಾಡಿದುವು. ಆದರೆ, ಇವರಿಬ್ಬರಿಗಿಂತ ಹೆಚ್ಚಿಗೆ, ಅ-ಪ್ರತ್ಯಕ್ಷವಾಗಿ ಪರಿಣಾಮ ಮಾಡಿದವರೆಂದರೆ ಲೋಕಮಾನ್ಯ ಟಿಳಕರು ಮತ್ತು ಹರಿನಾರಾಯಣ ಆಪ್ಟೆಯವರು. ಎಳೆಯ ಗಳಗನಾಥರು ಟಿಳಕರ 'ಕೇಸರಿ' ಮತ್ತು ಆಪ್ಟೆಯವರ 'ಕರಮಣೂಕ'ವನ್ನು ತಪ್ಪದೇ ಓದುವರು. ಅವುಗಳ ಬಗೆಗೆ ಮಿತ್ರರ ಕೂಡ ಬೇಸರಿಯದೆ ಚರ್ಚೆ ಮಾಡುವರು. ಗಳಗನಾಥರ ದೇಶಭಾಷಾಪ್ರೇಮಕ್ಕೂ, ಸಾಹಿತ್ಯನಿರ್ಮಿತಿಗೂ ಈ ಪ್ರಭಾವಗಳೇ ಪ್ರೇರಕವಾದುವು.

ಸನ್ ೧೮೮೯ ರಲ್ಲಿ ಗಳಗನಾಥರು ಇಪ್ಪತ್ತು ರೂಪಾಯಿ ಸರ್ಟಿಫಿಕೇಟು ಪಡೆದುಕೊಂಡು, ಧಾರವಾಡ ಜಿಲ್ಲಾ ಶಿರಗುಪ್ಪಿಯ ಶಾಲೆಯ ಮುಖ್ಯಾಧ್ಯಾಪಕರೆಂದು ಜೀವನವನ್ನು ಪ್ರಾರಂಭಿಸಿದರು. ಧಾರವಾಡವನ್ನು ಬಿಡಲಿಕ್ಕೆ ಗಳಗನಾಥರ ಮನಸ್ಸು ಬಹಳೇ ಜರಿಯಿತು. ಆದರೆ, ಧಾರವಾಡದಿಂದ ಆರೇಳು ಮೈಲು ಮಾತ್ರ ದೂರದಲ್ಲಿರುವ ನರೇಂದ್ರಕ್ಕೆ ವರ್ಗವಾದಾಗ, ಪುನಃ ಆನಂದಪಟ್ಟರು. ತಾರುಣ್ಯದಲ್ಲಿ ಅವರು ಕಂಡ ಸಾಹಿತ್ಯಕ ಕನಸುಗಳಿಗೆ ಪುನಃ ರೆಕ್ಕೆ ಮೂಡಿದವು. ಈಗಲೇ ಇವರಿಗೆ ರಾ. ಹ. ದೇಶಪಾಂಡೆಯವರ ಸಂಪರ್ಕ ಬಂದುದು. ಈಗಲೇ ಕರ್ನಾಟಕ ವಿದ್ಯಾವರ್ಧಕ ಸಂಘದ ಇನಾಮಿಗಾಗಿ, ತಮ್ಮ ಪ್ರಥಮ ಕಾದಂಬರಿಯಾದ 'ಪ್ರಬುದ್ಧ ಪದ್ಮನಯನೆ'ಯನ್ನು ಬರೆದುದು. ಆದರೆ, ಗಳಗನಾಥರು ನರೇಂದ್ರದಲ್ಲಿದ್ದಾಗಲೇ, ತಂದೆ ತಾಯಿಗಳನ್ನೂ ಹೆಂಡತಿಯನ್ನೂ ಕಳೆದು ಕೊಂಡರು. ಮುಂದೆ ಉಪ್ಪಿನಬೆಟಗೇರಿಗೆ ವರ್ಗವಾದಾಗ ಅವರಿಗೆ ಅಲ್ಲಿ ಕೃಷ್ಣಶಾಸ್ತ್ರಿಗಳೆಂಬ ಸಂಸ್ಕೃತ ಪಂಡಿತರ ಸಂಪರ್ಕವುಂಟಾಯಿತು. ಈಗ ಮನಸ್ಸಿನಲ್ಲಿ ವಿರಕ್ತಿಯನ್ನು ತಾಳಿದ್ದ ಗಳಗನಾಥರು, ಶಾಸ್ತ್ರಿ ಗಳ ಕೈಯಲ್ಲಿ ಸಂಸ್ಕೃತವನ್ನು ಆಳವಾಗಿ ಅಭ್ಯಾಸ ಮಾಡಿದರು. ಆದರೆ, ಸ್ವಲ್ಪ ಕಾಲದಲ್ಲಿಯೇ ಅವರಿಗೆ ಉಪ್ಪಿನಬೆಟಗೇರಿಯಿಂದ ಸುಪ್ರಸಿದ್ಧ ಐತಿಹಾಸಿಕ ಸ್ಥಳವಾದ ಬಂಕಾಪುರಕ್ಕೆ ವರ್ಗವಾಯಿತು. ಇದೇ ಕಾಲಕ್ಕೇ, ಶಿಕ್ಷಣದಲ್ಲಿ ಹೊಸ ಪದ್ಧತಿಗಳನ್ನು ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ರೊದ್ದ ರಾಯರ ನೇತೃತ್ವದಲ್ಲಿ ಗಳಗನಾಥರು, ಅಮ್ಮಿನಭಾವಿ ತಮ್ಮಣ್ಣ ಮಾಸ್ತರರು, ಕುಂಜೂರ ಮಾಸ್ತರರು ಮತ್ತು ೫೦ ಜನ ಮೂರನೆಯ ವರ್ಷದ ವಿದ್ಯಾರ್ಥಿಗಳು ಕೂಡಿ ಮುಂಬಯಿಗೆ ಸಂದರ್ಶನವನ್ನಿತ್ತರು. ಮುಂಬಯಿಲ್ಲಿ ಮಾಧವಬಾಗದಲ್ಲಿಳಿದುಕೊಂಡು, ಅಲ್ಲಿಯ ಪಾರಸಿಕರ ಚಚಿಗಾರ ಶಾಲೆಯನ್ನು ಸಂದ ರ್ಶಿಸಿ, ಅಲ್ಲಿಯ ಶಿಕ್ಷಣ ಪದ್ಧತಿಯನ್ನು ತಿಳಿದುಕೊಂಡರು. ನಂತರ ಗುತ್ತಲಕ್ಕೆ ವರ್ಗವಾದಾಗ ಅಗಡಿಯ ಶೇಷಾಚಲಸ್ವಾಮಿಗಳ ಪ್ರಭಾವ ಗಳಗನಾಥರ ಮೇಲಾಯಿತು. ಪುನಃ ಧಾರವಾಡಕ್ಕೆ ವರ್ಗ ವಾದಾಗ, ಸ್ವಾಭಿಮಾನಿಗಳಾದ ಗಳಗನಾಥರಿಗೆ ಟ್ರೇನಿಂಗ್ ಕಾಲೇಜಿನಲ್ಲಿ ಅಪಮಾನವಾಯಿತು. ಆದ ಕ್ಕಾಗಿ, ಮನನೊಂದವರಾಗಿ, ಅವರು ನೌಕರಿಗೇ ಶರಣು ಹೊಡೆದು ೧/೪ ಪೆನಸನದ ಮೇಲೆ, ಅಂದರೆ ತಿಂಗಳಿಗೆ ೧೭ ರೂಪಾಯಿ ಪೆನಶನ್ ಮೇಲೆ, ನಿವೃತ್ತಿ ಹೊಂದಿದರು.

ನಿವೃತ್ತಿ ಪಡೆದು, ಅಗಡಿಗೆ ಮರಳಿ ಶೇಷಾಚಲ ಸ್ವಾಮಿಗಳ ಆಶೀರ್ವಾದದಿಂದ ಒಂದು ಛಾಪ ಖಾನೆಯನ್ನು ಸ್ಥಾಪಿಸಿ, ಭಿ. ಪ. ಕಾಳೆಯವರ ಸಹಾಯದಿಂದ ' ಸದ್ಬೋಧ ಚಂದ್ರಿಕೆ 'ಯನ್ನು ಪ್ರಾರಂಭಿಸಿದರು. ಈ ಮಾಸಪತ್ರಿಕೆಯಲ್ಲಿಯೇ ಅವರ ಅನೇಕ ಕಾದಂಬರಿಗಳು ಧಾರಾವಾಹಿಯಾಗಿ

ಮುದ್ರಿತವಾದವು. ಈ ಕಾದಂಬರಿಗಳು ಪತ್ರಿಕೆಯ ಜನಪ್ರಿಯತೆಯನ್ನು ಹೆಚ್ಚಿಸಿ ವರ್ಗಣಿದಾರರ ಸಂಖ್ಯೆ ೭೦೦೦ಕ್ಕೆ ಏರುವಂತೆ ಮಾಡಿದವು. ಇಲ್ಲಿಯೇ ಗಳಗನಾಥರು ಒಂದು ಗುರುಕುಲವನ್ನು ಸ್ಥಾಪಿಸಿದರು. ಗಳಗನಾಥರ ಸೇವೆಯನ್ನು ಮೆಚ್ಚಿದ ಶ್ರೀ ರಾಘವೇಂದ್ರ ಮಠದ ಶ್ರೀ ಸುಶೀಲೇಂದ್ರ ಸ್ವಾಮಿಗಳು ವರುಷಕ್ಕೆ ಒಂದು ನೂರು ರೂಪಾಯಿ ಆಶೀರ್ವಾದವಾಗಿ ಕೊಡಹತ್ತಿದರು. ಆಗ ಧಾರವಾಡದಲ್ಲಿ ಡೆಪ್ಯುಟಿ ಕಲೆಕ್ಟರರಾಗಿದ್ದ ಸೇನ್ ಎಂಬ ವಿದ್ಯಾಭಿಮಾನಿಗಳು ಸರಕಾರಕ್ಕೆ ಬರೆದು ಪಾಠ ಶಾಲೆಗೆ ಸರಕಾರದ ಸಹಾಯವೂ ದೊರಕುವಂತೆ ಮಾಡಿದರು. ಪಾಠಶಾಲೆಯಲ್ಲಿ ಆಗ ಒಂದು ನೂರು ವಿದ್ಯಾರ್ಥಿಗಳಿದ್ದರು. ಹೀಗೆ, ಅಖಂಡವಾಗಿ ಹನ್ನೆರಡು ವರುಷ ಕಾಲ ಈ ಪಾಠಶಾಲೆ ನಡೆಯಿತು. ಆದರೆ, ಶೇಷಾಚಲ ಸದ್ಗುರುಗಳು ದೇಹವಿಟ್ಟ ನಂತರ, ಮುಂದೆ ಪೀಠಕ್ಕೆ ಬಂದ ನಾರಾಯಣ ಭಗವಾನರಿಗೂ ಗಳಗನಾಥರಿಗೂ ಹೊಂದದಾಯಿತು. ಇದರಿಂದ ಬೇಸತ್ತ ಗಳಗ ನಾಥರು, ಅಗಡಿಯನ್ನೇ ಬಿಟ್ಟು, ಹಾವೇರಿಗೆ ಬಂದು, ಅಲ್ಲಿಯ ರಾಮದೇವರ ಗುಡಿಯ ಆವಾರ ದಲ್ಲಿ ನಿಂತು, ಅಲ್ಲೊಂದು ಆಶ್ರಮವನ್ನು ಸ್ಥಾಪಿಸಿದರು. ಸದ್ಬೋಧಚಂದ್ರಿಕೆಯ ಹಾಗೆಯೇ, 'ಸದ್ಗುರು' ಎಂಬ ನಿಯತ ಕಾಲಿಕೆಯನ್ನು ಪ್ರಾರಂಭಿಸಿದರು. ಗಳಗನಾಥರ ಈ ಉಪಕ್ರಮ ಅವರನ್ನು ಮೂಲ ಧ್ಯೇಯದಿಂದ ದೂರ ಒಯ್ಯಹತ್ತಿತೆಂದು ಹೇಳುತ್ತಾರೆ. "ಹಾವೇರಿಯು ಗಳಗನಾಥರ ಹೇವ ವನ್ನು ತೋರುವುದು. ಅಭಿಮಾನಿಯಾದವನಿಗೆ ಹೇವ ಬೇಕು. ಆದರೆ ಹೇವದ ಗುಲಾಮನಾಗಿ ಕಾರ್ಯ ಮಾಡತೊಡಗಿದರೆ, ಮೂಲ ಗುರಿಯೊತ್ತಟ್ಟಿಗುಳಿದು ಹೇವ ಮೇಲೆ ಬಂದು, ಹೇವವು ಮಾನವನನ್ನು ನುಂಗುವುದು. ಆ ಮುಂದಿನ ಗಳಗನಾಥರ ಜೀವನವು ಹೀಗೆಯೇ ಆಯಿತು." ಅದ ಕ್ಕೆಂದೇ, ಜೈನಧರ್ಮದಲ್ಲಿ ಸಮ್ಯಗ್‌ಜ್ಞಾನ, ಸಮ್ಯಕ್‌ಚಾರಿತ್ರ್ಯ, ಮತ್ತು ಸಮ್ಯಗ್ ದರ್ಶನಗಳು ಬೇಕೆಂದು ಹೇಳುವುದು.

> ನೇವಾಳಮೆಂದು ಕೆಲಬರ್
> ಪಾಪಂ ಪಿಡಿವಂತೆ ದೇವನೀನಲ್ಲದರಂ ನಂಬಿ ಇ
> ನ್ನೇ ವಿಧಿವಟ್ಟಪರೊ ಮೋಹಮೂರ್ಛೆಯಿಂ ಅರುಹಾ

—ಎಂದು ಹೇಳಿದ ಹಾಗೆ, ಈ ಹೇವದ ಮೂಲಕ ಹಲಕೆಲವು ಸಲ, ಜೀವನಧ್ಯೇಯ ಬೇರೆ ದಾರಿ ಹಿಡಿಯುವದುಂಟು. ಅಲ್ಲದೆ, ತಮ್ಮ ೬೦ನೆಯ ವರುಷದ ಶಾಂತಿಯ ಕಾಲಕ್ಕೆ ಆದ ವೆಚ್ಚದ ಮೂಲಕವೂ ಗಳಗನಾಥರಿಗೆ ತುಂಬಾ ಆರ್ಥಿಕಹಾನಿಯಾಯಿತು. ಇದೆಲ್ಲದರ ಪರಿಣಾಮವಾಗಿ ಗಳಗ ನಾಥರು ತಮ್ಮ ಜೀವನದ ಇಳಿವಯಸ್ಸಿನಲ್ಲಿ 'ನಮ್ಮ ಸಾಲ ತೀರಿಸುವ ಗ್ರಂಥಗಳು' ಎಂಬ ಗ್ರಂಥ ಮಾಲಿಕೆಯನ್ನು ಪ್ರಾರಂಭಿಸಿ, ಸ್ವತಃ ತಾವೇ ಹೆಗಲ ಮೇಲೆ ಆ ಗ್ರಂಥಗಳ ಗಂಟನ್ನು ಹೊತ್ತುಕೊಂಡು, ಚಳಿಯೆನ್ನದೆ, ಬಿಸಿಲೆನ್ನದೆ, ಜನರ ಮನೆಮನೆಗೆ ಹೋಗಿ ಪುಸ್ತಕಗಳನ್ನು ಮಾರಿ, ತಮ್ಮ ಸಾಲದ ಋಣವನ್ನು ತೀರಿಸಬೇಕಾಯಿತು. ಆದರೆ, ದುರ್ದೈವದ ಮಾತೆಂದರೆ, ಕನ್ನಡಕ್ಕಾಗಿ ಇಷ್ಟೆಲ್ಲ ದುಡಿದ ಈ ಮಹನೀಯರ ಆಪತ್ಕಾಲದಲ್ಲಿ ಅವರಿಗೆ ಸಹಾಯವಾಗಿ ನಿಲ್ಲಲು ಯಾವ ಶ್ರೀಮಂತ ಕನ್ನಡಿಗನೂ ಮುಂದೆ ಬರಲಿಲ್ಲ.

"ಗಳಗನಾಥರ ಕೊನೆಯ ದಿನಗಳನ್ನು ನೆನೆದರೆ, ಕನ್ನಡಿಗರ ಬಗೆಗೆ ಅದೆಷ್ಟು ರೋಷ ಬರು ವದೊ ? ಸಾಲವೆಂದರೇನು ೧೦,೦೦೦ದ ಒಳಗೆಯೆ ಇತ್ತು. ಅದನ್ನು ಅವರು ತೀರಿಸಲೆಂದು ಸಾಲ ತೀರಿಸುವ ಪುಸ್ತಕಗಳೆಂದು ಕೆಲವನ್ನು ಅಚ್ಚಿಸಿದರು. ಹೆಗಲಮೇಲೆ ಹೊತ್ತುಕೊಂಡು ಮನೆ ಮನೆಗೆ ಅಲೆದು, ಹಣ ಹೆಚ್ಚಾಗುವುದೆಂದು ಹೋದಲ್ಲಿ ಗೆಳೆಯರ ಮನೆ ವಾರ ಹಚ್ಚಿಕೊಂಡು ಹಣ ಕೂಡಿ ಸಲು ಪ್ರಯತ್ನಿಸಿದರು........ ೬೦ ವರುಷಗಳ ವರೆಗೆ ಅವ್ಯಾಹತವಾಗಿ ಸಾಹಸದಿಂದ ಕನ್ನಡದ ಸೇವೆ

ಮಾಡಿದವನ ಸಾಲ ತೀರಿಸಲು ಕೂಡ, ಕನ್ನಡ ಧನಿಕರು ಬರಬಾರದೆಂದರೇನು ? ಅವರು ಅಂದು ಸಾಹಸ ಮಾಡದೆ– ಭಾಷಾಂತರ ಸಾಹಸ ಮಾಡದಿದ್ದರೆ, ನವಕರಿಗೆ ತಿಲಾಂಜಲಿ ಕೊಡದಿದ್ದರೆ, 'ಸದ್ಬೋಧ ಚಂದ್ರಿಕೆ' ನಡೆಸದಿದ್ದರೆ– ಇಂದು ಕನ್ನಡದ ಪರಿಸ್ಥಿತಿ ಏನಾಗುತ್ತಿತ್ತೊ ?"[೧]

ಕನ್ನಡ ಸೇವೆಯ ಹುರುಪು ಎದೆಯಲ್ಲಿ. ಆದರೆ, ಅದರ ಭಾರ ತಡೆವ ಸಾಮರ್ಥ್ಯ ಮೈಯಲ್ಲಿ ಬಾರದ್ದರಿಂದ, ಕೊನೆಗೆ ಕ್ಯಾನ್ಸರಕ್ಕೆ ಆಹುತಿಯಾದರು. ಶ್ರೀ ಗಳಗನಾಥರು ೧೯೪೨ ರ ಎಪ್ರಿಲ ತಿಂಗಳ ೨೨ನೆಯ ದಿನ ಬೆಂಗಳೂರ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ನಿರ್ವ್ಯಾಜ ಪ್ರೀತಿ ಯಿಂದ ಕನ್ನಡದ ಕೈಂಕರ್ಯವನ್ನು ಗೈದ ಈ ಸಾಹಸಜೀವಿ, ಈ ಅಭಿಮಾನಿಜೀವಿ, ಈ ಮೇಧಾವಿ, 'ಸಾಕು ಮಾಡ್ಯೆ ತಂದೆ ಲೋಕದಾಟವನಿನ್ನು' ಎಂಬ ರೀತಿಯಲ್ಲಿ ಈ ಜಗತ್ತಿನ ರಂಗಸ್ಥಲದಿಂದ ಹಿಂದೆ ಸರಿದರು.

ಗಳಗನಾಥರ ಸಾಹಿತ್ಯಸೇವೆ :

ಗಳಗನಾಥರು ಬರೆದ ಗ್ರಂಥಗಳ ಸಂಖ್ಯೆಯನ್ನು ನೋಡಿದರೆ, ಯಾರಿಗಾದರೂ ದಿಕ್ಕುತಪ್ಪು ವಂತಿದೆ. ಪ್ರಕಟಿತವಾದ ಕೃತಿಗಳಷ್ಟೇ ಅ-ಪ್ರಕಟಿತ ಕೃತಿಗಳೂ ಇವೆ. ತನ್ನ ಜೀವಿತ ಕಾಲದಲ್ಲಿ ಒಬ್ಬ ಕನ್ನಡ ಶಾಲಾಶಿಕ್ಷಕ ಇಷ್ಟು ಕೃತಿರಚನೆಯನ್ನು ಮಾಡಿದನೆಂಬುದು ಅಭಿಮಾನಪಡುವಂಥ ಸಂಗತಿ. ಗಳಗನಾಥರ ಕೃತಿಗಳು ಈ ಕೆಳಗಿನಂತಿವೆ :

ಪ್ರಕಟವಾದುವು :

೧. ಪ್ರಬುದ್ಧಪದ್ಮನಯನೆ
೨. ನಿಬಂಧಶಿಕ್ಷಕ
೩. ಈಶ್ವರೀಸೂತ್ರ
೪. ಮರಾಠರ ಅಭ್ಯುದಯ
೫. ಛತ್ರಪತಿ
೬. ಕಮಲಕುಮಾರಿ
೭. ಶಿವಪ್ರಭುವಿನ ಪುಣ್ಯ
೮. ಕುರುಕ್ಷೇತ್ರ
೯. ಗೃಹಕಲಹ
೧೦. ರಾಣೀ ಮೃಣಾಲಿನಿ
೧೧. ಧಾರ್ಮಿಕತೇಜ
೧೨. ಕ್ಷಾತ್ರತೇಜ
೧೩. ಧರ್ಮರಹಸ್ಯ
೧೪. ತಿಲೋತ್ತಮೆ
೧೫. ರಾಣಾ ರಾಜಸಿಂಹ
೧೬. ವೈಭವ
೧೭. ಸತ್ವಸಾರ
೧೮. ಕುಮುದಿನಿ
೧೯. ಸಂಸಾರ ಸುಖ
೨೦. ಲಕ್ಷ್ಮೀಬಾಯಿ
೨೧. ಸತಿ ಸಾಹಸ
೨೨. ಅದ್ಭುತಶೌರ್ಯ
೨೩. ಶುಕಸಂಜೀವಿನಿ
೨೪. ಭಾಗವತಾಮೃತ
೨೫. ಶೈವಸುಧಾರ್ಣವ
೨೬. ತುಲಸೀ ರಾಮಾಯಣ
೨೭. ಕನ್ನಡಿಗರ ಕರ್ಮಕಥೆ
೨೮. ಆನಂದ ರಾಮಾಯಣ
೨೯. ವೆಂಕಟೇಶ ಮಹಾತ್ಮ್ಯ
೩೦. ದುರ್ಗದ ಬಿಚ್ಚುಗತ್ತಿ ಭಾಗ ೧
೩೧. ಚಿದಂಬರ ಚರಿತ್ರೆ
೩೨. ಉತ್ತರರಾಮ ಚರಿತ
೩೩. ಗಿರಿಜಾ ಕಲ್ಯಾಣ
೩೪. ಸತ್ವಾದರ್ಶ

೧ ಗಳಗನಾಥ : ಕರ್ನಾಟಕ ವಿದ್ಯಾವರ್ಧಕ ಸಂಘ : ೧೯೪೬ : ಪು. ૩೧

೩೫. ಭಕ್ತಿವಿಜಯ
೩೬. ಶ್ರೀ ಸುರೇಶ್ವರಾಚಾರ್ಯರ ಚರಿತ್ರೆ
೩೭. ದತ್ತಕಥಾಮೃತಸಾರ
೩೮. ಸಾಧುಸದಾಶಿವ ಲೀಲೆ
೩೯. ಫಕೀರೇಶ್ವರ ಪುರಾಣ
೪೦. ಕುಟುಂಬ
೪೧. ದಾಂಪತ್ಯ
೪೨. ನಿರ್ಯಾಣ ಮಹೋತ್ಸವ
೪೩. ಹಿಂದೂ ಸಮಾಜ ವ್ಯವಸ್ಥೆ
೪೪. ವರ್ಣಾಶ್ರಮ ಧರ್ಮ
೪೫. ಪುನರ್ಜನ್ಮ
೪೬. ಮಾಧವ ಕರುಣಾವಿಲಾಸ
೪೭. ಗೀತಾವಲೋಕನ
೪೮. ಶ್ರೇಷ್ಠ–ಸದುಪದೇಶ
೪೯. ಬ್ರಾಹ್ಮಣ ಪ್ರಾಪ್ತಸಾಧನ
೫೦. ಕಣ್ವಸಂಹಿತೆ
೫೧. ಸುಂದರಲೇಖ ಸಮುಚ್ಚಯ
೫೨. ಭಗವತಿ ಕಾತ್ಯಾಯಿನಿ
೫೩. ಕುಲಕುಠಾರ
೫೪. ನಲಚರಿತ್ರೆ
೫೫. ರಹಸ್ಯಗಳು
೫೬. ಮಹಾಭಾರತ ಆದಿಪರ್ವ
೫೭. ಮಹಾಭಾರತ ಸಭಾಪರ್ವ
೫೮. ಸ್ವರಾಜ್ಯ ಸುಗಂಧ
೫೯. ಸದ್ಗುರು ಪ್ರಭಾವ
೬೦. ಗುರುಪ್ರಸಾದ

ಅ-ಪ್ರಕಟಿತ :

೧. ಮಹಾಭಾರತ ವನಪರ್ವ
೨. ,, ವಿರಾಟಪರ್ವ
೩. ,, ಉದ್ಯೋಗಪರ್ವ
೪. ,, ಭೀಷ್ಮಪರ್ವ
೫. ,, ದ್ರೋಣಪರ್ವ
೬. ,, ಕರ್ಣಪರ್ವ
೭. ,, ಶಲ್ಯಪರ್ವ
೮. ,, ಸೌಪ್ತಿಕಪರ್ವ
೯. ,, ಸ್ತ್ರೀಪರ್ವ
೧೦. ,, ಶಾಂತಿಪರ್ವ
೧೧. ಮಹಾಭಾರತ ಅನುಶಾಸನಪರ್ವ
೧೨. ,, ಅಶ್ವಮೇಧಪರ್ವ
೧೩. ,, ಆಶ್ರಮವಾಸಿಪರ್ವ
೧೪. ,, ಮೌಸಲಪರ್ವ
೧೫. ,, ಮಹಾಪ್ರಾಸ್ಥಾನಿಕಪರ್ವ
೧೬. ,, ಸ್ವರ್ಗಾರೋಹಣಪರ್ವ
೧೭. ಕುಲಕುಠಾರ : ಭಾಗ ೨
೧೮. ದುರ್ಗದ ಬಿಚ್ಚುಗತ್ತಿ : ಭಾಗ ೨
೧೯. ನಿಬಂಧ ಲೇಖನ
೨೦. ಆಧ್ಯಾತ್ಮ ರಾಮಾಯಣ

ಈ ಗ್ರಂಥವೈಪುಲ್ಯವನ್ನು ನೋಡಿದರೆ, "ಗಳಗನಾಥರ ಬರೆಹ ಎಂದರೆ ಅದೊಂದು ಮಹಾ ಸಾಗರವಿದ್ದಂತೆ, ಆ ಸಮುದ್ರದಲ್ಲಿ ಹುಡುಕಿದಷ್ಟು ಹೊಸ ಹೊಸ ಮುತ್ತುಗಳು ಹೊರಡುವವು; ಅದನ್ನು ಕಡೆದಷ್ಟು ತರತರದ ಕೌಸ್ತುಭಗಳು ಅದರೊಳಗೆ ಕಾಣಿಸುವವು" –ಎಂಬುದು ಯಥಾರ್ಥ ವಾದ ಮಾತೆಂದೇ ಹೇಳಬೇಕು.[೧]

ಮೇಲಿನ ಪಟ್ಟಿಯಿಂದ ಗಳಗನಾಥರು ೬೦ರಷ್ಟು ಪ್ರಕಟಿತ ಗ್ರಂಥಗಳನ್ನೂ, ೨೦ರಷ್ಟು ಅ-ಪ್ರಕಟಿತ ಗ್ರಂಥಗಳನ್ನೂ ಬರೆದರೆಂಬುದನ್ನು ಕಾಣುತ್ತೇವೆ. ಸನ್ ೧೮೯೮ ರಲ್ಲಿ ಪ್ರಕಟವಾದ 'ಪ್ರಬುದ್ಧ ಪದ್ಮನಯನೆ' ಎಂಬ ಸ್ವತಂತ್ರ ಕಾದಂಬರಿಯನ್ನು ಮೊದಲುಗೊಂಡು, ಸನ್ ೧೯೩೮ರಲ್ಲಿ ಪ್ರಕಟವಾದ ಅವರ ಸಾಲ ತೀರಿಸುವ ಮಾಲಿಕೆಯಲ್ಲಿಯ 'ಸ್ವರಾಜ್ಯ ಸುಗಂಧ' ಮತ್ತು 'ದುರ್ಗದ ಬಿಚ್ಚುಗತ್ತಿ' (ಭಾಗ ೨)ರ ವರೆಗೆ ಅವ್ಯಾಹತವಾಗಿ ೪೦ ವರುಷಗಳವರೆಗೆ ಅವರ ಲೇಖನ ವ್ಯವಸಾಯ ನಡೆಯಿತು. ಗಳಗನಾಥರು ಬರೆದ ಕಾದಂಬರಿಗಳು ಇಪ್ಪತ್ತುಮೂರಕ್ಕೂ ಕಡಿಮೆಯಿಲ್ಲ.

೧ ಗಳಗನಾಥ : ೧೯೪೬ : ಪು. ೩೩.

ಗಳಗನಾಥರ ಕಾದಂಬರಿಗಳನ್ನು :

೧. ಅನುವಾದಿತ ಕಾದಂಬರಿಗಳು
೨. ಸ್ವತಂತ್ರ ಕಾದಂಬರಿಗಳು

ಎಂದು ಎರಡು ವಿಧವಾಗಿಯೂ, ಇಲ್ಲವೇ ಕಾದಂಬರೀ ವಸ್ತುವಿನ ಆಧಾರದ ಮೇಲಿಂದ :

೧. ಮರಾಠರ ಇತಿಹಾಸಕ್ಕೆ ಸಂಬಂಧಿಸಿದ ಕಾದಂಬರಿಗಳು
೨. ರಾಜಪೂತರ ಇತಿಹಾಸಕ್ಕೆ ಸಂಬಂಧಿಸಿದ ಕಾದಂಬರಿಗಳು
೩. ಕನ್ನಡಿಗರ ಇತಿಹಾಸಕ್ಕೆ ಸಂಬಂಧಿಸಿದ ಕಾದಂಬರಿಗಳು

ಮತ್ತು ೪. ಇತರ ಕಾದಂಬರಿಗಳು

ಎಂದು ನಾಲ್ಕು ವಿಧವಾಗಿಯೂ ವಿಭಜಿಸಬಹುದು.

ಗಳಗನಾಥರು ಹೆಚ್ಚಾಗಿ ಮರಾಠಿಯ ಕಾದಂಬರಿಕಾರರಾದ ಹರಿನಾರಾಯಣ ಆಪ್ಟೆಯವರ ಕಾದಂಬರಿಗಳನ್ನೇ ಭಾಷಾಂತರಿಸಿದ್ದಾರೆ. ಅವರು ಅನುವಾದ ಮಾಡಿದ 'ಕುರುಕ್ಷೇತ್ರ' ಎಂಬ ಕಾದಂಬರಿ, ಮರಾಠಿ ನಾಗೇಶ ವಿನಾಯಕ ಬಾಪಟ ಅವರ 'ಪಾನಿಪತಾಚ ಮೋಹೀಮ' ಎಂಬ ಕಾದಂಬರಿಯ ಅನುವಾದವಾಗಿದೆ. 'ರಾಣಿ ಮೃಣಾಲಿನಿ' ಬಂಗಾಲಿಯಿಂದ ಮರಾಠಿಗೆ ಹೋಗಿ ಕನ್ನಡಕ್ಕೆ ಬಂದಿತು.

ಗಳಗನಾಥರು ಆಪಟೆಯವರ 'ಗಡ ಆಲಾ ಪಣ್ ಸಿಂಹ ಗೇಲಾ' ಎಂಬ ಕಾದಂಬರಿಯನ್ನು ಮಾತ್ರ 'ಕಮಲಕುಮಾರಿ' ಎಂಬ ಹೆಸರಿನಲ್ಲಿ ಶಬ್ದಶಃ ಭಾಷಾಂತರ ಮಾಡಿದರು. ಉಳಿದವು ಹೆಚ್ಚಾಗಿ ರೂಪಾಂತರಗಳು. ಈ ಬಗೆಗೆ ಗಳಗನಾಥರು ಹೇಳುವದೆಂದರೆ :

"ನನ್ನ ಆಯುಷ್ಯದಲ್ಲಿ ನಾನು ಕೈ. ವಾ. ಆಪಟೆಯವರ 'ಕಮಲಕುಮಾರಿ' ಎಂಬ ಒಂದು ಕಾದಂಬರಿಯ ಹೊರತು ಯಾವ ಕಾದಂಬರಿಯನ್ನೂ ಅಕ್ಷರಶಃ ಭಾಷಾಂತರ ಮಾಡಿರುವದಿಲ್ಲ. ಬೇಕಾದವರ ಕಾದಂಬರಿಯಿರಲಿ, ನಾನು ಹಾಗು ನನ್ನ ಕನ್ನಡಿಗರು, ಎಂಬ ಜೋಡನ್ನು ಮರೆಯದೇ ನಾನು ಕಾದಂಬರಿಯನ್ನು ಬೇಕಾದಲ್ಲಿ ಹಿಗ್ಗಿಸಿರುವೆನು, ಬೇಡಾದಲ್ಲಿ ಕುಗ್ಗಿಸಿರುವೆನು. ಬೇಕಾದಲ್ಲಿ ಹೊಸ ವಿಷಯುವನ್ನು ಸೇರಿಸಿರುವೆನು. ಬೇಡಾದಲ್ಲಿ ಇದ್ದ ವಿಷಯುವನ್ನು ತೆಗೆದು ಹಾಕಿರುವೆನು. ಆ ಕಾದಂಬರಿಯೇ ನನ್ನ ಕೈಗೊಂಬೆಯಲ್ಲದೇ, ನಾನು ಕಾದಂಬರಿಯ ಕೈಗೊಂಬೆಯಾಗಿರುವದಿಲ್ಲ."[೧]

'ಕಮಲಕುಮಾರಿ', 'ಈಶ್ವರೀಸೂತ್ರ', 'ಛತ್ರಪತಿ', 'ಮರಾಠರ ಅಭ್ಯುದಯ', 'ಶಿವಪ್ರಭುವಿನ ಪುಣ್ಯ', 'ಕುರುಕ್ಷೇತ್ರ' 'ಸ್ವರಾಜ್ಯ ಸುಗಂಧ'— ಮೊದಲಾದುವು ಮಹಾರಾಷ್ಟ್ರದ ಇತಿಹಾಸ ಮತ್ತು ವೀರರಿಗೆ ಸಂಬಂಧಪಟ್ಟ ಕಾದಂಬರಿಗಳು. 'ಕ್ಷಾತ್ರತೇಜ', 'ತಿಲೋತ್ತಮೆ ಅಥವಾ ಸರಸಪ್ರೇಮ', 'ರಾಣಾ ರಾಜಸಿಂಹ', 'ಧಾರ್ಮಿಕ ತೇಜ', 'ಸತ್ವಸಾರ', 'ಸಂಸಾರ ಸುಖ'— ಮೊದಲಾದವುಗಳು ರಜಪೂತ ಇತಿಹಾಸಕ್ಕೆ ಸಂಬಂಧಿಸಿದವು.

ಗಳಗನಾಥರು ಬರೆದ 'ಕನ್ನಡಿಗರ ಕರ್ಮಕಥೆ' ಅಥವಾ 'ವಿಜಯನಗರದ ನಾಶ' ಎಂಬ ಕಾದಂಬರಿಯೂ ಸಹ ಆಪಟೆಯವರ 'ವಜ್ರಾಘಾತ' ಎಂಬುದರ ಅನುವಾದ. ಈ ಗ್ರಂಥವೂ, 'ಕುಮುದಿನಿ' ಮತ್ತು 'ಮಾಧವ ಕರುಣಾ ವಿಲಾಸ' ಗ್ರಂಥಗಳೂ ಕನ್ನಡಿಗರ ಇತಿಹಾಸಕ್ಕೆ ಸಂಬಂಧ ಪಟ್ಟವು.

---

೧ ಸದ್ಗುರು ಪ್ರಭಾವ : ಪು. ೩೯.

ಸಾಹಿತ್ಯದೃಷ್ಟಿ :

ಹೀಗೆ, ವೀರ ಸ್ತ್ರೀ–ಪುರುಷರ ಬಗೆಗೂ ನಾಡಿನಲ್ಲಿ ಉಕ್ಕುತ್ತಿದ್ದ ಕ್ಷಾತ್ರತೇಜದ ಬಗೆಗೂ ಗ್ರಂಥ ರಚನೆ ಮಾಡಿ, ಕನ್ನಡಿಗರಲ್ಲಿ ದೇಶಾಭಿಮಾನ, ಭಾಷಾಭಿಮಾನ ಹುಟ್ಟುವಂತೆ ಗಳಗನಾಥರು ಯತ್ನಿಸಿದರು. "ಜನರನ್ನು ಜಾಗ್ರತಗೊಳಿಸಬೇಕು. ಜನರಲ್ಲಿ ಪ್ರೇಮ, ದಯೆ, ತ್ಯಾಗ, ಸ್ವಾತಂತ್ರ್ಯ, ಸ್ವಾಭಿಮಾನಗಳು ಒಡಮೂಡಬೇಕು, ನೆಲೆ ನಿಲ್ಲಬೇಕು, ಬೆಳಬೆಳಗಬೇಕು– ಎಂಬುದೇ ಅವರ ಹೆಗ್ಗುರಿಯಾಗಿತ್ತು."[೧]

ಶಾಸ್ತ್ರಗ್ರಂಥಗಳನ್ನು ಓದುವುದು ಸಾಮಾನ್ಯ ವಾಚಕರಿಗೆ ಕಠಿಣವಾದ ಕೆಲಸ. ಅವರನ್ನು ಕಥೆ ಕಾದಂಬರಿಗಳ ಮೂಲಕವೇ ಆಕರ್ಷಿಸಬೇಕೆಂಬುದು ಗಳಗನಾಥರ ಇಚ್ಛೆಯಾಗಿದ್ದಿತು. "ಓದುವವನ ಯೋಗ್ಯತೆ ಇದ್ದಂತೆ ಬೇರೆ ಬೇರೆ ಜನರಿಗೆ ಬೇರೆ ಬೇರೆ ಪ್ರಕಾರದ ಗ್ರಂಥಗಳು ವಾಚನಾರ್ಹಗಳಾಗುವವು. ಶಾಸ್ತ್ರೀಯ ವಿಷಯಗಳ, ಗಹನ ವಿಷಯಗಳ, ಗ್ರಂಥಾವಲೋಕನವು ವಿದ್ವಾಂಸರಿಗೆ ಮಾತ್ರ ಸಾಧ್ಯವಾದದ್ದು. ಸಾಧಾರಣ ಜನರಿಗೆ ಆ ಗ್ರಂಥಗಳು ದುರ್ಬೋಧವಾಗಿ ಅವರು ಓದುವ ಲವಲವಿಕೆಯು ನಷ್ಟವಾಗುವ ಸಂಭವವುಂಟು. ಕಾರಣ, ವಾಚನಾಭಿರುಚಿ ಇಲ್ಲದ ಜನರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಲಿಕ್ಕೂ, ಉದ್ಯೋಗಾತಿಶಯದಿಂದ ಕ್ರಾಂತರಾದವರಿಗೆ ವಿಶ್ರಾಂತಿಯಲ್ಲಿ ಆನಂದಗೊಳಿಸಲಿಕ್ಕೂ ಮನೋರಂಜನವಾಗಿ ನೀತಿಬೋಧನವಾಗುವದಕ್ಕೂ ಉತ್ತಮ ಕಾದಂಬರಿಗಳು ಬೇಕೇಬೇಕು" –ಎಂಬುದು ಗಳಗನಾಥರ ಅಭಿಪ್ರಾಯವಾಗಿದ್ದಿತು.[೨]

''ಕಾದಂಬರಿಗಳೆಂದರೆ ಕಡಿಮೆಯ ಯೋಗ್ಯತೆಯ ಗ್ರಂಥಗಳು, ಕಾದಂಬರಿಕಾರನೆಂದರೆ ಕಡಿಮೆ ಯೋಗ್ಯತೆಯ ಗ್ರಂಥಕಾರನು– ಎಂಬ ತಿಳಿವಳಿಕೆಯಿಂದ ನಾನು ಕಾದಂಬರಿಗಳನ್ನು ಬರೆದಿರುವದಿಲ್ಲ. ತಾತ್ವಿಕ ವಿಷಯಗಳೆಂಬ ಸಣ್ಣ ಕಹಿ ಗುಳಿಗೆಗಳನ್ನು ನವರಸಗಳ ಕಷಾಯದಲ್ಲಿ ಕೂಡಿಸಿ ಸರ್ವಗ್ರಾಹ್ಯವಾಗುವಂತೆ ಪೌಷ್ಟಿಕ ರಸಾಯನವಾಗಿ ಮಾಡುವ ಘನವಾದ ಯೋಗ್ಯತೆಯು ಕಾದಂಬರಿಕಾರರಲ್ಲಲ್ಲದೆ ಮತ್ತೊಬ್ಬ ಲೇಖಕರಲ್ಲಿ ಇರಲಾರದೆಂಬ ಅಹಂಕಾರದಿಂದ ನಾನು ಕಾದಂಬರಿಗಳನ್ನು ಬರೆದಿದ್ದೇನೆ.'' ಎಂದು ಅವರು ತಮ್ಮ ಕಾದಂಬರಿಗಳ ಉದ್ದೇಶವನ್ನು ಹೇಳಿದ್ದಾರೆ.[೩]

ಕಾದಂಬರಿ ತಂತ್ರದ ಮೇಲೆ ಇದರಿಂದಾದ ಪರಿಣಾಮ :

ಈ ನೀತಿದೃಷ್ಟಿಯ ಪರಿಣಾಮ ಗಳಗನಾಥರ ಕಾದಂಬರೀ ಬರವಣಿಗೆಯ ತಂತ್ರದ ಮೇಲೂ ಆಯಿತು. ಕಥೆ ಸರಾಗವಾಗಿ, ಸಲೀಲವಾಗಿ ನಡೆದಾಗ, ಲೇಖಕರು ನಡು–ನಡುವೆ ಹಣಿಕಿ ಹಾಕಿ, ಮದುವೆಯ ಮನೆಯ ಪುರೋಹಿತರ ಹಾಗೆ ತಮ್ಮ ಮುಂಡಾಸವನ್ನು ತೋರಿಸಿ, ಸ್ವಲ್ಪ ಸ್ವಲ್ಪ ನೀತಿ ಬೋಧೆಯನ್ನು ಮಾಡಿ, ತಲೆ ಮರೆಸಿಕೊಳ್ಳುವದುಂಟು. ಉದಾಹರಣೆಗೆ, 'ಕನ್ನಡಿಗರ ಕರ್ಮಕಥೆ' ಯಲ್ಲಿ ರಾಮರಾಜನು ಮೆಹರ್ಜಾನಳ ಪ್ರೇಮಪಾಶದಲ್ಲಿ ಸಿಲುಕಿದನೆಂಬ ಕಥೆ ಸುರಮ್ಯವಾಗಿ ನಡೆದಾಗ ಲೇಖಕರು—

'' ಪ್ರಿಯ ವಾಚಕರೇ, 'ಬಲವಾನಿಂದ್ರಿಯ ಗ್ರಾಮೋ ವಿದ್ವಾಂಸಮಪಿಕರ್ಷತಿ' ಎಂಬ ಮಹಾತ್ಮರ ಉಕ್ತಿ ಸುಳ್ಳಲ್ಲ. ತುಂಬಿ ಹೊರಸೂಸುವ ಪ್ರಾಯದ ಸೊಕ್ಕಿನಲ್ಲಿ ನಾವು ಮನಸ್ಸಿಗೆ

---

೧ ಗಳಗನಾಥ : ೧೯೪೬ : ಪು. ೩೪.

೨ ವಾಗ್ಭೂಷಣ : ೧೮೯೮ : ಸಂ. ೩, ಸಂ. ೧.

೩ ಸದ್ಗುರು ಪ್ರಭಾವ : ಪು. ೪೧.

ಹೊರಚಾಳಿಯನ್ನು ಹಚ್ಚಿಬಿಟ್ಟರೆ, ಆ ಖೋಡಿ ಮನಸ್ಸು ಅಸುಗೊಳ್ಳದೆ ತಕ್ಕ ಪ್ರಸಂಗ ಒದಗಿದಾಗೆಲ್ಲ ನಮ್ಮನ್ನು ಎಳೆದೆಳೆದು ಗಾಸಿ ಮಾಡುತ್ತದೆಂಬುದನ್ನು ಪ್ರಾಯಸ್ಥರಾದ ನಿಮ್ಮಲ್ಲಿ ಬಹು ಜನರು ಮನಸ್ಸಿನಲ್ಲಾದರೂ ಒಪ್ಪಿಕೊಳ್ಳಬಹುದೆಂದು ಅನುಭವದಿಂದ ಹೇಳಬಹುದಾಗಿದೆ. ಅದ್ದರಿಂದ ಪರನಾರೀ ಸೋದರನಾಗುವಂತೆ ಪ್ರತಿ ಒಬ್ಬ ತರುಣನೂ, ಅವನ ಹಿತಚಿಂತಕರೂ ಮೊದಲೇ ಜಾಗರೂಕರಾಗಿ ವರ್ತಿಸತಕ್ಕದ್ದು. ಇರಲಿ...." ಎಂದು ಹೇಳುತ್ತಾರೆ.

''ಕುಮುದಿನಿ'' ಕಾದಂಬರಿಯಲ್ಲಿಯಲ್ಲಿಯಂತೂ ಈ ಪ್ರವೃತ್ತಿ ಅತಿರೇಕವಾಗಿ ಬಿಟ್ಟಿದೆ. ಕಥೆಯನ್ನು ಹೇಳಹೇಳುತ್ತ ಲೇಖಕರು : "ಕುರುಕ್ಷೇತ್ರದ ಘೋರ ಸಂಗ್ರಾಮದ ಶ್ರವಣದಿಂದ ನಾವು ಜಾಣರಾಗಿ, ಗರ್ವಕ್ಕೆ ಆಸ್ಪದ ಕೊಡದೆ, ಅತಿಪ್ರಸಂಗಗಳಿಗೆ ಹೋಗದೆ, ರಾಜನಿಷ್ಠಾಪೂರ್ಣವಾದ ಸತ್ವವನ್ನು ತೋರಿಸಿ ನಮ್ಮ ಉದಾರ ಮತದ ಸಾರ್ವಭೌಮ ಸರಕಾರದಿಂದ ಆಂಗ್ಲ ಸಾಮ್ರಾಜ್ಯಾಂತ-ರ್ಗತ ಸ್ವರಾಜ್ಯ ಪಡೆಯುವ ಸುಯೋಗವನ್ನು ಬೇಗನೇ ತಂದುಕೊಡೆಂದು ಶ್ರೀ ಸದ್ಗುರುವನ್ನು ಪ್ರಾರ್ಥಿಸುವೆವು"– ಎಂದು ಹೇಳುತ್ತಾರೆ. "'ಮಾಧವ ಕರುಣಾವಿಲಾಸ' ಮತ್ತು 'ದುರ್ಗದ ಬಿಚ್ಚುಗತ್ತಿ'ಗಳಲ್ಲಂತೂ ಕಾದಂಬರಿಗಳ ಸೊಗಸನ್ನೇ ಕೆಡಿಸುವಂತೆ, ಹಲವಾರು ಪ್ರಕರಣಗಳೇ ನೀತಿ ಧರ್ಮಗಳ ವಿವೇಚನೆಗೆ ಮೀಸಲಾಗಿವೆ."[೧] ಬಹುಶಃ ಭಾವನೆಯು ಅತಿರೇಕವಾದಾಗ ಕಣ್ಣಲ್ಲಿ ತುಂಬಿದ ನೀರನ್ನು ತಡೆಹಿಡಿಯುವುದಕ್ಕಾಗಿ ಈ ತಂತ್ರ ಯೋಗ್ಯವಾಗಿಯೇ ಉಪಯುಕ್ತವಾಯಿತು. ಜನರೂ ಅದನ್ನು ಆ ಕಾಲಕ್ಕೆ ಮೆಚ್ಚಿಕೊಂಡರು.

ಈ ನೀತಿಬೋಧೆಯ ಕಾರಣದ ಮೂಲಕವಾಗಿಯೇ ಗಳಗನಾಥರ ಕಾದಂಬರಿಗಳಲ್ಲಿ ಒಬ್ಬ ಸದ್ಗುರು ಹುಟ್ಟಿಕೊಳ್ಳಲೇಬೇಕು. ಆದರೂ, ಕಾದಂಬರಿಕಾರರು ಸಲುಗೆಯ ಸಂಭಾಷಣೆಯ ಶೈಲಿಯಲ್ಲಿ, "ಸದ್ಯಕ್ಕೆ ಹೆಗ್ಗನ ವಾಸಸ್ಥಳದ ಪರಿಚಯವನ್ನು ನಾವು ಮಾಡಿಕೊಡುವೆವು. ಅದಕ್ಕಾಗಿ ವಾಚಕರು ನಮ್ಮೊಡನೆ ಹೆಗ್ಗನ ಬೆನ್ನುಹತ್ತಿ ಬರಬೇಕು" ಎಂದು ಹೇಳಿದಾಗ, ವಾಚಕರ ಮನಸ್ಸು ಗ್ರಂಥಕರ್ತರ ಹೇಳಿಕೆಯ ಬೆನ್ನುಹತ್ತಿ ಹೋಗುತ್ತದೆ.

ಹೃದಯ ವೈಶಾಲ್ಯ :

ನಾಡಿನ ಮುನ್ನಡೆ ಅಖಂಡ ಕನ್ನಡ ಸಮಾಜ ಒಂದುಗೂಡಿದರೇನೇ ಸಾಧ್ಯವೆಂಬ ಕಲ್ಪನೆ ಗಳಗನಾಥರಿಗಿತ್ತು. ಕೂಡಿರಲಿ ಬಾಳು ಇಡಿಗಾಳಿನಂತೆ ಎಂಬ ಕವಿವಾಣಿಯಂತೆ, ಅವರು ಈ ಸಮಗ್ರತ್ವದ ಉಪದೇಶವನ್ನೇ ಮಾಡಿದರು. ಉದಾಹರಣೆಗೆ 'ಮಾಧವ ಕರುಣಾ ವಿಲಾಸ'ದ ಪ್ರಸ್ತಾವನೆಯಲ್ಲಿ ಅವರು ಹೇಳುವ ಮಾತುಗಳಿವು :

"ಮುಸಲ್ಮಾನ, ಜಂಗಮ, ಬ್ರಾಹ್ಮಣ, ಒಬ್ಬ ಹೊಲೆಯ ಈ ನಾಲ್ವರು ಜತ್ತಾದರೆ ಜಗತ್ತೇ ಜತ್ತಾದಂತಾಗುವದು ! ಈ ನಾಲ್ಕು ವರ್ಗದ ಜನರು ಸ್ವರಾಜ್ಯಕ್ಕಾಗಿ ಹ್ಯಾಗೆ ಒಂದಾಗಬೇಕೆಂಬುದನ್ನು ಈ ಕಾದಂಬರಿಯಲ್ಲಿ ಶ್ರೀ ಮಾಧವಾಚಾರ್ಯರು ತೋರಿಸಿರುವದನ್ನು ವಾಚಕರು ಮಾರ್ಮಿಕ ರೀತಿಯಿಂದ ಅರಿತುಕೊಳ್ಳದಿದ್ದರೆ, ಮಹಾತ್ಮರಾದ ಮಾಧವಾಚಾರ್ಯರು ಈ ಕಾದಂಬರಿಯನ್ನು ಬರೆಸಿದ್ದೂ, ಪಾಮರನಾದ ನಾನು ಬಹು ಕಷ್ಟಪಟ್ಟು ಬರೆದದ್ದೂ, ವಾಚಕರು 'ಕಾದಂಬರಿಯು ಬಲು ಸವಿ' ಎಂದು ಶ್ಲಾಘಿಸಿದ್ದೂ ವ್ಯರ್ಥವೇ ಸರಿ."

---

೧ ಗಳಗನಾಥ : ಕೃಷ್ಣಮೂರ್ತಿ ಕಿತ್ತೂರ : ಕನ್ನಡ ಅಧ್ಯಯನ ಸಂಸ್ಥೆ : ೧೯೭೦.

ಸ್ವತಂತ್ರ ಕೃತಿ ರಚನೆ ಮಾಡಬೇಕೆಂಬ ಸಾಹಸ :

ಹೊಸಗನ್ನಡ ಸಾಹಿತ್ಯದ ಈ ಉದಯಕಾಲ ಸಾಮಾನ್ಯವಾಗಿ ಅನುಕರಣಯುಗವೆಂದೇ ಕರೆಯಲ್ಪಡುತ್ತದಲ್ಲವೇ. ಈ ಕಾಲದಲ್ಲಿ ಅನೇಕ ಭಾಷಾಂತರಗಳಿದ್ದರೂ, ಶಾಂತಕವಿ, ಕಾವ್ಯಾನಂದ ಪುಣೇಕರ, ವಾಸುದೇವಾಚಾರ್ಯ, ಗಳಗನಾಥರಂಥ ಹಲವಾರು ಮೇಧಾವಿಗಳು ಸ್ವತಂತ್ರ ಕೃತಿರಚನೆ ಮಾಡಬೇಕೆಂದು ಆಸೆಪಟ್ಟರು. ಮಾತ್ರವಲ್ಲದೆ, ಆ ಕೃತಿರಚನೆಯನ್ನೂ ಮಾಡಿದರು. ಉದಾಹರಣೆಗೆ, ಗಳಗನಾಥರು ಸನ್ ೧೮೯೮ರಲ್ಲಿ ಪ್ರಕಟವಾದ ತಮ್ಮ ಪ್ರಥಮ ಕಾದಂಬರಿಯೇ ಸ್ವತಂತ್ರ ಕೃತಿಯಾಗಿದೆ ಎಂದು ತುಂಬಾ ಅಭಿಮಾನಪಟ್ಟುಕೊಂಡಿದ್ದಾರೆ :

"ಈ ಕಾದಂಬರಿಯು ಮುಖ್ಯವಾಗಿ ಶೃಂಗಾರ– ವೀರ– ಶೋಕಾದ್ಭುತರಸ ಪ್ರಾಧಾನ್ಯವಾಗಿರುವುದು. ಕಥಾಸಂವಿಧಾನವು ನನ್ನ ಸ್ವಂತ ಕಲ್ಪನೆಯದಿದ್ದು ಅವಾಂತರ ಭಾಗದ ಹತ್ತೆಂಟು ಪುಟಗಳು ಮಾತ್ರ ಅನ್ಯ ಕಾದಂಬರಿಗಳ ಸಹಾಯದಿಂದ ಬರೆಯಲ್ಪಟ್ಟಿವೆ. ಇಷ್ಟರ ಹೊರತು ಇದರಲ್ಲಿ ಬೇರೆ ಗ್ರಂಥಗಳ ಎಂಜಲವು ಬಹುತರವಾಗಿ ದೊರೆಯಲಾರದು." ಈ ಸ್ವತಂತ್ರಕೃತಿ ಪ್ರಜ್ಞೆ ಕೆಚ್ಚಿನಿಂದ ಕೂಡಿದುದಾಗಿದೆ.

ಶೈಲಿ :

ಗಳಗನಾಥರು ಸಂಸ್ಕೃತದ ಜತೆಗೇ, ಅಚ್ಚಗನ್ನಡ ಪದಗಳನ್ನೂ, ಪಡೆನುಡಿಗಳನ್ನೂ, ನಾಣ್ನುಡಿಗಳನ್ನೂ, ಬಳಕೆಯ ಮಾತಿನ ಪದಗಳನ್ನೂ ಉಪಯೋಗಿಸಿದರು. ಶ್ರೀ ಕೃಷ್ಣಶರ್ಮ ಬೆಟಗೇರಿಯವರು ಹೇಳಿದಂತೆ, 'ಗಳಗನಾಥ ಶೈಲಿ' ಎನ್ನುವಷ್ಟರ ಮಟ್ಟಿಗೆ ಅವರು ತಮ್ಮದೇ ಆದ ಶೈಲಿಯನ್ನು ನಿರ್ಮಿಸಿಕೊಂಡರು. "ವ್ಯಾಕರಣ ನಿಯಮಗಳನ್ನು ಮೀರಿ ನಡೆದಿಲ್ಲವಾದರೂ, ದೇಸೀಯ ಮೆರುಗನ್ನು ಪರಿಶುದ್ಧ ಭಾಷಾ ಶೈಲಿಗೆ ಅಳವಡಿಸಿ ಇವರು ತಮ್ಮದೇ ಆದ ಶೈಲಿಯನ್ನು ನಿರ್ಮಿಸಿಕೊಂಡಿದ್ದಾರೆ."[೧] ಈ ಹೇಳಿಕೆಗೆ ಉದಾಹರಣೆಯಾಗಿ ಈ ಕೆಳಗಿನವುಗಳನ್ನು ಕೊಡಬಹುದು :

"ಎಚ್ಚಮನ ಎದುರಿಗೆ ಹೋಗಲಿಕ್ಕೆ ಕುಮುದಿನಿಗೆ ನಾಚಿಕೆ ಸಾವು ಎನಿಸಿತು."
"ಅದನ್ನು ನೋಡಿ ನಾಯಕನ ಸೊಂಡಿಯು ಒಣಗಿತು."
"ನಾನು ಉಂಡ ಮನೆಯ ಗಳ ಎಣಿಸಿದ್ದು ತಪ್ಪಾಯಿತು."
"ಮುಂಡೆಗೆ ಮುಂಡೆಯನ್ನು ಕಂಡರೆ ಉಂಡಷ್ಟು ಸಂತೋಷವೆಂಬ ಗಾದೆಯಂತೆ."
"ಎಲ ಎಲಾ ! ಆ ತುಕಡಿ ಮುರಕ ಹಾರುವನ ಕುಟಿಲತನವೆಷ್ಟು !"

ಇದರಂತೆಯೇ, ಬರವಣಿಗೆಯಲ್ಲಿ ಅವರು ಕೊಡುವ ವಿವರಗಳ ಮೂಲಕ, ಆ ಆ ಸನ್ನಿವೇಶ ನಮ್ಮ ಕಣ್ಣೆದುರಿಗೆ ಪ್ರತ್ಯಕ್ಷವಾಗಿ ನಡೆದಿದೆಯೋ ಏನೋ ಎನ್ನುವ ಹಾಗೆ ಕಾಣುತ್ತದೆ. ಉದಾಹರಣೆಗೆ, 'ಕಮಲಕುಮಾರಿ' ಕಾದಂಬರಿಯ ೧೬೮ನೆಯ ಪುಟದಲ್ಲಿ ಬರುವ ಈ ವರ್ಣನೆಯನ್ನು ಗಮನಿಸಬಹುದು :

"ಈ ಸ್ಥಿತಿಯಲ್ಲಿ ನಾಲ್ಕು ಗಳಿಗೆಗಳು ಕಳೆದುಹೋದುವು; ಬೆಳಗಾಯಿತು. ಕೋಳಿಗಳು ಕೂಗ ಹತ್ತಿದವು. ಹಳ್ಳಿಯವರು ಬೀಸುವ ಹೊತ್ತಾದುದರಿಂದ ಅವರು ಕಲ್ಲಿಗೆ ಕೂತು ಹಾಡು ಹಾಡಿ ಬೀಸ ತೊಡಗಿದರು. ಚಂದ್ರನು ನಿಸ್ತೇಜನಾಗಹತ್ತಿದನು. ಪೂರ್ವದಿಕ್ಕು ನಸುಗೆಂಪಾಗಹತ್ತಿತು........"

---

೧ ಕರ್ಮವೀರ : ೫-೧-೧೯೬೯ : ಪು. ೨೨.

ಗಳಗನಾಥರ ಯಶಸ್ಸು :

ಗಳಗನಾಥರೂ ಅವರ ವಾಚಕರೂ ಏಕತಾನವಾದುದರ ಮೂಲಕವಾಗಿ, ಅವರ ಕೃತಿಗಳೆಲ್ಲ ಅದ್ಭುತವಾದ ಯಶಸ್ಸನ್ನು ಪಡೆದವು. ಈ ಬಗೆಗೆ ಸ್ವತಃ ಕಾದಂಬರಿಕಾರರೇ ಹೇಳಿದುದು ಹೀಗೆ :

"ಕಾದಂಬರಿ ಬರೆಯುವಾಗ ವಾಚಕರ ಸ್ವರೂಪದ ಗಳಗನಾಥರೂ, ಕಾದಂಬರಿ ಓದುವಾಗ ಗಳಗನಾಥನ ಸ್ವರೂಪದ ವಾಚಕರೂ ಆಗಿ, ನಾವಿಬ್ಬರೂ ಕಾದಂಬರಿಗಳ ಸಾಮ್ರಾಜ್ಯದಲ್ಲಿ ನಲಿದಾಡಿರುವೆವು. ಗಳಗನಾಥನ ಲೇಖನವೇದರೆ ವಾಚಕರು ಓದದೆ ಬಿಡಲಿಕ್ಕಿಲ್ಲ. ಹೀಗೆ ನಾನೂ ನನ್ನ ವಾಚಕರೂ ಒಂದುಗೂಡಿದ್ದರಿಂದ ಪರಸ್ಪರರ ವಿಷಯವಾದ ಪ್ರೇಮಾದರಗಳು ಪರಸ್ಪರರಲ್ಲಿ ಉತ್ಪನ್ನವಾಗಿರುವವು.''೧

ಹೀಗೆ ಅನೇಕ ಕೃತಿ ರಚನೆಗಳನ್ನು ಮಾಡಿ, ಕನ್ನಡ ಜನತೆಯ ಮನಸ್ಸನ್ನು ಪೋಷಿಸಿ, ತೋಷಿಸಿ ಗಳಗನಾಥರು ಅನನ್ಯ ಸಾಧಾರಣವಾದ ಯಶಸ್ಸನ್ನು ದೊರಕಿಸಿದರು. ವಿಮರ್ಶಕರೊಬ್ಬರು ಹೇಳಿದಂತೆ :

"ಒಟ್ಟಿನಲ್ಲಿ ಗಳಗನಾಥರು ಕನ್ನಡ ಕಾದಂಬರೀ ಸೌಧದ ಗಟ್ಟಿಮುಟ್ಟಾದ ತಳಪಾಯವನ್ನು ಹಾಕಿದರು. ಹೊಸಗನ್ನಡ ಗದ್ಯಶೈಲಿಯ ಆದ್ಯಪ್ರವರ್ತಕರಾದರು ! ಅವರ ಗುರುಗಳಾದ ಅಗಡಿಯ ಶೇಷಾಚಲ ಸ್ವಾಮಿಗಳು ಅವರನ್ನು ಮಾತನಾಡಿಸಬೇಕಾದಾಗೆಲ್ಲ ಅವರನ್ನು 'ಏನು ಮಹಾರಾಜ' ಎಂದೇ ಸಂಬೋಧಿಸುತ್ತಿದ್ದರು. ಸದ್ಗುರುವಿನ ಈ ಮಾತು ಹುಸಿಯಾಗಲಿಲ್ಲ. ಗಳಗನಾಥರು ಕನ್ನಡ ಸಾಮ್ರಾಜ್ಯದ ಮಹಾರಾಜರೇ ಆದರು !

ಕೇವಲ ಕನ್ನಡ ಶಾಲೆಯ ಶಿಕ್ಷಕರಾಗಿದ್ದ ಗಳಗನಾಥರು ಇಂಥ ಒಂದು ಮಹತ್ಕಾರ್ಯವನ್ನು ಮಾಡಿದರೆಂಬುದು ಒಂದು ಪವಾಡವೇ ಸರಿ ! ಆದರ್ಶ ಹಾಗೂ ನಿಷ್ಠಾವಂತ ಶಿಕ್ಷಕರಾಗಿದ್ದ ಅವರು ಆದರ್ಶ ಸಾಹಿತಿಗಳೂ ಆದರು. ಗಳಗನಾಥರನ್ನು ಪಡೆದ ಕನ್ನಡನಾಡು ಧನ್ಯವಾಯಿತು !"೨

---

೧ ಸದ್ಗುರು ಪ್ರಭಾವ : ಪು. ೩೯–೪೦.

೨ ಗಳಗನಾಥ : ಕೃಷ್ಣಮೂರ್ತಿ ಕಿತ್ತೂರ : ಕನ್ನಡ ಅಧ್ಯಯನ ಸಂಸ್ಥೆ : ೧೯೭೦ : ಪು. ೬೧.

ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ (‘ಗೌರೀಶ’)

(೧೮೬೯ – ೧೯೧೮)

ಶ್ರೀಯುತರು ‘ಗೌರೀಶ’ ಎಂಬ ಕಾವ್ಯನಾಮದಿಂದ ಗ್ರಂಥರಚನೆ ಮಾಡಿದ್ದಾರೆ. ಇವರ ಊರು ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನ ಮಲ್ಲೂರು ಎಂಬ ಗ್ರಾಮ. ಇದು ಬ್ಯಾಡಗಿಯ ಸಮೀಪದಲ್ಲಿದೆ. ತಂದೆಯ ಹೆಸರು ಸೋಮಪ್ಪ; ತಾಯಿ ವೀರಾಂಬೆ; ಅವರ ಅಜ್ಜ ವೀರಬಸವೇಶಗೌಡ. ಶಿವರುದ್ರಪ್ಪನವರಿಗೆ ವೀರೇಶ್ವರ ಎಂಬ ಅಣ್ಣನೂ, ನೀಲಕಂಠನೆಂಬ ತಮ್ಮನೂ ಇದ್ದರಲ್ಲದೆ, ಮೂವರು ಭಗಿನಿಯರೂ ಇದ್ದರು. ಶಿವರುದ್ರಪ್ಪನವರ ಹೆಂಡತಿಯ ಹೆಸರು ಮಲ್ಲವ್ವ. ಶಿವರುದ್ರಪ್ಪನವರು ಧಾರವಾಡದ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜಿನಿಂದಲೇ ಯಶಸ್ವಿಯಾಗಿ ಉತ್ತೀರ್ಣರಾದರು. ಇವರಿಗೆ ತಮ್ಮ ಗುರುಗಳಾದ ಧೋಂಡೊ ನರಸಿಂಹ ಮುಳಬಾಗಲರ ಬಗೆಗೆ ತುಂಬಾ ಅಭಿಮಾನ. ಮುಳಬಾಗಲರು ಅರ್ಧ ಬರೆದು ಮುಗಿಸಿದ್ದ ಹಿತೋಪದೇಶವನ್ನು ಇವರು ಪೂರ್ತಿ ಮಾಡಿದರು. ಹಿತೋಪದೇಶದ ಕೊನೆಯಲ್ಲಿ ಸ್ವ–ವಿಷಯಕವಾಗಿ ಲೇಖಕರು ಪದ್ಯರೂಪವಾಗಿ ಹೇಳಿಕೊಂಡಿದ್ದಾರೆ.[೧]

ಶ್ರೀಯುತರು ಧಾರವಾಡದ ಟ್ರೇನಿಂಗ್ ಕಾಲೇಜದಲ್ಲಿ ವಿದ್ಯಾರ್ಥಿಯಾಗಿದ್ದಾಗ ತಮ್ಮ ವಿನಯ ಮತ್ತು ಪಾಂಡಿತ್ಯಗಳ ಮೂಲಕ ಎಲ್ಲರಿಗೂ ಅಚ್ಚುಮೆಚ್ಚಿನವರಾಗಿದ್ದರು. ಇದೇ ಕಾಲಕ್ಕೆ ಡಾ. ಕಿಟೆಲ್‌ರವರು ತಮ್ಮ ನಿಘಂಟನ್ನು ಸಿದ್ಧಪಡಿಸುತ್ತಿದ್ದರು. ಈ ಸಮಯಕ್ಕೆ ವಿದ್ಯಾರ್ಥಿಯಾಗಿದ್ದ ಶಿವರುದ್ರಪ್ಪನವರು ಕಿಟೆಲ್‌ರಿಗೆ ಸಹಾಯಕರಾದರು. ಅಲ್ಲದೆ, ಸ್ವಂತ ಪರಿಶ್ರಮದಿಂದ ರಾಜಶೇಖರ ವಿಲಾಸ, ಜೈಮಿನಿ ಭಾರತ ಮತ್ತು ಕುಮಾರವ್ಯಾಸ ಭಾರತಗಳ ಅಭ್ಯಾಸ ಮಾಡಿದ್ದರು.

ಈಗ ಸುಮಾರು ೬೦ ವರುಷಗಳ ಹಿಂದಿನ ತಲೆಮಾರಿನವರು ಕನ್ನಡ ಪಠ್ಯಪುಸ್ತಕಗಳಲ್ಲಿ ಓದುತ್ತಿದ್ದ ಪದ್ಯಗಳೆಲ್ಲ ಶಿವರುದ್ರಪ್ಪನವರಿಂದಲೇ ರಚಿತವಾದವುಗಳು. ಹಳೆಯ ಪದ್ಯ ಬಂಧದ ಮಾರ್ಪಾಟುಮಾಡಿಕೊಂಡು, ಹೊಸ ಭಾವ ಮತ್ತು ವಿಚಾರಗಳಿಗೆ ತಕ್ಕಂತೆ ಭಾಷೆಯಲ್ಲಿ ನಯವನ್ನು ತಂದದ್ದನ್ನು ಇಂಥ ಅನೇಕ ಕವನಗಳಲ್ಲಿ ಕಾಣುತ್ತೇವೆ. ವಿದ್ಯಾರ್ಥಿಗಳ ಗ್ರಹಣಮಟ್ಟವನ್ನು ಅನುಸರಿಸಿ ಈ ಕವನಗಳನ್ನು ರಚಿಸಲಾಗಿದೆ. ಹಿಂದಿನ ತಲೆಮಾರಿನವರಿಗೆ ಈ ಕವನಗಳ ಮೊದಲ ಪಂಕ್ತಿಗಳನ್ನು ಹೇಳಿದರೆ ಸಾಕು, ಮುಂದಿನ ಸಾಲುಗಳು ತಾವೇ ತಾವಾಗಿ ನೆನಪಾಗಿ, ತಮ್ಮ ಬಾಲ್ಯದ ಹಸಿರು ನೆನಪುಗಳನ್ನು ಮರುಕಳಿಸುತ್ತವೆ.

---

೧ ವಾಗ್ಭೂಷಣ : ಅಗಸ್ಟ್–ಸೆಪ್ಟೆಂಬರ್ ೧೯೦೦ : ಪು. ೫೮–೬೦.

ಇವು ಮೊದಲನೆಯ ಇಯತ್ತೆಯ ಪುಸ್ತಕದಲ್ಲಿ ಬರುವ ನುಡಿಗಳು :

ಎದ್ದು ಬೇಗನೆ ಮೋರೆ ತೊಳೆಯಿರಿ
ಬುದ್ಧಿ ಕೊಡುವನಂ ಬಿಡದೆ ನಮಿಸಿರಿ........

ಅವರು ದ್ವಿಪದಿಯಲ್ಲಿ ರಚಿಸಿದ 'ನನ್ನ ತಾಯಿ' ಎಂಬ ಪದ್ಯವಿದು :

ತಾಯೆ ನಿನ್ನುಪಕಾರ ಮರೆಯೆ ನಾನೆಂದು
ಮಾಯೆಯುಂಳ್ಳಾಕೆ ನೀನತಿ ಹಿತದ ಬಂಧು ॥ ೧ ॥

ಚಿಕ್ಕಂದು ನಾನಳಲು ತಾಯೆ ಮೊಲೆಗೊಟ್ಟು
ಅಕ್ಕರದ ಹಾಲುಣಿಸಿ ಪೊರೆದೆ ಮನವಿಟ್ಟು ॥ ೨ ॥

ಬೇನೆ ಬಂದಾಗೆನ್ನನಾರು ನೋಡಿದರು
ಸಾನುರಾಗದೊಳೆನ್ನನಾರು ಸಲಹಿದರು ॥ ೩ ॥

ಹೊತ್ತು ಹೊತ್ತಿಗೆ ಹಾಲನುಣಿಸಿ ಕಾಯ್ದವರು
ಎತ್ತಿ ಮುದ್ದಿಸಿ ಹಾಡಿಯಾಡಿಸಿದರಾರು ॥ ೪ ॥

ತಾಯೆ ನಿನಗಿಂತ ಹಿತಬಂಧುವೆನಗಿಲ್ಲ
ಸೀಯೊಳಗೆ ಸಕ್ಕರೆಗೆ ಸರಿಯಾವುದಿಲ್ಲ ॥ ೫ ॥

ಹಲವು ಬಗೆಯಿಂದ ನನ್ನನು
ಸಲಹಿದ ಹೆತ್ತವ್ವ ಕಷ್ಟ ಕೊಡುವೆನೆ ನಿನಗೆ ॥
ಸಲೆ ನಿನ್ನ ಸೇವೆ ಮಾಡುತ
ಸಲಹುವೆ ನಾ ನಿನ್ನನಾವಗಂ ಪ್ರೇಮದೊಳು ॥ ೬ ॥

ಇದು 'ದೇವರ ಮಹಿಮೆ' ಎಂಬ ಅವರ ಪದ್ಯ. ಇದೂ ಚಿಕ್ಕ ಮಕ್ಕಳಿಗೆ ಅನುಕೂಲವಾಗುವಂತೆ ದ್ವಿಪದಿಯಲ್ಲಿಯೇ ಬರೆಯಲ್ಪಟ್ಟಿದೆ :

ಸ್ವಾಮಿ ನಿನ್ನಾಜ್ಞೆಯಿಂ ಸೂರ್ಯ ಚಂದ್ರಮರು
ನೇಮದಿಂದಲಿ ಮೂಡಿ ಬೆಳಗಿ ಮುಳುಗುವರು ॥ ೧ ॥

ಗಾಳಿ ತಾ ಬಿಡದಲೇ ಸತತ ಬೀಸುವದು
ಕಾಲಕಾಲಕೆ ಮೋಡ ಮಳೆಯ ಸುರಿಸುವದು ॥ ೨ ॥

ಕೊಡುತಿಹುದು ಭೂಮಿ ತಾ ಹಲವು ಬೆಳೆಗಳನು
ಬಿಡುತಿಹವು ಗಿಡಬಳ್ಳಿ ಹೂ ಕಾಯಿಗಳನು ॥ ೩ ॥

ಬಳಿವಿಡಿದು ಬೆಟ್ಟಗಳು ಬಿಡದೆ ನಿಂತಿಹವು
ಹೊಳೆ ಹಳ್ಳ ಝರಿಗಳೆಡೆಬಿಡದೆ ಹರಿಯುವವು ॥ ೪ ॥

ಭೂಮಿಯನು ಸಾಗರವು ಸುತ್ತಿಕೊಂಡಿಹುದು
ಸ್ವಾಮಿಯೇ ನಿನ್ನಾಟ ಬಲು ದೊಡ್ಡದಿಹುದು ॥ ೫ ॥

ಪೊಡವಿಯಲ್ಲಿ ಕಾಲ್ಗಳಿಂದ
ನಡೆಯುತಿಹೆವು ಕೆಲಸವನ್ನು
ಬಿಡದೆ ಕೈಗಳಿಂದ ಮಾಡಿ ದಣಿದು ಮಲಗುತ
ದುಡಿದು ದಣಿವು ಕಳೆದುಕೊಳ್ಳು
ತೊಡನೆಯೆದ್ದು ನಾವು ಸುಖವ
ಪಡೆಯುತಿಹೆವು ದೇವ ನಿನ್ನ ದಯದ ಫಲವಿದು ॥

ಇವರಂತೆಯೇ, ಇದೇ ಪಠ್ಯದಲ್ಲಿ ಬರುವ 'ಆಹಹ ಚಂಡನಾಡುವಾ– ದೇಹಶಕ್ತಿ ಬೆಳೆಸುವಾ' ಎಂಬ ಕವನ ಮರಾಠಿ ಮೂಲದಿಂದ ಬಂದಿದ್ದರೂ ಅನೇಕ ವಿವರಗಳು ಕನ್ನಡದಲ್ಲಿ ಹೊಸದಾಗಿ ಮೂಡಿ ಬಂದಿವೆ.

ಅವರು ಹೆಣ್ಣುಮಕ್ಕಳಿಗಾಗಿ ಬರೆದ ಪಠ್ಯಪುಸ್ತಕಗಳಲ್ಲಿಯ ಈ ಕೆಳಗಿನ ಕವನಗಳೂ ತುಂಬ ಜನಪ್ರಿಯವಾಗಿದ್ದವು :

ಜೋಕಾಲಿಯು :

ಇಂದು ಪಂಚಮಿ ಹಬ್ಬ ಹರುಷದ ದಿಬ್ಬ ! ಬಾರೌ ಕೆಳದಿಯೇ
ನಂದದಿಂ ಜೋಕಾಲಿಯಾಡಿ ವಿನೋದ ಪಡುವಾ ಕೆಳದಿಯೇ

ಶರದೃತುವಿನ ಗೀತೆ :

ಶರದೃತುವಿನ ಸುಂದರ ದಿನವಿದು ಬ
ನ್ನಿರಿ ! ಬನ್ನಿರಿ ! ಪ್ರಿಯ ಕೆಳದಿಯರೇ

'ಗರ್ವ' ಎಂಬ ಕವನದಲ್ಲಿ ಮನುಷ್ಯ ಗರ್ವವನ್ನು ಬಿಡಬೇಕೆಂದು ಹೀಗೆ ಹೇಳಿದೆ :

ದುರುಳ ರಾವಣ ಕೆಟ್ಟ ದುಷ್ಟ ಕಂಸನು ಕೆಟ್ಟ
ಕುರುಕುಲೇಶ್ವರನು ಕೆಟ್ಟನು ಕೆಟ್ಟನೌ
ಗರುವದಿಂ ಕೇಡಿಗೀಡಾಗದವರಾರಿಕೋ
ಕರದ ಕಡ್ಡಿಯ ಕೊಟ್ಟು ಪೇಳ್ವೆನದರಿಂದಾ ॥

ಇದು ಮಳೆಯ ವರ್ಣನೆ :

ಎದ್ದಿತೌ ಕೆಂಧೂಳು ಕತ್ತಲು
ಬಿದ್ದಿತೌ ಕೋಲ್ಮಿಂಚು ಮಿಂಚಲು
ಮದ್ದುಗೆಯ ಕಣ್ಣೊಳಗೆ ದೀಪವ ಹಚ್ಚಿದಂತಾಯ್ತು
ಬಿದ್ದಿತಾಗಳೆ ಖಟಖಡಲ್ಲೆನೆ
ಸದ್ದಿನಿಂ ಸಿಡಿಲಿಳೆಗೆ ಘಾಡುಘಾಡು
ಗದ್ದರಿಸುವಾ ಗುಡುಗ ಕೇಳೌ ಭಯವು ಬರುತಿಹುದು

ಇದೇ ರೀತಿ, 'ಸೋಮವಾರಿತನ', 'ಹೋಳಿ', 'ಇಂದು ನಾಳೆ' ಮೊದಲಾದ ಅನೇಕ ಕವನಗಳೂ ಗೌರೀಶರಿಂದ ರಚಿತವಾದುವು. ಈ ಕೆಳಗಿನ ಸಾಲುಗಳು ನಮ್ಮ ಬಾಲ್ಯದ ನೆನಪುಗಳನ್ನು ಮರುಕೊಳಿಸುತ್ತವೆ :

"ಸಖನೆ ನೋಡು ನೋಡು ಶೈಲವೇತು ಪೆರೆವುದು
ಶಿಖರದಿಂದೆ ಮುಗಿಲ ಮುಟ್ಟುವಂತೆ ತೋರ್ಪುದು"........
"ನಾವು ಮೂರು ಮಂದಿ ದಾರಿಕಾರರಿರುವೆವು
ಸಾವಕಾಶ ಭೂಮಿಯನ್ನು ಸುತ್ತುತಿರುವೆವು"........
"ಜಗದೀಶಾ ನೀನೆ ಕಾಯಬೇಕೊ ಬಾಲರಾ"
"ಸುಣ್ಣವ ಕೊಡುವೆನು ಸರಿಯೆಲೊ ಮಳೆಯೆ
ಬಣ್ಣವ ಕೊಡುವೆನು ಬಾರೆಲೊ ಮಳೆಯೇ"
"ಹೊಳೆಯ ನೋಡ ಬನ್ನಿ ಕೆಳೆಯರೆ"
"ಹೊಲದ ಕಷ್ಟವನ್ನು ಕುರಿತು ಹಾಡುವಾ"
"ಹಸರು ಬಣ್ಣದಿಂದೆಸೆಯುತ ಪಕ್ಕವ
ಪಸರಿಸಿ ಗಿಳಿ ಹಾರಾಡುವುದೈ
ಹಸುಳನೆ ನೋಡೈ ಕುಶಲತನದಿ ಜನ
ಉಸುರೆ ಮಾತು ಕಲಿಯುತ್ತಿಹುದೈ"

ಹಿತೋಪದೇಶ (೧೯೦೦) :

ಹಿತೋಪದೇಶದ ಕೆಲವು ಭಾಗಗಳನ್ನು ಧೋಂಡೊ ನರಸಿಂಹ ಮುಳಬಾಗಲರು ಬರೆದಿದ್ದರಷ್ಟೇ. ಅದರಲ್ಲಿಯ ನಾಲ್ಕನೆಯ ಭಾಗದ ಸಂಧಿ ವಿಷಯವನ್ನು ಶಿವರುದ್ರಪ್ಪನವರು ಕನ್ನಡಕ್ಕೆ ಅನುವಾದಿಸಿದರು. ಇದು ವಿದ್ಯಾವರ್ಧಕ ಸಂಘದ ೨೨ನೆಯ ಪುಸ್ತಕವಾಗಿ ಸನ್ ೧೯೦೦ ರಲ್ಲಿ ಪ್ರಕಟವಾಯಿತು. ಈ ಗ್ರಂಥ ಪ್ರಕಟವಾದಾಗ ಶ್ರೀಯುತರು ಹುಬ್ಬಳ್ಳಿ ತಾಲೂಕಿನ ಕುಸುಗಲ್ಲಿನಲ್ಲಿ ಅಧ್ಯಾಪಕರಾಗಿದ್ದರು.

ಕನ್ನಡ ಹಿತೋಪದೇಶದ ಶೈಲಿಯ ಮಾಧುರ್ಯ, ಕಾವ್ಯಮಯತೆ, ಸುಭಗತೆ, ಸೂತ್ರಬದ್ಧತೆಗಳ ದೃಷ್ಟಾಂತವಾಗಿ ಈ ಕೆಳಗಿನ ಭಾಗವನ್ನು ಉದ್ಧರಿಸಬಹುದು :

"ನರ್ಮದಾತೀರದಲ್ಲಿ ವಿಶಾಲವಾದದ್ದೊಂದು ಬೂರಲಮರವಿರುವದು. ಅಲ್ಲಿ ಹಕ್ಕಿಗಳು ಗೂಡುಗಳನ್ನು ಕಟ್ಟಿಕೊಂಡು, ಮಳೆಗಾಲದಲ್ಲಿ ಸಹ ಸುಖದಿಂದ ಇರುತ್ತಿದ್ದವು. ಹೀಗಿರಲು ಒಂದು ಸಮಯದಲ್ಲಿ ನೀಲವಸ್ತ್ರಗಳಿಂತಿರುವ ಆಕಾಶವು ಮೇಘಮಾಲೆಯಿಂದ ಮುಚ್ಚಲ್ಪಟ್ಟಿರಲು ಎಡೆಬಿಡದೆ ಸುರಿಯುವ ಜಲಧಾರೆಗಳಿಂದ ಮಹಾವೃಷ್ಟಿಯಾಗುತ್ತಿರಲು, ಆ ಮರದ ಬುಡದಲ್ಲಿ ಮಂಗಗಳು ತೊಯ್ಸಿಕೊಂಡು ಚಳಿಗೆ ಹಲ್ಗಿರಿಯುತ್ತ, ನಡುಗುತ್ತ, ಕುಳಿತುಕೊಂಡಿದ್ದವು. ಅದನ್ನು ಕಂಡು ಆ ಮರದ ಮೇಲೆ ಇರುವ ಹಕ್ಕಿಗಳು– ಎಲೆ ಎಲೈ ಕೋತಿಗಳಿರಾ ಕೇಳಿರಿ :

ಗೂಡಂ ಮಾಡಿಹೆವಾವು
ಕೂಡಿಸಿಕೊಕ್ಕೊಂದರಿಂ ತೃಣಪರ್ಣಾದಿಗಳಂ
ಜೋಡಾಗಿಹ ಕಯ್ಕಾಲ್ಗಳ
ನೀಡಿರೆ ದೇವಂ ಬಳಲ್ದಪಿರ್ ನೀವಕ್ಕಟಾ ॥

–ಎನಲು ಮಂಗಗಳು ಅದನ್ನು ಕೇಳಿ ಸಿಟ್ಟಿಗೆದ್ದು, ತಮ್ಮೊಳಗೆ ಆಲೋಚಿಸುತ್ತವೆ. ಎಲಾ ಈ ಪಕ್ಷಿಗಳು ಗಾಳಿಯ ಸಂಚಾರವಿಲ್ಲದ ಗೂಡುಗಳೊಳಗೆ ಸುಖದಿಂದ ಕುಳಿತುಕೊಂಡು, ನಮ್ಮನ್ನು ನಿಂದಿಸುತ್ತವೆ. ಒಳ್ಳೇದು ಇರಲಿ. ಈ ಮಳೆಯು ಹೊರಪಾಗಲಿ. ಅಲ್ಲಿಂದ ನೋಡೋಣ. ತುಸು ಹೊತ್ತಿನ

ಮೇಲೆ ಮಳೆಯು ನಿಲ್ಲಲು, ಮಂಗಗಳೆಲ್ಲ ಆ ಮರವನ್ನೇರಿ ಆ ಪಕ್ಷಿಗಳ ಗೂಡುಗಳನ್ನೆಲ್ಲ ಕಿತ್ತಿ, ಈಡಾಡಿ ತತ್ತಿಗಳನ್ನು ನೆಲಕ್ಕೊಗೆದುಬಿಟ್ಟವು. ಪಕ್ಷಿಗಳು ದುಃಖದಿಂದ ಒದರುತ್ತ ದಿಕ್ಕು ದಿಕ್ಕಿಗೆ ಹಾರಿ ಹೋದವು. ಅದರಿಂದ "ಅರಿದಂಗೊರೆವುದು ಹಿತಮಂ" ಎಂದು ಹೇಳಿದೆನು."

ಒಂದು ಶಬ್ದ ಹೆಚ್ಚಿಲ್ಲ; ಒಂದು ಶಬ್ದ ಕಡಿಮೆಯಿಲ್ಲ. ಹಸಿಗೋಡೆಯ ಮೇಲೆ ಹರಳೊಗೆದಂತೆ, ಹೊಡೆದ ಬಾಣ ತೊಳ್ಳು ಪಾರದಂತೆ, ಶಬ್ದಗಳು ನೇರವಾಗಿ ಬಂದು ತಮ್ಮ ತಮ್ಮ ಸ್ಥಳವನ್ನಾಕ್ರಮಿಸುತ್ತವೆ.

ಪದಾರ್ಥಬೋಧಿನಿ (೧೯೦೦) :

ಇದು ಶಾಲಾ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ರಚಿತವಾದ ಚಿಕ್ಕ ಪುಸ್ತಕ. ವಾಗ್ಭೂಷಣದಲ್ಲಿ 'ಹುಲುಬು' ಎಂಬ ಹೆಸರಿನಲ್ಲಿ ಇದರ ಜಾಹೀರಾತು ಬಂದಿದೆ.

ನನ್ನ ತಾಯಿ (೧೯೦೧) :

೬೪ ಪುಟದ ಈ ಚಿಕ್ಕ ಪುಸ್ತಕದಲ್ಲಿ ಚಿಕ್ಕಮಕ್ಕಳಿಗಾಗಿ ನೀತಿಬೋಧಕವಾದ ೩೯ ಕಥೆಗಳನ್ನು ಹೇಳಲಾಗಿದೆ. ಈ ಪುಸ್ತಕ ಪ್ರಕಟವಾದಾಗ ಗೌರೀಶರು ರಾಣೆಬೆನ್ನೂರಿನಲ್ಲಿ ಶಾಲಾಗುರುಗಳಾಗಿದ್ದರು. ಈ ಪುಸ್ತಕ ರಚನೆಯ ಅವಶ್ಯಕತೆಯನ್ನು ಕುರಿತು ಪ್ರಸ್ತಾವನೆಯಲ್ಲಿ ಹೀಗೆ ಹೇಳಲಾಗಿದೆ :

"ಓ! ಸುಗುಣಾಭಿಮಾನಿಗಳೇ, ಸನ್ ೧೯೦೦ ನೆಯ ಇಸವಿ ಆಕ್ಟೋಬರದಲ್ಲಿ ಧಾರವಾಡದೊಳಗೆ ಕೂಡಿದ ದಕ್ಷಿಣ ಭಾಗದ ಮಹಾವಿದ್ಯಾಪರಿಷತ್ತಿನಲ್ಲಿ 'ನೀತಿಕರವಾದ ಸುಲಭ ಹಾಡುಗಳೂ ಮನೋರಂಜಕವಾದ ಚಿಕ್ಕ ಚಿಕ್ಕ ಕಥೆಗಳೂ ಉಳ್ಳ ಪುಸ್ತಕವಿಲ್ಲದಿರುವದರಿಂದ ಈ ವಿಷಯಗಳನ್ನು ಬಾಲಕರಿಗೆ ಕಲಿಸಲಿಕ್ಕೆ ಶಿಕ್ಷಕರಿಗೆ ಬಲು ತೊಂದರೆಯಾಗುತ್ತಿರುವದು' ಎಂಬ ವಾಣಿಯು ಮೆಲ್ಲನೆ ಸುಳಿದಾಡಿ ಹೋಯಿತು. ಇದನ್ನರಿತು ನಾನು ಸರ್ವಗುರುಹಿರಿಯರ ಕೃಪೆಯಿಂದ ಆ ತೊಂದರೆಯನ್ನು ಆದಷ್ಟು ತಪ್ಪಿಸಬೇಕೆಂದು ಈ ಪುಸ್ತಕವನ್ನು ರಚಿಸಿದೆನು."

ಈ ಪುಸ್ತಕಕ್ಕೆ 'ನನ್ನ ತಾಯಿ' ಎಂಬ ಹೆಸರನ್ನು ಕೊಡಲು ಕಾರಣ ಹೀಗೆ :

"ಈ ಪುಸ್ತಕವು ನೀತಿ ವಿಷಯಕವಾದದ್ದಿದ್ದು, ಚಿಕ್ಕವರ ನಡೆ ನುಡಿಗಳು ಹೆಚ್ಚಾಗಿ ತಾಯಿಯನ್ನೇ ಅವಲಂಬಿಸಿರುವದರಿಂದಲೂ, ತಾಯಿಯು ಎಲ್ಲ ಬಗೆಯಿಂದಲೂ ಮಕ್ಕಳ ಹಿತಚಿಂತನೆ ಮಾಡುವಂತೆ ಇದು ಎಲ್ಲರಿಗೂ ಎಲ್ಲ ತರದ ಹಿತ ಬಯಸಿರುವದಾಗಿರುವದು ಎಂದು ಪರಿಸಮಾಪ್ತಿಯಲ್ಲಿ ನನಗೆ ತೋರಿದುದರಿಂದಲೂ ಮಾತೃವಾಚಕ ಶಬ್ದವು ಒಂದು ಬಗೆಯ ಅಭಿಮಾನವನ್ನೂ ಆನಂದೋತ್ಸಾಹಗಳನ್ನೂ ಹುಟ್ಟಿಸಬಹುದೆಂದು ಮನವರಿಕೆಯಾದುದರಿಂದಲೂ ಇದಕ್ಕೆ 'ನನ್ನ ತಾಯಿ' ಎಂದು ಹೆಸರಿಟ್ಟೆನು."

'ನನ್ನ ತಾಯಿ' ಸಂಗ್ರಹದಲ್ಲಿಯ ಚಿಕ್ಕ ಕಥೆಗಳಲ್ಲಿ ಬರುವ ನೀತಿ, ಸರಳನಿರೂಪಣೆ, ಹಾಸ್ಯ, ಹೆಸರಿಡುವ ಕಲೆ, ತಿಳಿಯಾದ ಕನ್ನಡ ಶೈಲಿ, ಮನೋಜ್ಞವಾಗಿವೆ. ಅಲ್ಲಲ್ಲಿ ನಡುನಡುವೆ ಕವನಗಳೂ ಬಂದಿವೆ. ಈ ಕಥೆಗಳಲ್ಲಿ ಅನೇಕ ಕಡೆಗೆ ಹೊಸ ಪ್ರಜ್ಞೆಯೂ ಕಂಡು ಬರುತ್ತಿದೆ. ಉದಾಹರಣೆಗೆ, 'ಕುಂಬಾರರ ಗುಂಡು, ಶ್ಯಾನುಭೋಗರ ಶೀನು' ಎಂಬ ಈ ಕಥೆಯನ್ನು ನೋಡಬಹುದು :

"ಕುಂಬಾರರ ಗುಂಡು ದಿನಂಪ್ರತಿ ಸಾಲೆಗೆ ಹೋಗುತ್ತಿದ್ದನು. ಅಲ್ಲಿ ಗುರುಗಳ ಕೂಡ ಬಹು ಚಕ್ಕಿಯಿಂದ ನಡಕೊಳ್ಳುತ್ತಿದ್ದನು. ಅವರು ಹೇಳಿದ್ದನ್ನು ಮನಸ್ಸುಗೊಟ್ಟು ಕಲಿಯುತ್ತಿದ್ದನು. ಅದರಿಂದ ಅವನು ಬೇಗ ಜಾಣನಾದನು. ಶ್ಯಾನುಭೋಗರ ಸೀನು ಗುರುಗಳ ಅಪ್ಪಣೆಯಂತೆ ನಡೆಯುತ್ತಿದ್ದಿಲ್ಲ. ಮೇಲೆ ಮೇಲೆ ಸಾಲೆಯನ್ನು ತಪ್ಪಿಸಿ ಆಡಲಿಕ್ಕೆ ಹೋಗುತ್ತಿದ್ದನು. ಇದರಿಂದ ವಿದ್ಯೆ ಬಾರದೆ ದಡ್ಡನಾದನು.

ಒಂದು ದಿನ ಅವರಿಬ್ಬರು ಕೂಡಿ, ಒಂದು ಓಣಿಯಲ್ಲಿ ಹಾದು ಹೋಗುತ್ತಿದ್ದರು. ಅಲ್ಲಿ ಒಬ್ಬ ದೈವವುಳ್ಳವನ ಮನೆಯಿತ್ತು. ಆ ಮನೆಗೆ ಒಂದು ಊರಿಂದ ಪತ್ರವು ಬಂದಿತ್ತು. ಆ ಮನೆಯ ಒಡೆಯನೂ ವಿದ್ಯೆ ಕಲಿತವನಿದ್ದಿಲ್ಲ. ಅದರಿಂದ ಅವನು ಆ ಇಬ್ಬರು ಹುಡುಗರನ್ನು ನೋಡಿ, 'ಶ್ಯಾನುಭೋಗರ ಹುಡುಗನು ಜಾಣನಿರಬಹುದು' ಎಂದು ತಿಳಿದು 'ಬರ್‍ರಿ ಶ್ಯಾನುಭೋಗರೇ ಒಂದಿಷ್ಟು ಪತ್ರವನ್ನೋದಿಕೊಟ್ಟು ಹೋಗಿರಿ' ಎಂದು ಕರೆದನು. ಶ್ಯಾನುಭೋಗರ ಶೀನುವಿಗೆ ಬಾರದ್ದನ್ನು ಕುಂಬಾರ ಗುಂಡು ಓದಿದ. ಅವನಿಗೆ ಮನೆಯ ಯಜಮಾನ ಮನೆಯಲ್ಲಿದ್ದ ಮಾವಿನ ಹಣ್ಣುಗಳನ್ನು ಪ್ರೀತಿಯಿಂದ ಕೊಟ್ಟ. ಗುಂಡುವಿಗೆ ಮಾನ ದೊರೆತದ್ದು ವಿದ್ಯೆಯಿಂದ ಎಂಬುದು ಇಲ್ಲಿಯ ನೀತಿ. ನಾವು ಅದಕ್ಕೂ ಒಂದು ಹೆಜ್ಜೆ ಮುಂದು ಹೋಗಿ, ಜನನದ ಆಕಸ್ಮಿಕ ಮಾತ್ರ ಯಾರಿಗೂ ಮರ್ಯಾದೆಯನ್ನು ತರದು. ಕಲಿಯಿದ್ದವನಿಗೇ ಬೆಲೆ ಇದೆ ಎಂದು ಹೇಳಬೇಕು".

ಗೌರೀಶರ ಹೆಸರಿಡುವ ಕಲೆಯೂ ಮನೋಜ್ಞವಾಗಿದೆ. ಹೆಸರಿನ ಮೊದಲಿನ ಅಕ್ಷರಗಳು ಒಂದೇ ಆಗಿವೆ. ಇಲ್ಲಿ ಬರುವವರು ಶಿವನೇರಿ ಶಿವ್ಯ, ಗೋಕಾವಿ ಗೋವಿಂದ, ಮುಳಗುಂದದ ಮುರಾರಿ, ಅಣ್ಣಿಗೇರಿ ಅಬ್ದುಲ್ಲ, ಹಾನಗಲ್ಲದ ಹನುಮ, ಕಾರವಾರದ ಕರಿಯ ಇತ್ಯಾದಿ.

ಶ್ರೀಯುತರು ಕೊಡುವ ಉಪಮೆಗಳೂ ಮಣ್ಣಿನ ವಾಸನೆಯಿಂದಲೇ ಕೂಡಿವೆ. ಒಬ್ಬ ದಡ್ಡ ಹುಡುಗ "ಅವನ ಒಂದೆ ಹೆಸರು ಹಚ್ಚಿದ ಹುಡುಗರು ಸಹ ಮೇಲಿನ ಇಯತ್ತೆಗೆ ಹೋದರೂ, ಅವನು ಕಲ್ಲೊಳಗಿನ ಕಾರಿಕಂಟಿಯಂತೆ ಕೆಳಗಿನ ಇಯತ್ತೆಯಲ್ಲಿಯೇ ಇದ್ದನು." (ಪುಟ ೨೮) "ಅಳತೆಗೆಟ್ಟು ತಿಂದರೆ, ತಿಪ್ಪೆಯ ಗೆಳೆತನ ಮಾಡಿ ದಣಿಯದೆ ಇರಲಾರ" (ಪುಟ ೬೩) ಈ ಉಪಮೆಗಳು ಪಟ್ಟಣಿಗರಿಗೆ ಹೊಳೆಯುವು. ಉಳಿದ ಹಲವು ಉಪಮೆಗಳು ಹೀಗಿವೆ : "ಬಳಸದಿದ್ದ ಬನಾತು ಗುನಿಗಡಿಯುವಂತೆ, ಕೆಲಸಗೇಡಿಯ ಮನದಲ್ಲಿ ಕೆಟ್ಟ ಆಲೋಚನೆಗಳು ಹುಟ್ಟಿ, ಅವನು ಕಟ್ಟಕಡೆಗೆ ಕೆಟ್ಟು ಹೋಗುತ್ತಾನೆ" (ಪು. ೬೧); "ಹೇಳಬೇಕೆಂದರೆ ಇನ್ನೂ ಹೆಡಿಗೆಗಟ್ಟಲೆ ಅವೆ". (ಪುಟ ೬೩).

"ಮತಿಗೇಡಿಗೆ ಮಾನವಿಲ್ಲ, ಹೊತ್ತುಗೇಡಿಗೆ ಹೊನ್ನಿಲ್ಲ" (ಪು. ೨೮); ''ಕಳ್ಳನ ಬಾಳ್ವೆ ಕಲ್ಲಾವಿಲ್ಲಿ''. "ಎರವಿನ ಅಕ್ಕಿ ಎಸರಿಗೆ ಬಾರವು" (ಪು. ೬೨); ''ಸುಳ್ಳನ್ನು ಕಳ್ಳನು ಕೂಡ ನಂಬನು'' (ಪು. ೬೨)– ಇವು ಹಲವು ಇಲ್ಲಿ ಬರುವ ಗಾದೆಯ ಮಾತುಗಳು.

ಶ್ರೀಯುತರ ಸರಳವಾದ ಕಥನದ ನಿದರ್ಶನವಾಗಿ ಈ ಕೆಳಗಿನ ಉದಾಹರಣೆಯನ್ನು ಕೊಡಬಹುದು :

''ಶಿವ್ಯಾ, ನೀನು ಬೆಕ್ಕನ್ನು ನೋಡಿರುವೆಯೋ ? ನೋಡಿರುವೆನು. ಎಲ್ಲಿ ? ನಮ್ಮ ಮನೆಯಲ್ಲಿ. ಅದು ಏನು ಕುಡಿಯುತ್ತದೆ ? ಹಾಲು ಕುಡಿಯುತ್ತದೆ. ಅದಕ್ಕೆ ಹಾಲು ಎಲ್ಲಿಂದ ಬರುತ್ತದೆ ? ಮನೆಯಲ್ಲಿ ಹಿಂಡಿ ಇಟ್ಟಿರುತ್ತಾರೆ; ಕದ್ದು ಕುಡಿಯುತ್ತದೆ. ಆಗ್ಗೆ ನೀನು ಕಂಡರೆ ಏನು ಮಾಡುತ್ತೀ ? ಹೊಡೆಯುತ್ತೇನೆ. ಯಾಕೆ ? ಕದ್ದು ಕುಡಿಯುತ್ತದೆಂತ ! ನೀನೆ ಕುಡಿಸಿದರೆ ಹೊಡೆಯುವಿಯೋ ?

ಇಲ್ಲ.... ಹಾಗಾದರೆ, ತುಡುಗತನಕ್ಕೆ ಯಾವ ಫಲವಾಗುತ್ತದೆ ? ಕೆಟ್ಟ ಫಲವಾಗುತ್ತದೆ. ತುಡುಗನಿಗೆ ಬಡಿಗೆಯ ಪೆಟ್ಟು." (ಪು. ೪೦.)

ಭೂಮಂಡಲಬೋಧಿನಿ (?) :

ಈ ಚಿಕ್ಕ ಪುಸ್ತಕದ ಒಂಬತ್ತನೆಯ ಆವೃತ್ತಿ ಸನ್ ೧೯೩೮ ರಲ್ಲಿ ಪ್ರಕಟವಾಗಿದೆ. ಇದನ್ನು ಬರೆದಾಗ ಶ್ರೀಯುತರು ಹುಬ್ಬಳ್ಳಿಯಲ್ಲಿ ಶಾಲಾಗುರುಗಳಾಗಿದ್ದರು. ಇದು ಭೂಗೋಲವನ್ನು ಕುರಿತ ಗ್ರಂಥ. ಈ ಗ್ರಂಥದ ಬಾಹುಲ್ಯವನ್ನು ಎಷ್ಟು ಕಡಿಮೆ ಮಾಡಬೇಕೆಂದು ಲೇಖಕರು ಯತ್ನಿಸಿದರೂ, 'ಬರೆಯುವ ಕಡ್ಡಿಯು ಕೊಸರಿಕೊಂಡು' ಹೋಯಿತೆಂದು ಹೇಳುತ್ತಾರೆ. ಯಾಕೆಂದರೆ, ಭೂಗೋಲ ದಂಥ ಶುಷ್ಕಶಾಸ್ತ್ರ ವಿಚಾರವನ್ನು ರಂಜಕವಾಗಿ ಹೇಳಲಿಕ್ಕೆ ಯತ್ನಿಸಿದ್ದೇ ಕಾರಣ. "ಇದಕ್ಕೆ ವರ್ಣ ನಾತ್ಮಕಾದಿ ರೂಪಗಳಿಂದ ವಿಷಯಗಳು ರಂಜನೆಯಾಗಲಿಕ್ಕೆ ಹವಣಿಸಿರುವದೇ ಮೂಲವು. ಉಪ್ಪು ಕಾರ ಹಚ್ಚಿದ್ದು ಉಬ್ಬದೇನು ಮಾಡೀತು ?'' ಪ್ರಸ್ತಾವನೆಯ ಕೊನೆಯಲ್ಲಿ ''ಎಲಾ ಕರ್ನಾಟಕ ಭಾಷಾ ದೇವಿಯೇ, ನಿನ್ನ ಸೇವೆಗೆಂದು.... ಬಹು ಶ್ರಮಗೊಂಡು, ಈ ಪುಸ್ತಕವನ್ನು ಬರೆದಿರುವೆನು. ಆದ್ದರಿಂದ ಇದರ ಉದ್ದೇಶವು ಸಫಲವಾಗುವಂತೆ ನೀನು ಅನುಗ್ರಹಿಸು ! ಆನಂದಗೊಳಿಸು ! ಇದಕ್ಕಿಂತಲೂ ಹೆಚ್ಚು ಸೇವೆ ಮಾಡುವ ಹುರುಪು ಹುಟ್ಟುವಂತೆ ಹರಸು !

ಬರವಣಿಗೆಯ ಗೆಯ್ತಂ ಬಿಗಿ
ತರಮೆಂಬುದನದನು ಮಾಳ್ಪರೇ ಸಲೆ ಬಲ್ಲರ್
ಪರಿಗೋಲನೊಯ್ವ ಕಷ್ಟಮ
ನರಿಯರ್ ಪೊಳೆದಾಂಟುತಿರ್ಪ ದಾರಿಗರೆಂದುಂ''

–ಎಂದು ಹೇಳಿದ್ದಾರೆ. ಪುಸ್ತಕದ ಶೈಲಿ ಶುದ್ಧ ಕನ್ನಡ; ವಿಷಯಸಂಗ್ರಹ ಜೊಕ್ಕಾಗಿದೆ. ಉದಾಹರಣೆಗೆ ಹುಬ್ಬಳ್ಳಿಯ ಬಗೆಗೆ ಲೇಖಕರು ಹೇಳುವುದು ಹೀಗೆ :

"(ಹುಬ್ಬಳ್ಳಿ) ಪ್ರಾಚೀನ ಕಾಲದಿಂದಲೂ ಪ್ರಖ್ಯಾತವಾದದ್ದು. ಇದರಲ್ಲಿ ಹಳೇಹುಬ್ಬಳ್ಳಿ, ಹೊಸ ಹುಬ್ಬಳ್ಳಿ ಎಂದು ೨ ಮುಖ್ಯ ಭಾಗಗಳುಂಟು. ವಿಜಯನಗರದ ರಾಜರು ಸ್ಥಾಪಿಸಿದ್ದರಿಂದ ಹಳೇ ಹುಬ್ಬಳ್ಳಿಗೆ 'ರಾಯರ ಹುಬ್ಬಳ್ಳಿ' ಎಂದೆನ್ನುವರು. ಹಳೆ ಹುಬ್ಬಳ್ಳಿಯ ಬಸಪ್ಪಸೆಟ್ಟಿ ಎಂಬವ ನೊಬ್ಬನು ೧೭೨೦ ರಲ್ಲಿ ಹೊಸ ಹುಬ್ಬಳ್ಳಿಯನ್ನೂ ಅದರ ಕೋಟೆಯನ್ನೂ ಕಟ್ಟಿಸಿದನು.'' [೧]

ಆಳುವ ಚಕ್ರವರ್ತಿಗಳಿಗೆ ದೀರ್ಘಾಯುವನ್ನು ಕೋರುವುದೂ, ಅವರ ಆಳಿಕೆ ಭಾರತದಲ್ಲಿ ಶಾಶ್ವತವಾಗಿ ನೆಲೆಸಲಿ ಎಂದು ಅನನ್ಯಭಾವದಿಂದ ಪರಮಾತ್ಮನನ್ನು ಪ್ರಾರ್ಥಿಸುವುದೂ ಅಂದಿನ ನೌಕರರ ಒಂದು ಮನೋದೌರ್ಬಲ್ಯವಾಗಿತ್ತಷ್ಟೇ ! ಅದಕ್ಕೆ ಗೌರೀಶರು ಏನೂ ಅಪವಾದವಲ್ಲ. ಉಪಸಂಹಾರ ಭಾಗದಲ್ಲಿ ಇಂಗ್ಲಿಷರ ಆಳಿಕೆಯಿಂದ ಭಾರತಕ್ಕಾದ ಲಾಭವನ್ನು ಲೇಖಕರು ವಿವರಿಸು ತ್ತಾರೆ.

"ಅಖಂಡವಾದ ಆರೋಗ್ಯಸಂಪತ್ತುಳ್ಳವರಿಗೆ ಬೇನಿಗನ ಬಳಲ್ಕೆಯು ಗೊತ್ತಾಗದಂತೆ ಇಂಗ್ಲಿಷ ಸರಕಾರದ ಕೃಪಾಛತ್ರ ಬಲದಿಂದ ಉಂಟಾಗಿರುವ ಅಖಂಡ ಶಾಂತತಾ ಕಾಲದಲ್ಲಿಯೇ ಹುಟ್ಟಿ, ಶಾಂತತಾ ಕಾಲದಲ್ಲಿಯೇ ಬೆಳೆದು, ಶಾಂತತೆಯಿಂದಲೇ ಇರುವ ನಮಗೆ ಅದರ ಮಹತ್ವ ಗೊತ್ತಾಗು ವಂತಿಲ್ಲ. ಯಾಕೆಂದರೆ, ಈ ಮೊದಲಿನ ಕಾಲದಲ್ಲಿ "ತಮ್ಮ ಮನೆಯ ಬೋನವನ್ನು ತಾವು ಉಂಡು,

೧ ಭೂಮಂಡಲಬೋಧಿನಿ ಭಾಗ–೧ : ೧೯೩೮ : ಪು. ೯೮.

ಚಲೋ ಉಡಿಗೆ–ತೊಡಿಗೆಗಳನ್ನು ಧರಿಸಿಕೊಂಡು ಮೈ ಬಿಟ್ಟು, ಬೇಕಾದವರು ಬೇಕಾದ ಹಾಗೆ ಊರೊಳಗೆ ಸಹ ಅಡ್ಡಾಡಲಿಕ್ಕೆ ಅಂಜಬೇಕಾಗುತ್ತಿತ್ತು.'' ಅದೇ ಇಂಗ್ಲಿಷ ಆಳಿಕೆ ಬಂದಂದಿನಿಂದ ಈಗ ನಮ್ಮ ದೇಶದಲ್ಲಿ ಎತ್ತ ನೋಡಿದತ್ತ ಶಾಂತತೆಯು ಕಂಡುಬರುವುದು; ಪೆಂಡಾರಿ, ಠಕ್ಕ ಮೊದಲಾದ ನೀಚರ ಹಾವಳಿಗಳು ಬಹುತರ ಹೇಳ ಹೆಸರಿಲ್ಲದಂತಾಗಿರುವವು; ದೇಶದೊಳಗಿನ ಎಲ್ಲ ಬಗೆಯು ಜನ ಜಗಳಗಳಿಗೆಲ್ಲಾ ಬಹುತರ ಒಳಗಿಂದೊಳಗೆ ನುಸಿ ಹತ್ತಿರುವದು ಕಂಡುಬರುತ್ತದೆ; ಪರಚಕ್ರಗಳ ಭಯವು ಎಳ್ಳಷ್ಟೂ ಇಲ್ಲದಾಗಿದೆ.... ಜಾತಿ ಧರ್ಮಗಳ ಭಿನ್ನಭಾವವಿಲ್ಲದೆ ಯೋಗ್ಯರಾದವರಿಗೆ ರಾಜ್ಯ ಕಾರಭಾರದಲ್ಲಿ ಅಧಿಕಾರಗಳು ಕೊಡಲ್ಪಡುತ್ತವೆ.'' ೧

ವೈದ್ಯಕ ಕುರಿತ ಗ್ರಂಥಗಳು :

ಶಿವರುದ್ರಪ್ಪನವರು ಸಾಹಿತಿಗಳಾಗಿದ್ದರಷ್ಟೇ ಅಲ್ಲದೆ, ಸ್ವತಃ ಒಳ್ಳೆಯ ವೈದ್ಯರೂ ಆಗಿದ್ದರು. ಅವರಿಗೆ ನಿಸರ್ಗ ಚಿಕಿತ್ಸೆಯಲ್ಲಿ ಶ್ರದ್ಧೆ ಹೆಚ್ಚು. ಅವರು ಈ ಪದ್ಧತಿಯಿಂದ ಅನೇಕ ಜನರ ರೋಗಗಳ ಪರಿಹಾರ ಮಾಡಿದ್ದರು. ತಮ್ಮ ಈ ವೈದ್ಯಕದ ಜ್ಞಾನ ಎಲ್ಲರಿಗೂ ಮುಟ್ಟಬೇಕೆಂಬ ಸದುದ್ದೇಶದಿಂದ 'ಲಂಘನ ಚಿಕಿತ್ಸೆ', 'ಜಲಚಿಕಿತ್ಸೆ', 'ಬೇನಿಗರ ಲಘು ಚಿಂತಾಮಣಿ' ಎಂಬ ಗ್ರಂಥಗಳನ್ನು ಬರೆದು ಪ್ರಕಟಿಸಿದರು. ಇವುಗಳಲ್ಲಿ 'ಬೇನಿಗರ ಲಘು ಚಿಂತಾಮಣಿ' ಎಂಬ ಪುಸ್ತಕ ಮಾತ್ರ ದೊರಕುತ್ತದೆ. ಇದು ೬–೨–೧೯೧೫ ರಂದು ಪ್ರಕಟವಾಯಿತು. ಆಗ ಲೇಖಕರು ಧಾರವಾಡ ಜಿಲ್ಲಾ ಬಂಕಾಪುರದಲ್ಲಿ ಶಾಲಾ ಗುರುಗಳಾಗಿದ್ದರು. ಈ ಚಿಕ್ಕ ಪುಸ್ತಕ ಇಂಗ್ಲಿಷಿನಲ್ಲಿ ಡಾ. ಕುನ್ಹೆ ಎಂಬವರು ೧೮೮೩ ರ ಸುಮಾರು ಶೋಧ ಮಾಡಿದ ವೈದ್ಯಕ ಪದ್ಧತಿಯ ವಿವರಣೆಯಾಗಿದೆ.

ಶಿವರುದ್ರಪ್ಪನವರು ಸ್ವಭಾವತಃ ರಸಿಕರು; 'ಮನವುಗೆ' ನಿರೂಪಣ ಮಾಡುವಂತಹರು; ಅದರಲ್ಲಿಯೂ ಅವರ ಬರವಣಿಗೆಯ ಶೈಲಿ ಶುದ್ಧ ತಿರುಳ್ ಕನ್ನಡದಿಂದ ಕೂಡಿದುದು. ಹೀಗಾಗಿ, ಅವರು ಯಾವ ಶಾಸ್ತ್ರ ವಿಷಯವನ್ನು ಹೇಳಹೊರಟರೂ, ಅದು ಶುಷ್ಕವಾಗುವದಿಲ್ಲ. ರಸಪ್ರಪೂರ್ಣವಾಗುತ್ತದೆ.

ದೇಹದಾರ್ಢ್ಯದ ಮಹತ್ವವನ್ನು ಹೇಳುವಾಗ ನಿಜಗುಣ ಶಿವಯೋಗಿಗಳ ''ವಿವೇಕಿಯಾದವನು ಮೊದಲು ತನುವನ್ನೇ ಪೋಷಣೆ ಮಾಡಬೇಕು'' ಎಂಬ ಹೇಳಿಕೆಯನ್ನೂ ನಿಜಗುಣರ ಗುರುಗಳಾದ ಚನ್ನಸದಾಶಿವ ಯೋಗೀಂದ್ರರ ''ಶರೀರಂ ರಕ್ಷಯೇದ್ಬುಧಃ'' ಎಂಬ ಉಕ್ತಿಯನ್ನೂ, ಪೂರ್ವ ಋಷಿಗಳ "ಶರೀರ ರಕ್ಷತೋ ಧರ್ಮಃ'', ''ಸರ್ವಮನ್ಯತ್ ಪರಿತ್ಯಜ್ಯ ಶರೀರಮ್ ಅನುಪಾಲಯೇತ್'' ಮೊದಲಾದ ಉಕ್ತಿಗಳನ್ನು ಕೊಡುತ್ತಾರೆ. ಶ್ರೀಯುತರ ಕಾವ್ಯಮಯ ಶೈಲಿಯ ನಿದರ್ಶನವಾಗಿ ಈ ಕೆಳಗಿನ ಸಾಲುಗಳನ್ನು ಕೊಡಬಹುದು :

"ರಾಷ್ಟ್ರದಲ್ಲಿ ನ್ಯಾಯಾಸ್ಥಾನಗಳೂ ಸೆರೆಮನೆಗಳೂ ಕಡಿಮೆ ಇದ್ದಷ್ಟು, ಸದಾಚಾರಗಳು ಹೆಚ್ಚು ಎನ್ನಲಿಕ್ಕೆ ಸಾಕ್ಷಿಯಾಗಿರುವಂತೆ, ವೈದ್ಯರೂ ವೈದ್ಯಾಲಯಗಳೂ ಕಡಿಮೆ ಇದ್ದಷ್ಟು ಆರೋಗ್ಯ ಭಾಗ್ಯವು ಹೆಚ್ಚು ಎನ್ನಲು ಸಾಕ್ಷಿಯು." (ಪುಟ ೮)

''........ತುಡುಗು ದನಗಳು ಗಂಟು ಬಿದ್ದ ತೋಟದಂತೆ" ನನ್ನ ಪ್ರಕೃತಿ ಕ್ಷೀಣಿಸಹತ್ತಿತು. (ಪುಟ ೧೪)

---

೧ ಅದೇ ; ಪು. ೧೩೬–೧೩೭.

"ಬಿಸಿಲ ಬಾಧೆಗೆ ಹಾಕುತ್ತಿದ್ದ ನನ್ನ ಬಣ್ಣದ ಕನ್ನಡಕಗಳಿಗೆ ಸಂದುಕದ ಒಂದು ಸಂದಿಯಲ್ಲಿ ಸುಮ್ಮನೆ ಕೂಡ್ರಹೇಳಿ ಒಂದು ವರ್ಷದ ಮೇಲಾಯಿತು''. (ಪುಟ ೧೭)

ಹೆಚ್ಚಿಗೆ ತಿನ್ನುವುದರ ಬಗೆಗೆ ಈ ಮಾತು : ''ಹೊಟ್ಟೆಪ್ಪನಿಗೆ ಕಷ್ಟ ಕೊಡಬೇಡಿರಿ; ಕೆಟ್ಟು ಹೋದೀರಿ'' (ಪುಟ ೬) "ಕಟ್ಟು ಇಲ್ಲದೆ ಬಟ್ಟೆ ಕೆಟ್ಟಿತು'' (ಪುಟ೯) ''ಸಾವಿರ ಗಡಿಗೆಗಳಿಗೂ ಒಂದೇ ಒಂದು ಡೊಣ್ಣೆ'' (ಪುಟ ೨೩).

ಈ ಲಘು ಚಿಂತಾಮಣಿಯಂತೆಯೇ, 'ಬೇನಿಗರ ಬೃಹಚ್ಚಿಂತಾಮಣಿ' ಎಂಬ ಪುಸ್ತಕವನ್ನೂ ಪ್ರಕಟಿಸಬೇಕೆಂದು ಶ್ರೀಯುತರು ಯೋಚಿಸಿದ್ದರು. ಆದರೆ, ಅದು ಸಾಧ್ಯವಾಗಲಿಲ್ಲ. ಅದು ಹಸ್ತಪ್ರತಿಯ ರೂಪದಲ್ಲಿಯೇ ಶಿವರುದ್ರಪ್ಪನವರ ಚಿರಂಜೀವರಾದ ಶಂಭುಲಿಂಗಪ್ಪನವರ ಹತ್ತಿರ ಇದೆ.

ಕನ್ನಡ ಶಬ್ದಕೋಶ :

''ಶಿವರುದ್ರಪ್ಪನವರ ಕನ್ನಡ ಅಭ್ಯಾಸದ ಆಸಕ್ತಿ ಕನ್ನಡ ಗ್ರಂಥಗಳ ಹಸ್ತಲಿಖಿತ ಪ್ರತಿಗಳನ್ನು ಸಂಗ್ರಹಿಸಿ, ಅಭ್ಯಸಿಸುವ ಕಾರ್ಯಕ್ಕೆ ತೊಡಗಿಸಿತು. ಇವರಿಗೆ ದೊರೆತ ಒಂದು ಕನ್ನಡ–ಕನ್ನಡ ಕೋಶದ ತಾಳೆಗರಿಯ ಹಸ್ತಪ್ರತಿಯು ಅಪೂರ್ವವಾದುದಿತ್ತು. ಕನ್ನಡ ಶಬ್ದದ ಪ್ರತಿಯೊಂದಕ್ಕೂ ವ್ಯುತ್ಪತ್ತ್ಯರ್ಥ, ವಾಚ್ಯಾರ್ಥ, ಲಕ್ಷಣಾರ್ಥಗಳೆಲ್ಲವೂ ಅದರಲ್ಲಿದ್ದು ಪ್ರಯೋಗ ಸಂದರ್ಭದ ಪ್ರಾಚೀನ ಗ್ರಂಥಗಳ ಪದ್ಯಭಾಗಗಳನ್ನೂ ಕೊಡಲಾಗಿತ್ತು. ನಮ್ಮ ದುರ್ದೈವದಿಂದ ಆ ಬೃಹದ್ಗ್ರಂಥವು ಸುಟ್ಟು ಹೋಯಿತು.''[೧]

ನಾಡ ನೆಲೆಗಾರ (?) :

ಇದರ ಮೂರನೆಯ ಆವೃತ್ತಿ ೧೯೩೭ ರಲ್ಲಿ ಪ್ರಕಟವಾಯಿತು. ನಾಡನೆಲೆಗಾರ ಎಂಬುದು ಒಂದು ನೀತಿ ಕಥಾಕದಂಬ. ಇದೊಂದು ವೈಶಿಷ್ಟ್ಯಪೂರ್ಣಗ್ರಂಥ ಇದರಲ್ಲಿ ಲೇಖಕರು ಒಂದು ಹೊಸ ಹಾದಿಯನ್ನು ತುಳಿಯಲು ಪ್ರಯತ್ನಿಸಿದ್ದಾರೆ. ಇಲ್ಲಿ ಬರುವ ಲಘು ಕಥೆಗಳು, ನಾಣ್ನುಡಿಗಳು, ಜಾಣ್ನುಡಿಗಳು, ಕನ್ನಡ ಪಡೆನುಡಿ, ಮತ್ತು ತಿರುಳ್ ಕನ್ನಡದ ಶೈಲಿ– ಇವುಗಳೆಲ್ಲವೂ ಈ ಪುಸ್ತಕಕ್ಕೆ ಒಂದು ಅಪೂರ್ವವಾದ ಮೆರುಗನ್ನು ತಂದು ಕೊಟ್ಟಿವೆ ಲಂಬಿಸಿ ಹೇಳುವುದಕ್ಕಿಂತ, ನಿಯಂತ್ರಿಸಿ ಹೇಳುವ ಜಾಣ್ಮೆಯಲ್ಲಿ ಶ್ರೀಯುತರ ಶೈಲಿಯ ಬಿಗುವನ್ನೂ, ಕಸುವನ್ನೂ ಕಾಣಬಹುದಾಗಿದೆ. ಈ ಪುಸ್ತಕದ ತುಂಬೆಲ್ಲ ಲೇಖಕರು ಸಾಧ್ಯವಿದ್ದಷ್ಟು ಸರಳವಾದ, ತಿಳಿಯಾದ ಚೊಕ್ಕ ಕನ್ನಡ ಶೈಲಿಯನ್ನೇ ಉಪಯೋಗಿಸಲು ಯತ್ನಿಸಿದ್ದಾರೆ. ಈ ಪುಸ್ತಕಕ್ಕೆ 'ನಾಡ ನೆಲೆಗಾರ' ಎಂದು ಹೆಸರಿಡಲು ಕಾರಣ ಹೀಗೆ : ''ನೆಲೆ ಅಂದರೆ ಇಂಗಿತ ಅಥವಾ ಮರ್ಮ: ನಾಡನೆಲೆಗಾರ ಅಂದರೆ ನಾಡ ನಡೆ–ನುಡಿಗಳ ಇಂಗಿತದಲ್ಲಿ ವರ್ತಿಸುವವನು; ಅಂದರೆ ಅವುಗಳ ಪರಿಚಯವುಳ್ಳವನು.''

ಇದರಲ್ಲಿ ನೂರು ನೆಲೆ ಎಂದರೆ ನೂರು ಕಥೆಗಳಿವೆ. ಇವೆಲ್ಲವೂ ಶ್ರೀಯುತರು ಬಂಕಾಪುರದಲ್ಲಿ ಶಾಲಾ ಶಿಕ್ಷಕರಾಗಿದ್ದಾಗ, ತಮ್ಮ ಸುತ್ತು ಮುತ್ತು ಕಂಡ ವ್ಯಕ್ತಿಗಳ ಸ್ವಭಾವಚಿತ್ರಣವೇ ಆಗಿವೆಯೆಂದು ಹೇಳಲಾಗುತ್ತದೆ. 'ಹಿತೋಪದೇಶ', 'ಪಂಚತಂತ್ರ' ಮೊದಲಾದ ನೀತಿ ವಿಷಯಕ ಗ್ರಂಥಗಳಂತಲ್ಲ, ಪ್ರಸ್ತುತ ಗ್ರಂಥದ ಅವಶ್ಯಕತೆ ಏನು ಎಂದು ದೊರೆಯುವ ಪ್ರಶ್ನೆಗಳಿಗೆ ಲೇಖಕರ ಉತ್ತರಗಳು ಇಲ್ಲಿವೆ. ಇಲ್ಲಿ ಬರುವ ಶುದ್ಧ ಕನ್ನಡ ಶೈಲಿಯ ದೃಷ್ಟಿಯಿಂದಲೂ ಈ ಅವತರಣಿಕೆಯನ್ನು ಕೊಡಲಾಗಿದೆ :

[೧] ಧಾರವಾಡ ಸಾಹಿತ್ಯ ಸಮ್ಮೇಲನದಲ್ಲಿ ಶ್ರೀ ಬೆಟಗೇರಿ ಕೃಷ್ಣಶರ್ಮರು ಓದಿದ ಪ್ರಬಂಧ. (ಅಪ್ರಕಟಿತ)

"ಬರೆದರೂ ಬರೆಯಲಿ ! ಹಿಂದಿನವುಗಳಪ್ಪಾದರೂ ಇದು ಮನೋಹರವೇ ?" ಹೀಗೆ ಬಗೆ ಬಗೆಯ ಕೇಳ್ಮೆ (ಪ್ರಶ್ನೆ)ಗಳನ್ನು ಮಾಡಬಹುದು. ಇಂಥವರ ಈ ತರದ ಕೇಳ್ಮೆಗಳು (೧) ಹೆತ್ತ ಮಕ್ಕಳಿರುತ್ತಿರಲು ದತ್ತಮಕ್ಕಳಿಗೆಳಸುವಿರೇನು ?.... (೨) ಸದ್ಯಕ್ಕೆ ಸುಧಾರಿಸಿದ ಭಾಷೆಗಳಲ್ಲಿ ಒಂದೇ ವಿಷಯದ ಮೇಲೆ ತರತರದ ರಚನೆಯ ಪುಸ್ತಕಗಳಾಗುತ್ತಿರುವಂತೆ ನಮ್ಮ ಕನ್ನಡದಲ್ಲಿಯೂ ಆಗುತ್ತ ಹೋಗುವದು ನೆಟ್ಟಗಲ್ಲವೇನು ? (೩) ಸಾಧಾರಣ ಎಲ್ಲ ಪಕ್ವಾನ್ನಗಳ ಮೂಲ ದ್ರವ್ಯಗಳಾದ ಗೋಧಿ, ತುಪ್ಪ, ಸಕ್ಕರೆ ಮುಂತಾದವು ಒಂದೇ ಆದರೂ ಇವು ಬೇರೆ ಬೇರೆ ಅಡಿಗೆಗಳ ರೂಪಗಳಿಂದ ಎಡೆಯಲ್ಲಿ ಬರುವವಾದರೆ ಹೇಗೋ ಹಾಗೆ ಎಲ್ಲರ ನೈತಿಕ ತತ್ವಗಳು ಒಂದೇ ಆದರೂ ಅವು ಹೊಸ ಹೊಸ ರಚನೆಗಳಿಂದ ವಿದ್ಯಾರ್ಥಿಗಳೆದುರಿಗೆ ಬರುವವಾದರೆ ಬೇಸರವಾಗದೆ ಸರಿದೋರಬಹುದಲ್ಲವೆ ?...."– ಎಂಬ ಈ ಮರುಗೇಳ್ಮೆಗಳ ಮುಂದೆ ಒತ್ತಟ್ಟಿನಿಂದ ತಾಳ್ಮೆ ಹೊಂದುವವೆಂದು ನಂಬುತ್ತೇನೆ."

ಹೊಸದೊಂದು ತಾಳಲಯವನ್ನು ಕಂಡುಹಿಡಿದವನು, ಒಂದು ಹೊಸ ಸಾಮ್ರಾಜ್ಯವನ್ನೇ ಕಂಡು ಹಿಡಿದಂತೆ– ಎಂದು ಇಂಗ್ಲಿಷಿನಲ್ಲಿ ಹೇಳುವುದುಂಟು. ಹಾಗೆಯೇ, ಗದ್ಯಶೈಲಿಗೆ ಹೊಸದೊಂದು ಗತಿಯನ್ನು ಕೊಟ್ಟವನೂ, ಒಂದು ಹೊಸ ಮಹಾಸಾಮ್ರಾಜ್ಯವನ್ನೇ ಸಾಧಿಸಿದವನು. ಗೌರೀಶರು ಇಂಥ ಹೊಸ ಗದ್ಯಶೈಲಿಯನ್ನು ಕನ್ನಡಕ್ಕೆ ಒದಗಿಸಿಕೊಟ್ಟಿದ್ದಾರೆ. ಈ ಶೈಲಿಯ ಓಜಸ್ಸು, ಬಂಧ, ಕಲ್ಪಕತೆ, ಕನ್ನಡದ ನುಡಿಗಟ್ಟು, ಪಡೆನುಡಿ ಇವೆಲ್ಲ ಇದಕ್ಕೆ ತನ್ನದೇ ಆದ ಒಂದು ಲಯವನ್ನು ತಂದು ಕೊಟ್ಟಿವೆ. ಒಂದು ಉದಾಹರಣೆ :

"ನಮಗೆ ಕಾಣುವ ಜಗಜ್ಜ್ಯೋತಿಯಾದ ಸೂರ್ಯನು ಒಬ್ಬನೆ ! ಆದರೂ ಆತನು ನೀರಿನ ಸಾವಿರಾರು ಕೊಡಗಳಲ್ಲಿಯೂ ಮೂಡಿ ಕಾಣುತ್ತಿರುವನು. ಆತನನ್ನು ಬೇರೆ ಬೇರೆ ಭಾಷೆಯವರು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿರುವರು. ಆದರೆ ಜಗತ್ಕರ್ತನಾದ ದೇವರು ಒಬ್ಬನೇ. ಆತನು ಎಲ್ಲ ಕಡೆಯಲ್ಲಿಯೂ ಇರುತ್ತಾನೆ; ಆತನನ್ನು ಬೇರೆ ಬೇರೆ ಧರ್ಮದವರು ಬೇರೆ ಬೇರೆ ಹೆಸರುಗಳಿಂದ ಕೊಂಡಾಡುತ್ತಾರೆ. ಈ ರೀತಿಯಾಗಿರುವ ಆ ಜಗದೀಶ್ವರನಿಗೆ ನನ್ನ ನಮಸ್ಕಾರವು !"

'ಅತೃಪ್ತಿರೇವ ದಾರಿದ್ರ್ಯಂ; ತೃಪ್ತಿರೇವ ಮಹದ್ಧನಂ' ಎಂಬುದನ್ನು ವಿವರಿಸಲು ದಿನನಿತ್ಯದ ಭಾಷೆಯಲ್ಲಿ ಹೇಳಿದ ಈ ಕೆಳಗಿನ ಕಥೆಯನ್ನು ಗಮನಿಸಬಹುದು :

"ಒಂದು ಎಮ್ಮೆಯು ಬಹು ದಿನದಿಂದ ಗೊಡ್ಡಾಗಿತ್ತು. ಅದು ಕೆಲವು ವರ್ಷ ದೇವರಿಗೆ ಬೇಡಿಕೊಂಡು, ಕಡೆಗೆ ಹೆಂಗಳಿಗಣ್ಣಿನ ಒಂದು ಕೋಣಮರಿಯನ್ನು ಈಯಿತು. ಅದನ್ನು ನೋಡಿ, ಒಂದು ಮಣಕೆಮ್ಮೆಯೂ– 'ಇದೇನೇ ಅಕ್ಕಾ, ಬಹಳ ದಿವಸಕ್ಕೆ ಬಯಸಿ, ಕಟ್ಟ ಕಡೆಗೆ ಹೇಗಳಿಗಣ್ಣಿನ ಮಗನನ್ನು ಹಡೆದೆಯಲ್ಲೇ ಮಂದಗಾಮಿನೀ' ಎಂದು ನಗೆಯಾಡಿತು. ಅದಕ್ಕೆ ಈದ ಎಮ್ಮೆಯು– 'ತಂಗೀ, ನೀನು ಇನ್ನೂ ಚಿಕ್ಕಾಕೆ; ಪೂರ್ಣ ವ್ಯವಹಾರ ಜ್ಞಾನ ಬಂದಂತೆ ತೋರುವುದಿಲ್ಲ........ ನಾನು ಗೊಡ್ಡಾಗಿದ್ದುದಕಿಂತ ಬೇರೆ ಕಡೆಯಲ್ಲವೇ ? ದೇವರು ಈ ಕಂದಮ್ಮನನ್ನೂ ಕರುಣಿಸದಿದ್ದರೆ ನಾನೇನು ಮಾಡತಕ್ಕವಳಿದ್ದೆನು ? ಇಷ್ಟು ಸಹ ಇಲ್ಲದವರು ಈ ಸೃಷ್ಟಿಯಲ್ಲೆಷ್ಟು ಜನರಿಲ್ಲ ? ಇದನ್ನೆಲ್ಲ ತಿಳಿದು ನೋಡಲು, ಈ ನನ್ನ ಹೇಗಳಿಗಣ್ಣಿನ ಮಗನೇ ನನಗೊಂದು ಕಟ್ಟಾಣಿ ! ಇವನ್ನು ಹಡೆದ ನಾನೇ ಪುಣ್ಯವಂತೆ' ಎನ್ನಲು, ಅದನ್ನು ಕೇಳಿ ಮಣಕೆಮ್ಮೆಯು ಸುಮ್ಮನಾಯಿತು." ಯತ್ನದಿಂದ ದೇವರು ಕೊಟ್ಟಷ್ಟರಲ್ಲಿ ಸಂತೋಷದಿಂದಿರುವವನೇ ಸುಖಿ.[೧]

೧ ನಾಡ ನೆಲೆಗಾರ : ೧೯೪೦ : ಪು. ೫.

ಬಿದಿರು ಉದ್ದವಾಗಿ ಬೆಳೆದರೂ ಬಾಗಿ ಇರುತ್ತದಷ್ಟೇ! ಅದಕ್ಕೆ ಲೇಖಕರು ಕೊಡುವ ಕಾರಣ ಇದು :

"ಜಗತ್ತಿನ ಆರಂಭದಲ್ಲಿ ಒಂದು ಬೆಟ್ಟದ ಮೇಲೆ ಒಳ್ಳೇ ಎತ್ತರವಾಗಿ ಒಂದು ಬಿದುರು ಬೆಳೆದಿತ್ತು. ಒಂದು ದಿನ ಅದು– "ನನ್ನಂಥ ಉನ್ನತರು ಈ ಮೂರು ಲೋಕಗಳಲ್ಲಿಲ್ಲ." ಎಂದು ಜಿರಕೆ ಜಿರಕೆ ಎಂಬ ಸೊಕ್ಕಿನ ಮಾತುಗಳೊಡನೆ ಆ ಗಿರಿಯ ಮೇಲೆ ಜೋಕು ಹೊಡೆಯುತ್ತಿತ್ತು. ಆ ರೀತಿಯನ್ನು ಅದರ ಮಗ್ಗುಲಿನಲ್ಲಿದ್ದ ಒಂದು ಮದರಂಗೀ ಗಿಡವು ನೋಡಿ,– 'ಏ ಅಣ್ಣಾ, ಇಷ್ಟೇಕೆ ನಿನ್ನ ಹಮ್ಮು? ಮೂರು ಲೋಕಗಳವರೆಗೇಕೆ ನಿನ್ನ ಮಾತು? ನಿಂತಲ್ಲೇ ನಿನ್ನ ಮೋರೆಯನ್ನು ತುಸು ಮೇಲಕ್ಕೆತ್ತಿ ನೋಡು. ನೀನೊಬ್ಬನೇಕೆ, ನಿನ್ನಂಥ ಎಷ್ಟು ಸಾವಿರ ಬಿದುರು ಕೂಡಿದರೆ, ಆ ಭಗವಂತನ ಉನ್ನತಿಕೆಗೆ ಸರಿಯಾಗುವಿರಿ!' ಎಂದು ಮುಗಿಲ ಕಡೆಗೆ ಬೆರಳು ಮಾಡಿ ತೋರಿಸಿತು. ಅದನ್ನು ಕಂಡು ಬಿದುರು ನಾಚಿ,– 'ಈ ಜಗತ್ತು ಆಶ್ಚರ್ಯವಾದದ್ದಿರುವುದು. ಇದರ ಮುಂದೆ ಯಾರೂ ಯಾವ ಬಗೆಯಿಂದಲೂ ಸೊಕ್ಕು ತೋರುವದು ತರವಲ್ಲ. ನಾನು ಬರೇ ಉದ್ದಕ್ಕೆ ಬೆಳೆದು ಪ್ರಯೋಜನವೇನು? ಈ ಸಣ್ಣ ಮದರಂಗೀ ಗಿಡದಷ್ಟು ಸಹ ಮತಿಯು ನನ್ನಲ್ಲಿಲ್ಲ' ಎಂದು ತಲೆಯನ್ನು ಕೆಳಗೆ ಮಾಡಿದ್ದು, ಈ ವರೆಗೂ ಅದನ್ನು ಮೇಲಕ್ಕೆತ್ತಲೊಲ್ಲದು."[೧]

ಗೌರೀಶರು ಒಳ್ಳೆಯ ಕನ್ನಡ ಪಂಡಿತರೂ ವೈಯಾಕರಣರೂ ಆಗಿದ್ದರು; ಕವಿಗಳೂ ಆಗಿದ್ದರು. ದ್ವಿಗು ಮತ್ತು ಬಹುವ್ರೀಹಿ ಸಮಾಸಗಳ ಬಗೆಗೆ ಅವರು ಹೇಳಿದ ಹೋತದ ಕಥೆ ಸುಂದರವಾಗಿದೆ.

ತಿಳಿಗನ್ನಡ ಶೈಲಿ ಗೌರೀಶರ ಬರವಣಿಗೆಯ ವೈಶಿಷ್ಟ್ಯವೆಂದು ಹೇಳಿತಷ್ಟೇ! ಈ ತಿಳಿಗನ್ನಡ ಬರವಣಿಗೆ ಅವರು ಕನ್ನಡ ಗದ್ಯಶೈಲಿಗೆ ಕೊಟ್ಟ ಅಪೂರ್ವ ಕಾಣಿಕೆಯಾಗಿದೆ. ಅಂತಲೇ, ಅವರಲ್ಲಿ ಪ್ರಶ್ನೆ, ಕೇಳ್ಮೆಯಾಗುತ್ತದೆ; ಪುನಃ ಪ್ರಶ್ನೆ, ಮರುಕೇಳ್ಮೆಯಾಗುತ್ತದೆ. ಪಂಡಿತ, ಕಲ್ಲಾಯ್ತನಾಗುತ್ತಾನೆ. ಆಶ್ರಯ, ಆಟವಾಳಿಗೆಯಾಗುತ್ತದೆ. ಹೃತ್ಕಮಲ, ಬಗೆದಾವರೆ ಆಗುತ್ತದೆ. ಆದರೆ, ಇವೆಲ್ಲಕ್ಕಿಂತ ಈ ಕೆಳಗಿನ ಗದ್ಯಭಾಗದಲ್ಲಿಯ ಶೈಲಿಯ ಕನ್ನಡತನ ಮತ್ತು ಮಂತ್ರಸದೃಶವಾದ ಸರಳತನವನ್ನು ಗಮನಿಸಬಹುದು :

"ಈ ಬಾಳ್ವೆಯೆಂಬ ಮುಗಿಲಲ್ಲಿ ತಿಳಿಯೆಂಬ ಹೊತ್ತು ಮೂಡಲಿ! ಅದರ ಬೆಳಕು ನೆಲದ ಎಲ್ಲೆಡೆಯಲ್ಲಿಯೂ ಬೀಳಲಿ! ಅದರಿಂದ ತಿಳಿಗೇಡಿತನವೆಂಬ ಕತ್ತಲೆ ಹರಿಯಲಿ! ಕೂಡಲೆ ಎಲ್ಲ ಉಸಿರುಳ್ಳವುಗಳ ಬಗೆದಾವರೆ ಅರಳಲಿ! ಮತ್ತು ಅದರೊಳಗಿನ ಸೊಗಸೆಂಬ ನರುಗಂಪು ಎಲ್ಲಾ ನಿಟ್ಟುಗಳಲ್ಲಿಯೂ ಘುಮಘುಮಿಸಲಿ! ಆ ಘುಮಘುಮಾಟದಿಂದ, ಕಣ್ಣಿಗೆ ಕಾಣುವ ಇದೆಲ್ಲವನ್ನುಂಟು ಮಾಡಿರುವ ಪೇರಾಣ್ಮನು ನಲ್ಮೆಗೊಳ್ಳಲಿ!! ಅದರಿಂದ ಬಾಳ್ವೆಯೊಳಗಿನ ಅಳಲುಗಳೆಲ್ಲಾ ಹೇಳ ಹೆಸರಿಲ್ಲದಂತೆ ಅಡಗಲಿ! ಎಲ್ಲೆಲ್ಲಿ ನೋಡಿದರೂ ತಮ್ಮಣಿಯು ಥೈ ಥೈ ಕುಣಿದಾಡುತ್ತಿರಲಿ!"[೨]

ಹೀಗೆ, ಬಾಳ್ವೆಯೆಂಬ ಮುಗಿಲಲ್ಲಿ ತಿಳಿಯೆಂಬ ಪೊಳ್ತು ಮೂಡುವ ಹಾಗೆಯೂ, ತಿಳಿವಿನ ನರುಗಂಪು ಸುತ್ತಲೂ ಸೂಸುವಂತೆಯೂ, ಪೇರಾಣ್ಮ ನಲ್ಮೆಗೊಳ್ಳುವಂತೆಯೂ, ಕನ್ನಡದಲ್ಲಿ ಕೃತಿ ರಚನೆ ಮಾಡಿ, ಗೌರೀಶರು ತಮ್ಮ ಪ್ರಾಯದ ವಯಸ್ಸಿನಲ್ಲಿಯೇ– ಅಂದರೆ ತಮ್ಮ ವಯಸ್ಸಿನ ೪೯ ನೆಯ ವರ್ಷದಲ್ಲಿ– ಶಿವಾಧೀನರಾದರು. ಈ ಸಾಹಿತ್ಯ ದೀಕ್ಷಿತ, ಧಾರ್ಮಿಕ ವ್ಯಕ್ತಿ ಇಲ್ಲದಾಗಿ, ತಮ್ಮ ಚಿಕ್ಕ ಚಿಕ್ಕ ಮಕ್ಕಳನ್ನೂ ಧರ್ಮಪತ್ನಿ ಮಲ್ಲವ್ವನನ್ನೂ ನಿರಾಶ್ರಿತರನ್ನಾಗಿ ಮಾಡಿ ಕೈಲಾಸದತ್ತ ಪಯಣ

೧ ಅದೇ : ಪು. ೧೨–೧೩.
೨ ಅದೇ : ಪು. ೧೫೨.

ಮಾಡಿತು. ಅಳಿದವರ ಮಕ್ಕಳು ಉಳಿದವರ ಕೈಯಲ್ಲಿ ಎಂಬಂತೆ, ರೊದ್ದ ಶ್ರೀನಿವಾಸರಾಯರಂಥವರು ಈ ಚಿಕ್ಕ ಚಿಕ್ಕ ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತ ಬಂದರು. ತಮ್ಮ ತಂದೆಯವರು ತೀರಿಕೊಂಡಾಗ ತಾವು ತೀರ ಚಿಕ್ಕವರಿದ್ದರೆಂದೂ, ತಮ್ಮ ಓಣಿಯಲ್ಲಿಯೇ ಇರುತ್ತಿದ್ದ ಹಿರಿಯ ಶಿಕ್ಷಣಾಧಿಕಾರಿಗಳಾಗಿದ್ದ ರೊದ್ದ ಶ್ರೀನಿವಾಸರಾಯರು, ಈ ಚಿಕ್ಕ ಮಕ್ಕಳಿಗೆ ಅನೇಕ ಸಲ ಅರಿವೆ ವಸ್ತ್ರಗಳನ್ನು ಹೊಲಿಸಿ ಕೊಡುತ್ತಿದ್ದುದಾಗಿಯೂ, ತಮ್ಮ ಮನೆಗೆ ಕಾಯಿಪಲ್ಲೆ ಒಯ್ಯುತ್ತಿದ್ದಾಗ, ಶಿವರುದ್ರಪ್ಪನವರ ಮನೆಯ ಮುಂದೆ ನಿಂತು ಈ ಮಕ್ಕಳ ಹೆಸರನ್ನು ಕೂಗಿ ತಾವು ಒಯ್ಯುತ್ತಿದ್ದ ಕಾಯಿಪಲ್ಲೆಯಲ್ಲಿ ಅರ್ಧ ಭಾಗವನ್ನು ಕೊಟ್ಟು ಹೋಗುತ್ತಿದ್ದುದಾಗಿಯೂ ಭಾವಪೂರ್ಣವಾಗಿ, ಕಣ್ಣೀರ್ದುಂಬಿ ಶಂಭುಲಿಂಗಪ್ಪನವರು ಇಂದಿಗೂ ಹೇಳುತ್ತಾರೆ. ತೇ ಹಿ ನೋ ದಿವಸಾ ಗತಾಃ !!

—

ಕಾವ್ಯಾನಂದ ಪುಣೇಕರ

(೧೮೭೦–೧೯೨೯)

ಕಾವ್ಯಾನಂದ ಪುಣೇಕರೋ ವಿಜಯತೇ ಶ್ರೀ ಭಾರತೀನಂದನಃ ॥
ಮಂಗಲಂ ನರಸಿಂಹಾಯ–ಮಂಗಲಂ ಮಹಿಮಹಾತ್ಮನೇ
ಮಂಗಲಂ ಮಾತೃದೇವಾಯ–ಕಾವ್ಯಾನಂದ ಮಹಾತ್ಮನೇ ॥

–ಎಂದು ಮೊದಲಾಗಿ ಸಂಸ್ತುತ್ಯರಾದ ಕಾವ್ಯಾನಂದ ಪುಣೇಕರರ ಜೀವನವು ವೈವಿಧ್ಯಮಯವಾದುದು, ಕ್ರಿಯಾಪೂರ್ಣವಾದುದು, ರಸಿಕತೆಯಿಂದ ಕೂಡಿದುದು. ವಸ್ತುವಿನ ನಾವೀನ್ಯತೆ, ಸ್ವಯಂ ವ್ಯಕ್ತಿತ್ವದ ಅಭಿವ್ಯಕ್ತಿ, ಮಾತಿನಲ್ಲಿಯೂ ಬರಹದಲ್ಲಿಯೂ ನಿಶಿತವಾದ ಬುದ್ಧಿಮತ್ತೆ, ಸರಸ–ಸುರಸ ವಿನೋದ, ರಸಿಕತೆ, ಕಲ್ಪಕತೆಯ ಧೀರ ಶ್ರೀಮಂತಿಕೆ ಮತ್ತು ಆಡುನುಡಿಯ ಪ್ರಯೋಗಗಳಿಂದಾಗಿ ಕಾವ್ಯಾನಂದರಿಗೆ ವೈಶಿಷ್ಟ್ಯಪೂರ್ಣವಾದ ಸ್ಥಾನವಿದೆ. ಕಾವ್ಯಾನಂದರು ತಮ್ಮ ಜೀವನದ ಬಹುಕಾಲ ತಮ್ಮ ಕೃತಿಗಳನ್ನು ಪುಸ್ತಕ ರೂಪದಲ್ಲಿ ಹೊರತರದೆ, ಸಮಯಸ್ಫೂರ್ತವಾದ ಚಾಕಚಕ್ಯದ ಕವಿತೆಗಳನ್ನು ಬರೆಯುವುದರಲ್ಲಿಯೇ ವ್ಯಯಿಸಿದರಲ್ಲಾ–ಎಂದು ಒಂದೊಂದು ಸಲ ವಿಷಾದವೆನಿಸುತ್ತದೆ. ಕಾವ್ಯಾನಂದರ ಜೀವನ ರೀತಿಯೇ ಕಾವ್ಯಮಯವಾಗಿದ್ದಿತು. ಅವರು ಸಮಯಸ್ಫೂರ್ತರಾಗಿ ಯಾವ ಸಂದರ್ಭಕ್ಕೂ ಸರಿಹೋಗುವಂತೆ ಕಾವ್ಯವನ್ನು ರಚಿಸುವ ಸಾಮರ್ಥ್ಯವನ್ನು ಪಡೆದವರಾಗಿದ್ದರು. ಆದರೆ, ತಾವು ರಚಿಸಿದ ಕವನಗಳನ್ನು ಕಲೆಹಾಕಿ ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೆನ್ನುವ ವ್ಯವಧಾನವಾಗಲಿ, ಅನುಕೂಲತೆಯಾಗಲೀ ಅವರಿಗೆ ಇದ್ದಂತೆ ಕಾಣಲಿಲ್ಲ. ಹೀಗಾಗಿ, ಶ್ರೀಯುತರ ಅನೇಕ ಕವನಗಳು ಪ್ರಭಾತ, ಕರ್ನಾಟಕವೃತ್ತ, ಧನಂಜಯ, ವಾಗ್ಭೂಷಣ, ಒಕ್ಕಲತನವೂ ಸಹಕಾರಿತನವೂ, ಕ್ಷೇಮ ಸಮಾಚಾರ, ಕರ್ನಾಟಕ ವೈಭವ, ಜಯಕರ್ನಾಟಕ ಮೊದಲಾದ ಪತ್ರಿಕೆಗಳ ಪುಟಗಳಲ್ಲಿ ಅಡಗಿ ಕುಳಿತಿವೆ.

ಕಾವ್ಯಾನಂದ ಪುಣೇಕರರ ಪೂರ್ಣ ಹೆಸರು ನರಸಿಂಹಾಚಾರ್ಯ ಭೀಮಾಚಾರ್ಯ ಕಿತ್ತೂರು. ಸುಪ್ರಸಿದ್ಧವಾದ ಚೆನ್ನಮ್ಮನ ಕಿತ್ತೂರು ಇವರ ಜನ್ಮ ಸ್ಥಳ. ಇವರ ತಂದೆಯ ಹೆಸರು ಭೀಮಾಚಾರ್ಯ; ತಾಯಿ ಭಾರತೀಬಾಯಿ. ಇವರು ೨೭–೯–೧೮೭೦ ರ ಮಂಗಳವಾರ ದಿವಸ ೭–೮ ತಾಸು ರಾತ್ರಿ ಮಧ್ಯದಲ್ಲಿ ಜನಿಸಿದರು. ಇವರ ಜನ್ಮನಾಮ 'ತಾರಾಪತಿ.' ಇವರ ಜನ್ಮಕುಂಡಲಿ ಹೀಗಿದೆ :

ನಿರಯನ

೧೨	೧	೨	೩ ರಾ ಗು
೧೧			೪ ಮಂ
೧೦			೫ ಶು
೯ ರಾ ಕೇ	೮	೭ ಚ	೬ ಬು ರ

ದೊಡ್ಡವರಾದ ಮೇಲೆ ಕೊಲ್ಹಾಪುರದಲ್ಲಿ ಕಾವ್ಯಾಭ್ಯಾಸ ಮಾಡಿದ ನಂತರ, ಮನೆತನದ ತಾಪತ್ರಯಗಳ ಮೂಲಕ ಗುರುಮುಖೇನ ಅಭ್ಯಾಸ ಮಾಡುವ ಅನುಕೂಲತೆ ಇವರಿಗೆ ಒದಗಲಿಲ್ಲ. ಆದರೂ, ಸ್ವಪರಿಶ್ರಮದಿಂದ ಕಾವ್ಯ, ಶಾಸ್ತ್ರ, ಜ್ಯೋತಿಷ್ಯ, ಧರ್ಮಶಾಸ್ತ್ರ, ಆಯುರ್ವೇದ ಮೊದಲಾದವುಗಳನ್ನು ಅಭ್ಯಾಸ ಮಾಡಿ, ಪಂಡಿತರೆನಿಸಿಕೊಂಡರು. ಸಂಸ್ಕೃತ, ಕನ್ನಡ, ಬಂಗಾಲಿ, ಹಿಂದಿ, ಮರಾಠಿ ಭಾಷೆಗಳನ್ನು ಅಭ್ಯಸಿಸಿ ಆ ಆ ಸಾಹಿತ್ಯದ ಸಾರವನ್ನೆಲ್ಲ ಅರಗಿಸಿಕೊಂಡರು. ಆ ಕಾಲದಲ್ಲಿ ಕಲಕತ್ತೆಯ ಸಾಹಿತ್ಯ ಸಂಸ್ಥೆಯೊಂದು ನಡೆಸುತ್ತಿದ್ದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಾಗವಹಿಸಿ ಉತ್ತೀರ್ಣರಾಗಿ, 'ಕಾವ್ಯಾನಂದ' ಎಂಬ ಬಿರುದನ್ನು ಪಡೆದರು.[೧]

ಕಾವ್ಯಾನಂದರ ಮನೆತನ ಸಂಸ್ಕೃತ ಪಾಂಡಿತ್ಯದ ಮನೆತನ. ಶ್ರೀಯುತರ ಅಜ್ಜಂದಿರಾದ ನರಹರಿ ಆಚಾರ್ಯರು ಪ್ರಕಾಂಡ ಪಂಡಿತರಾಗಿದ್ದು, 'ತರ್ಕವಿದ್ವಾನ್' ಎಂಬ ಅಭಿಧಾನವನ್ನು ಪಡೆದವರಾಗಿದ್ದರು. ಅವರು ಪ್ರತಿವರುಷ ಪುಣೆಯಲ್ಲಿ ನೆರವೇರುತ್ತಿದ್ದ ವಿದ್ವತ್ಸಭೆಗೆ ಹೋಗಿ, ಅಲ್ಲಿ ಮರ್ಯಾದೆಯನ್ನೂ ಸಂಭಾವನೆಯನ್ನೂ ಪಡೆಯುತ್ತಿದ್ದರು. ಇವರಿಗೆ 'ಕರವಸ್ತ್ರ' ಮತ್ತು 'ಕರದೀಪ'ದ ಮರ್ಯಾದೆ ಇತ್ತಂತೆ. ಹೀಗೆ ನರಹರಿ ಆಚಾರ್ಯರು ಪ್ರತಿ ವರುಷ ಪುಣೆಗೆ ಹೋಗಿ ಬರುತ್ತಿದ್ದುದರಿಂದ, ಕಿತ್ತೂರ ಜನರಲ್ಲಿ 'ಪುಣೇಯವರು' ಎಂಬ ಹೆಸರನ್ನು ಪಡೆದರು. ಅವರ ಮಕ್ಕಳಾದ ಭೀಮಾಚಾರ್ಯರು ಈ ಅಡ್ಡ ಹೆಸರನ್ನೇ ಅಂಗೀಕರಿಸಿ ಪುಣೇಕರ ಎಂದು ಬಾಲಬೋಧದಲ್ಲಿ ಸಹಿ ಮಾಡಹತ್ತಿದರು. ಅಂತಲೇ, ನಮ್ಮ ಕವಿಗಳೂ ಸಹ, 'ಕಾವ್ಯಾನಂದ ಪುಣೇಕರ'ರಾದರು. ಕಾವ್ಯಾನಂದರ ಮೇಲೆ ಬಂಗಾಲಿ ಸಾಹಿತ್ಯ ಮತ್ತು ಕ್ರಾಂತಿಯ ಪರಿಣಾಮ ತುಂಬಾ ಆಗಿದ್ದಿತು. ಆದ್ದರಿಂದಲೇ, ಅವರ ಮಕ್ಕಳ ಹೆಸರುಗಳೆಲ್ಲ ಶಾಮಸುಂದರ, ಶಾರದಾಮೋಹನ, ಇಂದುಚರಣ ಎಂದು ಮೊದಲಾಗಿ ಬಂಗಾಲಿ ಹೆಸರುಗಳಂತೆ ಇವೆ.

ಶ್ರೀಯುತರು ಹೆಚ್ಚಾಗಿ ಶಾಲೆ ಓದಿರಲಿಲ್ಲವೆಂದು ಹೇಳಿತಷ್ಟೇ. ಅವರು ಕೆಲಕಾಲ ಧಾರವಾಡದ ವಿಕ್ಟೋರಿಯಾ ಹಾಯ್‌ಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದರು. ಅವರಿಗೆ ತಾವು ಗ್ರ್ಯಾಜುಯೇಟ್ ಆಗಲಿಲ್ಲವಲ್ಲಾ ಎಂಬ ವಿಚಾರ ಆಗೀಗ ಕುಟುಕುತ್ತಿದ್ದಂತೆ ಕಾಣುತ್ತದೆ. ೧೯೧೮ರಲ್ಲಿ ಪ್ರಕಟವಾದ ತಮ್ಮ ಒಂದು ಚುಟುಕು ಪದ್ಯದಲ್ಲಿ ಅವರು ಹೀಗೆ ಹೇಳಿದ್ದಾರೆ :

೧ ಈ ಬಿರುದು ಕಾಶೀ ವಿದ್ಯಾಪೀಠದಿಂದ ಶ್ರೀಯುತರಿಗೆ ದೊರೆಯಿತೆಂದು ಶ್ರೀ ಬೆಟಗೇರಿ ಕೃಷ್ಣಶರ್ಮ ಅವರು ಹೇಳುತ್ತಾರೆ. ಶ್ರೀ ಬೆಟಗೇರಿಯವರು ಚಿಕ್ಕವರಿದ್ದಾಗಿನಿಂದಲೂ ಕಾವ್ಯಾನಂದರ ಶಿಷ್ಯರಾಗಿ, ಒಡನಾಡಿಗಳಾಗಿ ಬೆಳೆದವರು. ಆದರೆ, ೧೯೨೯ರ ವಾಗ್ಭೂಷಣದಲ್ಲಿ ಈ ಬಿರುದು ಕೊಲ್ಹಾಪುರದಲ್ಲಿ ದೊರಕಿದಂತೆ ಹೇಳಿದೆ.

ಪದವೀಧರನಾಗದಿರ್ದ ಜಾಣಂ– ಮದುವೇ ಕಾಣದ ಹೆಣ್ಣಿನಂತೆ ದೀನಂ
ಇದನಾನನುಭೂತಮೆಂದು ಪೇಳ್ದೆಂ– ಪದವೀದಾಸಿಯು ಕೀರ್ತಿ, ಜಾಣ್ಮೆ ದಾಸಂ[೧]

ಕೊನೆಗೆ, ಈ ಕಾರಣದ ಮೂಲಕವೇ ವಿಕ್ಟೋರಿಯಾ ಹಾಯ್‌ಸ್ಕೂಲಿನಲ್ಲಿಯ ಉಪಾಧ್ಯಾಯ ವೃತ್ತಿಯನ್ನು ಅವರು ಬಿಡಬೇಕಾಯಿತು. ಈ ಹಾಯ್‌ಸ್ಕೂಲನ್ನು ಬಿಟ್ಟಮೇಲೆ ಶ್ರೀಯುತರು ಕೆಲಕಾಲ ಧಾರವಾಡದ ರಾಷ್ಟ್ರೀಯ ಶಾಲೆಯಲ್ಲಿ ಕೆಲಸ ಮಾಡಿದರು. ಇಲ್ಲಿದ್ದಾಗಲೇ 'ಕ್ಷೇಮಸಮಾಚಾರ' ಎಂಬ ಪತ್ರಿಕೆಯ ಸಂಪಾದಕ ವಿಭಾಗದಲ್ಲೂ, 'ಒಕ್ಕಲುತನವೂ ಸಹಕಾರಿತನವೂ' ಎಂಬ ಪತ್ರಿಕೆಯ ಸಂಪಾದಕ ವಿಭಾಗದಲ್ಲೂ ಕೆಲಸ ಮಾಡಿದರು. ತಮಗೆ ಇರದಿದ್ದ ಇಂಗ್ಲೀಷ್ ಪದವಿ ತಮ್ಮ ಮಕ್ಕಳಿಗಾದರೂ ಸಿಗಬೇಕೆಂದು ಅವರು ಇದ್ದಬಿದ್ದ ಆಸ್ತಿಯನ್ನೆಲ್ಲಾ ಮಾರಾಟ ಮಾಡಿ, ಅವರಿಗೆ ಚೆನ್ನಾಗಿ ವಿದ್ಯೆಯನ್ನು ಕಲಿಸಿದರು.

ಶ್ರೀಯುತರು ಮೊದಲಿನಿಂದಲೂ ಉಜ್ವಲ ರಾಷ್ಟ್ರಾಭಿಮಾನಿಗಳು. ಲೋಕಮಾನ್ಯ ಟಿಳಕ, ಪರಾಂಜಪೆಯವರಂಥ ದೇಶಭಕ್ತರು ಕರ್ನಾಟಕಕ್ಕೆ ಬಂದಾಗ ಅವರ ಜತೆಗೆ ಸಂಚಾರ ಮಾಡಿ ಅವರ ಭಾಷಣಗಳನ್ನು ಕನ್ನಡದಲ್ಲಿ ಅನುವಾದ ಮಾಡುವ ಕೆಲಸ ಕಾವ್ಯಾನಂದರದೇ ಆಗಿದ್ದಿತು. ಟಿಳಕರು ಬಂದಾಗ ಅವರಿಗೆ ಈ ಕೆಳಗಿನ ದ್ವಂದ್ವಾರ್ಥದ ಪದ್ಯವನ್ನು ಒಪ್ಪಿಸಿದರೆಂದು ಹೇಳುತ್ತಾರೆ :

ಗಂಗಾಧರತನಯಂ ಅಹಂ ಬಾಲಂ
ವಂದೇ ವಿಘ್ನೋಪಶಾಂತಯೇ
ಯಸ್ಸೇವ್ಯತೇಸದಾರ್ಯಾ
ಮಂಜುಲ ಪತ್ರೇಣ ಕೇಸರಿಣಾ ॥

ಈ ಪದ್ಯ ಟಿಳಕ ಮತ್ತು ಗಣಪತಿ ಇಬ್ಬರಿಗೂ ಅನ್ವಯಿಸುತ್ತದೆ.

ಧಾರವಾಡದ ರಾಷ್ಟ್ರೀಯ ಶಾಲೆ ನಿಂತ ಮೇಲೆ ಶ್ರೀಯುತರು ಪುನಃ ಕಿತ್ತೂರಿಗೇ ಹೋಗಿ ಅಲ್ಲಿಯೇ ಇರಹತ್ತಿದರು. ಇವರ ಕಾವ್ಯಪ್ರತಿಭೆ ವ್ಯರ್ಥವಾಗಿ ವ್ಯಯವಾಗುವುದನ್ನು ಗಮನಿಸಿ, ದಿವಂಗತ ಅರಟಾಳ ರುದ್ರಗೌಡರು ತಮ್ಮ ಅಳಿಯಂದಿರಾದ ಚಚಡಿ ದೇಸಾಯರ ಕಾರಭಾರಿಗಳಾಗಿ ಇವರ ನೇಮಕವಾಗುವಂತೆ ಮಾಡಿದರು. ಈ ಕೆಲಸವನ್ನು ಸಹ ಕಾವ್ಯಾನಂದರು ತುಂಬಾ ದಕ್ಷತೆಯಿಂದ ನಿರ್ವಹಿಸಿದರು. ಮೊದಲಿನಿಂದಲೂ ಒಕ್ಕಲುತನದಲ್ಲಿ ಆಸ್ಥೆಯಿದ್ದ ಶ್ರೀಯುತರು ಹೊಸ ಗತಿಯ ಒಕ್ಕಲುತನ ಹುಟ್ಟುವಳಿ ಹೆಚ್ಚುವಂತೆ ಮಾಡಿದರು. ಹರಿಜನರಿಗಾಗಿ ರುದ್ರಕೇರಿ ಕಾಲನಿ ಎಂಬ ಹೊಸ ನಿವೇಶನವನ್ನು ಪ್ರಾರಂಭಿಸಿದರು. ಊರಲ್ಲಿ ಪುಸ್ತಕಾಲಯದ ಯೋಜನೆ ಮಾಡಿದರು. ಪ್ರತಿ ಗುರುವಾರ ಹಳ್ಳಿಗರಿಗಾಗಿ ಸಂತೆ ನೆರವೇರುವ ವ್ಯವಸ್ಥೆ ಮಾಡಿದರು. ರುದ್ರಗೌಡರ ಬಗೆಗೆ ಹೀಗೆ ಕವಿತೆ ಬರೆದಿದ್ದಾರೆ :

ಉತ್ಕೋಚಗ್ರಹಣಾಂ ರೌದ್ರಾ :
ನಿಸ್ಪೃಹಾಣಾಂ ಗುರೋಪಮಾ :
ಏತೇಚ ಅನ್ವರ್ಥನಾಮಾನೋ
ರುದ್ರಗೌಡ ಮಹಾಶಯಾ : ॥

೧ ಪ್ರಭಾತ : ಅಗಸ್ಟ ೧೯೧೮.

ಪಾಂಡಿತ್ಯ, ಕವಿತ್ವಗಳು ಇವರ ಜೀವನದ ಒಂದು ಮುಖವಾದರೆ, ಸ್ವಾತಂತ್ರ್ಯಾಂದೋಲನ, ಸಮಾಜ ಸುಧಾರಣೆ ಇನ್ನೊಂದು ಮುಖವಾಗಿದ್ದವು. ಈಶಭಕ್ತಿ, ದೇಶಭಕ್ತಿಗಳೆರಡೂ ಶ್ರೀಯುತರ ಜೀವನದಲ್ಲಿ ಗಂಗೆ ಯಮುನೆಯ ಹಾಗೆ ಕೂಡಿಯೇ ಪ್ರವಹಿಸುತ್ತಿದ್ದವು. ಈಶಭಕ್ತಿ ಪ್ರೇರಿತರಾಗಿ ಸತ್ಯನಾರಾಯಣ ಕತೆ, ದೇವತಾಸ್ತೋತ್ರ ಮೊದಲಾದವುಗಳನ್ನು ರಚಿಸಿದ್ದರೆ, ದೇಶಭಕ್ತಿಪ್ರೇರಿತ ರಾಗಿ, ಕಿತ್ತೂರಲ್ಲಿ ಒಂದು ಸಾರ್ವಜನಿಕ ವಾಚನಾಲಯವನ್ನು ತೆರೆದರು; ಊರ ಪ್ರಮುಖರ ಕೂಡ ವಿಚಾರಗೋಷ್ಠಿಯನ್ನು ನಡೆಸಿದರು. ಸಾಕ್ರೆಟೀಸ್ ಕೇರಿಕೇರಿಯಲ್ಲಿ ನಿಂತು ತತ್ವಜ್ಞಾನವನ್ನು ಕುರಿತು ಚರ್ಚಿಸಿದಂತೆ, ಶ್ರೀಯುತರು ಸಾಮಾನ್ಯವಾಗಿ ಕಿತ್ತೂರಲ್ಲಿ ಗುರುವಾರ ಪೇಟೆಯಲ್ಲಿಯ ಕಂಚಿಯವರ ಕಟ್ಟೆ ಇಲ್ಲವೆ ಸೋಮವಾರ ಪೇಟೆಯಲ್ಲಿಯ ಮುತ್ತೂರವರ ಕಟ್ಟೆಯಲ್ಲಿ ಕುಳಿತು ಚರ್ಚಿಸುತ್ತಿದ್ದರು. ಶ್ರೀಯುತರು ರಚಿಸಿದ ಮೃತ್ತಿಕಾವೃಷಭಪೂಜಾ ಎಂಬ ಪುಸ್ತಕವು ಅವರ ಸಮಾಜ ಸುಧಾರಣಾ ದೃಷ್ಟಿಯ ನಿದರ್ಶನವಾಗಿದೆ. ಪ್ರಾಚೀನ ಹಿಂದೂ ಧರ್ಮಗ್ರಂಥಗಳಲ್ಲಿರದ ಅನೇಕ ವ್ರತೋಪವಾಸ ಗಳು ಕಾಲಾನಂತರ ಹಿಂದೂ ಪರಂಪರೆಯಲ್ಲಿ ಸೇರಿಕೊಂಡವೆಂದು ಶ್ರೀಯುತರ ಅಭಿಪ್ರಾಯ. ಮಣ್ಣೆತ್ತಿನ ಪೂಜೆಯೂ ಅಂಥ ಆರಾಧನೆಗಳಲ್ಲೊಂದು. ಒಂದು ಸಲ ಒಬ್ಬ ಪರಂಪರಾಪ್ರಿಯ ದೊಡ್ಡ ಅಧಿಕಾರಿಗಳ ಕೂಡ ಮಾತನಾಡುವಾಗ ಈ ವಿಷಯವನ್ನು ವಿದಿತಪಡಿಸಿದ ಶ್ರೀಯುತರು, ಅವರನ್ನು ಮುದ್ದಾಂ ಮೋಸಗೊಳಿಸಲೋಸುಗ 'ಮೃತ್ತಿಕಾವೃಷಭಪೂಜಾ' ಎಂಬ ಪುಸ್ತಕವನ್ನು ಬರೆದರು.

ಶ್ರೀಯುತರು ಪರಮತ ಸಹಿಷ್ಣುಗಳೂ, ಸ್ವಮತನಿಷ್ಠರೂ ಆಗಿದ್ದರು. ಕಿತ್ತೂರಲ್ಲಿಯ ತಮ್ಮ ಕುಲದೈವತವಾದ ವಿಠ್ಠಲದೇವರ ಪೂಜೆ, ಅರ್ಚನೆಗಳೆಲ್ಲ ಸರಿಯಾಗಿ ನಡೆಯುವ ಹಾಗೆ ಏರ್ಪಾಡು ಮಾಡಿದರು. ಗದ್ದೀಓಣಿಯ ಹಿತ್ತಲುಗಳ 'ಪರ್ಡೆ' ನಂಬರ ಮಾಡಿಸಿ ದೇವಸ್ಥಾನಕ್ಕೆ ಶಾಶ್ವತ ಉತ್ಪನ್ನ ಮಾಡಿದರು. ಭೂರಿಭೋಜನ ಮತ್ತು ನಾಚುಂಗಳಲ್ಲಿ ವ್ಯರ್ಥವಾಗಿ ಹಾಳಾಗುತ್ತಿದ್ದ ದೇವಾಲಯದ ಹಣವನ್ನು ಪುರಾಣ, ಪ್ರವಚನ, ಕೀರ್ತನ, ವ್ಯಾಖ್ಯಾನಗಳಿಗೆ ಉಪಯುಕ್ತವಾಗುವಂತೆ ನಿಯೋಜಿಸಿದರು.

ಶ್ರೀಯುತರ ಪಾಂಡಿತ್ಯದ ಮೂಲಕ ಅವರಿಗೆ ದೂರದೂರದ ಪ್ರಾಂತಗಳ ಅನೇಕ ವಿದ್ವಾಂಸರ ಸ್ನೇಹ, ಗೌರವಗಳ ಮರ್ಯಾದೆ ದೊರಕಿತು. ಇವರಲ್ಲಿ ಕಾಂತಾಚಾರ್ಯ ಗಣೇಶಶಾಸ್ತ್ರಿ ರುಕಡೀಕರ, ಮಹಾರಾಷ್ಟ್ರದ ವಿದ್ವಾಂಸರಾದ ವಿದ್ಯಾವಾಚಸ್ಪತಿ ಅಪ್ಪಾಶಾಸ್ತ್ರಿ ರಾಶಿವಡೇಕರ, ಮತ್ತು ಕುರ್ತಕೋಟಿಯ ಮಹಾಭಾಗವತರಾದ ಡಾ. ಶಂಕರಾಚಾರ್ಯರು ಮೊದಲಾದವರ ಹೆಸರುಗಳನ್ನು ಹೇಳಬಹುದು. ಇವರು ಬೆಂಗಳೂರಿಗೆ ಹೋದಾಗ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರೂ, ಮದ್ರಾಸಿ ನಲ್ಲಿ ಬಿ. ರಾಮರಾಯರೂ ಇವರ ಪಾಂಡಿತ್ಯ ಮತ್ತು ವಾಗ್ಮಿತೆಗಳನ್ನು ತುಂಬಾ ಮೆಚ್ಚಿಕೊಂಡರು. ಈ ಸಂದರ್ಭದಲ್ಲಿ ಬೆಂಗಳೂರಿನ ರಸಿಕರು ಕಾವ್ಯಾನಂದರನ್ನು "ಜೀವಂತ ಕಾದಂಬರಿಯೆಂದೂ, ಅಖಂಡ ಕವಿತಾ ವಾಗ್ಝರಿಯೆಂದೂ, ಇವರ ಸಹವಾಸವೇ ಆನಂದಮಯವೆಂದೂ" ಉದ್ಗಾರ ತೆಗೆದರಂತೆ.[೧]

ಮಾತಿನ ಚಾಕಚಕ್ಯತೆ :

ಕಾವ್ಯಾನಂದರ ನಿಶಿತವಾದ ಬುದ್ಧಿಶಕ್ತಿ ಮತ್ತು ಮಾತಿನ ಚಾಕಚಕ್ಯತೆಗಳ ಬಗೆಗೆ ಅನೇಕ ದೃಷ್ಟಾಂತಗಳನ್ನು ಹೇಳುತ್ತಾರೆ. ಒಂದು ಸಲ ಆಚಾರ್ಯರೊಬ್ಬರು ಕಾಶೀಯಾತ್ರೆಗೆ ಹೊರಟಿದ್ದರಂತೆ. ಅವರು ಒಬ್ಬ ಗೃಹಸ್ಥರಲ್ಲಿ ದೇಶಾವರಿಗೆ ಹೋದಾಗ ಆ ಗೃಹಸ್ಥರು ೨ ರೂಪಾಯಿ ಕೊಟ್ಟರಂತೆ.

೧ ವೈ. ಕಾವ್ಯಾನಂದರ ಚರಿತ್ರಪರಿಚಯವು : ಶ್ರೀನಿವಾಸಸುತ : ೧೯೩೦.

ಇನ್ನೊಬ್ಬರ ಹತ್ತಿರ ಹೋದಾಗ ಅವರು ಕೇವಲ ನಾಲ್ಕಾಣೆ ಮಾತ್ರ ಕೊಟ್ಟರಂತೆ. ಇದನ್ನು ಯಾರೋ ಕಾವ್ಯಾನಂದರ ಮುಂದೆ ಹೇಳಿದಾಗ ಕಾವ್ಯಾನಂದರು : "ಕಾಸಿಗೆ ಕೈಯೊಡ್ಡಿದಾಗ ನಾಲ್ಕಾಣೆ ಕಡಿಮೆಯೇ ?" ಅಂದರಂತೆ. ಅಂದರೆ ಕಾಶಿಯಾತ್ರೆಗಾಗಿ ಕೈಯೊಡ್ಡಿದಾಗ,– ಕೇವಲ ಕಾಸೊಂದಕ್ಕೆ ಕೈ ಒಡ್ಡಿದಾಗ– ಎಂಬ 'ಶ್ಲೇಷ' ಅರ್ಥಗರ್ಭಿತವಾಗಿದೆ.

ದಿವಾನ್ ವಿ. ಪಿ. ಮಾಧವರಾಯರು ದೊಡ್ಡ ಮನುಷ್ಯರು. ಭಾರೀ ಯೋಗ್ಯತೆಯುಳ್ಳವರು. ಅವರು ಕರ್ನಾಟಕ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ, ಕಾವ್ಯಾನಂದರೂ ಭಾಷಣ ಮಾಡ ಬೇಕೆಂದು ಜನ ತುಂಬಾ ಆಗ್ರಹ ಮಾಡಿದರಂತೆ. ಆಗ ಕಾವ್ಯಾನಂದರು ಎದ್ದು ನಿಂತು "ವಿ. ಪಿ. ಎಲ್ಲರಿಗೂ ಬೇಕಾದಾಗ, ಎನ್. ಪಿ. (ನಾಟ್ ಪೇಡ) ಯಾರು ಕೇಳುವರು" ಎಂದರಂತೆ. ವಿ. ಪಿ. ಅಂದರೆ ವಿ. ಪಿ. ಮಾಧವರಾಯರು. ಎನ್. ಪಿ. ಅಂದರೆ ನರಸಿಂಹಾಚಾರ್ಯ ಪುಣೇಕರ.

ಇನ್ನೊಂದು ಸಲ, ಒಬ್ಬರು ಸಂಭಾಷಣೆಯಲ್ಲಿ "ಆಕಳು ಕಪ್ಪಾದರೆ ಹಾಲು ಕಪ್ಪೇ ?" ಎಂದರಂತೆ. ಆಗ ಕಾವ್ಯಾನಂದರು, "ಹೌದು, ನಮ್ಮ ಆಕಳು ಕೊಡುವ ಹಾಲು ಕಪ್ಪೇ" (cup ಏ) ಎಂದರಂತೆ.

೧೮೫೪ರಲ್ಲಿ ಕೀಜ್ (Kies) ಎಂಬ ಪಾದ್ರಿಗಳು ಗುಳೇದಗುಡ್ಡದಲ್ಲಿ ಹೆಣ್ಣುಮಕ್ಕಳ ಶಾಲೆ ಯನ್ನು ತೆಗೆದಾಗ "ಸ್ತ್ರೀ ಶಿಕ್ಷಣದ ಬಾಗಿಲನ್ನು ತೆಗೆದ Keys ಸಾಹೇಬರೇ" ಎಂದು ಸಂಬೋಧಿ ಸಿದರಂತೆ.

'ಕಾಮದಾರ'ರೆಂದರೆ ಯಾರು ಎಂದು ಹೇಳುವಾಗ ಕಾವ್ಯಾನಂದರು ಆ ಶಬ್ದದ ವ್ಯುತ್ಪತ್ತಿ ಯನ್ನು– "ದಾರಾಣಾಂ ಕಾಮೇ ಯೇ ಸ್ಥಿತಾಃ ತೇ ಕಾಮದಾರಾಃ" ಎಂದರೆ ಹೆಂಡಂದಿರ ಕಾಮದಲ್ಲಿ, ಇಚ್ಛೆಗೆ ಅನುವರ್ತಿಯಾಗಿ, ವರ್ತಿಸುವವರು ಯಾರೋ ಅವರೇ ಕಾಮ–ದಾರರು ಎಂದು ಹೇಳಿದರಂತೆ.

ಅತ್ತೆ ಮತ್ತು ಸೊಸೆಯರ ಒಂದು ಸಂವಾದವನ್ನು ಅವರು ವಿನೋದಪೂರ್ಣವಾಗಿ ಹೀಗೆ ಹೇಳುತ್ತಿದ್ದರಂತೆ. ಅತ್ತೆಯ ಕಾಟಕ್ಕಾಗಿ ಬೇಸತ್ತ ಸೊಸೆ–

> **ಹನ್ನೆರಡು ತಾಸು ಕಟಕಟಿ**
> **ಅನ್ನವ ತಿನಗೊಡದು ವಟವಟಿ**

ಎಂದಳಂತೆ. ಇದನ್ನು ಅಕಸ್ಮಾತ್ತಾಗಿ ಕೇಳಿದ ಸಿಂಹಿಣಿ ಅತ್ತೆ, "ಏನೇ ಸೆಟವಿ, ನನ್ನನ್ನು ಆಡಿಕೊಳ್ಳು ತ್ತೀಯಾ ?" ಎಂದಾಗ, ಸೊಸೆ– "ಇಲ್ಲ ಅತ್ತೆ; ಗಡಿಯಾರಕ್ಕೆಂದೆ. ಹನ್ನೆರಡು ತಾಸು ಕಟಕಟಿ. ಊಟವ ಮಾಡಗೊಡದು ವಟವಟಿ" ಎಂದಳಂತೆ.

ರಾಯಲ್ ಕಮಿಟಿ ಭಾರತಕ್ಕೆ ಬರುತ್ತದೆಂದಾಗ, Committee ಬಂದು ಏನು ಮಾಡುತ್ತದೆ? Committee ಅಂದರೆ ಬರೇ Come and eat ಎಂದರಂತೆ. ಪ್ರಖರವಾದ ಶ್ಲೇಷ ಕಾವ್ಯಾನಂದರ ಬತ್ತಳಿಕೆಯಲ್ಲಿಯ ಹಿರಿಯ ಬಾಣ.

ಉಪಯೋಗಿಸಿದ ವಾಕ್ಯದಲ್ಲಿಯೇ ಆ ಪ್ರಶ್ನೆಯ ಉತ್ತರವನ್ನು ಸೂಚಿಸುವ ಅನೇಕ ಪ್ರಯೋಗ ಗಳನ್ನು ಕಾವ್ಯಾನಂದರಲ್ಲಿ ನೋಡುತ್ತೇವೆ :

ಎತ್ತುಗಳು ಯಾತಕ್ಕೆ ಬೇಕು ? (ಉತ್ತರ : ಯಾತಕ್ಕೆ ಬೇಕು) ಕೊಡದವರು ಕೊಡಲಿಲ್ಲ; ನಗದವರು ನಗಲಿಲ್ಲ. (ಅಂದರೆ ಕೊಡವಿದ್ದವರು, ಯೋಗ್ಯತೆಯಿದ್ದವರು ಕೊಡಲಿಲ್ಲ; ನಗದವರು

ಅಂದರೆ ಹತ್ತಿಯ ಅಂಡಿಗೆಯ (ನಗದವರು) ನಗಲಿಲ್ಲ.) ಅಗಡಿಗೆ, ಅ–ಗಡಿಗೆ ಸೌಖ್ಯವಿಲ್ಲ. (ಅಗಡಿ ಎಂದರೆ ಊರು ಹೆಸರು; ಅ – ಗಡಿ ಅಂದರೆ ಯೋಗ್ಯತೆ ಇಲ್ಲದ ವ್ಯಕ್ತಿ.)

ಹಿಂದೊಂದು ಸಲ, ದುರ್ದೈವದಿಂದ ಕೆರೂರ ವಾಸುದೇವಾಚಾರ್ಯರಿಗೂ, ದುಂಡಪ್ಪ ಪಾವಟೆಯವರಿಗೂ ಯಾವುದೋ ಒಂದು ಲೇಖದ ಬಗೆಗೆ ಮನಸ್ತಾಪ ತುಂಬಾ ಬೆಳೆದು 'ಶುಭೋದಯ'ದಲ್ಲಿ ಆಚಾರ್ಯರೂ, 'ವಿಭಾಕರ'ದಲ್ಲಿ ಪಾವಟೆಯವರೂ .ಉಕ್ತಿ ಪ್ರತ್ಯುಕ್ತಿಗಳನ್ನು ಉಗ್ರವಾಗಿ ಬರೆಯ ಹತ್ತಿದರು. ಆಗ ಈ ಚರ್ಚೆಯ ಬಗೆಗೆ ಕಾವ್ಯಾನಂದರು ವಿನೋದಪೂರ್ಣವಾಗಿ : "ಲಿಂಗಾಂಗ ಸಾಮರಸ್ಯದ ಗುಟ್ಟಂ ತಿಳಿದವರಾರು ? ಕೆರವೂರವರೇ ? ಕಂಗಾಲ ಕಿಚ್ಚಿಗೆಬ್ಬಿಸಿ ಬರಷಣ ಮಾಡಿದವರು ಪಾವಟೆಯವರೇ" ಎಂದು ಹೇಳಿದರಂತೆ. ಅರ್ಥ ಲಿಂಗಾಂಗ ಸಾಮರಸ್ಯದ ಮರ್ಮ ಬ್ರಾಹ್ಮಣರಾದ ಕೆರವೂರವರಿಗೆ (ಕೆರವಿನ ಊರು, ತೊಗಲ ಊರವರಿಗೆ) ಏನು ಗೊತ್ತು ? ಈ ರೋಗಕ್ಕೆ ವಿಪರೀತಾವಸ್ಥೆಯನ್ನು ತಂದು ಕೊಟ್ಟವರು ಪಾವಟೇ (ಪಾವಟೇ ಅಂದರೆ ಮರಾಠಿಯಲ್ಲಿ ಅವರಿ; ಅವರಿಯು ರೋಗಕ್ಕೆ ಬರಷಣ ಪದಾರ್ಥ) ಯವರಲ್ಲದೆ ಮತ್ತಾರು ?

ನರಸಿಂಹಾಚಾರ್ಯರ ತಾಯಿ :

ಕಾವ್ಯಾನಂದರು ತಮ್ಮ ತಾಯಿ ತಂದೆಯವರ ಬಗೆಗೆ ತಮ್ಮ ದಿನಚರಿಯಲ್ಲಿ ಹಲವು ಮಾತುಗಳನ್ನು ಬರೆದಿಟ್ಟಿದ್ದಾರೆ. ಇದರಿಂದ ಅವರಿಗೆ ತಮ್ಮ ತಾಯಿಯ ಬಗೆಗೆ ಇದ್ದ ಅಪಾರವಾದ ಅಂತಃಕರಣವೂ, ಅವರ ತಾಯಿಯ ಮತ್ತು ವಂಶದ ಚಿತ್ರವನ್ನು ಕೊಡುವಲ್ಲಿರುವ ಪ್ರಾಮಾಣಿಕತೆಯೂ ಮತ್ತು ಸ್ವತಃ ಕಾವ್ಯಾನಂದರ ಆರ್ಥಿಕ ಪರಿಸ್ಥಿತಿಯ ಕಲ್ಪನೆಯೂ ಕಂಡು ಬರುತ್ತವೆ.

"ನಮ್ಮ ತಾಯಿಯ ತೌರುಮನೆಯ ಹೆಸರು ಗೋದಕ್ಕ. ಅತ್ತೆ ಮನೆಯ ಹೆಸರು ಭಾರತೀಬಾಯಿ. ನಮ್ಮಜ್ಜನು ಬೆಳಗಾಂವ ತಾಲೂಕು ಗುಂಜಿಗಿನಂದೀಹಳ್ಳಿಯ ಪ್ರಸಿದ್ಧ ಕಾರಸ್ಥಾನಿ ಕುಲಕರ್ಣಿಯು. ಅವನಿಗೆ ೫ ಜನ ಹೆಣ್ಣುಮಕ್ಕಳೂ, ಒಬ್ಬ ಗಂಡು ಮಗನೂ ಇದ್ದರು. ಅವರೊಳಗೆ ನಮ್ಮ ತಾಯಿಯೇ ಹಿರೇಮಗಳು. ದೊಡ್ಡ ಮನೆತನದವಳಾದ್ದರಿಂದ ಬರಹೋಗುವ ಜನರ ಮರ್ಯಾದೆ ಗೊತ್ತಿತ್ತು. ನಮ್ಮ ತೀರ್ಥರೂಪರ ಸ್ವಭಾವ ಸಿಟ್ಟಿನದು, ಹಟದ್ದು ಇದ್ದರೂ ತಡೆದು ಕೊಂಡು ಹೋಗುತ್ತಿದ್ದಳು. ೧೦ ವರುಷದವಳಾಕೆ ಇದ್ದಾಗ್ಗೆ ಮದುವೆಯಾಗಿತ್ತಂತೆ. ಆಗ್ಗೆ ಹೆಣ್ಣು ಮಕ್ಕಳಿಗೆ ಓದು–ಬರಹ ಕಲಿಸುವ ವಾಡಿಕೆಯಿಲ್ಲದ್ದರಿಂದ, ಬರೆಯಲಿಕ್ಕೆ ಬರುತ್ತಿದ್ದಿಲ್ಲ. ಧಾರ್ಮಿಕ ಹಾಡುಗಳು ಬಹಳ ಬರುತ್ತಿದ್ದವು. ಧ್ವನಿಯು ಕರ್ಕಶವಿದ್ದಿಲ್ಲಾ. ಚೊಚ್ಚಿಲ ಮಗಳು ಗಂಗಾ ಎಂಬಾಕೆಯ ೨ ಗಂಡು ಹುಡುಗರು ಹುಟ್ಟಿ ತೀರಿಕೊಂಡ ಬಳಿಕ ನನ್ನನ್ನೇ ಹಡೆದಿದ್ದರು. ಸಂಧಿವಾತ, ಪಿಶಾಚಿಬಾಧೆ ಮೊದಲಾದವುಗಳಿಂದ ಬಹಳೇ ಕಷ್ಟಪಟ್ಟಿದ್ದರು.

ನಮ್ಮಕ್ಕನು ಮಕ್ಕಳು ಬದುಕದೇ ಚಿಕ್ಕಂದಿನಲ್ಲಿ ತೀರಿಕೊಂಡದ್ದರಿಂದ, ನಾನೊಬ್ಬನೇ ಮಗನು ಉಳಿದಿದ್ದೆನು. ಬಹಳ ಪರಿಪರಿಯಿಂದ ನನ್ನನ್ನು ಸಂರಕ್ಷಣೆ ಮಾಡಿದಳು. ಚಿಕ್ಕಂದಿನಿಂದ ನಾನು ವಿಶೇಷ ಸಶಕ್ತನಲ್ಲದ್ದರಿಂದ ಬಹಳೇ ವ್ಯಸನಪಡುತ್ತಿದ್ದಳು. ''ಇರುವವನೊಬ್ಬನ ಮುಂದೆ ನಾನು ಹೇಗೆ ಹೋದೇನು ?'' ಎಂಬ ಮಾತನ್ನೇ ಬಹಳ ಜನರ ಮುಂದೆ ಆಡುತ್ತಿದ್ದಳು.

ಆಕೆಯ ಮುಂದೆ ನನ್ನ ಮೂರು ಮಂದಿ ಹೆಂಡರೂ, ನಮ್ಮ ಅಕ್ಕ, ನಮ್ಮ ಹಿರಿಯರೂ ನನ್ನದೊಂದು ೮–೧೦ ವರ್ಷದ ಹುಡುಗಿಯೂ ತೀರಿಕೊಂಡದ್ದರಿಂದ ಅದನ್ನು ನೆನಿಸಿ ಕಷ್ಟಪಡುತ್ತಿದ್ದಳು. ನನ್ನ ದುರ್ದೈವದಿಂದ ಆಕೆಯಿರುವವರೆಗೂ ನಾಲ್ಕಾರು ಸಾವಿರ ರೂಪಾಯಿ ಸಾಲ ತೀರಲಿಲ್ಲ.

ಪ್ರಪಂಚದ ಅಡಚಣೆಯ ಮೂಲಕ ಆಕೆಯನ್ನು ಎಷ್ಟು ಸುಖದಿಂದ ಇಡಬೇಕು ಅಷ್ಟು ನನ್ನ ಕಡೆಯಿಂದಾಗಲಿಲ್ಲ. ಮೊಮ್ಮಕ್ಕಳ ಸಂರಕ್ಷಣೆ, ನನ್ನ ಚಿಂತೆ ಇದರಿಂದೇ ನಮ್ಮ ತಾಯಿ ಸಣ್ಣಾದಳು."

ತಮ್ಮ ತಾಯಿಯವರ ಬಗೆಗೆ ಹೇಳಿದ ಹಾಗೆಯೇ, ಕಾವ್ಯಾನಂದರು ತಮ್ಮ ದಿನಚರಿಯಲ್ಲಿ ತಮ್ಮ ತಂದೆಯವರ ಬಗೆಗೂ ಈ ರೀತಿಯಾಗಿಯೇ ನಿಸ್ಪೃಹವಾಗಿ ಬರೆದಿದ್ದಾರೆ :

"ವೇದಮೂರ್ತಿ ಭೀಮಾಚಾರ್ಯ ನರಹರಿ ಆಚಾರ್ಯ ಪುಣೇಕರ ಇವರು ೧೮೪೫–೫೦ ರ ಒಳಗೆ ಹುಟ್ಟಿರಬಹುದು. ನರಗುಂದ ಬಂಡಾಯದ ಹಾಗೂ ತಮ್ಮ ಹಿರಿಯರು ಗುಳೇ ಕಟ್ಟಿಕೊಂಡು ಗ್ರಾಮಾಂತರಕ್ಕೆ ಹೋಗುವ ಸುದ್ದಿಯನ್ನು ಹೇಳುತ್ತಿದ್ದರು. ಇವರ ತಂದೆ ನರಹರಾಚಾರ್ಯರು ಕೇವಲ ಶಿಷ್ಟ ಬ್ರಾಹ್ಮಣರು. ತಪಸ್ವಿಗಳೆನ್ನಲೂ ಅಡ್ಡಿ ಇಲ್ಲ. ಅವರನ್ನು ನಾನು ೫ ವರ್ಷದವನಿದ್ದಾಗ ನೋಡಿದ್ದೆನು. ನನಗೆ "ಲಕ್ಷ್ಮೀನರಸಿಂಹಾ" ಎಂದು ಕರೆಯುತ್ತಿದ್ದರು. ಹೊತ್ತು ಹೋಗದಾಗ ಪುಸ್ತಕದ ಗಂಟು ಉಚ್ಚಿಕೊಂಡು, ಬ್ರಹ್ಮಸೂತ್ರದಂಥ ಗ್ರಂಥಗಳನ್ನು ಬರೆಯುತ್ತ ಕೂಡ್ರಬೇಕು. ಒಂದೆರಡು ಪ್ರತಿಗಳಾದವೆಂದರೆ, ಮಂದಿಗೆ ದಾನ ಕೊಡಬೇಕು. ಪುಸ್ತಕದ ಕೊನೆಗೆ 'ನರಹರೇಣ ಲಿಖಿತಂ' ಎಂದು ಬರೆದದ್ದು ನೆನಪಿದೆ. ಸಂಸ್ಕೃತವು ಬರುತ್ತಿರಲಿಲ್ಲವೆಂದು ಇದರಿಂದಲೇ ಗೊತ್ತಾಗುತ್ತದೆ.

ಒಂದು ಚಾತುರ್ಮಾಸ್ಯದಲ್ಲಿ, ಆಕಳಿಗೆ ನವಣೆ ತಿನ್ನಿಸಿ, ಶಗಣಿಯಲ್ಲಿ ಬಿದ್ದ ನವಣೆ ತೊಳೆದು ಅದರ ಅನ್ನ, ಗೋಮೂತ್ರ, ತುಲಸೀದಲ, ಅಡವೀ ಗುಳ್ಳದಕಾಯಿ ರಸ ತಿಂದು ಇದ್ದರಂತೆ. ಬಾಗಿಲಲ್ಲಿ ಒಂದು ಒಡಕು ಪರಾತಕ್ಕೆ ನಾಲ್ಕು ತೂತು ಮಾಡಿ, ಹುರಿ ಕಟ್ಟಿ ನೆಲವಿನಂತೆ ಮಾಡಿ, ಅದರಲ್ಲಿ ನುಚ್ಚು ಕಾಳು ಹಾಕುತ್ತಿದ್ದರು. ಪರಟಿಯಲ್ಲಿ ನೀರು ತುಂಬಿಡುತ್ತಿದ್ದರು. ಗುಬ್ಬಿ, ಕಾಗಿಗಳು ಆ ಕಾಳು ತಿಂದು ನೀರು ಕುಡಿಯಲೆಂಬದೇ ಉದ್ದೇಶವು.

ನಮ್ಮ ತಂದೆಗೆ ಸಾರ್ವಜನಿಕ ಕೆಲಸಗಳಲ್ಲಿ ಪ್ರೀತಿಯೂ ಕೀರ್ತ್ಯಪೇಕ್ಷೆಯೂ ಇದ್ದವು. ೧–೨ ಬಡವರ ಲಗ್ನ ಮಾಡಿದ್ದು, ಮುಂಜಿ ಮಾಡಿದ್ದು, ಕೆಲವರಿಗೆ ಲಗ್ನಮುಹೂರ್ತ, ಮನೆ ಭಾವಿ ಕಟ್ಟಿಸೋಣ ಮೊದಲಾದ ಕೆಲಸಕ್ಕೆ ಸಹಾಯ ಮಾಡಿದ್ದು ನನಗೆ ನೆನಪು ಅದೆ. ಕಯ್ಯೊಳಗೆ ಹಣವಿರುವದು ಕಡಿಮೆಯೇ. ಅಂಥ ಪ್ರಸಂಗದಲ್ಲಿ ನಮ್ಮ ತಾಯಿಯ ಬಳೆ ಸರಿಗೆಗಳನ್ನು ಅಂಥವರಿಗೆ ಕೊಡಬೇಕು. ಅವರು ಕೆಲವು ದಿವಸ ಒತ್ತೇ ಚೆಲ್ಲಿ ಅನುಕೂಲವಾದಾಗ ಬಿಡಿಸಿಕೊಡಬೇಕು. ಹೀಗೆ ಮಾಡುತ್ತಿದ್ದರು. ವಾರ್ಷಿಕ ಹೊಲದ ಉತ್ಪನ್ನವು ೨೦೦ ರೂಪಾಯಿಗೆ ಮಿಕ್ಕಿದ್ದಿಲ್ಲ. ಆದ್ದರಿಂದ ಕಷ್ಟದಲ್ಲೇ ಪ್ರಪಂಚ ಮಾಡಿ ಹೌದೆನಿಸಿಕೊಳ್ಳುತ್ತಿದ್ದರು........

ಸಾಲಕ್ಕೆ ಬಹಳೇ ಅಂಜುತ್ತಿದ್ದರು. ಅದರಿಂದೇ ಒಬ್ಬನೇ ಮಗನಾದ ನನಗೆ ಇಂಗ್ಲೀಷ ಕಲಿಸಲಿಕ್ಕೆ ಬೆಳಗಾಂವಿಯಲ್ಲಿಡಲು ಅವರಿಗೆ ಧೈರ್ಯವಾಗಲಿಲ್ಲ. ಆದರೆ ಆಗಿನ ರೀತಿಯಂತೆ ನನ್ನ ೧೫ನೇ ವರ್ಷ ನನ್ನ ಒಂದು ಮದುವೆಯನ್ನೂ ೧೭ನೇ ವರ್ಷ ೨ನೇ ಮದುವೆಯನ್ನೂ ಒಳ್ಳೇ ಖರ್ಚ ಮಾಡಿ ಮಾಡಿದರು. ಸಿಕ್ಕಸಿಕ್ಕಲ್ಲಿ ಸಾಲ ಕೈಗಡ ಉದ್ದರೀ ಮಾಡದೆ, ಕೆಲವು ಸಂಭಾವಿತ ಗೃಹಸ್ಥರನ್ನು ಗೊತ್ತುಮಾಡಿಕೊಂಡು ಅವರಲ್ಲೇ ವ್ಯವಹಾರವನ್ನು ಮಾಡುತ್ತಿದ್ದರು. ಸೋಮವಾರ ಪೇಟೆಯ ಮುತ್ತೂರ ಗುರುಸಿದ್ದಪ್ಪನವರಲ್ಲಿ ಕರೇಸಣಗಳನ್ನು, ಬಸ್ಕರೀ ಏಸಪ್ಪನವರಲ್ಲಿ ಧೋತರಗಳನ್ನು ತರುತ್ತಿದ್ದರು. ಮೋರಕಾರ ಪೀರಾಜಪ್ಪನವರಲ್ಲಿ ಸಾಲ ಕೈಗಡ ತರುತ್ತಿದ್ದರು........

ಒಂದು ಸಾರೆ ಈ ಶಾಲೆಗೆ ಡೆ. ಎ. ಇನಸ್ಪೆಕ್ಟರರಾದ ಡೆಪುಟೀ ಚನಬಸಪ್ಪ (ಅಂಕಗಣಿತ ವಗೈರೆ

ಮಾಡಿ ಪ್ರಸಿದ್ಧರಾದ ಲಿಂಗಾಯತ ಗೃಹಸ್ಥರು) ಎಂಬವರು ಪರೀಕ್ಷೆಗೆ ಬಂದಿದ್ದರು. ಪರೀಕ್ಷೆಯ ವೇಳೆಗೆ ಪಂಚಜನರ ಗೂಡ ನಮ್ಮ ಹಿರಿಯರೂ ಹೋಗಿ ಕೂತಿದ್ದರು. ಹುಡುಗರಿಗೆ ವ್ಯಾಕರಣದ ಪ್ರಶ್ನೆ– ಸ್ವರಗಳೆಷ್ಟು ಪ್ರಕಾರ ? ಎಂದು ಚನಬಸಪ್ಪವರು ಪ್ರಶ್ನೆ ಮಾಡಿದರು. ಹುಡುಗರು ಹ್ರಸ್ವ ದೀರ್ಘ ಎಂದೇನೋ ಹೇಳಿದರು. ನಮ್ಮ ಹಿರಿಯರು "ಸಂಸ್ಕೃತದಲ್ಲಿ ಪ್ಲುತವೆಂದೂ ಒಂದು ಹೇಳುತ್ತಾರೆ" ಅಂದರಂತೆ. ಅದನ್ನು ಕೇಳಿ ಚನಬಸಪ್ಪನವರು "ಇವರಾರು ? ಯಾರ ಮಕ್ಕಳು ? ಏನು ಮಾಡುತ್ತಾರೆ ?" ಅಂತ ಪ್ರಶ್ನೆ ಮಾಡಿದರು. ಮಾಸ್ತರರೂ ಕೂಡಿದವರೂ ''ಇವರೇ ಪುಣೇದ ನರಸಿಂಹಾಚಾರ್ಯರ ತಮ್ಮನ ಮಕ್ಕಳು. ಸ್ವಲ್ಪ ಸಂಸ್ಕೃತ ಕಲಿತಿದ್ದಾರೆ. ಮನೆಯಲ್ಲಿ ವೈದಿಕ ವೃತ್ತಿಯಿಂದ ಇದ್ದಾರೆ'' ಅಂತ ಹೇಳಿದರು. ಚನಬಸಪ್ಪನವರು "ನಿಮಗೆ ಕನ್ನಡ ಬರುವದೇ ?" ಎಂದು ಮತ್ತೆ ಕೇಳಲು, ಇಲ್ಲವೆಂದು ಉತ್ತರ ಕೊಟ್ಟರು. "ಹುಷಾರ ಕಾಣಸತೀರಿ. ಕನ್ನಡ ಕಲಿತರೆ ಮಾಸ್ತರ ಕೆಲಸಾ ಕೊಡಿಸಬಹುದು. ವಿಚಾರ ಮಾಡಿ ತಿಳಿಸಿರಿ'' ಎಂದು ಹೇಳಿದರು. ಆಗಿನ ವೈದಿಕರ ಸಾತ್ವಿಕ ತಿಳುವಳಿಕೆಯಂತೆ ಅಂಥ ಕೆಲಸವೇ ಬೇಡ, ತಗೊಂಡೇನು ಮಾಡುತ್ತೀ ? ಎಂದು ಅವರ ತಂದೆ ಬೆದರಿಸಿದ್ದರಿಂದ ಆ ಮಾತು ಅಷ್ಟಕ್ಕೇ ಉಳಿಯಿತು. ಈ ಸಂಗತಿಯನ್ನು ತಮ್ಮ ಸ್ನೇಹಿತರ ಮುಂದೆ ಹೇಳಿ ನಾವೂ ಇಷ್ಟೊತ್ತಿಗೆ ಪೆನಶನ್ ತಕ್ಕೊಂಡು, ಸುಖದಿಂದ ಇರುತ್ತಿದ್ದೆವು.... ಎಂದು ಹಳಹಳಿಸಿದ್ದು ನನಗೆ ಚಿಕ್ಕಂದಿನಿಂದ ನೆನಪಿಗೆ ಬರುತ್ತದೆ.

(ಹೋಳೀಹೊಸೂರಿನ ಕುಲಕರ್ಣಿ ಕೃಷ್ಣಾಜಿ ಸುಬ್ರಾವ ಎಂಬವರು........ ನಮಗೆ ಭೆಟ್ಟಿಯಾದಾಗ್ಗೆ ಹೇಳಿದ್ದು). ನಿಮ್ಮಂತೆ ನಿಮ್ಮ ಹಿರಿಯರ ಮಾತುಗಳೂ ಬಹಳೇ ನೆನಪಿನಲ್ಲಿಡತಕ್ಕಂಥವು. ನಾವು ಸಣ್ಣವರಿರುವಾಗ ನಮ್ಮ ತಂದೆ ಸುಬ್ಬರಾಯರ ಮುಂದೆ ಮಾತಿಗೆ ಮಾತು ಹೊರಟಾಗ "ಸುಬ್ಬರಾಯಾ, ಪ್ರಪಂಚ ಮಾಡೋದರೊಳಗ ಶಾಹಣೇತನವದೆ. ಒಬ್ಬೊಬ್ಬರು ನಾಲ್ಕೇ ತಂಬಿಗೆ ನೀರೊಳಗೆ ಮೈ ತೋಯ್ಸಿಕೊಂಡು ಸ್ನಾನ ಮಾಡುತ್ತಾರೆ. ಕೆಲವರು ಹಂಡೇ ನೀರು ಸುರುವಿಕೊಂಡರೂ, ಮೈಮೇಲೆ ಒಣಗು ಉಳಿದಿರುತ್ತದೆ ! ಇದೇ ಸಂಸಾರ ಕ್ರಮ ನೋಡು !" ಎಂದು ನಿಮ್ಮ ಹಿರಿಯರು ಅಂದಿದ್ದರು. ಆ ಮಾತು ನಮಗೆ ಮೇಲಿಂದ ಮೇಲೆ ನೆನಪಾಗುತ್ತದೆ........ ಆದರೆ ನಮ್ಮ ಪ್ರಪಂಚ ಮಾಡುವ ರೀತಿಯು ಮಾತ್ರ ಹಿಡಿತದ್ದಾಗಲಿಲ್ಲ !

ಎಮ್ಮಿನಗಟ್ಟಿ
೧೪–೬–೧೯೨೭ ನರಸಿಂಹಾಚಾರ್ಯ ಪುಣೇಕರ."[೧]

ಈ ಮೇಲಿನ ದಿನಚರಿಯಲ್ಲಿ ಕಾವ್ಯಾನಂದರ ಪ್ರಾಮಾಣಿಕತೆಯನ್ನೂ, ತತ್ಕಾಲೀನ ಜೀವನದಲ್ಲಿ ಉಂಟಾಗಹತ್ತಿದ್ದ ಬದಲಾವಣೆಯ ರೂಪರೇಖೆಯನ್ನೂ ಕಾಣುತ್ತೇವೆ. ಸಂಸಾರ ಮಾಡುವ ಮನುಷ್ಯ ಜಾಣನಾಗಿರಬೇಕು. ಕೆಲವರು ನಾಲ್ಕು ತಂಬಿಗೆ ನೀರಿನಲ್ಲಿಯೇ ಸಮಗ್ರ ಮೈ ತೊಯ್ಸಿಕೊಂಡು ಸ್ನಾನ ಮುಗಿಸುವವರಿದ್ದಾರೆ. ಇನ್ನು ಹಲವರಿಗೆ ಹಂಡೆ ನೀರಾದರೂ ಮೈ ತೊಯ್ಯದೆ ಒಣಗು ಹಾಗೇ ಇರುತ್ತದೆ. "ಆದರೆ, ನಮ್ಮ ಪ್ರಪಂಚ ಮಾಡುವ ರೀತಿಯು ಮಾತ್ರ ಹಿಡಿತದ್ದಾಗಲಿಲ್ಲ !" ಎಂದು ಕಾವ್ಯಾನಂದರು ಜೀವನಾವಸಾನ ಕಾಲದಲ್ಲಿಯೂ ಉದ್ಗಾರವನ್ನು ತೆಗೆಯುವಂತಾಯಿತು. ತಾವು ಕಲಿತವರಲ್ಲವಲ್ಲ ಎಂಬ ವ್ಯಥೆ, ಮೂವರು ಪತ್ನಿಯರ ಅಕಾಲಿಕ ವಿಯೋಗ, ಯಾವ ತಾಯಿಯ ಹಾಲನ್ನುಂಡು ಬೆಳೆದಿದ್ದರೋ ಅವರಿಗಾಗಿ ತಾವು ಸಾಕಷ್ಟು ಮಾಡಲಿಲ್ಲವಲ್ಲಾ ಎಂಬ ಕೊರಗು, ವಿಧಿ ತಂದ ವಧುವಿನ ಹಾಗೆ ಗಂಟುಬಿದ್ದಿದ್ದ ಬಡತನ, ಎಲ್ಲಕ್ಕೂ ಹೆಚ್ಚು ಬಾಲ್ಯಾವಸ್ಥೆಯಿಂದಲೂ ಅಂಟಿ ಬಂದ ಅನಾರೋಗ್ಯ, ಕೊನೆಕೊನೆಗೆ ಮನೆತನದಲ್ಲಿಯ ಮಾನಸಿಕ ಅನಾರೋಗ್ಯ, ತಪ್ಪು ತಿಳಿವಳಿಕೆ ಇವೆಲ್ಲವು

೧ ವೈ. ಕಾವ್ಯಾನಂದರ ಚರಿತ್ರ ಪರಿಚಯವು : ಶ್ರೀನಿವಾಸಸುತ : ೧೯೩೦.

ಗಳಿಂದ ಕಾವ್ಯಾನಂದರು ಜರ್ಝರಿತರಾದರು. ಇಷ್ಟಾದರೂ ಅವರು ಆಯುಷ್ಯದಲ್ಲಿ ವಿನೋದ ದೃಷ್ಟಿಯನ್ನು ಇಟ್ಟುಕೊಂಡುದು ಪ್ರಶಂಸಾರ್ಹವಾಗಿದೆ !

ಕಾವ್ಯಾನಂದರ ಪ್ರಕೃತಿ ಮೊದಲಿನಿಂದಲೂ ಕ್ಷೀಣವಾಗಿಯೇ ಇತ್ತು. ಅಪಚನ, ಆಮ್ಲಪಿತ್ತ ರೋಗಗಳಿಗೆ ತುತ್ತಾದ ಅವರು ಪ್ರಕೃತಿ ಸುಧಾರಣೆಗಾಗಿ ತುಂಬಾ ಒದ್ದಾಡಿದರು. ಅವರಿಗೆ ಹಸಿವೆಯೇ ಆಗುತ್ತಿರಲಿಲ್ಲ. ಅದರಿಂದ ತುಂಬಾ ಅಶಕ್ತತೆ ಉಂಟಾಗುತ್ತಿತ್ತು. ತಮ್ಮ ಮಕ್ಕಳಿಗೆ ಬರೆದ ಅನೇಕ ಪತ್ರಗಳಲ್ಲಿ ಅವರು ತಮ್ಮ ಪ್ರಕೃತಿಯ ಅಶಕ್ತತೆಯ ಬಗೆಗೆ ಬರೆದಿರುತ್ತಾರೆ :

೨೫–೧೧–೨೨ ರಂದು ಶುಕ್ರವಾರ ಬೆಳಗು ಮುಂಜಾನೆ ೨ ಗಂಟೆಗೆ ಎಮ್ಮಿಗನೂರಿನಿಂದ ಬರೆಗ ಪತ್ರ ಹೀಗಿದೆ :

"ನನ್ನ ಪ್ರಕೃತಿ ಇದ್ದ ಹಾಗೆ ಅದೆ. ೧೮–೧೯ ತಿಂಗಳ ಆಯಿತು. ದಿನಾಲು ೩–೪ ವರ್ಷದ ಹುಡುಗರು ಒಪ್ಪೊತ್ತು ತಿನ್ನುವಷ್ಟು ತಿನ್ನುತ್ತೇನೆ. ಇಲ್ಲಿ ಬಂದು ೧೨ ದಿವ್ಸವಾಯಿತು. ೩ ದಿವ್ಸ ವಾಂತಿಯಾಗಿದೆ. ಒಂದು ಹೊಲದ ಕಡಿ ದಂಡಿತನಕ ಹೋಗಲಿಕ್ಕೆ ಬರತದೆ. ಮಾತು ಕಥೀ ಪರಾಧೀನ ವಿಲ್ಲ. ಅಡಿಗೀ ನೀರು ಮಾಡಿಕೊಳ್ಳುವದು ದುಸ್ತರ ಕಾಣಿಸಿದ್ದರಿಂದಾ ಸಾಂವವ್ವನಲ್ಲೇ ಒಪ್ಪತ್ತು ಉಂಡು ಬರತೇನೆ. ರಾತ್ರಿ ೧ ಕಪ್ಪು ಹಾಲು ಕುಡೀತೇನೆ. ಮುಂಜಾನೆ ಚಹಾ ೧ ಕಪ್ಪು ಕುಡೀತೇನೆ. ಬೇರೆ ಬೇನೆ ಕೂಡದೆ ತೀವ್ರ ನನಗೇನೂ ಆಗಲಿಕ್ಕಿಲ್ಲ ಹೀಗನಸತದೆ. ನನ್ನ ದಶಿಂದಾ ಚಿಂತಿ ಮಾಡಿ ಸರ್ವಥಾ ಸೊರಗಬೇಡಿರಿ. ನೀವು ಪ್ರಬುದ್ಧರಾಗುವವರೆಗೆ ಯೋಜನೆ ಮಾಡಿ ಮಾಡಿ ಏನೋ ಮಾಡಿದೆ. ನನ್ನಿಂದ ಯಾರಿಗೂ ಹಿತವಾಗಲಿಲ್ಲ. ನನ್ನಿಂದ ನನಗೂ ಹಿತವಾಗಲಿಲ್ಲ, ಆಗುವಂತಿಲ್ಲ."[೧] ಇತ್ಯಾದಿ.

ಬೆಳಗು ಮುಂಜಾನೆ ೨ ಗಂಟೆಗೆ ಎದ್ದು ಈ ಪತ್ರ ಬರೆದಿದ್ದಾರೆಂದ ಮೇಲೆ ದೈಹಿಕವಾಗಿಯೂ ಮಾನಸಿಕವಾಗಿಯೂ ಅವರ ಪರಿಸ್ಥಿತಿ ತುಂಬಾ ವ್ಯಗ್ರವಾದಂತೆ ಕಾಣುತ್ತದೆ. ಅದನ್ನು ಈ ಮುಂದು ವಿವರಿಸಲಾಗಿದೆ.

೧೩–೩–೧೯ ರ ಪತ್ರ :

"ಹವಾ ಬದಲಾಯಿಸಿದರಾದರೂ ಆರೋಗ್ಯವಾದೀತೆಂದು ಕೆಲವರ ಅಭಿಪ್ರಾಯ. ನನಗೂ ನೋಡಬೇಕೆನಿಸತದೆ. ಆದರೆ ಮನೆ ಬಿಟ್ಟು ಕಿತ್ತುವದು ಹೇಗೆ ? ಕೃಷ್ಣಾತೀರಕ್ಕೆ ಸೀತಿಮನೆ, ಉಗಾರ, ಎಲ್ಲಾರೆ ಹೋಗಬೇಕು. ೩–೪ ತಿಂಗಳ ಕಳಿಬೇಕು. ಧಾಮಕ್ಕೆ (?) ಹೋಗಲ್ಯಾ ಅನಿಸುತ್ತದೆ. ಖರ್ಚು ಪೂರೈಸುವದು ಕಠಿಣ. ಒಬ್ಬರಾದರೂ ಸಂಗಡ ಬೇಕು. ರಮೇಶನ ಗತಿ ಏನು ವಗೈರೆ ಆಲೋಚನೆ."

ಇಂಥ ಪತ್ರಗಳನ್ನು ಓದಿದಾಗ ಮನಸ್ಸು ಕಳವಳಪಡುತ್ತದೆ. ಅಶಕ್ತತೆ, ಹಣದ ಅಭಾವಗಳು ಈ ಪ್ರತಿಭಾವಂತ ಲೇಖಕನನ್ನು ಹಣ್ಣು ಮಾಡಿದವಲ್ಲಾ ಅನಿಸುತ್ತದೆ.

ಈ ಕೆಳಗಿನ ಪತ್ರ ಅವರ ಪ್ರಕೃತಿ ದಿನದಿನಕ್ಕೆ ಎಷ್ಟು ಸೂಕ್ಷ್ಮವಾಗುತ್ತ ನಡೆಯಿತೆಂಬುದನ್ನು ತೋರಿಸುತ್ತದೆ :

---

೧ ಶ್ರೀಯುತರು ತಮ್ಮ ಮಗ ಶಾಮಸುಂದರರಾಯರಿಗೆ ಬರೆದ ಪತ್ರ. ಶಾಮಸುಂದರರಾಯರ ವಯಸ್ಸು ಈಗ ಸುಮಾರು ೭೫. ಅವರು ಬಿ. ಎ ಜಿ. ಆಗಿದ್ದಾರೆ. ಈ ಪತ್ರಗಳನ್ನು ಅವರು ತುಂಬಾ ಜತನವಾಗಿ ಕಾದಿಟ್ಟಿದ್ದು, ಅವನ್ನು ಅಂತಃಕರಣಪೂರ್ವಕವಾಗಿ ಕೊಟ್ಟರು.

"ನನ್ನ ಪ್ರಕೃತಿ ೮ ದಿವ್ಸ ಹಾಗೆ ೮ ದಿವ್ಸ ಹೀಗೆ ನಡೆದಿದೆ. ಮೊನ್ನೆ ಒಮ್ಮೆ ನಾಲ್ಕು ಹೆಜ್ಜೆ ಮುಂಚೀ ಕಡಿಗೆ ಹೋದಾಗ್ಯೆ ಪ್ರಜ್ಞಾ ತಪ್ಪಿತ್ತು. ಮನುಷ್ಯ, ರಾಜಾ ಅಂಬವ ಓಡಿದು ಇಂದು (ಚರಣ)ನನ್ನು ಒದರಿದನಂತೆ. ರಾತ್ರಿ ೯ಕ್ಕೆ ಆಗೆಲ್ಲ ಊಟಕ್ಕೆ ಕೂತಿದ್ದರು. ವದ್ಯಾ ಬಂದು ತಲೀ ಮೇಲೆ ನೀರು ೨ ತಂಬಿಗಿ ಸುರುವಿ ಬಾಯೊಳಗೆ ನೀರು ಹಾಕಿದ್ದರಿಂದ ಎಚ್ಚರಾಗಿ ಹಾಸಿಗೆಗೆ ಬಂದೆನು. ಈಗ ಮುದ್ದಾಂ ಏಳುವದಿಲ್ಲ. ಜಪ್ಪಿಸಿ ಇರುತ್ತೇನೆ. ಚಿ. ರಮೇಶ ನಿನ್ನೆ ಬಂದಾನೆ. ೨ ದಿವ್ಸಕ್ಕೆ ಕಳ್ಸತೇನೆ. ತೋಳ ಬಂತಲೇ ಎಂಬಂತಾಗಿದೆ. ಯಾವಾಗ ಏನಾಗತದೋ ಅನಿಸತದೆ."[೧]

ಆದರೆ, ಈ ತೋಳವನ್ನು ಅವರಿಗೆ ಬಹಳ ದಿವಸ ದೂರವಿಡುವದಾಗಲಿಲ್ಲ. ಇದು ಅವರು ವಿಭವನಾಮ ಸಂವತ್ಸರದ ೧೮೪೯ರಂದು ರಾತ್ರಿ ೧ ಗಂಟೆಗೆ ಬರೆದ ಪತ್ರ :

''ರಾಮು :

ನನ್ನ ಅಪಚನ, ಆಮ್ಲಪಿತ್ತಾದಿ ವಿಕಾರಗಳಿಂದ ಬೇಸತ್ತು, ಸುಲಭವಾದ ಸ್ಥಳಾಂತರೋಪಾಯವೊಂದನ್ನು ಮಾಡಬೇಕೆಂದು, ಸಮೀಪ ಸವದತ್ತಿಗೆ ಹೋದೆನು. ಅಲ್ಲಿಯ ಹಳ್ಳಿಯ ಮಾಸ್ತರರಾಗಿದ್ದ ಮ. ಹಣಮಂತರಾವ ಕುಲಕರ್ಣಿ, ಯಾದವಾಡ ಇವರು ತಮ್ಮ ಮನೆಯಲ್ಲಿಯೇ ೨ ತಿಂಗಳು ಇಟ್ಟುಕೊಂಡು, ಮನೆಯವರಂತೆ ಉಪಚಾರ ಮಾಡಿದರು. ಅವರಿಗೆ ನಾನು ತುಸು ಕವಿತೆ ಮಾಡಲಿಕ್ಕೆ ಪ್ರೋತ್ಸಾಹ ಕೊಟ್ಟದ್ದೇ ಸಂಬಂಧ ! ವಸ್ತುತಃ ಅವರಲ್ಲಿ ಹುಟ್ಟುಗುಣವೇ ಇತ್ತು. ಒಳ್ಳೇ ಮಾತಾಡುವವರು ಕವಿಗಳಿಗೆ ಸಿಗುವದಿಲ್ಲವೆಂಬುದೇ ಇದರ ಮೇಲಿಂದ ತಿಳಿಯಬಂತು. ಆಲೂರ ಮಾಮಲೇದಾರರಾದ ರಾವಸಾ. ಟಿ. ಎಸ್. ಕುಲಕರ್ಣಿಯವರು, ಪ್ರೇಮದಿಂದ ಮೇಲಿಂದ ಮೇಲೆ ಬಂದು ಪರಾಮರ್ಶೆ ತಕ್ಕೊಳ್ಳುತ್ತಿದ್ದರು. ಮ. ಗುರುರಾವ ಮುನವಳ್ಳಿ, ವೈದ್ಯ ಹಲಸೀಕರ ಮೊದಲಾದ ಗುಣಪಕ್ಷಪಾತಿಗಳು ಭೆಟ್ಟಿಯಾಗುತ್ತಿದ್ದರು.

ನಡುವೆ ಗುರ್ಲಹೊಸೂರಿಗೆ ೩ ದಿವಸ ಹೋಗಿ ಶ್ರೀ ಬೋರೇಸ್ವಾಮಿಗಳ ಉತ್ಸವ ತೀರಿಸಿಕೊಂಡು, ಅಲ್ಲಿ ನನ್ನ ಎರಡು ಮಾತಿಗೂ ವಿನೋದ ಕವಿತೆಗಳಿಗೂ ಬೆಲೆ ಬಂದಂತೆನಿಸಿತು........

ಯರಗಟ್ಟಿಗೆ ಮಾಸ್ತರರಾಗಿದ್ದ ಮ. ಸಂಗಮೇಶ್ವರ ಅನಂತ ಕಿತ್ತೂರ ವ ಹಣಮಂತರಾವ ಕಂತೀ, ಧಾರವಾಡ ಇವರು ಸವದತ್ತಿಗೂ ಕರೆಯಲಿಕ್ಕೆ ಬಂದದ್ದರಿಂದ ಯರಗಟ್ಟಿಯೊಳಗೂ ೧೦ ದಿವಸ ಇದ್ದು ಬಂದೆನು. ಅಲ್ಲಿ ನಾನು ೨೨ ವರ್ಷಗಳ ಹಿಂದೆ ಪ್ರಾರಂಭಿಸಿದ ಸಂತೆಯು ಚನ್ನಾಗಿ ನಡೆದದ್ದು ನೋಡಿ ಸಂತೋಷವಾಯಿತು. ಸಂತೆಯ ಯೋಗದಿಂದ, ಅಲ್ಲಿಯ ಗೌಡನು ಅಂಗಡಿಯ ಮೇಲೆ ೫-೬ ಸಾವಿರ ರೂಪಾಯಿ ವೆಚ್ಚಮಾಡಿ, ಹೋಗಿ ಬಂದವರಿಗೆ ಉಪಯೋಗಕ್ಕೆ ಇಟ್ಟಿರುವನು. ಅದು ಸಂತೋಷವೆನಿಸಿತು. ಅಲ್ಲಿಂದ ಒಂದು ದಿನ ಮುನವಳ್ಳಿಗೆ ಹೋಗಿ, ಅಲ್ಲಿಯವರು ಮಾಮಲೇದಾರರಿಗೆ ಮಾಡಿದ ಬಹುಮಾನದ ಸಮಾರಂಭದಲ್ಲಿ (ವರ್ಗಾವರ್ಗಿ ಮೂಲಕ) ತಕ್ಕ ಭಾಷಣ ಮಾಡಿ, ಸಾರ್ವಜನಿಕ ಅಧ್ಯಕ್ಷತೆಯಿಂದ ಭಿಷಗ್ವರ ರಂಗಾಚಾರ್ಯನೆಂಬ ತರುಣನಿಗೆ ಸುವರ್ಣ ಪದಕ ಸಮರ್ಪಣಾನಂತರ ಭಾಷಣ ಮಾಡಿ, ದುಷ್ಟರು ಒಡೆದು ಹಾಳು ಮಾಡಿದ ಶ್ರೀ ವೆಂಕಟೇಶ ಮೂರ್ತಿಯನ್ನು ನೋಡಿ, ಚತುರ್ದಶಿಯ ಮಧ್ಯಾಹ್ನಕ್ಕೆ ಇಲ್ಲಿಗೆ ತಿರುಗಿ ಬಂದೆನು. ಎರಡೂವರೆ ತಿಂಗಳ ಅಶಕ್ತತೆಯೊಳಗೂ ಯಥಾಶಕ್ತಿ ವಾಙ್ಮಾತ್ರದಿಂದಾದರೂ ಜನಹಿತದ ಕಾರ್ಯ ಮಾಡಿದೆನೆಂದು ಸಮಾಧಾನವಾಯಿತು.

ಕುಲಕರ್ಣಿ ಸಾಹೇಬರು ಒಳ್ಳೇ ಪ್ರೇಮದಿಂದ ನಮ್ಮಲ್ಲಿ ಕೆಲವು ದಿನ ಇದ್ದು ಹೋಗೆಂದರೂ-

---

೧ ಶಾಮಸುಂದರರಾಯರಿಗೆ ಬರೆದಪತ್ರ.

ತಾವು ಸನ್ಮಾನದಿಂದ ದೇವಿಯ ದರ್ಶನ ಮಾಡಿಸಿದ್ದೇ ಸಾಕು– ಎಂದು ಬಂದೆನು. ಒಟ್ಟಿನ ಮೇಲೆ, ಪ್ರವಾಸದಿಂದ ಪ್ರಕೃತಿಯು ೧–೨ ಆಣೆ ಸುಧಾರಿಸಿರುವದು. ದೇವರ ಕೃಪೆ."

ಧಾರವಾಡ– ಕಾರ್ತಿಕ ಶು. ೨.
ರಾತ್ರಿ ೧ ಘಂಟೆ ಶಕೆ ೧೮೫೦ ಪುಣೇಕರ."
ವಿಭವನಾಮ ಸಂವತ್ಸರ.

ಇನ್ನೊಂದು ಪತ್ರ :

"ಇರಲಿ! ಬಂದದ್ದೆಲ್ಲ ಬರಲಿ! ಗೋವಿಂದನ ದಯವೊಂದಿರಲಿ! ಹವಾ ಬದಲಾಯಿಸುವದಕ್ಕೆ ಬೆಳವಲದಲ್ಲಿರಬೇಕು ಅಂತಾ– ಚಿ. ಸೌ. ಚಂಪಕ್ಕನಗೂಡಾ ಬೂದೀಹಾಳಕ್ಕೆ ಹೋಗಬೇಕೆಂದು ಹೊರಟೆವು. ಪ್ರಕೃತಿ ಸಾಧಾರಣ ನೆಟ್ಟಗಿದ್ದು, ಬದುಕುವ ಆಶೆ ತೋರುತ್ತದೆ.

ಮುಕ್ಕಾಮ : ಧಾರವಾಡ ೧ನೇ ಜುಲೈ ೧೯೨೯ನೇ ಇಸ್ವಿ."

ಈ ಪ್ರಕೃತಿಯ ಅಸ್ವಾಸ್ಥ್ಯದ ಕೂಡ, ಮನಸ್ಸಿನ, ಮನೆತನದ, ತೊಂದರೆಗಳೂ ಇಳಿವಯಸ್ಸಿನಲ್ಲಿ ಅವರನ್ನು ಕಾಡಿದಂತೆ ಕಾಣುತ್ತವೆ. ಅವರೊಬ್ಬ ಚಿರಂಜೀವನ ಮಾನಸಿಕ ಪ್ರಕೃತಿ ಸರಿಯಾಗಿದ್ದಂತೆ ಕಾಣುವದಿಲ್ಲ. ಕಲಿತ ಮಗ ಹೀಗಾದ ವ್ಯಥೆ ಅವರನ್ನು ತುಂಬಾ ಕಾಡಿಸಿತು. ಅದರ ಜತೆಗೆ ಇಂಥ ಸಂದರ್ಭಗಳಲ್ಲಿ ಅವನಾಡಿದ ಮಾತುಗಳೂ ಅವರ ಮನಸ್ಸಿಗೆ ಶಲ್ಯದಂತೆ ಚುಚ್ಚಿದವು. ೪–೭–೨೮ರಂದು ಬರೆದ ಒಂದು ಪತ್ರ ಹೀಗಿದೆ :

"........ಮೊನ್ನೆ ಬಂದು ಹೋದನು. ಇನ್ನೂ ಕೆಲಸದ ವಿಚಾರವಿಲ್ಲ. ವಿನಾಕಾರಣ ಹಿಂದಿನ ಮಾತು ತೆಗೆದು 'ನೀವು, ರಾಜಿ ಆಗಲಿಕ್ಕೆ ಕಬೂಲ ಮಾಡಿದಲ್ಲೆ ಹೋಲಾ ಹೋದವು' ಅಂದು ಸಿಟ್ಟು ಮಾಡತಾನೆ! ಪ್ರಸಂಗಯಿರದೆ ಯಾವ ಕೆಲ್ಸನೂ ಮಾಡಿಲ್ಲ. ವತನ ಯಾರಿಂದ ಬಂದಿತು ಇದು ನೆನಪೇ ಆಗುವದಿಲ್ಲ! ಪರಪ್ರತ್ಯಯನೇಯ ಬುದ್ಧಿಯಾದ್ದರಿಂದ ಹೀಗಾಗತದೆ. ನಡಿಯಲಿ........ ನನ್ನ ಪ್ರಕೃತಿ ಸ್ವಲ್ಪ ಸುಧಾರಿಸುತ್ತ ನಡೆದದೆ. ೨೦ ದಿವಸವಾಯಿತು ವಾಂತಿಯಾಗಿಲ್ಲ. ನೀನು ಬಂದಾಗಿನಿಂದ ತುಸು ಅನ್ನ ತಿನ್ನುತ್ತೇನೆ. ಗೋಧಿ ಬಿಟ್ಟಿರತೇನೆ........ ನನಗೆ ಅಂತಃಕರಣವಿಲ್ಲ, ಪ್ರೀತಿಯಿಲ್ಲ ವಗೈರೆ ಆಕ್ಷೇಪ ಕೆಲವರು ಮಾಡತಾರೆ. ಅದಕ್ಕೆ ನನ್ನದು ನಿರುಪಾಯವೇ ಸರಿ. ಸ್ವತಃ ತಾಯಿ ಅಶಕ್ತಳಾದರೆ ಕೂಸು ಆಕೆಗೆ ಭಾರವಾಗುತ್ತದೆ. ಭಾರವಾದರೆ ಅಂತಃಕರಣವಿಲ್ಲವಾಯಿತೇ? ಹೀಗೆ ಅಶಕ್ತಿಯ ಮೂಲಕ ನಾನು ಜನರಿಗೆ ಕಾಣಸತಿರಬಹುದು. ಅಶಕ್ತಿಯು ಕೇವಲ ಮನಸ್ಸಿನದೇ ಅಲ್ಲ. ದೈಹಿಕ ಸಾಂಪತ್ತಿಕ ಎಲ್ಲಾ ಅದೆ. ಆದರಿಂದ ಆಡುವವರಿಗೆ ಆಸ್ಪದವಾಗುತ್ತದೆ........ ಮನಸ್ಸಿಗೆ ಅನಿಸಿದ್ದನ್ನೆಲ್ಲ ಒಮ್ಮೆಯಾದರೂ ಬರಿದು ತಿಳಿಸುವ ರೂಢಿಯಂತೆ ಬರೆದಿರುತ್ತೇನೆ."[೧]

೨೯–೧೧–೨೮ ರ ದಿವಸ ಗೃಹಕೃತ್ಯದ ಬಗೆಗೆ ಪುನಃ ಹೀಗೆ ಬರೆದಿದ್ದಾರೆ :

"ಚಿ........ನ ವಿಷಯಕ್ಕೆ ಚಿ. ಸೌ. ನ್ನ ೧೫ ದಿವಸ ಕರಕೊಂಡು ಹೋಗಿದ್ದನು. ಕಿತ್ತೂರಲ್ಲೇ ಇದ್ದಾನೆ. ಯಾವಾಗಾದರೂ ಬಂದು ಭೆಟ್ಟಿಯಾಗತಾನೆ. ಮೇಲೆ ಮೇಲೆ ಎರಡು ಮಾತು ಕೇಳತಾನೆ. ಬಹಳೇ ಅಡಚಣೆಯಲ್ಲಿದ್ದೇನೆ ವಗೈರೆ ಹೇಳತಾನೆ. ನಾಲ್ಕು ದುಡ್ಡು ಹುಟ್ಟಿಸುವ ವ್ಯವಸಾಯಕ್ಕೆ ಬೀಳವಲ್ಲ. ನಾಲ್ಕು ಮಕ್ಕಳು ಆಗಿ ಪ್ರಪಂಚವು ಭಾರವಾದದ್ದು ನಿಜ........ ಎಲ್ಲರನ್ನೂ ಮುಣಗಿಸಿ

೧ ಶಾಮಸುಂದರರಾಯರಿಗೆ ಬರೆದ ಪತ್ರ.

ದುಡ್ಡು ಮಾಡಿಕೊಂಡು ಕುಳಿತಾನೆ. ರಮೇಶನಿಗೆ ಕಳಿಸಲಿಕ್ಕೆ ಮತ್ತೆ ಬರತದೆ. ಮಂದೀ ದುಡ್ಡು ತಿಂದಲ್ಲೇ ಅನ್ನ ದಕ್ಕವಲ್ಲದು ಇಲ್ಲೇನು ಕಡಿಮೆಯಾಗಿದೆ (ಅಂತಾನೆ). ಈ ಸುದ್ದಿ ಹತ್ತಿದ ದಿವಸ ನನಗೆ ಚಳಿ ಬಂದು ಅತಿಶಯ ಅಶಕ್ತಿಯಾಯಿತು. ಪುನಃ ವಿಚಾರದಿಂದ ಸಮಾಧಾನ ಮಾಡಿಕೊಂಡೆನು."

೧೫–೪–೧೯೫೯ರ ಪತ್ರ :

"ನನ್ನ ಪ್ರಕೃತಿ ವಿಲಕ್ಷಣವಾಗಿದೆ. ಮುದ್ದಾಂ ಅಪಥ್ಯ ಮಾಡುವದಿಲ್ಲ. ಒಮ್ಮೆ ೮–೧೦ ದಿವ್ಸ ತಡೀತು ಅಂಬುವದರೊಳಗೆ ಕೆಡತದೆ. ಅನುಭವಿಸುವದರೊಳಗೆ ಇಷ್ಟು ದಿವ್ಸ ಹೀಗೆ ಹೋಯಿತು. ಅತಿ ಕಾಳಜಿಯಿಂದ.... ನೋಡಿ ಡಾಕ್ಟರ ಸಲ್ಲಾದಿಂದ ನನಗೆ ಮಾಡಿ ಹಾಕುವವರಾರು ? ಆದಷ್ಟು ತಿಂಬೋದು ಕಡಿಮೆ. ಮಾಡಿದ್ದರಲ್ಲೇ ಏನಾದರೂ ತಿಂಬೋದು. ಆದಷ್ಟು ಅಪಥ್ಯ ಆಗದಂತೆ ಮಾಡತೇನೆ. ಏನು ತಿನಬೇಕು ಬಿಡಬೇಕು ತಿಳಿಧಾಂಗ ಆಗತದೆ.''

೨೫–೧೧–೨೭ ರ ಶುಕ್ರವಾರ ಮುಂಜಾನೆ ೨ ಗಂಟೆಗೆ ಬರೆದ ಪತ್ರವಂತೂ ಆಘಾತಕರವಾಗಿದೆ. ರಾತ್ರಿ ಎದ್ದು ಕುಳಿತು ಬರೆದಿದ್ದಾರೆಂದ ಮೇಲೆ ಅವರ ಮನಸ್ಸಿಗೆ ಈ ಪ್ರಾಪಂಚಿಕ ತೊಂದರೆ ಎಷ್ಟಾಗಿರಬಹುದೆಂಬುದನ್ನು ಊಹಿಸಬಹುದು.

"ನಿಮ್ಮ ಯೋಜನೆ ನೀವು ಮಾಡಿಕೊಳ್ಳಿರಿ. ನಾನು ಒಂದು ರೂಪಾಯಿ ನಿಮಗೆ ತಿಳಿಯದೆ ಇಟ್ಟುಕೊಂಡಿದ್ದರೆ ದುರ್ವ್ಯಯ ಮಾಡಿದ್ದರೆ ನರಕ ವಾಸವೆ ಆಗಲಿ. ಇಲ್ಲದಿದ್ರೆ ಗೋಮಾಂಸ ತಿಂದಂತೆ. ನಿಮ್ಮ ವರ್ತನವು ಮಾತ್ರ ಖಾನಾವಳಿ ಮಾಲಕನಗೂಡ ಇದ್ದಷ್ಟು ಆದೆ ಅಂತಾ ತಿಳಿದು ಮನಸ್ಸಿನಲ್ಲಿ ಸಂತಾಪ ಬಡುತ್ತೇನೆ. ಇದನ್ನು ಬರಿಬಾರದು ಅಂದರೆ ಇಂದ ಯಾಕೋ ಬರೀಬೇಕು ಅನ್ನಿಸಿತು. ಇದು ನಿನ್ನ ಆರೋಗ್ಯಕ್ಕೆ ಧಕ್ಕೆ ತರದಿರಲಿ ಅಂತಾ ಮನಸಾ ದೇವರಿಗೆ ಬೇಡಿಕೊಳ್ಳುತ್ತೇನೆ. "ನನ್ನ ಮೂರು ಪಡವಿ ಇದ್ದು ನಾ ಬಡವಿ" ಅಂಬುವಂತಾಗಿದೆ. ೩ ದಾಗೀನ ಇದ್ದಾಕಿ ಒತ್ತೆಯಿಟ್ಟು ಅಳುತ್ತಿದ್ದಂತೆ. ೫ ಮಂದಿ ಮಕ್ಕಳು ಗಳಿಸುವರು. ಒಬ್ಬರು ಒಂದು ಪಗಾರ ನನ್ನ ಕಯ್ಯಾಗ ಒಂದು ಸಾರೆಯೂ ಕೊಡಲಿಲ್ಲ. ಗಳಿಸಿದ್ದರ ಲೆಕ್ಕ ಹೇಳಿಲ್ಲ. ನಾನೇನು ರಮೇಶನಿಗೆ ಹಸೆ ಬೇಡತಿದ್ದಿಲ್ಲ; ನೀವು ಕೊಡುತ್ತಾ ಇದ್ದಿಲ್ಲ. ಇರಲಿ.... ರಮೇಶನ ಕಾಳಜಿ ನಾನು ಮಾಡುವದೇ ಇಲ್ಲ. ನನ್ನ ಹೆಂಡತಿ ಸಾಯೂ ಮುಂದೆ........ನ್ನ ಕರೆದು ಹೇಳಿದ್ದಳು. ರಮೇಶನ ಜೋಕಿ ಅಂತಾ. ಅವನಿಗೆ ನೆನಪಿದ್ದಂತೆ ಮಾಡಲಿ. ಅವನಿಗೇ ಸ್ಟ್ರೇನ್ ಬಿದ್ದದೆ ಅಂತಾ ಮೇಲಿಂದ ಮೇಲೆ ಅನ್ನುತ್ತಾನೆ........ ಮನೀ ಕೊಳ್ಳುವಾಗ್ಗೆ ಜಠಾರ ಕಡಿಂದಾ ಕೈಗಡಾ ೫೦೦ ಇಸಕೊಳ್ಳುವಾಗ್ಗೆ ಆಗದಷ್ಟು ಸಂಕೋಚ ಊರಿಗೆ ಬರುವಾಗ....ನ ಕಡಿಂದಾ ೫ ರೂಪಾಯಿ ಬೇಡಲಿಕ್ಕೆ ನನಗೆ ಅನಿಸುತ್ತದೆ !.... ಕೈಗಡ ಇಸ ಕೊಡತೇನೆ ಅಂದನು. (ಇರಲಿಕ್ಕಿಲ್ಲ ಖರೆ, ಆದರೂ ಸ್ಥಿತಿ ಹೀಗದೆ.)''

ಈ ಪತ್ರಗಳನ್ನು ಓದಿದರೆ, ಕಾವ್ಯಾನಂದರ ಜೀವನದ ಸಂಧ್ಯಾಕಾಲ ಎಷ್ಟು ತೊಂದರೆಯಲ್ಲಿ ಸಾಗಿತು ಎಂಬ ಕಲ್ಪನೆ ಬರುತ್ತದೆ. ಇಷ್ಟಿದ್ದರೂ, ಅವರು ಕೊನೆಯವರೆಗೂ ನಗುಮುಖದಲ್ಲಿಯೇ ಇರುತ್ತಿದ್ದರು. ಗಂಧದ ಕೊರಡು ತನ್ನನ್ನೇ ತೇಯ್ದುಕೊಂಡು ಜನತೆಗೆ ಸುಗಂಧವನ್ನು ಕೊಡುವಂತೆ, ಕರ್ಪೂರ ತಾನೇ ಉರಿದುಕೊಂಡು, ಸುವಾಸನೆಯನ್ನು ಬೀರುವಂತೆ, ಸ್ವತಃ ತಾವು ಅನೇಕ ಕಷ್ಟನಿಷ್ಠುರಗಳನ್ನು ಕಂಡರೂ, ಸಮಾಜದ ಬಗೆಗೆ ಅವರ ಭಾವನೆ ಕಹಿಯಾಗಲಿಲ್ಲ. ಕಾಳಿಂಗಸರ್ಪ ತನ್ನ ವಿಷವನ್ನು ಯಮುನಾನದಿಯ ಮಡುವಿನಲ್ಲಿ ಬಿಟ್ಟಂತೆ, ತಮ್ಮ ಅನುಭವದ ಕಹಿಯನ್ನು ಸಮಾಜ ಜೀವನದಲ್ಲಿ ಅವರು ಎಂದಿಗೂ ಬಿಡಲಿಲ್ಲ. ಯೌವನದಲ್ಲಿ ಹಾರಿಬಿಟ್ಟ ಆದರ್ಶದ ಪಾರಿವಾಳಗಳು,

ವೃದ್ಧಾಪ್ಯದ ಗೂಡಿಗೆ ಬರುವದರಲ್ಲಿಯೇ, ಸೋತು, ಸತ್ತು ಸುಣ್ಣವಾಗಿ, ಗರಿ ಮುದುರಿಕೊಂಡು ಬಂದವು. ಅವುಗಳಲ್ಲಿ ಹಲವು ಸತ್ತೂ ಹೋದವು; ಹಲವು ಬದುಕಿಯೂ ಬದುಕದಂತೆ ಬದುಕಿದವು. ಉದಾಹರಣೆಗೆ ೧೬–೨–೧೯೧೮ರಂದು ಬರೆದ ಪತ್ರದಲ್ಲಿ ಹೀಗೆ ಹೇಳಿದ್ದಾರೆ :

"ಲೈನದ ಹತ್ತಿರ ೪೯ ನಂಬರದಲ್ಲಿ ವಿಶ್ವಾಮಿತ್ರಾಶ್ರಮ........ಪುಣೇಕರ ಬ್ರದರ್ಸ ಅಂತಾ ಒಂದು ಸಂಸ್ಥಾ ಹೊರಡಬೇಕು. ಈ ಹಳ್ಳಿ ಜನಸಂಖ್ಯೆ ಕೂಲಿಕಾರರದು ೧೦೦–೧೦೫ ಜನ ಅದೆ. ಅವರು ಅಲ್ಲಿ ಹೊಟ್ಟೆ ತುಂಬಿಕೋಬೇಕು. ಅಲ್ಲಿ ವಸಾಹತ ಆದರೆ, ಅ........ಸಮವಾಗಿ ಲಾಭವಾಗುವದು. ಸರಿವಿರ ಹೊಲದ ಮೇಲೆಲ್ಲಾ ಗದ್ದಿಗಳಾಗಬೇಕು. ಕೆರೆಗೆ ನಿದಾನ ೫೦೦ ಖರ್ಚಾಗಬೇಕು. ಮನಿ ನಾವು ಹಿಂದುಗಳ ಬಂದ ಕಾಮಕಾರರನ್ನು ಕೂಡಿಸಿಕೊಂಡು ಕೂಡುವಂತೆ ನಿಮ್ಮ ಯೋಗ್ಯತೆಗೆ ಸರಿಯಾಗಬೇಕು. ಹಣ್ಣುಹಂಪಲ ಗಿಡಗಳು ಅಶಕ್ಯವಿಲ್ಲ. ಈಗ ೨೫ ಬಾಳಿ ಗಿಡಾ ನೆಟ್ಟಾಗಿವೆ. ಬಾವಿ ನೀರಿದೆ. ಕಬ್ಬು ಈ ಸಾರೆ ೫ ಕಡೆ ಕೂಡಿ ೧೮ ಸಾವಿರ ಹಾಕತಾರೆ. ಮೇಲಿನ ಮಾತು ನಿಮಗೆ ಅಶಕ್ಯವಿಲ್ಲ. ನನ್ನ ಪ್ರಾರಬ್ಧದಲ್ಲಿ ಸ್ವಚ್ಛ ಮನಿಯಲ್ಲಿ ಕೂತು ಮಾಡಿದ ವಿಚಾರ ಪೂರ್ಣ ಆಗುವಂತಿಲ್ಲ. ಇರಲಿ, ನೀವಾದರೂ ಸುಶಿಕ್ಷಿತರೂ ಸ್ವಭಾವ ನೋಡಿಕೊಳ್ಳುವವರೂ ಆದಿರಿ. ಇದೇ ದೇವರ, ಹಿರಿಯರ ಕೃಪೆ."

ಇದಕ್ಕೂ ಹೆಚ್ಚು ತಮ್ಮ ಜೀವನ ಸ್ಥಿತಿಯನ್ನೇ ನಿರೂಪಿಸುವ ಹಾಗೆ ತಮ್ಮ ಚಿರಂಜೀವರಿಗೆ ೨೫–೧೧–೧೯೨೭ ರಂದು ಬರೆದ ಪತ್ರದಲ್ಲಿ ಹೀಗೆ ಹೇಳಿದ್ದಾರೆ :

"ಹಳ್ಳಿಯ ಪರಿಸ್ಥಿತಿ ಒಂದು ಪ್ರಕಾರದ್ದು. ವೇಳೆಗೆ ಕಾಳಿನ ಮಾರಾಟವಾಗುವದಿಲ್ಲ. ಕಯ್ಯಲ್ಲಿ ದುಡ್ಡುಯಿರುವದಿಲ್ಲ. ಯೋಗ್ಯ ಖರ್ಚು ಮಾಡುವದು (ಹೊಲಮನಿ ದುರಸ್ತಿಗ) ಬಿಡುವಂತಿಲ್ಲ.

ನನ್ನಲ್ಲಿ ಠೋಕ ತಾಳಿ ಔದಾರ್ಯವಿದ್ದರೂ ಕಿರುಕಳ ಜೀನತನವೇ ಅದೆ ಅನಿಸುತ್ತದೆ. ಯಾಕಂದರೆ ಮೊದಲಿನಿಂದೇ ಉಚ್ಚ ತರದ ರಹಣಿಯಿಲ್ಲ. ಹೆಚ್ಚಿನ ಖರ್ಚಿನ ರೂಢಿಯೇ ಇಲ್ಲ. ನನ್ನ ಸ್ವಂತಕ್ಕೆ ನಾಲ್ಕು ವರ್ಷ ಅಂಗೀ ಸಹ ಹೊಲಿಸಿಲ್ಲ. ಇಂದಿಗೂ ನನಗೂ ರಮೇಶನಿಗೂ ಕಾಲಲ್ಲಿ ಇಲ್ಲ. ಅಸಾಧ್ಯವೆಂತಲ್ಲ. ಮಾಡಿಕೊಳ್ಳುವದಾಗುವದಿಲ್ಲ."[೧]

ಹೀಗೆ ಜೀವನದ ದ್ವಂದ್ವಗಳನ್ನು ಬಾಳಿನುದ್ದಕ್ಕೂ ಎದುರಿಸಿದ ಕಾವ್ಯಾನಂದರು ಬಹಳ ದಿವಸ ಬದುಕಲಿಲ್ಲ. ಬೂದಿಹಾಳದ ಬಯಲು ಸೀಮೆಯ ಹವೆ ತಮಗೆ ಅನುಕೂಲವಾಗಬಹುದೆಂದು ಅಲ್ಲಿಗೆ ಹೋದ ಕಾವ್ಯಾನಂದರು ೧೯೨೯ರ ಅಗಸ್ಟ ೬ನೆಯ ದಿನಾಂಕದಂದು ಬೂದಿಹಾಳದಲ್ಲಿ ವೈಕುಂಠವಾಸಿಗಳಾದರು.

ಸನ್ ೧೯೨೯ರ ವಾಗ್ಭೂಷಣದಲ್ಲಿ ಕಾವ್ಯಾನಂದರ ನಿಧನದ ಬಗೆಗೆ ಹೀಗೆ ಬರೆದಿದೆ :

"ಈ ತಿಂಗಳಲ್ಲಿ ಒಂದರ ಹಿಂದೊಂದು ಶೋಕ ವಾರ್ತೆಯನ್ನು ಬರೆಯುವ ಪ್ರಸಂಗವು ಬಂದು ದಕ್ಕಾಗಿ ಬಲು ವಿಷಾದಪಡಬೇಕಾಗಿದೆ. ಆಚಾರ್ಯರು ಕಿತ್ತೂರಲ್ಲಿ ೧೮೭೦ನೇ ಇಸ್ವಿಯಲ್ಲಿ ಜನಿಸಿದರು. ಬಡತನದಲ್ಲಿ ಹುಟ್ಟಿದರು; ಬಾಲ್ಯದಲ್ಲಿಯೇ ವಿವಾಹವಾಯಿತು; ಪಿತೃವಿಯೋಗವಾಯಿತು; ಶಿಕ್ಷಣವು ಪೂರ್ಣವಾಗಲಿಲ್ಲ; ಆಗಲೇ ಕುಟುಂಬ ಪೋಷಣೆಯ ಭಾರವನ್ನು ಹೊರಬೇಕಾಯಿತು. ಇಂತಹ ವಿರುದ್ಧ ಪರಿಸ್ಥಿತಿಯ ಕೂಡ ಹೋರಾಡಿ ಆಚಾರ್ಯರು ಅತುಲ ಕೀರ್ತಿಯನ್ನು ಸಂಪಾದಿಸಿದರು.

೧ ಶಾಮಸುಂದರರಾಯರ ಪತ್ರ ಸಂಗ್ರಹ.

ಹಿಂದಕ್ಕೆ ಕೊಲ್ಹಾಪುರದಲ್ಲಿ ಕೂಡಿದ ಪಂಡಿತರ ಸಭೆಯಲ್ಲಿ ಸಮಸ್ಯೆಯನ್ನು ಪೂರ್ಣ ಮಾಡಿದ ಪಂಡಿತರಲ್ಲಿ ಶ್ರೇಷ್ಠರೆಂದು ನಿರ್ಣಯವಾದದ್ದರಿಂದ ಇವರಿಗೆ "ಕಾವ್ಯಾನಂದ''ರೆಂಬ ಬಿರುದು ಕೊಡಲ್ಪಟ್ಟಿತು. ೧೯೨೬ನೇ ಇಸ್ವಿಯಲ್ಲಿ ಕಲಕತ್ತೆಯ ನಿಖಿಲ ಸಾಹಿತ್ಯ ಸಂಘದವರು ಇವರ ಪಾಂಡಿತ್ಯ, ಸಾಹಿತ್ಯಸೇವೆ, ಶೋಧಕಬುದ್ಧಿ ಇವುಗಳನ್ನು ನೋಡಿ ಅವರಿಗೆ 'ವಿದ್ಯಾವಾಚಸ್ಪತಿ, ಕಾವ್ಯರತ್ನಾಕರ' ಎಂಬ ಬಿರುದುಗಳನ್ನು ಕೊಟ್ಟು ಸನ್ಮಾನಿಸಿದರು.

ವಾಗ್ಭೂಷಣದ ವಾಚಕರಿಗೆ ಕಾವ್ಯಾನಂದರು ಅಪರಿಚಿತರಲ್ಲ. ಅವರ ಕವಿತೆಗಳೂ ಬರಹಗಳೂ ಯಾವಾಗಲೂ ಸರಳ ಶೈಲಿ, ಉದಾತ್ತ ವಿಚಾರ, ಉಜ್ವಲ ಪ್ರತಿಭೆಗಳಿಂದಲೂ ಪ್ರತ್ಯಾಕ್ಷಾಪ್ರತ್ಯಕ್ಷ ರೀತಿಯಿಂದ ಹಾಸ್ಯರಸಯುಕ್ತವಾಗಿಯೂ ಪ್ರಜ್ವಲಿಸುತ್ತಿದ್ದವು.

ಇಂತಹ ಪ್ರತಿಭಾ ಸಂಪನ್ನ ಲೇಖಕರೂ ಸಾಹಿತ್ಯ ಭಕ್ತರೂ ಬಹುಶ್ರುತ ಕವಿಗಳೂ ಪುರಾಣಪಟುಗಳೂ ದೇಶಭಕ್ತರೂ ವಕ್ತಾರರೂ ಆದ ಒಬ್ಬ ಮಹನೀಯರನ್ನು ಇಂದು ಕರ್ನಾಟಕ ದೇಶವು ಕಳೆದುಕೊಂಡಂತಾಯಿತು.

ಜಗದೀಶ್ವರನು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ.''

ಕಾವ್ಯಾನಂದರ ಕೃತಿಗಳು :

ಸಭಾರಂಜನಶತಕ
ಸಾದೀ ಸುಭಾಷಿತ
ಕಲಿವಿಲಾಸ
ಬಿಡಿ ಕವನಗಳು
ಗೃಹಿಣೀಭೂಷಣ
ಮೃತ್ತಿಕಾವೃಷಭಪೂಜಾ (ಸಂಸ್ಕೃತದಲ್ಲಿ)
ಧನವಂತನೇ ಬಲವಂತನು
ಪ್ರಶ್ನೋತ್ತರ ಮಾಲಿಕಾ
ಸತ್ಯನಾರಾಯಣ ಕಥಾ
ಚಾಣಕ್ಯ ಶತಕ
ದುರ್ಗಾವತರಣ ಸ್ತೋತ್ರ
ಗೃಹವೈದ್ಯಕ
ಮಗನಿಗೆ ತಂದೆಯ ಪತ್ರ
ಗರುಡಚೂರ್ಣಮಹಾತ್ಮೆ
ಬಾಲರಂಜನ

ಇವುಗಳಲ್ಲಿ ಕೆಲವು ಬಿಡಿ ಲೇಖಗಳೂ ಆಗಿರಬಹುದು. ಇವುಗಳಲ್ಲಿ ಅನೇಕ ಗ್ರಂಥಗಳು ಸನ್ ೧೯೩೦ರಲ್ಲಿ ಸರಕಾರದಿಂದ ಜಪ್ತು ಮಾಡಲ್ಪಟ್ಟವು.

ಸಭಾರಂಜನ ಶತಕವು (೧೯೧೧) :

ಮೂವತ್ತೆರಡು ಪುಟದ ಈ ಚಿಕ್ಕ ಪುಸ್ತಿಕೆಯು ಧಾರವಾಡದ ಕರ್ನಾಟಕ ಬುಕ್ ಡಿಪೋ ಪ್ರೆಸ್‌ದಲ್ಲಿ ಮುದ್ರಿತವಾಗಿ ಸನ್ ೧೯೧೧ ರಲ್ಲಿ ಪ್ರಕಟವಾಯಿತು. ಇದನ್ನು ರಾವಬಹದೂರ ರುದ್ರಗೌಡಾ ಚನವೀರಗೌಡಾ ಅರಟಾಳ, ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರ, ಬೆಳಗಾವ ಇವರಿಗೆ "ಅವರಲ್ಲಿರುವ ವಿದ್ಯಾಭಿರುಚಿಯನ್ನೂ ರಸಿಕತೆಯನ್ನೂ ಗುಣಗ್ರಹಣಲಾಲಸೆಯನ್ನೂ ಮನಸಿನಲ್ಲಿ ತಂದು ಅವರ ಅಪ್ಪಣೆಯನ್ನು ಪಡೆದು'' ಅರ್ಪಿಸಲಾಗಿದೆ. ಇದನ್ನು ಚಚಡಿಯಲ್ಲಿದ್ದಾಗ ಲೇಖಕರು ಬರೆದಿದ್ದಾರೆ.

೧೭ನೆಯ ಶತಮಾನದ ಪೂರ್ವಾರ್ಧದಲ್ಲಿ ಆಗಿಹೋದ ನೀಲಕಂಠ ದೀಕ್ಷಿತರು 'ಅನ್ಯಾಪದೇಶ

ಶತಕ', 'ಕಲಿವಿಡಂಬನ ಶತಕ', 'ಸಭಾರಂಜನಶತಕ', 'ಗಂಗಾವತರಣ', 'ನೀಲಕಂಠ ವಿಜಯ', 'ಶಾಂತಿವಿಲಾಸ' ಮತ್ತು 'ಶಿವಲೀಲಾವರ್ಣನ' ಎಂಬ ಗ್ರಂಥಗಳನ್ನು ಸಂಸ್ಕೃತದಲ್ಲಿ ಬರೆದರು. ಪ್ರಸ್ತುತ ಚಿಕ್ಕ ಪುಸ್ತಿಕೆಯು ಇದರಲ್ಲಿಯ 'ಸಭಾರಂಜನ ಶತಕ' ಎಂಬುದರ ಕನ್ನಡಾನುವಾದವಾಗಿದೆ. ನೀಲಕಂಠ ದೀಕ್ಷಿತರು ಇತರ ಸಾಮಾನ್ಯ ಕವಿಗಳಂತೆ ಕೇವಲ ಶೃಂಗಾರರಸವನ್ನು ಮಾತ್ರ ವಿವರಿಸದೆ, ತಮ್ಮ ಕಾವ್ಯದಲ್ಲಿ ದೇಶಭಕ್ತಿ, ಶಾಂತಿ ಮತ್ತು ಸಮಾಜ ಶಿಕ್ಷಣಗಳನ್ನು ತಿಳಿಸುವ ಕೃತಿಗಳನ್ನು ರಚಿಸಿದರು. ಮೂಲದ ಅನುಷ್ಟುಪ್ ಛಂದಸ್ಸನ್ನು ತ್ರಿಪದಿ, ಭಾಮಿನಿ, ಷಟ್ಪದಿ, ಕಂದಗಳ ಮೂಲಕ ಭಾಷಾಂತರಿಸಲಾಗಿದೆ. ಪ್ರಸ್ತಾವನೆಯಲ್ಲಿ ಸ್ವ-ವಿಷಯಕವಾಗಿ ಲೇಖಕರು ಹೀಗೆ ಹೇಳಿದ್ದಾರೆ :

"ಗುರುಕುಲವಾಸ, ವಿದ್ವತ್ಸಹವಾಸವಿಲ್ಲದೆ ಹಳ್ಳಿಯಿಂದ ಕವಿಯಾಗಿ ಹೊರಬಿದ್ದ ನಮ್ಮ ಕೃತಿಯಲ್ಲಿ ಎಷ್ಟೋ ತಪ್ಪುಗಳಿರಬಹುದು. ಸೂಜ್ಞರು ಗುಣಗ್ರಹಣ ಮಾಡಿ ದೋಷಗಳನ್ನು ತಿಳಿಸಿದಲ್ಲಿ ಅವರ ಉಪಕಾರವನ್ನು ಸ್ಮರಿಸುತ್ತೇವೆ."[೧]

ಪ್ರಾರಂಭದ ಮಂಗಳ ಪದ್ಯದಲ್ಲಿ—

ನರಹರಿಚರಣರಜಸ್ಸಮ
ನರಸಿಂಹನು ಭಾರತೀಶ ದಯೆಯಿಂದೆಯ್ದೆ
ಸರಸಕವೀಶರ ಕೃಪೆಯಂ
ಸ್ಮರಿಸುತ್ತೆ ವಿವರಿಸುವ ನೀಲಕಂಠನ ಕೃತಿಯಂ ॥

–ಎಂದು ತಮ್ಮ ಪಿತಾಮಹರಾದ ನರಹರಿಯಾಚಾರ್ಯ, ಮತ್ತು ತಾಯಿ ಭಾರತೀಬಾಯಿಯವರನ್ನು ದೇವರ ಸ್ತುತಿಯ ಜತೆ ಸ್ಮರಿಸಿದ್ದಾರೆ.

ಗ್ರಂಥದ ಕೊನೆಯಲ್ಲಿ–

ಶಾಲಿವಾಹನ ಶಕದಿ ಪದಿನೆಂಟು ನೂರ್ತುಂಬಿ
ಮೇಲೆ ಮೂವತ್ತನೆಯ ವತ್ಸರವು ಬರುತಿರಲ್
ಕೀಲಕಾಖ್ಯವು ಕೊನೆಗೆ ಫಾಲ್ಗುಣದಿ ಶುಕ್ಲ ಸಪ್ತಮಿ ಶುಕ್ರವಾಸರದೊಳು
ನೀಲಕಂಠರ ಶತಕ ಕನ್ನಡದ ಜನರಿಗನು
ಕೂಲವಾಗಲು ಬಯಸಿ ತರತರದ ವೃತ್ತಗಳ
ಮಾಲೆಯನು ರಚಿಸಿದನು ನರಸಿಂಹಕವಿ ಮನಕ್ಕಾನಂದವೀಯೆ ಗುಣದಿ ॥ [೨]

ಎಂದು ಹೇಳುತ್ತಾರೆ. ಅನುವಾದದಲ್ಲಿ ಮೂಲದಲ್ಲಿಲ್ಲದ ಎಷ್ಟೋ ಮಾತುಗಳೂ, ಸ್ವತಂತ್ರ ವಾಕ್ಯಗಳೂ ಬರುತ್ತವೆ. ಎಷ್ಟೋ ಸಲ ಮೂಲದಲ್ಲಿ ಗುತ್ತಾಗಿ ಬರುತ್ತಿರುವ ಸಾಲುಗಳು ಇಲ್ಲಿ ವಾರ್ಧಿಕ ಇಲ್ಲವೆ ಭಾಮಿನಿ ಷಟ್ಪದಿಯ ರೂಪವನ್ನು ಪಡೆದು, ವಿಸ್ತಾರ ಹೊಂದಿ, ಶಿಥಿಲವಾಗುವಂತೆ ಕಾಣುತ್ತವೆ. ಈ ಅನುವಾದವನ್ನು ನೋಡಿದಾಗ ಕಾವ್ಯಾನಂದರ ಪ್ರತಿಭೆ ಅನುವಾದಕ್ಕಿಂತ, ಸ್ವೋಪಜ್ಞ ಕೃತಿರಚನೆಗೆ ಹೆಚ್ಚು ಸೂಕ್ತವಾಗಿತ್ತೆಂದು ಹೇಳಬೇಕಾಗುತ್ತದೆ. ಇಲ್ಲಿಯ ಹಲವು ಪದ್ಯಗಳ ಅನುವಾದವನ್ನು ನೋಡಬಹುದು :

೧ ಸಭಾರಂಜನ ಶತಕ : ೧೯೧೧ : ಪು. ೨.
೨ ಸಭಾರಂಜನ ಶತಕ : ೧೯೧೧ : ಪು. ೩೨.

ಮೂಲ :

ಉದ್ಯಂತು ಶತಮಾದಿತ್ಯಾ ಉದ್ಯಂತು ಶತಮಿಂದವಃ
ನವಿನಾ ವಿದುಷಾಂ ವಾಕ್ಯೈರ್ನಶ್ಯಂತಿ ಅಭ್ಯಂತರಂ ತಮಃ ॥

ಅನುವಾದ :

ನೂರು ಸೂರ್ಯರು ನೂರು ಚಂದ್ರರು
ಸೇರಿಯುದಯಿಸೆ ನಾಶಗೆಯ್ವರೆ
ದೂರವಡಗಿಹ ಮೂಢಚಿತ್ತದ ಘೋರಕತ್ತಲೆಯ
ಚಾರುವಿದ್ಯೆಯ ಪಾರಗಂಡಿಹ
ಧೀರಜನರುಪದೇಶದೀಪವೆ
ಕಾರಣವು ತಾರಿಸಲು ಸಂಸಾರಾಂಧಕಾರವನು ॥

ಕವಿ ಪ್ರಶಂಸೆ :

ಸಂತು ಅಶ್ವಾಃ ಸಂತುಮಾತಂಗಾಃ ಸಂತು ಯೋಧಾಃ ಸಹಸ್ರಶಃ
ನರೇಂದ್ರಾಣಾಂ ವಿಶೇಷೇಣ ನ ವಿನಾ ಕವಿನಾ ಯಶಃ ॥

ಸಾವಿರ ಕುದುರೆಯುಮಾನೆಯು
ಸಾವಿರ ಕಾಲಾಳು ಸೈನ್ಯಮಿರುತಿರೆ ದೊರೆಗೆ
ಧಾವಿಸಿ ಬಾರದು ಕೀರ್ತಿಯು
ಸೇವಿಸದಿರೆ ಕವಿಯ ಸವಿಯ ಮಾತಿನ ಝರಿಯಂ ॥

ಕವಿಗಳು ಎಂಥ ಸೋತವರನ್ನೂ ಎತ್ತಿ ಹಿಡಿಯಬಲ್ಲರು ! ಕವಿಗಳಿಂದ ಇವರು ಅಜರಾಮರರು !

ದೈವ ಎಲ್ಲಕ್ಕಿಂತ ಹೆಚ್ಚಿನದು. ನತದೃಷ್ಟ ಎಷ್ಟು ಸಾಹಸಿಯಾದರೇನು ?

ಕಿಂ ಶಾಸ್ತ್ರೈಃ ಬಹುಧಾಭ್ಯಸ್ತೈಃ ಕಿಂ ಚಾತುರ್ಯೇಣ ಕಿಂ ಧಿಯಾ
ಕಿಂ ಶೌರ್ಯೇಣ ಲಲಾಟೇ ಚೇನ್ನ ಲಿಖ್ಯತೆ ॥

ಕಾಲ ಹೆಚ್ಚಿನದು ! ಅದರ ಮಹಿಮೆ ಅಪಾರ !

ಕಾಲಃ ಕರೋತಿ ಕಾರ್ಯಾಣಿ ಕಾಲ ಏವ ವಿಹಂತಿ ಚ
ಕರೋಮೀತಿ ವಿಹನ್ಮೀತಿ ಮೂರ್ಖೋ ಮುಹ್ಯತಿ ಕೇವಲಮ್ ॥

ಶ್ರೀ ಸತ್ಯನಾರಾಯಣ ಕಥೆಯು (೧೯೨೯) :

ಹನ್ನೊಂದು ಪುಟದ ಈ ಚಿಕ್ಕ ಪುಸ್ತಿಕೆಯನ್ನು ಕೃಷ್ಣಾಜಿ ತುಕ್ಕೋ ಕುಲಕರ್ಣಿಯವರು ಸನ್ ೧೯೨೮ರಲ್ಲಿ ಪ್ರಸಿದ್ಧಿಸಿದರು. ಇದರಲ್ಲಿ ಶ್ರೀ ಸತ್ಯನಾರಾಯಣ ಕಥೆಯನ್ನು ಹಾಡಿನ ರೂಪದಲ್ಲಿ ಹೇಳಿದೆ. ಪ್ರತಿ ಅಮಾವಾಸ್ಯೆ ಹುಣ್ಣಿಮೆಯಂ ದಿನ ಸಂಸ್ಕೃತದಲ್ಲಿ ಮಾತ್ರ ಸತ್ಯನಾರಾಯಣ ಕಥೆಯನ್ನು ಕೇಳುತ್ತಿರುವವರಿಗೆ ಸುಲಭವಾದ ಕನ್ನಡ ಶೈಲಿಯಲ್ಲಿ ಮೂಲಕ್ಕೆ ಬಾಧೆ ಬರದ ಹಾಗೆ ಕಥೆಯನ್ನು ವಿವರಿಸಲಾಗಿದೆ.

"ಸದ್ಯಕ್ಕೆ ದೇಶ ಭಾಷೆಗಳ ಉನ್ನತಿಯ ಬಗ್ಗೆ ಎಲ್ಲ ಕಡೆಯಲ್ಲಿ ಯತ್ನ ನಡೆದಿದೆ. ಮತ್ತು ಈ

ಉನ್ನತಿಯು ಏಕದೇಶೀಯವಾಗದೆ ಸರ್ವತೋಮುಖವಾಗಲಿಕ್ಕೆಬೇಕು. ಹೂವಿಲ್ಲದಿದ್ದರೂ ಹೂವಿನ ಪಕಳಿಯಂತಿರುವ ಈ ಚಿಕ್ಕ ಪುಸ್ತಕವನ್ನು ಪ್ರಕಟಿಸಿ ಕರ್ಣಾಟಕಾಂಬೆಯ ಅಡಿದಾವರೆಗೆ ಅರ್ಪಿಸುವೆವು" ಎಂದು ಲೇಖಕರು ಹೇಳಿದ್ದಾರೆ.

ಶ್ರೀಯುತರ ಶೈಲಿಯ ಲಾಲಿತ್ಯದ ದೃಷ್ಟಾಂತವಾಗಿ ಕಲಾವತಿಯ ಕಥೆಯ ಭಾಗವನ್ನು ಕೊಡಬಹುದು :

"ಸತ್ಯನಾರಾಯಣನ ಮಾಯವೇ ಅಂತಹದು
ಅತ್ಯಂತ ಹಲುಬಿದರು ಕೇಳಲಿಲ್ಲಾ
ಇತ್ತ ಲೀಲಾವತೀ ವಿತ್ತವೆಲ್ಲವು ಹೋಗೆ
ಮತ್ತು ಕೂಳಿಗೆ ಕಷ್ಟ ಬಂದಿತಾಗ

ಗಂಡ ಮಾಡಿದ ಪಾಪ ಹೆಂಡತಿಗೆ ತಪ್ಪುವದೆ ?
ಕಂಡಕಂಡವರಿಗೂ ಕೈಯೊಡ್ಡುತೆ
ಅಂಡೊಲಿಯುತಿರೆ ತಾಯಿ ಮಕ್ಕಳೂ ದುಃಖದಿ
ಕಂಡು ನಕ್ಕರು ಪುರದ ದುಷ್ಟ ಜನರು

ಮತ್ತೊಂದು ದಿನ ಕುವರಿ ಹೊತ್ತು ಮುಳುಗುವ ಸಮಯ
ಬತ್ತಿ ಬಳಲುತ ಹಸಿದು ನೀರಡಿಸುತಾ
ಅತ್ತಿತ್ತ ತಿರುಗಾಡಿ ಬ್ರಾಹ್ಮಣೋತ್ತಮನಲ್ಲಿ
ಮುತ್ತೈಯ್ದೆಯರ ಗುಂಪು ಕಂಡಳಾಗ

ಸತ್ಯನಾರಾಯಣ ಕಥೆಯು ಕರ್ಣಕೆ ಬೀಳೆ
ಅತ್ಯಂತ ಹರ್ಷದಿಂ ಕೂತು ಕೇಳಿ
ಇತ್ತ ಪ್ರಸಾದವನು ತಿಂದು ತಾಯಿಗೆ ತಂದು
ನಿತ್ಯದಕ್ಕಿಂತಲೂ ಹೊತ್ತು ಮಾಡೆ

ಪುತ್ರಿ ತಡವ್ಯಾಕಿಷ್ಟು ರಾತ್ರಿಯಾಯಿತು ನೋಡು
ಚಿತ್ತದಲ್ಲೇನಿದೆ ತಿರುಗಿದೆಲ್ಲಿ ?
ಒತ್ತಿಯಾಡಿದ ನುಡಿ ಕೇಳಿ ತಾಯಿಯ ಮುಂದೆ
ಸತ್ಯನಾರಾಯಣಗೆ ಇಂತೆಂದಳು

–ನಾರಾಯಣ ಸತ್ಯನಾರಾಯಣ. ೧

ಚಾಣಕ್ಯ ಶತಕ, ಕಲಿ ವಿಲಾಸ, ವಿರಹಿ ವಿಹಂಗವು :

ಈ ಪುಸ್ತಕಗಳು ನೋಡಲು ಸಿಗಲಿಲ್ಲ. ಇವುಗಳ ಜಾಹೀರಾತು ಸತ್ಯನಾರಾಯಣ ಕಥೆಯ ಪುಸ್ತಕದ ರಕ್ಷಾಕವಚದ ಹಿಂಬದಿಯಲ್ಲಿ ಪ್ರಕಟವಾಗಿದೆ.

ಸಾದಿ ಸುಭಾಷಿತ :

ನೋಡಲು ದೊರಕಲಿಲ್ಲ.

೧ ಸತ್ಯನಾರಾಯಣ ಕಥೆಯು : ೧೯೨೬ : ಪು. ೬–೭.

ಶ್ರೀಯುತರು ಬರೆದ 'ಕಂಗಾಲ ವೈದಿಕರು', 'ಕಸಬರಿಗೆಯ ಆತ್ಮವೃತ್ತಾಂತ' ಮೊದಲಾದ ಕವನಗಳು ಒಂದು ಕಾಲಕ್ಕೆ ತುಂಬಾ ಜನಪ್ರಿಯವಾಗಿದ್ದು, ಈ ಕೆಳಗಿನ ಪದ್ಯದಲ್ಲಿ ಕಸಬರಿಗೆ ತನ್ನ ಬಗೆಗೆ ಹೀಗೆ ಹೇಳಿಕೊಳ್ಳುತ್ತದೆ :

"ತರತರ ಮನಿಮಾನೀ ಕಡ್ಡಿಯಿಂ ಕಾಂತಿಯಿಂದಂ
ಕೊರೆದ ಬಿದುರಿನಿಂದಂ ದಾಗುಡೀ ಬಳ್ಳಿಯಿಂದಂ
ಕರಡೆಯ ತೊಗಲಿಂದಂ ದೇಶ ಕಾಲಾನುಸಾರಂ
ಕೊರವರ ಕರದಲ್ಲಿ ಬೋರಗೀ ಜನ್ಮವಾಯ್ತು"

ಗೃಹವೈದ್ಯಕವು (?) :

ಇದು ಕ್ರಮಶಃ ವಾಗ್ಭೂಷಣದಲ್ಲಿ ಪ್ರಕಟವಾಯಿತು. ಇದರ ಒಟ್ಟು ಪುಟಸಂಖ್ಯೆ ೮೦. ವೈದ್ಯರು ಹೇಗಿರಬೇಕೆಂದು ಲೇಖಕರು ಹೇಳುವಲ್ಲಿ ಅವರ ಅಭ್ಯಾಸವನ್ನೂ, ವ್ಯವಹಾರ ಕುಶಲತೆಯನ್ನೂ ಕಾಣುತ್ತೇವೆ.

ವೈದ್ಯ–

ಗುರೋಃ ಅಧೀತ ಕಿಲ ವೈದ್ಯವಿದ್ಯಃ
ಪೀಯೂಷಪಾಣಿಃ ಕುಶಲಃ ಕ್ರಿಯಾಸು
ಗತಸ್ಪೃಹೋ ಧೈರ್ಯಧುರಃ ಕೃಪಾಳುಃ
ಶುದ್ಧೋಧಿಕಾರೀ ಭಿಷಗ್ ಈದೃಶಃ ಸ್ಯಾತ್ ॥[೧]

ಇಂಥವರು ಪಿತೃಸಮಾನರು :

ಜನಿತಾ ಚ ಉಪನೇತಾ ಚ ಯಶ್ಚ ವಿದ್ಯಾಂ ಪ್ರಯಚ್ಛತಿ
ಅನ್ನದಾತಾ ಭಯತ್ರಾತಾ ಪಂಚೈತೇ ಪಿತರಃ ಸ್ಮೃತಾಃ ॥

ವೈದ್ಯ ನೋವನ್ನು ಕಳೆಯಬಲ್ಲನು; ಆಯುಷ್ಯವನ್ನು ಉಳಿಸಲಿಕ್ಕೆ ಸಾಧ್ಯವಿಲ್ಲ :

ವ್ಯಾಧೇಃ ತತ್ವಪರಿಜ್ಞಾನಂ ವೇದನಾಯಾಶ್ಚ ನಿಗ್ರಹಃ
ಏತದ್ ವೈದ್ಯಸ್ಯ ವೈದ್ಯತ್ವಂ ನ ವೈದ್ಯಃ ಪ್ರಾಣರಕ್ಷಕಃ ॥

ಮರಾಠಿಯಲ್ಲಿ ಹೇಳುವ "ಕೋಠೇ ಮಿಳೇನಾ ಭೀಕತರ, ವೈದ್ಯಕೀ ಶೀಕ" ಎಂಬ ರೀತಿಯಲ್ಲಿ ವೈದ್ಯಕವನ್ನು ಕಲಿತವರ ಹತ್ತಿರ ಹೋಗಬಾರದು. ಅವರು ಗಂಡಾಂತರಕಾರಿಗಳು. ಅಂದಿನ ಕಾಲದ ವೈದ್ಯಕದ ಬಗೆಗೆ ಸಮಗ್ರ ಪರಿಚಯ ಮಾಡಿಕೊಡುವ ಗ್ರಂಥವಿದು.

ಇತರ ಸಂಶೋಧನಾತ್ಮಕ ಪ್ರಬಂಧಗಳು :

ಇವುಗಳಲ್ಲಿ ಶ್ರೀಯುತರು ಬರೆದ 'ಒಂದು ತಾಮ್ರಶಾಸನ', 'ಪ್ರಾಚೀನ ನಾಗರಿಕತೆ', 'ಸಂಗೊಳ್ಳಿ ರಾಯಣ್ಣ', 'ನಾಗರಪಂಚಮಿ', 'ಸಾಲವೂ ಅನಾದಿಯೇ ?', 'ಶ್ರಾವಣ ಸೋಮವಾರ', 'ಅಷಾಡ ಪೆಂಟಿ', 'ನಮಃ ಪಂಚಮರಸಾಯ' ಮೊದಲಾದುವನ್ನು ಹೇಳಬಹುದು.

---

೧ ಗೃಹವೈದ್ಯಕವು : ಪು. ೧೮.

'ಶಾರದೆ' ಪತ್ರಿಕೆಯಲ್ಲಿ ಪ್ರಕಟವಾದ ಅವರ 'ಕಿತ್ತೂರ ದೇಸಗತಿ' ಎಂಬ ಪ್ರಬಂಧ ಪಾಂಡಿತ್ಯ ಪೂರ್ಣವಾದುದು. ಲೇಖಕರ ಮೇರೆಗೆ ವಿಜಾಪುರ ಬಾದಶಹರ ಕಾಲಕ್ಕೆ ಹದಿನಾರನೆಯ ಶತಮಾನದ ಅಂತ್ಯದಲ್ಲಿ ಮುಸಲ್ಮಾನ ಸೈನ್ಯಕ್ಕೆ ಆಹಾರ-ಸಾಮಗ್ರಿಯನ್ನು ಪೂರೈಸಲು ಚಿಕ್ಕಮಲ್ಲಪ್ಪ ಮತ್ತು ಹಿರಿಯಮಲ್ಲಪ್ಪ ಎಂಬ ಇಬ್ಬರು ಸಾಗರ ಪ್ರಾಂತದ ಬಣಜಿಗರು ಕಿತ್ತೂರ ಭಾಗಕ್ಕೆ ಬಂದರು. ಅವರೇ ಕಿತ್ತೂರ ದೇಸಗತಿಯನ್ನು ಮುಂದೆ ತಂದರು.

ಲೇಖಕರ ಪ್ರಕಾರ ಮಲ್ಲಸರ್ಜನನ ಮೊದಲನೆಯ ಹೆಂಡತಿಯು ತಲ್ಲೂರ ದೇಸಾಯರ ಮನೆತನ ದವಳು. "ಎರಡನೆಯವಳಾದ ಚೆನ್ನವ್ವನು ಒಳ್ಳೆಯ ರೂಪವತಿಯೂ ಚತುರಳೂ ಶೂರಳೂ ಆಗಿದ್ದಳು. ಅವಳು ಬಾಗಲಕೋಟೆಯ ಶೆಟ್ಟರ ಮಗಳೆಂದು ಹೇಳುತ್ತಾರೆ." "ಶ್ರೀರಂಗಪಟ್ಟಣದ ಲಾಲಬಾಗದ ಗೋಡೆಯ ಮೇಲೆ ಈ ಚೆನ್ನವ್ವನ ಚಿತ್ರವಿದೆ. ಪ್ರವಾಸಿಗಳಿಗೆ ಕಿತ್ತೂರ ಚೆನ್ನವ್ವನೆಂದು ತೋರಿಸಲ್ಪಡುತ್ತಿದೆ."

ಶ್ರೀಯುತರು ಬರೆದ 'ಛತ್ರಪತ್ರಗಳ ಸಂವಾದ' (ವಾಗ್ಭೂಷಣ : ಜುಲೈ-ಅಗಸ್ಟ ೧೯೨೦ : ಪು. ೫೦), 'ಬದನೇಕಾಯಿಯ ಕಬೂಲಿ ಜವಾಬು' (ಶಾರದೆ : ೧೯೨೭ : ಪು. ೭೪), 'ಗುಂಡ್ಯಾನ ಸತ್ಯನಾರಾಯಣ' (ಶಾರದೆ : ೧೯೨೭ : ಪು. ೧೯) ಮೊದಲಾದುವು ಅವರು ಬರೆದ ಸುಂದರವಾದ ಲಘು ಪ್ರಬಂಧಗಳಾಗಿವೆ.

ಕಾವ್ಯಾನಂದರ ಕವನಗಳ ವೈಶಿಷ್ಟ್ಯಗಳು :

ಮೊದಲನೆಯದಾಗಿ, ಕಾವ್ಯಾನಂದರು ಪ್ರಾಸದ ತ್ರಾಸವು ಕಾವ್ಯದಲ್ಲಿ ಇರಬಾರದೆಂದು ಹೇಳಿದರು. ಅಲ್ಲದೆ, ಆ ರೀತಿಯಲ್ಲಿ ಅನೇಕ ಕವನಗಳನ್ನು ಬರೆದರು. 'ಅಪ್ಪಾ ಜಾತರಿ ಧೋತರೋ' ಮೊದಲಾದ ಕವನಗಳಲ್ಲಿ ಇದನ್ನು ಕಾಣುತ್ತೇವೆ. ಅಂತಲೇ ವಲ್ಲಭ ಮಹಲಿಂಗ ತಟ್ಟಿಯವರು ಕಾವ್ಯಾನಂದರ ಬಗೆಗೆ ಹೀಗೆ ಹೇಳಿದರು :

ಪ್ರಾಸತ್ರಾಸಕೆ ತೊಡಕದೆ
ದೇಶದೊಳೀಗಿರ್ದ ಕನ್ನಡದ ನುಡಿಬಿಡದೆ
ಮೋಸದಿ ಕದಿಯದೆ ಪರಪದ
ಮೀಸಲ ಕಲ್ಪನೆಯನೀವ ಕಾವ್ಯಾನಂದಂ

ಎರಡನೆಯದಾಗಿ, ಕಾವ್ಯಾನಂದರ ಕಾವ್ಯಕಲ್ಪನೆ ಆಧುನಿಕವೂ ಸುಂದರವೂ ಆಗಿದೆ. ಅವರ ಮೇರೆಗೆ ಕವಿತೆ ಕುಸುರಿನಿಂದ ಕೂಡಿರಬೇಕು. ಮಂಡಿಗೆಯಲ್ಲಿಯಂತೆ ಸಿಹಿ ಹೊರಗೆ ಕಾಣದೆ ಒಳಗೆ ಹುದುವು ತುಂಬಿರಬೇಕು. ರಸವತ್ಕವಿತೆ ಎಲ್ಲರಿಗೂ ಸೇರುತ್ತದೆ ಎಂಬುದು ಅವರ ಅಭಿಪ್ರಾಯ.

ಮೂರನೆಯದಾಗಿ, ಅವರಲ್ಲಿ ಸಮಕಾಲೀನ ಪ್ರಜ್ಞೆ ಇತ್ತು. ಇದು 'ಸಂತೆ', 'ಕವಿಯೂ ಸಾವಕಾರನೂ', 'ದೀಪದ ಕಡ್ಡಿ', 'ಜಹಗೀರದಾರರ ಊರು', 'ಭಾರತಿಯೂ ಭಾಮಿನಿಯೂ' ಮೊದಲಾದ ಕವನಗಳಲ್ಲಿ ಕಾಣುತ್ತೇವೆ.

ನಾಲ್ಕನೆಯದಾಗಿ, ಅವರ ಅನೇಕ ಕವನಗಳಲ್ಲಿ ವಿನೋದ, ವ್ಯಂಗ್ಯ ಮತ್ತು ಕಟಕಿಗಳನ್ನು ಕಾಣುತ್ತೇವೆ. ಸ್ವೈರಾಚಾರಿಣಿಯಾದ ಸಕೇಶಿಯೊಬ್ಬಳ ಚಿತ್ರವನ್ನು ಕೊಡುವ ಈ ಕೆಳಗಿನ ಪದ್ಯವು ಒಂದು ಕಾಲಕ್ಕೆ ತುಂಬಾ ಪ್ರಚಲಿತವಾಗಿತ್ತು.

ಕಂಗಾಲ ವೈದಿಕರ ಬಂಗಾಲಿಯಾಚರಣೆ ಅಂಗಾಲಿನಿಂದಲೊರಸಿ
ಅಂಗಾರವಮ್ಮರೆತು ಶೃಂಗಾರಕೇ ಬೆರೆತು ಮಾಂಗಲ್ಯಶೂನ್ಯರಮಣೀ
ತಂಗಾಳಿ 'ಪಾರ್ಕಿ'ನೊಳು ಚಂಗಾಳಿ ಪತ್ತಲದಿ ಬಂಗಾರ ಬಣ್ಣ ಹೊಳಿಯೇ
ಸೊಂಗಾಡಿ ಸುಂದರಿಯು ಬೆಂಗಾವಲಿಲ್ಲದಲೆ ಟಾಂಗಾದ ಮೇಲೆ ನಡೆದಳ್

ಐದನೆಯಂದಾಗಿ, ಕವಿಗಳ ವರ್ಣನಾಸಾಮರ್ಥ್ಯ ಮತ್ತು ರಸಿಕತೆ ಮೆಚ್ಚುವಂತಹದು. ಉದಾಹರಣೆಗೆ, ಮಳೆಗಾಲದ ಈ ಕೆಳಗಿನ ವರ್ಣನೆಯಲ್ಲಿ ಕಂಡುಬರುವ ಚಿತ್ರವನ್ನು ಗಮನಿಸ ಬಹುದು :

ಜುಳುಜುಳೂ ಹರಿಯುವಾ ಓಣಿ ಕಾಲುವೆ ನೀರು
ಕಳಕಳನೆ ಕೂಗುವಾ ಕಪ್ಪೆಯಬ್ಬರ ಚೀರು
ಬೆಳಕನ್ನು ಬದಿಗೊತ್ತಿ ಬರುವ ಮೋಡದ ಜೋರು ಬರಬರುತ ಹೆಚ್ಚುತ್ತಿವೆ
ತುರುಕಾರಪೋರಗಳು ಗೊರಬುಗೊಂಗಡಿ ಹೊದ್ದು
ಸರಿಸರೀ ಹಲೆ ಎಂದು ಕರುಗಳಂ ದಬ್ಬುತ್ತ
ಸರವು ಹಳ್ಳವು ತುಂಬಿ ಹರಿಯುವಾಪರಿಯನ್ನು ಹಿರಿಯರಿಗೆ ಅರುಹುತ್ತಿರೆ

'ನಾಗರಪಂಚಮಿ' ಎಂಬ ಕವಿತೆಯಲ್ಲಿ ಕೃಷ್ಣೆ ಎಂಬವಳು ನಾಗರಪಂಚಮಿಗಾಗಿ ತವರಿಗೆ ಬಂದಾಗ ಅವಳ ಗಂಡ ಹರಿದ ಕೊಡೆಯನು ಮುದುಡಿ ಜರದ ಶಲ್ಲೆಯ ಬಗಲೊಳು ಹಿಡಿದು ನುರಿತ ತಂಬಾಕವನು ಥೂ ಎಂದು ಉಗುಳುತ್ತ ಹರಿದಾಸನ ಹಾಗೆ ಕೃಷ್ಣೆ ಮತ್ತು ಅವಳ ಗೆಳತಿಯರು ಜೋಕಾಲಿ ಆಡುವ ಸ್ಥಳದ ಪತ್ತಿರವೇ ಬರುತ್ತಾನೆ. ಆಗ ಗೆಳತಿಯರು ಕೃಷ್ಣೆಗೆ–

ಗೊಲ್ಲರಂತಹರಾರೆ ಕೃಷ್ಣೆ
ಬಲ್ಲೆಯಾ ಹೆಸರಿಲ್ಲೆಯವರಿಗೆ
ನಿಲ್ಲು ಎಂದಾಕೆಯನು ಹಿಂಬಾಲಿಸಿದಳೊಬ್ಬಾಕೆ
ಎಲ್ಲರೂ ಚಪ್ಪಾಳಿಯಿಕ್ಕುತ
ಗುಲ್ಲು ಮಾಡುತ ನಗುತ ದಾರಿಯೊ
ಳಲ್ಲಿಗಲ್ಲಿಗೆ ಕೃಷ್ಣೆಯನು ಚಪ್ಪರಿಸಿ ದೂಡುತ್ತ

ನಾಚಿಕಿಲ್ಲದ ಅಳಿಯನೊಬ್ಬನು
ನಾಗಪಂಚಮಿ ದಿನದಿ ಬರುವನು
ಊಚನೀಚಗಳನ್ನು ಬಲ್ಲರೆ ಕೃಷ್ಣೆ ಗಂಡಸರು
ಪೇಚಿನೊಳ್ಬಿದ್ದಂತೆ ಕೃಷ್ಣೆಯು
ವಾಚಿಯಂ ಬಿಗಿ ಹಿಡಿದು ಮೆಲ್ಲನೆ
ನಾಚಿ ನುಡಿದಳು ಸಾಕು ಬರ್ರೀ ಎಷ್ಟಿರೇ ಎಂದು

ಆರನೆಯದಾಗಿ, 'ಕವಿಯೂ ಸಾಪಕಾರನೂ' ಮೊದಲಾದ ಕವನಗಳಲ್ಲಿ ಕವಿಗಳ ಬಡತನದ ವರ್ಣನೆ ಮತ್ತು ಅಲ್ಲಿ ವ್ಯಕ್ತವಾದ ಕಲ್ಪಕತೆಗಳು ಪ್ರಶಂಸನೀಯವಾಗಿವೆ. ಹಣದ ತೊಂದರೆಯಲ್ಲಿದ್ದ ಕವಿ ಒಬ್ಬ ಸಾಹುಕಾರನ ಪತ್ತಿರ ಸಾಲ ಕೇಳಲು ಹೋಗುತ್ತಾನೆ. ಸಾಹುಕಾರ ಒತ್ತೆಯಿಡದ ಹೊರತು ಸಾಲ ಸಾಧ್ಯವಿಲ್ಲೆಂದು ಹೇಳುತ್ತಾನೆ. ಆಗ ಕವಿ ನಾವು ಬರಿಗೈಯವರು, ಕವಿಗಳು, ಒತ್ತೆಗೇನಿಹುದು ?

'ಅವ ಕವೆ ನೋಡಿದರು ಕರಿಬಿಳಿ
ಹಾವು ಕಾಗದ, ಪ್ರತಿ, ಲೇಖಣಿ,
ದಾವಾಗ್ನಿಯಿಯಂತೆ ಮನೆ ದೀಪವನ್ನು ಒಡೆಯುವುದು'

ಎಂದು ಹೇಳುತ್ತಾನೆ. ಅದಕ್ಕೆ ಸಾಹುಕಾರನು

'ಹಿಂದೆ ರಂಗಾಸಾನಿ ವೇಶ್ಯೆಯು
ಒಂದು ದಿನ ಬಳ್ಳಾರಿ ಸೆಟ್ಟಿರ
ಮುಂದೆ ದುಃಖವ ತೋಡಿಕೊಂಡಳು ಸಾಲ ಬೇಕೆಂದು'

ಹಾಗೆ ಕೇಳಿದಾಗ ಸಾಹುಕಾರನು,

'ಇಂದು ತೋಡಿಯರಾಗವನು ನೀ
ಸುಂದರಾಂಗಿಯೆ ಒತ್ತೆಯಿಟ್ಟರೆ ಹಣವ ದೊರಕುವುದು
ಮುಂದಿ ಸಭೆಯೊಳು ಕೇಳಿಕೊಂಡರು
ಬಂದು ಹಿಳಸದೆ ತೋಡಿ ರಾಗವ
ನೆಂದಿಗೂ ನೀಂ ಹಾಡಕೂಡದು ನಮಗದೇ ಅಡವು' ಎಂದಿದ್ದನಂತೆ.

ಅದೇ ರೀತಿ. ಕವಿಯೂ ಸಹಿತ ಕಮಲ ಮತ್ತು ಚಂದಿರ ಎಂಬ ಶಬ್ದಗಳನ್ನು ಅಡವಿಟ್ಟರೆ ಮಾತ್ರ ಸಾಲ ದೊರೆಯುವುದೆಂದು ಹೇಳುತ್ತಾನೆ. ಕಾವ್ಯಾನಂದರ ಮೇರೆಗೆ ಕವಿಯು ಆ ಎರಡೂ ಶಬ್ದಗಳನ್ನು ಅಡವಿಟ್ಟು ಸಾಲ ಒಯ್ಯುತ್ತಾನೆ. ಈ ಕವನ ಪ್ರಕಟವಾದ 'ಪ್ರಭಾತ' ಮಾಸಪತ್ರಿಕೆಯ ಸಂಪಾದಕರಿಗೆ ಕವನ ಹೀಗೆ ಮುಗಿಯುವದು ಬೇಕಾಗಿರಲಿಲ್ಲ. ಹಣವನ್ನು ಪಡೆದ ಕವಿ ಮನೆಗೆ ಬಂದಾಗ ಇಂದುಮುಖಿಯಾದ ಹೆಂಡತಿ ಮಗನನ್ನು ಬಗಲಲ್ಲಿ ಇರಿಸಿಕೊಂಡು ಎದುರು ಬರುತ್ತಾಳೆ. ಕಮಲದಂತಿದ್ದ ಅವಳ ಮುಖ, ಚಂದ್ರಮನಂತಿದ್ದ ಮಗನ ಮುಖ ಇವುಗಳನ್ನು ನೋಡಿ ಕವಿ ತಾನು ಅಡವಿಟ್ಟ ಶಬ್ದಗಳನ್ನು ಬಿಟ್ಟಿರಲಾರದೆ ಪುನಃ ಸಾಹುಕಾರನಲ್ಲಿಗೆ ಹೋಗಿ ತಾನು ತೆಗೆದುಕೊಂಡ ಹಣವನ್ನು ಮರಳಿಸುತ್ತಾನೆ.

ಧನಿಕನೇ ಹಣವೆಮಗೆ ಬೇಡವು
ವನಜ ಚಂದ್ರಮರಿಂದ ಶೀವಿದ
ಘನ ಜಗತ್ತಿನೊಳಿಂಥ ಸುಂದರ ವಸ್ತುಗಳ ಕಂಡು
ದಿನದಿಂ ವರ್ಣನೆಯ ಮಾಡದೆ
ಮನದ ಸ್ಪರ್ಧವಗ್ಗಯೆನಿಂದಾ
ದಿನದಿನ್ನಾದ ಧನಿಕನಿಂದ.......

ಕೊನೆಯದಾಗಿ, ಕಾವ್ಯಾನಂದರ ಅನೇಕ ಕವನಗಳು ದೇಶಪ್ರೇಮದಿಂದ ಕೂಡಿವೆ. ಈ ಕೆಳಗಿನ ಕವನ ಒಂದು ಕಾಲಕ್ಕೆ ಸ್ವಾತಂತ್ರ್ಯ ಸಮರದ ಸ್ಫೂರ್ತಿಯ ಕವನವಾಗಿತ್ತು :

ಒಂದೆ ಭಾವದಿಂದ ನಮಿಸಿ ಹಿಂದ ಮಾತೆಗೆ
ಇಂದು ಮಂದಭಾಗ್ಯ ದೇಶಬಂಧು ಜನಗಳೇ
ಸ್ವಂಥ ಸಹಸ್ರಕಬಂಧ ಜರಾಸಂಧರಾ

ಕೊಂದ ಪರಶುರಾಮ ರಾಮ ಭೀಮ ಸುಂದರಿ
ದ್ರೋಣ ಭೀಷ್ಮ ಬಾಣ ಸಂಧಾನ ಸಾಕ್ಷಿಯೋ
ಕ್ಷೋಣಿ ಶಾಣಭೂಷೆಯಾರ್ಯ ಶೌರ್ಯ ಸ್ವರ್ಣಕೆ
ದೇವ ಬ್ರಹ್ಮರಾಜರ್ಷಿ ಸೇವಿತೇ ಮಹೀ
ಈ ವಿಶುದ್ಧ ದೀನ ಸಂತಾನ ಭಾವಿಸೇ
ಮಾತೆ ಮಾತೆ ಮಾತೆ ಅನ್ನವಸ್ತ್ರದಾತೆಯೋ
ಭೂತಧಾತ್ರಿ ಎಂದು ಬಂಧಮುಕ್ತಿ ಬೇಡಿರಿ

—

ಗ. ಹು. ಹೊನ್ನಾಪುರಮಠ

(೧೮೭೦–೧೯೩೩)

ಗದಿಗೆಯ್ಯ ಹುಚ್ಚಯ್ಯ ಹೊನ್ನಾಪುರಮಠ ಅವರು ವೃತ್ತಿಯಿಂದ ವಕೀಲರು, ಪ್ರವೃತ್ತಿಯಿಂದ ಸಾಹಿತಿಗಳು. ಶ್ರೀಯುತರು ಸಾಹಿತ್ಯ, ರಾಜಕಾರಣ, ಸಮಾಜಸೇವೆ ಈ ಮೂರು ವಿಭಾಗಗಳಲ್ಲಿಯೂ ಅನುಪಮವಾದ ಸೇವೆಯನ್ನು ಸಲ್ಲಿಸಿದರು. ಶ್ರೀಯುತರ ತಂದೆಯ ಹೆಸರು ಹುಚ್ಚಯ್ಯನವರು. ಅವರನ್ನು ವಿಭೂತಿ ಹುಚ್ಚಯ್ಯನವರೆಂದೂ ಕರೆಯುತ್ತಿದ್ದರು. ಗದಿಗೆಯ್ಯನವರಂತೆ ಹುಚ್ಚಯ್ಯನವರೂ ಉಗ್ರವಾದ ಕನ್ನಡಾಭಿಮಾನಿಗಳು. ಕನ್ನಡಕ್ಕಾಗಿ ದೀಕ್ಷೆಯನ್ನು ತೊಟ್ಟವರು. ಹೊನ್ನಾಪುರಮಠ ಹುಚ್ಚಯ್ಯನವರಲ್ಲಿ ಕನ್ನಡಾಭಿಮಾನವೂ, ಕನ್ನಡದ ಜಾಗೃತಿಯ ಬಗೆಗೆ ಕಳಕಳಿಯೂ ತುಂಬಿ ತುಳುಕುತ್ತಿದ್ದವು. ಸರಕಾರದ ಸರ್ವೆ ಖಾತೆಯಲ್ಲಿಯ 'ಸರ್ವೇಯರ' ಎಂಬ ತಮ್ಮ ಅಧಿಕಾರ ಸ್ಥಾನಕ್ಕೆ ಅವರು ಶರಣು ಹೊಡೆದು ಕನ್ನಡ ಸೇವೆಗೆ ಬದ್ಧಕಂಕಣರಾದರು. ಆ ಕಾಲಕ್ಕೆ ಈಗಿರುವಂತೆ ಮುದ್ರಣದಲ್ಲಿ ಅಚ್ಚಿನ ಮೊಳೆಗಳಿರಲಿಲ್ಲ. ಕಲ್ಲಿನ ಮೇಲೆ ಅಕ್ಷರಗಳನ್ನು ವಿರುದ್ಧ ಕ್ರಮದಿಂದ ಬರೆದು ಅಚ್ಚೊತ್ತುವ ಪರಿಪಾಠವು ರೂಢಿಯಲ್ಲಿತ್ತು. ಹೊಸದಾಗಿ ಸರಕಾರದಿಂದ ಮಾನ್ಯತೆ ಪಡೆದ ಇಲ್ಲವೆ ಸ್ಥಾಪಿತವಾದ ಕನ್ನಡ ಶಾಲೆಗಳಲ್ಲಿ ಶಿಕ್ಷಣ ಪಡೆಯುವವರಿಗೆ ಅಭ್ಯಾಸಕ್ಕಾಗಿ,ಪುಸ್ತಕಗಳನ್ನು ರಚಿಸುವ, ಪ್ರಕಟಿಸುವ ಹಾಗೂ ವಿಶೇಷ ಜ್ಞಾನಕ್ಕಾಗಿ, ಕಾವ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧ, ವೃತ್ತಪತ್ರಿಕೆ–ಮಾಸಪತ್ರಿಕೆಗಳನ್ನು ಒದಗಿಸುವ ಅವಶ್ಯಕತೆ ಬಹಳವಾಗಿತ್ತು. ಈ ಕಾರ್ಯದಲ್ಲಿ ತಮ್ಮ ಕೈಲಾದ ಸಹಾಯವನ್ನು ಸಲ್ಲಿಸಬೇಕೆಂಬ ಉತ್ಕಟೇಚ್ಛೆಯುಳ್ಳ ಹುಚ್ಚಯ್ಯನವರು ಧಾರವಾಡದಲ್ಲಿ ೧೮೭೦ ರ ಸುಮಾರಿಗೆ 'ಚಂದ್ರೋದಯ' ಎಂಬ ಕಲ್ಲಚ್ಚಿನ ಮುದ್ರಣಾಲಯವನ್ನು ಪ್ರಾರಂಭಿಸಿ ಅನೇಕ ಕಾವ್ಯ, ಕಥೆ, ಕಾದಂಬರಿಗಳನ್ನು ಮುದ್ರಿಸಿ ಪ್ರಕಟಿಸಿದರು. ಇದಲ್ಲದೆ 'ಚಂದ್ರೋದಯ'ವೆಂಬ ವಾರಪತ್ರಿಕೆಯನ್ನೂ 'ವಾಗ್ದೇವಿ' ಎಂಬ ಮಾಸಪತ್ರಿಕೆಯನ್ನೂ ಕನ್ನಡದಲ್ಲಿ ತಮ್ಮ ಸಂಪಾದಕತ್ವದಲ್ಲಿ ಪ್ರಕಟಿಸುತ್ತಿದರು. ಈ ಭಾಗದ ತುಂಬೆಲ್ಲ ಮರಾಠಿ ಭಾಷೆಯ ಪಂಚಾಂಗವೇ ಪ್ರಚಲಿತವಿದ್ದ ಆ ಕಾಲದಲ್ಲಿ ಕನ್ನಡದಲ್ಲಿ ಪಂಚಾಂಗ ಬರೆದು ಮುದ್ರಿಸಿ ಪ್ರಕಟಿಸಿದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಹೊರಟ 'ವಾಗ್ಭೂಷಣ' ಮಾಸಪತ್ರಿಕೆಯು ಎಷ್ಟೋ ವರ್ಷಗಳ ವರೆಗೆ ಈ ಚಂದ್ರೋದಯ ಮುದ್ರಣಾಲಯದಲ್ಲಿಯೇ ಮುದ್ರಿಸಲ್ಪಡುತ್ತಿತ್ತು.

ಇಂಥ ಮನೆತನದಲ್ಲಿ ಗದಿಗೆಯ್ಯನವರು ಸನ್ ೧೮೭೦ ರಲ್ಲಿ ಜನ್ಮತಾಳಿದರು. ಅವರು ತಮ್ಮ ಮಾಧ್ಯಮಿಕ ಶಿಕ್ಷಣವನ್ನು ಧಾರವಾಡದ ಬಾಸೆಲ್ ಮಿಶನ್ ಹೈಸ್ಕೂಲಿನಲ್ಲಿ ಪೂರೈಸಿಕೊಂಡು ಆ ಕಾಲದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಸರಕಾರದ ಸೇವಾವೃತ್ತಿಯಲ್ಲಿದ್ದು



ಗ. ಹು. ಹೊನ್ನಾಪುರಮಠ




ಶ್ರೀನಿವಾಸ ಕಟ್ಟಿ




[illegible] ಕೃಷ್ಣರಾಯ



[illegible] ಬಸವಾರ್ಯ




ವೀರಪ್ಪ ನಾಗಶೆಟ್ಟಿ



ಕೇಸದಾಸಾಚಾರ್ಯ ಆದ್ಯ



ತಾಳಿಕೋಟಿ ಪದ್ಮನಾಭ ಮಹಾರಾಜರು



ರೆ. ಹೆಬಿಕ್.

ಕೊಂಡವರಿಗೆ, ಸರಕಾರೇತರರಿಗೆ ಇರುವಷ್ಟು ವಿಚಾರಸ್ವಾತಂತ್ರ್ಯವಾಗಲೀ, ಆಚಾರಸ್ವಾತಂತ್ರ್ಯವಾಗಲೀ ಇರುವದಿಲ್ಲವೆಂದು ಬಗೆದು ಅವರು ಸರಕಾರಿ ನೌಕರಿಯನ್ನು ಅಪೇಕ್ಷಿಸಲಿಲ್ಲ. ಪುಣೆಯಲ್ಲಿ ಕಾಯಿದೆ ಅಭ್ಯಾಸ ಮಾಡಿ ತಮ್ಮ ವಯಸ್ಸಿನ ೨೩ ನೆಯ ವರ್ಷದಲ್ಲಿಯೇ ಅಂದರೆ ಸನ್ ೧೮೯೩ ರಲ್ಲಿ ಕಾಯಿದೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸ್ವತಂತ್ರ ವ್ಯವಸಾಯವಾದ ವಕೀಲಿ ಕ್ಷೇತ್ರದಲ್ಲಿ ಪದಾರ್ಪಣ ಮಾಡಿದರು; ಅಲ್ಲದೆ, ಪ್ರತಿಕೂಲ ಸಮಯದಲ್ಲಿ ಜನತೆಯ ಶಿಕ್ಷಣಕ್ಕೆ ಹೆಣಗಾಡುತ್ತಿದ್ದ ಮಠದ ಅಯ್ಯನವರ ಸಂಪ್ರದಾಯಕ್ಕನುಗುಣವಾಗಿ ತಂದೆ ಹುಚ್ಚಯ್ಯನವರು ನಾಡು ನುಡಿಗಳ ಸೇವಾ ಕ್ಷೇತ್ರದಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿದಂತೆ, ಅವರ ಮಕ್ಕಳಾದ ಗದಿಗೆಯ್ಯನವರೂ ಸಹ ಆ ಸೇವಾಕಾರ್ಯಕ್ಕೂ, ವಿವಿಧ ಸ್ವರೂಪದ ಸಾರ್ವಜನಿಕ ಸೇವೆಗೂ ತಮ್ಮ ಜೀವನವನ್ನೇ ಮುಡುಪಾಗಿಟ್ಟರು.

ಈ ಕಾಲದಲ್ಲಿ ಕನ್ನಡ ಪಠ್ಯ ಪುಸ್ತಕಗಳು ಕೆಲಮಟ್ಟಿಗೆ ದೊರಕುತ್ತಿದ್ದರೂ ಕನ್ನಡಾಭಿಮಾನಕ್ಕೆ ಬೇಕಾದ ಚರಿತ್ರೆ, ಪ್ರಬಂಧ, ನಾಟಕ, ಕಥೆ, ಕಾದಂಬರಿ ಮೊದಲಾದವುಗಳ ಕೊರತೆ ಕನ್ನಡದಲ್ಲಿ ಬಹಳವಾಗಿತ್ತು. ಈ ಕೊರತೆಯನ್ನು ನೀಗಿಸುವದಕ್ಕಾಗಿ ಗದಿಗೆಯ್ಯನವರು ಟೊಂಕ ಕಟ್ಟಿ ನಿಂತರು.

ನೀತಿಮಂಜರಿ (೧೮೯೮) :

ಗದಿಗೆಯ್ಯನವರು ವಕೀಲಿ ಸನದನ್ನು ಪಡೆದ ಕಾಲಕ್ಕೆ ಕನ್ನಡದಲ್ಲಿ ಪ್ರಬಂಧಗಳ ಕೊರತೆ ಬಹಳವಾಗಿತ್ತು. ಶಾಲಾ ಮಕ್ಕಳಿಗೆ ಅದೊಂದು ದೊಡ್ಡ ಪ್ರತಿಬಂಧವೇ ಆಗಿತ್ತು. ಇದನ್ನು ಮನಗಂಡು ಗದಿಗೆಯ್ಯನವರು ಅನೇಕ ಮಹತ್ವದ ವಿಷಯಗಳ ಮೇಲೆ ಅದರಲ್ಲೂ ಮಕ್ಕಳ ನೈತಿಕ ಸುಧಾರಣೆಗಾಗಿ 'ಏವ್‌ಬರಿ' ಎಂಬ ಸುಪ್ರಸಿದ್ಧ ಗ್ರಂಥಕರ್ತರು ಆಂಗ್ಲ ಭಾಷೆಯಲ್ಲಿ 'ಯೂಸ್ ಆಫ್ ಲೈಫ್' ಎಂಬ ಪುಸ್ತಕ ಬರೆದ ಮಾದರಿಯಲ್ಲಿ ೩೭ ಬೇರೆ ಬೇರೆ ವಿಷಯಗಳ ಮೇಲೆ ನಿಬಂಧಗಳುಳ್ಳ 'ನೀತಿಮಂಜರಿ' ಎಂಬ ಪುಸ್ತಕವನ್ನು ಬರೆದು ಪ್ರಕಟಿಸಿದರು.

ಸುಮಾರು ೧೪೦ ಪುಟದ ಈ ಗ್ರಂಥದಲ್ಲಿ ಬಾಲಕ ಬಾಲಿಕೆಯರಿಗಾಗಿ ಒಂದು ನೈತಿಕ ಆದರ್ಶವನ್ನು ಇಡಲಾಗಿದೆ. ಇದು ಆ ಕಾಲಕ್ಕೆ ತುಂಬಾ ಜನಪ್ರಿಯವಾಗಿದ್ದ ಪಠ್ಯಪುಸ್ತಕವಾಗಿತ್ತು. ಸನ್ ೧೯೫೦ರಲ್ಲಿ ಇದರ ೧೧ನೆಯ ಆವೃತ್ತಿ ಮುದ್ರಿತವಾಗಿದೆ. ಪುಸ್ತಕದ ಪ್ರಸ್ತಾವನೆಯಲ್ಲಿ ಲೇಖಕರು ಹೀಗೆ ಹೇಳಿದ್ದಾರೆ :

"ಇದನ್ನು ನಾನು ಮೊದಲಿಗೆ 'ಚೇಂಬರ್ಸ ಮಾರಲ್ ಕ್ಲಾಸ ಬುಕ್ಕ' ಮತ್ತು ಸರ್ ಜಾನ್ ಲುಬಕ್ಕನ 'ಯೂಸ್ ಅಫ ಲಾಯಿಫ' ಎಂಬ ಇಂಗ್ಲಿಷ ಪುಸ್ತಕಗಳ ಆಧಾರದಿಂದ ಬರೆದು ಇದರ ೧ನೆಯ ಆವೃತ್ತಿಯನ್ನು ಸನ್ ೧೮೯೮ನೆಯ ಇಸ್ವಿಯಲ್ಲಿ ಪ್ರಸಿದ್ಧ ಮಾಡಿದೆನು." ಈ ಪುಸ್ತಕದಲ್ಲಿ ಕೆಲವು ಐತಿಹಾಸಿಕ ಶೂರಪುರುಷರ ಮತ್ತು ಸತ್ಪುರುಷರ ಜೀವನ ಚರಿತ್ರಗಳೂ ಕೆಲವು ಉಪದೇಶಪರ ಸಂವಾದಗಳೂ ಕೂಡಿವೆ.

ಲೇಖಕರು ಇಂಗ್ಲಿಷ ಗ್ರಂಥಗಳ ಆಧಾರದಿಂದ ಬರೆದದ್ದಾಗಿ ಹೇಳಿದ್ದರೂ, ಬರವಣಿಗೆಯ ಶೈಲಿ ಸ್ವೋಪಜ್ಞವಾಗಿಯೇ ಇದೆ. ಮೂಲಕೃತಿಯನ್ನು ಓದುತ್ತಿರುವಂತೆಯೇ ಭಾಸವಾಗುತ್ತದೆ. ಇದರಲ್ಲಿ ಕಂಡುಬರುವ ಗಾಂಭೀರ್ಯ, ಚಿಂತನ ಮತ್ತು ಶೈಲಿ ಮೋಹಕವಾಗಿವೆ. ಇಂಗ್ಲಿಷಿನಲ್ಲಿ ಬೇಕನ್ನನ ಪ್ರಬಂಧಗಳನ್ನು 'ಡಿಸ್‌ಪರ್‌ಸ್ಡ್ ಮೆಡಿಟೇಷನ್ಸ' (ತೂರಿದ ಚಿಂತನಗಳು) ಎಂದು ಕರೆದರು. ಇಲ್ಲಿಯ ಪ್ರಬಂಧಗಳೂ ಈ ವರ್ಗಕ್ಕೇ ಸೇರಿದುವು. ಮುಂದಿನ ಅವತರಣಿಕೆ 'ಭಾಷಣ' ಎಂಬ ಪ್ರಬಂಧದಿಂದ ಆಯ್ದುದು :

"ನಾಲಿಗೆಯು ನೋಡಲಿಕ್ಕೆ ಮಾತ್ರ ಸಣ್ಣದು ಕಾಣುತ್ತದೆ. ಆದರೆ ಮನುಷ್ಯನ ಒಳ್ಳೆಯತನವು ಅಥವಾ ಕೆಡುಕತನವು ಬಹುತರ ಅದರ ಮೇಲೆಯೇ ಅವಲಂಬಿಸಿರುತ್ತದೆ. ಬೆಳಗ್ಗೆ ಹಾಸಿಗೆಯಿಂದ ಎದ್ದಾಗಿನಿಂದ ರಾತ್ರಿ ಮಲಗಿ ನಿದ್ರೆ ಮಾಡುವತನಕ ಯಾವತ್ತು ವ್ಯವಹಾರಗಳಲ್ಲಿ ಸ್ವಲ್ಪಾದರೂ ಮಾತಾಡಬೇಕಾಗುತ್ತದೆ. ಆದುದರಿಂದ ಮಾತಾಡುವಾಗ ಎಚ್ಚರದಿಂದ ಇರುವದು ಒಳ್ಳೇದು." ೧

ಇದನ್ನು ಓದಿದಾಗ, ಸರ್ವಜ್ಞನ ಈ ಕೆಳಗಿನ ವಚನ ಜ್ಞಾಪಕಕ್ಕೆ ಬರುತ್ತದೆ.

ಕಣ್ಣು ನಾಲಗೆ ಮನವು ತನ್ನವೆಂದೆನಬೇಡ
ಅನ್ಯರು ಕೊಂದರೆನಬೇಡ ಇವು ಮೂರು
ತನ್ನ ಕೊಲ್ಲುವವು ಸರ್ವಜ್ಞ ॥

"Give every man thy ear and few thy voice" ಎಂದು ಷೇಕ್ಸಪಿಯರ ಮಹಾಕವಿ ಹ್ಯಾಮ್ಲೆಟ್ ನಾಟಕದಲ್ಲಿ ಹೇಳಿದನು. ಹೊನ್ನಾಪುರಮಠರೂ ಹೀಗೆ ಹೇಳುತ್ತಾರೆ. "ದೇವರು ನಮಗೆ ಎರಡು ಕಿವಿಗಳನ್ನು ಕೊಟ್ಟು ಒಂದೇ ನಾಲಿಗೆಯನ್ನು ಕೊಟ್ಟಿರುತ್ತಾನೆ; ಆದುದರಿಂದ ಕಿವಿಯಿಂದ ಬಹಳ ಕೇಳಿಕೊಂಡು ನಾಲಿಗೆಯಿಂದ ಸ್ವಲ್ಪ ಮಾತಾಡಬೇಕು. ಮಿತಿಯಿಂದ ಮಾತಾಡುವದರಿಂದ ಬಹಳ ಮಹತ್ವದ ಲಾಭವುಂಟು." (ಪು. ೫)

"ಒದರಾಡಿ ಅಥವಾ ಜಗಿದಾಡಿ ಎಂದಿಗೂ ಮಾತಾಡಬಾರದು. ಪ್ರತಿಪಕ್ಷದವರ ಮಾತುಗಳನ್ನು ಖಂಡಿಸಬೇಕಾದರೆ ಶಾಂತರೀತಿಯಿಂದ ಮೃದುವಾಗಿ ಮಾತಾಡಿ ಕೋಟಿಕ್ರಮದಿಂದ ಉತ್ತರ ಕೊಡಬೇಕು."

"ನಮಗೆ ಯಾರಾದರೂ ಸಿಟ್ಟಿನಿಂದ ಬಾಯಿಗೆ ಬಂದ ಹಾಗೆ ಮಾತಾಡಿದರೆ, ನಾವೂ ಸಿಟ್ಟಿಗೆದ್ದು ಅವರಿಗೆ ಕಂಡ ಕಂಡಂತೆ ಮಾತಾಡಬಾರದು. ಹುಲಿಯ ಬಾಯೊಳಗೆ ಸಿಕ್ಕ ಮನುಷ್ಯನನ್ನು ಕಂಡು ಕನಿಕರಪಡುವಂತೆ ನಾವು ಸಿಟ್ಟಿಗೆದ್ದ ಮನುಷ್ಯನನ್ನು ಕಂಡು ಕನಿಕರಪಡಬೇಕು. ಸಿಟ್ಟು ಒಂದು ಸಣ್ಣ ಹುಚ್ಚು." (ಪು. ೮)

"Men are afraid of Death, just as children are afraid to go in the dark" ಎಂದು ಫ್ರಾನ್ಸಿಸ್ ಬೇಕನ್ನನು 'ಮರಣ' ಎಂಬ ತನ್ನ ನಿಬಂಧವನ್ನು ಪ್ರಾರಂಭಿಸುತ್ತಾನೆ. ಹೊನ್ನಾಪುರಮಠರವರೂ ಹಾಗೆಯೇ ತಮ್ಮ ನಿಬಂಧವನ್ನು ಪ್ರಾರಂಭಿಸಿದರೂ, ಎರಡನೆಯ ಸಾಲಿನಿಂದಲೇ ಇಡೀ ನಿಬಂಧದ ವಾತಾವರಣ ಭಾರತದ್ದಾಗುತ್ತದೆ, ಕರ್ನಾಟಕದ್ದಾಗುತ್ತದೆ.

"ಸಣ್ಣ ಹುಡುಗರು ಕತ್ತಲೊಳಗೆ ಹೋಗಲಿಕ್ಕೆ ಅಂಜುವಂತೆ ಮನುಷ್ಯರು ಮರಣಕ್ಕೆ ಅಂಜುತ್ತಾರೆ. ಹುಡುಗರು ದೆವ್ವಗಳ ಕಥೆಗಳನ್ನು ಕೇಳಿ ಹೆಚ್ಚು ಅಂಜುವಂತೆ, ಮನುಷ್ಯರು ತಮಗೆ ಯಮಕಿಂಕರರು ಯಮಲೋಕದಲ್ಲಿ ಕೊಡುವ ಯಾತನೆಗಳ ಕಥೆಗಳನ್ನು ಕೇಳಿ ಹೆಚ್ಚು ಅಂಜುತ್ತಾರೆ. ಮರಣವು ಪರಲೋಕದ ದಾರಿಯೆಂದು ತಿಳಿಯುವದು ಯಾವತ್ತು ಸಜ್ಜನರಿಗೂ ಧರ್ಮಶೀಲರಿಗೂ ಯೋಗ್ಯವಾದದ್ದು. ಹುಟ್ಟಿದ ಮನುಷ್ಯನು ಎಂದಾದರೊಮ್ಮೆ ಸಾಯಲೇಬೇಕು; ಹಣ್ಣಾದ ಎಲೆಯು ಎಂದಾದರೊಮ್ಮೆ ಉದುರಿ ಬೀಳಲೇಬೇಕು...."

"ನಮ್ಮ ಕೈ ಬೆರಳು ಸುಟ್ಟರೆ, ಅಥವಾ ಅದಕ್ಕೆ ಶಸ್ತ್ರ ಹತ್ತಿದರೆ, ನಮಗೆ ನೋವು ಉಂಟಾಗಿ

೧ ನೀತಿಮಂಜರಿ : ೧೯೫೦ : ಪು. ೪

ನಮ್ಮ ಮೈಯೊಳಗೆಲ್ಲ ಬೆಂಕಿ ಹತ್ತಿದಂತಾಗಿ, ನಾವು ಇಶ್ ಉಶ್ ಎಂದು ನರಳುತ್ತೇವೆ, ಕೂಗಿ ಅಳುತ್ತೇವೆ. ಅಂದಬಳಿಕ ಮರಣವೆಂಬ ಭಯಂಕರವಾದ ಅಗ್ನಿಯು ಮನುಷ್ಯನ ದೇಹವನ್ನು ಸುಡುತ್ತಿರುವಾಗ ಪ್ರತ್ಯಕ್ಷ ಸಾಯುವ ತನಕ ಅವನಿಗೆ ಎಷ್ಟು ವೇದನೆಯಾಗುತ್ತಿರಬಹುದೆಂಬುದನ್ನು ನಾವು ನಮ್ಮ ವಿಚಾರಶಕ್ತಿಯಿಂದ ಊಹಿಸಬಹುದು...."

"ರೋಮ ಪಟ್ಟಣದಲ್ಲಿ ಹಿಂದಕ್ಕೆ ಆಗಿ ಹೋದ ಸಿನೆಕಾ ಎಂಬ ತತ್ತ್ವಜ್ಞನು 'ಮರಣಕ್ಕಿಂತ ಮರಣದ ಸ್ವರೂಪವು ಹೆಚ್ಚು ಭಯಂಕರವಾಗಿರುವದು' ಎಂದು ಒಂದು ಕಡೆಗೆ ಹೇಳುತ್ತಾನೆ. ಮನುಷ್ಯನು ಸಾಯುವಾಗ ನರಳುವದನ್ನೂ, ಶ್ವಾಸ ಬಿಡುವದನ್ನೂ, ಮೈ ಸೆಟಿಸುವದನ್ನೂ, ಒದ್ದಾಡುವದನ್ನೂ, ಅವನ ಮೈಯೊಳಗಿನ ರಕ್ತ ಚಲನವು ನಿಂತು ಅವನ ಮೋರೆಯು ನಿಸ್ತೇಜ ವಾಗುವದನ್ನೂ, ಅವನು ಸತ್ತ ತರುವಾಯ ಅವನ ಆಪ್ತೇಷ್ಟರು ಅವನ ಹತ್ತರ ಕುಳಿತು ಎದೆ ಎದೆ ಬಡಕೊಳ್ಳುತ್ತ ಹಾಡಿಕೊಂಡು ಅಳುವದನ್ನೂ, ಅವನ ಪ್ರೇತವನ್ನು ಸ್ಮಶಾನಕ್ಕೆ ಒಯ್ದು ತರುವಾಯ ಅಲ್ಲಿ ಜರಗುವ ಪ್ರೇತಸಂಸ್ಕಾರಾದಿಗಳನ್ನೂ ನೋಡಿದರೆ ಮರಣದ ಸ್ವರೂಪವು ಎಷ್ಟು ಭಯಂಕರ ವಾಗಿರುವದೆಂಬುದು ಒಡೆದು ಕಾಣುವದು. ಕೆಲ ಕೆಲವು ಹಿಂದೂ ಜಾತಿಗಳಲ್ಲಿ ಸತ್ತವರ ಮನೆಯ ಮುಂದೆ ರಣಹಲಿಗೆಗಳನ್ನು ಬಾರಿಸುವ ಪದ್ಧತಿಯುಂಟು. ಈ ರಣಹಲಿಗೆಗಳ ಭಯಂಕರ ಸಪ್ಪಳ ವನ್ನು ಕೇಳಿ ಮರಣಪಟ್ಟವನ ಆಪ್ತೇಷ್ಟರಷ್ಟೇ ಅಲ್ಲ, ಅವನ ನೆರೆಹೊರೆಯವರು, ಓಣಿಯವರು ಮತ್ತು ಆ ಸಪ್ಪಳವು ಕೇಳಿಸುವ ಅಂತರದಲ್ಲಿರುವ ಯಾವತ್ತು ಮನೆಯವರು ಅಂಜುವ ಸಂಭವವು ವಿಶೇಷವಿರುತ್ತದೆ. ಈ ರಣಹಲಿಗೆಗಳು 'ಯಮದೇವನ ಗ್ಯಾಝೆಟ್'ದಲ್ಲಿ ಪ್ರಸಿದ್ಧವಾದ ಪ್ರಕಟನೆ ಗಳೆಂದರೂ ಅಡ್ಡಿಯಿಲ್ಲ.'' (ಪು. ೨೧)

ಮೇಲಿನ ಅವತರಣಿಕೆಯಲ್ಲಿ ಬರುವ ವರ್ಣನೆಗಳ ವಿವರ, ಕರ್ನಾಟಕಕ್ಕೆ ವಿಶಿಷ್ಟವಾದ ಮರ ಣೋತ್ತರ ಸಂಸ್ಕಾರದ ವರ್ಣನೆಗಳು, ಹೃದಯವಿದ್ರಾವಕವಾಗಿವೆ.

ಗಾದೆಯ ಮಾತುಗಳ ವೈಪುಲ್ಯ ಹೊನ್ನಾಪುರಮಠರವರ ಶೈಲಿಗೆ ಒಂದು ತರಹದ ದೇಸೀಯ ಮೆರುಗನ್ನು ತಂದು ಕೊಡುತ್ತದೆ. ಐಶ್ವರ್ಯಕ್ಕಿಂತ ಬಡತನ ಹೆಚ್ಚು ಸುಖಕರವೆಂದು ಒಬ್ಬ ಆಂಗ್ಲ ವಿದ್ವಾಂಸನು ಹೇಳಿ, ಅದಕ್ಕೆ ಹೀಗೆ ಕಾರಣಗಳನ್ನು ಕೊಟ್ಟನಂತೆ :

"ಅಂಜಿಕೆಗೊಳಗಾಗಿ ಇರುವದಕ್ಕಿಂತ ಅಂಜಿಕೆಯಿಲ್ಲದೆ ಇರುವದು ವಾಸಿ. ಒಬ್ಬನ ಆಳಾಗಿ ದುಡಿಯುವದಕ್ಕಿಂತ ಸ್ವತಂತ್ರವಾಗಿ ಇರುವದು ವಾಸಿ.... ನಾನು ಹಿಂದಕ್ಕೆ ಶ್ರೀಮಂತನಿದ್ದಾಗ, ಕಳ್ಳರು ನನ್ನ ಮನೆಗೆ ಕನ್ನ ತೋಡಿ ಹಣವನ್ನು ಕದಿಯುವರೆಂತಲೂ, ನನ್ನ ಜೀವಕ್ಕೆ ಅಪಾಯವನ್ನು ಮಾಡುವ ರೆಂತಲೂ ನಾನು ಯಾವಾಗಲೂ ಅಂಜಿಕೊಂಡು ಕಾಲ ಕಳೆದೆನು. ನನಗೆ ರಾತ್ರಿಯಲ್ಲಿ ನಿದ್ರೆಯು ಸಹ ಬರುತ್ತಿದ್ದಿಲ್ಲ. ಈಗ ನನಗೆ ಸ್ವಸ್ಥವಾಗಿ ನಿದ್ರೆಯು ಬರುತ್ತದೆ. ಮುಂಚೆ ನನಗೆ ದೊಡ್ಡವ ನೆಂದು ಭಾವಿಸಿ ದೇವಾಲಯಗಳಲ್ಲಿ ಉಪದೇಶವನ್ನು ಹೇಳಲಿಕ್ಕೆ ಕರೆಯುತ್ತಿದ್ದರು; ಈಗ ಆ ತೊಂದರೆಯು ತಪ್ಪಿ ಹೋಗಿರುತ್ತದೆ. ನನ್ನ ಹಣದ ಮೇಲೆ ಸರಕಾರದವರ ಕಣ್ಣು ಒಂದೇ ಸವನೆ ಇರುತ್ತಿತ್ತು. ಅದು ಈಗ ತಪ್ಪಿ ಹೋಗಿರುತ್ತದೆ. ಜೋಗಿ ಎದ್ದರೆ ಖಡಾಸನ ಹೆಗಲ ಮೇಲೆ ಎಂಬಂತೆ ನಾನು ಬೇಕಾದಾಗ ಊರು ಬಿಟ್ಟು ಹೋಗಲು ಸ್ವತಂತ್ರನಿರುತ್ತೇನೆ.'' (ಪು. ೬೪)

ದೇವಾಲಯಗಳಲ್ಲಿ ಉಪದೇಶ ಭಾಷಣ ಮಾಡಲು, ಸರ್ಮನ್ ಹೇಳಲು ಕರೆಯುವುದು ಪಾಶ್ಚಿಮಾತ್ಯ ಸಂಸ್ಕೃತಿ; ಜೋಗಿ ಎದ್ದರೆ ಖಡಾಸನ ಹೆಗಲ ಮೇಲೆ ಎಂಬುದು ಶುದ್ಧ ಕನ್ನಡ ಸಂಸ್ಕೃತಿ;

ಈ ಗಾದೆಯ ಮಾತಿನ ಸೌಂದರ್ಯ ಗಮನಾರ್ಹವಾಗಿದೆ. ಅದರಂತೆಯೇ, ಹೆಂಡಂದಿರು ಪತಿ ವಶೀಕರಣಕ್ಕಾಗಿ ಗಿಡಮೂಲಿಕೆ ಮಂತ್ರ ತಂತ್ರಾದಿಗಳನ್ನು ಉಪಯೋಗಿಸುವುದರ ಸುಳಿವು ಗಂಡಂದಿರಿಗೆ ಗೊತ್ತಾದರೆ, ಒಗೆತನ ಕೂಡಿ ಸಾಗದು. ಅವರೀರ್ವರೂ ''ಹಾವು ಹೊಕ್ಕ ಮನೆಯಲ್ಲಿ ವಾಸ ಮಾಡುವವರಂತಾಗುತ್ತಾರೆ.''

ಗದಿಗೆಯ್ಯನವರು ಇಂಥ ಪ್ರಬಂಧಗಳನ್ನು ಇನ್ನೂ ಹೆಚ್ಚಾಗಿ ಬರೆದಿದ್ದರೆ, ಕನ್ನಡ ನಿಬಂಧ ಸಾಹಿತ್ಯ ಹೆಚ್ಚು ಶ್ರೀಮಂತವಾಗುತ್ತಿತ್ತು. ಅವರಿಗೆ ನಿಜವಾದ ನಿಬಂಧಕಾರನಿಗಿರಬೇಕಾದ ಮನಃ ಪ್ರವೃತ್ತಿ ಇದೆ.

ಅದ್ಭುತಪ್ರೇಮ (೧೯೧೪)

ಇದೊಂದು ಐತಿಹಾಸಿಕ ಕಾದಂಬರಿ. ಅಕಬರನ ಕಾಲಕ್ಕಿದ್ದ ಫೈಜಿ ಎಂಬ ಮಹಮದೀಯ ಪಂಡಿತ ಮತ್ತು ಸುಶೀಲೆ ಎಂಬ ಹಿಂದೂ ಯುವತಿಯರ ನಡುವಿನ ಬಂಧು-ಭಗಿನಿ ಪ್ರೇಮ ಇದರಲ್ಲಿ ಚಿತ್ರಿತವಾಗಿದೆ. ಸುಶೀಲೆ ಕೊನೆಗೆ ವೀರ ರಜಪೂತ ಅರಸನಾದ ಮಾನಸಿಂಹನನ್ನು ಮದುವೆಯಾಗಿ ಸಂಶಯದ ಮೂಲಕ ಅನೇಕ ಕಷ್ಟ ನಷ್ಟಗಳನ್ನು ಎದುರಿಸಬೇಕಾಗುತ್ತದೆ.

''ಸುಶೀಲೆಯ ಮತ್ತು ಮಹೇಶನ (ಫೈಜಿ) ಬಂಧು ಭಗಿನೀ ಪ್ರೇಮವೂ ಮಾನಸಿಂಹ ಮತ್ತು ಸುಶೀಲೆಯರ ಪತಿ ಪತ್ನಿ ಪ್ರೇಮವೂ ಅದ್ಭುತವಿರುವದರಿಂದ ಈ ಕಾದಂಬರಿಗೆ ನಾನು 'ಅದ್ಭುತ ಪ್ರೇಮ'ವೆಂದು ಹೆಸರಿಟ್ಟಿರುತ್ತೇನೆ'' ಎಂದು ಲೇಖಕರು ಹೇಳಿದ್ದಾರೆ. ಈ ಕಾದಂಬರಿಗೆ ವಿದ್ಯಾವರ್ಧಕ ಸಂಘದ ಬಹುಮಾನ ದೊರಕಿತು. ೧೯೫೦ರಲ್ಲಿ ಈ ಕಾದಂಬರಿಯ ಮೂರನೆಯ ಆವೃತ್ತಿ ಮುದ್ರಿತವಾಗಿದೆ.

ಸಚಿತ್ರ ಬಾಲರಾಮಾಯಣ (೧೯೪೦, ೬ನೆಯ ಆವೃತ್ತಿ) :

ಆದರ್ಶಪ್ರಾಯರಾದ ವೀರಪುರುಷರ ಹಾಗೂ ವೀರಮಾತೆಯರ ಅನುಕರಣವನ್ನು ಮಕ್ಕಳು ಮಾಡುವಂತಾಗಬೇಕೆಂಬ ಉದ್ದೇಶದಿಂದ ಗದಿಗೆಯ್ಯನವರು ಬಾಲರಾಮಾಯಣ, ಬಾಲಭಾರತ, ಬಾಲಭಾಗವತಗಳನ್ನು ಕನ್ನಡದಲ್ಲಿ ಬರೆದು ಈ ಪ್ರಾಚೀನ ಉದ್ಗ್ರಂಥಗಳನ್ನು ಸುಲಭವೂ, ಸರಳವೂ, ಸುಬೋಧವೂ ಆದ ಶೈಲಿಯಲ್ಲಿ ಮಕ್ಕಳಿಗೆ ಒದಗಿಸಿಕೊಟ್ಟರು. ಈ ಮಾಲಿಕೆಯಲ್ಲಿ ಶ್ರೀಯುತರು ಮೊದಲು ಬರೆದದ್ದು ಬಾಲರಾಮಾಯಣ ಮತ್ತು ಬಾಲಭಾರತಗಳನ್ನು. ಬಾಲರಾಮಾಯಣದ ಮುನ್ನುಡಿಯಲ್ಲಿ ಹೀಗೆ ಹೇಳಲಾಗಿದೆ :

"ರಾಮಾಯಣ ಮತ್ತು ಮಹಾಭಾರತಗಳು ನಮ್ಮ ರಾಷ್ಟ್ರೀಯ ಗ್ರಂಥಗಳಿದ್ದು ಇವುಗಳು ಅತ್ಯಂತ ಜ್ಞಾನಬೋಧಕವಾಗಿಯೂ, ಮನೋರಂಜಕವಾಗಿಯೂ ಇರುತ್ತವೆಂಬುದನ್ನು ನಾನು ಹೊಸದಾಗಿ ಹೇಳಬೇಕಾಗಿಲ್ಲ." ೧೯೪೦ ರ ಸುಮಾರಿಗೇ ಈ ಪುಸ್ತಕದ ಆರು ಆವೃತ್ತಿಗಳು ಪ್ರಕಟವಾಗಿದ್ದವು.

ಸಚಿತ್ರ ಬಾಲ ಭಾಗವತ (೧೯೩೫, ೩ನೆಯ ಆವೃತ್ತಿ) :

'ಬಾಲಭಾಗವತ'ದ ಮೂರನೆಯ ಆವೃತ್ತಿ ಸನ್ ೧೯೩೫ರಲ್ಲಿ ಪ್ರಕಟವಾಗಿದೆ. ಇದರಲ್ಲಿ ಭಾಗವತದ ಬಗೆಗೆ ಲೇಖಕರು ಹೀಗೆ ಹೇಳಿದ್ದಾರೆ :

"ಮಹಾಭಾರತವು ಇತಿಹಾಸವೆಂತಲೂ, ರಾಮಾಯಣವು ಕಥೆಯೆಂತಲೂ, ಭಾಗವತವು ಪುರಾಣವೆಂತಲೂ ಕರೆಯಲ್ಪಡುತ್ತವೆ......... ಭಾಗವತ ಮೊದಲಾದ ಯಾವತ್ತು ಪುರಾಣಗಳನ್ನು ಶ್ರೀ ವೇದವ್ಯಾಸರು ಬರೆದರು. ಭಾಗವತದಲ್ಲಿ ಶ್ರೀ ಭಗವಂತನ ಭಕ್ತಿಯನ್ನು ಹೇಗೆ ಮಾಡಬೇಕೆಂಬುದನ್ನು ಹೇಳಿರುತ್ತಿದ್ದು, ಅದರೊಳಗೆ ಪ್ರಲ್ಲಾದ, ಧ್ರುವ, ಅಂಬರೀಷ, ಮೊದಲಾದ ಭಗವದ್ಭಕ್ತರ ರಸಭರಿತ ಮತ್ತು ಮನೋಲ್ಲಾಸಕ ಕಥೆಗಳನ್ನು ಹೇಳುವದರಿಂದ ಈ ಗ್ರಂಥಕ್ಕೆ ಭಾಗವತ ವೆಂಬ ಹೆಸರು ಬಂದಿರುತ್ತದೆ. ಇದಲ್ಲದೆ, ಇದರಲ್ಲಿ ಭಗವಾನ್ ಶ್ರೀ ಕೃಷ್ಣ ಪರಮಾತ್ಮನ ಚರಿತ್ರವು ಅವನ ಬಾಲ್ಯದಿಂದ ಆರಂಭ ಮಾಡಿಕೊಂಡು ಅವನ ಅವತಾರ ಸಮಾಪ್ತಿಯವರೆಗೆ ವಿಸ್ತೃತ ರೀತಿಯಿಂದ ವಿವರಿಸಲ್ಪಟ್ಟಿರುತ್ತದೆ.'' ೭೭ ಪುಟದ ಈ ಪುಸ್ತಕದಲ್ಲಿ ಸರಳ ಸುಂದರವಾದ ಶೈಲಿಯಲ್ಲಿ ಭಾಗವತದ ಕಥೆಗಳನ್ನು ನಿರೂಪಿಸಲಾಗಿದೆ.

ಪ್ರಹ್ಲಾದ ಚರಿತ್ರೆ (೧೯೨೮) :

ಮಕ್ಕಳಲ್ಲಿ ದೇವರ ಬಗೆಗೆ ಭಕ್ತಿ ಉತ್ಪನ್ನವಾಗಬೇಕೆಂಬ ಉದ್ದೇಶದಿಂದ ಶ್ರೀ ಗದಿಗೆಯ್ಯನವರು ಸುದಾಮ ಚರಿತ್ರೆ, ಧ್ರುವ ಚರಿತ್ರೆ, ಚಿಲ್ಲಾಳ ಚರಿತ್ರೆ, ಶ್ರೀ ಕೃಷ್ಣ ಚರಿತ್ರೆ, ಬಸವೇಶ್ವರ ಚರಿತ್ರೆ— ಎಂಬ ಗ್ರಂಥಗಳನ್ನು, ಪುರಾಣೇತಿಹಾಸಗಳ ಆಧಾರದಿಂದ ಒಳ್ಳೆಯ ಮನಮಿಡಿಯುವ ರೀತಿಯಲ್ಲಿ ಬರೆದಿದ್ದಾರೆ.

'ಪ್ರಹ್ಲಾದ ಚರಿತ್ರೆ'ಯು ೧೮–೨–೧೯೨೮ ರಂದು ಪ್ರಕಟವಾಯಿತು. ಇದರ ಎರಡನೆಯ ಆವೃತ್ತಿ ಎರಡೇ ವರ್ಷಗಳಲ್ಲಿ ಅಂದರೆ ೧೯೩೦ರಲ್ಲಿ ಪ್ರಕಟವಾಯಿತು. ಒಳ್ಳೆಯ ಮನೆತನದಲ್ಲಿ ಹುಟ್ಟಿ, ಒಳ್ಳೆಯ ತಂದೆ ತಾಯಿಗಳನ್ನು ಪಡೆದ ಮಕ್ಕಳು ಒಳ್ಳೆಯವರಾಗುವದರಲ್ಲಿ ಆಶ್ಚರ್ಯವಿಲ್ಲ. ''ಆದರೆ ದುಷ್ಟರಾದ ತಂದೆ ತಾಯಿಗಳ ಹೊಟ್ಟೆಯಿಂದ ಹುಟ್ಟಿದ ಬಾಲಕರು ಸದ್ಗುಣಿಗಳಾಗುವದು ಬಹಳ ಆಶ್ಚರ್ಯವು. ದೈತ್ಯರೆಂದರೆ ಹೇಳಿ ಮಾಡಿದ ದುಷ್ಟರು. ಅವರು ಜನರಿಗೆ ದುಃಖ ಕೊಡುವಲ್ಲಿ ಯಾವಾಗಲೂ ಆನಂದ ಪಡುವವರು ಐಹಿಕ ಸುಖ ಮತ್ತು ವೈಭವಗಳಲ್ಲಿ ಯಾವಾಗಲೂ ಲೋಲುಪರಾಗಿರುವರು. ಹಿಂಸೆಯನ್ನೂ ಪಾಪದ ಕೃತ್ಯಗಳನ್ನೂ ಮಾಡುವದೇ ಅವರ ಸ್ವಾಭಾವಿಕವಾದ ಮನೋವೃತ್ತಿಯು. ಇಂಥ ದೈತ್ಯಕುಲದಲ್ಲಿ ಪ್ರಹ್ಲಾದನು ಹುಟ್ಟಿ ಸದಾಚಾರದಿಂದಲೂ, ಪರಮೇಶ್ವರನ ಭಕ್ತಿಯಿಂದಲೂ ನಡೆದು ಎಲ್ಲರಿಗೂ ಸನ್ಮಾರ್ಗದರ್ಶಿಯಾದ ಸಂಗತಿಯು ಅತ್ಯಂತ ಆಶ್ಚರ್ಯವೇ ಸರಿ. ಇದು ಅವನ ಪೂರ್ವಜನ್ಮದ ಪುಣ್ಯವೆಂದು ಕೆಲವರು ಹೇಳಬಹುದು. ಕೆಲವರು ಇದು ಪರಮಾತ್ಮನ ಅಗಾಧವಾದ ಲೀಲೆಯೆಂದು ಹೇಳಬಹುದು.''

ಶ್ರೀಕೃಷ್ಣಚರಿತ್ರ (೧೯೨೯) :

ಶ್ರೀಕೃಷ್ಣಚರಿತ್ರವನ್ನು ಬರೆದಾಗಲಂತೂ ಲೇಖಕರಿಗೆ ತುಂಬಾ ಆನಂದವಾಯಿತು. ಈ ಕೃತಿಯನ್ನು ಅವರು ಅತಿಶಯ ಭಕ್ತಿಭಾವದಿಂದ ರಚಿಸಿದರು. ಇದರಲ್ಲಿ ಶ್ರೀಯುತರ ಭಗವದ್ಭಕ್ತಿಯನ್ನು ಕಾಣಬಹುದು :

''ಭಗವತ್ಕೃಪೆಯಿಂದ ಶ್ರೀ ಕೃಷ್ಣಚರಿತ್ರವೆಂಬ ಈ ಗ್ರಂಥವು ಇವತ್ತಿನ ದಿವಸ ನನ್ನ ಕೈಯಿಂದ ಪೂರ್ಣವಾದುದಕ್ಕಾಗಿ ಅತ್ಯಾನಂದವಾಗುತ್ತದೆ. ಇಂಥ ಉದಾತ್ತವಾದ ಚರಿತ್ರವನ್ನು ಬರೆದು ಮುದ್ರಿಸುವ ಭಾಗ್ಯವು ನನಗೆ ಒದಗಿದ್ದಕ್ಕಾಗಿ ನನಗಂತೂ ಒಂದು ಬಗೆಯ ಧನ್ಯತೆಯು ಉಂಟಾಗುವದು ಸ್ವಾಭಾವಿಕವಾಗಿರುತ್ತದೆ. ಯಾಕಂದರೆ ಈ ಚರಿತ್ರದಲ್ಲಿ ಇರತಕ್ಕಷ್ಟು ಅಧಿಭೌತಿಕ ಮತ್ತು

ಆಧ್ಯಾತ್ಮಿಕ ಜ್ಞಾನವು ಇತರ ಯಾವ ಗ್ರಂಥದಲ್ಲಿಯೂ ದೊರಕಲಾರದೆಂದು ನನ್ನ ಅಭಿಪ್ರಾಯ ವಿರುತ್ತದೆ. ಶ್ರೀ ಕೃಷ್ಣನಂಥ ಅಪ್ರತಿಮ ಬುದ್ಧಿಶಾಲಿಯೂ, ಅಲೌಕಿಕ ಪರಾಕ್ರಮಿಯೂ, ಸ್ವಾರ್ಥ ತ್ಯಾಗಿಯೂ ಮತ್ತು ಸನ್ಮಾರ್ಗದರ್ಶಕನು ಈ ಜಗತ್ತಿನಲ್ಲಿ ಇಂದಿನವರೆಗೆ ಯಾರೂ ಆಗಿಲ್ಲವೆಂದು ನಿರ್ವಿವಾದವಾಗಿ ಹೇಳಬಹುದು. ಶ್ರೀಕೃಷ್ಣನು ರಾಜಕಾರಣದಲ್ಲಿ ಅಗ್ರಗಣ್ಯನಿದ್ದಂತೆ ಪಾರಮಾರ್ಥಿಕ ವಿಷಯದಲ್ಲಿಯೂ ಅಗ್ರಗಣ್ಯನಿದ್ದನು. ಅವನು ಸಾಮಾನ್ಯವ್ಯಕ್ತಿಯಲ್ಲ. ಭಗವಂತನ ಪ್ರತ್ಯಕ್ಷ ಅವತಾರಪುರುಷನಿದ್ದನು. ಶ್ರೀಕೃಷ್ಣಚರಿತ್ರಕ್ಕೆ ಅವನ ಚರಿತ್ರದಲ್ಲಿ ಅಂತರ್ಗತವಾಗಿರುವ ಗೀತೋಪದೇಶವು ವಜ್ರಕ್ಕೆ ಕುಂದಣವನ್ನು ಕೂಡಿಸಿದಂತೆ ಆಗಿರುತ್ತದೆ.... ವ್ಯಾಸೋಚ್ಛಿಷ್ಟಂ ಜಗತ್ಸರ್ವಂ ಎಂಬ ನಾಣ್ಣುಡಿಯಂತೆ ಜಗತ್ತಿನಲ್ಲಿ ಎಲ್ಲ ಸುಂದರ ಕಲ್ಪನೆಗಳು, ಎಲ್ಲ ಸುಂದರ ವರ್ಣನೆಗಳು ಮತ್ತು ಎಲ್ಲ ಸುಂದರ ಯುಕ್ತಿವಾದಗಳು ವ್ಯಾಸಮಹರ್ಷಿಗಳ ಎಂಜಲವೆಂದು ತಿಳಿಯಲಿಕ್ಕೆ ಏನೂ ಅಡ್ಡಿಯಿಲ್ಲ.'' ಇವು ಗದಿಗೆಯ್ಯ ಹುಚ್ಚಯ್ಯ ಹೊನ್ನಾಪುರಮಠ ಅವರು ಬರೆದ ಮಾತುಗಳು. ಇದರಿಂದ ಶ್ರೀಕೃಷ್ಣವಿಷಯಕವಾಗಿ ಲೇಖಕರಿಗಿದ್ದ ಭಕ್ತಿಭಾವನೆ ಗೌರವಗಳು ವ್ಯಕ್ತವಾಗುತ್ತವೆ. ಈ ಪುಸ್ತಕದ ಎರಡನೆಯ ಆವೃತ್ತಿ ಎರಡು ವರ್ಷಗಳಲ್ಲಿಯೇ ಅಂದರೆ ಸನ್ ೧೯೩೧ ರಲ್ಲಿ ಪ್ರಕಟವಾಯಿತು.

ಸಾವಿತ್ರೀ ಚರಿತ್ರೆ (೧೯೨೯, ೪ ನೆಯ ಆವೃತ್ತಿ) :

ಸಾವಿತ್ರೀ ಚರಿತ್ರವನ್ನು ಶ್ರೀಯುತರು ಬಾಲಿಕೆಯರಿಗಾಗಿ ಬರೆದರು. ಇದರ ೪ ನೆಯ ಆವೃತ್ತಿ ಸನ್ ೧೯೨೯ ರಷ್ಟರಲ್ಲಿಯೇ ಪ್ರಕಟವಾಯಿತು. ಇದರಲ್ಲಿ ಬಸವಪ್ಪ ಶಾಸ್ತ್ರಿಗಳು ರಚಿಸಿದ ಕವನಗಳೂ ಇವೆ.

ಶ್ರೀ ಬಸವೇಶ್ವರ ಚರಿತ್ರೆ (೧೯೨೯) :

ಶ್ರೀ ಬಸವೇಶ್ವರ ಚರಿತ್ರವು ಸನ್ ೧೯೨೯ ರಲ್ಲಿಯೇ ಪ್ರಕಟವಾಗಿ ಅದರ ಎರಡನೆಯ ಆವೃತ್ತಿಯು ಸನ್ ೧೯೩೨ ರಲ್ಲಿ ಪ್ರಕಟವಾಯಿತು. ಮೊದಲನೆಯ ಆವೃತ್ತಿಯ ಪ್ರಸ್ತಾವನೆಯಲ್ಲಿ ಲೇಖಕರು ಹೀಗೆ ಹೇಳಿದ್ದಾರೆ : "ನಾನು ನನ್ನ ಕೆಲವು ವೀರಶೈವ ಬಾಂಧವರ ಸೂಚನೆಯ ಮೇಲಿಂದ ಶ್ರೀ ಬಸವೇಶ್ವರನ ಸಂಕ್ಷಿಪ್ತ ಚರಿತ್ರವನ್ನು ಬರೆದು ಮುದ್ರಿಸಿರುತ್ತೇನೆ. ನಮ್ಮ ಮತೋದ್ಧಾರಕನೂ, ಸಮಾಜ ಸುಧಾರಕನೂ ಆದ ಈ ಪುಣ್ಯಶ್ಲೋಕನ ಚರಿತ್ರವನ್ನು ಮುದ್ರಿಸುವ ಹಾಗೂ ಪ್ರಸಿದ್ಧ ಮಾಡುವ ಸುಯೋಗವು ನನಗೆ ಬಂದುದಕ್ಕಾಗಿ ನಾನು ಬಹಳ ಸಂತೋಷಪಡುತ್ತೇನೆ.''

ಶ್ರೀ ರಾಮಕೃಷ್ಣ ಪರಮಹಂಸರ ಸತ್ಕಥೆಗಳು (೧೯೨೮) :

ಇದಲ್ಲದೆ ಶ್ರೀ ರಾಮಕೃಷ್ಣ ಪರಮಹಂಸರ ಸತ್ಕಥೆಗಳು, ಶ್ರೀ ಸಮರ್ಥ ರಾಮದಾಸ ಚರಿತ್ರೆ, ಶ್ರೀ ಸ್ವಾಮಿ ರಾಮತೀರ್ಥರ ಚರಿತ್ರೆ, ಶ್ರೀ ಶನಿಮಹಾತ್ಮೆ (೧೯೪೬, ಎರಡನೆ ಆವೃತ್ತಿ), ಶ್ರೀ ಶಿವ ಲೀಲಾಮೃತ ಕಥೆಗಳು (೧೯೪೮, ಎರಡನೆ ಆವೃತ್ತಿ), ಸುದಾಮ ಚರಿತ್ರ (೧೯೫೨, ಎರಡನೆಯ ಆವೃತ್ತಿ), ವೀರಶೈವ ಶಿವಪೂಜಾವಿಧಿ (೧೯೫೩, ಮೂರನೆಯ ಆವೃತ್ತಿ) ಮೊದಲಾದವುಗಳನ್ನೂ ಬರೆದು ಲೇಖಕರು ಭಕ್ತಿ-ನಿಷ್ಠೆಗಳ ಮಹತ್ವವನ್ನು ಚೆನ್ನಾಗಿ ಬಿಂಬಿಸಿದ್ದಾರೆ. ಶ್ರೀ ರಾಮಕೃಷ್ಣ ಪರಮಹಂಸರ ಸತ್ಕಥೆಗಳು ಎಂಬ ಪುಸ್ತಕ ಸನ್ ೧೯೨೮ ರಲ್ಲಿ ಪ್ರಕಟವಾಯಿತು. ಶ್ರೀ ರಾಮಕೃಷ್ಣರ ಓಜಸ್ವಿ ಚರಿತ್ರೆಯನ್ನಾಗಲಿ, ಸುಬೋಧ ವಚನಗಳನ್ನಾಗಲಿ ಓದಿದವರು, ಕೇಳಿದವರು ಇವರು ಮಹಾ ವಿಭೂತಿಗಳೆಂದು ಹೇಳದಿರಲಾರರು. "ಇವರ ಚರಿತ್ರದ ಮೇಲಿಂದ ಇವರು ಶ್ರೀ ವಿಷ್ಣುವಿನ ಅವತಾರವಾಗಿದ್ದರೆಂತಲೂ ಇವರ ಸತ್ಕಥೆಗಳು ಮತ್ತು ಸುಬೋಧ ವಚನಗಳು ಜನಸಾಮಾನ್ಯರಿಗೆ

ಭಗವದ್ಗೀತೆಯಕೀತಲೂ ಹೆಚ್ಚು ಉಪಯುಕ್ತವಾದವುಗಳೀತಲೂ ಸ್ಪಷ್ಟವಾಗಿ ತಿಳಿಯುವದು''–ಎಂದು ಲೇಖಕರು ಹೇಳುತ್ತಾರೆ. ಮಾಯಾವತಿಯಲ್ಲಿರುವ ಅದ್ವೈತಾಶ್ರಮದವರು ಪ್ರಕಟಿಸಿದ ಇಂಗ್ಲಿಷ್ ಸಂಪುಟವನ್ನು ಆಧಾರವಾಗಿಟ್ಟುಕೊಂಡು ಈ ಕಥೆಗಳನ್ನು ಅನುವಾದ ಮಾಡಿದ್ದಾರೆ.

ಶ್ರೀ ಸಮರ್ಥ ರಾಮದಾಸ ಸ್ವಾಮಿಗಳ ಚರಿತ್ರ (೧೯೧೭, ೨ನೆಯ ಆವೃತ್ತಿ) :

ಇದು ೧೯೩೦ ರಷ್ಟರಲ್ಲಿಯೇ ನಾಲ್ಕು ಆವೃತ್ತಿಗಳನ್ನು ಕಂಡಿತ್ತು. ಈ ಗ್ರಂಥ ರಚನೆಯ ಉದ್ದೇಶವನ್ನು ತಿಳಿಸುವಾಗ ಲೇಖಕರು ಹೀಗೆ ಹೇಳಿದ್ದಾರೆ :

"ಆತ್ಮೋನ್ನತಿಯನ್ನು ಮಾಡಿಕೊಳ್ಳುವದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಿರುತ್ತದೆ. ನಾವು ನಮ್ಮ ಕಾಮಕ್ರೋಧಾದಿ ದುರ್ವ್ಯಾಪಾರಗಳನ್ನು ಕಡಿಮೆ ಮಾಡಿ ಪಾರಮಾರ್ಥಿಕ ವಿಷಯದ ಕಡೆಗೆ ನಮ್ಮ ಮನಸ್ಸನ್ನು ತಿರುಗಿಸಿದ ಹೊರತಾಗಿ ಆತ್ಮೋನ್ನತಿಯಾಗುವದು ಅಸಾಧ್ಯವದೆ. ನಮ್ಮ ಜಡದೇಹಕ್ಕೆ ಪೌಷ್ಟಿಕತೆಯನ್ನು ಕೊಡಲಿಕ್ಕೆ ನಮಗೆ ಮಧುರವಾದ ಫಲಗಳೂ ಷಡ್ರಸಸಂಯುಕ್ತವಾದ ಪಕ್ವಾನ್ನವೂ ಅವಶ್ಯವಿರುವಂತೆ, ನಮ್ಮ ಆತ್ಮೋನ್ನತಿಯನ್ನು ಮಾಡಿಕೊಳ್ಳಲಿಕ್ಕೆ ನಮಗೆ ಸಾಧು ಸಜ್ಜನರ ಚರಿತ್ರಗಳ ವಾಚನವೂ ಶ್ರಮವೂ ಬಹಳ ಅವಶ್ಯವಿರುತ್ತವೆಂದು ಹೇಳಲವಶ್ಯವಿಲ್ಲ.'' ಆದ್ದರಿಂದ 'ಕೇರಳ ಕೋಕಿಲ'ವೆಂಬ ಮರಾಠಿ ಮಾಸಿಕ ಪುಸ್ತಕದಲ್ಲಿ ಪ್ರಸಿದ್ಧವಾಗಿದ್ದ ಸಮರ್ಥರ ಚರಿತ್ರೆಯನ್ನು ಭಾಷಾಂತರಿಸಿ ಲೇಖಕರು ಕನ್ನಡಿಗರಿಗೆ ಒದಗಿಸಿದ್ದಾರೆ. ಇದು ಮೊಟ್ಟಮೊದಲು ವಾಗ್ಭೂಷಣದಲ್ಲಿ ಸನ್ ೧೯೦೮ ರ ಸುಮಾರಿಗೇ ಪ್ರಕಟವಾಗಿತ್ತು. ವಿಶಾಲದೃಷ್ಟಿಯುಳ್ಳವರೂ ಸಮತಾವಾದಿಗಳೂ ಆದ ಗದಿಗೆಯ್ಯನವರು ನಿಗ್ರೋ ಜನಾಂಗವನ್ನು ದಾಸ್ಯ ಶೃಂಖಲೆಯಿಂದ ವಿಮುಕ್ತಗೊಳಿಸಿದ ಅಮೇರಿಕೆಯ ಅಧ್ಯಕ್ಷ ಅಬ್ರಹಾಂ ಲಿಂಕನ್ನನ ಚರಿತ್ರೆಯನ್ನೂ ಕನ್ನಡದಲ್ಲಿ ಬರೆದಿದ್ದಾರೆ. ಆದರ್ಶ ಮಹಿಳಾಮಣಿಯಾದ ಸಾವಿತ್ರಿಯ ಚರಿತ್ರೆಯನ್ನೂ, ವೀರವಿದುಷಿಯಾದ ವಿದುಲೆಯ ಚರಿತ್ರೆಯನ್ನೂ ಬರೆದು ಮಹಿಳಾಪ್ರಪಂಚಕ್ಕೂ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ.

ತ್ರಾಟಿಕಾ ಅಥವಾ ನೊಂಡಗಂಡ ತುಂಟ ಹೆಂಡತಿ (೧೯೨೫, ೨ನೆಯ ಆವೃತ್ತಿ) :

ಇದು ಸುಪ್ರಸಿದ್ಧ ಆಂಗ್ಲ ಕವಿಯಾದ ಶೇಕ್ಸಪಿಯರನು ಬರೆದ 'ಟೇಮಿಂಗ್ ಆಫ್ ದಿ ಶ್ರೂ' ಎಂಬ ನಾಟಕದ ಕನ್ನಡಾನುವಾದವಾಗಿದೆ.

ಮೋಹಿನೀ ಅಥವಾ ನಿಂದಕರ ನಡವಳಿ (೧೯೧೧) :

ಇದು ಶೆರಿಡನ್ನನು ಬರೆದ 'ಸ್ಕೂಲ್ ಫಾರ್ ಸ್ಕ್ಯಾಂಡಲ್' ಎಂಬ ನಾಟಕದ ರೂಪಾಂತರ. ಲೇಖಕರು ಬರೆದ ಎರಡೂ ನಾಟಕಗಳು ಭಾಷಾಂತರಗಳಾಗಿರದೆ, ಕನ್ನಡ ದೇಶದ ನಡೆ ನುಡಿ ಆಚಾರ ವಿಚಾರಗಳಿಗೆ ತಕ್ಕಂತೆ ಯಥೋಚಿತವಾದ ರೂಪಾಂತರಗಳಾಗಿವೆ.

'ಮೋಹಿನೀ' ನಾಟಕ ಸನ್ ೧೯೧೧ರಲ್ಲಿ ಶ್ರೀ ಮುದವೀಡು ಅವರ ಕರ್ನಾಟಕ ಬುಕ್ ಡಿಪೊ ಮುದ್ರಣಾಲಯದಲ್ಲಿ ಮುದ್ರಿತವಾಯಿತು. ಈ ನಾಟಕದ ಪ್ರಸ್ತಾವನೆಯಲ್ಲಿ ಲೇಖಕರು ಹೀಗೆ ಹೇಳಿದ್ದಾರೆ :

''ಈ ನಾಟಕದೊಳಗೆ ನಾವು ನಮ್ಮ ಪ್ರಪಂಚದಲ್ಲಿ ದಿನಾಲು ಅನುಭವಿಸುವ ಸುಖ ದುಃಖಗಳ ಚಿತ್ರವು ತುಂಬಿರುತ್ತದೆಂದು ಹೇಳಿದರೆ ಅತಿಶಯೋಕ್ತಿಯಾಗದು. ದುಷ್ಟರು ಶಿಷ್ಟರನ್ನು ಹ್ಯಾಗೆ ನಿಂದಿಸುತ್ತಾರೆ; ಮುಪ್ಪಿನ ಕಾಲದಲ್ಲಿ ಲಗ್ನ ಮಾಡಿಕೊಂಡ ಗೃಹಸ್ಥರು ಎಷ್ಟು ದುಃಖವನ್ನೂ

ಅವಮರ್ಯಾದೆಯನ್ನೂ ಅನುಭೋಗಿಸುತ್ತಾರೆ; ತರುಣರು ದುಷ್ಟರ ಸಂಗತಿಯಿಂದ ದುರ್ವ್ಯಸನಗಳನ್ನು ಕಲಿತು, ತಮ್ಮಲ್ಲಿದ್ದ ಹಣವನ್ನು ಹಾಳು ಮಾಡಿಕೊಂಡು, ಸಾವುಕಾರರ ಹತ್ತರ ಸಾಲ ಮಾಡಿ ಕಷ್ಟಕ್ಕೆ ಹ್ಯಾಗೆ ಗುರಿಯಾಗುತ್ತಾರೆ; ಧರ್ಮಿಷ್ಠರಾದ ಆಪ್ತಬಾಂಧವರು ಅವರಿಗೆ ಹ್ಯಾಗೆ ಸನ್ಮಾರ್ಗಕ್ಕೆ ತರುತ್ತಾರೆ; ಉದ್ಯೋಗವಿಲ್ಲದ ಮತ್ತು ಮರ್ಯಾದೆಗೆಟ್ಟ ಜನರು ಪರನಿಂದೆಯನ್ನು ಮಾಡುತ್ತ ಹ್ಯಾಗೆ ಕಾಲಕ್ರಮಣ ಮಾಡುತ್ತಾರೆ; ಅನುಭವವಿಲ್ಲದ ಹೆಂಗಸರನ್ನು ದುಷ್ಟ ಜನರು ಹ್ಯಾಗೆ ಮೋಸಗೊಳಿಸುತ್ತಾರೆ; ಪ್ರಾಮಾಣಿಕ ಸೇವಕರು ತಮ್ಮ ಧನಿಯರ ಹಿತವನ್ನು ಮಾಡಲಿಕ್ಕೆ ಹ್ಯಾಗೆ ತತ್ಪರರಿರುತ್ತಾರೆ ಎಂಬ ಇವೇ ಮೊದಲಾದ ಸಂಗತಿಗಳು ಈ ನಾಟಕದಲ್ಲಿ ವಿವೇಚಿಸಲ್ಪಟ್ಟಿವೆ.''

ಅದೂ ಅಲ್ಲದೆ, ಮರಾಠಿ ಭಾಷೆಯಲ್ಲಿ ಈ ನಾಟಕ ಭಾಷಾಂತರ ಹೊಂದುವ ಮೊದಲೇ ಕನ್ನಡದಲ್ಲಿ ತಾವು ಇದನ್ನು ಭಾಷಾಂತರಿಸಿದ್ದಕ್ಕಾಗಿ ನಾಟಕಕಾರರಿಗೆ ತುಂಬಾ ಅಭಿಮಾನವೆನಿಸಿದೆ.

''ಈ ಸಾಮಾಜಿಕ ನಾಟಕವನ್ನು ಇನ್ನೂವರೆಗೆ ಮಹಾರಾಷ್ಟ್ರ ಭಾಷೆಯಲ್ಲಿ ಯಾರೂ ಬರೆದಿಲ್ಲ. ಆದ್ದರಿಂದ ಈ ನಾಟಕವನ್ನು ಮಹಾರಾಷ್ಟ್ರ ಬಂಧುಗಳಿಗಿಂತ ಮುಂಚಿತವಾಗಿಯೇ ಕನ್ನಡ ಭಾಷೆಯಲ್ಲಿ ಬರೆಯುವ ಸುಂದೈವವು ನನಗೆ ಅಕಸ್ಮಾತ್ತಾಗಿ ಒದಗಿದ್ದರಿಂದ ನಾನು ತುಂಬಾ ಸಂತೋಷಪಟ್ಟು, ಈ ನನ್ನ ಅಲ್ಪಕೃತಿಯನ್ನು ಕನ್ನಡ ವಾಚಕರಿಗೆ ಅತ್ಯಂತ ಪ್ರೇಮ ಪೂರ್ವಕವಾಗಿ ಅರ್ಪಿಸುತ್ತೇನೆ.''

ಇಲ್ಲಿಯೂ ಲೇಖಕರು ಪಾತ್ರಗಳ ಹೆಸರುಗಳನ್ನು ನಮ್ಮ ಸಮಾಜಕ್ಕೆ ಅನುಕೂಲವಾಗುವ ಹಾಗೆ, ಸಾರ್ಥಕವಾಗಿ ಬದಲು ಮಾಡಿಕೊಂಡಿದ್ದಾರೆ. ಲೇಡಿ ಸ್ನೀಯರವೆಲ್– ಕುಚೇಷ್ಟಿತಾ; ಕ್ರ್ಯಾಬ್‌ಟ್ರೀ– ವಂಚಕರಾಯ; ಸ್ನೇಕ್‌ಬೈಟ್– ಕ್ಷುದ್ರಕರಾವ್; ಮೇರಿಯಾ– ಮೋಹಿನೀ ಇತ್ಯಾದಿ.

'ತ್ರಾಟಿಕಾ' ನಾಟಕದಲ್ಲಿ ಬ್ಯಾಪ್ಟಿಸ್ಟಾ, ಕುಸುಮಪುರದ ಶ್ರೀಮಂತ ಮುದುಕನಾದ ಲಕ್ಷ್ಮೀಪತಿರಾಯನಾಗಿಯೂ, ಕ್ಯಾಥರಿನಾ, ಅವನ ಹಿರಿಯಮಗಳಾದ ರಂಗೂ ಆಗಿಯೂ, ಪೆಟ್ರೂಶಿಯೊ ಪ್ರತಾಪರಾವ ಆಗಿಯೂ ಮಾರ್ಪಟ್ಟಿದ್ದಾರೆ. ಗ್ರೂಮಿಯೋ ನೀಲ್ಯಾ ಆಗಿ, ಕರ್ಟಿಸ್ ತಿಪ್ಯಾ ಆಗಿ, ಟ್ರೇನಿಯೊ ತಮ್ಮ್ಯಾ ಆಗಿ ಮಾರ್ಪಾಡು ಹೊಂದಿದ್ದಾರೆ. ತ್ರಾಟಿಕಾ ನಾಟಕವನ್ನು ಮರಾಠಿ ಮೂಲದಿಂದ ಭಾಷಾಂತರಿಸಲಾಗಿದೆ. ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಪ್ರೊ.ಕೇಳಕರ್ ಎಂಬವರು ೧೮೯೧ರ ಸುಮಾರು ಶಾಹೂನಗರವಾಸಿ ಮಹಾರಾಷ್ಟ್ರ ನಾಟಕ ಮಂಡಳಿಯವರಿಗೋಸ್ಕರ ಮರಾಠಿಯಲ್ಲಿ ರಚಿಸಿದ ಈ ನಾಟಕವನ್ನು ಗ್ರಂಥಕರ್ತರು ಆ ಕಂಪನಿ ಸನ್ ೧೯೦೮ರಲ್ಲಿ ಧಾರವಾಡಕ್ಕೆ ಬಂದಾಗ ಅವರು ಆಡಿದ್ದನ್ನು ನೋಡಿದರು. ಆಗ ಧಾರವಾಡದಲ್ಲಿದ್ದ ಭರತಕುಲೋತ್ತೇಜಕ ನಾಟಕ ಮಂಡಳಿಯವರು ತಮಗಾಗಿ ಈ ನಾಟಕವನ್ನು ಕನ್ನಡದಲ್ಲಿ ಅನುವಾದ ಮಾಡಿಕೊಡಿರೆಂದು ಹೇಳಲು ಲೇಖಕರು ಈ ಕೃತಿಯನ್ನು ಭಾಷಾಂತರಿಸಿದರು. ಇದರ ಎರಡನೆಯ ಆವೃತ್ತಿ ೧೯೨೨ರಲ್ಲಿ ಮುದ್ರಿತವಾಯಿತು.

ಈ ನಾಟಕ ಭಾಷಾಂತರವಾಗಿದ್ದರೂ, ಓದುವಾಗ ಭಾಷಾಂತರವೆಂದೆನಿಸದೆ, ಸ್ವೋಪಜ್ಞ ಕೃತಿಯ ಹಾಗೆಯೇ ಕಂಡು ಬರುತ್ತದೆ. ಇಲ್ಲಿಯ ಮಾತಿನ ನುಡಿಕಟ್ಟು, ಗಾದೆಗಳ ಬಳಕೆ, ಭಾರತೀಯ ವಾತಾವರಣ, ಭಾಷೆಯ ಸಲೀಲತೆ ಎಲ್ಲವೂ ಸ್ವೋಪಜ್ಞ ಕೃತಿಯಲ್ಲಿಯಂತೆಯೇ ಕಂಡು ಬರುತ್ತವೆ. ಉದಾಹಣೆಗೆ ಇದು ರಂಗರಾವನ ಮಾತು :

''.... ವಿದ್ಯೆಯ ಗಾಳಿಯು ಸಹ ಸ್ಪರ್ಶವಾಗದಿರುವವರಿಗೆ ಬಹುಕಾಲದಿಂದ ನಡೆದು ಬಂದಂಥ ಕಾಡು ಮಾರ್ಗವನ್ನು ಬಿಟ್ಟು ಎರಡನೇ ಗತಿಯೇನು ? ನಿನಗೆ ಅನುಭವವು ಹೆಚ್ಚಿಗಿರುತ್ತದೆಂಬುವದು

ನಿಜವೇ. ಆದರೆ ಜಗತ್ತಿನಲ್ಲಿ, ಕಿಂಬಹುನಾ ನಮ್ಮ ದೇಶದಲ್ಲಿ ಕ್ವಚಿತ್ತಾಗಿ ಕಂಡು ಬರುವಂಥ ಮಾರ್ಗದ ಸಂಬಂಧದಿಂದ ನಿನಗೆ ಜ್ಞಾನವಿರುವ ಸಂಭವವೆಲ್ಲಿರುತ್ತದೆ. ನಾನು ನಿನಗೆ ಒಂದೇ ಮಾತು ಹೇಳುತ್ತೇನೆ ಕೇಳು. ತಾಯಿ ತಂದೆಗಳ ಮೇಲೆ ಕೈಯೂರಿ ಕುಳಿತು, 'ಅವರು ಮಾಡಿದ್ದೇ ಮಟ್ಟ, ಕಟ್ಟಿದ್ದೆ ಪಟ್ಟ' ಎಂದು ತಿಳಿದುಕೊಂಡು ಕುಳಿತುಕೊಳ್ಳುವ ಹೆಣದತ್ತನು ನಾನಲ್ಲ.'' (ಪು. ೨)

ಹಾಗೆಯೇ, "ಅಜ್ಜ ಆರು ತಲೆ, ಮುತ್ಯ ಮೂರು ತಲೆಗಳಿಂದ ಯಾವತ್ತು ಜನರು ತಮ್ಮ ಹಿರಿಯರು ಆರಿಸಿದಂಥ ಹೆಂಡಂದಿರನ್ನೇ ಲಗ್ನ ಮಾಡಿಕೊಂಡು ಸುಖದಿಂದ ಸಂಸಾರ ಮಾಡುತ್ತ ಬರುತ್ತಾರೆ'' (ಪು. ೨); ''ಇಂದ್ರಿಯ ದಮನದಲ್ಲಿ ಅವರು ಪ್ರತಿ ಶುಕ್ರಾಚಾರ್ಯರಾಗಲಿಕ್ಕೆ ಹತ್ತಿರುತ್ತಾರೆ'' (ಪು. ೪); ತ್ರಾಟಿಕಾ : "ನನಗೆ ಮುದ್ದು ಮಗಳೆಂದು ಅನ್ನುತ್ತ ಹೋಗಬೇಡಿರಿ. ಇಲ್ಲಿರುತ್ತಾಳೆ ನೋಡಿರಿ. ನಿಮ್ಮ ಮುದ್ದಿ – ಬಂಗಾರದ ಮುದ್ದಿ" (ಪು. ೬) ಬಾಪುರಾವ : ''ಜಯ ಮಾತೇ ಭವಾನೀ, ಜಯ ಮಾಲತೇಶಾ, ಈ ರಾಕ್ಷಸಿಯಿಂದ ನಮ್ಮನ್ನು ರಕ್ಷಿಸು'' (ಪು.೮); ತ್ರಾಟಿಕಾ : "ನನ್ನ ಕಂದಮ್ಮಾ; ನನ್ನ ಬಂಗಾರದ ಕೂಸೇ; ಅಲಬೇಲಮ್ಮಾ, ಅಲಬೇಲ'' (ಅಳಬೇಡಮ್ಮ, ಅಳಬೇಡ) (ಪು. ೯); ಭೀಮರಾವ : "(ತ್ರಾಟಿಕೆಯ) ಬಾಯಂತೂ ಕೇವಲ ಮುಲುಖಮೈದಾನದ ತೋಫು'' (ಪು. ೧೩); ರಂಗರಾವ– "ರೋಗಿಯ ಪ್ರಾಣ ಹೋಗುವ ಹೊತ್ತಿಗೆ ವೈದ್ಯನ ವಾಗ್ಬಟವು ನಡೆದಿರುತ್ತದೆ." (ಪು. ೧೪); ಹಾಗೆಯೇ ಈ ಪ್ರಯೋಗಗಳು : "ಲಗಾವ ಠೋಸೆ, ಅಬ್ಬೀಕೆ ಅಬ್ಬೀ, ಖೂಪ ಜೋರಸೇ'' (ಪು. ೨೨); "ಲತ್ತೀ ತಿನ್ನದೇ ಕತ್ತಿ ದಾರೀ ನಡೆಯುವದಿಲ್ಲ" (ಪು. ೨೨); ''ಸೆಟನೀ, ನನ್ನ ಮುಂದ ವ್ಯರ್ಥ ಬಡಿವಾರದ ಮಾತು ಆಡಬೇಡ'' (ಪು. ೪೧); ''ಕದ್ದ ರೊಟ್ಟಿ ಬ್ಯಾರೆ ದೇವರ ಪರಸಾದ ಬ್ಯಾರೆ'' (ಪು. ೯೭); ''ಅರವತ್ತಕ್ಕೆ ಅರುವುಮರವು''; ''ವರದಲ್ಲಿ ದುಗ್ಗಾಣಿ''– ಇವೆಲ್ಲ ಲೇಖಕರು ಬರೀ ಮಕ್ಕಿಕಾಮಕ್ಕಿ ಭಾಷಾಂತರ ಮಾಡಿರದೇ ಈ ಕೃತಿಗಳ ಭಾವವನ್ನೆಲ್ಲ ಸ್ವಯಂವಾಗಿ ಮಾಡಿಕೊಂಡು, ತಮ್ಮ ಪ್ರತಿಭೆಯ ಮೂಸೆಯಲ್ಲಿ ಕುದಿಗೊಳಿಸಿ, ಆಭರಣವನ್ನಾಗಿ ಮಾಡಿದ್ದಾರೆಂದು ಹೇಳುತ್ತವೆ.

ಕಾಯಿದೆ ಗ್ರಂಥಗಳು :

ಗದಿಗೆಯ್ಯನವರ ಕಾಲದಲ್ಲಿ ಕನ್ನಡ ಸಾಹಿತ್ಯ ಕೃತಿಗಳ ಪಾಡೇ ಇನ್ನೂ ವಿಪರೀತವಾಗಿದ್ದಾಗ, ಕಾಯಿದೆ ಗ್ರಂಥಗಳ ಪಾಡನ್ನಂತೂ ಹೇಳುವ ಹಾಗೆಯೇ ಇರಲಿಲ್ಲ. ಆದುದರಿಂದ ಈ ಕೊರತೆಯನ್ನು ನೀಗಿಸುವದಕ್ಕಾಗಿ ಅವರು 'ಗ್ರಾಮ ಪೋಲೀಸ ಆ್ಯಕ್ಟ್' 'ಕೊಂಡವಾಡ ಆ್ಯಕ್ಟ' 'ಗ್ರಾಮಪಂಚಾಯಂತಿ ಆ್ಯಕ್ಟ', 'ಗ್ರಾಮ ಪೋಲೀಸ ಪಾಟೀಲ ಮ್ಯಾನ್ಯುಅಲ್', 'ದೊಡ್ಡಿದಾರರ ನಿಯಮಗಳು' 'ಮಾಮ್ಲೆದಾರ ಕೋರ್ಟ ಆ್ಯಕ್ಟ' ಹಾಗೂ 'ದಿವಾಣಿ ಕಾಯಿದೆ ಬೋಧಿನಿ' ಎಂಬ ಪುಸ್ತಕಗಳನ್ನು ಬರೆದು ಕನ್ನಡಿಗರಿಗೆ ಆಯಾ ಕ್ಷೇತ್ರಗಳಲ್ಲಿ ಕಾಯಿದೆಯ ಯಥಾರ್ಥ ಜ್ಞಾನವಾಗುವಂತೆ ಮಾಡಿದರು. ಇಂಗ್ಲಿಷದಲ್ಲಿಯ ಕಾಯಿದೆ ಗ್ರಂಥಗಳಲ್ಲಿಯ ವಿಷಯದ ಅರ್ಥ, ಭಾವ, ಬಂಧ, ಉದ್ದೇಶ, ಇಂಗಿತಗಳಿಗೆ ಚ್ಯುತಿಬಾರದಂತೆ ಭಾಷಾಂತರಿಸುವದು ನಿಜವಾಗಿಯೂ ಕಠಿಣವಾದ ಕೆಲಸ. ಈ ಗಡುಚಾದ ಕಾರ್ಯವನ್ನು ಗದಿಗೆಯ್ಯನವರು ಒಳ್ಳೇ ಲೀಲಾಜಾಲವಾಗಿ ನಿರ್ವಹಿಸಿದ್ದಾರೆ. ಈ ಭಾಗದಲ್ಲಿ ಕನ್ನಡವೇ ತಾಯ್ನುಡಿಯಾಗಿರುವ ಜನರಲ್ಲಿ ಮೊಟ್ಟ ಮೊದಲು ಕಾಯಿದೆ ಜ್ಞಾನವನ್ನು ಸಂಪಾದಿಸಿ, ಅದರ ಇಂಗಿತವನ್ನರಿತು ಸಲವತ್ತು ವರ್ಷ ಅವಿರಳವಾಗಿ ವಕೀಲಿ ವ್ಯವಸಾಯವನ್ನು ಮಾಡಿ ನ್ಯಾಯಾಲಯಗಳಲ್ಲಿಯೂ, ಹೊರಗೂ ಅತ್ಯಂತ ಪ್ರಶಸ್ತಿ ಪಡೆದು, ತಾವು ಪರಿಶ್ರಮದಿಂದ ದೊರಕಿಸಿದ ಜ್ಞಾನಾನುಭವಗಳ ಲಾಭವನ್ನು ಕನ್ನಡ ಬಂಧುಗಳಿಗೆ ಒದಗಿಸಿಕೊಡಬೇಕೆಂಬ ಸದುದ್ದೇಶದಿಂದ ಈ ಲೇಖಕರು ಬರೆದ ಕೃತಿಗಳಿವು.

"ನನ್ನ ಕೈಯಲ್ಲಿ ಒಂದು ತೊಟ್ಟು ರಕ್ತವಿರುವ ಪರ್ಯಂತ ಲೆಕ್ಕಣಿಕೆಯನ್ನು ಖಂಡಿತವಾಗಿಯೂ ಬಿಡುವದಿಲ್ಲ"— ಎಂದು ಪಣ ತೊಟ್ಟ ಗದಿಗೆಯ್ಯನವರು ಶಿವೈಕ್ಯರಾಗುವದಕ್ಕೆ ಕೇವಲ ಆರು ವಾರ ಮೊದಲು, ಅವರು ಮಧುಮೇಹ ವೇದನೆಯಿಂದ ಹಾಸಿಗೆ ಹಿಡಿಯುವ ಕಾಲದವರೆಗೆ, ಲೆಕ್ಕಣಿಕೆಯನ್ನು ಬಿಟ್ಟಿರಲಿಲ್ಲ.

ಹುಚ್ಚಯ್ಯನವರು ಪ್ರಾರಂಭಿಸಿದ ಚಂದ್ರೋದಯ ಮುದ್ರಣಾಲಯವನ್ನು ಇವರು ಆಧುನಿಕ ಕನ್ನಡಾಕ್ಷರದ ಮೊಳೆಗಳೊಂದಿಗೆ ಹಾಗೂ ಇನ್ನಿತರ ಯಂತ್ರಸಾಮಗ್ರಿಗಳೊಂದಿಗೆ ಬೆಳೆಸಿದರು. ಇದಲ್ಲದೆ ತಮ್ಮ ತಂದೆಯವರ ಸಂಪಾದಕತ್ವದಲ್ಲಿ ಹೊರಡುತ್ತಿದ್ದ ಚಂದ್ರೋದಯ ವೃತ್ತಪತ್ರವನ್ನು ಮತ್ತು ವಾಗ್ದೇವಿ ಮಾಸಪತ್ರವನ್ನು ಅವರ ತಂದೆಯವರು ನಡೆಸಿಕೊಂಡು ಬಂದಂತೆಯೇ ಮುಂದುವರಿಸಿದ ರಲ್ಲದೇ, ಅವುಗಳ ಪ್ರಚಾರ ಹೆಚ್ಚಾಗಿ ಅವುಗಳಿಂದ ಜನರಿಗೆ ಒಳ್ಳೇ ಸಮರ್ಥವಾದ ರೀತಿಯಲ್ಲಿ ಸೇವೆ ಸಲ್ಲುವಂತೆ ಮಾಡಿದರು. ಗದಿಗೆಯ್ಯನವರ ವಿಶೇಷ ಪ್ರಯತ್ನದ ಫಲವಾಗಿ ಕನ್ನಡ ಗ್ರಂಥಕರ್ತರ ಪ್ರಥಮ ಪರಿಷತ್ತೂ ಧಾರವಾಡದಲ್ಲಿ ಸೇರಿತ್ತು.

ಈ ತೆರನಾದ ಕನ್ನಡ ನುಡಿಯ ಸೇವೆಯನ್ನು ಗದಿಗೆಯ್ಯನವರು ಮಾಡಿದುದು ತುಂಬಾ ಶ್ಲಾಘನೀಯವಾಗಿದೆಯೆಂದು ಕನ್ನಡ ಸಾಹಿತ್ಯಭಕ್ತರು ನೆನೆದುಕೊಂಡು ಆ ಮಹಾಸೇವೆಯ ಗೌರವ ವೆಂದು ಗದಿಗೆಯ್ಯನವರಿಗೆ ಮಡಿಕೇರಿಯಲ್ಲಿ ಸೇರಿದ ಸಾಹಿತ್ಯ ಸಮ್ಮೇಲನದ ಅಧ್ಯಕ್ಷಪೀಠವನ್ನು ಅಲಂಕರಿಸಲು ಆಮಂತ್ರಣವನ್ನಿತ್ತಿದ್ದರು. ಆದರೆ ತಾನೊಂದು ಬಗೆದರೆ ದೈವ ಮತ್ತೊಂದು ಬಗೆವು ದೆಂಬಂತೆ ಗದಿಗೆಯ್ಯನವರು ಮೇಲೆ ಹೇಳಿದಂತೆ ಮಧುಮೇಹ ಪೀಡಿತರಾಗಿ ಹಾಸಿಗೆ ಹಿಡಿದುದರಿಂದ ಆಮಂತ್ರಣವನ್ನು ಸ್ವೀಕರಿಸುವುದು ಅವರಿಗೆ ಶಕ್ಯವಾಗಲಿಲ್ಲ. ಮುಂದೆ ಸ್ವಲ್ಪೇ ದಿನಗಳಲ್ಲಿ, ಅಂದರೆ ದಿನಾಂಕ ೭–೧–೧೯೩೨ರ ದಿವಸ ಅವರು ಅದೇ ಬೇನೆಯಿಂದ ಶಿವೈಕ್ಯರಾದರು[೧].

—

[೧] ಇಲ್ಲಿ ಬರುವ ಚಾರಿತ್ರಿಕ ಅಂಶಗಳನ್ನೆಲ್ಲ ಗದಿಗೆಯ್ಯನವರ ಪುತ್ರರಾದ ಶ್ರೀ ಸಿ. ಬಿ. ಹೊನ್ನಾಪುರಮಠ ಅವರು ಧಾರವಾಡ ಸಾಹಿತ್ಯ ಸಮ್ಮೇಲನ ಕಾಲದಲ್ಲಿ ಸಮರ್ಪಿಸಿದ ಲೇಖದಿಂದ ಆಯ್ದುಕೊಳ್ಳಲಾಗಿದೆ. (ಲೇಖ ಅಪ್ರಕಟಿತ)

ಹಿರಣ್ಯಗರ್ಭ

(ಸಂ. ೧೮೭೦)

ಇವರು 'ವಿಶ್ವಕೃತಿ ಪರೀಕ್ಷಣ' ಎಂಬ ಗ್ರಂಥವನ್ನೂ, 'ಸರಸ್ವತೀ ಪ್ರಬಂಧ' ಎಂಬ ಗ್ರಂಥವನ್ನೂ ಬರೆದಿದ್ದಾರೆ. 'ವಿಶ್ವಕೃತಿ ಪರೀಕ್ಷಣ' ಕಲ್ಲಚ್ಚಿನ ೧೨೪ ಪುಟಗಳ ಗ್ರಂಥವಾಗಿದೆ. ಅಕ್ಷರ ಮುದ್ದಾಗಿವೆ. ಗ್ರಂಥಾಂತ್ಯದಲ್ಲಿ "ಸಂಪೂರ್ಣ ವಿದ್ವಾಂಸರುಗಳಿಗೆ ನಾನು ಹೇಳಿಕೊಂಡಿರುವದೇನಂದರೆ ಅರ್ಗಳ ಲೀಲಾವತಿ ಪ್ರತಿಗಳು ಬಹು ಜೀರ್ಣವಾದವುಗಳೊಂದೊಂದೆ ಇರುವದರಿಂದೆ ಅವುಗಳಲ್ಲಿ ವರ್ಣಗಳು ಲೋಪವಾದವುಗಳಿಗೆ ಬರಿಯುವದರಿಂದ ತಪ್ಪಾದವುಗಳಿಗೆ ನಾನು ಬಲ್ಲ ಮಟ್ಟಿಗೆ ತಿದ್ದಿ ಶುದ್ಧ ಪ್ರತಿಗಳನ್ನು ಮಾಡಲಾಗಿ ಅಚ್ಚು ಹಾಕುವ ಕಾಪಿಗಾರ ಬರೆಯುವದರಿಂದೆ ಅವಲ್ಲದೆ ಮತ್ತು ಬಹಳವಾಗಿ ಪುಸ್ತಕದಲ್ಲಿ ಅಶುದ್ಧಗಳು ಹೊರಟವು........ ನನಗೆ ಕಾಣದೆ ಮತ್ತು ಅಶುದ್ಧಗಳಂ ಕಂಡಲ್ಲಿ ನನಗೆ ಪತ್ರ ಮುಖದಿಂದೆ ತಿಳಿಸಬೇಕು. ಯರಡನೆಯಂವರ್ತಿ ಶುದ್ಧ ಲೇಖನ ಮುದ್ರೆಯಿಂದೆ ಅಚ್ಚು ಹಾಕಲಾಗುತ್ತದೆ. ನಾನಿರುವ ಸ್ಥಲವು ಹುಬ್ಬಳ್ಳಿಯೂ........" ಎಂದು ಹೇಳಿರುವದರಿಂದ ಇವರು ಹುಬ್ಬಳ್ಳಿಯವರೆಂದು ಕಂಡುಬರುತ್ತದೆ. ಇವರಿಗೆ ರಾಜರಾಜ ಎಂಬ ಹೆಸರೂ ಇದ್ದಂತೆ ಕಾಣುತ್ತದೆ.

ಈ ಕೃತಿಯಲ್ಲದೆ ಗ್ರಂಥದ ೧೯ನೆಯ ಪುಟದಲ್ಲಿ "ಇದು ಬುಧವಿದಿತ ವಿವಿಧವಿಧವಿನಯ ರಹಿತ ಸಮುಂನದ ಸಮಾಸೋದ್ಧಿತಾಖರ್ವಗರ್ವ ಕುರಂಗರಂಗ ನಿರ್ಧೂತ ಶಾರ್ದೂಲ ಹಿರಣ್ಯಗರ್ಭ ಕವಿ ಶಿರೋಮಣಿ ನಿರೂಪಿತ ಸರಸ್ವತಿ ಮಹಾಪ್ರಬಂಧದೊಳ್ ನಾಯಿಕಾಭ್ಯುದಯವರ್ಣನಂ ದ್ವಿತಯಾಸ್ವಾಸಂ ಸಮಾಪ್ತಂ" ಎಂದು ಹೇಳಿರುವದರಿಂದ ಇವರು 'ಸರಸ್ವತಿ ಮಹಾಪ್ರಬಂಧ' ಎಂಬ ಗ್ರಂಥವನ್ನೂ ಬರೆದಿರಬೇಕೆಂದು ತೋರುತ್ತದೆ. ಒಳ್ಳೆಯ ಕಾವ್ಯದ ದೃಷ್ಟಾಂತವಾಗಿ ನೇಮಿಚಂದ್ರನ ಲೀಲಾವತಿ, ಅಗ್ಗಳನ ಚಂದ್ರಪ್ರಭ ಪುರಾಣ ಮತ್ತು ಈ ಮೇಲಿನ ಸರಸ್ವತಿ ಮಹಾಪ್ರಬಂಧಗಳಿಂದ ಆಯ್ದು ಪದ್ಯಭಾಗಗಳನ್ನು ವಿಸ್ತಾರವಾಗಿ ಕೊಟ್ಟಿದ್ದಾರೆ.

ಇಷ್ಟದೇವತಾ ಪ್ರಾರ್ಥನೆಯಲ್ಲಿ–

ಶ್ರೇಯಶ್ರೀರತ ಸಮಯದೊ
ಳಾಯತ ತತ್ಸಖೀ ಮುಖೇಕ್ಷಣೋದಯ ಶಾತಾ
ಗ್ರೀಯ ಪ್ರಮುದದಿ ಮಮಧೀ
ಸ್ತ್ರೀಯಂ ತಳ್ಕೈಸಂ ವಿಮಲ ತೀರ್ಥಪರಾರ್ಥಾ

–ಎಂದು ವಿಮಲನಾಯಕ ತೀರ್ಥಂಕರರನ್ನು ಸ್ತುತಿಸಿರುವದರಿಂದಲೂ, ಲೀಲಾವತಿ ಪ್ರಬಂಧ ಮತ್ತು

ಚಂದ್ರಪ್ರಭ ಪುರಾಣಗಳನ್ನು ತುಂಬಾ ಮೆಚ್ಚಿಕೊಂಡು ಶ್ಲಾಘಿಸಿರುವದರಿಂದಲೂ ಇವರು ಜೈನಕವಿಯೆಂದು ಕಾಣುತ್ತದೆ.

'ರಾಜಾಪ್ರತ್ಯಕ್ಷ ದೇವತಾ' ಎಂಬ ಸೂತ್ರದಂತೆ ವಿಕ್ಟೋರಿಯಾ ಮಹಾರಾಣಿಯ ವರ್ಣನೆಯನ್ನು ಮಾಡಿದ್ದಾರೆ :

ಶ್ರೀವಿಭು ವಿಕಠೋರಿ ಮಹಾ
ದೇವಿಯ ಕರುಣೈಕಲಕ್ಷಕರ ಚಂದ್ರಿಕೆ ತಾಂ
ತೀವಿರೆ ಕರ್ನಾಟಕ ವಿಬು
ಧಾವಳಿ ಚೇತಶ್ಚಕೋರಮುಲಿಗುಂ ಮುದದಿಂ ॥

ವಿಶ್ವಕೃತಿ ಪರೀಕ್ಷಣ (೧೮೭೩) :

೧೨೪ ಪುಟಗಳ ಈ ಗದ್ಯ ಗ್ರಂಥ ಅನೇಕ ದೃಷ್ಟಿಗಳಿಂದ ಕೌತುಕಪೂರ್ಣವಾಗಿದೆ. ಈ ಗ್ರಂಥದಲ್ಲಿ ಲೇಖಕರು ಕವಿಗಳಲ್ಲಿ ಸುರಕವಿ, ವರಕವಿ, ನರಕವಿ, ತಸ್ಕರಕವಿ, ಕರ್ದಮಕವಿ ಎಂದು ಐದು ಭೇದಗಳನ್ನು ಮಾಡಿ ಇವೆಲ್ಲಕ್ಕೂ ಉದಾಹರಣೆಗಳನ್ನು ಕೊಟ್ಟಿದ್ದಾರೆ.

ಸುರಕವಿಯೆಂದರೆ ಸ್ವರ್ಗಲೋಕದ ಕವಿ— ಬ್ರಹ್ಮ, ಶುಕ್ರ ಮೊದಲಾದವರು. ಗೌತಮ, ವಾಲ್ಮೀಕಿ, ವಸಿಷ್ಠ, ನಾರದ, ಮಾರ್ಕಂಡೇಯ, ವ್ಯಾಸ ಮೊದಲಾದವರು ವರಕವಿಗಳು. ನರಕವಿಯೆಂದರೆ 'ಭಾಷಾಂತರ ಕವಿ'– ಸಮಂತಭದ್ರ, ಅಕಲಂಕ, ಪೂಜ್ಯಪಾದ, ತುಂಗಾಚಾರ್ಯ, ಶಂಕರಾಚಾರ್ಯ, ಪಾಣಿನಿ, ಬಾಣ, ಕಾಳಿದಾಸಾದಿಗಳು. ಕನ್ನಡದಲ್ಲಿ ನೇಮಿಚಂದ್ರ ಮೊದಲಾದವರು. "ತಸ್ಕರ ಕವಿಯೆಂದರೆ ಪ್ರಾಗ್ಗ್ರಂಥಚೋರ ಕವಿಯು." "ಕರ್ದಮ ಕವಿಯೆಂದರೆ ಕಲ್ಮಷಯುಕ್ತ ಕವಿಯು." "ಸಂಸ್ಕೃತ ಕರ್ನಾಟಕ ಶಾಸ್ತ್ರಗಳಂ ನೋಡದೆ ಬಲ್ಲವರೆಂಬುವದು ಕಿವಿಗಳಿಂ ಕೇಳ್ದು ಮುಂನಿನವರಂತೆ ಕವಿತ್ವವಂನು ಮಾಡಲಪೇಕ್ಷಿಸಿ ಶುದ್ಧಾಶುದ್ಧ ಶಬ್ದಗಳನ್ನೆಣಿಸದೆ ಛಂದಕ್ಕೆ ಕುಂದು ಬಂದುದನ್ನು ಬಗೆಯದೆ ಪದ್ಯಗಳಾದಡಾಯಿತೆಂದು ಬಾಯಿಗೆ ಬಂದಂತೆ ಶಬ್ದಗಳನ್ನು ಕಲ್ಪಿಸಿ ಗ್ರಂಥಗಳನ್ನು ನಿರ್ಮಿಸುತ್ತಾರೆ."[೧]

ತಸ್ಕರ ಕವಿ ಪ್ರಕರಣದಲ್ಲಿ ಲೀಲಾವತಿ. ಚಂದ್ರಪ್ರಭ ಪುರಾಣದಿಂದ ರಾಜಶೇಖರ ಕಾವ್ಯದಲ್ಲಿ ತೆಗೆದುಕೊಂಡಂತೆಯೂ, ಜೈಮಿನಿಯಿಂದ (?) ಚನ್ನಬಸವೇಶ್ವರ ಪುರಾಣದಲ್ಲಿ ತೆಗೆದುಕೊಂಡಂತೆಯೂ ಹಲವು ಉದಾಹರಣೆಗಳನ್ನು ಕೊಡಲಾಗಿದೆ.

ಕರ್ದಮಕವಿತ್ವ ರಚನೆಯ ವಿಭಾಗದಲ್ಲಿ "ಮಂಗಳೂರ ಕ್ರೈಸ್ತರಿಂದೆ ರಚಿಸಲ್ಪಟ್ಟ ಮೂರನೇಯ ಪುಸ್ತಕದಲ್ಲಿದ್ದ" ತಪ್ಪುಗಳನ್ನೂ, ವೆಂಕಟ ರಂಗೋ ಕಟ್ಟಿ, ಶೇಷೋ ರಾಮಚಂದ್ರ ಚುರಮರಿ, ಗಂಗಾಧರ ಮಡಿವಾಳೇಶ್ವರ ತುರಮುರಿಯವರ 'ಕಂನಡ ಕವಿತಾ ಪದ್ಧತಿ' 'ಕವಿತೆಯ ಮೊದಲನೆಯ ಪುಸ್ತಕ' ಮತ್ತು ವೀರಭದ್ರ ಮಡಿವಾಳೇಶ್ವರ ಇವರು ರಚಿಸಿದ ಕಂನಡದ ಎರಡನೆಯ ಪುಸ್ತಕದಲ್ಲಿಯ ಪದ್ಯಗಳಲ್ಲಿಯ ತಪ್ಪುಗಳನ್ನು ಎತ್ತಿ ತೋರಿಸಲಾಗಿದೆ. ಮಂಗಳೂರು ಕ್ರೈಸ್ತ ರಚನೆಯಲ್ಲಿ ಈ ಪದ್ಯವನ್ನು ಹೇಳಲಾಗಿದೆ :

ಮುದ್ದೆ ಕಬ್ಬಿಣ ಜಲದೊಳಿರಿಸಿದ
ಡದ್ದುವುದು ಕೇಳ್ ಅದನೆ ಪಾತ್ರೆಯ
ತಿದ್ದಿದರೆ ತೇಲುವದು ತಿಳಿ ಆ ಪರಿಯಲೆ ಬುದ್ಧಿ

೧ ವಿಶ್ವಕೃತಿ ಪರೀಕ್ಷಣ : ೧೮೭೩ : ಪು. ೬-೭.

ಹೊದ್ದಿ ಮಲಿನವು ಬೆರಕೆಯಾಗಿಹ
ಬುದ್ಧಿ ಕೆಡುವನು ವಿಮಲ ಬೋಧೆಯು
ಸಿದ್ಧಿಯಾದರೆ ಪಾಪ ಕಡಲಿನ ಹಡಗವಹುದೆಂದಾ

ಅನಂತರ ಲೀಲಾವತಿ ಪ್ರಬಂಧ, ಚಂದ್ರಪ್ರಭ ಪುರಾಣ ಮತ್ತು ಸರಸ್ವತೀಪ್ರಬಂಧಗಳಿಂದ ಒಳ್ಳೆಯ ಪದ್ಯಭಾಗಗಳನ್ನು ವಿವರವಾಗಿ ಕೊಟ್ಟು ಪುಟ ೧೨೧ರಲ್ಲಿ ಕೇಶಿರಾಜನ ಶಬ್ದಮಣಿದರ್ಪಣ ದಲ್ಲಿಯ ಪ್ರಯೋಗಗಳ ಅನೇಕ ಆಕರಗಳನ್ನು ಕವಿ ಸೂಚಿಸಿದ್ದಾರೆ :

"ಕಟ್ಟಿದರ್ ಮುಟ್ಟಿದರೆಂಬುವದು ಲೀಲಾವತಿ ಪ್ರಥಮಾಧ್ಯಾಯದ ೧೧ನೆಯ ಪದ್ಯವು. ತೆಗೆದೆಯ್ ಎಂಬುವದು ಲೀಲಾವತಿ ತೃತೀಯಾಧ್ಯಾಯದ ೮೬ನೆಯಂ ಪದ್ಯವು" ಇತ್ಯಾದಿ.

"ಚಂದ್ರಪ್ರಭಾಗ್ರ್ಗಳ ಪ್ರಬಂಧವು ಜನಿಸಿ ಸನ್ ೧೮೭೩ ಯಿಸವಿಗೆ ೬೮೪ ವರ್ಷಗಳಾದವು" ಎನ್ನುವದರಿಂದ ವಿಶ್ವಕೃತಿ ಪರೀಕ್ಷಣವು ಸನ್ ೧೮೭೩ರಲ್ಲಿ ರಚಿತವಾದಂತೆ ಕಾಣುತ್ತದೆ.

ಪ್ರಾಚೀನ ಮತ್ತು ಅರ್ವಾಚೀನ ಕವಿ-ಕೃತಿಗಳನ್ನು ಈ ರೀತಿ ವಿಮರ್ಶೆಯ ನಿಕಷಕ್ಕೆ ಹಚ್ಚಿ ಸ್ಪಷ್ಟವಾದ ವಿಮರ್ಶೆಯ ಅಭಿಪ್ರಾಯಗಳನ್ನು ಹೇಳಿದ್ದರಿಂದ ಹಿರಣ್ಯಗರ್ಭನು ಸಮಕಾಲೀನ ಸಾಹಿತ್ಯ ವಿಮರ್ಶೆಯ ಮೊದಲಿಗನೆಂದು ಹೇಳಬಹುದು.

ಸರಸ್ವತೀ ಪ್ರಬಂಧ (?) :

"ಇದು ಚಂಪು ರೂಪವಾಗಿದೆ. ನಮಗೆ ದೊರೆತ ಪ್ರತಿ ಅಸಮಗ್ರ; ಗ್ರಂಥವು ೧೨ ಆಶ್ವಾಸ ಗಳುಳ್ಳದು ಎಂದು ಹೇಳುತ್ತಾರೆ. 'ಕೃತಿ ಲೀಲಾವತಿ ವಲ್ಲಭಂ, ಚತುರತಾ ಚಾತುರ್ಮುಖಂ, ಶ್ರೀ ಸರಸ್ವತೀದೇವೀ ಕೃತಿಯೆಂಬ ಪೂರ್ವಕಥೆಯಂ ಚಂಪೂ ನಿಬಂಧತ್ವದಿಂ ರಚಿಸುವೆನು' ಎಂದು ಕವಿ ಹೇಳುತ್ತಾನೆ. ತನ್ನ ಗ್ರಂಥದ ಉತ್ಕೃಷ್ಟತೆಯನ್ನು ಕವಿ ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ :

ಮೃದುಮಧುರೋಕ್ತಿಯಿಂ ಸರಸದಿಂ ರಸದಿಂ ಮಿತಭಾವದೇಳ್ಗೆಯಿಂ
ವಿದಿತ ಭಕ್ತಿಯುಕ್ತಪದದಿಂ ಪದದಿಂಪು ನಿಮಿರ್ಚುವರ್ಥದಿಂ
ಸದಮಲ ಲಕ್ಷಣಾಕ್ಷ್ಯಗಣದಿಂ ಗಣದಿಂ ಚತುರೈಕವೃತ್ತಿಯಿಂ
ವಿದಿತ ವಿವರ್ಣದಿಂದೆಸೆಗುಮೀಕೃತಿ ಧೀಕೃತಿ ರಾಜರಾಜನ

ನವರಸಮಾಸ್ಯದೊಳ್ ತೊಳಪತಂಬುಲದ ದ್ರವಮಾಗೆ ಭಾವಮು
ಕ್ಕುವನಗೆಯಾಗೆ ಛಂದಮಿದು ಜೆಲ್ವಿಕೆಯಾಗೆ ವಿಜಾತಿವೃತ್ತಮು
ಣ್ಮುವ ಪೊಲೆಯಾಗೆ ವೃತ್ತಿ ಕಡೆಗಣ್ಕುಡಿನೋಟಮುಮಾಗೆ ಮತ್ಕೃತಿ
ಪ್ರವಿದಿತನರ್ತಕಿ ಸುಜನಚಿತ್ತಮನೊಯ್ಯನೆ ಸೂರೆಗೊಳ್ಳಳೆ

-ಗ್ರಂಥಾವತಾರದಲ್ಲಿ ಪದ್ಮಪ್ರಭ ಸ್ತುತಿಯಿದೆ. ಬಳಿಕ ಕವಿ ಸಿದ್ಧರು, ವೃಷಭಸೇನ, ಗೌತಮ, ಸರಸ್ವತಿ, ಸಮಂತಭದ್ರ, ಪೂಜ್ಯಪಾದ, ಅಕಳಂಕ ಇವರುಗಳನ್ನು ಸ್ತುತಿಸಿದ್ದಾನೆ. ಆಶ್ವಾಸಗಳ ಕೊನೆ ಯಲ್ಲಿ ಈ ಗದ್ಯವಿದೆ : ಇದು ವಿದಿತಾರ್ಹತ್ಪದ ವಿದ್ಯಾವಿನಯವಿರಹಿತ ವಿದ್ವಜ್ಜನಾಖರ್ವಗರ್ವ ಕುರಂಗಸಂಗನಿರ್ಧೂತ ಶಾರ್ದೂಲ ಹಿರಣ್ಯಗರ್ಭ ಕವಿ ಶಿರೋಮಣಿ ವಿರಚಿತ ಸರಸ್ವತೀ ಪ್ರಬಂಧ ದೊಳ್."[೧] ಇದು ಕವಿ ಜೈನನೆಂಬುದನ್ನು ತೋರಿಸುತ್ತದೆ.

—

೧ ಕರ್ನಾಟಕ ಕವಿಚರಿತೆ : ೧೯೨೯ : ಸಂ. ೩ : ಪು. ೨೧೯.

ಕನ್ನಡ ವಾಮನ

(ಸು ೧೮೭೦–೧೯೨೫)

ಕನ್ನಡ ವಾಮನರ ಪೂರ್ಣ ಹೆಸರು ಉಪೇಂದ್ರ ಹಣಮಂತ ಕುಲಕರ್ಣಿ ಎಂದು. ಇವರು ವಿಜಾಪುರ ಜಿಲ್ಲೆಯ ಬಾಗಿಲುಕೋಟೆಯ ಸಮೀಪದ ತೋಳಮಟ್ಟಿ ಎಂಬ ಹಳ್ಳಿಯವರು. ಇವರು ಹಲವು ಸಲ ಉಪೇಂದ್ರ ಶರ್ಮ ತೋಳಮಟ್ಟಿ ಅಭಿನವ ಲಕ್ಷ್ಮೀಶ ಎಂದೂ ಬರೆದುಕೊಂಡದ್ದುಂಟು. ಈ ಕಾಲದ ಇತರ ಅನೇಕ ಲೇಖಕರ ಹಾಗೆ ಇವರೂ ಕನ್ನಡ ಪ್ರಾಥಮಿಕ ಶಾಲಾ ಶಿಕ್ಷಕರು. ಮೂರನೆಯ ವರ್ಷ ಟ್ರೇಂಡ್ ಆದವರು. ಇವರು ೧೯೧೮ ರಿಂದ ೧೯೨೫ರ ವರೆಗೆ ಬಾಗಿಲಕೋಟೆಯ ಹತ್ತಿರದ ಮುರನಾಳ ಎಂಬ ಗ್ರಾಮದಲ್ಲಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಅಲ್ಲಿಯ ಸಹಕಾರಿ ಸಂಘದ ಕಾರ್ಯದರ್ಶಿಗಳೂ ಆಗಿದ್ದರು. ಬಡತನದ ಮೂಲಕವೋ ಅಥವಾ ಮಹತ್ವಾಕಾಂಕ್ಷೆಯ ಅಭಾವದ ಮೂಲಕವೋ ಇವರ ಕೃತಿಗಳು ಪ್ರತ್ಯೇಕ ಗ್ರಂಥಗಳಾಗಿ ಪ್ರಕಟವಾದಂತೆ ಕಂಡುಬರುವದಿಲ್ಲ.

ಕಾಳಿದಾಸ, ಬಾಣರ ಹೆಸರನ್ನು ಬಿಟ್ಟುಕೊಟ್ಟು, ಇವರು 'ವಾಮನ' ಎಂಬ ಕಾವ್ಯನಾಮವನ್ನು ಏಕೆ ಇಟ್ಟುಕೊಂಡರೆಂಬುದು ಸ್ಪಷ್ಟವಾಗಿ ಅರ್ಥವಾಗುವದಿಲ್ಲ. ಕ್ರಿ.ಶ. ೮೦೦ ರಲ್ಲಿ ಆಗಿಹೋದ ಸಂಸ್ಕೃತ ವಾಮನನು ರೀತಿಯೇ ಕಾವ್ಯದ ಜೀವಾಳವೆಂದು ಹೇಳಿದ. "ರೀತಿರಾತ್ಮಾ ಕಾವ್ಯಸ್ಯ—ವಿಶಿಷ್ಟಾ ಪದರಚನಾ ರೀತಿ :— ವಿಶೇಷೋ ಗುಣಾತ್ಮಾ"[೧] ಅಲ್ಲದೆ, ಇವನು ಗುಣ ಮತ್ತು ಅಲಂಕಾರಗಳಲ್ಲಿಯ ಭೇದವನ್ನು ಹೇಳಿದನು.

"ಕಾವ್ಯಶೋಭಾಯಾ ಃ ಕರ್ತಾರೋ ಧರ್ಮಾ ಃ ಗುಣಾಃ—
ತದ್ ಅತಿಶಯಹೇತವಸ್ತು ಅಲಂಕಾರಾಃ"[೨]

— ಈ ಸಂಸ್ಕೃತ ವಾಮನನಲ್ಲದೆ ಮರಾಠಿಯಲ್ಲಿ 'ಯಮಕ್ಯಾ ವಾಮನ'ನೂ ಸುಪ್ರಸಿದ್ಧನು. ಇವರೀರ್ವರಿಗೆ ಸರಿಪಂಥದವನಾಗಿ ತಾನು ಬರೆಯಬೇಕೆಂಬ ಹವ್ಯಾಸದಿಂದ ಉಪೇಂದ್ರಶರ್ಮರು ಕನ್ನಡ ವಾಮನ ಎಂದು ಹೆಸರಿಟ್ಟುಕೊಂಡಂತಿದೆ. ಇವರ ಬಿಡಿ ಕವನಗಳು, ಗದ್ಯಲೇಖಗಳು ೧೯೧೨ ರಿಂದ ೧೯೧೮ ರವರೆಗಿನ ಬೇರೆ ಬೇರೆ ಮಾಸ ಮತ್ತು ವೃತ್ತಪತ್ರಿಕೆಗಳಲ್ಲಿ ಕಂಡುಬರುತ್ತವೆ.

೧ ಕಾವ್ಯಾಲಂಕಾರ ಸೂತ್ರವೃತ್ತಿ : ೧—೨. ೬—೮.

೨ ಅದೇ : ೧–೨

ಇವರ ಗದ್ಯ ಲೇಖನಗಳು ಹೆಚ್ಚಾಗಿ 'ಶುಭೋದಯು'ದಲ್ಲಿ ಪ್ರಕಟವಾದವು. ಕವನಗಳು 'ಶಾಲಾಪತ್ರಕ' 'ವಾಗ್ಭೂಷಣ' 'ಪ್ರಭಾತ' ಮತ್ತು 'ಕರ್ನಾಟಕ ವೈಭವ'ಗಳಲ್ಲಿ ಪ್ರಕಟವಾದವು.

ಕನ್ನಡ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ವಾಮನರು ಸಲ್ಲಿಸಿದ ಸೇವೆ ಮೌಲಿಕವಾಗಿದೆ. ಪುರಾಣ ಕಾಲದ ವಾಮನನ ತ್ರಿಪಥದಂತೆ ಈ ವ್ಯಕ್ತಿಯ ರಚನೆ ಐದು ದೃಷ್ಟಿಯಿಂದ ಮಹತ್ವ ಪೂರ್ಣವಾಗಿದೆ. 'ಪ್ರಾಚೀನ ಅರ್ವಾಚೀನರಲ್ಲಿ' ಒಳ್ಳೆಯ ನವೀನ ದೃಷ್ಟಿಯನ್ನಿಟ್ಟುಕೊಂಡವ ರಲ್ಲಿ ಕನ್ನಡ ವಾಮನರೂ ಒಬ್ಬರು. ಈ ಮಾತನ್ನು ಅವರು ಬರಿಯ ಬಾಯಿಂದ ಮಾತ್ರ ಹೇಳದೆ, ಕೃತಿಯಲ್ಲಿಯೂ ತಂದರು. ಕಲಿತವರೆಂದೆನ್ನಿಸಿಕೊಂಡ ಕೆರೂರು ವಾಸುದೇವಾಚಾರ್ಯರಂಥವ ರಲ್ಲಿಯೂ ಕೂಡ ಮನೋಭಾವ ಹೊಸದಾಗಿದ್ದರೂ, ಪ್ರಾಚೀನ ಪರಂಪರೆಯ ಛಂದಸ್ಸಿನ ಕಟ್ಟು ಅವರನ್ನು ಬಿಡಲಿಲ್ಲ.

"ಗುರುಕುಚಯುಗದೊಳ್ ತಾನಪ್ಪುಗೈಯಿಕ್ಕಿ ಸಾಗಿ
ಮರುಗುತೆ ಬರಿಗಾಲಂ ನೀಡುತಂ ಕಲ್‌ನೆಲಕ್ಕೆ
ತಿರುಕತರಳೆ ಬಂದಳ್ ರಾಜನಿದ್ದಲ್ಲಿಗಾ ಸುಂ-
ದರಿಯ ಸೊಬಗ ನೋಡೈ ಬಣ್ಣಿಸಲ್ ವಾರ್ತೆಯುಂಟೇ"

—ಎಂಬುದು ಆಚಾರ್ಯರು ಭಾಷಾಂತರ ಮಾಡಿದ ಟೆನಿಸನ್ ಕವಿಯ 'ಬೆಗ್ಗರ್ ಮೇಡ್' ಎಂಬ ಇಂಗ್ಲಿಷ ಕವಿತೆ. ಕಣ್ಣೇನೋ ಹೊಸದು; ಆದರೆ ಬರೆದ ಕೈ ಹಳೆಯ ಪರಂಪರೆಯದು. ಆಚಾರ್ಯರು ನಾಟಕಗಳಲ್ಲೇನೋ ಈ ಪದ್ಧತಿಯನ್ನು ದಾಟಿಹೋದರು. ಆದರೆ, ಕವನಗಳಲ್ಲಿ ಮಾತ್ರ ಅವರಲ್ಲಿ ಈ ಹಳೆಯ ಪದ್ಧತಿಯೇ ಉಳಿಯಿತು.

ಆಚಾರ್ಯರ ಪರಮಮಿತ್ರರೂ ಸಮಕಾಲೀನರೂ ಆಗಿದ್ದ ವಾಮನರ ರೀತಿ ಮಾತ್ರ ಬೇರೆಯೇ. ಅವರ ದೃಷ್ಟಿ ಹೊಸದು, ಸೃಷ್ಟಿಯೂ ಹೊಸದು. ತಾವು ಯೋಗ್ಯವೆಂದು ತಿಳಿದುದನ್ನು ಕೃತಿಯಲ್ಲಿ ತರುವ ಧೈರ್ಯವನ್ನು ತೋರಿದವರು ಕನ್ನಡ ವಾಮನರು.

'ನವ ಕವಿತೆಗಳು' ಎಂಬ ತಮ್ಮ ಕವಿತಾಮಾಲೆಯಲ್ಲಿ ಈ ಹಿರಿಯರ ಶಕ್ತಿ ತಮಗೆ ದೊರಕಲೆಂದು ಪ್ರಾರ್ಥಿಸಿಕೊಂಡಿದ್ದಾರೆ—

ಬರಲಿ ನನ್ನಯ ಕಾವ್ಯದಲಿ ತೂ
ರ್ಮರಿಯ ಜಾಣ್ಮೆಯು ವೆಂಕಟನ ಪದ
ಸರಸವಾ ಮುಳಬಾಗಲನ ಪದಪ್ರೌಢತನವೈದೆ
ಕರಿಬಸವಪಂಡಿತನ ಪದಗಳ
ವರಮಧುರತನವೈದೆ ಗೌರೀ
ಶ್ವರನ ಶೈಲಿಯು ಸುಲಭತನವಾ ಗಳಗನಾಥನದು ॥

'ಕನ್ನಡ ವಾಮನ'ರು ಐದು ವಿಧದಲ್ಲಿ ತೋರಿದ ಹೊಸತನ ಯಾವುದು ?

ಮೊದಲನೆಯದಾಗಿ, ವಾಮನರು ಪ್ರಾಸದ ತೊಂದರೆಯನ್ನು ದಿಟ್ಟವಾಗಿ ನಿವಾರಿಸಿದರು. ಭಾವವಿರಲು ಪ್ರಾಸದ ತ್ರಾಸವೇತಕ್ಕೆ ಎಂದು ಬಹಿರಂಗವಾಗಿ ಪ್ರತಿಭಟಿಸಿದರು. ೧೯-೫-೧೯೧೮ ರ ದಿವಸ ವಾಗ್ಭೂಷಣದ ಸಂಪಾದಕರಿಗೆ ಅವರು ಬರೆದ ಪತ್ರ ಈ ರೀತಿ ಇದೆ : "....... ಸಾಂಪ್ರತ

ಯುಗದಲ್ಲಿ ಪ್ರಾಸವನ್ನು ತೆಗೆದು ಹಾಕಿ ಸುಲಭವಾದ ವಾಕ್ಯಗಳಲ್ಲಿ ಪದ್ಯಗಳನ್ನು ರಚಿಸಬೇಕೆಂದು ಬಹಳ ಜನರ ತಲೆಯಲ್ಲಿ ವಿಚಾರಗಳು ತೂಗಾಡಹತ್ತಿವೆ. ಕಾರಣ ಅದೇ ಸರಣಿಯನ್ನು ಜನರಿಗೆ ತೋರಿಸುವದಕ್ಕಾಗಿ ಬಂಗಾಲೀ ಭಾಷೆಯಲ್ಲಿ ಜೋಗೀಂದ್ರನಾಥ ಬಸು ಎಂಬವರು ಬರೆದ 'ಪೃಥ್ವೀರಾಜ' ಎಂಬ ಮಹಾಕಾವ್ಯದ ಒಂದು ಸರ್ಗವನ್ನು ಭಾಷಾಂತರಿಸಿ ಕಳಿಸಿದ್ದೇನೆ........ ಕಾರಣ, ಮಹಾಶಯರು ಇದಕ್ಕೆ ಆಶ್ರಯ ಕೊಡಬೇಕೆಂದು ಬೇಡಿಕೊಳ್ಳುತ್ತೇನೆ." ಈ ರೀತಿ ಪ್ರಾಸದ ಸಂಕಲೆಯನ್ನು ತೆಗೆದು ಹಾಕಿದ 'ಪೃಥ್ವೀರಾಜನ ಯುದ್ಧದ ಸಿದ್ಧತೆ' ಮೊದಲಾದ ಪದ್ಯಭಾಗಗಳು ವಾಗ್ಭೂಷಣದಲ್ಲಿ ಪ್ರಕಟವಾದವು. ಈ ಪ್ರಾಸನಿರಾಸವು ಒಂದು ದೊಡ್ಡ ಕೋಲಾಹಲವನ್ನೇ ಎಬ್ಬಿಸಿತು. ಈ ಬಗೆಗೆ 'ಕನ್ನಡ ಛಂದಸ್ಸಿನ ಕೊಲೆಯು' ಎಂದು ನರಸಿಂಹ ಧೋಂಡೊ ಮುಳಬಾಗಿಲರೂ, 'ಪ್ರಾಸನಿರಾಸ' ಎಂಬ ಬಗೆಗೆ ಶ್ರೀ ಕೇಶವಶರ್ಮ ಗಲಗಲಿಯವರೂ, 'ಪ್ರಾಸ ವಿಚಾರವು' ಎಂಬ ಬಗೆಗೆ ಮ. ಪ್ರ. ಪೂಜಾರ ಅವರೂ ಲೇಖನಗಳನ್ನು ಬರೆದರು. ಪ್ರಾಸವನ್ನು ಬಿಟ್ಟು ಕಾವ್ಯ ಬರೆದುದಕ್ಕೆ ವಾಮನರ ಕವನಗಳಲ್ಲಿಯ ಕೆಳಗಿನ ಪದ್ಯವನ್ನು ಉದ್ಧರಿಸಬಹುದು :

ಕಾಶಿಯ ಬಿಂದುಮಾಧವನು ಬಿಟ್ಟನು ತಾನೆಯೆ ತನ್ನ ತಾಣಮಂ
ಗೋಕುಲವಾಸ ಕೃಷ್ಣನಿಗೆ ಹತ್ತಿತು ಸಂತತವಾದ ಪೀಡೆಯು
ಕಾಳಿ, ಕರಾಳಿ, ದುರ್ಗೆಯರು ಬಿಟ್ಟರು ತಮ್ಮಯ ಘೋರ ರೋಷಮಂ
ಪೀರನ ಕಾಲು ಬಿದ್ದುಳಿದು ಕೊಂಡಿಹರೀಗಿನ ದೇವರೆಲ್ಲರೂ ॥[1]

ಪ್ರಾಯಶಃ ಈ ಚರ್ಚೆಗೆ ಉತ್ತರ ರೂಪವಾಗಿಯೋ ಏನೋ ತಮ್ಮ ನಿಲುವನ್ನು ಇನ್ನೂ ಹೆಚ್ಚು ಸ್ಪಷ್ಟಪಡಿಸಲಿಕ್ಕೂ ಮತ್ತು ತಮ್ಮ ಕಾವ್ಯಪ್ರತಿಭೆಯ ಆತ್ಮಪ್ರತ್ಯಯವನ್ನು ಮೆರೆಯಲಿಕ್ಕೂ ಕನ್ನಡ ವಾಮನರು ಈ ರೀತಿ ಹೇಳಿದರು :

ಈಗ ನಮ್ಮಯ ನಾಡೊಳಿಲ್ಲವು
ಹಾಗೆ ಕಾವ್ಯಗಳನ್ನು ಮಾಳ್ಪರು
ಸಾಗಿಸಲು ನಾನಿನ್ನು ಕವಿತೆಗಳಲ್ಲಿ ವಾದವನು
ಕೂಗಿ ಮಾಡುವದೇನು ಬಹುನಿಶಿ
ತಾಗಿರುವ ನಖವೇನು ಮಾಳ್ಪದು
ಹೋಗಿರಲು ಹಾಳಾಗಿ ಮತ್ತೇಭಗಳು ಸಿಂಹವದು ॥ [2]

ಸ್ವ-ವಿಷಯವಾಗಿ ಕವಿ ಹೇಳಿಕೊಂಡುದು ಹೀಗೆ :

ಇಂದಿಗೆ ಪ್ರಾಸತೊಂದರೆಯ ನೀಗಿದ ಪದ್ಯಗಳೊಂದು ಸಾವಿರಂ
ಸಂದಿಪೆ ಪ್ರಾಸಬಂಧನದ ಪದ್ಯಗಳಾದರು ದ್ವಂದ್ವ ಸಾವಿರಂ
ಒಂದರೆ ವ್ಯರ್ಥವಾಗದು ಸದರ್ಥವೆ ತಾಂ ನೆಲಸಿರ್ಪುದೆಲ್ಲಿಯುಂ
ಮುಂದಕೆ ಬರ್ಪುದಿಂತು ಕೃತಿಯಾದರೆ, ಕುಸ್ತಿಯನಾಡಲೆನ್ನೊಳುಂ ॥

ಒಂದು ದಿನಕ್ಕೆ ಹತ್ತು ಸಹಸ್ರ ವಾರಣ-ವ್ಯಾಘ್ರಗಳನ್ನು ಬಂಧಿಪೆಂ
ಕಂದಗಳನ್ನು ಲೆಕ್ಕಿಸೆನು ಭಾಮಿನಿಯರೆ ಬಹುಮಂದಿಯಾಗಿರಲ್

೧ 'ಪೃಥ್ವೀರಾಜನ ಯುದ್ಧದ ಸಿದ್ಧತೆ' : ವಾಗ್ಭೂಷಣ . ೧೯೧೫.
೨ ಕರ್ನಾಟಕ ವೃತ್ತ : ಜನೆವರಿ ೧೯೧೯.

ಛಂದವನೆಷ್ಟು ಬಣ್ಣಿಸಲಿ ಉತ್ಪಲ-ಚಂಪಕ-ಮಲ್ಲಿಕಾದಿಗಳ್
ಬಂಧನವೆಷ್ಟು ದೋರುವವು ನನ್ನಯ ವಾಣಿಗೆ ಬಂದು ತಾವೆಯೆ ॥

ಇಂದಿಗೆ ಕಾಣೆನೆನ್ನ ಕೃತಿಯಂತಿರೆ ಕಾವ್ಯವನೆಮ್ಮ ದೇಶದೊಳ್
ಒಂದಿನ ಕಾಲದಲ್ಲಿ ಬರೆದಿಲ್ಲವು ಕನ್ನಡದಲ್ಲಿ ಯಾವನೂ
ಸುಂದರವಾದಸಕ್ಕದವ ನುಂಗಿದೆನಾಗಳೆ ನಾಲ್ಕು ವರ್ಷದೊಳ್
ಕಂದಗಳನ್ನು ಪುಟ್ಟಿದರೆ ಮುಂದಿರುವೆನ್ನನು ಕಾಯುತಿರ್ಪರೇ ॥

ಓದದು ನನ್ನ ಮುಂದೆ ಮೃತಸಕ್ಕದ ತನ್ನ ತಾಣದಿಂ
ನೋಡಿದರಿಲ್ಲ ಕನ್ನಡ ವಾಙ್ಮಯದೊಳ್ ಸರಿಯೆನ್ನ ಕಾವ್ಯಕೆ
ಆದುವದೇನು ನೀವು ಸರಿಮಾಡುತ ನೋಡಿದ ಮೇಲೆ ಗಾಢದಿಂ
ರೂಢಿಯೊಳೀಗ ವಾಮನನೆ ಕನ್ನಡಕೋವಿದನೆಂದು ಪಾಡಿರೈ ॥

ಇದರಲ್ಲಿಯ ಆತ್ಮಪ್ರತ್ಯಯ ಪ್ರಾಯಶಃ ಪ್ರಾಸನಿರಾಸದ ಬಗೆಗಿನ ಚರ್ಚೆಯ ಉದ್ವಿಗ್ನತೆಯಿಂದ ಬಂದಿರಲೂಬಹುದಾಗಿದೆ. ಅಂತೂ ಪ್ರಾಸವನ್ನು ಬಿಟ್ಟು ಕವಿತೆಗಳನ್ನು ಬರೆಯುವ ಹೊಸ ದಾರಿಯನ್ನು ವಾಮನರು ಸ್ಪಷ್ಟವಾಗಿ ಹಾಕಿಕೊಟ್ಟರು.

ಎರಡನೆಯದಾಗಿ, ಕಾವ್ಯವಿಷಯದ ಬಗೆಗೂ, ಅವರು ತಮ್ಮದೇ ಆದ ಕಲ್ಪನೆಯುಳ್ಳವರಾಗಿದ್ದರು. ಕಾವ್ಯನಾಯಕ ಶ್ರೀರಾಮಚಂದ್ರನಾದರೆ ಕಾವ್ಯವಿಶ್ರುತವಾಗುತ್ತದೆಂದು ಅಭಿನವಪಂಪ ಹೇಳಿದ. 'ನಾಯಕನನ್ಯನಾಗೆ ಕೃತಿ ವಿಶ್ರುತಮಾಗದು, ಉದಾತ್ತ ರಾಘವಂ ನಾಯಕನಾಗೆ ಕೃತಿ ವಿಶ್ರುತಮಾಗುವದು ವಿಸ್ಮಯಕಾರಿಯಲ್ತು, ಕಾಲಾಯಸದಿಂ ವಿನಿರ್ಮಿಸಿದ ಕಂಠಿಕೆ ಕಾಂಚನಮಾಲೆಯಂತೆ ಉಪಾದೇಯಮಕ್ಕುಮೆ ? ವಿಷಯಮ್ ಒಪ್ಪಿದೊಡೆ ಅವ್ವದುಂ ಒಪ್ಪಲಾರ್ಕುಮೆ ?' ಈ ಕಲ್ಪನೆಯ ಪರಿಣಾಮವಾಗಿ ತಿಣುಕಿದನು ಫಣಿರಾಯ ರಾಮಾಯಣದ ಕಥೆಗಳ ತಿಂಥಿಣಿಯ– ರಘುವರರ ಚರಿತೆಯಲಿ ಕಾಲಿಡಲು ತೆರಪಿಲ್ಲ– ಎಂಬಂತಾಯಿತು. ಇದಕ್ಕೆ ಪ್ರತಿಯಾಗಿ ವಾಮನರು ಸಾಮಾನ್ಯ ವಿಷಯಗಳ ಬಗೆಗೆ ಸುಲಭವಾದ ಶೈಲಿಯಲ್ಲಿ, ದಿನನಿತ್ಯದ ಬಳಕೆಮಾತುಗಳನ್ನು ಬಳಸಿ, ಕಾವ್ಯರಚನೆ ಮಾಡಿದರು. 'ಗ್ರಾಮ್ಯ ಜನವರ್ಣನಾಶತಕಂ' ಎಂಬ ಅವರ ಕವನಪುಂಜಗಳು ಜನಸಾಮಾನ್ಯರಾದ ಶಿಕ್ಷಕ, ಗೌಡ, ಕುಲಕರ್ಣಿ ಮೊದಲಾದವರ ಬಗೆಗಿವೆ. ಅಷ್ಟೇ ಅಲ್ಲದೆ, 'ಪಂಜೆಯ ಗುಂಜಾರವವು' ಎಂಬ ಕವಿತೆಯಲ್ಲಿ ದಿನನಿತ್ಯ ಉಪಯೋಗಿಸುವ ಸ್ನಾನದ ಚಿಕ್ಕ ಪಂಜೆಯ ಬಗೆಗೆ ಇದೆ. ಯಾರು ನೀರಪಂಜಿ ಬಿಟ್ಟರೂ, ಬಡವರು ಅದನ್ನು ಬಿಡಲಾರರು; ಅದೇ ಪಂಜೆಗೆ ಸಮಾಧಾನ.

ಬಿಡಿರಲಿ ನೀವು ಹೆಮ್ಮೆಯಲಿ ನನ್ನನು ಶೆಟ್ಟರು ಸಾವುಕಾರರೇ
ಬಡವರದಷ್ಟು ದೃಷ್ಟಿಯದು ನನ್ನೊಳಗಿದ್ದರೆ ಸಾಕು ದೇವರೇ
ಕಡೆತನಕಾಗಿ ನಾಡಿನೊಳಗಾವಗೆ ತಾಂ ಸಿರಿಯಿರ್ಪುದೈ ಕಣಾ
ಕೆಡದಿರನೇನು ತಾನು ಸಿರಿವಂತರ ಸಂಗತಿಯಿಂ ಮನೀಷಿಯುಂ

ಮೂರನೆಯದಾಗಿ, ಇವರ ಕವಿತೆಗಳಲ್ಲಿ ಅನೇಕ ಸ್ಥಾನಿಕ ಹಾಗು ತತ್ಕಾಲೀನ ಉಲ್ಲೇಖಗಳನ್ನು ಕಾಣುತ್ತೇವೆ. ಉದಾಹರಣೆಗೆ, ಈ ಮುಂದಿನ ಪದ್ಯದಲ್ಲಿ ಬಾಗಿಲುಕೋಟೆಯ ಸೊಲಬಣ್ಣನ ಉಲ್ಲೇಖ ಬರುತ್ತಿದೆ :

ಗಿರಿಜೆಯೆ ನೀಂ ಪ್ರಪಂಚವನು ಮಾಡಿದೊಡಾ ಪರಮೇಶಗೇನದು
ಬರುವದೆ ಕೈಗೆ ಜೋಳಿಗೆಯು ಹಚ್ಚುವರಾರೆಲೆ ಮೈಗೆ ಬೂದಿಯಂ
ಕೊರಳಿಗೆ ರುಂಡಹಾರವನು ಹಾಕುವನೇ ಧನವಂತನಾಗಿ ತಾಂ
ಇರದಿರನೇನೆ ಬಾಗಿಲದ ಕೋಟೆಯೊಳಾ ಸೊಲಬಣ್ಣನಂತಿರೆ ॥

–ಮೇಲಿನ ಪದ್ಯದಲ್ಲಿಯ ಸೊಲಬಣ್ಣ ಪ್ರಾಯಶಃ ಬಾಗಿಲುಕೋಟೆಯಲ್ಲಿ ಆ ಕಾಲಕ್ಕಿದ್ದ ಕೋರಾ ಸೊಲಬಣ್ಣನವರೇ ಆಗಿರಬೇಕು. ವಾಮನರು ಅವರಲ್ಲಿ ಸಾಲವನ್ನು ಮಾಡಿದ್ದರೂ ಮಾಡಿರ ಬಹುದೇನೋ !

ಯಲಗೂರ ಹನುಮಂತದೇವರು ವಾಮನರ ಆರಾಧ್ಯದೈವತ. ಅವರು ತಮ್ಮ ಪ್ರತಿಯೊಂದು ಕವಿತೆಯ ಮೇಲೆಯೂ ಶುಭಸೂಚಕವಾಗಿ 'ಶ್ರೀ ಯಲಗುರದೀಶಾಯ ನಮಃ' ಎಂದು ಬರೆಯು ತ್ತಾರೆ. ಸಾಧ್ಯವಾದಲ್ಲೆಲ್ಲ ಯಲಗೂರ ಉಲ್ಲೇಖವನ್ನು ಮಾಡಿದ್ದಾರೆ :

ಬರದಿರದೇನದೊಮ್ಮೆ ಹರಿನಾಮವನಾಡಲು ಸ್ನಾನಪುಣ್ಯವು
ಬಹುವಿಧ ಸ್ನಾನವೀಗ ಹೊಲಿದಾಸನಿಗಾದರು ಗೊತ್ತು ನಿತ್ಯದೆ
ಯಲಗುರದಲ್ಲಿ ಹಾಡುವದು ಕೇಳುವದಿಲ್ಲವೆ ಹುಚ್ಚುಪೆದ್ದನೆ
ಅದು ಸರಿಬಾರದಿರ್ಕೆ ನಡೆ ಕನ್ನಡವಾಮನನನ್ನೆ ಕೇಳಲು ॥

ಈ ಕೆಳಗಿನ ಪದ್ಯದಲ್ಲಿ ಅಂದು ಬಾಗಿಲುಕೋಟೆಯಲ್ಲಿ ಸುಪ್ರಸಿದ್ಧ ವೈದ್ಯರಾಗಿದ್ದ ಜತಾರ ಎಂಬ ವರ ಉಲ್ಲೇಖ ಬರುತ್ತದೆ :

ಮೋರೆಯು ಇಲ್ಲವೆ ನನಗೆ ಪೇಳಲು ಮೈಯೊಳಗಿದ್ದ ಜಾಡ್ಯಮಂ
ತೋರಿಸಬಾರದೇ ಜವದೊಳಿಲ್ಲಿಗೆ ಬಂದು 'ಜತಾರ' ವೈದ್ಯಗೆ ॥

ಇದೇ ರೀತಿ ಅವರ ಕವಿತೆಗಳಲ್ಲಿ ತಮ್ಮ ಹಳ್ಳಿಯಾದ ತೋಳಮಟ್ಟಿಯ ಉಲ್ಲೇಖವೂ ಬರುತ್ತದೆ.

ನಾಲ್ಕನೆಯದಾಗಿ, ವಾಮನರು ಆ ಕಾಲದಲ್ಲಿದ್ದೂ ಅತ್ಯಾಧುನಿಕವಾದ ಸಮಾಜ ಸುಧಾರಣಾ ದೃಷ್ಟಿಯುಳ್ಳವರಾಗಿದ್ದರು. ಪಂಡಿತರು ಮತ್ತು ಸಜ್ಜನರೆಂದೆನ್ನಿಸಿಕೊಂಡವರ ಕಾಮವಾಸನೆಯನ್ನು ಈ ಕೆಳಗಿನ ಪದ್ಯಗಳಲ್ಲಿ ವರ್ಣಿಸಿದ್ದಾರೆ :

ಗಂಡನೊಳಂಗಸಂಗವನು ಮಾಡಿಸದೊರ್ಮೆಯು ಬಾಲಭಾವದೊಳ್
ಮುಂಡಣಮಾಡಿ ಕೂಡಿಸುತ ತಿಂಗಳಿಗೊಂದು ಶಿಶುಪ್ರರೋಹಮಂ
ಖಂಡಿಸಿ ಕಾಮವಾಸನೆಯ ತೀರಿಸಿಕೊಳ್ಳುವ ಪಂಡಿತೇಂದ್ರರು
ಗಂಡನಗೂಡಿ ಬಾಳ್ವೆಯನು ಮಾಡಲು ಹೆಂಗಳಿಗಡ್ಡಿ ಮಾಳ್ಪರೈ

ಕಾಮನಬಾಧೆಯಿಂದೆ ವಿಧವಾಜನಗಳ್ ಮನವಾರೆ ನೋಡಲು
ತಾಂ ಮನಸೋತು ಪೋಗುವರು ತೋರುವರೈ ಘನವಾದ ಪ್ರೇಮವಂ
ಆ ಮುದವೆಲ್ಲ ತೀರೆ ಬಡ ಹೆಂಗಳಿಗಾಗಲೆ ಮಾನಭಂಗಮಂ
ಧೀಮನವೇನು ಹೊಂದದಲೆ ಮಾಡುವರೈ ಕೆಲಕೋವಿದೇಂದ್ರರು

ಕ್ಷಣಕ್ಷಣಕೊಂದು ಯೋಚನೆಯ ಮಾಡುತಲಾ ವಿಧವಾಜನಂಗಳೊಳ್
ಗುಣುಗುಣು ಮಾತನಾಡುತಲೆ ಗೈಯುವರ್ ಮರೆಮೋಸವನ್ನು ತಾವ್
ದಿನದಿನಕೊಂದು ಚಂದದ ಪುರಾಣದ ನೀತಿಗಳನ್ನು ಪೇಳುತ
ಘನತರವಾಗಿ ಗುಪ್ತದಲಿ ಪ್ರೀತಿಸಿ ನೂಕುವರಯ್ಯ ಕೂಪದೊಳ್[೧]

ಬಳಿಕಲು ತಾವೆ ಸಜ್ಜನರು ಶ್ರೇಷ್ಠರು ಧಾರ್ಮಿಕರೆಂದು ಪೇಳ್ವರು
ಗಳಗಳನೆಲ್ಲ ಕ್ಷೇತ್ರದಲಿ ಕಾಣುವರೈ ಬಹುಸಂಖ್ಯಪ್ರಾಣಿಗಳ್
ಉಳಿದವರನ್ನು ಶೂರಪುರದೇಶಕೆ ಪೋಗುತ ನೋಡಿಕೊಳ್ವುದೈ
ಗೆಳೆತನ ಮಾಡಿ ಕುತ್ತಿಗೆಯ ಕೊಯ್ಯುವ ಮಾನವಸಿಂಹರಂ ಕಣಾ

ಐದನೆಯದಾಗಿ, ಶೃಂಗಾರ ಮತ್ತು ವಿನೋದಗಳು ಕನ್ನಡ ವಾಮನರ ಅನೇಕ ಕವನಗಳಲ್ಲಿ ಕಂಡು ಬರುತ್ತವೆ. ಅವರ ಗದ್ಯಲೇಖನವಾದ 'ಅಚುಂಬಿತ ಕುಸುಮ' ಎಂಬುದು ಶೃಂಗಾರಪೂರ್ಣ ವಾಗಿದ್ದರೆ, ಅವರ ಅನೇಕ ಕವನಗಳಲ್ಲಿ ವಿನೋದ ಮೂಡಿ ನಿಂತಿದೆ. ಉದಾಹರಣೆಗೆ, 'ಪೆದ್ದ ಶರ್ಮ, ಮಾಧವ ಭಟ್ಟರ ಸಂವಾದವು' ಎಂಬ ಕವಿತೆಯಲ್ಲಿ ಮಾತಿನ ಚಮತ್ಕೃತಿ ಮತ್ತು ವಿನೋದಗಳು ಸ್ಫುಟವಾಗಿ ವ್ಯಕ್ತವಾಗಿವೆ. ಸ್ನಾನದ ಬಗೆಗೆ ಇವರಿಬ್ಬರ ನಡುವೆ ನಡೆದ ಸಂವಾದವು ಹೀಗೆ :

"ಗಡಿಬಿಡಿಯೇಕೆ ಮಾಡುವಿರಿ ಮಾಧವ ಭಟ್ಟರೆ ನೀವು ಸ್ನಾನಕೆ ? "
"ವಿಧವೆಯರೆಲ್ಲ ಬಂದಿಹರು ವೇಳೆಯದಾಯಿತು ಕೇಳ್ ಪುರಾಣಕೇ "
"ಅಡಚಣೆಯಾಗಲೊಂದು ದಿನ ಸ್ನಾನವ ಬಿಟ್ಟರದೇನು ಪಾಪವೇ ?"
"ಮರುಳನೆ ಕೇಳು, ನಾಲ್ಕು ದಿನದಿಂ ನಡೆದಿರ್ಪುದು ಮಂತ್ರಸ್ನಾನವೇ"

ಕನ್ನಡ ವಾಮನರ ಬರೆಹಗಳಲ್ಲಿ ಈ ಕೆಳಗಿನವುಗಳನ್ನು ಹೇಳಬಹುದು :

ಅಲಂಕಾರ ದರ್ಪಣ (?) :

ಇದು ಸಂಸ್ಕೃತದ ಕುವಲಯಾನಂದದ ಅನುವಾದವಾಗಿದೆ. ಇದು ಕನ್ನಡ ಶಾಲಾಪತ್ರಕದಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು. ಇದರಲ್ಲಿಯ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ತನ್ನ ಉಪಪತಿಗೆ ಸೂಚ್ಯವಾಗಿ ಒಬ್ಬ ಹೆಣ್ಣುಮಗಳು ಹೇಳಿದ ಶೃಂಗಾರದ ಮಾತುಗಳಿವು :

ಬಂದಿಲ್ಲ ಊರಿಂದ ಪತಿ ತಾ
ನಿಂದು ಮಾವನು ಹೊಲಕೆ ಹೋಗಿಹ
ಹಿಂದೆ ಹಿತ್ತಲಮನೆಯ ಹಿಡಿದಿಹಳತ್ತೆ ತಾ ಕುರುಡಿ ॥
ಮುಂದಿನೀ ಕೋಣೆಯೊಳು ಒಬ್ಬಳೆ
ಬಂದು ಮಲಗಿಹೆ ನಿದ್ದೆ ಬಾರದು
ಇಂದಿನಿರುಳನು........ನೀನೆ ಕಳೆಯಬೇಕಯ್ಯಾ ॥

ಇದರಂತೆಯೇ, ಈ ಕೆಳಗಿನ ಪದ್ಯವೂ ಇಂಥ ಸೂಚನೆಯನ್ನೇ ಕೊಡುತ್ತಿದೆ. ಒಬ್ಬ ಸುಂದರ ತರುಣ ಕೈಯಲ್ಲಿ ದೊಡ್ಡ ಗ್ರಂಥವನ್ನು ಹಿಡಿದುಕೊಂಡು ಹೊರಟಿದ್ದಾನೆ. ಅವನನ್ನು ತಡೆದು ಯುವತಿ ಕೇಳುವುದು ಹೀಗೆ :

೧ ಈ ಶ್ಲೋಕ ಅಂಬಿಕಾತನಯದತ್ತರ 'ಪುಟ್ಟ ವಿಧವೆ' ಎಂಬ ಕವಿತೆಯಲ್ಲಿಯ "ಜಾರಕೃಷ್ಣನ ಕಥೆಗೆ ಕೋಡು ಮೂಡಿತ್ತು" ಎಂಬ ಸಾಲನ್ನು ಜ್ಞಾಪಕಕ್ಕೆ ತರದಿರದು.

ಹಿರಿಯ ಹೊತ್ತಗೆ ಹಿಡಿದು ಹೊರಟಿಹ
ತರುಣನೇ ನೀನಾರು ಹೇಳೈ
ಪರಮವೈದ್ಯನೋ ? ಜೋಯಿಸನೋ ? ಹೇಳೆಂದು ನೀ ನಿಜವ
ಕುರುಡಿಯತ್ತೆಯ ಕಣ್ಣುಗಳಿಗೇ
ನೊರೆವೆ ಮದ್ದನು ? ದೂರ ದೇಶದಿ
ತಿರುಗುತಿಹ ಪತಿ ಮರಳಿಯಿಲ್ಲಿಗೆ ಬರುವ ದಿನವರಿಯೆ

ಸಾದಿಯ ಸಾಧುವಚನಗಳು (?) :

ಇದು ಪ್ರತ್ಯೇಕ ಪುಸ್ತಕವಾಗಿ ಪ್ರಕಟವಾಗಿದೆಯೋ ಹೇಗೆ ಎಂಬುದು ತಿಳಿಯುವಂತಿಲ್ಲ. ಪಂಡಿತ ಕೇಶವಶರ್ಮ ಗಲಗಲಿಯವರು ಈ ಸಾಧುವಚನಗಳಲ್ಲಿಯ ಈ ಕೆಳಗಿನ ಪದ್ಯವನ್ನು ಉಲ್ಲೇಖಿಸುತ್ತಾರೆ :

ಸತ್ಯಾಚರಣೆಯ ನೆಲೆಯಿಂ ಶಾಸ್ತ್ರವನೋದುವುದು ಯುಕ್ತವಲ್ಲವೆ ನಿಮಗೆ
ವಿತ್ತವ ಗಳಿಸಲಿಕೆಂದೆಯೆ ಶಾಸ್ತ್ರವ ಶ್ರಮಪಟ್ಟು ಬರೆವರೇ ಬುಧಜನರು
ಸುಖವನು ತಿನ್ನದೆ ಮೊದಲೇ ದುಃಖವನುಣ್ಣುವುದು ನೆಟ್ಟಗಲ್ಲವೆ ಮನುಜಾ
ಸುಖದಿಂ ಸಾಯುವ ತಿರುಕನು ದುಃಖದಿ ಪ್ರಾಣವನು ಬಿಡುವ ನೃಪನಿಂ ವರನೈ

ಗ್ರಾಮ್ಯಜನ ವರ್ಣನಾಶತಕ (?):

ಇದೂ ಪ್ರತ್ಯೇಕ ಪುಸ್ತಕವಾಗಿ ಪ್ರಕಟವಾಗಿದೆಯೋ ಹೇಗೆ ಎಂಬುದು ತಿಳಿಯಲಿಲ್ಲ. ಈ ವರ್ಣನಾಶತಕದಲ್ಲಿ ಶಿಕ್ಷಕ, ಗೌಡ, ಕುಲಕರ್ಣಿ ಮೊದಲಾದವರ ವರ್ಣನೆಗಳು ಸುಂದರವಾಗಿ ಬಂದಿವೆ. ಉದಾಹರಣೆಗೆ, ಹಳ್ಳಿಯ ಶಿಕ್ಷಕನ ಬಗೆಗೆ ಕವಿಗಳು ಕೊಟ್ಟ ವರ್ಣನೆಯನ್ನು ನೋಡಿದರೆ ಇಂದಿಗೂ ಶಿಕ್ಷಕನ ಪರಿಸ್ಥಿತಿ ಹೆಚ್ಚೇನೂ ಬದಲಾದಂತೆ ಕಾಣುವುದಿಲ್ಲ.

ಅರ್ಜಿಯನೆಂದುಂ ಮಾಡರು
ಮರ್ಜಿಯ ಕಾಯ್ವಂಗೆ ರೈತರೆಲ್ಲರು ನಿಜದಿಂ
ಅರ್ಜವ ನೀಂ ಮಾಡೆನ್ನುತ
ಗರ್ಜಿಸುವಮಾಸ್ತರಂಗೆ ಹಳ್ಳಿಯ ಜನರು ॥

ಕದನವ ತೆಗೆಯದಿರೆಮ್ಮೊಳ್
ಮುದದಿಂದಲಿ ಕಲಿಸೊ ನಮ್ಮ ಹುಡುಗರಿಗೆಲ್ಲ
ಸದನಕೆ ಬಾರೆಂದೆನ್ನುತ
ಬೆದರಿಪುವರ್ಕೆಲವು ಗೌಡ ಕುಲಕರ್ಣಿಯರು ॥

ಕುಲಕರ್ಣಿ ಮಗನು ಸಾಲೆಯ
ಒಳ್ ಸರಸದಿ ಕಲಿಯೆ ಗೌಡ ಕೋಪಿಸದಿರನು
ಬಲು ಕಷ್ಟ ಗೌಡನಮಗನಿಗೆ
ಕಲಿಸುವದಾಮಾಸ್ತರಂಗೆ ಹಳ್ಳಿಯ ಮಠದೊಳ್ ॥

ಹಗಲಿರುಳಂ ಸಾಲೆ ಹಾಕುತ
ಮುಗಿಯುತೆ ಕಂಡಲ್ಲಿ ಕರವನೆಲ್ಲಾ ಜನಕೆ
ನಗೆದೋರಲವರ ಮಾತಿಗೆ
ಮಿಗೆ ಮೆಚ್ಚುವರವನ ಗುಣಕೆ ಹಳ್ಳಿಯ ಜನರು ॥

ಬಂದವರ ಮೇಲಿಕರೆಯುತ
ಚೆಂದಾಗಿಹ ಕಥೆಯ ಪೇಳಿ ರಂಜಿಸುತವರಂ
ತಂದವರ ಕೈಗೆ ಬತ್ತಿಯ
ನೊಂದನು ಸೇದಲ್ಕೆ ಕೊಡಲು ಮೆಚ್ಚುವರವನಂ ॥

ಮುಂದಿಲ್ಲಿವನನೆ ಇಟ್ಟರೆ
ಒಂದಾದರು ಹುಡುಗನನ್ನು ಕಳಿಸೆವು ಮಠಕೆ
ಒಂದಿನವಾದರು ತಡೆಯದೆ
ಚಂದದಿ ಸಾಹೇಬರೆ, ವರ್ಗಮಾಡಿರಿ ಬೇಗ ॥

ಮಾಸ್ತರನೆ ಹುಡುಗರಲಿ ತುಸು
ಛಿಸ್ತಿಯನಿಟ್ಟಿಲ್ಲ ನೀನು ಕೇಳೊಂದಿಷ್ಟು
ಕುಸ್ತಿಯನು ಹಾಕುತಿರುವರು
ಮಸ್ತಕವನ್ನಿಂತು ನನಗೆ ಹಾಕಿದರೇನ್ನೈ ॥

ಏಳೆಂಟು ವರುಷ ಕಲಿಸಿದೆ
ಸಾಲೆಯ ನಾನಿವಗೆ ಮನೆಯ ಕೂಳನು ಕೊಟ್ಟು
ಆಳಿನ, ನಟ್ಟಿನ, ಹತ್ತೀ
ಕಾಳಿನ ಲೆಕ್ಕವದು ಬರೆದು ತೋರಲು ಬರದೈ ॥

ಸಾಕಿನ್ನು ಸಾಲೆಯೀತಗೆ
ನಾಕೇದಿನದೊಳಗೆ ಗಳಿಯ ಕಲಿಸಿಯೆ ಬಿಡುವೆಂ
ಹಾಕುವೆನು ಸಣ್ಣಮಗನನು
ಆಕಳ ಮೇಯಿಸಲು ನಾಳೆ ಕಳಿಸುವೆನಿವನಂ ॥

ಒಟ್ಟಾರೆ, ಪಂಡಿತ ಕೇಶವಶರ್ಮ ಗಲಗಲಿಯವರು ಹೇಳಿದಂತೆ 'ಉಪೇಂದ್ರನೇನು ಪಂಪರನ್ನರಂತೆ ಶಿಂಗಘರ್ಜನೆಯನ್ನು ಮಾಡುವ ಕವಿಯಲ್ಲ, ಲಕ್ಷ್ಮೀಶನಂತೆ ಕನ್ನಡ ನಂದನವನದಲ್ಲಿ ಇಂಪಾಗಿ ಹಾಡಿ ಸೊಂಪುಬೀರಿದ ಕವಿಕೋಕಿಲನೂ ಅಲ್ಲ, ನಯಸೇನಾದಿಗಳಂತೆ ನಯವಚನಗಳಿಂದ ಚಿರುಸುಗನ್ನಡವನ್ನು ಸರಸಾಗಿ ಮಾಡಿದವನೂ ಅಲ್ಲ, ಅಥವಾ ನೇಮಿಚಂದ್ರನಂತೆ ಅವನ ಕವಿತಾ ಸರೋವರದಲ್ಲಿ ಲಸದಲಂಕೃತಿ ಕಂಜನಿವಾಸದೊಳ್ ಮನೋಮುದದಿಂದ ಸರಸತಿಯು ಜಲಕೇಳಿಯನ್ನೂ ಆಡಲಿಲ್ಲ. ಹಾಗಾದರೆ ಅವನ ಸ್ಮೃತಿಯೇಕೆ ? ಉತ್ತರವು ಸಾದಾ– ಉಪೇಂದ್ರನು ಖಾದಿ ಬಟ್ಟೆಯಂತೆ ಸಾದಾ ಕವಿಯು.' ಪ್ರಾಥಮಿಕ ಶಾಲೆಯೊಂದರಲ್ಲಿ ಶಿಕ್ಷಕರಾಗಿ, ಯಾವುದೋ ಒಂದು ಕುಗ್ರಾಮದಲ್ಲಿ ಜೀವನ ಸಾಗಿಸಿ, ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಕೂಡ ಕನ್ನಡ ಕಾವ್ಯಪ್ರಪಂಚಕ್ಕೆ ಒಂದು ಹೊಸತನವನ್ನೂ ವೈಪುಲ್ಯವನ್ನೂ ತಂದುಕೊಟ್ಟ ಕನ್ನಡ ವಾಮನರ ಹೆಸರು ಈ ಅರುಣೋದಯ ಕಾಲದ ಸಾಹಿತ್ಯದಲ್ಲಿ ಸ್ಮರಣೀಯವಾಗಿದೆ.

—

ವಲ್ಲಭ ಮಹಾಲಿಂಗ ತಟ್ಟಿ

(೧೮೭೦–೧೯೨೨)

ಇವರೂ ಕನ್ನಡ ಶಾಲೆಯ ಮಾಸ್ತರರು. ಇವರ ಶಿಕ್ಷಣವೂ ಧಾರವಾಡದ ಟ್ರೇನಿಂಗ್ ಕಾಲೇಜಿನಲ್ಲಿ ಆಯಿತು. ಕ್ರಿ. ಶ. ೧೮೯೨ರ ಸೆಪ್ಟೆಂಬರ ತಿಂಗಳಲ್ಲಿ ಆದ ಟ್ರೇನಿಂಗ್ ಕಾಲೇಜಿನ ಸರ್ಟಿಫಿಕೇಟಿನ ೨ನೆಯ ವರ್ಷದ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಲ್ಲಿ ವಲ್ಲಭ ಮಹಲಿಂಗ ತಟ್ಟಿ ಅವರು ಪ್ರಥಮ ಸ್ಥಾನವನ್ನು ದೊರಕಿಸಿ ೧೫ ರೂಪಾಯಿ ಸರ್ಟಿಫಿಕೇಟನ್ನು ಪಡೆದಿದ್ದಾರೆ. ಅವರಿಗೆ ೧೦೦೦ ದಲ್ಲಿ ೭೪೩ತ್ತ ಗುಣಗಳು ದೊರಕಿ ನೂರಕ್ಕೆ ೭೪ರಷ್ಟು ಗುಣ ದೊರಕಿವೆ. ಅವರ ಈ ಯಶಸ್ಸಿನ ಮೂಲಕ ಅವರನ್ನು ಮೂರನೆಯ ವರ್ಷದ ಅಭ್ಯಾಸಕ್ಕಾಗಿ ಇಟ್ಟುಕೊಳ್ಳಲಾಯಿತು. ಇದೇ ವರುಷದ ಪರೀಕ್ಷೆಯಲ್ಲಿ ಶ್ರೀ ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ (ಗೌರೀಶ) ಅವರಿಗೆ ೧೦೦೦ಕ್ಕೆ ೬೦೪ ಗುಣಗಳು ದೊರೆಕಿದ್ದು, ಅವರಿಗೂ ೧೫ ರೂ. ಸರ್ಟಿಫಿಕೇಟು ಕೊಟ್ಟು, ೩ನೆಯ ವರ್ಷದ ಅಭ್ಯಾಸಕ್ಕಾಗಿ ಅವರನ್ನೂ ಇಟ್ಟುಕೊಳ್ಳಲಾಯಿತು.[1]

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಜನರಲ್ಲಿ ಸ್ವಾಭಿಮಾನವನ್ನು ಬಡಿದೆಬ್ಬಿಸಿದ 'ಮಾತೃಭೂಮಿ ಜನನಿ ನಿನ್ನ ಚರಣಸೇವೆ ಮಾಡುವಾ' ಎಂಬ ಸುಪ್ರಸಿದ್ಧವಾದ ಪದ್ಯ ವಲ್ಲಭ ಮಹಾಲಿಂಗ ತಟ್ಟಿಯವರಿಂದಲೇ ರಚಿತವಾದುದು. ಇವರು ಬರೆದ 'ಕನ್ನಡಿಗರ ಜನ್ಮಸಾರ್ಥಕತೆ' ಎಂಬ ಚಿಕ್ಕ ಪುಸ್ತಕ ೧೮೯೯ ರಲ್ಲಿ ಪ್ರಕಟವಾಯಿತು. ಅನಂತರ 'ಗೀತಾವಲೋಕನ', 'ಗುರುಪ್ರಸಾದ', 'ಪುನರ್ಜನ್ಮ', 'ಲಕ್ಷ್ಮೀಬಾಯಿ' ಮೊದಲಾದ ಪುಸ್ತಕಗಳು ಪ್ರಕಟವಾದವು.

ಕನ್ನಡಿಗರ ಜನ್ಮಸಾರ್ಥಕತೆ : (೧೮೯೯)

ಇದನ್ನು ಶ್ರೀಯುತರು ಹಾನಗಲ್ಲಿನಲ್ಲಿ ಶಾಲಾಮಾಸ್ತರರಾಗಿದ್ದಾಗ ಪ್ರಕಟಿಸಿದರು. ಇದರಲ್ಲಿ ಕನ್ನಡದ ಬಗೆಗೆ ಅಭಿಮಾನವುಂಟಾಗುವಂತೆ ಲೇಖಕರು ಪ್ರಯತ್ನಿಸಿದ್ದಾರೆ. "ಕನ್ನಡವು ಸ್ವತಂತ್ರವಾದ ಭಾಷೆ ಇರುವುದು. ಎಲ್ಲ ಆರ್ಯಭಾಷೆಗಳ ಚಕ್ರವರ್ತಿನಿಯೂ, ಸೌಷ್ಠವ, ಗಾಂಭೀರ್ಯಾದಿ ಸದ್ಗುಣ ಮಂಡಿತಳೂ ಆದ ಗೀರ್ವಾಣ ಭಾಷಾದೇವಿಯು ಆರ್ಯಾವರ್ತವನ್ನು ಪ್ರವೇಶಿಸುವ ಪೂರ್ವದಲ್ಲಿಯೇ, ಕಡಿಮೆ ಬೆಲೆಯುಳ್ಳ ಉಡುಗೆ ತೊಡಿಗೆಗಳಿದ್ದರೂ, ಹೆರವರ ಹಂಗಿಲ್ಲದ ಕನ್ನಡ ನುಡಿ ಬೊಡತಿಯು, ತನ್ನ ನಾಲ್ಕು ಜನ ಜೀವದ ಅಕ್ಕತಂಗಿಯರೊಡನೆ ತೆಂಕಣ ನಾಡೊಳಗೆ ನೆಲೆಗೊಂಡು ನಿಂತಳು." (ಪುಟ ೧೩–೧೪.)

---

[1] ಶಾಲಾಪತ್ರಕ : ೧೮೯೩ : ಸಂ. ೨೮, ಸಂ. ೧.

"ಕನ್ನಡ ಭಾಷೆಗೆ ಬಡಿದಷ್ಟು ಧಕ್ಕೆಯು ಭೂಮಿಯೊಳಗಿನ ಯಾವ ಸುಧಾರಿಸಿದ ಭಾಷೆಗೂ ಬಡಿದಿರಲಿಕ್ಕಿಲ್ಲ. ಭಾಷಾ ಸಮೀಕರಣ ಎಂಬ ಪುಸ್ತಕದಲ್ಲಿ ವೇ॥ ಗ॥ ವೈ॥ ಕೃಷ್ಣಾಚಾರ್ಯರು 'ಒಬ್ಬ ಸುಲ್ತಾನನು ಕನ್ನಡ ಗ್ರಂಥಗಳನ್ನು ತನ್ನ ದಂಡಿನ ಉರುವಲಕ್ಕೋಸ್ಕರ ಕೆಲವು ದಿನಗಳವರೆಗೆ ಉಪಯೋಗಿಸಿದ್ದನೆಂದು' ಹೇಳುತ್ತಾರೆ........ಮುಂಬೈ ಕರ್ನಾಟಕವಂತೂ ನಾಯಿಗಳು ಹಿಟ್ಟಿನ ಚೀಲವನ್ನು ಎಳೆದಾಡುತ್ತಿದ್ದಂತೆ, ಕ್ಷಣಶಃ ಬೇರೆ ಬೇರೆ ಜನರ ಆಧಿಪತ್ಯಕ್ಕೊಳಪಡುತ್ತಿತ್ತು. ಆದುದರಿಂದ ಕನ್ನಡ ಭಾಷೆಯು ಹಲವು ಬೇಳೆಯ ಕಡಿಗಳನ್ನು ಕೂಡಿಸಿ ಮಾಡಿದ ದೋಸೆಯಂತೆ ಕಣ್ಣಿಗೆ ಬೀಳುತ್ತದೆ." (ಪುಟ ೩೪-೩೫.)

"ಕಾವ್ಯಶಾಸ್ತ್ರವಿನೋದೇನ ಕಾಲೋಗಚ್ಛತಿ ಧೀಮತಾಂ. ವ್ಯಸನೇನ ತು ಮೂರ್ಖಾಣಾಂ ನಿದ್ರಯಾ ಕಲಹೇನವಾ" ಎಂಬಂತೆ ಕನ್ನಡಿಗರ ಕಾಲವು ನಿದ್ರೆ ಕಲಹಗಳಲ್ಲಿ ಮಾತ್ರ ಹೋಗುತ್ತದೆ. ಆದ್ದರಿಂದ ಕನ್ನಡಿಗರು ಎಚ್ಚತ್ತು ಸಾಹಿತ್ಯ ನಿರ್ಮಿತಿಗೂ, ಸಾಹಿತ್ಯ ಪರಾಮರ್ಶೆಗೂ ಸಿದ್ಧರಾಗಬೇಕೆಂದು ಲೇಖಕರು ಹೇಳುತ್ತಾರೆ.

ಶ್ರೀಯುತರ ಹಲವು ಕವನಗಳು 'ಪ್ರಭಾತ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿವೆ. 'ಸಿಂಹಾದೇಕಂ' ಎಂಬ ಅನುಷ್ಟುಪ್ ಶ್ಲೋಕದ ಭಾಗವನ್ನು ತಟ್ಟಿಯವರು ಹೀಗೆ ಭಾಷಾಂತರಿಸಿದ್ದಾರೆ:

ದಣುವಿಲ್ಲದೆ ಹೊರೆ ಹೊರುವುದು
ಗಣಿಸದು ಚಳಿ ಬಿಸಿಲುಗಳನು ಕತ್ತೆಯು ನಿತ್ಯಂ ॥

ಮನದೊಳ್ ನಲ್ಮೆಯಿನಿರ್ಪುದು
ಮನುಜಂ ತಾ ಕಲಿತುಕೊಳ್ವುದೀ ತ್ರಿಗುಣಗಳಂ ॥

ಗುರುಪ್ರಸಾದ (೧೯೨೫) :

೭೯ ಪುಟದ ಈ ಚಿಕ್ಕ ಸಾಮಾಜಿಕ ಕಾದಂಬರಿಯು ಗಳಗನಾಥರ ಸುರಸಗ್ರಂಥಮಾಲೆಯ ೪೨ ನೆಯ ಗ್ರಂಥವಾಗಿ ಸನ್ ೧೯೨೫ ರಲ್ಲಿ ಪ್ರಕಟವಾಯಿತು. ಧಾರವಾಡ ಜಿಲ್ಹೆಯ ದೊಡ್ಡದೊಂದು ಮನೆತನಕ್ಕೆ ಸೇರಿದ ಶ್ರೀಪತಿಯೆಂಬ ಯುವಕನು ತನ್ನ ಸದ್ಗುಣಗಳಿಗಾಗಿ ಪಟ್ಟ ತೊಂದರೆಗಳು ಮತ್ತು ಕೊನೆಗೆ ವಾಡಿಯ ಸದ್ಗುರುವಿನ ಪ್ರಭಾವದ ಮೂಲಕ ಜೀವನದಲ್ಲಿ ಯಶದೊರಕಿಸಿದ್ದು ಈ ಕಿರು ಕಾದಂಬರಿಯಲ್ಲಿ ವರ್ಣಿತವಾಗಿವೆ. ಕಥನದ ವೇಗ ಹಲವೆಡೆಗೆ ತೀರ ರಭಸವಾಗಿ, ಹಲವೆಡೆಗೆ ನಿಧಾನವಾಗಿ ಹೊರಟಂತೆ ಕಂಡರೂ, ಶ್ರೀಪತಿ, ಶೇಷಮ್ಮ-ಮೊದಲಾದವರ ಪಾತ್ರ ಸುಂದರವಾಗಿ ಚಿತ್ರಿತವಾಗಿವೆ.

—

ಶ್ರೀನಿವಾಸ ವೆಂಕಟೇಶ ಕಟ್ಟಿ

(೧೮೭೭–೧೯೨೨)

ಇವರು ಸುಪ್ರಸಿದ್ಧ ಲೇಖಕರಾಗಿದ್ದ ವೆಂಕಟ ರಂಗೋ ಕಟ್ಟಿಯವರ ಮಕ್ಕಳು. ಇವರ ತಾಯಿಯ ಹೆಸರು ತುಳಸಾಬಾಯಿ. ಹೆಂಡತಿಯ ಹೆಸರು ರಮಾಬಾಯಿ. ಶ್ರೀನಿವಾಸರು ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಹೆಚ್ಚಿನ ಅಭ್ಯಾಸ ಮಾಡಿದರು. ಧಾರವಾಡದ ಸರಕಾರಿ ಶಾಲೆಯಲ್ಲಿ ಸಂಸ್ಕೃತವನ್ನು ಕಲಿಸುತ್ತಿದ್ದರು. ಇವರು ಒಳ್ಳೆಯ ನಟರೂ ಆಗಿದ್ದರಂತೆ. ಪುಣೆಯಲ್ಲಿದ್ದಾಗ ಸಂಸ್ಕೃತ ನಾಟಕದಲ್ಲಿ ಶಕುಂತಲೆಯ ಪಾತ್ರವನ್ನು ವಹಿಸಿದ್ದರಂತೆ. ಇವರು ಶ್ರೀಹರ್ಷಕೃತವಾದ 'ಪ್ರಿಯದರ್ಶಿಕಾ' ನಾಟಕವನ್ನು 'ಸಂಗೀತ ಪ್ರಿಯದರ್ಶಿಕಾ' ಎಂದು ಸನ್ ೧೮೯೩ ರಲ್ಲಿ ಅನುವಾದ ಮಾಡಿದ್ದಾರಲ್ಲದೆ, 'ಗೋಪೀಗೀತ'ವನ್ನೂ ಅನುವಾದಿಸಿದ್ದಾರೆ. ಶೈಕ್ಷಣಿಕ ವಿಷಯವಾಗಿ ಪದ್ಮನಾಭ ಶಂಕರ ಚಂದಾವರಕರ ಅವರು ಬರೆದ ಹೊಸ ಪದ್ಧತಿಯ ಭೂಮಿತಿಯನ್ನು ಅನುವಾದಿಸಿ ೧೯೦೭ ರಲ್ಲಿ ಪ್ರಕಟಿಸಿದ್ದಾರೆ.* ಇವರು ಬರೆದ ಅನೇಕ ಕವನಗಳು 'ಪ್ರಭಾತ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿವೆ.

ಅವುಗಳ ಸೌಂದರ್ಯ ಮತ್ತು ನೀತಿಬೋಧೆಯ ದೃಷ್ಟಿಯಿಂದ ಈ ಕೆಳಗಿನವುಗಳನ್ನು ಉದಾಹರಿಸಬಹುದು :

ವಿದ್ವದ್ವಿಚಾರಗಳು

ಕೆಳೆಯನನೊರ್ವನನಿಳೆಯೊಳ್
ಗಳಿಸಿದವಂ ಜನಿಸಿ ಧನ್ಯನಾದಂ ನಿಜದಿಂ
ಕೆಳೆಯನ ಬಳಮಿಲ್ಲದವಂ
ಕಳೆದರ್ಥಮನರ್ಥಮಾಗಿ ಜೀವಿಸುತಿರ್ಪಂ

ಪೆಣ್ಣಂ ಪ್ರತಿಮೆಯನೆಂತಂ
ತಣ್ಣಂಗಳ್ ಪೂಜಿಪರ್ ಮನೋ-ಭಾವನೆಯಿಂ
ಕಣ್ಣಿಂ ನೋಡಲ್ಕಣ್ಣದೆ
ಮಣ್ಣೊಳ್ಳದಂ ಕೂಡಿಪನ್ನವರೆಗಂ ಕಡೆಯೊಳ್

* A Catalogue of the Kannada, Badaga and Kurg books in the Library of British Museum : L. D. Barnet, 1910.

ನರನೀ ಲೋಕದೊಳೆಸಗುವ
ಗುರುತರ ಪರಮೋದ್ಯಮಂಗಳೊಳಗೊಂದಿರ್ಕುಂ
ನಿರುತಂ ನಾರೀ ಜನದಾ
ತರಂಗಮಂ ಜಿರ್ಕೆ ನೋಳ್ಪ ಸಾಹಸಮದು ತಾಂ

ಪ್ರೇಮದ ನಾಮದ ತಿರುಳಂ
ಕಾಮಿಸದಿಹ ವಸ್ತುವಿಲ್ಲ ಮತ್ತಂ ಪ್ರೇಮೋ–
ದ್ದಾಮನ ಕಾಮಿತವೆಲ್ಲಮಂ
ನಾ ಮಾಪ್ಯೆಮಂಗೆ ಕೊಟ್ಟೊಡಂ ಬೇಳ್ಪನವಂ ೧

ಶ್ರೀಯುತರು ಕಾವ್ಯರಚನೆಯಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ. ಶ್ರೀಮತ್ ಶಂಕರಾಚಾರ್ಯಕೃತ ಶ್ಲೋಕಗಳನ್ನು ಪ್ರಾಸವನ್ನು ಬಿಟ್ಟು ಅನುವಾದ ಮಾಡಿದ್ದಾರೆ :

ದಾಮೋದರ ಗುಣ ಮಂದಿರ
ಸುಂದರ ವದನಾರವಿಂದ ಗೋವಿಂದ ಕಂದಾ
ಭವಜಲಧಿ ಮಥನ ಮಂದಿರ
ಕಡೆಗಣ್ಣೆಟ್ಟಿಂದೆ ಭವದ ಕಟ್ಟಿಂಜಿಕೆಯಂ

ಇದೂ ಅಲ್ಲದೆ ಶ್ರೀನಿವಾಸರು ಸಂಸ್ಕೃತ ಪಂಡಿತರು. ಪಂಡಿತ ಕಟ್ಟಿ ವೆಂಕಟರಾಯರ ಮಕ್ಕಳು. ಆದ್ದರಿಂದ ಸಂಸ್ಕೃತ ಛಂದಸ್ಸಿನಲ್ಲಿ ಅನೇಕ ಕನ್ನಡ ಕವಿತೆಗಳನ್ನು ಬರೆಯುವ ಪ್ರಯೋಗವನ್ನೂ ಮಾಡಿದ್ದಾರೆ. ಉದಾಹರಣೆಗೆ ಇದು ಕುಮುದ ವೃತ್ತ :

ನರದೇಹದ ಮಣಿ
ಪಡೆದಿರ್ದನೇ ॥
ಧರಣೀತಳಮಂ
ದೊರೆವರ್ ನಿರುತಂ ॥

ಇದು ಪಾವನ ವೃತ್ತ :

ತಾಳಿಯಾ
ಗೋಳನೇಳ್ ॥
ಕಾಳನಾ
ಕೂಳಿಗೆ ॥

ಗಾಯತ್ರಿ ಛಂದಸ್ಸು :

ಸುಂದರ ಮುಖಿಯಂ
ಚೊಂದದು ಸುಂದಂ ॥
ಚೊಂದದ ಗುಣವಾ
ದಂದಲೆಸುಗುಂ ॥

---

೧ ಪ್ರಭಾತ : ಅಕ್ಟೋಬರ : ೧೯೧೫ ಪು. ೧೦–೧೧

ಮುದವೀಡು ಕೃಷ್ಣರಾಯರು

(೧೮೭೪–೧೯೪೨)

ಕರ್ನಾಟಕದ ಹುಲಿಯೆಂದು ಪ್ರಖ್ಯಾತರಾಗಿದ್ದ ಮುದವೀಡು ಅವರು ಹೆಚ್ಚಾಗಿ ಬರೆಯದಿದ್ದುದು ಕನ್ನಡದ ದುರ್ದೈವ. “ಹಲವು ಬಾಗಿಲುಗಳಿದ್ದ ಛಾವಣಿಯಿಲ್ಲದ ಮನೆ” ಎಂಬಂತೆ ಕನ್ನಡ ದೇವಿಗೆ ಅನೇಕ ವಿಧವಾದ ಪೂಜಾಕಾರ್ಯಗಳು ಬೇಕಾದವು. ಕವಿಗಳು ಹಾಡಬೇಕಾಯಿತು; ಶಿಕ್ಷಣತಜ್ಞರು ಕನ್ನಡ ಶಿಕ್ಷಣದ ಬೆಳವಣಿಗೆಗೆ ಆಣಿ ಮಾಡಬೇಕಾಯಿತು; ಸಾಮಾಜಿಕ–ರಾಜಕೀಯ ಕಾರ್ಯಕರ್ತರು ಕನ್ನಡದ ಜಾಗೃತಿಯ ಡಿಂಡಿಮವನ್ನು ಬಾರಿಸಬೇಕಾಯಿತು; ಕನ್ನಡ ವಾಗ್ಮಿಗಳು ಕನ್ನಡದ ಜಾಗೃತಿಯ ಪಾಂಚಜನ್ಯವನ್ನು ಮೊಳಗಬೇಕಾಯಿತು. ಈ ಮಂತ್ರಪುಷ್ಪದಲ್ಲಿ ಕನ್ನಡದ ಐಶ್ವರ್ಯವನ್ನು ತಮ್ಮ ಅದ್ಭುತವಾದ ವಾಗ್ಮಿತೆಯಿಂದ ಘೋಷಿಸುವ ಮಹಿಮೆ ದಿವಂಗತ ಮುದವೀಡು ಕೃಷ್ಣರಾಯರಿಗೆ ಸಂದಿತು.

ಮೈಸೂರು ಕಡೆಯಿಂದ ಬಿ. ಎಂ. ಶ್ರೀ., ಮಾಸ್ತಿ ಅವರು ಉತ್ತರ ಮತ್ತು ದಕ್ಷಿಣ ಕರ್ನಾಟಕಗಳ ಮಧ್ಯೆ ಸೇತುವೆ ಆದ ಹಾಗೆ, ಈ ಕಡೆಯಿಂದ ದಿವಂಗತ ಮುದವೀಡು ಅವರೊಡನೆ ಶಿ. ಶಿ. ಬಸವನಾಳ ಅವರೂ ಈ ಸ್ನೇಹಸಂಬಂಧದ ಸೇತುವೆಯಾಗಿ ಈ ಮನೆಯನ್ನು ಪೂರ್ಣಗೊಳಿಸಿದರು.

ಮುದವೀಡು ಅವರದು ಕೊಳಲಿನ ಇಂಚರವಲ್ಲ; ವಾಣಿ ಶಂಖದ್ದು. ತಮ್ಮ ತಮ್ಮ ಕಾವ್ಯದ ಬಗ್ಗೆ 'ಪದೋಕ್ತಿ ಭೇರಿ' ಎಂದು ಹೇಳಿಕೊಂಡರು. ಮುದವೀಡು ಅವರ ಭಾಷಣವೂ ಭೇರಿ ಬಾರಿಸಿದ ಹಾಗೆ ಇರುತ್ತಿತ್ತು. ಮುದವೀಡು ಅವರಿಗೆ ಧ್ವನಿವರ್ಧಕವು ಬೇಕಾಗಿರಲಿಲ್ಲ. ಹತ್ತು ಸಾವಿರ ಜನಸಮುದಾಯವಿದ್ದರೂ ತಮ್ಮ ಕಂಚಿನ ಕಂಠದಿಂದ ಅವರನ್ನು ಹಿಡಿದಿಡುತ್ತಿದ್ದರು. ಮಾತೂ ಅಷ್ಟೇ ಮಧುರ; ಗಂಭೀರವಾದುದು. ಅವರ ಭಾಷಣ ಭಾವನಾಪ್ರಧಾನ. ಅವರು ಭಾಷಣ ಪ್ರಾರಂಭಿಸಿದರೆಂದರೆ, ಜೋಗದ ಜಲಪಾತ ಬಿದ್ದ ಹಾಗೆ, ಅಲೆ ಅಲೆಯಾಗಿ, ಸುರುಳಿ ಸುರುಳಿಯಾಗಿ, ಬಂಡೆಗಳ ಮೇಲೆ ಬಂಡೆಗಳು ಉರುಳಿ ಬಿದ್ದ ಹಾಗೆ, ಅವರ ಮಾತು ಭೋರ್ಗರೆಯುತ್ತಿತ್ತು. ಸ್ವತಃ ವಕ್ತಾರರ ಮತ್ತು ಶ್ರೋತೃಗಳ ಭಾವನೆ ಮೇಳವಾಗಿ ಕರಗಿ ಹರಿಯುತ್ತಿತ್ತು. ಮಡುವಿನ ಮೇಲೆ ಮಡುವು ಕಟ್ಟಿದ ಹಾಗೆ, ಇಂದ್ರ ಜಾಲದಿಂದ ಮರುಳುಗೊಳಿಸಿದ ಹಾಗೆ, ಮುದವೀಡು ಅವರು ಗಾಳಿಯಲ್ಲಿ ಕಟ್ಟಡ ಕಟ್ಟುತ್ತಿದ್ದರು. ಧಾರವಾಡ ಭಾಗದಲ್ಲಿ ಹೇಗೋ ಹಾಗೆ ಮೈಸೂರು ಭಾಗದಲ್ಲಿಯೂ ಅವರ ಭಾಷಣಕ್ಕೆ ಅಷ್ಟೇ ಆದರಣೆ. ದಿವಂಗತರ ಭಾಷಣದ ವೈಖರಿಯನ್ನು ಕುರಿತು ಪ್ರೊ. ಕೆ. ಸಂಪದ್ಗಿರಿರಾಯರು ಹೇಳಿದ ಮಾತುಗಳು ಮನನೀಯವಾಗಿವೆ ;

"Dharwar has been to North Karnatak what Poona has been to Maharashtra - the centre of Literary and Political ferment in the province. Among the most picturesque figures of the older generation in Dharwar was Krishnarao Mudhavedkar whose stentorian voice and oratorical abilities in Kannada made him easily the most effective propagandist in the old days, before loudspeakers and microphone arrangements had come into common use. He was among the early band who carried the message of Gandhi into Mysore. He had attended the First Session of the Kannada Sahitya Parishat at Bangalore in 1915. Most of the speeches in the Conference pleading for the encouragement of Kannada were delivered in English ! At the end of the Session when Krishnarao Mudhavedkar rose to express thanks to the Reception Committee on behalf of the representatives of Dharwar, he heldforth in his sonorous, grandiloquent style in Kannada. Sri H. V. Nanjundayya, the first Vice-Chancellor of Mysore University, who was present, was so impressed that he hailed him as Surendranath Banerjee of Karnatak. When Mudhavedkar started a long sentence with its tiers of phrases, one watched with suspense and admiration not unmixed with anxiety, its mounting architecture wondering how he would end it. But really if ever. was he at a loss for the right words to lead up to a fitting climax; rarely did he allow a sentence to slide down into bathos - a peril that always besets a grandiloquent speaker."[೧]

ಇದು ಮುದವೀಡು ಅವರ ಭಾಷಣದ ವೈಭವ, ವೈಖರಿ : ಆದರೆ ಈ ಭಾಷಣದ ಭರದಲ್ಲಿ ಅವರಿಂದ ಹೆಚ್ಚಿನ ಸಾಹಿತ್ಯ ನಿರ್ಮಿತಿ ಆಗಲಿಲ್ಲ. ಕರ್ನಾಟಕ ವೃತ್ತ ಮತ್ತು ಧನಂಜಯವನ್ನು ಅದರ ಸಂಪಾದಕರಾಗಿ ಅವರು ಅನೇಕ ವರ್ಷಗಳವರೆಗೆ ನಡೆಸಿಕೊಂಡು ಬಂದರೇನೋ ನಿಜ, ಆದರೆ, ಭಾಷಣದ ಈ ಉತ್ಸಾಹವನ್ನೇ ಅವರು ಸಾಹಿತ್ಯ ನಿರ್ಮಿತಿಗೆ ಉಪಯೋಗಿಸಿದ್ದರೆ, ಇನ್ನೂ ಎಷ್ಟೋ ಕೃತಿಗಳನ್ನು ಅವರು ರಚಿಸಬಹುದಿತ್ತು. ಶ್ರೀ ಸಂಪದ್ಗಿರಿರಾಯರು ಹೇಳಿದ ಹಾಗೆ, ಅವರ ನಾಲಿಗೆಯಷ್ಟೇ ಅವರ ಲೆಕ್ಕಣಿಕೆಯೂ ಹರಿತವಾಗಿದ್ದಿತು. ಅವರು ಸಮಯಸ್ಫೂರ್ತ ಕವಿಗಳಾಗಿದ್ದರು. ಒಂದು ಸಲ ಅವರು ಬೆಂಗಳೂರಿನಲ್ಲಿ ಭಾಷಣ ಮಾಡುತ್ತಿರುವಾಗ ಅಲ್ಲಿಯ ಮ್ಯಾಜಿಸ್ಟ್ರೇಟರು ಅವರ ಭಾಷಣವನ್ನು ಪ್ರತಿಬಂಧಿಸಿ ಆಜ್ಞೆಯನ್ನು ಹೊರಡಿಸಿದರು. ಮುದವೀಡು ಅವರು ತಕ್ಷಣ, ಆ ಭಾಷಣದ ವೇದಿಕೆಯನ್ನೇ ಹರಿಕಥೆಗೆ ತಿರುಗಿಸಿಕೊಂಡು ಸಮಯಸ್ಫೂರ್ತ ಕವಿತೆಗಳನ್ನು ಹೇಳುತ್ತ ಹರಿಕಥೆಯನ್ನು ಪ್ರಾರಂಭಿಸಿದರು.[೨]

---

[೧] Karnataka Darshana : 1955 : pp. 511-512.

[೨] "Shri Mudhavedkar was as filment and vigorous with his pen as with his tongue; and was a pioneer in the field of Kannada journalism in Dharwar. ……He was, besides, something of a poet and a composer. He could at a pinch switch over a public address into Harikatha, which he once did in Bangalore when a

Continued

ಭಾಷಣಕಾರರ ಪ್ರಾರಬ್ಧವೇ ಹೀಗೆಂದು ಕಾಣುತ್ತದೆ. ಮಾತಿನ ಭರದಲ್ಲಿ ಕೃತಿ ನಿರ್ಮಿತಿ ಕಡಿಮೆಯಾಗುತ್ತದೆ. ಇದೇ ಮಾತನ್ನೇ ರಾಷ್ಟ್ರಕವಿ ಕುವೆಂಪು ಅವರು ತಮ್ಮ ಗುರುಗಳಾದ ಬಿ. ಎಂ. ಶ್ರೀ. ಅವರ ಬಗೆಗೆ ಹೇಳಿದರು. ಬಿ. ಎಂ. ಶ್ರೀ. ಮಾತಾಡುತ್ತಲೇ ಹೋದರು; ಕುವೆಂಪು ಬರೆಯುತ್ತಲೇ ಹೋದರು. ಇಬ್ಬರೂ ಜನಮನವನ್ನು ತಮ್ಮ ತಮ್ಮ ಕಲೆಯಿಂದ ಪೋಷಿಸಿದರು; ತೋಷಿಸಿದರು. ಈ ಮಾರ್ಗಭೇದವನ್ನು ಪುಟ್ಟಪ್ಪನವರು 'ಶ್ರೀಯವರಿಗೆ' ಎಂಬ ತಮ್ಮ ಕವನದಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ:

ಅಂದು ನಿಮ್ಮಳ್ಕರೆಯೆ ಪರಸಿತೆನ್ನಂ ಮೊದಲ್
ಇಂದು ರಾಮಾಯಣಕೆ ತಿರುಗಿ ಆ ಕೊಳಲಿನ ತೊದಲ್
ಕಾವ್ಯಗೈದಿದೆ ಬೃಹದ್‌ಗಾನಮಂ " ನನ್ನೊಡನೆ ಬಾ
ಕನ್ನಡದ ನಾಡನೆಳ್ಚರಿಸುವಾವೇಶಮಂ ತಾ
ವಾಙ್ಮಯ ತಪೋಬಲದಿ ಜಿಹ್ವಾತಟಿಚ್ಛಕ್ತಿ ತಾಂ
ಹೃದಯ ಗಹ್ವರದಲ್ಲಿ ಚಿಜ್ಯೋತಿ ಪ್ರದೀಪಮಂ
ಪೊತ್ತಿಪೋಲ್ ಮಾಳ್ಪಂ ತವಿಸಿ ತಮಶ್ಶಾಪಮಂ "
ಇಂತೆನಿತ್ತೆನಿತೊ ನೀಂ ಪೇಳ್ದೆನ್ನ ಕರೆದೊಡಂ
ನಾಂ ಪೊರಮಟ್ಟೆನಿಲ್ಲೆನ್ನ ಪೊಕ್ಕ ವಲ್ಮೀಕದಿಂ
" ನಿಮ್ಮ ಧರ್ಮಂ ನಿಮಗೆ; ನನ್ನ ಧರ್ಮಂ ನನಗೆ
ಹಲವು ಬಟ್ಟೆಗಳಲ್ತೆ ಭಗವದಿಚ್ಛೆಯ ಮನೆಗೆ ?
–ಕೈಕೊಂಡ ರಸತಪಸ್‌ಸಿದ್ಧಿಯ ಅನಂತರಮೆ
ನೋಳ್ಪೆನ್. ಅದಕಿಂ ಮುನ್ನಮಾನ್ ಏಳ್ವುದೇಂ ತರಮೆ ? "
ಎಂದೆನ್. ಅರಿತವರಲ್ತೆ ? ಸೊಗಸುತೆಂದಿರಿ " ನಲ್ !
ನಿನ್ನಾ ತಪಸ್ಯೆಯಿಂ ನಮಗಕ್ಕೆ ಋದ್ಧಿ ! ಗೆಲ್ " ೧

ಹೀಗೆ ಸಾರಸ್ವತ ಗುಹೆಯಲ್ಲಿ ಕುಳಿತು ಹಲವರು ವಾಙ್ಮಯ ತಪಸ್ಸನ್ನು ಆಚರಿಸಿದರು. ಮತ್ತೆ ಹಲವರು ಜೀವನದ ಕಣಕ್ಕೆ ಇಳಿದು, ಭಾಷಣಗಳಿಂದ ಜನಮನವನ್ನು ತಣಿಸಿದರು. ಹಲವು ಬಟ್ಟೆಗಳಲ್ತೆ ಭಗವದಿಚ್ಛೆಯ ಮನೆಗೆ ?

ಅದೇನೇ ಇದ್ದರೂ, ಬಿ. ಎಂ. ಶ್ರೀ. ಅವರ ವಕ್ತೃತ್ವ ಅವರ ಸಾಹಿತ್ಯಶೈಲಿಯ ಮೇಲೆ ಪರಿಣಾಮ ಮಾಡದೆ ಹೋಗಲಿಲ್ಲ; ಅವರ ಬರವಣಿಗೆಯ ರೀತಿ, ವಾಗ್ಮಿತೆಯ ಕಡೆಗೇ ವಾಲಿತು. ಬರೆಹದ ರೀತಿಗಿಂತ, ನಿರರ್ಗಳ ಮಾತನಾಡಿದ ರೀತಿಯಲ್ಲಿ ಭಾಷೆ ಪ್ರವಹಿಸಿತು. ಉದಾಹರಣೆಗೆ ರನ್ನಕವಿಪ್ರಶಸ್ತಿಯ ಈ ಮುನ್ನುಡಿಯ ಭಾಗವನ್ನು ನೋಡಬಹುದು. ಇದನ್ನು ಓದುವಾಗ ಬಿ. ಎಂ. ಶ್ರೀ. ನಮ್ಮೆದುರಿಗೇ ನಿಂತು ಮಾತನಾಡುತ್ತಿರುವರೋ ಏನೋ ಎನಿಸುತ್ತದೆ :

---

magisterial order was served on him prohibiting him from delivering public lectures ! His heart was full of kindly sentiment and frequently he worked himself up to the point of tears in speaking of Indian past glory or of the saints of India or Mahatma Gandhi's sufferings and sacrifices. Emotion was his strong point; and a reckless generosity of spirit inspite of impecuniosity, neglect and distraction, of which he had more than the usual share." ಅದೇ : ಪು. ೫೧೨.

೧ ಬೆರಳ್‌ಗೆ ಕೊರಳ್ : ಕುವೆಂಪು : ೧೯೪೭ (ಮುಖಪುಟ).

" ನಾರಣಪ್ಪನ ನೋಟ, ಕುಮಾರವ್ಯಾಸನ ದರ್ಶನ, ಭಕ್ತಿಯ ಆವೇಶ ಬೇರೆ. ಸೀರೆ ಸೆಳೆದದ್ದೂ ಸೆಳೆದದ್ದೇ: ಉಂಡು ತೇಗಿ ಹೊಟ್ಟೆ ನೀವಿದ್ದೂ ನೀವಿದ್ದೇ: ದೇವ ಬಂದಾ ನಮ್ಮ ಓಹೋಹೋ! ಏಳನೆಯ ಸ್ವರ್ಗ! ಪರಮೇವ್ಯೋಮನ್! ಕಿವಿ ಹೊಗುವುದೇ ತಡ ಪರವಶ! ಕೊಚ್ಚುವ ಪ್ರವಾಹ: ಇಂದಿಗೂ ನಮ್ಮ ಕರುಳಿನಿಂದ ಬಂದು ನಾಲಗೆಯಲ್ಲಿ ನಲಿಯುವ ಕನ್ನಡ. ಆ ಮಾತು, ಆ ಶೈಲಿ, ಆ ಮಾತ್ರೆಗಳ ವಿನ್ಯಾಸ, ಭಾವ, ರಸ, ವೈಮರೆತ!........ ಯಾವ ಮಹಾಭಾರತ ಕ್ಷಾತ್ರವೇದವಾಗಿದ್ದು, ಬ್ರಾಹ್ಮೀಭಾರತವಾಯಿತೋ, ಯಾವ ವೀರಗಾಯಕನ ಹೃದಯದಿಂದ ಬ್ರಹ್ಮವಿಶ್ವನಾದ ಪರಮಾತ್ಮನು ಮೂಡಿ ಐಕ್ಯವಾದನೋ, ಆ ಎರಡೂ ಕವಿಗಳ, ಋಷಿಗಳ, ಬ್ರಹ್ಮಚಾರಿಗಳ, ಆನಂದಪರವಶರ, ಸಾಯುಜ್ಯ ಸಂಖಿಗಳ, ಇಹಲೋಕ ಪರಲೋಕ ದ್ವೈತಕ್ಕೆ ಮೀರಿದ ಅತಿವರ್ಣಾಶ್ರಮಿಗಳ ಪಂಕ್ತಿ ಕುಮಾರವ್ಯಾಸ. ಧರ್ಮಕ್ಷೇತ್ರೇ ಕುರುಕ್ಷೇತ್ರೇ– ಎರಡು ರಣಾಂಗಣದಲ್ಲಿಯೂ ಹೋರಾಟವಾದಾಗ, ಮಾಮಕಾ: ಪಾಂಡವಾ:– ಆಸುರಿ, ದೈವಿ,– ಇಬ್ಬರೂ ಕಿಮಕುರ್ವತ?– ಏನು ಮಾಡಿದರು; ಏನು ಮಾಡಬೇಕು: ಯಾರಲ್ಲಿ ಮೊರೆಹೋಗಬೇಕು? ಯಾರು ಸಾರಥಿಗಳು ಮನೋರಥಕ್ಕೆ, ಸಂದೇಹದಲ್ಲಿ, ದೌರ್ಬಲ್ಯದಲ್ಲಿ?– ಅರಿಕೇಸರಿಯೊ, ಅಸುರಾರಿಯೊ? ಮಾಮೇಕಂ, ಮಮಪ್ರಾಣಾಹಿ, ಧರ್ಮಸಂಸ್ಥಾಪನಾರ್ಥಾಯ, ಪ್ರಿಯೋಸಿಮೇ, ಯುಧ್ಯಸ್ವ, ಮಯಿ ಸನ್ನಸ್ಯ........ ಕುಮಾರವ್ಯಾಸನ ತಂತು ಇದು. ಕೃಷ್ಣಪರಮಾತ್ಮನ ಲೀಲೆ, ಭಕ್ತವತ್ಸಲತೆ, ಪ್ರೇಮದ ಸಲಿಗೆ– ಮಾಯಾವಿ, ಜೋಕೆ, ಕೈಬಿಟ್ಟು ಬಿಟ್ಟವನಲ್ಲ; ಹಿಡಿದು ಹಿಡಿದವನಲ್ಲ; ಅಹಂಕಾರ ಮುಸುಕೀತು ಜೋಕೆ– ದಾಸ್ಯ, ಕೈಂಕರ್ಯ, ಧೈರ್ಯ, ವೀರ್ಯ, ಒಂದು ಮಾತಿನಲ್ಲಿ ಭಕ್ತಿ- ಇದು." [೧]

ಶ್ರೀ ಅವರಿಗೀತ ಮೊದಲೇ ಈ ಭಾಷಾಶೈಲಿಯನ್ನು ಮುದವೀಡು ಅವರು ಪ್ರಾರಂಭಿಸಿದರು. ಅವರ ಬರೆಹಗಳನ್ನು ಓದಿದಾಗ ಅವರು ಎದುರು ನಿಂತು ಮಾತಾಡುವಂತೆಯೇ ಎನಿಸುತ್ತದೆ.

" ಧಾರವಾಡ– ನನ್ನ ನಚ್ಚುಮೆಚ್ಚಿನ ಧಾರವಾಡ– ಚಿಕ್ಕಂದಿನಲ್ಲಿ ನಾನು ಚಿಣಿಕೋಲು ಚೆಂಡು ಬುಗರೆಗಳನ್ನಾಡುತ್ತ ನಲಿದಾಡಿದ ಧಾರವಾಡ– ಇಲ್ಲಿ ಆ ಕಾಲದಲ್ಲಿ ನಡೆಯುತ್ತಿದ್ದ ಸಭೆ ಪರಿಷತ್ತುಗಳಲ್ಲೆಲ್ಲ ಮರಾಠೀ ಭಾಷೆಯ ಭಾಷಣಗಳ ಸುರಿಮಳೆಯು ಕೀಸರಿಡುತ್ತಿದ್ದ ಧಾರವಾಡ– ಇಂದು, ಹೊಸಗನ್ನಡದ ಪೈಸಿರಿಯು ತುಂಬಾ ಬೆಳೆಯುತ್ತ ನಡೆದಿರುವ ಈ ಹೊಸಗಾಲದಲ್ಲಿ, ಕನ್ನಡ ನಾಡಿನ ಬಡಗು ಸೀಮೆಯಲ್ಲೆಲ್ಲ ಕನ್ನಡ ಸಂಸ್ಕೃತಿಯ ಗಂಡು ಮೆಟ್ಟೆಂಬ ಹೆಸರು ಹೊಂದಿದೆ; ಕನ್ನಡ 'ಸರಸತಿಯ ನಿಲುಂದಾಣ'ವೆಂಬ ಕೀರ್ತಿವೆತ್ತಿದೆ." [೨]

ಮುದವೀಡು ಅವರು ಮಾತನಾಡುತ್ತಿರುವಾಗಲೂ, ಬರೆಯುತ್ತಿರುವಾಗಲೂ ವೃತ್ಯನುಪ್ರಾಸದ ಮೋಹ ಅವರಲ್ಲಿ ತುಂಬಾ ಕಂಡುಬರುತ್ತಿತ್ತು:

"........(ಧಾರವಾಡದಲ್ಲಿ) ನಡೆದುಹೋದ ಕನ್ನಡದ ಬಗ್ಗು–ತಗ್ಗು–ಕುಗ್ಗು–ಮುಗ್ಗುಗಳೆಲ್ಲ ಕಣ್ಣಿಗೆ ಕಟ್ಟಿರುವದರಿಂದ ಇಂದು ಇಲ್ಲಿ ಕಾಣುವ ಅದರ ಸುಗ್ಗಿಯ ಸೌಭಾಗ್ಯವು ಸಗ್ಗದ ಸುಖದಂತೆ ಹಿಗ್ಗಿನ ಹೆಚ್ಚಳವಾಗಿದೆ." [೩]

ಮುದವೀಡು ಅವರ ಬರೆಹಗಳಲ್ಲಿ ಪುಸ್ತಕರೂಪದಲ್ಲಿ ಬಂದುದು 'ಚಿತ್ತೂರ ಮುತ್ತಿಗೆ' ಎಂಬುದು ಮಾತ್ರವೆಂದು ಕಾಣುತ್ತದೆ. ಇದು ವಿದ್ಯಾವರ್ಧಕ ಸಂಘದ ೩೮ನೆಯ ಪುಸ್ತಕವಾಗಿ

೧ ಕುಮಾರವ್ಯಾಸ ಪ್ರಶಸ್ತಿ: ೧೯೪೦: ಪು. ೧೦–೧೧.

೨ ಸಂಭಾವನೆ: ೧೯೪೧: ಪು. ೧೦೧.

೩ ಸಂಭಾವನೆ: ೧೯೪೧: ಪು. ೧೦೨.

೧೯೦೫ರಲ್ಲಿ ಪ್ರಕಟವಾಯಿತು. ಇದರ ಮುಖಪುಟದಲ್ಲಿ ಲೇಖಕರ ಹೆಸರು 'ಕಾರ್ನಾಟಕ' ಎಂದಿದೆ. ಶೈಲಿಯನ್ನು ಗಮನಿಸಿದರೆ, ಕೃಷ್ಣರಾಯರು ಇದನ್ನು ಬರೆದಿರಬಹುದೇ ಎಂದು ಸಂಶಯ ಬರುತ್ತದೆ. ಅವರ ಅನೇಕ ಸಂಪಾದಕೀಯಗಳು ಅವರ ಶೈಲಿಯ ಪ್ರಖರತೆ, ದೇಸಿಗಳನ್ನು ಎತ್ತಿ ಸಾರುತ್ತವೆ.....

ಕೃಷ್ಣರಾಯರದು ವೈಶಿಷ್ಟ್ಯಪೂರ್ಣವಾದ ಜೀವನ. ಅವರು ಧಾರವಾಡ ಜಿಲ್ಲಾ ರಾಣೆಬೆನ್ನೂರಿನಲ್ಲಿ ದಿನಾಂಕ ೨೪-೭-೧೮೭೪ ರಂದು ಜನಿಸಿದರು. ತಮ್ಮ ಏಳನೆಯ ವರ್ಷದಲ್ಲಿ ಬಿಜಾಪುರ ಜಿಲ್ಲೆಯ ಸಿಂದಗಿಯಲ್ಲಿ ಪ್ರಾಥಮಿಕ ಶಿಕ್ಷಣ ಪ್ರಾರಂಭಿಸಿ ಕೆಲಕಾಲದ ನಂತರ ಕಾರವಾರಕ್ಕೆ ಹೋಗಿ ಮಾಧ್ಯಮಿಕ ಶಾಲೆಯನ್ನು ಪ್ರವೇಶಿಸಿದರು. ಪರಿಸ್ಥಿತಿಗನುಗುಣವಾಗಿ ಆಗಲೇ ಮರಾಠಿಯನ್ನೂ ಕಲಿಯಬೇಕಾಯಿತು. ಸಾರ್ವಜನಿಕ ಕಾರ್ಯದ ಹುಮ್ಮಸ್ಸುಳ್ಳವರಾದ ಇವರು ಶಿಕ್ಷಣವನ್ನು ಅರ್ಧಕ್ಕೆ ಬಿಟ್ಟುಗೊಟ್ಟು ಸುಮಾರು ೧೮೯೨ ರಿಂದ ಧಾರವಾಡದಲ್ಲಿ ಸಾರ್ವಜನಿಕ ರಂಗಕ್ಕಿಳಿದರು........ ಸಾರ್ವಜನಿಕ ಗಣೇಶೋತ್ಸವದ ಉತ್ಸಾಹಿ ಕೆಲಸಗಾರರಾದರು. 'ಧಾರವಾಡ ವೃತ್ತ' ವೆಂಬ ಮರಾಠಿ ಪತ್ರಿಕೆಗೆ ಕೆಲದಿನ ಸಂಪಾದಕರಾಗಿದ್ದರು. ಅವರು ಮೊದಮೊದಲಿಗೆ ಭಾಗವಹಿಸುತ್ತಿದ್ದುದು ಮರಾಠಿ ವಕ್ತೃತ್ವ ಸ್ಪರ್ಧೆಗಳಲ್ಲಿಯೇ. ಅವರನ್ನು ಕನ್ನಡ ವಕ್ತೃತ್ವದ ವ್ಯಾಸಪೀಠಕ್ಕೆ ಕರೆತಂದವರು ಶ್ರೀ ರಾ. ಹ. ದೇಶಪಾಂಡೆಯವರು. ನಂತರ ಅವರು 'ಕರ್ನಾಟಕ ವೃತ್ತ', 'ಧನಂಜಯ'-ಮುಂತಾದ ಪತ್ರಿಕೆಗಳ ಮುಖಾಂತರ ಸುಮಾರು ೧೮೯೭ ರಿಂದ ೧೯೨೬ ರ ವರೆಗೆ ಕನ್ನಡ ಪತ್ರಿಕಾ ಪ್ರಪಂಚಕ್ಕೆ ಸೇವೆ ಸಲ್ಲಿಸಿದರು. ಸಾಹಿತ್ಯದೊಡನೆ ವ್ಯಾಯಾಮ ಮತ್ತು ರಂಗಭೂಮಿಗಳೂ ಇವರ ಆಸ್ಥೆಗಳಾಗಿದ್ದವು. ಸನ್ ೧೯೦೫ ರಿಂದ ೧೯೦೭ ರ ವರೆಗೆ 'ಭರತ ಕಲೋತ್ತೇಜಕ' ಮಂಡಲದ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ರಾಷ್ಟ್ರೀಯ ಸ್ವಾತಂತ್ರ್ಯಚಳುವಳಿಯಲ್ಲಿ ಅನೇಕ ಸಲ ಕಾರಾಗೃಹವಾಸವನ್ನು ಅನುಭವಿಸಿದರು. ಕನ್ನಡ ಚಲನಚಿತ್ರವಾದ 'ಚಿರಂಜೀವಿ' ಯಲ್ಲಿ ಚಿತ್ರಗುಪ್ತನ ಪಾತ್ರವನ್ನು ವಹಿಸಿದರು. ಕನ್ನಡಕ್ಕಾಗಿ ಶ್ರೀಯುತರು ಗೈದ ಅಮೋಘವಾದ ಸೇವೆಯನ್ನು ಮನದಂದು ಕನ್ನಡ ಜನತೆ ಅವರಿಗೆ ಬೆಳಗಾವಿಯಲ್ಲಿ ಜರುಗಿದ ೨೪ ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷ ಪೀಠವನ್ನು ಕೊಟ್ಟು ಗೌರವಿಸಿತು.

ಕೃಷ್ಣರಾಯರದು ನಿರ್ಮಲಾಂತಃಕರಣ. ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಧಾನ ವಿಷಯವಾದಂದಿನಿಂದ ಬಹುಕಾಲ ಯಾರೂ ಪ್ರಥಮ ವರ್ಗದ ಪ್ರಶಸ್ತಿಯನ್ನು ಪಡೆಯದಿದ್ದಾಗ, ೧೯೪೦ ರಲ್ಲಿ ಒಬ್ಬ ವಿದ್ಯಾರ್ಥಿ ಆ ಮನ್ನಣೆಯನ್ನು ಪಡೆದಾಗ ಅವನ ಮನೆಯ ವರೆಗೆ ನಡೆದುಹೋಗಿ, ಅವನನ್ನು ಅಪ್ಪಿಕೊಂಡು, ನೀನು ಕನ್ನಡ ಸೇವೆಗೆ ಅರ್ಪಿಸಿಕೊಳ್ಳು ಎಂದು ಕೃಷ್ಣರಾಯರು ಆಶೀರ್ವದಿಸಿದರು. ಒಂದೊಂದು ಸಲ, ಅವರ ಈ ಶಿಶುಸಹಜವಾದ ಅಂತಃಕರಣ ಅವರ ನಿಜವಾದ ಪಾಂಡಿತ್ಯವನ್ನೂ ಕೂಡ ಮರೆಮಾಡುತ್ತಿತ್ತು. ಇಂಥ ಒಂದು ದೃಷ್ಟಾಂತವನ್ನು ಡಿ. ವಿ. ಜಿ. ಅವರು ಕೊಡುತ್ತಾರೆ :

"ಕೃಷ್ಣರಾಯರು ತೇಜೋವಂತರಾದ ವಾಗ್ಮಿಗಳು. ನನಗೆ ತಿಳಿದಿರುವ ಕನ್ನಡ ದೇಶದ ರಾಜಕೀಯ ವಾಗ್ಮಿಗಳಲ್ಲಿ ಮುದವೀಡಕರ ಕೃಷ್ಣರಾಯರಿಗಿಂತ ಮೇಲ್ಮಟ್ಟದವರು ಯಾರೂ ಇಲ್ಲವೆನಿಸುತ್ತದೆ.

ಮುದವೀಡಕರರು ದೊಡ್ಡ ಆಕಾರದವರು. ಶ್ಯಾಮಲ ವರ್ಣ ಅವರದು; ಉದ್ದಕ್ಕೆ ತಕ್ಕಷ್ಟು ಗಾತ್ರ, ಸ್ಥೂಲ. ಅಗಲವಾದ ಮುಖ. ಅಗಲವಾದ ಕಣ್ಣುಗಳು. ಚಿಂತೆಯನ್ನೋ, ಸಂತೋಷವನ್ನೋ, ಕೋಪವನ್ನೋ. ಭಾವನೆಯಾಗುತ್ತಿದ್ದಂತೆಯೇ ಹೊರಗೆಡಹುತ್ತಿದ್ದ ಮುಖಭಂಗಿ.........

ಅವರು ಬೆಂಗಳೂರಿಗೆ ಆಗಾಗ ಉಪನ್ಯಾಸ ಕೊಡಲು ಬರುತ್ತಿದ್ದರು. ಒಂದು ಉಪನ್ಯಾಸದಲ್ಲಿ ಹೇಳಿದರು :

"ನಮ್ಮಲ್ಲಿ ಎಂಥೆಂಥ ಮಹಾಕವಿಗಳಿದ್ದರು! ಎಂಥೆಂಥ ಪ್ರತಿಭಾವಂತರಿದ್ದರು! ಎಂಥೆಂಥ ಕಾವ್ಯಕರ್ತರಿದ್ದರು! ನಮ್ಮ ರನ್ನನೇನು! ಪೊನ್ನನೇನು! ಜನ್ನನೇನು!........"

ಹೀಗೆ ಬಿಟ್ಟರು ವಾಗ್ಜಾಲಗಳನ್ನು. ಕೇಳಿದವರಿಗೆ ಪರಮಾನಂದ. ಉಪನ್ಯಾಸ ಮುಗಿದ ಮೇಲೆ ನಾನು ಅವರ ಹತ್ತಿರ ಹೋಗಿ ನನ್ನ ಸಂತೋಷವನ್ನು ತಿಳಿಯಪಡಿಸಿ ಕೇಳಿದೆ :

'ಪೊನ್ನ ಏನೇನು ಬರೆದಿದ್ದಾನೆ? ಜನ್ನ ಏನೇನು ಬರೆದಿದ್ದಾನೆ?'– ಆಗ ಕೃಷ್ಣರಾಯರು ಹೇಳಿದರು :

'ನಾ ಏನು ಬಲ್ಲೆನಪ್ಪಾ! ನೀವೆಲ್ಲಾ ಹೇಳತೀರಲ್ಲೊ? ನೀವು ಸುಳ್ಳು ಹೇಳುವವರಲ್ಲವಲ್ಲ– ನಿಮ್ಮ ಮಾತೇ ನಮಗೆ ಪ್ರಮಾಣ.' ೧

–ಈ ಘಟನೆಯಲ್ಲಿ ಅವರ ಪಾಂಡಿತ್ಯದ ಜತೆಗಿನ ವಿನಯವೂ ವ್ಯಕ್ತವಾಗುತ್ತದೆ.

ಕೃಷ್ಣರಾಯರು ತೀರ ಸರಳ ಸ್ವಭಾವದವರು. ಅವರಲ್ಲಿ ಹಿಂದುಮುಂದಿಲ್ಲ. ಡಿ. ವಿ. ಜಿ. ಯವರು ಇನ್ನೊಂದು ಘಟನೆಯನ್ನೂ ಹೇಳುತ್ತಾರೆ :

"ಮುದವೀಡಕರ ಕೃಷ್ಣರಾಯರ ಒಳ್ಳೆತನವನ್ನೂ, ಪ್ರೀತಿ–ವಾತ್ಸಲ್ಯಗಳನ್ನೂ ಎಷ್ಟೊಂದು ಹೊಗಳಿದರೂ ನನಗೆ ತೃಪ್ತಿಯಾಗದು. ನಾವು ಎಂಟು ಹತ್ತು ಮಂದಿ ಹುಬ್ಬಳ್ಳಿಯ ಸಮ್ಮೇಲನದಿಂದ ಧಾರವಾಡಕ್ಕೆ ಹೋಗಿ.... ಒಂದು ದಿನ ಇದ್ದೆವು. ಮಾರನೆಯ ದಿನ ಅಲ್ಲಿಂದ ಮುಂದಕ್ಕೆ ಪ್ರಯಾಣ. ರೈಲು ಹೊರಡುವುದು ಬೆಳಿಗ್ಗೆ ಐದು ಗಂಟೆಗೆ. ಅಷ್ಟರೊಳಗಾಗಿ ರೇಲ್ವೆ ಸ್ಟೇಷನ್ ತಲುಪಬೇಕಾಗಿತ್ತು. ನಮ್ಮ ಸಾಮಾನುಗಳನ್ನು ಸಾಗಿಸುವದಕ್ಕಾಗಿ ಗಾಡಿಯೋ, ಆಳುಗಳೋ ಇಲ್ಲವೆಂದು ನಾವು ಪೇಚಾಡಿಕೊಳ್ಳುತ್ತಿದ್ದೆವು. ಆ ಹೊತ್ತಿಗೆ ಸರಿಯಾಗಿ ಕೃಷ್ಣರಾಯರು ಅಲ್ಲಿಗೆ ಬಂದು ನಮ್ಮ ಪೇಚಾಟವನ್ನು ನೋಡಿದರು. ನಮ್ಮನ್ನು ಕೇಳಿದರು :

'ಎಷ್ಟದ್ರಪಾ ಸಾಮಾನು? ಎಷ್ಟು ಗಾಡಿ ಹಿಡಿಸೀತು?'– ನಾವು ನಮ್ಮ ಹಾಸಿಗೆಗಳನ್ನೂ, ಟ್ರಂಕುಗಳನ್ನೂ ತೋರಿಸಿದೆವು. ಕೃಷ್ಣರಾಯರು :

'ಏನ್ರೆಪಾ? ಇಷ್ಟೇ ಹಾದಲ್ಲೋ? ಇದಕ್ಯಾಕ ಗಾಡಿ?' ಹಾಗೆ ಹೇಳುತ್ತ ಒಂದು ಹಾಸಿಗೆ ಸುರುಳಿಯನ್ನು ಒಂದು ಕಂಕುಳಲ್ಲಿಯೂ ಇನ್ನೊಂದನ್ನು ಇನ್ನೊಂದು ಕಂಕುಳಲ್ಲಿಯೂ ಒಂದನ್ನು ಭುಜದ ಮೇಲೆಯೂ ಇನ್ನೊಂದನ್ನು ಇನ್ನೊಂದು ಭುಜದ ಮೇಲೂ ಹೇರಿಕೊಂಡು ಕೊಂಚ ಬಗ್ಗಿ ಟ್ರಂಕನ್ನು ಬೆನ್ನ ಮೇಲೆ ಇರಿಸಿಕೊಂಡರು. ಇಷ್ಟಾದ ಮೇಲೆ ನಿಂತು ಹೇಳಿದರು :

'ಧಾರಾದರೂ ಮ್ಯಾಲ ಕೂಡೂಹಾಂಗಿದ್ದರ ಕೂಡಬಹುದಲ್ಲ?'– ನಾವೆಲ್ಲ ನಕ್ಕೆವು. ಅಲ್ಲಿಂದ ಹತ್ತು ನಿಮಿಷದೊಳಗಾಗಿ ಅವರು ರೈಲ್ವೆ ಸ್ಟೇಷನನ್ನು ನಮಗಿಂತ ಮೊದಲೇ ತಲುಪಿದ್ದರು ....

"ನಿಸ್ಪೃಹರು, ಸತ್ಯಸಂಧರು– ಎಂದರೆ ಮುದವೀಡಕರ ಕೃಷ್ಣರಾಯರು." ೨

೧ ಸಾಹಿತ್ಯೋಪಾಸಕರು : ಡಿ. ವಿ. ಜಿ. : ೧೯೭೦ : ಪು. ೨೧೦.
೨ ಅದೇ : ಪು. ೨೧೦.

ಮುದವೀಡು ಅವರ ಮೆಚ್ಚಿನ ಲೇಖಕರೆಂದರೆ ಚುರಮರಿ ಶೇಷಗಿರಿರಾಯರು. ಅವರ ಶಾಕುಂತಲದ ಅನುವಾದದ ಬಗೆಗೆ ಕೃಷ್ಣರಾಯರು ತುಂಬಾ ಅಭಿಮಾನದಿಂದ ಮಾತಾಡುತ್ತಿದ್ದರು.

ಮುದವೀಡು–ಬಿ. ಎಂ. ಶ್ರೀ. ಅವರ ಅವಸಾನದೊಂದಿಗೆ ಭಾಷಣಕಾರರ ಒಂದು ರಾಜ ವಂಶವೇ ನಷ್ಟವಾದಂತಾಯಿತು.

ಚಿತ್ತೂರಿನ ಮುತ್ತಿಗೆಯು (೧೯೦೫) :

ಶ್ರೀ ಹ. ಗೋ. ದೇಶಪಾಂಡೆಯವರು ತಮ್ಮ ಕಾಲದಲ್ಲಿ ಓದಬೇಕಾದ ಪುಸ್ತಕಗಳಲ್ಲಿ ಅರವತ್ತು ಪುಟದ ಈ ಚಿಕ್ಕ ಪುಸ್ತಕದ ಉಲ್ಲೇಖ ಮಾಡಿದ್ದಾರೆ.

ಗ್ರಂಥದ ಪ್ರಸ್ತಾವನೆಯಲ್ಲಿ ಲೇಖಕರು " ಮೂಲ ಪದಾರ್ಥಗಳ ಗುಣದೋಷಗಳೇನಿದ್ದರೂ ಪಾಕದ ರುಚಿಕರತ್ವವು ಅಥವಾ ಅರುಚಿಕರತ್ವವು ಬಲ್ಲವನ ಮೇಲೆಯೇ ಪೂರ್ಣವಾಗಿ ಅವಲಂಬಿಸಿರುವದು ಸ್ವಾಭಾವಿಕವು. ದುರಾಗ್ರಹ ಜ್ವರಾಂಶಪೀಡಿತರಾಗಿ ನಾಲಿಗೆಯ ರುಚಿಯು ಕೆಟ್ಟವರಿಗೆ ಎಂಥ ಪಕ್ವಾನ್ನವಾದರೂ ಕಹಿಯಾಗಿ ತೋರುವದು ಸ್ವಾಭಾವಿಕವು. ಆದರೆ ಸವಿಗಾರರಾದ ರಸಜ್ಞರು ಸಂತುಷ್ಟಚಿತ್ತರಾಗಿ ತೃಪ್ತರಾಗುವಂತೆ ಈ ಪಾಕ ನಿಷ್ಪತ್ತಿಯಾಗಿರುವದೆಂದು ತಿಳಿದುಬಂದರೆ ಲೇಖಕನು ಕೃತಾರ್ಥನೆಂದು ತಿಳಿಯುವನು "– ಎಂದು ಹೇಳುತ್ತಾರೆ.

ಇಲ್ಲಿಯ ಕಥಾನಕ ಚಿತ್ತೂರಗಡವನ್ನು ಅಕಬರ ಬಾದಶಹನು ಗೆದ್ದುಕೊಂಡದ್ದಕ್ಕೆ ಸಂಬಂಧ ಪಟ್ಟದ್ದಾಗಿದೆ. ಶ್ರೀಯುತರ ಶೈಲಿಯ ನಿದರ್ಶನವಾಗಿ ಈ ಕೆಳಗಿನ ಉದಾಹರಣೆಯನ್ನು ಕೊಡಬಹುದು :

" ಅಕಬರನು ಚಿತ್ತೂರಗಡದಲ್ಲಿ ವಿಜಯಪ್ರವೇಶ ಮಾಡಿದಾಗ್ಗೆ ಆ ಕೋಟೆಗೆ ಹಾಳು ಸುಡುಗಾಡಿನ ಕಳೆಯು ಬಂದಿತ್ತು. ಮನುಷ್ಯರ ನಾತವೇ ಅಲ್ಲಿ ಇಲ್ಲದಂತಾದ್ದರಿಂದ, ವನ್ಯಪಶುಗಳೂ, ಹಾವು, ಚೇಳು ಮುಂತಾದ ಹುಳ–ಹುಪ್ಪಡಿಗಳೂ ಇರುವದಕ್ಕೆ ಯೋಗ್ಯವಾದ ಭಯಂಕರ ಗಹನ ಸ್ವರೂಪವು ಅದಕ್ಕೆ ಬಂದಿತ್ತು. ಕೋಟೆಯೊಳಗಿನ ಹಾಳುಬಿದ್ದ ರಾಜಮಾರ್ಗಗಳಿಂದ ಬಾದಶಹನು ನಡೆಯುತ್ತಬಂದನು. ಆಗ್ಗೆ ತನ್ನ ಕಣ್ಣಿಗೆ ಬಿದ್ದ ಸ್ಥಿತಿಯನ್ನು ನೋಡಿ ಅವನು ಬಹಳ ದುಃಖಪಟ್ಟನು. ಕೆಲವೆಡೆಯಲ್ಲಿ ಕೈ–ಕಾಲು ಕತ್ತರಿಸಿದ ಹೆಣಗಳು ಬಿದ್ದು ಅವು ಕೆಲವೆಡೆಗೆ ಹಚ್ಚಗೆ, ಕೆಲವೆಡೆಗೆ ನೀಲೀ ಬಣ್ಣದವಾಗಿದ್ದವು. "– ಇತ್ಯಾದಿ. [೧]

ಪ್ರೇಮಭಂಗ ನಾಟಕವು (೧೯೨೩) :

ಇದು ಕಚದೇವಯಾನಿಯ ಪ್ರಣಯಕ್ಕೆ ಸಂಬಂಧಪಟ್ಟ ನಾಟಕ. ಇದು ' ಜಯಕರ್ನಾಟಕ ' ಮಾಸಪತ್ರಿಕೆಯಲ್ಲಿ ೨೩ ನವಂಬರ ೧೯೨೩ ರಿಂದ ಪ್ರಾರಂಭವಾಗಿ, ಧಾರಾವಾಹಿಯಾಗಿ ಪ್ರಕಟವಾಯಿತು.

ಕೃಷ್ಣರಾಯರದು ಪ್ರಾಮುಖ್ಯವಾಗಿ ನಾಟ್ಯಪ್ರತಿಭೆ. ಅವರು ಸ್ವತಃ ನಿಷ್ಣಾತ ನಟರು; ನಾಟಕ ಪ್ರಿಯರು. ಚುರಮರಿ ಶೇಷಗಿರಿರಾಯರ ' ಶಾಕುಂತಲಾ ' ನಾಟಕವೆಂದರಂತೂ ಅವರಿಗೆ ಮುಗಿದೇ

---

೧ ಚಿತ್ತೂರಿನ ಮುತ್ತಿಗೆಯು : ೧೯೦೫ : ಪು. ೫೮.

ಹೋಯಿತು– ಆದಿ ಮುಗಿಸಲಾರದಷ್ಟು ಪ್ರೀತಿ. ಇಲ್ಲಿಯ ಸಂಭಾಷಣಾ ಶೈಲಿಯನ್ನು ಗಮನಿಸ ಬಹುದು :

" ಪಲ್ಲವಿಕೆ

ಜಗತ್ತಿನಲ್ಲಿ ಸ್ವಾರ್ಥಬುದ್ಧಿಯೆಂಬುದು ಮನುಷ್ಯಪ್ರಾಣಿಯನ್ನು ಯಾವ ಅಧೋಗತಿಗೆ ಮುಟ್ಟಿಸುವದೆಂಬುದು ತಿಳಿಯುವದಿಲ್ಲ. ದೇವಯಾನಿಯ ಪ್ರೇಮವು ಕಚನಲ್ಲಿ ನೆಟ್ಟಿರುವದು ಶರ್ಮಿಷ್ಠೆಯ ಅಸೂಯೆಗೆ ಕಾರಣವಾಗಿದೆ. ಇದೇಕೆ ? ಶರ್ಮಿಷ್ಠೆಯ ಹೃದಯದಲ್ಲಿ ಕಚನಿಗೆ ಅಧಿಷ್ಠಾನ ದೊರೆತಿರಬಹುದೇ ? ಛಿ ! ಅವನು ಬ್ರಾಹ್ಮಣಪುತ್ರ; ಇವಳು ದೈತ್ಯಕನ್ಯೆ. ಈ ದೇವರಾಕ್ಷಸ ಸಂಯೋಗವು ಕೂಡುವದು ಹೇಗೆ ? ಏನೋ ಪ್ರೇಮವು ಅಂಧವಾಗಿರುವದೆಂದೂ ಅದಕ್ಕೆ ವರ್ಣಭೇದ ವಿಚಾರವಿರುವುದಿಲ್ಲೆಂದೂ ಕಾವ್ಯಶಾಸ್ತ್ರಗಳಲ್ಲಿ ಓದಿರುವದು ನನಗೆ ನೆನಪಿನಲ್ಲಿದೆ........ ಸ್ತ್ರೀಯರ ಸವತೀಮತ್ಸರದ ಮನೋವಿಕಾರದಿಂದ ಹುಟ್ಟುವಂಥ ದೀರ್ಘ ದ್ವೇಷವು ಬೇರೆ ಯಾವ ವಿಕಾರದಿಂದಲೂ ಹುಟ್ಟುವದಿಲ್ಲ. "

ಹೀಗೆ ಕನ್ನಡದ ಸಾಹಿತ್ಯ, ನಾಟ್ಯ ಮತ್ತು ವಕ್ತೃತ್ವ ಪ್ರಪಂಚಕ್ಕೆ ವೈಶಿಷ್ಟ್ಯಪೂರ್ಣವಾದ ಸೇವೆಯನ್ನು ಸಲ್ಲಿಸಿದ ಕೃಷ್ಣರಾಯರು ೧೯೪೭ ನೆಯ ಇಸವಿ ಸೆಪ್ಟಂಬರ ತಿಂಗಳು ೨೯ನೆಯ ದಿನಾಂಕದಂದು ವೈಕುಂಠವಾಸಿಯಾದರು.

—

ಜೀವಾಜಿ ವಿಷ್ಣು ಗೋರೆ

(೧೮೭೪–?)

ಇವರ ಜನನ ೧೬–೧೨–೧೮೭೪ರಂದು ಧಾರವಾಡ ಜಿಲ್ಲೆಯ ನರಗುಂದದಲ್ಲಿ ಆಯಿತು. ಇವರು ಧಾರವಾಡದ ಟ್ರೇನಿಂಗ್ ಕಾಲೇಜಿನಲ್ಲಿ ಕಾರಕೂನರಾಗಿದ್ದರು. ಮುಂದೆ ೧೯೧೦ರ ಸುಮಾರು ಧಾರವಾಡದ ಉರ್ದು ಸ್ಕೂಲ್ ಇನ್ಸಪೆಕ್ಟರರ ಕಚೇರಿಯಲ್ಲಿ ಕೆಲಸ ಮಾಡಿದರು.

ಕನ್ನಡದ ಅಭಿಮಾನದಿಂದ ಪ್ರೇರಿತರಾದ ಈ ಕಾಲದ ಲೇಖಕರಿಗೆ ಕೇವಲ ಕಾಳಿದಾಸ, ಬಾಣ, ಭವಭೂತಿ ಷೇಕ್ಸಪಿಯರ್, ಮಿಲ್ಟನ್‌ರ ಅನುವಾದಗಳು ಬೇಕೆಂದಿರಲಿಲ್ಲ. ಅಷ್ಟು ಪ್ರಮುಖರಲ್ಲದ ಲೇಖಕರ ಎಷ್ಟೋ ಸಾಮಾನ್ಯ ಕೃತಿಗಳೂ ಅವರ ಭಾಷಾಂತರದ ವಿಷಯಂಗಳಾದುವು. ಈ ರೀತಿ ಜೀವಾಜಿ ಗೋರೆಯವರು ೧೮ ನೆಯ ಶತಮಾನದ ಸುಪ್ರಸಿದ್ಧ ಆಂಗ್ಲ ವಿದ್ವಾಂಸನಾಗಿದ್ದ ಡಾ. ಜಾನ್ಸನ್ನನ 'ರಾಸೆಲಾಸ್' ಎಂಬ ಕಾದಂಬರಿಯನ್ನು ಸನ್ ೧೯೦೫ ರಲ್ಲಿ ಕನ್ನಡಕ್ಕೆ ಪರಿವರ್ತಿಸಿದರು. ೨೦೮ ಪುಟದ ಈ ಪುಸ್ತಕವು ವಿದ್ಯಾವರ್ಧಕ ಸಂಘದ ೩೭ ನೆಯ ಪ್ರಕಟನೆಯಾಗಿ ಪ್ರಸಿದ್ಧವಾಯಿತು. ಈ ಗ್ರಂಥ ಪ್ರಕಟವಾದಾಗ ಶ್ರೀಯುತರು ಕಾರವಾರದಲ್ಲಿ ಉದ್ಯೋಗದಲ್ಲಿದ್ದರು.

ಕನ್ನಡದ ಬಳಗಕ್ಕೆ ಹೆಚ್ಚು ಜನರನ್ನು ಕೂಡಿಸಿಕೊಳ್ಳಬೇಕಾಗಿದ್ದ ಕಾಲವದು. ಡಾ. ಕಿಟೆಲ್‌ರೇ ಇರಲಿ, ಝೀಗ್ಲರರೇ ಇರಲಿ, ಹಾಯ್‌ಕೋರ್ಟ ಜಜ್‌ರಾದ ಜಾನ್ ಜಾರ್ಡಿನ್‌ರೇ ಇರಲಿ, ಇವರೆಲ್ಲರನ್ನೂ ಅಂದಿನ ಕನ್ನಡದ ಪ್ರಪಂಚದ ಸಮೀಪಕ್ಕೆ ತೆಗೆದುಕೊಂಡು ಬಂದರು. ಹಾಗೆಯೇ, 'ರಾಸೆಲಾಸ್' ಎಂಬ ಈ ಕಾದಂಬರಿಯ ಅನುವಾದವನ್ನು ಧಾರವಾಡದ ಆಗಿನ ಕಲೆಕ್ಟರರಾಗಿದ್ದ ಮಿ. ಮಾಲ್ಕಮ್ ಕೂಪರ್ ಗಿಬ್ ಐ.ಸಿ.ಎಸ್. ಅವರಿಗೆ 'for the interest he takes in the welfare of the Kannada people and their language' ಎಂದು ವರ್ಣಿಸಿ, ಸಂಘದ ವತಿಯಿಂದ ಅರ್ಪಿಸಲಾಗಿದೆ.

ರಾಸೆಲಾಸದ ಶೈಲಿಯ ಉದಾಹರಣೆಯಾಗಿ ಈ ಅವತರಣಿಕೆಯನ್ನು ಕೊಡಬಹುದು :

"ರಾಜಪುತ್ರಿಯು ಉತ್ತರ ಕೊಟ್ಟಳು. "ಜಗತ್ತಿನಲ್ಲಿ ಜನರು ಹ್ಯಾಗೆ ಹೆಚ್ಚಾದರೆಂಬ ಚಿಂತೆಯು ನನಗೇಕೆ ? ನೀನೂ ಆ ಚಿಂತೆಯನ್ನು ಮಾಡುವ ಕಾರಣವಿಲ್ಲ. ನಾವಿಬ್ಬರು ಲಗ್ನ ಮಾಡಿಕೊಳ್ಳುವದು ಉತ್ತಮವಾದದ್ದಲ್ಲವೆಂದು ಗೊತ್ತು ಮಾಡಿದರೆ ನಮ್ಮ ಮಾತಿನ ಮೇಲೆ ನಂಬಿಕೆಯಿಟ್ಟು ಈಗ ಜಗತ್ತಿನಲ್ಲಿದ್ದ ಜನರು ಲಗ್ನ ಮಾಡಿಕೊಳ್ಳುವದನ್ನು ಬಿಟ್ಟಾರು. ಅವರು ಹಾಗೆ ಮಾಡಿದರೆ ಜಗತ್ತೆಲ್ಲ

ಮುಳುಗಿ ಹೋದೀತು ಎಂಬ ಅಂಜಿಕೆಯೂ ನನಗೆ ಎಳ್ಳಷ್ಟಿಲ್ಲ. ಇಡೀ ಜಗತ್ತಿನ ಅವಶ್ಯಕತೆಯೂ ನನಗೆ ಬೇಕಾಗಿಲ್ಲ; ನಮ್ಮಷ್ಟಕ್ಕೆ ನಾವು ವಿಚಾರ ಮಾಡಿದರೆ ಸಾಕು."

ಹಾಸ್ಯ (೧೯೧೦) :

ಗೋಠೆಯವರು ಬರೆದ ಇನ್ನೊಂದು ಪುಸ್ತಕವೆಂದರೆ 'ಹಾಸ್ಯ' ಎಂಬ ೫೨ ಪುಟದ ಚಿಕ್ಕ ಪ್ರಬಂಧ. ಇದಕ್ಕೆ ವಿದ್ಯಾವರ್ಧಕ ಸಂಘದ ಇನಾಮು ದೊರಕಿದೆ. ಅಗಸ್ಟ ೧೯೧೦ ರಲ್ಲಿ ಪ್ರಕಟವಾದ ಈ ಪುಸ್ತಕ ಧಾರವಾಡದ ಕರ್ನಾಟಕ ಬುಕ್ ಡಿಪೊ ಮುದ್ರಾಲಯದಲ್ಲಿ ಪ್ರಕಟವಾಗಿದೆ. ಈ ಪ್ರಬಂಧದಲ್ಲಿ ಹಾಸ್ಯವನ್ನು ಕುರಿತು 'ಶಾಸ್ತ್ರೀಯ' ದೃಷ್ಟಿಯಿಂದ ವಿಚಾರಿಸಲಾಗಿದೆ. ಹಾಸ್ಯದ ಬಗೆಗಿನ ಶಾಸ್ತ್ರ ಗ್ರಂಥವೂ ಶುಷ್ಕವಾಗುವ ಹೆದರಿಕೆಯಿದ್ದಾಗ, ಇಲ್ಲಿಯ ಬರವಣಿಗೆ ಅನೇಕ ದಿನನಿತ್ಯದ ಉದಾಹರಣೆಗಳ ಮೂಲಕ ಮನಸ್ಸು ಹಿಡಿಯುವಂತಿದೆ. ಪ್ರತಿಪಾದನೆ ಸ್ಪಷ್ಟವೂ ಸರಳವೂ ಆಗಿದೆ. ಇಲ್ಲಿಯ ಶೈಲಿಯ ದೃಷ್ಟಾಂತವಾಗಿ ಈ ಕೆಳಗಿನ ಅವತರಣಿಕೆಗಳನ್ನು ಕೊಡಬಹುದು. ಈ ಪ್ರಬಂಧ ಪ್ರಾರಂಭವಾಗುವುದು ಹೀಗೆ :

"ಚಿಕ್ಕ ಬಾಲಕನು ತನ್ನ ಅಜ್ಜನ ದೊಡ್ಡ ರುಮಾಲನ್ನು ತಲೆಯ ಮೇಲೆ ಹಾಕಿಕೊಂಡು ನಮ್ಮ ಮುಂದೆ ಕುಣಿಯುತ್ತ ಬಂದರೆ, ಅವನನ್ನು ನೋಡಿದ ಕೂಡಲೇ ನಮಗೆ ನಗೆ ಬರುತ್ತದೆ. ಇದರ ಕಾರಣವೇನು ? ಪ್ರಖ್ಯಾತಿಯನ್ನು ಪಡೆದ ರೋಮರಾಜ್ಯದ ಅವನತಿಯ ಬಗ್ಗೆ ಅತ್ಯುತ್ಕೃಷ್ಟ ಇತಿಹಾಸವನ್ನು ಇಂಗ್ಲೀಷ ಭಾಷೆಯಲ್ಲಿ ಬರೆದಂಥ ಮಹಾನ್ ಇತಿಹಾಸಕಾರನಾದ ಗಿಬನ್ ಸಾಹೇಬರ ವಿಷಯಕ್ಕೆ ಒಂದು.... ಸಂಗತಿಯನ್ನು ಹೇಳುತ್ತಾರೆ..... (ಇಂಗ್ಲಂಡದಲ್ಲಿ ಮದುವೆಗೆ ಮೊದಲು ಪ್ರೇಯಸಿಯನ್ನು ನನ್ನನ್ನು ಮದುವೆಯಾಗು ಎಂದು ಅವಳ ಪಾದತಲದಲ್ಲಿ ಮಂಡಿಯೂರಿ ಕುಳಿತು ಪ್ರಾರ್ಥಿಸುವದುಂಟು.) ಗಿಬನ್ ಸಾಹೇಬರಿಗೂ ಈ ತರದ ತಮ್ಮ ಪ್ರೀತಿಯ ಆವಿಷ್ಕರಣವನ್ನು ಮಾಡುವ ಪ್ರಸಂಗವು ಒದಗಿತು; ಗಿಬನ್ ಸಾಹೇಬರು ವಾತಪ್ರಕೃತಿಯವರಿದ್ದದರಿಂದ, ಬಹಳ ನೆಣ ಬೆಳೆದು ಅವರ ಹೊಟ್ಟೆಯು ನಗಾರಿಯೋಪಾದಿಯಾಗಿತ್ತು. ತಮ್ಮ ಪ್ರೀತಿಯ ಆವಿಷ್ಕರಣವನ್ನು ಮಾಡುವ ಉದ್ದೇಶದಿಂದ, ಒಬ್ಬ ತರುಣಿಯ ಚರಣಾರವಿಂದಗಳಿಗೆ ತಮ್ಮ ತಲೆಯನ್ನು ಬೊಗ್ಗಿಸಿದರು; ಅವಳೂ ಪ್ರಸಾದದಾನವನ್ನು ಮಾಡಿದಳು. ಆದರೆ, ಆಕೆಯ ಪ್ರಸಾದದಾನವಾದ ನಂತರ ಆಕೆಯ ಪದಕಮಲಗಳ ಮೇಲಿನ ತಲೆಯನ್ನು ಮೇಲಕ್ಕೆ ಎತ್ತಿ ಏಳೋಣವಾಗಲೊಲ್ಲದು. ಹೊಟ್ಟೆಯ ಭಾರವನ್ನು ತಡಕೊಂಡು ಮೇಲಕ್ಕೇಳಲಿಕ್ಕೆ ಬಾರದ್ದರಿಂದ ಎಷ್ಟೋ ಹೊತ್ತಿನವರೆಗೆ ಆಕೆಯ ಕಾಲುಗಳ ಮೇಲೆಯೇ ಹೊರಳಾಡುತ್ತ ಬಿದ್ದರು...." ೧

ಈ ಬರವಣಿಗೆಯಲ್ಲಿ ಸುಂದರವಾದ ಸರಳವಾದ ಉದಾಹರಣೆಗಳನ್ನು ಕೊಡುವ ರೀತಿ ಮತ್ತು ಶೈಲಿಯ ಸ್ಪಷ್ಟತೆಗಳನ್ನು ಗಮನಿಸಬಹುದಾಗಿದೆ.

ಸಂಸಾರ ಕರ್ತವ್ಯ (೧೯೨೬) :

ಇದರ ಮುನ್ನುಡಿಯಲ್ಲಿ ಹೀಗೆ ಹೇಳಿದೆ : "ಕನ್ನಡ ವಾಙ್ಮಯದಲ್ಲಿ ಪ್ರಬಂಧಗಳ ಸಂಖ್ಯೆಯು ಕಡಿಮೆ. ಅವರಲ್ಲೂ ಸಂಸಾರಿಕ ಸಂಗತಿಗಳನ್ನು ಸಮಂಜಸವಾಗಿ ಬೋಧಿಸುವ ಪ್ರಬಂಧಗಳು ಬಹಳ ಕಡಿಮೆ." ಈ ಕೊರತೆಯನ್ನು ನೀಗಿಸುವದಕ್ಕಾಗಿ ಶ್ರೀಯುತರು ೧೨೦ ಪುಟದ ಈ ಪುಸ್ತಕವನ್ನು ಬರೆದಂತೆ ಹೇಳಲಾಗಿದೆ.

೧ ಹಾಸ್ಯ : ೧೯೧೦ : ಪು. ೧–೨.

ಪುಸ್ತಕ ಇಂಗ್ಲಿಷ ಗ್ರಂಥವೊಂದರ ಅನುವಾದವಾಗಿದ್ದರೂ, ಬರವಣಿಗೆಯಲ್ಲಿ ಶ್ರೀಯುತರು ಭಾರತೀಯ ವಿಚಾರ, ಅನುಭವ ಮತ್ತು ಅವತರಣಿಕೆಗಳನ್ನು ಕಣ್ಣೆದುರಿಗಿಟ್ಟುಕೊಂಡೇ ಬರೆದಿದ್ದಾರೆ. ಅಲ್ಲಲ್ಲಿ ಬರುವ ಅವತರಣಿಕೆಗಳು ಶ್ರೀಯುತರ ಸಂಸ್ಕೃತ ಪಾಂಡಿತ್ಯವನ್ನೂ ತೋರಿಸುತ್ತವೆ :

" ಸುಖಸ್ಯ ದುಃಖಸ್ಯ ನ ಕೋಪಿ ದಾತಾ
ಪರೋ ದದಾತೀತಿ ಕುಬುದ್ಧಿರೇಷಾ "

ಎಂಬ ಅಧ್ಯಾತ್ಮ ರಾಮಾಯಣದ ಅವತರಣಿಕೆಯೂ,

" ಯಾ ವಿವೇಕ ವಿಕಾಸಿನ್ಯೋ
ಮತಯೋ ಮಹತಾಮ್ ಇಹ
ನ ತಾ ವಿಪದಿ ಮಜ್ಜಂತಿ
ತುಂಬಕಾನೀವ ವಾರಿಣೀ "

ಎಂಬ ಯೋಗವಾಸಿಷ್ಠದ ಅವತರಣಿಕೆಯೂ,

" ಧನಾನಿ ಭೂಮೌ ಪಶವಶ್ಚ ಗೋಷ್ಠೇ
ಭಾರ್ಯಾ ಗೃಹದ್ವಾರೇ ಜನಃಸ್ಮಶಾನೇ
ದೇಹಶ್ಚಿತಾಯಾಂ ಪರಲೋಕಮಾರ್ಗೇ
ಕರ್ಮಾನುಗೋ ಗಚ್ಛತಿ ಜೀವ ಏಕಃ "

ಎಂಬ ಜೀವನೋಪದೇಶವೂ,

" ನರಪತಿ ಹಿತಕರ್ತಾ ದ್ವೇಷ್ಯತಾಂ ಯಾತಿ ಲೋಕೇ
ಜನಪದ ಹಿತಕರ್ತಾ ತ್ಯಜ್ಯತೇ ಪಾರ್ಥಿವೇಣ
ಇತಿ ಮಹತಿ ವಿರೋಧೇ ವಿದ್ಯಮಾನೇ ಸಮಾನೇ
ನೃಪತಿ ಜನಪದಾನಾಂ ದುರ್ಲಭಃ ಕಾರ್ಯಕರ್ತಾ "

–ಎಂಬ ವಾಮನನ ಉಕ್ತಿಯೂ ಶ್ರೀಯುತರ ಅಭ್ಯಾಸದ ಆಳವನ್ನೂ, ವೈವಿಧ್ಯವನ್ನೂ ಎತ್ತಿ ತೋರಿಸುತ್ತವೆ.

ಇವರ ಇತರ ಪ್ರಕಟಿತ ಗ್ರಂಥಗಳೆಂದರೆ : ' ಒಡವೆಯ ಪಾಠ ', ' ಮಾತೃಪ್ರೇಮ ', ' ರಾಮ ರಕ್ಷಾ ಸ್ತೋತ್ರ ' ಮತ್ತು ' ಹೆಣ್ಣುಮಕ್ಕಳ ಆರೋಗ್ಯ ವಿಚಾರ '. ಅಪ್ರಕಟಿತ ಗ್ರಂಥಗಳು : ' ಹ್ಯಾಮ್ಲೆಟ್ ನಾಟಕ ', ' ದಾದಾಭಾಯಿಯವರ ಚರಿತ್ರೆ ', ' ಮಂಜುಳಾ ' ಮತ್ತು ' ಮಹಾ ಯುದ್ಧದ ಸಂಕ್ಷಿಪ್ತ ಇತಿಹಾಸ '.

—

ಕಂಬಿ ಬಸವಾರ್ಯ

(೧೮೭೫–೧೯೨೦)

ಇವರು ಬಸವಾರ್ಯ ಕಿತ್ತೂರ ಎಂತಲೂ ಬರೆಯುತ್ತಿದ್ದರು. ಇವರ ತಂದೆಯ ಹೆಸರು ಚೆನ್ನಬಸವಯ್ಯ.[೧] ಇವರು ಕಿತ್ತೂರು ಮತ್ತು ನೇಗಿನಹಾಳ ಮೊದಲಾದ ಊರುಗಳಲ್ಲಿ ಸುಮಾರು ೨೫ ವರ್ಷಗಳ ಕಾಲ ಕನ್ನಡ ಶಾಲಾ ಉಪಾಧ್ಯಾಯರಾಗಿದ್ದರು. "ಇವರು ಲಿಂಗರಾಜ ನಾಮಾವಳಿ, ವೀರಶೈವ ಸಮಾಜಗುಣದರ್ಪಣ, ವಿಷಮ ವಿವಾಹ, ಚಂದ್ರಿಕಾ ನಾಟಕ, ಮುರುಘೇಂದ್ರಾಷ್ಟಕ-ಮೊದಲಾದ ಇನ್ನೂ ಅನೇಕ ಉತ್ತಮ ಗ್ರಂಥಗಳನ್ನು ರಚಿಸಿರುವದಾಗಿ ಕೇಳುತ್ತೇವೆ. ಇವರು ಸ್ವಭಾವದಿಂದ ಬಲು ಸಜ್ಜನರು, ಶಾಂತತಾಪ್ರಿಯರು, ಕನ್ನಡ ಭಾಷಾ ಪಂಡಿತರು, ಮಾತಿನಲ್ಲಿ ಬಹು ಜಾಣ್ಮೆಯುಳ್ಳವರು, ರಸಿಕತನದಲ್ಲಂತೂ ಇವರನ್ನು ಯಾರೂ ಸರಿಗಟ್ಟುವಂತಿದ್ದಿಲ್ಲ. ಮರಣಕಾಲಕ್ಕೆ ಇವರಿಗೆ ಸುಮಾರು ೪೫ ವರುಷಗಳ ವಯಸ್ಸಿತ್ತು."[೨]

ಮೇಲೆ ಗ್ರಂಥಗಳೆಂದು ಹೇಳಿದ ಅನೇಕ ವಿಷಯಗಳು ಬಹುಶಃ ಗ್ರಂಥರೂಪದಲ್ಲಿರದೆ, ಬಿಡಿ ಕವಿತೆಗಳಾಗಿ ಅಲ್ಲಲ್ಲಿ ಪ್ರಕಟವಾದಂತೆ ಕಾಣುತ್ತದೆ. ಇವರು ಬರೆದ ಎಲ್ಲ ಗ್ರಂಥಗಳು ದೊರಕಲಿಲ್ಲ. ಇವರ ಅನೇಕ ಬಿಡಿ ಕವಿತೆಗಳು ವಾಗ್ಭೂಷಣ ಮತ್ತು ಪ್ರಭಾತ ಮೊದಲಾದ ನಿಯತಕಾಲಿಕಗಳಲ್ಲಿ ಪ್ರಕಟವಾದವು.

ಮೇಲೆ ಬಸವಾರ್ಯಕೃತ ಗ್ರಂಥಗಳೆಂದು ಹೇಳಿದ ವಿಷಯಗಳಲ್ಲಿ 'ವಿಷಮವಿವಾಹ' ಎಂಬುದು ೧೯೧೮ ನೆಯ ಇಸವಿಯ ನವಂಬರ ತಿಂಗಳದ ಪ್ರಭಾತದಲ್ಲಿ ಪ್ರಕಟವಾಯಿತು. (ಪು.೧೯). ಶ್ರೀಯುತರು ಮರಾಠಿ ಶಾರದಾ ನಾಟಕವನ್ನು ನೋಡಿ, ಅದರ ಪರಿಣಾಮವಾಗಿ ಈ ಕವಿತೆಯನ್ನು ಬರೆದಿದ್ದಾರೆ. ಅದರಲ್ಲಿಯ ಹಲವು ಪದ್ಯಗಳನ್ನು ಉದ್ಧರಿಸಬಹುದು :

---

೧ ಚೆನ್ನಬಸವಾತ್ಮಜಾ
ಕನ್ನಡ ಸದ್ಭಕ್ತ ಮಾನ್ಯವರ ವಿದ್ವಾಂಸಾ
ಸನ್ನುತ ಕವಿಕುಲರತ್ನಾ
ಬನ್ನಮನೆಮಗಿತ್ತು ಪೋದೆಯಾ ಬಸವಾರ್ಯಾ ॥

(ಕಂಬಿ ಬಸವಾರ್ಯ ವಿಯೋಗಾಷ್ಟಕಂ)

ವಾಗ್ಭೂಷಣ : ೧೯೨೦ : ಪು. ೪೫.

೨ ಅದೇ : ಪು. ೪೪.

ಮುಪ್ಪಿನೊಳು ಜನ್ಮಿಸಿದ ಮಕ್ಕಳು
ತಿಪ್ಪಿಯಾ ಪಾಲಕ್ಕುಮದರಿಂ
ಮುಪ್ಪಿನವರಿಗೆ ಮದುವೆಯೇತಕೆ ವಿಷಯಲಂಪಟರು
ಕಪ್ಪು ಕಲಪವ ಬಡೆದು ಮೀಸೆಗ
ಚೊಪ್ಪುಗೈದೊಣ ಹಲ್ಲು ಕೂಡ್ರಿಸ
ಲೊಪ್ಪಬಲ್ಲುದೆ ಮುಪ್ಪು ಪೋಪುದೆ ವ್ಯರ್ಥವೀಕೃತಿಯು

ಮಕ್ಕಳಿಲ್ಲದ ಮುದುಕರೆಲ್ಲರು
ರೊಕ್ಕದಾ ಮೇಲಾಶೆಯಿರಿಸದ
ಲಕ್ಕರದೊಳಾ ರೊಕ್ಕವೆಲ್ಲವ ಸಮಾಜದೇಳ್ಗೆಯೊಳಂ
ಇಕ್ಕಿ ಘನ ಶಿರಸಂಗಿದೊರೆವೊಲ್
ಚೊಕ್ಕ ಕೀರ್ತಿಯ ಪಡೆಯುತಿಹದೊಳಂ
ಗಕ್ಕನೇ ಸಗ್ಗಕ್ಕೆ ಸಾರುವದುಚಿತವಲ್ಲೇನಂ ?........

ಜರಠನಿಗೆ ತರುಣಿಯನು ಕೊಟ್ಟರೆ
ಹರಕು ರಗಟೆಗೆ ಜರದ ಪೀತಾಂ
ಬರದ ತೇಪೆಯ ಹಚ್ಚಿದಂತಿಜ್ಜೋಡವಾಗುವದೈ
ಬಿರುದಿನೊಂಟೆಗೆ ಚಿಕ್ಕಚಿಗುರೆಯ
ಮರಿಯ ಮದುವೆಯ ಮಾಡಿದಂತೀ
ಜರಠ ಬಾಲಿಕೆಯರ ವಿವಾಹವಸಹ್ಯವಾಗಿಹುದೈ

'' ಗುಜ್ಜಗರತಿಯು ಕಯ್ಗೆ ಬರ್ಜಿನಮುಜ್ಜನಾ ಕೈಲಾಸನಿಲಯಕೆ ಹೆಜ್ಜೆಯಿಕ್ಕಲು ಸಿದ್ಧ '' ನಾಗಿರುತ್ತಾನೆ; '' ಮುದ್ದುಗುವರಿಯು ಬಯಪ ವೃದ್ಧರು........ ಗದ್ದೆಯೊಳಗಣ ಹಸರು ಮೇಯಲು ಹೋಗಿ ಮುದಿಗೋಣ ಬಿದ್ದು ಸತ್ತಂತೆ. '' ಇಂಥ ಕನ್ಯೆಯ ಮಾತಾಪಿತೃಗಳು ಹಣಕ್ಕಾಗಿ ಹೆಣ್ಣನ್ನು ಮಾರುವವರು :

ಸೊಣಗ ಭದ್ರೇಶ್ವರಗೆ ಮತ್ತಾ
ಹಣವನಿತ್ತೆಳೆವೆಂಣ ಹೊಂದಲು ಹವಣಿಸುವ ಹಳಿಯ
ಸೊಣಗ ಶ್ರೀಮಂತಂಗೆ ಮೇಣಾ
ಹಣವ ಕೊಂಡಣುಗೆಯನು ಮಾರುವ
ಸೊಣಗ ಕಾಂಚನಭಟ್ಟನಿಗೆ ಧಿಕ್ಕಾರ ಧಿಕ್ಕಾರ [೧]

ವಿಷಮವಿವಾಹದಂತೆ ' ಬಾಲವಿವಾಹ 'ವೂ ಹೇಯವೇ ! ಇದನ್ನೊಂದು ಸ್ಫುಟ ಕವಿತೆಯಲ್ಲಿ ಹೀಗೆ ವರ್ಣಿಸಿದ್ದಾರೆ :

ಬಟ್ಟೆಯಿಲ್ಲದೆ ತಿರುಗುತಿರುವಾ
ದಟ್ಟಡಿಯನಿಟ್ಟಾಡುತಿರುವಾ
ಚಟ್ಟನೇ ಬಗಲಲ್ಲಿ ಕೂಡ್ರಲು ಬಾರದಳುತಿರುವಾ

---

೧ ಇಲ್ಲಿ ಬರುವ ಹೆಸರುಗಳೆಲ್ಲ ಮುರಾರಿ ಶಾರದಾ ನಾಟಕದಲ್ಲಿಯ ಪಾತ್ರಗಳು.

ಕಟ್ಟಿದುಡಿಯೊಳು ನಿಲ್ಲದಿರುವಾ
ತೊಟ್ಟಿಲೊಳಂ ತೂಗಾಡುತಿರುವಾ
ಪುಟ್ಟಮಕ್ಕಳ ಮದುವೆ ಮಾಡುವದುಚಿತವೇ ಜಗದಿ ೧

ವಿಷಮವಿವಾಹ, ಬಾಲವಿವಾಹಗಳನ್ನು ಖಂಡಿಸಿದ ಬಸವಾರ್ಯರು ಸೋಮೇಶ್ವರ ವಚನದಲ್ಲಿ ಬರುವ 'ಕೊಡಬೇಕುತ್ತಮನಾದವಂಗೆ ಮಂಗಳಂ' ಎಂಬ ವಾಕ್ಯವನ್ನು ಆಧರಿಸಿ ಆ ಹೆಸರಿನಿಂದಲೇ ಒಂದು ಕವಿತೆಯನ್ನು ಬರೆದಿದ್ದಾರೆ :

ಸುಕುಲೋತ್ಪನ್ನಂ ಸುಗುಣಂ
ಪ್ರಕಟಿತ ಸುವಿಚಾರಶೀಲ ವಿದ್ಯಾವಂತಂ
ಅಕಳಂಕ ನೀತಿವಂತಂ
ಸುಕುಮಾರಂಗೊಲಿದು ಮಗಳನೀವನೆ ಜಾಣಂ

ಧನವನೆ ನೋಡದೆ ವಿದ್ಯಾ
ಧನವಂ ನೆರೆ ನೋಡಿ ಮಗಳನೀವುದು ವಿಹಿತಂ
ಧನದಿಂದಧಿಕಂ ವಿದ್ಯೆಯು
ಧನವದು ಸ್ಥಿರವಲ್ಲ ತಿರೆಯೊಳೆಂದುಂ ಮನುಜಾ

ತುಂಬಿರ್ದ ಧನವನೀಕ್ಷಿಸಿ
ಡಾಂಭಿಕ ಕುಲಹೀನ ಕುಮತಿ ವಿಕಲಾಂಗನಿಗೆ
ಬಿಂಬಾಧರೆಯಂ ಸುತೆಯಂ
ಶುಂಭಗೆ ಮಣಿದಿತ್ತು ತಣಿವ ಮನುಜನೆ ಶುಂಭಂ

ಸುಂದರ ಸುಕುಮಾರಾಂಗಗೆ
ಬಂಧುರ ವಿದ್ಯಾವಿಭೂಷಣನನುರೂಪನಿಗೆ
ಸುಂದರ ಸುತೆಯನ್ನೀಯದ
ತಂದೆಯು ತಾಂ ತಂದೆಯಲ್ತು ತಾಮಸಿಯಾತಂ ೨

ತಮ್ಮ ಸ್ನೇಹಿತರಾಗಿದ್ದ ಸಂಗೊಳ್ಳಿ ಶಾಲಾಮಾಸ್ತರ ನಾಗಸೆಟ್ಟಿಯೆಂಬವರ ಧರ್ಮಪತ್ನಿ ಕ್ಷಯ ರೋಗದಿಂದ ತೀರಿಕೊಂಡಾಗ, ಅವರಿಗಾದ ದುಃಖ ಹೇಗಿರಬೇಕೆಂಬದನ್ನು ಕವಿ ವರ್ಣಿಸುವಲ್ಲಿ ಸಾಮಾಜಿಕ, ವ್ಯಕ್ತಿಗತ ಪ್ರಜ್ಞೆಯನ್ನು ತೋರಿದ್ದಾರೆ :

ಗತಪತ್ನೀ ಪ್ರಲಾಪ

ಹಾ ! ಸತಿಯೇ, ಹಾ ಪ್ರಿಯೆ, ಹಾ !
ಹಾ ! ಸದ್ಗುಣಮಂಡಿತಾಂಗಿ, ಮದ್ಗೃಹಲಕ್ಷ್ಮೀ
ಹಾ ! ಸೌಭಾಗ್ಯದ ನಿಧಿಯೇ
ಹಾ ! ಸಾರ್ಥಕಮಾದ ಚೆನ್ನೆವೆಸರಿನ ಚೆನ್ನೇ

೧ ಪ್ರಭಾತ : ಸೆಪ್ಟಂಬರ ೧೯೧೯ : ಪು. ೨೫.
೨ ಪ್ರಭಾತ : ಫೆಬ್ರುವರಿ ೧೯೧೯ : ಪು. ೧೬–೧೭.

ಅನ್ನದೊಳಂ ಹರಳು ಬಂದೊಡೆ
ನಿನ್ನಂ ಮಿಗೆ ಬಯ್ದು ಸಿಟ್ಟು ಮಾಡುತ್ತಿರ್ದೆಂ
ಇನ್ನಾರಿಗೆ ಬಯ್ವೆಂ ಮೇ
ಣೆನ್ನಾರೊಳ್ ಮುನಿವೆನಕಟ ! ಪೇಳ್ ನೀಂ ಚೆನ್ನೇ

'ಮಗಳಂ ಪಡೆದೆಂ ನಲುವಿಂ
ಬಗೆ ಬಗೆ ತೊಡವುಗಳನಿಟ್ಟು ಕಡುಸಡಗರಮಂ
ಬಗೆದುಂಬೆ ನೋಳ್ಪೆ' ನೆನುತಂ
ಬಗೆಯುತಿರಲ್ ಪಾಪಿ ಮೃತ್ಯು ನಿನ್ನೆಳದೊಯ್ದುಳ್

ಮಕ್ಕಳ್ ಕ್ರೀಡಿಸೆ ದುಃಖಂ
ಮಕ್ಕಳ್ ತಾವಳಲ್ದೊಡೆನಗೆ ದುಃಸಹ ದುಃಖಂ
ಅಕ್ಕಟ ! ಇಂತಿರ್ದುದೆ ಹಣೆ
ಯಕ್ಕರಮಿನ್ನೇವೆನೆನಿತು ಶೋಕಿಪೆನಹಹಾ !

ಪ್ರಿಯೆ ನಿನ್ನಯ ರೂಪಮದೆ
ನ್ನಯ ಕಣ್ಣೆದಿರ್ಗಿಂದಿಗುಂ ಕರಂ ಕಟ್ಟಿರ್ಕುಂ
ಕ್ಷಯದಿಂದಳಲ್ವ ತವ ವಾ
ಕ್ಷಯಮವದು ಮತ್ಕರ್ಣರಂಧ್ರದೊಳ್ ತೀವಿರ್ಕುಂ [೧]

ತಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ಡಂಭ, ಕಾಪಟ್ಯ, ಅರ್ಥವಿಹೀನತೆಗಳನ್ನು ಕಂಡು ಬಸವಾರ್ಯರ ಮನಸ್ಸು ರೋಸಿಹೋಯಿತು. ತಮ್ಮ ಸಮಾಜದಲ್ಲಿಯ ಗುರುವರ್ಗದ ಕೆಲವರು ಅನೀತಿಯುತವಾಗಿ ನಡೆಯುತ್ತಿದ್ದುದನ್ನು ಸ್ಪಷ್ಟವಾಗಿ ಖಂಡಿಸುವ ಮನೋಧೈರ್ಯವನ್ನು ಶ್ರೀಯುತರು ಪ್ರದರ್ಶಿಸಿದರು. ಒಂದು ವೀರಶೈವ ಮಹಾಸಭೆಯಲ್ಲಿ ಅರಟಾಳ ರುದ್ರಗೌಡರು ಸಮಾಜಕ್ಕಾಗಿ ಕಳಕಳಿಯ ಮನವಿಯನ್ನು ಮಾಡಿದರು. ರುದ್ರಗೌಡರು ಮಾಡಿದ ಈ ಉಪದೇಶ ವನ್ನು 'ಸಮಾಜಾದರ್ಶ ಅಥವಾ ರುದ್ರಪ್ರಭುನೀತಿ' ಎಂಬ ಹೆಸರಿನಿಂದ ಬಸವಾರ್ಯರು ಸನ್ ೧೯೧೩ ರ ಮೊದಲೇ ಬರೆದರು.

ಪ್ರಭಾತ ಮಾಸಪತ್ರಿಕೆಯಲ್ಲಿ ಸನ್ ೧೯೨೦ ರಲ್ಲಿ ಪ್ರಕಟವಾಗಿದ್ದ

ಗುರುವೊಳ್ ವಿವೇಕಮಿರ್ದೊಡೆ
ಪರಿಜನರೊಳ್ ಭಕ್ತರೊಳ್ ವಿವೇಕತೆಯಿರ್ಕುಂ
ಗುರುವೊಳವಿವೇಕಮಿರ್ದೊಡೆ
ಪರಿಜನರೊಳ್ ಭಕ್ತರೊಳವಿವೇಕತೆಯಿರ್ಕುಂ

–ಎಂಬ ಪದ್ಯ ನೋಡಲಿಕ್ಕೆ ಸಾಮಾನ್ಯವಾಗಿ ಕಂಡರೂ, ಅದರ ಹಿಂದಿನ ಕುದಿ ತುಂಬಾ ಕ್ರಾಂತಿ ಕಾರಕವಾಗಿದೆ. ಇದು ಶ್ರೀಯುತರು ಸಮಾಜದಲ್ಲಿಯ ಗುರುವರ್ಗವನ್ನು ಕುರಿತು ಹೇಳಿದ ಮಾತು. ಗುರುಗಳ ವಿವೇಕಾವಿವೇಕವನ್ನೇ ಭಕ್ತರ ವಿವೇಕಾವಿವೇಕಗಳು ಅವಲಂಬಿಸಿವೆ.

೧ ಪ್ರಭಾತ : ಮೇ–ಜೂನ್ ೧೯೧೯ : ಪು. ೧೨–೧೩.

ಸಮಾಜ ಸುಧಾರಣೆಯ ಆಶಯ ತೀವ್ರತೆ, ಪ್ರಾಮಾಣಿಕತೆ ಮತ್ತು ಧೈರ್ಯಗಳ ದೃಷ್ಟಿಯಿಂದ 'ಸಮಾಜಾದರ್ಶ' ಓದಬೇಕಾದ ಗ್ರಂಥ. ಇದರಲ್ಲಿಯ ಸ್ಪಷ್ಟೋಕ್ತಿಯ ಮೂಲಕವೋ ಏನೋ ಇದು ಅಪ್ರಕಟಿತವಾಗಿಯೇ ಉಳಿಯಿತು. ಇದನ್ನು ಬರೆದಿಟ್ಟುಕೊಂಡ ಬಸವಾರ್ಯರ ಶಿಷ್ಯರಾದ ವೀರಪ್ಪ ವೀರಭದ್ರಪ್ಪ ನಾಗಶೆಟ್ಟಿಯವರು ಮುಖಪುಟದಲ್ಲಿ 'ಶ್ರೀ ಗುರುವಾರ್ಯ ಬಸವಾರ್ಯ ಕವಿ ಕೃತ' ಎಂದು ಬರೆದಿದ್ದಾರೆ.

ಸಮಾಜಾದರ್ಶ ಅಥವಾ ರುದ್ರಪ್ರಭುನೀತಿ (೧೯೧೩) :

ಇದು ಕಿತ್ತೂರಿನ ನಾಗಸೆಟ್ಟಿ ಮಾಸ್ತರರವರ ಸಂಗ್ರಹದಲ್ಲಿರುವ ಒಂದು ಚಿಕ್ಕ ಹಸ್ತಪ್ರತಿ. ಇದನ್ನು ಶ್ರೀಯುತರ ಪೂಜ್ಯ ತಂದೆಯವರಾದ ವೀರಪ್ಪನವರು ಸನ್ ೧೯೧೩ ರಲ್ಲಿ ತಮ್ಮ ಗುರುಗಳ ಪುಣ್ಯಸ್ಮರಣೆಗಾಗಿ ಬರೆದಿಟ್ಟುಕೊಂಡಿದ್ದಾರೆ. ಇದರಲ್ಲಿ ಸಮಾಜದ ಗುರುವರ್ಗದ ಡಂಭ, ಅನೀತಿಗಳ ಟೀಕೆಯಿದೆ. ಈ ಗ್ರಂಥವನ್ನು ಬರೆಯಬೇಕಾದ ಸಂದರ್ಭವನ್ನು ಲೇಖಕರು ಹೀಗೆ ಕೊಟ್ಟಿದ್ದಾರೆ :

ಹಾಂಗಲ್ ಸ್ವಾಮಿಯ ಕರುಣಾ
ಪಾಂಗದೊಳಾ ರುದ್ರಗೌಡಲಿಂಗನೃಪಾಲರ್
ಲಿಂಗಾಯತ ಮತ ಸಭೆಯಂ
ತುಂಗೋತ್ಸವದಿಂ ನೆಗಳ್ದರದನರಿಯದರಾರ್

ಇದರಲ್ಲಿ ಪ್ರಾರಂಭದಲ್ಲಿ ವಿರಕ್ತರ ವಿಡಂಬನೆ ಬರುತ್ತದೆ :

ಮೊದಲೊಳ್ ಭೂವರರಿತ್ತರೊಲ್ದು ಧನ ಭೂ ವರ್ಷಾಶನಾದ್ಯಂಗಳಂ
ಬುಧಮಾಹೇಶ್ವರವೃಂದಕ್ಕೆದೆ ನಿಜಶಿಷ್ಯವ್ರಾತಮಂ ಶಾಸ್ತ್ರಕೋ
ವಿದರಂ ಗೆಯ್ಯಲಶೇಷಲಿಂಗಮತಮಂ ಸದ್ಧರ್ಮದಿಂ ಪಾಲಿಸ
ಲ್ಕದನೇ ದುರ್ವ್ಯಯಮಾಳ್ಪರೋ ಶಿವಶಿವಾ ದುಷ್ಟಾತ್ಮರೀ ಕಾಲದೊಳ್

ಇಂಥ ಕೆಲ ವಿರಕ್ತರ ಉದ್ಯೋಗವೆಂದರೆ :

ಅಲ್ಲಲ್ಲಿ ತಿರಿದು ಧನಮಂ
ಮೆಲ್ಲನೆ ಕೂಡಿಟ್ಟು ಪೆಣ್ಗಳಿದಿರೊಳ್ ಮೆರೆಯಲ್
ಪಲ್ಲಕ್ಕಿಯ ದಂಡಿಗೆಯಂ
ನಿಲ್ಲದೆ ಮಾಡಿಸುವರವರದೇಂ ಗಾವಿಲರೋ

ಇಂತಪ್ಪ ಗುರೂತ್ತಮರ ಲಿಂಗಪೂಜಾ ವೈಭವಮೆಂತಿರ್ಪುದೆಂದೊಡೆ–

ಲಲನಾಪ್ರೇಮವೆ ಲಿಂಗಭಕ್ತಿಯಚಲದ್ವ್ಯಾಮೋಹಮೇ ಧ್ಯಾನಮಾ
ಲಲನಾಲಂಕೃತಮೇ ಪೊದಳ್ದ ಶಿವಪೂಜಾಲಂಕೃತಂ ಚಿತ್ತಮಂ
ಜುಲಯಾಲಾಪಮೆ ಲಿಂಗಮಂತ್ರಪಠಣಂ ತತ್ಸಂಗಮೇ ಮೋಕ್ಷಮಂ
ಗಲಮೆಂಬರ್ ಪೊಲೆಯರ್ ವಿರಕ್ತಪಿಶುನರ್ ಪರ್ಯಂಕಪೀಠರ್ ಕೆಲರ್

ಇದು ಗುರುವರ್ಗದಲ್ಲಿಯ ಕೆಲವರ ಟೀಕೆ. ಟೀಕೆ ನಿಶಿತವಾಗಿದೆಯೇನೋ ನಿಜ; ಆದರೆ, ಅಭಿಪ್ರಾಯಗಳು ಅನುಭವಭೇದವನ್ನು ಅವಲಂಬಿಸುತ್ತವೆ.

ಇದರಂತೆಯೇ ಶ್ರೀಯುತರು ಸೆಟ್ಟಿ ಸಾಹುಕಾರರ ಟೀಕೆಯನ್ನೂ ಮಾಡಿದ್ದಾರೆ :

ಪಟ್ಟೆವಿಭೂತಿ ಕಂಗೆಸೆಯೆ ಪಾವಡಕಟ್ಟುಮಲುಂಗೆ ಪೊಂಗೆ ಪೇ
ಬೆರ್ಗಟ್ಟೆ ವಿರಾಜಿಸಲ್ಕೆಯುಡಮುಟ್ಟತಂ ಪಿರಿದಾಗೆ ಜಾತಿಯೊಳ್
ಪುಟ್ಟಿಸಿ ವ್ಯಾಜ್ಯಮಂ ಪಲವು ಪಂಗಡಮಾಗಿಸಿ ಪೇರ್ಮೆವೆತ್ತು ತಾಂ
ಪುಟ್ಟಿದನೇಕೆ ಸೆಟ್ಟಿ ಜಗಜಟ್ಟಿಯುಶುದ್ಧದ ಮೊಟ್ಟೆ ಭೂಮಿಯೊಳ್

–ಕೊನೆಯ ಭಾಗದಲ್ಲಿ ಹಲವು ಸದುಪದೇಶಗಳು ಬರುತ್ತವೆ :

ಸರಿಯುವಳು ಸರಿಗೆಯಿಟ್ಟರೆ
ನೆರೆಮನೆಯುವಳುರುಲು ಹಾಕಿಕೊಳ್ವಳ್ ಪರರೊಳ್
ವರವಿದ್ಯೆ ವರ್ಧಿಸಿರೆ ನೀ
ವರಿದುಂ ಗಾಂಪತೆಯನಾಂತು ಬಾಳ್ವರೆ ಜಗದೊಳ್

–ಆಡಳಿತಗಾರರಿಗಂತೂ ಶ್ರೀಯುತರು ಸರಿಯಾದ ಬೋಧೆಯನ್ನೇ ಮಾಡಿದ್ದಾರೆ :

" ಓ ! ವೀರಶೈವ ರಾಜ್ಯಾಧಿಕರ್ತುವೃಂದಮೇ–
ಲಂಚಕೆ ಪೇಸು. ದುಮ್ಮನಮನೋಡಿಸು, ದುಷ್ಕೃತನಾಗದಿರ್, ಸದಾ
ಮುಂಚು ಮತೋನ್ನಯಾಧ್ವರದೆ, ಹಿಂಗುಡು ದುರ್ಬಲರಿಂಗೆ ದು:ಖದೊಳ್,
ಕುಂಚಿತಬುದ್ಧಿಯಿಂ ಮೆರೆಯಬೇಡಧಿಕಾರ ಮದಾಂಧನಾಗಿ, ನೀಂ
ಪಂಚಮುಖಂಗೆ ಪ್ರೇಮಕರನಾಗಿರು ಬಾಗಿರು ರಾಜ್ಯಕಾರ್ಯದೊಳ್

ಆಚಾರವರ್ಗದ ಈ ಅಪಮೌಲ್ಯ ಯಾವ ಸಮಾಜದಲ್ಲಿಯೂ, ಎಂದಿನಿಂದಲೂ ನಡೆದೇ ಬಂದುದು. ಈಯಲ್, ಇರಿಯಲ್, ಶರಣ್‌ಪುಗೆ ಕಾಯಲ್, ಕ್ಷತ್ರಿಯರೆ ಬಲ್ಲರ್, ಬ್ರಹ್ಮರ್ ಅವರೆತ್ತರಿವರ್ ? ಅವರಿಗೆ ಗೊತ್ತಿದ್ದುದು 'ಭೋಯೆನಲುಂ ಬಲ್ಲರ್ ಕೊಲೆ ಅವಿಧೋಯೆನಲುಂ' ಎಂಬುದು ಮಾತ್ರ ಎಂದು ಮಹಾಕವಿ ರನ್ನ ಹೇಳಿದ. 'ಉಂಡ ಪಾರ್ವರ್ ಒಲಿದುದ ಗೆಡೆವರ್' ಎಂದು ಜನ್ನ ಹೇಳಿದ. 'ಬಂದ ದಕ್ಷಿಣೆ ತೃಪ್ತಭೋಜನದಿಂದ ತುಪ್ಪರು ನಾವು' ಎಂದು ಇವರ ಬಗೆಗೆ ಕುಮಾರವ್ಯಾಸ ಹೇಳಿದ. ಮೂಲದ ಮೌಲ್ಯಗಳು ಇಳಿಯತೊಡಗಿದವೆಂದರೆ, ಆಚಾರವರ್ಗದ ಗತಿ ಹೀಗೇ ಆಗುತ್ತದೆಂದು ಹೇಳಬೇಕು.

ಹಾಗೆಯೇ, ಇನ್ನೊಂದು ಬಿಡಿ ಕವನದಲ್ಲೂ ಬಸವಾರ್ಯರು ಜಂಗಮ ಲಕ್ಷಣವನ್ನು ಹೀಗೆ ವಿವರಿಸಿದ್ದಾರೆ. ಇದರಲ್ಲಿರುವ ಅವರ ಸಮಾಜ ಸುಧಾರಣೆಯ ತೀವ್ರತೆಯನ್ನು ಗಮನಿಸಬೇಕು :

ಆಧುನಿಕ ಜಂಗಮ ಲಕ್ಷಣಂ

ಹುಗ್ಗಿಯಂ ಹೊಡೆವುದೆ ಶೌರ್ಯಂ
ಎಗ್ಗಿಲ್ಲದೆ ಜಂಗು ಕಟ್ಟಿ ತಿರಿಪುದೆ ಕಾರ್ಯಂ
ಕಗ್ಗತನವೆ ಸೌಂದರ್ಯಂ
ಮುಗ್ಗಲುಮುರಿ ಬಡಿಸಿಕೊಂಡು ಮೆರೆವುದೆ ಧೈರ್ಯಂ

ಸಾಲೆಯ ಸುದ್ದಿಯಿಲ್ಲದಲೆ ಪೋಲ್ತರದುಜ್ಜುಗಗೆಯ್ಯಲಾರದೆ
ಕೂಲಿಯ ಮಾಡಲೊಲ್ಲದೆ ಮಹತ್ತಮವೈದಿಕಮೂರ್ತಿಯಾಗದೆ

ಕೂಳಿನಪೇಕ್ಷೆಯಿಂದ ನೆರೆಯೂರ ಬಿಕ್ಕೆಗೆ ನಾಚಿಕಿಲ್ಲದೆ
ಜೋಳಿಗೆಗಾಶೆಯಾದೊಡದೆ ಸಾಕೆಮಗೆಂಬರು ಮೂರ್ಖ ಜಂಗಮರ್

ಗುರು ಕೊಟ್ಟ ಜೋಳಿಗೆಯಿರುತಿರೆ
ಪೆರತೊಂದುದ್ಯೋಗವೇಕೆಯೆಮಗೇಂ ಕೊರತೆ
ಬರಿದೇ ದುಡಿಯುವದೇತಕೆ
ತಿರಿದುಂಬುದೆಯೆಮ್ಮ ಕಜ್ಜಮೆಂಬರ್ ಪಿಶುಣರ್

ದುಡಿಯದೆ ದುಃಖ ಪಡೆಯದೆ
ಕಡಬುಂಡಿಯು ಜಡಿಯಲೆಮ್ಮ ಭಕ್ತರ ಮನೆಯೊಳ್
ಮೃಡನಲ್ಲಿ ಬೇಡಿ ಬಂದೆವು
ದುಡಿಯಲು ಬಂದಿಲ್ಲವೆಂದು ಜಂಗಮರೆಂಬರ್

ಭಕ್ತನೆಯೆಮ್ಮ ಭಾಗ್ಯನಿಧಿ ಸಮ್ಮುದವಾರಿಧಿ ಸೌಖ್ಯಸನ್ನಿಧಿ
ಭಕ್ತನೆ ಕಾಮಧೇನು ಚಿಂತಾಮಣಿಯೆಮ್ಮ ಸುಭಾಗ್ಯದಾಗರಂ
ಭಕ್ತನ ಬೆನ್ನಬಿಟ್ಟು ಬಡಜಂಗಮನೆಲ್ಲಿಗೆ ಪೋಪುದೈ ಮಹತ್
ಭಕ್ತನೆಯೆಮ್ಮ ಹೂಳಿದರ್ಥಯೆಮಗೆಂಬರು ಪರಾವಲಂಬಿಗಳ್ [೧]

–ಇದರಂತೆಯೇ, ಒಕ್ಕಲತನ ಮಾಡುವವರಿಗೂ ಬುದ್ಧಿವಾದ ಹೇಳಿದ್ದಾರೆ :

ಒಕ್ಕಲತನದೊಳ್ ಕೃಷಿಕರೆ
ಅಕ್ಕರದಿಂ ದುಡಿಯಿರೈ ನಿರಾಲಸದಿಂದ
ತಕ್ಕ ಸುಧಾರಣೆಯ ಮಾಡಿರಿ
ಮಕ್ಕಳು ಮರಿಯುಂಡು ತಿಂದು ಸುಖಿಸಿರಿ ನಿರುತಂ

ಪಾತರನಾಚು ಮದ್ದು ಘನವಾದ್ಯವಿಡಂಬನ ದೊಡ್ಡನಿಬ್ಬಣಂ
ನೂತನ ಚಿತ್ರಮಂಟಪವನೇಕವಿಲಾಸ ವಿರಾಟ ಭೋಜನಂ
ಘಾತಕ ದುಂದುಗಾರಿಕೆ ಗುಲಾಲ ಹಿಲಾಲ್ಗಳ ಧೂಳಿದೂಸರಂ
ಏತಕೆ ಬೇರೆ ಬಡಿವಾರವನರ್ಥಮಿದಲ್ತೆ ಲಗ್ನದೊಳ್

ಪದ ಪದ್ಯಗಳು :

ಇದೂ ಹಸ್ತಪ್ರತಿಯ ರೂಪದಲ್ಲಿಯೇ ಕಿತ್ತೂರಿನ ಶ್ರೀ ನಾಗಶೆಟ್ಟಿಯವರ ಮನೆಯಲ್ಲಿದೆ.

ಇದರಲ್ಲಿ ಹಲವು ಸಮಕಾಲೀನರ ಉಲ್ಲೇಖಗಳೂ ಬರುತ್ತವೆ. ಅವರು ಯಾವ ರೀತಿ ಪರಸ್ಪರ ಸೌಹಾರ್ದ ಸಂಬಂಧವುಳ್ಳವರಾಗಿದ್ದರೆಂಬುದನ್ನು ಈ ಪದ್ಯಗಳಿಂದ ಕಾಣಬಹುದಾಗಿದೆ. ಉದಾಹರಣೆಗೆ ಈ ಕೆಳಗಿನ ಪದ್ಯದಲ್ಲಿ ನರಸಿಂಹಾಚಾರ್ಯ ಪುಣೇಕರ ಅವರ ಉಲ್ಲೇಖ ಬರುತ್ತದೆ :

೧ ಕಿತ್ತೂರಿನ ವೀರಪ್ಪ ನಾಗಶೆಟ್ಟಿಯವರ ಅಪ್ರಕಟಿತ ಸಂಗ್ರಹ.

ಸುರುಚಿರ ಶೈವ ಚೆನ್ನವೃಷಭಾಂಕಿತ ಕಂಬ್ಳ್ಯಪನಾಮವರ್ಯರ
ವರತನುಜಾತ ಪಾರ್ಶ್ವಪುರದೊಳ್ ವೃಷಭಾಂಕಿತ ಜ್ಯೇಷ್ಠಪುತ್ರ ನಾಂ
ನೆರೆ ನರಸಿಂಹವರ್ಯರ ಸದುದ್ಯಮ ಭಾವದ ಪದ್ಯಮಾಲೆಯಂ
ಪುರಜನ ಬೋಧನೋಸುಗಮಿದೇ ಗುರುಂವಾಸರದೊಳ್ ನಿರ್ಮಿರ್ಚಿದೆಂ

ಈ ಕೆಳಗಿನ ಪದ್ಯದಲ್ಲಿ ಧೋಂಡೊ ನರಸಿಂಹ ಮುಳಬಾಗಲರ ಬಗೆಗೆ ಹೇಳಿದೆ :

ಶ್ರೀಮದ್ಶೂದ್ರಕನಿಂದೆ ಮೃಚ್ಛಕಟಿಕಾಂಕ ನಾಟಕಂ ನಿರ್ಜರ
ಪ್ರೇಮೋದ್ಯುತ್ತಮ ಭಾಷೆಯೊಳ್ ವಿರಚಿತಂ ತೇಜೋನೃಸಿಂಹಾಖ್ಯನಿಂ
ಶ್ರೀಮಂತ್ ಕನ್ನಡದೊಳ್ ಬಳಿಕ್ಕದರ ಶೋಭಾಂಕ ದ್ವಯಾಂಕಂಗಳಂ
ರಮ್ಯದ್ರಂಗಿನ ಭೂಮಿಯೊಳ್ ಪ್ರಕಟಿಪೆಂ ಸದ್ಯುಕ್ತಪ್ರಾಂತಂಗಳಿಂ

ಬಸವಾರ್ಯರು ಹೆಚ್ಚಾಗಿ ಕಂದ ಮತ್ತು ವೃತ್ತಗಳಲ್ಲಿಯೇ ಬರೆದಿದ್ದರೂ, ಅವರ ಕಾವ್ಯವಸ್ತು ಹೊಸದಾಗಿದ್ದಾಗ ಶೈಲಿಯೂ ಅದಕ್ಕೆ ಅನುಗುಣವಾಗಿ ಮಿಡಿದಿದೆ.

ಇವ ವ್ಯಾಪಾರಿ ಬಸಪ್ಪ !

ಇಟ್ಟಿಗಿ ಬಸಪ್ಪನ ರೀತಿಗಳನ್ನು ನೆಟ್ಟಗೆ ಪೇಳುವೆ ನಾ ॥ ಪ ॥

ಪೇಟೆಯ ಕೂಟದೊಳು ಪುಟ್ಟ ಅಂಗಡಿಯನಿಟ್ಟು ಶ್ರೇಷ್ಠ ಸೆಟ್ಟಿಯು ಆಗಿ
ಮಾಟ ಮಾಡುವನಯ್ಯ ॥ ಅ ಪ ॥

ದುಡ್ಡಿನ ಜೀನಸಿಗೆ ಎರಡು ಮೂರು ದುಡ್ಡೆಂದು ಪೇಳುವನು
ದಡ್ಡ ಜನರು ಬರೆ ಯೆಡ್ಡಿಸಿ ಅವರಿಂದ ದುಡ್ಡು ಜಗ್ಗುವನಯ್ಯಾ
ಗಿಡ್ಡ ಸೆಟ್ಟಿಯು ಈತಾ ॥ ೧ ॥

ಮಾತುಗಳಿಗೆ ರೊಚ್ಚಿಗೇಳದೆ ತಾನು ನಚ್ಚಿನ ಗ್ರಾಹಕರಾ
ಮೆಚಿಸ್ಸಿ ತಾನವನ ಹುಚ್ಚು ಬಿಡಿಸಿ ಬಲು ಮೆಚ್ಚು ಮಾಡುವನಯ್ಯಾ ॥ ೨ ॥

ಹೆಚ್ಚೆಚ್ಚು ತಾ ಮಾತಾಡಿ ಉಳಿದ ಬಾಕಿಗಳನ್ನು ಇಮ್ಮಡಿಯಾಗಿ
ಬೆಳಿಸಿ ಜಗಳ ಮಾಡುವಾ ಗಳಿಕೆ ನಿಲ್ಲದು ಇಂಥಾ ಬಳಕೆಯು ತರವಲ್ಲಾ
ಕೊಳಕು ಮಾತುಗಳಿಗೆ ಒಳಿತು ಆಗುವದುಂಟೇ ॥ ೩ ॥

ಬಸವಾರ್ಯರ ದೃಷ್ಟಿ ಸಾಮಾಜಿಕವಾಗಿದ್ದಂತೆಯೇ, ಸ್ವದೇಶಾಭಿಮಾನವುಳ್ಳದೂ ಆಗಿತ್ತು. ರಾಷ್ಟ್ರಾಭಿಮಾನದಿಂದ ಕೂಡಿದ ಆವರ ಅನೇಕ ಪದ್ಯಗಳು ಒಂದು ಕಾಲಕ್ಕೆ ಕಿತ್ತೂರ ಸುತ್ತುಮುತ್ತಲೂ ಭಾರೀ ರಾಷ್ಟ್ರಕ್ರಾಂತಿಯನ್ನೇ ಉಂಟುಮಾಡಿದವು. ಅಂಥ ಪದ್ಯಗಳಲ್ಲಿ ಒಂದನ್ನು ಇಲ್ಲಿ ಕೊಟ್ಟಿದೆ :

ಧರಣಿಯೊಳಗ ಭರತಖಂಡದ ಸಿರಿಗೆ ಸರಿಗಾಣೆವೆಂದು
ಮರಮರ ಮರುಗುತ ಪರನಾಡುಗಳು ವನ
ಚರರಂತೆ ತಿರುಗುತ ಗುಡ್ಡಗಾಡಿನೊಳು
ಪರಿಪರಿಯ ಕಷ್ಟ ಹೊಂದಿದವು ಪೂರ್ವದೊಳು
ಸಿರಿಯು ಹರಿದು ಹೋಗಿ ಈಗ ತಿರಿದು ತಿಂದರಿನ್ನು ಕಣ್

ತೆರೆದ ನೋಡುವರಿಲ್ಲರೀ ಹಿಂದುಗಳು– ಎಂಥಾ
ಮರುಳಮಂದಿ ಹುಟ್ಯಾರ ನಮ್ಮ ನಾಡಿನೊಳು
ಬೆಳ್ಳಿಬಂಗಾರ ಹೊಗಿಯು ಬಹಳ ನೆಳ್ಳಗವಿಸಿ ದೇಶವೆಲ್ಲಾ
ಪೊಳ್ಳುಬಿಡದೆ ತುಂಬಿತ್ತೊ ಗಗನದೊಳು ವಿದ್ಯದ
ಕೊಳ್ಳಿ ಮಿಂಚುತಿತ್ತೊ ಹೇಮಾದ್ರಿಯೊಳು ಕಂಡು
ನಳ್ಳವರಿದು ಹೋಗುತಿದ್ರೊ ವೈರಿಗಳು
ಸುಳ್ಳಮಾತು ಅಲ್ಲೊ ಕೀರ್ತಿ ಬಳ್ಳಿ ಹಚ್ಚಿಕೊಂಡು ವೀರ
ಡೊಳ್ಳುಹೊಡೆಯುತಿತ್ತೊ ದಿಗ್ದೇಶದೊಳು ನೋಡಿ
ಬಳ್ಳ ಕಚ್ಚುವರೊ ಫಿರಂಗಿಗಳು
ವೀರರಜಪೂತ ರಣಶೂರ ಶೀಕ ಮಹಾರಾಷ್ಟ್ರ
ವೀರ ಛತ್ರಪತಿ ಮೊದಲಾದವರು ಮಹಾ
ಘೋರ ಯುದ್ಧದೊಳು ಹೋರಾಡಿದರು– ವೈರಿ
ಚೂರಚೂರ ಮಾಡಿ ಕೀರ್ತಿ ಹೊಂದಿದರು ಸಾರಿ ಹೇಳತೇನ ಕೇಳ್ರೊ
ಕೋರಿಹರಕ ಮುಂಡೇಗಂಡ್ರ್ಯಾ ಮಾರೀ ಮುಚಗೊಂಡು ಕುಂತ್ರ
ನಿಮ್ಮನ್ಯಾರ ಕೇಳುವರು........

ಈ ಲಾವಣಿ ತುಂಬಾ ಆವೇಶಪೂರ್ಣವಾದುದೂ ಸುಂದರವಾದುದೂ ಆಗಿದೆ. [೧]

ಚಂದ್ರಿಕಾವಿಜಯ (ನಾಟಕ) :

ಇದು ಐದಂಕಿನ ನಾಟಕ. ೯೭ ಪುಟದ ಈ ನಾಟಕ ಶ್ರೀಯುತರ ಮರಣಾನಂತರ ಪ್ರಕಟವಾಯಿತು. ಜೀವಿತಕಾಲದಲ್ಲಿ ಈ ನಾಟಕದ ಪ್ರಯೋಗ ನಡೆದಾಗ ಅದ್ಭುತವಾದ ಯಶಸ್ಸನ್ನು ಪಡೆಯಿತು. ಇದರಲ್ಲಿ ಸುರಾಸೇವನೆಯ ದುಷ್ಪರಿಣಾಮವನ್ನು ವಿವರಿಸುವದರಿಂದ, ಇಂದಿಗೂ ಈ ನಾಟಕ ಅಂದಿನಷ್ಟೇ ಹೊಚ್ಚ ಹೊಸದಾಗಿ ಕಾಣುತ್ತದೆ.

ಈ ನಾಟಕದಲ್ಲಿ ಬರುವ ಭೂತಕ್ಕೆ ಜತೆಗೆ ಆಡಲು ಯಾರಾದರೂ ಗೆಳೆಯರು ಬೇಕಾಗುತ್ತಾರೆ. ಸಜ್ಜನಸಿಂಗನೆಂಬ ನಿಷ್ಠಾವಂತ ಬ್ರಾಹ್ಮಣನು ಸದಾ ಪರಮಾತ್ಮನ ಧ್ಯಾನದಲ್ಲಿಯೇ ಲೀನನಾಗಿರುತ್ತಾನೆ. ಆದರೆ, ಈ ಭಗವದ್ಧ್ಯಾನ ಅವನ ಬಡತನವನ್ನು ನಿವಾರಿಸಲು ಸಾಧ್ಯವಾಗುವದಿಲ್ಲ. ಕೊನೆಗೆ, ಈ ಬ್ರಾಹ್ಮಣನಿಗೆ ಸುರಾಪಾನವನ್ನು ಮಾಡಿಸಿದ ಭೂತ ಅವನನ್ನು ತನ್ನ ಹಸ್ತಕನನ್ನಾಗಿ ಮಾಡಿಕೊಳ್ಳುತ್ತದೆ. ಈ ಬ್ರಾಹ್ಮಣ ತನ್ನ ಹೆಂಡಿರು ಮಕ್ಕಳನ್ನು ಬಿಟ್ಟು ಈ ಭೂತದ ವೈಭವಯುತ ಜೀವನದಲ್ಲಿ ಆನಂದವಾಗಿ ಇರುತ್ತಾನೆ. ಕೊನೆಗೆ ಈ ಬ್ರಾಹ್ಮಣ ತನ್ನ ಮಗನಾದ ರಾಜಸಿಂಹನಿಗೂ ಸುರಾಪಾನ ಮಾಡು ಎಂದಾಗ ಅವನು ಮಾಡುವದಿಲ್ಲ. ಇದರಿಂದ ಕ್ರುದ್ಧನಾದ ಸಜ್ಜನಸಿಂಗನು ಅವನನ್ನು ಹೊಡೆಯಲು ಖಡ್ಗ ಎತ್ತುವದರೊಳಗಾಗಿ ಹಾವು ಕಚ್ಚಿ ಸತ್ತುಹೋಗುತ್ತಾನೆ. ರಾಜಸಿಂಹನಿಗೇ ಪಟ್ಟ ಕಟ್ಟುತ್ತಾರೆ. ಅಡವಿಯಲ್ಲಿ ಕಳೆದುಹೋಗಿದ್ದ ರಾಜಸಿಂಹನ ತಂಗಿ ಚಂದ್ರಿಕೆ ಅನೇಕ ಕಷ್ಟ–ನಿಷ್ಠುರಗಳನ್ನು ಅನುಭವಿಸಿ, ವೇಶ್ಯೆಯರ ಮನೆಯಲ್ಲಿ ಇರುವ ಪ್ರಸಂಗ ಬಂದಾಗಲೂ, ಅಲ್ಲಿ ತನ್ನ ಚಾರಿತ್ರ್ಯವನ್ನು ಉಳಿಸಿಕೊಂಡು ಬಾಳಿ, ಕೊನೆಗೆ ತನ್ನ ಪ್ರಿಯಕರನಾದ ರಜನೀಶನನ್ನು ಸೇರುತ್ತಾಳೆ. ಈ ಕೃತಿಯಲ್ಲಿ ನೈಜತೆಯಿದೆ; ನಾಟಕೀಯತೆಯಿದೆ; ವಿನೋದವಿದೆ; ವೈವಿಧ್ಯವಿದೆ. ಸುರಾಪಾನನಿಷೇಧ ಮತ್ತು ಸ್ತ್ರೀ ಶಿಕ್ಷಣಗಳ ದಿವ್ಯ ಸಂದೇಶವಿದೆ.

೧ ಈ ಲಾವಣಿಯನ್ನು ಬೇರಾರೋ ಬರೆದಿದ್ದಾರೆಂದು ಕೃಷ್ಣಶರ್ಮ ಬೆಟಗೇರಿ ಹೇಳುತ್ತಾರೆ.

ಶ್ರೀಯುತರ ವಿನೋದ ದೃಷ್ಟಿಯೂ ನವುರಾಗಿದ್ದಿತು. ಇದಕ್ಕೆ ಉದಾಹರಣೆಯೆಂದು ಕಡ್ಲಿ ಚಟ್ನದ ರುಚಿ ನೋಡಿದ ಒಂದು ವರ್ಣನೆ ಇಲ್ಲಿದೆ :

ಬಲ್ ಬೇಸಿ ಕಡ್ಡಿಯಾ ಚಟ್ನಾ ತಿನ್ನಾಕ ಬಾಳ ರುಚಿಕಟ್ಟಾ ॥ ಪ ॥

ಉಪ್ಪುಕಾರ ಬಿದ್ದತಿ ಹದ ಕಟ್ಟಾ
ಬಳ್ಳೊಳ್ಳಿ ಕೂಡೇತಿ ದುಪ್ಪಟ್ಟಾ ॥ ೧ ॥

ಇಂಗು ಜೀರಿಗಿ ಹಾಕ್ಯಾಳೊ ಮುಕ್ಕಟ್ಟಾ
ಎಂದೆಂದು ತಿಂದಿಲ್ಲೊ ಹಿಕ್ಕಟ್ಟಾ ॥ ೨ ॥

ಇನ್ನೇನು ಹೇಳಲಿ ಸವಿಕಟ್ಟಾ
ಇದಕ್ಯಾವದತಿ ಪದಕಟ್ಟಾ ॥ ೩ ॥

ಶ್ರೀಯುತರ ಎಲ್ಲ ಕೃತಿಗಳು ಪುಸ್ತಕರೂಪದಲ್ಲಿ ಬಂದಿದ್ದರೆ ಕನ್ನಡ ಸಾಹಿತ್ಯ ಇನ್ನಿಷ್ಟು ಶ್ರೀಮಂತ ವಾಗುತ್ತಿತ್ತು.

—

ತ. ನಾ. ಅಮ್ಮಿನಭಾವಿ

(೧೮೭೭–೧೯೪೫)

ಶ್ರೀಯುತರು ಅಂದಿನ ಸಾಂಗಲಿ ಸಂಸ್ಥಾನದ ಒಂದು ಗ್ರಾಮವಾಗಿದ್ದ ದೊಡ್ಡವಾಡದಲ್ಲಿ ಸನ್ ೧೮೭೭ ರ ಎಪ್ರಿಲ್ ೧೩ ನೆಯ ತಾರೀಖಿನಂದು ಜನಿಸಿದರು. ಧಾರವಾಡದ ಟ್ರೇನಿಂಗ ಕಾಲೇಜದ ಪರೀಕ್ಷೆಯನ್ನು ಮಾರ್ಚ ೧೮೯೯ ರಲ್ಲಿ ಮೊದಲನೆಯ ವರ್ಗದಲ್ಲಿ ಪಾಸಾಗಿ ಶಿಕ್ಷಕರೆಂದು ನೇಮಿಸಲ್ಪಟ್ಟರು.

ಇವರೂ, ಶ್ರೀ ಗಳಗನಾಥರೂ ಕೇವಲ ಮಿತ್ರರು. ಪುಸ್ತಕ ಮತ್ತು ಇತರ ಬರಹಗಳಲ್ಲಿ ಒಬ್ಬರಿಗೊಬ್ಬರು ಸಲಹೆಗಳನ್ನು ಪಡೆಯುತ್ತಿದ್ದರು.

ಧಾರವಾಡದ ಹೆಣ್ಣುಮಕ್ಕಳ ಕಾಲೇಜದಲ್ಲಿ ಶಿಕ್ಷಕರಾಗಿ ಬಂದ ನಂತರ, ಶ್ರೀಯುತರು ಲೇಖನದಲ್ಲಿ ಆಸಕ್ತಿಯನ್ನು ವಹಿಸಿದರು. ‘ ಕನ್ನಡ ಶಿಕ್ಷಿಕೆ ’ ಎಂಬ ನಿಯತಕಾಲಿಕವನ್ನು ಕೆಲವು ವರ್ಷಗಳವರೆಗೆ ನಡೆಸುತ್ತಿದ್ದರು. ಅದರಲ್ಲಿ ಶಿಕ್ಷಣಕ್ಕೆ ಸಂಬಂಧಪಟ್ಟ ಲೇಖನಗಳನ್ನು ಬರೆಯುತ್ತಿದ್ದರು.

ಶ್ರೀಯುತರು ೫ ನೆಯ ಇಯತ್ತೆಯಿಂದ ೭ ನೆಯ ಇಯತ್ತೆಯ ವರೆಗಿನ ಎಲ್ಲ ವರ್ಗಗಳಿಗೂ, ಗಣಿತ, ಭಾಷೆ ಮತ್ತು ನಿಬಂಧ ಮೊದಲಾದ ಪುಸ್ತಕಗಳನ್ನೂ ಪತ್ರಪುಸ್ತಕಗಳನ್ನೂ ಬರೆದಿದ್ದಾರೆ. ಇದೂ ಅಲ್ಲದೆ, ‘ ವೇಣೀ ಸಂಹಾರ ’, ‘ ಮುರಾರಿ ರಾವ್ ’– ಮೊದಲಾದ ಪುಸ್ತಕಗಳನ್ನೂ ಬರೆದರು. ‘ ಮುರಾರಿ ರಾವ್ ’ ಎಂಬುದು ಒಂದು ಪತ್ತೇದಾರಿ ಕಾದಂಬರಿ.

—

ವೀರಪ್ಪ ವೀರಭದ್ರಪ್ಪ ನಾಗಸೆಟ್ಟಿ

(೧೮೭೯–೧೯೫೯)

ಇವರು ಕಿತ್ತೂರಿನ ಕನ್ನಡ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಇವರು ಹುಟ್ಟಿದ್ದು ೫–೭–೧೮೭೯ರಂದು ಹುಲಿಕೇರಿ ಎಂಬ ಹಳ್ಳಿಯಲ್ಲಿ. ಸನ್ ೧೮೯೬ರಲ್ಲಿ ಮುಲ್ಕೀ ಪರೀಕ್ಷೆ ಉತ್ತೀರ್ಣರಾಗಿ ೩೫ ವರುಷಗಳ ಕಾಲ ಶಿಕ್ಷಕರೆಂದು ಸೇವೆ ಸಲ್ಲಿಸಿ, ೫–೭–೧೯೩೪ ರಂದು ನಿವೃತ್ತರಾದರು.

" ಶ್ರೀ ವೀರಪ್ಪನವರದು ಸರಳ ಜೀವನ; ಸಾಧು ಜೀವನ; ಪ್ರಾಮಾಣಿಕ ಜೀವನ. ವಿದ್ಯಾಪ್ರೇಮ ಕಾವ್ಯ ವ್ಯಾಸಂಗದಿಂದ ತುಂಬಿದ ಜೀವನ. ಕಿತ್ತೂರಲ್ಲಿ ಓದುತ್ತಿದ್ದಾಗ ಇವರಿಗೆ ತಕ್ಕ ಗುರು ಶ್ರೀ ಬಸವಾರ್ಯ ಕಂಬಿ ಎಂಬವರು ದೊರೆತರು. ಅವರು ಕಾವ್ಯಪ್ರೇಮಿಗಳು. ಸ್ವತಃ ಕವಿಗಳು. ಅವರ ಕಾವ್ಯತೇಜವೇ ಇವರ ಹೃದಯಕ್ಕೆ ದೀಪ ಹಚ್ಚಿ ಬೆಳಗು ನೀಡಿತು........ ಶ್ರೀ ವೀರಪ್ಪನವರ ಜೀವನ, ಕಷ್ಟ–ನಷ್ಟವನ್ನನುಭವಿಸಿದೆ. ಆದರೂ ಸ್ಥಿತಪ್ರಜ್ಞತೆಯ ಸಮತೆಯಲ್ಲಿ....... ಸುಖವಾಗಿ ಸುಂದರವಾಗಿ ಮಧುರಲಲಿತವಾಗಿ ಕಂಗೊಳಿಸುತ್ತದೆ. ಇವರ ಸಾತ್ವಿಕ ಜೀವನ, ಪುರಾಣ ಪುಣ್ಯಕಥೆ ಕೇಳುವುದು, ಭಾವ ಉಕ್ಕಿ ಶಿವಸ್ತೋತ್ರ ಪದ್ಯಗಳನ್ನು ರಚಿಸುವುದು, ಪುರಾತನ ಮತ್ತು ಅದ್ಯತನ ಕಾವ್ಯಗಳನ್ನು ಓದುವುದು, ಉತ್ತಮ ಕಾವ್ಯಭಾಗಗಳನ್ನು ಬರೆದು ಸಂಗ್ರಹಿಸಿಕೊಳ್ಳುವುದು ಇವೇ ಮೊದಲಾದುವು ಇವರ ಜೀವನದ ಸಂತತ ಕಾರ್ಯಕ್ರಮ. ಇವರ ಹಳಗನ್ನಡ ಕಾವ್ಯಾಭ್ಯಾಸ ನಿಜವಾಗಿ ಅನುಕರಣೀಯವಾಗಿದೆ. " ೧

ಕನ್ನಡ ಶಾಲೆಯಲ್ಲಿ ಬಡ ಮಾಸ್ತರರಾಗಿದ್ದು, ಉಚ್ಚ ಧ್ಯೇಯಗಳಿಂದ ಪ್ರೇರಿತನಾದ ಒಬ್ಬ ಸಾಮಾನ್ಯ ವ್ಯಕ್ತಿಯ ಆದರ್ಶ ಜೀವನವನ್ನು ಮೇಲಿನ ಚಿತ್ರವು ನಮ್ಮ ಕಣ್ಣೆದುರಿಗೆ ನಿಲ್ಲಿಸುತ್ತದೆ.

ವೀರಪ್ಪನವರದು ಬಹಳ ಶಿಸ್ತಿನ ಜೀವನ. ಬಡ ಕನ್ನಡ ಶಾಲಾ ಮಾಸ್ತರರಾಗಿದ್ದರೂ, ಇದ್ದುದರಲ್ಲಿಯೇ ಹಣವನ್ನು ಉಳಿಸಿ, ಕುಟುಂಬ ಪೋಷಣೆ ಮಾಡಿ, ಹತ್ತಾರು ರೂಪಾಯಿಗಳನ್ನು ಉಳಿಸಿದರು. ತಮ್ಮ ಪ್ರೀತಿಯ ಹೆಂಡತಿ ತೀರಿಕೊಂಡ ಮೇಲೆ ಪುನಃ ಮದುವೆಯಾಗದೆ ವಿರಾಗಿಗಳಾಗಿ ಬಾಳನ್ನು ಸಾಗಿಸಿದರು. ಇಂಥ ಬಡತನದಲ್ಲಿಯೂ ಕೇವಲ ವಿದ್ಯಾದೀಕ್ಷಿತರಾಗಿ, ಪುರಾತನ ನೂತನ ಕಾವ್ಯಗಳನ್ನು ಪರಿಶ್ರಮದಿಂದ ಓದಿದರು. ತಾವು ಓದಿದ್ದನ್ನು, ಬರೆದದ್ದನ್ನು ಸುವ್ಯವಸ್ಥಿತವಾಗಿ ದಿನಚರಿಯ ಮಾದರಿಯ ಚಿಕ್ಕ ಚಿಕ್ಕ ಪುಸ್ತಕಗಳಲ್ಲಿ ಮುತ್ತಿನಂತಹ ಅಕ್ಷರಗಳಲ್ಲಿ ಬರೆದಿಟ್ಟಿದ್ದಾರೆ.

---

೧ ಶಿವಾನಂದಲಹರಿ : ವೀ. ವೀ. ನಾಗಸೆಟ್ಟಿ (ಮುನ್ನುಡಿ : ಸಂ. ಶಿ. ಭೂಸನೂರಮಠ) : ಪು. ೪.

ಒಳ್ಳೆಯ ವಿದ್ವಾಂಸರಾದ ಗಂಗಾಧರ ಮಡಿವಾಳೇಶ್ವರ ತುರಮರಿಯವರ ಹಸ್ತಲಿಖಿತ ಪತ್ರಗಳನ್ನು ಕಾಯ್ದಿಟ್ಟಿದ್ದಾರೆ. ಇದೆಲ್ಲ ಅವರ ಜತನವಾದ ಮನಸ್ಸು ಮತ್ತು ಜೀವನದ ದ್ಯೋತಕವಾಗಿದೆ.

ದಿನಚರಿ (೧೮೯೯) :

ಶ್ರೀಯುತರು 'ವೀರಪ್ಪ ವೀರಭದ್ರಪ್ಪ ನಾಗಸೆಟ್ಟಿ ಈತನ ಅಯುಃಕ್ರಮದ ಪರಿಚಯ ಪುಸ್ತಕ' ಎಂಬ ಹೆಸರಿನಲ್ಲಿ ತಮ್ಮ ದಿನಚರಿಯನ್ನು ಸನ್ ೧೮೯೯ ರಿಂದ ಪ್ರಾರಂಭ ಮಾಡಿ, ತಮ್ಮ ಸೇವಾ ನಿವೃತ್ತಿಯ ವರೆಗೂ ಇಡುತ್ತ ಬಂದಿದ್ದಾರೆ. ಈ ದಿನಚರಿಯಲ್ಲಿ ಹೆಚ್ಚಾಗಿ ಶಾಲಾ ವಿದ್ಯಾರ್ಥಿಗಳ ಸಂಖ್ಯೆ, ಅವರ ಪರೀಕ್ಷಣ, ತಮ್ಮ ವರ್ಗಾವರ್ಗಿಗಳ ರಜೆಯ ವರದಿ ಮೊದಲಾದವುಗಳೇ ಇದ್ದರೂ, ಶ್ರೀಯುತರ ಸಾತ್ವಿಕ ಮನಸ್ಸಿನ ಪರಿಚಯವನ್ನು ಮಾಡಿಕೊಡಬಲ್ಲ ಹಲವು ಉಲ್ಲೇಖಗಳೂ ಇವೆ.

ಇದು ೫–೩–೧೮ ರ ಉಲ್ಲೇಖ :

"ಸೌಭಾಗ್ಯವತಿಗೆ ಕ್ಷಯಬೇನೆ (ಬಾಣಂತಿಬೇನೆ) ಹತ್ತಿದ್ದರಿಂದ ಬೈಲಹೊಂಗಲ, ಸವದತ್ತಿಗಳಲ್ಲಿ ಯಾವದೊಂದು ಸ್ಥಳಕ್ಕೆ ವರ್ಗ ಮಾಡಬೇಕೆಂಬದಾಗಿ ಜಾ. ನಂ. ೭೧/೨೫–೧–೧೮ ರಿ (ಪೋರ್ಟ) ಬರಕೊಳ್ಳಲು ಅದಕ್ಕೂ ತುರ್ತು ಸವಡಿಲ್ಲವೆಂದು ಹುಕುಂ ದೊರೆತದ್ದಕ್ಕೆ ಪುನಃ ಜಾ.ನಂ. ೮೦/೫–೩–೧೮ ರಿ (ಪೋರ್ಟ) ಬರಕೊಳ್ಳಲು ಅದಕ್ಕೂ ತುರ್ತು ಸವಡಿಲ್ಲೆಂದು ಹುಕುಂ ದೊರೆಯಿತು. ಎರಡು ತಿಂಗಳ ಹಕ್ಕಿನ ರಜ ಮಂಜೂರಿ ಬಂತು. ಗದಿಗೆಪ್ಪ ಸ್ವಾಮಿಗಳ ಔಷಧದ ಅನುಭವ ಇನ್ನೂ ಕೆಲ ದಿವಸ ನೋಡಿ ಹಿಂದಿನಿಂದ ರಜೆಯ ಮೇಲೆ ಹೋಗುವೆನೆಂದು ಬರೆಯಲಾಗಿ ಆ ರಜೆ ರಹಿತ ಮಾಡಿತು. ಎರಡು ತಿಂಗಳ ಹಕ್ಕಿನ ರಜೆಯ ಬಗ್ಗೆ ಜಾ. ನಂ. ೧೬/೨೪–೫–೧೮ ನೇ ತಾ. ಗೆ ಬರೆದದ್ದಕ್ಕೆ ಹುಕುಂ ಸಿಗಲೇ ಇಲ್ಲ........

"ತಾ. ೧೮–೬–೧೮ ಮಂಗಳವಾರ ಸಂಜೆಗೆ ಸೌಭಾಗ್ಯವತಿಯು ಸ್ವರ್ಗಸ್ಥಳಾದಳು. ಬೈಲಹೊಂಗಲದಲ್ಲಿ ೧ ತಿಂಗಳ ರಜೆ ಅನುಭೋಗಿಸಿ ಕೆಲಸಕ್ಕೆ ಹಾಜರಾದೆನು."

"೭–೮–೧೮ ಹೆಂಡತಿ ತೀರಿಕೊಂಡಿಂದ ಕಯ್ಯಾರ ಅಡಿಗೆ ಮಾಡಿಕೊಂಡು ಮಕ್ಕಳನ್ನು ರಕ್ಷಿಸುವದು ಕಠಿಣವಾಗಿದೆ. ಕಾರಣ ತೀವ್ರ ಬೈಲಹೊಂಗಲ ಸಾಲಿಗೆ ವರ್ಗಾ ಮಾಡಿದರೆ ಉಪಕಾರವಾಗುವದು ಎಂಬ ರಿ (ಪೋರ್ಟ) ಗೆ ಹುಕುಂ ಏನೂ ದೊರೆಯಲಿಲ್ಲ."

"ಫೆಬ್ರುವರಿ ತಿಂಗಳಿಂದ ೩೪ ರೂ. (ಟಾಯಿಮ್ ಸ್ಕೇಲದಂತೆ) ಪಗಾರ ದೊರಕ ಹತ್ತಿತು."

ಆದರೆ, ಈ ೩೪ ರೂಪಾಯಿಯ ವೈಭವಪೂರ್ಣವಾದ ಟಾಯಿಮ್ ಸ್ಕೇಲ್ ಪಗಾರವನ್ನು ನೋಡಲು ಶ್ರೀಯುತರ ಪತ್ನಿಯವರು ಇರಲಿಲ್ಲ! ಇವರನ್ನು ಕುರಿತೇ 'ಗತಪತ್ನೀ ಪ್ರಲಾಪ' ಎಂಬ ಕವಿತೆಯಲ್ಲಿ ಕೆ. ಬಸವಾರ್ಯರು, ತಮ್ಮ ಶಿಷ್ಯನ ಹೆಂಡತಿಯ ಮೃತಿಗಾಗಿ ಹೀಗೆ ಹೇಳಿದರು :

ಅನ್ನದೊಳಂ ಹರಳಂ ಬಂದೊಡೆ
ನಿನ್ನಂ ಮಿಗೆ ಬಯ್ದು ಸಿಟ್ಟು ಮಾಡುತ್ತಿರ್ದೆಂ
ಇನ್ನಾರಿಗೆ ಬಯ್ವೆಂ ಪೇ
ಳಿನ್ನಾರೊಳ್ ಮುನಿವೆನಕಟ ಪೇಳ್ ನೀಂ ಚೆನ್ನೇ

ಮಗಳಂ ಪಡೆದೆಂ ನಲುವಿಂ
ಬಗೆಬಗೆ ತೊಡವುಗಳನಿಟ್ಟು ಕಡು ಸಡಗರಮಂ
ಬಗೆದುಂಬೆ ನೋಳ್ಪೆನೆನುತ
ಬಗೆಯುತಿರಲ್ ಪಾಪಿ ಮೃತ್ಯು ನಿನ್ನನೆಳದೊಯ್ದುಳ್

ಮಕ್ಕಳ್ ಕ್ರೀಡಿಸೆ ದುಃಖಂ
ಮಕ್ಕಳ್ ತಾವಳಲೊಡೆನಗೆ ದುಃಸಹ ದುಃಖಂ
ಅಕ್ಕಟ ಇಂತಿರ್ದುದೆ ಹಣೆ
ಯಕ್ಕರಮಿನ್ನೇವೆನೆನಿತು ಶೋಕಿಪೆನಹಹಾ ! ೧

ಕಂಬಿ ಬಸವಾರ್ಯರು, ನಾಗಸೆಟ್ಟಿ ವೀರಪ್ಪನವರು– ಈ ಇಬ್ಬರೂ ಗುರು–ಶಿಷ್ಯರಲ್ಲಿಯ ಸಂಬಂಧ ಇಷ್ಟು ಅನ್ಯೋನ್ಯವಾಗಿದ್ದಿತು. ಶಿಷ್ಯನ ಹೆಂಡತಿಯ ಮರಣದ ವಾರ್ತೆ ಅಷ್ಟರ ಮಟ್ಟಿಗೆ ಬಸವಾರ್ಯರ ಮನಸ್ಸಿನ ಮೇಲೆ ಪರಿಣಾಮವನ್ನು ಮಾಡಿತು.

ವೀರಪ್ಪನವರ ದಿನಚರಿಯಲ್ಲಿ ಬಸವಾರ್ಯರ ನಿಧನದ ಬಗೆಗೆ ಹೀಗೆ ಉಲ್ಲೇಖವಿದೆ :

“ ೨೭–೩–೨೧ ನೇ ರವಿವಾರ ದಿವಸ ನೇಗಿನಹಾಳದಲ್ಲಿ ಗು. ವ. ಬಸವಾರ್ಯ ಮಾಸ್ತರರು ಇನ್‌ಫ್ಲುಎಂಝಾದಿಂದ ಶಿವಾಧೀನರಾದರು. ಶಕೆ ೧೮೪೨ ಫಾಲ್ಗುಣ ವದ್ಯ ೪. ”

ಬಸವಾರ್ಯರ ನಿಧನದ ಬಗೆಗೆ ವೀರಪ್ಪನವರು ಈ ಕವಿತೆಯನ್ನು ಬರೆದರು :

ಕರುವನರಣ್ಯಮಧ್ಯದೊಳು ಬಿಟ್ಟು ತೊಲಂಗಿದ ಗೋವಿನಂದದಿಂ
ಗುರುವರನೇ ಇದೇಂ ನೆಗಳ್ದೆ ನೀನಗಲ್ದೆಮ್ಮನು ಪೋದೆಯೆಲ್ಲಿಗೆ
ದೊರೆವರದಾರ್ ವಿಚಾರಿಪೊಡೆ ಸದ್ಗುರು ನಿನ್ನ ಸಮಾನರಪ್ಪರೀ
ಧರೆಯೊಳ್ ಶಿಷ್ಯವತ್ಸಲತೆಯಿಂ ಸಲೆ ಶಿಕ್ಷಣವೀವ ಶಿಕ್ಷಕರ್

ಒರೆವುದದೇಂ ಗೌರೀಶಂ
ವರಶಾಂತಕವೀಂದ್ರ ವಾಸುದೇವಾಚಾರ್ಯರ್
ತೊರೆದು ತೆರಳ್ದೆಮ್ಮಳಲಂ
ಮರೆಯಿಸದಿಮ್ಮಡಿಸಿ ಪೋದೆಯ್ಯ ಬಸವಾರ್ಯಾ

ನಿನ್ನಂದದ ಸತ್ಕವಿಗಳ್
ನಿನ್ನಂದದ ಸುಂದರಾಕ್ಷರಂಗಳ ಲಿಖಿಪರ್
ನಿನ್ನಂದದ ಗುಣಶಾಲಿಗ
ಳಿನ್ನೇಂ ಕರ್ನಾಟಕಾಂಬೆಯುದರದೊಳುದಿಪರ್

೧ ಪ್ರಭಾತ : ಮೇ–ಜೂನ್ ೧೯೧೯ ; ಪು. ೧೨–೧೩.

ಬಸವಾರ್ಯನೇ ! ನೀಂ ರಚಿಸಿಹ
ವಿಷಮುವಿವಾಹಂ ಸುಚಂದ್ರಿಕಾನಾಟಕಮ್
ಎಸೆವ ಸಮಾಜಾದರ್ಶಂ
ರಸೆಯೊಳ್ ಪೆಸರೊಂದಿ ಬಾಳ್ಗೆಮಾಚಂದ್ರಾರ್ಕಂ

ಇವು ಭಾಷೆ ಮತ್ತು ದೇಶವಿಷಯಕ ಉಲ್ಲೇಖಗಳು :

" ೨೬-೧೨-೨೭ : ೬-೧೨-೨೭ ರ ಸರಕ್ಯೂಲರದಂತೆ ನಾನು ಇನ್ನು ಮೇಲೆ ಕನ್ನಡದಲ್ಲಿಯೇ ಸಹಿ ಮಾಡುವೆನೆಂದು ಹುಜೂರಿಗೆ ತಿಳಿಸಿದೆನು. "

" ಮ. ಗಾಂಧಿಯವರ ಫೋಟೋ ಇಡುವ ಬಗ್ಗೆ ಹುಡುಗರ ಹಟದ ಗೊಂದಲವಾಗಿ ಜನರ ಉತ್ತೇಜನದಿಂದ ಹುಡುಗರು ಬರುವದನ್ನು ಬಿಟ್ಟವು. "

" ೧೮-೭-೩೦ ದಿವಸ ಮುಂಜಾನೆ ಒಂಬತ್ತೂವರೆ ಗಂಟೆಗೆ ಊರೊಳಗಿನ ಬಹು ಜನರು ಶಾಲಾಪಂಚರು ಕೂಡಿ ಬಂದು ಫೋಟೊ ಇಟ್ಟರು. "

" ೨೩-೭-೩೦ ಮೆ|| ಆ. ಸಾಹೇಬರವರು ಬಂದು ನಮ್ಮನ್ನು ಜಬರಸಿ ತೆಗೆಯುವ ಬಗ್ಗೆ ಹೇಳಿ ಶರಾ ಬರೆದದ್ದು ಹಾಗು ಹೋಗಿ ತಾರು ಮಾಡಿದ ಮೇರೆಗೆ ಫೋಟೋ ತೆಗೆಯಿತು. "

" ಶ್ರೀ ಗುರುಪಾದಪ್ಪನವರ ಪತ್ರದಂತೆ ಯಕ್ಕುಂಡಿಗೆ ಹೋಗಿ ಅವರು ಭಾಷಾಂತರಿಸಿದ ಬ್ರಹ್ಮ ಸಿದ್ಧಾಂತ ಮಾಲೆಯ ಪುಸ್ತಕದ ಸ್ವಚ್ಛಪ್ರತಿಯನ್ನು ಬರೆದು (ಬಂದೆನು). "

" ಷಡಕ್ಷರದೇವನ ರಾಜಶೇಖರ ವಿಲಾಸವನ್ನು ಸಂಗ್ರಹರೂಪವಾಗಿ ಬರೆಯಲು ಹವಣಿಸಿ ಶ್ರೀ ವೀರಪ್ಪನವರು ೧-೨ ಅಧ್ಯಾಯಗಳನ್ನು ವಾರ್ಧಿಕ ಷಟ್ಪದಿಯಲ್ಲಿ ಬರೆದಿದ್ದಾರೆ. ಅನೇಕ ಸ್ತೋತ್ರ ಪದ್ಯಗಳನ್ನೂ ಹಾಡುಗಬ್ಬಗಳನ್ನೂ ಇವರು ರಚಿಸಿದ್ದಾರೆ. ಬಾಣಕವಿಯ ಕಾದಂಬರಿ ಯನ್ನು ಸುಮನೋಜ್ಞವಾದ ಶೈಲಿಯಲ್ಲಿ ಕನ್ನಡಿಸಿ, ಪ್ರಸಿದ್ಧಿಸಿದ, ಕನ್ನಡಿಗರಿಗೆ ಚಿರಪರಿಚಿತರಾದ ಶ್ರೀ ಗಂಗಾಧರ ಮಡಿವಾಳೇಶ್ವರ ತೂರಮರಿಯವರ ಸಂಕ್ಷಿಪ್ತ ಚರಿತ್ರೆಯನ್ನು ಇವರು ಬರೆದಿದ್ದಾರೆ. ಇವರ ವಜ್ರದುಂಗುರ ಮುಂತಾದ ಸಣ್ಣ ಕತೆಗಳು ತರುಣ ಕರ್ನಾಟಕದಲ್ಲಿ ಪ್ರಕಟವಾಗಿವೆ. ಕೆಲವು ' ಸಮಸ್ಯಾ ' ಪದ್ಯಗಳನ್ನು ಮತ್ತು ಸಮಸ್ಯಾ ಪದ್ಯಗಳಿಗೆ ಉತ್ತರ ರೂಪಕವಾದ ಪದ್ಯಗಳನ್ನು ಇವರು ಬರೆದಿದ್ದಾರೆ. ಇಂಥ ಕೆಲ ಪದ್ಯಗಳು ' ಶ್ರೀಕೃಷ್ಣ ಸೂಕ್ತಿ ' ಎಂಬ ಕನ್ನಡ ಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಗಿವೆ. " [೧]

ಶಿವಾನಂದ ಲಹರಿ :

ಇದೂ ಬಹಳ ತಡವಾಗಿ ಶ್ರೀಯುತರ ಜೀವನದ ಸಂಧ್ಯಾಕಾಲದಲ್ಲಿ ಪ್ರಕಟವಾಯಿತು. ಇದು ಆದಿಶಂಕರಾಚಾರ್ಯರು ಸಂಸ್ಕೃತದಲ್ಲಿ ರಚಿಸಿದ ಶಿವಾನಂದ ಲಹರಿಯ ಕನ್ನಡಾನುವಾದ. ಶಂಕರ ಭಗವತ್ಪಾದರ ಶಿವಾನಂದ ಲಹರಿಯನ್ನು " ಹಾಡಿ ಹಾಡಿ ನಲಿದಾಡಿದ ಭಕ್ತರಲ್ಲಿ " ವೀರಪ್ಪನವ ರೊಬ್ಬರು. " ಶ್ರೀ ಶಂಕರಾಚಾರ್ಯರ ಭಾಷಾ ಪ್ರಭುತ್ವವಾಗಲಿ ಹೃದಯ ಪರಿಪಾಕವಾಗಲಿ ನನ್ನಲ್ಲಿಲ್ಲ. ಅವರ ಭಕ್ತಿಭಾವದ ಒಂದು ಕಿಡಿಯು ನನ್ನ ಬಾಳಿನಲ್ಲೊಂದು ದಾರಿದೀಪವಾಗಿ ಬೆಳಗಿ ನನ್ನ ಜೀವನವನ್ನು ಪಾವನಗೊಳಿಸಿದೆ. ಅದರದೊಂದಂಶವು ಕನ್ನಡ ಶಿವಾನಂದ ಲಹರಿಯಲ್ಲಿಳಿ

೧ ಶಿವಾನಂದಲಹರಿ : ವೀ. ವೀ. ನಾಗಸೆಟ್ಟಿ (ಮುನ್ನುಡಿ : ಸಂ. ಶಿ. ಭೂಸನೂರಮಠ) : ಪು. ೫.

ದಿದ್ದರೆ ಕನ್ನಡ ಭಕ್ತರಿಗೂ ಆ ಪುಣ್ಯವು ಲಭಿಸೀತೆಂದು ನಂಬಿದ್ದೇನೆ '' ಎಂದು ಲೇಖಕರು ಅರಿಕೆಯಲ್ಲಿ ಹೇಳಿಕೊಂಡಿದ್ದಾರೆ.

ಪುಸ್ತಕದಲ್ಲಿ ಮೂಲ ಸಂಸ್ಕೃತದ ಅವತರಣಿಕೆಯನ್ನು ಕೊಟ್ಟು, ನಂತರ ವಾರ್ಧಿಕ ಷಟ್ಪದಿಯಲ್ಲಿ ಭಾಷಾಂತರವನ್ನು ಕೊಡಲಾಗಿದೆ. ಉದಾಹರಣೆಗಾಗಿ ಈ ಕೆಳಗಿನ ಪದ್ಯವನ್ನು ಕೊಡಬಹುದು :

ನಿತ್ಯಾಯ ತ್ರಿಗುಣಾತ್ಮನೇ ಪುರಜಿತೇ ಕಾತ್ಯಾಯನೀಶ್ರೇಯಸೇ
ಸತ್ಯಾಯಾದಿ ಕುಟುಂಬಿನೇ ಮುನಿಮನಃಪ್ರತ್ಯಕ್ಷಚಿನ್ಮೂರ್ತಯೇ
ಮಾಯಾಸೃಷ್ಟಜಗತ್ತ್ರಯಾಯ ಸಕಲಾಮ್ನಾಯಾಂತಸಂಚಾರಿಣೇ
ಸಾಯಂ ತಾಂಡವ ಸಂಭ್ರಮಾಯ ಜಟಿನೇನೇಯಾನತಿಶ್ಯಂಭವೇ ೧

ನಿತ್ಯಂಗೆ ತ್ರಿಗುಣಾತ್ಮಕಂಗೆ ತ್ರಿಪುರಹರಂಗೆ
ಕಾತ್ಯಾಯನೀವಲ್ಲಭಂಗೆ ಮುನಿಗಳ ಮನಕೆ
ಪ್ರತ್ಯಕ್ಷವಾಗುತಿಹ ಸುಜ್ಞಾನರೂಪಂಗೆ ಸಾಂಬಗಾದಿಕುಟುಂಬಗೆ
ನಿತ್ಯಂಗೆ ಮಾಯೆಯಿಂ ತ್ರಿಜಗಮಂ ಪೆತ್ತಂಗೆ
ಶೃತ್ಯಂತಗಳೊಳು ಸಂಚರಿಪಂಗೆ ಶಂಭುವಿಂ
ಗತ್ಯಂತ ಭಕ್ತಿಯಿಂ ಮೊಳ್ಗುವೆಂ ಸಂಧ್ಯಾನಟನ ಸಂಭ್ರಮಂಗೆ ಜಟಿಗೆ ೨

ಆಯುಃಕ್ರಮದ ಪರಿಚಯ ಪುಸ್ತಕ (೧೮೯೯–೧೯೩೪) :

ಇದರಲ್ಲಿ ಶ್ರೀಯುತರು ತಮ್ಮ ದಿನನಿತ್ಯದ ದಿನಚರಿಯನ್ನು ಬರೆದಿದ್ದಾರೆ. ಇದರಲ್ಲಿಯ ಹಲವು ಉಲ್ಲೇಖಗಳನ್ನು ಈ ಮೊದಲೇ ಕೊಡಲಾಗಿದೆ. ಇದು ಅಪ್ರಕಟಿತ.

ಗಂಗಾಧರ ನುಡಿವಾಳೇಶ್ವರರ ಚರಿತ್ರೆ :

ಇದರ ಉಲ್ಲೇಖವನ್ನೂ ಈ ಮೊದಲೇ ಮಾಡಿಯಾಗಿದೆ. ಗಂಗಾಧರಯ್ಯನವರ ಪತ್ರಗಳನ್ನು ಕಾಯ್ದಿಡುವಲ್ಲಿ ಶ್ರೀಯುತರ ಇತಿಹಾಸದೃಷ್ಟಿಯನ್ನು ಕಾಣುತ್ತೇವೆ.

ಕೆ. ಬಸವಾರ್ಯರ ಪದಪದ್ಯಗಳು :

ಇದರಲ್ಲಿ ಗುರುಗಳಾದ ಬಸವಾರ್ಯರು ರಚಿಸಿದ ಕವನಗಳನ್ನೂ ಲಾವಣಿಗಳನ್ನೂ ಬಹಳ ಜತನವಾಗಿ, ಓರಣವಾಗಿ, ಶ್ರೀಯುತರು ಬರೆದು ಸಂಗ್ರಹ ಮಾಡಿದ್ದಾರೆ. ಇದೂ ಅಪ್ರಕಟಿತ.

ಅಲ್ಪ ಕೃತಿಗಳು :

ಇದರಲ್ಲಿ ಶ್ರೀಯುತರು ತಾವು ಸ್ವಂತ ರಚಿಸಿದ ಅನೇಕ ಕವನಗಳನ್ನು ಬರೆದಿಟ್ಟಿದ್ದಾರೆ. ಇವುಗಳಲ್ಲಿ ಬಹುಮಟ್ಟಿನ ಕವನಗಳು ಪ್ರಕಟವಾಗದೆಯೇ ಉಳಿದಿವೆ. ಇವುಗಳಲ್ಲಿ ಹಲವು ವೃತ್ತ ಮತ್ತು ಕಂದಗಳ ರೂಪದಲ್ಲಿಯೂ, ಹಲವು ಹಾಡಿನ ಮಟ್ಟದಲ್ಲಿಯೂ ಇವೆ. ಕೆಲವು ಅನ್ಯಕವಿ

---

೧ ಶಿವಾನಂದ ಲಹರಿ : ಪು. ೩.

೨ ಅದೇ : ಪು. ೨೯.

ಕೃತಗಳೂ ಇರಬಹುದೇನೊ! ಇವುಗಳಲ್ಲಿ ಹಲವನ್ನು ಸಂಸ್ಕೃತದಿಂದ ಅನುವಾದ ಮಾಡಲಾಗಿದೆ. ಉದಾಹರಣೆಗೆ:

ಹರನೊರಗಿರ್ಪಂ ಹಿಮಭೂ
ಧರದೊಳ್ ಹರಿ ಮಲಗಿಹಂ ಸುಧಾಂಭೋನಿಧಿಯೊಳ್
ಸರಸಿಜದೊಳ್ ಪಟ್ಟಿರ್ಪಂ
ವಿರಂಚಿ ತಗುಣಿಗಳ ಕಾಟದಂಜಿಕೆಯಿಂದಂ

ಇದರ ಸಂಸ್ಕೃತ ಮೂಲ:

ಹರಿಃ ಕ್ಷೀರಾಂಬುಧೌ ಶೇತೇ
ಹರಃ ಶೇತೇ ಹಿಮಾಲಯೇ
ಕಮಲೇ ಕಮಲಾ ಶೇತೇ
ಮನ್ಯೇ ಮತ್ಕುಣಶಂಕಯಾ

ಹಾಗೆಯೇ, ಈ ಕೆಳಗಿನವುಗಳನ್ನೂ ಗಮನಿಸಬಹುದು. ಬಲ್ಲವರೇ ವಸ್ತುವಿನ ಬೆಲೆಯನ್ನು ಬಲ್ಲರು. ಅರಿಯದವರಿಗೆ ಅದರ ಬೆಲೆಯೇನು ಗೊತ್ತು?

ಅರಿಯನಾವನದಾವವೊಡವೆಯೊ
ಳಿರುವ ಗುಣಾಧಿಕ್ಯವನು ತಾಂ
ನೆರೆ ಜರೆವನವನಾವೊಡವೆಯುಂ ಚಿತ್ರಮೇನಿದರೊಳ್
ಕರಿಯ ಕುಂಭಸ್ಥಳದ ಮುತ್ತದು
ದೊರೆದಿರಲದಂ ತೊರೆದು ಬೇಡತಿ
ಪರಮ ಸಂತೋಷದೊಳಂ ಗುರುಗುಂಜಿಯು ಧರಿಪಳಲ್ತೇ

–ಬಾಯಿಗೆ ಏನಾದರೂ ಬೆಣ್ಣೆ ಸವರಿದರೇ, ಮನುಷ್ಯನಿಂದ ಕೆಲಸ ಸಾಧ್ಯ!

ವಶವಾಗದಿರ್ಪನಾವಂ
ವಸುಮತಿಯೊಳ್ ಬಾಯ್ಗಗದೇನನಾದೊಡವೊರಸಲ್
ಎಸಗುಗುಮಲ್ತೆ ಮೃದಂಗಂ
ನಿಸದಂ ಮುಖಲೇಪದಿಂದೆ ಮಧುರಧ್ವನಿಯಂ

–ಶ್ರೀಮಂತರಿಗೇ ಜನರ ಸಹಾಯ! ಬಡವರನ್ನು ಕೇಳುವವರಾರು?

ಅಡವಿಯುಮಂ ಬಣವೆಯುಮಂ
ಸುಡುವನಲಂಗನಿಲನೊಲ್ದು ನೆರವಂ ಮಾಳ್ಪಂ
ಸೊಡರಂ ನಾಶಿಪನವನೇ
ಬಡವರ ಕೆಳೆತನ ಮಾಳ್ಪರಾರ್ರೈ ಜಗದೊಳ್

–ಹಣವೆಂದರೆ ಹೆಣ ಸಹ ಬಾಯಿ ತೆರೆಯುತ್ತದೆ.

ಧನಧನವೆಸಂತಿರೆ ನಿಶ್ಚೇ
ತನಮಾದ ನಗಾರಿಯುಂ ಸಚೇತನನಾದಾ

ಮನುಜಂ ನಿರುತಂ ಧನಧನ
ವೆನುತಿಹುದೇನರಿದೆ ಧನಕ್ಕೆ ಬಾಯ್ದೆರೆಯದರಾರ್ ॥

–ದುಡ್ಡೇ ದೊಡ್ಡಪ್ಪ ! ಯಸ್ಯಾಸ್ತಿ ವಿತ್ತಂ– ಹಣವಿಲ್ಲದವ ಹೆಣ !

ಜರೆವಳ್ ತಾಯ್ ತೆಗಳ್ವಂ ಪಿತಂ ನುಡಿಯನಾಡರ್ ಪ್ರೇಮದಿ ಸೋದರರ್
ಪರಿಚಾರಂ ಮುಳಿವಂ ಸುತಂ ನುಡಿಯ ಕೇಳಂ ಸೇರಳಾಪೆಂಡತಿಯುಂ
ಎರೆವಂ ದ್ರವ್ಯವನೆಂಬ ಸಂದೆಯುದೆ ಮಾತಾಡರ್ ಸಖರ್ ದೀನನಂ
ಸಿರಿಯಂ ನೀಂ ಗಳಿಸಾತ್ಮಜಾ ಸಿರಿಯಿನೆಲ್ಲರ್ ವಶ್ಯರೀಧರಿತ್ರಿಯೊಳ್ ॥

ವೀರಪ್ಪನವರು ವೀರಶೈವರು. ಆದರೂ, ಅವರ ಸಂಗ್ರಹದಲ್ಲಿದ್ದ 'ಗೋವಿಂದ' ಎಂಬ ಕವನ ಗಮನಾರ್ಹವಾಗಿದೆ. ವೀರಶೈವ ಕವಿಯೊಬ್ಬ 'ಗೋವಿಂದ ಎಂದೆನ್ನಿರಿ' ಎಂದು ಹೇಳಿದುದು ಮಾತ್ರವಲ್ಲದೆ, ಇದರಲ್ಲಿಯ ಶ್ಲೇಷವೂ ಮನೋಜ್ಞವಾಗಿದೆ ! ಇದನ್ನು ಇವರೇ ಬರೆದಿರಬಹುದೇ ವಿಚಾರ ಮಾಡಬೇಕು.

'ಗೋವಿಂದ' ಎಂದೆನ್ನಿರಿ !

ಧರೆಯೊಳಗೆ ಕೃಷಿಕಾರ್ಯವೆಲ್ಲವೂ ಗೋವಿಂದ !
ಶರಣಜನ ಧರಿಸುವ ವಿಭೂತಿಯೂ ಗೋವಿಂದ !
ಪರಮತರವಾದ ಪಾಲ್ಬೆಣ್ಣೆ ಮೊದಲಾದವೂ ಗೋವಿಂದ ಭಾರತದೊಳು
ಮೆರೆವ ಪಟ್ಟಮ್ಮಾರ್ಜನಂಗಳೂ ಗೋವಿಂದ !
ಪರಮೇಶ್ವರಂಗೆ ಅಭಿಷೇಕವೂ ಗೋವಿಂದ !
ಅರಿದು ನೋಡಲ್ಕೆ ಜಗವೆಲ್ಲವೂ ಗೋವಿಂದ ಗೋವಿಂದ ಎಂದೆನ್ನಿರೈ ॥

'ಗೋವಿಂದ' ಎಂದು ಅನ್ನಿರಿ
'ಗೋವಿಂದಂ' ಎಂದು ನುಡಿಯಿರೀ ಜಗವೆಲ್ಲಾ
'ಗೋವಿಂದ' ಎಂದು ತಿಳಿಯಿರಿ
'ಗೋವಿಂದ' ಬಾಳ್ವೆ ಭಾರತೀಯರೆ ನಿಮ್ಮಾ ॥

ಕವಿ ಚೋರಾಗ್ರಣಿಯಂತೆ ! ಅವನು ಎಲ್ಲವರಲ್ಲಿಯ ಒಳ್ಳೆಯುದನ್ನು ಹರಣ ಮಾಡುವವನು ಎಂಬ ಈ ಕೆಳಗಿನ ಸಂಸ್ಕೃತ ಪದ್ಯದ ಭಾಷಾಂತರವನ್ನು ವೀರಪ್ಪನವರು ಎಷ್ಟು ಸುಲಲಿತವಾಗಿ ಮಾಡಿದ್ದಾರೆಂಬುದನ್ನು ನೋಡಬಹುದು :

ಸಂಸ್ಕೃತ :

ಮಂದಂ ನಿಕ್ಷಿಪತೇ ಪದಾನಿ ಪರಿತಃ ಶಬ್ದಂ ಸಮುದ್ವೀಕ್ಷತೇ
ನಾನಾರ್ಥಾಹರಣಂ ಚ ಕಾಂಕ್ಷತಿ ಮುದ್ರಾಲಂಕಾರಮಾಕರ್ಷತಿ
ಆಧತ್ತೇ ಸಕಲಂ ಸುವರ್ಣನಿಚಯಂ ಧತ್ತೇ ರಸಾಂತರ್ಗತಂ
ದೋಷಾನ್ವೇಷಣತತ್ಪರೋ ವಿಜಯತೇ ಚೋರೋಪಮಃ ಸತ್ಕವಿಃ ॥

ಅನುವಾದ :

ಪದಗಳಂ ಮೆಲ್ಲನಿಡುವಂ ನೆರೆಯ ಶಬ್ದಮಂ
ಪದಪಿಂ ನಿರೀಕ್ಷಿಪಂ ನಾನಾರ್ಥಹರಣಮಂ

ಮುದದಿಂದಪೇಕ್ಷಿಪನಲಂಕಾರಗಳನೆಳೆದುಕೊಂಬನನುರಾಗದಿಂದ
ಚದುರೀ ರಸಾಂತರ್ಗತ ಸುವರ್ಣ ಚಯುವ ಮಾ
ಣದೆ ಸಂಗ್ರಹಂಗೆಯ್ವನಮಮ ! ದೋಷಾನ್ವೇಷ
ಣದೊಳು ತತ್ಪರನಿರ್ದು ಸತ್ಕದಿ ವಿರಾಜಿಪಂ ಚೋರಾಗ್ರಗಣ್ಯನಂತೆ ॥

ಇದರಂತೆಯೇ, ಗೋವಿನ ಕಥೆಯ ಮಟ್ಟದಲ್ಲಿ ಬಿದಿರಿನ ಬಗ್ಗೆಯೂ ಬರೆದ ಒಂದು ಕವನ ಅವರ ಸಂಗ್ರಹದಲ್ಲಿ ದೊರಕುತ್ತದೆ.

ಏ ಚದುರೇ ನೀ ಯಾರಿಗಲ್ಲದವಳು ? ॥ ಪ ॥

ಹುಟ್ಟುತಲಿ ಹುಲ್ಲಾದಿ ಬೆಳೆವುತಾ ಬೇರಾದಿ
ಉಣಬಲ್ಲ ಜಾಣರಿಗೆ ಉಪ್ಪಿನಕಾಯಿಯಾದಿ ॥ ೧ ॥

ಅಡ್ಡಡ್ಡ ಬೆಳೆದು ನೀ ಸಡ್ಡಿಯ ಕೋಲಾದಿ
ಗಡ್ಡ ಬಂದ್ಹಿರಿಯರಿಗೆ ಊರುವ ಕೋಲಾದಿ ॥ ೨ ॥

ಪ್ಯಾಟಿಗೆ ಪಡಿಯಾದಿ ಕೂಟಿಗೆ ಬೇಲ್ಯಾದಿ
ನೀಟುಳ್ಳ ಹುಡುಗರಿಗೆ ಬ್ಯಾಟಿಯಾ ಬಡಿಗಾದಿ ॥ ೩ ॥

ಎಲೆಯ ಸಂಬಳಿಗ್ಯಾದಿ ಎಣ್ಣೆಯಾ ಲಳಿಗಾದಿ
ಚದುರೇರ ಕೈಯಾನ ಮುತ್ತೈದೆ ಮರವಾದಿ ॥ ೪ ॥

ಅಂದದಲಿ ಹುಟ್ಟಿದೆ ಚಂದದಲಿ ಬೆಳೆದೆ
ತಂದಿ ವಿರೂಪಾಕ್ಷನಿಗೆ ನಂದಿಯ ಕೋಲಾದಿ ॥ ೫ ॥

ಕರ್ನಾಟಕ ಲೋಕೋಕ್ತಿ ನಿಧಾನ :

ಇದೂ ಅಪ್ರಕಟಿತ. ಇದರಲ್ಲಿ ಸುಮಾರು ೪೨೯ ಗಾದೆಮಾತುಗಳನ್ನು ಸಂಗ್ರಹಿಸಲಾಗಿದೆ. ಇವುಗಳ ಆಕರ ತಿಳಿಯುವಂತಿಲ್ಲ. ಬಹುಶಃ ಇವು ಗ್ರಂಥಸ್ಥವಾಗಿಯೂ ಮತ್ತು ಜನವಾಣಿಯಲ್ಲಿಯೂ ಇದ್ದಂತೆ ಕಾಣುತ್ತವೆ. ಇವುಗಳಲ್ಲಿ ಎಷ್ಟೋ ಅತಿ ನೂತನವಿದ್ದಂತೆ ಕಾಣುತ್ತವೆ. ಅವುಗಳಲ್ಲಿ ಹಲವನ್ನು ಕೊಡಬಹುದು :

ಅಕ್ಕ ಸತ್ತಗಂಡನದು ಹೇಳಿದರೆ, ತಂಗಿ ಇದ್ದ ಗಂಡನದು ಹೇಳಿದಳು.
ಅಂಗೈ ಹಾಗೆ ಹೊಲ ಮಾಡಿದರೆ, ಮುಂಗೈ ತುಂಬ ತುಪ್ಪ.
ಅಡವಿಯ ದೊಣ್ಣೆ, ಪರದೇಶಿಯ ತಲೆ.
ಅಡಿಗೆಯಾಗುವ ತನಕ ನಿಂತು, ಆರುವ ತನಕ ನಿಲ್ಲಲಿಲ್ಲ.
ಅರಸನಿಗೆ ಆರು ಬಾಯಿ, ತಿರುಕನಿಗೆ ಒಂದೇ ಬಾಯಿ.
ಅರಿಯದೆ ಮಾಡಿದ ಪಾಪ, ಅರಿತಂದು ಪರಿಹಾರ.
ಆಕಾಶ ನೋಡಬೇಕಾದರೆ ನೂಕಾಟ ಯಾಕೆ ?
ಇಕ್ಕಲಾರದ ಕೈ ಎಂಜಲು.
ಇಕ್ಕುವವಳು ನಮ್ಮವಳಾದರೆ ಕೊಟ್ಟಿಗೆಯಲ್ಲಾದರೂ ಉಣಬಹುದು.

ಇಪ್ಪತ್ತಕ್ಕೆ ಹಾದರ ಎಪ್ಪತ್ತಕ್ಕೆ ಬಂದ್ಧಿ.
ಎಮ್ಮೆಗೆ ಎರಡು ಕೋಡು, ಹೆಮ್ಮೆಗೆ ಎಂಟು ಕೋಡು.
ಎರೆಹೊಲ ಇರಬೇಕು, ಕರೆ ಹೆಂಡತಿ ಇರಬೇಕು.
ಕಡಹುಟ್ಟಿ ಬಡವ ಕೆಟ್ಟ.
ಕತ್ತೆಯ ಕಾಲು ಮುರಿದರೇನು ? ನಾಯಿಯ ಹಲ್ಲು ಮುರಿದರೇನು ?
ಕೂತುಕೊಂಡು ಹೇಳುವವನ ಕೆಲಸ ಊರು ಮಾಡಿದರೂ ತೀರದು.
ಕೆಲಸಗಳ್ಳಿಗೆ ಕೂಸು ಹುಟ್ಟಿತು.
ಜರೆದು ಕೊಳ್ಳಬೇಕು, ಹೊಗಳಿ ಮಾರಬೇಕು.
ದಂಡಿನಾಗ ಕೆಟ್ಟದ್ದು ಹಾದರಲ್ಲ, ಬರದಾಗ ಕೆಟ್ಟದ್ದು ಕಳವಲ್ಲ.
ದುಡ್ಡಿಗೆ ನೂರು ಕುರುಳುಗಳಾದರೆ, ಸುಟ್ಟುಕೊಂಡು ಸಾಯುವವರಾರು ?
ಸೆಟ್ಟೀ, ಹೇಸಿಗೆ ಮೆಟ್ಟೀ ಅಂದರೆ ತಿಂದರೇನು ಕೊಟ್ಟೀ ಅಂದ.
ಹಾರುವನ ಆಳಾಗಬೇಡಾ, ಗಾಣಿಗನ ಎತ್ತಾಗಬೇಡಾ.
ತಾನು ಗರತಿಯಾದರೆ, ಸೂಳೆಗೇರಿಯಲ್ಲಿ ಮನೆಕಟ್ಟು.

ಈ ರೀತಿ ಕೇವಲ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಒಂದು ಸಾದಾ ಗ್ರಾಮದಲ್ಲಿ ತಮ್ಮ ಜೀವನವನ್ನು ಸಾಗಿಸಿದರೂ, ಶ್ರೀ ವೀರಪ್ಪನವರು ತಮ್ಮ ಶುದ್ಧ ಚಾರಿತ್ರ್ಯ, ಅಭ್ಯಾಸ, ವಿದ್ಯಾರ್ಥಿಪ್ರೇಮ, ಗುರುಭಕ್ತಿ ಮತ್ತು ಕಾವ್ಯಪ್ರೀತಿಗಳ ಮೂಲಕ ನಾಡಿನ ಸೇವೆಯನ್ನು ಸಲ್ಲಿಸಿದರು.

—

ಗುರುಪಾದಪ್ಪ ಹೊಂಗಲ

(೧೮೮೦– ?)

ಶ್ರೀಯುತರು ಕಿತ್ತೂರಿನ ವೀರಪ್ಪ ನಾಗಸೆಟ್ಟಿಯವರ ಸಂಬಂಧಿಕರು. ಇವರು ಪ್ರಾಮುಖ್ಯ ವಾಗಿ ಕೀರ್ತನಕಾರರು. ಇವರ ಒಂದೆರಡು ಕವನಗಳು ಪ್ರಭಾತದಲ್ಲಿ ಪ್ರಸಿದ್ಧವಾಗಿವೆ. ಇವರು ಶಕೆ ೧೮೦೨ ರ ಭಾದ್ರಪದ ಶುದ್ಧ ವಿಜಯದಶಮಿ ದಿವಸ ಜನಿಸಿದರು. ಇವರ ಧರ್ಮಪತ್ನಿಯವರ ಹೆಸರು ವೀರವ್ವ ಉರ್ಫ ತಂಗೆವ್ವ.

'ಶಮೀ ಸಮರ್ಪಣವಿಜ್ಞಪ್ತಿ' ಎಂಬ ಕವನದಲ್ಲಿ ಅವರ ಪ್ರೌಢ ಕಾವ್ಯಶೈಲಿಯನ್ನೂ, 'ಕಂಡುಂ ಪೇಳನೆಂತಾ ಬುಧಂ' ಎಂಬ ಕವಿತೆಯಲ್ಲಿ ಅವರ ಕಲ್ಪಕತೆ ಮತ್ತು ಸಮಾಜವಿಮರ್ಶೆಯನ್ನೂ ಕಾಣಬಹುದಾಗಿದೆ :

ಶಮೀ ಸಮರ್ಪಣ–ವಿಜ್ಞಪ್ತಿ

ಧೀಮಂತರ್ಗೆ ನಿದಾನವಾವುದೊ ಜಗಂ ತಾನೇತರಿಂ ಬಾಳ್ವುದೋ
ಕ್ಷೇಮೋತ್ಸಾಹ ಸುನೀತಿಗಳ್ಗೆ ತವರೂರ್ಾನಾವುದಾಗಿರ್ಪುದೋ
ಹೇಮತ್ವಂ ಬಡೆದತ್ತೊ ಕ್ಷುದ್ರಶಮಿಯುಂ ತಾನೇತರಿಂದಾಲಸತ್
ಪ್ರೇಮಂ ವರ್ಧಿಸಲೆಂದು ಕೂರ್ತು ಮಣಿದೀವೆಂ ಬನ್ನಿಯಾ ಚಿನ್ನಮಂ ೧

'ಕಂಡುಂ ಪೇಳನೆಂತಾ ಬುಧಂ'– ಎಂಬ ಸಾಮಾಜಿಕ ಪದ್ಯ ಚತುಷ್ಟಯದಲ್ಲಿಯ ವಿಮರ್ಶೆ ಕಲ್ಪಕತೆಗಳು ಮನೋಜ್ಞವಾಗಿವೆ. ಮೂರ್ಖನೆದುರು ಜ್ಞಾನಿ ಬಾಯಿ ತೆಗೆಯಬಾರದು. "ಒಂದನ್ನು ಎರಡೆಂಬ, ಹಂದಿ ಹೆಬ್ಬುಲಿಯೆಂಬ, ನಿಂದ ದೇಗುಲವ ಮರನೆಂಬ ಮೂರ್ಖನಂದಂತೆ ಅನ್ನಿ ಸರ್ವಜ್ಞ" ಎಂದು ಸರ್ವಜ್ಞ ಹೇಳಿದ್ದಾನೆ.

ಕಂಡುಂ ಪೇಳನೆಂತಾ ಬುಧಂ

ಮರೆಯುತ್ತುಂ ದ್ವಿಜಶೂದ್ರ ಬೇರದಿರವಂ ನೀಚೋಚ್ಚಭಾವಂಗಳಂ
ಹರಿಗೋಲೊಳ್ಸಮತೂಕದಿಂ ಕುಳಿತು ಕೂಡಿರ್ದೆಲ್ಲರುಂ ಪ್ರೇಮದಿಂ
ತೊರೆಯಂ ದಾಂಟದೆ ಭೇದಮಂ ನೆನೆದು ಮಾತ್ಸರ್ಯಕ್ಕೆ ಪಕ್ಕಾಗಿ ಪಾ
ಮರನೋರ್ವಂ ನೆರೆ ತೂತು ಗೆಯ್ಯುತಿರೆ ಕಂಡುಂ ಪೇಳನೆಂತಾಬುಧಂ

೧ ಪ್ರಭಾತ : ಆಕ್ಟೋಬರ ೧೯೧೯ : ಪು. ೩೩.

ನುಡಿಯೊಳ್ಕೃತ್ರಿಮ ದೇಶಭಕ್ತಿಯನಪೂರ್ವಸ್ನೇಹಮಂ ತೋರ್ದು ಹೆ
ಗ್ಗಡಿಯೆಂದೆಲ್ಲರು ಬಣ್ಣಿಪಂತೆ ನಟಿಸುತ್ತಂ ನಾಡೆ ಸೂಕ್ಷ್ಮಾಂಗದೊಳ್
ಕಡುಲೋಭಂ ಕುಟಿಲಂ ಕುಚೇಷ್ಟೆ ಕಪಟಾಚಾರಂಗಳಿರ್ದುಂ ವೃಥಾ
ಬಡಿವಾರಂಬಡೆವಾತ್ಮವಂಚಕನ ಕಂಡುಂ ಪೇಳನೆಂತಾಬುಧಂ

ಘನ ಸತ್ಸಾಹಸವಾಂತು ದೇಶಹಿತ ಸೇವಾಕಾರ್ಯಮಂ ಗೆಯ್ಯದೆ
ತನುಸೌಖ್ಯಕ್ಕೆರವಾಗದೆ ಸ್ವಪರ ಭೇದಭ್ರಾಂತಿಯಂ ನೀಗದೆ
ಮನೆಯೊಳ್ ಸಕ್ಕರೆಪಾಲನುಂಡು ಬರಿದೇ ಮದ್ದೇಶಮೆಂದೆನ್ನುತಂ
ಮನದೊಳ್ಮಂಡಿಗೆ ಮಾಳ್ಪ ಗಂಡಿಗರ ಕಂಡುಂ ಪೇಳನೆಂತಾಬುಧಂ ೧

ಹಲಾಯುಧಾಖ್ಯಾನ :

ಇದೊಂದು ಅಪ್ರಕಟಿತ ಕೀರ್ತನೆ. ಕಿತ್ತೂರಿನ ನಾಗಸೆಟ್ಟಿ ಮಾಸ್ತರರ ಸಂಗ್ರಹದಲ್ಲಿದೆ.

ಮಾನವ ಜನ್ಮ ಕ್ಷಣಭಂಗುರವೆಂಬುದನ್ನು ಮನುಷ್ಯನು ಅರಿತಿದ್ದೂ ಅಹಂಕಾರಕ್ಕೆ ಒಳಗಾಗುತ್ತಾನೆ. ಅನುಭವಾಮೃತದಲ್ಲಿ ಹೇಳಿದಂತೆ :

ತನ್ನ ಭುಜಗಳ ನೋಡಿಕೊಂಬುವ
ಕಣ್ಣನಲಿ ಕಾಡಿಗೆಯನಿಕ್ಕುವ
ಕನ್ನಡಿಯ ಕೈಯಲ್ಲಿ ಪಿಡಿಯುತೆ ಪಲ್ಗಿರಿದು ನಗುತ
ತನ್ನತನನನ ಎಂದು ಹಾಡುವ
ಮಾನ್ಯರನು ಧಿಕ್ಕರಿಸಿ ನುಡಿಯುವ
ಕುನ್ನಿ ತಾನವ ಗರ್ವವೆಂಬ ಪಿಶಾಚಿಯೊಡಗೊಂಡು

ಅದಕ್ಕೇ ಸರ್ಪಭೂಷಣ ಕವಿಗಳು :

ನಿನ್ನ ಗುಣಗಳ ನೀನೆ ನುತಿಸಿ ಹಿಗ್ಗಲಿಬೇಡ
ಕುನ್ನಿ ಮನುಜನೆ ಪೂರ್ವಿಕರನೆಲ್ಲ ಮರೆದು

–ಎಂದು ಹೇಳಿದರು. ಅವರ ಮೇರೆಗೆ–

ನಳಿನದಳಜಲಬಿಂದು ಜೀವಿತಂ ಸಿರಿ ಕನಸು
ಸುಳಿಗಾಳಿ ಭೋಗಮಾತ್ಮೀಯರ್ ಮಾನವಾ
ಗಳಬಳಿಪ ಸಂತೆ ಆಯುವು ಬಾಣಗತಿ ತನುವು
ಸೆಳೆಮಿಂಚು ಜಗಮಿಂದ್ರಜಾಲಮ್

ಆದ್ದರಿಂದ, ಮನುಷ್ಯ ಬೀಗದೆ, ಬಾಗಿ ಇರಬೇಕು. ಮೃದುವಾಗಿರಬೇಕು. ವಿನಯಶಾಲಿಯಾಗಿರಬೇಕು. ಕೀಳಿಂಗಲ್ಲದೆ ಹಯನು ಕರೆವುದೆ ?

---

೧ ಪ್ರಭಾತ : ಸಪ್ಟೆಂಬರ ೧೯೧೯ : ಪು. ೨೧.

ನಮ್ರತ್ವಾತ್ ನೃಪಮಸ್ತಕೇ ಪರಿಗತಾ ಸಚ್ಛೈವಿಕಾ ದಂಡಿಕಾ
ವಸ್ತ್ರಾಚ್ಛಾದನ ದಿವ್ಯರೌಪ್ಯವದನಂ ಸ್ಕಂಧೇ ಪರಿಭ್ರಾಜತೇ
ತದ್‍ವಂಶೇ ಜನಿತಾ ಶಠಾದಿಹ ಖಲು ಕೋಲಾಟಿಕಾ ದಂಡಿಕಾ
ನೀಚಾಂಘ್ರಿಪ್ರಹತಿಃ ಪ್ರಯಾತಿ ಪದಯೋರ್ಬಧ್ನೀ ಕೃತಾ ರಾಸಭೈಃ

ಬಾಗಿ ಮೃದುವಾದ ಪಲ್ಲಕ್ಕಿಯ ಬಿದಿರು ವಸ್ತ್ರಾಲಂಕೃತವಾಗಿ, ರಜತಾಚ್ಛಾದನ ಹೊಂದಿ, ಅರಸರ ತಲೆಯ ಮೇಲೆ ಶೋಭಿಸುತ್ತದೆ; ಅದೇ ಜಾತಿಯಲ್ಲಿಯೇ ಹುಟ್ಟಿದ್ದರೂ ಡೊಂಬರಗಳ ಸೆಟೆದು ನಿಂತದ್ದರಿಂದ ನೀಚರ ಕಾಲಿನಿಂದ ಒದೆಸಿಕೊಳ್ಳಲ್ಪಟ್ಟು, ಕತ್ತೆಯ ಬೆನ್ನ ಮೇಲೆ ಕಟ್ಟಿ ಮೆರೆಸಿ ಕೊಳ್ಳಲ್ಪಡುತ್ತದೆ.

ಈ ಮೇಲಿನ ಸತ್ಯವನ್ನು ವಿವರಿಸುವದರ ಸಲುವಾಗಿ ಶ್ರೀಯುತರು ಈ ಕೀರ್ತನೆಯಲ್ಲಿ ಹಲಾಯುಧಾಖ್ಯಾನವನ್ನು ಹೇಳಿದ್ದಾರೆ.

ಘೋಷ ಯಾತ್ರೆ :

ಇದೂ ಒಂದು ಅಪ್ರಕಟಿತ ಕೀರ್ತನೆ. ಕಿತ್ತೂರಿನ ನಾಗಸೆಟ್ಟಿಯವರ ಸಂಗ್ರಹದಲ್ಲಿದೆ.

ಇದರಲ್ಲಿ ದುರ್ಯೋಧನನ ದೈವವಿಹೀನವಾದ ದುರಭಿಮಾನದ ಖಂಡನೆಯಿದೆ. ಸಾಮ್ರಾಜ್ಯವನ್ನು ದೊರಕಿಸಿದ ದುರ್ಯೋಧನ ಅದರ ಸ್ಥಿರತ್ವಕ್ಕಾಗಿ ಪ್ರಯತ್ನಿಸುತ್ತಾನೆ. ಇದೇನೋ ಸರಿಯೇ ! ಯಾಕಂದರೆ, ಯಾವ ಕೆಲಸಕ್ಕಾದರೂ ಪುರುಷ ಪ್ರಯತ್ನ ಬೇಕೇಬೇಕು. ಆದರೆ, ಈ ಪುರುಷ ಪ್ರಯತ್ನದ ಬಾಣಕ್ಕೆ ಪರಮಾತ್ಮನ ಕೃಪೆಯ ಹಿಡಿ ಬೇಕು. ಆ ಕೃಪೆ ಇಲ್ಲದಿದ್ದರೆ, ಬಾಣ ಹೊಳ್ಳು ಹಾರುತ್ತದೆ. ಸಮರ್ಥ ರಾಮದಾಸರು ಹೀಗೆ ಹೇಳಿದ್ದಾರೆ :

ಸಾಮರ್ಥ ಆಹೇ ಚಳವಳಿಚೇ– ಜೋ ಜೋ ಕರೀಲ ತಯಾಚೇ
ಪರಿ ತೇಥೇ ಪರಮೇಶ್ವರಾಚೇ– ಅಧಿಷ್ಠಾನ ಪಾಹಿಜೇ ॥

–ಹೀಗೆ, ಅಹಂಕಾರಾರೂಢನಾಗಿ ಕೌರವ ನಾಶ ಹೊಂದಿದ್ದನ್ನು ಈ ಕೀರ್ತನೆಯಲ್ಲಿ ವರ್ಣಿಸಲಾಗಿದೆ.

ಕೋಳೂರ ಕೊಡಗೂಸಿನ ಕಥೆ :

ಇದೂ ಗುರುಪಾದಪ್ಪನವರ ಅಪ್ರಕಟಿತ ಕೀರ್ತನೆ. ನೈಜಭಕ್ತಿ ಪರಮಾತ್ಮನಿಗೆ ಪ್ರಿಯ; ಡಾಂಭಿಕ ಭಕ್ತಿ ಅವನಿಗೆ ದೂರ. ಮನುಷ್ಯ ಮನಮೆಚ್ಚಿ ನಡೆಯಬೇಕಲ್ಲದೆ, ಜನಮೆಚ್ಚಿ ನಡೆಯಲೇನುಂಟು ? ಜನರೇನು ಬಲ್ಲರು ಒಳಗಾಗುವ ಕೃತ್ಯವ ? ಮನವರಿಯದ ಕಳ್ಳತನವಿಲ್ಲ. ಬೆಳೆಗೆ ಬೆಳವಲ ನಾಡಿನಲ್ಲಿ ಕರಿಕೆ ಕಣಗಿಲೆಗಳು ಬಾಧಕವಾಗಿರುವಂತೆ, ಮಲೆನಾಡಿನಲ್ಲಿ ಗೊಣಗು ಉಳಕಗಳು ಬಾಧಕವಾಗಿವೆ. ಹಾಗೆಯೇ ನೈಜ ಭಕ್ತಿಗೆ ಡಂಭ ಬಾಧಕ. "ಕಸಗೊಂಡ ಭೂಮಿಯೊಳ್ ಸಸಿಯು ಪಲ್ಲವಿಸುವದೆ ? ಹುಸಿಯಿದ್ದಲ್ಲಿ ಶಿವಭಕ್ತಿ ನೆಲೆಗೊಂಬುದೇ ?'' ಮನಸ್ಸಿನಲ್ಲಿ ಕಸವನ್ನಿಟ್ಟುಕೊಂಡು ಬರಿಯ ಬಾಹ್ಯಪೂಜೆಯನ್ನು ಮಾಡಿದರೆ ಬರುವದೇನು ? ಅಂಬಿಗರ ಚೌಡಯ್ಯನವರು ಹೇಳಿವಂತೆ

'ಆರಕ್ಕಾರು ಬಿತ್ತಿದ ಗಿಡದ ಹೂವನೇ ಕೊಯ್ದು
ಊರವರು ಕಟ್ಟಿದ ಬಾವಿಯ ನೀರನೇ ತಂದು

ನಾಡೆಲ್ಲ ನೋಡಲೆಂದು ಪೂಜಿಸುವವನ ಪುಣ್ಯವು ಆ ಹೂವಿಗೋ ? ಆ ನೀರಿಗೋ ? ನಾಡೆಲ್ಲ ನೋಡಲೆಂದು ಪೂಜಿಸಿದಾತಗೋ ? ಇದನಾನರಿಯೆ.' ಶುದ್ಧ ಸಾತ್ವಿಕ ಭಕ್ತಿಯೇ ಶ್ರೇಷ್ಠವಾದುದು. ಇದನ್ನು ಸಮರ್ಥಿಸುವದಕ್ಕಾಗಿ ಈ ಕೀರ್ತನದಲ್ಲಿ ಐದು ವರ್ಷದ ಬಾಲಿಕೆಯಾಗಿದ್ದ ಚೆನ್ನಕ್ಕನೆಂಬ ಕೋಳೂರ ಕೊಡಗೂಸಿನ ಏಕಮುಖ ಭಕ್ತಿಯನ್ನು ವರ್ಣಿಸಲಾಗಿದೆ.

ಶಬರಶಂಕರ ಲೀಲೆ :

ಇದರಲ್ಲಿ ಇಂದ್ರಕೀಲ ಪರ್ವತದಲ್ಲಿ ಅರ್ಜುನನು ಪರಮಾತ್ಮನನ್ನು ಕುರಿತು ಮಾಡಿದ ತಪಸ್ಸಿನ ವರ್ಣನೆಯಿದೆ.

ಇಷ್ಟು ಕೃತಿಗಳನ್ನು ರಚಿಸಿದ್ದರೂ ಗುರುಪಾದಪ್ಪನವರ ಬರೆಹಗಳು ಪ್ರಕಟವಾಗದೆ ಉಳಿದದ್ದು ಅಂದಿನ ಕಾಲದ ಲೇಖಕರ ದುರ್ಬಲತೆಯ ದ್ಯೋತಕವಾಗಿದೆ.

—

ರಾ. ಬ. ಫಕೀರಪ್ಪ ಗುರುಬಸಪ್ಪ ಹಳಕಟ್ಟಿ

(೧೮೮೦-೧೯೬೪)

ಶ್ರೀಯುತರ ಬಗೆಗೆ ಒಂದು ಪ್ರತ್ಯೇಕ ಪ್ರಬಂಧವನ್ನೇ ಬರೆಯುವಷ್ಟು ಸಾಮಗ್ರಿ ಇದೆ. ಫಕೀರಪ್ಪನವರು ಸ್ವತಃ ಲೇಖಕರಾಗಿದ್ದ ಗುರುಬಸಪ್ಪ ಹಳಕಟ್ಟಿಯವರ ಸಂಪುತ್ರರು. ಧಾರವಾಡದಲ್ಲಿ ದಿನಾಂಕ ೨-೭-೧೮೮೦ ರಂದು ಜನಿಸಿದರು. ೧೯೦೪ ರಲ್ಲಿ ಎಲ್‌ಎಲ್. ಬಿ. ಪರೀಕ್ಷೆ ಪಾಸು ಮಾಡಿ ಬೆಳಗಾವಿಯಲ್ಲಿ ವಕೀಲಿ ವೃತ್ತಿ ಪ್ರಾರಂಭಿಸಿ, ವಿಜಾಪುರದಲ್ಲಿ ಹೋಗಿ ನೆಲೆಸಿದರು. 'ಶಿವಾನುಭವ' (೧೯೨೬), 'ನವಕರ್ನಾಟಕ' (೧೯೨೮) ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾಗಿ ಕೆಲಸ ಮಾಡಿದರು. ಸನ್ ೧೯೨೬ ರಲ್ಲಿ ಬಳ್ಳಾರಿಯಲ್ಲಿ ಕೂಡಿದ ಕನ್ನಡ ಸಾಹಿತ್ಯ ಸಮ್ಮೇಲನದ ೧೨ನೆಯ ಅಧಿವೇಶನದ ಅಧ್ಯಕ್ಷರೆಂಬ ಮನ್ನಣೆ ಪಡೆದರು. ಇದೂ ಅಲ್ಲದೆ ಶ್ರೀಯುತರು ಕನ್ನಡ ಪಠ್ಯಪುಸ್ತಕ ಸಮಿತಿ, ಬಿಜಾಪುರ ನಗರ ಸಭೆಯ ಸ್ಕೂಲಬೋರ್ಡ, ಮುಂಬಯಿ ವಿಶ್ವವಿದ್ಯಾಲಯದ ಸಿನೇಟ್‌ಗಳಲ್ಲಿ ಕೆಲಸ ಮಾಡಿದರು.

'೭೭೦ ಅಮರಗಣಾಧೀಶ್ವರರ ಚರಿತ್ರೆಗಳು', 'ಚನಬಸಪ್ಪಾ ಬಸಲಿಂಗಪ್ಪಾ ಧಾರವಾಡ ಅವರ ಚರಿತ್ರೆ', 'ವಚನಶಾಸ್ತ್ರ ಸಾರ' (೩ ಭಾಗಗಳು), 'ಶಿವಶರಣರ ಚರಿತ್ರೆಗಳು', 'ಶಿವಾನುಭವಕೋಶ' ಮೊದಲಾದ ಕೃತಿಗಳನ್ನು ರಚಿಸಿದ್ದಲ್ಲದೆ, ಅನೇಕ ಶಿವಶರಣರ ವಚನಗಳನ್ನು ಸಂಪಾದಿಸಿ, ಪ್ರಕಟಿಸಿದರು. ಫ. ಗು. ಹಳಕಟ್ಟಿಯವರ ಸಾತ್ವಿಕ ತೇಜ ಕನ್ನಡದ ವಿದ್ವನ್ಮಂಡಲಕ್ಕೆ ಬೆಲೆಯುಳ್ಳ ದಾರಿದೀಪವಾಗಿದೆ.

ಇವರು ಸಂಪಾದನೆ ಮಾಡಿದ ಗ್ರಂಥಗಳಲ್ಲಿ 'ಹೊಸ ಪದ್ಧತಿಯ ಬಸವೇಶ್ವರ ವಚನಗಳು', 'ಅಂಬಿಗರ ಚೌಡಯ್ಯನ ವಚನಗಳು', 'ಆದಯ್ಯನ ವಚನಗಳು', 'ಆದಿಶೆಟ್ಟಿ ಪುರಾಣ', 'ಸಂಗನ ಬಸವೇಶ್ವರನ ವಚನಗಳು', 'ಮಡಿವಾಳ ಮಾಚಿದೇವನ ವಚನಗಳು', 'ಪ್ರಭುದೇವರ ವಚನಗಳು', 'ಚೆನ್ನಬಸವೇಶ್ವರನ ವಚನಗಳು', 'ಕೆಳದಿ ಸಂಸ್ಥಾನದ ರಾಯರ ವಂಶಾವಳಿ', 'ಕೊಡಗು ಸಂಸ್ಥಾನದ ರಾಜೇಂದ್ರ ನಾಮೆ' ಮೊದಲಾದವುಗಳನ್ನು ಹೇಳಬಹುದು.

—

ಆಲೂರ ವೆಂಕಟರಾಯರು

(೧೮೮೦–೧೯೬೪)

ಕರ್ನಾಟಕ ಕುಲಪುರೋಹಿತರೆಂದು ಸುಪ್ರಸಿದ್ಧರಾದ ಆಲೂರ ವೆಂಕಟರಾಯರು ತಮ್ಮ 'ಕರ್ನಾಟಕ ಗತವೈಭವ' ಎಂಬ ಪುಸ್ತಕದ ಮೂಲಕ ಕನ್ನಡಿಗರಲ್ಲಿ ಹೊಸ ಚೈತನ್ಯ ಉಂಟಾಗುವಂತೆ ಮಾಡಿದರು. ದಿವಂಗತ ಶಾಂತಕವಿಗಳ ಸಾಹಿತ್ಯ ನಿರ್ಮಿತಿಯನ್ನು ತುಂಬಾ ಮೆಚ್ಚಿಕೊಂಡು ಅವರ 'ಶ್ರೀಕೃಷ್ಣದಾನಾಮೃತ'ವು ಪ್ರಕಟವಾಗುವಂತೆ ಏರ್ಪಾಡು ಮಾಡಿದರು.

ಶ್ರೀಯುತರು ದಿನಾಂಕ ೧೨–೭–೧೮೮೦ರಂದು ಧಾರವಾಡದಲ್ಲಿ ಜನಿಸಿ, ೧೮೮೭ರಲ್ಲಿ ನವಲಗುಂದ ದಲ್ಲಿ ತಮ್ಮ ಪ್ರಾಥಮಿಕ ಅಭ್ಯಾಸವನ್ನು ಪ್ರಾರಂಭಿಸಿದರು. ೧೮೯೭ರಲ್ಲಿ ಮ್ಯಾಟ್ರಿಕುಲೇಶನ್ ಪರೀಕ್ಷೆ ಪಾಸು ಮಾಡಿದರು. ೧೮೯೬ರಲ್ಲಿ ಮೊದಲನೆಯ ಮದುವೆಯಾಯಿತು. ೧೮೯೯ರಲ್ಲಿ ಪುಣೆಯ ಫರ್ಗ್ಯುಸನ್ ಕಾಲೇಜನ್ನು ಸೇರಿ ೧೯೦೩ರಲ್ಲಿ ಬಿ.ಎ. ಪದವಿ ಗಳಿಸಿದರು. ಇದೇ ವರ್ಷ ಇವರ ಹೆಂಡತಿ ತೀರಿಕೊಂಡದ್ದರಿಂದ ೧೯೦೪ ರಲ್ಲಿ ಎರಡನೆಯ ಮದುವೆ ಮಾಡಿಕೊಂಡರು. ೧೯೦೫ ರಲ್ಲಿ ಎಲ್ ಎಲ್.ಬಿ. ಪರೀಕ್ಷೆ ಪಾಸು ಮಾಡಿದರು. ಶ್ರೀಯುತರು ಲೋಕಮಾನ್ಯ ಟಿಳಕ ಮತ್ತು ಅರವಿಂದರ ಪ್ರಭಾವಕ್ಕೆ ಒಳಗಾಗಿ ದೇಶಸೇವೆ, ವಾಙ್ಮಯ, ಇತಿಹಾಸ ಮತ್ತು ಧರ್ಮಗಳ ಸೇವೆಗಾಗಿ ಟೊಂಕ ಕಟ್ಟಿ ನಿಂತರು. ೧೯೦೬ರಲ್ಲಿ ವಾಗ್ಭೂಷಣ ಮಾಸಪತ್ರಿಕೆಯ ಸಂಪಾದಕರಾಗಿ ಕೆಲಸ ಮಾಡಿದರು. ೧೯೦೭ರಲ್ಲಿ ಮೊದಲಬಾರಿಗೆ ಕನ್ನಡ ಗ್ರಂಥಕರ್ತರ ಸಮ್ಮೇಳನವನ್ನು ಸಂಘಟಿಸಿ, ೧೯೦೮ ರಲ್ಲಿ ಕರ್ನಾಟಕ ಗ್ರಂಥ ಪ್ರಸಾರಕ ಮಂಡಳಿಯನ್ನು ಸ್ಥಾಪಿಸಿದರು. ೨೬–೧–೧೯೧೯ ರಲ್ಲಿ ಧಾರವಾಡದಲ್ಲಿ ರಾಷ್ಟ್ರೀಯ ಶಾಲೆಯನ್ನು ಸ್ಥಾಪಿಸಿದರು. ೧೯೩೬ ರಲ್ಲಿ ಹಂಪೆಯಲ್ಲಿ ನಡೆದ ವಿಜಯನಗರ ಸ್ಮಾರಕೋತ್ಸವ ಸಮಾರಂಭದ ಪೌರೋಹಿತ್ಯ ವಹಿಸಿದರು.

ವೆಂಕಟರಾಯರ ತಂದೆಯ ಹೆಸರು ಭೀಮರಾವ. ಇವರು ಸನ್ ೧೮೬೫ ರಲ್ಲಿ 'ಸರಕಾರೀ ನವಕರಿ ಉಮೇದವಾರಿ ಕನ್ನಡ ಪರೀಕ್ಷೆ'ಯಲ್ಲಿ ೧೬ ಅಣೆಗಳಲ್ಲಿ ೧೧–೩ ಗುಣ ಪಡೆದು (ಆಗ ಮಾರ್ಕ್ಸ ಎಣಿಸುವ ಪದ್ಧತಿ ಹಾಗಿತ್ತು) ಪಾಸಾಗಿ, ಕಲಾದಗಿಯಲ್ಲಿ ಲೋಕಲ್‌ಫಂಡ್ ಕಾರಕೂನರೆಂದು ನೌಕರಿ ಹಿಡಿದರು. ಆದ್ದರಿಂದ ಇವರಿಗೆ ಲೋಕಲ್‌ಫಂಡ ಭೀಮರಾಯರೆಂದೇ ಕರೆಯಲಾಗುತ್ತಿತ್ತು. ನಂತರ ಇವರು ವಿಜಾಪುರದಲ್ಲಿ ಶಿರಸ್ತೆದಾರರಾಗಿದ್ದಾಗ, ವಿಜಾಪುರದ ಐತಿಹಾಸಿಕಾಂಶಗಳನ್ನು ಕಲೆಹಾಕಿ, ಸನ್ ೧೮೮೨ ರಲ್ಲಿ ಅಂದಿನ ಮುಂಬಯಿ ಗವರ್ನರರಿಗೆ ಕೊಟ್ಟು ಕಳಿಸಿದ್ದರು. ವೆಂಕಟರಾಯರು ತಮ್ಮ ತಂದೆಯವರ ಬಗೆಗೆ ಹೀಗೆ ಬರೆದಿದ್ದಾರೆ :

"ಭೀಮರಾಯರ ನಿಲುವು ೫ ಫೂಟು ೬ ಇಂಚು. ಪ್ರಕೃತಿ ಸದೃಢ, ಬುದ್ಧಿಯಲ್ಲಿ ಬಲಿಷ್ಠರು. ಸ್ವಭಾವ ಮುಗ್ಧ ಮತ್ತು ಗಂಭೀರ, ಆದರೆ ಆನಂದ ಮುದ್ರೆ. ಆಚಾರಶೀಲರಾದರೂ ಕರ್ಮಠರಲ್ಲ. ಸ್ವಾಭಿಮಾನಿಗಳು; ಸ್ವದೇಶ ಪ್ರೇಮಿಗಳು, ವಾಚನಪ್ರಿಯರು, ಸ್ವಾವಲಂಬಿಗಳು. ನವಕರಿಯಲ್ಲಿದ್ದರೂ, ಒಬ್ಬರಿಗೆ 'ಜೀಯಾ' 'ಜೀಯಾ' ಅನ್ನಲಿಲ್ಲ. ದರ್ಪಿನವರಾದರೂ ಲೋಕಪ್ರಿಯರು''[೧] ಈ ಗುಣಗಳೇ ವೆಂಕಟರಾಯರಲ್ಲಿಯೂ ಕಂಡು ಬಂದವೆಂದು ಹೇಳಬಹುದು.

ಸ್ಪೆನ್ಸರನೆಂಬ ವಿದ್ವಾಂಸನು ಇಂಗ್ಲಿಷಿನಲ್ಲಿ ಬರೆದ ನೀತಿ ಮೀಮಾಂಸೆ ಎಂಬ ಗ್ರಂಥವೇ ವೆಂಕಟರಾಯರು ಮೊದಲು ಬರೆದ ಕನ್ನಡ ಗ್ರಂಥಭಾಗವೆಂದು ಕಾಣುತ್ತದೆ. ಕನ್ನಡದ ಗದ್ಯಶೈಲಿ ಪಾಕಗೊಳ್ಳಲಿಕ್ಕೆ ಬಹುಕಾಲ ಹಿಡಿಯಿತೆಂದು ನಾವು ಈಗಾಗಲೇ ಅನೇಕ ಸಲ ಉಲ್ಲೇಖ ಮಾಡಿದ್ದೇವೆ. ಈ ಕಾರಣದ ದೃಷ್ಟಿಯಿಂದಲೂ ಮತ್ತು ಪ್ರಾರಂಭದಲ್ಲಿ ವೆಂಕಟರಾಯರ ಬರವಣಿಗೆಯ ಶೈಲಿ ಹೇಗಿತ್ತೆಂಬ ದೃಷ್ಟಿಯಿಂದಲೂ ಈ ಕೆಳಗಿನ ಅವತರಣಿಕೆಯನ್ನು ಕೊಡಬಹುದು :

''ಶಾಸ್ತಾ ಮತ್ತು ಶಾಸನೀಯವೆಂಬ ಭೇದವು ಯೆಲ್ಲಿ ವುತ್ಪನ್ನವಾಗಿಲ್ಲೊ ಅಥವಾ ರಾಜಾ ಮತ್ತು ಪ್ರಜೆಯೆಂದು ಯೆಲ್ಲಿ ಭೇದವಾಗಿಲ್ಲೊ, ಮತ್ತು ಅದರಿಂದಲೇ ಅಲ್ಲೆ ಯಾವ ಕಾಯದೆಯು ಇಲ್ಲೊ, ಅಲ್ಲೆ 'ಅನ್ಯಾಯ'ವಾಗುವದು ಅಶಕ್ಯ ಮತ್ತು ಅಸಂಭವನೀಯವಿರುತ್ತದೆ. ಯಾಕಂದರೆ, ಕಾಯದೆ ಪ್ರಕಾರಾ ನಡೆಯದಿರುವದೆ ಅಂದರೆ ಅನ್ಯಾಯವೆಂದು ಹೇಳಿರುತ್ತದೆ. ಇನ್ನು ಯೆಲ್ಲಿ ಕಾಯದೇನೇ ಇಲ್ಲಾ, ಅಲ್ಲೆ ಕಾಯದೆಯ ಪ್ರಕಾರ ನಡೆದಿರುವದು ಅಂದರೆ ಅನ್ಯಾಯವು ಯೆಲ್ಲಿಂದ ಬರುವದು.''

ವೆಂಕಟರಾಯರದು ಬಹು ಸೂಕ್ಷ್ಮವಾದ ನಿರೀಕ್ಷಣಶಕ್ತಿ. ಅವರು ಚಿಕ್ಕವರಿದ್ದಾಗಿನಿಂದಲೂ ಅಲ್ಲಲ್ಲಿ ಕೇಳಿದ ಹಾಡುಗಳು, ಲಾವಣಿಗಳನ್ನು ನೆನಪಿನಲ್ಲಿಟ್ಟುಕೊಂಡಿದ್ದರು. ಅವರು ಹಾನಗಲ್ಲಿನಲ್ಲಿದ್ದಾಗ, ಹೋಳಿ ಹುಣ್ಣಿವಿ ಅಲಾವಿಗಳಲ್ಲಿ ಹಾಡುತ್ತಿದ್ದ, 'ಏನು ಕೊಂದಿ ಕೂಸಿನ' ಎಂಬ ಹಾಡಿನ ಹಿನ್ನೆಲೆಯನ್ನು ಅರಿತವರಾಗಿದ್ದರು. ತಮ್ಮ ಸವಿಲುಗುಂದದ ವಾಸ್ತವ್ಯದ ಬಗೆಗೆ ಹೀಗೆ ಹೇಳುತ್ತಾರೆ :

"ಕುರುಡರಾದ ಚೆನ್ನಬಸಪ್ಪನವರು ಉತ್ಕೃಷ್ಟ ಕವಿಗಳು, ರಸಿಕರು. ಅವರು ನಮ್ಮ ಮನೆಗೆ ಆಗಾಗ ಬಂದು ತಮ್ಮ ಭಕ್ತಿಪರ ಪದಗಳನ್ನು ಹಾಡಿತೋರಿಸುತ್ತಿದ್ದರು. ಅಲ್ಲದೆ, ಆಗಿನ ಕಾಲದಲ್ಲಿ ಈ ದೇಶದಲ್ಲಿಯ ಪಾತ್ರದವರಬಾಯಲ್ಲೆಲ್ಲ ಅವರ ಪದಗಳೇ. ನನ್ನ ಬಾಲ್ಯದ ಗುರುಗಳಾದ ತಮ್ಮಣ್ಣ ಶಾಸ್ತ್ರಿಗಳೂ ಒಳ್ಳೇ ಕವಿಗಳು.

'ವಂದಿಪೆನಿಂದಿಗೆ ನಾ ಜಗದ್ವಂದ್ಯ ನಗರೇಶನ
ಘೋರ ಸಂಸಾರದಪಾರವಾರಿಧಿಯೊಳು
ದೂರಮಾಡೆಂದೆನ್ನ ಮಾರಸಂಹಾರನೇ'

–ಎಂದು ಮುಂತಾಗಿ ಅವರು ಅಲ್ಲಿಯ ನಗರೇಶ್ವರನ ಮೇಲೆ ಕಟ್ಟಿದ ಪದವು ಅಲ್ಲಿ ಪ್ರತಿವಾರವೂ ಹಾಡಲ್ಪಡುತ್ತಿತ್ತು. ಮತ್ತ ಕೆಲವರು ಕವಿಗಳಿದ್ದರು. ಅವರ ಹೆಸರುಗಳನ್ನು ಮರೆತಿರುವೆ. 'ಜಲಜಾಕ್ಷಿ ಲಾಲ್‌ಗಡಿಯೊಡೆಯನ ನೋಡೋಣ ನಡಿಯೆ' ಎಂಬುದಾಗಿ ಒಬ್ಬರು ಪದ ಮಾಡಿದ್ದರೆ, ಮತ್ತೊಬ್ಬರು 'ಭೃಂಗಪೋಲುವ ಗುರುಳಿ, ಏನಗ್ಹಿಂತಾದ್ಹೀತ್ಹೇಳೆ' ಎಂಬ ಪದ ಕಟ್ಟಿದ್ದರು. ಶೇಷ

೧ ನನ್ನ ಜೀವನ ಸ್ಮೃತಿಗಳು : ೧೯೭೪ : ಪು. ೧೦–೧೧.

ಗಿರಿರಾವ ಗೋಪೆಕರ್ ಎಂಬ ದಾಸಕೂಟದವರು ಮೇಲಿಂದ ಮೇಲೆ ನಮ್ಮ ಮನೆಗೆ ಬಂದು ದಾಸರ ಪದಗಳನ್ನು ಹಾಡಿ ತೋರಿಸುತ್ತಿದ್ದರು."[೧]

(ಈ ಯೆಲ್ಲ ಕವಿಗಳು ಯಾರು ? ಇವರ ಕೃತಿಗಳೇನು ? ಅವು ಮುದ್ರಿತವೇ ? ಇವೆಲ್ಲದರ ಸಂಶೋಧನೆ ಇನ್ನೂ ಆಗಬೇಕು.)

ವೆಂಕಟರಾಯರು ಅನೇಕ ಉದ್ಗ್ರಂಥಗಳನ್ನು ಬರೆದರು. ಅ. ನ. ಕೃಷ್ಣರಾಯರಂಥವರು ವೆಂಕಟರಾಯರ ಪ್ರಭಾವದ ಮೂಲಕ ಮುಗ್ಧರಾದರು. ವೆಂಕಟರಾಯರ ಕೃತಿಗಳಲ್ಲಿ 'ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ ಶ್ರೀ ವಿದ್ಯಾರಣ್ಯ' (೧೯೦೯) 'ಶಿಕ್ಷಣ ಮೀಮಾಂಸೆ' (೧೯೧೧) 'ಕರ್ನಾಟಕ ಗತವೈಭವ' (೧೯೧೭) 'ನಾವು ಈಗ ಬೇಡುವ ಸ್ವರಾಜ್ಯ'(೧೯೧೭) 'ಮಿಕ್ಕ ಸುಧಾರಣೆಗಳ ನಿಷ್ಫಲತೆ' 'ಸುಖವೂ ಶಾಂತಿಯೂ'–ಭಾಗ ೧ (೧೯೨೦) 'ಸುಖವೂ ಶಾಂತಿಯೂ'–ಭಾಗ ೨ (೧೯೨೧) 'ಕರ್ನಾಟಕದ ವೀರರತ್ನಗಳು' (೧೯೩೦) ಭಗವದ್ಗೀತೆಯ ವಿಷಯಕ ಗ್ರಂಥಗಳು, 'ನನ್ನ ಜೀವನ ಸ್ಮೃತಿಗಳು' ಮತ್ತು ಮಾಧ್ವಸಿದ್ಧಾಂತ ವಿಷಯಕ ಗ್ರಂಥಗಳನ್ನು ಹೇಳಬಹುದು.

—

೧ ಅದೇ : ಪು. ೪೭.

ಶಾಂತಾಬಾಯಿ ನಾಡಘರ

(ಸಂ. ೧೮೮೦)

ಇವರು ಸಾಗರದ ಕೊಪ್ಪಿ ವೆಂಕಟೇಶಯ್ಯನವರ ಮಗಳು. ಭಟಕಳದ ನಾಡಘರ ಮನೆತನದ ಕೃಷ್ಣರಾಯರೊಡನೆ ಇವರ ಮದುವೆಯಾಗಿತ್ತು. ಕೃಷ್ಣರಾಯರು ಅಪ್ಪಯ್ಯ ದೀಕ್ಷಿತರ ವಂಶದವರು. ಮೂವತ್ತು ವರುಷಗಳಲ್ಲಿಯೇ ಶಾಂತಾಬಾಯಿಯವರು ಪುತ್ರ ಮತ್ತು ಪತಿಯ ವಿರಹವನ್ನು ಅನುಭವಿಸಬೇಕಾಯಿತು. ಆದರಿಂದ ಇವರ ಒಲವು ಪರಮಾರ್ಥದ ಕಡೆಗೆ ಹರಿಯಿತು. ಇವರಿಗೆ ಪುಟ್ಟಯ್ಯ ಎಂಬ ಗುರುಗಳೂ ದೊರಕಿದರು.

ಇವರು ಕನ್ನಡ ಮತ್ತು ಮರಾಠಿ ಎರಡೂ ಭಾಷೆಗಳಲ್ಲಿ ಹಾಡುಗಳನ್ನು ರಚಿಸಿದ್ದಾರೆ. ಇವರ ಕನ್ನಡ ಹಾಡುಗಳ ಕೊನೆಗೆ 'ಶಾಂತಿ ಪಾಲಿಪ ಗುರು' ಎಂಬ ಅಂಕಿತ ಬರುತ್ತದೆ. ಇವರು ಜೀರ್ಣೋದ್ಧಾರ ಮಾಡಿದ ಭಟಕಳದ ಮಠದಲ್ಲಿ ಪ್ರತಿವರುಷವೂ ಇವರ ಪುಣ್ಯತಿಥಿ ಆಚರಿಸಲಾಗುತ್ತದೆ. ಇವರು ರಚಿಸಿದ ಹಾಡುಗಳಲ್ಲಿ ಈ ಕೆಳಗಿನ ಭಾಗವನ್ನು ಕೊಡಬಹುದು :

ಹಿಂದೆ ನಾ ಮಾಡಿದ ಕುಂದಿನ ಫಲದಿಂದ
ಬೆಂದೆನು ಬಹು ಜನ್ಮದೊಳಗೆ
ಮೂರು ತಾಪಗಳೆನ್ನ ಹಾರೈಸಿ ಸುಡುತಿವೆ
ತಾರಕಗುರು ಪ್ರಸನ್ನ ॥

ಹಮ್ಮವಾಸನೆ ಬಿಟ್ಟು ನಿರ್ಮಲತೆಯ ಹೂಡಿ
ರಮ್ಯಸ್ವರ್ಗ ಸುಖವೀಯೋ ದೇವಾ
ಶಾಂತಿಪದದಲಿ ವಿಶ್ರಾಂತಿಯ ಕೊಟ್ಟೆನ್ನ
ಅಂತರದಲಿ ಲಕ್ಷವಿರಿಸೈ ॥ ೧

ಶಾಂತಾಬಾಯಿಯವರು ಜೀವನ್ಮುಕ್ತರೆಂಬ ಸಿದ್ಧಿಯನ್ನೂ ಪ್ರಸಿದ್ಧಿಯನ್ನೂ ಪಡೆದರು.

—

೧ ಭಟಕಳ ನಾಡಘರ ಶಾಂತಾಬಾಯಿಯವರ ಚರಿತ್ರವೂ ಅವರು ರಚಿಸಿದ ಪದಗಳೂ : ೧೯೩೮

ರೆ. ಚನ್ನಪ್ಪ ಉತ್ತಂಗಿ

(೧೮೮೧–೧೯೬೨)

ರಾ. ಬ ಫ. ಗು ಹಳಕಟ್ಟಿಯವರು ವೀರಶೈವ ಸಾಹಿತ್ಯ ಸಮುದ್ಧರಣಕ್ಕೆ ಮಾಡಿದಷ್ಟೇ ಅಮೋಘ ಕಾರ್ಯವನ್ನು ರೆವರಂಡ ಚನ್ನಪ್ಪನವರು ಸರ್ವಜ್ಞ ವಚನಗಳ ವಿಷಯಕವಾಗಿ ಮಾಡಿದರು. 'ಸರ್ವಜ್ಞನೆಂಬವನು ಗರ್ವದಿಂದಾದವನೆ' ಎಂದು ಸರ್ವಜ್ಞ ಹೇಳಿಕೊಂಡದ್ದೇನೋ ನಿಜ; ಆದರೆ 'ಸರ್ವಜ್ಞನೆಂಬವನು ಚನ್ನಪ್ಪರಿಂದಾದವನು' ಎನ್ನುವಷ್ಟರ ಮಟ್ಟಿಗೆ ಅವರು ಸರ್ವಜ್ಞ ವಚನಗಳ ಅನೇಕ ತರಹದ ಆವೃತ್ತಿಗಳನ್ನು ಹೊರಡಿಸಿ, ಆ ವಚನಗಳನ್ನು ಜನಪ್ರಿಯಗೊಳಿಸಿದರು.

ಉತ್ತಂಗಿಯವರ ಪೂರ್ಣ ಹೆಸರು ಚನ್ನಪ್ಪ ಡಾನಿಯಲಪ್ಪ ಉತ್ತಂಗಿ. ಇವರ ಮನೆತನ ಮೂಲತಃ ಬಳ್ಳಾರಿ ಜಿಲ್ಲೆಯದು. ಇವರ ಪೂರ್ವಜರು ವೀರಶೈವ ಮತದಿಂದ ಕ್ರೈಸ್ತ ಮತಕ್ಕೆ ಪರಿವರ್ತನಗೊಂಡ ನಂತರ, ಈ ಮನೆತನ ಧಾರವಾಡದಲ್ಲಿ ಬಂದು ನೆಲೆಸಿತು. ಚನ್ನಪ್ಪನವರು ಮಂಗಳೂರಿನ ದೈವಜ್ಞಶಾಲೆಯಲ್ಲಿ ಅಭ್ಯಾಸ ಮಾಡಿದರಾದರೂ, ಅಲ್ಲಿಯ ಅಂಧಶ್ರದ್ಧೆ ಅವರಿಗೆ ಮನ ಹಿಡಿಯದಾಯಿತು. ಆದ್ದರಿಂದ, ಸ್ವಾಧ್ಯಾಯಮೂಲಕವಾಗಿ ಭಗವದ್ಗೀತೆ, ಉಪನಿಷತ್ತು, ವಚನಶಾಸ್ತ್ರಗಳನ್ನಲ್ಲದೆ, ಪ್ಲೇಟೊ, ಕಾಂಟ್, ಬ್ರಾಡ್ಲೆ– ಮೊದಲಾದವರ ಕೃತಿಗಳನ್ನು ಓದಿದರು. ನಂತರ ೧೯೦೮–೧೯೧೦ ರ ವರೆಗೆ ಹುಬ್ಬಳ್ಳಿಯಲ್ಲಿ ಉಪದೇಶಕರಾಗಿ, ೧೯೧೧–೧೨ ರ ವರೆಗೆ ಧಾರವಾಡದ ವಿದ್ಯಾರ್ಥಿ ನಿಲಯದ ಮುಖ್ಯಾಧಿಕಾರಿಯಾಗಿ, ೧೯೧೩–೧೬ರ ವರೆಗೆ ಬೆಟಗೇರಿಯ ಅನಾಥ ಶಾಲೆಯ ಮುಖ್ಯಾಧಿಕಾರಿಯಾಗಿ, ೧೯೧೭–೨೦ ಮುಂಡರಗಿಯಲ್ಲಿ ಮತ್ತು ೧೯೨೦–೨೬ರ ವರೆಗೆ ಧಾರವಾಡದ ಮಿಶನ್ ಶಾಲೆಯಲ್ಲಿ ಬೈಬಲ್ ಶಿಕ್ಷಕರಾಗಿ, ತದನಂತರ ಹಾವೇರಿಯಲ್ಲಿ ಮಿಶನ್ ಸೇವಕರಾಗಿ ಕೆಲಸ ಮಾಡಿ, ೧೯೪೨ರ ಜನೆವರಿಯಂದು ನಿವೃತ್ತರಾದರು.

ರೆ. ಉತ್ತಂಗಿಯವರು ಶ್ರೇಷ್ಠ ಸಂಶೋಧಕರು, ಸಾಹಿತಿಗಳು, ಸಂಪಾದಕರು, ವಾಗ್ಮಿಗಳು. ರೆವರಂಡ ವುರ್ಥರ್ ಎಂಬವರಿಗೆ ಕನ್ನಡ ಕಲಿಸುವಾಗ, ಸರ್ವಜ್ಞ ವಿಷಯಕವಾಗಿ ಹೆಚ್ಚಾಗಿ ಓದಬೇಕೆಂಬ ಅಭಿಲಾಷೆ ಅವರಲ್ಲಿ ಉಂಟಾಯಿತು. ಚನ್ನಪ್ಪನವರು ಕ್ರೈಸ್ತ ಧರ್ಮವನ್ನು ಬೋಧಿಸಿದ್ದರೂ, ಅವರು ಅನ್ಯಧರ್ಮವನ್ನು ಹೀಗಳೆಯಲಿಲ್ಲ. ಕ್ರಿಶ್ಚಿಯನ್‌ರಾದವರು ಬ್ರಿಟಿಶರ ಬಾಲಬಡಕರು ಎಂಬ ಅಪಖ್ಯಾತಿ ಇದ್ದಾಗ ಚನ್ನಪ್ಪನವರು ಜನತೆಯಲ್ಲಿ ರಾಷ್ಟ್ರಭಕ್ತಿಯುಂಟಾಗುವ ಹಾಗೆ ಅನೇಕ ಕೃತಿಗಳನ್ನು ರಚಿಸಿದರು.

ಶ್ರೀಯುತರ ಕೃತಿಗಳಲ್ಲಿ ಬನಾರಸಕ್ಕೆ ಬೆತ್ಲಹೇಮಿನ ವಿನಂತಿ (೧೯೨೧); ಹಿಂದೂ ಸಮಾಜದ ಹಿತಚಿಂತಕ (೧೯೨೧) (ಇದರಲ್ಲಿ ಭಾರತದ ಘೋರ ರೋಗವಾದ ಜಾತೀಯತೆಯನ್ನು ಹೊಡೆದು ಹಾಕಬೇಕೆಂಬ ಪ್ರತಿಪಾದನೆಯಿದೆ); ಮಕ್ಕಳ ಶಿಕ್ಷಣಪಟ (೧೯೨೩); ಸರ್ವಜ್ಞನ ವಚನಗಳು (೧೯೨೪) (ಸರ್ವಜ್ಞ ವಚನಗಳಿಗೆ ೧೦೮ ಪುಟದ ಸುದೀರ್ಘವೂ ಪಾಂಡಿತ್ಯಪೂರ್ಣವೂ ಆದ ಮುನ್ನುಡಿಯನ್ನು ಬರೆದಿದ್ದಾರೆ); ನಾರಾಯಣ ವಾಮನ ಟಿಳಕರ ಜೀವನ ಚರಿತ್ರೆ (೧೯೨೭) (ಇದು ಜೆ. ಸಿ. ವಿನ್ಸೊ ಅವರ ಇಂಗ್ಲಿಷ್ ಕೃತಿಯ ಅನುವಾದ. ಇದು ಮಹಾರಾಷ್ಟ್ರದ ಉಜ್ವಲ ದೇಶಾಭಿಮಾನಿಯೊಬ್ಬನ ಜೀವನ ಚರಿತ್ರೆ); ಬಸವೇಶ್ವರನೂ ಅಸ್ಪೃಶ್ಯರ ಉದ್ಧಾರವೂ (೧೯೩೩) (ಇದನ್ನು ಶ್ರೀಯುತರು ಮಹಾತ್ಮಾ ಗಾಂಧಿಯವರಿಗೆ ಅರ್ಪಿಸಿದ್ದಾರೆ); ಸಾಧು ಸುಂದರಸಿಂಗರ ಅನುಭವಸಾರ ಇಲ್ಲವೆ ದೃಷ್ಟಾಂತದರ್ಪಣ (೧೯೩೯); ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯವರ ವಚನಗಳು (೧೯೫೦); ಆದಯ್ಯನ ವಚನಗಳು, ಸಿದ್ಧರಾಮ ಸಾಹಿತ್ಯ ಸಂಗ್ರಹಗಳು, ಮೊದಲಾದುವನ್ನು ಹೇಳಬಹುದು. ಅವರ ಕೊನೆಯ ಕೃತಿಯಾದ ಮೃತ್ಯುಂಜಯ ಎನ್ನುವುದು ಶ್ರೀಯುತರು ಕ್ರಿಸ್ತನ ಜೀವನದ ರಹಸ್ಯವನ್ನು ತಿಳಿದುಕೊಳ್ಳಲು ಮಾಡಿದ ಪ್ರಯತ್ನವಾಗಿದೆ. ಮರಣವನ್ನು ಗೆದ್ದು ವಿಜೃಂಭಿಸಿದ ಕ್ರಿಸ್ತನ ಜೀವನದ ವಿವರಣೆಯೇ ಇಲ್ಲಿಯ ಕಥಾವಸ್ತುವಾಗಿದೆ.

ಇವೂ ಅಲ್ಲದೆ, ಶ್ರೀಯುತರು ಸ್ವಂತವಾಗಿಯೂ ಇತರರ ಸಹಕಾರದೊಡನೆಯೂ 'ಕಂಪ್ಲೀಟ್ ಕಂಕಾರ್ಡನ್ಸ ಟು ದ ಭಗವದ್ಗೀತಾ'; 'ಲಿಂಗಾಯತಿಸಮ್–ಎ ಫೇತ್, ಫಿಲಾಸಫಿ ಆ್ಯಂಡ್ ರಿಲಿಜನ್'; 'ಬಸವ ಆ್ಯಂಡ್ ಅನುಭವ ಮಂಟಪ', 'ವಂಡರ್‌ಫುಲ್ ಚೈಲ್ಡ ಆಫ್ ಗಾಡ್', 'ಎಲ್ಲಮ್ಮ, ಎ ಗಾಡೆಸ್ ಆಫ್ ಸೌಥ್ ಇಂಡಿಯಾ' –ಮೊದಲಾದ ಕೃತಿಗಳನ್ನು ಇಂಗ್ಲಿಷ್ ಭಾಷೆಯಲ್ಲಿ ರಚಿಸಿದರು.

ಚನ್ನಪ್ಪನವರ ಸಾಹಿತ್ಯ ಸೇವೆಯನ್ನು ಮೆಚ್ಚಿದ ಕನ್ನಡ ಜನತೆ ಅವರನ್ನು ೧೯೪೯ರಲ್ಲಿ ಕಲಬುರ್ಗಿಯಲ್ಲಿ ನೆರವೇರಿದ ೩೨ನೆಯ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತು. ಹೀಗೆ, ಬಹುಮುಖವೂ, ಮೌಲಿಕವೂ ಆದ ಸೇವೆಯನ್ನು ಅಖಂಡವಾಗಿ ೬೫ ವರ್ಷಕಾಲ ಸಲ್ಲಿಸಿ, ಚನ್ನಪ್ಪನವರು ತಮ್ಮ ೮೧ನೆಯ ವರುಷದಲ್ಲಿ ಅಂದರೆ ಸನ್ ೧೯೬೭ರಲ್ಲಿ ಧಾರವಾಡದಲ್ಲಿ ಕ್ರೈಸ್ತಪದವನ್ನು ಸೇರಿದರು.

—

ಭೂಮೀಶ ಕವಿ

(ಸು. ೧೮೮೩)

ಇವರ ನಿಜವಾದ ಹೆಸರು ಫಕೀರಪ್ಪಾ ಬಿನ್ ಬಸಪ್ಪಾ ಕರಡೀಗುಡ್ಡ. ಇವರು ಭೂಮೀಶ ಎಂಬ ಕಾವ್ಯನಾಮದಿಂದ ಬರೆದರು.

ಇವರು 'ಬರಗಾಲ ವರ್ಣನೆ' ಎಂಬ ೨೫ ಭಾಮಿನಿ ಷಟ್ಪದಿಗಳುಳ್ಳ ಚಿಕ್ಕ ಪುಸ್ತಕವನ್ನು ಪ್ರಕಟಿಸಿದ್ದಲ್ಲದೆ, 'ಹರಿಲೀಲಾಮೃತಸಾರ ಅಥವಾ ದಶಾವತಾರ ಸ್ತೋತ್ರ' ಎಂಬ ೨೮ ಪುಟದ ಚಿಕ್ಕ ಪುಸ್ತಕವನ್ನೂ ಬರೆದು ಪ್ರಕಟಿಸಿದ್ದಾರೆ.

ಹರಿಲೀಲಾಮೃತಸಾರ ಅಥವಾ ದಶಾವತಾರ ಸ್ತೋತ್ರ (೧೮೮೩) :

ಈ ಪುಸ್ತಕ ಸನ್ ೧೮೮೩ರಲ್ಲಿ ಧಾರವಾಡದ ಜ್ಞಾನವರ್ಧಕ ಮುಂದ್ರಾಕ್ಷರಶಾಲೆಯಲ್ಲಿ ಮುದ್ರಿತವಾಯಿತು. ಪ್ರಸ್ತಾವನೆಯಲ್ಲಿ ಹೀಗಿದೆ : "ಈ ಭೂತಳದ ಮೇಲಣ ಪ್ರತಿ ಒಬ್ಬ ಮನುಷ್ಯನಲ್ಲಿ ಯಾವದಾದರೊಂದು ವಿಧದ ವ್ಯಸನವು ಇದ್ದೇ ಇರುತ್ತದೆ; ಅದು ನಿಂದ್ಯವಿರಲಿ ಅಥವಾ ವಂದ್ಯವಿರಲಿ. ಅದರಂತೆ ನನ್ನಲ್ಲಿ 'ಗ್ರಂಥರಚನಾ' ವ್ಯಸನವು ಪೂರ್ಣವಾಗಿ ನೆಲೆಗೊಂಡದ್ದರಿಂದ, ನನಗೆ ಭೂಮೀಶನು ಕರುಣೆಯಿಂದ ಕೊಟ್ಟ ಬುದ್ಧಿಯನವಲಂಬಿಸಿ, ನಾನು ಈ ಕೃತಿಯನ್ನು ರಚಿಸಿದ್ದೇನೆ. ಇದನ್ನು ಸೂಜ್ಞರಾದವರು ಪೂರ್ಣಮನಸ್ಸಿನಿಂದ ಓದಿ ತಿಳಕೊಂಡು, ತಮಗ ಕಂಡಬಂದ ನಿಜವಾದ ದೋಷಗಳನ್ನು, ನನಗೆ ಯಾವದೇ ಮಾರ್ಗದಿಂದಲಾದರೂ ತಿಳಿಯುವಂತೆ ಮಾಡಿದರೆ, ಅವರಿಗೆ ನಾನು ಜೀವದಿಂದಿದ್ದು, ಈ ಗ್ರಂಥವು ಪುನರಾವೃತ್ತಿ ಮುಂದ್ರಿಕೆಯನ್ನು ಕಾಂಬುವ ಹಣೆಯ ಬರಹವನ್ನುಳ್ಳದ್ದು ಇದ್ದರೆ, ಅವ್ಯಾಳ್ಯಾ, ಸೂಜ್ಞರು ತೋರಿಸಿದ ದೋಷಗಳನ್ನೆಲ್ಲ ತ್ಯಜಿಸಿ ಮುದ್ರಿತ ಮಾಡಿ ನಾನು ಅವರ ಬಹಳೇ ಉಪಕಾರವನ್ನು ನೆನಸುವೆನು." ಇದು ಭಾಮಿನಿ ಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ಪದ್ಯಸಂಖ್ಯೆ ೧೪೫.

ಮೇಲಿನ ಅವತರಣಿಕೆಯನ್ನು ನೋಡಿದಾಗ, ಕನ್ನಡ ಗದ್ಯಶೈಲಿ ಗ್ರಾಂಥಿಕ ಮತ್ತು ಆಡುನುಡಿಯ ನಡುವೆ ಇನ್ನೂ ಕುದಿಗೊಳ್ಳುತ್ತಿದ್ದ ಬಗೆಯನ್ನು ಕಾಣಬಹುದು. ಅವ್ಯಾಳ್ಯಾ, ಮುದ್ರಿಕೆ— ಮೊದಲಾದುವು ಕರಗಿ ಇಂದಿನ ಭಾಷಾಏಕರೂಪತೆಗೆ ತಿರುಗಬೇಕಾದರೆ, ಬಹಳಷ್ಟು ವೇಳೆ ಹಿಡಿಯಿತು.

ಕನ್ನಡದಲ್ಲಿ ಪುಸ್ತಕಗಳನ್ನು ಕೊಳ್ಳುವವರೇ ಇಲ್ಲ ಎಂದು ಪರಿತಪಿಸಿ ಭೂಮೀಶ ಕವಿಯು

ಮರಾಠಿ ಭಾಷೆಯಲ್ಲಾದರೋ ಎಂತಹ ಹತಭಾಗ್ಯನೂ ಬರೆದ ಪುಸ್ತಕಗಳನ್ನು ಜನರು ಕೊಂಡು ಓದುತ್ತಾರೆಂದು ಹೇಳುತ್ತಾರೆ :

"ಮಹಾರಾಷ್ಟ್ರ ಭಾಷೆಯ ಗ್ರಂಥಗಳ ಕಡಿಗೆ ಸ್ವಲ್ಪ ನೋಡಿದರೆ, ನನ್ನಂಥ ಗೀಳನಿಂದ ರಚಿತವಾದ ಗ್ರಂಥಗಳು ಹೊರಬೀಳುವದು ಒಂದೇ ಅವಕಾಶ, ಕೊಡ್ಲೆ ಮುದ್ರಣ ಎಂತ್ರದ ಮಾರ್ಗವೇ : ಇದಕ್ಕೆ ಗ್ರಂಥಕಾರರೇ ಕಾರಣವೇನು ? ಅಲ್ಲ. ಉತ್ತೇಜಕರು : ಅಂದಮೇಲೆ ಆ ಗೀಳ ಗ್ರಂಥಕಾರನ ಬುದ್ಧಿಯು ಮತ್ತೂ ಚಲೋ ಗ್ರಂಥಗಳನ್ನು ರಚಿಸುವದಕ್ಕೆ, ತೀಕ್ಷ್ಣವಾಗದೆ ಯಾಕೆ ಬಿಟ್ಟೀತು ? "

ಈ ಕೃತಿಯ ಪ್ರಾರಂಭದ ಪದ್ಯದಲ್ಲಿ ವಿಷ್ಣುವನ್ನು ಹೀಗೆ ಪ್ರಾರ್ಥಿಸಲಾಗಿದೆ :

ಶ್ರೀಯರಸ ನಿಂನಂಘ್ರಿಯುಗಳಿಗೆ
ಕಾಯವನು ನೀಡುವೆನು ಭಕ್ತಿಲಿ
ಕಾಯುವದು ಜಡಮತಿಯ ಮನುಜನ ಪಂಕರುಹನಾಭಾ
ಮಾಯೆಯಿಂದಲಿ ಸಕಲಲೋಕವ
ಪಾಯವಿಲ್ಲದೆ ರಕ್ಷಿಪೆಯೊ ಕಮ
ಲಾಯುತಾಂಬಕ ತಿಳಿಯಲಾರೆನು ನೀನ ಮಹಿಮೆಯನೂ ॥

ಅನಂತರ,

"ಸಿರದಿ ಗಂಗೆಯ ಧರಿಸಿದಾತ, ಪರಮಪಾವನ ಹರಿಯಮಿತ್ರ'' ನಾದ ಹರನನ್ನು ವರ್ಣಿಸ ಲಾಗಿದೆ. ಸರಸ್ವತಿಯ ವರ್ಣನೆ ಹೀಗಿದೆ :

ಕಮಲಜಾಕ್ಷಿಯೆ ಕಮಲಜಸ್ತ್ರೀ
ಕಮಲಮುಖಿ ತವಪಾದಕಮಲಕೆ
ನಮಿಸಿ ಬೇಡುವೆ ಮಂದಬುದ್ಧಿಲಿ ಕರುಣದಿಂದೆನಗೇ
ಸುಮನಸರು ತಲೆ ತೂಗುವಂದದಿ
ವಿಮಲವಾಣಿಯನಿತ್ತು ಘಳಿಲನೆ
ಕಮಲನಾಭನ ತುತಿಯ ಮಾಡಿಸು ಮಾತೆ ಸುಪವಿತ್ರೇ

ಭುವನದೊಳಗತಿಕೀರ್ತಿಹೊಂದಿದ ಕವಿಗಳೆಲ್ಲರ ಕಬ್ಬವನು ನಾ
ಲವಲವಿಕೆಯಿಂದೋದಿ ತೋಷಿತನಾಗಿ ಭಕ್ತಿಯಲೀ
ಅವರ ಪಾದಂಗಳನು ಭಜಿಸುತ ತವಕದಿಂದಲೆ ಸಾರ್ದೆ ನಾನೀ
ಕವಿತೆಯನು ನೋಡುವದು ಸುಮನರು ಮಮತೆಯಿಂದೀಗಾ

ಎಲ್ಲ ಕಬ್ಬಿಗರೋಲಹಂಕಾರಿಲ್ಲ ನನ್ನಲಿ ದೋಷವಿರಹಿತ
ಸಲ್ಲಲಿತ ಕೃತಿಯೆಂನದೆಂಬುದು ಲೋಕ ನಗುವಂತೇ
ಬಲ್ಲ ಮನುಜನೆ ಬಲ್ಲನಲ್ಲದೆ, ಬಲ್ಲೆನೆಂಬಾತ್ಮಹರ್ಷಿಯ
ಗೆಲ್ಲಿಯದು ಮತಿಮರಗಳೇರ್ವರ ಕಾಲ್ಗಳಿರುವಿಕೆಯೂ

–ಎಂದು ಪೂರ್ವಕವಿ ಸ್ತುತಿಗೈದು ತನ್ನ ವಿನಯವನ್ನೂ, ಆತ್ಮಜ್ಞಾನವನ್ನೂ ತೋರಿದ್ದಾರೆ.

ಕವಿ ಸ್ವವಿಷಯಕವಾಗಿ ಹೀಗೆ ಹೇಳುತ್ತಾರೆ :

ಪರಮಶೈವ ಸುಜಾತಿಯುದ್ಭವ
ಕರಡಿಗುಡ್ಡ ಪನಾಮಧಾರೀ
ವರಬಸವತನುಜಾತ ಸರಸಫಕೀರನೆಂಬವನೂ
ವಿರಚಿಸಿದನೀ ಕೃತಿಯ ಹರಸಖ
ಶಿರಿವರನ ಕರುಣಾಕಟಾಕ್ಷವು ದೊರೆಯಲೋಸುಗವು........

ಕೃತಿ ಬರೆದವ ಪರಮಶೈವಸುಜಾತಿಯುದ್ಭವ, ವರಬಸವತನುಜಾತ ಸರಸಫಕೀರನೆಂಬವನು. ಕೃತಿಗೀಶ್ವರ ವೈಷ್ಣವರ ಪರಮದೈವತ ಶ್ರೀವಿಷ್ಣುವು. ಈ ಹೊಂದಾಣಿಕೆ ಹೇಗೆ ? ಹರನಂ ಹರ ಗಣಂಗಳನಲ್ಲದೆ ಇತರರಂ ಭಜಿಸದ ಪರಂಪರೆಗೆ ಇದು ವ್ಯತಿರಿಕ್ತವಲ್ಲವೇ ? ವೀರ–ಶೈವ, ವೀರ–ವೈಷ್ಣವ ಸಂಪ್ರದಾಯದ ದಶಾವತಾರವನ್ನು ವರ್ಣಿಸುವದೇ ? ಈ ವಿಷಯ ಕವಿಗೂ ಗೊತ್ತಿದೆ. ಅದಕ್ಕೆ ಅವನ ಉತ್ತರವಿದು :

ಹರಮತಸ್ಥನು ಹರಿಯ ಲೀಲೆಯ
ನೊರೆದನೆಂತೆಂದೆಂನೊಳಲ್ಪತೆ
ಹೊರಿಸಲಾಗದು ಸೂಜ್ಞರಾದವರೆರಡು ತಿಳಿಯದಲೇ
ಹರಿಯು ಭಕ್ತಪ್ರಿಯನೆಂಬುದು
ಪರಿಣತರ ಶೋಧಾಂತದಲಿ ಬರ
ದಿರದು ಸಾರುವೆನಂಜದಲೆ ಭೂಮೀಶನಾಜ್ಞೆಯಲಿ

ಪಿಂತೆ ಕೆಲ ಭಕುತರ್ಕಳೊಳಗಿ
ರ್ಪಂತರಂಗದ ನಿರ್ಮಲತೆಗೆಂ
ತೆಂತೊ ಮಾಡಿದನೀ ದಯಾಂಬುಧಿ ಸುಪ್ರಶಿದ್ಧವಿದೂ
ಅಂತವರನನುಕರಿಸಿ ನಿರ್ಮಲ
ಚಿಂತೆಯಿಂ ಹರಿಭಜನೆ ಮಾಡಿದೆ
ನೆಂತುನಂನೊಳ್ ಭೇದ ತಿಳಿವನು ವರದ ಭೂಮೀಶಾ

–ಕಾವ್ಯದ ಕೊನೆಗೆ ವಿಷ್ಣು ಶಿವರೂಪವನ್ನು ಅರ್ಚಿಸಿದ ಸಾರಾಂಶವೂ ಇದೆ.

ಹರಭಕ್ತನು ಹರಿಕಾವ್ಯ ಬರೆದ ಅಪೂರ್ವ ಕಲಾಕೃತಿಯಿದು. ಭಾವನೆಯ ಪ್ರಾಮಾಣಿಕತೆ, ಗಾಢವಾದ ವಿಷಯಜ್ಞಾನ, ಶೈಲಿಯ ಲಾಲಿತ್ಯ, ಕವಿಯ ವಿಷಯ ಮತ್ತು ಭಕ್ತಿಭಾವಗಳ ದೃಷ್ಟಿಯಿಂದ ಹೊಸಗನ್ನಡ ಉದಯ ಕಾಲದಲ್ಲಿ 'ದಶಾವತಾರ ಸ್ತೋತ್ರ' ಒಂದು ಅಪೂರ್ವ ಕೃತಿಯೆಂದೇ ಹೇಳಬೇಕು.

—

ಹನುಮಂತರಾವ ಗೋವಿಂದರಾವ ದೇಶಪಾಂಡೆ

(೧೮೮೩ – ೧೯೪೩)

ಇವರು ಮುಂಬಯಿ ವಿಶ್ವವಿದ್ಯಾಲಯದ ಬಿ. ಎ. ಪದವೀಧರರು. ಕೆಲಕಾಲ ಧಾರವಾಡದ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರಾಗಿದ್ದರು.

ಸಂಸಾರ ಸುಖ (೧೯೧೫) :

ಶ್ರೀಯುತರು ಲಾರ್ಡ ಆ್ಯವ್‌ಬರಿ ಅಥವಾ ಸರ್ ಜಾನ್ ಲುಬಾಕ್ ಅವರು ಬರೆದ 'ದಿ ಪ್ಲೆಝರ್ಸ್ ಆಫ್ ಲಾಯಿಫ್' ಎಂಬ ಪುಸ್ತಕದ ಆಧಾರದ ಮೇಲಿಂದ 'ಸಂಸಾರ ಸುಖ' ಎಂಬ ಗ್ರಂಥವನ್ನು ರಚಿಸಿದರು. ಇದು ಧಾರವಾಡದ ಕರ್ನಾಟಕ ಗ್ರಂಥ ಪ್ರಸಾರಕ ಮಂಡಲದ ಎರಡನೆಯ ಗ್ರಂಥವಾಗಿ ಸನ್ ೧೯೧೫ರಲ್ಲಿ ಪ್ರಕಟಿಸಲ್ಪಟ್ಟಿತು. ಈ ಗ್ರಂಥಕ್ಕೆ ವಿದ್ಯಾವರ್ಧಕ ಸಂಘದ ಬಹುಮಾನ ದೊರಕಿದೆ. ಆ್ಯವ್‌ಬರಿಯವರ ಇಂಗ್ಲಿಷ್ ಗ್ರಂಥವು ಆ ಕಾಲದ ಪ್ರಸಿದ್ಧ ಗ್ರಂಥವಾಗಿದ್ದು ೪೨ ಆವೃತ್ತಿಗಳನ್ನು ಕಂಡಿತ್ತು. ಇಂಥ ಜನಪ್ರಿಯವಾದ ಕೃತಿಯನ್ನು ಕನ್ನಡ ಓದುಗರಿಗಾಗಿ ಹನುಮಂತರಾವ ದೇಶಪಾಂಡೆಯವರು ಕನ್ನಡಿಸಿದ್ದು ಮಾತ್ರವಲ್ಲದೆ, ಆ್ಯವ್‌ಬರಿಯವರಕಿಂತ ಒಂದು ಹೆಜ್ಜೆ ಮುಂದು ಹೋಗಿದ್ದಾರೆ. ಆ್ಯವ್‌ಬರಿಯವರು ತಾವು ಮಾಡಿಕೊಂಡ ಟಿಪ್ಪಣಿಗಳ ಆಧಾರದ ಮೇಲಿಂದ ಈ ಪುಸ್ತಕವನ್ನು ಬರೆದರು. ಅದ್ದರಿಂದ, ಹಲಕೆಲವು ಕಡೆಯಲ್ಲಿ ವಿವರಣೆ ತೀರ ಸಂಕ್ಷಿಪ್ತವಾಗಿ ಅರ್ಥವಾಗುವಂತಿರುವದಿಲ್ಲ. ಅದ್ದರಿಂದ, ಶ್ರೀ ದೇಶಪಾಂಡೆಯವರು ಈ ಭಾಗಗಳನ್ನು ಯುಕ್ತವಾಗಿ ವಿವರಿಸಿದ್ದಲ್ಲದೆ, ಆ ಸಂದರ್ಭಗಳಿಗೆ ಒಗ್ಗುವಂತೆ ಸಂಸ್ಕೃತ, ಕನ್ನಡ, ಹಾಗೂ ಮರಾಠಿ ಅವತರಣಿಕೆಗಳನ್ನು ಕೊಟ್ಟು ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಿದ್ದಾರೆ.

ಉದಾಹರಣೆಗೆ, ೬ ನೆಯ ಅಧ್ಯಾಯದ 'ವೇಳೆಯ ಬೆಲೆ'ಯ ಎಂಬುದರ ಬಗೆಗೆ ಬರೆಯುವಾಗ :

ಕಾಲಃ ಸುಪ್ತೇಷು ಜಾಗರ್ತಿ, ಕಾಲೋ ಹಿ ದುರತಿಕ್ರಮಃ
ಕಾಲಃ ಸರ್ವೇಷು ಭೂತೇಷು ಚರತೀ ಅವಿಧೃತಃ ಸಮಃ

– ಎಂಬ ಮಹಾಭಾರತೋಕ್ತಿಯನ್ನೂ,

ಕಾಲೋ ನ ಯಾತೋ ವಯಮೇವ ಯಾತಾಃ
(ಕಾಲವು ಹೋಗಿಲ್ಲ– ನಾವೇ ಮಾತ್ರ ಹೋದೆವು)
ಆಲಸ್ಯಂ ಹಿ ಮನುಷ್ಯಾಣಾಂ ಶರೀರಸ್ಥೋ ಮಹಾರಿಪುಃ

– ಎಂಬ ಭರ್ತೃಹರಿಯ ಉಕ್ತಿಗಳನ್ನೂ ಕೊಡುತ್ತಾರೆ.

'ಪ್ರವಾಸ ಸುಖ'ದ ಬಗೆಗೆ ಹೇಳುವಾಗ :

ಯಸ್ತು ಸಂಚರತೇ ದೇಶಾನ್....
ತಸ್ಯ ವಿಸ್ತಾರಿತಾ ಬುದ್ಧಿಃ ತೈಲಬಿಂದುರಿವಾಂಭಸಿ
ತೀರ್ಥಾನಾಂ ಅವಲೋಕನಂ ಪರಿಚಯಃ ಸರ್ವತ್ರ ವಿತ್ತಾರ್ಜನಂ
ನಾನಾಶ್ಚರ್ಯನಿರೀಕ್ಷಣಂ ಚತುರತಾ ಬುದ್ಧೇಃ ಪ್ರಶಸ್ತಾಗಿರಃ
ಏತೇ ಸಂತಿ ಗುಣಾಃ ಪ್ರವಾಸವಿಷಯೇ–

ಎಂದು ತಿಳಿಸುತ್ತಾರೆ.

ಶ್ರೀಯುತರ ಶೈಲಿಯ ನಿದರ್ಶನವಾಗಿ ಕೆಳಗಿನ ಪರಿಚ್ಛೇದವನ್ನು ಕೊಡಬಹುದು :

"ಪ್ರವಾಸವು ಈ ಕಾಲದಲ್ಲಿ ಸುಲಭವಾದಷ್ಟು ಮತ್ತೆ ಯಾವ ಕಾಲದಲ್ಲಿಯೂ ಆಗಿದ್ದಿಲ್ಲ. ಪೂರ್ವಕಾಲದಲ್ಲಿ ಪ್ರವಾಸವು ಪ್ರಯಾಸದ ಕೆಲಸವಾದುದರಿಂದ ಭರ್ತೃಹರಿಯು 'ಕಿಂ ಸುಖಂ ಅಪ್ರವಾಸಗಮನಂ', ಸುಖವು ಯಾವುದೆಂಬ ಪ್ರಶ್ನೆಗೆ– 'ಪ್ರವಾಸ ಮಾಡದೆ ಇರುವದು'ಎಂದು ಉತ್ತರ ಕೊಟ್ಟನು. ಆದರೆ ಆ ಸ್ಥಿತಿಯೆಲ್ಲ ಈಗ ಬದಲಾಗಿದೆ."

ನಾಲ್ಕನೆಯ ಅಧ್ಯಾಯವಾದ 'ಕನ್ನಡ ಭಾಷೆಯಲ್ಲಿ ಉತ್ತಮ ಗ್ರಂಥಗಳು' ಎಂಬುದು ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ತುಂಬಾ ಮಹತ್ವದ ಅಧ್ಯಾಯ. ಈ ಅಧ್ಯಾಯದಿಂದ ೧೯೧೫ರ ಸುಮಾರು ಜನಪ್ರಿಯವಾಗಿದ್ದ ತತ್ಕಾಲೀನ ಗ್ರಂಥಗಳ ಕಲ್ಪನೆಯನ್ನು ಮಾಡಿಕೊಳ್ಳಬಹುದಾಗಿದೆ. ಹೀಗೆ ಉಲ್ಲೇಖಿವಾದ ಈ ಗ್ರಂಥಗಳಲ್ಲಿ ಈ ಕೆಳಗಿನವುಗಳನ್ನು ಹೇಳಬಹುದು :

೧) ಭಗವದ್ಗೀತಾ ಟೀಕೆ– ತುಪ್ಪುಲ ವೆಂಕಟಾಚಾರ್ಯ
೨) ನಳದಮಯಂತಿ ಸ್ವಯಂವರ– ಬಸವಪ್ಪಶಾಸ್ತ್ರಿ
೩) ದಿಲೀಪ ಚರಿತೆ } ಎಸ್. ಜಿ. ನರಸಿಂಹಾಚಾರ್ಯ
೪) ಅಜನೃಪಚರಿತೆ }
೫) ಶ್ರೀಕೃಷ್ಣರಾಜವಾಣೀವಿಲಾಸದ ಗ್ರಂಥಗಳು
೬) ಕಾದಂಬರಿ– ತೂರಮರಿ
೭) ಕಥಾಸಂಗ್ರಹ
೮) ಬಿ. ವೆಂಕಟಾಚಾರ್ಯರ ಕಾದಂಬರಿಗಳು
೯) ರಾಸೆಲಾಸ್– ಬೋಳೆ
೧೦) ಗಲಿವ್ಹರನ ದೇಶಸಂಚಾರ
೧೧) ಇಸೋಪನ ನೀತಿಸಂಗ್ರಹ
೧೨) ನೀತಿಮಂಜರಿ– ಗ. ಹು. ಹೊನ್ನಾಪುರಮಠ
೧೩) ಯವನಯಾಮಿನೀವಿನೋದ
೧೪) ಬಾಲಮಿತ್ರ– ಗಾಡಗೋಳಿ
೧೫) ಉತ್ತರ ಹರಿಶ್ಚಂದ್ರ– ಎಂ. ಕೃಷ್ಣಾಚಾರ್ಯ

೧೬) ರಾಬಿನ್‌ಸನ್ ಕ್ರೂಸೋ

೧೭) ಚಿತ್ತೂರಿನ ಮುತ್ತಿಗೆ— ಮುದವೀಡಕರ

೧೮) ಬಿಘೋರ್ಲ್ಯನ ಚರಿತ್ರೆ— ವೆಂಕಟ ರಂಗೋ ಕಟ್ಟಿ

೧೯) ಸತ್ಯರಾಜಾ ಪೂರ್ವದೇಶದ ಯಾತ್ರೆಗಳು

೨೦) ಆರು ಬೆರಳಿನ ಕುರುಹು— ವೆಂಕಟ ರಂಗೋ ಕಟ್ಟಿ

೨೧) ಕೇತು ತಂದ ಉಂಗುರವು— ಕೇಸೂ ಜನಾರ್ದನ ಕೊಣ್ಣೂರ.

—

ಮ. ಪ್ರ. ಪೂಜಾರ

(೧೮೮೪–೧೯೬೩)

ಪಂಡಿತ ಪೂಜಾರ ಅವರ ಪೂರ್ಣ ಹೆಸರು ಮಹದೇವ ಪ್ರಭಾಕರಶಾಸ್ತ್ರಿ ಪೂಜಾರ. ಶ್ರೀಯುತರು ವ್ಯಾಕರಣ, ಕಾವ್ಯಶಾಸ್ತ್ರಗಳಲ್ಲಿ ಪ್ರಕಾಂಡ ಪಂಡಿತರು. ಪಂಡಿತರ ಮನ್ನಣೆ ಸ್ವದೇಶದಲ್ಲಿ ಸಹ ಎಷ್ಟೋ ಸಲ ಆಗುವದಿಲ್ಲವೆನ್ನುವದಕ್ಕೆ ಡಾ. ಡಿ. ವಿ. ಗುಂಡಪ್ಪನವರು ಹೇಳಿದ ಮಾತು ಮನನೀಯ ವಾಗಿದೆ. ಗುಂಡಪ್ಪನವರು ಧಾರವಾಡಕ್ಕೆ ಬಂದಾಗ ಒಬ್ಬ ಸುಪ್ರಸಿದ್ಧ ವಕೀಲರ ಮನೆಯಲ್ಲಿ ಇದ್ದ ರಂತೆ. ಆಗ, ತಾವು ಪಂಡಿತ ಪೂಜಾರ ಅವರನ್ನು ಭೆಟ್ಟಿಯಾಗಬೇಕಾಗಿದೆ ಎಂದು ಹೇಳಿದಾಗ, ಆ ವಕೀಲ ಮಹಾಶಯರು ಯಾವ ಪೂಜಾರ ಅವರು ಎಂದು ತಮ್ಮ ಅಜ್ಞಾನವನ್ನು ವ್ಯಕ್ತಪಡಿಸಿದರಂತೆ. ಇದು ಸರಸ್ವತೀಪುತ್ರರ ದೈವ.

ಪಂಡಿತ ಪೂಜಾರ ಅವರು ಸನ್ ೧೮೮೪ನೆಯ ಇಸವಿ ನೂಲ ಹುಣ್ಣಿವೆಯ ದಿವಸ ಜನಿಸಿದರು. ಶ್ರೀಯುತರ ಮನೆತನ ಸುಪ್ರಸಿದ್ಧ ಬಂಕಾಪುರದ ಶ್ರೀ ವಿರೂಪಾಕ್ಷ ದೇವರ ಅರ್ಚಕರ ಮನೆತನ. ಇವರು ೧೯೦೦ರ ನಂತರ ಧಾರವಾಡಕ್ಕೆ ಬಂದಾಗ ಉಟ್ಟ ವಸ್ತ್ರಗಳ ಶಿವಾ ಬೇರೇನೂ ತಮಗೆ ಇರಲಿಲ್ಲ ವೆಂದು ಅನೇಕ ಸಲ ಹೇಳುತ್ತಿದ್ದರು. ಧಾರವಾಡದಲ್ಲಿದ್ದಾಗ ಸಂಸ್ಕೃತ ಪಾಠಶಾಲೆಯಲ್ಲಿ ವೇ. ಕೃಷ್ಣಶಾಸ್ತ್ರಿಗಳ ಕೈಯಲ್ಲಿ ಅಧ್ಯಯನ ಮಾಡಿದರು. ಕನ್ನಡ ಟ್ರೇನಿಂಗ್ ಕಾಲೇಜಿನಲ್ಲಿ ಅಭ್ಯಾಸ ಮಾಡಿ ಮೂರನೆಯ ವರ್ಷದ ಟ್ರೇನಿಂಗ್ ಪರೀಕ್ಷೆಯನ್ನು ೧೯೦೭ರಲ್ಲಿ ಪ್ರತಿಶತ ೭೫.೯ ಗುಣಗಳನ್ನು ಪಡೆದು ಮುಗಿಸಿದರು. ಆಗಿನ ಸರ್ಟಿಫಿಕೇಟಿನಲ್ಲಿ ಅವರು ೨೫ ರೂಪಾಯಿ ಮಾಸಿಕ ವೇತನಕ್ಕೆ ಅರ್ಹರೆಂದು ತಿಳಿಸಿದೆ.

೧೯೦೭ ರಲ್ಲಿ ಉಪ್ಪಿನಬೆಟಗೇರಿಯಲ್ಲಿ ಇವರ ಅಧ್ಯಾಪನ ವೃತ್ತಿಯು ಪ್ರಾರಂಭವಾಯಿತು. ಶೀಘ್ರವೇ ಪಂಡಿತ ಪರೀಕ್ಷೆಯ ಅಭ್ಯಾಸಕ್ಕೆಂದು ಮೈಸೂರಿಗೆ ಹೋದರು. ಮೈಸೂರಿನಲ್ಲಿ ಮುಳಿಯ ತಿಮ್ಮಪ್ಪಯ್ಯನವರ ಹೆಸರನ್ನು ಅನೇಕ ಸಲ ಅವರು ಸ್ಮರಿಸುತ್ತಿದ್ದರು. ೧೯೦೯ರಲ್ಲಿ ಪಂಡಿತ ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ತೇರ್ಗಡೆ ಹೊಂದಿದರು.

ಅಲ್ಲಿಂದ ತಿರುಗಿ ಬಂದ ಮೇಲೆ ಶಿರಕೋಳ, ಅಮ್ಮಿನಭಾವಿಗಳಲ್ಲಿ ಕೆಲದಿವಸ ಕೆಲಸ ಮಾಡಿದ ನಂತರ ೧೯೧೩. ರಲ್ಲಿ ಟ್ರೇನಿಂಗ್ ಕಾಲೇಜಿನಲ್ಲಿ ಅಧ್ಯಾಪಕರೆಂದು ಸೇರಿದರು. ೧೯೪೦ರಲ್ಲಿ ನಿವೃತ್ತರಾಗುವವರೆಗೂ ಅಲ್ಲಿಯೇ ಇದ್ದರು. ೧೯೪೦ರ ನಂತರ ೧೯೫೦ರ ವರೆಗೆ ಕೆ.ಇ. ಬೋರ್ಡ ಟ್ರೇನಿಂಗ್ ಕಾಲೇಜದಲ್ಲಿ ಅಧ್ಯಾಪಕ ವೃತ್ತಿಯನ್ನು ಮುಂದುವರಿಸಿದರು. ಶ್ರೀಯುತರದು ಸಾಧು ಜೀವನ.

ಪ್ರಾಪಂಚಿಕ ತಾಪತ್ರಯಗಳು ವಿಪರೀತವಾಗಿಯಿದ್ದರೂ ಸಹ ತಮ್ಮ ವ್ಯಾಸಂಗವನ್ನು ಅವರು ಕೊನೆಯುವರೆಗೂ ಬಿಡಲಿಲ್ಲ. ಶುಕ್ರವಾರ ಜನೇವರಿ ೫, ೧೯೬೨ರ ದಿವಸ ಇಹಲೋಕ ಯಾತ್ರೆಯನ್ನು ಮುಗಿಸಿದರು.

ಕೃತಿಗಳು :

೧) ಅಶೋಕ ಅಥವಾ ಪ್ರಿಯದರ್ಶಿ

೨) ಜೈನ ಧರ್ಮ ಪರಿಭಾಷೆ

೩) ರಾಮಾಶ್ವಮೇಧ ಸಾರಸಂಗ್ರಹ

೪) ಪಂಚತಂತ್ರಸಾರ

೫) ಜೈನಪದ್ಮಪುರಾಣ ಸಾರ

೬) ಸತ್ಕಥಾಲಾಪ

೭) ಸದ್ಗುಣಾದರ್ಶ

೮) ನುಡಿಗನ್ನಡಿ- ೨ ಭಾಗಗಳು

೯) ನುಡಿಗನ್ನಡಿ ಮತ್ತು ಛಂದೋಮಂಜರಿ

೧೦) ಹಜರತ ಮುಹಮ್ಮದ ಪೈಗಂಬರರು

೧೧) ಪಠಾಣವೀರ ಶೇರಶಹ

೧೨) ಸತಿಯೂ ಸುನೀತಿಯೂ

೧೩) ಕೆಲವು ಕನ್ನಡ ವ್ಯಾಕರಣ ವಿಚಾರಗಳು.... ಇತ್ಯಾದಿ.

-ಇವಲ್ಲದೆ 'ಸೊಗಸಿನ ಓದು' ಮೊದಲಾದ ಸರಕಾರವು ಪ್ರಕಟಿಸಿದ ವಾಚನಮಾಲೆಗಳಲ್ಲಿ ಸಂಪಾದಕ ರಾಗಿ ಕೆಲಸ ನಿರ್ವಹಿಸಿದ್ದಾರೆ. ಕನ್ನಡ ಪಾಂಡಿತ್ಯ ಪ್ರಪಂಚದಲ್ಲಿ ಮ. ಪ್ರ. ಪೂಜಾರರದು ಬಹು ದೊಡ್ಡ ಹೆಸರು.

—

ವಿ. ಪಿ. ಎಚ್. ಕಡೇಕೂಡಿ

(ಸು. ೧೮೮೫)

ಇವರ ಪೂರ್ಣ ಹೆಸರು ವೇಕಪ್ಪ ಪರಮಯ್ಯ ಕಡೇಕೂಡಿ. ಕಡೇಕೂಡಿಯವರು ನಿಸರ್ಗ ಸೌಂದರ್ಯದಿಂದ ಕೂಡಿದ ಉತ್ತರಕನ್ನಡ ಜಿಲ್ಲೆಯ ಕಡೆಯ ಕೋಡಿಯವಾಗಿದ್ದ ಕಡೇಕೂಡಿಯವರು. ಇವರ ತಂದೆಯ ಹೆಸರು ಪರಮಯ್ಯ; ತಾಯಿಯ ಹೆಸರು ಸುಬ್ಬಿ.

ಇವರೂ ಧಾರವಾಡದ ಟ್ರೇನಿಂಗ ಕಾಲೇಜದಲ್ಲಿಯೇ ಕಲಿತು, ಸನ್ ೧೯೧೦ ರಲ್ಲಿ ಕನ್ನಡ ಶಾಲಾ ಶಿಕ್ಷಕರೆಂದು ಕೆಲಸಕ್ಕೆ ಪ್ರಾರಂಭ ಮಾಡಿದರು. ಸನ್ ೧೯೪೨ ರಲ್ಲಿ ನಿವೃತ್ತಿ ಹೊಂದಿದರು. ಇವರಿಗೆ ಚಿಕ್ಕಂದಿನಿಂದಲೇ ಕಾವ್ಯರಚನೆಯ ಕಡೆಗೆ ಒಲವಿದ್ದಿತು. ಅದೂ ಅಲ್ಲದೆ. ಇವರಿಗೆ ಸಂಶೋಧನೆ ಯತ್ತಲೂ ಒಲವು ಇದ್ದಿತು. ಅದಕ್ಕಾಗಿ, ಇಡೀ ಉತ್ತರ ಕನ್ನಡ ಜಿಲ್ಲೆಯಲ್ಲೆಲ್ಲ ಸಂಚರಿಸಿ, ಹಳೆಯ ತಾಡವಾಲೆಯ ಗ್ರಂಥಗಳನ್ನು ಸಂಗ್ರಹಿಸಿ, ತಮ್ಮದೇ ಆದ 'ಕರ್ನಾಟಕ ಸುಕಾವ್ಯ ರತ್ನಾಗಾರ' ಎಂಬ ಗ್ರಂಥಭಾಂಡಾರವನ್ನು ನಿರ್ಮಿಸಿಕೊಂಡರು. ಇವರ ಅನೇಕ ಕವನಗಳು 'ಪ್ರಭಾತ', 'ಒಕ್ಕಲತನವೂ ಸಹಕಾರಿತನವೂ' ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಇವರ ಕೃತಿಗಳಲ್ಲಿ ಈ ಕೆಳಗಿನವುಗಳನ್ನು ಹೇಳಬಹುದು : ಇವರು ಬೊಬ್ಬೂರು ರಂಗಯ್ಯನ 'ಪರಶುರಾಮ ರಾಮಾಯಣ'ವನ್ನು ಶೋಧಿಸಿ ಪ್ರಕಟಿಸಿದರು. ಇದು ವಾರ್ಧಿಕ ಷಟ್ಪದಿಯಲ್ಲಿದೆ. ಅಲ್ಲದೆ, ಈ ಗ್ರಂಥವನ್ನು ಪರಿಷ್ಕರಣ ಮಾಡುವಲ್ಲಿ, ಹಲವು ಕಡೆಗೆ ತಾವು ಸ್ವತಃ ಬರೆದಂಥ ಕೆಲವು ಪದ್ಯಗಳನ್ನೂ ಸೇರಿಸಿದ್ದಾರೆ. ಆದ್ದರಿಂದ, ಇವುಗಳಲ್ಲಿ ಬೊಬ್ಬೂರು ರಂಗಯ್ಯ ಬರೆದವು ಯಾವುವು ಎಂಬುದು ಸ್ಪಷ್ಟವಾಗಿ ತಿಳಿಯುವಂತಿಲ್ಲ. ಆದರೂ ಇಲ್ಲಿ ಬರುವ ಈ ವರ್ಣನೆಗಳನ್ನು ನೋಡ ಬಹುದು :

ವಿಪ್ರರು :

ಎಲ್ಲೆಲ್ಲಿ ಮುಂಜಿಯಿಂದೆಲ್ಲೆಲ್ಲಿ ಮದುವೆ ನಾ
ಳೆಲ್ಲೆಲ್ಲಿ ಶೋಭನಗಳೆಲ್ಲೆಲ್ಲಿ ಭೋಜನಗ
ಳೆಲ್ಲೆಲ್ಲಿ ಶುಭಕಾರ್ಯಮೆಲ್ಲೆಲ್ಲಿ— ಶುಭಕಾರ್ಯಮೆಂದೆಲ್ಲ ಕಡೆಗೆ ಬಿಡದೆ
ಅಲ್ಲಲ್ಲಿ ಕೇಳಂತ್ರಖಿಲ ಛಾತ್ರ ವರ್ಗಮಂ
ಅಲ್ಲಲ್ಲಿ ಕೂಡಿಕೊಂಡೈದುತ್ತೆ ಶೀಘ್ರದಿಂ
ದಲ್ಲಲ್ಲಿ ನಿಂತು ದಕ್ಷಿಣೆಯೂಟಗಳನರಸುತುಂಡು ಚರಿಪಾ ವಿಪ್ರರು

ತಿರುಮಲವಧಾನಿಯುಂ ದೇಶಸ್ಥ ಜೋಯಿಸನುಂ
ಕರಿಯಣ್ಣುಪಾಧ್ಯನಂ ಸುಬ್ರಾಯ ಭಟ್ಟನಂ
ನರಸಿಂಹ ಶಾಸ್ತ್ರಿಯುಮನಂತದೀಕ್ಷಿತನನಿರದಗ್ನಿಹೋತ್ರಿಯುಮೀಗಳ್
ಕರೆಯೊ ರಾಂಮಾಣಿ ತಿಂಮಾಣಿ ಬೋಂಮಾಣಿ ಶಂ
ಕರ ಶಾಸ್ತ್ರಿಗಳೆ ನಿಮ್ಮ ಹಿರಿಯರಾವೆಡೆಗಿಂದು
ತೆರಳ್ವರ್ಪರಕಟಕಟ ರಾಜಕನ್ಯಾ ವಿವಾಹಂ ತಪ್ಪಿತವರಿಗೆನುತೆ

ಮಾವನಂ ಭಾವನಂ ಜಾಮಾತರಂ ನೀನ
ನಾವಗಂ ಕರೆಯುತೊಡಗೂಡದೇ ಬರಲಾರೆ
ಸಾವ್ಕಾರರ ಮನೆಯು ಲಗ್ನಮಲ್ಲೆಂದು ಭೂಪಾಲರರಮನೆಯು ಲಗ್ನ
ನಾವು ತಡಮಾಡಿ ಪೋದರೆ ಲಗ್ನ ತಪ್ಪಿ ಸಂ
ಭಾವನೆಯು ಸರಿಯಾಗಿ ದೊರೆಯಲಾರದು ನಮಗೆ
ನಾವಗಲವನೆನಗದೇಕರೇಕರಿ ಪೋಪೋ ಹೊರಡಿರೀಗಳೆ ಬೇಗನೆ ೧

ಇದೂ ಅಲ್ಲದೆ, ಪಾಲಗಳ್ಳಿಯ ವರದವಿಠ್ಠಲ ರಾಮಾಯಣವನ್ನೂ ನವ ಪ್ರಕಟಿಸಬೇಕೆಂದು ಬಗೆದು, ಅದರಲ್ಲಿಯ ಕೌಸಲ್ಯಾವಿವಾಹದ ಭಾಗವನ್ನು ಪ್ರಕಟಿಸಿದ್ದಾರೆ. ಅಲ್ಲದೆ, ಕೆಕ್ಕಾರ ಶಿವಭಟ್ಟರಿಂದ ಸಂಸ್ಕೃತದಲ್ಲಿ ರಚಿತವಾದ 'ತುಲಸೀವಿಯೋಗ ವಿಜ್ಞಾನ' ಮತ್ತು 'ರೊಡ್ಡರಾಜ ಕೀರ್ತಿಮಂಜರಿ' ಎಂಬ ಕಾವ್ಯಗಳನ್ನು ಕನ್ನಡದಲ್ಲಿ ಅನುವಾದ ಮಾಡಿದ್ದಾರೆ. ಇವೂ ಅಲ್ಲದೆ, 'ಶ್ರೀಮದನಂತಕಥಾ', 'ವಿಧಿವಿಲಾಸ ವಿಚಿತ್ರ' ಮತ್ತು 'ತುಲಸೀ ಸ್ತೋತ್ರ'– ಮೊದಲಾದವುಗಳೂ ಇವರ ಕೃತಿಗಳು.' ರೊಡ್ಡರಾಜ ಕೀರ್ತಿಮಂಜರಿ'ಯಲ್ಲಿ ಕರ್ನಾಟಕ ಕಾಲೇಜಿನ ಸ್ಥಾಪನೆಯ ಬಗೆಗೆ ಹೀಗೆ ಬರುತ್ತದೆ :

ಮೂಲ ಸಂಸ್ಕೃತ :

ವಾರ್ಧಕ್ಯೇಪಿ ಮಹಾತ್ಮಾ
ಗುರುತರಯತ್ನಾಜ್ಜನೋಪಕಾರಕೃತೇ
ಕರ್ನಾಟಕ ಕಾಲೇಜಿತಿ
ವಿದ್ಯಾಪೀಠಂ ನ್ಯವೇಶಯದ್ಧೀಮಾನ್ ।

ಇದರ ಕನ್ನಡ ಅನುವಾದ :

ಹಿರಿದಾದ ಕರ್ನಾಡಿನಲ್ಲುಚ್ಚ ಶಿಕ್ಷಣಂ
ದೊರೆಯದಿಹುದನುಚಿತಮೆನುತೆ ವಿಶ್ವಯತ್ನಮಂ
[illegible]
ಮೆರೆವ ಕರ್ನಾಟಕಾಲೇಜೆಂಬತ್ಯುಚ್ಚ
ತರದ ವಿದ್ಯಾಲಯಮನಸವಡಿಸುತೆಮ್ಮಿಂ ಜ
[illegible] ಧೀಮಂತರಾರೆಂದರೀ ಶ್ರೀನಿವಾಸ

—

೧ [illegible] ಪು. ೨೦೫–೨೦೬.

ಗುಂಡೋ ಕೃಷ್ಣ ಚುರಮುರಿ

(ಸು. ೧೮೮೫)

ಇವರು ಸುಪ್ರಸಿದ್ಧ ಚುರಮುರಿ ಶೇಷಗಿರಿರಾಯರ ಕಕ್ಕನ ಮಗ. ಇವರು ಹುಬ್ಬಳ್ಳಿಯ ಕಾಟನ್‌ಜಿನ್ ಫ್ಯಾಕ್ಟರಿಯಲ್ಲಿ ಗುಮಾಸ್ತರಾಗಿದ್ದರು. ಅಂದಿನ ರೂಪಾಂತರ ಪದ್ಧತಿಯ ಪ್ರಕಾರ ಇವರು ಷೇಕ್ಸಪಿಯರ್ ಮಹಾಕವಿಯ "ಒಥೆಲೊ" ನಾಟಕವನ್ನು 'ರಾಘವೇಂದ್ರರಾವ ನಾಟಕ' ಎಂಬ ಹೆಸರಿನಲ್ಲಿ ಭಾಷಾಂತರಿಸಿದ್ದಾರೆ. ಇದು ಸನ್ ೧೮೮೫ ರಷ್ಟು ಮೊದಲೇ ಪ್ರಕಟವಾಗಿದೆ. ನಾಟಕದ ಸೂಚನೆಯ ಮಾತುಗಳಲ್ಲಿ ಶ್ರೀಯುತರ ಕನ್ನಡದ ಅಭಿಮಾನವನ್ನು ಕಾಣುತ್ತೇವೆ :

"ಕನ್ನಡದ ಭಾಷಾಭಿಮಾನಿಗಳಾದ ಮಿತ್ರರೇ, ನಮ್ಮ ಸ್ವಭಾಷೆಯು ಕ್ಷಯರೋಗಿಯಂತೆ ಅತಿ ಸೂಕ್ಷ್ಮ ಅವಸ್ಥೆಯನ್ನು ತಾಳಿರುವದು ನಾವೆಲ್ಲರೂ ದಿನ ಒಂದಕ್ಕೆ ನೋಡುತ್ತಲಿದ್ದೇವೆ. ಹೀಗಿದ್ದು ದೊಡ್ಡ ದೊಡ್ಡ ಕರ್ನಾಟಕ ದೇಶಸ್ಥ ವಿದ್ವಾಂಸರೆಂಬ ವೈದ್ಯರೆಲ್ಲರು ಕರುಣವಿಲ್ಲದೆ ಅದನ್ನು ಸಾಯಗೊಡುತ್ತಲಿರುವದನ್ನು ಕಂಡು ಜೀವವು ನಿಲ್ಲದೆ, ಒಟ್ಟಿಗೆ ಮೂರೇ ಔಷಧಗಳನ್ನು ಬಲ್ಲ ದಡ್ಡ ವೈದ್ಯನಾದ ನಾನು ಅದನ್ನು ಬದುಕಿಸುವ್ವದಕ್ಕೆ ಯತ್ನ ಮಾಡತೊಡಗಿದ್ದೇನೆ. ನನ್ನ ಯೋಗ್ಯತೆಯನ್ನು ಲಕ್ಷಿಸಿ ನೋಡಿದಲ್ಲಿ ನನ್ನ ಉಪಾಯದಿಂದ ನಮ್ಮ ಭಾಷೆಗುಂಟಾದ ಮಹದ್ರೋಗವು ನಿವಾರಣವಾಗಲರಿಯದೆಂಬದನ್ನು ಪೂರ್ಣವಾಗಿ ತಿಳಿದುಕೊಂಡಿದ್ದರೂ, ಅದಕ್ಕೆ ಅನುಕೂಲ ಗ್ರಹಗಳು ಬಂದು, ಯಾವನೊಬ್ಬ ಧನ್ವಂತ್ರಿಯು ಮನಸ್ಸಿನ ಮೇಲೆ ತೆಗೆದುಕೊಳ್ಳುವವರೆಗೆ ಜೀವವನ್ನಾದರೂ ಹಿಡಿದು ಕೊಂಡು ಇರಲೆಂದು ಈ ಉದ್ಯೋಗವನ್ನು ನಡಿಸಿದ್ದೇನೆ."[೧]

ಅಂದಿನ ರೂಪಾಂತರದ ಪದ್ಧತಿಯಂತೆ ಈ 'ಒಥೆಲೊ' ನಾಟಕದಲ್ಲಿ ಒಥೆಲೊ ರಾಘವೇಂದ್ರರಾವನಾಗುತ್ತಾನೆ; ಡೆಸ್‌ಡಮೊನಾ, ವೆಂಕೂಬಾಯಿಯಾಗುತ್ತಾಳೆ. ಈ ತರಹದ ರೂಪಾಂತರವೇಕೋ ವಿಚಿತ್ರವಾಗಿ ಕಾಣುತ್ತದೆ. ಆದರೂ, ಶೈಲಿ ಮೋಹಕವಾಗಿದೆ. ಇಡೀ ನಾಟಕ ಮನಸ್ಸನ್ನು ಹಿಡಿಯುವಂತಿದೆ. ಉದಾಹರಣೆಗೆ ಇದೊಂದು ಸಂಭಾಷಣೆ :

೩ನೇ ಗೃಹಸ್ಥ : ಮತ್ತೇನು ಕೇಳುವದು ? ತುರಕರ ಹಡಗಗಳ ನಾಶವೇ ಸರಿ. ನೊರೆನೊರೆಯಾಗಿರುವ ಈ ತೀರದ ಮೇಲೆ ನಿಂತು ನೋಡುವಿರಿ. ಈ ಭಯಂಕರ ತರಂಗಗಳು ಹ್ಯಾಗೆ ಮೇಘಗಳನ್ನು ಭರದಿಂದ ದಬ್ಬುತ್ತಿರುವವು. ಅದೇ ಮೇರೆಗೆ ಉಕ್ಕೇರಿದ ಈ ಸಾಗರದ ಪರ್ವತಪ್ರಾಯ ತೆರೆಗಳು ಹ್ಯಾಗೆ ಸಪ್ತರ್ಷಿಗಳಿಗೆ ಅಭಿಷೇಕವನ್ನೇ ಮಾಡುತ್ತಿರುವವು........

---

೧ ರಾಘವೇಂದ್ರರಾವ ನಾಟಕ : ೧೮೮೫ : ಪು. ೧.

೩ನೇ ಗೃಹಸ್ಥ : ರಾಯರೇ, ನಾನೊಂದು ಹೊಸ ಸುದ್ದಿಯನ್ನು ತಂದಿದ್ದೇನೆ. ಯುದ್ಧ ಪ್ರಸಂಗವು ಮುಗಿದು ಹೋಯಿತು. ತುರುಕರು ಈ ಬಿರುಗಾಳಿಯಲ್ಲಿ ಶಿಕ್ಕು, ಹಾಳಾಗಿ ಹೋದರು; ಆದ್ದರಿಂದ ಅವರ ಯತ್ನವು ನಿಂತು ಹೋಯಿತು. ವೆಂಗುರ್ಲೆಯಿಂದ ಇದೇ ಒಂದು ಹಡಗವು ಬಂದಿತು. ಅದರೊಳಗಿನ ಜನರು, ತುರುಕರ ಎಷ್ಟೋ ಹಡಗಗಳು ಮುಳುಗಿ ನಷ್ಟವಾದದ್ದನ್ನು ನೋಡಿ ಬಂದಿದ್ದಾರೆ.

ಹೊಸಗನ್ನಡ ಉದಯಕಾಲದ ತೀರ ಮೊದಲಿನ ನಾಟಕಗಳಲ್ಲಿ 'ರಾಘವೇಂದ್ರರಾವ ನಾಟಕ'ವೂ ಒಂದು ಮಹತ್ವಪೂರ್ಣವಾದ ನಾಟಕವಾಗಿದೆ.

—

ಕೆಕ್ಕಾರ ಶಿವಭಟ್ಟರು

(೧೮೮೬–೧೯೩೧)

ಇವರು ಜನಿಸಿದ್ದು ಹೊನ್ನಾವರ ತಾಲೂಕಿನ ಕೆಕ್ಕಾರ ಎಂಬ ಸಣ್ಣ ಹಳ್ಳಿಯಲ್ಲಿ. ತಂದೆಯ ಹೆಸರು ರಾಮಭಟ್ಟ. ತಾಯಿ ಶಿವಾಂಬಾ. ಇವರು ಕೊಡ್ಲಕೆರೆ ಮಠದಲ್ಲಿ ಸಂಸ್ಕೃತ ಕಲಿತು, ಕಾಶಿಯ ಭಾರತ ಧರ್ಮ ಮಹಾ ಮಂಡಲದವರಿಂದ 'ವಿದ್ಯಾ ವಿನೋದ' ಎಂಬ ಬಿರುದನ್ನು ಪಡೆದರು. ಡಾ. ಗುಣೆಯವರು ಇವರಿಗೆ 'ವೇದಾಂತ ಕಲಾನಿಧಿ' ಎಂಬ ಬಿರುದನ್ನು ಕೊಟ್ಟಿದ್ದರು.

ಇವರು ಕೆಲಕಾಲ ಧಾರವಾಡ ಮತ್ತು ವಿಜಾಪುರ ಹಾಯಸ್ಕೂಲಗಳಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದರು. ಆ ಮೇಲೆ, ಆ ವೃತ್ತಿಯನ್ನು ಬಿಟ್ಟು, ತಮ್ಮದೇ ಆದ ಸಂಸ್ಕೃತ ಪಾಠಶಾಲೆಗಳನ್ನು ಪ್ರಾರಂಭಿಸಿದರು.

ಇವರು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಇವರ 'ತುಲಸೀ ವಿಯೋಗ ವಿಜ್ಞಾನ' ಎಂಬುದನ್ನೂ, 'ರೊದ್ದ ರಾಜಕೀರ್ತಿ ಮಂಜರೀ' ಎಂಬುದನ್ನೂ ಶ್ರೀ ವೆಂಕಪ್ಪ ಪರಮಯ್ಯ ಹೆಗಡೆ, ಕಡೇಕೂಡಿಯವರು ಕನ್ನಡದಲ್ಲಿ ಭಾಷಾಂತರಿಸಿದರು. ಇದೂ ಅಲ್ಲದೆ, ಶ್ರೀಯುತರು 'ಆತ್ಮ ವಿದ್ಯಾರಹಸ್ಯ', 'ಸೂಕ್ತಿ ಮುಕ್ತಾವಲಿ', 'ಪರಮಾರ್ಥ ಸಂಗ್ರಹ' –ಮೊದಲಾದ ಗ್ರಂಥಗಳನ್ನು ಕನ್ನಡದಲ್ಲಿ ಬರೆದಿದ್ದಾರೆ. ಇವರು ಸನ್ ೧೯೩೧ರ ಶ್ರಾವಣ ಬಹುಳ ಕೃಷ್ಣ ಜಯಂತಿಯಂದು ಮಧ್ಯರಾತ್ರಿಯಲ್ಲಿ ದೇಹವಿಟ್ಟರು. (ಉತ್ತರ ಕನ್ನಡ ಜಿಲ್ಲೆಯ ಗ್ರಂಥ ಕಾರರು : ಪು. ೪೭–೫೪)

—

ಸೂರಿ ವೆಂಕಟರಮಣ ಶಾಸ್ತ್ರಿ

(ಸು. ೧೮೫೫ – ಸು. ೧೯೨೫)

ಉದಯ ಕಾಲದ ಉತ್ತರ ಕನ್ನಡ ಜಿಲ್ಲೆಯ ಲೇಖಕರಲ್ಲಿ ತುಂಬಾ ಪ್ರತಿಭಾವಂತರೂ, ಸಾಹಸ ಪ್ರಿಯರೂ, ಬಹುಮುಖ ಸಾಧನೆಯುಳ್ಳವರೂ ಎಂದರೆ ಕರ್ಕಿಯ ಸೂರಿ ವೆಂಕಟರಮಣ ಶಾಸ್ತ್ರಿಗಳು. ಸಂಪಾದಕರಾಗಿ, ಲೇಖಕರಾಗಿ, ನಾಟಕಕಾರರಾಗಿ, ಸಮಾಜ ಸುಧಾರಕರಾಗಿ ಅವರು ಸಾಧಿಸಿದ ಯಶಸ್ಸು ಅಮೋಘವಾಗಿದೆ.

ಶಾಸ್ತ್ರಿಗಳ ಊರು ವೈದಿಕ ವಿದ್ವತ್ತೆಗೆ ಮರ್ಯಾದೆಯನ್ನು ಪಡೆದ ಕರ್ಕಿ ಎಂಬ ಗ್ರಾಮ. "ಹವ್ಯಕವ್ಯಾದಿ ವೈದಿಕ ಕರ್ಮಕಾಂಡದಲ್ಲಿ ಗುರುಪೀಠಾಧೀಶ್ವರರಿಂದ ಬಿರುದಾಂಕಿತವಾಗಿ ಮಾನ್ಯತೆ ಪಡೆದ 'ಸೂರಿ' ಮನೆತನ ಇವರದು. ಈ ಮನೆತನದಲ್ಲಿ ಸುಮಾರು ನೂರಾರು ವರ್ಷಗಳ ಹಿಂದೆ ವಿಘ್ನೇಶ್ವರ ಶಾಸ್ತ್ರಿ ಸೂರಿ ಎಂಬವರು ಆಗಿ ಹೋದರು. ಅವರ ನಾಲ್ವರು ಮಕ್ಕಳಲ್ಲಿ ಶ್ರೀ ವೆಂಕಟ ರಮಣ ಶಾಸ್ತ್ರಿಯವರೇ ಹಿರಿಯರು." ಇವರು ಸುಮಾರು ೧೮೫೫ ರಲ್ಲಿ ಹುಟ್ಟಿದರು.

ಶ್ರೀಯುತರು ಮೊದಲಿನಿಂದಲೂ ಸಾಹಸಪ್ರಿಯರು; ಸುಧಾರಕರು. ಪ್ರತಿವರುಷ 'ಸಿಂಹ' ತಿಂಗಳಲ್ಲಿ ಕರ್ಕಿಯ ಶ್ರೀ ಚೆನ್ನಕೇಶವ ದೇವಾಲಯದಲ್ಲಿ ಈ ಮನೆತನದವರಿಂದ ಪುರಾಣ ಹೇಳಲ್ಪಡು ತ್ತಿದ್ದಿತಂತೆ. ಆದರೆ ಒಂದು ಸಲ ಯಾವ ಮನೆತನದ ಶಾಖೆಯವರು ಪುರಾಣ ಹೇಳಬೇಕಾಗಿತ್ತೊ ಅವರು ಹೇಳಲು ಒಪ್ಪಲಿಲ್ಲವಂತೆ. ಹೀಗೆ ಪುರಾಣವೇ ನಿಂತು ಹೋಗಬೇಕಾಗಿದ್ದ ಸಂದರ್ಭ ಬಂದಾಗ ಹದಿನೇಳು ವರುಷದ ವೆಂಕಟರಮಣ ಶಾಸ್ತ್ರಿಗಳು ತಾವೇ ಮುಂದಾಗಿ ಬಂದು ಪುರಾಣ ಪುಸ್ತಕವನ್ನು ತರಿಸಿ, ಪುರಾಣ ಹೇಳಿಬಿಟ್ಟರಂತೆ. ಇದು ಅವರ ಸಾಹಸಪ್ರಿಯತೆ.

ಇವರು ಕರ್ಕಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ, ಸಂಸ್ಕೃತದ ಅಧ್ಯಯನಕ್ಕಾಗಿ ಸಾಗರ ತಾಲೂಕಿನ ಶ್ರೀ ರಾಮಚಂದ್ರಾಪುರಮಠವನ್ನು ಸೇರಿದರು. ಅಲ್ಲಿ ಕಾವ್ಯ, ವ್ಯಾಕರಣ, ಅಲಂಕಾರ, ವೇದಾಂತಗಳನ್ನು ಕಲಿತು, ಸಾಧಾರಣವಾಗಿ ಆ ಮಠದ ಪಾರುಪತ್ಯಗಾರರಾಗಿಯೇ ಕೆಲಸ ಮಾಡಿದರು. ನಂತರ ಮೈಸೂರು ಸಂಸ್ಥಾನದಲ್ಲಿ ಕೆಲಕಾಲ ಫೌಜದಾರರಾಗಿಯೂ ಕೆಲಸ ಮಾಡಿದರಂತೆ. ಕೆಲ ಮಟ್ಟಿಗೆ ಇಂಗ್ಲೀಷನ್ನೂ ಕಲಿತಿದ್ದರು. ಇವರು ಸ್ವಲ್ಪ ದಪ್ಪಾಗಿ ಇದ್ದದ್ದರಿಂದ ಇವರಿಗೆ 'ದುಪ್ಪಾ ಶಾಸ್ತ್ರಿ' ಎಂದೂ ಜನ ಕರೆಯುತ್ತಿದ್ದರಂತೆ.

ವೆಂಕಟರಮಣ ಶಾಸ್ತ್ರಿಗಳು ಸ್ವಾತಂತ್ರ್ಯಪ್ರಿಯರು; ಸಂಚಾರಪ್ರಿಯರು. ಹತ್ತು ಜನ ಬೇಕು ಎನ್ನುವವರು. ಹೀಗಾಗಿ, ಅವರಿಗೆ ತಮ್ಮ ಊರು ಮತ್ತು ನೆರೆಹೊರೆಯ ಮುಖಂಡರೆಲ್ಲರ ಪರಿಚಯ

ಚೆನ್ನಾಗಿ ಇತ್ತು. ಆ ಕಾಲದಲ್ಲಿ ಶಿರಸಿಯಲ್ಲಿ ವಕೀಲರಾಗಿದ್ದ ಗೋಪಿ ಮಹಾಬಲೇಶ್ವರ ಭಟ್ಟರು ಸಮಾಜ ಸುಧಾರಕರೆಂದು ಹೆಸರು ಪಡೆದಿದ್ದರು. ಶಾಸ್ತ್ರಿಗಳಿಗೆ ಶ್ರೀ ಗೋಪಿಯವರ ನಿಕಟ ಸಂಪರ್ಕವುಂಟಾಯಿತು. ತಾವು ಬರೆದ 'ನಾಟ್ಯಕಥಾರ್ಣವ' ಎಂಬ ಪುಸ್ತಕವನ್ನು ಶ್ರೀ ಗೋಪಿ ಯವರಿಗೆ ಅರ್ಪಿಸಿದ್ದಾರೆ.

ಶಾಸ್ತ್ರಿಗಳ ಸಾಹಸಪ್ರಿಯತೆ ಮತ್ತು ಸಮಾಜ ಸುಧಾರಣಾ ದೃಷ್ಟಿಗಳು ಅವರನ್ನು ಮುಂಬಯಿಗೆ ಕರೆದೊಯ್ದವು. ಅವರು ಸನ್ ೧೮೮೫ ರಲ್ಲಿ ಮುಂಬಯಿ ತಲುಪಿದರು. ಸನ್ ೧೮೮೫ ಭಾರತ ಇತಿಹಾಸದಲ್ಲಿಯೇ ಮಹತ್ವದ ವರುಷ. ಆಗಲೇ ಭಾರತೀಯ ಕಾಂಗ್ರೆಸ್ಸು ಸ್ಥಾಪಿತವಾದುದು. ಆಗಲೇ ಬ್ರಿಟಿಶರ ದಬ್ಬಾಳಿಕೆಯ ವಿರುದ್ಧ ಕಹಳೆ ಮೊಳಗಿದ್ದುದು. ಈ ಪ್ರವಾಹ ಶಾಸ್ತ್ರಿಗಳನ್ನೂ ಎಳೆದುಕೊಳ್ಳದೇ ಬಿಡಲಿಲ್ಲ. ಶಾಸ್ತ್ರಿಗಳು ದೇಶಸೇವೆಗೆ ಸಾಧನ ಎಂದರೆ ಗ್ರಂಥರಚನೆ ಮತ್ತು ಗ್ರಂಥ ಪ್ರಕಟನೆ ಎಂಬುದನ್ನು ಕಂಡುಕೊಂಡರು. ಆದಕ್ಕಾಗಿ ಮುಂಬಯಿಯಲ್ಲಿ 'ಕರ್ಕಿ ವೆಂಕಟರಮಣಶಾಸ್ತ್ರಿ ಮತ್ತು ಕಂಪನಿ' ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಅದರ ಭಾಗೀದಾರರೆಂದರೆ ಇಬ್ಬರೇ. ಶಾಸ್ತ್ರಿಗಳು ಮತ್ತು ಅವರ ಸ್ನೇಹಿತರಾಗಿದ್ದ ಬೂದಿ ಮಹಬಲೇಶ್ವರ ಭಟ್ಟರು. "೧೮೮೦ ನೆಯ ದಶಕದಲ್ಲಿ ಸ್ವತಂತ್ರ ವಿಚಾರಧಾರೆಯನ್ನು ವ್ಯಕ್ತಪಡಿಸುವ ಬರವಣಿಗೆ ಕನ್ನಡದಲ್ಲಿ ಒಡಮೂಡಿರಲಿಲ್ಲ. ಕನ್ನಡ ಓದುಗರ ಪಡೆಯೇ ನಿರ್ಮಾಣವಾಗದಿದ್ದಾಗ, ಜೀವನೋಪಾಯಕ್ಕೆ ಧಾರ್ಮಿಕ ಅಥವಾ ರಾಜಾಸ್ಥಾನದ ಆಶ್ರಯ, ಶಿಕ್ಷಕವೃತ್ತಿ ಇಲ್ಲವೆ ಸರಕಾರೀ ನೌಕರಿ ಇವಾವುದನ್ನೂ ನೆಚ್ಚದೇ ಕನ್ನಡದ ಮೇಲಣ ಅಭಿಮಾನದಿಂದ ಈ ಉದ್ಯಮದಲ್ಲಿ ಧುಮುಕುವದೆಂದರೆ ಹುಚ್ಚು ಸಾಹಸವೇ ಸೈ." ೧

ನಿಜ; ಮುಂಬಯಿಯಲ್ಲಿ ಚುರಮುರಿ ಶೇಷಗಿರಿರಾಯರು ಶಾಕುಂತಲ ನಾಟಕವನ್ನು ಸನ್ ೧೮೭೦ರಲ್ಲಿ ಪ್ರಕಟಿಸಿದ್ದರು. ಇದೇ ಕಾಲಕ್ಕೆ 'ಕನ್ನಡ ಸುವಾರ್ತೆ' ಎಂಬ ಪತ್ರಿಕೆ ೧೮೮೩–೮೪ರಲ್ಲಿ ಮುಂಬಯಿಯಿಂದ ಹೊರಡುತ್ತಿತ್ತು. ಆದರೆ, ಇಷ್ಟುಮಟ್ಟಿನ ಉತ್ತೇಜನ ಮಾತ್ರ ಸಾಕಾಗುವಂತಿರ ಲಿಲ್ಲ. ಆದರೂ, ವೆಂಕಟರಮಣಶಾಸ್ತ್ರಿಗಳು ಎದೆಗುಂದದೆ, ಬೂದಿ ಮಹಬಲೇಶ್ವರಭಟ್ಟರ ಸಹಕಾರ ದಿಂದ ಮುಂಬಯಿಯಲ್ಲಿ 'ಭಾರತೀ ಛಾಪಖಾನೆ'ಯನ್ನು ಪ್ರಾರಂಭಿಸಿದರು. ಅದಕ್ಕೆ ಬೇಕಾಗುವ ಮೊಳೆಗಳನ್ನೆಲ್ಲ ಉತ್ತರ ಕನ್ನಡ ಜಿಲ್ಲೆಯ ಪತ್ತಾರರನ್ನು ಕರೆಸಿ ಸಿದ್ಧಮಾಡಿಸಿಕೊಂಡರು. ಶ್ರೀಯುತರು ಈ ಕೆಳಗಿನ ಕೃತಿಗಳನ್ನು ರಚಿಸಿದ್ದಾರೆ :

ದಕ್ಷಿಣ ಯಾತ್ರಾ ಚರಿತ್ರೆ (೧೮೮೫) :

'ದಕ್ಷಿಣ ಯಾತ್ರಾ ಚರಿತ್ರೆ' ಎಂಬ ಪುಸ್ತಕ ಶ್ರೀಯುತರ ಮೊತ್ತ ಮೊದಲಿನ ಪ್ರಕಟಣೆ. ಇದರಲ್ಲಿ ಉಡುಪಿ, ಸುಬ್ರಹ್ಮಣ್ಯ ಕ್ಷೇತ್ರಗಳ ವರ್ಣನೆಯಿದೆ. ಈ ಕೃತಿ 'ಹೊಸಗನ್ನಡ ಗದ್ಯದ ಪ್ರಥಮ ಪ್ರವಾಸ ಸಾಹಿತ್ಯವಾಗಿದೆ.'

'ಬೋಧಾಯನೀಯ ವೆಂಕಟೇಶೀಯ ಪ್ರಯೋಗಮಾಲಾ' :

ವಿದ್ಯಾರ್ಥಿಗಳ ಅನುಕೂಲತೆಗಾಗಿ ಬರೆಯಲ್ಪಟ್ಟ ಈ ಪುಸ್ತಕವು ದೇವನಾಗರಿ ಲಿಪಿಯಲ್ಲಿ ಪೂರ್ವ–ಮಧ್ಯಮ–ಮತ್ತು ಅಪರಗಳೆಂಬ ಮೂರು ಕಾಂಡಗಳಿಂದ ಕೂಡಿದೆ. 'ಗಾಯತ್ರೀ ಪುರಶ್ಚರಣ ವಿಧಾನ' ಮತ್ತು 'ಸರ್ಪಸಂಸ್ಕಾರ ವಿಧಿ' (ನಾಗಪ್ರತಿಷ್ಠೆ, ಮೂಢಗರ್ಭ ಶಾಂತಿ ಸಹಿತ) ಎಂಬ ಪುಸ್ತಕಗಳನ್ನೂ ದೇವನಾಗರೀ ಲಿಪಿಯಲ್ಲಿಯೇ ಮುದ್ರಿಸಿದರು. ದುರ್ಗೆ, ಗಣಪತಿ, ಶಿವ,

೧ ಕಸ್ತೂರಿ : ಶ್ರೀ ಶ್ರೀನಿವಾಸ ಹಾವನೂರ : ಮೇ ೧೯೭೧ : ಪು. ೧೧೧.

ವಿಷ್ಣು ಮೊದಲಾದ ದೇವತಾಪೂಜೆಗಳನ್ನೊಳಗೊಂಡ 'ಪೂಜಾ ಸಮುಚ್ಚಯ'– ಮೊದಲಾದ ಪುಸ್ತಕಗಳನ್ನೂ ಪ್ರಕಟಿಸಿದರು. ವೈದಿಕರ ರಹಸ್ಯ ಲಿಪಿಯೆನಿಸಿದ ತೌಲಿ (ತಿಗಳಾರಿ) ಮೊಳೆಗಳನ್ನು (ಮಾಡಿಸಿ) ಆ ಲಿಪಿಯಿಂದ ದುರ್ಗಾಸಪ್ತಶತೀ, ಲಕ್ಷ್ಮೀನಾರಾಯಣ ಹೃದಯ, ಕಲ್ಪೋಕ್ತದೇವ ಪೂಜಾ– ಮೊದಲಾದವುಗಳನ್ನು ಮುದ್ರಿಸಿ ಪ್ರಕಟಿಸಿದರು. ಇದಲ್ಲದೆ, 'ಸ್ತೋತ್ರ ರತ್ನಾಕರ, 'ಟೀಕಾ ಭಗವದ್ಗೀತಾ', 'ಸಹಸ್ರ ನಾಮಾವಳಿ', 'ರಂಭಾ ಶುಕ ಸಂವಾದ', 'ಯೋಗವಾಸಿಷ್ಠ', 'ಶಂಕರ ಸಂಹಿತೆ' (ಭಾಮಿನಿ ಷಟ್ಪದಿಯಲ್ಲಿರುವ ಗ್ರಂಥ)– ಮೊದಲಾದವುಗಳನ್ನು ಪ್ರಕಟಿಸಿದರು.

ಹವ್ಯಕರ ಉತ್ಪತ್ತಿಯ ಬಗೆಗೆ 'ಹವಿಕ ದ್ರವಿಡ ಬ್ರಾಹ್ಮಣರ ಉತ್ಪತ್ತಿಯ ಇತಿಹಾಸವು ಎಂಬ ಕಥಾರ್ಣವ' (೧೮೮೮) ಎಂಬ ಗ್ರಂಥವನ್ನೂ 'ಅನಾರ್ಯರ ವಿವರ' (೧೮೯೮) 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ' ಮೊದಲಾದ ಸ್ವತಂತ್ರ ಕೃತಿಗಳನ್ನೂ ರಚಿಸಿದರು. " 'ಅನಾರ್ಯರ ವಿವರ'ವು ಹಿಂದೂಗಳಲ್ಲಿ ಶೂದ್ರರ ಸ್ಥಾನಮಾನವನ್ನು ಐತಿಹಾಸಿಕವಾಗಿ ನಿದರ್ಶಿಸುವ ಸ್ವತಂತ್ರ ಪ್ರಬಂಧವಾಗಿದ್ದು, ಈ ಬಗೆಯ ಬರೆಹ ೧೮೮೭ ರ ಕಾಲದಲ್ಲಿ ಅಪೂರ್ವವಾಗಿತ್ತು." ಇದೂ ಅಲ್ಲದೆ, 'ಕೃಷ್ಣಸಂಧಾನ ಮತ್ತು ಭೀಷ್ಮಪರ್ವ' (೧೮೮೬) 'ರತಿಕಲ್ಯಾಣ ಕೌಂತಲಕ ವಧೆಯು', (೧೮೮೬) 'ಘಟೋತ್ಕಜನ ಕಾಳಗವು' (೧೮೯೮). 'ಬಿಲ್ಲಹಬ್ಬ ಅಥವಾ ಕಂಸ ವಧೆಯು' ಮೊದಲಾದ ಗ್ರಂಥಗಳನ್ನು ಪರಿಷ್ಕರಿಸಿದರು. ಸಂಪಾದಕರಾಗಿ ವೆಂಕಟರಮಣಶಾಸ್ತ್ರಿಗಳು ಮಾಡಿದ ದೊಡ್ಡ ಕೆಲಸವೆಂದರೆ ಮಹಾಕವಿ ಪರಮ ದೇವಾಂಕನಿಂದ ರಚಿತವಾದ 'ತುರಂಗ ಭಾರತದ' ಪ್ರಕಟನೆ.

ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ (೧೮೮೭) :

ಈ ಚಿಕ್ಕ ನಾಟಕವನ್ನು ಶ್ರೀಯುತರು 'ಹವ್ಯಕ ಹಿತೇಚ್ಛು ವಿದ್ವಾಂಸರೊಬ್ಬರು' ಎಂಬ ಹೆಸರಿನಿಂದ ಪ್ರಕಟಿಸಿದರು.

ಈ ಪ್ರಹಸನ ಎಲ್ಲ ವಿಧದಲ್ಲಿಯೂ ವೈಶಿಷ್ಟ್ಯಪೂರ್ಣವಾಗಿದೆ. ಕಾರಂತ, ಕೈಲಾಸಂ, ಶ್ರೀರಂಗರಿಂದ ಕನ್ನಡ ಸಾಮಾಜಿಕ ನಾಟಕಗಳು ಉಗಮ ಹೊಂದಿದುವೆಂದು ಸಾಮಾನ್ಯವಾಗಿ ಹೇಳಲ್ಪಡುತ್ತಿರುವ ಉಕ್ತಿಗೆ ಈ ನಾಟಕ ಅಪವಾದವಾಗಿದೆ. 'ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ' ಪ್ರಾಯಃ ಹೊಸಗನ್ನಡದ ಪ್ರಪ್ರಥಮ ಸಾಮಾಜಿಕ ನಾಟಕ. ಅಂದಿನ ಕಾಲದ ಉತ್ತರ ಕನ್ನಡ ಜಿಲ್ಲೆಯ ಹವ್ಯಕ ಸಮಾಜದಲ್ಲಿಯ ಲೋಪ-ದೋಷಗಳು ಸುಂದರವಾಗಿ ಈ ಪ್ರಹಸನದಲ್ಲಿ ಚಿತ್ರಿತವಾಗಿವೆ. ಈ ನಾಟಕ ಪ್ರಥಮ ಸಲ ಮುದ್ರಿತವಾದುದು ೧೮೮೭ ರಲ್ಲಿ. ಇದು ಮುಂಬಯಿಯ ಭಾರತೀ ಛಾಪಖಾನೆಯಲ್ಲಿ ಮುದ್ರಿತವಾಯಿತು. ಮುದ್ರಣದ ಪ್ರಾಚೀನತೆ ಮಾತ್ರ ಈ ಪ್ರಹಸನದ ಹಿರಿಮೆಯಲ್ಲ. ಈ ಪ್ರಹಸನದಲ್ಲಿ ಚಿತ್ರಿತವಾದ ಕಥಾವಸ್ತುವೂ ಅಷ್ಟೇ ಆಕರ್ಷಣೀಯವಾಗಿದೆ. ಇದು ಅಂದಿನ ಕಾಲದ ಹವ್ಯಕ ಸಮಾಜದ ಜೀವನಕ್ಕೆ ಸಂಬಂಧಪಟ್ಟ ಕಥಾವಸ್ತು. ಸಾಲ ಮಾಡಿಕೊಂಡು ಇಬ್ಬರು ಹೆಂಡಂದಿರನ್ನು ಮದುವೆಯಾಗಿ ಇಬ್ಬರನ್ನೂ ಕಳೆದುಕೊಂಡು, ಪುನಃ ಸಾಲ ಮಾಡಿ ಮೂರನೆಯವಳಾದ ಸಾವಿತ್ರಿ ಎಂಬ ಚಿಕ್ಕ ಬಾಲಿಕೆಯನ್ನು ತನ್ನ ಆಯುಷ್ಯದ ಸಂಧ್ಯಾಕಾಲದಲ್ಲಿ ಮದುವೆಯಾಗಿ, ಮದುವೆಯಾದ ನಂತರ ಕಾಮಣಿ ರೋಗದಿಂದ ಬಳಲಿ, ಬದುಕಿದ್ದಾಗ ತನ್ನ ತರುಣ ಹೆಂಡತಿಯನ್ನು ಹಿಂಸಾಪಟ್ಟಿ ಹಚಿಸಿ, ಇಗ್ಗಪ್ಪ ಹೆಗಡೆ ಸತ್ತುಹೋಗುತ್ತಾನೆ. ಬಾಲವಿಧವೆಯಾದ ಸಾವಿತ್ರಿ ವೇಷರೀತಿಗೆ ಸೋತು ಗರ್ಭಿಣಿಯಾಗಿ ಪಟ್ಟ ಕಷ್ಟಗಳೆಲ್ಲ ಈ ಪ್ರಹಸನದಲ್ಲಿ ಸುಂದರವಾಗಿ ಚಿತ್ರಿತವಾಗಿವೆ.

ಈ ಕೃತಿಯ ಅಂತಸ್ಸತ್ವವೂ, ಸಾಹಿತ್ಯಕ ಗುಣವೂ, ಶೈಲಿಯೂ ಅದರ ಹಿರಿಮೆಯ ಕಾರಣಗಳಾಗಿವೆ. ಕೃತಿಯನ್ನು ಓದಲು ಪ್ರಾರಂಭಿಸಿದರೆ ಮುಗಿಸದೆ ಬಿಡದಷ್ಟು ವೇಗದಿಂದ ಕಥೆ ಮುಂದುವರಿದುಕೊಂಡು ಹೋಗುತ್ತದೆ. ಕಥೆಯನ್ನೆಲ್ಲ ಸಂಭಾಷಣೆಗಳ ಮೂಲಕವೇ ಸಾಗಿಸಿಕೊಂಡು ಹೋದುದೂ ಈ ಪ್ರಹಸನದ ವೈಶಿಷ್ಟ್ಯವಾಗಿದೆ.

ಈ ಪ್ರಹಸನವನ್ನು ಉತ್ತರ ಕನ್ನಡದ ಭೂತಾಯಿ ಮಕ್ಕಳಾದ ಹವ್ಯಕರ ಮನೆಮಾತಿನಲ್ಲಿಯೇ ಬರೆದುದು ಈ ಕೃತಿಯ ಇನ್ನೊಂದು ವೈಶಿಷ್ಟ್ಯ. ಹವ್ಯಕರು ಜಾತಿಯಿಂದ ಬ್ರಾಹ್ಮಣರು; ವೃತ್ತಿಯಿಂದ ಹೆಚ್ಚಾಗಿ ಹೊಲಗದ್ದೆಗಳನ್ನೂ ತೋಟಪಟ್ಟಿಗಳನ್ನೂ ಮಾಡಿಕೊಂಡಿರುವವರು. ಅಂದಿನ ಕಾಲದಲ್ಲಿ ಹೆಚ್ಚಾಗಿ ಕಲಿಯದಿದ್ದವರು. ಸರಳ ಭೋಳೇ ಸ್ವಭಾವದವರು; ಅತಿಥಿ ಸತ್ಕಾರ ಪ್ರಿಯರು. ಹೀಗಾಗಿ, ಬೇಕಾದಷ್ಟು ಉತ್ಪನ್ನವಿದ್ದರೂ ಅಂದಿನ ದುಷ್ಟ ಸಂಪ್ರದಾಯಗಳಾಗಿದ್ದ ಬಾಲವಿವಾಹ ಪದ್ಧತಿ, ತೆರ, ಸಾಲದ ಬಡ್ಡಿ, ಲಂಚ–ರುಷವತ್ತು ಇವುಗಳ ವಿಷಚಕ್ರಗಳಲ್ಲಿಯೇ ಮುಳುಗಿ ಮುಳುಗಿ ಒದ್ದಾಡುವಂಥವರು. ಅವರ ಜೀವನದ ಈ ಲೋಪ–ದೋಷಗಳನ್ನು ಇಗ್ಗಪ್ಪ ಸಾಲ ಕೇಳಲು ಹೋದಾಗ ಶಿರಸಿಯ ನಾಡಿಗರು ಸರಿಯಾಗಿಯೇ ಸಂಗ್ರಹಿಸಿ ಹೇಳಿದ್ದಾರೆ: “ಈಗ ನಿಮ್ಮವರ (ಹವ್ಯಕರ) ಪೈಕಿ ಅನೇಕರ ಹತ್ರ ಹಣಾ ಉಂಟು, ಅವರು ಮನೇಲಿ ಹುಗಿದು ಹಾಕಿದ್ದನ್ನಾ ವಂದು ದಫಾ ಎಬ್ಬಿಸಿ ಇಂಥಾ ಕುಳಗಳ ಮೇಲೆ ಭೂಮಿ ಬರಸಿಕೊಂಡು ಕಮ್ಮಿ ಬಡ್ಡಿಯಿಂದ ಕೊಟ್ಟಿದ್ರೆ ಆಗುತಿತ್ತಲ್ಲವೋ ? ತಮ್ಮವರನ್ನು ತಾವು ಕಾದು ತಮಗೂ ಲಾಭ ಮಾಡಿಕೊಳ್ಳಬಹುದಿತ್ತು. ಏನಾದ್ರೂ ಒಂದು ಖಟ್ಲೆ ಬಿಟ್ಲೆಯಾಗಲೀ, ಆಗ ಮಾತ್ರ ಸಾವಿರ ಸಾವಿರಗಟ್ಲೆ ಚೆಲ್ಲುತ್ತಾರೆ. ಮೊನ್ನೇ ಅವರು ಕಟ್ಟಿಗೇ ಕಡಿದ ಪ್ರಕರಣದಲ್ಲಿ ಜಂಗಲೀ ಖಾತೆಯವರು ಹೋಗಿ ಒಬ್ಬೊಬ್ಬನ ಹತ್ರ ೪೦೦–೫೦೦ ಹೊಡತಾ ಹೊಡಕೊಂಡು ಬಂದರಂತೆ! ಈ ಹೈಗರು ಸಂಪಾದಿಸಿದ ಹಣಾ ವಿಶಿಷ್ಟವೂ, ಏನಾದ್ರೂ ಲಂಚ, ರುಷವತ್ತು, ದಂಡ, ಇಷ್ಟಕ್ಕೇ ಅಲ್ಲದೇ ಯೋಗ್ಯವಾದ ಏನಾದರೊಂದು ವ್ಯಾಪಾರ, ಅಥವಾ ಕಾರಖಾನೆ, ಇಂಥಾ ಸದುದ್ಯೋಗಕ್ಕೆ ಎಂದೂ ಉಪಯೋಗವಾಗಲಿಕ್ಕಿಲ್ಲಾ ! ಈಗ ಈ ಜನರು ಬೆಳೆಯತಕ್ಕ ಬೆಳೆ ಯಾವತ್ತು ಪರದೇಶಕ್ಕೆ ಹೋಗಿ, ನಿಧಾನ ವರುಷ ಒಂದಕ್ಕೆ ೭೦–೮೦ ಲಕ್ಷ ರೂಪ್ಯಾಗಳು ಹವ್ಯಕ ಜನರ ಮನೇಗೆ ಬಂದು ಬೀಳುತ್ತವೆ. ಹೀಗೆ ವರುಷಂಪ್ರತಿ ಬಂದ ಹಣಗಳೆಲ್ಲ ಎಲ್ಲಿ ಹೋಗುತ್ತದೆ–ಹೇಳ್ರಿ ? ಇಗ್ಗಪ್ಪ ಹೆಗಡೇರಿಗೆ ವಟು ವರುಷ ಒಂದಕ್ಕೆ ೩–೪ ಸಾವಿರ ರೂಪ್ಯಾನ ಬೆಳೆಯಾಗುತ್ತದೆ. ಇವರ ಗೃಹಕೃತ್ಯದ ಖರ್ಚಿಗೆ ವರುಷಕ್ಕೆ ಹೆಚ್ಚಾದ್ರೆ ೫೦೦ ರೂಪ್ಯಾ ಓಡೀರಿ, ಇದುವರೆಗಿನ ಬಾಕೀ ಹಣಾ ಯಪ್ಪಾಯಿತು ! ಅದೆಲ್ಲಾ ಏನಾದವು ?........ ಈ ಜಾತೀ ಜನರು ಸಾಲದ ಬಡ್ಡಿ, ಹೆಣ್ಣಿನ ತಿರಾ, ಲಂಚ ರುಷವತ್ತು, ಇವು ಮೂರರಿಂದ ಅಗದೀ ಕೆಟ್ಟು ನಿಃಸ್ಸಾರವಾಗುತ್ತ ಬಂದರೂ, ಇಂಥ ದೂರದೃಷ್ಟಿಯುಳ್ಳಕಾ ಈ ಜನರ ಸಂಪರ್ಕದಲ್ಲಿ ಸಹಾ ಇಲ್ಲಾ ! ಹಾಂ ಹೆಗಡೇರೇ ಬರಬೇಕೂ ! ಯಂತ ವಂದು ತುಸು ಏರಿಸಿ ಮಾತ್ನಾಡಿಸಿದರೆ ತೀರಿತು.... ಹವ್ಯಕರು ಅಂದರೆ ಭೋಳೇರು : ಅವರ ಶ್ರಮದ ಫಲದಿಂದ ಪೇಟೆಯಲ್ಲಿರು ನಾವೆಲ್ಲರೂ ಸುಖ ಜೀವಿಗಳಾಗಿದ್ದೇವೆ. ” –ನಾಡಿಗರು ಹವ್ಯಕರ ದುರ್ದೆಸೆಯ ಬಗೆಗೆ ವ್ಯಕ್ತಪಡಿಸಿದ ಈ ಅಭಿಪ್ರಾಯಗಳು ಗ್ರಂಥಕರ್ತರಾದ ‘ಹವ್ಯಕ ಹಿತೇಚ್ಛು’ಗಳ ಮಾತುಗಳೇ ಆಗಿವೆ.

ಈ ಪ್ರಹಸನದ ಶೈಲಿ ಹವ್ಯಕರ ದಿನದ ಮಾತಿನ ರೀತಿ ಎಂದು ಹೇಳಿತಲ್ಲವೇ ? ಅದರ ಮಾದರಿಗಾಗಿ ಈ ಕೆಳಗಿನ ಅವತರಣಿಕೆಯನ್ನು ಕೊಡಲಾಗಿದೆ :

ಗಣೇಶಭಟ್ಟ : “ಈಗ ನೀವಂದ ಪ್ರಸ್ತಾವಿಗೂ ಹೋಪದು ಬ್ಯಾಡಾ, ಹ್ಯಾಗೆ ಮಾಡದಪ್ರೋ, ಹಾಗೆ ಬಿಟ್ಟೆವೊ, ಯಾರಿಗೂ ತೇಳೀಬಾರಾ. ಆ ಅತೂ, ನೀ ಅತು, ಹೆಗಡೆ ಅಸ್ತೆ ಬಹಳ ಚಲೋ

ದಿದ್ದು, ಅವಂಗೇನೂ ಓದಿಲ್ಲೇ ಮುಂದಿಲ್ಲೇ, ತುಸಾ ವರ್ಷಾಜೂ ಅನ್ನೋದೊಂದೇ ಸರಿ. ಒಂದು ವೇಳೆ ಮುಂದೆ ಅಗಾಸಿಮೇಗಾನಿ ಅದ್ರೂ ನಿಮ್ಮನೇ ಕೂಸೀಗೆ ಕಾಲಮೇಲೆ ಕಾಲ ಹಾಯ್ಕೊಂಡು ತಿಂದ್ರೂ ಯಥೇಷ್ಟ ಇದ್ದು.... ಆ ಹೇಳ್ತೆ ಪೇಳಿ ಶಿಟ್ಟ ಮಾಡಡಾ : ಹೆಗಡೆ ಮುದುಕಾ, ಒಂದು ವೇಳೆ ನಾಳೇ ಹರಿ ವಾಸುದೇವಾ ಅಂದ್ರೂ ಆ ಭೂಮಿಯಲ್ಲಾ ೪-೫ ಸಾವಿರರೂಪ್ಯಾಗೆ ಕುಟ್ಯಾಕಿ ಮಾರಕಂಡು ಬಂದು ಕೂತುಕೊಂಡ್ರೂ ಜೀವಿಪ್ಪಲ್ಲೀವರೆಗೇ ಬೇಕಾದ ಹಾಗೆ ಉಂಡ ತಿಂದಕಂಡಿರಲಕ್ಕೂ. ಆನು ಮಂಞಣ್ಣಾಗಳೇ ಜೋಯಿಸರ ಮನೇಲಿ ಜಾತ್ಕಾ ನೋಡ್ಸಿ ಪಸಂದಾಗ್ತೂ ಅಂತಾ ಮಾಡಿ ಕೊಂಡು ಬಂದದೇ. .... ಈಗೇನೂ ಅಂಬೇ ?"

ರಾಯ ಕೊಂಕಣಿಯಲ್ಲಿ ಮಾತಾಡುತ್ತಾನೆ : "ಕಿತವ್ರೋ ? ಮಂಜ್ಯಶೇಣೀ : ದಸ್ತ್ಯವೋಜಾರಿ ಕಾಂಯ್ ಶಬ್ದದವರ ಜಾಕ್ ಯಂತ್ತನಾ, ಥ್ಯಂ ಯಥಾಯೋಗ್ಯ ಬೊರ್‍ಯೆಲಾ.... ಅಪ್ಸಸಾ : ಅತ್ತೆಗೆಲ್ಲೇಕ್ ಪೊಳೊಯ್ ತೆಂಗೆಲ್ ದಸ್ತ್ಯೆವಜ್ ಕಾಡ್''.

ನಿಶಿತವಾದ ಸಮಾಜ ವಿಮರ್ಶೆ, ಸುಂದರವಾದ ಪಾತ್ರ ಚಿತ್ರಣ, ಶೈಲಿಯ ವೈವಿಧ್ಯತೆ ಮತ್ತು ರಸವಂತಿಕೆಗಳ ಮೂಲಕ ಇಗ್ಗಪ್ಪ ಹೆಗಡೆಯ ಪ್ರಹಸನ ಉದಯಕಾಲದ ಸಾಹಿತ್ಯದ ಕೃತಿಗಳಲ್ಲಿ ಒಂದು ಮಹತ್ವದ ಮೈಲುಗಲ್ಲಾಗಿದೆ.

ತುರಂಗಭಾರತ (೧೮೮೯) :

ಮಹಾಕವಿ ಪರಮದೇವಾಂಕನಿಂದ ರಚಿತವಾದ ಈ ಕಾವ್ಯಗ್ರಂಥ "ಮ. ರಾ. ಬೂದಿ ಮಹಾ ಬಲೇಶ್ವರ ಭಟ್ಟ, ಪ್ರೊ. ಹ. ಸಾ. ರಾ. ರಾ. ರಾಮ ಪಂಜಿ ಕಣ್ಣಂಗಾರ- ಇವರಿಗಾಗಿ ಕೆ. ವೆಂಕಟ ರಮಣ ಶಾಸ್ತ್ರೀ ಸೂರಿ ಇವರಿಂದ ಪರಿಶೋಧಿಸಿ ಮುಂಬಯಿ ಭಾರತೀ ಛಾಪಖಾನೆಯಲ್ಲಿ ಛಾಪಿ ಸಲ್ಪಟ್ಟಿತು.'' ಈ ಛಾಪಖಾನೆ ಮುಂಬಯಿ ಠಾಕುರದ್ವಾರದಲ್ಲಿದ್ದಿತು. ಈ ಗ್ರಂಥದಲ್ಲಿ ೯೬ ಸಂಧಿಗಳೂ ೪೨೭೦ ಪದ್ಯಗಳೂ ೧೮ ಪರ್ವಗಳೂ ಇವೆ. ಕವಿ ಕಾವ್ಯದ ಕೊನೆಯ ಪದ್ಯದಲ್ಲಿ :

> ಅಷ್ಟದಶ ಪರ್ವದೊಳಗಣ ಸಾರಗಳನು ವೈ
> ಶಿಷ್ಟ ಪರಮಂಣ ಕವಿಯೆಂಬವಂ ಓರ್ವ ಕಿವಿ
> ಗೊಟ್ಟು ಕೇಳ್ವರ ಹೇಳ್ವರಘಗಳಂ ಪರಿಹರಿಪ್ಪದೀ ಪುಣ್ಯಚಾರಿತ್ರ್ಯವು
> ಕೃಷ್ಣದೇವರು ಹೃದಯಮಂ ಪೊಕ್ಕು ನುಡಿಸಿದಂ
> ತಷ್ಟನಾಡಿದೆನಿದನು ಸಂಕ್ಷೇಪದಿಂದ ತಿಳಿ
> ದಷ್ಟನಾ ಮರುತಸುತ ಕ್ಷೋಣಿ ಲಕ್ಷ್ಮೀಪತಿಯ ಕರುಣದಿಂ ವರ್ಣಿಸಿದೆನು ॥

—ಎಂದು ಹೇಳುತ್ತಾನೆ.[೧]

ಈ ಗ್ರಂಥದ ಕರ್ತೃವಾದ ಪರಮದೇವ ಹವ್ಯಕ ಬ್ರಾಹ್ಮಣನು. ಇವನು ದಕ್ಷಿಣ ಕನ್ನಡ ಜಿಲ್ಲೆಯ ಪನ್ನರ ಮಾಗಣೆಯಲ್ಲಿರುವ ಸುಳಿಗೋಡು ಎಂಬ ಊರಲ್ಲಿ ಹುಟ್ಟಿದನು. ಈ ಊರು ಕೊಡಚಾದ್ರಿ ಪರ್ವತದ ಉತ್ತರ ದಿಕ್ಕಿನ ಮಗ್ಗುಲಲ್ಲಿರುತ್ತದೆ. ಇವನ ತಂದೆಯ ಹೆಸರು ಶಂಕರನಾರಾಯಣ. ಇವರ ಮನೆತನ ಸಾಧಾರಣ ಆರ್ಥಿಕ ಸ್ಥಿತಿಯುಳ್ಳದ್ದರ ಮೂಲಕ ಕುಟುಂಬದವರು 'ಸಾಲಂಡಿಗರಾಗಿದ್ದರು'. ಮನೆತನದ ಉದ್ಯೋಗ ಬೋಳಮನೆ ಮಾಡುವುದು. ಪರಮದೇವನಿಗೆ ಇದರಲ್ಲಿ ಆಸ್ಥೆ

೧ ತುರಂಗಭಾರತ : ೧೮೮೯ : ಪು. ೫೦೭.

ಇರಲಿಲ್ಲ. ಆದ್ದರಿಂದ ಸಾಲ ಹೆಚ್ಚಾಯಿತು. ಅದಕ್ಕಾಗಿ, ಇಕ್ಕೇರಿಯ ಪಾಳೆಯಗಾರರಲ್ಲಿ ಆಶ್ರಯ ಪಡೆದನು. ಇಲ್ಲಿ ಚಿಪ್ಪಳಿ ಎಂಬ ಗ್ರಾಮದಲ್ಲಿ ಒಬ್ಬರು ತಮ್ಮ ಮಕ್ಕಳಿಗೆ ಪಾಠ ಹೇಳಲು ಇವನನ್ನು ಇಟ್ಟುಕೊಂಡರು. ಹೀಗಿರುವಲ್ಲಿ, ಅಲ್ಲಿಯೇ ಕೇದಿಗೇಸರು ಎಂಬ ಊರಿನಲ್ಲಿ ಅದೇ ಊರ ಪರ ವಸೆಯ ಸೊಪ್ಪಿನ ಸುಬ್ಬಣ್ಣ ಹೆಗಡೆ ಎಂಬವರು ಒಂದು ಗಣಪತಿ ಗುಡಿಯನ್ನು ಕಟ್ಟಿಸಿ, ಅಲ್ಲಿ ಪೂಜೆ ಗಾಗಿ ಪರಮದೇವನನ್ನು ವಿನಂತಿಸಿದರು. ಪರಮದೇವನನ್ನು 'ಕೆದಲಸರದ ಐಗಳು' ಎಂದೂ ಕರೆ ಯುತ್ತಿದ್ದರು.

ಪರಮದೇವನು 'ತುರಂಗಭಾರತ'ವನ್ನಲ್ಲದೆ, 'ತತ್ವಚೌಪದನ' ಎಂಬ ೫೪ ಪದ್ಯಗಳ ಕೃತಿ ಯನ್ನೂ, 'ನಾರಾಯಣಾಕ್ಷರ ಮಾಲಿಕಾಸ್ತೋತ್ರ' ಎಂಬ ಗ್ರಂಥವನ್ನೂ ಬರೆದಿದ್ದಾನೆ. 'ತುರಂಗ ಭಾರತ' ಸನ್ ೧೮೦೮ರಲ್ಲಿ ರಚಿತವಾಯಿತು.

ಈ ಗ್ರಂಥಕ್ಕೆ 'ತುರಂಗಭಾರತ' ಎಂದು ಹೆಸರು ಬರಲು ಕಾರಣವೇನು ? ಈ ಬಗೆಗೆ ಸಂಪಾ ದಕರಾದ ವೆಂಕಟರಮಣ ಶಾಸ್ತ್ರಿಗಳು ಹೀಗೆ ಹೇಳುತ್ತಾರೆ :

"ಇದಕ್ಕೆ ಸಹಜವಾಗಿ ಕನ್ನಡ ಭಾರತವೆಂದು ಹೇಳುವದನ್ನು ಬಿಟ್ಟು ಜನರು ತುರಂಗ ಭಾರತ ವೆಂದು ಯಾಕೆ ಹೆಸರಿಟ್ಟರೆಂಬದೊಂದು ಶಂಕೆಯುತ್ಪನ್ನವಾದ್ದರಿಂದ ಆ ಭಾಗದಲ್ಲಿ ಸಮಾಧಾನತೆಯನ್ನು ತೋರಿಸುವದು ಅಗತ್ಯವಿರುತ್ತದೆ; ಇದು 'ಜೈಮಿನಿ ಭಾರತ'ದಂತೆ ವಾರ್ಧಿಕ ಷಟ್ಪದಿಯಿಂದ ರಚಿ ಸಲ್ಪಟ್ಟ ಕಾರಣ, ಇದನ್ನು ಒಂದು ತರದ ಗತ್ತಿನಿಂದ ಓದಬೇಕಾಗುತ್ತದೆ. ಆ ಗತ್ತಿನ ಸ್ವರೂಪವು ಸಾಧಾರಣ ಕುದುರೆಯ ಗುಪ್ಪಿನಂತೆ ಇರುವದಾದ್ದರಿಂದಲೂ, ಪೂರ್ವದಲ್ಲಿ ಈ ಮಾದರಿಯ ಒಂದು ಗ್ರಂಥವನ್ನು ಪಂಡಿತರಾಜ ಜಗನ್ನಾಥನೆಂಬ ಕವಿಯು ರಚಿಸಿ, ಅದಕ್ಕೆ 'ಅಶ್ವಧಾಟಿ ಪ್ರಬೋಧಿಕಾ' ಎಂದು ಹೆಸರನ್ನಿಡುವದರಿಂದಲೂ, ಈ ಮೊದಲು ಇನ್ನೊಂದು ತರದಿಂದ ಈ ಗ್ರಂಥವು ಕನ್ನಡದಲ್ಲಿ ಭಾಮಿನಿ ಷಟ್ಪದಿಯಲ್ಲಿತ್ತಾದ್ದರಿಂದಲೂ. ಈ ಗ್ರಂಥಕ್ಕೆ ಜನರು 'ತುರಂಗಭಾರತ'ವೆಂದು ರೂಢಿಯಾಗಿ ಅಂದುಕೊಂಡರು."

ವೆಂಕಟರಮಣ ಶಾಸ್ತ್ರಿಗಳು ಕನ್ನಡದ ಬಗೆಗೆ ಹೊಂದಿದ ಕಳಕಳಿಯನ್ನು ಪ್ರಸ್ತಾವನೆಯ ಈ ವಾಕ್ಯಗಳು ಎತ್ತಿ ತೋರಿಸುತ್ತವೆ :

"ಯಾವ ಭಾಷೆಯ ಜನರಿಗೆ ತಮ್ಮ ಭಾಷೆಯೊಳಗಿರುವ ಗ್ರಂಥಾಭಿವೃದ್ಧಿಯ ಅಭಿಮಾನವಿರುವ ದಿಲ್ಲವೋ ? ಯಾವ ಭಾಷೆಯು ಬಾಕಿ ಭಾಷೆಗಳಿಗಿಂತಲೂ ಕಡಿಮೆ ಸ್ಥಿತಿಯಲ್ಲಿ ಇರುವುದೋ ? ಆ ಭಾಷೆಯು ಇಂದಿಗೆ ಕನ್ನಡವೇ ಆಗಿರುವದು. ಮೊದಲಿಗೆ ಈ ಭಾಷೆಯು ತಕ್ಕಮಟ್ಟಿಗೆ ಪೂರ್ಣಾ ವಸ್ಥೆಯನ್ನು ಹೊಂದಿತ್ತಾಗಿದ್ದರೂ, ಇತ್ತಿತ್ತಲಾಗಿನ ಜನರ ಅಶ್ರದ್ಧೆಯಿಂದ ಅನೇಕ ಉತ್ತಮೋತ್ತಮ ಗಳಾದ ಗ್ರಂಥಗಳು ಇಲಿಜಿರ್ಲಿಗಳ ಪಾಲಾಗಿ ನಾಶವಾದವಲ್ಲದೇ, ಅನೇಕ ಗ್ರಂಥಗಳು ಇನ್ನಾದರೂ ಬಹು ಗುಪ್ತ ರೀತಿಯಿಂದಲಿರುತ್ತವೆ."

ಪತ್ರಿಕಾ ಸಂಪಾದನ :

'ಹವ್ಯಕ ಸುಬೋಧ' (೧೮೮೫), 'ಹಿತೋಪದೇಶ' (೧೮೮೮) :

ವೆಂಕಟರಮಣ ಶಾಸ್ತ್ರಿಗಳ ಸಾಹಸವೃತ್ತಿ ಬರಿಯ ಗ್ರಂಥ ಸಂಪಾದನೆ ಮತ್ತು ಸ್ವತಂತ್ರ ಕೃತಿ ರಚನೆಗೆ ಮಾತ್ರ ನಿಲ್ಲದೆ, ಇವರು ಸ್ವತಂತ್ರವಾಗಿ ಪತ್ರಿಕೆಗಳನ್ನು ತೆಗೆಯುವಂತೆಯೂ ಪ್ರೇರೇಪಿಸಿತು.

ಈ ರೀತಿ ಹೊರಟ ಪತ್ರಿಕೆಗಳೆಂದರೆ 'ಹವ್ಯಕ ಸುಬೋಧ' (೧೮೮೫–೮೯) ಮತ್ತು 'ಹಿತೋಪದೇಶ.' (ಈ ಪತ್ರಿಕೆಗಳ ಮುಖ ಪುಟದ ಪಡಿಯಚ್ಚನ್ನು ಅನ್ಯತ್ರ ಕೊಡಲಾಗಿದೆ.)

'ಹವ್ಯಕ ಸುಬೋಧ' ಸಾಪ್ತಾಹಿಕವು ೧೮೮೫ರಲ್ಲಿ ಪ್ರಾರಂಭವಾಯಿತು. ಇದು ನಾಲ್ಕು ವರ್ಷಗಳ ಕಾಲ ನಡೆದು ೧೮೮೯ ರಲ್ಲಿ ನಿಂತಿತು. ಇದರಲ್ಲಿ ಉಳಿದ ವಾರ್ತಾ ಸಂಗ್ರಹದ ಕೂಡ 'ನಿಜವಾಗಿ ಕೇಳಿ ಬಂದದ್ದು' ಎಂಬ ಹೆಸರಿನಲ್ಲಿ ಪೇಟೆಯ ಧಾರಣೆ ಪ್ರಕಟವಾಗುತ್ತಿತ್ತು. "ಯಾಲಕ್ಕಿ ಬಹಳ ಮಂದೀ ಆದೆ. ಗಿರಾಕಿ ಕಡಿಮೆ. ಭಂಗಾರ ಆಗದೀ ತೇಜಿ. ಇನ್ನೂ ಹೆಚ್ಚು ದರ ಆದೀತು." ಪ್ರಾರಂಭದಲ್ಲಿ ಕೇವಲ ೧೦೦ ಪ್ರತಿಗಳಿಂದ ಪ್ರಾರಂಭವಾದ ಈ ಪತ್ರಿಕೆಯ ಪ್ರಸಾರ ಸನ್ ೧೮೮೬ ರಲ್ಲಿ ೨೫೦, ೧೮೮೮ ರಲ್ಲಿ ೭೫೦, ೧೮೮೯ ರಲ್ಲಿ ೯೫೦ ರವರೆಗೆ ಏರಿತು.

ಇದಕ್ಕೆ ಮುಖ್ಯವಾದ ಕಾರಣ, ವೆಂಕಟರಮಣ ಶಾಸ್ತ್ರಿಗಳ ಸ್ಪಷ್ಟವಾದಿತ್ವ, ಕೆಚ್ಚು, ಮತ್ತು ನಿಶಿತವಾದ ಬರವಣಿಗೆ. ಉದಾಹರಣೆಗೆ, ಮದ್ರಾಸದ ಗವರ್ನರರು ಕೊನ್ನೆಮಾರಾ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಮಾರ್ಗವಾಗಿ ರಾಮೇಶ್ವರಕ್ಕೆ ಹೋಗುವವರಿದ್ದಾಗ, ಅವರ ಸ್ವಾಗತಕ್ಕಾಗಿ ಉಡುಪಿ, ಕುಂದಾಪುರಗಳ ರೈತಬಾಂಧವರಿಂದ ಅಲ್ಲಿಯ ಅಧಿಕಾರಿಗಳು ಹದಿನಾಲ್ಕು ಸಾವಿರ ರೂಪಾಯಿಗಳನ್ನು ಒತ್ತಾಯದಿಂದ ಸಂಗ್ರಹಿಸಿದರು. ಇದಾವ ನ್ಯಾಯ ? ಎಂದು ಶಾಸ್ತ್ರಿಗಳು ಕೇಳುತ್ತಾರೆ. ಮುಂಬಯಿ ಕರ್ನಾಟಕ ಭಾಗದಲ್ಲಿ ಮರಾಠಿ ಅಧಿಕಾರಿಗಳು ಕನ್ನಡದ ಬಗೆಗೆ ತೋರುತ್ತಿದ್ದ ಅಲಕ್ಷದ ಉಲ್ಲೇಖವೂ ಬಂದಿದೆ. ಅಧಿಕಾರಿಗಳ ಲಂಚ, ರುಷುವತ್ತು, ಸ್ತ್ರೀಲಂಪಟತನ– ಮೊದಲಾದವುಗಳ ಬಗೆಗೆ ಇಂದಿನ ಸ್ವಾತಂತ್ರ್ಯ ಯುಗದಲ್ಲಿಯೂ ಕೂಡ ನಾವು ಬರೆಯದಷ್ಟು ನಿರ್ಭಯವಾಗಿ ಶಾಸ್ತ್ರಿಗಳು ಅಂದೇ ಬರೆದಿದ್ದಾರೆ. ಈ ರೀತಿ ಶಾಸ್ತ್ರಿಗಳ ವಿಮರ್ಶೆಗೆ ಗುರಿಯಾಗಿದ್ದ ವ್ಯಕ್ತಿಗಳಲ್ಲಿ ಆರ್ಥರ್ ಕ್ರಾಫರ್ಡ ಎಂಬವರೊಬ್ಬರು. "ತನ್ನದೇ ಜನರ ಸರಕಾರವಿದೆಯೆಂದು ದುಷ್ಕೃತ್ಯಗಳನ್ನು ಮುಂದುವರೆಸಿದರೆ ನಡೆದೀತೆ ? ಕಳ್ಳನಾದವನು ತನ್ನ ಗ್ರಹಗತಿ ಒಳ್ಳೆಯದಿದೆಯೆಂದು ಬೆಳಗಾಗುವವರೆಗೂ ತನ್ನ ಕಾಯಕವನ್ನು ಮುಂದುವರೆಸಿದರೆ ಸಿಕ್ಕಿ ಬೀಳದೆ ಇರುತ್ತಾನೆಯೇ ?'' – ಎಂದು ಶಾಸ್ತ್ರಿಗಳು ಪ್ರಶ್ನಿಸುತ್ತಾರೆ.[೧]

ದಿನಾಂಕ ೩೦–೭–೧೮೮೮ ರ ಸಂಚಿಕೆಯಲ್ಲಿ ಅಧಿಕಾರಿಗಳ ಸ್ತ್ರೀವ್ಯಾಮೋಹವನ್ನು ಪ್ರಸ್ತಾಪಿಸಿದ್ದಾರೆ. "ಇವರಿಗೆ ಹೆಣ್ಣುಗಳನ್ನು ಒದಗಿಸುವ ಹೇಯವಾದ ಪರಿಸ್ಥಿತಿ ಇದೆ. ಅಲ್ಲದೆ ಜನರು ತಮ್ಮ ಕೆಲಸವಾಗಬೇಕಾದರೆ, ಈ ಉಪಪತ್ನಿಯರನ್ನು ಖುಶಿಯಲ್ಲಿಡಬೇಕಾಗುತ್ತದೆ. ಸರಕಾರೀ ಕೆಲಸಗಳಲ್ಲಿ ಇಂಥ ಸ್ತ್ರೀಯರ ಅಪ್ರತ್ಯಕ್ಷ ಪ್ರಭಾವವೇ ಅತಿಯಾಗಿರುವ ಸಂದರ್ಭಗಳೂ ಇವೆ. ಫಿರ್ತಿಯ ಮೇಲೆ ಹೋದ ಅಧಿಕಾರಿಗಳನ್ನು ತೃಪ್ತಿ ಪಡಿಸಬೇಕಾದರೆ ರೈತಾಪಿ ಜನರಿಗೂ ಗ್ರಾಮಾಧಿಕಾರಿಗಳಿಗೂ ಸಾಕು ಬೇಕಾಗುತ್ತದೆ. ಆಗ ಇವರಿಗೆ ಹೆಣ್ಣನ್ನು ಒದಗಿಸಬೇಕು. ಒಮ್ಮೊಮ್ಮೆ ತಾವೇ ಬರುವಾಗ ಕರೆತರುತ್ತಾರೆ.''

ದಿನಾಂಕ ೩೦–೮–೧೮೮೮ ರಂದು ಪುನಃ ಇಂಥದೇ ಒಂದು ಘಟನೆಯ ಬಗೆಗೆ ಬರೆಯುತ್ತ ಶಾಸ್ತ್ರಿಗಳು ಹೀಗೆ ಅಂದಿದ್ದಾರೆ : ''ಇದರಲ್ಲಿ ಸಂಶಯವಿದೆಯೇ ? ನಡೆದ ಘಟನೆಯೊಂದನ್ನು ಕೊಡುತ್ತೇವೆ. ತಾ. ೩೦–೮–೧೮೮೮ ನೇ ದಿವಸ ಶಫರ್ಡ ಕಂಪನಿಯವರ ಸ್ಟೀಮರಿನಲ್ಲಿ ನಾನು ಕಣ್ಣಾರೆ ಕಂಡದ್ದು. ಇದು ಓರ್ವ ಫಾರೆಸ್ಟ ಅಫೀಸರನು ಅಂಕೋಲೆ ಕಡೆಯ ಓರ್ವ ಅನೀತಿಯ ಹೆಣ್ಣನ್ನು

೧ ಹೆಚ್ಚಿನ ವಿವರಗಳಿಗಾಗಿ 'ಕಸ್ತೂರಿ'ಯಲ್ಲಿ (ಮೇ ೧೯೭೧) ಶ್ರೀ ಶ್ರೀನಿವಾಸ ಹಾವನೂರ ಅವರು ಬರೆದ ಲೇಖನವನ್ನು ನೋಡುವುದು.

ಜೊತೆಗೆ ಕರೆತಂದು ಒಂದೇ ತರಗತಿಯ ಕಂಪಾರ್ಟಮೆಂಟನ್ನು ರಿಸರ್ವಮಾಡಿಸಿ, ಕಾರ್ನ್ಯಾಕ್ ಬಂದರಿಗೆ ಹೊರಟಿದ್ದ. ಯಾವದೇ ನಾಚಿಕೆ ಹೇಸಿಕೆಗಳಿಲ್ಲದೆ ಬಹಿರಂಗವಾಗಿ ಅವಳೊಡನೆ ಅಲ್ಲಿ ಗೈಯುತ್ತಿದ್ದುದನ್ನು ಕಂಡು ಇತರ ಪ್ರವಾಸಿಕರು ಜಿಗುಪ್ಸೆ ಪಟ್ಟರು. ಆ ಅಧಿಕಾರಿ ಯಾರು, ಇತ್ಯಾದಿ ವಿವರಗಳು ಸರಕಾರಕ್ಕೆ ಬೇಕಾದರೆ ನಾನು ಕೊಡಲು ಸಿದ್ಧನಿದ್ದೇನೆ."

ಶಾಸ್ತ್ರಿಗಳ ಈ ಬರೆಹವನ್ನು ಮುಂಬಯಿಯ 'ಕನ್ನಡ ಸುವಾರ್ತೆ' ಎತ್ತಿಹಿಡಿಯಿತು. ಪುಣೆಯ 'ಶಿವಾಜಿ' ಎಂಬ ಮರಾಠಿ ಸಾಪ್ತಾಹಿಕವು, ಇದನ್ನು ಪ್ರಸ್ತಾಪಿಸಿ ಸರಕಾರಕ್ಕೆ ನೈತಿಕ ಧೈರ್ಯವಿದ್ದರೆ 'ಹವ್ಯಕ ಸುಬೋಧ'ದ ಆಹ್ವಾನವನ್ನು ಸ್ವೀಕರಿಸಬೇಕೆಂದು ಕೇಳಿಕೊಂಡಿತು. ಉತ್ತರ ಕನ್ನಡ ಜಿಲ್ಲೆಯ ಅರಣ್ಯದ ಬಗೆಗೆ 'ವನದುಃಖ ನಿವಾರಣ' ಎಂಬ ಲೇಖನಗಳನ್ನು ಶಾಸ್ತ್ರಿಗಳು ಬರೆದರು. ಅಲ್ಲಿಯ ಕೃಷ್ಣಾಜಿ ಬೀಳಗಿಕರ ಎಂಬವರನ್ನು ಸರಕಾರದವರು ವರ್ಗ ಮಾಡಿದರು. ಇದನ್ನು ಶಾಸ್ತ್ರಿಗಳು ಕಟುವಾಗಿ ಖಂಡಿಸಿದರು. ಶಾಸ್ತ್ರಿಗಳ ಈ ನಿಲುಮೆಯನ್ನು ಮಹಾರಾಷ್ಟ್ರದ 'ಮಹಾಷ್ಟ್ರ ಮಿತ್ರ' 'ಜಗದಾದರ್ಶ' 'ಜ್ಞಾನ ಪ್ರಕಾಶ'– ಮೊದಲಾದ ಮರಾಠಿ ಪತ್ರಿಕೆಗಳು ಧೈರ್ಯವಾಗಿ ಎತ್ತಿಹಿಡಿದವು. ಸುಪ್ರಸಿದ್ಧ ಪತ್ರಿಕೆಯಾದ 'ಜಾಮ್ ಎ ಜಮಶೇಡ್'ವಂತೂ ತನ್ನ ೨–೬–೧೮೮೬ರ ಸಂಚಿಕೆಯಲ್ಲಿ ''ಹವ್ಯಕ ಸುಬೋಧವು ಒದಗಿಸಿರುವ ವಿವರಗಳು ಬ್ರಿಟಿಶ ಆಡಳಿತ ಪದ್ಧತಿಗೇನೆ ಕೆಟ್ಟ ಹೆಸರನ್ನು ತರುವಂತಿವೆ. ಬೀಳಗೀಕರರನ್ನು ವರ್ಗ ಮಾಡಿದ್ದರ ನಿರ್ದಿಷ್ಟ ಕಾರಣಗಳನ್ನು ಕೊಡಲು ದೇಶಪಾಂಡೆಯವರಿಂದ ಸ್ಪಷ್ಟೀಕರಣ ಕೇಳಬೇಕು.... ಲಾರ್ಡ ರೇ ಮಾಡಬೇಕಾದ ಮೊದಲ ಕೆಲಸವೆಂದರೆ ವಿಲ್ಸ ಶಾಯರ್ ಮತ್ತು ದೇಶಪಾಂಡೆ ಇಬ್ಬರನ್ನೂ ನೌಕರಿಯಿಂದ ತೆಗೆದುಹಾಕಬೇಕು''– ಎಂದು ಹೇಳಿತು. ಇದೂ ಅಲ್ಲದೆ 'ರಿಪನ್ ರಿಪೋರ್ಟರ್' 'ಬಾಂಬೆ ಸಮಾಚಾರ', 'ರಾಸ್ತ ಗಫ್ತರ್'– ಮೊದಲಾದ ಗುಜರಾಥಿ ಪತ್ರಿಕೆಗಳೂ ಶಾಸ್ತ್ರಿಗಳ ನಿಲುವನ್ನೇ ಎತ್ತಿಹಿಡಿದವು. ಈ ವಿವರಗಳೆಲ್ಲ ಶಾಸ್ತ್ರಿಗಳ ಕುಶಾಗ್ರಬುದ್ಧಿ, ಉತ್ಸಾಹಶಕ್ತಿ ಮತ್ತು ನಿರ್ಭಯ ವೃತ್ತಿಗಳನ್ನು ತೋರಿಸುತ್ತವೆ.

'ಹಿತೋಪದೇಶ'ವು ಸನ್ ೧೮೮೮ ರ ಜನೆವರಿ ತಿಂಗಳಿನಲ್ಲಿ ಪ್ರಾರಂಭವಾಯಿತು. ಇದು ಮಾಸಪತ್ರಿಕೆ. ಇದರ ಉದ್ದೇಶ "ಕನ್ನಡ ಬಾಲಕರ ವಿದ್ಯಾವ್ಯಾಸಂಗವನ್ನು ಊರ್ಜಿಸುವದಕ್ಕೆ ಕೈಲಾದ ಮಟ್ಟಿಗೆ ಸಹಾಯ" ಮಾಡುವದು. ಇದರಲ್ಲಿ ಚರಿತ್ರೆ, ಇತಿಹಾಸ, ವಿಜ್ಞಾನಗಳಿದ್ದುವಲ್ಲದೆ, ಚಿಕ್ಕ ಮಕ್ಕಳಿಗಾಗಿ 'ವಿವಿಧ ವೃತ್ತಾಂತ ಸಂಗ್ರಹ'ವೆಂಬ ವಿಭಾಗವೂ ಇದ್ದಿತು. ಈ ವಿಭಾಗದ ಬಗೆಗೆ ಸಂಪಾದಕರು "ನಮ್ಮ ಚಿಕ್ಕ ಪ್ರಿಯ ಬಾಲಕರು ಒಂದೇ ವಿಧವಾದ ಭೋಜನವನ್ನು ಮಾಡಬಾರದೆಂದು ಸಿದ್ಧಪಡಿಸಿದ ಕೋಸಂಬರಿ ಇದು"– ಎಂದು ಬರೆದಿದ್ದಾರೆ. ಪತ್ರಿಕೆಯ ಚಂದಾಹಣ ಒಂದು ರೂಪಾಯಿ. ಯಾವುದಾದರೂ ಶಾಲೆಯಲ್ಲಿ ಐವತ್ತಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಚಂದಾದಾರರಾದರೆ, ಚಂದಾ ಹಣ ಹತ್ತು ಆಣೆ ಮಾತ್ರ. ಅಲ್ಲದೆ, ಅಲ್ಲಿಯ ಶಾಲಾಮಾಸ್ತರರಿಗೆ ಒಂದು ಪ್ರತಿ ಇನಾಮು ಇದ್ದಿತು.

'ಹಿತೋಪದೇಶ'ದ ಹೆಚ್ಚಿನ ಆಕರ್ಷಣೆಯು ಅಲ್ಲಿ ಮುದ್ರಿತವಾಗುತ್ತಿದ್ದ ವ್ಯಂಗ್ಯ ಚಿತ್ರಗಳಲ್ಲಿದೆ. ಮೈಸೂರಿನ ರಾಜ್ಯಸತ್ತೆಯನ್ನು ಮದ್ರಾಸೀಯರು ಹರಣ ಮಾಡುತ್ತಿದ್ದ ಒಂದು ವ್ಯಂಗ್ಯ ಚಿತ್ರವನ್ನೂ, ಕನ್ನಡದ ದೈನ್ಯವನ್ನು ತೋರಿಸುವ ವ್ಯಂಗ್ಯ ಚಿತ್ರವನ್ನೂ ಅನ್ಯತ್ರ ಕೊಡಲಾಗಿದೆ. ಸುಪ್ರಸಿದ್ಧ ಯಂತ್ರ ವಿಜ್ಞಾನಿಗಳೂ ಆಡಳಿತಗಾರರೂ ಆಗಿದ್ದ ಕರ್ಪೂರ ಶ್ರೀನಿವಾಸರಾಯರು ಈ ಕಾಲದಲ್ಲಿ ಬೆಳಗಾವಿಯಲ್ಲಿ ಎಂಜಿನಿಯರರಾಗಿದ್ದರು. ಅವರು ಈ ಪತ್ರಿಕೆಯನ್ನು ತುಂಬಾ ಮೆಚ್ಚಿಕೊಂಡು ಹೀಗೆ ಬರೆದಿದ್ದಾರೆ :

"ನಮ್ಮ ಕನ್ನಡ ಭಾಷೆಯು ಹೀನ ಸ್ಥಿತಿಯಲ್ಲಿದ್ದು ಇಂಥಾ 'ಹಿತೋಪದೇಶ'ಕರವಾದ ಪುಸ್ತಕಗಳು ಬಹು ಅಪರೂಪವಾಗಿರುವುದರಿಂದ ನಿಮ್ಮ ಮೊದಲನೇ ಯತ್ನಕ್ಕೆ ನಿಮ್ಮನ್ನು ಬಹಳವಾಗಿ ಕೊಂಡಾಡಬೇಕಾಗಿದೆ. ಮುಖ್ಯವಾಗಿ ನಿಮ್ಮ ಚಿತ್ರಗಳು ಕೇವಲ ಆನಂದವನ್ನುಂಟುಮಾಡುವುದಲ್ಲದೆ, ನಿಜಸ್ಥಿತಿಯ ಸಂಗತಿಗಳನ್ನು ಚೆನ್ನಾಗಿ ಮನಸ್ಸಿಗೆ ಹತ್ತುವ ಹಾಗೆ ತೋರಿಸುತ್ತವೆ."

ಹೀಗಾಗಿ, ತಮ್ಮ ಅನೇಕಮುಖವಾದ ಪ್ರತಿಭೆಯ ಮೂಲಕವೂ, ಸುಂದರವಾದ ಬರವಣಿಗೆಯ ಮೂಲಕವೂ, ಸಮಾಜ ಮತ್ತು ದೇಶದ ಹಿತಸಾಧನೆಯ ದೃಷ್ಟಿಯ ಮೂಲಕವೂ, ಪತ್ರಿಕಾ ವ್ಯವಸಾಯದಲ್ಲಿ ಸಾಧಿಸಿದ ಹೆಚ್ಚಳದ ಮೂಲಕವೂ ಸೂರಿ ವೆಂಕಟರಮಣಶಾಸ್ತ್ರಿಗಳಿಗೆ ಕನ್ನಡ ಉದಯಕಾಲದ ಸಾಹಿತ್ಯಪ್ರಪಂಚದಲ್ಲಿ ತೀರ ಹೆಚ್ಚಿನ ಸ್ಥಾನವಿದೆ.

—

ಪಂಡಿತ ಕೇಶವಶರ್ಮಾ ಗಲಗಲಿ

(೧೮೯೩–೧೯೬೬)

ಕೇಶವ ಶರ್ಮರದು ಬಡತನದ ಮನೆತನ. ಅವರು ಹುಟ್ಟಿದ್ದು ಹಳ್ಳಿಯಲ್ಲಿ. ಪರಿಸರ ಸಾಮಾನ್ಯ. ಇಂಥ ಪ್ರತಿಕೂಲ ಪರಿಸರದಲ್ಲಿ ಜನಿಸಿದ್ದರೂ, ತಮ್ಮ ಸ್ವಸತ್ವದಿಂದ, ಸ್ವಾಧ್ಯಾಯದಿಂದ ಸಾಹಿತ್ಯ ದಿಗಂತದಲ್ಲಿಯ ಒಂದು ತಾರೆಯ ಸ್ಥಾನವನ್ನು ಕೇಶವಶರ್ಮರು ಪಡೆದರು. ಕೇಶವಶರ್ಮರು ೧೮೯೩ನೆಯ ಇಸ್ವಿ ಮಾರ್ಚ ತಿಂಗಳ ೧೩ನೆಯ ತಾರೀಖಿನ ಸೋಮವಾರದಂದು ಸಾಯಂಕಾಲ ೫ ಗಂಟೆಯ ಸುಮಾರಿಗೆ ವಿಜಾಪೂರ ಜಿಲ್ಲೆಯ ನಾಗನೂರ ಎಂಬ ಗ್ರಾಮದಲ್ಲಿ ಜನಿಸಿದರು. ತಂದೆ ರಂಗಭಟ್ಟರು ಸಾತ್ವಿಕ ಬ್ರಾಹ್ಮಣರು. ವಿಶೇಷ ಹೊಲಮನೆಗಳೂ ಇರಲಿಲ್ಲ. ಇದ್ದುಬಿದ್ದ ಒಂದು ಚಿಕ್ಕ ಹೊಲದಲ್ಲಿ ಹೊಟ್ಟೆ ತುಂಬುವಂತಿರಲಿಲ್ಲ. ಮನೆತನದ ವೃತ್ತಿಯಾದ ಜ್ಯೋತಿಷ್ಯವನ್ನೇ ಹೆಚ್ಚಾಗಿ ಅವಲಂಬಿಸಿ ಕೊಂಡಿದ್ದರು. ಕೇಶವಶರ್ಮರು ಹುಟ್ಟಿದ ನಂತರ ರಂಗಭಟ್ಟರು ಗಲಗಲಿಗೆ ಸ್ಥಳಾಂತರಿಸಿದರು. ಆಗ ಗಲಗಲಿಯು ಬ್ರಾಹ್ಮಣ್ಯದ ತವರೂರಾಗಿತ್ತಲ್ಲದೆ ಸಂಸ್ಕೃತ ವಿದ್ಯೆಗೂ ಹೆಸರು ಪಡೆದಿತ್ತು. 'ವಿದ್ಯಾ ಏವ ಧನಂ' ಎಂದು ಬಗೆದ ರಂಗಭಟ್ಟರು ಗಲಗಲಿಯನ್ನು ತಮ್ಮ ಜನ್ಮಭೂಮಿಯನ್ನಾಗಿ ಮಾಡಿಕೊಂಡುಬಿಟ್ಟರು.

ಗಲಗಲಿಯಲ್ಲಿಯೇ ಕೇಶವಶರ್ಮರ ಪ್ರಾಥಮಿಕ ಶಾಲೆಯ ಅಭ್ಯಾಸವು ಪ್ರಾರಂಭವಾಯ್ತು. ಆ ಗ್ರಾಮದ ಶಾಲೆಗೆ ಒಮ್ಮೆ ಇನಸ್ಪೆಕ್ಟರ ಸಾಹೇಬರು ತಪಾಸಣೆಗಾಗಿ ಬಂದಿದ್ದರು. ಆ ಸಮಯದಲ್ಲಿ ಸಾಹೇಬರು ಕಪ್ಪು ಹಲಗೆಯ ಮೇಲೆ ಖಡುವಿನಿಂದ 'ಕೋಟ್ಯಾವಧಿ' ಎಂಬ ಶಬ್ದವನ್ನು ಬರೆದು ಸರಿಯೋ ತಪ್ಪೋ ಎಂದು ಕೇಳಿದರು. ಎಲ್ಲ ಮಕ್ಕಳೂ ಅವಾಕ್ಕಾದರು. ಗುರುಗಳಿಗೂ ಕ್ಷಣಕಾಲ ದಿಗಿಲು ಬಿತ್ತು. ಕೂಡಲೇ ಬಾಲಕನೋರ್ವನು ಎದ್ದು ಅದು ತಪ್ಪು, ನಾನು ಸರಿಯಾಗಿ ಬರೆಯುತ್ತೇನೆಂದು ಹೇಳಿ, ಅಳಿಸಿ 'ಕೋಟ್ಯವಧಿ' ಎಂದು ಬರೆದನು. ಹಾಗೆ ಬರೆದ ಬಾಲಕನೇ ಕೇಶವ ಶರ್ಮರು. ಸಂತೋಷಗೊಂಡ ಸಾಹೇಬರು ಆ ಬಾಲಕನನ್ನು ಮುದ್ದಾಡಿ, ಆಶೀರ್ವದಿಸಿ, ಕನ್ನಡದಲ್ಲಿ ಅಚ್ಚಾದ ಮಹಾಭಾರತದ ಸಂಪುಟವೊಂದನ್ನು ಕಾಣಿಕೆಯಾಗಿ ಕೊಟ್ಟರು. ಕೇಶವಶರ್ಮರು ಇನ್ನೂ ಚಿಕ್ಕವರಿರುವಾಗಲೇ, ಮಾಘ ಕವಿಯ 'ಶಿಶುಪಾಲ ವಧ' ಎಂಬ ಕಾವ್ಯದ ಒಂಬತ್ತು ಸರ್ಗಗಳನ್ನು ಕಂಠಪಾಠ ಮಾಡಿದ್ದರು. ಪರಿಚ್ಛೇದ ಸಹಿತ ಹೇಳುತ್ತಿದ್ದರಂತೆ. ಇಂಥ ಅದ್ಭುತ ಸ್ಮರಣಶಕ್ತಿಯುಳ್ಳ ಬಾಲಕನಿಗೆ ಓದುವ ಹವ್ಯಾಸವಲ್ಲದೆ ಬೇರಿನ್ನೇನೂ ಇರಲಿಲ್ಲ.

ಕನ್ನಡ ಮುಲ್ಕೀ ಪರೀಕ್ಷೆಯನ್ನು ಪಾಸಾದ ನಂತರ ಕೇಶವಶರ್ಮರು ಅನಿವಾರ್ಯವಾಗಿ ಕನ್ನಡ ಶಾಲೆಯಲ್ಲಿ ಶಿಕ್ಷಕ ವೃತ್ತಿಯನ್ನು ಕೈಕೊಳ್ಳಬೇಕಾಯಿತು. ಆಗಿನ ಕಾಲದಲ್ಲಿ ಮಾಸ್ತರಕಿಯನ್ನು ದೊರಕಿಸುವದೇ ಒಂದು ದೊಡ್ಡ ಸಾಧನೆಯೆನಿಸಿತ್ತು. ಹೈಸ್ಕೂಲ ಅಭ್ಯಾಸಕ್ಕೆ ಎಳ್ಳನಿತೂ ಅನುಕೂಲವಿರ

ಲಿಲ್ಲ. ಊರು ಸಂಸ್ಕೃತದ ತವರಾದುದರಿಂದ ಸುಮಾರು ಒಂಬತ್ತು ವರುಷ ಕೂರ್ಮಾಚಾರ್ಯ ಗಲಗಲಿ ಹಾಗೂ ಸುಬ್ರಹ್ಮಣ್ಯಾಚಾರ್ಯ ಗಲಗಲಿಯವರಲ್ಲಿ ಸಂಸ್ಕೃತದ ಅಧ್ಯಯನ ಮಾಡಿದರು. ಬೆಳಗಿನ ಜಾವ ನಾಲ್ಕು ಗಂಟೆಗೇನೇ ಎದ್ದು ಕೈಯಲ್ಲಿ ಮಿಣುಕುತ್ತಿರುವ ಕಂದೀಲೊಂದನ್ನು ಹಿಡಿದು, ಆಚಾರ್ಯರ ಮನೆಯ ಬಾಗಿಲಿಗೆ ಹೋಗುತ್ತಿದ್ದರು. ಶಿಷ್ಯನ ಧ್ವನಿಗೆ ಬಾಗಿಲು ತೆರೆದು ಸಂತೋಷದಿಂದ ಬರಮಾಡಿಕೊಂಡು ಪಾಠ ಹೇಳುತ್ತ ಆಚಾರ್ಯರು ಕುಳಿತರೆಂದರೆ ಗುರುಶಿಷ್ಯರೀರ್ವರಿಗೂ ಹೊತ್ತೇರಿದ ವಿಷಯವೇ ಗೊತ್ತಾಗುತ್ತಿರಲಿಲ್ಲ. ಆಚಾರ್ಯರ ಪತ್ನಿ ಎಚ್ಚರಿಸಿದಾಗಲೇ ಈರ್ವರೂ ಏಳಬೇಕು. ಕೂರ್ಮಾಚಾರ್ಯರ ಹತ್ತಿರ ಸಾಹಿತ್ಯವನ್ನೋದಿದರೆ, ಅವರ ಅಣ್ಣಂದಿರಾದ ಸುಬ್ರಹ್ಮಣ್ಯಾಚಾರ್ಯರ ಹತ್ತಿರ ವ್ಯಾಕರಣವನ್ನೋದಿದರು. ಪಾಣಿನೀಯ ವ್ಯಾಕರಣವು ಅವರ ಅಂಗೈನೆಲ್ಲಿಯಾಯಿತು. ೧೯೧೮ ರಲ್ಲಿಯೇ 'ಪಂಡಿತರಾಜ ಜಗನ್ನಾಥ'ವೆಂಬ ಗ್ರಂಥವನ್ನು ಬರೆದರು. ಕರ್ನಾಟಕ ವಿದ್ಯಾವರ್ಧಕ ಸಂಘವು ಅದನ್ನು ಪ್ರಕಟಿಸಿ ಪುರಸ್ಕಾರವನ್ನಿತ್ತಿತು. 'ಪಾಣಿನಿ' ಎಂಬ ಚಿಕ್ಕ ಹೊತ್ತಿಗೆಗೂ ಕರ್ನಾಟಕ ವಿದ್ಯಾವರ್ಧಕ ಸಂಘವು ಪಾರಿತೋಷಕವನ್ನಿತ್ತಿದೆ.

ಶಿಕ್ಷಕ ವೃತ್ತಿಯನ್ನವಲಂಬಿಸಿದ ಪಂಡಿತ ಕೇಶವಶರ್ಮರು ಮುಂದೆ ತರಬೇತಿಯನ್ನು ಪಡೆಯಲು ಧಾರವಾಡದ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜನ್ನು ಸೇರಿದರು. ಅಲ್ಲಿಯೂ ಸಹ ಅವರೊಬ್ಬ ಪ್ರತಿಭಾವಂತ ವಿದ್ಯಾರ್ಥಿಯೆಂದು ಹೆಸರು ಗಳಿಸಿದರು. ೧೯೨೨ರಲ್ಲಿ ಮೈಸೂರಿಗೆ ಹೋಗಿ ಪಂಡಿತ ಪರೀಕ್ಷೆಯಲ್ಲಿ ಯಶಸ್ಸನ್ನು ಪಡೆದರು. ಅಂದಿನವರೆಗೆ ಕೇಶವ ರಂಗಭಟ್ಟ ಜೋಶಿ ಎಂದಿದ್ದ ಅವರ ಹೆಸರು ಅಂದಿನಿಂದ ಪಂಡಿತ ಕೇಶವಶರ್ಮಾ ಗಲಗಲಿ ಎಂದಾಯಿತು. ಅದೇ ಸಮಯಕ್ಕೆ ಸಂಸ್ಕೃತ ಮತ್ತು ಕನ್ನಡ ಕಾವ್ಯಗಳನ್ನೂ ಆಳವಾಗಿ ಅಭ್ಯಸಿಸಿದರು. ಪಂಪ, ರನ್ನ, ಕುಮಾರವ್ಯಾಸ, ಲಕ್ಷ್ಮೀಶ, ಷಡಕ್ಷರಿಯ ಕಾವ್ಯಗಳು ಯಾವಾಗಲೂ ಅವರ ನಾಲಿಗೆಯ ತುದಿಯ ಮೇಲೆ ನಲಿದಾಡುತ್ತಿದ್ದವು. ಪಂಡಿತ ಪರೀಕ್ಷೆಯಲ್ಲಿರುವಾಗ ಕಷ್ಟಾಯವಾದ ಇಂಗ್ಲಿಷ ಭಾಷೆಯನ್ನೂ ಕಲಿತುಕೊಂಡರು.

೧೯೧೨ ರಿಂದ ೧೯೩೭ರ ವರೆಗೆ ಅಖಂಡವಾಗಿ ೨೫ ವರುಷ ಸ್ವಾಧ್ಯಾಯ ಮಾಡಿ ಕನ್ನಡ, ಇಂಗ್ಲಿಷ್, ಸಂಸ್ಕೃತ, ಬಂಗಾಲಿ, ಪಾಲಿ ಹಾಗೂ ಮರಾಠಿ ಭಾಷೆಗಳನ್ನು ಕಲಿತುಕೊಂಡರು. ಜಯ ಕರ್ನಾಟಕ, ಸಾಹಿತ್ಯ ಪರಿಷತ್ಪತ್ರಿಕೆ ಮೊದಲಾದ ಉದ್ದಾಮ ಕನ್ನಡ ಪತ್ರಿಕೆಗಳಿಗೆ ಲೇಖನಗಳನ್ನು ಬರೆದರು. ಕಾಂಚೀವರಮ್‌ದಿಂದ ಹೊರಡುತ್ತಿದ್ದ ಸಂಸ್ಕೃತ ವಾರಪತ್ರಿಕೆ 'ಮಂಜುಭಾಷಿಣಿ'ಗೆ ಲೇಖನಗಳನ್ನು ಬರೆಯುತ್ತಿದ್ದರು. ಅವರ ''ತದೇತದ್ವದನಾಂಬುಜಂ'' ಎಂಬ ಲೇಖವು ಆಗಿನ ಸಂಸ್ಕೃತ ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಯ್ತು. 'ಸಹೃದಯ' ಎಂಬ ಮದ್ರಾಸದ ಪತ್ರಿಕೆಗೂ ಲೇಖನಗಳನ್ನು ಬರೆಯುತ್ತಿದ್ದರು.

'ಶಾಲಾಪತ್ರಕ', 'ಸಾಹಿತ ಪರಿಷತ್ಪತ್ರಿಕೆ', 'ಜಯಕರ್ನಾಟಕ', 'ವಾಗ್ಭೂಷಣ' ಮುಂತಾದ ಪತ್ರಿಕೆಗಳಲ್ಲಿ 'ಗೀತಾಂಜಲಿ', 'ಕನ್ನಡ ಸಾಹಿತ್ಯಕ್ಕೆ ರಾಜಾಶ್ರಯ', 'ಕನ್ನಡಕ್ಕೆ ಸಂಸ್ಕೃತದ ಕಾಣ್ಕೆ', 'ಕಣಿಕನ ಕುಟಿಲ ನೀತಿ', 'ಉಪನಿಷತ್ತುಗಳಲ್ಲಿ ಕಾವ್ಯಧ್ವನಿ', 'ಜಾಂಬುವತೀ ಕಲ್ಯಾಣ', 'ಚಾರ್ವಾಕ ದರ್ಶನ', 'ಮಹಾವಲ್ಲಿ ಭೋಜಪ್ರಬಂಧ'– ಮುಂತಾದ ನೂರಾರು ಲೇಖನಗಳು ದೊರಕುತ್ತವೆ. ಇವುಗಳಲ್ಲಿ ಹಲವು 'ಸಾಲಂಕೃತ ಸಾಹಿತ್ಯ' ಎಂಬ ಹೆಸರಿನಲ್ಲಿ ಗ್ರಂಥರೂಪವಾಗಿ ಇತ್ತೀಚೆ ಪ್ರಕಟವಾಗಿವೆ. ಇವರು 'ಸೂರಜಹಾನ' ಎಂಬ ಒಂದು ಕಾದಂಬರಿಯನ್ನೂ ಬರೆದಿರುವರು. ವಿಜಯನಗರದ ಇತಿಹಾಸ ಮತ್ತು ಕನ್ನಡ ನಾಡಿನ ಇತಿಹಾಸವನ್ನು ಕುರಿತು ಹಲವಾರು ಟೀಕೆಗಳನ್ನೂ ಬರೆದಿದ್ದಾರೆ.

ಶ್ರೇಷ್ಠ ಸಾಹಿತ್ಯಜ್ಞ, ಉದ್ದಾಮ ಪಂಡಿತ, ಸಜ್ಜನ ಮನುಷ್ಯರೆಂದೆನಿಸಿದ ಕೇಶವಶರ್ಮರು ಧಾರವಾಡದಲ್ಲಿ ೧೯೬೭ ನೆಯ ಜೂನ ೧೪ ರಂದು ತಮ್ಮ ಇಹಲೋಕ ಯಾತ್ರೆಯನ್ನು ಮುಗಿಸಿದರು.

—

69)

ಪದ್ಮನಾಭ ಮಹಾರಾಜ

(ಸಂ. ೧೮೯೧)

ಇವರ ಬಗೆಗೆ ಕರ್ಣಾಟಕ ಕವಿಚರಿತೆಯಲ್ಲಿ ಹೀಗೆ ಹೇಳಿದೆ : "ಈತನು ನಿಗಮಸಾರಾಮೃತ, ದಾಸಬೋಧೆ ಇವುಗಳನ್ನು ಬರೆದಿದ್ದಾನೆ. ಇವನು ತಾಳಿಕೋಟೆ ರಾಜನಾಗಿದ್ದು ಸನ್ಯಾಸಿಯಾದಂತೆ ತಿಳಿಯುತ್ತದೆ. ಇವನನ್ನು 'ಶ್ರೀಮದದ್ವೈತ ಸಚ್ಚಿದಾನಂದೇಂದ್ರ ಆತ್ಮಾಶ್ರಮಿ' ಎಂದು ವಿಶೇಷಿಸಿ ಹೇಳಿದೆ........ ಇವನ ಗ್ರಂಥಗಳು ಗದ್ಯರೂಪವಾಗಿ ಗುರುಶಿಷ್ಯಸಂವಾದರೂಪವಾಗಿಯೂ ಅದ್ವೈತ ವೇದಾಂತಬೋಧಕವಾಗಿಯೂ ಇವೆ." (ಪು.೨೧೩). 'ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ'ದ ಲೇಖಕರೂ ಇದೇ ಅಭಿಪ್ರಾಯವನ್ನೇ ವ್ಯಕ್ತಪಡಿಸಿ, ಇವರ ಮರಣಕಾಲ ಸುಮಾರು ೧೮೯೫ ಎಂದು ಸೂಚಿಸಿದ್ದಾರೆ.

ಇವರು ತಾಳಿಕೋಟೆಯ ರಾಜರಾಗಿದ್ದು ಸನ್ಯಾಸಿಯಾದಂತೆ ತಿಳಿಯುತ್ತದೆ ಎಂದು ಕವಿಚರಿತೆಕಾರರು ಹೇಳಲು ಇವರ ಹೆಸರಿನಲ್ಲಿ ಕಂಡುಬರುವ 'ಮಹಾರಾಜ' ಎಂಬುದೇ ಕಾರಣವೆಂದು ತೋರುತ್ತದೆ. ಆದರೆ, ಈ ಪದವನ್ನು ಮಹಾರಾಷ್ಟ್ರದಲ್ಲಿ ಸಾಧು-ಸಂತರ ಬಗೆಗೂ ಉಪಯೋಗಿಸುವುದುಂಟು.

ಪದ್ಮನಾಭತೀರ್ಥರು ಮೂಲತಃ ಮಹಾರಾಷ್ಟ್ರದವರು. ಅವರ ಪೂರ್ವಾಶ್ರಮದ ಹೆಸರು ಸಖಾರಾಮ ನಾರಾಯಣರಾವ ಪ್ರಭು. ಇವರ ಮೂಲ ಊರು ರತ್ನಾಗಿರಿ ಜಿಲ್ಲೆಯ ಕುಡಾಳ ಪೇಟೆಯ ಪಾಟ ಎಂಬುದು. ಇವರ ತಂದೆಯ ಹೆಸರು ನಾರಾಯಣ ಗೋವಿಂದ ಪ್ರಭು. ತಾಯಿಯ ಹೆಸರು ಸಾವಿತ್ರಿಬಾಯಿ. ಇವರು ಭಾರದ್ವಾಜ ಗೋತ್ರದ ಆಯ್ಯಗೌಡ ಬ್ರಾಹ್ಮಣರು. ಇವರಿಗೆ ಗುಡಾಳೆ ಬ್ರಾಹ್ಮಣ ಇಲ್ಲವೆ ಗುಡಾಳ ದೇಸ್ಕರ ಎಂದೂ ಕರೆಯುತ್ತಾರೆ. ಬಡತನದ ಮೂಲಕ ಮನೆತನ ಆರನಾಳ ಎಂಬ ಗ್ರಾಮಕ್ಕೆ ಹೋಯಿತು. ಇವರು ಪಾಟದಿಂದ ಬಂದುದರಿಂದ, ಇವರಿಗೆ ಅಲ್ಲಿ ಪಾಟಕರ ಎಂದು ಕರೆಯಲಾಯಿತು. ಸಖಾರಾಮ ಕೆಲಕಾಲ ಮುಂಬಯಿ ಭಾಗವಾದ ಕುರ್ಲಾದ ಟಾಟಾ ಗಿರಣಿಯಲ್ಲಿ ಕಾರಕೂನ ಎಂದು ಕೆಲಸ ಮಾಡಿ, ಅಲ್ಲಿಯ ಜೀವನಕ್ಕೆ ಬೇಸತ್ತು ತನ್ನ ಮಿತ್ರನೊಬ್ಬನ ಕೂಡ ಕೂಡಿಕೊಂಡು ತೀರ್ಥಯಾತ್ರೆ ಪ್ರಾರಂಭಿಸಿದರು. ಅವರು ಮೊದಲಿಗೆ ಅಕ್ಕಲಕೋಟೆಗೆ ಬಂದು, ಅಲ್ಲಿ ಘೋರವಾದ ತಪಸ್ಸನ್ನು ಆಚರಿಸಿದರು. ನಂತರ ವಾಡಿ, ಗಾಣಗಾಪುರ ಮೊದಲಾದ ಕ್ಷೇತ್ರಗಳನ್ನು ಸಂದರ್ಶಿಸಿ, ನರಸೋಬವಾಡಿಯಲ್ಲಿದ್ದಾಗ, ಯುವಕ ಸಖಾರಾಮರು ಪದ್ಮನಾಭತೀರ್ಥ ಎಂಬ ಹೆಸರಿನಲ್ಲಿ ಸನ್ಯಾಸದೀಕ್ಷೆಯನ್ನು ಪಡೆದುಕೊಂಡರು. ತಮ್ಮ ಸನ್ಯಾಸಾಶ್ರಮದ ಹೆಸರಾದ ಪದ್ಮನಾಭ ಎಂಬುದರ ಬಗೆಗೆ ಹೀಗೆ ಹೇಳಿಕೊಂಡಿದ್ದಾರೆ :

ಶಿವ ಬೋಲಿಜೇ ಮಂಗಲಾ– ವಿಷ್ಣು ಮ್ಹಣಿಜೇ ವ್ಯಾಪಕಾ
ಬ್ರಹ್ಮಾ ಮ್ಹಣಿಜೇ ದೋಘಾ ಪೂರ್ಣ– ಪದ್ಮನಾಭ ನಾಮೇ ತೀನ ೧

ತದನಂತರ, ಕಾರವಾರ ಸಂಗಮ ಮೊದಲಾದ ಸ್ಥಳಗಳಲ್ಲಿ ಪರ್ಯಟನ ಮಾಡಿದರು.

ಕೂರ್ಪಾಲೇ ಸಂಗಮೇಶ್ಚೈವ ಛಾಯಾಯಾಂ ಶ್ರೀಗಿರೌ ತಥಾ
ಸರ್ವತ್ರ ಸುಲಭಾ ಕೃಷ್ಣಾ ಚತುಃಸ್ಥಾನೇಷು ದುರ್ಲಭಾ– ಎಂದು ಇರುವುದರಿಂದ ಸಮೀಪದ ತಾಳಿಕೋಟೆಯಲ್ಲಿಯೇ ವಾಸವಾದರು. ಅಲ್ಲಿಯ ಜನವೂ ಇವರನ್ನು ಆದರದಿಂದ ಬರಮಾಡಿಕೊಂಡಿತು. ಆಗ ಪದ್ಮನಾಭರಿಗೆ ಕನ್ನಡ ಮಾತಾಡಲೂ ಕೂಡ ಬರುತ್ತಿರಲಿಲ್ಲ. ನೂಲ್ವಿಗೆ ಬಂದಾಗಲೂ ಅವರಿಗೆ ಅಷ್ಟಾಗಿ ಕನ್ನಡ ಬರುತ್ತಿರಲಿಲ್ಲ. "ನೂಲ್ವಿಗೆ ಬಂದ ಹೊಸತಿನಲ್ಲಿ ಕಾಗೆ ಹೋದನು, ಆಕಳು ಬಂದಳು, ಎತ್ತು ಮಲಗಿದ್ದಾನೆ, ಝುಕಾಯಿಸುತ್ತಾನೆ" ಎಂದು ಮೊದಲಾಗಿ ಹೇಳುತ್ತಿದ್ದರು.[೨] ತಾಳಿಕೋಟೆಯಲ್ಲಿದ್ದಾಗ ಅವರಿಗೆ ಕನ್ನಡ ಕಲಿಸಿದವರು ಸ್ವಾಮಿರಾವ ಗುಡಿ ಎಂಬ ಶಿಕ್ಷಕರು. ತಾಳಿಕೋಟೆಯಲ್ಲಿದ್ದಾಗ ಸ್ವಾಮಿಗಳು ಚೌಕಿಮಠ ಎಂಬ ಊರ ಹೊರಗಿನ ಮಠದಲ್ಲಿರುತ್ತಿದ್ದರು. ನಂತರ ನೂಲ್ವಿ, ಕುಂದಗೋಳ, ಕಾರವಾರ, ಬಾಡ– ಮೊದಲಾದ ಕಡೆಗೆ ಹೋಗಿ, ಬಾಡದಲ್ಲಿ ತಮ್ಮದೇ ಆದ ಒಂದು ಮಠವನ್ನು ಸ್ಥಾಪಿಸಿದ್ದರೂ ಅವರಿಗೆ ತಾಳಿಕೋಟೆಯ ಬಗೆಗೆ ಅಪಾರವಾದ ಅಭಿಮಾನವಿತ್ತು. ತಾಳಿಕೋಟೆಯ ಬಗೆಗೆ

ತಾಳೀಕೋಟೇ ಪುಣ್ಯಕ್ಷೇತ್ರಿ– ಸ್ಮಶಾನ ಮಾಯಿಂ ದೋಣೀತೀರೀ
ಮಠೇಕಾಂತ ಸ್ಥಾನಿಪವಿತ್ರೀ– ನಿತ್ಯಪಢತೀಲ ಗ್ರಂಥ ಹಾ

–ಎಂದು ಹೇಳಿದ್ದಾರೆ. ತಾಳಿಕೋಟೆಯ ಖಾಸಗತ ಸ್ವಾಮಿಗಳೂ ಪದ್ಮನಾಭರೂ ಸಮಕಾಲೀನರು. ಹುಕ್ಕೇರಿಯ ಸದಾಶಿವ ಕವಿಗಳು ಬರೆದ ಶ್ರೀ ಖಾಸಗತ ಸ್ವಾಮಿಗಳ ಪುರಾಣದ ೧೧ನೆಯ ಸಂಧಿಯಲ್ಲಿ ಪದ್ಮನಾಭರ ಬಗೆಗೆ ೧೫ ಪದ್ಯಗಳು ಬಂದಿವೆ. ಪದ್ಮನಾಭರನ್ನು ತಾಳಿಕೋಟೆಯ ಜನ ಹೇಗೆ ಸ್ವಾಗತಿಸಿದರೆಂಬುದರ ವರ್ಣನೆ ಈ ಕೆಳಗಿನಂತೆ ಅಲ್ಲಿ ಬರುತ್ತಿದೆ :

ಆಗಮಿಸಿದಾ ಪದ್ಮನಾಭರವಲೋಕನ
ಕ್ಕಾಗಿ ಖಾಸ್ಗತರಾಗಳಖಿಳ ಭಕ್ತರುವೆರಸಿ
ರಾಗದಿಂದೈತಂದು ಸಂದರ್ಶನವಕೊಂಡು ಸ್ವಾಗತಪ್ರಶ್ನವನ್ನು
ಶ್ರೀಗುರುವು ಮಾಡಿಯುಪಚರಿಸಿ ಮತ್ತೈತರಲು
ಯೋಗೀಮಣಿಯುತ ಪದ್ಮನಾಭನಲ್ಲಿಯೆ ಸಾನು
ರಾಗದಿಂ ವೇದಾಂತಚರ್ಚೆಯಂ ಮಾಡುತ್ತುಂ ಬಹುಕಾಲಗಳೆದನವನು

ಆಪದ್ಮನಾಭರೀ ತಾಳಿಕೋಟೆಯೊಳು ಭವ
ತಾಪವನು ಕಳೆದು ನಿರ್ಲೇಪತೆಯನೊದಗಿಸುವ
ಶ್ರೀಪದಂಜ್ಯೋತಿಸ್ವರೂಪದ ದರ್ಶನ ಮಾ ಪುಣ್ಯಪುರುಷರಿಗಾದ್ದುತೆ
ತಾಪಸೋತ್ತಮನೆಂಬ ಜಸವಡೆದು ಕನ್ನಡವ
ನಾಪನಿತು ಬಿಡದಂತೆ ನುಡಿಗಲಿತು ಸರ್ವರಾ
ಆವನೊಳು ಪಗಲಿರುಳು ಸ್ತುತಿರೂಪದಿಂದಿರ್ದ ಮೆರೆದರಾಸಾಧುವರರು

೧ ಪದ್ಯ ನೇವಾಂ– ಶ್ರೀ ಪದ್ಮನಾಭತೀರ್ಥರ ಚರಿತ್ರೆ – ಯೋಗೀಶ್ವರ ದತ್ತಮೂರ್ತಿ ದೀಕ್ಷಿತ : ೧೯೬೦.
೨ ಅದೇ : ತಿಳುವಳಿಕೆ : ಪು ೧.

ಒಂದೆ ಬಸವೇಶ್ವರನು ಶಿವಶರಣರೆಲ್ಲರಿಗೆ
ಮಂದಪಿಷವನು ತಂದು ನೀಡುತಿರಲಮೃತವಾ
ಯ್ತೆಂದು ಕಿವಿಯೊಳು ಕೇಳಬಲ್ಲೆವಲ್ಲದೆ ಮೋಹ ಕಣ್ಣಾರೆ ಕಂಡಿಲ್ಲವು
ಇಂದು ತಿಂದಿಹ ಸುಣ್ಣವೀ ಸಾಧುವರ್ಯಂಗೆ
ಸುಂದರದ ಬೆಣ್ಣೆಯಂತಾದುದೆಲ್ಲವನು ಕ
ಣ್ಣಿಂದೆ ಕಂಡೆವು ಮಹಾಮಹಿಮರಿವರೆಂದಿವನ್ನು ಪೇಳಲರಿದೆಂದರು

ಸ್ವಾಮಿಗಳು ಬರೆದ ಸುಮಾರು ೩೪ ಗ್ರಂಥಗಳಲ್ಲಿ ೪ ಕನ್ನಡ, ಉಳಿದುವೆಲ್ಲ ಮರಾಠಿ ಇಲ್ಲವೆ ಸಂಸ್ಕೃತ. ಕನ್ನಡ ಪುಸ್ತಕಗಳಲ್ಲಿ 'ನಿಗಮಸಾರಾಮೃತ' (೧೮೯೫) ಮತ್ತು 'ದಾಸಬೋಧ'ಗಳು (೧೮೯೫) ಸ್ವಾಮಿಗಳು ಧಾರವಾಡ ಜಿಲ್ಲಾ ನೂಲ್ವಿಯಲ್ಲಿ ಶಿಲಾಪ್ರೆಸ್ಸನ್ನು ಇಟ್ಟಾಗ ಶಿಲಾಯಂತ್ರದಲ್ಲಿ ಮುದ್ರಿತವಾದವು. ಇವನ್ನು ಮಮದಾಪುರ ಮೇಸ್ತ್ರಿ ಎಂಬವರು ಶಿಲಾಯಂತ್ರಕ್ಕಾಗಿ ಬರೆದಿದ್ದಾರೆ. 'ದಾಸಬೋಧ'ವನ್ನು ವಾಸುದೇವ ಘಾರೆ ಎಂಬವರು ಮರಾಠಿ ಭಾಷೆಗೆ ಅನುವಾದ ಮಾಡಿದರು. ನಂತರದ 'ಶ್ರೀರಾಮಹೃದಯ' ಅಚ್ಚುಕೂಟದಲ್ಲಿ ಮುದ್ರಿತವಾಯಿತು. ಅವರ ಕೊನೆಯ ಕನ್ನಡ ಪುಸ್ತಕ 'ಈಶ ದೀಪಿಕೆ' ಎಂಬುದು. 'ನಿಗಮಸಾರಾಮೃತ' ಗುರುಶಿಷ್ಯರ ಸಂವಾದ ರೂಪದಲ್ಲಿದೆ. ಉದಾಹರಣೆಗೆ ಈ ಗ್ರಂಥ ಹೀಗೆ ಪ್ರಾರಂಭವಾಗುತ್ತದೆ : "ವಿವೇಕೀ ಜನರು ಅನುಬಂಧಚತುಷ್ಟಯವನ್ನು ತಿಳಿಯದೆ ಗ್ರಂಥದಲ್ಲಿ ಪ್ರವೃತ್ತರಾಗುವದಿಲ್ಲಾದ ಕಾರಣ ಪ್ರಥಮದಲ್ಲಿ ನಾಲ್ಕನುಬಂಧಗಳಂ ವಿಸ್ತೃತಮಾಗಿ ವರ್ಣಿಸುವೆನು. ಅವು ನಾಲ್ಕನುಬಂಧಗಳು ಯಾವವೆಂದರೆ : ವಿಷಯ, ಸಂಬಂಧ, ಅಧಿಕಾರ ಮತ್ತು ಪ್ರಯೋಜನಗಳೆಂಬ ನಾಲ್ಕು" ಇತ್ಯಾದಿ.

ಸ್ವಾಮಿಗಳ ಶಿಷ್ಯರ ಕಥನದ ಮೇರೆಗೆ ಅವರು ಇಸ್ವಿ ಸನ್ ೧೯೦೦ ರಲ್ಲಿ ದೇಹವಿಟ್ಟಂತೆ ಕಾಣುತ್ತದೆ. ಅವರ ಜೀವಿತಕಾಲ ೭೨ ವರುಷ ಎಂಬ ಹೇಳಿಕೆಯ ಮೇರೆಗೆ ಅವರ ಜನನ ಇಸ್ವಿ ಸನ್ ೧೮೨೮ ರ ಸುಮಾರಿಗೆ ಆಗುತ್ತದೆ.

—

ಭೀಮಾಜಿ ಜೀವಾಜಿ ಹುಲಕವಿ

(೧೮೯೫ - ೧೯೫೯)

ಶ್ರೀಯುತರು ಬೆಳಗಾವಿ ಜಿಲ್ಲೆಯ ದೇವರಶೀಗೇಹಳ್ಳಿಯವರು. ೯-೧೨-೧೮೯೫ ರಲ್ಲಿ ಇವರು ಜನಿಸಿದರು. ಇವರೂ ಧಾರವಾಡದ ಟ್ರೇನಿಂಗ್ ಕಾಲೇಜದಲ್ಲಿಯೇ ವ್ಯಾಸಂಗ ಮಾಡಿ, ತದನಂತರ ಮೈಸೂರಿನ ಪಂಡಿತ ಪರೀಕ್ಷೆಯನ್ನು ಪಾಸಾದರು. ಧಾರವಾಡ, ಬೆಳಗಾವಿಗಳ ಹಾಯ್ ಸ್ಕೂಲುಗಳಲ್ಲಿ ಕೆಲಸ ಮಾಡಿದರು. ಸ್ವತಂತ್ರರಾಗಿ ಓದಿಕೊಂಡು ಬಿ. ಎ. ಪರೀಕ್ಷೆಯನ್ನು ಪಾಸು ಮಾಡಿದರು. 'ಶಾರದೆಯ ಮುತ್ತಿನ ಸರ' ಎಂಬ ಗ್ರಂಥಮಾಲೆಯ ಸಂಚಾಲಕರಾಗಿದ್ದರು.

ಇವರ ಅನೇಕ ಗ್ರಂಥಗಳು 'ವಾಗ್ಭೂಷಣ'ದಲ್ಲಿ ಮೊದಲು ಧಾರಾವಾಹಿಯಾಗಿ ಪ್ರಕಟವಾದವು. ಇವರು ಬರೆದ ಗ್ರಂಥಗಳಲ್ಲಿ 'ಪದ್ಮಾವತಿ ಪ್ರೇಮಮಂದಿರ' (೧೯೧೯), 'ಶ್ರೇಯಃಸಾಧನ' (೧೯೨೦) 'ಪತಿತ ಪರಾವರ್ತನ' (೧೯೨೦) 'ಶುದ್ಧಿಸಂಘಟನೆ' 'ಹತಭಾಗಿನಿಯಾದ ವಿಮಲೆ' (೧೯೨೪) 'ಶ್ರೀ ವಿದ್ಯಾರಣ್ಯ ಸ್ವಾಮಿಗಳು' (೧೯೨೨) 'ಕರ್ನಾಟಕ ಸ್ವಪ್ನವಾಸವದತ್ತೆ' (೧೯೨೫) 'ಅತ್ತೆಯ ಮನೆಯ ಕಾಟ ಅಥವಾ ಸುಶೀಲಾ ವಸಂತರ ದುರ್ದೈವ' 'ದುಷ್ಕರ್ಮಪರಿಪಾಕ ಅಥವಾ ಉನ್ಮಾದಿನಿಯಾದ ಮೋಹಿನಿ' 'ದೇವನಂದಿನಿ' 'ನನ್ನ ಕನಸು', 'ನರಗುಂದ ಬಂಡಾಯ' (೧೯೩೦) 'ಯಶೋಮತಿ' 'ಶ್ರೀ ಕೃಷ್ಣನಾಮಾಮೃತ' 'ಶ್ರೀವಿಷ್ಣುನಾಮಸಹಸ್ರ ಮೀಮಾಂಸೆ'- (೧೯೨೮) ಮೊದಲಾದವುಗಳನ್ನು ಹೇಳಬಹುದು.

'ಪ್ರಭಾತ'ದಲ್ಲಿ ಶ್ರೀಯುತರು ಬರೆದ 'ಪ್ರೇಮ ವಿಷಯಕ ಉದ್ಗಾರಗಳು' ಎಂಬ ಕವಿತೆಯಿಂದ ಈ ಕೆಳಗಿನ ಕೆಲವು ಸಾಲುಗಳನ್ನು ಕೊಡಬಹುದು :

ಪ್ರೇಮದೆ ಜೀವವುಂ ಬಿಡದೆ ತಾಳ್ದುವುದಯ್ ಗಡ ಪ್ರೇಮರೂಪಮಂ
ಪ್ರೇಮಕೆ ಬಣ್ಣಮಿಲ್ಲಮದು ಗೋಚರಮಾಗದು ಕಣ್ಗೆಯಾದೊಡೀ
ಪ್ರೇಮದೆ ವಿಶ್ವಮೆಲ್ಲಮಿದು ಸಂತತಮಂ ರಮಮಾಣಮಪ್ಪುದಯ್
ಪ್ರೇಮಮಯಂ ನಿಜಂ ಸಕಲವಿಶ್ವಮಿದೆಳ್ಳನಿತಿಲ್ಲ ಸಂದೆಯಂ

ಭೀಮಾಜಿ ಹುಲಿಕವಿಯವರು ರಸಿಕರು. ಅವರು 'ರಸಿಕಾಷ್ಟಕ' ಎಂಬ ಕವನದಲ್ಲಿ ಹೀಗೆ ಹೇಳಿದ್ದಾರೆ :

ಎಸೆಗುಂ ಚಿನ್ನಗೊಂಚಂಗಳಂತೆ ಮೊಲೆಗಳ್ ತಾವಾಡುತಂ ವಕ್ಷದೊಳ್
ಪೊಸನೆಯ್ದಿಲ್ಗಳ ಪೋಲ್ವ ಕಣ್ಗಳತಿಗುಂ ಸಾರಂಗಯುಂಗ್ಮೋಪಮಂ
ಪೊಸದೀ ನಿನ್ನಯ ಯೌವನಂ ತಿಳಿಗಡಾ ವಿದ್ಯುತ್ತಿನಂತಸ್ಥಿರಂ
ರಸಿಕಂ ಸುಂದರನೆನ್ನ ನೋಡಿ ತನುವಂ ನೀನರ್ಪಿಸೀ ಕಾಲದೊಳ್

ಕುಸುಮಾಂಗೀ ಗಡ ಬಂದುದೀಗಳಿದು ಹೇಮಂತಂ ಸುನೀಲಾಲಕೀ
ನಿಶೆಯಂತಂತಿರೆ ವರ್ಧಿಕುಂ ರತಿಯುಮೀಗಳ್ ಪೆಂಡಿರೊಳ್ ಗಂಡರೊಳ್
ನಿಸದಂ ತ್ವತ್ಕುಚಯುಗ್ಮಮಂ ಬಹುಲಪುಣ್ಯಂಗಳ್ ಗಡಾ ಸೇರ್ಗುಮಿಂ
ರಸಿಕಂ ಸುಂದರನೆನ್ನ ನೋಡಿ ತನುವಂ ನೀನರ್ಪಿಸೀ ಕಾಲದೊಳ್

ಅರಸಿಕನೋ ರಸಿಕನೊ ಆ
ನರಿಯೆಂ ಮುಗ್ಧಂ ವಿರಚಿಸಿದೆಂ ರಸಿಕರ್ಕಳ್
ಹರುಷದೆ ಕೊಳ್ಗೆಯಿಂದಂ ಮೇಣ್
ಕರುಣದೆ ಬಲಭೀಮನೀಗೆ ರಸಿಕತೆಯಂ ತಾಂ ೧

—

೧ ಪ್ರಭಾತ : ಅಕ್ಟೋಬರ ೧೯೧೯.

ಗೋ. ನ. ಸವಣೂರ್

(ಸು. ೧೯೦೪)

ಇವರ ಬಗೆಗೆ ಚಾರಿತ್ರಿಕ ವಿವರಗಳು ಗೊತ್ತಾಗಲಿಲ್ಲ. ಇವರು ಬರೆದ 'ಹೇಮಲತೆ ಪ್ರಭಾಕರ' ಎನ್ನುವ ಸಾಮಾಜಿಕ ಕಾದಂಬರಿ ಸನ್ ೧೯೦೪ ರಲ್ಲಿ ಬೆಂಗಳೂರಿನ ಟ್ರ್ಯಾಕ್ಟ್ ಅ್ಯಂಡ ಬುಕ್ ಸೊಸಾಯಿಟಿಯ ಪರವಾಗಿ ಮೈಸೂರಿನ ವೆಸ್ಲಿಯನ್ ಮಿಶನ್ ಮುದ್ರಣಾಲಯದಲ್ಲಿ ಮುದ್ರಿತವಾಗಿದೆ. ಇದರ ಪುಟ ಸಂಖ್ಯೆ ೭೬.

ಲೇಖಕರ ಹೆಸರು ಗೋ. ನ. ಸವಣೂರ್ ಎಂದು ಉತ್ತರ ಕರ್ನಾಟಕದ ಹೆಸರಿನ ಹಾಗೆ ಕಂಡು ಬಂದರೂ ಗ್ರಂಥದ ಶೈಲಿ, ಹಳೆಯ ಮೈಸೂರಿನ ಬರವಣಿಗೆಯ ಹಾಗಿದೆ. "ನೀನೇಕೆ ಮರುಳಾದೆಯೋ? ಫರಂಗಿಯವರನ್ನು ಮನೆಯಲ್ಲಿ ಬರಲೀಸುತ್ತುದೇ?" "ಏಕೆ ಬರಲೀಸಬಾರದು?" (ಪು. ೧೦): "ಇನ್ನು ಮೇಲೆ ನಾನು ಬ್ರಾಹ್ಮಣಾರ್ಥಕ್ಕೆ ಹೋದರೆ ನನಗೆ ಪೊರಕೆ ಪೆಟ್ಟು ಬೀಳುವುದು" (ಪು. ೨೦) "ಇನ್ನೊಂದು ಕಡೆಯ ಕಿಟಕಿಯಲ್ಲಿ ತೊಂಗಿ ನೋಡಿದನು." (ಪು. ೨೫)— ಈ ಮೊದಲಾದ ಪ್ರಯೋಗಗಳು ಈ ಅಭಿಪ್ರಾಯವನ್ನು ದೃಢೀಕರಿಸುತ್ತವೆ. ಲೇಖಕರಿಗೆ ಬ್ರಾಹ್ಮಣ ಸಂಪ್ರದಾಯದ ಅದರಲ್ಲಿಯೂ ವಿಶೇಷವಾಗಿ ವೈಷ್ಣವ ಸಮಾಜದ ಪರಿಚಯ ಗಾಢವಾಗಿ ಇದ್ದಂತೆ ಕಾಣುತ್ತದೆ. ಇಲ್ಲಿ ಬರುವ ಪಾತ್ರಗಳು – ಹೇಮಲತೆ, ಪ್ರಭಾಕರ, ಯಮುನಾಬಾಯಿ, ತುಂಗಾಬಾಯಿ, ಗಂಗಾಬಾಯಿ, ರಮಾಬಾಯಿ, ಜನಾರ್ದನಾಚಾರಿ, ಮಧ್ವೇಶಾಚಾರಿ,— ಇತ್ಯಾದಿ. ಇಲ್ಲಿ ಬರುವ ಹಬ್ಬ ಹರಿದಿನಗಳೆಂದರೆ— ಕೃಷ್ಣಾಷ್ಟಮಿ, ಏಕಾದಶಿ, ಋಷಿಪಂಚಮಿ, ವಿಷ್ಣುಪಂಚಕ— ಇತ್ಯಾದಿ. ಪ್ರಭಾಕರ ಮದ್ರಾಸಿನ ಪಾದ್ರಿಗಳನ್ನು ಕೇಳುವುದು— "ನೀವಾವ ಬಗೆಯವರು ಸ್ವಾಮೀ?", "ನಾವು ವೈಷ್ಣವರು, ಮುದ್ರೆ ಹಾಕುತ್ತಾರಲ್ಲಾ ಅಂತಹರು" (ಪು. ೩೦) "ಹರಿವಾಯುಗಳಲ್ಲಿ ಭಕ್ತಿಯುಳ್ಳವರು", "ಮುಖ್ಯ ಪ್ರಾಣದೇವರಿಗೆ— ಪೂಜೆ ಮಾಡುತ್ತಾರೆ". (ಪು. ೭)

ಆದರೆ, ಇದರ ಜತೆಗೇ ಹಲಕೆಲವು ಪ್ರಯೋಗಗಳು ಕೇವಲ ಕ್ರಿಶ್ಚಿಯನ್ ಸಮಾಜದವರು ಮಾತ್ರ ಉಪಯೋಗ ಮಾಡುವಂಥವಿವೆ. "ಆದಿಯಲ್ಲಿ ದೇವರು ಆದಮನನ್ನೂ ಹವ್ವಳನ್ನೂ ಸೃಷ್ಟಿಸಿದನು." (ಪು. ೪೫) ಹವ್ವಳು ವಿಶಿಷ್ಟ ಪ್ರಯೋಗ. "ಈಗತಾನೆ ದೀವಿಗೆಗಳನ್ನು ಹಚ್ಚಿಸಿದರು" —ಹಚ್ಚಿದರು ಎಂಬರ್ಥದಲ್ಲಿ. "ನಾಳೆಯ ಸಾಯಂಕಾಲ ಅವರು ಕ್ರಿಸ್ತವೇದದಲ್ಲಿನ ಹಲವು ವಾಕ್ಯಗಳನ್ನು ಕುರಿತು ಪ್ರಸಂಗಿಸುತ್ತಾರೆಂದು ಇದೆ." ಇವೆಲ್ಲ ಕ್ರಿಶ್ಚಿಯನ್ ಶೈಲಿ.

ಹೇಮಲತೆ ಪ್ರಭಾಕರ (೧೯೦೪) :

ಇಲ್ಲಿಯ ಕಥೆ ನಡೆಯುವುದು ಮೈಸೂರಿನ ಸುತ್ತಮುತ್ತ. ಕಾದಂಬರಿಯ ನಾಯಕ ಬಿ. ಎ. ಡಿಗ್ರಿ ಪಾಸು ಮಾಡುವುದು ಮದ್ರಾಸ್ ವಿಶ್ವವಿದ್ಯಾಲಯದಿಂದ. ಅವನು 'ಲಾ' ಓದುವದು ಮದ್ರಾಸ ಕಾಲೇಜಿನಲ್ಲಿ. ಅವನು ಮತ್ತು ಹೇಮಲತೆಯು ಮದುವೆಯಾದಾಗ, "ರಾಜಮಹೇಂದ್ರದ ಪ್ರಾಂತದಿಂದ ಪೌರೋಹಿತರೂ ಬ್ರಾಹ್ಮಣರೂ ಬಂದು ಲಗ್ನ ಕಾಲದಲ್ಲಿ" ಸಹಾಯಕರಾಗುತ್ತಾರೆ. ಪ್ರಭಾಕರ ತನ್ನ ವಕೀಲಿ ಪ್ರಾರಂಭ ಮಾಡುವುದು ಮದ್ರಾಸಿನಲ್ಲಿಯೇ.

ಇದನ್ನೆಲ್ಲ ನೋಡಲಾಗಿ, ಲೇಖಕರು ಪ್ರಾಯಶಃ ಉತ್ತರ ಕರ್ನಾಟಕದ ಬ್ರಾಹ್ಮಣ ಸಮಾಜಕ್ಕೆ ಸೇರಿದ್ದು, ತಮ್ಮ ಕಾಲದಲ್ಲಿಯೋ ಅಥವಾ ತಮ್ಮ ತಂದೆ ತಾತಂದಿರ ಕಾಲದಲ್ಲಿಯೋ ಕ್ರೈಸ್ತ ಮತವನ್ನವಲಂಬಿಸಿ ಹಳೆಯ ಮೈಸೂರು ಪ್ರಾಂತದಲ್ಲಿ ನೆಲೆಸಿರಬಹುದೆಂದು ಊಹಿಸಬಹುದಾಗಿದೆ.

ಕಾದಂಬರಿ ಚಿಕ್ಕದಾದರೂ, ತುಂಬಾ ಮನೋರಂಜಕವಾಗಿದೆ. ಅಂದಿನ ಕಾಲದ ಸಾಮಾಜಿಕ ವೈಚಾರಿಕ ಕ್ರಾಂತಿಯ ಒಳಚಿತ್ರವನ್ನು ಕೊಡುವಂತಹದಾಗಿದೆ. ಬ್ರಾಹ್ಮಣವರ್ಗಕ್ಕೆ ಸೇರಿದ ಪಂಡಿತಾ ರಮಾಬಾಯಿ ಕ್ರೈಸ್ತ ಮತವನ್ನಂಗೀಕರಿಸಿ, ಸಾಮಾಜಿಕ ಕೋಲಾಹಲವನ್ನುಂಟುಮಾಡಿದ ಕಾಲವದು. ಈ ವಿಷಯದ ಚರ್ಚೆ ಅಂದಿನ ಅನೇಕ ಕಾದಂಬರಿಗಳಲ್ಲಿ ಉಲ್ಲೇಖ ಹೊಂದಿದೆ. ದಿವಂಗತ ಕೆರೂರ ವಾಸುದೇವಾಚಾರ್ಯರು ತಮ್ಮ 'ಇಂದಿರೆ' ಕಾದಂಬರಿಯಲ್ಲಿ ಇದರ ಬಗೆಗೆ ವಿವರವಾದ ಚರ್ಚೆಯನ್ನು ಕೊಟ್ಟಿದ್ದಾರೆ. ಇಪ್ಪತ್ತನೆಯ ಶತಮಾನದ ಆದಿಕಾಲದ ಸಾಮಾಜಿಕ ವಿಪ್ಲವದ ಸುಂದರವಾದ ಚಿತ್ರ ಈ ಕಾದಂಬರಿಯಲ್ಲಿ ಮೂಡಿ ಬಂದಿದೆ.

ಕಾದಂಬರಿಯಲ್ಲಿ ಹಿಂದೂಧರ್ಮದಲ್ಲಿಯ ಜಾತಿಭೇದದ ಅಹಂಕಾರ, ಅಜ್ಞಾನ, ವಿಗ್ರಹಾರಾಧನೆಯ ಖಂಡನೆ, ಕ್ರೈಸ್ತಮತದಲ್ಲಿಯ ದಯಾಪರತೆ, ಸ್ತ್ರೀ ಶಿಕ್ಷಣದ ಅವಶ್ಯಕತೆ, ಮೊದಲಾದವುಗಳ ವರ್ಣನೆ ಇದೆ.

ಜನಾರ್ದನಾಚಾರಿ ಮತ್ತು ಕಾಶೀಬಾಯಿಯ ಮಗಳಾದ ಹೇಮಲತೆಯ ಮದುವೆ ಅವಳು ಐದು ವರ್ಷದ ಚಿಕ್ಕ ಮಗುವಾಗಿರುವಾಗಲೇ ಆಗಿ ಹೋಗಿರುತ್ತದೆ. ಮರುವರ್ಷವೇ ಅವಳ ಗಂಡನೂ ನಿಧನ ಹೊಂದುತ್ತಾನೆ. ಗೆಳತಿಗಳ ಕೂಡ ಆಟವಾಡಬೇಕಾಗಿದ್ದ, ಈ ಪುಟ್ಟ ಕನ್ನೆಗೆ ತನಗೆ ಮದುವೆ ಆಗಿತ್ತೆಂಬ ಕಲ್ಪನೆ ಕೂಡ ಇರುವದಿಲ್ಲ. ಆಧುನಿಕ ಕವಿಯೊಬ್ಬರು ಹೇಳಿದಂತೆ "ಮದುವೆಯಾಗಿತ್ತಂತೆ, ವಿಧವೆಯಾಗಿಹೆನಂತೆ, ಸದಮಲರೆ, ನಾನರಿತೆ ಯಾರತಪ್ಪು ? ಬದಿಗಾಗಿ ದೂರುವುದು ಯಾರಿಗೊಪ್ಪು ?" "ಸುಡು ಸುಡಲಿ, ಸುಡು ಜೀವ, ಸುಡುಗಾಡ ಸೇರಲೋ" ಎನ್ನುವಂತೆ ಅವಳ ಪರಿಸ್ಥಿತಿಯಾಗಿದೆ. ಅವಳ ಜೀವನದಲ್ಲಿ ಕ್ರೈಸ್ತ ಮಿಶನ್‌ಗೆ ಸೇರಿದ ಗುಡವಿಲ್ ಮಿಸಿ ಎಂಬ ದೊರೆಸಾನಿ ಬಾಳಬೆಳಕಾಗಿ ಬಂದು, ಅವಳಿಗೆ ಆಧುನಿಕ ವಿದ್ಯೆ ಹೇಳಿಕೊಟ್ಟು" ಕೊರಡಾಗಿ ಹೋಗಿದ್ದ ಅವಳ ಜೀವನ ಚಿಗಿಯುವಂತೆ" ಮಾಡುತ್ತಾಳೆ. ಹೇಮಲತೆ ಇರುವ ಬೀದಿಯಲ್ಲಿಯೇ ಇರುತ್ತಿದ್ದ ಬುದ್ಧಿವಂತ ವಿದ್ಯಾರ್ಥಿ, ಆದರ್ಶ ತರುಣ ಮಾಧವರಾಯ ಮತ್ತು ಯಮುನಾಬಾಯಿಯವರ ಪುತ್ರನಾದ ಪ್ರಭಾಕರ ಎಂಬವನು ಹಿಂದೂ ಸಮಾಜದಲ್ಲಿಯ ಅವಿವೇಕವನ್ನೆಲ್ಲ ಅರಿತವನಾಗಿ, ಪತಿದ್ರಷ್ಟಳಾದ ಹೇಮಲತೆಯನ್ನು ಮದುವೆಯಾಗಲು ಸಿದ್ಧನಾಗಿ ಬರುತ್ತಾನೆ. ಹೇಮಲತೆ–ಪ್ರಭಾಕರರು ಅನ್ಯೋನ್ಯ ಪ್ರೀತಿಯುಳ್ಳವರಾಗಿ ಮದ್ರಾಸಿನಲ್ಲಿ ಸುಂದರವಾದ ಮನೆಯನ್ನು ಪಡೆದು, ಸುಖದ ಜೀವನ ಸಾಗಿಸುತ್ತಾರೆ. ದಿವಂಗತ ಬಿ.ಎಂ. ಶ್ರೀಯವರು ಹೇಳಿದ ಹಾಗೆ, "ಎಲ್ಲಡಗಿತೋ ಆರ್ಯಧರ್ಮದ ಕರುಣ ?

ಆರ್ಯಧರ್ಮದ ತೇಜ ? ಉರಿಯುವನೆ ಬಲ್ಲ.... ದೇವ ಮಾಡುವದಿರಲಿ ನಾವು ಮಾಡುವುದದುವೆ ನರಕಹಿಂಸೆ" ಎಂಬ ಭಾವ ಕಾದಂಬರಿಯಲ್ಲಿ ಸರ್ವತ್ರ ಕಂಡುಬರುತ್ತದೆ.

ಶ್ರೀ ಸವಣೂರ್ ಅವರ ಕಥನಶೈಲಿ ಸಲೀಲವಾಗಿದೆ. ಹೇಮಲತೆ, ಪ್ರಭಾಕರ ಮತ್ತು ಜನಾರ್ದನಾಚಾರಿಯಂಥ ಪಾತ್ರಗಳು ಜೀವಕಳೆಯಿಂದ ತುಂಬಿಕೊಂಡಿವೆ. ಕ್ರೈಸ್ತಮತದ ಅವಾಸ್ತವ ಪ್ರಚಾರ ಹೆಚ್ಚಾಗಿ ಈ ಕಾದಂಬರಿಯಲ್ಲಿ ಬಂದಿರದಿದ್ದರೆ, ಇದು ನಿಜವಾಗಿಯೂ ಇದಕ್ಕೂ ಹೆಚ್ಚಿನ ಕಲಾಕೃತಿಯಾಗುತ್ತಿದ್ದಿತು. ಹೇಮಲತೆ ಚೆಲುವೆ, ಪಂಡಿತೆ, ಆದರ್ಶಪ್ರಜ್ಞೆಯುಳ್ಳವಳು, ಎಂದಿಗೂ ಮಿತಿಯನ್ನು ಮೀರಿ ನಡೆದವಳಲ್ಲ. ಕಮರುತ್ತಿರುವ ಅವಳ ಜೀವನಲತೆಗೆ ಪ್ರಭಾಕರನ ಪ್ರಣಯದ ಅಮೃತಸಿಂಚನವಾದಾಗ, ಆದರ್ಶ ಗೃಹಿಣಿಯಾಗಿ, ಮಂದ್ಹಿನ ಕಣಿಯಾಗಿ, ಬಾಳು ಸಾಗಿಸುತ್ತಾಳೆ. ಅಂತೂ ಎಲ್ಲರೂ ಕ್ರೈಸ್ತಪಾದಾರವಿಂದದಲ್ಲಿ ಬೆಳಕನ್ನೂ ಬಾಳನೆಮ್ಮದಿಯನ್ನೂ ಕಾಣುತ್ತಾರೆ.

ಶ್ರೀ ಸವಣೂರ್ ಅವರು ಹಲವೇ ಸಾಲುಗಳ ಬಲವಾದ ಹೊಡೆತದಿಂದ ಒಂದು ಸುಂದರ ಪಾತ್ರವಿಗ್ರಹವನ್ನು ನಿರ್ಮಿಸಬಲ್ಲರು. ಈ ಕೆಳಗಿನದು ಚೆಲುವೆ ಹೇಮಲತೆಯ ತಂದೆಯಾದ ಸ್ವಾರ್ಥಿ ಮತ್ತು ಕನ್ಯಾವಿಕ್ರಯ ಮಾಡಿದ ಜನಾರ್ದನಾಚಾರಿಯ ವರ್ಣನೆ. ಇದರಲ್ಲಿಯ ವ್ಯಂಗ್ಯವನ್ನೂ ಗಮನಿಸ ಬಹುದು :

"ಜನಾರ್ಧನಾಚಾರಿಯನ್ನು ಅರು ತಾನೆ ಕಾಣರು ! ಅವರು ಎಷ್ಟು ಯೋಗ್ಯರು ! ಎಷ್ಟು ಆಚಾರಶೀಲರು ! ಹರಿವಾಯುಗಳಲ್ಲಿ ಭಕ್ತಿಯುಳ್ಳವರು ! ದೇವ ಬ್ರಾಹ್ಮಣರಲ್ಲಿ ವಿಶ್ವಾಸವುಳ್ಳವರು ! ಮುಖ್ಯಪ್ರಾಣದೇವರಿಗೆ ಎಷ್ಟು ಸೊಬಗಿನಿಂದ ಪೂಜೆ ಮಾಡುತ್ತಾರೆ ! ಅವರು ಊರ್ಧ್ವಪುಂಡ್ರವನ್ನು ಹಚ್ಚಿಕೊಂಡರೆ ಮುಖದ ಮೇಲೆ ವರ್ಚಸ್ಸು ಹೇಗಿರುವುದು ! ಊರ್ಧ್ವಮುಖರಾದರೆ ಇನ್ನೂ ಚೆಂದ ! ಆರ ಮನೆಗೆ ಹೊಸದಾಗಿ ತೋರಣ ಹಚ್ಚಿದೆಯೋ, ಆರ ಮನೆಯ ಮುಂದೆ ಹಜ್ಜನೆ ಸಾರಿಸಿ ರಂಗವಲ್ಲೀ ಮಾತ್ರ ಹಾಕಲಿಲ್ಲವೋ ಎಂಬುದನ್ನೇ ಹುಡುಕುತ್ತಲಿದ್ದು, ಅವರ ಮನೆಗಳಿಗೆ ಬೇಕಾಗಿ ಹೋಗಿ ಬಲವಂತದಿಂದ ಔತಣಕ್ಕೆ ಹೇಳಿಸಿಕೊಳ್ಳುವ, ದಕ್ಷಿಣೆಯೂ ಅಗ್ರಾಸನವೂ ತನಗೆ ಕೊಡದಿದ್ದರೆ ಸಿಟ್ಟಿಗೇಳುವ, ದೇಶಾವರವನ್ನು ಕೊಟ್ಟ ಹೊರತು ಬಿಡದಿರುವ, ಕಲ್ಲನ್ನಾದರೂ ಕರಗಿಸಿ ಯಾಚಿಸುವ, ಆ ಮೊಂಡ ಜನಾರ್ಧನಾಚಾರಿಯನ್ನು ಆರು ತಾನೇ ನೋಡಿ ಇಲ್ಲ ! (ಹೇಮಲತೆ ಯನ್ನು ೭೦ ವರುಷದ ವೃದ್ಧನೊಬ್ಬನಿಗೆ ಮದುವೆ ಮಾಡಿಕೊಟ್ಟು, ಆ ಮೂಲಕ ಬಂದ ೨೦,೦೦೦ ರೂಪಾಯಿಯ ಆಸ್ತಿಗೆ ತಾನೇ ಯಜಮಾನನಾಗಿದ್ದರೂ) ಜನಾರ್ಧನಾಚಾರಿ ಯಾಚನೆಯನ್ನು ಬಿಡ ಲಿಲ್ಲ. ಇದ್ದು ಬಿದ್ದ ನಗದು ಹಣವನ್ನು ಬಡ್ಡಿಗೆ ಹಾಕಿದ್ದನು ಅವನು ವೈದಿಕ ಸಂಪ್ರದಾಯದವನು. ಅವನ ಆಶೆಗೆ ಪಾರವೇ ಇರಲಿಲ್ಲ. ಆಗಾಗ್ಗೆ ಇವನು ಹರಿಕಥೆ ಮಾಡುತ್ತಲಿದ್ದನು. ಅದರಲ್ಲಿ 'ಬ್ರಾಹ್ಮಣರು ಉತ್ತಮರು, ಅವರು ಈ ಲೋಕದ ದೇವರು, ಅವರನ್ನು ಪೂಜಿಸಿದರೆ ದೇವರನ್ನು ಪೂಜಿಸಿದ ಹಾಗೆಯೇ, ಬ್ರಾಹ್ಮಣನಾಗಿ ಹುಟ್ಟಿದ ಮಾತ್ರದಿಂದಲೇ ಒಬ್ಬನು ಪರಿಶುದ್ಧನು, ಬ್ರಾಹ್ಮ ಣನು ಎಂತಹವನಾದರೂ ಪೂಜ್ಯನು, ಅವನಿಗೆ ಹೆಚ್ಚು ಹೆಚ್ಚಾಗಿ ದಾನಧರ್ಮಗಳನ್ನು ಮಾಡಿದರೆ ಬಹಳ ಪುಣ್ಯ' ಎಂಬ ಮಾತುಗಳ ಹೊರತು ಹೆಚ್ಚಿನ ವಿಶೇಷಗಳೇನೂ ಬರುತ್ತಿರಲಿಲ್ಲ............ ಜನಾರ್ಧನಾಚಾರಿಗೆ ಸುಮಾರು ಅಯವತ್ತು ವಯಸ್ಸು. ಒಂದು ವರ್ಷದಲ್ಲಿ ಮುನ್ನೂರು ಅರವತ್ತು ದಿನಗಳು ಅವನು ತನ್ನ ಮನೆಯಲ್ಲಿ ಊಟ ಮಾಡುತ್ತಿರಲಿಲ್ಲ. ಆರು ತಿಂಗಳು ಅವನು ಊರಲ್ಲಿರು ತ್ತಿರಲಿಲ್ಲ" (ಪು. ೭–೮) ಈ ಧರ್ಮಿಷ್ಠನ ಮುಖ್ಯ ಕೆಲಸವೆಂದರೆ ಮುದುಕ ವಿಧುರರಿಗೆ ಚಿಕ್ಕ ಕನ್ಯೆಯ ರನ್ನು ಮದುವೆ ಮಾಡಿಸಿ, ತನ್ನ ಕಮಿಶನ್ನನ್ನು ಗಿಟ್ಟಿಸುವುದು. ಆದ್ದರಿಂದ ಊರಲ್ಲಿ ಅವನಿಗೆ 'ಮೇಡನ್ ಮರ್ಚಂಟ' ಎಂದು ಕರೆಯುತ್ತಿದ್ದರು. ಅವನು ಊರಲ್ಲಿರದಿದ್ದಾಗ ಊರಿಗೆ ಊರೇ

ಪೇಚಾಡುತ್ತಿತ್ತು. ಯಾಕಂದರೆ, ಆಗ "ಊರಿನಲ್ಲಿ ಸೋಮಾರಿ ಸಭೆಗಳನ್ನು ಸೇರಿಸುವವರಿಲ್ಲ, ಹರಟೆ ಮಾಡುವವರಿಲ್ಲ. ಪರದೋಷಾರೋಪಣೆ ಮಾಡುವವರಿಲ್ಲ. ರಕ್ಷಣೆಗಾಗಿ ಜಗಳಾಡುವವರಿಲ್ಲ." (ಪು. ೧೮)

ಸ್ತ್ರೀಶಿಕ್ಷಣದ ಬಗೆಗೆ ಅಂದಿನ ಅಭಿಪ್ರಾಯಗಳೇದರೆ– "ಹೆಂಗಸರಿಗೇಕೆ ಓದು ? ಅವರು ಸುಬೇದಾರಿಕೆ ಮಾಡಬೇಕೇ ? ಇಲ್ಲವೇ ಶಾನುಭಾವಿಕೆ ಮಾಡಬೇಕೇ ? ಮನೆಯಲ್ಲಿ ಕಸಮುಸುರೆ ನೋಡಿಕೊಂಡು ಅಡಿಗೆ ಮಾಡಿಕೊಂಡಿರುವ ಮುಂಡೆಯರಿಗೆ ಓದು ಏತಕ್ಕೆ ?" (ಪು. ೨೧.)

ಕ್ರೈಸ್ತಪಾದ್ರಿಯಾದ ವೇದಮಿತ್ರಯ್ಯನ ಮೇರೆಗೆ ಹಿಂದೂ ಧರ್ಮದಲ್ಲಿಯ ನ್ಯೂನತೆಗಳು ಇವು :

"ಜಾತಿಸಂಪ್ರದಾಯ (ತರವಲ್ಲ). ದೇವರಿಂದ ಸೃಜಿಸಲ್ಪಟ್ಟ ಮನುಷ್ಯರೆಲ್ಲರೂ ಒಂದೇ ಸಮನಾದ ಹಕ್ಕುಳ್ಳವರು. ನಾವೆಲ್ಲರೂ ದೇವರ ಮಕ್ಕಳೇ. ಆದುದರಿಂದ ಎಲ್ಲರೂ ಭ್ರಾತೃವಾತ್ಸಲ್ಯದಿಂದ ಇರಬೇಕಲ್ಲದೆ 'ಎಲೋ, ಅವನು ಕೀಳು ಜಾತಿಯವನು, ಅವನನ್ನು ಆಚೆಗೆ ದೊಬ್ಬು' ಎಂದು ಹೇಳಬಾರದು. ತಮ್ಮ ಜಾತಿಯೇ ಶ್ರೇಷ್ಠವಾದುದೆಂದು ಒಬ್ಬರ ಮೇಲೆ ಅಹಂಕಾರ ತೋರಿಸಬಾರದು. ಬ್ರಾಹ್ಮಣರೆಂಬವರಿಗೆ ತಮ್ಮ ಜಾತಿಯ ಸಲುವಾಗಿ ಬಹಳ ಅಹಂಕಾರ. ಅದರಲ್ಲಿಯೂ ವೈದಿಕರಿಗೆ ಬಹಳ........ ಡಂಭಾಚಾರ ಮಾಡುವುದು; ಗುಂಡಾಗುಂಡಿಗೆ ಮಾಡುವುದು; ಘಾತುಕತನ ಮಾಡುವುದು; ಪುರಾಣ ಹೇಳುತ್ತಿರುವುದು; ಬದನೆಕಾಯಿ ತಿನ್ನುತ್ತಿರುವುದು; ಹಣವೆಂದರೆ ಎಂತಹ ಕೆಲಸಗಳನ್ನಾದರೂ ಮಾಡುವುದು; ತಮ್ಮಲ್ಲಿ ಏನೇನೂ ಯೋಗ್ಯತೆಯಿಲ್ಲದಿದ್ದರೂ ತಾವೇ ಎಲ್ಲರಿಗಿಂತಲೂ ಹೆಚ್ಚೆಂಬ ದುರಭಿಮಾನವನ್ನು ಇಟ್ಟುಕೊಂಡಿರುವುದು; ಸುವರ್ಣ ಪುಷ್ಪ ದಕ್ಷಿಣೆಯೆಂಬ ದಿವ್ಯೌಷಧವನ್ನು ಸ್ವೀಕಾರ ಮಾಡಿ, ಮಹಾಪಾಪವೆಂಬ ರೋಗವನ್ನು ನಿವಾರಣೆ ಮಾಡಲು ಶಕ್ತನಾಗಿದ್ದೇನೆಂದು ಹೇಳಿಕೊಳ್ಳುವುದು; ಸ್ತ್ರೀಯರಿಗೆ ಮೋಸಮಾಡಿ ಅವರಿಗೆ ಇಲ್ಲದ ನಿಯಮಗಳನ್ನು ಹೇಳಿ ಅವರ ವಿದ್ಯೆಗೆ ಆಕ್ಷೇಪಣೆ ಮಾಡಿ ಅವರನ್ನು ಯಾವಜ್ಜೀವವೂ ಕಷ್ಟಕ್ಕೆ ಸಿಕ್ಕಿಸಿ ಅವರಿಂದ ದುಡ್ಡು ಕಸಿಯುವುದು; ವಿಧವೆಯರಿಗೆ ವಿವಾಹವಾದರೆ ಸ್ತ್ರೀಯರು ಸ್ವತಂತ್ರಿಸುವರೆಂಬ ಭೀತಿಯಿಂದ ಅದಕ್ಕೆ ಆಕ್ಷೇಪಿಸುವುದು; ಶುದ್ಧವಾಗಿ ಸ್ವಾರ್ಥ ಪರಾಯಣತೆಯಿಂದ ತಮಗೆ ಹಣ ಸಂಪಾದನೆಯಾದರೆ ಸಾಕು, ಮಿಕ್ಕವರು ಎಲ್ಲಿ ನಾಶವಾಗಿ ಹೋದರೆ ತಾನೇ ಏನು ? ಎಂಬ ಮನಸ್ಸುಳ್ಳವರಾಗಿರುವುದು; ಜನಗಳನ್ನು ಬೆದರಿಸಿ ಅವರಿಂದ ತಮ್ಮ ಶ್ರೇಷ್ಠತೆಯನ್ನು ಹೊಂದಬಹುದೆಂಬ ಅಭಿಪ್ರಾಯವುಳ್ಳವರಾಗಿರುವುದು; ಅಂತೂ ಆವುದಾದರೂ ಅಂಥ ಮಾರ್ಗದಿಂದ ಜನರಿಗೆ ಮಂಕು ಬೂದಿಯನ್ನು ಚೆಲ್ಲಿ ಅವರನ್ನು ಮೋಸಗೊಳಿಸುವುದು." (ಪು. ೪೪–೪೫)

ಅಂತೂ 'ಹೇಮಲತೆ–ಪ್ರಭಾಕರ' ಮಹಾರಾಷ್ಟ್ರ, ಮೈಸೂರು, ಮದ್ರಾಸ ಪ್ರಾಂತಗಳ ವಿಶಾಲವಾದ ರಂಗಸ್ಥಲದ ಮೇಲೆ ನಡೆದ ಕ್ರಾಂತಿಕಾರಿಯಾದ, ವಿಚಾರಪ್ರಚೋದಕವಾದ ಕಾದಂಬರಿ.

—

ಶೇಷದಾಸಾಚಾರ್ಯ ಆದ್ಯ

(ಸು. ೧೯೧೦)

ಶ್ರೀಯುತರು ವಿಜಾಪುರ ಜಿಲ್ಲೆಯ ಅಗರಖೇಡದ ಸಾಂಪ್ರದಾಯಕ ಆದ್ಯಮನೆತನದವರು. ಮಧ್ವಸಿದ್ಧಾಂತದಲ್ಲಿ ಅಚಲವಾದ ಶ್ರದ್ಧೆಯುಳ್ಳವರು. "ತತ್ವಪ್ರಕಾಶ ಮತ್ತು ಹಲವು ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದರು. ಇವರು ಶಿಕ್ಷಕರಾಗಿ ಕೆಲಸ ಮಾಡಿದರು. ಇಂಗ್ಲಿಷ ಕಲಿಯದಿದ್ದರೂ ಅತ್ಯಂತ ಪುರೋಗಾಮಿಗಳು. ಸ್ವತಂತ್ರ ವಿಚಾರದವರು. ತಮಗೆ ಸರಿಕಂಡದ್ದನ್ನು ಯಾವ ವಿರೋಧವನ್ನೂ ಲೆಕ್ಕಿಸದೆ ಮಾಡಿಯೇ ತೋರಿಸುವವರು. ತಾವು ಶಿಕ್ಷಕರಾಗಿದ್ದಾಗ ಸಹೋದ್ಯೋಗಿಯೊಬ್ಬಳು ಅಕಾಲದಲ್ಲಿ ವಿಧವೆಯಾಗಿ ಕಷ್ಟದಲ್ಲಿದ್ದಾಗ ಅಂದಿನ ಸಮಾಜದ (೧೯೦೧) ವಿರೋಧವನ್ನೂ ಲೆಕ್ಕಿಸದೆ ಧೈರ್ಯದಿಂದ ಪುನರ್ವಿವಾಹ ಮಾಡಿಕೊಂಡರು.'' [೧] ಶ್ರೀಯುತರು ಕೆಲಕಾಲ ವಿಜಾಪುರ ತಾಲೂಕಿನ ಲೋಕಲ್ ಬೋರ್ಡಿನ ಸಭಾಸದರೂ ಆಗಿದ್ದರು.

ದಿವಂಗತ ಕೆರೂರ ವಾಸುದೇವಾಚಾರ್ಯರು, ತಮ್ಮ "ಇಂದಿರಾ'' ಕಾದಂಬರಿಯಲ್ಲಿ ವರ್ಣಿಸಿದ 'ಉಪಾಸನಾ ಸಮಾಜ'ದಲ್ಲಿ ಬರುವ ಫಣೀಂದ್ರಾಚಾರ್ಯರ ಉಲ್ಲೇಖ ಈ ಶೇಷದಾಸಾಚಾರ್ಯರಿಗೇ ಸಂಬಂಧಪಟ್ಟದ್ದು.

ಬ್ಯಾನರ್ಜಿ : ಆದ್ಯರೆ, ನೀವು ಪುನರ್ವಿವಾಹ ಸಶಾಸ್ತ್ರವೆಂದು ಮಾಡಿಕೊಂಡಿರೋ, ಇದು ಸಮಾಜಕ್ಕೆ ಹಿತಕರವಾದದ್ದೆಂದು ಮಾಡಿಕೊಂಡಿರೋ ?

ಫಣೀಂದ್ರಾಚಾರ್ಯ : ಶಾಸ್ತ್ರಸಮ್ಮತವಿರಲಿ, ಇಲ್ಲದಿರಲಿ, ಪುನರ್ವಿವಾಹವು ಸಮಾಜಕ್ಕೆ ಹಿತಕರವಾದದ್ದೆಂದು ನನ್ನ ಮತ. ಇನ್ನು ಶಾಸ್ತ್ರವೇ ಬೇಕಾಗಿದ್ದರೆ, 'ನಷ್ಟೇಮೃತೇ' ಎಂದು ನಾರದರ ವಚನವಿರಲು, ಪುನರ್ವಿವಾಹವು ಶಾಸ್ತ್ರಸಮ್ಮತವಲ್ಲವೆಂದು ಹೇಳುವ ಗಂಡಸು ಯಾವನಾದರೂ ಇದ್ದರೆ ನನ್ನೆದುರಿಗೆ ಬರಲಿ.

ಗಫೂರಸಾಹೇಬ : ವಾಹವ್ವಾ ! ಫಣೀಂದ್ರಸ್ವಾಮಿ, ನೀವು ಈ ಹಿಂದೂ ಭಟ್ಟರ ಸೊಂಟವನ್ನೇ ಮುರಿದು ಕೊಟ್ಟಿರಿ.

ಆಚಾರ್ಯರು ಮದುವೆಯಾದದ್ದು ದೈಹಿಕ ಆಶೆಯಿಂದಲ್ಲ; ಇದಕ್ಕೆ ಶಾಸ್ತ್ರಾಧಾರಗಳನ್ನು ಹೇಳಿ, ಆ ಬಗೆಗೆ ಸಭೆ, ಚರ್ಚೆ, ವಾಗ್ವಾದಗಳನ್ನು ನಡೆಸಿ ಮದುವೆಯಾಗಿದ್ದರು. ಯಾಕೆಂದರೆ, ೧೯೦೧ರಲ್ಲಿ

[೧] ಆದ್ಯವಂಶಪ್ರದೀಪ : ಸಂ. ಅನಂತಾಚಾರ್ಯ ಆದ್ಯ : ೧೯೭೦ : ಪು. ೬೦.

ಕರ್ನಾಟಕವೃತ್ತ ಪತ್ರಿಕೆಯು ಮೊದಲಿಗೆ ಚೇಷ್ಟಾಪೂರ್ವಕವಾಗಿ ಈ ಮದುವೆಯ ಉಲ್ಲೇಖವನ್ನು ತನ್ನ ವರ್ತಮಾನ ಸಂಗ್ರಹದಲ್ಲಿ ಮಾಡಿದಾಗ, ಶೇಷದಾಸಾಚಾರ್ಯರು ಪ್ರತಿಭಟಿಸಿ ವಸ್ತುಸ್ಥಿತಿಯನ್ನು ವಿವರಿಸಿದಂತೆ ಕಾಣುತ್ತದೆ. ಅದಕ್ಕಾಗಿಯೇ, ಸಂಪಾದಕರು ಮುಂದಿನ ಸಂಚಿಕೆಯಲ್ಲಿಯೇ ತಿದ್ದುಪಡಿಯನ್ನು ಹಾಕಿದ್ದಾರೆ.

ಆಲೂರ ವೆಂಕಟರಾಯರು ಈ ಘಟನೆಯ ಬಗೆಗೆ ಹೀಗೆ ಬರೆಯುತ್ತಾರೆ :

"ಇಂಡಿಯಲ್ಲಿದ್ದಾಗ ೧೯೦೧ ನೆಯ ಇಸ್ವಿಯ ಮೇ ತಿಂಗಳ ರಜೆಯಲ್ಲಿ ಸಂಭವಿಸಿದ ಒಂದು ಸಂಗತಿ ಹೇಳುವೆ. ಅದು ಅಗರಖೇಡದ ಆದ್ಯ ಶೇಷಾದಾಸಾಚಾರ್ಯರ ಪುನರ್ವಿವಾಹಕ್ಕೆ ಸಂಬಂಧಿಸಿದ್ದು. ಶೇಷದಾಸಾಚಾರ್ಯರು ಘನಪಂಡಿತರು. ಅವರ ಮನೆತನದಲ್ಲಿ ಪಾಂಡಿತ್ಯವು ಆನುವಂಶಿಕ ಸಂಸ್ಕಾರದಿಂದ ಬಂದುದು........ ಅವರು ಇಂಡಿಯ ಹೆಣ್ಣುಮಕ್ಕಳ ಶಾಲೆಯ ತಪಾಸಿಗೆ ಬಂದಾಗ, ಅಲ್ಲಿ ಮಿಸ್ಟ್ರೆಸ್ ಆಗಿದ್ದ ಲಕ್ಷ್ಮೀಬಾಯಿ ಎಂಬ ಬ್ರಾಹ್ಮಣ ವಿಧವೆಯ ಮೇಲೆ ಅವರ ಕಣ್ಣು ಕೂತಿತು. ಅವರನ್ನು ಲಗ್ನ ಮಾಡಿಕೊಳ್ಳಬೇಕೆಂದು ಶೇಷದಾಸಾಚಾರ್ಯರು ಅವರ ಮನಸ್ಸು ಒಲಿಸಹತ್ತಿದರು. ಪ್ರೇಮಯಾಚನೆ (Wooing) ನಡೆಯಿತು. ಅವರು ಒಮ್ಮೆಲೆ ಒಪ್ಪಲಿಲ್ಲ. ಏಕೆಂದರೆ ದಾಸರಿಗೆ ಹೆಂಡತಿ, ಮಗ ಇದ್ದರು. ದಾಸರು ಕವಿಗಳು, ಅವರು ಪದ್ಯರೂಪದಿಂದ ಪ್ರೇಮಪತ್ರ ಬರೆಯುತ್ತಿದ್ದರು. ಮಿಸ್ಟ್ರೆಸಿನ ತಾಯಿಯು ಅಲ್ಲಿಯ ಹೆಡ್‌ಮಾಸ್ತರರಿಗೂ ನನಗೂ ಕೆಲವು ಪತ್ರಗಳನ್ನು ತೋರಿಸಿ ವ್ಯವಹಾರವಿಷಯದಲ್ಲಿ ಸಲಹೆ ಪಡೆಯುತ್ತಿದ್ದಳು. ಆ ಮಿಸ್ಟ್ರೆಸರು ಮುಂಚೆ ಒಪ್ಪಿ, ಒಲ್ಲೆಂದಾಗ, 'ದಾಸನಾದ ಶೇಷದಾಸನು ಈಗ ಬೇಸರಾದನೇನೇ' ಎಂದು ಬರೆದದ್ದು ಇನ್ನೂ ನೆನಪಿನಲ್ಲಿ ಇದೆ. ಮುಂದೆ ತೀವ್ರವೇ ಅವರ ಪುನರ್ವಿವಾಹವಾಯಿತು. ನಮ್ಮ ಬೀಗ ರೊದ್ದ ವ್ಯಾಸರಾಯರಿಗೆ ಆಗ ಬಹಳ ಆನಂದ. ಆತನು ಅವರೀರ್ವರ ಭೆಟ್ಟಿಗಾಗಿ ಇಂಡಿಗೆ ಬಂದನು. ನಾನೂ ಆತನೂ ಕೂಡಿ ಅಗರಖೇಡಕ್ಕೆ ಹೋದೆವು. ಆ ದಂಪತಿಗಳಿಂದ ಆದರ ಸತ್ಕಾರ ಸ್ವೀಕರಿಸಿದೆವು. ಅವರಿಬ್ಬರ ತತ್ವನಿಷ್ಠೆ, ಸರಳ ಜೀವನ ಇವು ನಮ್ಮ ಮನವನ್ನು ಆಕರ್ಷಿಸಿದವು........ ಉತ್ತರ ಕರ್ನಾಟಕದಲ್ಲಿ ಇದೇ ಆದ್ಯ ಪುನರ್ವಿವಾಹ" ೧

ಸಮಾಜದ ಬಂಧನ ಎಷ್ಟೋ ಸಲ ನೋಡಲು ಮೃದುವಾಗಿ ಕಂಡರೂ, ತುಂಬಾ ಬಲಿಷ್ಠವಾಗಿರುತ್ತದೆ. ಅದನ್ನು ತಪ್ಪಿಸಿಕೊಳ್ಳುವುದು ಬಹಳ ಕಠಿಣ. ಈ ಬಗೆಗೆ ಕವಿ ಗೋಪಾಲಕೃಷ್ಣ ಅಡಿಗರು ತಮ್ಮ 'ಸಮಾಜಭೈರವ' ಎಂಬ ಕವನದಲ್ಲಿ ಚೆನ್ನಾಗಿ ವರ್ಣಿಸಿದ್ದಾರೆ :

ನನ್ನ ಮನವ ನನಗೆ ಕೊಡು
ಓ ಸಮಾಜ ಭೈರವ
ನನ್ನ ನಗೆಯ ನನ್ನ ಬಗೆಯ
ನನ್ನ ಜಗವ ನನಗೆ ಬಿಡು
ನನ್ನ ಮನವ ನನಗೆ ಕೊಡು

ತೊಡಿಸಬರಲು ಬೇಡ ನಿನ್ನ ಹೊನ್ನ ಸಂಕೋಲೆಯ
ಬಳಿಕ ಮುಗುಳಮಾಲೆಯ
ಉಡಿಸಬರಲು ಬೇಡ ನನ್ನ ಮನಕೆ ನಿನ್ನ ಚೇಲವ

---

೧ ನನ್ನ ಜೀವನ ಸ್ಮೃತಿಗಳು : ವೆಂಕಟರಾವ ಆಲೂರ : ೧೯೭೪ : ಪು. ೬೩–೬೪.

ನಿನ್ನ ದಯೆಯು ಸಾಲವ
ಬಿಟ್ಟು ಬಿಡೋ, ಎಲೆಲೆ ನನ್ನ ಮನವ ತನ್ನ ಪಾಡಿಗೆ
ತನ್ನ ಹಲವು ಹಾಡಿಗೆ

ನೀನು ಸಮೆದ ಈ ಪಂಜರ ಅತಿಸುಂದರವಹ ಮೆಚ್ಚಿಗೆ
ನನ್ನದದಕೆ ತಕ್ಕುದಯ್ಯ ಅದೇ ನಿನ್ನ ಹುಚ್ಚಿಗೆ !
ಬಿಟ್ಟು ಬಿಡು ನನ್ನ ಮಾತ್ರ ನನ್ನ ಎದೆಯ ನೆಚ್ಚಿಗೆ
ನನ್ನನಲ್ಲಿ ಸೆರೆದೂಡಲು ಮಾಡಬೇಡ ಸಂಚನು
ಹಾಕಬೇಡ ಹೊಂಚನು

ನನ್ನ ಮನವು ಹಾಯಬೇಕು ದಿಗ್ದಿಗಂತದಾಚೆಗೂ
ಏರಬೇಕು ಮುಗಿಲಿನಾಚೆ ತಾರೆಯಾಚೆಯಾಚೆಗೂ
ಇಳಿಯಬೇಕು ಪಾತಾಳದ ಗಹನ ತಿಮಿರದಾಳಕೂ
ಇನ್ನು ಇನ್ನು ಅಗಲಕೂ ಮೇಲಕೂ ಆಳಕೂ !

ನುಚ್ಚುನೂರು ನಾನು ನಿನ್ನ ಒಂದೆ ಪದಾಘಾತಕೆ
ನಿನ್ನ ನಿಶ್ವಾಸದೊಂದು ವೀಚಿಮಾತ್ರ ಘಾತಕೆ
ತಳುವು ಕೊಂಚ ನೀರಗುಳ್ಳೆ ಕುಣಿದು ಕುಣಿದು ಒಡೆಯಲಿ
ಒಡೆವ ಮೊದಲು ಅದರ ಬಣ್ಣದಾಟವನಿತು ತೀರಲಿ ! ೧

ಸುವದನಾ–ಭಾಸ್ಕರ (೧೯೧೦) :

ಶೇಷದಾಸಾಚಾರ್ಯರ 'ಸುವದನಾ–ಭಾಸ್ಕರ' ಎಂಬ ನಾಟಕದಲ್ಲಿ ಹಣದಾಸೆಗಾಗಿ ಚೆಲುವೆಯಾದ ಸುವದನೆ ಎಂಬ ಕನ್ಯೆಯನ್ನು ಅವಳ ತಂದೆ ಕೃಷ್ಣಭಟ್ಟನೆಂಬವನು ಗೋಪಾಳರಾಯನೆಂಬ ವೃದ್ಧನಿಗೆ ಮದುವೆ ಮಾಡಿಕೊಟ್ಟಾಗ, ಎಷ್ಟೋ ಮಟ್ಟಿಗೆ ಓದಿಕೊಂಡಿದ್ದ ಆ ಹುಡುಗೆ ಗಂಡನ ಕೂಡ ಸಂಸಾರ ಮಾಡದೆ, ಬಹು ವಿಧ ಪರಿತಾಪ ಪಡುತ್ತಿದ್ದಾಗ, ಗಂಡ ಗೋಪಾಳರಾಯ ಸತ್ತುಹೋಗುತ್ತಾನೆ. ಆಗ ಸಮಾಜಸುಧಾರಕನಾದ ಭಾಸ್ಕರರಾಯನು ಶಾಸ್ತ್ರರೀತ್ಯಾ ಪುನರ್ವಿವಾಹ ಶಾಸ್ತ್ರಸಮ್ಮತವೆಂದು ಪ್ರಸ್ಥಾಪಿಸಿ ಚೆಲುವೆ ಸುವದನೆಯನ್ನು ಮದುವೆಯಾದುದೇ ಈ ನಾಟಕದ ಕಥಾವಸ್ತು.

'ಸುವದನಾ–ಭಾಸ್ಕರ' ನಾಟಕದಲ್ಲಿ ಚೆಲುವೆಯಾದ ಸುವದನೆಯ ಪಾತ್ರವೂ, ಸುಧಾರಕನಾದ ಭಾಸ್ಕರನ ಪಾತ್ರವೂ ಚೆನ್ನಾಗಿ ಮೂಡಿಬಂದಿವೆ. ಸಂಪ್ರದಾಯದ ವಿಡಂಬನೆ ಚೆನ್ನಾಗಿ ಬಂದಿದೆ. ಇಂದಿನ ಪ್ರಖ್ಯಾತ ನಾಟಕಕಾರರಾದ ಶ್ರೀರಂಗರೂ ಈ ಅದ್ಯ ಮನೆತನಕ್ಕೇ ಸೇರಿದವರು. ಶ್ರೀರಂಗರ ಶೈಲಿಯ ಮುನ್‌ಸೂಚನೆ ಶೇಷದಾಸಾಚಾರ್ಯರಲ್ಲಿ ಕಂಡುಬರುತ್ತದೆ. ನಾಟಕ ಕೇವಲ ಮನರಂಜನೆಯ ಸಾಧನ ಮಾತ್ರವಾಗದೆ, ನೀತಿಯ ಉಪದೇಶ ಮಾಡುವಂತಿರಬೇಕೆಂದು ಆಚಾರ್ಯರ ಕಲ್ಪನೆ. ಅದಕ್ಕಾಗಿ ಪ್ರಾರಂಭದಲ್ಲಿ ನಟಿ ಹೀಗೆ ಹೇಳುತ್ತಾಳೆ :

"ಪ್ರಾಣಪ್ರಿಯನೇ, ಬರಿಯ ಜನಮನೋರಂಜನಾರ್ಥವಾಗಿ ನಾಟಕ ಮಾಡಿತೋರಿಸುವುದು ನನಗಂತೂ ಸರಿ ಕಾಣಿಸದು. ಬಹು ಜನರು ಬಹಳ ಪೆಚ್ಚ ಮಾಡಿ ಶ್ರಮಬಟ್ಟರೆ, ನಾಟಕ ಸಿದ್ಧ

೧ ಕಟ್ಟುವೆವು ನಾವು : ಗೋಪಾಲಕೃಷ್ಣ ಅಡಿಗ : ಪು. ೧೯

ವಾಗುವುದಲ್ಲದೆ ಈಗಿನ ಕಾಲದಲ್ಲಿ ಅಜ್ಞರೇ ಬಹಳವಿದ್ದುದರಿಂದ ನಿಂದೆಗೂ ಒಳಗಾಗಬೇಕಾಗುತ್ತದೆ. ಇಷ್ಟೆಲ್ಲ ದುಃಖಬಟ್ಟು ಕೇವಲ ಜನಮನೋರಂಜನೆಯನ್ನೇ ಮಾಡಿದರೆ ಗುಡ್ಡ ಕೆದರಿ ಇಲಿ ತೆಗೆದಂತಾಗುವದು. ಅವುದಾದರೊಂದು ಹಿತದ ಕೆಲಸ ಮಾಡತಕ್ಕದ್ದು. ಆದರಿಂದ ಜನರ ಮನೋರಂಜನವಾದರೆ ಒಳ್ಳೇದೇ, ಆ ಕಾರಣ ಜನರ ಮನೋರಂಜನಕ್ಕೆ ತುಸು ಕೊರತೆಯಾದರೂ ಚಿಂತೆಯಿಲ್ಲ. ಆದುದರಿಂದ ಜನರ ಭ್ರಾಂತಿ ಸ್ವಲ್ಪಲ್ಲ ಸ್ವಲ್ಪ ಕಡಿಮೆಯಾದೀತು. ಅಂತಹ ನಾಟಕ ಮಾಡಿ ತೋರಿಸಬೇಕು– ಹೀಗೆ ನನ್ನ ಅಭಿಪ್ರಾಯ ಉಂಟು. ಈಗಿನ ಕಾಲದಲ್ಲಿ ಬಾಲವಿವಾಹ, ಅಸಮ್ಮತ ವಿವಾಹ, ಬಾಲವೈಧವ್ಯ ಇವೇ ಮುಂತಾದ ದುಷ್ಟ ರೂಢಿಗಳಿಂದ ಎಷ್ಟೋ ಜನರು ತಳಮಳಿಸಹತ್ತಿಹರು. ಆ ದುಃಖದ ಕಲ್ಪನೆ ಇಲ್ಲದ್ದರಿಂದ ಆ ದುಃಖದಲ್ಲಿ ಸಿಲುಕದ ಜನರು ಆನಂದದಿಂದಿದ್ದಾರೆ. ಆದುದರಿಂದ ಆ ದುಃಖದ ಕಲ್ಪನೆ ಜನರ ಮನಸ್ಸಿನೊಳಗೆ ಹೇಗೆ ಬಂದೀತು, ಇಂತಹದೊಂದು ಅವುದಾದರೂ ನಾಟಕವಿದ್ದರೆ, ಮಾಡಿತೋರಿಸಬೇಕು. ಹಾಗೂ ಈ ವಿವೇಕಿಗಳಾದ ಸಭಿಕರು ಎಂದೂ ಕೇಳದಿರಲಿಕ್ಕಿಲ್ಲ.''

ಆಗ ಸೂತ್ರಧಾರನು ''ಸಭಿಕರ ಸಂತೋಷಾರ್ಥವಾಗಿ ಆದ್ಯ ಕುಲೋತ್ಪನ್ನರಾದ ಶೇಷದಾಸ ಕವಿ ಮಾಡಿದ'' ಒಂದು ನಾಟಕವನ್ನು ಮಾಡಿ ತೋರಿಸುವುದಾಗಿ ಹೇಳುತ್ತಾನೆ.

ನಾಟಕದ ತುಂಬೆಲ್ಲ ಬರುವ ಸಂಸ್ಕೃತ ಅವತರಣಿಕೆಗಳನ್ನು ನೋಡಿದರೆ, ಆದ್ಯರ ಬಹುಶ್ರುತತ್ವದ ಕಲ್ಪನೆ ಬಾರದಿರದು : "ಉದ್ವಹೇತ್ತು ದ್ವಿಜೋ ಭಾರ್ಯಾಂ ಸವರ್ಣಾಂ ಲಕ್ಷಣೈರ್ಯುತಾಂ, ಅವ್ಯಂಗಾಂಗೀಂ ಸೌಮ್ಯನಾಮ್ನೀಂ ಮೃದ್ವಂಗೀಂಚ ಮನೋಹರಾಂ'' (ಅಶ್ವಲಾಯನ– ಸೌಂದರ್ಯವತಿಯೂ ಒಳ್ಳೆಯ ಅಂಗವುಳ್ಳವಳೂ ಸೌಮ್ಯಳೂ ಆದವಳನ್ನು ಮದುವೆಯಾಗಬೇಕು.) ''ಯತ್ರ ಮನೋ ರಮತೇ ತದ್ರೂಪಂ'' (ಮನಸ್ಸಿಗೆ ಆನಂದವಾಗುವುದೇ ರೂಪ), "ದಿವಾ ನಿರೀಕ್ಷ್ಯ ವಕ್ತವ್ಯಂ" (ಹಗಲು ಸುತ್ತಮುತ್ತ ನೋಡಿಯೇ ಮಾತಾಡಬೇಕು)– ಇತ್ಯಾದಿ.

ಒಟ್ಟಾರೆ, ಸಮಾಜ ಸುಧಾರಣಾದೃಷ್ಟಿ, ಸುಂದರವಾದ ಪಾತ್ರಚಿತ್ರಣ ಮತ್ತು ಸರಸವಾದ ಸಂಭಾಷಣೆಗಳ ಮೂಲಕ 'ಸುವದನಾ ಭಾಸ್ಕರ' ಒಂದು ಒಳ್ಳೆಯ ಕೃತಿ ಎಂದು ಹೇಳಬೇಕು.

—

ಇತರರು

ಕನ್ನಡ ಸಾಹಿತ್ಯದ ಉದಯಕಾಲದಲ್ಲಿ ಕೃತಿರಚನೆ ಮಾಡಿದ ಮಹತ್ವದ ಲೇಖಕರ ಬಗೆಗೂ, ಅವರು ಬರೆದ ಕೃತಿಗಳ ಬಗೆಗೂ ಈವರೆಗೆ ವಿವರಿಸಲಾಯಿತು. ಇದೂ ಅಲ್ಲದೆ, ಇನ್ನೂ ಹಲವರ ಹೆಸರುಗಳನ್ನು ಡಾ. ಕಿಟೆಲ್‌ರವರು ನಾಗವರ್ಮನ ಛಂದೋಂಬುಧಿಯ ಮುನ್ನುಡಿಯಲ್ಲಿ ಕೊಡುತ್ತಾರೆ. ಈ ಲೇಖಕರು ಬರೆದ ಕೃತಿಗಳು ಉಪಲಬ್ಧವಾಗಲಿಲ್ಲ. ಕನ್ನಡ ಕವಿಗಳ ಚರಿತೆಯನ್ನು ಮೊಟ್ಟ ಮೊದಲಿಗೆ ಬರೆದ ಡಾ. ಕಿಟೆಲ್‌ರವರು ಸನ್ ೧೮೭೪ ರಲ್ಲಿ ಹೀಗೆ ಹೇಳಿದರು :

"In the above list are no doubt many omissions, though it contains all the generally known and read native products so far as they have not been executed by Christians. I have given what I happened to have at hand. May the present volume form a small contribution towards a History of Canarese literature ! Its defects will doubtlesss be excused by all who know the difficulties connected with first attempts of a similar character." ೧

ಡಾ. ಕಿಟೆಲ್‌ರವರು ೧೮೭೪ ರಲ್ಲಿ ಹೇಳಿದ ಈ ಮಾತುಗಳು ಒಂದುನೂರು ವರ್ಷಗಳ ನಂತರ, ೧೯೭೪ ರಲ್ಲಿಯೂ ಅನ್ವಯಿಸುತ್ತವೆ. ಡಾ. ಕಿಟೆಲ್‌ರವರು ಉಲ್ಲೇಖಮಾಡಿದ ಲೇಖಕರ ಪರಿಚಯವನ್ನೂ ಮತ್ತು ಇತರ ಹಲವರ ಪರಿಚಯವನ್ನೂ ಇಲ್ಲಿ ಕೊಡಲಾಗಿದೆ :

ವೆಂಕಟೇಶ ಭಟ್ಟ (೧೮೩೦) :

ಇವರು ಕುಂದಾಪುರದವರು. ಇವನು 'ವಿಠೋಬ ಚರಿತ್ರ' ಎಂಬ ಗ್ರಂಥವನ್ನು ಸನ್ ೧೮೩೦ ರಲ್ಲಿ ರಚಿಸಿದ್ದಾರೆ. ಇದರಲ್ಲಿ ಎಪ್ಪತ್ತು ರಗಳೆಯ ಪದ್ಯಗಳಿವೆ. ಈ ಕಾವ್ಯದಲ್ಲಿ ಹಣದ ಸಲುವಾಗಿ ಒಬ್ಬ ಬ್ರಾಹ್ಮಣನ ಮಗನನ್ನು ಬಲಿ ಕೊಡಬೇಕೆಂದು ಪ್ರಯತ್ನಿಸಿದಾಗ ಪಂಢರಪುರದ ವಿಠ್ಠಲದೇವರು ಆ ಮಗುವನ್ನು ಸಂರಕ್ಷಿಸಿದ ಕಥೆ ಹೇಳಲಾಗಿದೆ.

ಗೇರಸೊಪ್ಪೆ ಶಾಂತಪ್ಪ (ಸು. ೧೮೩೦) :

ಇವರು ಹೊನ್ನಾವರದವರು. ಮಂಗಳೂರು ಮತ್ತು ಹೊನ್ನಾವರಗಳಲ್ಲಿ ಸದರ್ ಅಮೀನ

೧ ನಾಗವರ್ಮನ ಕನ್ನಡ ಛಂದಸ್ಸು : ೧೮೭೪ : ಪು. LXXXI

ರಾಗಿದ್ದರು. ಡಾ. ಕಿಟೆಲ್, ರೈಸ್ ಮತ್ತು ಆರ್. ನರಸಿಂಹಾಚಾರ್ಯರು ಇವರ ಉಲ್ಲೇಖ ಮಾಡುತ್ತಾರೆ.

ಇವರು ಯಕ್ಷಗಾನ ಕಲೆಯಲ್ಲಿ ಪಾರಂಗತರಾಗಿದ್ದರು. ಇವರು ಅನೇಕ ಯಕ್ಷಗಾನಗಳನ್ನು ಬರೆದಿದ್ದು, ಅವಿನ್ನೂ ಪ್ರಚಾರದಲ್ಲಿವೆ. ಇವರ ಯಕ್ಷಗಾನಗಳಲ್ಲಿ– ಏಕಾದಶೀ ಪ್ರಸಂಗ, ಕರ್ಣಪರ್ವ, ಜರಾಸಂಧ ಕಾಳಗ, ದ್ರೋಣಪರ್ವ, ಭೀಷ್ಮಪರ್ವ, ರಾವಣ ದಿಗ್ವಿಜಯ, ಸೀತಾವಿಯೋಗ, ಸೀತಾ ಕಲ್ಯಾಣ, ಸುಭದ್ರಾ ಕಲ್ಯಾಣ, ಸುರಥ ಸುಧನ್ವರ ಕಾಳಗ, ಲವಣ ಸಂಹಾರ ಮೊದಲಾದವುಗಳನ್ನು ಉಲ್ಲೇಖಿಸಬಹುದು. ಇವರ ಬಗೆಗೆ ಡಾ. ಕಿಟೆಲ್ ಅವರು ಹೀಗೆ ಬರೆದಿದ್ದಾರೆ :

"About A. D. 1830, a Saraswat Brahman, called Gersoppe Santappa who was Principal Sadar Amin at Mangalore (Kshemapura) where he died about 95 years ago, began to compose a number of tales on subjects taken from the Bharata and the Ramayana in Yakshagana metres, to be used at Dramatic performances (nataka...)"

"Mr. Balappa, a Saraswata, and Sanscrit teacher at the Government School at Mangalore has been kind enough to give us these particulars."

(ನಾಗವರ್ಮನ ಕನ್ನಡ ಛಂದಸ್ಸು, ೧೮೭೫. ಪು. lxxvii)

ಶ್ರೀನಿವಾಸ (ಸು. ೧೮೩೦) :

ಇವರು ಶಾಂಡಿಲ್ಯ ಗೋತ್ರದವರು. ಇವರ ತಂದೆಯ ಹೆಸರು ನಾರಾಯಣ. ಇವರ ಸ್ಥಳ ಗೋಕರ್ಣ. ಇವರು ಪತ್ನೀಪುತ್ರ ಸಮೇತರಾಗಿ ಮೈಸೂರೊಡೆಯರಾದ ಮುಮ್ಮಡಿ ಕೃಷ್ಣರಾಜ ವರ್ಧಂತಾ ಉತ್ಸವವನ್ನು ನೋಡಲು ಹೋಗಿದ್ದರಂತೆ. ಆಗ ಅಲ್ಲಿ ಕಂಡ ಕೃಷ್ಣರಾಜ ವೈಭವವನ್ನು ಕಾವ್ಯರೂಪವಾಗಿ ವರ್ಣಿಸಿದ್ದಾರೆ. ಇವರು ಬರೆದ ಗ್ರಂಥ 'ಕೃಷ್ಣರಾಜ ವರ್ಷ ವರ್ಧಂತೀಶತಕ'. "ಈ ಗ್ರಂಥ ವಾರ್ಧಿಕ ಷಟ್ಪದಿಯಲ್ಲಿದೆ. ಸಂಧಿ ೩ ಪದ್ಯಗಳು ೧೦೧. ಇದರಲ್ಲಿ ಮುಮ್ಮಡಿ ಕೃಷ್ಣರಾಜನ ವರ್ಷವರ್ಧಂತಿ ಮಹೋತ್ಸವವು ವರ್ಣಿತವಾಗಿದೆ. ಗ್ರಂಥದ ಪ್ರಾರಂಭದಲ್ಲಿ ಲಕ್ಷ್ಮಿ, ಚಾಮುಂಡಿ ಈ ದೇವತೆಗಳ ಸ್ತುತಿಯಿದೆ. ಈ ಗ್ರಂಥದಲ್ಲಿ ಹೇಳಿದ ವಿಷಯವನ್ನು ತನ್ನ ಹೆಂಡತಿಗೆ ಹೇಳಿದಂತೆ ಕವಿ ಹೇಳುತ್ತಾನೆ."[೧]

ಕವಿಯ ಶೈಲಿಯ ನಿದರ್ಶನವಾಗಿ ಈ ಕೆಳಗಿನ ಪದ್ಯವನ್ನು ಕೊಡಬಹುದು :

ಸುರರು ಪೂಮಳೆಗಳಂ ಕೃಷ್ಣರಾಜೋತ್ತಮನ
ವರಶಿರೋಭಾಗದೊಳ್ ಪರಮ ಸಂತೋಷದಿಂ
ಸುರಿಯಲವು ಮುಕುಟದೊಳ್ ಬಿದ್ದೆರಡು ಪಾಲಾಗಿ ವ್ಯಜನಗಳ ಗಾಳಿಯಿಂದ
ಸರಿದು ಮೇಲ್ಭಾಗಕ್ಕೆ ಪೋಪುವೆಂಬಂತೆ ವರ
ತರುಣಿಯರ್ ಕರಗಳಿಂ ಢಾಳಿಸುತ್ತಿರುವ ಸಿತ
ತರ ಚಾಮರದ್ವಯಂ ಶೋಭಿಸುವದೀಗಲದ ಬೇಗದಿಂ ಕಾಂತೆ ನೋಡು ॥

---

೧ ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರು : ೧೯೬೯ : ಪು. ೩೧–೩೨.

ನಗರೆ ಸುಬ್ರಹ್ಮಣ್ಯ (ಸು. ೧೮೪೦) :

ಹೊನ್ನಾವರ ತಾಲೂಕಿನ ಶರಾವತಿ ನದಿಯ ದಂಡೆಯ ಮೇಲಿರುವ ನಗರೆ ಇವರ ಊರು. ಇವರ ತಂದೆಯ ಹೆಸರು ಪೌರಾಣ ಕುಲಜಾತ ದೈವಜ್ಞ ವಿಠಲ. ತಾಯಿ ಗೌರಿ.

ಇವರು ಶಂಬರಾಸುರನ ಕಾಳಗ, ರಾವಣೋದ್ಭವ ಮೊದಲಾದ ಯಕ್ಷಗಾನಗಳನ್ನು ಬರೆದಿದ್ದಾರೆ. ಶಂಬರಾಸುರನ ಕಾಳಗದಲ್ಲಿ "ಪರಮಮುನಿ ಪರೀಕ್ಷಿತ ನೃಪಾಲಗೆ ಪೇಳ್ದ ವರಮಹಾ ಭಾಗವತ ಸಾರದೊಳ್ ಸ್ಮರ ಜನಿಸಿ ರತಿಯ ಕೈಪಿಡಿದ ಸಂಗತಿ"ಯನ್ನು ಹೇಳಲಾಗಿದೆ. ಇದರಲ್ಲಿಯ ಒಂದು ಪದ್ಯ :

ಸರಸದಿ ಪುಷ್ಪದ ಲತೆಯು– ನೀ
ನೆರೆನೆಟ್ಟು ಮರೆತಿಹೆಯು
ನೆರೆದೆಲೆ ಕೋಮಲ
ತರದೊಳು ಕುಸುಮಾಂ
ಕುರಿತವಾಗಿ ಮೇಲ್ವರಿವುತಲಿಹುದೈ ॥

ಪತಿಯಾದಾ ವೃಕ್ಷದಲಿ– ಸಂ
ಗತವೆತ್ತಾನಂದದಲಿ
ಜಸೆಗೂಡಿಸಿದಂ–
ಪತಿಯಂದದಿ ಬೆರೆದತಿ ಪೋಹದಿ ಸಂ
ತತ ರಂಜಿಪುದು ॥ [೧]

ಸೀತಾರಾಮ ಸೂರಿ (ಸು. ೧೮೪೦) :

ಇವರು 'ಸಹಸ್ರಾಯುಧ ಕಥೆ' ಎಂಬುದನ್ನು ಬರೆದಿದ್ದಾರೆ.

ಶ್ಯಾಮರಾವ ವಿಠ್ಠಲ ಕಾಯಕಿಣಿ (೧೮೪೧–೧೯೦೫) :

ಕನ್ನಡ ಸಾಹಿತ್ಯದ ಉದಯಕಾಲದಲ್ಲಿ ಕಾಯಕಿಣಿಯವರದೂ ಬಹು ದೊಡ್ಡ ಹೆಸರು. ಇವರು ಸನ್ ೧೮೯೦ ರಲ್ಲಿ ಸ್ಥಾಪಿತವಾದ, ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಥಮ ಅಧ್ಯಕ್ಷರಾಗಿ ಚುನಾಯಿತರಾಗಿ ಸನ್ ೧೯೦೧ರ ವರೆಗೆ ಆ ಕೆಲಸ ನಿರ್ವಹಿಸಿದರು. ಇವರ ನೇತೃತ್ವದಲ್ಲಿ ಸಂಘವು ಬಹು ವಿಧವಾದ ಶಕ್ತಿಯನ್ನು ಪಡೆಯಿತು.

ಇವರು ಉತ್ತರ ಕನ್ನಡ ಜಿಲ್ಲೆಯ ಮುರುಡೇಶ್ವರದಲ್ಲಿ[೨] ಸನ್ ೧೮೪೧ರಂದು ಜನಿಸಿದರು. ಮುಂಬಯಿ ಹೈಕೋರ್ಟಿನ ದ್ವಿತೀಯ ಭಾಷಾಂತರಕಾರರಾಗಿ ಕೆಲಸ ಮಾಡಿದರು. ಶ್ರೀಯುತರು ಕನ್ನಡ, ಇಂಗ್ಲಿಷು, ತೆಲುಗು, ತಮಿಳು, ಮಲೆಯಾಳಮ್, ಗುಜರಾಥಿ ಭಾಷೆಗಳನ್ನಲ್ಲದೆ, ಜರ್ಮನ್ ಭಾಷೆಯನ್ನೂ ಬಲ್ಲವರಾಗಿದ್ದರು.

---

೧ ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರು : ೧೯೬೯ : ಪು. ೩೩.

೨ ಇವರು ಕಾಯುಕಿಣಿಯವರೆಂದೂ ಹೇಳಲಾಗಿದೆ. (' ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರು '– ಪು. ೮೩ ನೋಡಿ)

ಶ್ರೀಯುತರದು ಬಹುವಿಧ ವ್ಯಕ್ತಿತ್ವ. ಮುಂಬಯಿ ವಿಶ್ವವಿದ್ಯಾಲಯದ 'ಫೆಲೊ' ಆಗಿದ್ದರಲ್ಲದೆ, ಕಾಯ್ದೆ ವಿಷಯದ ಸಿಂಡಿಕೇಟ್ ಸದಸ್ಯರೂ, ಕನ್ನಡ ಪರೀಕ್ಷಕರೂ, ರಾಯಲ್ ಏಶಿಯಾಟಿಕ್ ಸೊಸಾಯಿಟಿ, ಪ್ರಾರ್ಥನಾ ಸಮಾಜ, ಥಿಯಾಸಾಫಿಕಲ್ ಸೊಸಾಯಿಟಿ ಮೊದಲಾದವುಗಳ ಉತ್ಸಾಹಿ ಕಾರ್ಯಕರ್ತರೂ ಆಗಿದ್ದರು. ಉತ್ತರ ಕರ್ನಾಟಕದಲ್ಲಿ 'ಶ್ಯಾಮರಾಲ ವಿಠ್ಠಲ' ಎಂಬ ಹೆಸರಿನ ಬ್ಯಾಂಕುಗಳೂ ಇದ್ದವು.

ಶ್ರೀಯುತರು 'ವಿಧವಾಪುನರ್ವಿವಾಹ', 'ಸಮುದ್ರಪರ್ಯಟನ'–[೧] ಮೊದಲಾದವುಗಳ ಬಗೆಗೆ ಬರೆದುದಲ್ಲದೆ, ವೆಂಕಟಾಧ್ವರಿಯು ಸಂಸ್ಕೃತದಲ್ಲಿ ಬರೆದ 'ವಿಶ್ವಗುಣಾದರ್ಶ'ವನ್ನು ಕನ್ನಡದಲ್ಲಿ ಭಾಷಾಂತರಿಸಿದ್ದಾರೆ. ಈ ಭಾಷಾಂತರ ನಮಗೆ ನೋಡಲು ದೊರೆಯಲಿಲ್ಲ. 'ವಿಶ್ವಗುಣಾದರ್ಶ'ವನ್ನು ಭಾವದರ್ಪಣ ಎಂಬ ಟೀಕೆಯಿಂದ ಕೂಡಿಕೊಂಡ ಕನ್ನಡಾನುವಾದವನ್ನು ಸುಬ್ಬಾಶಾಸ್ತ್ರಿ ಎಂಬವರು ಸನ್ ೧೮೮೮ರಲ್ಲಿ ಮುಂಬಯಿಯ ಕರ್ನಾಟಕ ಛಾಪಖಾನೆಯಲ್ಲಿ ಮುದ್ರಿಸಿ ಪ್ರಕಟಿಸಿದರು. ಪುಟಸಂಖ್ಯೆ ೩೭೧. ಕಾವ್ಯದ ಕೊನೆಗೆ ''ಇತಿ ಶ್ರೀಮತ್ಕೌಶಿಕಕುಲಪಯಃಪಾರಾವಾರಚಂದ್ರೇಣ ಮೀನಾಕ್ಷೀಜಾನೇರ್ಯಜ್ಞೇಶ್ವರವಿದ್ವಚ್ಚೂಡಾಮಣೆರಾತ್ಮಜೇನ– ಸಚ್ಚಿದಾನಂದ ಪರಬ್ರಹ್ಮ ಸ್ವರೂಪ ಶ್ರೀಕೃಷ್ಣಪಾದಕಮಲ ಧ್ಯಾನಾಮೃತಪಾನ ಪ್ರಮುದಿತಹೃದಯೇನ ಮಧುರಸುಬ್ಬಾಶಾಸ್ತ್ರಿಣಾ– ಸಂಗ್ರಹತಃ ಕೃತಂ ಭಾವದರ್ಪಣಂ''– ಎಂದು ಬರುತ್ತದೆ. ಕಾಯಂಕಿಣಿಯವರು ಬರೆದ 'ಪರಾಶರೀಯ ಧರ್ಮಶಾಸ್ತ್ರ'ವು ಸುಪ್ರಸಿದ್ಧ ಸಂಶೋಧಕರಾದ ಭಂಡಾರಕರರ ಅನೇಕ ವಿಧಾನಗಳನ್ನು ಖಂಡಿಸುತ್ತದೆ.

ಎರಗಂಬಳಿ ಸಿದ್ಧವೀರಲಿಂಗ :

ಇವರು 'ಕೈವಲ್ಯ ಪದ್ಧತಿ'ಯನ್ನು ಯಕ್ಷಗಾನದಲ್ಲಿ ಬರೆದಿದ್ದಾರೆ. ಪುಟ ಸಂಖ್ಯೆ ೭೦.

ಹುಬ್ಬಳ್ಳಿಯ ಚೊಕ್ಕ ಸಿದ್ಧೇಶನ ಶಿಷ್ಯ :

ಗ್ರಂಥಕರ್ತರ ಹೆಸರು ತಿಳಿಯುವಂತಿಲ್ಲ. ಇವರು 'ದ್ರೌಪತೀ ಮಾನಹರಣ ದುಂದುಮೆ' ಎಂಬುದನ್ನು ಬರೆದಿದ್ದಾರೆ. ಇದರಲ್ಲಿ ೬೭ ಪದ್ಯಗಳಿವೆ.

ಧಾರವಾಡ ವರೇಳವರ್ಣನ ದುಂದುಮೆ :

ಲೇಖಕರಾರೆಂಬುದು ತಿಳಿಯಲಿಲ್ಲ. ಧಾರವಾಡದಲ್ಲಿರುವ ವರೇಳ (?) ರೆಂಬವರ ಬಗೆಗೆ ಇರುವ ೩೩ ಪದ್ಯಗಳ ಪುಸ್ತಕ.

ನುಲಿಯ ಚಂದಯ್ಯ ಶಾರದ :

ಲೇಖಕರು ಗೊತ್ತಾಗಲಿಲ್ಲ. ನುಲಿಯ ಚಂದಯ್ಯನ ಪ್ರಶಂಸೆಯನ್ನೊಳಗೊಂಡ ೨೫ ಪದ್ಯಗಳಿವೆ.

ಪಲ್ಲಿ ಸರಟಾದಿ ಶಕುನ :

ಲೇಖಕರು ಗೊತ್ತಾಗಲಿಲ್ಲ. ೩೦ ಪುಟದ ಪುಸ್ತಕ.

---

೧ ಶ್ರೀಯುತರ ಸೋದರಳಿಯರಾಗಿದ್ದ ನಾರಾಯಣ ಗಣೇಶ ಚಂದಾವರಕರರು ಪರದೇಶಕ್ಕೆ ಹೋದಾಗ ಅವರ ಬಗೆಗೆ ಮಾಡಿದ ಟೀಕೆಗಳಿಗೆ ಉತ್ತರರೂಪವಾಗಿ ಇದನ್ನು ಬರೆದಂತೆ ಹೇಳಿದೆ.

ತಂತುಪುರದ ಸಾಲಿ ಚೆನ್ನಬಸವ :

ಇವರು ಧಾರವಾಡದವರು. 'ವೀರಸಂಗಯ್ಯನ ದುಂದುಮೆ' ಎಂಬುದನ್ನು ಬರೆದಿದ್ದಾರೆ. ಇದೊಂದು ಪ್ರಣಯ ಕಥೆ.

ಚತುರ ಬಸವಲಿಂಗ :

ಈ ಗ್ರಂಥದ ೩೭ ನೆಯ ಪುಟದಲ್ಲಿ ಬಸವಪುರಾಣವನ್ನು ಪ್ರಶಂಸಿಸಿದವರಲ್ಲಿ ಆಂಧ್ರಭಾಷೆಯ ಸೋಮನಾಥಕವಿ, ಕನ್ನಡ ಭೀಮಕವಿ, ಸಂಸ್ಕೃತದಲ್ಲಿ ಬರೆದ ಅಂಕರ ಆರಾಧ್ಯ, ವಸ್ತುಕದಲ್ಲಿ ಬರೆದ ಬಾಲಚಂದ್ರ, ನಗರದ ಶಿವಕವಿ ಮತ್ತು ಯತಿಪುರ ಸಿದ್ಧೇಶನ ಅನುಗ್ರಹದಿಂದ ಬರೆದ ಚತುರ ಬಸವ ಲಿಂಗರ ಹೆಸರನ್ನು ಹೇಳುತ್ತಾರೆ.

ಶಿವಧ್ಯಾನ ರಾಮಯ್ಯ :

ಗಂಗಾಧರ ಭಾರತಿ ಸ್ವಾಮಿಯವರ ಪ್ರಮುಖ ಶಿಷ್ಯರಾದ ಶಿವಧ್ಯಾನ ರಾಮಯ್ಯನವರು 'ಶಿವಭಕ್ತಿಸಾರ' ಎಂಬ ೧೦೭ ಷಟ್ಪದಿಗಳುಳ್ಳ ಗ್ರಂಥವನ್ನು ರಚಿಸಿದ್ದಾರೆ.

ಚೆನ್ನಬಸವ ಮತ್ತು ಬಸವಲಿಂಗ :

ಇವರಿಬ್ಬರೂ ಕೂಡಿ ಮರಾಠಿಯಲ್ಲಿ 'ಸಿಂಹಾಸನ ಬತ್ತೀಸ ಪುತ್ಥಳಿ' ಕಥೆಯನ್ನು ರಚಿಸಿದ್ದಾರೆ.

ಕಾಮದಹನ ರತಿಪ್ರಲಾಪ ದುಂದುಮೆ :

ಇದರಲ್ಲಿ ೨೭ ಪದ್ಯಗಳಿವೆ. ಗ್ರಂಥಕರ್ತರ ಹೆಸರು ತಿಳಿಯಲಿಲ್ಲ.

ಜಲಶಿಲ್ಪಿ ಪಲ್ಲಿಕಾಶಕುನಾದಿ ಶಕುನ :

೩೨ ಪುಟಗಳ ಗದ್ಯ ಪುಸ್ತಕ.

ದೀಪಕಲಿ ಚರಿತ್ರ :

ಚೋಳಮಂಡಲದ ಕಾಂಚೀಪುರದ ದೀಪಕಲಿಯ ಚರಿತ್ರ.

ಧನಂಜಯ ನಿಘಂಟಿಕ :

ಧನಂಜಯದ ೨೦೨ ಸೂತ್ರಗಳಿಗೆ ಕನ್ನಡ ವ್ಯಾಖ್ಯಾನ.

ಇವಲ್ಲದೆ, 'ವೇತಾಳ ಪಂಚವಿಂಶಕಥಾ', 'ವೈದ್ಯಶಾಸ್ತ್ರ', ಮರಾಠಿಯಿಂದ ಅನುವಾದಿತವಾದ 'ವೈದ್ಯಾಮೃತ', 'ಶಿವಪಾರಿಜಾತ', ಗುರುಗೋವಿಂದರೇಂಬವರಿಗೆ ಅರ್ಪಿತವಾದ 'ಶಿವರಾತ್ರಿ ಕಥಾ', 'ಸುದಾಮ ಚರಿತ್ರ' 'ಸುಬೋಧಾಮೃತ' 'ಸುಭಾಷಿತ ಗ್ರಂಥಮಾಲಾ' 'ಹುಬ್ಬಳ್ಳಿ ವರ್ಣನ ದುಂದುಮೆ' –ಮೊದಲಾದ ಕೃತಿಗಳು ಡಾ. ಕಿಟೆಲ್ ಅವರಿಗೆ ದೊರಕಿದ್ದು, ಇವುಗಳ ಗ್ರಂಥಕರ್ತರು ಯಾರೆಂಬ ಬಗೆಗೆ ತಿಳಿದು ಬರುವದಿಲ್ಲ.

'ಹುಬ್ಬಳ್ಳಿ ಮರ್ಕಟ ದುಂದುಮೆ' ಎಂಬ ಒಂದು ದುಂದುಮೆಕಾವ್ಯ ದೊರಕುತ್ತಿದ್ದು, ಇದನ್ನು ಧಾರವಾಡದ ತರಬೆಟ್ಟಾಲಿ ಮಠದ ಶಿಷ್ಯನೂ, ಚೆನ್ನವೃಷಭರೇಂಬವರ ಮಗನೂ ಬರೆದಂತೆ ಹೇಳಿದೆ. ಕವಿ ತನ್ನ ಹೆಸರನ್ನು ಹೇಳಿಕೊಂಡಿಲ್ಲ. ಈ ದುಂದುಮೆಯು ಶಾಂತಕವಿಗಳ ವಿಭಾಗದಲ್ಲಿ ನಾವು ಉದ್ಧರಿಸಿದ ದುಂದುಮೆಯೇ ಆಗಿರಬೇಕು. ಇದರ ಬಗೆಗೆ ಡಾ. ಕಿಟೆಲ್‌ರವರು "5 stupid verses" ಎಂದು ಅಭಿಪ್ರಾಯ ಪಡುತ್ತಾರೆ. (ಅದೇ : ಪು. LXXXI)

ಕವಿಚರಿತಕಾರರು ಈಗಾಗಲೇ ವರ್ಣಿತರಾಗಿರುವ ಕವಿಗಳಲ್ಲದೆ, ಈ ಕೆಳಗಿನ ಕವಿಗಳ ಉಲ್ಲೇಖವನ್ನೂ ಮಾಡುತ್ತಾರೆ :

ಶಾಂತಕವಿ :

ಇವರ ಕೃತಿಗಳಲ್ಲಿ 'ಮೌನೇಶ್ವರ ಬಾಲಲೀಲೆ' ಎಂಬ ಗ್ರಂಥವನ್ನು ಉಲ್ಲೇಖಿಸಲಾಗಿದೆ. ಈ ಶಾಂತಕವಿಯು ಬಾಳಾಚಾರ್ಯ ಸಕ್ಕರಿ ಅವರೇ ಹೌದೋ ಅಲ್ಲವೋ ತಿಳಿಯುವಂತಿಲ್ಲ.

ಗಿರಿಭಟ್ಟರ ತಮ್ಮಯ್ಯ :

ಹೆಸರು ಉತ್ತರ ಕರ್ನಾಟಕದ ಹೆಸರಿನ ಹಾಗೆ ಕಂಡು ಬರುತ್ತದೆ. ನಿಶ್ಚಿತ ಸ್ಥಳ ತಿಳಿಯಲಿಲ್ಲ. ದ್ರೌಪದೀ ಸ್ವಯಂವರ, ಸುಧನ್ವ ಚರಿತ್ರೆ, ಅಷ್ಟೋತ್ತರಶತಕ, ಮಂಗಳಗೀತಾವಳಿ— ಇವು ಇವರ ಕೃತಿಗಳು.

ಗುರುಲಿಂಗಸ್ವಾಮಿ :

ಧಾರವಾಡದ ಎರಡೆತ್ತಿನ ಮಠದ ಸ್ವಾಮಿಯಾಗಿದ್ದರು. ಕೃತಿ : ಲಿಂಗಾಯತ ಮತೋತ್ಪತ್ತಿ ನಿರ್ಣಯ.

ಇಷ್ಟು ಹೇಳಿ, ಕೊನೆಗೆ ಕವಿಚರಿತೆಕಾರರು "ಈ ರೀತಿಯಾಗಿ ಗ್ರಂಥಕರ್ತೃಗಳ ಮತ್ತು ಗ್ರಂಥಗಳ ಹೆಸರುಗಳನ್ನು ತಿಳಿದ ಮಟ್ಟಿಗೆ ಬರೆದಿದ್ದೇವೆ. ಈ ಪಟ್ಟಿಯಲ್ಲಿ ಲೋಪಗಳಿವೆ ಎಂಬುದರಲ್ಲಿ ಸಂದೇಹ ವಿಲ್ಲ" ಎಂದು ಹೇಳುತ್ತಾರೆ.

ಈ ಲೇಖಕರಲ್ಲದೆ, ಈ ಕೆಳಗಿನ ಲೇಖಕರ ಬಗೆಗೂ ಹೇಳಬಹುದು :[೧]

ಅಚ್ಯುತ ಕೃಷ್ಣರಾವ ಹುಯಿಲಗೋಳ (೧೮೯೫- ?) :

ಇವರು ಗದುಗಿನವರು. ಹುಯಿಲಗೋಳ ಕಳಸಾಪುರದ ಜಹಗೀರದಾರರು. ಇವರ ಹಲ— ಕವನಗಳು 'ಪ್ರಭಾತ'ದಲ್ಲಿ ಪ್ರಕಟವಾಗಿವೆ. ಶ್ರೀಯುತರು ಬರೆದ 'ನರಗುಂದ ಮುತ್ತಿಗೆ' ಎಂಬ ನಾಟಕ ತುಂಬಾ ಪ್ರಭಾವಶಾಲಿಯಾಗಿ ಪ್ರಯುಕ್ತವಾಗುತ್ತಿತ್ತು. ಶ್ರೀಯುತರು ಧಾರ್ಮಿಕರು. ಇವರು ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಅಕ್ಕಮಹಾದೇವಿ, ಅಚಲಪಥ, ಗೀತಾಪ್ರತಿಪದಾರ್ಥ

---

೧ ಈ ಭಾಗದಲ್ಲಿಯ ವಿಷಯ ಸಂಗ್ರಹವನ್ನು ಕೆಲಮಟ್ಟಿಗೆ 'ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ' ಎಂಬ ಗ್ರಂಥದಿಂದ ಮಾಡಲಾಗಿದೆ.

ಚಂದ್ರಿಕೆ ಟೀಕೆ, ಗುಣಶೋಧನ, ನರಗುಂದ ಮುತ್ತಿಗೆ, ಪ್ರೇಮಪತಾಕಾ, ಬ್ರಹ್ಮಕುಮಾರಿ, ಮಹಾರಥಿ ಕರ್ಣ, ಮಹಾರಥಿ ಭೀಷ್ಮ, ವೈಕುಂಠಕ್ಕೆ ಮುತ್ತಿಗೆ, ಶ್ರೀಕೃಷ್ಣಗೀತಾಮೃತ, ಸಂಭಾಜಿಯ ಚರಿತ್ರೆ, ಸ್ವಾತಂತ್ರ್ಯ ಸಂಗ್ರಾಮ, ಸೈರಂಧ್ರಿ– ಇತ್ಯಾದಿ.

ಅಣ್ಣಾಚಾರ್ಯ ಭೀಮಾಚಾರ್ಯ ಮುಂಡಗಿ (೧೮೬೭ – ೧೯೩೨) :

ಇವರ ಊರು ಬೆಳಗಾವಿ. ಕೊಣ್ಣೂರ ನಾಟಕ ಕಂಪನಿಯಲ್ಲಿ ನಟರಾಗಿದ್ದರಲ್ಲದೆ, ಹಲಸಿಗಿಯಲ್ಲಿ ಒಂದು ಸ್ವತಂತ್ರ ನಾಟಕ ಕಂಪನಿಯನ್ನೂ ತೆರೆದಿದ್ದರು. ಇವರು ೮–೧೦ ನಾಟಕಗಳನ್ನು ರಚಿಸಿದ್ದರಂತೆ. ಆದರೆ, ಅವು ಮುದ್ರಿತವಾದಂತೆ ಕಾಣುವದಿಲ್ಲ.

ಅನಂತ ಅಣ್ಣಾಜಿ ಮುಂಟಗಣೀಕರ (ಸು. ೧೮೬೫) :

ಊರು ಹೊಳೆಮಣ್ಣೂರು. ಕನ್ನಡ ಶಾಲಾ ಶಿಕ್ಷಕರು. ಕೃತಿಗಳು : ಶ್ರೀ ಸ್ವಾಮಿ ವಿವೇಕಾನಂದ (೧೯೧೨), ನೀತಿಶತಕ (೧೯೧೬), ಕರ್ಮವೀರ ಗಾಂಧೀಜಿಯವರು (೧೯೧೮).

ಕಬೀರದಾಸ (೧೮೭೦) :

ಸ್ಥಳ ಹುಬ್ಬಳ್ಳಿ. ಸಿದ್ಧಾರೂಢರ ಆಶ್ರಿತರು. ಮಠದಲ್ಲಿ ಪ್ರತಿದಿನ ವೇದಾಂತ ಪ್ರವಚನ ಮಾಡುತ್ತಿದ್ದರು. ಇವರು ಬರೆದ 'ಸಿದ್ಧಾರೂಢ ಕಥಾಮೃತ'ವು ಶಿ. ಲ. ಚಂದರಗಿಯವರಿಂದ ಮರಾಠಿಯಲ್ಲಿ ಅನುವಾದ ಹೊಂದಿದೆ.

ಕಲ್ಲೋಳ ಗಣೇಶ ಬಿಜಾಪುರಕರ (೧೮೮೩ – ?) :

ಅಥಣಿ ತಾಲೂಕಿನ ಕಾಗವಾಡದವರು. ಜನನ : ೧೬–೮–೧೮೮೩. ಧಾರವಾಡದ ಟ್ರೇನಿಂಗ್ ಕಾಲೇಜಿನಲ್ಲಿ ಶಿಕ್ಷಣ ಹೊಂದಿ ಕನ್ನಡ ಶಾಲಾ ಶಿಕ್ಷಕರಾಗಿ ಕೆಲಸ ಮಾಡಿದರು. ಲೋಕಮಾನ್ಯ ಟಿಳಕರು ಮಂಡಾಲೆಯ ಶಿಕ್ಷೆಯ ಪ್ರಸಂಗದಲ್ಲಿ ಕೋರ್ಟಿನಲ್ಲಿತ್ತ ಹೇಳಿಕೆಯ ವಿಷಯವಾಗಿ ಮರಾಠಿಯಲ್ಲಿ ಕವನವೊಂದನ್ನು ಬರೆದು ಬಹುಮಾನ ಪಡೆದರು.

ಕೃತಿಗಳು :

ಚಿದಂಬರ ದೀಕ್ಷಿತರ ಗುರುತು (೧೯೦೭), ಚಿದಂಬರ ಅದ್ಭುತ ಕಥಾಮಾಲೆ (೧೯೦೭), ನಿಬಂಧ ಹೇಗೆ ಬರೆಯಬೇಕು ? (೧೯೦೭); ಏಳನೇ ಎಡ್ವರ್ಡ ಬಾದಶಹರು (೧೯೦೯); ಪಂಚಮ ಜಾರ್ಜರು (೧೯೧೧); ಜೈನ ಬಾಲಬೋಧೆ (೧೯೧೩); ಈಶ ಸಂಕಲ್ಪ (೧೯೧೪); ಚಿದಂಬರ ವಿಜಯ (೧೯೧೯); ವಿವಿಧ ಕಲಾಶತಕ (೧೯೧೪); ಅಂಕಲಗಿ ಅಡಿವೆಪ್ಪನವರ ಚರಿತ್ರೆ (೧೯೨೫); ಸಾಂಗಲಿ ಸಂಸ್ಥಾನದ ಚರಿತ್ರೆ (೧೯೩೫) –ಇತ್ಯಾದಿ.

ಕಾಶೀನಾಥ ಬಾಪೂಜಿ ಪಾಠಕ (೧೮೫೦–೧೯೩೩) :

ಸುಪ್ರಸಿದ್ಧ ವಿದ್ವಾಂಸರು. ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದರು. ನೃಪತುಂಗನ 'ಕವಿರಾಜಮಾರ್ಗ'ವನ್ನು ಸಂಪಾದಿಸಿದರು. (೧೮೯೮).

ಹಾನಗಲ್ಲ ಕುಮಾರಸ್ವಾಮಿಗಳು (೧೮೬೭–೧೯೩೦) :

ಅಧ್ಯಾತ್ಮ ಪ್ರಪಂಚದಲ್ಲಿ ಶ್ರೀ ಸ್ವಾಮಿಗಳದು ಬಹು ದೊಡ್ಡದಾದ ಹೆಸರು. ಇವರು ಧಾರ

ವಾಡ ಜಿಲ್ಲಾ ರಾಣೆಬೆನ್ನೂರ ತಾಲೂಕಿನ ಜೋಯಿಸರ ಹರಳಳ್ಳಿಯಲ್ಲಿ ಸನ್ ೧೮೬೭ರಲ್ಲಿ ಜನ್ಮವೆತ್ತಿದರು. ಪೂರ್ವಾಶ್ರಮದ ಹೆಸರು ಹಾಲಯ್ಯ. ತಂದೆಯವರ ಹೆಸರು ಬಸವಯ್ಯ. ಹಾಲಯ್ಯನವರು ಮುಲಕೀಪರೀಕ್ಷೆ ಪಾಸಾದ ನಂತರ ಕೆಲಕಾಲ ಉಪಾಧ್ಯಾಯರಾಗಿ ಕೆಲಸ ಮಾಡಿ, ತದನಂತರ ಹುಬ್ಬಳ್ಳಿಯ ಸಿದ್ಧಾರೂಢರ ಹತ್ತಿರ ವೇದಾಂತ ವ್ಯಾಸಂಗ ಮಾಡಿದರು. ಎಳಂದೂರ ಬಸವಲಿಂಗ ಸ್ವಾಮಿಗಳ ಹತ್ತಿರವೂ ಅಧ್ಯಯನ ಮಾಡಿ, ನಂತರ ಹಾನಗಲ್ಲಮಠದ ಪೀಠಾಧಿಕಾರಿಗಳಾದರು.

ಸಂಸ್ಕೃತದ ಮಹತ್ವವನ್ನರಿತ ಸ್ವಾಮಿಗಳು ನಾಡಿನ ತುಂಬೆಲ್ಲ ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಿದರು. ವೀರಶೈವ ವಿದ್ಯಾವರ್ಧಕ ಸಂಘದ ಧನಸಂಗ್ರಹಕ್ಕೆ ಬೆಂಬಲಿಗರಾಗಿ ನಿಂತರು. ಎಲ್ಲಕ್ಕೂ ಹೆಚ್ಚು, ವೀರಶೈವ ಮಠಪೀಠಗಳನ್ನು ಏರಬೇಕಾದ ವಟುಗಳಿಗೆ ನೀತಿ, ಧರ್ಮಗಳ ಹಿನ್ನೆಲೆ ಅವಶ್ಯವೆಂಬುದನ್ನು ಅರಿತು, ಬಾದಾಮಿ ತಾಲೂಕಿನಲ್ಲಿ ಶಿವಯೋಗ ಮಂದಿರವನ್ನು ಸನ್ ೧೯೦೮ರಲ್ಲಿ ಸ್ಥಾಪಿಸಿದರು. ಇಂದಿಗೂ ಶಿವಯೋಗ ಮಂದಿರ ಪ್ರೇಕ್ಷಣೀಯ ಸ್ಥಳವಾಗಿದೆ. ಶ್ರೀ ಸ್ವಾಮಿಗಳು ದಿನಾಂಕ ೧೯-೨-೧೯೩೦ ರಂದು ದೇಹವಿಟ್ಟರು.

೧೯೨೬ ರಲ್ಲಿ ಪ್ರಕಟವಾದ ಬಸವಭಾಷೆ, ೧೯೨೮ ರಲ್ಲಿ ಪ್ರಕಟವಾದ ನೀತಿಸಂಗ್ರಹ, ಭಜನಾವಳಿಗಳು ಸ್ವಾಮಿಗಳ ರಚನೆಗಳಾಗಿವೆ.

ಕೃಷ್ಣ ನೀಲಕಂಠ ಕರಗುಪ್ಪಿಕರ (೧೮೮೭-೧೯೨೨) :

ಸ್ಥಳ ಬೆಳಗಾವಿಯ ಹತ್ತಿರದ ಕಣಬರಗಿ; ೧೯೦೬ ರಲ್ಲಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಪಾಸಾಗಿ ಬೆಳಗಾವಿಯಲ್ಲಿ ಶಿಕ್ಷಕರಾದರು. ಅಸಹಕಾರ ಮೀಮಾಂಸೆ (೧೯೨೦), ಮಹಾತ್ಮಾ ಗಾಂಧಿಯವರ ಚರಿತ್ರೆ- ಇವರ ರಚನೆಗಳು.

ಕೃಷ್ಣರಾವ ಬಾಳಾಜಿ ಬೆಂಡಿಗೇರಿ (? - ೧೯೧೫) :

ಧಾರವಾಡದಲ್ಲಿ ಶಿಕ್ಷಕರಾಗಿದ್ದರು. ೧೯೦೫ ರಿಂದ ಕಾರವಾರ ಹೈಸ್ಕೂಲಿನ ಮುಖ್ಯಾಧ್ಯಾಪಕರಾಗಿ ಕೆಲಸ ಮಾಡಿದರು.

ಇವರು ಜೈಮಿನಿ ಭಾರತದ ೧೧-೧೩ ಸಂಧಿಗಳಿಗೆ ಇಂಗ್ಲಿಷಿನಲ್ಲಿ ಅರ್ಥವನ್ನು ಬರೆದಿದ್ದಾರೆ. ಇದು ಸನ್ ೧೮೯೩ ರಿಂದ ೧೯೦೨ರ ವರೆಗೆ ಧಾರಾವಾಹಿಯಾಗಿ ಪ್ರಕಟವಾಯಿತು.

ಕೃಷ್ಣರಾವ ಲಿ. ಬಾದಾಮಿ (೧೮೫೦-೧೯೩೬) :

ಮೂಲತಃ ವಿಜಾಪುರ ಜಿಲ್ಲೆಯ ಶ್ರೀಯುತರು ಮೈಸೂರು ಸಂಸ್ಥಾನದಲ್ಲಿ ಅಸಿಸ್ಟಂಟ ಕಮಿಶನರ್ ಹುದ್ದೆಯಲ್ಲಿದ್ದರು. 'ಬಾಲಮಿತ್ರ' ಎಂಬ ಹೆಸರಿನಿಂದ ಬರೆಯುತ್ತಿದ್ದರು. 'ಬಾಲಭಾರತ', 'ಬಾಲರಾಮಾಯಣ' -ಇವರ ಪುಸ್ತಕಗಳು. ಮರಣ : ೧೧-೭-೧೯೩೬.

ಗುರುರಾವ ರಾಘವೇಂದ್ರ ಮುಮುದಾಪುರ (ಸು. ೧೮೬೫) :

ಧಾರವಾಡದವರು. 'ಲೋಕಬಂಧು' ಪತ್ರಿಕೆಯ ಸಂಪಾದಕರಾಗಿದ್ದರು. (೧೯೧೫).

ಆರೋಗ್ಯವಿದ್ಯಾ (೧೮೮೯), ಕೃಷ್ಣಾಕುಮಾರಿ, ದ್ರೌಪದೀ ವಸ್ತ್ರಾಪಹರಣ, ಪ್ರಮೀಲಾ ಸ್ವಯಂವರ, ಪುಂಡಲೀಕ ನಾಟಕ, ಶೃಂಗಾರಪದಗಳ ಸಂಗ್ರಹವು ಭಾಗ ೧ (ಸಂಪಾದಿತ) (೧೮೮೯), ಸಂಗೀತ ಬಲಸಿಂಹತಾರಾ, ಸಂಗೀತ ಇಂದ್ರಸಭಾ (೧೮೯೩), ಸಂಗೀತ ಇಂದಿರಾ- ಇತ್ಯಾದಿ ಇವರ ಕೃತಿಗಳು.

ಗುರುಲಿಂಗವ್ವಾ ಸಿದ್ಧಮಲ್ಲಪ್ಪಾ ಬಾಗೇವಾಡಿ (ಸು. ೧೮೭೦) :

ಬೆಳಗಾವಿಯ ಹತ್ತಿರದ ಹೊಸಟ್ಟಿಯವರು; ಇವರು ಕೀರ್ತನ ಹೇಳುವುದರಲ್ಲಿ ಪ್ರಸಿದ್ಧರಾಗಿದ್ದು, 'ಕೀರ್ತನ ಸರಸ್ವತಿ' ಎಂಬ ಪ್ರಶಸ್ತಿಯನ್ನು ಪಡೆದಿದ್ದರು. 'ಪದ್ಯರೂಪಾವಲಿ' (೧೯೧೬) ಮತ್ತು 'ಶಿರಸಂಗಿ ದೇಸಾಯರ ಚರಿತ್ರೆ' –ಇವರು ಬರೆದ ಪುಸ್ತಕಗಳು. ಈ ಕಾಲದಲ್ಲಿ ಹಲಕೆಲವು ಸ್ತ್ರೀಯರೂ ಕೃತಿರಚನೆ ಮಾಡಿದರೆಂಬುದು ಗಮನಾರ್ಹವಾಗಿದೆ.

ಗುಂಡಭಟ್ಟ ಬೆಳಗುಪ್ಪಿ (ಸು. ೧೮೬೦) :

ಸ್ಥಳ : ಧಾರವಾಡ ಜಿಲ್ಲಾ ಹೊಂಬಳ; 'ಗಣೇಶೋಪಾಸಕ' ಎಂಬ ಹೆಸರಿನಿಂದ ಇವರ ಹಲವು ಕವನಗಳು 'ಪ್ರಭಾತ'ದಲ್ಲಿ ಪ್ರಕಟವಾಗಿವೆ.

'ರಂಭಾ–ಶುಕ ಸಂವಾದವು' (೧೮೯೯); 'ಮಹಾಸಾಧು ಶ್ರೀ ತುಕಾರಾಮಾಖ್ಯಾನವು' (೧೯೧೦) ಇವರು ಬರೆದ ಕೃತಿಗಳು.

ಕುಲಗೋಡ ತಮ್ಮಣ್ಣ (ಸು. ೧೮೬೦) :

ಇವರು ಬೆಳಗಾವಿ ಜಿಲ್ಲೆಯ ಕುಲಗೋಡ ಗ್ರಾಮದ ಕುಲಕರ್ಣಿಯಾಗಿದ್ದರು. ಅಪರಾಳ ತಮ್ಮಣ್ಣನ ಶ್ರೀಕೃಷ್ಣ ಪಾರಿಜಾತವು ತುಂಬಾ ಜನಪ್ರಿಯವಾಗುವಂತೆ ಇವರು ಪರಿಶ್ರಮಿಸಿದರು. 'ಹೆಪ್ಪು ಮುರಿಯದ ಮೊಸರ', 'ಕ್ಷೀರ ಸಾಗರ ತವರ ಮನೆ ದ್ವಾರಕಿ ನಮ್ಮತ್ತೇ ಮನೆ' ಮೊದಲಾದ ಹಾಡುಗಳನ್ನು ಇವರು ಪಾರಿಜಾತಕ್ಕೆ ಸೇರಿಸಿದರು. 'ಕ್ಷೀರ ಸಾಗರ ತವರ ಮನೆ' ಗೀತದ ಮಾಧುರ್ಯಕ್ಕೆ ಮನಸೋತು ಅಣ್ಣಾ ಕಿರ್ಲೋಸ್ಕರ ಅವರು ತಮ್ಮ 'ಸಂಗೀತ ಸೌಭದ್ರ'ದಲ್ಲಿ 'ಪಾಂಡುನೃಪತಿ ಜನಕಜಯಾ ಮಾತಾ ಕುಂತಿ ಯದುತನಯಾ' ಎಂಬ ಹಾಡನ್ನು ಸೇರಿಸಿದರು. ಇದು ಒಂದು ಕಾಲಕ್ಕೆ ತುಂಬಾ ಜನಪ್ರಿಯವಾದ ಹಾಡಾಗಿತ್ತು.

ತಮ್ಮಣ್ಣನವರು ತಮ್ಮ ಪಾರಿಜಾತ ಮೇಳದಲ್ಲಿ ಮೊದಲ ಬಾರಿಗೆ ಸ್ತ್ರೀಯರು ಪಾತ್ರವಹಿಸುವಂತೆ ಮಾಡಿದರು. ಅವರ ಪ್ರೇಯಸಿ ಸತ್ಯಭಾಮೆಯ ಪಾತ್ರವನ್ನು ಅಭಿನಯಿಸಿದಾಗ ನಾಟಕವು ತುಂಬಾ ರಂಗಿನಲ್ಲಿದ್ದಾಗ ಎಲ್ಲೋ ತಾಳ ತಪ್ಪಿದಳಂತೆ. ಕ್ರುದ್ಧರಾದ ತಮ್ಮಣ್ಣನವರು ತಮ್ಮ ಕೈಯಲ್ಲಿಯ ತಾಳವನ್ನು ಅವಳೆಡೆಗೆ ಒಗೆದಾಗ, ಅದು ಅವಳ ತಲೆಗೆ ತಗುಲಿ ಅವಳು ಪ್ರಾಣಬಿಟ್ಟಳಂತೆ. ಇದರಿಂದ ಅವರಿಗೆ ತುರಂಗವಾಸವಾಗಿ ಮುಂದೆ ಫಾಶೀ ಶಿಕ್ಷೆ ವಿಧಿಸಲ್ಪಟ್ಟಿತು. ಆಗಿನ ಇಂಗ್ಲಿಷ್ ನ್ಯಾಯಾಧೀಶನು ಇವರ ಕೊನೆಯಾಸೆ ಏನೆಂದು ಕೇಳಿದಾಗ ಪಾರಿಜಾತವನ್ನು ಅವನಿಗೆ ತೋರಿಸಿ ತಾಳ ತಪ್ಪಿದಾಗ ಆಗುವ ಆಭಾಸವನ್ನು ಮನದಟ್ಟು ಮಾಡಿಕೊಟ್ಟರಂತೆ. ಇಂದಿಗೂ ಗೋಕಾಕ ಸೆರೆ ಮನೆಯ ಕೋಣೆಯಲ್ಲಿ ತಮ್ಮಣ್ಣನ ಹಸ್ತಾಕ್ಷರಗಳಿವೆಯೆಂದು ಹೇಳುತ್ತಾರೆ.

ಗೂಳಪ್ಪ ಕೊಟ್ರಪ್ಪ ಅರಳಿ (ಸು. ೧೮೬೦) :

ಧಾರವಾಡ ಜಿಲ್ಲೆಯ ಗಜೇಂದ್ರಗಡದವರು. ಕನ್ನಡ ಶಾಲಾ ಉಪಾಧ್ಯಾಯರು. 'ಕನ್ನಡ ಶೌರ್ಯಸಾಗರ' ಎಂಬ ಗ್ರಂಥವನ್ನು ಬರೆದಿದ್ದಾರೆ.

ಗೋವಿಂದ ವೆಂಕಟೇಶ ದೇಶಪಾಂಡೆ (೧೮೬೦-೧೯೪೫) :

ಸವಣೂರವರು. ಡಿಸೆಂಬರ ೧೮೬೦ ರಂದು ಜನಿಸಿದರು. ಇವರೂ ಧಾರವಾಡದ ಟ್ರೇನಿಂಗ್

ಕಾಲೇಜದಿಂದ ಪಾಸಾಗಿ, ಕನ್ನಡ ಶಾಲಾ ಮುಖ್ಯಾಧ್ಯಾಪಕರೆಂದು ಕೆಲಸ ಮಾಡಿ, ಸನ್ ೧೯೧೬ ರಲ್ಲಿ ನಿವೃತ್ತರಾದರು. ಇವರು ಬರೆದ 'ಕಾರಡಗಿ ಮಹಾಲ ದೇಶಪಾಂಡೆಯವರ ಚರಿತ್ರೆ' ಎಂಬ ಪುಸ್ತಕವು ಸನ್ ೧೯೪೦ರಲ್ಲಿ ಪ್ರಕಟವಾಯಿತು.

ದತ್ತಾತ್ರಯ ಕೃಷ್ಣ ಭಾರದ್ವಾಜ (೧೮೯೧-೧೯೫೩) :

ಧಾರವಾಡ ಜಿಲ್ಲಾ ಕುಂದಗೋಳದಲ್ಲಿ ದಿನಾಂಕ ೨೯-೧೨-೧೮೯೧ ರಂದು ಜನಿಸಿದ ಶ್ರೀಯುತರು ಬೆಂಗಳೂರು, ಧಾರವಾಡ, ಪುಣೆ, ಕಾಶಿ ಮತ್ತು ಮದ್ರಾಸಗಳಲ್ಲಿ ವ್ಯಾಸಂಗ ಮಾಡಿದರು. 'ವೈದ್ಯಗುರು' ಎಂಬ ಪ್ರಶಸ್ತಿಯನ್ನು ಪಡೆದು, ಆನಿಬೆಸೆಂಟ ಮತ್ತು ಡಿ. ಕೆ. ತೆಲಂಗರಂಥ ಮುಖಂಡರ ನೇತೃತ್ವದಲ್ಲಿ ಕೆಲಸ ಮಾಡಿದರು. ಸನ್ ೧೯೧೫ ರಲ್ಲಿ 'ಒಕ್ಕಲಿಗ' ಮಾಸಪತ್ರಿಕೆಯ ಉಪಸಂಪಾದಕರಾಗಿ ಕೆಲಸ ಮಾಡಿದರು. 'ಭಕ್ತಿ ಸಂದೇಶ' (೧೯೧೮-೧೯೧೯), 'ತಿಲಕ ಸಂದೇಶ' (೧೯೨೦-೨೧); 'ಅಸಹಕಾರ', 'ರಂಗಭೂಮಿ' ಮೊದಲಾದ ಪತ್ರಿಕೆಗಳ ಸಂಪಾದಕರಾಗಿಯೂ ಕೆಲಸ ಮಾಡಿದರು. ಶ್ರೀಯುತರು ರಾಜಕೀಯ ಕ್ಷೇತ್ರದಲ್ಲಿಯೂ ಕೆಲಸ ಮಾಡಿದರು.

ಶ್ರೀಯುತರು ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಅವುಗಳಲ್ಲಿ- 'ಅಮೃತಸರ ಪಟ್ಟಣ', 'ತಿಲಕ ಮಹಾರಾಜರ ಜೀವನ ಚರಿತ್ರೆ', 'ಶ್ರೀಕೃಷ್ಣ ಜನ್ಮಾಷ್ಟಮಿ', 'ಹಿಂದೀ ಸ್ವರಾಜ್ಯ' -ಮೊದಲಾದ ಪುಸ್ತಕಗಳು ಸನ್ ೧೯೨೦ ಅಥವಾ ಅದಕ್ಕೂ ಮೊದಲು ಪ್ರಕಟವಾಗಿವೆ.

ದಾಮೋದರ ಸದಾಶಿವ ದೇಶಪಾಂಡೆ (೧೮೯೭-೧೯೧೯) :

ಇವರು ಗೋಕಾಕ ತಾಲೂಕಿನ ಮದವಾಲದವರು. 'ಸಾಮಾಜಿಕ ಸಾವಿತ್ರಿ' (೧೯೧೭), 'ಸಂಗೀತ ರಾಕ್ಷಸೀ ಮಹತ್ವಾಕಾಂಕ್ಷೆ', 'ಸಮಾಜ ರಹಸ್ಯ' (೧೯೧೮), 'ಆತ್ಮೋದ್ಧಾರ', 'ಸತೀಧರ್ಮ' (೧೯೧೯) -ಮೊದಲಾದುವು ಇವರು ಬರೆದ ಪುಸ್ತಕಗಳು.

ದೇವೇಂದ್ರಗೌಡ ಶಿವನಗೌಡ ಪಾಟೀಲ (೧೮೪೫-೧೯೫೧) :

ರಾಮದುರ್ಗ ತಾಲೂಕು ಮೆಣಸಿಗಿಯವರು. ಅಲ್ಲಿಯ ಪೋಲೀಸ್ ಪಾಟೀಲರಾಗಿದ್ದರು. ಉಪಾಧ್ಯಾಯರಾಗಿಯೂ ಕೆಲಸ ಮಾಡಿದರು. 'ದೇವಾಂಗ ಪುರಾಣ'. 'ನಾಗಲಿಂಗ ಪುರಾಣ'ಗಳು ಇವರು ಬರೆದ ಗ್ರಂಥಗಳು.

ನಾರಾಯಣರಾವ ಕೃಷ್ಣರಾವ ಹುಯಿಲಗೋಳ (೧೮೮೪-೧೯೭೧) :

ಗದಗು ಹುಟ್ಟೂರು. ಪುಣೆಯಲ್ಲಿ ಬಿ. ಎ. ಮುಗಿಸಿದ ನಂತರ ಧಾರವಾಡದಲ್ಲಿ ಕೆಲಕಾಲ ಅಧ್ಯಾಪಕರಾಗಿ ದುಡಿದು ಮುಂದೆ ಕಾಯ್ದೆ ಅಭ್ಯಾಸ ಮಾಡಿ ಗದಗಿನಲ್ಲಿ ವಕೀಲಿ ಕೆಲಸ ಮಾಡಿದರು. ಕವಿಗಳೂ ನಾಟಕಕಾರರೂ ಆದ ಹುಯಿಲಗೋಳರು ಕನ್ನಡ ರಂಗಭೂಮಿಯ ಸುಧಾರಣೆಗಾಗಿಯೂ ದುಡಿದರು. ಕರ್ನಾಟಕದ ನಾಡಗೀತೆಯಾದ "ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು" ಅವರ ಹೆಸರನ್ನು ಅಜರಾಮರವಾಗಿಸಿದೆ. ಅವರು ಬರೆದ ಪ್ರಕಟಿತ ಗ್ರಂಥಗಳೆಂದರೆ ಧರ್ಮರಹಸ್ಯ (೧೯೧೯) ಶಿಕ್ಷಣ ಸಂಭ್ರಮ (೧೯೨೦) ಮತ್ತು ನಂತರ ಪ್ರಕಟವಾದ ಪತಿತೋದ್ಧಾರ ನಾಟಕ ಇತ್ಯಾದಿ. ಇನ್ನೂ ಅನೇಕ ಅಪ್ರಕಟಿತ ಗ್ರಂಥಗಳೂ ಇವೆ.

ಗಣಪಕ್ಕ ಸಣ್ಣಭಡತಿ (೧೮೭೦ - ೧೯೩೦) :

ಇವರು ಗೋಕರ್ಣದವರು. ತಂದೆಯ ಹೆಸರು ಗಣಪಭಟ್ಟ. ತಾಯಿ ಪಾರ್ವತಿ. ಗಂಡನ

ಹೆಸರು ನಾಗಪ್ಪ ಸಣ್ಣಭಟ್ಟ. ಇವರು ಗೋಕರ್ಣ ಮಹಾತ್ಮೆ, ಕೃಷ್ಣನ ಹುಟ್ಟು, ರುಕ್ಮಿಣೀ ಪರಿಣಯ, ಕೃಷ್ಣಲೀಲೆ, ಯಕ್ಷಗಾನ, ಅನಂತಕಥೆಯ ಹಾಡು, ತುಳಸೀಮಹಾತ್ಮೆ ಮೊದಲಾದವುಗಳನ್ನು ಬರೆದಿದ್ದಾರೆ. ರುಕ್ಮಿಣೀ ಪರಿಣಯದಲ್ಲಿ ಈ ಪದ್ಯ ಬರುತ್ತದೆ :

ಪತಿವ್ರತೆಯರೊಳುತ್ತಮಳೆಂದೆನಿಸು
ಪತಿಸೇವೆಯಲಿ ನೀ ಪ್ರೌಢಳೆಂದೆನಿಸು
ಸುತರ ಪಡೆದು ಮತಿವಂತಳೆಂದೆನಿಸು
ಸತಿ ಸರಸ್ವತಿ ಆರುಂಧತಿ ಕಟಾಕ್ಷದಿ
ಮತಿವಂತೆಯಾಗಿ ಬಾಳು.

ಇವರು ಬರೆದ 'ಕೃಷ್ಣಲೀಲೆ' ಯಕ್ಷಗಾನ ಕೃತಿ. ಯಕ್ಷಗಾನಗಳನ್ನು ಸಾಮಾನ್ಯವಾಗಿ ಹೆಣ್ಣು ಮಕ್ಕಳು ಬರೆದಿರುವದಿಲ್ಲ. ಅದರಲ್ಲಿಯ ಕೆಲವು ಸಾಲುಗಳು ಇವು :

ಮೆರೆಯುತಿಹ ವರಪರೀಕ್ಷಿತ ದೊರೆಗೆ ಶುಕಮುನಿ
ಹರುಷದಿಂದಲಿ ಭರದಿ ನಲಿಯುತ ಭಾಗವತವನು ಅರುಹುತಿರಲು
ಎರಗಿ ಪ್ರಶ್ನಿಸಿದನುತ್ತರೆಯ ಕುವರನು ವರಮುನೀಂದ್ರನ
ಹರಿಯು ಧರೆಗವತರಿಸಿ ದುರುಳರ ಕ್ಷಣದೊಳು ಸಂಹರಿಸಿದ ಚರಿತವನು

ಎಣ್ಣೆಮುಡಿ ವೆಂಕಟರಮಣಯ್ಯ (?) :

"ಈತನು (ಸಾರಸ್ವತ) ಬ್ರಾಹ್ಮಣ ಕವಿ; ಇವನ ಸ್ಥಳ ಉತ್ತರ ಕನ್ನಡ ಜಿಲ್ಲಾ ಕುಮಟಾ. ಗ್ರಂಥ– "ರುಕ್ಮಿಣೀ ಸ್ವಯಂವರ" (ಕರ್ನಾಟಕ ಕವಿ ಚರಿತೆ– ಪು. ೨೨೨). ಇವರು ಶಿರಾಲಿಯಲ್ಲಿ ಶಾಲಾಧ್ಯಾಪಕರಾಗಿದ್ದರು. ಚಿತ್ರಾಪುರ ಮಠದ ಕೇಶವಾನಂದರನ್ನು ಸ್ಮರಿಸುತ್ತಾರೆ. ಹಾಡು, ಜ್ಯೋತಿಷ್ಯಾದಿ ಗ್ರಂಥಗಳು, ದೇವೀ ಮಹಾತ್ಮೆ ಮತ್ತು ಯಕ್ಷಗಾನಗಳನ್ನು ಬರೆದಿದ್ದಾರೆ. ರುಕ್ಮಿಣೀ ಸ್ವಯಂವರ, ಭೀಷ್ಮಪರ್ವಗಳೂ ಇವರಿಂದ ರಚಿತವಾಗಿವೆ.

ನಾರಾಯಣ ಶ್ರೀನಿವಾಸ ರಾಜಪುರೋಹಿತ (೧೮೮೭ – ೧೯೫೩) :

ಹುಟ್ಟಿದ್ದು ಹಾವೇರಿ ತಾಲೂಕಿನ ಅಗಡಿಯಲ್ಲಿ. ಬಡತನದಲ್ಲಿ ಬೆಳೆದು ಧಾರವಾಡದ ರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಕರಾಗಿ ದುಡಿದರು. ರಾಷ್ಟ್ರೀಯಶಾಲೆ ನಿಂತು ಹೋದ ನಂತರ ಸಂಶೋಧನೆಯಲ್ಲಿಯೇ ತಮ್ಮ ಆಯುಷ್ಯವನ್ನು ಕಳೆದರು. ರಕ್ಕಸತಂಗಡಿಯ ಕದನ, ಚಿಪಳೂನ, ತಾಳಗುಂದ, ಕರಹಟ ಅಗ್ರಹಾರಗಳ ಬಗೆಗೆ ಸಂಶೋಧನೆ ಮಾಡಿದರು. ಕರ್ನಾಟಕ ಇತಿಹಾಸದ ಬಗೆಗೆ ವಿಪುಲ ವಿಷಯ ಸಂಗ್ರಹ ಮಾಡಿದರು. ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧನ ಮಂಡಲದ ಸ್ಥಾಪನೆಗಾಗಿ ದುಡಿದರು. ವಿಪರೀತ ಬಡತನದಲ್ಲಿ ಬೆಳೆದ ಇವರಿಗೆ ಷಷ್ಟ್ಯಬ್ದಿ ಸಮಾರಂಭದಲ್ಲಿ ಸಾರ್ವಜನಿಕನಿಧಿ ಅರ್ಪಿಸಲಾಯಿತು. ನಿಧಿ ಸಂಗ್ರಹ ಕಾಲದಲ್ಲಿ ಶ್ರೀ ರಾಜಪುರೋಹಿತರು ಸಾಲದ ಹಣ ಕೊಡದೆ ಬಳಲುತ್ತಿರುವ ಸಂಗತಿ ತಿಳಿಯಿತು. ದಾನಧರ್ಮಪದ್ಧತಿ (೧೯೦೦) ಮೊದಲಾದ ಗ್ರಂಥಗಳಲ್ಲದೆ ಕರ್ನಾಟಕತ್ವವನ್ನು ಮೆರೆಯುವ ನೂರಾರು ಅಮೌಲ್ಯ ಸಂಶೋಧನಾತ್ಮಕ ಪ್ರಬಂಧಗಳನ್ನು ಬರೆದಿದ್ದಾರೆ.

ಪನ್ನೀ ಲಕ್ಷ್ಮೀಬಾಯಿ (೧೮೮೦) :

ಇವರು ಗೋಕರ್ಣದವರು. ತಂದೆಯ ಹೆಸರು ರಾಮಭಟ್ಟ. ವೈದಿಕ ಮನೆತನ. ಚಿಕ್ಕಂದಿ

ನಲ್ಲಿಯೇ ಮದುವೆಯಾಗಿ ಬಾಲವಿಧವೆಯಾಗಿದ್ದರು. ಅನೇಕ ದೇವರ ಹಾಡುಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಇದೊಂದು :

ಲಂಬೋದರನ ವರಚರಣಕಂಜಗಳ ನೆನೆದೂ
ತಂಬಿಟ್ಟು ಚಿಗಳಿಗಳ ಮುಂದೆ ಸಮರ್ಪಿಸುವೆ
ಇಂಪಾದ ಕಡಲೆ ಕದಳಿ ತೆಂಗಿನಕಾಯಿಯಿರಿಸುತ್ತ
ಬೆಂಬಿಡದೆ ಮತಿಯ ಕೊಡೆಂದು ನಲಿದಾಡುತ್ತ
ಚೆಂದನ್ನಾರುತಿಯ ಬೆಳಗೀರೆ.

ವೆಂಕಟರಮಣ ಪರಮೇಶ್ವರ ಹೆಗಡೆ, ಬಾಡ (೧೮೮೭ – ೧೯೩೧) :

ಇವರು ಕಾಗಾಲ ಮತ್ತು ಅಘನಾಶಿನಿಯಲ್ಲಿ ತಮ್ಮ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಮುಗಿಸಿ, ಧಾರವಾಡದ ಟ್ರೇನಿಂಗ ಕಾಲೇಜನ್ನು ಸೇರಿದರು. ಕುಮಟಾ, ಕಾರವಾರ, ಅಂಕೋಲೆಗಳಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಇವರು ಅನೇಕ ಕವನಗಳನ್ನು ಬರೆದಿದ್ದಾರೆ. ಇದು ಹವ್ಯಕ ಭಾಷೆಯಲ್ಲಿರುವ ಬಾಡ ಜಾತ್ರೆಯ ಬಗೆಗಿನ ಕವನ :

"ಬನ್ನಿ ಹೋಪೊ ! ನೋಡುತ್ತ ಬೆರಗಪ್ಪೊ ! ಬೇಕಾದದ್ದನ್ನೆಲ್ಲ ತಪ್ಪೊ ! ಹಿಂತಿರಿಗಿದೊ ನಾವ್ ಬಪ್ಪೊ !"

ಪಟ್ಟಣದ ಒಯ್ಯಾರಕ್ಕೆ ಸೋತ ಹಳ್ಳಿಗರ ಬಗೆಗಿನ ಕವನವಿದು :

ಅಣ್ಣಯ್ಯಾ ಹಳ್ಳಿಗೆ ಬರಲಾರೆನು ॥ ಪ ॥

ಹಂಚಿನ ಮನೆಯಿಲ್ಲ ಮಿಂಚು ಮಾರ್ಗಗಳಿಲ್ಲ
ಬೆಂಚು ಖುರ್ಚಿಯು ಸಿಗದಯ್ಯ – ಅಣ್ಣಯ್ಯಾ
ಅಜ್ಜನ ಕಾಲದ ಸಜ್ಜನು ಬಿಡರಯ್ಯ
ಗೊಜ್ಜು ಬಜ್ಜಿಯನುಂಬರೈ – ಅಣ್ಣಯ್ಯಾ

ಇವೂ ಅಲ್ಲದೆ, ಇವರು 'ಈಶ್ವರಾಜ್ಞಾಪಾಲನ' ಎಂಬ ಗದ್ಯ ಪುಸ್ತಕವನ್ನೂ, 'ಭಜನ ಪದ್ಯ ಮಾಲಾ' ಎಂಬುದನ್ನೂ ಬರೆದಿದ್ದಾರೆ. ಇವರ 'ಸ್ಯಮಂತಕೋಪಾಖ್ಯಾನ' ಅಚ್ಚಾಗಿಲ್ಲ. ಇದೂ ಅಲ್ಲದೆ, ಮದಾಲಸಾ ಪರಿಣಯ, ಸಾವಿತ್ರಿ, ಧ್ರುವಚರಿತ್ರ ಮೊದಲಾದ ನಾಟಕಗಳನ್ನೂ ಬರೆದದ್ದಾಗಿ ಹೇಳುತ್ತಾರೆ. ಹೊನ್ನಮ್ಮನ ಹದಿಬದೆಯ ಧರ್ಮವನ್ನೂ ಹೊಸಗನ್ನಡಕ್ಕೆ ಅನುವಾದ ಮಾಡಿದ್ದರಂತೆ. ಇವರು ಸನ್ ೧೯೩೧ ರಲ್ಲಿ ಕರುಳಿನ ಆಮಾಂಶ ರೋಗದಿಂದ ಮೃತಿ ಹೊಂದಿದರು.

ಹಲಸಿನಹಳ್ಳಿ ನರಸಿಂಹಶಾಸ್ತ್ರಿಗಳು (?) :

ಕಾರವಾರ ಜಿಲ್ಲೆಯವರು. ಇವರು ರುಕ್ಮಾಂಗದ ಚರಿತ್ರೆ ಎಂಬ ಪುಸ್ತಕವನ್ನು ಬರೆದಿದ್ದಾರೆ. ಇದರಲ್ಲಿ ಏಕಾದಶೀ ಮಹತ್ವ ವರ್ಣಿತವಾಗಿದೆ. ಇದು ಭಕ್ತಿಪ್ರಧಾನವಾದ ಕೃತಿ.

ಕುಮಟಾ ನಾರಾಯಣ ಆಚಾರ್ಯರು (೧೮೭೪ – ೧೯೪೨) :

ಶ್ರೀಯುತರ ಊರು ಕುಮಟೆ. ೧೪–೯–೧೮೭೪ ರಂದು ಹುಟ್ಟಿದರು. ಇವರ ತಂದೆಯ ಹೆಸರು ನಾರಾಯಣ. ತಾಯಿ ಲಕ್ಷ್ಮಿ. ಯಾರೋ ಒಬ್ಬರು ಲೌಕಿಕರಿಗೇಕೆ ವೈದಿಕದ ಕುತೂಹಲ

ಎಂದದ್ದಕ್ಕಾಗಿ, ಆ ವಿದ್ಯೆಯನ್ನು ಕಲಿತೇಬಿಡಬೇಕೆಂದು ಗೋಕರ್ಣದ ಪರ್ತಗಾಳಿ ಜೀವೋತ್ತಮ ಮಠಕ್ಕೆ ಹೋಗಿ, ಅಲ್ಲಿಯ ಇಂದಿರಾಕಾಂತತೀರ್ಥ ಸ್ವಾಮಿಗಳಲ್ಲಿ ವಿದ್ಯೆಯನ್ನು ಕಲಿತರು. ಶ್ರೀಗಳು ಇವರಿಗೆ 'ಆಚಾರ್ಯ' ಪದವಿಯನ್ನು ಕೊಟ್ಟು ನಾರಾಯಣ ಆಚಾರ್ಯ ಎಂದು ಕರೆದರು.

ಗ್ರಂಥಪರಿಶೋಧನೆಯಲ್ಲಿ ಇವರದು ನಿಶಿತವಾದ ಬುದ್ಧಿ. ನಿಪ್ಪಾಣಿಯ ಶ್ರೀ ಮೂಡಕಟ್ಟಿ ರಾಘವೇಂದ್ರರಾಯರು ಕನ್ನಡದಲ್ಲಿ ಭಾಷಾಂತರಿಸಿದ ಜ್ಞಾನೇಶ್ವರಿಯನ್ನು ಕುಮಠೆಯ ನಾರಾಯಣ ಆಚಾರ್ಯರಿಗೆ ತೋರಿಸು ಎಂದು ಸ್ವಪ್ನವಾಯಿತಂತೆ. ಆ ಪ್ರಕಾರ ಅವರು ತಮ್ಮ ಗ್ರಂಥವನ್ನು ಇವರಿಗೆ ತೋರಿಸಿದರು. ಈ ಬಗೆಗೆ ರಾಘವೇಂದ್ರರಾಯರು ತಮ್ಮ ಕವನದಲ್ಲಿ ಹೀಗೆ ಹೇಳಿದ್ದಾರೆ :

ಎನುತಲೀ ಪರಿಯಾಜ್ಞೆಯಾಯಿತು
ಕನಸಿನಲಿ ನಾನೇನ ಹೇಳಲಿ
ಕನಸಿನಲಿ ನಾ ಕೇಳ್ದೆ ಯಾರಿಹನೀತ ಪಂಡಿತನು
ಎನುತಲಾಗುತ್ತರವು ದೊರಕಿತು
ಕನಸಿನಲೆ ಕುಮಟಾಪುರೀಭವ
ನೆನುತ ಮಹದಾಶ್ಚರ್ಯವಾಯಿತು ಹುಡುಕಿಸಿದೆನವನ

ವೇದ ವೇದಾಂತಾರ್ಥ ವ್ಯಾಕರ
ಣಾದಿ ಶಾಸ್ತ್ರಾಭಿಜ್ಞ ಪಂಡಿತ
ನಾದ ಕುಮಟಾಪುರಿಯ ಶ್ರೀ ನಾರಾಯಣಾಚಾರ್ಯ
ವೋದದಿಂದೀ ಕೃತಿಯ ತಾಂ ಪರಿ
ಶೋಧಿಸಿದನೈ ಪ್ರೇಮಪೂರ್ವಕ
ಸಾಧಿಸಿದನವನಿದನು ಭಗವತ್ಪ್ರೇರಣಾ ಬಲದಿ

–ಇವರು 'ಸುನೀತಿ ಭಾಗವತ' ಎಂಬ ಪುಸ್ತಕವನ್ನೂ ಬರೆದಿರುವರಂತೆ.

ನಾಡಕರ್ಣಿ ಅಣ್ಣಪ್ಪಯ್ಯ (?) :

ಕವಿಚರಿತಕಾರರು ಇವರ ಉಲ್ಲೇಖವನ್ನು ಮಾಡುತ್ತಾರೆ. (ಕವಿಚರಿತೆ, ಪು. ೨೩೨). ಇವರಿಗೆ ಶೀಘ್ರಕವಿ ಎಂಬ ಬಿರುದಿತ್ತಂತೆ. ಇವರು ಬರೆದ ಕೃತಿಗಳು ದೊರಕಲಿಲ್ಲ.

ಡೆಂಗಾ ದೇವನಾಯ್ಕ (೧೮೮೧–೧೯೬೭) :

ಇವರ ಹುಟ್ಟೂರು ಅಂಕೋಲೆ. ನಾಮಧಾರಿ ಜಾತಿಯವರು. ತಂದೆಯ ಹೆಸರು ದೇವ ನಾಯ್ಕ. ಇವರನ್ನು ರಾವಸಾಹೇಬ ಹೊಸಬಯ್ಯ ನಾಯ್ಕರು ತಮ್ಮ ಮನೆಯಲ್ಲಿಟ್ಟುಕೊಂಡು ಎಲ್ಲ ಶಿಕ್ಷಣದ ಏರ್ಪಾಡು ಮಾಡಿದರು. ಇವರೂ ೩ನೇ ವರ್ಷದ ಟ್ರೇಂಡ ಶಿಕ್ಷಕರು. ಇವರು 'ತಿರುಪತಿ ವೆಂಕಟೇಶ ಮಹಾತ್ಮೆ'ಯನ್ನು ಬರೆದದ್ದಲ್ಲದೆ, 'ನಾಮಧಾರಿ ಜಾತಿ ಚರಿತ್ರೆ' ಎಂಬ ಚಿಕ್ಕ ಗ್ರಂಥವನ್ನು ಭೋಗ ಷಟ್ಪದಿಯಲ್ಲಿ ಬರೆದಿದ್ದಾರೆ. ಇದರಲ್ಲಿ ೭೮ ಪದ್ಯಗಳಿವೆ. ಪ್ರಾರಂಭದ ಗಣ ಪತಿ ಸ್ತೋತ್ರದಲ್ಲಿ–

ಪರಮಪೂಜ್ಯ ಸಿದ್ಧಿ ಗಣಪ
ಸುರರ ಮೇಳದಿಂದ ಮೆರೆವ

ತ್ವರಿತದಿಂದ ಭಜಕ ಜನರ ಪೊರೆಯುತಿರುವನು
ಸರಸದಿಂದಲವನ ನೆನೆದು
ಮರೆತನಾಮಧಾರಿ ಜಾತಿ
ಚರಿತಸಾರ ದೇವಜಾತ ಬರೆಯತೊಡಗಿದ ॥

–ಎಂದು ಹೇಳಿದ್ದಾರೆ.

ನಾಯಕ ವಂಶ, ವಿಜಯನಗರದರಸ ರಾಮಭೂಪನ ಕಾಲದಿಂದ ಈ ಹೆಸರನ್ನು ಪಡೆದಂತೆ ಈ ಗ್ರಂಥದಲ್ಲಿ ಹೇಳಲಾಗಿದೆ :

ನಾಯಕನಿವ ಸಕಲ ಪಡೆಗೆ
ನಾಯಕನಿವ ಸಕಲ ಧನಕೆ
ನಾಯಕನಿವ ಸಕಲ ಪುಣ್ಯ ಕಾರ್ಯವೃಂದಕೆ
ನಾಯಕನಿವ ಸಕಲ ಕಲೆಗೆ
ನಾಯಕನಿವ ವಿಬುಧ ಜನಕೆ
ನಾಯಕನಿವ ದಾತೃಜನರ ಧನದ ಸಂಘಕೆ ॥

ಸ್ವಾಮಿ ವಿಷ್ಣುಪೀಠದಲ್ಲಿ
ನೇಮದಿಂದ ಮೆರೆವ ಗುರುವು
ಪ್ರೇಮದಿಂದ ಬಂದನೊಮ್ಮೆ ವಿಜಯನಗರಕೆ
ಭಾಮೆ ಕುಲಕೆ ಕನಕೆ ಕುಲಕೆ
ಭೂಮಿಕೋಶಪಾಲ ಕುಲಕೆ
ನಾಮಧಾರಿ ಹೆಸರನಿಟ್ಟು ವರವ ಕೊಟ್ಟನು ॥

ಇದರಿಂದ 'ನಾಮಧಾರಿ' ಎಂಬ ಹೆಸರು ಈ ಕುಲಕ್ಕೆ ಬಂದಿತು. ಈ ಗ್ರಂಥವನ್ನು ಶ್ರೀಯುತರು ಮುಂಬಯಿಯಲ್ಲಿದ್ದಾಗ ಬರೆದು ಮುಗಿಸಿದಂತೆ ಕಾಣುತ್ತದೆ :

ಬರೆದು ಮುಗಿದ ವಾರ ಶುಕ್ರ
ಸರಸ ಶುದ್ಧ ಅಷ್ಟಮಿಯಲಿ
ವರುಷ ಸರ್ವಜಿತುವು ಮಾಸ ಅಧಿಕಶ್ರಾವಣ
ನರರ ಶ್ರೇಷ್ಠನಗರವಾಗಿ
ಮೆರೆಯುತಿದ್ದ ಬೊಂಬೆ ಪುರದಿ
ವರದೆ ಸರ್ವಮಂಗಲೆಯನು ನುತಿಸಿ ಬರೆದೆನು ॥

ಸೂರ್ಯನಾರಾಯಣ ಹೆಗಡೆ (೧೯೦೦–೧೯೫೧) :

ಇವರ ಊರು ಕಡತೋಕಾ. ತಂದೆಯ ಹೆಸರು ನಾರಾಯಣ, ತಾಯಿಯ ಹೆಸು ಪರಮೇಶ್ವರಿ. ಇವರೂ ಧಾರವಾಡದ ಟ್ರೇನಿಂಗ್ ಕಾಲೇಜದಿಂದಲೇ ಉತ್ತೀರ್ಣರಾದವರು. ಇವರು 'ಭಗವಾನ್ ಶ್ರೀ ಶಂಕರಾಚಾರ್ಯ', 'ಉತ್ತರ ಕನ್ನಡ ಜಿಲ್ಲೆಯ ಇತಿಹಾಸ', 'ಸುಖಾಸುಖ ವಿಚಾರ', 'ಅಮೇರಿಕೆಯ ಶೋಧ', 'ಹಿಂದೂ ಧರ್ಮದ ವಿಶ್ವವ್ಯಾಪಕತೆ' –ಮೊದಲಾದವುಗಳನ್ನು ಬರೆದಿದ್ದಾರೆ.

ಸುಬ್ಬಣ್ಣಾಚಾರ್ಯ ಗೋಪಾಳಾಚಾರ್ಯ ಅಡಬಡ್ಡಿ (೧೮೮೪–೧೯೩೬) :

ಊರು ಧಾರವಾಡ ಜಿಲ್ಲಾ ಕಲಘಟಗಿ. ಚಿಕ್ಕಂದಿನಲ್ಲಿ ಕಕ್ಕಂದಿರಾದ ಭೀಮಾಜಿ ಶ್ರೀನಿವಾಸ ಅಡಬಡ್ಡಿಯವರಲ್ಲಿ ಕಲಿತು, ಧಾರವಾಡದ ಟ್ರೇನಿಂಗ್ ಕಾಲೇಜಿನಲ್ಲಿ ತಮ್ಮ ಅಭ್ಯಾಸವನ್ನು ಪೂರೈಸಿದರು. ೧೯೦೭ರಲ್ಲಿ ಶಿಕ್ಷಕ ವೃತ್ತಿಯನ್ನು ಪ್ರಾರಂಭಿಸಿದರು. ಇವರು ಬರೆದ 'ವಿವೇಕ ವಿಜಯ' ಎಂಬ ನಾಟಕವನ್ನು ಶಿರಹಟ್ಟಿ ವೆಂಕೋಬರಾಯರ ನಾಟಕ ಕಂಪನಿಯವರು ಸನ್ ೧೯೧೧ ರಲ್ಲಿ ಮೈಸೂರಿನ ಶ್ರೀಕೃಷ್ಣರಾಜ ವೊಡೆಯರರ ಸಮ್ಮುಖದಲ್ಲಿ ಆಡಿ ತೋರಿಸಿದರು. ಇವರಿಗೆ 'ಅಭಿಜ್ಞ ಕವಿ' ಎಂಬ ಬಿರುದಿತ್ತು.

ಶ್ರೀಯುತರು 'ಕುಮುದಿನಿ', 'ವಿಕ್ರಮ ವಿಜಯ', 'ವಿವೇಕ ವಿಜಯ', 'ಸ್ಯಮಂತಕಮಣಿ', ಹಾಗೂ 'ಶಿಬಿಚಕ್ರವರ್ತಿ' –ಮೊದಲಾದ ಗ್ರಂಥಗಳನ್ನು ಬರೆದಿದ್ದಾರೆ.

ಹಣಮಂತ ನರಸಿಂಹ ರಾಮದುರ್ಗಕರ (ಸು. ೧೮೮೪) :

ಧಾರವಾಡದ ಟ್ರೇನಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಇವರು 'ರಾಸಕ್ರೀಡಾ ನಾಟಕವು' ಎಂಬ ೫೨ ಪುಟದ ಚಿಕ್ಕ ನಾಟಕವನ್ನು ಬರೆದಿದ್ದಾರೆ. ಧಾರವಾಡದ ಜ್ಞಾನವರ್ಧಕ ಛಾಪಖಾನೆಯಲ್ಲಿ ೧೮೮೪ ರಲ್ಲಿ ಇದು ಮುದ್ರಿತವಾಗಿದೆ.

ಇವರ ಈ ಚಿಕ್ಕ ಪುಸ್ತಕದ ಸೂಚನೆಯಲ್ಲಿ ಹೇಳಿದ ಮಾತುಗಳು ಇವರ ಗ್ರಂಥ ರಚನೆಯ ಉದ್ದೇಶವನ್ನೂ, ಬರವಣಿಗೆಯ ಶೈಲಿಯನ್ನೂ ವ್ಯಕ್ತಪಡಿಸುವದರಿಂದ, ಅದರಲ್ಲಿಯ ಕೆಲ ಭಾಗವನ್ನು ಉದ್ಧರಿಸಬಹುದು :

"ಈಗ ನಮ್ಮ ದೇಶದಲ್ಲಿ ಅನೇಕ ಪ್ರಕಾರದ ವಿದ್ಯಾ, ಸುಧಾರಣೂಕಿಯ ಕೆಲಸವು ನಡೆದಿರುತ್ತದೆ. ಕಾರಣಾ ಎಷ್ಟೋ ವಿದ್ವಾನ್ ಜನರು ಅನೇಕ ಪ್ರಕಾರದ ಗ್ರಂಥಗಳನ್ನು ರಚಿಸಿ ಈ ಭೂಮಂಡಲದ ಮೇಲೆ ಹೆಸರುವಾಸಿಗಳಾದರು. ಅದನ್ನು ನಿರೀಕ್ಷಿಸಿ, ನನ್ನ ಮನದಲ್ಲಿಯೂ, ಏನಾದರೂ ಒಂದು ಗ್ರಂಥವನ್ನು ಮಾಡಬೇಕು ಅಂತ ಇಚ್ಛಾ ಉತ್ಪನ್ನವಾಯಿತು. ಪರಂತು ಗ್ರಂಥವನ್ನು ಮಾಡಬೇಕಾದರೆ ವಿದ್ವತ್ತಾ ಹಾಂಗು ಜನರ ಸಹಾಯವು ಅವಶ್ಯಬೇಕು ಅಂತ ಕಲ್ಪಿಸಿದರೆ ನನ್ನ ಮನದೊಳಗಿನಪೇಕ್ಷೆಯು ಪೂರ್ಣವಾಗುವದು ದುರ್ಲಭವೇ ಎಂದು ತಿಳಿದು .... ನನ್ನಲ್ಲಿರುವ ಅಲ್ಪ ಜ್ಞಾನವೂ, ಲೋಕ ಸಹಾಯ ನಾಸ್ತಿಕ್ಯವೂ, ಸಬಲ ವಿಘ್ನಗಳಾಗಿ ನನ್ನನ್ನು ಅಧೈರ್ಯಗೊಳಿಸಿದಾಗ್ಯೂ, ಅವುಗಳ ಕಡೆಗೆ ಲಕ್ಷ್ಯ ಕೊಡದೆ ಯಥಾಮತಿ ಪ್ರಕಾರ ಈ ಚಿಕ್ಕ ರಾಸಕ್ರೀಡಾ ಎಂಬ ನಾಟಕವನ್ನುಂಟು ಮಾಡಿದ್ದೇನೆ."

ಮೇಲಿನ ಉದ್ದೇಶ ವಿವರಣೆಯನ್ನೂ, ಕೃತಿಯನ್ನೂ ನೋಡಿದಾಗ, ಲೇಖಕರಲ್ಲಿ ವ್ಯುತ್ಪತ್ತಿಗಿಂತ ಮನೋಧೈರ್ಯವೇ ಹೆಚ್ಚಾಗಿತ್ತೆಂದು ಹೇಳಬೇಕು. ಶೈಲಿಯ ದೋಷ, ಗ್ರಾಮ್ಯಪ್ರಯೋಗ, ನಾಟಕದ ತುಂಬಾ ಕಂಡುಬರುತ್ತವೆ.

ರಾಮರಾವ ನರಗುಂದಕರ (ಸು. ೧೮೮೫) :

ಕರ್ನಾಟಕ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳಾಗಿದ್ದರು. ವೃತ್ತಿಯಿಂದ ವಕೀಲರು. ಡೆಕ್ಕನ್ ಆ್ಯಗ್ರಿಕಲ್ಚರಿಸ್ಟ್ಸ ರಿಲೀಫ ಆ್ಯಕ್ಟನ್ನು (ಒಕ್ಕಲಿಗರ ಹಿತದ ಸಲುವಾಗಿ ಮಾಡಿದ ಕಾಯ್ದೆ) ಮುಂಬೈ ಹಾಯಕೋರ್ಟಿನ ಠರಾವುಗಳ ಸಹಿತ, ಸುಲಭ ಕನ್ನಡ ಭಾಷೆಯಲ್ಲಿ ಶ್ರೀ ಲಕ್ಷ್ಮಣರಾವ

ಮುತಾಲಿಕ ದೇಸಾಯಿಯವರೊಡಗೂಡಿ ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಶ್ರೀಯುತರು ಕನ್ನಡಾಭಿಮಾನಿಗಳು. ದಿವಂಗತ ಆಲೂರ ವೆಂಕಟರಾಯರ ಸಹಕಾರದೊಂದಿಗೆ (ಒಬ್ಬ ಕನ್ನಡಿಗನ) 'ಭ್ರಮನಿರಸನ' ಎಂಬ ಚಿಕ್ಕ ಪ್ರಹಸನವನ್ನು ರಚಿಸಿದ್ದಾರೆ ಪರಭಾಷೆ ಪರಸಂಸ್ಕೃತಿಗಳ ಮೋಹಕ್ಕೆ ಮಾರು ಹೋಗಿ ಸ್ವಾಭಿಮಾನವನ್ನು ಕಳೆದುಕೊಂಡ ಕನ್ನಡಿಗರನ್ನು ಎಚ್ಚರಿಸಿ ಕನ್ನಡ ಮತ್ತು ಕರ್ನಾಟಕಗಳ ಬಗೆಗೆ ಅಭಿಮಾನ ತಾಳುವ ಹಾಗೆ ಮಾಡುವುದೇ ಈ ಚಿಕ್ಕ ಪ್ರಹಸನದ ಉದ್ದೇಶ.

ಲೇಖಕರು ತಮ್ಮ ಉದ್ದೇಶವನ್ನು ಈ ರೀತಿ ಹೇಳಿಕೊಂಡಿದ್ದಾರೆ :

"ಹಾಯಸ್ಕೂಲ ಮುಂತಾದ ಶಾಲೆಗಳಲ್ಲಿ ನೆರೆಯುವ ವಿದ್ಯಾರ್ಥಿಗಳ ವಾರ್ಷಿಕ ಸಮ್ಮೇಲನಗಳಲ್ಲಿ ಮನೋರಂಜನಾರ್ಥವಾಗಿ ಚಿಕ್ಕ ಬಾಲಕರಿಂದ ನಾಟಕಗಳನ್ನಾಡಿಸಿ ತೋರಿಸುವ ಹೊಸ ರೂಢಿಯು ಇತ್ತಿತ್ತ ಪ್ರಬಲವಾಗಿದೆ. ಇಂಥ ಪ್ರಸಂಗಳಲ್ಲಿ ಆದಷ್ಟು ಮಟ್ಟಿಗೆ ಸ್ತ್ರೀ ವೇಷರಹಿತವಾದ ಪ್ರವೇಶಗಳೇ ಆರಿಸಲ್ಪಡುತ್ತವೆಂಬುದು ನಿಜವು. ಆದರೆ, ಚಿಕ್ಕಬಾಲಕರಿಗಾಗಿಯೇ ಬರೆಯಲ್ಪಟ್ಟ ಆ ಬಗೆಯ ನಾಟಕಗಳೇ ಸಂಸ್ಕೃತದಲ್ಲಿಯಾಗಲಿ ಕನ್ನಡದಲ್ಲಿಯಾಗಲಿ ಇಲ್ಲದಿರುವದರಿಂದ" ಈ ನಾಟಕ ರಚಿಸಲಾಗಿದೆ.

ಅಲ್ಲದೆ, ಇಂಥ ಪ್ರಯೋಗಗಳಿಂದ "ಭಾಷಾಭಿಮಾನದ ದ್ವಾರದಿಂದ, ಕರ್ನಾಟಕದಲ್ಲಿ ಆಗಿ ಹೋದ ನಮ್ಮ ಅರಸರು, ನಮ್ಮ ಕವಿಗಳು, ನಮ್ಮ ಸತ್ಪುರುಷರು ಇವೇ ಮೊದಲಾದವರ ನಾಮಾವಳಿಗಳಾದರೂ" ನಮ್ಮ ಜನರ ಕಿವಿಯ ಮೇಲೆ ಬೀಳಬೇಕೆಂದು ಎರಡನೆಯ ಉದ್ದೇಶ.

ಇದರಲ್ಲಿ ಕೇಶವರಾವ್ ಎಂಬ ಕನ್ನಡತ್ವವನ್ನು ಕಳೆದುಕೊಂಡ ವ್ಯಕ್ತಿ, ನಾರಾಯಣರಾವ್ ಎಂಬ ಕನ್ನಡಾಭಿಮಾನಿ, ಸದಾಶಿವರಾವ್ ಮತ್ತು ಬಾಪುಸಾಹೇಬ ಎಂಬ ಮರಾಠಿ ಮಾತನಾಡುವವರಾದರೂ ಕನ್ನಡದ ಬಗೆಗೆ ತಿಳಿದುಕೊಳ್ಳಬೇಕೆಂಬ ಅತೀವ ಉತ್ಸುಕತೆಯಿದ್ದ ಇಬ್ಬರು ಮರಾಠಿ ವ್ಯಕ್ತಿಗಳು-ಇವರ ಸ್ವಭಾವ ಚೆನ್ನಾಗಿ ನಿರೂಪಿತವಾಗಿವೆ. ವಿಜಯದಾಸ ಇವರಿಗೆಲ್ಲ ತಿಳಿಹೇಳುವವ. ಸ್ವಾಭಾವಿಕವಾಗಿಯೇ ಪ್ರಹಸನ ಅರ್ಧ ಕನ್ನಡದಲ್ಲಿಯೂ ಅರ್ಧ ಶುದ್ಧ ಮರಾಠಿಯಲ್ಲಿಯೂ ಇದೆ. ಕನ್ನಡದ ಹಿರಿಮೆಯ ಬಗೆಗೆ ಡಾ. ಫ್ಲೀಟ್ ಅವರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಉಲ್ಲೇಖಿಸುವದರಲ್ಲಿ ನಾಟಕಕಾರರ ಅಭ್ಯಾಸವನ್ನೂ ಕಾಣುತ್ತೇವೆ. ಹೆಚ್ಚಾಗಿ ಪ್ರಚಾರವನ್ನೇ ಉದ್ದೇಶವನ್ನಾಗಿಟ್ಟುಕೊಂಡ ಚಿಕ್ಕ ಪ್ರಹಸನವಿದು.

ಬಿ. ವಿ. ಚಿನ್ನಮುಳಗುಂದ (೧೮೮೦-೧೯೩೬) :

ಬೆಳಗಾವಿಯವರು. ಬಿ. ಎ. ಪದವೀಧರರಾಗಿ ಡೆಪ್ಯುಟಿ ಪೋಲೀಸ ಸುಪರಿಂಟೆಂಡೆಂಟರೆಂದು ಕೆಲಸ ಮಾಡಿದರು.

'ಹೊರೇಸಿಯೊ' ಎಂಬ ಪುಸ್ತಕವನ್ನು ಬರೆದಿದ್ದಾರೆ.

ಭೀಮರಾವ್ ಸ್ವಾಮಿರಾವ್ ಕಮಲಾಪುರ (೧೮೫೪-೧೯೧೬) :

ಧಾರವಾಡದವರು. ಧರ್ಮಿಷ್ಠರು. 'ಸತ್ಕಥಾ' (೧೮೯೬), 'ಗೀತಾ ಉಪನ್ಯಾಸಗಳು', 'ಬ್ರಹ್ಮಸೂತ್ರ ರಚನಾಪ್ರಕಾಶ' (೧೯೧೪), 'ಘಟಿಶಾಸ್ತ್ರಸಾರ' (೧೯೧೫)– ಮೊದಲಾದ ಗ್ರಂಥಗಳನ್ನು ಬರೆದಿದ್ದಾರೆ. ಜನನ ೨೩-೬-೧೮೫೪. ಮರಣ ೨-೬-೧೯೧೬

ಮಲ್ಲಿಕಾರ್ಜುನಪ್ಪ ಶಿವಲಿಂಗಪ್ಪ ರೈನಾಪುರ (೧೮೮೦-೧೯೫೩) :

ಶ್ರೀಯುತರು ಬೆಳಗಾವ ಜಿಲ್ಲಾ ಪರಸಗಡ ತಾಲೂಕಿನ ರೈನಾಪುರದವರು. ಪುಣೆಯ

ಫರ್ಗ್ಯೂಸನ್ ಕಾಲೇಜದಿಂದ ಬಿ. ಎ. ಆಗಿ ಕಂದಾಯ ಇಲಾಖೆಯಲ್ಲಿ ಮಾಮಲೆದಾರರೆಂದು ಕೆಲಸ ಮಾಡಿದರು.

ಶ್ರೀಯುತರು ಮಹಾಕವಿ ಕಾಳಿದಾಸ ವಿರಚಿತವಾದ 'ಮೇಘದೂತ' (೧೯೧೦) ಮತ್ತು 'ಅಭಿಜ್ಞಾನ ಶಾಕುಂತಲ' ದ ಕನ್ನಡಾನುವಾದ ಮಾಡಿದ್ದಾರೆ. 'ಲಿಂಗರಾಜರ ಚರಿತ್ರೆ'ಯನ್ನೂ ಬರೆದಿದ್ದಾರೆ. ತುರಮರಿಯವರ ಬಾಣ ಕಾದಂಬರಿಯನ್ನು ಪರಿಷ್ಕರಿಸಿದ್ದಲ್ಲದೆ, ಷಡಕ್ಷರ ಕವಿಕೃತ ಸಂಸ್ಕೃತ ಗ್ರಂಥವಾದ 'ಕವಿಕರ್ಣರಸಾಯನ'ವನ್ನು ಸಂಪಾದಿಸಿದ್ದಾರೆ.

ಇದೂ ಅಲ್ಲದೆ, ಇವರು 'ಶಿವಲಿಂಗತನಯ' ಎಂಬ ಕಾವ್ಯನಾಮದಲ್ಲಿ ಬರೆದ ಹಲವಾರು ಕವನಗಳು 'ಪ್ರಭಾತ' ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಇದು ಮಳೆಗಾಲದ ವರ್ಣನೆ :

ತುಂಬಿ ತುಳುಂಕೆ ಬೆಂಚೆ ಪೊರಸೂಸೆ ಕೊಳಂ ಕೆರೆಕೋಡಿವೋಗೆ ಪ
ಳ್ಳಂಬರೆ ಭೋರೆನುತ್ತೆ ತಡೆಯಿಂ ಪೊರಪೊಣ್ಮೆ ನದೀ ನದಂಗಳುಂ
ಅಂಬುಧಿಯುರ್ವೆಯುರ್ವಿ ಬೆಳುಮೇಲುಂದರಿಂ ಮುಸುಕಿಟ್ಟು ತೋರಿದ
ತ್ತೆಂಬವೊಲೊಪ್ಪೆ ಕಣ್ಗೆ ಮಳೆನೀರ್ ಕರೆದತ್ತು ಸುವೃಷ್ಟಿ ಧಾತ್ರಿಯೋಳ್ [೧]

ಗ. ಶ್ರೀ. ಕಾನಗೊ (ಸು. ೧೯೧೯) :

ಇವರ ಜೀವನದ ವಿವರಗಳು ದೊರಕಲಿಲ್ಲ. ಇವರು ಬರೆದ ಅನೇಕ ಕವನಗಳು 'ಪ್ರಭಾತ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿವೆ.

ಇವರಿಗೆ ಸುಂದರವಾದ ಕಲ್ಪನಾಶಕ್ತಿ ಇದ್ದ ಹಾಗೆ, ಒಳ್ಳೆಯ ವಿನೋದದೃಷ್ಟಿಯೂ ಇದ್ದಿತು. ಈ ವಿನೋದ ದೃಷ್ಟಿಯನ್ನು ತೋರಿಸುವ ಹಲವು ಪದ್ಯಗಳನ್ನು ಇಲ್ಲಿ ನೋಡಬಹದು :

ಹಾಸ್ಯವಿನೋದಗಳು :

"ಎಲೆಗೌಳಗಿತ್ತಿ ಪಾಲೊಳ್
ಜಲಮಂ ಬೆರೆಸಿರುವಿಯಾ" "ಧನೀಯರೆ ಇಲ್ಲಂ
ಜಲಮಂ ಪಾಲೊಳ್ ಬೆರಿಪುದೆ ?
ಜಲದಲ್ಲಿಯೆ ಪಾಲನಿರದೆ ಬೆರಸಿರುವೆಂ ನಾಂ"

"ಇಹಲೋಕದಮೃತಪಾನಂ
ಚಹವೆಂದರಿ ! ಚಹವನೇಕೆ ಸೇವಿಸುಗುಂ ಮೇಣ್
ಚಹದ ಮಹತ್ವವದೇಂ ?" "ಪೇ–
ಳ್ದಿಹನೈ 'ಸರ್ವಸ್ಯಚಾಹ' ಮೆನೆ ಹರಿ ತಾನೆ"

"ಈಗಿದೊ ವಕೀಲಸಾಹೇಬ್
ಏಗೆಯ್ವಿರಿ, ನಿಮ್ಮನಿರದೆ ಕೊಂದೊಡೆ ನಾವು"
"ಏಗೆಯ್ವಿರಿ !! ಕೋರ್ಟಿನೊಳಾಂ
ಸಾಗಿಸುವೆಂ ಫೌಜದಾರಿ ಕಟ್ಲೆಯ ನಿಸದಂ"

---

೧ ಪ್ರಭಾತ : ಅಕ್ಟೋಬರ ೧೯೧೯ : ಪು. ೩೮.

"ಇದೊ ರಾಮಮೂರ್ತಿ ತಡೆವಂ
ಪದಿನೆಣ್ಗುದುರೆಗಳ ಶಕ್ತಿಯಾ ಮೋಟರವಂ"
"ಇದರೊಳದೇಂ ಚೀ ? ಗಾರ್ಡಂ
ಪದಿನೆಣ್ಸಾಸಿರ ಬಂಡಿಯುಂ ತಡೆದಪನಯ್"

"ಜಲಧಿಗುರಿ ತಗಲಿದೊಡೇನಂ
ಜಲಚರಗಳ್ ಮಾಡುಗುಂ ?" "ಮರಂಗಳನೇರ್ಗುಂ"
"ಭಲೆ ! ಮರಗಳನೇರಲ್ಕಾ
ಜಲಚರಗಳವೇಂ ದನಂಗಳೊ ? ಮೂರ್ಖರಿರಾ "

ಗುರು ತೋರಿಸುತ್ತೆ ನಸ್ಯದ
ಬುರುಡೆಯನೀ ತೆರದೆ ಗೋಲಮೀ ಧರೆಯೆಂದಂ
ಮರುದಿನ ಕಡ್ಡಿಯ ಪೆಟ್ಟಿಗೆ
ಧರೆಯೆನೆ ಕಲ್ಪಿಸುತೆ ಪಾಠಮಂ ಸಾಗಿಸಿದಂ

"ಧರೆಯಾಕಾರವ ಪೇಳಯ್"
"ಗುರುವಾರದೆ ಗೋಲರೂಪಮಂ ಮೇಣ್ ಭೃಗುವಾ
ಸರದೋಳ್ ಚೌಕಮಿರ್ಕುಂ
ಇರದೀ ಧರೆ ಬುರುಡೆ ಕಡ್ಡಿ ಪೆಟ್ಟಿಗೆಗಳವೊಲ್" ೧

ಎಂ. ಎಸ್. ಅಂಕಲಕೋಟಿ :

ಇವರ ಹಲವು ಕವನಗಳು 'ಪ್ರಭಾತ' ಮತ್ತು 'ವಾಗ್ಭೂಷಣ'ಗಳಲ್ಲಿ ಪ್ರಕಟವಾಗಿವೆ.

ಯಶವಂತರಾವ ಜಠಾರ (ಸು. ?)

ಇವರು ಕವಿತೆಗಾಗಿಯೇ ಮೀಸಲಾಗಿದ್ದ 'ಪ್ರಭಾತ' ಮಾಸಪತ್ರಿಕೆಯನ್ನು ಹೊರಡಿಸಿ ಅನೇಕ ಕವಿಗಳ ಕಾವ್ಯರಚನೆಗೆ ಕಾರಣರಾದರು. ಧಾರವಾಡದ ಸಾಹಿತ್ಯಕ, ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಉತ್ಸಾಹಪೂರ್ಣವಾದ ಕೆಲಸವನ್ನು ಮಾಡಿದರು. ಚುರಮರಿ ಶೇಷಗಿರಿರಾಯರಂತೆ, ಇವರೂ ಲಕ್ಷ್ಮೀಶನ ಜೈಮಿನಿಭಾರತವನ್ನು ಮರಾಠಿ ಭಾಷೆಗೆ ಅನುವಾದಿಸಿದರು. ಅದರ ಪ್ರಾರಂಭದ ಪದ್ಯ ಹೀಗಿದೆ :

ಶ್ರೀವಧೂಲೋಚನ ಚಕೋರಕ ಖಿಲವಿತ
ಭಕ್ತಾವಲೀ ಹೃತ್ಕುಮುದಕೋರಕ ಫುಲವಿತ
ಜಗತೀ ವಲಯ ವಿಮಲ ಸೌಭಾಗ್ಯರತ್ನಾಕರಾ ಆಣೀತ ಭರತಿ ಅತಿ

ತೇವಿ ಅವಿರತ ಸರಸಕರುಣಾಸುಧಾಕಲಾಂನೀ
ವಿಶದ ಮಧುಹಾಸ್ಯ ಕೌಮುದೀ
ಪಸರವಿತ ದೇವಪುರ ಲಕ್ಷ್ಮೀರಮಣ ವದನ ಚಂದ್ರ ಆನಂದ ದೇವೋ ಅಮ್ಲಾಂಲಾ ॥

---

೧ ಪ್ರಭಾತ : ಫೆಬ್ರುವರಿ ೧೯೨೦.

ಯಲ್ಲೋ ಗುಡ್ಡೋ ಕುಲಕರ್ಣಿ (೧೮೭೮-೧೯೫೫) :

ಸ್ಥಳ : ಹಾವೇರಿ ತಾಲೂಕಿನ ಗುತ್ತಲ. ಆಲೂರ ವೆಂಕಟರಾವ ಮತ್ತು ಡಾ.ಹರ್ಡೀಕರರ ಕೂಡ ಕೂಡಿಕೊಂಡು ಮರಾಠಿ 'ಕೇಸರಿ'ಯ ಕನ್ನಡಾನುವಾದವನ್ನು ಸಾಗಿಸಿದರು. ನಂತರ, ಅಗಡಿಯ ಶೇಷಾಚಲಸ್ವಾಮಿಗಳ ಉಪದೇಶದ ಮೇರೆಗೆ ಸರ್ವಾರ್ಪಣ ಮಾಡಿ ಗುರುಸೇವೆಯಲ್ಲಿಯೇ ಕಾಲ ಕಳೆಯುಹತ್ತಿದರು. 'ವಾಸುದೇವಾಗ್ರಜ' ಎಂಬ ಹೆಸರಿನಿಂದ ಹಲವು ಗ್ರಂಥಗಳನ್ನು ರಚಿಸಿರುವರು. ಇವುಗಳಲ್ಲಿ 'ಏಕನಾಥ ಮಹಾರಾಜರ ಚರಿತ್ರೆ', 'ತುಕಾರಾಮಬುವಾ', 'ದಾಸಬೋಧ', 'ಮಲ್ಲಾರಿ ಮಹಾತ್ಮ್ಯ', 'ಸಮರ್ಥ ಪಂಚಾಯತನ' –ಮೊದಲಾದವುಗಳನ್ನು ಹೇಳಬಹುದು.

ಹರ್ಡೇಕರ ಮಂಜಪ್ಪನವರು (೧೮೮೬-೧೯೪೭) :

ತಮ್ಮ ಶುಭ್ರವಾದ ವಸ್ತ್ರ, ನೈಷ್ಠಿಕ ಬ್ರಹ್ಮಚರ್ಯ, ಸದಾಚಾರಗಳ ಮೂಲಕ ಕರ್ನಾಟಕದ ಗಾಂಧಿ ಎಂದು ಕರೆಯಲ್ಪಡುತ್ತಿದ್ದರು. ಇವರ ಊರು ಉತ್ತರ ಕನ್ನಡ ಜಿಲ್ಲೆಯ ಬನವಾಸಿ. ಇವರೂ ಧಾರವಾಡದ ಟ್ರೇನಿಂಗ್ ಕಾಲೇಜಿನಲ್ಲಿಯೇ ಕಲಿತು ಕನ್ನಡ ಶಾಲಾ ಶಿಕ್ಷಕರಾಗಿದ್ದರು. ಇವರು ಸನ್ ೧೯೦೬ ರಿಂದ ೧೯೧೫ರ ವರೆಗೆ 'ಧನುರ್ಧಾರಿ' ಎಂಬ ವಾರಪತ್ರಿಕೆಯನ್ನು ನಡೆಸಿದರು. ಇದೂ ಅಲ್ಲದೆ, 'ಉದ್ಯೋಗ', 'ಶರಣ ಸಂದೇಶ'ಗಳ ಸಂಪಾದಕರಾಗಿಯೂ ಕೆಲಸ ಮಾಡಿದರು. ಶ್ರೀಯು ತರ ಜೀವನ ಮತ್ತು ಕೃತಿಗಳ ಬಗೆಗೆ ಒಂದು ಪ್ರಬಂಧವನ್ನೇ ಬರೆಯಬಹುದು.

ಇವರ ಗ್ರಂಥಗಳಲ್ಲಿ ಈ ಕೆಳಗಿನವುಗಳನ್ನು ಹೇಳಬಹುದು.

ಆಧುನಿಕ ಜರ್ಮನಿ (೧೯೧೮), ಆರೋಗ್ಯವೇ ಜೀವನ (೧೯೩೦), ಎಚ್ಚೆತ್ತ ಹಿಂದುಸ್ಥಾನ, ಕಾಯಕವೇ ಕೈಲಾಸ, ಕೇರ್ ಹಾರ್ಡಿ ಇವರ ಚರಿತ್ರೆ, ಖಾದೀಶಾಸ್ತ್ರ, ತ್ಯಾಗವೀರ ಲಿಂಗರಾಜರ ಚರಿತ್ರೆ, ಪ್ರಮಥಾಚಾರ ದೀಪಿಕೆ, ಬಸವ ಚರಿತ್ರೆ, ಬಸವ ಬೋಧಾಮೃತ, ಮಹಾತ್ಮ ಗಾಂಧಿಯ ಚರಿತ್ರೆ– ಇತ್ಯಾದಿ.

ರಾಘವೇಂದ್ರ ಕೃಷ್ಣ ಇನಾಮತಿ (೧೮೮೫-೧೯೪೦) :

ಧಾರವಾಡ ಜಿಲ್ಲಾ ಅಣ್ಣಿಗೇರಿಯ ವತನದಾರರು. ಮಾಧ್ಯಮಿಕ ಶಿಕ್ಷಣವಾದ ನಂತರ ಸ್ವಪ್ರಯತ್ನದಿಂದ ಹಿಂದಿ ಮತ್ತು ಗುಜರಾಥಿ ಭಾಷೆಗಳನ್ನು ಕಲಿತರು. ಇವರು ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಅವುಗಳಲ್ಲಿ 'ಅಶೋಕ ಅಥವಾ ಆರ್ಯಾವರ್ತದ ಮೊದಲನೆಯ ಚಕ್ರವರ್ತಿ', 'ಗುಜ ರಾಥದ ಇತಿಹಾಸ ಭಾಗ ೧', 'ದಕ್ಷಿಣ ಮುಸಲ್ಮಾನೀ ರಾಜ್ಯಗಳು', 'ವೀರೇಂದ್ರ', 'ಸರೋಜಿನಿ ನಾಟಕ' –ಮೊದಲಾದವುಗಳನ್ನು ಹೇಳಬಹುದು.

ಕೃಷ್ಣಾಜಿ ಅನಂತ (ಸು. ೧೮೯೮) :

ಇವರು ಆಗಸ್ಟ ೧೮೯೮ ರಲ್ಲಿ ಹಾನಗಲ್ ಕನ್ನಡ ಶಾಲೆಯ ಹೆಡ್ ಮಾಸ್ತರರಾಗಿದ್ದರು. ಇವರ ಶಿಕ್ಷಣೋಪಯೋಗೀ ಹಲವು ಕವನಗಳು ಕನ್ನಡ ಶಾಲಾಪತ್ರಕದಲ್ಲಿ ಪ್ರಕಟವಾಗಿವೆ. ಇವರ ರಚನೆಯ ಮಾದರಿಗಾಗಿಯೂ ತತ್ಕಾಲೀನ ಭಾವನೆಯ ಒಂದು ಪ್ರತೀಕವಾಗಿಯೂ, ಆಗಸ್ಟ ೧೮೯೮ರ ಕನ್ನಡ ಶಾಲಾಪತ್ರಕದಲ್ಲಿ ಪ್ರಕಟವಾದ ಈ ಕೆಳಗಿನ ಕವಿತೆಯನ್ನು ಉದಾಹರಿಸಬಹುದು. ಅಂದಿನ ಕಾಲದ ಸ್ವಾತಂತ್ರ್ಯ ಹೋರಾಟಗಾರರ ಬಗೆಗೆ ಈ ಕವಿಯ ಭಾವನೆಗಳು ವಿಚಿತ್ರವಾಗಿವೆ. ಅಂದಿನ ಬ್ರಿಟಿಶ್ ಸರಕಾರದ ಕಾಲಗುಣವೋ ಏನೊ !

ದೈವದೊಳಿಲ್ಲದೆ ಹ್ಯಾವಕೆ ಕಾದಲು
ಸಾವು ಕಡೆಗೆ ಬಹುದೈ ॥ ಪ ॥

ಕಿತ್ತೂರ ಚನ್ನವ್ವ – ದತ್ತಕ ಕೊಳ್ಳದೆ
ಮತ್ತೆ ಥ್ಯಾಕರೆಯನ್ನೂ –
ಮುತ್ತಿಸಿ ಕೊಲ್ಲಲಾ – ಹೊತ್ತಿಗೆ ದಂಡೊದ
ಗಿತ್ತು – ಕೋಟೆಯು ಪೋಯ್ತು ॥ ೧ ॥

ಕೂಡಲೆ ಸಂಗೊಳ್ಳಿ – ಬೇಡರ ರಾಯನು
ಕೂಡಿ ಹಳಬರನ್ನೂ –
ಬೀಡಿ ಸಂಪಗಾವ್ – ಸುಡಲು ನಂದಗಡ –
ದೆಡೆಗೆ ಶೂಲವಾಯ್ತೂ ॥ ೨ ॥

ಸುರಪುರ ಕೊಪ್ಪಳ – ನರಗುಂದ ಮೂವರು
ನೆರೆದು ಬಂಡನು ಮಾಡೆ
ಸುರಪುರ ನಾಯ್ಕಗೆ – ಸೆರೆಗಯ್ಕೆ ವಿಷತಿಂದು
ತೊರೆದನಸುವನಾಗೆ ॥ ೩ ॥

ನರಗುಂದ ಬಾಬಾ – ಧೊರೆ ಮ್ಯಾನ್‌ಸನ್ನನ
ಇರಿಯೆ ರಣದೆ ಸೋತು
ತೋರಗಲ್ಲೊಳ್ಸಿ
ಕ್ಕರೆ ಬೆಳಗಾವದಿ ಗಲ್ಲಿಗೆ ಗುರಿಯಾದನು ॥ ೪ ॥

ಘೊಂಡ ಸಾವಂತನ – ಪುಂಡ ರಾವ ಬಾ
ಚಿಲ್ಲೂ ಶಾಂತಪ್ಪಯ್ಯ
ಬಂಡಾಯ ಮಾಡಲು – ದಂಡು ಬಂದೊಯ್ಯಲು
ಘಟ್ಟದ ಕೆಳಗಾಗೆ ॥ ೫ ॥

ಮೈಸೂರ ಪ್ರಜೆಗಳು – ಕೃಷ್ಣರಾಜನೊಳು
ಲೇಸಿಲ್ಲ ಗುಣವೆಂದೂ –
ದೂಷಿಸಿ ತಾವೇ – ತೋಪದಿರಾಜ್ಯವ
ಪೋಷಿಸಿದರು ಬೇಗ ॥ ೬ ॥

ಇಂಗ್ಲಿಷರೊಳು ತಾವ್ – ಸಂಗಡಿಸದೆ ಬಲ್
ಭಂಗಬಟ್ಟರವರು
ಇಂಗಿತವರಿದು ಪ –
ರಾಂಗನೆನಿಸಲು – ಭಂಗ ಸುಖವು ಬಹುದು ॥ ೭ ॥

ಕೃಷ್ಣಾಜಿ ಬಾಪೂರಾವ ಕುರಂದವಾಡ (ಸು. ೧೯೦೦):

ಇವರು ಕೆಲಕಾಲ ಧಾರವಾಡ ಜಿಲ್ಲಾ ಬಂಕಾಪುರದಲ್ಲಿ ಉಪಶಿಕ್ಷಕರಾಗಿದ್ದರು. 'ದ್ರೌಪದೀ

ಸ್ವಯಂವರ' ಎಂಬುದು ಇವರು ಬರೆದ ೨೪ ಪುಟದ ಚಿಕ್ಕ ಪುಸ್ತಕ. ಇದು ೧೯೦೦ ರಲ್ಲಿ ವಾಗ್ಭೂಷಣ ಗ್ರಂಥಮಾಲೆಯ ೨೩ ನೆಯ ಪುಸ್ತಕವಾಗಿ ಪ್ರಕಟವಾಯಿತು.

ಲೇಖಕರ ಶೈಲಿಯ ದೃಷ್ಟಾಂತವಾಗಿ ಈ ಕೆಳಗಿನ ಅವತರಣಿಕೆಯನ್ನು ಕೊಡಬಹುದು :

"ಪೂರ್ವದಲ್ಲಿ ನಾರಾಯಣಿ ಎಂಬ ಸ್ತ್ರೀಯು ತನ್ನ ಪತಿಯು ಕುಷ್ಟರೋಗಿಯಾಗಿದ್ದರೂ, ಪರಮ ಪಾತಿವ್ರತ್ಯದಿಂದ ತ್ರಿಕರಣಪೂರ್ವಕವಾಗಿ ಗಂಡನ ಸೇವಾಸಕ್ತಳಾಗಿದ್ದಳು. ಒಂದಾನೊಂದು ದಿವಸ ಗಂಡನ ಭೋಜನವಾದ ಮೇಲೆ ಧರ್ಮಪದ್ಧತಿಯಂತೆ ಅವಳು ಅದೇ ಎಲೆಯಲ್ಲಿ ಊಟಕ್ಕೆ ಕೂಡಲು, ಆ ಎಲೆಯಲ್ಲಿ ಪತಿಯ ಕಯ್ಬೆರಳು ಉದುರಿ ಬಿದ್ದಿತ್ತು. ಅವಳು ಅದನ್ನು ಪತಿಪ್ರಸಾದ ವೆಂದು ಭುಂಜಿಸಿದಳು. ಅದನ್ನು ನೋಡಿ ಆ ಋಷಿಯು ಮೆಚ್ಚಿ ಸತಿಯಳೇ ಏನು ವರವನ್ನು ಬೇಡುತ್ತೀ, ಬೇಡೆನಲು, ತಾವು ದಿವ್ಯರೂಪದಿಂದ ನನ್ನಲ್ಲಿ ಸುರತ ಸುಖವನ್ನು ಹೊಂದಬೇಕೆಂದು ಅವಳು ಬೇಡಿಕೊಂಡಳು. ಆಗಾ ಋಷಿಯು ತನ್ನ ತಪೋಬಲದಿಂದ ದಿವ್ಯರೂಪವನ್ನು ಧರಿಸಿ, ಸುರತಕೇಳಿಯನ್ನು ಹೊಂದಿ, ಮುನ್ನಿನ ರೂಪ ಹೊಂದಲೆತ್ನಿಸಲು." (ಅವಳು ಹಾಗೆ ಆಗಗೊಡಲಿಲ್ಲ.)

ವಿಷ್ಣು ಗುರುನಾಥ ಕಾಳೆ (ಸು. ೧೯೧೯) :

ಇವರ ಹಲವು ಕವನಗಳು 'ಪ್ರಭಾತ'ದಲ್ಲಿ ಬಂದಿವೆ. ಜೀನನೇ ದಾನಶೂರನು ಎಂಬ ಈ ಕವನ ಅವರ ಕವಿತ್ವಶಕ್ತಿಯನ್ನು ತೋರಿಸುತ್ತದೆ.

ಜೀನನಂತಹ ದಾನಶೂರನ
ಕಾಣೆನೀ ಜಗತೀವಲಯದೊಳ್
ಸಾನುರಾಗದಿ ಪೇಳುತಿರ್ಪೀ ಮಾತು ಸಟೆಯಲ್ಲ
ತಾನು ತಿನ್ನದೆ ಸುತರಿಗುಣಿಸದೆ
ಏನಕೇನ ಪ್ರಕಾರದಿಂದಲಿ
ಹೊನ್ನು ತಾ ಗಳಿಸಿಟ್ಟು ಹೆರವರಿಗರ್ಪಿಸುವ ಸತತಂ ॥

ಕಾಲು ಚೆಂಡು (ಫುಟಬಾಲ್) ಕೇಳಿಕೊಳ್ಳುವುದು ಹೀಗೆ :

ಮೋರೆಯ ನಾಂ ಮೇಲೆ ಮಾಡಲು
ಹಾರಿ ನೀವಿರದೊದೆಯುತಿರ್ಪಿರಿ
ಸಾರಿ ಪೇಳುವೆನಾದರದಿ ನೀವ್ ಲಕ್ಷಗೊಡಿರಿದಕೆ
ಆರಿಗುಂ ನಾ ಸೊಪ್ಪು ಹಾಕದೆ
ಮೋರೆ ಮೇಲಕೆ ಮಾಡುವದರಿಂ
ಕ್ರೂರತನದಿಂದೊದ್ದ ಪೆಟ್ಟುಗಳನ್ನು ಸಹಿಸುವೆನು ॥ ೧

ಬಿಂದುಮಾಧವ ಕೊಲ್ಹಾರ (ಸು. ೧೯೨೦) :

ಇವರು ವಿಜಾಪುರದವರು. ಇವರ ತಂದೆಯ ಹೆಸರು ಭೀಮರಾವ. ಇವರು ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಅನೇಕ ಕವನಗಳನ್ನು ಬರೆದರು. ಶ್ರೀಯುತರು ಬರೆದ 'ಕನ್ನಡ ಪದ್ಯರತ್ನ' ಎಂಬ ೨೫ ಪುಟದ ಚಿಕ್ಕ ಪುಸ್ತಕವು ವಿಜಾಪುರದ ನ್ಯೂ ಪ್ರಿಂಟಿಂಗ ವರ್ಕ್ಸದಲ್ಲಿ ಸನ್ ೧೯೨೦ ರಲ್ಲಿ ಮುದ್ರಿತವಾಗಿದೆ. ತಮ್ಮ ಕಾವ್ಯರಚನೋದ್ದೇಶವನ್ನು ಕವಿಗಳು ಹೀಗೆ ಹೇಳಿಕೊಂಡಿದ್ದಾರೆ :

೧ ಪ್ರಭಾತ : ಜೂನ್ ೧೯೨೦.

ವರ ಕರ್ನಾಟಕ ಮಾತೆಯಂ ಸ್ಮರಿಸುತಂ ತತ್ಸಂಗದುತ್ಸಾಹದಿಂ
ಕರೆಯಲ್ ಪುಷ್ಪಪರಾಗಮಂ, ವಿಮಲ ಭಾಷಾಪುಷ್ಪದಿಂ ತಮ್ಮ ವೈ
ಮರೆದಿರ್ದೀ ಕರಿನಾಡಿಗರ್ ಮಮತೆಯಿಂದಾಮೋದಮಂ ಗೆಯ್ವರೆಂ
ದಿರದೀ ಕನ್ನಡಪದ್ಯರತ್ನಮನೆ ನಾಂ ಸಾನಂದದಿಂ ಮುದ್ರಿಪೇಂ ॥

ಶ್ರೀಯುತರ ಬರವಣಿಗೆ ಪ್ರೌಢವಾಗಿದೆ, ಕಾವ್ಯಮಯವಾಗಿದೆ. ಈ ಕೆಳಗಿನ ಪದ್ಯ ನೋಡಬಹುದು :

ಅರುಣಂ ಪ್ರಾಗ್ದಿಶೆಯೊಳ್ ಬರಲ್, ಕುಸುಮಂಗಳ್ ತಂಗಾಳಿಯಿಂ ಕೂಡಿಕೊಂ
ಡರಳಲ್, ಕತ್ತಲೆ ಜಾರಿಪೋಗಲಳಿಗಳ್ ಪೂಗಂಧಮಂ ಸೇವಿಸು
ತ್ತಿರುವಾ ಕಾಲದಿ ಸುಪ್ರಭಾತದೊಳು ಸೂರ್ಯಂ ಮೆಚ್ಚಿಮೂಡಲ್ಕೆ ಸ
ತ್ವರದಿಂದಬ್ಜರಸಕ್ಕೆ ಪೇಳ್, ಭ್ರಮರಗಳ್ ಪೂವಂಡಿನಿಂ ಪಾರವೇ ? ॥

—

ವಿದೇಶೀಯರು

" These (writings of the European scholars) will survive when the British dominion in India shall have long ceased to exist. "

—**Warren Hastings**

" The missionaries who came to India in the 18th and 19th centuries undertook the formidable task in the field of languages. The great services which the missionaries have rendered to the cause of knowledge can never be forgotten. It is to their labours that we are what we now know of the Kannada history, language and literature. "

—**A. J. Brown**

" Foreign Missionaries " : London, 1907 : P. 90

" ನಮ್ಮ ದೇಶಭಾಷೆಗಳ ಈಗಿನ ಚರಿತ್ರೆಯಲ್ಲಿ ಕ್ರೈಸ್ತ ಪಾದ್ರಿಗಳಿಗೆ ಪ್ರಥಮ ಸ್ಥಾನವನ್ನು ಕೊಡಬೇಕಾಗಿದೆ. ನಮ್ಮ ಸೀಮೆಯಲ್ಲಿ ಮೊತ್ತಮೊದಲು ಹಳೆಯ ತಾಳೆಯೋಲೆಗಳನ್ನು ಶೋಧಿಸಿ, ಸಾಹಿತ್ಯ ಗ್ರಂಥಗಳನ್ನು ಹೊರತೆಗೆದು, ಅಚ್ಚುಕೂಟವನ್ನು ಒದಗಿಸಿಕೊಟ್ಟು, ಪುಸ್ತಕಗಳನ್ನು ಪ್ರಕಟಿಸಿದವರು ಸಾಮಾನ್ಯವಾಗಿ ಕ್ರೈಸ್ತ ಮಿಶನರಿಗಳು. ಕನ್ನಡದಲ್ಲಿ ಡಾ. ಕಿಟೆಲ್, ತೆಲುಗಿನಲ್ಲಿ ಡಾ. ಬ್ರೌನ್, ತಮಿಳಿನಲ್ಲಿ ಡಾ. ಪೋಪ್, ಮಲಯಾಳಂದಲ್ಲಿ ಡಾ. ಗುಂಡರ್ಟ– ಈ ನಾಲ್ವರೂ ಆಯಾ ಭಾಷೆಗಳನ್ನು ಪಂಡಿತರ ಸಹಾಯದಿಂದ ಚೆನ್ನಾಗಿ ಕಲಿತು ಹಳೆಯ ಗ್ರಂಥಗಳನ್ನು ಬೆಳಕಿಗೆ ತಂದದ್ದಲ್ಲದೆ, ವ್ಯಾಕರಣ, ನಿಘಂಟುಗಳನ್ನು ರಚಿಸಿ, ಭಾಷಾಶಾಸ್ತ್ರ ವ್ಯಾಸಂಗಕ್ಕೆ ಸಾಮಗ್ರಿ ಕೂಡಿಹಾಕಿದರು. ಆ ಬಳಿಕ ಡಾ. ಕಾಲ್ಡ್‌ವೆಲ್ ಅವರು ಈ ನಾಲ್ವರ ಕೆಲಸವನ್ನು ಕ್ರೋಢೀಕರಿಸಿ, ಬಹುಕಾಲ ಶ್ರಮಪಟ್ಟು ಆಳವಾಗಿ ಪರಿಶೋಧಿಸಿ ಆರ್ಯಭಾಷಾ ವರ್ಗದಿಂದ ಭಿನ್ನವಾದ ದ್ರಾವಿಡ ಭಾಷಾ ವರ್ಗವೊಂದುಂಟು ಎಂಬ ತಮ್ಮ ಅಭಿಪ್ರಾಯವನ್ನು ಜನಗಳ ಮುಂದಿಟ್ಟರು. "

—**ಬಿ. ಎಮ್. ಶ್ರೀ** *

* ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ : ಸಂ. ೨೩– ಸಂ. ೩ : ಪು. ೨೨೦.

ರೆ. ಸಾಮ್ಯುಯೆಲ್ ಹೆಬಿಕ್

(೧೮೦೩–೧೮೬೭)

ಇವರು ಜರ್ಮನಿಯ ಊರ್ಟಂಬರ್ಗದ ಒಂದು ಚಿಕ್ಕ ಹಳ್ಳಿಯಾದ ನೆಲಿಂಜೆನ್ ಎಂಬಲ್ಲಿ ೨೯–೪–೧೮೦೩ ರಂದು ಜನಿಸಿದರು.

ಬಾಸೆಲ್ ಮಿಶನ್ನಿನ ವತಿಯಿಂದ ಭಾರತಕ್ಕೆ ಬಂದವರಲ್ಲಿ ಮೊದಲಿಗರೆಂದರೆ ರೆ. ಹೆಬಿಕ್‌ರವರೇ. "Rev. Hebich was the first Missionary of the Basel Mission to come to India".[೧] ಇವರು ವಾಸವಾಗಿದ್ದ 'ಹೆಬಿಕ್' ಹೌಸ್ ಎಂಬುದನ್ನು ಇಂದಿಗೂ ಧಾರವಾಡದ ಮಿಶನ್ ಕಾಂಪೌಂಡಿನಲ್ಲಿ ಕಾಣಬಹುದು. ಧಾರವಾಡದ ಬಾಸೆಲ್ ಮಿಶನ್ ಶಾಲೆಯನ್ನು ಈ 'ಹೆಬಿಕ್ ಹೌಸ್'ದಲ್ಲಿಯೇ ಪ್ರಾರಂಭಿಸಲಾಯಿತು.

ಹೆಬಿಕ್‌ರವರು ಸನ್ ೧೪–೧೦–೧೮೩೪ ರಂದು 'ಮಲಬಾರ' ಎಂಬ ಹಡಗದಲ್ಲಿ ಪ್ರವಾಸ ಮಾಡಿ ಕಾಲಿಕತ್‌ದಲ್ಲಿ ಬಂದು ಇಳಿದು ನಂತರ ಮಂಗಳೂರಿಗೆ ಹೋದರು. ಅದೇ ವರುಷವೇ ಬಾಸೆಲ್ ಇವಾಂಜೆಲಿಕಲ್ ಮಿಶನ್ನನ್ನು ಮಂಗಳೂರಲ್ಲಿ ಸ್ಥಾಪಿಸಿದರು. ನಂತರ ಕೂಡಲೇ ಅದರ ಪ್ರಚಾರ ಕೇಂದ್ರಗಳನ್ನು ಹೊನ್ನಾವರ ಮತ್ತು ಧಾರವಾಡಗಳಲ್ಲಿಯೂ ತೆಗೆಯಲಾಯಿತು. ದಿನಾಂಕ ೨೫–೧–೧೮೩೭ರಂದು ಅವರು ಮತ್ತು ವೋಗ್ಲಿಂಗ್ ಅವರು ಧಾರವಾಡಕ್ಕೆ ತಲುಪಿದಾಗ ದಾರಿಯಲ್ಲಿ ಬೆಳಗಾವಿಯ ರೆ. ಬೆನನ್ ಅವರು ಅವರ ಸ್ವಾಗತ ಮಾಡಿದರು. ಧಾರವಾಡದಲ್ಲಿ ಲೆಫ್ಟಿನೆಂಟ್ ಸ್ಪೇದರ್ ಅವರನ್ನು ಸ್ವಾಗತಿಸಿದರು. ನಂತರ ಕಲಾದಗಿ, ಗೋವೆ ಮೊದಲಾದ ಕಡೆಗೂ ಇವರು ಹೋದರು. ಇವರ ಉದ್ದೇಶ ಹೆಚ್ಚಾಗಿ ಮತಪ್ರಚಾರವಾಗಿತ್ತೇ ವಿನಃ ಕನ್ನಡ ಸಾಹಿತ್ಯ ಅಥವಾ ಭಾಷೆಯ ಅಭ್ಯಾಸವಾಗಿರಲಿಲ್ಲ. ಈ ಕೆಲಸವನ್ನು ಯಶಸ್ವಿಯಾಗಿ ಪ್ರಾರಂಭಿಸಿದವರು ರೆ. ವೋಗ್ಲಿಂಗ್.

—

೧ Basel Mission High School Centenary Souvenir 1863–1963 : 1963 : P. 15.

ಜಿ. ಎಚ್. ವೈಗಲ್

(ಸು. ೧೮೦೦ – ಸು. ೧೮೯೦)

ಇವರು ಬಾಸೆಲ್ ಮಿಶನ್ ಸಂಸ್ಥೆಗೆ ಸೇರಿದವರು. ಇವರು ಭಾರತಕ್ಕೆ ೧೮೪೦ ರಲ್ಲಿ ಬಂದು ಆಮೇಲೆ ಧಾರವಾಡಕ್ಕೆ ಬಂದರು. ಡಾ. ಕಿಟೆಲ್ ಅವರು ರೆ. ವೈಗಲ್‌ರವರಿಂದಲೇ ತಮ್ಮ ಕಾರ್ಯ ಭಾರವನ್ನು ಪಡೆಯಬೇಕಾಗಿತ್ತು. ವೈಗಲ್‌ರವರ ಕೈಯಲ್ಲಿಯೇ ಅವರು ಕನ್ನಡವನ್ನು ಕಲಿಯಬೇಕಾ ಗಿತ್ತು. ಆದರೆ ಕಿಟೆಲ್ಲರು ಧಾರವಾಡಕ್ಕೆ ಬರುವದರಲ್ಲಿಯೇ ರೆ. ವೈಗಲ್‌ರ ಬದಲು ರೆ. ಮೋರಿಕ್ ಎಂಬವರು ಧಾರವಾಡದಲ್ಲಿ ಕೆಲಸ ಮಾಡುತ್ತಿದ್ದರು.

ವೈಗಲ್‌ರವರು ಜರ್ಮನ್, ಇಂಗ್ಲಿಷ್, ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಅಗಾಧವಾದ ಪಾಂಡಿತ್ಯವನ್ನು ಪಡೆದಿದ್ದರು. ಗ್ಯಾರೆಟ್‌ರವರು ಸಂಪಾದನ ಮಾಡಿದ ಭಗವದ್ಗೀತೆಯ ವಿಷಯವಾಗಿ ಸಲಹೆಯನ್ನು ಕೊಟ್ಟದ್ದಲ್ಲದೆ, ಗೀತೆಯ ಹಲವು ಶ್ಲೋಕಗಳ ಅನುವಾದವನ್ನು ಕೂಡ ಮಾಡಿದರು. ಬ್ಯಾಬಲ್ ವಿಷಯಕವಾಗಿಯಂತೂ ವೈಗಲ್‌ರವರು ಮಾಡಿದ ಸೇವೆ ಅದ್ಭುತವಾಗಿದೆ. ಈ ಮೊದಲು ಅನೇಕರು ಬ್ಯಾಬಲ್ ಗ್ರಂಥವನ್ನು ಭಾಷಾಂತರಿಸಿದ್ದರೂ ಸನ್ ೧೮೫೦ರಲ್ಲಿ ಪ್ರಕಟವಾದ ವೈಗಲ್‌ರವರ ಭಾಷಾಂತರವೇ ತುಂಬಾ ಪರಿಪುಷ್ಟವಾದ ಮತ್ತು ಸಮಗ್ರವಾದ ಭಾಷಾಂತರವೆಂದು ಮನ್ನಣೆ ಪಡೆ ಯಿತು. ಇದನ್ನು ಉತ್ತರ ಕರ್ನಾಟಕದ ಎಲ್ಲ ಕ್ರೈಸ್ತಗುಡಿಗಳಲ್ಲಿಯೂ ಪ್ರತಿನಿತ್ಯ ಉಪಯೋಗಿಸು ತ್ತಿದ್ದರು. ಸನ್ ೧೮೫೪ ರಲ್ಲಿ ಸ್ಥಾಪಿತವಾದ ಬ್ಯಾಬಲ್ ಪರಿಷ್ಕರಣ ಸಮಿತಿಯಲ್ಲಿ ಸ್ವಾಭಾವಿಕ ವಾಗಿಯೇ ಇವರಿಗೆ ಸ್ಥಾನ ದೊರಕಿತು. ಈ ಸಮಿತಿ ವೈಗಲ್‌ರವರ ಭಾಷಾಂತರವನ್ನೇ ಮೆಚ್ಚಿ ಕೊಂಡಿತು. "ಅದರಿಂದ ಹ್ಯಾಂಡ್ಸ್, ಕ್ಯಾರೇ, ರೀವ್, ರೀಡ್ ಮೊದಲಾದವರು ಬರೆದಿದ್ದ ಕನ್ನಡ ಬ್ಯಾಬಲ್ ಪುಸ್ತಕಗಳು ತಾತ್ಕಾಲಿಕವಾಗಿ ಹಿಂದಿರಿಸಲ್ಪಟ್ಟುದಲ್ಲದೆ ವೈಗಲ್ ಇವನ ಬ್ಯಾಬಲನ್ನೇ ಕ್ರಿ. ಶ. ೧೮೬೫ ರಲ್ಲಿ ಸರ್ವಾಂಗ ಸುಂದರವಾಗಿ ಮುದ್ರಿಸಿ ಪುನಃ ಎಲ್ಲೆಲ್ಲೂ ಹಂಚಿದರು."
(ಐ. ಮಾ. ಮುತ್ತಣ್ಣ, ಪು. ೨೭೮ – ೨೭೯.)

ಇದೂ ಅಲ್ಲದೆ ರೀಡ್ ಮತ್ತು ವೈಗಲರು ಕೂಡಿ ಕ್ರೈಸ್ತಗುಡಿಗಳಲ್ಲಿ ಹಾಡಲು ಯೋಗ್ಯವಾಗು ವಂತೆ ಇಂಗ್ಲಿಷ್ ಹಾಡುಗಳ ಮಟ್ಟದಲ್ಲಿ ಅನೇಕ ಹಾಡುಗಳನ್ನು ಬರೆದರು. ಅವುಗಳಲ್ಲಿ ಕೆಳಗಿನವು ಗಳನ್ನು ಕೊಡಬಹುದು :

"ಪಾಪದ ಉನ್ನತ
ಸ್ಥಾನದಿಂದಿಳಿದ
 ಸರ್ವಪತಿ
ಅಗಲಿ ತಂದೆಯ
ಜಗತ್ತಿಗೋಸ್ಕರ

ರಕ್ತವ ಚೆಲ್ಲಿದ
　　ಪರ್ವತದಿ.

* * *

ನೀತಿಯ ದೇವರೆ
ಪ್ರೀತಿಯ ಮಾಡಿದೆ
　　ನರರಿಗೆ
ಶಾಪವ ಸೈರಿಸಿ
ತಾಪವ ತಾಳಿದಿ
ಪಾಪಗಳಾ ಪರಿ
　　ಹರಿಸಿದೆ.

* * *

ನೀನು ಶತ್ರು ಬಾಣವ
ಹಿಮ್ಮೆಟ್ಟಿಸುವಂಥದಾದರು
　　ನೀನು ದಿವ್ಯ ಖಡಗ
ನನ್ನ ಕೈಗೆ ಜೇಷ್ಟವಾರು
ಉಕ್ಕಿಗಿಂತ ಯುದ್ಧದಿ
ನೀನು ವಾದವಾಗಿದ್ದಿ.

ಸನ್ ೧೮೫೪ ರಲ್ಲಿ ವೈಗಲ್ ಮತ್ತು ಮೋಗ್ಲಿಂಗ್ ಇವರು ಕೂಡಿ ಬರೆದ ಹಾಡುಗಳಲ್ಲಿ :

ಕಳ್ಳರ ಕೈಯಲಿ ಬಿದ್ದಿಯೊ ಹಣವನು
ಕೊಳ್ಳೆಯ ಕೊಟ್ಟಿಯೊ ಪರದೇಶಿ
ಒಳ್ಳೆಯ ನಂಬಿಗೆಯಿದ್ದರೆ ಸಾವಿರ
ಕಳ್ಳರನಾದರು ಗೆಲಬಹುದು


–ಎಂಬುದನ್ನು ಉದ್ಧರಿಸಬಹುದು.

ವೈಗಲ್‌ರವರು ಕನ್ನಡ ಭಾಷೆ ಮತ್ತು ಸಾಹಿತ್ಯಗಳನ್ನು ಕುರಿತು ವಿವರಪೂರ್ಣವಾದ ಲೇಖನಗಳನ್ನು ಬರೆದರು. ಅದೂ ಅಲ್ಲದೆ ಕನ್ನಡ ಯಾವ ಭಾಷಾವರ್ಗಕ್ಕೆ ಸೇರಿದ್ದೆಂಬುದನ್ನು ಹೇಳಿ ಅದರ ವ್ಯಾಕರಣವನ್ನು ಪ್ರಾಕೃತ, ಸಂಸ್ಕೃತ ಮತ್ತು ದ್ರಾವಿಡ ಭಾಷೆಗಳ ಕೂಡ ಹೋಲಿಸಿದ್ದಾರೆ. ಹಲವು ಕವಿಗ' ಮತ್ತು ಕೃತಿಗಳ ಉಲ್ಲೇಖವನ್ನೂ ಮಾಡಿದ್ದಾರೆ. ವೈಗಲ್‌ರವರು ಬರೆದ ಗ್ರಂಥಗಳಲ್ಲಿ ಈ ಕೆಳಗಿನವುಗಳನ್ನು ಉಲ್ಲೇಖಿಸಬಹುದು :

ಕ್ರೈಸ್ತ ಗೀತಗಳು (ಎಚ್. ಮೋಗ್ಲಿಂಗ್ ಅವರ ಕೂಡ) ೧೮೪೭.
ಯಾತ್ರಸ್ಥನ ಸಂಚಾರವು–ಭಾಗ ೧ (ಪಿಲ್ಗ್ರಿಮ್ಸ್ ಪ್ರೊಗ್ರೆಸ್‌ದ ಭಾಷಾಂತರ) ೧೮೪೭.
ಯಾತ್ರಸ್ಥನ ಸಂಚಾರವು–ಭಾಗ ೨ (ಪಿಲ್ಗ್ರಿಮ್ಸ್ ಪ್ರೊಗ್ರೆಸ್‌ದ ಭಾಷಾಂತರ) ೧೮೪೯.
ಪ್ರಾರ್ಥನೆಗಳು, ೧೮೫೨.
ದೇವರ ವಾಕ್ಯದ ಬೋಧನೆಯ ಪ್ರಶ್ನೋತ್ತರ, ೧೮೫೩.
ಬಾಲಶಿಕ್ಷೆಯು, ೧೮೫೮.
ಶಾಲಾಗೃಹ ಪಠಣೋದ್ದಿಶ್ಯ ದೇವವಾಕ್ಯ ವ್ಯಾಖ್ಯಾನವು (ಎಚ್. ಮೋಗ್ಲಿಂಗ್ ಅವರ ಕೂಡ) ೧೮೫೪.

—








ಬಾಸೆಲ್‌ನಲ್ಲಿರುವ ಡಾ. ಕಿಟೆಲ್ಲರ ಸಮಾಧಿ









ಯಾತ್ರಿಕನ ಸಂಚಾರವು

'ಯಾತ್ರಿಕನ ಸಂಚಾರವು'

ಹರ್ಮನ್ ಮೋಗ್ಲಿಂಗ್

(೧೮೧೧–೧೮೮೧)

ಇವರು ಜರ್ಮನಿಯ ಫ್ರಾಂಕೆನ್‌ಹ್ಯಾಮ್ ಎಂಬಲ್ಲಿ ಸನ್ ೧೮೧೧ ರಲ್ಲಿ ಜನಿಸಿದರು. ಚಿಕ್ಕಂದಿನಿಂದಲೂ ಇವರಿಗೆ ಭಾಷೆಯ ಮೇಲೆ ಪ್ರಭುತ್ವವಿದ್ದಿತು. ಇವರು ವಿದ್ಯಾರ್ಥಿಯಾಗಿದ್ದಾಗ ಒಂದು ಪದ್ಯವನ್ನು ಲ್ಯಾಟಿನ್ ಭಾಷೆಗೆ ಅನುವಾದ ಮಾಡಲು ಬರೆದುಕೊಳ್ಳಲು ಶಿಕ್ಷಕರು ಹೇಳಿದಾಗ, ಶಿಕ್ಷಕರು ಹೇಳುತ್ತಿದ್ದಂತೆಯೇ ಆ ಪದ್ಯವನ್ನು ಲ್ಯಾಟಿನ್ ಭಾಷೆಗೆ ಪರಿವರ್ತಿಸಿ ಬಿಟ್ಟರು. ನಂತರ ೧೮೨೯ ರಲ್ಲಿ ಅಂದರೆ ತಮ್ಮ ವಯಸ್ಸಿನ ೧೮ನೆಯ ವರ್ಷದಲ್ಲಿ, ಟುಬೆನ್‌ಜನ್ ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿಯನ್ನು ಪಡೆದರು. ಅನಂತರ ಕ್ರೈಸ್ತಧರ್ಮಪ್ರಸಾರಕ್ಕಾಗಿ ಮಂಗಳೂರನ್ನು ತಲುಪಿ ಸನ್ ೧೮೩೬ ರಲ್ಲಿ ಹೆಬಿಕ್‌ರನ್ನು ಕೂಡಿಕೊಂಡರು. ಇಬ್ಬರೂ ಮತಪ್ರಸಾರಕ್ಕಾಗಿ ಬಂದವರಾದರೂ, ಇಬ್ಬರ ಜೀವನದೃಷ್ಟಿಯು ವಿರುದ್ಧವಾಗಿದ್ದಿತು. ಹೆಬಿಕ್‌ರು ಪರಂಪರಾಪ್ರಿಯರಾದರೆ, ಮೋಗ್ಲಿಂಗರು ವೀರವೈರಾಗ್ಯಗುಣವುಳ್ಳವರು. ಮೋಗ್ಲಿಂಗರು ಫ್ರಾನಿಸ್ಕನ್ ಜೀವನ ಪದ್ಧತಿಯವರು. ಸಾಮಾನ್ಯರಿಗೆ ಸಿಗುವುದಕ್ಕಿಂತಲೂ ಒಂದು ಪುಡಿಗಾಸು ಸಹ ತಮಗೆ ಹೆಚ್ಚು ಸಿಗಬಾರದೆಂದು ಅವರ ಮತ. ಮೋಗ್ಲಿಂಗರ ಸ್ವಾಗತಕ್ಕಾಗಿ ಹೆಬಿಕ್ ಅವರು ಮಾಂಸದ ಅಡಿಗೆಯ ಔತಣವನ್ನು ಏರ್ಪಡಿಸಿದರೆ ಸಾಮಾನ್ಯರಿಗೆ ದುರ್ಲಭವಾಗಿದ್ದ ಇಂಥ ಆಹಾರವನ್ನು ಮೋಗ್ಲಿಂಗ್ ನಿರಾಕರಿಸಿ ಬರಿಯ ಅನ್ನ ಮತ್ತು ಸಾರನ್ನು ಸ್ವೀಕರಿಸಿದರು. ಈ ಇಬ್ಬರೂ ಪಾದ್ರಿಗಳ ನಡುವಿನ ಈ ಮತಭೇದ ಬೆಳೆಯುತ್ತಲೇ ಹೋಯಿತು. ತತ್ಪರಿಣಾಮವಾಗಿ ಹೆಬಿಕ್‌ರು ಮೋಗ್ಲಿಂಗರ ಸಹವಾಸವನ್ನೇ ಬಿಟ್ಟು ಮಂಗಳೂರಿನಿಂದ ತೆರಳಿದರು. ಆಗ ಮೋಗ್ಲಿಂಗರು ವಿಲಾಸಜೀವನದ ಕುರುಹುಗಳಾದ ಮಿಶನ್ನದ ಬಂಗಲೆಯನ್ನು 'ಅರಮನೆ'ಯೆಂದು ಕರೆದು ಅದನ್ನು ಬಾಡಿಗೆಗೆ ಕೊಟ್ಟರು. ಅಲ್ಲಿದ್ದ ಕುರ್ಚಿ ಪಲ್ಲಂಗುಗಳನ್ನು ನಿರುಪಯೋಗಿ ಎಂದು ಮಾರಿಬಿಟ್ಟರು. ಉಳಿದ ವಿದ್ಯಾರ್ಥಿಗಳ ಹಾಗೆಯೇ ತಾವೂ ನೆಲದಮೇಲೆ ಜಮಖಾನೆ ಹಾಸಿ ಮಲಗಿಕೊಂಡರು. ಮಿಶನ್ನದ ಬಂಗಲೆಯಲ್ಲಿದ್ದ ತಿಜೋರಿಯನ್ನು ಹೇಸಿ ಐಶ್ವರ್ಯದ ಆಗರವೆಂದು ಅದನ್ನು ಬಾವಿಯಲ್ಲಿ ಒಗೆದರು. ಮೋಗ್ಲಿಂಗ್ ಮತ್ತು ಹೆಬಿಕ್‌ರ ಸ್ವಭಾವದಲ್ಲಿಯ ಈ ವಿಭಿನ್ನತೆಯನ್ನು ಚೆನ್ನಾಗಿ ವರ್ಣಿಸಲಾಗಿದೆ : "Mogling was a great scholar, Hebich was not; Mogling was an idealist, Hebich was a practical man of business; Mogling was poetic, Hebich very prosaic; Mogling was a dreamer of dreams, Hebich was a doer of deeds... Mogling was determined to live according to the Franciscan ideal, a life of poverty, a life of asceticism, a life of celibacy."[೧]

---

[೧] Samuel Hebich of India, Master Fisher of Men : G. N. Thomssen : pp. 64-65.

ಕೆಲಕಾಲದ ನಂತರ ಹೆಬಿಕ್ ಮತ್ತು ಮೋಗ್ಲಿಂಗ್ ಇಬ್ಬರೂ ಕೂಡಿ ೨೫–೧–೧೮೩೭ ರಂದು ಧಾರವಾಡಕ್ಕೆ ಆಗಮಿಸಿದರು. ಈ ಪ್ರವಾಸವನ್ನು ಸಹಿತ ಕುದುರೆಯನ್ನು ಹತ್ತಿಕೊಂಡು ಪೂರೈಸಬೇಕೆಂದು ಹೆಬಿಕ್ ಅವರು ಹೇಳಿದರೆ, ಮೋಗ್ಲಿಂಗರು ಕ್ರೈಸ್ತ–ಪ್ರಭುವಿನ ರೀತಿಯಲ್ಲಿ ಕಾಲುನಡಿಗೆಯಿಂದಲೇ ಪೂರೈಸಿದರು. ಧಾರವಾಡದ ಜನತೆ ಮೋಗ್ಲಿಂಗರಿಗೆ ಹೃತ್ಪೂರ್ವಕವಾದ ಸ್ವಾಗತವನ್ನು ನೀಡಿತು. "Dr. Mogling was received with open arms by the people of Dharwar··· His success was great. All doors seemed to open to him as by magic, and he now became successful Canarese Missionary and scholar"[೧]

ಮೋಗ್ಲಿಂಗರ ಧಾರ್ಮಿಕ ಅಭಿಪ್ರಾಯಗಳೇನೇ ಇರಲಿ, ಅವರು ಕನ್ನಡಕ್ಕಾಗಿ ಮಾಡಿದ ಸೇವೆ ಗಣನೀಯವಾಗಿದೆ. ಮೋಗ್ಲಿಂಗ್ ಅವರು ಬೈಬಲ್ಲಿನ ಅನೇಕ ಸೂಕ್ತಿಗಳು ಮತ್ತು ಪ್ರಸಂಗಗಳನ್ನು ಕುರಿತು ಲೇಖನಗಳನ್ನೂ, ಕಿರುಹೊತ್ತಿಗೆಗಳನ್ನೂ ಬರೆದುದು ಮಾತ್ರವಲ್ಲದೆ, ಅನೇಕ ಒಳ್ಳೆಯ ಪುಸ್ತಕಗಳನ್ನೂ ಬರೆದಿದ್ದಾರೆ. ಇವುಗಳಲ್ಲಿ ಈ ಕೆಳಗಿನವುಗಳನ್ನು ಹೇಳಬಹುದು :

ಈರಾರು ಪತ್ರಿಕೆ (೧೮೪೨) :

ಇದು ಆನಂದರಾಯ ಕೌಂಡಿಣ್ಯ ಎಂಬ ಬ್ರಾಹ್ಮಣನು ಕ್ರೈಸ್ತಧರ್ಮವನ್ನು ಅಂಗೀಕರಿಸಿದ ಘಟನೆಗೆ ಸಂಬಂಧಪಟ್ಟುದಾಗಿದೆ. ಕೃಷ್ಣಾಪುರದ ರೆವಿನ್ಯೂ ಕಚೇರಿಯಲ್ಲಿ ಕೆಲಸಮಾಡುತ್ತಿದ್ದ ಆನಂದನು ತನ್ನ ಬೀಗನಾದ ರಾಮಚಂದ್ರನೆಂಬವನಿಗೆ ಬರೆದ ಪತ್ರ ಮತ್ತು ಉತ್ತರಗಳ ರೂಪದಲ್ಲಿ ಇದು ಇದೆ. ಇದರಲ್ಲಿ ೧೨ ಪತ್ರಗಳಿರುವದರಿಂದ ಈರಾರು ಪತ್ರಿಕೆ ಎಂದು ಇದನ್ನು ಕರೆಯಲಾಗಿದೆ. ಆನಂದ, ರಾಮಚಂದ್ರನ ತಂಗಿಯಾದ ಭಾಗಮ್ಮನನ್ನು ಮದುವೆಯಾಗಿದ್ದನು. ತಾನು ಮಾಡಿದ ಯಾವುದೋ ಪಾಪಕ್ಕಾಗಿ ಅವನು ಮೋಗ್ಲಿಂಗನ ಆಶ್ರಯವನ್ನು ಬಯಸಿಬಂದು ಕ್ರೈಸ್ತ ಧರ್ಮವನ್ನು ಸ್ವೀಕರಿಸಿದನು. ಆನಂದನ ತಾಯಿಯು ಅನ್ನ ನೀರನ್ನು ಬಿಟ್ಟಳು. ಹೆಂಡತಿ ಭಾಗಮ್ಮ ಮಂಗಳಸೂತ್ರವನ್ನು ಹರಿದು ಹಾಕಿದಳು. ಆಸ್ತಿಯ ಆಸೆಗೂ ಆನಂದನು ಸೋಲದಿದ್ದಾಗ ಹೆಂಡತಿ ಭಾಗಮ್ಮ ಆತ್ಮಹತ್ಯೆಮಾಡಿಕೊಳ್ಳಬೇಕೆಂದು ಬಯಸಿದಳು. ಆಗ ಕರವೀರ ಎಂಬ ರೈತನು ಅವಳನ್ನು ಗಂಡನಾದ ಆನಂದನ ಹತ್ತಿರ ತಂದು ಬಿಟ್ಟನು. ಪತ್ರವ್ಯವಹಾರ ರೂಪದಲ್ಲಿಯ ಈ ಬರವಣಿಗೆ ಮನಸ್ಸನ್ನು ಹಿಡಿಯುವಂತಿದೆ.

ಹೃದಯದರ್ಪಣ (೧೮೪೨) :

ಇದನ್ನು ಮೋಗ್ಲಿಂಗರು ಸನ್ ೧೮೪೭ ರಲ್ಲಿ ಬರೆದರು. ಇದರ ಇಂಗ್ಲಿಷ ಶಿರೋನಾಮೆ 'ಹಾರ್ಟ್ ಬುಕ್' ಎಂದು. ಈ ಗ್ರಂಥದ ಎರಡನೆಯ ಮುದ್ರಣ ಸನ್ ೧೮೬೮ ರಲ್ಲಿ ಆಯಿತು. ಇದರ ಶೈಲಿ ಮತ್ತು ವಿಷಯಗಳ ದೃಷ್ಟಿಯಿಂದ ಶ್ರೀ ಮುತ್ತಣ್ಣನವರು ಈ ಕೆಳಗಿನ ಅವತರಣಿಕೆಯನ್ನು ಕೊಟ್ಟಿದ್ದಾರೆ :

"........ಮನುಷ್ಯನ ಮುಖವನ್ನು ಬುದ್ಧಿಯಿಂದ ದೃಷ್ಟಿಸಿ ನೋಡುವವನು ಅವನ ಸುಗುಣ ದುರ್ಗುಣಗಳನ್ನು ಸ್ವಲ್ಪವಾದರೂ ಊಹಿಸುವನು. ಆದರೆ ಮನುಷ್ಯನ ಹೃದಯವನ್ನು ಮನುಷ್ಯನು ನೋಡಲಾರನು. ಹೃದಯವನ್ನು ಹಲಸಿನ ಹಣ್ಣಿನ ಹಾಗೆ ಬಿಚ್ಚಿ ನೋಡಕೂಡದು.

---

೧ ಅದೇ : ಪು. ೬೧.

ದೇವವಾಕ್ಯದಲ್ಲಿ ಹೃದಯುದ ಎರಡು ವಿಧವಾದ ಗುಣಗಳಂ ಚೆನ್ನಾಗಿ ವರ್ಣಿಸಿ ಅವೆ. ದೇವರ ವಾಕ್ಯವನ್ನು ಓದಿ ಅಭ್ಯಾಸ ಮಾಡಿ ಮನುಷ್ಯನ ಹೃದಯುದ ಭಾವವನ್ನು ಸತ್ಯದ ಪ್ರಕಾರ ತಿಳಿದು ಕೊಳ್ಳುವದು ಬಹಳ ಉಪಯೋಗವಾಗಿದೆ. ಅನ್ಯರ ಹೃದಯುವನ್ನು ತಿಳಿದುಕೊಳ್ಳುವದು ಅರವತ್ತು ಗುಣ. ಸ್ವತಃ ಹೃದಯುವನ್ನು ತಿಳಿದುಕೊಳ್ಳುವದು ಕೋಟಿ ಗುಣ........''

''ಹೃದಯವು ಮನೆಯು ಹಾಗಿದೆ. ಅದರಲ್ಲಿ ವಾಸಿಸುವರ್ಯಾರೆಂದು ತಿಳಿಯದೆ ಇರಬಾರದು. ಅದು ಖಾಲಿ ಬೀಳುವ ಬಿಡದಿಯಾಗಿರುವದಿಲ್ಲ. ದೇವರ ಆತ್ಮವು ಅದರಲ್ಲಿ ವಾಸವಾಗದೆ ಇದ್ದರೆ ಸೈತಾನನು ಅದರಲ್ಲಿ ಉಳಕೊಳ್ಳುತ್ತಾನೆ." ೧

ಕ್ರೈಸ್ತ ಗೀತೆಗಳು :

ವೈಗಲ್ ಅವರ ಕೂಡ ಕೂಡಿಕೊಂಡು ಮೋಗ್ಲಿಂಗ್ ಹಲವು ಕ್ರೈಸ್ತ ಗೀತಗಳನ್ನು ರಚಿಸಿದರು. ಇದನ್ನು ಈ ಮೊದಲೇ ಪ್ರಸ್ತಾಪಿಸಲಾಗಿದೆ.

ಯಾತ್ರಿಕನ ಸಂಚಾರ (೧೮೪೪) :

ವೈಗಲ್ ಅವರ ಕೂಡ ಕೂಡಿಕೊಂಡೂ ಮತ್ತು ಪ್ರತ್ಯೇಕವಾಗಿಯೂ ಶ್ರೀಯುತರು ಬನಿಯನ್ ವಿರಚಿತ 'ಪಿಲ್‌ಗ್ರಿಮ್ಸ್ ಪ್ರೊಗ್ರೆಸ್' ಎಂಬ ಗ್ರಂಥವನ್ನು 'ಯಾತ್ರಿಕನ ಸಂಚಾರ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದ ಮಾಡಿದರು.

ಮಿಶನ್ ವರದಿ (೧೮೪೪) :

ಇದರಲ್ಲಿ ದಕ್ಷಿಣ ಮಹಾರಾಷ್ಟ್ರವೆನ್ನುವ ಪ್ರದೇಶವೆಲ್ಲ ಕನ್ನಡ ನಾಡೇ ಆಗಿದೆ ಎಂದು ಆ ಕಾಲಕ್ಕೇ ಸ್ಪಷ್ಟವಾಗಿ ಹೇಳಿದ್ದನ್ನು ಗಮನಿಸಬಹುದು.

ಧರ್ಮ ವಿಚಾರ ಗ್ರಂಥಗಳು :

ಮೋಗ್ಲಿಂಗರು ಹಿಂದೂ ಧರ್ಮದಲ್ಲಿಯ ನ್ಯೂನತೆಗಳನ್ನು ಎತ್ತಿ ತೋರಿಸುವ ಅನೇಕ ಕೃತಿ ಗಳನ್ನು ಬರೆದರು. ಅವುಗಳಲ್ಲಿ ಸನ್ ೧೮೫೨ ರಲ್ಲಿ ರಚಿತವಾದ ೧೮೫ ಪುಟಗಳ 'ದೇವ ವಿಚಾರಣೆ' ಎಂಬ ಪುಸ್ತಕವನ್ನೂ, ಸನ್ ೧೮೫೪ ರಲ್ಲಿ ರಚಿತವಾದ 'ಜಾತಿ ವಿಚಾರಣೆ' ಎಂಬ ೩೯ ಪುಟಗಳ ಪುಸ್ತಕವನ್ನೂ, ಸನ್ ೧೮೬೪ರಲ್ಲಿ ರಚಿತವಾದ 'ಮತ ವಿಚಾರಣೆ' ಎಂಬ ೫೧ ಪುಟಗಳ ಪುಸ್ತಕವನ್ನೂ, 'ಏಸೂ ಕ್ರಿಸ್ತನ ಶ್ರಮೇ ಚರಿತ', 'ವಿಗ್ರಹಾರಾಧನೆ' ಎಂದು ಮೊದಲಾದವುಗಳನ್ನೂ ಉಲ್ಲೇಖಿಸ ಬಹುದು. ಅದರಲ್ಲಿಯೂ 'ಜಾತಿ ವಿಚಾರಣೆ' ಎಂಬ ಪುಸ್ತಕವಂತೂ ೧೫ ವರುಷಗಳಲ್ಲಿಯೇ ಅಂದರೆ ಸನ್ ೧೮೭೯ ರಷ್ಟರಲ್ಲಿಯೇ ಐದು ಬಾರಿ ಪುನರ್ಮುದ್ರಣ ಹೊಂದಿತು. ಶ್ರೀ ಮುತ್ತಣ್ಣನವರು 'ಜಾತಿ ವಿಚಾರಣೆ' ಎಂಬ ಪುಸ್ತಕದಿಂದ ಹಲವು ಸಾಲುಗಳನ್ನು ಉಲ್ಲೇಖಿಸಿದ್ದಾರೆ. ಮೋಗ್ಲಿಂಗ್ ಅವರ ಶೈಲಿಯ ದೃಷ್ಟಿಯಿಂದಲೂ ಮತ್ತು ಅಲ್ಲಿ ಬರುವ ಸಾಮಾಜಿಕ ಚಿತ್ರದ ದೃಷ್ಟಿಯಿಂದಲೂ ಈ ಸಾಲುಗಳನ್ನು ಕೊಡಬಹುದು :

"ಸುವಾರ್ತಿಕನೂ ಅವನ ಸಂಗದಲ್ಲಿರುವ ದೇವದತ್ತನೆಂಬ ಹುಡುಗನೂ ಬಣಜಿಗನಾದ ಲಿಂಗಪ್ಪ ಶೆಟ್ಟಿಯೂ ತೊಳವನಾದ ಕೃಷ್ಣಾಚಾರಿಯನೂ ಮಾಡಿದ ಸಂಭಾಷಣೆಯ ಪುಸ್ತಕವು."

---

೧ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ : ಐ. ಮಾ. ಮುತ್ತಣ್ಣ : ೧೯೭೯ : ಪು. ೨೮೧.

"ಸುವಾರ್ತಿಕನು : ದೇವದತ್ತನೇ, ನೀನು ಬಹಳ ದಣಿದು ಬಂದೋ ?

ದೇವದತ್ತನು : ನೀವು ಬೇಗ ನಡೆದು ಹೋದಿರಿ. ನಾನು ಅಲ್ಲಿ ಕೆಳಗೆ ಹಿಂದೆ ಯಿದ್ದ ವೊಬ್ಬನ ಸಂಗಡ ವೋಡುತ್ತ ಬಂದೆ. ದಂಮು ಮೇಲೆ ಬರುತ್ತದೆ. ಈ ಘಟ್ಟವು ಬಹಳ ಎತ್ತರವಾದದ್ದು."

ಜಾತಿಭೇದದ ಬಗೆಗೆ ಮೋಗ್ಲಿಂಗ್ ಅವರ ಅಭಿಪ್ರಾಯವು ಹೀಗಿದೆ :

"ವರ್ಣವು ಯೇನು ? ಬಿಳಿ ಯೆತ್ತಿಗೆ ಕಪ್ಪು ಯೆತ್ತಿಗೆ ಬೇರೆ ಬೇರೆ ಜಾತಿ ಉಂಟೋ ? ಬೇರೆ ಬೇರೆ ದೇಶಸ್ಥರಿಗೆ ವರ್ಣವು ಬೇರೆ ಬೇರೆ ಹೌದು. ಅದು ಗಾಳಿಯಿಂದಲೂ ಬಿಸಿಲಿನಿಂದಲೂ ಬೇರೆ ಬೇರೆಯಾಗುತ್ತದೆ. ಬಹಳ ದಿನ ಮನೆಯಲ್ಲಿದ್ದ ರೋಗ ಉಂಟಾದ ಮನುಷ್ಯನು ಮುಂಚೆಗಿಂತ ಬಿಳುಪಾಗನಲ್ಲವೋ ? ಬಿಸಿಲಿನಲ್ಲೆ ಕೆಲಸ ಮಾಡುವವರು ಕಪ್ಪಾಗುತ್ತಾರಲ್ಲವೊ ?........" ೧

ಕನ್ನಡ ಗಾದೆಗಳು (೧೮೫೯) :

ಇದರ ಮೊದಲನೆಯ ಆವೃತ್ತಿ ೧೮೪೭ ರಲ್ಲಿ ಪ್ರಕಟವಾದಂತೆ ಕಂಡುಬರುತ್ತದೆ. ೧೫೧ ಪುಟಗಳ ಈ ಪುಸ್ತಕದಲ್ಲಿ ೩೫೪೭ ಕನ್ನಡ ಗಾದೆಗಳಿವೆ. ಇದು ಮೋಗ್ಲಿಂಗರ ಪರಿಶ್ರಮ ಮತ್ತು ಆಯ್ಕೆಯ ಜಾಣ್ಮೆಯನ್ನು ತೋರುತ್ತದೆ. ಇವುಗಳಲ್ಲಿ ಹಲವು ಗಾದೆಗಳು :

ಅ — ಆ ಬಾರದಿದ್ದರೂ ಅಮರವಾದರೂ ಹೇಳು
ಅಂಕಣ ಮನೆಯಾದರೆ ಕೊಂಕಣಿಗನಿಗೆ ಆಗದೆ
ಅಂಗಡಿ ಇದ್ದರೆ ಸಾಲದು ಮುಂಗಡಬೇಕು
ಅಂಬು ತಾಗಿದರೂ ಹಂಬಲು ಬಿಡಲಿಲ್ಲ೨

ಮೋಗ್ಲಿಂಗರದು ಬಹುಮುಖ ಪ್ರತಿಭೆ. ಅವರ ಸಾಧನೆಯೂ ವೈವಿಧ್ಯಪೂರ್ಣವಾಗಿದ್ದು ಅವರು ಕ್ರೈಸ್ತಧರ್ಮ ಗ್ರಂಥವಾದ ಬ್ಯಾಬಲನ್ನು ಕುರಿತು ಬರೆದ ಲೇಖನಗಳ ಬಗೆಗೆ ಈಗಾಗಲೇ ಹೇಳಿದೆ. ಅವರು ಬರೆದ 'ಹೃದಯ ದರ್ಪಣ' (೧೮೪೨), 'ಕ್ರೈಸ್ತ ಗೀತೆಗಳು' 'ಯಾತ್ರಿಕನ ಸಂಚಾರ' (೧೮೪೮), 'ಮತ ವಿಚಾರಣೆ' (೧೮೬೪), 'ಏಸೂ ಕ್ರಿಸ್ತನ ಶ್ರಮೇ ಚರಿತೆ', 'ವಿಗ್ರಹಾರಾಧನೆ,' 'ಶಾಲಾಗೃಹ ಪಠಣೋದ್ದಿಶ್ಯ ದೇವವಾಕ್ಯ ವ್ಯಾಖ್ಯಾನವು' (೧೮೬೧) ಮೊದಲಾದ ಗ್ರಂಥಗಳ ಬಗೆಗೂ ಹೇಳಿದೆ. ಬಹುಶ್ರುತವಾದ ಈ ಪ್ರತಿಭಾನ್ವಿತ ವ್ಯಕ್ತಿಯು ಅನೇಕ ಕ್ಷೇತ್ರಗಳಲ್ಲಿ ತನ್ನ ಯಶಸ್ಸನ್ನು ದೊರಕಿಸಿದರು.

ಶಾಲಾಗೃಹ ಬೈಬಲ್ ಮತ್ತು ಪಠಣೋದ್ದಿಶ್ಯ ದೇವವಾಕ್ಯ ವ್ಯಾಖ್ಯಾನವು (೧೮೬೧) :

ಸನ್ ೧೮೫೪ ರಲ್ಲಿ ನೇಮಿತವಾದ ಬೈಬಲ್ ಪರಿಷ್ಕರಣ ಸಮಿತಿಯಲ್ಲಿ ಮೋಗ್ಲಿಂಗ ಅವರೂ ಒಬ್ಬ ಸದಸ್ಯರಾಗಿದ್ದರು. ಮೋಗ್ಲಿಂಗ್ "ತನ್ನ ಸಮಕಾಲೀನ ಕ್ರೈಸ್ತ ವಿದ್ವಾಂಸರ ಆದರ್ಶಕ್ಕನುವಾಗಿ ಕನ್ನಡದಲ್ಲಿ ಸಂಪೂರ್ಣ ಬೈಬಲ್‌ನ್ನು ಬರೆದು ಸಾಹಿತ್ಯವೃಕ್ಷಕ್ಕೆ ಮತ್ತೊಂದು ಕೊನರನ್ನು ಸೇರಿಸಿದನು."

ಜಿ. ವೈಗಲ್ ಮತ್ತು ಜಿ. ಎ. ವರ್ಥ ಅವರ ಕೂಡ ಸೇರಿಕೊಂಡು ಸನ್ ೧೮೬೧ ರಲ್ಲಿ 'ಶಾಲಾಗೃಹ ಪಠಣೋದ್ದಿಶ್ಯ ದೇವವಾಕ್ಯ ವ್ಯಾಖ್ಯಾನವು' ಎಂಬ ಗ್ರಂಥವನ್ನೂ ರಚಿಸಿದರು.

---

೧ ಅದೇ ಪು. ೨೮೨.
೨ ಅದೇ : ಪು. ೪೨೮.

ಶುದ್ಧ ಸಾಹಿತ್ಯದ ದೃಷ್ಟಿಯಿಂದ 'Bibliotheca Carnatica'ದ ಮೂಲಕ 'ಜೈಮಿನಿ ಭಾರತ' (೧೮೪೮), 'ತೊರವೆ ರಾಮಾಯಣ' (೧೮೪೯), 'ದಾಸರ ಪದಗಳು' (೧೮೫೦), 'ಕನಕದಾಸರ ಹರಿ ಭಕ್ತಿಸಾರ' 'ಕುಮಾರವ್ಯಾಸ ಭಾರತ' 'ಬಸವ ಪುರಾಣ' ಮತ್ತು 'ಚೆನ್ನಬಸವ ಪುರಾಣ' (೧೮೫೮) ಮೊದಲಾದವುಗಳನ್ನು ಪ್ರಸಿದ್ಧಿಸಿದರು.

ಪತ್ರಿಕಾ ಪ್ರಪಂಚ :

ಕನ್ನಡದಲ್ಲಿ ಪತ್ರಿಕಾ ವ್ಯವಸಾಯವನ್ನು ಪ್ರಾರಂಭಿಸಿದವರಲ್ಲಿ ಮೋಗ್ಲಿಂಗರೇ ಮೊದಲಿಗರೆಂದು ಹೇಳಲಾಗುತ್ತದೆ. ಅವರು ಸನ್ ೧೮೪೩ ರಲ್ಲಿ ಪ್ರಾರಂಭಿಸಿದ 'ಮಂಗಳೂರು ಸಮಾಚಾರ' ಎಂಬ ಪತ್ರಿಕೆಯೂ, ಬಳ್ಳಾರಿಯಲ್ಲಿ ಸನ್ ೧೮೪೪ ರಲ್ಲಿ ಸ್ಥಾಪಿಸಿದ 'ಕನ್ನಡ ಸಮಾಚಾರ' ಎಂಬ ಪತ್ರಿಕೆಯೂ, ಕನ್ನಡದಲ್ಲಿಯೇ ಪ್ರಥಮ ಪತ್ರಿಕೆಗಳಾಗಿವೆ. ಇವು ಪಕ್ಷ ಪತ್ರಿಕೆಗಳಾಗಿದ್ದು ನಾಲ್ಕಾರು ಫೋಲಿಯೋಗಳಿಂದ ಕೂಡಿದ್ದವು. ಇವುಗಳಲ್ಲಿ ಹೆಚ್ಚಾಗಿ ಕ್ರೈಸ್ತಮತ ವಿಷಯಕ ವಾಗಿಯೇ ಲೇಖಗಳು ಬರುತ್ತಿದ್ದವು. ಇದರಲ್ಲಿ ಮೋಗ್ಲಿಂಗನಿಗೆ ಸಹಾಯಕರಾಗಿ ರೆ. ಸಿ. ಗ್ರೇನಿಯರ್ (Grenier) ಮತ್ತು ರೆ. ಬುಹ್ರರ್ (Buhrer) ಅವರಿದ್ದರು. ಇದೂ ಅಲ್ಲದೆ, ಮೈಸೂರಿನಿಂದ ಪ್ರಕಟವಾಗುತ್ತಿದ್ದ 'ಕರ್ನಾಟಕ ವಾಗ್ವಿಧಾಯಿನಿ' ಪತ್ರಿಕೆಯನ್ನು ಸ್ಥಾಪಿಸುವದರಲ್ಲಿಯೂ ಮೋಗ್ಲಿಂಗರು ಒಬ್ಬ ಪ್ರಮುಖ ವ್ಯಕ್ತಿಗಳಾಗಿದ್ದರು. ಇದರಂತೆಯೇ ಸನ್ ೧೮೬೮ ರಲ್ಲಿ ಉಡುಪಿಯಿಂದ ಪ್ರಾರಂಭವಾದ 'ಸಭಾಪತ್ರ' ಎಂಬ ಪತ್ರಿಕೆಗೂ ರೆ. ಜೇಕಬ್ ಬ್ರಿಗೆಲ್ (Jacob Brigel) ಅವರ ಕೂಡ ಇವರೇ ಕಾರಣರಾಗಿದ್ದರು. ಈಪತ್ರಿಕೆಗಳನ್ನು ಪ್ರಾರಂಭಿಸುವಲ್ಲಿಯ ಉದ್ದೇಶ ಪ್ರಾಮುಖ್ಯವಾಗಿ ಕ್ರೈಸ್ತಮತದ ಪ್ರಚಾರವಾಗಿದ್ದರೂ ಅವುಗಳಲ್ಲಿ ಲೋಕಬೋಧೆಯನ್ನುಂಟು ಮಾಡುವ ಅನೇಕ ಅಂಶಗಳೂ ಇರುತ್ತಿದ್ದವು. ಉದಾಹರಣೆಗೆ ಸನ್ ೧೮೪೪ ರ ಸೆಪ್ಟೆಂಬರ ತಿಂಗಳದ 'ಕನ್ನಡ ಸಮಾಚಾರ' ಪತ್ರಿಕೆಯಲ್ಲಿ ಈ ಕೆಳಗಿನ ವಿವರ ಬರುತ್ತದೆ. ಇದನ್ನು ರೆ. ಮೋಗ್ಲಿಂಗರವರೇ ಬರೆದಿರಬಹುದೆಂದು ಶ್ರೀಮಾನ್ ಮುತ್ತಣ್ಣನವರು ಊಹಿಸುತ್ತಾರೆ :

"ಯೀಗ ಬೇರೆ ದೇಶಸ್ಥರು ಹತ್ತಿ ಬೆಳೆಸಿದ್ದು ಹನನ ಮಾಡಿ ಯಿಂಗ್ರೇಜ ದೇಶಕ್ಕೆ ಕಳುಹಿಸುತ್ತಾರೆ. ಮತ್ತು ಯೀ ಪ್ರಕಾರ ಯೆಷ್ಟು ಅರಳೆ ಯೀಸವಿ ೧೮೩೪ ನೇ ವರುಷದಲ್ಲಿ ಯಿಂಗ್ರೇಜ ದೇಶಕ್ಕೆ ಬಂದಿತೇಂದು ಮುಂದೆ ಬರೆದ ಯಾದಿಯಿಂದ ನೋಡಬಹುದು : (೧) ಅಮೇರಿಕಾ ಖಂಡದಿಂದ ೮, ೭೧, ೫೦೦ ಖಂಡಿಗಳು. ಬ್ರಸ್ಸಿಲ್‌ಯೆಂಬ ದೇಶದಿಂದ ೫೩. ೫೭೦ ಖಂಡಿಗಳು, ಪಶ್ಚಿಮ ಹಿಂದುಸ್ಥಾನದಿಂದ ೧೪, ೯೯೦, ಜಗುಪ್ತ ದೇಶದಿಂದ ೪೪,೬೪೦ ಆಫ್ರಿಕಾ ಖಂಡದಿಂದ ೬೦,೭೧೦, ಮೆಕ್‌ಸಿಕೊ ಯೆಂಬ ದೇಶದಿಂದ ೬೨, ೫೦೦, ಹಿಂದುಸ್ಥಾನದಿಂದ ೩, ૩೦,೩೪೦ ಯಿನ್ನೂ ಬೇರೆ ದೇಶಗಳಿಂದ ೨,೨೦,೦೦೦ ಖಂಡಿಗಳು."[1]

ಕನ್ನಡದಲ್ಲಿ ಪಂಚಾಂಗ (೧೮೫೩) :

ಮಂಗಳೂರು ಬಾಸೆಲ್ ಮಿಶನ್ನಿನ ರೆ. ಸಿ. ಗ್ರೇನಿಯರ್ ಮತ್ತು ರೆ. ಬುಹ್ರರ್ ಅವರ ಕೂಡ ಕೂಡಿಕೊಂಡು ರೆ. ಮೋಗ್ಲಿಂಗ್ ಅವರು ಸನ್ ೧೮೫೩ ರಿಂದ 'ಮಂಗಲೋರ್ ಅಲ್‌ಮನಕ್' ಅಥವಾ 'ಮಂಗಳೂರು ಪಂಚಾಂಗ' ಎಂಬುದನ್ನು ಪ್ರಾರಂಭಿಸಿದರು. ಇದೂ ಅನೇಕ ವರ್ಷ ಸುಪ್ರಸಿದ್ಧವಾಗಿದ್ದಿತು.

---

[1] ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ : ಪು. ೪೨೩–೪೨೫.

ರಾಜೇಂದ್ರನಾಮೆಯ ಪ್ರಕಟಣೆ (೧೮೫೮) :

ಕೊಡಗಿನ ದೊಡ್ಡ ವೀರರಾಜನ ಆಜ್ಞಾನುಸಾರವಾಗಿ ಎಬರ್‌ಕ್ರೋಂಬಿ ಎಂಬವನು ಸನ್ ೧೮೦೭ ರಲ್ಲಿ 'ರಾಜೇಂದ್ರ ನಾಮೆ'ಯನ್ನು ಇಂಗ್ಲಿಷಿಗೆ ಪರಿವರ್ತಿಸಿದನು. ರೆ. ಮೋಗ್ಲಿಂಗರು ತಮ್ಮ ಕೊಡಗು ನಾಡಿನ ಸಂಚಾರದಲ್ಲಿ ಈ ಕನ್ನಡ ಮತ್ತು ಇಂಗ್ಲೀಷ ಪ್ರತಿಗಳನ್ನು ದೊರಕಿಸಿ, ಸನ್ ೧೮೫೮ ರಲ್ಲಿ ಮಂಗಳೂರು ಬಾಸೆಲ್ ಮಿಶನ್ ಪ್ರೆಸ್ಸಿನಿಂದ ಪ್ರಕಟಿಸಿದರು. ಇಲ್ಲಿಯ ಕನ್ನಡವನ್ನು ತಮಗೆ ತಿಳಿದಂತೆ ಕೆಲಮಟ್ಟಿಗೆ ಪರಿಷ್ಕರಿಸಿದರು. ಈ ಪುಸ್ತಕದಲ್ಲಿಯ ಕನ್ನಡ ಲಿಪಿಯ ಬರವಣಿಗೆ ವೈಶಿಷ್ಟ್ಯಪೂರ್ಣವಾಗಿದೆ. ದಿವಂಗತ ಬಿ. ಎಂ. ಶ್ರೀ. ಅವರು ಕನ್ನಡದ ಬಾವುಟದಲ್ಲಿ ತದನಂತರ ಕೈಕೊಂಡ ಕನ್ನಡ ಮುದ್ರಣದ ಸುಧಾರಣೆಯನ್ನು ಇದು ಗಮನಕ್ಕೆ ತರುವಂತಿದೆ. ಇದರಲ್ಲಿ ಒತ್ತಕ್ಷರಗಳನ್ನು ಮುದ್ರಿಸಿದ ಕ್ರಮವನ್ನು ಗಮನಿಸಬಹುದು :

"ರಾಜೇಂದ್‌ರ ನಾಮೆ – ಅಂದರೆ ಹಾಲೇರಿ ವೀರ ರಾಜೇಂದ್‌ರ ವೊಡೆಯರು ಬರಸಿದ ಕೊಡಗಿನ ಚರಿತ್‌ರವು– ಮದ್‌ರಾಸಿನ ಅಪ್‌ಪಣೆಯಿಂದ ಪ್‌ರಕಟಿಸಿದರು."

ಇದರಲ್ಲಿ ಒಂದು ವಾಕ್ಯವನ್ನು ಕೊಡಬಹುದು :

"ಅಂಗೀರಸ ಸಂವತ್‌ಸರದಲ್‌ಲಿ ವೀರರಾಜ ವಡೆಯರ ಪೌತ್‌ರರಾದ ಅಪ್‌ಪಾಜಿ ವಡೆಯರ ಪುತ್‌ರರಾದ ಮುಂದ್‌ದುರಾಜ ವಡೆಯರವರು ಪೂರ್ವಾರಭ್‌ಯ ದೊರೆತನ ಮಾಡಿ ಬಂದಂಥಾ ಸಿಂಹಾಸನದ ಜಾಗಾ ಹಾಲೇರಿ ಅರಮನೆ. ಆದದರಿಂದ, ಅಲ್‌ಲಿ ಇದ್‌ದುಕೊಂಡು ರಾಜ್‌ಯಭಾರ ಮಾಡುತ್‌ತಾ ಇದ್‌ದರು."[೧]

ಜರ್ಮನ ಭಾಷೆಯಲ್ಲಿ ಗೈದ ಕನ್ನಡದ ಸೇವೆ :

ಮೋಗ್ಲಿಂಗ್ ಅವರು ಬರಿಯ ಕನ್ನಡ ಭಾಷೆಯಲ್ಲಿ ಮಾತ್ರ ಬರೆಯದೇ, ಕನ್ನಡದ ಉತ್ತಮವಾದ ಆಣಿಮುತ್ತುಗಳನ್ನು ಜರ್ಮನ್ ದೇಶದ ಜನತೆಗೆ ಪರಿಚಯ ಮಾಡಿಕೊಟ್ಟರು. ಪುರಂದರ ದಾಸರು, ಕನಕದಾಸರು ಮತ್ತು ಇತರ ದಾಸರ ಅನೇಕ ಕೃತಿಗಳನ್ನು ಮುದ್ರಿಸಿದ್ದು ಮಾತ್ರವಲ್ಲದೇ ಜರ್ಮನ್ ಭಾಷೆಯಲ್ಲಿಯೂ ಅವುಗಳ ಅನುವಾದ ಮಾಡಿ ೫೧೬ ಪುಟಗಳ ಉದ್ಗ್ರಂಥವನ್ನಾಗಿ ಸನ್ ೧೮೬೦ ರಲ್ಲಿ ಪ್ರಕಟಿಸಿದರು. ಈ ಜರ್ಮನ್ ಆವೃತ್ತಿ ಲೈಪ್‌ಜಿಗ್ಗಿನಲ್ಲಿ ಸನ್ ೧೮೬೮ ರಲ್ಲಿ ಮರು ಪ್ರಕಟಣೆಗೊಂಡಿತು. ಕೇವಲ ನಾಲ್ಕು ವರುಷಗಳಲ್ಲಿ ಹೀಗೆ ಪುನರ್ಮುದ್ರಣ ಹೊಂದಬೇಕಾದರೆ ಈ ಗ್ರಂಥದ ಜನಪ್ರಿಯತೆಯ ಕಲ್ಪನೆ ಬಾರದಿರದು. ಇದರ ಮುಖಪುಟದ ಒಕ್ಕಣಿಕೆ ಹೀಗಿದೆ : "Leider Kanareischer Sanger. Uebersetzt von H. Fr. Moegling...... Proben von Purandara Dasa und Kanaka Dasa. Kanareisischer Text des ersten Dutzend Dasara Padagalu .Zweites Dutzend...... Leipzig".

ಸನ್ ೧೮೭೧ರ 'ಮದ್ರಾಸ ಟೈಮ್ಸ' ಪತ್ರಿಕೆಯಲ್ಲಿ ಮೋಗ್ಲಿಂಗರ ಬಗೆಗೆ ಬರೆಯುವಾಗ ಚಾರ್ಲ್ಸ ಗೋವರ್ ಅವರು "Moegling is the first in Kannada to bring out Dasa songs" – ಎಂದು ಹೇಳಿದ್ದಾರೆ.

ನಿವೃತ್ತಿಯ ನಂತರ ಜರ್ಮನಿಗೆ ಮರಳಿದ ಮೇಲೆಯೂ ರೆ. ಮೋಗ್ಲಿಂಗ್ ಅವರು ಕನ್ನಡದ ಬಗೆಗಿನ ಆಸ್ಥೆ ಮತ್ತು ಅಭಿಮಾನಗಳನ್ನು ಕಡಿಮೆ ಮಾಡಲಿಲ್ಲ. ಕನ್ನಡದ ಸುಪ್ರಸಿದ್ಧ ಕಾವ್ಯವಾದ

---

೧ ಅದೇ : ಪು. ೪೨೬–೪೨೭.

ಲಕ್ಷ್ಮೀಶ ಮಹಾಕವಿಯ ಜೈಮಿನಿ ಭಾರತದ ಹಲವಾರು ಭಾಗಗಳನ್ನು ಜರ್ಮನ್ ಭಾಷೆಗೆ ಪರಿವರ್ತನಗೊಳಿಸಿದರು. ಈ ಭಾಷಾಂತರದ ೩೨೪ ಪುಟಗಳು ಲಿಪರ್ಝಿಗ್‌ನಲ್ಲಿ ಸನ್ ೧೮೭೦ ರಲ್ಲಿ ಪ್ರಕಟವಾದವು. ಇದರ ಮುಖಪುಟದಲ್ಲಿ ಹೀಗೆ ಹೇಳಿದೆ : "Essetes und Zweites Kapital des altakanaresciehen Jeimini Bharata .. aus dem Kanaresciehen Umgeschrieben, Wortlich ubersetzt und mit Erlauterungen Versehen von Dr. H. Fr. Moegling··· Leipzig."[೧]

ಕೊಡಗಿನ ಜನಜೀವನ ಮತ್ತು ಇತಿಹಾಸವನ್ನು ಕುರಿತು ಮೋಗ್ಲಿಂಗ್ ಅವರು ಇಂಗ್ಲಿಷ ಮತ್ತು ಜರ್ಮನ್ ಭಾಷೆಗಳೆರಡರಲ್ಲೂ ಕೃತಿಗಳನ್ನು ರಚಿಸಿದರು. ಅವರು ಬರೆದ 'Coorg Memoirs' ಎಂಬ ೨೮೦ ಪುಟಗಳ ಪುಸ್ತಕ ಸನ್ ೧೮೫೨ ರಲ್ಲಿ ಪ್ರಕಟವಾದರೆ, ಅದರ ಜರ್ಮನ್ ಭಾಷಾಂತರವಾದ 'Kurga Land' ಸನ್ ೧೮೬೫ ರಲ್ಲಿ ಪ್ರಕಟವಾಯಿತು.

ತುಳು ಪಾಡ್ದನಗಳ ಸಂಗ್ರಹ :

ಕನ್ನಡ, ತಮಿಳು, ಸಂಸ್ಕೃತ, ಪರ್ಶಿಯನ್ ಮತ್ತು ಇಂಗ್ಲಿಷ ಭಾಷೆಗಳನ್ನು ಬಲ್ಲವರಾಗಿದ್ದ ಮೋಗ್ಲಿಂಗರು ತುಳುನಾಡಿನಲ್ಲಿ ಸಂಚರಿಸುತ್ತಿದ್ದಾಗ, ಅಲ್ಲಿಯ ಅನೇಕ ಪಾಡ್ದನಗಳನ್ನು ಸಂಗ್ರಹಿಸಿದರು. ಅಷ್ಟೇ ಅಲ್ಲದೆ ಅವನ್ನು ಇಂಗ್ಲಿಷ ಮತ್ತು ಜರ್ಮನ್ ಭಾಷೆಗಳಿಗೂ ಪರಿವರ್ತಿಸಿದರು. ತುಳು ಭಾಷೆಯ ಜನಪ್ರಿಯ ಹಾಡಾದ 'ಕೋಟಿ ಚೆನ್ನಯ' ಎಂಬುದನ್ನು ಸಂಗ್ರಹಿಸಿ "ಕನ್ನಡದಲ್ಲಿ ಬರೆದು ಪ್ರಚಾರ ಪಡಿಸಿದವರಲ್ಲಿ ಇವನೇ ಮೊದಲಿಗನಾಗಿರುವನು."[೨]

ಹೀಗೆ ಮೋಗ್ಲಿಂಗರು ಕನ್ನಡಕ್ಕಾಗಿ ಗೈದ ಸೇವೆ ಅತಿ ವಿಸ್ತಾರವಾದುದು; ಬಹು ವಿಧವಾದುದು; ಸತ್ವಯುತವಾದುದು; ಕ್ರಾಂತಿಕಾರಕವಾದುದು; ಚಿರಂತನ ಸ್ವರೂಪದ್ದು. ಒಂದು ವಿಧದಲ್ಲಿ ಇವರ ಸೇವೆ ಡಾ. ಕಿಟೆಲ್‌ರ ಸೇವೆಗಿಂತ ಹೆಚ್ಚಿನ್ನೋ ಎನಿಸುತ್ತದೆ. ಆದರೆ, ಇಂದು ಇವರ ಅನೇಕ ಕೃತಿಗಳು ಉಪಲಬ್ಧವಿರದ್ದು ಕನ್ನಡದ ದುರ್ದೈವ. ಕನ್ನಡ ಸಾರಸ್ವತ ಪ್ರಪಂಚ ಜರ್ಮನ್ ದೇಶದ ಈ ಸಾವಂತ ಗೈದ ಕನ್ನಡದ ಸೇವೆಗಾಗಿ ಅವರಿಗೆ ಕೃತಜ್ಞವಾಗಿರಬೇಕು.

—

೧ ಅದೇ : ಪು. ೪೨೮.

೨ ಅದೇ : ಪು. ೪೨೯.

ರಿವರೆಂಡ್ ಫ್ರೆಡ್ರಿಕ್ ಝೀಗ್ಲರ್

(೧೮೩೨ - ೧೯೦೬)

ಧಾರವಾಡ, ಹುಬ್ಬಳ್ಳಿಗಳಲ್ಲಿ ಸುಮಾರು ೩೫ ವರುಷ ಕಾಲ ಇದ್ದುಕೊಂಡು. ಅಲ್ಲಿಯ ಬಾಸೆಲ್ ಮಿಶನ್‌ದ ಚಟುವಟಿಕೆಗಳನ್ನೂ, ಶಾಲೆಯ ಸ್ಥಾಪನೆಯ ಕೆಲಸವನ್ನೂ, ಸಾಹಿತ್ಯದ ಸೇವೆಯನ್ನೂ ಮಾಡಿ ಅಲ್ಲಿಯ ಸಾಮಾಜಿಕ ಜೀವನದ ಹಾಸು-ಹೊಕ್ಕಾಗಿ ಕೀರ್ತಿ ಪಡೆದವರೆಂದರೆ ಡಾ. ಫ್ರೆಡ್ರಿಕ್ ಝೀಗ್ಲರ್ ಅವರು. ಡಾ. ಕಿಟೆಲ್ ಅವರ ಮೇರುಕೃತಿಯಾದ ಕನ್ನಡ ಶಬ್ದಕೋಶವು ಪ್ರಕಟವಾಗುವ ಸುಮಾರು ೧೮ ವರುಷ ಮೊದಲಿಗೇ ಝೀಗ್ಲರ್ ಅವರು ಒಂದು ಶಬ್ದಕೋಶವನ್ನು ರಚಿಸಿದ ಶ್ರೇಯಸ್ಸನ್ನು ಪಡೆದವರಾಗಿದ್ದಾರೆ.

ಫ್ರೆಡ್ರಿಕ್ ಝೀಗ್ಲರ್ ಅವರು ಜರ್ಮನಿ ದೇಶದ ಬೊಬ್ಲಿಂಗೆನ್ ಜಿಲ್ಲೆಯ ಡಾಗರ್‌ಶೆಮ್ (Dagarsheim) ಎಂಬಲ್ಲಿ ಸನ್ ೧೮೩೨ ರ ಮೇ ತಿಂಗಳು ೮ ನೆಯ ತಾರೀಖಿನ ದಿವಸ ಜನಿಸಿದರು.[೧] ಇವರ ತಂದೆಯ ಹೆಸರು ಜೇಕಪ್ ಫ್ರೆಡ್ರಿಕ್ ಝೀಗ್ಲರ್. ವೃತ್ತಿಯಿಂದ ಹೊಲಮನೆ ಮಾಡಿಕೊಂಡವರಾಗಿದ್ದರು. ತಾಯಿಯ ಹೆಸರು ಮೇರಿಯಾ ಮಾರ್ಗರೇಟ್ ಗಾಬ್ ಡಾಂಖೇರೆ (Dannecker). ತಾಯಿ ತುಂಬಾ ಚಟುವಟಿಕೆಯುಳ್ಳವಳೂ, ಬುದ್ಧಿವಂತಳೂ, ಧರ್ಮಶ್ರದ್ಧೆಯುಳ್ಳವಳೂ ಆಗಿದ್ದಳು. ಅವಳ ಮನೆಯೆಂದರೆ ಧರ್ಮಶ್ರದ್ಧೆಯುಳ್ಳವರಿಗೆಲ್ಲ ಒಂದು ಸಮ್ಮಿಲನದ ಸ್ಥಾನವಾಗಿತ್ತು. ಆದರೆ, ಮಗು ಝೀಗ್ಲರರಿಗೆ ತಾಯಿಯ ಮಾರ್ಗದರ್ಶನದ ಲಾಭ ಬಹಳ ದಿವಸಗಳ ವರೆಗೆ ದೊರಕಲಿಲ್ಲ. ಮಗು ಝೀಗ್ಲರ್ ೪ ವರುಷದವರಿರುವಾಗಲೇ ತಾಯಿ ಕ್ರೈಸ್ತಪದವನ್ನು ಸೇರಿದಳು. ಝೀಗ್ಲರರಿಗೆ ಇಬ್ಬರು ಸೋದರಿಯರಿದ್ದ ಹಾಗೆ ಕಾಣುತ್ತದೆ. ಜರ್ಮನಿಯಲ್ಲಿ ನಮೂದಿಸಿಟ್ಟ ಅವರ ಮನೆತನದ ಚರಿತ್ರೆಯಲ್ಲಿ ಝೀಗ್ಲರ್ ಅವರ ಕೌಟುಂಬಿಕ ಹಿನ್ನೆಲೆಯ ಬಗೆಗೆ "ಕೆಲ ಮಟ್ಟಿನ ನಿರಾಶದಾಯಕ ಕೌಟುಂಬಿಕ ಜೀವನ'' ಎಂದು ಉಲ್ಲೇಖಿಸಲಾಗಿದೆ. (rather depressing family life).

ಮಗು ಝೀಗ್ಲರ್ ಅವರು ೧೪ ವರುಷ ವಯಸ್ಸಿನವರೆಗೆ ಡಾಗರಶೆಮ್‌ದ ಪ್ರಾಥಮಿಕ ಶಾಲೆಯಲ್ಲಿಯೇ ಕಲಿತರು. ಅವರಿಗೆ ಆ ಕಾಲಕ್ಕೆ ಒಳ್ಳೆಯ ಧರ್ಮಗುರುವಾಗಿದ್ದ ಕೋಲ್ಬ ಎಂಬವರ ಕೈಯಲ್ಲಿ ಉತ್ತಮ ಶಿಕ್ಷಣ ದೊರಕಿತು. ಅನಂತರ, ಈ ಕೋಲ್ಬ ಅವರ ಮಗಳನ್ನೇ ಝೀಗ್ಲರ್ ಅವರು ಮದುವೆಯಾದರು. ಅನಂತರದ ಶಿಕ್ಷಣ ಕೋಲ್ಬ ಅವರ ಕಕ್ಕ ಮತ್ತು ಬೆಂಜಿಂಝರ್

[೧] ಈ ವಿವರಗಳನ್ನೆಲ್ಲ ಡಾ. ವರದರಾಜ ಹುಯಿಲಗೋಳ ಅವರ ಸಂಗ್ರಹದಲ್ಲಿದ್ದ ಅಪ್ರಕಟಿತ ಜರ್ಮನ್ ಮೂಲ ಪ್ರತಿಯಿಂದ ಸಂಗ್ರಹಿಸಲಾಗಿದೆ.

ಎಂಬವರ ಕೈಯ್ಯಲ್ಲಿ ನಡೆಯಿತು. ತಮ್ಮ ಶಾಲಾ ಜೀವನದ ಪ್ರಭಾವದ ಬಗೆಗೆ ಝೀಗ್ಲರ್ ಅವರು ಹೀಗೆ ಬರೆದಿದ್ದಾರೆ :

"ನನ್ನ ಧಾರ್ಮಿಕ ಶಿಕ್ಷಣ ನನಗೆ ದೊರೆತ ಶಿಕ್ಷಣದ ಗುಣಮಟ್ಟ ಮತ್ತು ನನಗೆ ಶಿಕ್ಷಕರಾಗಿ ದೊರೆತ ಬೆಂಜೀಝುರ ಮತ್ತು ಕೋಲ್ಮರ ಚಾರಿತ್ರ್ಯದ ಮೂಲಕವಾಗಿ ತುಂಬಾ ಯಶಸ್ವಿಯಾಯಿತು. ನಾನು ಅವರಂತೆಯೇ ಆಗಬೇಕೆಂಬ ಆದರ್ಶವನ್ನಿಟ್ಟುಕೊಂಡೆ. ನನ್ನ ಈ ಶಾಲೆಯ ಜೀವನ ನನ್ನ ಮನೆತನದ ಕಹಿ ಜೀವನವನ್ನು ಮರೆಯುವಂತೆ ಮಾಡಿತು."

ನಂತರ, ಝೀಗ್ಲರ್ ಅವರು ಪ್ರಾಥಮಿಕ ಶಾಲಾ ಉಪಾಧ್ಯಾಯರಾಗಿ ವೃತ್ತಿಯನ್ನು ಪ್ರಾರಂಭಿಸಿದರು. ಬೆಳಗು ಮುಂಜಾವಿನ ೪ ಗಂಟೆಗೆ ಎದ್ದು, ಬೈಬಲ್‌ದ ಕಂಠಪಾಠ ಮಾಡುತ್ತಿದ್ದರು. ಝೀಗ್ಲರ್‌ರ ಇನ್ನೊಂದು ಆಸಕ್ತಿಯ ವಿಷಯವೆಂದರೆ ಸಸ್ಯಶಾಸ್ತ್ರ. ಶಿಕ್ಷಕಜೀವನದಲ್ಲಿದ್ದಾಗ, ವಿದ್ಯಾರ್ಥಿಗಳೆಲ್ಲ ಝೀಗ್ಲರರನ್ನು ತುಂಬಾ ಮೆಚ್ಚಿಕೊಂಡಿದ್ದರು. ಅವರು ವಿದ್ಯಾರ್ಥಿಗಳ ಮಾರ್ಗ ದರ್ಶಕರಾಗಿ ಅವರ ಅಭಿವೃದ್ಧಿಗೆ ಸಹಾಯಕರಾದರು. ರಜೆಯ ದಿನಗಳಲ್ಲಿ ವಿದ್ಯಾರ್ಥಿಗಳ ಹಳ್ಳಿಯೂರ ಮನೆಗಳಿಗೆ ಹೋಗಿ, ಅವರ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು. ಇದೇ ಸಮಯಕ್ಕೇ ಇಂಗ್ಲಿಷ ಮತ್ತು ಹೀಬ್ರು ಭಾಷೆಯ ಅಭ್ಯಾಸವನ್ನೂ ಮಾಡಿದರು. ಈ ಮಧ್ಯದಲ್ಲಿ ಬಡಿಗತನ, ಪುಸ್ತಕ ಬೈಂಡು ಮಾಡುವುದು ಮತ್ತು ಕೀಲಿಗಳನ್ನು ತಯಾರು ಮಾಡುವ ಕಲೆಯನ್ನೂ ಕಲಿತರು.

೧೫–೯–೧೮೬೨ ರಂದು ಅಂದರೆ ತಮ್ಮ ವಯಸ್ಸಿನ ೩೦ ನೆಯ ವರ್ಷದಲ್ಲಿ ಝೀಗ್ಲರ್ ಅವರು ಭಾರತಕ್ಕೆ ಹೊರಟು, ನವಂಬರ ತಿಂಗಳ ಮಧ್ಯದಲ್ಲಿ ಮಂಗಳೂರನ್ನು ತಲುಪಿದರು. ಮಂಗಳೂರಲ್ಲಿ ಮೂರು ವರುಷ ಕೆಲಸ ಮಾಡುವಾಗಲೇ, ತಮ್ಮ ಹಿಂದಿನ ಉಪಾಧ್ಯಾಯರಾಗಿದ್ದ ಇಮ್ಯಾನ್ಯುವೆಲ್ ಕೋಲ್ಮ ಅವರ ಹಿರಿಯ ಪುತ್ರಿ ಜ್ಯೂಲಿಯಾನಾ ಎಂಬವರನ್ನು ಮದುವೆಯಾದರು. ಈ ಮದುವೆ ಮಂಗಳೂರಿನಲ್ಲಿ ೧೮೬೫ನೆಯ ಇಸವಿ ನವೆಂಬರ ೬ನೆಯ ತಾರೀಖಿನಂದು ನೆರವೇರಿತು. ಜ್ಯೂಲಿಯಾನಾ ಫ್ರೆಡ್ರಿಕರಿಗೆ ತುಂಬಾ ಅನುಕೂಲವಾದ ಸಹಧರ್ಮಿಣಿಯಾಗಿದ್ದರು. ಈ ಕಾಲದಲ್ಲಿ ಅವರ ಚೊಚ್ಚಲು ಮಗುವು ತೀರಿಕೊಂಡದ್ದರಿಂದ 'ದಕ್ಷಿಣ ಮಹಾರಾಷ್ಟ್ರ'ದ ಹುಬ್ಬಳ್ಳಿಗೆ ವರ್ಗ ಮಾಡಿಸಿಕೊಂಡರು. (೧೮೬೮–೭೬) ನಂತರ 'ದಕ್ಷಿಣ ಮಹಾರಾಷ್ಟ್ರದ' ಧಾರವಾಡದಲ್ಲಿ (೧೮೭೮–೧೯೦೫) ಅವರ ಕೆಲಸ ಪ್ರಾರಂಭವಾಯಿತು. ಝೀಗ್ಲರರ ಮನೆತನದ ಚರಿತ್ರೆಯಲ್ಲಿ ಅವರ ಧಾರವಾಡ ವಾಸ್ತವ್ಯದ ಬಗೆಗೆ ಹೀಗೆ ಬರೆಯಲಾಗಿದೆ :

"The third working field was again in South Maharastra, but this time in Dharwar, where he displayed the height of his labour and enthusiasm for more than 10 years, being the head of the English School and District School Superintendent, lecturer on Baptism, devoting time to literary work by publishing Kanarse text-books and Dictionaries, by helping in the extension building work of the Girls' School and finally in many travels, partly preaching tours, partly official travels. Of the four girls which God gave them in Dharwar and Bettigeri, the youngest passed away after a long severe illness, while the two elder ones had to be sent to Basel by a befriended Missionary lady."

ಸನ್ ೧೮೩೦ ರ ಸುಮಾರಿಗೆ ಧಾರವಾಡ ಮಿಲಿಟರಿ ಠಾಣ್ಯದ ಸ್ಥಾನವಾಗಿದ್ದಿತು. ಇಂದಿಗೂ ಲೈನ ಬಜಾರ ಎಂದು ಕರೆಯಲ್ಪಡುವ ಭಾಗ ಈ ಮಿಲಿಟರಿ ಲೈನ್ಸದವರ ವಾಸ್ತವ್ಯದ ಸ್ಥಳವಾಗಿದ್ದಿತು. ಈ ಮಿಲಿಟರಿ ಜನರ ಧರ್ಮೋಪದೇಶಕ್ಕಾಗಿ ಜರ್ಮನಿಯಿಂದ ಮಂಗಳೂರು ಮಾರ್ಗವಾಗಿ ಧಾರವಾಡಕ್ಕೆ ಬಂದ ಮಿಶನರಿಗಳೆಂದರೆ ರೆವರೆಂಡ ಮೋಗ್ಲಿಂಗ್, ರೆ. ಲೈಯರ್ ಮತ್ತು ರೆ. ಫ್ರೈ ಎಂಬವರು. ಈ ಮೂವರು ಸನ್ ೧೮೩೮ ರಲ್ಲಿ ಒಂದು ಇಂಗ್ಲಿಷ ಮತ್ತು ಒಂದು ಕನ್ನಡ ಶಾಲೆಯನ್ನು ಧಾರವಾಡ ದಲ್ಲಿ ಪ್ರಾರಂಭಿಸಿದರು. ಈ ಶಾಲೆಯೇ ಸನ್ ೧೮೬೩ರಲ್ಲಿ ಪೂರ್ಣ ಹೈಸ್ಕೂಲಾಗಿ ಪರಿವರ್ತಿತ ವಾಯಿತು. ಪ್ರಾಯಶಃ ಧಾರವಾಡ ಜಿಲ್ಲೆಯಲ್ಲಿ ಇದೇ ಪ್ರಪ್ರಥಮವೂ ಮುಂಬಯಿ ಕರ್ನಾಟಕ ಭಾಗದಲ್ಲಿ ದ್ವಿತೀಯವೂ ಆದ ಹಾಯ್‌ಸ್ಕೂಲು. ಈ ಶಾಲೆ ಮೊದಲು ಊರ ಮಧ್ಯಭಾಗದಲ್ಲಿದ್ದ ಹಾಲಗೇರಿ ಕೆರೆಯ ಹತ್ತಿರದ ಸಣ್ಣ ಕಟ್ಟಡದಲ್ಲಿ ನಡೆಯುತ್ತಿತ್ತು. ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದ ಹಾಗೆ, ಈಗಿನ ಮಿಶನ್ ಕಾಂಪೌಂಡದಲ್ಲಿದ್ದ 'ಹೆಬಿಕ್ ಹೌಸಿ'ಗೆ ಅದನ್ನು ಸ್ಥಳಾಂತರಿಸಲಾಯಿತು. ಮೋಗ್ಲಿಂಗ್ ಅವರು ಈ ಶಾಲೆಯ ಪ್ರಥಮ ಪ್ರಿನ್ಸಿಪಾಲರಾಗಿದ್ದರು. ಅನಂತರ ಎರಡನೆಯವರಾಗಿ ಝೀಗ್ಲರ್ ಅವರು ಪ್ರಿನ್ಸಿಪಾಲರಾಗಿದ್ದಾಗ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ೨೦೦ ಕ್ಕೆ ಏರಿತು. ಇವರ ಅವಿರತವಾದ ಪ್ರಯತ್ನದ ಮೂಲಕವಾಗಿಯೇ ಅಂದಿನ ಬ್ರಿಟಿಶ್ ಸರಕಾರದವರು ಶಾಲೆಗೆ ಸುಮಾರು ಆರು ಎಕರೆ ಭೂಮಿಯನ್ನು ಕೊಟ್ಟರು. ಸನ್ ೧೮೯೨ ರಲ್ಲಿ ಈ ಶಾಲೆಯ ಹತ್ತು ಕೋಣೆಗಳು ಸಿದ್ಧವಾದಾಗ 'ಹೆಬಿಕ್ ಹೌಸ'ದಿಂದ ವರ್ಗಗಳನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸ ಲಾಯಿತು. ಇದೆಲ್ಲ ಯಶಸ್ಸಿಗೆ ರೆ. ಝೀಗ್ಲರ್ ಅವರೇ ಕಾರಣ. ಈಗಲೂ ಸಹ ಈ ಕಟ್ಟಡದಲ್ಲಿಯೇ ಇನ್ನೂ ವರ್ಗಗಳು ನಡೆಯುತ್ತಿವೆ. ಅನಂತರ, ಕನ್ನಡದ ಅಪ್ರತಿಮ ಧುರೀಣರಾಗಿ ನೇತೃತ್ವವನ್ನು ವಹಿಸಿದ ದಿವಾನ್ ಬಹದ್ದೂರ ರೊದ್ದ ಶ್ರೀನಿವಾಸರಾಯರು ಮತ್ತು ಕಡಪಾ ರಾಘವೇಂದ್ರರಾಯರು ಡಾ. ಝೀಗ್ಲರ್ ಅವರು ಪ್ರಿನ್ಸಿಪಾಲರಾಗಿದ್ದಾಗ ಇಲ್ಲಿ ವಿದ್ಯಾರ್ಥಿಗಳಾಗಿದ್ದರು. ಸನ್ ೧೮೮೩–೮೪ ರಲ್ಲಿ ಝೀಗ್ಲರ್ ಅವರು ಅನಾರೋಗ್ಯದ ಮೂಲಕ ಸ್ವದೇಶಕ್ಕೆ ಹೋದಾಗ, ಡಾ. ಕಿಟೆಲ್ ಅವರು ಈ ಶಾಲೆಯ ಪ್ರಿನ್ಸಿಪಾಲರಾಗಿ ಕೆಲಸ ಮಾಡಿದರು.

ಧಾರವಾಡದಲ್ಲಿದ್ದಾಗ ಝೀಗ್ಲರ್ ಅವರು ಅಲ್ಲಿಯ ಸಾಮಾಜಿಕ ಜೀವನದ ಹಾಸುಹೊಕ್ಕಿನಲ್ಲಿ ಒಂದಾಗಿದ್ದರು. ಒಂದು ಸಲ ಒಬ್ಬ ಮಹಮದೀಯ ಗೃಹಸ್ಥನು ತನ್ನ ಆಭರಣಗಳನ್ನೆಲ್ಲ ಝೀಗ್ಲರ್ ಅವರಲ್ಲಿ ಕೆಲಕಾಲವಿಟ್ಟು, ಅದಕ್ಕಾಗಿ ರಸೀದಿಯನ್ನು ಸಹ ಕೇಳಲಿಲ್ಲವಂತೆ. "ಉಳಿದ ಯಾರಲ್ಲಿಯ ಕಿಂತಲೂ ನಿಮ್ಮಲ್ಲಿ ನನ್ನ ಆಭರಣಗಳು ತುಂಬಾ ಸುರಕ್ಷಿತವಾಗಿವೆ" ಎಂದು ಅವನು ಹೇಳಿದನಂತೆ. ಅವರ ಕನ್ನಡ ಪ್ರೇಮವನ್ನು ಮೆಚ್ಚಿದ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ಅವರನ್ನು ಸನ್ ೧೮೯೩–೯೪ ರಲ್ಲಿ ಸಂಘದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತು. ವಯಸ್ಸಾದ ಮೂಲಕ ಸನ್ ೧೮೯೫ ರಲ್ಲಿ ಝೀಗ್ಲರ್ ದಂಪತಿಗಳು ಸ್ವದೇಶಕ್ಕೆ ಮರಳಿದರು. ಸನ್ ೧೮೯೬ ರಲ್ಲಿ ಝೀಗ್ಲರ್ ಅವರ ಪತ್ನಿ ಜ್ಯೂಲಿಯಾನಾ ಕ್ರೈಸ್ತಪದವನ್ನು ಸೇರಿದರು. ಇದರಿಂದ ಝೀಗ್ಲರ್ ಅವರ ಜೀವನಪಥ ಮತ್ತಷ್ಟೂ ಏಕಮುಖವಾಯಿತು. ಸನ್ ೧೮೯೬ ರಿಂದ ಅವರು ಸ್ವದೇಶದಲ್ಲಿ ಒಂದು ದಾಯಿಗಳ ಶಾಲೆಯ ಮೇಲ್ವಿಚಾರಕರಾಗಿ ಕೆಲಸ ಮಾಡಿದರು. ಲೀಡಿಯಾ ಎಂಬ ತಮ್ಮ ಮಗಳನ್ನು ಆ ಕಾಲದಲ್ಲಿ ಬೆಟಗೇರಿಯಲ್ಲಿ ಪಾದ್ರಿಯಾಗಿ ಕೆಲಸವನ್ನು ಮಾಡುತ್ತಿದ್ದ ಸ್ಪ್ರಿಂಗ್ ಎನ್ನುವವರಿಗೆ ಮದುವೆ ಮಾಡಿ ಕೊಟ್ಟು ಪುನಃ ಕರ್ನಾಟಕದ ಸಂಪರ್ಕವನ್ನು ಪಡೆಯುವಂತಾಯಿತು.

ಹೀಗೆ, ಯಾವಜ್ಜೀವವೂ ಸಾಹಿತ್ಯ ಮತ್ತು ಸಮಾಜಗಳ ನಿತಾಂತ ಸೇವಕರಾಗಿ ದುಡಿದ ಡಾ. ಝೀಗ್ಲರ್ ಅವರು ೧೯೦೬ ನೆಯ ಇಸವಿ, ರವಿವಾರ, ನವೆಂಬರ ದಿನಾಂಕ ೧೮ರ ಮಧ್ಯಾಹ್ನ

೧೨–೩೦ ಗಂಟೆಗೆ ಇಹಲೋಕ ಯಾತ್ರೆಯನ್ನು ಮುಗಿಸಿದರು. ಅವರ ಚರಿತ್ರೆಯನ್ನು ನಿವೇದಿಸಿದ ಅವರ ಮನೆತನದವರು ಕೃತಜ್ಞತಾಪೂರ್ವಕವಾಗಿ ಈ ಕೊನೆಯ ವಾಕ್ಯವನ್ನು ಹೇಳುತ್ತಾರೆ : " We all family members and sorrowing friends will take his life as an example and follow his faith. "

'ಗೀತೆಗಳು' (೧೮೬೭) :

ಮಂಗಳೂರಿನಲ್ಲಿದ್ದ ರೆ. ಬಿ. ಗ್ರೇಟರ್ (Graeter) ಮತ್ತು ಡಾ. ಝೀಗ್ಲರ್ ಅವರು ಕೂಡಿ ಬೈಬಲ್ ಹಾಡುಗಳನ್ನು ರಚಿಸಿ, 'ಗೀತೆಗಳು' ಎಂಬ ಹೆಸರಿನಿಂದ ಪ್ರಸಿದ್ಧಿಸಿದರು. ಇದರಲ್ಲಿ ಬೈಬಲ್ಲಿನ ಅಂಶಗಳನ್ನು ಹಾಡಿನ ರೂಪದಲ್ಲಿ ಹೇಳಲಾಗಿದೆ. 'ಗೀತೆಗಳು' ದಾಸರ ಪದಗಳಿಂದಲೂ, ಆ ಕಾಲದ ದೇಶೀಯ ಕವಿಗಳಿಂದ ಮತ್ತು ಬೈಬಲ್ ಸಾಹಿತಿಗಳಿಂದ ಬರೆಯಲ್ಪಟ್ಟ ತ್ರಿಪದಿ, ಚೌಪದಿ ಮತ್ತು ಷಟ್ಪದಿ ಪದ್ಯಗಳಿಂದಲೂ ತುಂಬಿದೆ. ಬೈಬಲ್ ಹಾಡುಗಳು ದಾಸರ ಹಾಡುಗಳ ಶೈಲಿಯನ್ನು ಅನುಸರಿಸಿ ಬರೆದಂತೆ ಇವೆ. ಈ ಕವನಸಂಕಲನಗಳು ಕಳೆದ ಶತಮಾನದೊಳಗಾಗಿ ಹಲವು ಬಾರಿ ಪುನರ್ಮುದ್ರಣ ಹೊಂದಿದವು.

A Practical Key to Canarese Grammar (1872) :

ಕನ್ನಡವನ್ನು ಕಲಿಯುವ ಅಭಿಲಾಷೆಯುಳ್ಳ ವಿದೇಶೀಯರಿಗಾಗಿ ಝೀಗ್ಲರ್ ಅವರು ಈ ಪಠ್ಯಪುಸ್ತಕವನ್ನು ಬರೆದರು. ಇದರಲ್ಲಿ ಕನ್ನಡ ಭಾಷೆಯ ವಿವರಣೆಯನ್ನು ಇಂಗ್ಲಿಷ್, ಜರ್ಮನ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ಕೊಡಲಾಗಿದೆ. '' ಈ ಕೈಪಿಡಿಯು ೧೮೮೨ ರಲ್ಲಿ ಎರಡನೇ ಬಾರಿಗೆ ಪ್ರಕಟವಾಯಿತು. ''

ಎ ಪ್ರ್ಯಾಕ್ಟಿಕಲ್ ಕೀ ಟು ದಿ ಕ್ಯಾನರೀಜ್ ಲ್ಯಾಂಗ್ವೇಜ್ (೧೮೭೨) :

ಇದರ ಐದನೆಯ ಆವೃತ್ತಿ ೧೯೩೫ ರಲ್ಲಿ ಪ್ರಕಟವಾಗಿದೆ. ಇದರಲ್ಲಿ ವಿದೇಶೀಯರು ಕನ್ನಡವನ್ನು ಕಲಿಯುವಾಗ ವಹಿಸಬೇಕಾದ ಜಾಗ್ರತೆಯನ್ನು ಸೂಚಿಸಲಾಗಿದೆ. ಅಲ್ಲದೆ, ದಿನನಿತ್ಯದ ಉಪಯೋಗದಲ್ಲಿ ಬೇಕಾಗುವ ಕನ್ನಡ ವಾಕ್ಯಗಳನ್ನು ಕೊಡಲಾಗಿದೆ. ಉದಾಹರಣೆಗೆ, ಈ ಕೆಳಗಿನ ಪ್ರಯೋಗಗಳಲ್ಲಿಯ ಪಡೆ ನುಡಿಗಳನ್ನು ಗಮನಿಸಬಹುದು :

ನಿನಗೆಷ್ಟು ಕೈ ?
ನನಗೆರಡು ಕೈ
ನಿನ್ನ ಕೈ ತೋರಿಸು
ನನ್ನ ಕೈಯಿಂದಾಗುವದಿಲ್ಲ
ನಿಮ್ಮ ಕೈಕೆಳಗಿರುತ್ತಾನೆ
ಈ ಮಾತು ನಿಮ್ಮ ಕೈಯಲ್ಲಿ ಅದೆ
ಅವನ ಕೈಯಲ್ಲಿ ಆಗದು
ಅವನು ಕೈಲಾಗದವ
ಇದರಲ್ಲಿ ಕೈ ಹಾಕಬೇಡ

Kannada Gramatical Primer (1874)
ಮತ್ತು
ಕನ್ನಡ ವ್ಯಾಕರಣ ಬೋಧಿನಿ :

"Among his other books "Kannada Vyakarna Bodhini", where Kannada vocabularies of some homonyms and technical words are given (should be mentioned). Also Kannada Grammatical Primer deserves mention"[೧]

Hymn Book in Kanarese (1875) :

ಇದೂ ಬೈಬಲ್ ಪದ್ಯಗಳನ್ನೊಳಗೊಂಡ ಪುಸ್ತಕ. "ತನ್ನ ಸ್ವಂತ ಹಾಡುಗಳಲ್ಲದೆ ಇತರ ಕ್ರೈಸ್ತ ವಿದ್ವಾಂಸರ ಹಾಡುಗಳೂ ಸೇರಿಸಲ್ಪಟ್ಟಿದ್ದ ಆ ಹೊತ್ತಗೆಯು ಉತ್ತರ ಕರ್ನಾಟಕದ ಶಾಲೆಗಳಲ್ಲಿ ಕ್ರೈಸ್ತ ಗುಡಿಗಳಲ್ಲೂ ಪ್ರಚಾರವಿತ್ತು."

A School Dictionary (1876) :

ಅನೇಕ ವರ್ಷಗಳವರೆಗೆ ಇದು ಆಧಾರ ಗ್ರಂಥವಾಗಿದ್ದಿತು. ಇದರ ಎರಡನೆಯ ಮುದ್ರಣ ೧೮೮೮ ರಲ್ಲಿಯೇ ಆಗಿದೆ. ಇದರಲ್ಲಿ ಅಚ್ಚಗನ್ನಡ ಶಬ್ದಗಳ ಜತೆಗೆ ಸಂಸ್ಕೃತ ಶಬ್ದಗಳನ್ನೂ ಕೊಡಲು ಶ್ರೀಯುತರು ಪ್ರಯತ್ನಿಸಿದ್ದಾರೆ. ಇಲ್ಲಿಯ ವಿಧಾನದ ಬಗೆಗೆ ಹೀಗೆ ಹೇಳಿದ್ದಾರೆ : "The Kanarese language, as used by the people of different districts, being not uniform it has here and there been unavoidable to give words and phrases not uscd in some parts of the Country though very common in another part."

ಕನ್ನಡ ಬಾಲ ವ್ಯಾಕರಣ (೧೮೭೭) :

"ಇದನ್ನು ಡಾ. ಝೀಗ್ಲರ್ ಮತ್ತು ರೆ. ಡಿ. ಕಾಸ್ಟಾ ಅವರು ಕೂಡಿ ೧೮೭೭ ರಲ್ಲಿ ರಚಿಸಿದರು. "ಉತ್ತರ ಕರ್ನಾಟಕದ ಶಾಲೆಗಳಲ್ಲೆಲ್ಲಾ ಹಲವು ವರ್ಷಗಳವರೆಗೂ ಉಪಯೋಗಿಸಲ್ಪಟ್ಟಿತ್ತು."

ಕನ್ನಡ ಶಾಲಾ ವ್ಯಾಕರಣ (೧೮೮೦) :

ಇದನ್ನು ಝೀಗ್ಲರ್ ಮತ್ತು ರೈಸ್ ಕೂಡಿ ಬರೆದರು.

Catechism of Kannada Grammar (1884) :

"Zeigler also made another attempt to present the Kannada Grammar in a more systematic way. This time he classified all the Kannada words under eleven columns, such as verbs, nouns, adverbs, adjectives etc. The name of the book was "Catechism" which was first published in 1884 and underwent several revisions"[೨]

---

೧ The Rev. F. Zeigler and His Activities in the Educational Field in the North Karnatak Area: Mrs. Esther Prakash; 1972 : P. 24 (ಅಪ್ರಕಟಿತ.)

೨ ಅದೇ : ಪು. ೨೪

ಸೇಂಟ ಮಾರ್ಕನು ಬರೆದ ಸುವಾರ್ತೆ ಅಂದರೆ ಮುಕ್ತಿದಾಯಕನ ಚರಿತ್ರೆ (೧೮೯೬) :

ಈ ಚಿಕ್ಕ ಪುಸ್ತಕವನ್ನು ಝೀಗ್ಲರ್ ಮತ್ತು ರೆ. ಹೆನ್ರಿ ಹಾಗ್ (Haugh) ಅವರು ಕೂಡಿ ೧೮೯೬ ರಲ್ಲಿ ಬರೆದರು.

Gospel of St. Luke (1900) :

೧೪೬ ಪುಟಗಳ ಈ ಪುಸ್ತಕ "ತುಂಬಾ ಪ್ರಚಾರವಾದ ಗ್ರಂಥವಾಯಿತು." ಇದನ್ನು ಝೀಗ್ಲರ್ ಮತ್ತು ಹಾಗ್ ಅವರು ಕೂಡಿ ಸನ್ ೧೯೦೦ ರಲ್ಲಿ ಪುನಃ ಪರಿಶೀಲಿಸಿ ಪ್ರಕಟಿಸಿದರು. ಇದಲ್ಲದೆ, 'ಕಾವ್ಯಮಾಲಿಕೆ'ಯೆಂಬ ಕವನ ಸಂಗ್ರಹವೂ, 'Elementary Arithmetic' ಎಂಬ ಮೂರು ಭಾಗಗಳ ಪುಸ್ತಕಗಳೂ ಪ್ರಕಟವಾಗಿವೆ.

ಈ ರೀತಿ, ವಿದೇಶೀಯನಾದ ಈ ಸಾವಂತರು ಕನ್ನಡದ ಜನತೆಯೊಡನೆ ಒಂದಾಗಿ ಬೆರೆತು, ಈ ನಾಡಿನ ಸಾರಸ್ವತ ಪ್ರಪಂಚಕ್ಕೆ ಗಣಿತ, ವ್ಯಾಕರಣ, ಗೀತಗಳ ಪುಸ್ತಕ ಮತ್ತು ಶಬ್ದಕೋಶವನ್ನೂ ಇನ್ನಿತರ ಸಾಹಿತ್ಯವನ್ನೂ ಒದಗಿಸಿಕೊಟ್ಟು ಮಹದುಪಕಾರಗೈದರು.

—

ರೆವರೆಂಡ ಫರ್ಡಿನಾಂಡ ಎಫ್ ಕಿಟೆಲ್

(೧೮೩೨–೧೯೦೩)

ಕನ್ನಡಕೆ ಕನ್ನಡಿಯ ಹಿಡಿಯೆ ದುಡಿದವ ನೀನು
ಅಮುಂಡದ್ರಾವಿಡದ ದಂಡ ಭಾರತ ಖಂಡ
ವೇದಪಥದಲಿ ನಡೆದು ಉಳಿದುದೀಗು ಅಖಂಡ
ಆ ತ್ರಿಕಾಂಡ್ಯೈಕ್ಯವೇ ಅಮರಕೋಶದ ಜೇನು !

ಭೌತವಾವುದು ? ಭಾವವೇನು ? ಉದ್ಭವವೆಲ್ಲಿ ?
'ಮಾತು ಬಲ್ಲವ ಮಾಣಿಕ ತರುವ' ಇದು ಗಾದೆ
ಕನ್ನಡದ ನಾಣ್ನುಡಿಗೆ ಪಟ್ಟ ಕಟ್ಟಿದೆ– ಹೋದೆ
ಉಪ್ಪುಗಾಣದೆ ಬೆಪ್ಪು ಬೆರಗು ಅಂಗ್ಯೆನೆಲ್ಲಿ !

ಓ ಕ್ರಿಸ್ತವಾಸಿ ! ! ನೀನಲ್ಲಿರುವದೇ ಲೇಸು
ಮಾತು ಮಥಿಸುವರೆಲ್ಲ ಅಡ್ಡ ದಿಡ್ಡಾ ಯಾಸಿ
ಅವಿಮುಕ್ತ ಸುಕ್ಷೇತ್ರ ಮಸಣವಾಗಿದೆ ಕಾಸಿ
ವಣಿಕರೊಡನಾಡಿ ತಾ ಸಿಲುಬೆಯೇರಿದ ಯೇಸು !

ಜ್ಯೋತಿ ವ್ಯೈವೆತ್ತಂತೆ ಮಾತು ಮೂರ್ತಿಸದಾಗ
ಹೊಗೆಯ ಖಾಟವೆ ಅಜ್ಞಯಾಜ್ಞಿಕರ ಪಶುಯಾಗ !

–ಹೀಗೆಂದು ಕನ್ನಡದ ವರಕವಿಗಳಾದ ಅಂಬಿಕಾತನಯದತ್ತರು ಕಿಟೆಲ್‌ರನ್ನು ಕುರಿತು ಉದ್ಗಾರ ತೆಗೆದಿದ್ದಾರೆ. ಡಾ. ಕಿಟೆಲ್‌ರು 'ಕನ್ನಡಕೆ ಕನ್ನಡಿಯ ಹಿಡಿಯೆ ದುಡಿದವರು.' ಕನ್ನಡದ ನಾಣ್ನುಡಿಗೆ ಪಟ್ಟಿ ಕಟ್ಟಿದವರು. ಕನ್ನಡ ಕೋಶವನ್ನು ನಿರ್ಮಿಸಿದವರು. ಕನ್ನಡ ವ್ಯಾಕರಣವನ್ನು ಶಾಸ್ತ್ರೀಯವಾಗಿ ಪ್ರತಿಪಾದಿಸಿದವರು. ಕನ್ನಡಕ್ಕೆ ಕ್ರೈಸ್ತಧರ್ಮ, ಸಾಹಿತ್ಯ, ಶಾಸ್ತ್ರವನ್ನು ತಂದವರು. ಕನ್ನಡದ ಸಂಗೀತ, ಪರಂಪರೆಗಳ ಸವಿಯನ್ನು ಬಲ್ಲವರಾಗಿ, ಕ್ರೈಸ್ತಮತ ಈ ಭಾಗದಲ್ಲಿ ಬೆಳೆಯಬೇಕಾದರೆ ಕ್ರೈಸ್ತರೂ ಈ ಸಂಗೀತ, ಹರಿಕಥೆ ಪುರಾಣಗಳ ಮಾರ್ಗವನ್ನು ಹಿಡಿಯಬೇಕೆಂದು ಕಂಡವರು; ಕಂಡು ಹಾಗೆ ಆಚರಿಸಿದವರು.

೧೮೫೮ ರಲ್ಲಿ ಕಂಪನಿ ಸರಕಾರ ಹೋಗಿ ಬ್ರಿಟಿಶ್ ಸರಕಾರ ಭರತಖಂಡದಲ್ಲಿ ಸ್ಥಿರವಾಗಿ ನೆಲಸಿದ ಮೇಲೆ ಅನೇಕ ಜನ ಮೇಧಾವಿಗಳು ನಮ್ಮ ಭರತಭೂಮಿಗೆ ಬಂದರು. ಇವರಲ್ಲಿ ಹಲವರು

ವ್ಯಾಪಾರಕ್ಕಾಗಿ ಬಂದವರು; ಹಲವರು ಕ್ರೈಸ್ತಮತದ ಪ್ರಸಾರಕ್ಕಾಗಿ ಬಂದವರು; ಮತ್ತೆ ಕೆಲವರು ರಾಜಕೀಯ ಆಡಳಿತಗಾರರು. ಐರೋಪ್ಯರಲ್ಲಿ ಹೆಚ್ಚಾಗಿ ಬಂದವರು ಪಾದ್ರಿಗಳು. ಇವರಲ್ಲಿ ಮುಖ್ಯವಾಗಿ ರೀವ್, ಗ್ಯಾರೆಟ್, ಕಿಟೆಲ್, ರೈಸ್, ಝೀಗ್ಲರ್– ಇವರ ಹೆಸರುಗಳನ್ನು ಹೇಳಬೇಕು. ಭಾರತಕ್ಕೆ ಬಂದ ಮಿಶನರಿಗಳು ಹೆಚ್ಚಾಗಿ ಬಾಸೆಲ್ ಎಂಬ ಸ್ಥಳದಿಂದ ಬಂದವರು. ಇವರು ವಿದ್ಯಾಕಾರ್ಯ ಮಾತ್ರವನ್ನಲ್ಲದೆ, ಮಂಗಳೂರಿನಲ್ಲಿ ಹಂಚಿನ ಕಾರ್ಖಾನೆಯನ್ನೂ ಮುದ್ರಣಾಲಯವನ್ನೂ ಪ್ರಾರಂಭಿಸಿದರು. ಬಾಸೆಲ್ ಮಿಶನ್ನಿನ ತರುವಾಯ ಬಂದುದು ವೆಸ್ಲಿಯನ್ ಮಿಶನ್. ಕನ್ನಡಕ್ಕೆ ಹೊಸ ಚೈತನ್ಯವನ್ನು ಕೊಡುವಲ್ಲಿ ಮಿಶನರಿಗಳ ಪಾತ್ರ ಹಿರಿದಾಗಿದೆ. ೧೮೭೨ರ ಜನಗಣತಿಯ ಪ್ರಕಾರ ಧಾರವಾಡ ಪಟ್ಟಣದ ಜನಸಂಖ್ಯೆ ೨೭,೧೩೬ ಇದ್ದು, ಅದರಲ್ಲಿ ೧೯,೮೩೬ ಹಿಂದುಗಳೂ, ೬೭೯೭ ಮುಸಲ್ಮಾನರೂ, ೪೯೩ ಕ್ರಿಶ್ಚಿಯನ್ನರೂ, ೧೦ ಜನ ಇತರರೂ ಇದ್ದರು. ೧೮೮೧ರ ಜನಗಣತಿಯ ಮೇರೆಗೆ ಈ ಸಂಖ್ಯೆ ಒಟ್ಟು ೨೭,೯೯೧ ಇದ್ದು ಅದರಲ್ಲಿ ಹಿಂದೂ ೧೯,೭೦೯, ಜೈನ ೨೭೧, ಮುಸಲ್ಮಾನ ೬೫೪೫, ಕ್ರಿಶ್ಚಿಯನ್ನ ೬೧೮ ಮತ್ತು ಪಾರಸಿ ೨೪ ಜನರಿದ್ದರು. ಧಾರವಾಡದ ಬಾಸೆಲ್ ಮಿಶನ್ ೧೮೩೭ ರಲ್ಲಿ ಸ್ಥಾಪಿಸಲ್ಪಟ್ಟಿತು. ಜೋಡೆಹಳ್ಳಿಯ ಮಿಶನೂ ಇದಕ್ಕೇ ಸಂಬಂಧಿಸಿದ್ದಿತು. ಆಗ ಇಬ್ಬರು ಪಾದ್ರಿಗಳೂ ಒಬ್ಬ ಮಿಶನ್ ಸ್ತ್ರೀಯೂ ಇದ್ದರು. ಹುಬ್ಬಳ್ಳಿಯ ಬಾಸೆಲ್ ಮಿಶನ್ ೧೮೩೯ರಲ್ಲಿ ಪ್ರಾರಂಭವಾಯಿತು. ಉಣಕಲ್ ಹೆಬಸೂರ ಚರ್ಚುಗಳು ಹುಬ್ಬಳ್ಳಿಗೆ ಸೇರಿದ್ದವು. ೧೮೮೪ರಲ್ಲಿ ಹುಬ್ಬಳ್ಳಿಯ ಮಿಶನ್ ಹಾಯಸ್ಕೂಲಿನಲ್ಲಿ ೬೩ ವಿದ್ಯಾರ್ಥಿಗಳೂ, ಹೆಣ್ಣು ಮಕ್ಕಳ ಶಾಲೆಯಲ್ಲಿ ೧೩ ಹುಡುಗರೂ, ೧೨ ಹುಡುಗೆಯರೂ ಅಭ್ಯಾಸ ಮಾಡುತ್ತಿದ್ದರು.

ಫಾದರ್ ಬೆಶ್ಚಿ ಮತ್ತು ಬಿಷಪ್ ಕಾಲ್ಡವೆಲ್ ಮೊದಲಾದವರು ತಮಿಳು ಭಾಷೆಗೂ, ಡಾ. ಗುಂಡರ್ಟ ಮಲೆಯಾಳಿ ಭಾಷೆಗೂ, ಡಾ. ಬ್ರೌನ್ ತೆಲುಗು ಭಾಷೆಗೂ, ರೀವ್ಸ, ಸ್ಯಾಂಡರ್ಸನ್, ಮೊಗ್ಲಿಂಗ್, ಫ್ಲೀಟ್, ರೈಸ್, ಡಾ. ಕಿಟೆಲ್ ಮೊದಲಾದವರು ಕನ್ನಡ ಭಾಷೆಗೂ ಗೈದ ಸೇವೆ ಅಮೋಘವಾಗಿದೆ.

ಕಿಟೆಲ್‌ರ ತಂದೆಯ ಹೆಸರು ಗಾಟ್‌ಫ್ರೀಟ್ ಕ್ರಿಸ್ತಿಯಾನ್ ಕಿಟೆಲ್. ಅವರು ಕ್ರೈಸ್ತಮತದ ಪ್ರೊಟೆಸ್ಟಂಟ್ ಪಂಗಡಕ್ಕೆ ಸೇರಿದ ಧರ್ಮಾಧಿಕಾರಿಯಾಗಿದ್ದರು. ಕಿಟೆಲ್‌ರ ತಾಯಿಯ ಹೆಸರು ಟ್ರ್ಯೊಡೋವ್ ಹೆಲೆನ್ ಹ್ಯಾಬರ್ಟ.[1] ಕಿಟೆಲ್ ಅವರು ಜರ್ಮನಿಯ ವಾಯವ್ಯ ಪ್ರದೇಶದಲ್ಲಿರುವ ರೊಸ್ಟರ್ ಹಾಫ್ (Roster- hafe) ಎಂಬಲ್ಲಿ ೧೮೩೨ನೆಯ ಇಸವಿ ಎಪ್ರಿಲ್ ೭ನೆಯ ತಾರೀಖಿನ ದಿವಸ ಜನ್ಮವೆತ್ತಿದರು. ಇವರು ತಮ್ಮ ತಂದೆ ತಾಯಿಯ ಆರು ಜನ ಮಕ್ಕಳಲ್ಲಿ ಹಿರಿಯರು. ಇನ್ನೊಬ್ಬ ಜೆ. ಕಿಟೆಲ್ ಎಂಬ ಇವರ ಬಂಧು ತಲ್ಲಿಚೇರಿಯಲ್ಲಿ ಕೆಲಕಾಲ ಮಿಶನರಿಯಾಗಿದ್ದರು. ಔರಿಕ್ (Aurich) ನಗರದ ಹಾಯಸ್ಕೂಲು, ಸ್ವಿಝರಲಂಡಿನ ಬಾಸೆಲ್ ನಗರದ ಮಿಶನ್ ಕಾಲೇಜಿನಲ್ಲಿ (೧೮೫೦) ಅಭ್ಯಾಸ ಮುಗಿಸಿದರು. ಹೀಬ್ರು, ಗ್ರೀಕ್, ಲ್ಯಾಟಿನ್, ಫ್ರೆಂಚ್ ಹಾಗೂ ಇಂಗ್ಲಿಷ ಭಾಷೆಗಳಲ್ಲಿ ಇವರು ಪ್ರಾವೀಣ್ಯವನ್ನು ಸಂಪಾದಿಸಿದರು. ಶಾಲೆಯಲ್ಲಿರುವಾಗಲೇ ಕಿಟೆಲ್‌ರ ಅಂತರ್ಮುಖ ಜೀವನದ ಅಭಿವ್ಯಕ್ತಿ ಕಂಡು ಬರುತ್ತದೆ. ಜನ್ಮತಃ ಧಾರ್ಮಿಕ ಪ್ರವೃತ್ತಿಯವರಾದ ಕಿಟೆಲ್ ಅವರಿಗೆ, ಅಂದಿನ ಕ್ಲಾಸಿಕಲ್ ಲೇಖಕರ ಬರಹಗಳು ರುಚಿಸದಾದವು. "His piety appeared to be a personal expression of his mind and thinking. He stood his ground when he communicated with his fellow students, not withdrawing but rather turning inward always. guarded by ethics of a higher calling" –ಎಂದು ಕಿಟೆಲ್‌ರ ಆಗಿನ ಸ್ವಭಾವವನ್ನು ವರ್ಣಿಸಲಾಗಿದೆ. ೧೭ನೆಯ ವರ್ಷದಲ್ಲಿಯೇ

---

೧ ಕನ್ನಡಕ್ಕೆ ಕಿಟೆಲ್‌ರ ಕೊಡುಗೆ (ಡಾ. ಆರ್. ಸಿ. ಹಿರೇಮಠ ಅವರ ಲೇಖನ) : ೧೯೭೧ : ಪು. ೧೦.

ಮಿಶನ್ ಸೇರುವದಾಗಿ ನಿರ್ಧರಿಸಿ, ಆಗಸ್ಟ ೧೮೪೯ರಲ್ಲಿ ಬಾಸೆಲ್ ಮಿಶನ್ ಸಂಸ್ಥೆಗೆ ಅರ್ಜಿ ಹಾಕಿದರು. 'He is mentally and physically fit for his calling' –ಎಂದು ಅವರ ಕಾಲೇಜಿನ ಪ್ರಿನ್ಸಿಪಾಲ್ ರೋಟಹಾರ್ಟ್, ಮಿಶನ್‌ಸಂಸ್ಥೆಗೆ ಶಿಫಾರಸು ಮಾಡಿದರು.

ಕಿಟೆಲ್ ಭಾರತಕ್ಕೆ ಬರುವ ಸಮಯದಲ್ಲಿ ಧಾರವಾಡದಲ್ಲಿ ರೆ. ವೈಗಲ್ ಅವರು ಮಿಶನರಿ ಅಧಿಕಾರಿಗಳಾಗಿದ್ದರು. ಅವರು ಭಾರತೀಯ ತತ್ವಜ್ಞಾನದಲ್ಲಿ ಪಾಂಡಿತ್ಯವುಳ್ಳವರಾಗಿದ್ದರಲ್ಲದೆ, ಕನ್ನಡ ಬೈಬಲ್ ರಚನಾ ಸಮಿತಿಯ ಅಧ್ಯಕ್ಷರೂ ಆಗಿದ್ದರು. ಕನ್ನಡ ಸಾಹಿತ್ಯದ ಇತಿಹಾಸವನ್ನು ಮೊಟ್ಟ ಮೊದಲು ವಿವರಿಸಿದವರೆಂದರೆ ಡಾ. ವೈಗಲ್ ಅವರೇ. (ಕ್ರಿ. ಶ. ೧೮೪೬ – ೪೮). ಕಿಟೆಲ್‌ರು ಧಾರವಾಡಕ್ಕೆ ಬಂದು ಕನ್ನಡವನ್ನು ಅಭ್ಯಸಿಸಬೇಕಿತ್ತು. ಆ ಪ್ರಕಾರ ಕ್ರಿ. ಶ. ೧೮೫೩ರ ಅಕ್ಟೋಬರ ತಿಂಗಳು ಕಿಟೆಲ್ ಮತ್ತು ಕಾಃಫಮನ್ ಅವರು ಬಾಸೆಲ್ ನಗರವನ್ನು ಬಿಟ್ಟು ಟ್ರಯೆಸ್ಟ ಮತ್ತು ಅಲೆಕ್ಝಾಂಡ್ರಿಯಾ ಮಾರ್ಗವಾಗಿ ಭಾರತವನ್ನು ತಲುಪಿದರು. ಇವರು ಧಾರವಾಡಕ್ಕೆ ಬರುವದರಲ್ಲಿಯೇ ರೆ. ವೈಗಲ್ ಅವರ ಬದಲು ರೆ. ಮೋರಿಕ್ ಎಂಬವರು ಧಾರವಾಡದಲ್ಲಿ ಕೆಲಸ ಮಾಡುತ್ತಿದ್ದರು. ಕಿಟೆಲ್‌ರು ಭಾರತಕ್ಕೆ ಬಂದಾಗ ಅವರಿಗೆ ೩೨ ವರ್ಷಗಳ ಪ್ರಾಯ. ಧಾರವಾಡ, ಮಂಗಳೂರು, ಮಡಿಕೇರಿಗಳಲ್ಲಿದ್ದು ಕಿಟೆಲ್‌ರು ಕನ್ನಡವನ್ನು ಕಲಿತರು. ಕಿಟೆಲ್‌ರು ಮಂಗಳೂರಿನಲ್ಲಿದ್ದಾಗ, ಪಾಲಿನ್ ಐತ್ ಎಂಬ ಜರ್ಮನ್ ಮಹಿಳೆಯನ್ನು ಕ್ರಿ.ಶ. ೧೮೬೦ ರಲ್ಲಿ ಮದುವೆಯಾದರು. ಅವರ ಹೊಟ್ಟೆಯಲ್ಲಿ ಇಬ್ಬರು ಗಂಡು ಮಕ್ಕಳು ಜನಿಸಿದರು. ಆದರೆ, ದುರ್ದೈವದಿಂದ ಮದುವೆಯಾದ ನಾಲ್ಕು ವರ್ಷಗಳಲ್ಲಿ ಆಕೆ ಇಹಲೋಕಯಾತ್ರೆಯನ್ನು ಮುಗಿಸಿದರು. ಪತ್ನಿಯ ಸಾವು ಕಿಟೆಲ್‌ರಿಗೆ ಆಘಾತವನ್ನುಂಟುಮಾಡಿತು. ಅಲ್ಲದೆ, ಧಾರವಾಡ, ಮಂಗಳೂರುಗಳ ಹವೆಯೂ ಅಷ್ಟಾಗಿ ಒಗ್ಗಲಿಲ್ಲ. ಆದ್ದರಿಂದ ಆರೋಗ್ಯ ಸುಧಾರಣೆಗಾಗಿ ಕ್ರಿ. ಶ. ೧೮೬೬ರಲ್ಲಿ ಸ್ವದೇಶಕ್ಕೆ ಮರಳಿದರು. ಅಲ್ಲಿ ಆರೋಗ್ಯ ಸುಧಾರಿಸಿದ ನಂತರ ತಮ್ಮ ಪ್ರಥಮ ಪತ್ನಿಯ ತಂಗಿಯಾದ ಜೂಲಿ ಎಂಬಾಕೆಯನ್ನು ೧೮೬೭ರಲ್ಲಿ ಮದುವೆಯಾದರು.

ಭಾರತಕ್ಕೆ ಮರಳಿ ಬಂದು ೧೮೭೧ ರಲ್ಲಿ ಮಡಿಕೇರಿಯಲ್ಲಿ ವಾಸಿಸುತ್ತಿದ್ದರು. ಅವರ ಶಬ್ದಮಣಿ ದರ್ಪಣದ ಪೀಠಿಕೆ ಇಲ್ಲಿಯೇ ೧೮೭೧ ರಲ್ಲಿ ರಚಿತವಾಯಿತು. ೧೮೭೪ ರಲ್ಲಿ ನಾಗವರ್ಮನ ಛಂದೋಂಬುಧಿಯನ್ನು ಪರಿಷ್ಕರಿಸಿ ಮುದ್ರಿಸಿದರು. ಅದಕ್ಕೆ ವಿಸ್ತಾರವಾದ ಮುನ್ನುಡಿಯಲ್ಲೂ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತು ಒಂದು ಪ್ರಬಂಧವನ್ನೂ ಬರೆದರು. 'Indian Antiquary' ಪತ್ರಿಕೆಗೆ ಆಗಾಗ ಲೇಖನಗಳನ್ನು ಬರೆಯುತ್ತಿದ್ದರು. ೧೮೭೭ ರಲ್ಲಿ ಅವರು ಭರತಖಂಡವನ್ನು ಬಿಟ್ಟು ತಮ್ಮ ತಾಯ್ನಾಡಾದ ಜರ್ಮನಿ ದೇಶದ ವುರ್ಟೆಂಬರ್ಗ ಜಿಲ್ಲೆಯ ಟುಬಿಂಜನ್ ಎಂಬ ಊರಿನಲ್ಲಿ ನೆಲಸಿದರು. ತಮ್ಮ ದೀರ್ಘಕಾಲದ ವ್ಯಾಸಂಗದಲ್ಲಿ ಕನ್ನಡದ ಬಗೆಗೆ ಅವರು ಸಂಪಾದಿಸಿದ ಸಾಮಗ್ರಿಯನ್ನೆಲ್ಲ ಟುಬಿಂಜನ್ನಿನಲ್ಲಿ ಕುಳಿತು ಪರಿಷ್ಕಾರ ಮಾಡಿ ೧೮೯೩–೯೪ರಲ್ಲಿ ತಮ್ಮ ಜೀವನಾಭ್ಯಾಸದ ಸಾರ ಸರ್ವಸ್ವವಾದ ಕನ್ನಡ–ಇಂಗ್ಲಿಷ ನಿಘಂಟನ್ನು ಪ್ರಕಟಿಸಿದರು. ಈ ಮಹಾಕೋಶದ ರಚನೆಯನ್ನು ಮೆಚ್ಚಿಕೊಂಡ ಟುಬಿಂಜನ್ ವಿಶ್ವವಿದ್ಯಾಲಯವು ೧೮೯೬ರಲ್ಲಿ ಅವರಿಗೆ ಡಾಕ್ಟರ ಆಫ್ ಫಿಲಾಸಫಿ ಪ್ರಶಸ್ತಿಯನ್ನು ದಯಪಾಲಿಸಿ ಗೌರವಿಸಿತು. ಕಿಟೆಲ್‌ರು ತಮ್ಮ ಜೊತೆಯಲ್ಲಿ ಇಲ್ಲಿಂದ ತೆಗೆದುಕೊಂಡು ಹೋದ ಓಲೆಯ ಗ್ರಂಥಗಳನ್ನೂ ಅವರು ಬರೆದ ಟಿಪ್ಪಣಿಗಳು ಮುಂತಾದವುಗಳನ್ನೂ ಇಂದಿಗೂ ಆ ವಿಶ್ವವಿದ್ಯಾಲಯದವರು ಸುರಕ್ಷಿತವಾಗಿ ಕಾಪಾಡಿಕೊಂಡು ಬಂದಿದ್ದಾರೆ.[೧]

ತಮ್ಮ ಜೀವಮಾನದ ಕೊನೆಯವರೆಗೂ ಹೆಂಡತಿ ಮಕ್ಕಳೊಡನೆ ಸಂತೋಷವಾಗಿ ಕಾಲ ಕಳೆದು

---

೧ ಪ್ರಬುದ್ಧ ಕರ್ನಾಟಕ : ಆಶ್ವಯುಜ ೧೯೫೮ : ಪು. ೧೮೫.

ಡಾ. ಕಿಟೆಲ್ ಅವರು ೧೯೦೩ ನೆಯ ಇಸವಿ ಡಿಸಂಬರ ತಿಂಗಳು ೧೯ನೆಯ ತಾರೀಖಿನಂದು ತಮ್ಮ ೭೨ನೆಯ ವಯಸ್ಸಿನಲ್ಲಿ ಕ್ರಿಸ್ತಾಧೀನರಾದರು........ತಮ್ಮ ಕನ್ನಡ ವ್ಯಾಕರಣದ ಅಚ್ಚಾದ ಪ್ರತಿ ಕೈ ಮುಟ್ಟಿ ಕಣ್ಣಿನಿಂದ ನೋಡುವ ಅವಕಾಶ ತಮಗೆ ಲಭ್ಯವಾಯಿತೆಂದು ಸಾಯುವ ದಿನ ಬೆಳಿಗ್ಗೆ ಅವರು ಮಂಗಳೂರಿನ ಬಾಸೆಲ್ ಕಮಿಟಿಗೆ ಒಂದು ಪತ್ರವನ್ನು ಬರೆದು ಹಾಕಿದರು. ಈ ವ್ಯಾಕರಣ ಅವರ ಕೊನೆಯ ಮಹಾಕೃತಿ. ಹೀಗೆ, ತಮ್ಮ ಜೀವನದ ಕೊನೆಯ ದಿನದವರೆಗೂ ಕನ್ನಡಕ್ಕಾಗಿ ದುಡಿದು ಕನ್ನಡದ ವಿದ್ವತ್ತಿಗೆ ಭದ್ರವಾದ ತಳಹದಿಯನ್ನು ಹಾಕಿದವರು ಡಾ. ಕಿಟೆಲ್‌ರವರು.

ಶಬ್ದಮಣಿದರ್ಪಣ (೧೮೭೨) :

ಕಿಟೆಲ್‌ರಿಂದ ಸಂಪಾದಿತವಾದ ಈ ಗ್ರಂಥ ೧೮೭೨ ರಲ್ಲಿ ಪ್ರಕಟವಾಯಿತು. ಈ ಗ್ರಂಥದ ಪರಿಶೋಧನೆಗಾಗಿ ಡಾ. ಕಿಟೆಲ್ ಅವರು ೯ ಕೈಬರಹದ ಪ್ರತಿಗಳನ್ನು ಉಪಯೋಗಿಸಿದ್ದಾರೆ.

ಛಂದೋಂಬುಧಿ (೧೮೭೫) :

ನಾಗವರ್ಮನ ಈ ಗ್ರಂಥಕ್ಕೆ ಸುದೀರ್ಘವಾದ ಮುನ್ನುಡಿಯನ್ನೂ ಕನ್ನಡ ಸಾಹಿತ್ಯ ಚರಿತ್ರ ವಿಷಯಕ ಪ್ರಬಂಧವನ್ನೂ ಸೇರಿಸಿದ್ದಾರೆ. ೧೪ ಕೈಬರಹಗಳ ಪ್ರತಿಗಳನ್ನು ಪರಿಶೀಲಿಸಿ ಈ ಗ್ರಂಥವನ್ನು ಸಂಪಾದಿಸಿದ್ದಾರೆ. ಕನ್ನಡದ ಹಿರಿಮೆಯ ಬಗೆಗೆ ಈ ಗ್ರಂಥದ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ : "......My own impression is that the more Canarese vernacular is known, the more evident it becomes that it will fully bear comparison with any vernacular literature of the south."

ಕನ್ನಡ-ಇಂಗ್ಲಿಷ ನಿಘಂಟು (೧೮೯೪) :

ಡಾ. ಕಿಟೆಲ್‌ರವರ ಕೀರ್ತಿಸ್ತೂಪವೆಂದರೆ ಅವರ ಅಮೋಘವಾದ ಬೃಹತ್‌ಕೋಶ. ಈ ಮಹಾಕೋಶವನ್ನು ಸಿದ್ಧಗೊಳಿಸಲಿಕ್ಕೆ ಅವರಿಗೆ ೧೫ ವರ್ಷಕಾಲ ಹಿಡಿಯಿತು. ಡಾ. ಕಿಟೆಲ್‌ರ ಮೊದಲು ರೀವರವರೇನೋ ೧೮೧೭ ರಿಂದ ೧೮೩೨ ರ ವರೆಗೆ ೧೫ ವರ್ಷ ಪ್ರಯತ್ನಪಟ್ಟು ಒಂದು ಕನ್ನಡ-ಇಂಗ್ಲಿಷ್ ನಿಘಂಟನ್ನು ನಿರ್ಮಿಸಿದ್ದರು. ಆದರೆ ಆ ನಿಘಂಟು ಅಷ್ಟು ಶಾಸ್ತ್ರೀಯವೂ ಪ್ರಮಾಣಭೂತವೂ ಆಗಿರಲಿಲ್ಲ. ಆದ್ದರಿಂದ ಕಿಟೆಲ್ ಅವರು ಕನ್ನಡದ ಶಾಸ್ತ್ರೀಯ ಕೋಶದ ನಿರ್ಮಿತಿಗಾಗಿ ಬಹುವಿಧವಾಗಿ ಪರಿಶ್ರಮಪಟ್ಟರು. ಆರೋಗ್ಯ ಸುಧಾರಣೆಗಾಗಿ ಜರ್ಮನಿ ದೇಶದ ಎಸ್ಲಿಂಜನ್ ಎಂಬಲ್ಲಿ ೧೮೭೭ ರಿಂದ ೧೮೮೩ರ ವರೆಗೆ ನೆಲೆಸಿದಾಗಲೇ ಈ ಶಬ್ದಕೋಶದ ಪ್ರಥಮ ಕರಡನ್ನು ಸಿದ್ಧಪಡಿಸಿದರು. ಕನ್ನಡ ಪಂಡಿತರ ಕೂಡ ಚರ್ಚೆ ಮಾಡಿ, ಕೊನೆಯ ಪ್ರತಿ ಸಿದ್ಧಗೊಳಿಸಬೇಕೆಂಬ ದೃಷ್ಟಿಯಿಂದ ಕ್ರಿ. ಶ. ೧೮೮೩ರಲ್ಲಿ ಪುನಃ ಧಾರವಾಡಕ್ಕೆ ಬಂದರು. ಅಲ್ಲಿ ಪಂಡಿತರ ಕೂಡ ಚರ್ಚಿಸಿದರು. "ಪ್ರಾಚೀನ ಗ್ರಂಥಗಳ ಶಬ್ದಸಂಪತ್ತಿಯನ್ನು ಶೇಖರಿಸಿ ಪರಿಷ್ಕರಿಸಿದರು. ದ್ರಾವಿಡ ಜ್ಞಾತಿ ಶಬ್ದಗಳನ್ನು ಸಂಗ್ರಹಿಸಿ, ನಿಷ್ಪತ್ತಿಯನ್ನು ಸೂಚಿಸಿದರು. ಗ್ರಂಥಸ್ಥ ಉದಾಹರಣೆಗಳನ್ನು ಕೊಡುವದಲ್ಲದೆ, ಜನ ಸಾಮಾನ್ಯರ ಆಡು ನುಡಿಗಳತ್ತ ದೃಷ್ಟಿ ಹರಿಸಿದರು; ಗಾದೆಗಳನ್ನು ಸಂಗ್ರಹಿಸಿದರು. ಹಲವಾರು ಪದಾರ್ಥಗಳನ್ನು ಕಿಸೆಯಲ್ಲಿಟ್ಟುಕೊಂಡು, ಧಾರವಾಡ ಹುಬ್ಬಳ್ಳಿ ಬೀದಿಗಳಲ್ಲಿ ಸಂಚರಿಸಿ, ಹಳ್ಳಿ ಶಹರದಲ್ಲಿ ಕೇಳಿ ಅರ್ಥ ಸಂಗ್ರಹ ಮಾಡಿದರು. ಹುಬ್ಬಳ್ಳಿಯ ವಸ್ತ್ರದ ಶಿವಲಿಂಗಪ್ಪ ಎಂಬವರಿಂದ ಅನೇಕ

ಶಬ್ದ ಸಂಗ್ರಹಿಸಿದರು........೭೦,೦೦೦ ಶಬ್ದಗಳನ್ನೊಳಗೊಂಡ ಹಸ್ತಪ್ರತಿ ೧೮೮೨ರಲ್ಲಿ ಸಿದ್ಧವಾಯಿತು. ಮಿತಿಮೀರಿದ ತಲೆನೋವು ಹಾಗೂ ನರಗಳ ದೌರ್ಬಲ್ಯದ ಮೂಲಕ ಕ್ರಿ. ಶ. ೧೮೮೨ರಲ್ಲಿ ಕಿಟೆಲ್ ಜರ್ಮನಿಗೆ ಹೋಗಿ ಟುಬಿಂಜನ್ ವಿಶ್ವವಿದ್ಯಾಲಯದ ಹತ್ತಿರ ತಮ್ಮ ಕುಟುಂಬದೊಂದಿಗೆ ವಾಸ ಮಾಡಿದರು. ಅಲ್ಲಿಯೇ ಮಂಗಳೂರಿನಲ್ಲಿ ಪ್ರಕಟವಾಗುತ್ತಿದ್ದ ಕೋಶದ ಪರಿವೀಕ್ಷಣ ಕಾರ್ಯವನ್ನು ಟುಬಿಂಜನ್‌ನಿಂದಲೇ ನೋಡುತ್ತಿದ್ದು, ೧೮೮೩ರಲ್ಲಿ ಮೊದಲ ಮಾತುಗಳನ್ನು ಬರೆದರು. (ಹೀಗೆ), ೧೮೯೪ ರಲ್ಲಿ ಅವರ ಜೀವನದ ಪರಮೋಚ್ಚಕೃತಿ ಕನ್ನಡ–ಇಂಗ್ಲಿಷ ನಿಘಂಟು ಪ್ರಕಟವಾಯಿತು.''[೧] ''೧೮೯೪ ರಲ್ಲಿ ಪ್ರಕಟವಾದ ಈ ನಿಘಂಟು ಇವತ್ತಿಗೂ ಕನ್ನಡ ಭಾಷೆಯ ನಿಷ್ಕೃಷ್ಟವಾದ, ಪ್ರಮಾಣ ಭೂತವಾದ ಮಹಾಶಬ್ದಕೋಶವಾಗಿದೆ. ಇಷ್ಟು ಖಚಿತವೂ, ಶಾಸ್ತ್ರೀಯವೂ ನಿಯಮಬದ್ಧವೂ ಆದ ನಿಘಂಟು ಭರತಖಂಡದ ಯಾವ ದೇಶಭಾಷೆಗೂ ಇಲ್ಲವೆಂದು ಬಲ್ಲವರು ಹೇಳುತ್ತಾರೆ.''[೨]

ಈ ಕೋಶದ ಬಗೆಗೆ ಡಾ. ಹುಲ್ಷರವರು 'his greatest scientific achievement' ಎಂದೂ, 'will remain a monumentum oer perennium of a noble life devoted to incessant earnest labour' ಎಂದೂ ಹೇಳುತ್ತಾರೆ. ಕಿಟೆಲ್‌ರವರ ಕೋಶದ ಬಗೆಗೆ 'ಇಂಡಿಯನ್ ಎಂಟಿಕ್ವರಿ'ಯ ೨೪ನೆಯ ಸಂಪುಟದಲ್ಲಿ ಬರೆಯುತ್ತ ಜೆ.ಎಫ್. ಫ್ಲೀಟ್ ಅವರು ಈ ಕೃತಿಯನ್ನು ಹೀಗೆ ಪ್ರಶಂಸಿಸಿದ್ದಾರೆ: " And every page of it, and of its preface, bears witness to the constant care, earnestness, and thoroughness with which Kittel devoted himself to the task that lay before him. "

ಈ ಕೃತಿ —

''ಬಾಯೊಣಗಿ ತುತ್ತು
ಅಂಗಳದಾಗ ಕುಳಿತಾಗ
ನೀ ನೀರು''

– ಎಂದು ಆಧುನಿಕ ಕವಿಗಳಿಂದ ಹೊಗಳಿಸಿಕೊಳ್ಳಲ್ಪಟ್ಟಿದೆ. ಗ್ರೀಕ ನಾಟಕಗಳಲ್ಲಿ ಕನ್ನಡ ಶಬ್ದ ಗಳ ಮಾತುಗಳ ವಿಷಯ ಹೇಳುವಾಗ ಕಿಟೆಲ್‌ರನ್ನು ನೆನೆದು "A high authority to whom I would have gladly appealed is no more among us." ಎಂದು ಡಾ. ಹುಲ್ಷ ಅವರು ವ್ಯಥೆಪಟ್ಟಿದ್ದಾರೆ.

ಕಿಟೆಲ್‌ರವರ ಈ ಬೃಹತ್‌ಕೋಶವು ಇಡೀ ಪ್ರಪಂಚದ ಗಮನವನ್ನೇ ಸೆಳೆಯಿತು. ಈ ಕೋಶ ಪ್ರಕಟವಾದ ಎರಡು ವರ್ಷಗಳಲ್ಲಿ ಅಂದರೆ ೧೮೯೬ ಮೇ ೧೩ ರಂದು ಮಿ. ಗೋರ್ಬ ಎಂಬವರು ಈ ಕೋಶದಲ್ಲಿ ವ್ಯಕ್ತವಾದ ಪಾಂಡಿತ್ಯಕ್ಕಾಗಿ ಕಿಟೆಲ್ ಅವರಿಗೆ ಡಾಕ್ಟರೇಟ್ ಗೌರವವನ್ನು ಕೊಡ ಬೇಕೆಂದು ಟುಬಿಂಜನ್ ವಿಶ್ವವಿದ್ಯಾಲಯಕ್ಕೆ ಸೂಚಿಸಿದರು. ಆ ಪ್ರಕಾರ ಟುಬಿಂಜನ್ ವಿಶ್ವವಿದ್ಯಾಲಯವು ಜೂನ್ ೬, ೧೮೯೬ ರಂದು ಡಾ. ಕಿಟೆಲ್‌ಅವರಿಗೆ ಗೌರವ ಡಾಕ್ಟರೇಟ ಪದವಿಯನ್ನು ನೀಡಿತು.

ವ್ಯಾಕರಣ (೧೯೦೩):

ಕಿಟೆಲ್‌ರವರ ಕೊನೆಯ ಕೃತಿಯಾದ ವ್ಯಾಕರಣ ಗ್ರಂಥದಲ್ಲಿ ಹಳಗನ್ನಡ, ನಡುಗನ್ನಡ, ಹೊಸ

೧ ಕನ್ನಡಕ್ಕೆ ಕಿಟೆಲ್‌ರ ಕೊಡುಗೆ: (ಡಾ. ಆರ್. ಸಿ. ಹಿರೇಮಠ ಅವರ ಲೇಖನ): ೧೯೭೧: ಪು. ೧೩–೧೪.
೨ ಪ್ರಬುದ್ಧ ಕರ್ಣಾಟಕ (ಡಿ. ಎಲ್. ನರಸಿಂಹಾಚಾರ್ ಅವರ ಲೇಖನ): ೧೯೫೪: ಪು. ೧೮೭.

ಗನ್ನಡ ಅವಸ್ಥಾತ್ರಯಗಳ ವ್ಯಾವರ್ಣನೆ ಇದೆ. ಇದರ ಪೀಠಿಕೆಯನ್ನು ಡಾ. ಕಿಟೆಲ್ ಅವರು ಫೆಬ್ರುವರಿಯಲ್ಲಿ ಬರೆದರು. ಕಿಟೆಲ್ ಕೋಶದ ಬಗೆಗೆ ವಿಮರ್ಶೆಯನ್ನು ಬರೆಯುವಾಗ ಡಾ. ಫ್ಲೀಟ್ ಹೀಗೆ ಹೇಳಿದ್ದರು :

"We still require a complete and critical grammar in English...... It is to be hoped that Mr. Kittel may find himself able now to take such a grammar in hand, and supply the want that has been so long felt in this direction." (Indian Antiquary, Vol. 35)

– ಅದರ ಫಲವೇನೋ ಎಂಬಂತೆ ಈ ವ್ಯಾಕರಣ ನಿರ್ಮಿತಿ ಹೊಂದಿತು. ಈ ವ್ಯಾಕರಣದ ಮೂಲ ಆಧಾರ ಕೇಶಿರಾಜನ ಶಬ್ದಮಣಿ ದರ್ಪಣವಾಗಿದ್ದರೂ, ಮತ್ತು ಮೂಲತಃ ಇದು 'Prescriptive' ವರ್ಗದ ವ್ಯಾಕರಣ ಗ್ರಂಥಕ್ಕೆ ಸೇರಿದ್ದರೂ, ಈ ಗ್ರಂಥದಲ್ಲಿ ಕಿಟೆಲ್‌ರು ಪೂರ್ವಗ್ರಹೀತವಾದ ನಿಯಮಗಳನ್ನು ರಚಿಸದೆ, ಉಪಲಬ್ಧವಾದ ಸಾಮಗ್ರಿಯ ಆಧಾರದ ಮೇಲಿಂದ ನಿಯಮಗಳನ್ನು ರಚಿಸಿದ್ದಾರೆ. ಕೇಶಿರಾಜನ ಗ್ರಂಥದ ವ್ಯಾಖ್ಯಾನವನ್ನೂ ಮಾಡಿದ್ದಾರೆ. ಉದಾಹರಣೆಗೆ ಕೇಶಿರಾಜನು 'ಅ' ಷಷ್ಠಿ ವಿಭಕ್ತಿಯ ಪ್ರತ್ಯಯವೆಂದು ಹೇಳಿದ್ದರೆ, ಕಿಟೆಲ್‌ರು 'ಅ' 'ತಿ' ಎರಡನ್ನೂ ಹೆಸರಿಸಿ, 'ಅ' ಕಾವ್ಯಗಳಲ್ಲಿ ಬಳಕೆಯಾಗುತ್ತದೆಂದು ಹೇಳುತ್ತಾರೆ. ಹಳಗನ್ನಡ, ನಡುಗನ್ನಡ, ಹೊಸಗನ್ನಡ ಹಾಗೂ ಉತ್ತರ ಗನ್ನಡಗಳಿವೆಯಲ್ಲದೆ, ಧಾರವಾಡ ಮತ್ತು ಮೈಸೂರ ಭೇದಗಳನ್ನು ಹೇಳಿದ್ದಾರೆ. ಅಲ್ಲದೇ, ಎಲ್ಲದಕ್ಕೂ ಹೆಚ್ಚಿನ ಶ್ರೇಯಸ್ಸೆಂದರೆ, ಕೇವಲ ಗ್ರಾಂಥಿಕ ಪ್ರಯೋಗಗಳನ್ನು ಮಾತ್ರ ಹೇಳದೇ, ಜಾನಪದ ಪ್ರಯೋಗಗಳನ್ನೂ ಹೇಳಿದ್ದಾರೆ : ಮಗನ್ನ, ಭಾವನ್ನ ಇತ್ಯಾದಿ. ಈ ಗ್ರಂಥದ ಬಗೆಗೆ ಡಾ. ಹುಲ್ಷ ಅವರು "Throughout the book we feel the master hand of a mature scholar, whose deep erudition and love of his subject is blended with amiable modesty" ಎಂದು ಮೆಚ್ಚಿ ನುಡಿದಿದ್ದಾರೆ.

ಈ ಗ್ರಂಥಗಳಲ್ಲದೆ, ಡಾ. ಕಿಟೆಲ್ ಅವರು ೧೮೭೨ ರಿಂದ ೧೮೯೪ ರ ವರೆಗೆ ಇಂಗ್ಲಿಷಿನಲ್ಲಿ ಬರೆದಿರುವ ೧೯ ಲೇಖನಗಳು ಇಂಡಿಯನ್ ಎಂಟಿಕ್ವರಿಯಲ್ಲಿ ಪ್ರಕಟವಾಗಿವೆ. ದ್ರಾವಿಡ ಸಂಖ್ಯಾವಾಚಕಗಳು, ಕರ್ನಾಟಕ ವೈಷ್ಣವ ದಾಸರು, ಸಂಸ್ಕೃತ ಕೋಶಕ್ಕೆ ಸೇರಿದ ಕನ್ನಡ ಶಬ್ದಗಳು, ಸಂಗೀತ ವಿಷಯಕವಾಗಿ ನಿಜಗುಣ ಶಿವಯೋಗಿಗಳ ವಿಚಾರಗಳು– ಮೊದಲಾದ ವಿಷಯಗಳನ್ನು ಕುರಿತು ಅವರು ಬರೆದ ಲೇಖನಗಳು ಅವರ ಆಸಕ್ತಿ, ಅಭಿರುಚಿ, ಪಾಂಡಿತ್ಯಗಳನ್ನು ತೋರಿಸುತ್ತವೆ.

ಡಿ. ಎಲ್. ಎನ್. ಹೇಳಿದ ಹಾಗೆ— "ಶಾಸ್ತ್ರೀಯವಾದ ಮಾರ್ಗದಲ್ಲಿ ಕನ್ನಡ ವಿದ್ವತ್ತು ಬೆಳೆಯುವದಕ್ಕೆ ಅವರು (ಕಿಟೆಲ್‌ರು) ಶ್ರಮಿಸಿದರು. ಆ ಶ್ರಮದ ಫಲವಾಗಿ ಇಂದು ಕನ್ನಡ ನಾಡು, ನುಡಿ, ಸಾಹಿತ್ಯಗಳನ್ನು ಹಲವು ದೃಷ್ಟಿಯಿಂದ ನೋಡಿ ವಿಮರ್ಶೆ ಮಾಡುವ ವಿದ್ವಾಂಸರ ಪರಂಪರೆಯೇ ಸೃಷ್ಟವಾಗಿದೆ.... ಇಂದಿನ ಪರಿಸ್ಥಿತಿಗೆ ಕಾರಣಭೂತರಾದವರಲ್ಲಿ ಕಿಟೆಲ್ ಅವರು ಅಗ್ರಗಣ್ಯರಾದ ಪ್ರಾಚೀನರು; ಕನ್ನಡದ ಋಷಿಗಳಲ್ಲಿ ಅವರೂ ಒಬ್ಬರು. ಜರ್ಮನಿಯಲ್ಲಿ ಹುಟ್ಟಿದ ಅವರು ಕನ್ನಡಿಗರಾಗಿ ಮೆರೆದರು. ಅವರನ್ನು ಸ್ಮರಿಸಿಕೊಳ್ಳುವುದು ಪವಿತ್ರ ವಸ್ತುವೊಂದನ್ನು ಧ್ಯಾನಿಸಿದಂತೆ ಪುಣ್ಯಕರವಾದದ್ದು."[೧]

೧ ಪ್ರಬುದ್ಧ ಕರ್ಣಾಟಕ : ೧೯೫೮ : ಪು. ೧೮೮.

ಕರ್ನಾಟಕ ಕಾವ್ಯಮಾಲೆ (೧೮೭೪) :

ಕ್ರಿ. ಶ. ೧೮೭೪ ರಲ್ಲಿ ಬಾಸೆಲ್ ಮಿಶನದ ವತಿಯಿಂದ ಪ್ರಕಟಿತವಾದ 'ಕರ್ನಾಟಕ ಕಾವ್ಯಮಾಲೆ' ಕಿಟೆಲ್‌ರ ಸಂಕಲನನೈಪುಣ್ಯಕ್ಕೆ ನಿದರ್ಶನವಾಗಿದೆ. ಕಾವ್ಯ ರಚಿಸುವವನು ಕವಿಯಿದ್ದಂತೆ, ಕಾವ್ಯ ಸೌಂದರ್ಯವನ್ನು ಕಂಡು ಹಿಡಿಯುವವನೂ ಕೆಲಮಟ್ಟಿಗೆ ಕವಿಯೇ ಇದ್ದ ಹಾಗೆ.

ಹಾಡಿದರೇನು, ಹಾಡದಿದ್ದರೇನು
ಹಾಡನುದಿಸುವ ಭಾವ ಎದೆಯೊಳಿರಲು.

ಈ ಸಂಕಲನದ ಉದ್ದೇಶವನ್ನು ಕಿಟೆಲ್ ಅವರು ಈ ರೀತಿ ಹೇಳಿದ್ದಾರೆ :

"The present volume of selections from Canarese poetry has been prepared not only with regard to the want of Schools, but also with the aim to cultivate a taste for good poetry in the reader."

"ಈ ಸಂಕಲನದಲ್ಲಿ ಸರ್ವಜ್ಞ, ಲಕ್ಷ್ಮೀಶ, ಕುಮಾರವ್ಯಾಸ, ಕುಮಾರ ವಾಲ್ಮೀಕಿ, ದಾಸರು, ಮಹಾಲಿಂಗರಂಗ, ಷಡಕ್ಷರಿ, ವಿರೂಪಾಕ್ಷಪಂಡಿತ, ಸೋಮೇಶ್ವರ, ಕೇಶಿರಾಜ, ನಾಗವರ್ಮ ಮೊದಲಾದ ಕವಿಗಳ ಕೃತಿಗಳಿಂದ ಆರಿಸಿದ ಭಾಗಗಳಿವೆ. ಪ್ರಸ್ತಾವನೆಯಲ್ಲಿ ಈ ಕವಿಗಳ ಜೀವನ ಕಾಲ ವಿಚಾರವನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡಲಾಗಿದೆ. ಕನ್ನಡ ಭಾಷೆಯ ಸ್ತುತಿ, ಕನ್ನಡ ಛಂದಸ್ಸಿನ ವಿವರ, ಒಳ್ಳೆಯ ಕಾವ್ಯದ ಲಕ್ಷಣ, ದೇವರು, ಪಾಪ, ಸೂರ್ಯೋದಯ, ಇತ್ಯಾದಿ ವಿವಿಧ ವಿಚಾರಗಳನ್ನು ಕುರಿತಾದ ೧೦೩ ಭಾಗಗಳಿವೆ. ಪ್ರತಿಯೊಂದು ಪದ್ಯಕ್ಕೂ 'ಪರಿಚ್ಛೇದ' 'ಅನ್ವಯಂ' ಮತ್ತು 'ಟೀಕು' ಎಂಬ ಮೂರು ಭಾಗಗಳಲ್ಲಿ ಪದ ವಿಭಾಗ, ಪದಾನ್ವಯ ಮತ್ತು ವಿಮರ್ಶೆಯನ್ನು ಕೊಡಲಾಗಿದೆ. ಗ್ರಂಥದ ಕಡೆಯಲ್ಲಿ ನಿಘಂಟುವೊಂದಿದೆ. ಸುಮಾರು ೧೨೫ ಪುಟಗಳಷ್ಟು ಹರಡಿಕೊಂಡಿರುವ ಇದು ಗ್ರಂಥಕ್ಕೊಂದು ಮಹತ್ವವನ್ನು ತಂದಿದೆ."[೧]

ಡಾ. ಕಿಟೆಲ್ ಅವರು ಬರೆದ ಇತರ ಕೃತಿಗಳಲ್ಲಿ ಈ ಕೆಳಗಿನವುಗಳನ್ನು ಉಲ್ಲೇಖಿಸಬಹುದು : 'ಹೊಸ ಒಡಂಬಡಿಕೆ' (New Testament) ಯ ಹಲವು ಸ್ವಾರಸ್ಯಕರವಾದ ಭಾಗಗಳನ್ನು ಆಯ್ದು ಕಿಟೆಲ್ಲರು ಕ್ರಿ ಶ. ೧೮೫೫ ರಲ್ಲಿ 'ಹೊಸ ಒಡಂಬಡಿಕೆ' ಎಂಬ ಹೆಸರಿನಲ್ಲಿ ಅನುವಾದ ಮಾಡಿದರು. 'ಸಂಸಾರ ಕ್ರಮ' 'ಉಭಯಮಾರ್ಗ ನಂಬಿ ಜೀವಿಸಿರಿ' (೧೮೫೮ – ೬೫) 'ಡೇನಿಯಲನೂ ಅವನ ಜತೆಗಾರರೂ' (೧೮೬೫) ಮತ್ತು 'Uber le ursprung des ling Kultus' ಎಂದು ಲಿಂಗ ಪೂಜಾ ವಿಷಯಕವಾಗಿ ಜರ್ಮನ್ ಭಾಷೆಯಲ್ಲಿ ಒಂದು ಕಿರುಹೊತ್ತಗೆಯನ್ನು ೧೮೭೬ ರಲ್ಲಿ ಬರೆದರು. 'ಪರಮಾತ್ಮ ಜ್ಞಾನ'— ಬೈಬಲ್‌ದಲ್ಲಿದ್ದ ಕಿಟೆಲ್‌ರ ನಂಬಿಗೆಯನ್ನು ವಿವರಿಸುವ ಗ್ರಂಥ. ಇವಲ್ಲದೆ ಕನ್ನಡ ಪಂಚತಂತ್ರ, ಪರಮಾತ್ಮ ಜ್ಞಾನ, ಕ್ರೈಸ್ತಸಭಾಚರಿತ್ರೆ ಮೊದಲಾದವುಗಳನ್ನು ಬರೆದಿದ್ದಾರೆ.

'ಇಂಡಿಯನ್ ಎಂಟಿಕ್ವೆರಿ'ಯಲ್ಲಿ ಬಂದ ಕಿಟೆಲ್‌ರ ಲೇಖಗಳಲ್ಲಿ ಈ ಕೆಳಗಿನವುಗಳನ್ನು ಗಮನಿಸಬಹುದು :

(1) Canarese Country Compared with the Countries adjacent to it (Jan, 1873)

---

೧ ಕನ್ನಡಕ್ಕೆ ಕಿಟೆಲ್‌ರ ಕೊಡುಗೆ (ಪ್ರೊ. ದೇ. ಜವರೇಗೌಡ ಅವರ ಲೇಖನ) : ೧೯೭೧ : ಪು. ೧೯.

(2) Notes Concerning the numerals of the Ancient Dravidians (Jan, 1873)
(3) Coorg superstitions (Feb, 1873)
(4) Note on Dravidian Numerals (April, 1873)
(5) Coorg superstitions–demons and deities (June, 1873)
(6) The Coorgs–polyandry (June, 1873)
(7) On the Karnataka Vaishnava Dasas (Nov. 1873)

ಸಣ್ಣ ಕರ್ನಾಟಕ ಕಾವ್ಯಮಾಲೆ (೧೮೬೮) :

ಕ್ರಿ. ಶ. ೧೮೬೮ ರಲ್ಲಿ 'ಸಣ್ಣ ಕರ್ನಾಟಕ ಕಾವ್ಯಮಾಲೆ' ಅಥವಾ 'Minor Poetical Anthology' ಎಂಬ ಹೆಸರಿನ ಸ್ವರಚಿತವಾದ ಷಟ್ಪದೀ ಕವನಗಳ ಸಂಗ್ರಹವನ್ನು ಪ್ರಕಟಿಸಿದರು. ಈ ಗ್ರಂಥ ೧೨೨ ಪುಟಗಳಷ್ಟಿದೆ. ಉದಾಹರಣೆಗಾಗಿ, ಇದರಲ್ಲಿಯ ಒಂದು ಪದ್ಯವನ್ನು ಕೊಡಬಹುದು :

ಪಡಲು ದಿಕ್ಕಿನ ಯಹೂದಿ ದೇಶದ
ಲಡವಿಯೊಂದನು ಪೊಕ್ಕ ಕುರುಬರು
ನಡುವಣಿರುಳೊಳು ಹಿಂಡುಕಾಯುತ್ತಿರುವ ಸಮಯದಲೀ
ಒಡನೆ ದೇವರದೂತ ಬರಲವ
ರೆಡೆಗೆ ದೇವರ ಮಹಿಮೆಯೆಸೆವರೆ
ತೊಡಗಿತಾಗವರಧಿಕ ಭಯದವರಾಗಿ ಬೆಗ್ಗಿದರೂ

ಕ್ರಿ. ಶ. ೧೮೭೪ ರಲ್ಲಿ ಈ ಸಂಕಲನ ಇತರ ಕವನಗಳಿಂದೊಡಗೂಡಿ ೪೦೦ ಪುಟದಷ್ಟಾಯಿತು.

ಪರಮಾತ್ಮ ಜ್ಞಾನ (೧೮೬೩) :

ಈ ಚಿಕ್ಕ ಪುಸ್ತಕದಲ್ಲಿ ಲೇಖಕರ ಕ್ರೈಸ್ತ ಮತ್ತು ಹಿಂದು ಧರ್ಮಗಳ ತೌಲನಿಕ ಜ್ಞಾನವನ್ನು ಕಾಣಬಹುದಾಗಿದೆ. ಅಲ್ಲಲ್ಲಿ ಸಂಸ್ಕೃತ ಶ್ಲೋಕಗಳೂ ಇವೆ. ಈ ಪುಸ್ತಕದ ಬಗೆಗೆ ಹೀಗೂ ಒಂದು ಅಭಿಪ್ರಾಯವಿದ್ದಿತು : "ಈ ಪಾದ್ರಿ ಪುಸ್ತಕದಲ್ಲಿ ಹಿಂದೂ ದೇವತೆಗಳೆಲ್ಲ ಉದ್ಧಾರವಾದುದು ಇವರ ಅಸಹಿಷ್ಣುತೆಯ ಪ್ರಭಾವದಿಂದಲೇ ಅಲ್ಲವೇ" (ಜಯ ಕರ್ನಾಟಕ : ೧೬-೭-೧೯೨೪)

ಇಂಗ್ಲಂಡ ದೇಶದ ಇತಿಹಾಸ (೧೮೬೪) :

ಇದು ಮಾರಿಸ್ ಹೆನ್ರಿ ಅವರ ಗ್ರಂಥದ ಅನುವಾದ. ಇದರ ಪುಟಸಂಖ್ಯೆ ೪೨೩ ಇದೆ.

ಸಂಕ್ಷೇಪ ವ್ಯಾಕರಣ (೧೮೬೫ j :

ಕಿಟೆಲ್‌ರು ಕನ್ನ ಡ ವ್ಯಾಕರಣ ವಿಷಯಕವಾಗಿ ೧೦೪ ಪುಟಗಳಲ್ಲಿ ಬರೆದ ಈ ಗ್ರಂಥವನ್ನು ಪುನಃ ಪರಿಷ್ಕರಿಸಿ 'ವ್ಯಾಕರಣ ಸೂತ್ರಗಳು' ಎಂಬ ಹೆಸರಿನಲ್ಲಿ ಕನ್ನಡ ವ್ಯಾಕರಣವನ್ನು ವಿವರಿಸುವ ಉತ್ತಮ ಗ್ರಂಥವಾಗಿ ಹೊರತಂದರು.

ಯಜ್ಞತಂತ್ರ ಸುಧಾನಿಧಿ (೧೮೬೦) :

ಇದರಲ್ಲಿ ಹಿಂದೂ ಮತ್ತು ಕ್ರೈಸ್ತ ಮತಗಳ ತುಲನಾತ್ಮಕ ವಿವೇಚನೆಯಿದೆ.

ಸಹಸ್ರ ಗಾಥಾಮೃತ ಕಲಶ (೧೮೬೫) :

ಕನ್ನಡದಲ್ಲಿದ್ದ ಸುಮಾರು ೨೦೦೦ ಗಾದೆಗಳನ್ನು ಇದರಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಇದೂ ಅಲ್ಲದೆ, ಕಿಟೆಲ್‌ರು ಮಂಗಳೂರಿನ 'ವಿಚಿತ್ರ ವರ್ತಮಾನ ಸಂಗ್ರಹ' ಎಂಬ ಪತ್ರಿಕೆಯ ಸಂಪಾದಕರಾಗಿ ೧೮೬೨ ರಲ್ಲೂ, ಬಿ. ಎಲ್. ರೈಸರ 'ಅರುಣೋದಯ' ಎಂಬ ಪತ್ರಿಕೆಯ ಸಹಸಂಪಾದಕರಾಗಿ ೧೮೬೪ ರಲ್ಲೂ ಕೆಲಸ ಮಾಡಿದರು.

೧೮೬೨ ರಲ್ಲಿ ಮಂಗರಾಜ ನಿಘಂಟುವಿನ ಬಗೆಗೆ ಬರೆದದ್ದಲ್ಲದೆ, ೧೮೭೩ ರಲ್ಲಿ 'Vaishnava Dasas of Karnataka' ಎಂಬುದರ ಬಗೆಗೆ ಲೇಖನವನ್ನು ಬರೆದು ಅದರಲ್ಲಿ ಪುರಂದರ, ಕನಕ, ವಿಠಲ, ವೆಂಕಟದಾಸ ಮೊದಲಾದವರ ಪರಿಚಯವನ್ನು ಮಾಡಿಕೊಟ್ಟರು. ಕಿಟೆಲ್‌ರು ಅನುವಾದ ಮಾಡಿದ ಪುರಂದರ ದಾಸರ ಒಂದು ಕವನವನ್ನು ಈ ಕೆಳಗೆ ಕೊಡಲಾಗಿದೆ. ಇದರಿಂದ ಅವರ ವಿಷಯ ಜ್ಞಾನವೂ ಕವಿತ್ವ ಶಕ್ತಿಯ ಅರಿವೂ ಉಂಟಾಗುತ್ತದೆ :

All the Gods are behind Vishnu
In charming devotion all are behind the Snake-Lord
All the published books are behind the Bharata
All trees are behind the sacred Tulsi
All the vitality is behind the wind
All the vows are behind Madhwa's doctrine

ಕ್ರೈಸ್ತಮತ ಭಾರತದಲ್ಲಿ ಪ್ರಚಾರವಾಗಬೇಕಾದರೆ ಹಿಂದೂಮತ ಪದ್ಧತಿಯ ಪ್ರಚಾರ ಸಾಧನವನ್ನು ಬಳಸದೇ ಗತ್ಯಂತರವಿಲ್ಲವೆಂಬುದನ್ನು ಕಿಟೆಲ್‌ರು ಅರಿತಿದ್ದರು. ಹಿಂದೂ ಪದ್ಧತಿಯ ಹರಿಕೀರ್ತನ, ಪುರಾಣ, ವಾದ್ಯಮೇಳ ಇವೆಲ್ಲ ಜನಮನವನ್ನು ಆಕರ್ಷಿಸುವ ಸಾಧನಗಳಾಗಿರುವವೆಂಬುದನ್ನು ಅವರು ಅರಿತಿದ್ದರು. ಅದಕ್ಕಾಗಿ ಮಿಶನ್ ಕೇಂದ್ರಕ್ಕೆ ಅವರು ಒಪ್ಪಿಸಿದ ವರದಿಯಲ್ಲಿ ಭಾರತಕ್ಕೆ ಬರುವ ಪ್ರಚಾರಕರು ಸಂಗೀತವನ್ನು ಬಲ್ಲವರಿರಬೇಕೆಂದೂ, ಕವಿತಾಶಕ್ತಿಯುಳ್ಳವರಾಗಿರಬೇಕೆಂದೂ ವರದಿ ಮಾಡಿದರು. ಈ ಮಾರ್ಗದಲ್ಲಿ ಸ್ವತಃ ತಾವೇ ಮುಂದಾಗಿ, ಕನ್ನಡ ಭಾಷೆಯಲ್ಲಿ ಕವಿತ್ವಕ್ಕೆ ತೊಡಗಿದರು. ಅವರು ಅನೇಕ ಪ್ರಾರ್ಥನೆಗಳನ್ನು ಕನ್ನಡದಲ್ಲಿ ಬರೆದುದಲ್ಲದೆ, ಕ್ರಿಸ್ತಚರಿತ್ರೆಯನ್ನು ಭಾಮಿನಿ ಷಟ್ಪದಿಯಲ್ಲಿ ಬರೆದರು. ಅದರ ಶೈಲಿಯ ಸೊಗಸಿಗೆ ಈ ಕೆಳಗಿನ ಉದಾಹರಣೆಯನ್ನು ಕೊಡಬಹುದು :

ಒಯ್ದರಾತನ ದಂಡಿನಾಳ್ಗಳು
ಹೊಯ್ದರಾತನ ಬಾರುಹಗ್ಗದಿ
ಗಯ್ದರಾತನ ಹಾಸ್ಯ ರಾಜನ ಸೋಗು ತೊಡಿಸುತಲಿ
ಕೊಯ್ದರಾತನ ತಲೆಯ ಮುಳ್ಳಿಂ
ಬಯ್ದರಾತಗೆ ರಾಜ ಎನುತಲಿ
ಕೈದುವೆನುತಲಿ ಕೊಟ್ಟ ಬೆತ್ತದಿ ಹೊಡೆದರಾತನಿಗೆ

– ಇದು ಜರ್ಮನ್ ವ್ಯಕ್ತಿಯೊಬ್ಬ ಬರೆದ ಕವಿತೆ ಎಂದು ಊಹಿಸಲು ಸಾಧ್ಯವಿಲ್ಲ.

ನೂತನ ವರುಷದ ಸ್ವಾಗತಕ್ಕಾಗಿ ಡಾ ಕಿಟೆಲ್‌ರು ಬರೆದ ಈ ಪ್ರಾರ್ಥನಾಗೀತವೂ ಮನೋಜ್ಞ ವಾಗಿದೆ. ಈ ಗೀತ ಅವರ ಅಧ್ಯಾತ್ಮಪ್ರವೃತ್ತಿ, ಸಮಾಜಸೇವಾಭಾವನೆ, ಕ್ರೈಸ್ತಮತನಿಷ್ಠೆಗಳನ್ನು ವ್ಯಕ್ತಪಡಿಸುತ್ತದೆ.

ನಾವೀಗ ಕೂಡಿ ಹಾಡಿ
ಕರ್ತಂಗೆ ಸ್ತೋತ್ರ ಮಾಡಿ
ಕೃತಜ್ಞರಾಗಿರೋಣ
ಆತಂಗೆ ಪ್ರಾರ್ಥಿಸೋಣ

ಒಂದೊರ್ಷ ಬಿದ್ದು ಸಂತು
ಮತ್ತೊಂದು ಮೂಡಿ ಬಂತು
ಈ ದಿನಕಾತ ತಾನೆ
ನಮ್ಮನ್ನು ತಂದಿದಾನೆ

ಸಹಸ್ರ ಚಿಂತೆಯಲ್ಲು
ಹೃತ್ಕಾರ್ಯ ಕಷ್ಟದಲ್ಲು
ವಿಜಯ ಹೊಂದಿದ್ದೇವೆ
ಹೃದ್ಧೈರ್ಯಪಡುತ್ತೇವೆ.

ನೀನೆಮ್ಮ ಜೀವಗತಿ
ನಿನ್ನಕ್ಷಿಯಿಂದ ಪತಿ,
ಕಾಪಾಡು ನಮ್ಮ ಬಲ
ಯತ್ನೈಸಲೇನು ಫಲ ?

ನಮ್ಮಾತ್ಮಸುಯ್ದು ಕುಗ್ಗೆ
ಆಗೆಮ್ಮ ಸುಖದ ಬುಗ್ಗೆ !

ದುರ್ಗತಗಾಗು ಗತಿ
ವಿಮನಗಾಗು ಮತಿ
ನಿರ್ಬಲಗಾಗು ಬಲ
ನಿಃಸ್ಥಲಗಾಗು ಸ್ಥಲ

ರೋಗಿಷ್ಠಂಗೆ ದಯೆ
ಗೈದಿಹೆ, ಕಷ್ಟ ಭಯ
ಇತ್ಯಾದಿ ಮನೋಭಾರ
ಮಾಡಯ್ಯ ಪರಿಹಾರ !

ಕೊಡಯ್ಯ ಬೇಡಿದ್ದನ್ನು
ಕ್ರಿಸ್ತೇಸು ರಕ್ಷೆಯನ್ನು
ಈ ಹೊಸ ವರ್ಷದಲ್ಲಿ
ಕಣ್ಣಾಡಿಸೆಲ್ಲರಲ್ಲಿ !

ಕಿಟೆಲ್‌ರು ೧೯೦೩ರ ಡಿಸೆಂಬರ ೧೯ ರಂದು ತಿರುಗಾಡಲು ಹೋಗಿ ಬಂದ ಕೆಲಕಾಲದಲ್ಲಿಯೇ ಒಮ್ಮೆಲೆ ಅಸ್ವಸ್ಥರಾದರು. ಅದರಿಂದಲೇ ಅವರು ಮೃತಿ ಹೊಂದಿದರು. ಟುಬಿಂಜನ್ ನಗರದ ರುದ್ರಭೂಮಿಯಲ್ಲಿ ಕವಿಗಳು ಮತ್ತು ತತ್ವವೇತ್ತರ ಸಮಾಧಿಗಳ ಮಧ್ಯದಲ್ಲಿ ಕಿಟೆಲ್‌ರ ಸಮಾಧಿಯೂ ಇದೆ. (ಇದರ ಭಾವಚಿತ್ರವನ್ನು ಅನ್ಯತ್ರ ಕೊಡಲಾಗಿದೆ) ಕಿಟೆಲ್‌ರ ಹೆಂಡತಿ ಜ್ಯೂಲಿ ಪತಿಯ ಮರಣ ಕಾಲದ ವರೆಗೂ ಸೇವೆಯನ್ನು ಮಾಡಿ ೧೯೨೩ ರಲ್ಲಿ ತೀರಿಹೋದರು. ಅವರ ಮೂರು ಗಂಡುಮಕ್ಕಳೂ ಒಬ್ಬ ಮಗಳೂ ತೀರಿಕೊಂಡು, ಇಂದು ಕಿಟೆಲ್ ಸಂತಾನವಿಲ್ಲದಂತಾಗಿ, ಅವರ ಸಮಾಧಿಯನ್ನು ನೋಡಿಕೊಳ್ಳುವವರಿಲ್ಲದಾಗಿದೆ. ಆದರೂ, ಕನ್ನಡಕ್ಕಾಗಿ ದುಡಿದ ಕಿಟೆಲ್‌ರ ನೆನಪು ಕನ್ನಡಿಗರೆಲ್ಲರ ಹೃದಯದಲ್ಲಿ ನೆಲೆ ನಿಂತು ಜೀವಂತ ಸ್ಮಾರಕವಾಗಿ ಉಳಿದಿದೆ ಎಂಬುದರಲ್ಲಿ ಸಂದೇಹವಿಲ್ಲ.

—

ಜಾನ್ ಎಫ್. ಫ್ಲೀಟ್

(೧೮೪೭–೧೯೧೭)

ಜಾನ್ ಫೇತ್‌ಫುಲ್ ಫ್ಲೀಟ್ ಅವರು ಇಂಗ್ಲೆಂಡಿನ ಚೆಸ್ವಿಕ್ ಜಿಲ್ಲೆಯಲ್ಲಿ ಸನ್ ೧೮೪೭ ರಲ್ಲಿ ಜನಿಸಿದರು. ಇವರ ತಂದೆಯ ಹೆಸರು ಜಾನ್ ಜಾರ್ಜ ಫ್ಲೀಟ್. ತಾಯಿ ಎಸ್ತರ್ ಫೇತ್‌ಫುಲ್. ಇವರು ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸ ಮಾಡಿ ಸನ್ ೧೮೬೫ ರಲ್ಲಿ ಇಂಡಿಯನ್ ಸಿವಿಲ್ ಸರ್ವೀಸದಲ್ಲಿ ಸೇರಿದರು. ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಅವರಿಗೆ ಸಂಸ್ಕೃತವನ್ನು ಕಲಿಸಿದವರು ಥಿಯೋಡರ್ ಗೋಲ್ಡಸ್ಟಕರ್ ಅವರು. ಆಗಿನ ಕಾಲದಲ್ಲಿ ಐ.ಸಿ.ಎಸ್. ಆದ ಉಮೇದವಾರರು ಕಡ್ಡಾಯವಾಗಿ ಸಂಸ್ಕೃತವನ್ನು ಅಭ್ಯಸಿಸಬೇಕೆಂದಿದ್ದುದರಿಂದ ಫ್ಲೀಟ್ ಅವರು ಸಂಸ್ಕೃತದ ಅಭ್ಯಾಸವನ್ನು ಕೈಕೊಂಡರು. ಆದರೆ, ಕೇವಲ ಆಡಳಿತಾಧಿಕಾರಿಯಾಗಿ ಅಧಿಕಾರ ನಡೆಸಿ ಹೋಗಬೇಕಾಗಿದ್ದ ಈ ವ್ಯಕ್ತಿ ಸಂಸ್ಕೃತಕ್ಕೂ, ಭಾರತೀಯ ಭಾಷೆ, ಸಂಸ್ಕೃತಿಗಳ ಪರಂಪರೆಗೂ ಉಜ್ವಲವಾದ ಸೇವೆಯನ್ನು ಗೈಯಬೇಕೆಂದು ಪರಮಾತ್ಮನ ಸಂಕಲ್ಪವಿದ್ದಂತೆ ಕಾಣುತ್ತದೆ.

ಸನ್ ೧೮೬೫ ರಲ್ಲಿ ಐ. ಸಿ. ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾದ ಫ್ಲೀಟರವರು ಸನ್ ೧೮೬೭ ರಲ್ಲಿ ಮುಂಬಯಿಗೆ ಬಂದು ರೆವಿನ್ಯೂ ಅಧಿಕಾರಿಗಳಾಗಿ ನೇಮಕ ಹೊಂದಿದರು. ಸನ್ ೧೮೬೭ ರಿಂದ ೧೮೭೨ರ ವರೆಗೆ ಅವರು ಅಸಿಸ್ಟಂಟ ಕಲೆಕ್ಟರ ಮತ್ತು ಮ್ಯಾಜಿಸ್ಟ್ರೇಟ ಎಂದು ಕೆಲಸ ಮಾಡಿದರು. ಅನಂತರ, ೧೮೭೨ ರಿಂದ ೧೮೭೫ರ ವರೆಗೆ ದಕ್ಷಿಣ ವಿಭಾಗದ ಶಿಕ್ಷಣಾಧಿಕಾರಿಗಳಾಗಿ ನೇಮಕ ಹೊಂದಿದರು. ಹೀಗೆ, ಶಿಕ್ಷಣಾಧಿಕಾರಿಗಳಾಗಿ ಕೆಲಸ ಮಾಡುವಾಗಲೇ ಅವರಿಗೆ ಧಾರವಾಡದ ಕೂಡ ಸಂಪರ್ಕ ಉಂಟಾದುದು. ನಂತರ ಸನ್ ೧೮೭೫ರಲ್ಲಿ ಕೊಲ್ಹಾಪುರ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳ ಪೊಲಿಟಿಕಲ್ ಏಜಂಟರೆಂದು ನೇಮಕ ಹೊಂದಿದರು.

ಫ್ಲೀಟರವರು ಯಾವ ಆಡಳಿತಾತ್ಮಕ ಸೇವೆಯಲ್ಲಿದ್ದರೂ, ಅವರ ಮೊದಲ ಆಸ್ಥೆಯೆಂದರೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ವ್ಯಾಸಂಗ. ಹೋದಲ್ಲೆಲ್ಲ ಅವರು ಈ ದಿಶೆಯಲ್ಲಿಯೇ ಕೆಲಸ ಮಾಡಿದರು. ಇದೇ ಕಾಲಕ್ಕೆ ಅವರ ಮನಸ್ಸಿನ ಪ್ರವೃತ್ತಿಗೆ ಅನುಕೂಲವಾದ ಒಂದು ಹೊಸ ಖಾತೆ ಪ್ರಾರಂಭವಾಯಿತು.

ಕೇಂದ್ರ ಸರಕಾರವು ಆಗ ಶಾಸನಗಳ ಸಂಶೋಧನೆ ಮತ್ತು ಅಭ್ಯಾಸಕ್ಕಾಗಿ ಎಪಿಗ್ರಫಿ (ಶಾಸನ) ಇಲಾಖೆಯನ್ನು ಪ್ರಾರಂಭಿಸಿತು. ಪುರಾತತ್ವ ಶಾಖೆಯ ಪ್ರಥಮ ಡಾಯರೆಕ್ಟರ ಜನರಲ್‌ರಾಗಿದ್ದ ಸರ್ ಅಲೆಕ್ಝಾಂಡರ್ ಕನಿಂಗ್‌ಹ್ಯಾಮ್ ಅವರೂ ಮತ್ತು ಗಿಬ್ಸ ಅವರೂ ಈ ಶಾಸನ ಇಲಾಖೆಯ ಕರಣಧಾರತ್ವವನ್ನು ಫ್ಲೀಟ್ ಅವರು ವಹಿಸುವಂತೆ ಮನ ಒಲಿಸಿದರು. ಆ ರೀತಿ ಮಿ. ಫ್ಲೀಟ್

ರವರು ಸನ್ ೧೮೮೩ ರಲ್ಲಿ ಗವರ್ನಮೆಂಟ ಎಪಿಗ್ರಾಫಿಸ್ಟ ಎಂದು ನೇಮಕ ಹೊಂದಿದರು. ಈ ಕಾಲದಲ್ಲಿ ಅವರು ಗುಪ್ತ ಮನೆತನದ ಶಾಸನಗಳನ್ನು ಸಂಶೋಧನೆ ಮಾಡಿ ಪ್ರಕಟಿಸಿದರು. ಸನ್ ೧೮೮೩–೧೮೮೬ರ ವರೆಗೆ ಈ ಕೆಲಸವನ್ನು ಮಾಡಿದ ನಂತರ ಸರಕಾರೀ ಶಾಸನಾಧಿಕಾರಿ ಎಂಬ ಹುದ್ದೆ ರದ್ದು ಮಾಡಲ್ಪಟ್ಟ ಮೂಲಕ ಫ್ಲೀಟ್ ಅವರು ಪುನಃ ರೆವಿನ್ಯೂ ಇಲಾಖೆಗೆ ಮರಳಿ, ಸನ್ ೧೮೮೬ ರಲ್ಲಿ ಸೊಲ್ಲಾಪುರ ಜಿಲ್ಲೆಯ ಕಲೆಕ್ಟರ ಮತ್ತು ಮ್ಯಾಜಿಸ್ಟ್ರೇಟ ಎಂದು ಕೆಲಸ ಮಾಡಿದರು. ಅನಂತರ, ತಮ್ಮ ನೌಕರಿಯ ಅವಧಿಯ ಕೊನೆಯಲ್ಲಿ ಕಲೆಕ್ಟರ ಆಫ್ ಕಸ್ಟಮ್ಸ ಎಂದು ಕೆಲಸ ಮಾಡಿ ಸನ್ ೧೮೯೭ ರಲ್ಲಿ ನಿವೃತ್ತಿ ಹೊಂದಿದರು. ಹೀಗೆ, ಸನ್ ೧೮೬೭ ರಲ್ಲಿ ಪ್ರಾರಂಭವಾದ ಅವರ ನೌಕರಿ ಜೀವನ ೩೦ ವರ್ಷಗಳ ಅಮೌಲ್ಯವಾದ ಸೇವೆಯ ನಂತರ ಸನ್ ೧೮೯೭ ರಲ್ಲಿ ಮುಕ್ತಾಯಗೊಂಡಿತು.

ನೌಕರಿಯಿಂದ ನಿವೃ ಹೊಂದಿದ ನಂತರವೂ ಫ್ಲೀಟರ ವಿದ್ಯಾಸಂಬಂಧಕವಾದ ಆಸ್ಥೆ ಕಡಿಮೆತ್ತಿಯಾಗಲಿಲ್ಲ. ನಿವೃತ್ತಿಯ ನಂತರ ಅವರು ಇಂಗ್ಲಂಡ ದೇಶದ ಈಲಿಂಗ್ ಎಂಬಲ್ಲಿ ನೆಲಸಿದರೂ, ರಾಯಲ್ ಏಶಿಯಾಟಿಕ್ ಸೊಸೈಟಿಯ ಪತ್ರಿಕೆಗಳಿಗೂ, ಎಪಿಗ್ರಾಫಿಯಾ ಇಂಡಿಕಾಕ್ಕೂ ಅನೇಕ ಅಮೌಲ್ಯವಾದ ಲೇಖನಗಳನ್ನು ಬರೆದರು. ಸನ್ ೧೯೦೬ರಲ್ಲಿ ಗ್ರೇಟಬ್ರಿಟನ್ ಮತ್ತು ಆಯರ್ಲಂಡದ ರಾಯಲ್ ಏಶಿಯಾಟಿಕ್ ಸೊಸೈಟಿಯ ಗೌರವ ಕಾರ್ಯದರ್ಶಿಯಾಗಿ ನಿಯುಕ್ತರಾಗಿ ಕೊನೆಯಂವರೆಗೂ ಆ ಸಂಸ್ಥೆಯ ಸೇವೆಯನ್ನು ಮಾಡಿದರು. ಅವರ ಸೇವೆಯನ್ನು ಮೆಚ್ಚಿದ ಆ ಸಂಸ್ಥೆಯು ಸನ್ ೧೯೧೨ರಲ್ಲಿ ಅವರಿಗೆ ಒಂದು ಚಿನ್ನದ ಪದಕವನ್ನು ಸಮರ್ಪಿಸಿ ಅವರ ಸೇವೆಯನ್ನು ಗೌರವಿಸಿತು. ಈ ರೀತಿ ಸಾರಸ್ವತ ಪ್ರಪಂಚಕ್ಕೆ ಬಹುಮುಖವಾದ ಸೇವೆಯನ್ನು ಸಲ್ಲಿಸಿದ ಫ್ಲೀಟ್ ಅವರು ಸನ್ ೧೯೧೭ರ ಫೆಬ್ರುವರಿ ೨೧ ರಂದು ಕ್ರೈಸ್ತವಾಸಿಗಳಾದರು. ಧಾರವಾಡದ ಜನತೆ ಡಾ. ಫ್ಲೀಟ್‌ರನ್ನು ತಮ್ಮವರೇ ಎಂದು ಬಗೆದು ಅವರನ್ನು ಕರ್ನಾಟಕ ವಿದ್ಯಾವರ್ಧಕ ಸಂಘದ ಗೌರವ ಸದಸ್ಯರನ್ನಾಗಿ ಮಾಡಿಕೊಂಡಿತು.

ಪಾಳಿ, ಸಂಸ್ಕೃತ ಮತ್ತು ಹಳಗನ್ನಡ ಶಾಸನಗಳು (೧೮೭೮) :

ಸಂಸ್ಕೃತ ಸಾಹಿತ್ಯ, ಜಾನಪದ ಸಾಹಿತ್ಯ, ಇತಿಹಾಸ ಮತ್ತು ಕನ್ನಡ ಭಾಷೆಗಳ ಬಗೆಗೆ ಡಾ. ಫ್ಲೀಟ್‌ರವರು ಅನೇಕ ಲೇಖನಗಳನ್ನೂ, ಕೃತಿಗಳನ್ನೂ ಬರೆದರು. ಪಾಂಡಿತ್ಯದಲ್ಲಿ ಸಂಶೋಧನೆ ಮುಖ್ಯ; ಊಹೆಗೆ ಯಾವ ರೀತಿಯಿಂದಲೂ ಎಡೆಗೊಡದೆ, ವಿವರಗಳನ್ನೆಲ್ಲ ಕ್ರೋಢೀಕರಿಸಬೇಕೆಂದು ಡಾ. ಫ್ಲೀಟರ ಅಭಿಪ್ರಾಯವಾಗಿದ್ದಿತು. ಅವರು ೭ ವರ್ಷಕಾಲ ಇಂಡಿಯನ್ ಎಂಟಿಕ್ವೆರಿ ನಿಯತಕಾಲಿಕದ ಸಂಪಾದಕರಾಗಿದ್ದಾಗ, ಈ ತತ್ವಕ್ಕೇ ಪ್ರಾಧಾನ್ಯತೆಯನ್ನು ಕೊಟ್ಟರು. ತೋರಗಲ್ಲು, ಬಾದಾಮಿಯ ಗುಹೆಗಳು, ಕೊಣ್ಣೂರು ಮತ್ತು ಐಹೊಳೆಗಳ ಸ್ಮಾರಕ ಶಿಲೆ ಮತ್ತು ಮಣ್ಣಿನ ಪಾತ್ರೆಗಳ ಬಗೆಗೂ ಅವರು ಪಾಂಡಿತ್ಯ ಪೂರ್ಣವಾದ ಲೇಖನಗಳನ್ನು ಬರೆದರು. ಸರ್ ವಾಲ್ಟರ್ ಈಲಿಯಟ್ ಅವರು ೫೯೫ ಶಾಸನಗಳನ್ನು ಶೋಧಿಸಿ, ಮದ್ರಾಸ ಜರ್ನಲ್‌ದಲ್ಲಿ ಪ್ರಕಟಿಸಿದ್ದರು. ಅನಂತರ, ಸನ್ ೧೮೬೫ ರಲ್ಲಿ ಮೇಜರ್ ಡಿಕ್ಸನ್ ಅವರು ಕನ್ನಡ ಶಾಸನಗಳನ್ನು ಕಲೆಹಾಕಿ ಪ್ರಕಟಿಸಿದ್ದರು. ನಂತರ ಸನ್ ೧೮೬೬ರಲ್ಲಿ ಥಿಯೋಡೊರ್ ಹೋಪ್‌ರವರೂ ಹಲವು ಕನ್ನಡ ಶಾಸನಗಳನ್ನು ಕಲೆಹಾಕಿದರು. ಇವನ್ನೆಲ್ಲ ಕ್ರೋಢೀಕರಿಸಿ ಸಂಪಾದಿಸುವ ಕೆಲಸವನ್ನು ಡಾ. ಫ್ಲೀಟ್‌ರವರಿಗೆ ಒಪ್ಪಿಸಲಾಯಿತು. ಇದರ ಪರಿಣಾಮವೇ ಸನ್ ೧೮೭೮ ರಲ್ಲಿ ಪ್ರಕಟವಾದ 'ಪಾಳಿ, ಸಂಸ್ಕೃತ ಮತ್ತು ಹಳಗನ್ನಡ ಶಾಸನಗಳು' ಎಂಬ ಸಂಪುಟ.

ಗುಪ್ತಾ ಶಾಸನಗಳು (?) :

ಫ್ಲೀಟ್‌ರವರ ಎರಡನೆಯ ಕೃತಿಯೆಂದರೆ, 'ಗುಪ್ತಾ ಶಾಸನಗಳು'. ಇದು 'Corpus Inscriptionum Indicarum'ದ ಎಂಟನೆಯ ಸಂಪುಟವಾಗಿ ಪ್ರಕಟವಾಯಿತು.

Dynasties of Canarese Districts of Bombay Presidency (1895) :

ಕನ್ನಡದ ದೃಷ್ಟಿಯಿಂದ ಮಹತ್ವಪೂರ್ಣವಾದದ್ದೂ ಮತ್ತು ತುಂಬಾ ಮೌಲಿಕವಾದದ್ದೂ ಆದ ಕೃತಿಯೆಂದರೆ ಸನ್ ೧೮೯೫ರಲ್ಲಿ ಪ್ರಕಟವಾದ ಕನ್ನಡ ಜಿಲ್ಲೆಗಳ ರಾಜಮನೆತನಗಳು ಎಂಬುದು. ಇದರಲ್ಲಿ ವಿವರಗಳಿಗೆ ಹೆಚ್ಚು ಪ್ರಾಧಾನ್ಯತೆ ಬಂದಿದ್ದರೂ, ಅಂತೂ ಒಂದು ಸಲ ಕನ್ನಡ ರಾಜಮನೆತನಗಳ ಬಗೆಗೆ ವಿರಲವಾಗಿಯಾದರೂ, ಸ್ಪಷ್ಟವಾದ ಉಲ್ಲೇಖ ದೊರಕಿತು. ಈ ಪುಸ್ತಕಕ್ಕೆ ಸರ್ ಆರ್. ಜಿ. ಭಂಡಾರಕರ ಅವರ 'ಅರ್ಲಿ ಹಿಸ್ಟರಿ ಅಫ್ ದ ಡೆಕ್ಕನ'ಕ್ಕೆ ಇದ್ದಷ್ಟೇ ಪುರಸ್ಕಾರವಿದೆ. ಈ ಐತಿಹಾಸಿಕ ಸಾಮಗ್ರಿ ಮುಂಬಯಿಯ ಗ್ಯಾಝಿಟೀಯರದ ಪ್ರಥಮ ಸಂಪುಟದ ೨ನೆಯ ಭಾಗದಲ್ಲಿಯೂ ಪ್ರಕಟವಾಯಿತು. ಡಾ. ಫ್ಲೀಟರವರು ಕಂಡಕಂಡ ಶಿಲಾಲಿಪಿಯನ್ನು ನಂಬುವವರಲ್ಲ. ಅದರಲ್ಲಿ ಅಸತ್ಯಪೂರ್ಣವಾದ ಶಿಲಾಲೇಖಗಳೂ ಇವೆಯೆಂಬುದನ್ನು ಅವರು ಗಮನಿಸಿದ್ದರು; ಅದಕ್ಕಾಗಿ ಅವರು ಸನ್ ೧೮೯೯ರಲ್ಲಿ ರೋಮ್ ನಗರದಲ್ಲಿ ನೆರವೇರಿದ ೧೨ನೆಯ ಜಾಗತಿಕ ಪ್ರಾಚ್ಯಸಂಶೋಧನ ಸಮ್ಮೇಲನದಲ್ಲಿ 'Spurious Indian Records' ಎಂಬ ಒಂದು ಪ್ರಬಂಧವನ್ನು ಸಾದರ ಪಡಿಸಿದರು.

ತಾವು ಮಾಡಿದ ಕೃತಿಗಳಲ್ಲೆಲ್ಲ ತಮಗೆ ಅತ್ಯಂತ ತೃಪ್ತಿಯನ್ನು ನೀಡಿದ ಕೆಲಸವೆಂದರೆ ಎರಡು ಎಂದು ಡಾ. ಫ್ಲೀಟ್‌ರವರು ಹೇಳಿಕೊಂಡಿದ್ದಾರೆ. ಮೊದಲನೆಯದು, ಭಾರತೀಯ ಶಾಸನ ಸಂಬಂಧವಾದ ಸಂಶೋಧನೆಯಲ್ಲಿ ಭಾಗವಹಿಸಿದ್ದು, ಎರಡನೆಯದು ಗುಪ್ತವಂಶದ ಆರಂಭದ ವರ್ಷವನ್ನು ಗೊತ್ತುಮಾಡಿದ್ದು.

"ಫ್ಲೀಟರ ಕಾರ್ಯ ಅಖಿಲ ಭಾರತ ವ್ಯಾಪ್ತಿಯದಾದರೂ, ಕರ್ನಾಟಕದೊಡನೆ ಅವರಿಗಿದ್ದ ಸಂಬಂಧ ಬಹು ನಿಕಟವೂ ಆತ್ಮೀಯವೂ ಆದುದು. ಅವರು ೧೮೬೨ರಲ್ಲಿ ದಕ್ಷಿಣಭಾಗದ ವಿದ್ಯಾಧಿಕಾರಿಯಾದ ಬಳಿಕ ಕನ್ನಡ ಭಾಷೆ, ಸಾಹಿತ್ಯಗಳನ್ನು ಅಭ್ಯಸಿಸಿದರು. ನೂರಾರು ಕನ್ನಡ ಶಾಸನಗಳನ್ನು ಟೀಕೆ ಟಿಪ್ಪಣಿಗಳೊಡನೆ ಪ್ರಕಟಿಸಿದರು. ಶಾಸನ ರಂಗದಲ್ಲಿ ಅವರು ರೈಸರಂತೆ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಹಳೆಯ ಮೈಸೂರು ರೈಸರ ಕಾರ್ಯಕ್ಷೇತ್ರವಾದರೆ, ಫ್ಲೀಟರದು ಉತ್ತರ ಕರ್ನಾಟಕ. 'ಸಂಗೊಳ್ಳಿ ರಾಯಣ್ಣ', 'ನರಗುಂದ ಮುತ್ತಿಗೆ' ಮುಂತಾದ ಹಲವು ಕನ್ನಡ ಲಾವಣಿಗಳನ್ನು ಸಂಗ್ರಹಿಸಿ, ಇಂಗ್ಲಿಷ ಅನುವಾದ ಸಹಿತ ಪ್ರಕಟಿಸಿ, ಕನ್ನಡ ಜನಪದ ಸಾಹಿತ್ಯ ಸಂಗ್ರಹಕ್ಕೆ ಆದ್ಯರಾದ ಕೀರ್ತಿಯೂ ಫ್ಲೀಟರ ಪಾಲಿಗಿದೆ. 'ಕವಿರಾಜ ಮಾರ್ಗ'ದ ಕರ್ತೃತ್ವದ ಬಗೆಗೆ ಅವರು ವಿವೇಚಿಸಿದ್ದಾರೆ. ಕರ್ನಾಟಕದಲ್ಲಿ ತಾವು ಕಳೆದ ಕಾಲವನ್ನು ಅವರು ತಮ್ಮ ಕಡೆಗಾಲದಲ್ಲಿ ಆರ್ದ್ರ ಹೃದಯದಿಂದ ಸ್ಮರಿಸಿಕೊಳ್ಳುತ್ತಿದ್ದರಂತೆ."[೧]

"(ಕನ್ನಡ ಭಾಷೆ) ಭಾರತೀಯ ಭಾಷೆಗಳಲ್ಲೆಲ್ಲ ಅತ್ಯಂತ ಮಧುರವಾದುದು ಮತ್ತು ಅಭಿವ್ಯಕ್ತಿ ಶಕ್ತಿಯಲ್ಲಿ ಅತ್ಯಂತ ಶ್ರೀಮಂತವಾದುದು. ಸ್ವೋಪಜ್ಞ ರಚನೆಯ ಪರಿಮಾಣದಲ್ಲಿ ಮತ್ತು ಮೌಲ್ಯದಲ್ಲಿ ಪ್ರಾಯಃ ಅದು ಉಳಿದೆಲ್ಲ ಭಾಷೆಗಳನ್ನೂ ಮೀರಿಸುತ್ತದೆ. ಅವೆಲ್ಲಕ್ಕಿಂತಲೂ ಅದು ಪ್ರಾಚೀನ"

೧ ಭಾರತೀಯ ಶಾಸನ ಶಾಸ್ತ್ರ ಪರಿಚಯ : ಪಿ. ಬಿ. ಕೆ. : ೧೯೭೦ : ಪು. ೭–೮.

– ಎಂದು ಅವರು ಇಂಡಿಯನ್ ಎಂಟಿಕ್ವರಿಯ ಜನೆವರಿ ೧೯೦೧ ರ ಸಂಪುಟದಲ್ಲಿ ತಮ್ಮ ಅಭಿಪ್ರಾಯ ವನ್ನು ವ್ಯಕ್ತಪಡಿಸಿದ್ದಾರೆ.[೧]

ಕನ್ನಡ ನಾಡು ಮತ್ತು ಜನತೆಯ ಬಗೆಗೆ ಅವರ ಅಭಿಪ್ರಾಯ ಹೀಗಿತ್ತು :

"Often in his letters he used to speak with tenderness and admiration of his old friends– the Kannada peasantry, and recall the days that he had spent among them, listening after office hours to their tales and recording their ballads. A capable and wise administrator, as well as a profound and successful investigator of scientific truth"[೨]

"ಭಾರತೀಯ ಸಾಮ್ರಾಜ್ಯದ ಪ್ರಾಚೀನ ಹಾಗೂ ಮಧ್ಯಕಾಲೀನ ಚರಿತ್ರೆಯ ನಿಷ್ಕೃಷ್ಟ ಜ್ಞಾನ ವನ್ನು ಅಪೇಕ್ಷಿಸುವ ವಿದ್ವಾಂಸರ ಭಾವೀ ಪೀಳಿಗೆಗೆ ದಾರಿ ತೋರಿದ ಮೂಲ ಪ್ರವರ್ತಕರಲ್ಲಿ ಮುಂಚೂಣಿಯವರೆಂದು ಫ್ಲೀಟರನ್ನು ನಾನು ಪರಿಗಣಿಸುತ್ತೇನೆ" ಎಂದು ಸರ್ ರಿಚರ್ಡ್ ಟೆಂಪಲ್ ಅವರು ಡಾ. ಫ್ಲೀಟರ ಬಗೆಗೆ ಸನ್ ೧೯೧೭ ರಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದರು.

ಡಾ. ಫ್ಲೀಟರ ಕನ್ನಡದ ಕೆಲಸ :

ಸನ್ ೧೮೭೨ ರಲ್ಲಿ ಫ್ಲೀಟರವರು ದಕ್ಷಿಣ ವಿಭಾಗದ ವಿದ್ಯಾಧಿಕಾರಿಗಳಾಗಿ ಬಂದರೆಂದು ಹೇಳಿತಷ್ಟೇ. ಆಗ, ಕೆಳಗಿನವರು ಮೇಲಧಿಕಾರಿಗಳಿಗೆ ಬರೆಯುವ ಪತ್ರಗಳ ಒಕ್ಕಣಿಕೆ ಬೇರೆಬೇರೆ ವಿಧವಾಗಿರುತ್ತಿದ್ದವು. ಹಲವರು ಮೇಲಧಿಕಾರಿಗಳನ್ನು ರಾವಸಾಹೇಬ ಎಂದೂ, ಹಲವರು ರಾವಬಹದೂರ ಎಂದೂ ಸಂಬೋಧಿಸುತ್ತಿದ್ದರು. ಈ ಗೊಂದಲವನ್ನು ತೆಗೆದು ಹಾಕಿ, ಒಂದೇ ರೀತಿ ಯಾಗಿ ಸಂಬೋಧಿಸಬೇಕೆಂದು ಡಾ. ಫ್ಲೀಟ ಅವರು ಒಂದು ಪರಿಪತ್ರವನ್ನು ಹೊರಡಿಸಿದರು. ಅಂದಿನ ಆಡಳಿತ ಭಾಷೆಯ ಶೈಲಿಯ ಮಾದರಿಗಾಗಿಯೂ ಈ ಪರಿಪತ್ರವನ್ನು ಉಲ್ಲೇಖಿಸಬಹುದಾಗಿದೆ :

"ದಕ್ಷಿಣ ವಿಭಾಗದೊಳಗಿನ ಸೇಕಂಡ ಗ್ರೇಡ ಅಂಗ್ಲೋ ವ್ಹರ್ನಾಕ್ಯುಲರ ಮತ್ತು ವ್ಹರ್ನಾಕ್ಯುಲರ ಶಾಲೆಗಳ ಯಾವತ್ತು ಮಾಸ್ತರರಿಗೂ, ಅಸಿಸ್ಟಂಟ ಮಾಸ್ತರರಿಗೂ ತಿಳಿಯಪಡಿಸುವದೇನಂದರೆ, ಸರಕಾರೀ ಪತ್ರವ್ಯವಹಾರಗಳಲ್ಲಿ ಡಿಪುಟೀ ಎಜುಕೇಶನಲ್ ಇನಸ್ಪೆಕ್ಟರರಿಗೆ ತಕ್ಕ ವಿಳಾಸವೂ, ಅವರ ಹೆಸರುಗಳನ್ನು ಬರೆಯುವಾಗ ಅವುಗಳ ಹಿಂದೆ ಬರೆಯತಕ್ಕ ಶಬ್ದವೂ "ಅಝಂ" ಯೆಂಬುದೇ ಹೊರ್ತು "ರಾವಸಾಹೇಬ" ಯೆಂಬುದೂ, "ರಾವಬಹದೂರ"ಯೆಂಬುದೂ ಅಲ್ಲ. ಆದ್ದರಿಂದ ಇನ್ನು ಮುಂದೆ "ಅಝಂ"ಯೆಂಬ ಪದವಿಯನ್ನೇ ಮಾತ್ರ ಉಪಯೋಗಿಸತಕ್ಕದ್ದೆಂದು ನಮ್ಮ ಹುಕುಮುಂಟು...."[೩]

ಶಾಲಾ ಶಿಕ್ಷಕರ ನೀತಿಯ ಬಗೆಗೆ ಬೆಳಗಾವಿಯಿಂದ ಹೊರಟ ೨೭–೫–೧೮೭೩ ರ ಪರಿಪತ್ರ ಹೀಗಿದೆ :

"ದಕ್ಷಿಣ ಭಾಗದೊಳಗಿನ ಸೇಕಂಡಗ್ರೇಡ ಹಾಂಗು ಕನ್ನಡ ಮರಾಠೀ ಶಾಲೆಗಳ ಹೆಡ್‌ಮಾಸ್ತರರಿಗೆ ತಿಳಿಯಪಡಿಸುವದೇನಂದರೆ ಸರಕಾರೀ ನೌಕರರು ತಾವು ಕೆಲಸ ಮಾಡುವ ಜಿಲ್ಲೆಯಲ್ಲಿ ಭೂಮಿಯನ್ನು

೧ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ : ಐ. ಮಾ. ಮುತ್ತಣ್ಣ : ಪು. ೫೧೧.
೨ ಭಾರತೀಯ ಶಾಸನ ಶಾಸ್ತ್ರ ಪರಿಚಯ : ಸಿ. ಪಿ. ಕೆ. : ೧೯೭೦ : ಪು. ೮.
೩ ಶಾಲಾ ಪತ್ರಕವು : ಅಗಸ್ಟ ೧೮೭೩ : ಪು. ೩೯೮.

ಸಂಪಾದಿಸಬಾರದೆಂದು ಸರಕಾರದವರ ಹುಕುಮು ಇದ್ದದ್ದು ವಿದ್ಯಾಖಾತೆಯೊಳಗಿನ ನೌಕರರಿಗೆ ಸಹ ಸಂಬಂಧವಾಗಿರುತ್ತದೆ."

ಕನ್ನಡ ಲಾವಣಿಗಳು :

ಡಾ. ಫ್ಲೀಟರವರು ಪ್ರವಾಸ ಹೋದಲ್ಲೆಲ್ಲ ಲಾವಣಿ ಹಾಡಬಲ್ಲವರನ್ನು ಕೂಡಿಹಾಕಿ ಸುಂದರವಾದ ಕನ್ನಡ ಲಾವಣಿಗಳನ್ನು ಸಂಗ್ರಹಿಸಿದರು. ಈ ಲಾವಣಿಗಳ ಬಗೆಗೆ ೧೮೮೫ ರ ಇಂಡಿಯನ್ ಎಂಟಿಕ್ವರಿ ಪತ್ರಿಕೆಯಲ್ಲಿ ವಿದ್ವತ್ಪೂರ್ಣವಾದ ಒಂದು ಲೇಖನವನ್ನು ಬರೆದು, ಅವುಗಳ ವಿಷಯ, ಛಂದಸ್ಸು, ಮೊದಲಾದವುಗಳನ್ನು ವಿವರಿಸಿದರು. ಲಾವಣಿ ಛಂದಸ್ಸಿನ ಬಗೆಗೆ ಅವರು ಹೇಳಿದ ಮಾತುಗಳು ಅವರ ಕನ್ನಡ ಪಾಂಡಿತ್ಯದ ದ್ಯೋತಕವಾಗಿವೆ :

"ರಚನೆಯಲ್ಲಿ ಈ ಲಾವಣಿಗಳು ಸಂಸ್ಕೃತದ ಆರ್ಯಾ, ಗೀತಿ ಮತ್ತು ಚೌಪದಿಗಳಿಗೆ ಉತ್ತರವೆಂಬಂತೆ, ಕನ್ನಡ ಛಂದಸ್ಸಾದ 'ಕಂದ'ದ ಸೂತ್ರವನ್ನು ಅನುಸರಿಸಿವೆ. ಆದರೆ, ನಿರಂಕುಶ ಛಂದಸ್ಸಿನ ಔಚಿತ್ಯವೇನೂ ಗುರಿಯಾಗಿರಲಿಲ್ಲ. ರಚನೆಯ ಸೂತ್ರ ಸ್ಪಷ್ಟವಾಗಿ ಗುರುತಿಸುವಂತಿದ್ದರೂ ಛಂದಸ್ಸಿನ ಪ್ರಕಾರ ಅದನ್ನು ಬಿಡಿಸುವಾಗ ಅಥವಾ ಪದಗಳನ್ನು ದಾಟಿಗೆ ತಕ್ಕಂತೆ ಹೊಂದಿಸುವಾಗ ಚಿಕ್ಕ ಪಾದಗಳು ದೊಡ್ಡವಾಗಿ ಎಳೆಯಲ್ಪಡುತ್ತವೆ. ಮತ್ತು ದೊಡ್ಡ ಪಾದಗಳು ಚಿಕ್ಕವಾಗಿ ಅದುಮಲ್ಪಡುತ್ತವೆ. ಒಂದು ನಿಯಮದ ಪ್ರಕಾರ ಒಂದೇ ಸಂಖ್ಯೆಯ ಪಾದಗಳನ್ನುಳ್ಳ ನುಡಿಗಳನ್ನು ವಿಭಾಗಿಸಬಾರದು. ಹಾಡುಗಳ ಲಯ ಮಾತ್ರ ಹಾಡುವದನ್ನು ಕೇಳಿಯೇ ತಿಳಿಯುವಂಥದು. ರೂಢಿಯಲ್ಲಿರುವ, ಕನ್ನಡ ಕಾವ್ಯದ ವೈಶಿಷ್ಟ್ಯವಾದ ಅನುಪ್ರಾಸ ಅಥವಾ ದ್ವಿತೀಯಾಕ್ಷರ ಪ್ರಾಸದ ಬದಲು ಶಿಷ್ಟ ಸಾಹಿತ್ಯದ ಸೂತ್ರಗಳನ್ನು ಆಧರಿಸಿ ಅಂತ್ಯಪ್ರಾಸ ಬಳಕೆಯಾಗಿರುವದು ಮತ್ತೊಂದು ಗಮನಾರ್ಹವಾದ ಅಂಶವಾಗಿದೆ."[೧]

ತಾವು ಸಂಗ್ರಹಿಸಿದ ಲಾವಣಿಗಳಲ್ಲಿ ತಮಗೆ ತುಂಬಾ ಆಸಕ್ತಿಯುಂಟುಮಾಡಿದ ಲಾವಣಿಗಳು ಯಾವುವೆಂಬುದರ ಬಗೆಗೂ ಡಾ. ಫ್ಲೀಟರು ಹೀಗೆ ಹೇಳಿದ್ದಾರೆ :

"ನಾನು ಸಂಗ್ರಹಿಸಿದ ಲಾವಣಿಗಳಲ್ಲೆಲ್ಲ ಅತ್ಯಂತ ಆಸಕ್ತಿಯುತವಾದುವೆಂದರೆ : ಕಿತ್ತೂರ ಈರವ್ವನ ಗೋಳಾಟ; ಸಂಗೊಳ್ಳಿ ರಾಯಣ್ಣನ ದಂಗೆ; ಇಂಗ್ಲಿಷರಿಂದ ಬದಾಮಿಯಲ್ಲಿ ಪ್ರಸಿದ್ಧವಾದ ರಣಮಂಡಲ ಕೋಟೆಯ ಆಕ್ರಮಣ; ಬಂಡಾಯದ ಕಾಲದಲ್ಲಿ ನರಗುಂದದ ಆಕ್ರಮಣ; ಆದಾಯ ತೆರಿಗೆಯ ಪ್ರವೇಶವನ್ನು ಕುರಿತ ಒಂದು ಹಾಡು; ನಿರಾಯುಧ ಕಾಯಿದೆಗೆ ಸಂಬಂಧಪಟ್ಟಂತೆ ಹಲಗಲಿಯ ಬೇಡರ ದಂಗೆ; ನಿರ್ದಯತೆಗೆ ಸಿಕ್ಕಿದ ಬೇಸಾಯಗಾರ ಸಂಗಣ್ಣನಿಂದ ಹಳ್ಳಿಯ ಲೇವಾದೇವಿಯವನ ಕೊಲೆ; ಅನಂತರ ಅವನ ವಿಚಾರಣೆ ಮತ್ತು ಶಿಕ್ಷೆ ವಿಧಿಸಿದ್ದು; ಇಂಗ್ಲಿಷ ದೇಶದ ಶಕ್ತಿ ಮತ್ತು ಕೀರ್ತಿಗಳನ್ನು ಕುರಿತ ಒಂದು ಹಾಡು; ರೆವಿನ್ಯೂ ಸರ್ವೆ ಇಲಾಖೆಯನ್ನು ಕುರಿತ ಒಂದು ಅನುಪ್ರಾಸಬದ್ಧ ಗದ್ಯರಚನೆ."[೨]

ಇವುಗಳಲ್ಲಿ ಇಂಗ್ಲಿಷ ದೇಶದ ಶಕ್ತಿ ಮತ್ತು ಕೀರ್ತಿಗಳನ್ನು ಕುರಿತ ಲಾವಣಿಯೂ ಮತ್ತು ರೆವಿನ್ಯೂ ಸರ್ವೆ ವಿಷಯಕವಾದ ಲಾವಣಿಯು ದೊರಕಲಿಲ್ಲ. ಉಳಿದೆಲ್ಲ ಲಾವಣಿಗಳೂ ಅದ್ಭುತವಾಗಿವೆ. ಇವುಗಳಲ್ಲಿಯ ಭಾವ, ರಸ, ಶೈಲಿ ಅನುಪಮವಾಗಿವೆ. ತತ್ಕಾಲೀನ ಆಭರಣ ವಿಷಯಕ ವರ್ಣನೆಯನ್ನು ಕೊಡುವ ದೃಷ್ಟಿಯಿಂದಲೂ ಈ ಕೆಳಗಿನ ಸಾಲುಗಳನ್ನು ಉದ್ಧರಿಸಬಹುದು :

---

೧ ಐದು ಐತಿಹಾಸಿಕ ಲಾವಣಿಗಳು : ಕನ್ನಡ ಅಧ್ಯಯನ ಸಂಸ್ಥೆ : ೧೯೭೨ : ಪು. ೩೨.

೨ ಅದೇ : ಪು. ೩೩.

ಹೆಣ್ಣು ಮಕ್ಕಳಿಡುವ ವಸ್ತು ಬಣ್ಣಿಸಿ ನಾ ಪೇಳ್ವೆನು
ಸಣ್ಣ ನಡುವಿನ ಡಾಬ ಬಂಗಾರಾ
ಬುಗುಡಿ ಬಾವಲಿ ಜವಿಕಿ ವಾಲಿ ಚಳತುಂಬು
ಚೆಂದಾದಲ್ಲಿಡುವ ರ್‍ಯಾಗುಟಿ ಚವರಿ ಹೆಳಲಬಂಗಾರಾ
ಸಾವಿರದ್ಹೊನ್ನಿನ ಸರದಾಳಿಗಳಂ ಮೊಹರದ ಮುತ್ತಿನ
ಮೂಗುತಿ ಮೇಲೆ ಕೆತ್ತಿಸಿದಂತಾ ವಜ್ಜರಾ
ಕಂಠಕ ಧರಿಸುವ ಕರಿಡಿಗಿ ಸರಪಣಿ ಕಟ್ಟಣಿ
ಚಿಂತ್ಹಾಕರಡಿ ಹವಳ ಸರಾ
ಹಿರಿಪಿಲ್ಲಿಗಳು ಕಿರಿಪಿಲ್ಲಿಗಳು ಲುಲ್ಲುಮಿಂಟಿಕಿ
ರುಳ್ಳಿಯು ಗೆಜ್ಜಿ ಕಾಲ್ಕಡಗಾ ಸರಪಳಿ ಕಾಲುಂಗರಾ
ಮಂದಧರನ ಕರುಣ ತಪ್ಪಿ ವಂದವುಳಿಯದೆ
ಹೋದವು ಮುಂದ ಇಲ್ಲೊ ನಮಗ ಆಸರಾ ॥ ೧

ಮಲ್ಲಸರ್ಜನ ಶವವನ್ನು ಶೃಂಗರಿಸಿದ ರೀತಿ ಹೀಗೆ :

ರಾಜರಾಜೆದ ಜನರೆಲ್ಲಾ ರೇಜಗಟ್ಟಲ್ಲಿಗೆ ಬಂದು
ನೆರದಾರು ರಾಹುತರಾಣರೂ
ಬಲ್ಲಂಥ ಬಡಿಗೆನ ಕರಿಸಿಯೆಲ್ಲ ಸಾಹಿತ್ಯಕೊಡಿಸಿ
ಮಾಡೆರು ವಿಮಾನ ವಿಸ್ತಾರಾ
ತರತರಕ ಕನ್ನಡಿ ನಿರತ ನೋಡಿ ಹಾಕೆರ ಹೂವಿನ ಹಾರಾ
ಹತ್ತು ಯೆಂಟು ಸಾವಿರದ್ಹೊನ್ನಿನ ಗೊಂಡೆಗಳು
ಸುತ್ತಲಿ ಬಿಗಿದರು ಶೇಲು ಜರತಾರಾ
ಸತ್ತಂಥ ಶವವು ತಾಂವು ಹೊತ್ತುಕೊಂಡು ನಡೆದರು
ಹಾರಸ್ತಾರ ಮ್ಯಾಲೆ ಛತ್ರ ಚ್ಯಾಮರ
ಬಂಟ್ಟಿ ಬುಟ್ಟಿಲಿ ಬುಕ್ಕಿಟ್ಟ ಕಟ್ಟವಿಲ್ಲದ
ಹಾರಸ್ತ ಹಿಡಿದ ಹೊಂಟರ ಮಳಿಗಿ ಬಾಜರ
ಹಲಿಗಿ ಕಾಳಿ ಕನಿ ಕರಡಿ ಸಂಬಾಳ ಸಂಪರದಾನಿ
ಬಾರಸ್ತ ಹೊಂಟ ಮುಂದ ಸರದಾರಾ
ದಿಕ್ಕ ದಿಕ್ಕಿನ ಮಂದಿಯೆಲ್ಲಾ
ಅಕ್ಕಾ ಈರವ್ವನ ನೋಡಿ
ದುಃಖ ಮಾಡ್ಯಾರೆಷ್ಟು ಜನರು
ಧಾರವಾಡದ ಮಂದಿ ಭೋರಿಡುತಳುವಾಗ
ಪರಹದಾಗಿದ್ದ ಮಂಗ ಶಂಕರನ
ಸ್ತುತಿಸುತ ನೂರೊಂದು ದುಖ್ಖ ಮಾಡಿದನು
ಸುಂದರ ಹೆಬ್ಬಳ್ಳಿ ಬಸವ ಕಂಡಷ್ಟು
ಕವಿಯು ಹೊಂದಿಸಿ ಮಾಡಿದ ವಿಸ್ತಾರಾ ೨

೧ ಅದೇ : ಪು. ೮೭.
೨ ಅದೇ : ಪು. ೯೫.

ಥಾಮಸ ಹಾಡ್ಸನ್

(ಸು. ೧೮೫೫)

ಇವರು ವೆಸ್ಲಿಯನ್ ಮಿಶನರಿಗಳಾಗಿದ್ದರು. ಕ್ರಿ. ಶ. ೧೮೫೫ ರಿಂದ ಕ್ರಿ. ಶ. ೧೮೭೦ರ ವರೆಗೆ ಅನೇಕ ಪಾಶ್ಚಿಮಾತ್ಯ ಮತಬೋಧಕರು ನೂರಾರು ಮತವಿಷಯಕಗಳಾದ ಪುಸ್ತಕಗಳನ್ನು ಬರೆದರು. ಈ ಪ್ರಕಾರ ಹಾಡ್ಸನ್ ಅವರು ಕ್ರಿ. ಶ. ೧೮೫೫ ರಲ್ಲಿ 'ಎ ಮೆಮ್ವೈರ್ ಆಫ್ ಕನವರ್ಟೆಡ ಹಿಂದು' ಎಂಬ ೨೦೦ ಪುಟಗಳ ಪುಸ್ತಕವನ್ನು ಇಂಗ್ಲಿಷ ಭಾಷೆಯಲ್ಲಿ ಬರೆದರು. ಇದರಲ್ಲಿ ಮೈಸೂರಿನ ಒಂದು ಗ್ರಾಮದಲ್ಲಿ ಮತಾಂತರಗೊಂಡ ಓರ್ವ ದೇಶೀಯ ಕ್ರೈಸ್ತನ ಅನುಭವವನ್ನು ಚಿತ್ರಿಸಲಾಗಿದೆ.[೧]

An Elementary Grammar of the Kannada or Canarese Language (1859) :

ಆದರೆ, ಇದಕ್ಕೂ ಹೆಚ್ಚು ಮೌಲಿಕವಾದ ಪುಸ್ತಕ 'ಆ್ಯನ್ ಎಲಿಮೆಂಟರಿ ಗ್ರಾಮರ್ ಆಫ್ ದಿ ಕನ್ನಡ ಆರ್ ಕ್ಯಾನರೀಸ್ ಲ್ಯಾಂಗ್ವೇಜ' ಎಂಬುದು. ಇದು ಬೆಂಗಳೂರಿನ ವೆಸ್ಲಿಯನ್ ಮಿಶನ್ ಮುದ್ರಣಾಲಯದಲ್ಲಿ ಸನ್ ೧೮೫೯ ರಲ್ಲಿ ಮುದ್ರಿತವಾಯಿತು. ೧–೫–೧೮೫೯ರಂದು ಈ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ಲೇಖಕರು ಹೀಗೆ ಹೇಳಿದ್ದಾರೆ :

" The Tamil, the Telugu and the Canarese are the three principal languages of southern India. The Canarese is spoken by several millions of Hindus who are living under the government of Englishmen.

To the servants of the government in the civil, judicial, and educational departments, as well as missionaries, a knowledge of this language is absolutely necessary in order to a right discharge of their respective duties.

When the author commenced the study of Canarese, he felt, as many others have done, the need of a short and plain introductory grammar. He, therefore, arranged for his own use and improvement the valuable but chaotic materials of McKerrell's Grammar; and as he advanced in the language, he made various notes and additions. This

---

೧ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ : ೧೯೬೯ : ಪು. ೨೮೪.

manuscript is offered.........as an elementary guide to those who wish to commence the study of this important language."

ಈ ರೀತಿ ಹಾಡ್ಸನ್ ಅವರು ತಮ್ಮ ಗ್ರಂಥದ ಉದ್ದೇಶ ಕನ್ನಡದ ಅಭ್ಯಾಸವನ್ನು ಕೇವಲ ಪ್ರಾರಂಭಿಸುವವರಿಗೆ ಸಹಾಯಕವಾಗಿರಬೇಕೆಂದು ಹೇಳಿದ್ದರೂ, ಈ ಗ್ರಂಥಕರ್ತರ ಆಳವಾದ ಅಭ್ಯಾಸ, ಸೂಕ್ಷ್ಮದೃಷ್ಟಿ, ಭಾಷಾಪರಿಜ್ಞಾನಗಳು ಪುಟ ಪುಟಗಳಲ್ಲಿ ವ್ಯಕ್ತವಾಗುತ್ತವೆ. ಭಾಷಾ ಸೌಂದರ್ಯ ಸೂಕ್ಷ್ಮತೆಗಳು ಭಾಷಾಭಿಜ್ಞರಿಗೆ ಮಾತ್ರ ಗಮ್ಯವಾಗುತ್ತವೆಯೇ ವಿನಾ ಇತರರಿಗಲ್ಲ. ಪತಂಜಲಿ ಮಹರ್ಷಿಗಳು ಹೇಳಿದ ಹಾಗೆ–

ಉತತ್ವ : ಪಶ್ಯನ್ ನ ದದರ್ಶ ವಾಚಂ
ಉತತ್ವ : ಶ್ರುಣನ್ ನ ಶ್ರುಣೋತಿಏನಾಂ
ಉತೋತು ಅಸ್ಮೈ ತನ್ವಂ ವಿಸಸ್ರೇ
ಜಾಯೇವ ಪತ್ಯಃ ಉಶತೀ ಸುವಾಸಾಃ

–ಭಾಷಾ ವನಿತೆಯ ಸೌಂದರ್ಯ ವಾಗ್ವಲ್ಲಭನಿಗೆ ಮಾತ್ರ ಗೊತ್ತಾಗುತ್ತದೆ.

ಇಂದು ಭಾಷಾಭ್ಯಾಸದಲ್ಲಿ ಪ್ರತಿಷ್ಠಿತರೆಂದೆನಿಸಿಕೊಂಡವರು ಕಂಡುಕೊಂಡಂಥ ಹಲವಾರು ಸಿದ್ಧಾಂತಗಳನ್ನು ಥಾಮಸ್ ಹಾಡ್ಸನ್ ೧೮೬೪ ರಲ್ಲಿಯೇ ಕಂಡುಕೊಂಡಿದ್ದರು. ಉದಾಹರಣೆಗೆ, ಕನ್ನಡದ ಗುಣವಚನಗಳ ಬಗೆಗೆ ಅವರು ಹೇಳಿದ ಮಾತುಗಳನ್ನು ಗಮನಿಸೋಣ :

"There are not many adjectives in the Canarese language; the defect is supplied by affixing to nouns the irregular participles, 'ಆದ' and 'ಉಳ್ಳ'. 'ಅಂಥ' is frequently added to the participles as in the following examples :

ಬಲ – ಬಲವಾದ, ಬಲವಾದಂಥ, ಬಲವುಳ್ಳ, ಬಲವುಳ್ಳಂಥ

ಹಣ – ಹಣವುಳ್ಳ, ಹಣವುಳ್ಳಂಥ– ಇತ್ಯಾದಿ. ಕೇಶಿರಾಜನೂ ಕೂಡ ಒಳ್ಳಿತು, ಮೆಲ್ಲಿತು, ಬೆಟ್ಟಿತು ಎಂದು ಮೊದಲಾಗಿ ಕೆಲವೇ ಕನ್ನಡ ಗುಣವಚನಗಳನ್ನು ಹೇಳಿ, ಉಳ್ಳ, ಒಡೆಯ, ವಂತ ಇವುಗಳಿಂದ ಗುಣವಚನಗಳು ಕನ್ನಡದಲ್ಲಿ ಸಾಧಿತವಾಗುತ್ತವೆಂದು ಹೇಳಿದನು. ಕೈಪಿಡಿಕಾರರ ಅಭಿಪ್ರಾಯದ ಮೂಲವನ್ನು ನಾವು ಹಾಡ್ಸನ್‌ರ ಮಾತಿನಲ್ಲಿ ಗುರುತಿಸಬಹುದಾಗಿದೆ.

ಅದೇ ರೀತಿ ಕನ್ನಡದಲ್ಲಿ ತರತಮ ಭಾವದ ಅಭಿವ್ಯಕ್ತಿಯ ಬಗೆಗೂ ಹಾಡ್ಸನ್‌ರವರು ವ್ಯಕ್ತಪಡಿಸಿದ ಅಭಿಪ್ರಾಯಗಳು ತುಂಬಾ ವಿಚಾರಪರಿಪ್ಲುತವಾಗಿವೆ. "There is nothing in Canarese corresponding with the English 'er' and 'est', more and most, by which adjectives can be compared. Comparisons are generally made by 'ಇಂತ' added to the dative case. The word 'ಇಂತ' signifies 'than'; as ನನ್ನ ಕುದುರೆಗಿಂತ ನಿನ್ನ ಕುದುರೆ ದೊಡ್ಡದು, your horse is larger than mine. ಎಲ್ಲಾ ಕುದುರೆಗಳಿಗಿಂತ ನಿನ್ನ ಕುದುರೆ ದೊಡ್ಡದು, your horse is largest of all." ಇದೇ ಮಾತನ್ನೇ ಹದಿಮೂರನೆಯ ಶತಮಾನದ ಕೇಶಿರಾಜನು 'ಕೃಷ್ಣನಿಂ ಬಲಭದ್ರಂ ಪಿರಿಯಂ, ದುರ್ಯೋಧನನಿಂ ಕಿರಿಯಳ್ ದುಶ್ಶಳೆ, ರತ್ನಂಗಳೊಳ್ ಮಾಣಿಕ್ಯಮುತ್ತಮಂ, ಪರಿಕಾರರೊಳ್ ಈತಂ ಕಾಲ್ಬಲ್ಲಿದಂ' ಎಂದು ಮೊದಲಾಗಿ ಉದಾಹರಣೆಗಳನ್ನು ಕೊಟ್ಟು ವಿವರಿಸಿದನು. ಕೇಶಿರಾಜನಲ್ಲಿಯಷ್ಟೇ ಹಾಡ್ಸನ್‌ರಲ್ಲಿಯೂ ಅವಲೋಕನಾಸೂಕ್ಷ್ಮತೆ ಇದೆ.

'ನಿಷೇಧ'ದ ಬಗೆಗೂ ಹಾಡ್ಸನ್ ಅವರ ಅಭಿಪ್ರಾಯ ಮನನೀಯವಾಗಿದೆ :

"Negation is generally expressed by 'ಇಲ್ಲ' or 'ಅಲ್ಲ'. ಇಲ್ಲ denies existence and is used with any time, gender, number or person. ಕುದುರೆಯ ಕೊಂಬು ಇಲ್ಲ, ಅವನು ಮನೆಯಲ್ಲಿ ಇಲ್ಲ........ ಆ ತೋಟದಲ್ಲಿ ಬಾಳೆಮರಗಳು ಇಲ್ಲ. Negation of quality or nature is expressed by 'ಅಲ್ಲ' as ಇದು ಕಾಗದವೋ ? ಅಲ್ಲ. ಇವನು ನಿನ್ನ ಮಗನೋ ? ಅಲ್ಲ. ಅದು ಪಟ್ಟಣವಲ್ಲ. ಚಿಕ್ಕ ಊರು. ಇಲ್ಲ and ಅಲ್ಲ are not interchangeable and great care must be observed for their correct use."

ಕನ್ನಡದಲ್ಲಿ ಅವ್ಯಯಗಳು ಲಿಂಗಗಳೇ ? ಕೇಶಿರಾಜನಿಗೆ ಇದು ಸಮಸ್ಯೆಯಾದಂತೆ ಕಾಣುತ್ತದೆ. ಸಂಸ್ಕೃತದ ಅವ್ಯಯುಗಳೇನೋ ಕನ್ನಡದಲ್ಲಿ ಲಿಂಗವಾಗಬೇಕಾದರೆ, 'ನೆರೆ ಪದವಿಧಿಯಂ ತಳೆದಲ್ಲದೆ, ಕನ್ನಡದೊಳ್ ಲಿಂಗವಾಗವು ನಿಜದಿಂ' ಎಂದು ಹೇಳಿದನು. ಆದರೆ, ಕನ್ನಡದ ಅವ್ಯಯಗಳು ? "ನೀನಱಿ ಕನ್ನಡದೊಳ್ ಸ್ತ್ರೀ ನಪ್.....ಸಮಸ್ತವಾಚ್ಯಾನೂನ ಅವ್ಯಯಮೆಂದು ಲಿಂಗಪೊಂಬೊತ್ತು ತೆಱಂ". ಈ ರೀತಿ ಕೇಶಿರಾಜನ ಮೇರೆಗೆ ಅವ್ಯಯ ಕನ್ನಡದಲ್ಲಿ ಲಿಂಗ. ಆದರೆ, ಇದಕ್ಕೆ ದೃಷ್ಟಾಂತ ಗಳೆಲ್ಲಿ ? ಅವ್ಯಯ ಲಿಂಗವಾಗಿದ್ದರೆ, ನಾಮಪದಗಳ ಹಾಗೆ ಅದಕ್ಕೆ ವಿಭಕ್ತಿ ಪ್ರತ್ಯಯಗಳು ಹತ್ತಬೇಕಲ್ಲ ? ಸಂಸ್ಕೃತದಲ್ಲಿಯೇನೋ ಶನೈಃ ಶನೈಃ ಎನ್ನುವಾಗ ತೃತೀಯೆ ಕಂಡು ಬಂದಿತು. ಶೀಘ್ರಂ ಎನ್ನುವಾಗ ದ್ವಿತೀಯೆ ಕಂಡು ಬಂದಿತು. ಆದರೆ ಕನ್ನಡದಲ್ಲಿ ಹೀಗೆಲ್ಲಿದೆ ? ಕೇಶಿರಾಜ ದೃಷ್ಟಾಂತಗಳಿಗಾಗಿ ತಡವರಿಸಿದ. ಅವನಿಗೆ ಎಲ್ಲಿಯೋ ಇಂಥ ಉದಾಹರಣೆ ನೋಡಿದ ನೆನಪು. ಆದರೆ, ಅವು ಯಾವುವೆಂಬುದು ಕೈಗೆ ಸಿಕ್ಕಲಿಲ್ಲ. ಕೊನೆಗೆ, ತಾನೇ ನಿರ್ಮಿಸಿಕೊಂಡ ಈ ಸೂತ್ರದ ಜಾಲದಿಂದ ಮುಕ್ತವಾಗೋಣ ಎಂದು ಬಗೆದು ನಿರ್ನೆರಂ ಎಂಬಲ್ಲಿ ನಿರ್ನೆರಮಂ ಎಂಬ ದ್ವಿತೀಯೆಯನ್ನೂ, ಸಂಗಡ ಎಂಬಲ್ಲಿ ಸಂಗಡದಿಂ ಎಂಬ ತೃತೀಯೆಯನ್ನೂ, ಪಚ್ಚನೆ ಕೆಚ್ಚನೆ, ಎಂಬಲ್ಲಿ ಪಚ್ಚಗೆ ಕೆಚ್ಚಗೆ ಎಂಬ ಚತುರ್ಥಿಯನ್ನೂ, ಮತ್ತಿನ ಮತ್ತಿನ ಬೇರ್ಗಳ ಬಿತ್ತುಗಳಾವೆಡೆಯೊಳೇನೋ ಸುಜನೋತ್ತಂಸಾ ಎಂಬಲ್ಲಿ ಷಷ್ಠಿಯನ್ನೂ ತಿಳಿದುಕೊಳ್ಳಬೇಕೆಂದು ಹೇಳಿದನು. ನಿರ್ನೆರಂ ಇದ್ದಾಗ ನಿರ್ನೆರಮಂ ಎಂದು ಏಕೆ ಊಹಿಸಬೇಕು ? ಸಂಗಡ ಎಂದಾಗ ಸಂಗಡದಿಂ ಏಕೆ ? ಕೇಶಿರಾಜನಿಗೆ ತಿಳಿಯದಾಯಿತು.

ಹಾಡ್ಸನ್ ಅವರು ಅರಿತೋ ಅರಿಯದೆಯೋ ಕೇಶಿರಾಜನ ಈ ಸೂತ್ರದ ಹತ್ತಿರ ಬಂದು ಹಾಯ್ದು ಹೋಗುತ್ತಾರೆ. ಅವ್ಯಯಗಳ ಬಗೆಗಿನ ಅವರ ವಿವರಣೆಯನ್ನು ನೋಡಿದರೆ, ಕೇಶಿರಾಜನ ಸೂತ್ರಕ್ಕೆ ಅವರು ದೃಷ್ಟಾಂತಗಳನ್ನು ಒದಗಿಸುವಂತೆ ಕಾಣುತ್ತದೆ. ಕನ್ನಡದಲ್ಲಿ ಆಗ, ಈಗ, ನಿನ್ನೆ, ನಾಳೆ, ಅಲ್ಲಿ, ಹೊರಗೆ, ಕೆಳಗೆ, - ಮೊದಲಾದವು ಅವ್ಯಯಗಳಷ್ಟೇ. ಇವೆಲ್ಲಕ್ಕೂ ವಿಭಕ್ತಿ ಪ್ರತ್ಯಯ ಗಳು ಹತ್ತುತ್ತವಲ್ಲ. ಈ ಬಗೆಗೆ ಹಾಡ್ಸನ್ ಅವರ ವಿವರಣೆಯನ್ನು ನೋಡೋಣ :

"Adverbs are generally formed by the addition of ಆಗಿ to nouns and adjectives, as ಅಂದ, beauty, ಅಂದವಾಗಿ, beautifully, ಸಂತೋಷ, gladness, ಸಂತೋಷವಾಗಿ, gladly......

Some adverbs are declined like nouns in the singular number, as

ಆಗ
ಆಗ, ಆಗಲು
ಆಗಿನಿಂದ

ಆಗ್ಗೆ
(ಆಗಿನಿಂದ)
ಆಗಿನ, ಆಗಲಿನ
ಆಗಿನಲ್ಲಿ, ಆಗಲಲ್ಲಿ....''

ಈ ರೀತಿ ಹಾಡ್ಸನ್ ಅವರು ರಚಿಸಿದ ಪ್ರಾಥಮಿಕ ವ್ಯಾಕರಣ, ಹೆಸರು ಮತ್ತು ಉದ್ದೇಶಗಳಲ್ಲಿ ಪ್ರಾಥಮಿಕವೆನಿಸಿದರೂ, ವಿಚಾರ ಸರಣಿ ಮತ್ತು ಪ್ರತಿಪಾದನೆಗಳಲ್ಲಿ ತುಂಬಾ ಪ್ರಗಲ್ಭವಾಗಿದೆಯೆಂದು ಹೇಳಬೇಕು.

ವಿದೇಶೀಯರಿಂದ ಕನ್ನಡ ಭಾಷೆಯ ಬಗೆಗೆ ರಚಿತವಾದ ವ್ಯಾಕರಣ ಗ್ರಂಥಗಳ ಮಾಲಿಕೆಯಲ್ಲಿ ಜಾನ್ ಹ್ಯಾಂಡ್ಸ್ (೧೮೧೦), ಜಾನ್ ಮೆಕೆರಲ್ (೧೮೧೫), ವಿಲಿಯಂವ್ ಕ್ಯಾರೆ (೧೮೨೦), ಸಿ. ಕ್ಯಾಂಬೆಲ್ (೧೮೫೦), ರೆ. ಕೀಜ್ (೧೮೬೦), ಜಾನ್ ಗ್ಯಾರೆಟ್ (೧೮೬೫), ಬಿ. ಎಲ್. ರೈಸ್ (೧೮೭೦), ಜಾರ್ಜ್ ವರ್ಥ್ (೧೮೭೨), ಎಫ್. ಕಿಟೆಲ್ (೧೮೭೨), ರೆವರೆಂಡ್ ಝೀಗ್ಲರ್ (೧೮೮೦) ಇವುಗಳಲ್ಲಿ ೧೮೫೫ ರಲ್ಲಿ ಪ್ರಕಟವಾದ ಹಾಡ್ಸನ್ ಅವರ ವ್ಯಾಕರಣ ಗ್ರಂಥಕ್ಕೆ ಮಹತ್ವಪೂರ್ಣವಾದ ಸ್ಥಾನವಿದೆ.

—

ಜಾರ್ಜ ವರ್ಥ್

(ಸು. ೧೮೨೦–೧೮೯೯)

ಜಾರ್ಜ ಎ. ವರ್ಥ್ ಇವರು ಜರ್ಮನ್ ದೇಶದವರು. ದಕ್ಷಿಣ ವಿಭಾಗದ ಎಜುಕೇಶನಲ್ ಇನಸ್ಪೆಕ್ಟರರಾಗಿದ್ದ ಮೆ.ರಸೆಲ್ ಅವರು ವರ್ಥ್ ಅವರ ಹೆಸರಿನಲ್ಲಿ ಒಂದು ಬಹುಮಾನವನ್ನು ಇರಿಸಿದರು.

ಕ್ರಿ.ಶ. ೧೮೬೧ ರಲ್ಲಿ ವರ್ಥ್ ಅವರು ರೆ. ಮೋಗ್ಲಿಂಗ್ ಮತ್ತು ಜಿ. ವೈಗಲ್ ಅವರನ್ನು ಕೂಡಿಕೊಂಡು 'ಶಾಲಾಗೃಹ ಪಠಣೋದ್ದಿಶ್ಯ ದೇವವಾಕ್ಯ ವಾಖ್ಯಾನವು' ಎಂದು ಹಳೆಯ ಮತ್ತು ಹೊಸ ಒಡಂಬಡಿಕೆಗಳ ಬಗೆಗೆ ವಿವರಣೆಯನ್ನು ಬರೆದರು. ಅಲ್ಲದೆ, ಇವರು ಬರೆದ 'ಬೈಬಲ್ ಆ್ಯಂಡ ಹಿಂದೂಯಿಸಮ್' ಎಂಬ ಪುಸ್ತಕ ಕ್ರಿ. ಶ. ೧೮೬೦ ರಲ್ಲಿ ಪ್ರಕಟವಾಗಿತ್ತು. ಅದೇ ವರ್ಷ, ಅಂದರೆ ಕ್ರಿ. ಶ. ೧೮೬೦ ರಲ್ಲಿ ವರ್ಥರವರ 'ಈಸೋಪನ ಕತೆಗಳು' ಎಂಬ ೨೦೦ ಪುಟಗಳ ಪುಸ್ತಕ ಪ್ರಕಟವಾಯಿತು. ಅಲ್ಲದೆ, 'ಕಥಾಸಂಗ್ರಹ' ಎಂಬ ೨೨೦ ಪುಟಗಳ ಪುಸ್ತಕವೂ ಮೂರನೇ ಆವೃತ್ತಿಯಾಗಿ ಬಾಸೆಲ್ ಮಿಶನ್‌ದವರಿಂದ ಇದೇ ವರುಷ ಪ್ರಕಟವಾಯಿತು. 'ದೃಷ್ಟಾಂತಮಂಜರಿ' ಎಂಬುದೂ ಇವರ ಇನ್ನೊಂದು ಕೃತಿಯಾದಂತೆ ಕಂಡುಬರುತ್ತದೆ. ಶ್ರೀಯುತರು 'ದ್ವಿಮತ ಪರೀಕ್ಷೆ' ('ಹಿಂದೂಯಿಸಮ್ ಆ್ಯಂಡ ಕ್ರಿಶ್ಚಿಯಾನಿಟಿ ಕಾಂಟ್ರ್ಯಾಸ್ಟೆಡ್') ಎಂಬ ಪುಸ್ತಕವನ್ನು ಸನ್ ೧೮೬೬ರಲ್ಲಿ ಪರಿಷ್ಕರಿಸಿ, ಪ್ರಕಟಿಸಿದರು. ಇದರ ಪುಟಸಂಖ್ಯೆ ೧೩೫. ಇದನ್ನು ಈ ಮೊದಲು ಬೆಂಗಳೂರಿನ ರೋಮನ್ ಕ್ಯಾಥೋಲಿಕ್ ಮಿಶನ್‌ದವರು ಪ್ರಕಟಿಸಿದ್ದರು.

ಕರ್ನಾಟಕ ಪ್ರಾಕ್ಕಾವ್ಯ ಮಾಲೆ (೧೮೬೮) :

ಆದರೆ, ಎಲ್ಲದಕ್ಕೂ ಹೆಚ್ಚು ಜನಪ್ರಿಯವಾದ ವರ್ಥರವರ ಕೃತಿಯೆಂದರೆ ಅವರು ಸಂಗ್ರಹಿಸಿದ ಕಾವ್ಯಸಂಕಲನವಾದ 'ಪ್ರಾಕ್ಕಾವ್ಯಮಾಲೆ' ಎಂಬುದು. ೪೦೦ ಪುಟಗಳಷ್ಟು ಗಾತ್ರದ ಈ ಸುಂದರವಾದ ಸಂಕಲನವು ಕ್ರಿ. ಶ. ೧೮೬೮ ರಲ್ಲಿ ಮೊದಲಸಲ ಪ್ರಕಟವಾಯಿತು. ತದನಂತರ ಈ ಗ್ರಂಥವನ್ನು ರೆ. ಗ್ಯಾರೆಟ್ ಅವರು ೧೮೭೫ ರಲ್ಲಿ ಪರಿಷ್ಕರಿಸಿ ಪುನಃ ಪ್ರಕಟಗೊಳಿಸಿದರು. ಈ ದ್ವಿತೀಯ ಆವೃತ್ತಿ ೫೭೭ ಪುಟಗಳ ಗಾತ್ರದ್ದಿದ್ದು, ಕೊನೆಗೆ ಸುಮಾರು ೪೦ ಪುಟದಷ್ಟು ಕಠಿಣ ಶಬ್ದಗಳ ಕೋಶವನ್ನು ಕೊಡಲಾಗಿದೆ.

ಇದರ ಮುಖಪುಟದಲ್ಲಿ "ಕರ್ನಾಟಕ ಪ್ರಾಕ್ಕಾವ್ಯಮಾಲಿಕೆ'' ಎಂದು ಹೇಳಿ, "ಕರ್ನಾಟಕ ಗ್ರಂಥಗಳು, ಕೆಲವು ಬ್ರಾಹ್ಮಣ ಮತಕ್ಕೆ, ಕೆಲವು ಲಿಂಗವಂತ ಮತಕ್ಕೆ. ಕೆಲವು ಜೈನ ಮತಕ್ಕೆ ಸಂಬಂಧವಾಗಿ ಹೀಗೆ ಮೂರು ಪ್ರಕಾರವಾಗಿವೆ. ಒಂದೊಂದು ಮತದ ಪ್ರಸಿದ್ಧ ಗ್ರಂಥಗಳಲ್ಲಿ ಕಾವ್ಯಲಕ್ಷಣ

ಸಂಪೂರ್ಣವಾದ ಕೆಲವು ಭಾಗಗಳನ್ನು ಆರಿಸಿಕೊಂಡು ಸಂಮೇಳನ ಮಾಡಿ ಇದಕ್ಕೆ ಪ್ರಾಕ್ಕಾವ್ಯಮಾಲಿಕೆ ಎಂಬ ಹೆಸರನ್ನು ಇಟ್ಟಿದ್ದೇವೆ'' ಎಂದು ಹೇಳಲಾಗಿದೆ.

ಈ ಸಂಕಲನದ ಹೆಚ್ಚಿನ ಆಕರ್ಷಕ ಅಂಶವೆಂದರೆ, ಕೊನೆಗೆ ಬರುವ ಕ್ರೈಸ್ತ ಗೀತೆಗಳು. ಈ ವಿಭಾಗದ ಪೀಠಿಕೆಯಲ್ಲಿ ಹೀಗೆ ಹೇಳಲಾಗಿದೆ :

''ಕರ್ನಾಟಕ ದೇಶದಲ್ಲಿ ಕ್ರೈಸ್ತಧರ್ಮ ಹಿಡಿದವರು ಸ್ವಲ್ಪ ಜನ. ಯಾಕಂದರೆ ಈ ಧರ್ಮ ಕರ್ನಾಟಕ ಜನರೊಳಗೆ ಇನ್ನು ಬಹಳ ಪ್ರಕಟವಾಗಿರುವದಿಲ್ಲ. ಆದರೂ ಈ ಧರ್ಮಕ್ಕೆ ಸಂಬಂಧ ವಾದ ಕೆಲವು ಕೃತಿಗಳು ಅವೆ. ಅವುಗಳಲ್ಲಿ ಪ್ರಸಿದ್ಧವಾಗಿರುವ 'ಗೀತ ಪುಸ್ತಕ' ಎಂಬ ಕೃತಿಯಿಂದ ಕೆಲವು ಗೀತಗಳನ್ನು ಆರಿಸಿಕೊಂಡಿದ್ದೇವೆ. ಅವು ಪೂರ್ವದಲ್ಲಿ ಇಂಗ್ಲಿಷ ಮತ್ತು ಜರ್ಮನ ಭಾಷೆ ಗಳಲ್ಲಿ ರಚನೆಯಾಗಿದ್ದವು. ಇತ್ತಲಾಗಿ ಕೆಲವರು ಅವನ್ನು ಅದೇ ಛಂದಸ್ಸಿನಿಂದ ಕನ್ನಡಿಸಿದರು. ಆ ಭಾಷೆಗಳ ಛಂದಸ್ಸಿನಲ್ಲಿಯೂ ಇವೇ ಗಣಗಳೆಲ್ಲ ಇವೆ. ಅಂತ್ಯಪ್ರಾಸ ಮಾತ್ರ ವರ್ಣಿಸುವದು. ಆದರೆ ಇದಾದರೂ ಕೆಲವು ಕಾವ್ಯಗಳಲ್ಲಿ ಇಲ್ಲ. ಎಲ್ಲಾ ಕಾವ್ಯಗಳಂ ವಿಶೇಷವಾಗಿ ಗಣನಿಬಂಧನೆ ಯಿಂದ ಆಗುವವು. ಗುರು ಲಘು ಭೇದದ ವಿಷಯದಲ್ಲಿ ಮಾತ್ರ ಆ ಭಾಷೆಗಳ ಛಂದಸ್ಸಿಗೂ ಕನ್ನಡ ಛಂದಸ್ಸಿಗೂ ಒಂದು ದೊಡ್ಡ ಹೆಚ್ಚು ಕಡಿಮೆಯಿದೆ.''

ಈ ಕ್ರೈಸ್ತ ಗೀತಗಳು ಯಾವ ರೀತಿ ಇದ್ದವೆಂಬುದರ ನಿದರ್ಶನವಾಗಿ ಕೆಳಗೆ ಹಲವು ಗೀತ ಗಳನ್ನು ಕೊಡಲಾಗಿದೆ :

೧೬೯೩ ಸ್ತೋತ್ರಮನುತ್ತುಮದೇವರಿಗರ್ಪಿಸ ಬರ್ರಿ !
ವೀಣೆಯು ಗಾಯನವೇ ! ಸಮುದಾಯವ ಕರಿ !
ದೂತರೊಳೂ
ಕೀರ್ತನೆ ಏಳಲಿಯೂ !
ಸ್ತೋತ್ರ ಸುಗಂಧವ ತರ್ರಿ !
ಭೂದಿವಲೋಕಗಳಾತನ ಸ್ವಾಶ್ರಿತರಾಜ್ಯ
ಯಾವನು ಭೂದಿವರಾಜನ ಸಂಗಡ ವ್ಯಾಜ್ಯ
ಮಾಡುವನು ?
ಕೇಳಿಸೆ ನುಡಿಯನು
ಮರ್ತ್ಯರ ಗದ್ದಲ ತ್ಯಾಜ್ಯ

ಇನ್ನೊಂದು :

೧೬೯೪ ಕ್ರಿಸ್ತನು ಕ್ರಯಕೆ ಕೊಂಡ ಜನಾಂಗವಿದ್ದೇವೆ
ರಾಜನ ಚಿತ್ತಕೆ ಒಪ್ಪಲಿ ದಾಸರ ಸೇವೆ
ಹೃದಯದೊಳೇ
ಕ್ರಿಸ್ತನು ವಾಸಿಸಲೇ
ಹರ್ಷದಿ ಜೀವಿಸುತ್ತೇವೆ

ಮತ್ತೊಂದು :

೧೬೯೫ ಉಂಟು ನಿಷ್ಕಳಂಕ ದೇಶ
ಅಲ್ಲಿ ನಮಗೇ ಪ್ರವೇಶ

ಅಲ್ಲಿ ನಾವು ಶೇರೋದುಂ
ನಿತ್ಯಕ್ಷೇಮಂ ಸಿಕ್ಕೋದುಂ

೧೬೯೭ ಮೃತ್ಯು ಆಪಗಾಘೋಷ
ನಮ್ಮ ಕಿವಿಗೇ ಸಂತೋಷ
ನಂಬಿಗೆಂಬ ನಾವೆಯುಂ
ದಾಟಿ ಪೋಪುದುಂ ಠೀವಿಯುಂ

೧೬೯೮ ಇಲ್ಲಿ ನಮ್ಮ ಸುಖಕಷ್ಟ
ಇಲ್ಲಿ ನಮ್ಮ ಲಾಭ ನಷ್ಟ
ನಮ್ಮ ಕ್ಷೇಮತಾಪವು
ನಮ್ಮ ನೀತಿ ಪಾಪವು

೧೬೯೯ ಅಲ್ಲಿ ಪೀಡೆ, ಸಾವು. ಶಾಪ
ಅಂಧಕಾರ ಸೂರ್ಯತಾಪ,
ಚಿಂತೆ. ದುಃಖ ಕಾಣವು;
ಅಲ್ಲಿ ಸೌಖ್ಯತಾಣವು

೧೭೦೦ ಈಗಲೀಗ ಸಂತು
ಅಗಾಧ ನಿದ್ದೆ ಬಂತು
ಸಮಸ್ತ ಲೋಕಕ್ಕೇ
ಓ ಮನವೇ ! ಬಿಸಾಡು
ಆಲಸ್ಯವನ್ನು ! ಹಾಡು !
ಸುಸಿದ್ಧವಾಗು ಸ್ತೋತ್ರಕ್ಕೇ !
ಅಗೊ ನೀ ಹೋದಿ ಅರ್ಕ
ಈ ರಾತ್ರಿ ಎಂಬ ಕರ್ಕ
ನಿನ್ನ ಜೋತಿ ಅಟ್ಟಿದಂ
ನೀ ಹೋಗು ! ರವಿಯಾಗಿ
ನನ್ನೀಶ ಸವಿಯಾಗಿ
ನನ್ನ ಹೃದಯುದಲ್ಲಿ ಮೂಡಿದಂ

ವಿದೇಶೀಯರು ಕನ್ನಡದಲ್ಲಿ ಬರೆದರೆ ಹೇಗಿರಬೇಕೋ ಹಾಗಿವೆ ಈ ಪದ್ಯ. ಪಾಶ್ಚಿಮಾತ್ಯ ಗಾಯನ ಪದ್ಧತಿಗೆ ಹೊಂದಿಸಿಕೊಳ್ಳಬೇಕೆಂಬ ಉದ್ದೇಶದಲ್ಲಿ ಕನ್ನಡವೇ ಒಂದು ತರಹದ ವಿಕಾರ ಪಡೆದಂತೆ ಕಾಣುತ್ತದೆ. ಏನೇ ಆದರೂ, ಆ ಕಾಲದಲ್ಲಿ ಕನ್ನಡದಲ್ಲಿ ಬರೆಯಬೇಕೆಂದಿದ್ದ ಛಲ ಮತ್ತು ಪರಿಶ್ರಮಗಳು ಸ್ತುತ್ಯರ್ಹವಾಗಿವೆ. 'ಪ್ರಾಕ್ಕಾವ್ಯಮಾಲೆ' ಎಷ್ಟೋ ವರ್ಷ ಕಾಲ ವರ್ಥ ಬಹುಮಾನ ಪರೀಕ್ಷೆಗೆ ಪಠ್ಯಪುಸ್ತಕವಾಗಿದ್ದಿತು.

ವರ್ಥರವರು ಬಸವ ಪುರಾಣ ಮತ್ತು ಚನ್ನಬಸವ ಪುರಾಣಗಳ ಬಗೆಗೆ ಇಂಗ್ಲಿಷಿನಲ್ಲಿ ಬರೆದ ಧೀರ್ಘವಾದ ಕಥಾಸಾರವು ಸನ್ ೧೮೬೫ ರ ರಾಯಲ್ ಏಶಿಯಾಟಿಕ್ ಸೊಸ್ಶಾಟಿಯ ಪತ್ರಿಕೆಯಲ್ಲಿ ಪ್ರಕಟವಾಗಿದೆ,

—

ಜೆ. ಮ್ಯಾಕ್

(ಸು. ೧೮೬೨)

ಇವರು ಅನೇಕ ವರ್ಷಗಳ ಕಾಲ ಹುಬ್ಬಳ್ಳಿಯ ಬಾಸೆಲ್ ಮಿಶನ್ ಪ್ರೌಢಶಾಲೆಯ ಮುಖ್ಯಾಧ್ಯಾಪಕರಾಗಿದ್ದರು. ರೊದ್ದ ಶ್ರೀನಿವಾಸರಾಯರು ಇವರ ಕೈಯಲ್ಲಿಯೇ ಕೆಲಸವನ್ನು ಮಾಡಿದರು. ಮ್ಯಾಕ್ ಅವರು ಡಾ. ಕಿಟೆಲ್ ಅವರ ಜತೆಗೂಡಿ ಸನ್ ೧೮೬೨ರಲ್ಲಿ 'ವಿಚಿತ್ರ ವರ್ತಮಾನ ಸಂಗ್ರಹ' ಎಂಬ ಪತ್ರಿಕೆಯನ್ನು ಹೊರಡಿಸುತ್ತಿದ್ದರು. ಇದರಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳ ಲೇಖನಗಳು ಇರುತ್ತಿದ್ದವು. ಇದು ಪ್ರತಿ ಹದಿನೈದು ದಿವಸಗಳಿಗೊಮ್ಮೆ ಹೊರಡುತ್ತಿತ್ತು.

ಅಲ್ಲದೆ, ಇವರು 'ಕಾವ್ಯಪುಂಜ' ಎಂಬ ಕವನ ಸಂಕಲವನ್ನು ಪ್ರಕಟಿಸಿದರು. ಬಾಲಕರಿಗಾಗಿ ಹೊಸಕವಿತೆಗಳನ್ನು ರಚಿಸಿದರು.

—

ರೆ. ಹರ್ಮನ್ ರೀಪ್

(ಸು. ೧೮೬೩ – ೧೯೨೮)

ಇವರೂ ಬಾಸೆಲ್ ಮಿಶನದವರು. ಕೆಲಕಾಲ ಧಾರವಾಡ ಜಿಲ್ಲೆಯ ಬೆಟಗೇರಿಯಲ್ಲಿದ್ದು ಮಿಶನ್ ಕೆಲಸವನ್ನು ಮಾಡಿದರು. ಬೆಟಗೇರಿಯ ಅನಾಥಾಲಯ ಕಟ್ಟಡವನ್ನು ಕಟ್ಟಿಸಿದವರು ಇವರೇ. ೧೯೦೮ ರಲ್ಲಿ ಬಾಸೆಲ್ ಮಿಶನ್ನಿನ ಅಧ್ಯಕ್ಷರೂ, ಕೆಲಕಾಲ ಮಂಗಳೂರಿನ ಥಿಯಾಲಾಜಿಕಲ್ ಸಂಸ್ಥೆಯ ಅಧ್ಯಾಪಕರೂ ಆಗಿದ್ದರು. ಸನ್ ೧೯೧೧ ರಿಂದ ೧೯೧೬ ರ ವರೆಗೆ ಬೈಬಲ್ ಪರಿಷ್ಕರಣ ಸಮಿತಿಯ ಅಧ್ಯಕ್ಷರೂ ಆಗಿದ್ದರು. ಸನ್ ೧೯೨೫–೧೯೨೮ ರ ವರೆಗೆ ರೆ. ರೀಪರವರು ಧಾರವಾಡದ ಬಾಸೆಲ್ ಮಿಶನ್ ಶಾಲೆಯ ಮುಖ್ಯಾಧ್ಯಾಪಕರಾಗಿದ್ದರು.

ರೀಪರವರು 'ಯೇಸುಕ್ರಿಸ್ತನ ಮೂಲಕ ಸ್ಥಾಪಿತವಾದ ಹೊಸ ಒಡಂಬಡಿಕೆ' ಎಂಬ ಗ್ರಂಥವನ್ನು ಸನ್ ೧೯೦೬ ರಲ್ಲಿ ಗ್ರೀಕ್ ಭಾಷೆಯಿಂದ ನೂತನವಾಗಿ ಭಾಷಾಂತರಿಸಿ ಪ್ರಕಟಿಸಿದರು. ಈ ಗ್ರಂಥ ನೋಡಲು ದೊರಕಲಿಲ್ಲ.

—

ರೆವರೆಂಡ ಕೀಜ್

(ಸು. ೧೮೨೧ – ೧೮೭೦)

ಇವರು ಅಂದಿನ ಕಲಾದಗಿ ಜಿಲ್ಹಾ ಗುಳೇದಗುಡ್ಡದಲ್ಲಿ ೧೮೬೬ ರ ಸುಮಾರಿಗೆ ವಾಸವಾಗಿದ್ದರು. ಇವರು ಉತ್ತರ ಕರ್ನಾಟಕ ಅಂದರೆ ಆ ಕಾಲದಲ್ಲಿ 'ದಕ್ಷಿಣ ಮಹಾರಾಷ್ಟ್ರ'ವೆಂದು ಕರೆಯಲ್ಪಟ್ಟ ಭಾಗದ ಬಗೆಗೆ ಪುಸ್ತಕವನ್ನು ಬರೆದಿದ್ದಾರೆ. ಈ ಬಗೆಗೆ ೧೮೬೬ ರ ಮಠಪತ್ರಿಕೆಯಲ್ಲಿ ಈ ಆಜ್ಞಾ ಪತ್ರ ಪ್ರಕಟವಾಗಿದೆ. ಕೀಜ್ ಅವರಿಗೆ ಅಂದಿನ ಗವರ್ನರರ ಸಹಕಾರವೂ ಈ ಕೆಲಸದಲ್ಲಿ ತುಂಬಾ ಇದ್ದಿತು.

"ಗುಳೇದಗುಡ್ಡದಲ್ಲಿ ರೆವರೆಂಡ ಮಿಸ್ತರ ಕೀಜ್‌ಯೆಂಬ ಪಾದ್ರೀ ಸಾಹೇಬರು ಬಹು ದಿವಸ ವಾಸವಾಗಿದ್ದಾರೆ. ಅವರು ಬಹುಕಾಲ ಈ ಕರ್ಣಾಟಕ ಶೀಮೆಯಲ್ಲಿ ಸಂಚಾರ ಮಾಡಿದವರಾಗಿ, ಈ ದೇಶದ ನಡನಡಾವಳಿಗಳನ್ನೂ ಚನ್ನಾಗಿ ಅರಿತುಕೊಂಡದ್ದಲ್ಲದೆ ಕನ್ನಡ ಭಾಷೆಯ ಜ್ಞಾನವನ್ನು ಅತ್ಯಪೂರ್ವವಾಗಿ ಸಂಪಾದಿಸಿಕೊಂಡಿದ್ದಾರೆ. ಕನ್ನಡ ಭಾಷೆಯಲ್ಲಿ ಗ್ರಂಥ ಬರೆಯುವರೆ ಅವರಷ್ಟು ಪ್ರವೀಣತೆಯುಳ್ಳವರು ಈ ಪ್ರಾಂತ್ಯದಲ್ಲಿ ಶಿಕ್ಕುವದು ಬಹು ದುರ್ಲಭವೆಂದು ನಾವು ನಂಬುತ್ತೇವೆ. ಈ ಧೊರೆಗಳು ಸರಕಾದವರ ಅನುಮತಿಯಿಂದ ಈ ದಕ್ಷಿಣ ಮಹಾರಾಷ್ಟ್ರದ ವರ್ಣನೆಯದೊಂದು ಪುಸ್ತಕವನ್ನು ಬರೆಯಲೆಸಗಿದ್ದಾರೆ. ಇಂಗ್ಲಿಷ ಭಾಷೆಯಲ್ಲೂ, ಕನ್ನಡಿನಲ್ಲೂ, ಇದರ ಪ್ರತಿಗಳನ್ನು ಬೇರೆ ಬೇರೆ ಛಾಪಿಸಬೇಕೆಂಬುದಾಗಿ ಅವರ ಆಲೋಚನೆಯುಂಟು. ಅವರಿಗೆ ಆಗತಕ್ಕ ಸಹಾಯ ಮಾಡುವ ಬಗ್ಗೆ ನಾಮದಾರ ಗವರ್ನರ ಧೊರೆಗಳವರ ಅಪ್ಪಣೆಯು ಈ ಭಾಗದೊಳಗಣ ಕಲೆಕ್ಟರುಗಳಿಗೆ ತಲ್ಪಿದ ಪ್ರಕಾರ ಯಾವತ್ತು ಮಾಮಲೇದಾರರಿಗೂ ಅವರವರ ಕಲೆಕ್ಟರಗಳ ಹುಕುಂ ಆದಂತೆ ತಿಳಿಯಬರುತ್ತದೆ. ಆದರೆ ಕೀಜ್ ದೊರೆಗಳಿಗೆ ತಿಳಿಸತಕ್ಕ ಸಂಗತಿಗಳೆಲ್ಲಾ ಈ ಭಾಗದ ಇನಸ್ಪೆಕ್ಟರವರ ಮುಖಾಂತರವಾಗಿ ಹೋಗತಕ್ಕವುಗಳಾಗಿರುತ್ತವೆ. ಆದ್ದರಿಂದ ನಮ್ಮ ಮಾಸ್ತರ ಜನರೆಲ್ಲರು ಈ ವಿಷಯವಾಗಿ ಜಾಗ್ರತೆ ಪಡತಕ್ಕದ್ದು. ಅವರು ತಮ್ಮ ತಮ್ಮ ಗ್ರಾಮಗಳಲ್ಲಿಯೂ, ನೆರೆ ಹೊರೆಯಲ್ಲಿಯೂ ಇದ್ದ ವಿಶೇಷ ಸಂಗತಿಗಳನ್ನು (ಭೂಮಿಯ ವಿಧಗಳು, ಸಸ್ಯಾದಿಗಳು, ಗಿರಿ, ಗವ್ಹರ, ವನ, ನದಿ, ಕೆರೆ, ಜನರ ನಡತೆಯ ವೈಚಿತ್ರ್ಯಗಳು, ಬೇರೆ ಚಮತ್ಕಾರಗಳು) ನಿಜವಾಗಿ ತಿಳಿದುಕೊಂಡು ಬರೆದಿಡಬೇಕು. ಈ ಕೆಲಸದಲ್ಲಿ ಮುಖ್ಯವಾಗಿ ತಾಲೂಕಾ ಮಾಸ್ತರರು ಜಬಾಬದಾರರಾಗಿರುತ್ತಾರೆ. ಅವರು ತಮ್ಮ ಸ್ವಂತ ಶ್ರಮೆಯಿಂದಲೂ ಸದರೀ ಪ್ರಕಾರದ ಮಾಹೀತು ಮಾಡಿಕೊಂಡು ತಮ್ಮ ತಾಲೂಕದ್ದೊಂದು ನಕ್ಷೆ ತಯಾರ ಮಾಡಿಡಬೇಕು. ಈ ಬಗ್ಗೆ ಶೀವ್ರವೇ ಇನಸ್ಪೆಕ್ಟರವರ ಹುಕುಂ ಸಾದರಾಗುವದು. ಆ ಹುಕುಂ ತಲ್ಪಿದ ಕೂಡ್ಲೆ ಸದರಿ ನಕ್ಷೆಯನ್ನು ತಾವು ಸಂಪಾದಿಸಿದ

ವರ್ಣನೆ ಸಹಿತವಾಗಿ ತಾಲೂಕಾ ಮಾಸ್ತರರು ಕಳುಹಿಸತಕ್ಕದ್ದು. ಬೇರೆ ಮಾಸ್ತರರಿಗೆ ಸಹ ಆಗುವ ಹುಕುಂಗಳಿಗೆ ಸಮರ್ಪಕವಾದ ಉತ್ತರ ಕೊಡುವಲ್ಲಿ ಅವರು ತಯಾರಾಗಿರತಕ್ಕದ್ದು.

ಇದೇ ಲೇಖವೇ ಇನಸ್ಪೆಕ್ಟರರ ಹುಕುಮಿನ ಸ್ಥಾನದಲ್ಲಿರುತ್ತದೆಂದು ತಿಳಿದು ಯಾವತ್ತೂ ಮಾಸ್ತರರು ತಮ್ಮ ತಮ್ಮ ಕೈಲಾದಮಟ್ಟಿಗೂ ಯತ್ನೈಸಿ, ಕೀಜ್ ದೊರೆಗಳ ಉದ್ಯೋಗವೂ, ಗವರ್ನರ ಸಾಹೇಬರ ಅಭಿಲಾಷೆಯೂ ಸಫಲವಾಗುವ ಹಾಗೆ ಸಹಾಯ ಮಾಡುವರೆಂದು ನಾವು ಕೋರುತ್ತೇವೆ.''

ಮೇಲೆ ವಿವರಿಸಿದ ಭೂಗೋಲ ಪುಸ್ತಕವನ್ನಲ್ಲದೆ ಕೀಜ್ ಅವರು ಸನ್ ೧೮೫೮ರಲ್ಲಿ ಬೈಬಲ್ ವಿಷಯಕವಾಗಿ 'ಸಭೆಪ್ರಾರ್ಥನೆಗಳು' ಎಂಬ ೧೯೩ ಪುಟಗಳ ಪುಸ್ತಕವನ್ನೂ, ಸನ್ ೧೮೬೦ರಲ್ಲಿ ಬಾಬಾ ಪದಮಂಜಿಯ ಜೀವಾಂತ್ಯ ಸ್ಮರಣೆಯ ಅನುವಾದವನ್ನೂ, ಸನ್ ೧೮೬೩ರಲ್ಲಿ 'ಆರಿಸಿದ ದೇವವಾಕ್ಯದ ವಚನಗಳ ರತ್ನಮಾಲೆ' ಎಂಬುದಾಗಿ ಬೈಬಲ್ ನುಡಿಮುತ್ತುಗಳ ಸಂಗ್ರಹವನ್ನೂ, ಸನ್ ೧೮೬೫ ರಲ್ಲಿ 'ದೇವವಾಕ್ಯದ ವಚನಮಂಜರಿ' ಎಂಬುದಾಗಿ ಇದೇ ತರಹದ ೩೬ ಪುಟಗಳ ಚಿಕ್ಕ ಪುಸ್ತಕವನ್ನೂ, ಸನ್ ೧೮೬೭ ರಲ್ಲಿ 'ಕರ್ಲಮೇರಿಕೆ ದೊರೆಗಳ ಸಮಾಧಿ ಮುಂದೆ' ಎಂಬ ಚಿಕ್ಕ ವಿಡಂಬನಾತ್ಮಕ ಹೊತ್ತಿಗೆಯನ್ನೂ, ಸನ್ ೧೮೪೯ ರಲ್ಲಿ 'ಶೋರ್ಟ ಸ್ಟೋರೀಸ್ ಇನ್ ಕ್ಯಾನರೀಸ' ಎಂಬ ೧೩೩ ಪುಟಗಳ ಕಥಾಸಂಗ್ರಹವನ್ನೂ, ಅದಾದ ನಂತರ ೧೮೬೦ ರಲ್ಲಿ 'ಭೂಗೋಳ ಹಿಂದೂಸ್ಥಾನ' ಎಂಬ ೩೦ ಪುಟಗಳ ಚಿಕ್ಕ ಪುಸ್ತಕವನ್ನೂ, ೧೮೬೩ ರಲ್ಲಿ 'ಭೂಗೋಳ ವಿದ್ಯಾಸಾರ' ಎಂಬ ೫೬ ಪುಟಗಳ ಪುಸ್ತಕವನ್ನೂ, ೧೮೬೭ ರಲ್ಲಿ 'ಭೂಗೋಳ ಶಾಸ್ತ್ರಸಾರ' ಎಂಬ ೫೮ ಪುಟಗಳ ಪುಸ್ತಕವನ್ನೂ ಪ್ರಕಟಿಸಿದರು. ಇವರ ೬೪ ಪುಟಗಳ 'ಕನ್ನಡ ಬಾಲವ್ಯಾಕರಣ' ೧೮೬೦ ರಲ್ಲಿ ಪ್ರಕಟವಾಗಿ ಎಲ್ಲ ಶಾಲೆಗಳಲ್ಲಿಯೂ ಪಠ್ಯವಾಗಿದ್ದಿತು. ಇವರು ೧೮೬೬ ರಲ್ಲಿ ಪ್ರಕಟಿಸಿದ ಒಂದು ವಿಶಿಷ್ಟ ಪುಸ್ತಕದಲ್ಲಿ ಕ್ರಿಶ್ಚಿಯನ್ ಹೆಸರುಗಳು ಅಕಾರಾದಿ ಕ್ರಮದಲ್ಲಿ ಇವೆ. ಇವರೇ ಸ್ತ್ರೀ ಶಿಕ್ಷಣದ ಬಗೆಗೆ ಈ ಭಾಗದಲ್ಲಿ ಪ್ರಯತ್ನಿಸಿದವರು. ಇವರ ಬಗೆಗೇ ಕಾವ್ಯಾನಂದ ಪುಣೇಕರರು ''ಸ್ತ್ರೀಶಿಕ್ಷಣದ ಕೀಸ್, ಕೀಸ್ ಸಾಹೇಬರಲ್ಲಿದೆ'' ಎಂದು ಹೇಳಿದ್ದು.

—

ಉಪಸಂಹಾರ

ಉಪಸಂಹಾರ

ಈ ವರೆಗೆ ಕೊಟ್ಟ ವಿವರಣೆಯ ಮೇಲಿಂದ ಈ ಕೆಳಗಿನ ಮಾತುಗಳು ಸ್ಪಷ್ಟವಾಗುವಂತಿವೆ :

- ಡಾ. ಕಿಟೆಲ್‌ರವರು ಕನ್ನಡ ಸಾಹಿತ್ಯದ ಇತಿಹಾಸದ ವಿವರಗಳು ಹೆಚ್ಚೆಚ್ಚು ದೊರಕಿದಂತೆ ಅದರ ಬಗೆಗೆ ಅಭಿಮಾನವು ಹೆಚ್ಚೆಚ್ಚು ಬೆಳೆಯುತ್ತದೆ ಎಂದು ಹೇಳಿದ ಮಾತು ಇಂದಿಗೂ ಸತ್ಯಪೂರ್ಣವಾಗಿದೆ. ಈ ಪ್ರಬಂಧದಲ್ಲಿ ಸಾಕಷ್ಟು ಗ್ರಂಥಕರ್ತರ ಬಗೆಗೆ, ಮತ್ತು ಸಾಕಷ್ಟು ಗ್ರಂಥಗಳ ಬಗೆಗೂ ಹೇಳಿದ್ದರೂ ಇನ್ನೂ ಅನೇಕ ಲೇಖಕರು ಹಾಗೂ ಗ್ರಂಥಗಳ ಬಗೆಗೆ ತಿಳಿಯಬೇಕಾಗಿದೆ. ಇದು ಕೂಡಾ ಶೀಘ್ರವೇ ಆಗಬೇಕಾದ ಕೆಲಸ.
- ಈ ಪ್ರಬಂಧದಲ್ಲಿ ಸಮಗ್ರ ಕರ್ನಾಟಕದ ಲೇಖಕರ ಬಗೆಗೆ ಹೇಳದೆ, ಕೇವಲ ಉತ್ತರ ಕರ್ನಾಟಕದ ಲೇಖಕರ ಬಗೆಗೆ ಹೇಳಿದೆ.
- ಇಲ್ಲಿ ಉಲ್ಲಿಖಿತರಾದ ಲೇಖಕರ ಜೀವನ ಚರಿತ್ರೆಯ ಬಗೆಗೆ ಲಭ್ಯವಾದಷ್ಟೆಲ್ಲ ವಿವರಗಳನ್ನು ಕಲೆ ಹಾಕಲು ಪ್ರಯತ್ನಿಸಲಾಗಿದೆ. ಸಮಕಾಲೀನ ವೃತ್ತಪತ್ರಿಕೆಗಳು, ದಾಖಲೆಗಳು, ಐತಿಹ್ಯಗಳು, ಆ ಲೇಖಕರಿಂದ ರಚಿತವಾದ ಕೃತಿಗಳು, ನಿಯತಕಾಲಿಕಗಳು, ಸಮಕಾಲೀನರಾಗಿ ಸುದೈವದಿಂದ ಇನ್ನೂ ಬದುಕಿರುವ ವ್ಯಕ್ತಿಗಳು ಇಲ್ಲವೆ ಇಂಥವರ ಬಾಯಿಯಿಂದ ವಿವರಗಳನ್ನು ಕೇಳಿದ ವ್ಯಕ್ತಿಗಳು– ಈ ಎಲ್ಲ ಮೂಲಗಳಿಂದ ವಿವರಗಳನ್ನು ದೊರಕಿಸಲಾಯಿತು. ಇದರ ಬಗೆಗೆ ಕರ್ನಾಟಕ, ಮಹಾರಾಷ್ಟ್ರ, ಮದ್ರಾಸ ಪ್ರಾಂತಗಳ ತುಂಬೆಲ್ಲ ಓಡಾಡಿ ವಿಷಯಗಳನ್ನು ಕಲೆಹಾಕಬೇಕಾಯಿತು. ಈ ಮೂಲಕ ಈ ಚಾರಿತ್ರಿಕಾಂಶಗಳೆಲ್ಲವೂ ಒಂದೆಡೆ ದೊರಕುತ್ತಿರುವವೆಂಬುದು ಸಮಾಧಾನದ ಮಾತು.
- ಈ ಪ್ರಬಂಧವನ್ನು ನೋಡಿದಾಗ ಹೆಚ್ಚು ಕಲಿತವರೆನ್ನುವವರು ಕನ್ನಡದ ಬಗೆಗೆ ಅಸಡ್ಡೆಯನ್ನು ತೋರುತ್ತಿದ್ದಾಗ, ಕನ್ನಡ ಶಾಲಾಶಿಕ್ಷಕರು– ವಿಶೇಷವಾಗಿ ಧಾರವಾಡದ ಟ್ರೇನಿಂಗ್ ಕಾಲೇಜಿನಲ್ಲಿ ಕಲಿತವರು– ಕನ್ನಡವನ್ನು ಉಳಿಸಿ, ಬೆಳೆಸಿ, ಪೋಷಿಸಿಕೊಂಡು ಬಂದರೆಂಬುದನ್ನು ಕಾಣುತ್ತೇವೆ.
- ಈ ಕಾಲದ ಲೇಖಕರಲ್ಲಿ ಕನ್ನಡವು ಮುಂದೆ ಬರಬೇಕೆಂಬ ಉದಗ್ರವಾದ ಭಾವನೆಯೂ, ಕನ್ನಡ ಹಿಂದೆ ಬಿದ್ದಿದೆಯಲ್ಲ ಎಂಬ ವಿಷಯವಾಗಿ ಅತಿಶಯವಾದ ಕಳವಳವೂ ಇದ್ದುದು ಎದ್ದು ಕಾಣುತ್ತದೆ. ಆದುದರಿಂದ ಕನ್ನಡದ ಕಣಜವನ್ನು ತುಂಬಲು ಸಂಸ್ಕೃತ, ಮರಾಠಿ, ಬಂಗಾಲಿ, ಇಂಗ್ಲಿಷ– ಹೀಗೆ ಯಾವ ಭಾಷೆಯಿಂದಾದರೂ ಸಾಹಿತ್ಯವನ್ನು ಬರಮಾಡಿಕೊಳ್ಳಲು ಯತ್ನಿಸಿದರು.

- ಈ ಕಾಲಖಂಡ ಸಾಮಾನ್ಯವಾಗಿ ಅನುಕರಣಯುಗವೆಂದು ಕರೆಯಲ್ಪಟ್ಟಿದ್ದರೂ, ಈ ಕಾಲದಲ್ಲಿ ಶಾಂತಕವಿಗಳು, ಕೆರೂರು ವಾಸುದೇವಾಚಾರ್ಯರು, ಗಳಗನಾಥರು ಮುಂತಾದ ಪ್ರತಿಭಾವಂತರು ಪ್ರಯತ್ನಪುರಸ್ಸರವಾಗಿ ಸ್ವತಂತ್ರ ಕೃತಿಗಳನ್ನು ರಚಿಸಲಿಕ್ಕೆ ಶ್ರಮ ವಹಿಸಿದರು.
- ಈ ಮೊದಲು ಕೇವಲ ವಸ್ತುನಿಷ್ಠವಾಗಿದ್ದ ಸಾಹಿತ್ಯವು ವ್ಯಕ್ತಿನಿಷ್ಠವೂ ಆಯಿತು. ವಿಪುಲ ಮಾನವಜೀವನದ ಸಮಾವಲೋಕನವಾಯಿತು.
- ಸಾಹಿತ್ಯದಲ್ಲಿ ಭಾರತೀಯತ್ವ, ಕರ್ನಾಟಕತ್ವ ಮತ್ತು ಸ್ವ-ತ್ವದ ಅರಿವು ಮೂಡಿ ಬಂದಿತು.
- ಈ ಕಾಲದಲ್ಲಿ ಪದ್ಯದ ಜತೆಗೆ ಗದ್ಯಕ್ಕೂ ಸರಿಸಮಾನವಾದ ಮನ್ನಣೆ ದೊರಕಿತು. ಹಾಗೂ ಗದ್ಯವು ಆಧುನಿಕ ಸ್ಪಂದನಗಳ ಅಭಿವ್ಯಕ್ತಿಗೆ ಯುಕ್ತವಾದ ವಾಹಕವಾಯಿತು.
- ಪದ್ಯದ ಸಾಹಿತ್ಯ ಶೈಲಿಯು ತೀವ್ರವಾಗಿ ರೂಪುಗೊಂಡಂತೆ, ಗದ್ಯದ ಶೈಲಿ ತೀವ್ರ ರೂಪುಗೊಳ್ಳಲಿಲ್ಲ. ಅದಕ್ಕೆ ಸಾಕಷ್ಟು ವೇಳೆ ಹಿಡಿಯಿತು.
- ಪದ್ಯದಲ್ಲಿ ಸಾಮಾನ್ಯವಾಗಿ ಪ್ರಾಸವನ್ನು ಪ್ರಯತ್ನಪುರಸ್ಸರವಾಗಿ ಬಿಟ್ಟುಬಿಡಲಾಯಿತು. ಖ್ಯಾತವೃತ್ತ, ಕಂದಗಳು ನಿಧಾನವಾಗಿ ಮರೆಯಾದುವು.
- ಈ. ಪಿ. ರೈಸ್‌ರವರು ಕನ್ನಡ ಗದ್ಯದಲ್ಲಿ ವಿರಾಮ ಚಿಹ್ನಗಳು ಅನವಶ್ಯಕ ತಲೆಹೊರೆ ಎಂದು ಹೇಳಿದ್ದರೂ, ಭಾಷೆಯಲ್ಲಿ ಈ ಹೊಸ ಅಂಶವು ಸ್ಥಿರವಾಗಿಯೇ ನೆಲೆಸಿತು. ಹಾಗೆಯೇ ಪರಿಚ್ಛೇದ ಕಲ್ಪನೆಯೂ ಮೂಡಿಬಂದಿತು.
- ಗದ್ಯದಲ್ಲಿಯೂ ಕೂಡ ಕಾದಂಬರಿ. ಸಣ್ಣಕತೆ, ಚರಿತ್ರೆ, ನಾಟಕ, ಪ್ರಬಂಧ, ನಿಬಂಧ, ಶೈಕ್ಷಣಿಕ ಸಾಹಿತ್ಯ, ದಿನಚರಿ, ಪತ್ರಿಕಾ ಸಾಹಿತ್ಯ– ಮೊದಲಾದ ಭಿನ್ನ ಭಿನ್ನವಾದ ಸಾಹಿತ್ಯ ರೂಪಗಳು ತಲೆಯೆತ್ತಿದುವು.
- ಜೈನ, ವೀರಶೈವ, ಬ್ರಾಹ್ಮಣ ಸಾಹಿತ್ಯದ ತ್ರಿವೇಣೀ ಸಂಗಮಕ್ಕೆ ಕ್ರೈಸ್ತಧರ್ಮದ ಥೇಮ್ಸ ನದಿಯೂ ಸೇರಿಕೊಂಡಿತು.
- ಇಲ್ಲಿಯ ಅನೇಕರ ಭಾವಚಿತ್ರಗಳನ್ನು ಹುಡುಕಿ ಅವುಗಳನ್ನು ಒಂದೆಡೆಗೆ ಸಂಗ್ರಹಿಸಲಾಗಿದೆ. ಹಲವರ ಕೃತಿಗಳು ಅಷ್ಟಾಗಿ ದೊರೆಯದಿದ್ದರೂ, ದೊರಕಿದ ಅವರ ಭಾವಚಿತ್ರಗಳನ್ನು ಇಲ್ಲಿ ಕೊಡಲಾಗಿದೆ. ಹಲವರ ಮೂಲ ಕಾಗದ ಪತ್ರಗಳ ಪಡಿಯಚ್ಚನ್ನೂ ಇಲ್ಲಿ ಸಂಗ್ರಹಿಸಿದೆ.
- ಇಲ್ಲಿ ಉಲ್ಲಿಖಿತರಾದ ಅನೇಕ ಲೇಖಕರ ಕೃತಿಗಳ ಮೌಲ್ಯಮಾಪನವನ್ನೂ ಮಾಡಲಾಗಿದೆ. ಅಲ್ಲದೆ, ಒಬ್ಬ ಲೇಖಕನ ವೈಯಕ್ತಿಕ ಜೀವನವು ಅವನ ಕೃತಿಗಳ ಮೇಲೆ ಪ್ರಭಾವಮಾಡಬಹುದಾದುದರಿಂದ, ಲೇಖಕರ ಜೀವನಚರಿತ್ರೆಗೂ ಸಾಕಷ್ಟು ಗಮನ ಕೊಡಲಾಗಿದೆ.

—

ಅಕಾರಾದಿಸೂಚಿ

(ಇಲ್ಲಿ ಗ್ರಂಥಗಳು, ಗ್ರಂಥಕರ್ತರು, ಪತ್ರಿಕೆಗಳು, ಈ ಗ್ರಂಥದಲ್ಲಿ ಹೇಳಲಾದ ವಿವಿಧ ವಿಷಯಗಳು ಇವುಗಳ ಅಕರಾದಿ ಕೊಡಲಾಗಿದೆ.)

ಭ

ಮ

ಯ

ರ

ವಿವರಣೆ - ವಿಸ್ತರಣೆ

(ಈ ಗ್ರಂಥದಲ್ಲಿ ಉಲ್ಲೇಖ ಮಾಡಿದ ಲೇಖಕರ ನಿಶ್ಚಿತ ಇಸವಿಗಳು ಗೊತ್ತಾದಲ್ಲಿ ಅವನ್ನು ಕೊಡಲಾಗಿದೆ. ಹಾಗೆ ನಿಶ್ಚಿತ ಇಸವಿಗಳು ಗೊತ್ತಾಗದಿದ್ದಲ್ಲಿ ಅವರ ಕೃತಿ ಪ್ರಕಟಿತವಾದ ಇಸವಿಯ ಕಾಲಾನುಕ್ರಮದಲ್ಲಿಯೇ ಅವರ ಬಗೆಗೆ ವಿವರಿಸಲಾಗಿದೆ.)

ಪು. ೫೪ ಸಾಲು ೨೫– ಪಟ್ಟದಿಯ ಎಂಬುದು ಪಟ್ಟದಿಯ ಎಂದಿರಬೇಕು.

ಪು. ೧೦೭– ಅನುಭಾವಿಗಳು ಕನ್ನಡ ಸಾಹಿತ್ಯಕ್ಕೆ ಗೈದ ಸೇವೆಯ ಬಗೆಗೆ ಡಾ. ವಿ. ಕೃ. ಗೋಕಾಕ ಅವರು ಹೀಗೆ ಹೇಳಿದ್ದಾರೆ : '' ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ಹತ್ತೊಂಬತ್ತನೆಯ ಶತಮಾನದ ಕೊನೆಯ ತಲೆಮಾರಿಗೆ ಒಂದು ವಿಶಿಷ್ಟ ಸ್ಥಾನವಿದೆ.... ಶ್ರೀ ಟೇಂಬೆ ಮಹಾರಾಜರು, ಶ್ರೀ ಶೇಷಾಚಲ ಸದ್ಗುರುಗಳು, ಶ್ರೀ ನಾಗಲಿಂಗಪ್ಪನವರು, ಶ್ರೀ ಸಿದ್ಧಾರೂಢರು, ಶರೀಫಸಾಹೇಬರು, ಪಂತರು ಹೀಗೆ ಅನೇಕ ಸತ್ಪುರುಷರ ಪ್ರಾದುರ್ಭಾವದ ಕಾಲವದು. ಈ ಆಧ್ಯಾತ್ಮಿಕ ಕೃಪಾಛತ್ರದ ಶ್ರೇಯಸ್ಸಿನಲ್ಲಿಯೇ ಒಂದು ರೀತಿಯಿಂದ ಇಂದಿನ ಕನ್ನಡ ಸಾಹಿತ್ಯಕ್ಕೆ ಪ್ರಾರಂಭವಾಯಿತು. '' (ಶ್ರೀ ಪಂತ ಮಹಾರಾಜ ಬಾಳೆಕುಂದ್ರಿ ಇವರ ಚರಿತ್ರೆ– ೧೯೫೦).

ಪು. ೧೩೪ ಸಾಲು ೨೭– ತಪಃಪ್ರಭಾವಗಳನ್ನು ಕೇಳದ ಎಂಬಲ್ಲಿ ಕೇಳಿದ ಎಂದು ಓದಬೇಕು.

ಪು. ೧೭೪–೧೭೫– ಕಡಕೋಳ ಮಡಿವಾಳಪ್ಪನವರು ಜೇವರಗಿ ತಾಲೂಕಿನ ಕಡಕೋಳದಲ್ಲಿ ಸ್ಥಿರವಾಗಿ ನೆಲಸಿದ್ದರೂ, ಅವರು ಮೂಲತಃ ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ನಾಗಠಾಣದವರು. ಬಿದನೂರ ವಿರುಪಾಕ್ಷಸ್ವಾಮಿಗಳ ವಿರಕ್ತಮಠದಲ್ಲಿ ಗಂಗಮ್ಮ ಎಂಬವರಿಂದ ಜನಿಸಿದರು. ಕಲಬುರ್ಗಿಯ ಶರಣಬಸವೇಶ್ವರರ ದರ್ಶನದಿಂದ ಅಧ್ಯಾತ್ಮಕ್ಕೆ ಒಲಿದರು. ಇವರು ಒಟ್ಟು ೧೧೦೦ ಪದಗಳನ್ನು ಬರೆದರೆಂದು ಪ್ರತೀತಿ. ಇವುಗಳಲ್ಲಿ ಹಲವಕ್ಕೆ ಮಹಾಂತೇಶ ಎಂಬ ಮುದ್ರಿಕೆ ಇದೆ. ಮಹಮದೀಯ ಚನ್ನೂರ ಜಮಾಲ ಸಾಹೇಬ, ಬ್ರಾಹ್ಮಣ ಖೈನೂರ ಕೃಷ್ಣಪ್ಪ (ಇವರ ಮುದ್ರಿಕೆ ಕಡಕೋಳ ಮಡಿವಾಳ ಎಂದಿದೆ), ಅಂಬಿಗ ಕಡ್ಲೆವಾಡ ಸಿದ್ದಪ್ಪ, ಹೂಗಾರ ತೆಲುಗ ಬಾಳ ರಾಮಪ್ಪ ಮೊದಲಾದವರು ಇವರ ಶಿಷ್ಯರು. ಖೈನೂರ ಕೃಷ್ಣಪ್ಪನ ತಾಯಿ ತೀರಿಕೊಂಡಾಗ–

'ಎತ್ತ ಹ್ವಾದೆ ನನ್ನ ಹಡದವ್ವ
ಮರ್ತ್ಯವು ಮುಳುಗಿತು ಎನಗವ್ವ' ಎಂದೂ

'ಏಸು ಕಾಲದಿ ನಿನ್ನ ಧ್ಯಾನ ಹೋಗದು ಬಹಳ
ಕಾಶಿಬಾಯವ್ವ ತಾಯಿ ನಮ್ಮವ್ವ' ಎಂದೂ ಮಡಿವಾಳಪ್ಪನವರು ಪದ ರಚಿಸಿದರಂತೆ.

ಮಡಿವಾಳಪ್ಪನವರು ಆಧ್ಯಾತ್ಮಿಕ ಪದಗಳನ್ನು ರಚಿಸಿದ್ದಲ್ಲದೆ, ಹಲವು ಶೃಂಗಾರ ಪದಗಳನ್ನೂ ರಚಿಸಿದ ಹಾಗೆ ಕಂಡುಬರುತ್ತದೆ. ಈ ಕೆಳಗಿನ ಶೃಂಗಾರಪದಗಳು ಮಡಿವಾಳಪ್ಪನವರ ರಚನೆಯೆಂದು ಹೇಳಲಾಗಿದೆ.

(i) ಮಧುರಮಾತಿನ ಚದುರಿ
ಯಾವ ಊರವಳಿವಳು
ನದರೀಗೆ ಬಿದ್ದಾಳೊ ಸಂತ್ಯಾಗ

ಇದರೀಗೆ ನಿಂತ ನೋಡಿ ನನ್ನ
ಸದರ ಸುದ್ದ ಮಾತನಾಡಿ
ಬೆದರಿದೆರಳೀ ನೋಟದಂಥಾ ಕಣ್ಣಾ

ಅಧರ ಸುದ್ದಾ ದೀಪದಂತೆ
ಕೆಂಪತೊಂಡೀ ಹಣ್ಣಾ
ಸಂಪಿಗೂವಿನಂಥಾ ಮೂಗಾ
ಸೊಂಪ ಮರೆಯಲಾರೆ ಸ್ವರದ
ಇಂಪು ಕೋಗಿಲಿಗಿ ಸಮಾನಾ
ತಂಪಿನೊಳು ಅರಗಿಳಿ ಸುಳಿಧಾಂಗೊ ತಾನಾ
ನದರಿಗೆ ಬಿದ್ದಾಳೊ ಸಂತ್ಯಾಗ ॥
ನದರಿಗೆ ಬಿದ್ದಾಳೊ ಸಂತ್ಯಾಗ
ಹೊಯ್ಮಾಲಿ ಕಂಡ– ತೊಗರಿಯಾ ಲೆಖ್ಖ ಕಳಕೊಂಡಣೊ ॥

(ii) ಕಿರಿಯ ಮಾಟದ ಹೆಣ್ಣ
ಕರೆದೆಲ್ಲ ಹೊಳೆಯಾಗ
ಬೆರಗಾದೇನೇಳ ನಿನಗಾಗಿ........

ರೂಪನೋಡಿ ತಾಪವೇರಿ
ಗಪ್ಪ ನೇತ್ರ ಮುಚ್ಚಿದಾವು........

ಕಂಚೀಕಾಯಂಥಾ ಕುಚಾ
ಮಿಂಚ ಹೊಡಿಯೂ ಎದೀಮ್ಯಾಗ
ಅಂಚೀಧಡಿ ರೇಶಿಮಿ ಕುಬಸಾ........ ಇತ್ಯಾದಿ

(iii) ನಾರೀ ನಿನ್ನ ಕಣ್ಣಿನ ಕಿರಣ
ಕಾರಿಧಾಂಗ ಬಿರಸುಬಾಣ
ಹಾರಿಧಾಂಗ ಮಲಾಮೇತ್ರಿ ಗುಂಡಾ........ ಇತ್ಯಾದಿ.

ಆದರೆ, ಈ ಪದಗಳಿಗೆ ಯಾವ ಮುದ್ರಿಕೆಯೂ ಇಲ್ಲ.

ಈ ಹಾಡುಗಳಲ್ಲದೆ, 'ನಿಜಲೀಲಾನುಭವ ವಚನ', 'ಮಹಾಂತೇಶ್ವರ ೧೦೮ ನಾಮಾವಳಿ', 'ಗಾಳಿಪೂಜಿ ವಚನ' ಮೊದಲಾದುವು ಇವರ ಇತರ ಕೃತಿಗಳು. "ಹಾಲ ಕಾಸ ಕಾಸ ತಂಗೀ ಹಾಲ ಕಾಸ– ನಿಂದು ಕೆಟ್ಟ ಮನಸ– ಹೆಪ್ಪ ಹಾಕಿ ಕೆನಿಯು ಬಲಿಸಿ ಮೊಸರ ಸೋಸs– ಅದು ಬಲೇ ಖಾಸs" ಎಂಬುದೂ ಇವರ ಇನ್ನೊಂದು ಆಧ್ಯಾತ್ಮಿಕ ಗೀತ. ಇದಕ್ಕೆ ಮುದ್ರಿಕೆಯಿದೆ.

ಪು. ೨೨೨– ಶೇಷಗಿರಿರಾಯರು ಅನುವಾದ ಮಾಡಿದ ಜೈಮಿನಿ ಭಾರತ ಸನ್ ೧೮೬೮ ರ ವಿವಿಧಜ್ಞಾನವಿಸ್ತಾರದಲ್ಲಿ ಪ್ರಕಟವಾಗಿದೆ. ಪ್ರಾರಂಭದಲ್ಲಿ ಗ್ರಂಥದ ಪರಿಚಯ ಮಾಡಿಕೊಟ್ಟ ನಂತರ ಪದ್ಯ ಹೀಗೆ ಪ್ರಾರಂಭವಾಗುತ್ತದೆ :

ಶ್ರೀಲಕ್ಷ್ಮೀವಧೂಚ್ಯಾ ಸಂಲೋಚನ ಚಕೋರಾಂ ನಿತ್ಯ ಸಂತೋಷವೀ
ಸಂತೀನ್ ಹೃತ್ಕುಮುದಾ ಪುರೇ ವಿಕಸನೀ ಭಾಗ್ಯಾಂಬುಧೀ ವಾಢವೀ
ಕಾರುಣ್ಯಾಮೃತಯುಕ್ತಮಂದಹಸಣೇ ಜ್ಯಾಣೇ ಪ್ರಕಾಶೀಕವಾ
ಐಸಾ ಜೊ ಮುಖಚಂದ್ರಮಾ ಹರಿ ತುಝಾ ಆನಂದ ದೇವೊ ಮಲಾ ॥

ಕರ್ಣಾಟಜಾತ ಕವಿಚೈತ್ರವನಾಸಿ ಚೂತ
ಲಕ್ಷ್ಮೀಶನಾಂವ ಮಜ ಭಾರದ್ವಾಜ ಗೋತ್ರ
ವಿದ್ವತ್ಸಭಾವಲಯ ತೋಷವಿಣ್ಯಾ ನಿಮಿತ್ತೇ
ಕೇಲೀಕೃತೀ ಸುಜನ ಸೇವುನಿ ಏಕಚಿತ್ತೇ ॥

ಪು. ೨೨೫ ಸಾಲು ೫ ಮತ್ತು ೧೯– ಷಡಕ್ಷರದೇವ ಇದ್ದಲ್ಲಿ ಷಡಕ್ಷರದೇವ ಎಂದು ಓದುವುದು.

ಪು. ೨೩೫– ಸವಾಯಿಮಾಧವರಾವ್ ಎಂಬ ನಾಟಕ ಮರಾಠಿ ಭಾಷೆಯಲ್ಲಿ ರಚಿತವಾಗಿರಬೇಕು ಎಂದು ಡಾ. ದ. ರಾ. ಬೇಂದ್ರೆಯವರ ಹೇಳಿಕೆಯ ಮೇರೆಗೆ (ಜೀವನ ಶಿಕ್ಷಣ ೧೯೫೮) ಅಭಿಪ್ರಾಯಪಡಲಾಯಿತು. ಆದರೆ, ಪು. ೨೫೨ರಲ್ಲಿ ಹೇಳಿದಂತೆ 'ನರತನು' ಮತ್ತು 'ಸವಾಯಿಮಾಧವರಾವ' ಮರಾಠಿಯಲ್ಲಿಯೇ ರಚಿತವಾಗಿವೆಯೆಂದು History of Modern Marathi Literature ಎಂಬ ಪ್ರೊ. ಜಿ. ಸಿ. ಭಾಟೆಯವರ ಗ್ರಂಥದಿಂದ ತಿಳಿದುಬರುತ್ತದೆ. (೧೯೩೯). ಈ ಎರಡೂ ಗ್ರಂಥಗಳ ಬಗೆಗೆ ಪ್ರೊ. ಭಾಟೆಯವರು ಹೀಗೆ ಬರೆಯುತ್ತಾರೆ : "Venkatesh Rango Katti hails from the Canarese-speaking country. His first work named Nara Tanu is a compendium of human Physiology based on Carpenter's book. It is a good translation looking to the difficulty of expressing new ideas in Marathi. The second book of the author, unlike his first, is an original drama on the life and unfortunate end of Sawai Madhavrav Pesva, a tragic story (1871). This is a much better performance than his translation indicating that the author had some literary talent" (P. 141).

ಪು. ೨೭೯– ಮಾನವಿ ಮನೆತನದ ಒಂದು ವಂಶಾವಳಿ ಲಕ್ಷ್ಮೇಶ್ವರದ ಮಾನವಿ ಅವರಲ್ಲಿ ದೊರಕುತ್ತದೆ. ಅದರಲ್ಲಿ ಮಾನವಿ ವಂಶವನ್ನು ಹೀಗೆ ವರ್ಣಿಸಲಾಗಿದೆ : "ಶ್ರೀಮದ್ಘನಲಿಂಗ ಚಕ್ರವರ್ತಿಗಳಾದ ಮಾನ್ವಿ ತಾಲೂಕ ಪೈಕಿ ಮುಷ್ಟೂರ [ವ] ವೆಂಕಟಗಿರಿ ಹಿರೇಮಠದ ಪಟ್ಟಾಧ್ಯಕ್ಷರಾದ ಅಯ್ಯಪ್ಪಯ್ಯನವರ ಬಗಿ ಪಡಿವಿಡಿ ಸೂತ್ರ ಬಾಳೆಹಳ್ಳಿ ಸಿಂಹಾಸನ ಶಿಷ್ಯರಾದ ಸುರಪುರ ನಾಡಗೌಡ ದೇಸಾಯಿ ಶಿದ್ರಾಮಪ್ಪನವರ ವಂಶಾವಳಿಯು." ಮಾನವಿ ಮನೆತನದ ಕುಲದೇವರು ಕಡಪಾ ಜಿಲ್ಲೆಯಲ್ಲಿಯ ರಾಚೋಟಿ ವೀರಭದ್ರದೇವರು. ಹಂಪಿಯ ಮಾತಂಗಪರ್ವತದಲ್ಲಿದ್ದ ವೀರಭದ್ರ ದೇವರಿಗೆ ಮನೆಯ ದೇವರಂತೆ ನಡೆದುಕೊಳ್ಳುತ್ತಾರೆ. ಈ ವಂಶಾವಳಿಯ ಪ್ರಕಾರ ಈ ಮನೆತನದ ಮೂಲಪುರುಷ ಶಿದ್ರಾಮಪ್ಪ (ಇಸವಿ ಸನ್ ೧೪೫೨). ಇವರ ಮಕ್ಕಳು ವಿರುಪಾಕ್ಷರಾವ್ ಮತ್ತು ದಾನವೇಂದ್ರರಾವ್. ಸದ್ಯದ ತಲೆಮಾರಿನಿಂದ ಮೂರನೆಯ ತಲೆಮಾರಿನಲ್ಲಿ ಯೀರಪ್ಪ ಎಂಬ ಹೆಸರು ಬರುತ್ತದೆ. ಈ ಯೀರಪ್ಪನವರ ತಂದೆಯ ಹೆಸರು ದಾನಪ್ಪ. ವಂಶಾವಳಿಯಲ್ಲಿ ಈ ಮನೆತನವನ್ನು ಹುಬ್ಬಳ್ಳಿ ಮನೆತನವೆಂದು ತೋರಿಸಲಾಗಿದೆ. ನಾವು ವರ್ಣಿಸಿದ ಮಾನವಿ ವೀರಪ್ಪ ಈ ಯೀರಪ್ಪನವರೇ ಆಗಿರಬೇಕು.

ಪು. ೩೨೪– ಈ ಕಥೆ ಭಾಗವತ ಪುರಾಣದಲ್ಲಿ ಬರುತ್ತದೆ.

ಪು. ೫೭೫– ಜಠಾರ ಯಶವಂತರಾಯರು ದಿನಾಂಕ ೧೫–೩–೧೮೮೨ ರಂದು ಜನಿಸಿದರು. ೩೦–೫–೧೯೩೭ ರಂದು ಕೈಲಾಸವಾಸಿಗಳಾದರು. ಇವರು ಅನೇಕ ಮರಾಠಿ ಕವಿತೆಗಳನ್ನು ಬರೆದಿದ್ದಾರೆ. ಉತ್ತಂಗಿ ಚನ್ನಪ್ಪನವರು ಸರ್ವಜ್ಞವಿಷಯಕ ಸಂಶೋಧನೆ ನಡೆಸಲು ಆರ್ಥಿಕವಾಗಿ ಸಹಾಯ ಮಾಡಿದರು.

—

ಸಂದರ್ಭ ಗ್ರಂಥಸೂಚಿ

ಲೇಖಕರು	ಕೃತಿ	ಪ್ರಕಟನೆಯ ವರ್ಷ
ಅ. ನ. ಕೃಷ್ಣರಾಯ	ಸಂಸ್ಕೃತಿಯ ವಿಶ್ವರೂಪ	೧೯೫೯
ಆದ್ಯ ಅನಂತಾಚಾರ್ಯ (ಸಂ.)	ಆದ್ಯವಂಶ ಪ್ರದೀಪ	೧೯೭೧
ಆನಂದವನ ಪ್ರಕಟಣೆ, ಅಗಡಿ	ಕರ್ನಾಟಕ ಸತ್ಪುರುಷ ಮಂಡಲ	೧೯೨೫
ಆರ್. ನರಸಿಂಹಾಚಾರ್ಯ	ಕರ್ಣಾಟಕ ಕವಿಚರಿತೆ	೧೯೨೯
ಆರ್. ಸಿ. ಹಿರೇಮಠ (ಸಂ.)	ಕನ್ನಡಕ್ಕೆ ಕಿಟೆಲ್‌ರ ಕೊಡುಗೆ	೧೯೭೧
ಆಲೂರ ವೆಂಕಟರಾಯ	ನನ್ನ ಜೀವನ ಸ್ಮೃತಿಗಳು	೧೯೪೧
ಎನ್. ಕೆ. ಹೆಗಡೆ, ಬಿ. ಎಸ್. ಭಟ್	ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರು	೧೯೬೯
ಎಫ್. ಬಿ. ದೇಸಾಯಿ (ಸಂ.)	ಕೋಳಿವಾಡದ ವರಕವಿ ಹುಲಗಪ್ಪನವರು	೧೯೫೮
ಎಮ್. ಎನ್. ಸಿಂದಗಿ	ಶಿಶುನಾಳ ಶರೀಫರು (ಅವರ ಜೀವನ, ಕೃತಿಗಳು ಮತ್ತು ದರ್ಶನ)	(ಅಪ್ರಕಟಿತ)
ಎಸ್. ಅನಂತನಾರಾಯಣ	ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ ಕಾವ್ಯದ ಪ್ರಭಾವ	೧೯೬೨
ಐ. ಮಾ. ಮುತ್ತಣ್ಣ	೧೯ ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ	೧೯೬೯
ಕನ್ನಡ ಸಾಹಿತ್ಯ ಪರಿಷತ್ತು	ಕನ್ನಡ ಬಾವುಟ	೧೯೪೦
,,	ಸಂಭಾವನೆ	೧೯೪೦
,,	ಅಧ್ಯಕ್ಷರ ಭಾಷಣಗಳು (ಸಂ. ೧)	೧೯೭೦
,,	ಪುಸ್ತಕ ಭಾಗ್ಯ	೧೯೭೨
ಕರ್ನಾಟಕ ವಿದ್ಯಾವರ್ಧಕ ಸಂಘ	ಐವತ್ತು ವರುಷ	೧೯೪೧
,,	ಗಳಗನಾಥ	೧೯೪೬
ಕರ್ನಾಟಕ ವಿಶ್ವವಿದ್ಯಾಲಯ	ಕನ್ನಡ ಪರಮಾರ್ಥ ಸೋಪಾನ	೧೯೬೨
ಕೃಷ್ಣಾರ್ಯ	ಮುಳಬಾಗಲವರ ಚರಿತ್ರ ಶತಕ	೧೮೯೮
ಕೆ. ಜಿ. ತಾಪಸ (ಸಂ.)	ಭವತಾರಕ ಗೀತಗಳು	೧೯೫೭

ಕನ್ನಡ ಅಧ್ಯಯನ ಸಂಸ್ಥೆ	ಗಳಗನಾಥ	೧೯೭೦
ಕೆಕ್ಕಾರ ಶಿವಭಟ್ಟ	ರೊದ್ದರಾಜ ಕೀರ್ತಿಮಂಜರಿ	—
ಜವರೇಗೌಡ, ದೇ. (ಸಂ.)	ಕರ್ಣಾಟಕ ಕವಿಚರಿತ್ರೆಯ ಅನುಕ್ತಕೃತಿ ಸೂಚಿ (ಕನ್ನಡ ಅಧ್ಯಯನ ಸಂಸ್ಥೆ)	೧೯೬೭
ಜಾರ್ಜ ವರ್ಥ	ಪ್ರಾಕ್ಕಾವ್ಯ ಮಾಲೆ	೧೮೬೮
ಜಾನ್ ಎಫ್. ಫ್ಲೀಟ್	ಪಾಳಿ, ಸಂಸ್ಕೃತ ಮತ್ತು ಹಳೆಗನ್ನಡ ಶಾಸನಗಳು	೧೮೭೮
„	ಡೈನೆಸ್ಟೀಜ್ ಆಫ್ ಕೆನರೀಸ್ ಡಿಸ್ಟ್ರಿಕ್ಟ್ಸ ಆಫ್ ಬಾಂಬೇ ಪ್ರೆಸಿಡೆನ್ಸಿ	೧೮೯೫
„	ಐದು ಐತಿಹಾಸಿಕ ಲಾವಣಿಗಳು (ಕನ್ನಡ ಅಧ್ಯಯನ ಸಂಸ್ಥೆ)	೧೯೭೨
ಟಿ. ವಿ. ಸುಬ್ರಹ್ಮಣ್ಯಂ	ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಲೇಖನಗಳ ಸೂಚಿ (ಕನ್ನಡ ಅಧ್ಯಯನ ಸಂಸ್ಥೆ)	—
ಡಿ. ವಿ. ಗುಂಡಪ್ಪ	ಸಾಹಿತ್ಯೋಪಾಸಕರು	೧೯೭೦
ದ. ರಾ. ಬೇಂದ್ರೆ	ಸಾಹಿತ್ಯ ಸಂಶೋಧನೆ	೧೯೪೦
ಫ. ಗು. ಹಳಕಟ್ಟಿ	ಕೈ. ವಾ. ಚನಬಸಪ್ಪ ಬಸಲಿಂಗಪ್ಪ ಧಾರವಾಡ ಇವರ ಚರಿತ್ರೆಯು	೧೯೧೪
ಫರ್ಡಿನಾಂಡ್ ಕಿಟೆಲ್	ನಾಗವರ್ಮನ ಕನ್ನಡ ಛಂದಸ್ಸು	೧೮೭೪
ಬಾಲಲೀಲಾ ಮಹಾಂತ ಶಿವಯೋಗಿ ಗ್ರಂಥಮಾಲಾ	ವೈರಾಗ್ಯದಲರು	೧೯೫೮
ಮಾ. ವಿ ಕೃಷ್ಣರಾವ, ಎಂ. ಕೇಶವಭಟ್ಟ	ಕರ್ನಾಟಕದ ಇತಿಹಾಸ ದರ್ಶನ	೧೯೭೦
ಯೋಗೀಶ್ವರ ದತ್ತಮೂರ್ತಿ ದೀಕ್ಷಿತ	ನನ್ನ ದೇವರು– ಶ್ರೀ ಪದ್ಮನಾಭ ತೀರ್ಥರ ಚರಿತ್ರೆ	೧೯೬೧
ರಂ. ಶ್ರೀ. ಮುಗಳಿ	ಕನ್ನಡ ಸಾಹಿತ್ಯ ಚರಿತ್ರೆ	೧೯೬೮
ರಾ. ಯ. ಧಾರವಾಡಕರ	ಕನ್ನಡ ಭಾಷಾಶಾಸ್ತ್ರ	೧೯೫೦
„	ಸಾಹಿತ್ಯ ಸಮೀಕ್ಷೆ	೧೯೬೭
„	ಕರ್ನಾಟಕದಲ್ಲಿ ವೃತ್ತಪತ್ರಿಕೆಗಳು	೧೯೫೨
ರಾ. ದ. ರಾನಡೆ	ಕನ್ನಡ ಪರಮಾರ್ಥ ಸೋಪಾನ	೧೯೬೯
„	ಕನ್ನಡ ಸಂತರ ಪರಮಾರ್ಥ ಪಥ	೧೯೬೨
ವೀ. ರು. ಕೊಪ್ಪಳ	ಶಾಂತವೀರ ರಾಚಿದೇವ ಕಿತ್ತೂರ	೧೯೫೮
ವೀರಪ್ಪ ವೀರಭದ್ರಪ್ಪ ನಾಗಸೆಟ್ಟಿ	ದಿನಚರಿ	(ಅಪ್ರಕಟಿತ)
„	ಗಂಗಾಧರ ಮಡಿವಾಳೇಶ್ವರ ತೂರಮರಿ ಯವರ ಸಂಕ್ಷಿಪ್ತ ಚರಿತ್ರೆ	(ಅಪ್ರಕಟಿತ)
ವೆಂಕಟೇಶ ಸಾಂಗಲಿ	ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ	೧೯೬೦
„	ಹೊಸಗನ್ನಡದ ಪುಣ್ಯಪುರುಷರು	೧೯೬೨
ಶಾ. ಬಾಲೂರಾವ್	ಷೇಕ್ಸಪಿಯರನಿಗೆ ನಮಸ್ಕಾರ	೧೯೬೬

ಶಿಶುನಾಳ ಶರೀಫ ಸಾಹೇಬರು	ಶ್ರೀ ಶರೀಫರ ಜನಪ್ರಿಯ ಪದಗಳು	೧೯೬೭
ಶ್ರೀ. ಗ. ಜೋಶಿ	ನಾಗಲಿಂಗ ಮಹಾಸ್ವಾಮಿಗಳ ಚರಿತ್ರವು	೧೯೬೦
ಶ್ರೀ ಗುರು ಶಾಂತಲಿಂಗ	ಕಿತ್ತೂರ ಸಿದ್ಧಲಿಂಗಪ್ಪ ನಾಗಸೆಟ್ಟಿಯವರ ಸಂಗ್ರಹ	(ಅಪ್ರಕಟಿತ)
ಶ್ರೀನಿವಾಸಸುತ	ವೈ. ಕಾವ್ಯಾನಂದರ ಚರಿತ್ರ ಪರಿಚಯವು	೧೯೩೦
ಶ್ರೀನಿವಾಸ ಹಾವನೂರ	ಕರ್ತವ್ಯಾನಂದ ಶ್ರೀ ರಾಜಪುರೋಹಿತರು	೧೯೫೮
ಸಿ. ಪಿ. ಕೆ.	ಭಾರತೀಯ ಶಾಸನಶಾಸ್ತ್ರ ಪರಿಚಯ	೧೯೭೦
ಹ. ಗೋ. ದೇಶಪಾಂಡೆ	ದಿವಾಣಬಹದೂರ ರೊದ್ದ ಶ್ರೀನಿವಾಸರಾಯರ ಚರಿತ್ರೆ	೧೯೩೦
ಹಾಲಪ್ಪ ಗ. ಸ.	ರಾಷ್ಟ್ರಧರ್ಮೋದ್ಧಾರ ಹರ್ಡೇಕರ ಮಂಜಪ್ಪ	೧೯೬೬
ಹುರುಳಿ ಗ. ಶಿ.	ಪೂಜ್ಯ ಉತ್ತಂಗಿಯವರ ಜೀವನ ಚರಿತ್ರೆ	೧೯೫೬
ಹುಯಿಲಗೋಳ ವರದರಾಜರಾವ	ಕ್ರೈಸ್ತರಿಂದ ಕನ್ನಡಕ್ಕೆ ಕಾಣಿಕೆ	೧೯೬೬
Barnett L. D.	A Catalogue of the Kannada Badaga and Kurg Books in the Library of the British Museum	1910
Hukerikar R. S. *(Ed.)*	Karnatak Darshana	1955
Krishna Rao M. V. *(Ed.)*	History of Freedom Movement in Karnatak	1962
Mysore University	Catalogue of Kannada Printed works— A supplemental catalogue of Kannada Printed works	1956
Prakash, Esther	The Rev. F. Ziegler and his activities in the educational field in the North Karnatak area (Unpublished)	1972
Navroji, Dadabhai	Poverty and Un-British Rule in India	—
Rice, E. P.	A History of Kanarese Literature	1921

—

ಚಿತ್ರಸೂಚಿ

—